*Pandit Teaches the Bible Series*

# Let's Read the Pentateuch!

## Kannada Edition

**Author: T. Pandit**

**Translators:**
**R. Prakash Naik**
**Mr. Vinayak**

## About the book

This book is a college level textbook written for a Bible college in South India.

It can also be used for Bible study groups in local churches and for individual students of the Bible. It was written it with the South Indian Christian context in mind.

T. Pandit has many years of experience as an educationist, a Bible teacher and a college principal, in India as well as in internationally. He is now retired.

R. Prakash Naik is a trained teacher, pastor of a growing church in Karnataka, and a senior teacher at Kannada Satyaveda College in Karnataka, India

Mr. Vinayak has worked as a church planter in Karnataka and as a Bible college teacher

June 2021


## Copyright waiver

The authors of this work hereby waive all claim of copyright (economic and moral) in this work and immediately place it in the public domain. It may be used, distorted or destroyed in any manner whatsoever without further attribution or notice to the creators.

The authors of this work would, **however**, object to to any republishing of this work in its entirety for the purposes of financial gain.

# ಕನ್ನಡ ಸತ್ಯವೇದ ಮಹಾವಿದ್ಯಾಲಯ ಪಠ್ಯಪುಸ್ತಕಗಳ ಸರಣಿ

# *ಪಂಚಕಾಂಡಗಳನ್ನು ಓದೋಣ !*


ಪ್ರಧಾನ ಸಂಪಾದಕರು

**ಟಿ. ಪಂಡಿತ್**

ಲೇಖಕರು

**ಟಿ. ಪಂಡಿತ್**

ಅನುವಾದಕರು

**ಆರ್. ಪ್ರಕಾಶ್ ನಾಯ್ಕ್**

**ಪಾಸ್ಟರ್ ವಿನಯ್**

**ಲೇಖಕರ ಪರಿಚಯ**

**ಟಿ. ಪಂಡಿತ್** ರವರು ಒಬ್ಬ ಶಿಕ್ಷಣತಜ್ಞರಾಗಿಯೂ, ಒಬ್ಬ ಸತ್ಯವೇದ ಉಪದೇಶಕರಾಗಿಯೂ ಮತ್ತು ಒಬ್ಬ ಪ್ರಾಂಶಪಾಲರಾಗಿಯೂ ಅನೇಕ ವರ್ಷಗಳ ಅನುಭವವನ್ನು ಹೊಂದಿದ್ದಾರೆ. ಅವರು ಕನ್ನಡ ಸತ್ಯವೇದ ಮಹಾವಿದ್ಯಾಲಯದೊಂದಿಗೆ, 2006 ರಲ್ಲಿನ ಅದರ ಪ್ರಾರಂಭದಿಂದಲೂ ತಮ್ಮನ್ನು ನಿಕಟವಾಗಿ ತೊಡಗಿಸಿಕೊಂಡಿದ್ದಾರೆ.

ಎಸ್ ಸರ್ ಬಾಸ್ಕ್ ಯೂರೋಪ್ ಮೂಲದ ವರ್ಣಚಿತ್ರ ಕಲಾವಿದರಾಗಿದ್ದಾರೆ. ಈ ಪಠ್ಯದಲ್ಲಿರುವ ಅನೇಕ ನಕ್ಷೆಗಳನ್ನು ಅವರು ತಯಾರಿಸಿದ್ದಾರೆ.

**ಆರ್. ಪ್ರಕಾಶ್ ನಾಯ್ಕ್** ರವರು ಒಬ್ಬ ಎಂ.ಎ. ಮತ್ತು ಎಂ.ಡಿವ್. ಪದವೀದರರಾಗಿದ್ದು, ಕನ್ನಡ ಸತ್ಯವೇದ ಮಹಾವಿದ್ಯಾಲಯದಲ್ಲಿ 2008 ರಿಂದ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅದಲ್ಲದೆ ಅವರು ತಮ್ಮ ಪತ್ನಿ ಪ್ರೇಮಲತಾರೊಂದಿಗೆ ಹೂವಿನಹಡಗಲಿಯಲ್ಲಿ ಸಭಾಪಾಲಕರಾಗಿ ದೇವರ ಸೇವೆ ಮಾಡುತ್ತಿದ್ದಾರೆ. ಈ ಪುಸ್ತಕವು ಮೂಲತಃವಾಗಿ ಆಂಗ್ಲಭಾಷೆಯಲ್ಲಿದ್ದು, ಇದು ಅದರ ಕನ್ನಡದ ತರ್ಜುಮೆಯಾಗಿರುತ್ತದೆ.

ಈ ಪುಸ್ತಕದ ಲೇಖಕರು ಗ್ರಂಥಕರ್ತರಾಗಿ (ಹಣಕಾಸಿನ ಮತ್ತು ನೈತಿಕ) ತಮ್ಮ ಹಕ್ಕನ್ನು ಹೊಂದಿರುತ್ತಾರೆ, ಮತ್ತು ತಕ್ಷಣದಿಂದಲೇ ಈ ಪುಸ್ತಕವು ಅವರ ಅಧಿಕಾರಕ್ಕೊಳಪಟ್ಟಿದೆ. ಆದ್ದರಿಂದ ಅವರ ಗಮನಕ್ಕೆ ತರದೆ ಈ ಪುಸ್ತಕವನ್ನು ತಿದ್ದುವುದಾಗಲಿ ಅಥವಾ ನಕಲು ಮಾಡುವುದಾಗಲಿ ಅಥವಾ ನಾಶಮಾಡುವುದಾಗಲಿ ಮಾಡಕೂಡದೆಂದು ತಿಳಿಸಲಾಗಿದೆ.

ಹೊಸ ಪ್ರತಿ ಫೆಬ್ರುವರಿ 2019

## ವಿಷಯಾಂಶಗಳು

### ಆದಿಕಾಂಡ ಅಧ್ಯಯನಗಳು

ಆದಿಕಾಂಡದ ಪರಿಚಯ 10
ಆದಿಕಾಂಡ ಅಧ್ಯಯನ 1: ಆರಂಭ 14
ಆದಿಕಾಂಡ ಅಧ್ಯಯನ 2: ಆದಾಮ ಮತ್ತು ಹವ್ವ 16
ಆದಿಕಾಂಡ ಅಧ್ಯಯನ 3: ಜಗತ್ತಿನ ಸೃಷ್ಟಿ 18
ಆದಿಕಾಂಡ ಅಧ್ಯಯನ 4: ಮನುಷ್ಯನ ಪತನ (ಬೀಳುವಿಕೆ) 21
ಆದಿಕಾಂಡ ಅಧ್ಯಯನ 5: ಏದೆನಿನಲ್ಲಿನ ತೋಟ ಮತ್ತು ಪತನ 23
ಆದಿಕಾಂಡ ಅಧ್ಯಯನ 6: ಕಾಯಿನ ಮತ್ತು ಹೇಬೆಲನು 28
ಆದಿಕಾಂಡ ಅಧ್ಯಯನ 7: ಜಲಪ್ರಳಯ 29
ಆದಿಕಾಂಡ ಅಧ್ಯಯನ 8: ಬಾಬೆಲ್ ಗೋಪುರ 31
ಆದಿಕಾಂಡ ಅಧ್ಯಯನ 9: ಪಾಪದ ಹರಡುವಿಕೆ 32
ಆದಿಕಾಂಡ ಅಧ್ಯಯನ 10: ಅಬ್ರಹಾಮ ಮತ್ತು ದೇವರ ವಾಗ್ದಾನಗಳು 37
ಆದಿಕಾಂಡ ಅಧ್ಯಯನ 11: ಮೆಲ್ಕೀಜೆದೆಕನು, ಅಬ್ರಹಾಮನೊಂದಿಗೆ ದೇವರ ಒಡಂಬಡಿಕೆ 39
ಆದಿಕಾಂಡ ಅಧ್ಯಯನ 12: ಹಾಗರಳು ಮತ್ತು ಇಷ್ಮಾಯೇಲ್ 41
ಆದಿಕಾಂಡ ಅಧ್ಯಯನ 13: ಸುನ್ನತಿಯ ಒಡಂಬಡಿಕೆ 43
ಆದಿಕಾಂಡ ಅಧ್ಯಯನ 14: ಮೂರು ಮಂದಿ ಸಂದರ್ಶಕರು 45
ಆದಿಕಾಂಡ ಅಧ್ಯಯನ 15: ಸೊದೋಮ್ ಮತ್ತು ಗೊಮೋರಗಳ ನಾಶನ 47
ಆದಿಕಾಂಡ ಅಧ್ಯಯನ 16: ಇಸಾಕನ ಜನನ, ಹಾಗರ್ ಮತ್ತು ಇಷ್ಮಾಯೇಲ್ 49
ಆದಿಕಾಂಡ ಅಧ್ಯಯನ 17: ಅಬ್ರಹಾಮನು ಪರೀಕ್ಷಿಸಲ್ಪಟ್ಟದ್ದು 51
ಆದಿಕಾಂಡ ಅಧ್ಯಯನ 18: ಇಸಾಕ ಮತ್ತು ರೆಬೆಕ್ಕ 53
ಆದಿಕಾಂಡ ಅಧ್ಯಯನ 19: ಯಾಕೋಬ ಮತ್ತು ಏಸಾವ 55
ಆದಿಕಾಂಡ ಅಧ್ಯಯನ 20: ಪದ್ದನ್ ಅರಾಮಿನಲ್ಲಿ ಯಾಕೋಬನು 57
ಆದಿಕಾಂಡ ಅಧ್ಯಯನ 21: ಯಾಕೋಬನು ಕಾನಾನಿಗೆ ಹಿಂತಿರುಗಿದ್ದು 59
ಆದಿಕಾಂಡ ಅಧ್ಯಯನ 22: ಯೋಸೇಫನು 63
ಆದಿಕಾಂಡ ಅಧ್ಯಯನ 23: ಐಗುಪ್ತದಲ್ಲಿ ಯೋಸೇಫನು 65
ಆದಿಕಾಂಡ ಅಧ್ಯಯನ 24: ಯೋಸೇಫ ಮತ್ತು ಆತನ ಅಣ್ಣಂದಿರು 69
ಆದಿಕಾಂಡ ಅಧ್ಯಯನ 25: ಯಾಕೋಬ ಮತ್ತು ಆತನ ಕುಟುಂಬವು ಐಗುಪ್ತದಲ್ಲಿ ನೆಲೆಸುವುದು 71
ಆದಿಕಾಂಡ ಅಧ್ಯಯನ 26: ಪೂರ್ವಜರು 73

### ವಿಮೋಚನಾಕಾಂಡ ಅಧ್ಯಯನಗಳು

ವಿಮೋಚನಕಾಂಡದ ಪರಿಚಯ 79
ವಿಮೋಚನಕಾಂಡ ಅಧ್ಯಯನ 1: ಇಸ್ರಾಯೇಲರು ದಬ್ಬಾಳಿಕೆಗೆ ಒಳಗಾಗಿದ್ದು 83

ವಿಮೋಚನಕಾಂಡ ಅಧ್ಯಯನ 2: ಮೋಶೆ ಮತ್ತು ಆತನು ಮಿದ್ಯಾನಿಗೆ ಓಡಿ ಹೋಗಿದ್ದು 84
ವಿಮೋಚನಕಾಂಡ ಅಧ್ಯಯನ 3: ಮೋಶೆ ಮತ್ತು ಉರಿಯುವ ಪೊದೆ 86
ವಿಮೋಚನಕಾಂಡ ಅಧ್ಯಯನ 4: ಮೋಶೆಯು ಹಿಂಜರಿಯುತ್ತಾ ಈಜಿಪ್ಟಿಗೆ ಹಿಂತಿರುಗಿದ್ದು 88
ವಿಮೋಚನಕಾಂಡ ಅಧ್ಯಯನ 5: ಹುಲ್ಲಿಲ್ಲದೇ ಇಟ್ಟಿಗೆಗಳು 90
ವಿಮೋಚನಕಾಂಡ ಅಧ್ಯಯನ 6: ದೇವರು ಮೋಶೆಗೆ ತನ್ನ ಒಡಂಬಡಿಕೆಯನ್ನು ಜ್ಞಾಪಿಸಿದ್ದು 91
ವಿಮೋಚನಕಾಂಡ ಅಧ್ಯಯನ 7: ಆರೋನ, ಮೋಶೆ ಮತ್ತು ಮೊದಲ ಉಪದ್ರವ 93
ವಿಮೋಚನಕಾಂಡ ಅಧ್ಯಯನ 8: ಕಪ್ಪೆಗಳ, ಹೇನುಗಳ ಮತ್ತು ನೊಣಗಳ ಬಾಧೆಗಳು 95
ವಿಮೋಚನಕಾಂಡ ಅಧ್ಯಯನ 9: ಹೆಚ್ಚಿನ ಬಾಧೆಗಳು: ದನಗಳಿಗೆ ಬಾಧೆ, ಹುಣ್ಣುಗಳಿಂದ ಮತ್ತು ಆಲಿಕಲ್ಲಿನ ಮಳೆಯಿಂದ ಬಾಧೆಗಳು 97
ವಿಮೋಚನಕಾಂಡ ಅಧ್ಯಯನ 10: ಮಿಡಿತೆಗಳ ಮತ್ತು ಕಾರ್ಗತ್ತಲೆಯ ಬಾಧೆಗಳು 99
ವಿಮೋಚನಕಾಂಡ ಅಧ್ಯಯನ 11: ಹತ್ತನೆಯ ಬಾಧೆ ಮತ್ತು ನಿರ್ಗಮನ 101
ವಿಮೋಚನಕಾಂಡ ಅಧ್ಯಯನ 12: ವಿಮೋಚನಕಾಂಡದಲ್ಲಿ ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನಗಳು 104
ವಿಮೋಚನಕಾಂಡ ಅಧ್ಯಯನ 13: ಸಮುದ್ರವನ್ನು ದಾಟಿದ್ದು 105
ವಿಮೋಚನಕಾಂಡ ಅಧ್ಯಯನ 14: ಮೋಶೆ ಮತ್ತು ಮಿರ್ಯಾಮಳ ಗೀತೆಗಳು 108
ವಿಮೋಚನಕಾಂಡ ಅಧ್ಯಯನ 15: ಮರುಭೂಮಿಯೊಳಗೆ 110
ವಿಮೋಚನಕಾಂಡ ಅಧ್ಯಯನ 16: ನೀರು ಮತ್ತು ಅಮಾಲೇಕ್ಯರು 112
ವಿಮೋಚನಕಾಂಡ ಅಧ್ಯಯನ 17: ಇತ್ರೋವನು ಮೋಶೆಯನ್ನು ಸಂದರ್ಶಿಸಿದ್ದು 114
ವಿಮೋಚನಕಾಂಡ ಅಧ್ಯಯನ 18: ಸಿನಾಯಿ ಪರ್ವತದ ಬಳಿಯಲ್ಲಿ 116
ವಿಮೋಚನಕಾಂಡ ಅಧ್ಯಯನ 19: ಸಿನಾಯಿ ಪರ್ವತದ ಮೇಲೆ ಮೋಶೆ 118
ವಿಮೋಚನಕಾಂಡ ಅಧ್ಯಯನ 20: ಮೋಶೆಯು ಧರ್ಮಶಾಸ್ತ್ರವನ್ನು ಪಡೆದದ್ದು 121
ವಿಮೋಚನಕಾಂಡ ಅಧ್ಯಯನ 21: ಧರ್ಮಶಾಸ್ತ್ರ 122
ವಿಮೋಚನಕಾಂಡ ಅಧ್ಯಯನ 22: ದೇವರ ದೂತನು ಮಾರ್ಗವನ್ನು ಸಿದ್ಧಮಾಡುವನು 123
ವಿಮೋಚನಕಾಂಡ ಅಧ್ಯಯನ 23: ಒಡಂಬಡಿಕೆಯ ಧೃಢೀಕರಣ 124
ವಿಮೋಚನಕಾಂಡ ಅಧ್ಯಯನ 24: ಚಿನ್ನದ ಕರು 126
ವಿಮೋಚನಕಾಂಡ ಅಧ್ಯಯನ 25: ಮೋಶೆ ಮತ್ತು ಯೆಹೋವನ ಮಹಿಮೆ 129
ವಿಮೋಚನಕಾಂಡ ಅಧ್ಯಯನ 26: ದೇವದರ್ಶನ ಗುಡಾರ 131

## ಯಾಜಕಕಾಂಡ ಅಧ್ಯಯನಗಳು

ಯಾಜಕಕಾಂಡ ಪುಸ್ತಕದ ಪರಿಚಯ 138
ಯಾಜಕಕಾಂಡ ಅಧ್ಯಯನ 1: ಕಾಣಿಕೆಗಳು ಮತ್ತು ಯಜ್ಞಗಳು 141
ಯಾಜಕಕಾಂಡ ಅಧ್ಯಯನ 2: ದೋಷಪರಿಹಾರಕ ಯಜ್ಞದ ಮಾಹಾದಿನ 145
ಯಾಜಕಕಾಂಡ ಅಧ್ಯಯನ 3: ಯಜ್ಞ ಮತ್ತು ಒಡಂಬಡಿಕೆ 147
ಯಾಜಕಕಾಂಡ ಅಧ್ಯಯನ 4: ಯಾಜಕತ್ವ (ಪುರೋಹಿತ್ಯ) 149
ಯಾಜಕಕಾಂಡ ಅಧ್ಯಾಯ 5: ಬಾಣಂತಿಯರ ಶುದ್ಧೀಕರಣ 152
ಯಾಜಕಕಾಂಡ ಅಧ್ಯಯನ 6: ಹಬ್ಬ ಹರಿದಿನಗಳು 153
ಯಾಜಕಕಾಂಡ ಅಧ್ಯಯನ 7: ಸಬ್ಬತ್ ವರ್ಷ ಮತ್ತು ಜೂಬಿಲಿ ಸಂವತ್ಸರ 155
ಯಾಜಕಕಾಂಡ ಅಧ್ಯಯನ 8: ಯಜ್ಞದ ವ್ಯವಸ್ಥೆಯ ಪರಿಣಾಮ (ಪ್ರಭಾವ) 157

## ಅರಣ್ಯಕಾಂಡ ಅಧ್ಯಯನಗಳು

ಅರಣ್ಯಕಾಂಡದ ಪರಿಚಯ 161
ಅರಣ್ಯಕಾಂಡ ಅಧ್ಯಯನ 1: ಮೊದಲನೆಯ ಜನಗಣತಿ; ಇಸ್ರಾಯೇಲರ ಪಾಳೆಯ 164
ಅರಣ್ಯಕಾಂಡ ಅಧ್ಯಯನ 2: ಇಸ್ರಾಯೇಲರಿಗೆ ಆದರ್ಶ 166

ಅರಣ್ಯಕಾಂಡ ಅಧ್ಯಯನ 3: ಸಿನಾಯಿಯಿಂದ ಮುಂದೆ ಹೋದದ್ದು; ಯೆಹೋವನಿಂದ ಲಾವಕ್ಕಿಗಳು 168
ಅರಣ್ಯಕಾಂಡ ಅಧ್ಯಯನ 4: ಮಿರ್ಯಾಮಳು ಮತ್ತು ಆರೋನನು ಮೋಶೆಯನ್ನು ವಿರೋಧಿಸಿದ್ದು 170
ಅರಣ್ಯಕಾಂಡ ಅಧ್ಯಯನ 5: ಕಾನಾನ್ ದೇಶದ ಪರೀಕ್ಷಣೆ; ಜನರ ದಂಗೆ 172
ಅರಣ್ಯಕಾಂಡ ಅಧ್ಯಯನ 6: ಬಂಡೆಯೊಳಗಿಂದ ನೀರು; ಆರೋನನ ಮರಣ 174
ಅರಣ್ಯಕಾಂಡ ಅಧ್ಯಯನ 7: ಆರಾದಿನ ನಾಶನ; ಕಂಚಿನ ಸರ್ಪ 176
ಅರಣ್ಯಕಾಂಡ ಅಧ್ಯಯನ 8: ಬಿಳಾಮನು 178
ಅರಣ್ಯಕಾಂಡ ಅಧ್ಯಯನ 9: ಎರಡನೆಯ ಜನಗಣತಿ; ಯೆಹೋಶುವನು ನೇಮಿಸಲ್ಪಟ್ಟದ್ದು 181
ಅರಣ್ಯಕಾಂಡ ಅಧ್ಯಯನ 10: ಅರಣ್ಯದಲ್ಲಿ ದೇವರ ಕೃಪೆ 182
ಅರಣ್ಯಕಾಂಡ ಅಧ್ಯಯನ 11: ಆದರ್ಶದ ತಿರಸ್ಕಾರ 185
ಅರಣ್ಯಕಾಂಡ ಅಧ್ಯಯನ 12: ಹೊಸ ಸಂತತಿ 187

**ಧರ್ಮೋಪದೇಶಕಾಂಡ ಅಧ್ಯಯನಗಳು**

ಧರ್ಮೋಫದೇಶಕಾಂಡದ ಪೀಠಿಕೆ 190
ಧರ್ಮೋಪದೇಶಕಾಂಡ ಅಧ್ಯಯನ 1: ಸಿನಾಯಿನಿಂದ ಕಾದೇಶಿಗೆ 194
ಧರ್ಮೋಪದೇಶಕಾಂಡ ಅಧ್ಯಯನ 2: ಕಾದೇಶಿನಿಂದ ಮೋವಾಬ್ಯಕ್ಕೆ 196
ಧರ್ಮೋಪದೇಶಕಾಂಡ ಅಧ್ಯಯನ 3: ಮೇಲು ಮತ್ತು ಕೇಡುಗಳು 198
ಧರ್ಮೋಪದೇಶಕಾಂಡ ಅಧ್ಯಯನ 4: 'ಜ್ಞಾಪಿಸಿಕೊಳ್ಳುವುದು'/ನೆನಪಿನಲ್ಲಿಟ್ಟುಕೊಳ್ಳುವುದು 200
ಧರ್ಮೋಪದೇಶಕಾಂಡ ಅಧ್ಯಯನ 5: ಧರ್ಮಶಾಸ್ತ್ರ 203
ಧರ್ಮೋಪದೇಶಕಾಂಡ ಅಧ್ಯಯನ 6: ಪ್ರೀತಿ 205
ಧರ್ಮೋಪದೇಶಕಾಂಡ ಅಧ್ಯಯನ 7: ಪವಿತ್ರ/ಪರಿಶುದ್ಧ ಯುದ್ಧ 208
ಧರ್ಮೋಪದೇಶಕಾಂಡ ಅಧ್ಯಯನ 8: ಮನುಷ್ಯರ ಆಲೋಚನೆಗಳು/ಯೋಚನೆಗಳು 210
ಧರ್ಮೋಪದೇಶಕಾಂಡ ಅಧ್ಯಯನ 9: ವಾಗ್ದಾನದ ದೇಶ 212
ಧರ್ಮೋಪದೇಶಕಾಂಡ ಅಧ್ಯಯನ 10: ದೇವರ ಸಿದ್ಧಾಂತಗಳು 214
ಧರ್ಮೋಪದೇಶಕಾಂಡ ಅಧ್ಯಯನ 11: ಜೀವ ಅಥವಾ ಮರಣ 216
ಧರ್ಮೋಪದೇಶಕಾಂಡ ಅಧ್ಯಯನ 12: ಮೋಶೆಯ ಉತ್ತರಾಧಿಕಾರಿಯಾಗಿ ಯೆಹೋಶುವನು 218
ಧರ್ಮೋಪದೇಶಕಾಂಡ ಅಧ್ಯಯನ 13: ಮೋಶೆಯ ಮರಣ 220

**ಅಂತಿಮ ಅಧ್ಯಯನ**

ಹಳೆ ಒಡಬಂಡಿಕೆಯ ಧರ್ಮಶಾಸ್ತ್ರವನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? 224

**ಆದಿಕಾಂಡ ಉತ್ತರಗಳು**

ಆದಿಕಾಂಡದ ಪರಿಚಯದ ಉತ್ತರಗಳು 236
ಆದಿಕಾಂಡ ಉತ್ತರಗಳು 1: ಆರಂಭ 238
ಆದಿಕಾಂಡ ಉತ್ತರಗಳು 2: ಆದಾಮ ಮತ್ತು ಹವ್ವ 239

ಆದಿಕಾಂಡ ಉತ್ತರಗಳು 3: ಜಗತ್ತಿನ ಸೃಷ್ಟಿ 240
ಆದಿಕಾಂಡ ಉತ್ತರಗಳು 4: ಮನುಷ್ಯನ ಪತನ (ಬೀಳುವಿಕೆ) 242
ಆದಿಕಾಂಡ ಉತ್ತರಗಳು 5: ಏದೆನಿನಲ್ಲಿನ ತೋಟ ಮತ್ತು ಪತನ 244
ಆದಿಕಾಂಡ ಉತ್ತರಗಳು 6: ಕಾಯಿನ ಮತ್ತು ಹೇಬೆಲನು 246
ಅದಿಕಾಂಡ ಉತ್ತರಗಳು 7: ಜಲಪ್ರಳಯ 248
ಆದಿಕಾಂಡ ಉತ್ತರಗಳು 8: ಬಾಬೆಲ್ ಗೋಪುರ 250
ಆದಿಕಾಂಡ ಉತ್ತರಗಳು 9: ಪಾಪದ ಹರಡುವಿಕೆ 251
ಆದಿಕಾಂಡ ಉತ್ತರಗಳು 10: ಅಬ್ರಹಾಮ ಮತ್ತು ದೇವರ ವಾಗ್ದಾನಗಳು 253
ಆದಿಕಾಂಡ ಉತ್ತರಗಳು 11: ಮೆಲ್ಕೀಚೆದೆಕನು, ಅಬ್ರಹಾಮನೊಂದಿಗೆ ದೇವರ ಒಡಂಬಡಿಕೆ 255
ಆದಿಕಾಂಡ ಉತ್ತರಗಳು 12: ಹಾಗರಳು ಮತ್ತು ಇಷ್ಮಾಯೇಲ್ 257
ಆದಿಕಾಂಡ ಉತ್ತರಗಳು 13: ಸುನ್ನತಿಯ ಒಡಂಬಡಿಕೆ 259
ಆದಿಕಾಂಡ ಉತ್ತರಗಳು 14: ಮೂರು ಮಂದಿ ಸಂದರ್ಶಕರು 260
ಆದಿಕಾಂಡ ಉತ್ತರಗಳು 15: ಸೊದೋಮ್ ಮತ್ತು ಗೊಮೋರಗಳ ನಾಶನ 262
ಆದಿಕಾಂಡ ಉತ್ತರಗಳು 16: ಇಸಾಕನ ಜನನ, ಹಾಗರ್ ಮತ್ತು ಇಷ್ಮಾಯೇಲ್ 264
ಆದಿಕಾಂಡ ಉತ್ತರಗಳು 17: ಅಬ್ರಹಾಮನು ಪರೀಕ್ಷಿಸಲ್ಪಟ್ಟದ್ದು 265
ಆದಿಕಾಂಡ ಉತ್ತರಗಳು 18: ಇಸಾಕ ಮತ್ತು ರೆಬೆಕ್ಕ 267
ಆದಿಕಾಂಡ ಉತ್ತರಗಳು 19: ಯಾಕೋಬ ಮತ್ತು ಏಸಾವ 269
ಆದಿಕಾಂಡ ಉತ್ತರಗಳು 20: ಪದ್ದನ್ ಅರಾಮಿನಲ್ಲಿ ಯಾಕೋಬನು 271
ಆದಿಕಾಂಡ ಉತ್ತರಗಳು 21: ಯಾಕೋಬನು ಕಾನಾನಿಗೆ ಹಿಂತಿರುಗಿದ್ದು 274
ಆದಿಕಾಂಡ ಉತ್ತರಗಳು 22: ಯೋಸೇಫನು 276
ಆದಿಕಾಂಡ ಉತ್ತರಗಳು 23: ಐಗುಪ್ತದಲ್ಲಿ ಯೋಸೇಫನು 278
ಆದಿಕಾಂಡ ಉತ್ತರಗಳು 24: ಯೋಸೇಫ ಮತ್ತು ಆತನ ಅಣ್ಣಂದಿರು 280
ಆದಿಕಾಂಡ ಉತ್ತರಗಳು 25: ಯಾಕೋಬ ಮತ್ತು ಆತನ ಕುಟುಂಬವು ಐಗುಪ್ತದಲ್ಲಿ ನೆಲೆಸುವುದು 283
ಆದಿಕಾಂಡ ಉತ್ತರಗಳು 26: ಪೂರ್ವಜರು 285

**ವಿಮೋಚನಾಕಾಂಡ ಉತ್ತರಗಳು**

ವಿಮೋಚನಕಾಂಡದ ಪರಿಚಯದ ಉತ್ತರಗಳು 289
ವಿಮೋಚನಕಾಂಡ ಉತ್ತರಗಳು 1: ಇಸ್ರಾಯೇಲರು ದಬ್ಬಾಳಿಕೆಗೆ ಒಳಗಾಗಿದ್ದು 291
ವಿಮೋಚನಕಾಂಡ ಉತ್ತರಗಳು 2: ಮೋಶೆ ಮತ್ತು ಆತನು ಮಿದ್ಯಾನಿಗೆ ಓಡಿ ಹೋಗಿದ್ದು 293
ವಿಮೋಚನಕಾಂಡ ಉತ್ತರಗಳು 3: ಮೋಶೆ ಮತ್ತು ಉರಿಯುವ ಪೊದೆ 295
ವಿಮೋಚನಕಾಂಡ ಉತ್ತರಗಳು 4: ಮೋಶೆಯು ಹಿಂಜರಿಯುತ್ತಾ ಈಜಿಪ್ಟಿಗೆ ಹಿಂತಿರುಗಿದ್ದು 297
ವಿಮೋಚನಕಾಂಡ ಉತ್ತರಗಳು 5: ಹುಲ್ಲಿಲ್ಲದೇ ಇಟ್ಟಿಗೆಗಳು 297
ವಿಮೋಚನಕಾಂಡ ಉತ್ತರಗಳು 6: ದೇವರು ಮೋಶೆಗೆ ತನ್ನ ಒಡಂಬಡಿಕೆಯನ್ನು ಜ್ಞಾಪಿಸಿದ್ದು 300
ವಿಮೋಚನಕಾಂಡ ಉತ್ತರಗಳು 7: ಆರೋನ, ಮೋಶೆ ಮತ್ತು ಮೊದಲ ಉಪದ್ರವ 302
ವಿಮೋಚನಕಾಂಡ ಉತ್ತರಗಳು 8: ಕಪ್ಪೆಗಳ, ಹೇನುಗಳ ಮತ್ತು ನೊಣಗಳ ಬಾಧೆಗಳು 304
ವಿಮೋಚನಕಾಂಡ ಉತ್ತರಗಳು 9: ಹೆಚ್ಚಿನ ಬಾಧೆಗಳು: ದನಗಳಿಗೆ ಬಾಧೆ, ಹುಣ್ಣುಗಳಿಂದ ಮತ್ತು

ಆಲಿಕಲ್ಲಿನ ಮಳೆಯಿಂದ ಬಾಧೆಗಳು 306
ವಿಮೋಚನಕಾಂಡ ಉತ್ತರಗಳು 10: ಮಿಡಿತೆಗಳ ಮತ್ತು ಕಾರ್ಗತ್ತಲೆಯ ಬಾಧೆಗಳು 308
ವಿಮೋಚನಕಾಂಡ ಉತ್ತರಗಳು 11: ಹತ್ತನೆಯ ಬಾಧೆ ಮತ್ತು ನಿರ್ಗಮನ 310
ವಿಮೋಚನಕಾಂಡ ಉತ್ತರಗಳು 12: ವಿಮೋಚನಕಾಂಡದಲ್ಲಿ ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನಗಳು 312
ವಿಮೋಚನಕಾಂಡ ಉತ್ತರಗಳು 13: ಸಮುದ್ರವನ್ನು ದಾಟಿದ್ದು 313
ವಿಮೋಚನಕಾಂಡ ಉತ್ತರಗಳು 14: ಮೋಶೆ ಮತ್ತು ಮಿರ್ಯಾಮಳ ಗೀತೆಗಳು 315
ವಿಮೋಚನಕಾಂಡ ಉತ್ತರಗಳು 15: ಮರುಭೂಮಿಯೊಳಗೆ 317
ವಿಮೋಚನಕಾಂಡ ಉತ್ತರಗಳು 16: ನೀರು ಮತ್ತು ಅಮಾಲೇಕ್ಯರು 319
ವಿಮೋಚನಕಾಂಡ ಉತ್ತರಗಳು 17: ಇತ್ರೋವನು ಮೋಶೆಯನ್ನು ಸಂದರ್ಶಿಸಿದ್ದು 320
ವಿಮೋಚನಕಾಂಡ ಉತ್ತರಗಳು 18: ಸಿನಾಯಿ ಪರ್ವತದ ಬಳಿಯಲ್ಲಿ 322
ವಿಮೋಚನಕಾಂಡ ಉತ್ತರಗಳು 19: ಸಿನಾಯಿ ಪರ್ವತದ ಮೇಲೆ ಮೋಶೆ 323
ವಿಮೋಚನಕಾಂಡ ಉತ್ತರಗಳು 20: ಮೋಶೆಯು ಧರ್ಮಶಾಸ್ತ್ರವನ್ನು ಪಡೆದದ್ದು 324
ವಿಮೋಚನಕಾಂಡ ಉತ್ತರಗಳು 21: ಧರ್ಮಶಾಸ್ತ್ರ 327
ವಿಮೋಚನಕಾಂಡ ಉತ್ತರಗಳು 22: ದೇವರ ದೂತನು ಮಾರ್ಗವನ್ನು ಸಿದ್ಧಮಾಡುವನು 328
ವಿಮೋಚನಕಾಂಡ ಉತ್ತರಗಳು 23: ಒಡಂಬಡಿಕೆಯ ಧೃಢೀಕರಣ 330
ವಿಮೋಚನಕಾಂಡ ಉತ್ತರಗಳು 24: ಚಿನ್ನದ ಕರು 332
ವಿಮೋಚನಕಾಂಡ ಉತ್ತರಗಳು 25: ಮೋಶೆ ಮತ್ತು ಯೆಹೋವನ ಮಹಿಮೆ 335
ವಿಮೋಚನಕಾಂಡ ಉತ್ತರಗಳು 26: ದೇವದರ್ಶನ ಗುಡಾರ 338

## ಯಾಜಕಕಾಂಡ ಉತ್ತರಗಳು

ಯಾಜಕಕಾಂಡ ಪುಸ್ತಕದ ಪರಿಚಯದ ಉತ್ತರಗಳು 342
ಯಾಜಕಕಾಂಡ ಉತ್ತರಗಳು 1: ಕಾಣಿಕೆಗಳು ಮತ್ತು ಯಜ್ಞಗಳು 343
ಯಾಜಕಕಾಂಡ ಉತ್ತರಗಳು 2: ದೋಷಪರಿಹಾರಕ ಯಜ್ಞದ ಮಾಹಾದಿನ 346
ಯಾಜಕಕಾಂಡ ಉತ್ತರಗಳು 3: ಯಜ್ಞ ಮತ್ತು ಒಡಂಬಡಿಕೆ 350
ಯಾಜಕಕಾಂಡ ಉತ್ತರಗಳು 4: ಯಾಜಕತ್ವ (ಪುರೋಹಿತ್ಯ) 352
ಯಾಜಕಕಾಂಡ ಉತ್ತರಗಳು 5: ಬಾಣಂತಿಯರ ಶುದ್ಧೀಕರಣ 354
ಯಾಜಕಕಾಂಡ ಉತ್ತರಗಳು 6: ಹಬ್ಬ ಹರಿದಿನಗಳು 356
ಯಾಜಕಕಾಂಡ ಉತ್ತರಗಳು 7: ಸಬ್ಬತ್ ವರ್ಷ ಮತ್ತು ಜೂಬಿಲಿ ಸಂವತ್ಸರ 358
ಯಾಜಕಕಾಂಡ ಉತ್ತರಗಳು 8: ಯಜ್ಞದ ವ್ಯವಸ್ಥೆಯ ಪರಿಣಾಮ (ಪ್ರಭಾವ) 360

## ಅರಣ್ಯಕಾಂಡ ಉತ್ತರಗಳು

ಅರಣ್ಯಕಾಂಡದ ಪರಿಚಯದ ಉತ್ತರಗಳು 364
ಅರಣ್ಯಕಾಂಡ ಉತ್ತರಗಳು 1: ಮೊದಲನೆಯ ಜನಗಣತಿ; ಇಸ್ರಾಯೇಲರ ಪಾಳೆಯ 365
ಅರಣ್ಯಕಾಂಡ ಉತ್ತರಗಳು 2: ಇಸ್ರಾಯೇಲರಿಗೆ ಆದರ್ಶ 367
ಅರಣ್ಯಕಾಂಡ ಉತ್ತರಗಳು 3: ಸಿನಾಯಿಯಿಂದ ಮುಂದೆ ಹೋದದ್ದು; ಯೆಹೋವನಿಂದ ಲಾವಕ್ಕಿಗಳು 371
ಅರಣ್ಯಕಾಂಡ ಉತ್ತರಗಳು 4: ಮಿರ್ಯಾಮಳು ಮತ್ತು ಆರೋನನು ಮೋಶೆಯನ್ನು ವಿರೋಧಿಸಿದ್ದು 374
ಅರಣ್ಯಕಾಂಡ ಉತ್ತರಗಳು 5: ಕಾನಾನ್ ದೇಶದ ಪರೀಕ್ಷಣೆ; ಜನರ ದಂಗೆ 376
ಅರಣ್ಯಕಾಂಡ ಉತ್ತರಗಳು 6: ಬಂಡೆಯೊಳಗಿಂದ ನೀರು; ಆರೋನನ ಮರಣ 380
ಅರಣ್ಯಕಾಂಡ ಉತ್ತರಗಳು 7: ಆರಾದಿನ ನಾಶನ; ಕಂಚಿನ ಸರ್ಪ 383
ಅರಣ್ಯಕಾಂಡ ಉತ್ತರಗಳು 8: ಬಿಳಾಮನು 386
ಅರಣ್ಯಕಾಂಡ ಉತ್ತರಗಳು 9: ಎರಡನೆಯ ಜನಗಣತಿ; ಯೆಹೋಶುವನು ನೇಮಿಸಲ್ಪಟ್ಟದ್ದು 389
ಅರಣ್ಯಕಾಂಡ ಉತ್ತರಗಳು 10: ಅರಣ್ಯದಲ್ಲಿ ದೇವರ ಕೃಪೆ 392

ಅರಣ್ಯಕಾಂಡ ಉತ್ತರಗಳು 11: ಆದರ್ಶದ ತಿರಸ್ಕಾರ 395
ಅರಣ್ಯಕಾಂಡ ಉತ್ತರಗಳು 12: ಹೊಸ ಸಂತತಿ 398

**ಧರ್ಮೋಫದೇಶಕಾಂಡ ಉತ್ತ್ರರಗಳು**

ಧರ್ಮೋಫದೇಶಕಾಂಡದ ಪೀಠಿಕೆಯ ಉತ್ತ್ರರಗಳು 401
ಧರ್ಮೋಪದೇಶಕಾಂಡ ಉತ್ತ್ರರಗಳು 1: ಸಿನಾಯಿನಿಂದ ಕಾದೇಶಿಗೆ 402
ಧರ್ಮೋಪದೇಶಕಾಂಡ ಉತ್ತ್ರರಗಳು 2: ಕಾದೇಶಿನಿಂದ ಮೋವಾಬ್ಯಕ್ಕೆ 405
ಧರ್ಮೋಪದೇಶಕಾಂಡ ಉತ್ತ್ರರಗಳು 3: ಮೇಲು ಮತ್ತು ಕೇಡುಗಳು 408
ಧರ್ಮೋಪದೇಶಕಾಂಡ ಉತ್ತ್ರರಗಳು 4: 'ಜ್ಞಾಪಿಸಿಕೊಳ್ಳುವುದು'/ನೆನಪಿನಲ್ಲಿಟ್ಟುಕೊಳ್ಳುವುದು 411
ಧರ್ಮೋಪದೇಶಕಾಂಡ ಉತ್ತ್ರರಗಳು 5: ಧರ್ಮಶಾಸ್ತ್ರ 414
ಧರ್ಮೋಪದೇಶಕಾಂಡ ಉತ್ತ್ರರಗಳು 6: ಪ್ರೀತಿ 416
ಧರ್ಮೋಪದೇಶಕಾಂಡ ಉತ್ತ್ರರಗಳು 7: ಪವಿತ್ರ/ಪರಿಶುದ್ಧ ಯುದ್ಧ 419
ಧರ್ಮೋಪದೇಶಕಾಂಡ ಉತ್ತ್ರರಗಳು 8: ಮನುಷ್ಯರ ಆಲೋಚನೆಗಳು/ಯೋಚನೆಗಳು 421
ಧರ್ಮೋಪದೇಶಕಾಂಡ ಉತ್ತ್ರರಗಳು 9: ವಾಗ್ದಾನದ ದೇಶ 425
ಧರ್ಮೋಪದೇಶಕಾಂಡ ಉತ್ತ್ರರಗಳು 10: ದೇವರ ಸಿದ್ಧಾಂತಗಳು 426
ಧರ್ಮೋಪದೇಶಕಾಂಡ ಉತ್ತ್ರರಗಳು 11: ಜೀವ ಅಥವಾ ಮರಣ 429
ಧರ್ಮೋಪದೇಶಕಾಂಡ ಉತ್ತ್ರರಗಳು 12: ಮೋಶೆಯ ಉತ್ತ್ರರಾಧಿಕಾರಿಯಾಗಿ ಯೆಹೋಶುವನು 433
ಧರ್ಮೋಪದೇಶಕಾಂಡ ಉತ್ತ್ರರಗಳು 13: ಮೋಶೆಯ ಮರಣ 438

**ಅಂತಿಮ ಅಧ್ಯಯನ ಭಾಗದ ಉತ್ತರಗಳು**

ಹಳೆ ಒಡಬಂಡಿಕೆಯ ಧರ್ಮಶಾಸ್ತ್ರವನ್ನು ಹೇಗೆ ಅರ್ಥ ಮಾಡಿಕೊಳ್ಳುವುದು ಭಾಗದ ಉತ್ತರಗಳು 441

# ಆದಿಕಾಂಡ ಅಧ್ಯಯನ

**ಆದಿಕಾಂಡದ ಪರಿಚಯ**

**ಹೆಸರು**

ಆದಿಕಾಂಡವು ಪಂಚಕಾಂಡದಲ್ಲಿನ ಮೊದಲ ಪುಸ್ತಕವಾಗಿದೆ. ಗ್ರೀಕ್ ಸತ್ಯವೇದದಲ್ಲಿನ ಇದರ ಹೆಸರು "ಆದಿಯಲ್ಲಿ" ಎಂಬ ಮೊದಲ ಪದಗಳಿಂದ ಬಂದಿದೆ. "ಜೆನೆಸಿಸ್" ಎಂಬ ಇಂಗ್ಲೀಷ್ ಹೆಸರು ಗ್ರೀಕ್ ಮೂಲದಾಗಿದ್ದು ಇದನ್ನು ಹಳೇ ಒಡಂಬಡಿಕೆಯ ಗ್ರೀಕಿನ ಸೆಪ್ಟ್ಯುಜೆಂಟ್ ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ. ಇದರರ್ಥ "ಹುಟ್ಟು, ಉಗಮದ ಪಟ್ಟಿ, ವಂಶಾವಳಿ" ಎಂದಾಗಿದೆ. ಹೆಸರು (ಶೀರ್ಷಿಕೆ) ಪುಸ್ತಕದ ವಿಷಯಕ್ಕೆ ಸರಿಹೊಂದುತ್ತದೆ. ಇದು "ಅನೇಕ ಆರಂಭಗಳನ್ನು" (1:1) ಅಲ್ಲದೇ "ಅನೇಕ ಉಗಮಗಳು ಅಥವಾ ವಂಶಾವಳಿಗಳ" ಪಟ್ಟಿಯನ್ನು ಒಳಗೊಂಡಿದೆ (2:4).

**ಹಿನ್ನಲೆ ಮತ್ತು ದಿನಾಂಕ**

ಕಥಾನಿರೂಪಣೆಯು ಮೆಸೊಪೊಟಮಿಯಾದಲ್ಲಿ, ಪ್ಯಾಲೆಸ್ತೇನಿನ ಈಶಾನ್ಯದಲ್ಲಿನ ಸಮೃದ್ಧ ಸ್ಥಳ, ಯೂಫ್ರೇಟೀಸ್ ಮತ್ತು ಟೈಗ್ರೀಸ್ ನದಿಗಳ ಸುತ್ತಣ ಪ್ರದೇಶಗಳಲ್ಲಿ ಪ್ರಾರಂಭವಾಗುತ್ತದೆ. ಏದೆನ್ ತೋಟ ಸಹ ಅಲ್ಲೇ ಇತ್ತು. ಅಲ್ಲಿಯೇ ವಾಸಿಸಿದನು ಮತ್ತು ಮಹಾ ಜಲಾಪ್ರಳಯವು ಸಹ ಇಲ್ಲಿಯೇ ಸಂಭವಿಸಿತು. ಅಲ್ಲಿಂದಲೇ ದೇವರು ಮನುಷ್ಯರನ್ನು ಜಗತ್ತಿನೆಲ್ಲೆಡೆಗೆ ಚದುರಿಸಿದನು. ಇದು ಅಬ್ರಹಾಮನ ಸ್ವದೇಶವಾಗಿತ್ತು. ಇಸಾಕನ ಹೆಂಡತಿಯನ್ನು ಇಲ್ಲಿಂದಲೇ ತರಲಾಗಿತ್ತು ಮತ್ತು ಯಾಕೋಬನು ಇಪ್ಪತ್ತು ವರ್ಷಗಳ ಕಾಲ ಇಲ್ಲೇ ಇದ್ದನು.

ಪುಸ್ತಕದ ಮೊದಲ 38 ಅಧ್ಯಾಯಗಳು ಪ್ರಾಚೀನ ಕಾಲದಲ್ಲಿ ಮೆಸೊಪೊಟಮಿಯಾದಲ್ಲಿನ ಜೀವನ ಮತ್ತು ಸಂಸ್ಕೃತಿ(ಸಂಪ್ರದಾಯ)ಯ ಬಗ್ಗೆ ಬೇರೆ ಮೂಲಗಳಿಂದ ನಾವು ತಿಳಿದಿರುವ ಅಂಶಗಳನ್ನು ಹೆಚ್ಚಾಗಿ ಪ್ರತಿಬಿಂಬಿಸುತ್ತವೆ. ಅದರಲ್ಲಿ ನಾವು ಜನಪ್ರಿಯವಾದ ಸೃಷ್ಟಿಯ ಕಥೆ ಮತ್ತು ಒಂದು ವಿನಾಶಕಾರಿ ಜಲಪ್ರಳಯದ ವಿವರವನ್ನು ಕಾಣುತ್ತೇವೆ. ಅಲ್ಲದೇ ನಾವು ಕಾನೂನು ವ್ಯವಹಾರಗಳ ದಾಖಲೆ ಮತ್ತು ಭೂಮಿಯನ್ನು ( )ಖರೀದಿಸುವುದನ್ನು ಕಾಣಬಹುದು. ವಂಶಾವಳಿಗಳು ಮತ್ತು ಜನರು ವಲಸೆ ಹೋಗುವುದರ ಕುರಿತಾದ ಕಥೆಗಳನ್ನು ನಾವು ಕಾಣುತ್ತೇವೆ. ಪುರಾತತ್ವಶಾಸ್ತ್ರಜ್ಞರು ಎತ್ತರವಾದ ಕಟ್ಟಡಗಳನ್ನೊಳಗೊಂಡ ನಗರಗಳನ್ನು ಉತ್ಖನನ ಮಾಡಿ ಅವುಗಳಿಂದ ಮುಂದುವರಿದ ಸಂಸ್ಕೃತಿಯನ್ನು ದಾಖಲಿದ್ದಾರೆ.

ಅಬ್ರಹಾಮನ ವಲಸೆಯೊಂದಿಗೆ ಆದಿಕಾಂಡದ ದೃಶ್ಯವು ಮೆಸೊಪೊಟಮಿಯಾದಿಂದ ಪ್ಯಾಲೆಸ್ತೇನ್ ಮತ್ತು ಐಗುಪ್ತಕ್ಕೆ ಸಾಗುತ್ತದೆ. ಕೊನೆಯ 12 ಅಧ್ಯಾಯಗಳು ಕಡೇ ಪಕ್ಷ ಪರೋಕ್ಷವಾದ ರೀತಿಯಲ್ಲಿ ಐಗುಪ್ತದ ಪ್ರಭಾವವನ್ನು ತೋರಿಸುತ್ತವೆ. ನೈಲ್ ನದಿಯ ಫಲವತ್ತಾದ ತೀರಗಳಲ್ಲಿ ಸಮೃದ್ಧವಾದ ಕೃಷಿಯನ್ನು ಕಾಣಬಹುದು. ಕಥೆಗಳು ಐಗುಪ್ತದ ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿಗಳು ಮತ್ತು ಆಡಳಿತಾತ್ಮಕ ಕಾರ್ಯವಿಧಾನಗಳನ್ನು ಪ್ರತಿಬಿಂಬಿಸುತ್ತವೆ. ಅನೇಕ ಐಗುಪ್ತದ ಪದಗಳು ಹೆಸರುಗಳು ಪುಸ್ತಕದ ಈ ಭಾಗದಲ್ಲಿ ಕಂಡುಬರುತ್ತವೆ.

ಸಾಂಪ್ರದಾಯಕವಾಗಿ ಯೆಹೂದ್ಯರು ಮತ್ತು ಕ್ರೈಸ್ತರು ಮೋಶೆಯು ಆಧಿಕಾಂಡ ಪುಸ್ತಕದ ಗ್ರಂಥಕರ್ತನಾಗಿದ್ದಾನೆಂಬುದಾಗಿ ಹೇಳುತ್ತಾರೆ. ಹೇಗೇ ಆಗಲಿ ಕೆಲ ತಿದ್ದುಪಡಿಯು ಆನಂತರ ನಡೆಯಿತೆಂಬುದನ್ನು ಪಠ್ಯದಲ್ಲಿನ ಕೆಲ ಸೂಚನೆಗಳೇ ತೋರಿಸುತ್ತವೆ. ಉದಾಹರಣೆಗೆ ಇಸ್ರಾಯೇಲ್ ಅರಸರ ಅವಧಿಯ ಉಲ್ಲೇಖ ಮತ್ತು ಮೂಲ ಹೆಸರುಗಳಿಗೆ ಹೊರತಾಗಿ ಹೊಸ ಸ್ಥಳಗಳ ಹೆಸರುಗಳ ಬಳಕೆಯನ್ನು ಕಾಣಬಹುದು.

ಆದಿಕಾಂಡದ ವಿವರವು ಭೂಮಿ ಆಕಾಶಗಳ ಸೃಷ್ಟಿಯೊಂದಿಗೆ ಪ್ರಾರಂಭವಾಗಿ ನೋಹ ಮತ್ತು ಜಲಪ್ರಳಯದೊಂದಿಗೆ ಮುಂದುವರಿಯುತ್ತದೆ. ಇದು ಇಸ್ರಾಯೇಲ್ಯರು ಐಗುಪ್ತದಲ್ಲಿ ನೆಲೆಯಾಗುವುದರೊಂದಿಗೆ ಮತ್ತು ಸುಮಾರು ಕ್ರಿ.ಪೂ.15 ನೇ

ಶತಮಾನದ ದ್ವಿತೀಯಾರ್ಧದಲ್ಲಿ ಮರುಭೂಮಿ(ಅರಣ್ಯ)ಯಲ್ಲಿ ಅಲೆದಾಡುವ ವೇಳೆ ಬಹುಶಃ ಮೋಶೆಯು ಈ ಪುಸ್ತಕವನ್ನು ಬರೆದಿರಬಹುದು.

**ಸಾಹಿತ್ಯದ ಶೈಲಿ**

ಆದಿಕಾಂಡವು ಧರ್ಮಶಾಸ್ತ್ರದ ಭಾಗವಾಗಿದ್ದರೂ ಅದು ಯಾವುದೇ ಶಾಸ್ತ್ರಗಳನ್ನು ಒಳಗೊಂಡಿಲ್ಲ. ಬದಲಾಗಿ ಅದು ಕಥಾ ಪಠ್ಯವನ್ನು ಒಳಗೊಂಡಿದೆ. ಈ ಪಠ್ಯಗಳ ಗಧ್ಯ ವಚನವು ತೀರಾ ಅಭಿವ್ಯಕ್ತಾತ್ಮಕವಾಗಿದೆ ಮತ್ತು ಅನೇಕ ರೀತಿಯ ಶಬ್ದಾಲಂಕಾರಗಳನ್ನು ಮತ್ತು ಇತರೆ ಸಾಹಿತ್ಯದ ರೂಪಗಳನ್ನು ಬಳಸಿಕೊಂಡಿದೆ. ಇದೊಂದು ವಿಶ್ವದರ್ಜೆಯ ಸಾಹಿತ್ಯವಾಗಿದೆ. ಕಥನಗಳ ನಡುವೆ ನಾವು ಅನೇಕ ಸಣ್ಣ ಪದ್ಯ(ಕವನ)ಗಳನ್ನು ಕಾಣಬಹುದು. ಅಲ್ಲದೆ 49 ನೇ ಅಧ್ಯಾಯದಲ್ಲಿ "ಯಾಕೋಬನ ಆಶೀರ್ವಾದ" ಎಂಬ ಉದ್ದವಾದ ಪದ್ಯರೂಪಿ ಪಠ್ಯವನ್ನು ಸಹ ಕಾಣಬಹುದು.

ಆದಿಕಾಂಡದಲ್ಲಿನ ಇನ್ನೊಂದು ವಿಶಿಷ್ಟವಾದ ಪ್ರಬೇಧವೆಂದರೆ "ವಂಶಾವಳಿಗಳು" ಅಥವಾ "ಪಟ್ಟಿಗಳು". ಇಡೀ ಪುಸ್ತಕವನ್ನು ಒಂದು ಸಾಹಿತ್ಯದ ನೋಟದಿಂದ ಅಂತಹ ಹತ್ತು ಪಟ್ಟಿಗಳಾಗಿ (ವಿವರ) ರಚಿಸಬಹುದಾಗಿದೆ(2:4, 5:1, 6:9, 10:1, 11:10, 11:27, 25:19, 36:1 ಮತ್ತು 37:2). ಮೊದಲ ಐದು ಪಟ್ಟಿ(ವಿವರ)ಗಳು ಚಿಕ್ಕದಾಗಿದ್ದು ಅವು ನಮ್ಮನ್ನು ಆದಾಮನಿಂದ ಅಬ್ರಹಾಮನವರಗೆ ಕೊಂಡೊಯ್ಯುತ್ತವೆ. ಉಳಿದ ಐದು ದೀರ್ಘವಾದ ಪಟ್ಟಿ(ವಿವರ)ಗಳು ಇಸ್ರಾಯೇಲ್ಯರ ಪಿತೃಗಳಾದ ಅಬ್ರಹಾಮ, ಇಸಾಕ, ಯಾಕೋಬ, ಯೋಸೇಫ ಮತ್ತು ಅವರ ಕುಟುಂಬಗಳೊಂದಿಗಿನ ದೇವರ ವ್ಯವಹಾರವನ್ನು ವಿವರಿಸುತ್ತವೆ. ಕೆಳಕಂಡ "ವಿಷಯಾಂಶ ಮತ್ತು ರಚನೆ"ಯನ್ನು ನೋಡಿ.

**ಪುಸ್ತಕದಸಂದೇಶ**

ಈ ಹತ್ತು ಪಟ್ಟಿ(ಭಾಗಗಳು)ಗಳು ಜನನ, ವಂಶಾವಳಿ ಮತ್ತು ಚರಿತ್ರೆಯ ದಾಖಲೆಗಳನ್ನು ಒಳಗೊಂಡಿದೆ. ಅಲ್ಲದೇ ಅವು "ಆರಂಭಗಳನ್ನು" ದಾಖಲಿಸಿವೆ ಎಂದು ಸಹ ನಾವು ಹೇಳಬಹುದು. ಆದಿಕಾಂಡದಲ್ಲಿ ನಾವು ಅನೇಕ "ಆರಂಭಗಳನ್ನು" ಕಾಣಬಹುದು: ಭೂಮ್ಯಾಕಾಶಗಳ ಆರಂಭ, ದೇವರು ಸೃಷ್ಟಿಸಿದ ಜಗತ್ತಿನ ಆರಂಭ, ದೇವರ ಸ್ವರೂಪದಲ್ಲಿ ರೂಪಿಸಲ್ಪಟ್ಟ ಮನುಷ್ಯನ ಆರಂಭ, ಪಾಪ ಮತ್ತು ಬಿಡುಗಡೆಯ ಆರಂಭ ಮತ್ತು ಸಮಾಜ ಮತ್ತು ನಾಗರೀಕತೆಯ ಆರಂಭ.

ಪುಸ್ತಕದ ಒಂದು ವಿಶೇಷ ಸಾಹಿತ್ಯದ ಮತ್ತು ದೈವಶಾಸ್ತ್ರೀಯ ಲಕ್ಷಣವೆಂದರೆ ಚೊಚ್ಚಲ ಮಗನ ಹೊರತಾಗಿ ಕಿರೀ ಮಗನನ್ನು ಆರಿಸಿಕೊಳ್ಳುವುದಾಗಿದೆ. ಕಾಯಿನನ ಬದಲಾಗಿ ಸೇತನು ಆರಿಸಲ್ಪಟ್ಟನು, ಇಷ್ಮಾಯೇಲನ ಹೊರತಾಗಿ ಇಸಾಕನು ಆರಿಸಲ್ಪಟ್ಟನು, ಏಸಾವನ ಬದಲಾಗಿ ಯಾಕೋಬನು ಆರಿಸ್ಪಟ್ಟನು, ತಮ್ಮ ಸಹೋದರರ ಹೊರತಾಗಿ ಯೆಹೂದ ಮತ್ತು ಯೋಸೇಫರು ಆರಿಸಲ್ಪಟ್ಟರು ಮತ್ತು ಮನಸ್ಸೆಯ ಬದಲಾಗಿ ಎಫ್ರಾಯೀಮ್ ಆರಿಸಲ್ಪಟ್ಟನು. ದೇವಜನರು ನೈಸರ್ಗಿಕ ಮಾನವಾಭಿವೃದ್ಧಿಯ ಉತ್ಪನ್ನಗಳಲ್ಲ ಎಂಬುದನ್ನು ತೋರ್ಪಡಿಸುತ್ತದೆ. ಬದಲಾಗಿ ಅವರು ಮಾನವನ ಇತಿಹಾಸದಲ್ಲಿ ದೇವರ ಸಾರ್ವಭೌಮ ಮತ್ತು ಕೃಪಾ ಮಧ್ಯಪ್ರವೇಶಿಸುವಿಕೆಯ ಫಲಿತಾಂಶವಾಗಿದ್ದಾರೆ. ಬಿದ್ದು ಹೋದ ಮನುಕುಲದಿಂದ ದೇವರು ತನ್ನ ರಾಜ್ಯದ ಜನರು ಮತ್ತು ಇಡೀ ಜಗತ್ತಿಗೆ ತನ್ನ ಆಶೀರ್ವಾದದ ನಿಧಿಯಾಗಬೇಕೆಂದು ಕರೆಯಲ್ಪಟ್ಟ ಒಂದು ಹೊಸ ಜನಾಂಗವನ್ನು ಹೊರತರುತ್ತಾನೆ.

ಆದಿಕಾಂಡವು ನಮಗೆ ಸತ್ಯವೇದದಲ್ಲಿ ಉಳಿದ ಎಲ್ಲವನ್ನೂ ಅರ್ಥೈಸಿಕೊಳ್ಳಲು ಸಹಾಯಿಸುತ್ತದೆ. ಇದರ ದೈವಶಾಸ್ತ್ರವು ಸಂಪೂರ್ಣವಾಗಿ ಏಕದೇವತಾವಾದವಾಗಿದ್ದು ಸುತ್ತಣ ಸಂಸ್ಕೃತಿಗಳ ಬಹುದೇವತಾ ಪದ್ಧತಿಗಳಿಗೆ ತದ್ವಿರುದ್ಧವಾಗಿದೆ. ಈ ಒಬ್ಬ ನಿಜವಾದ ದೇವರು ಎಲ್ಲಾ ಸೃಷ್ಟಿಗಳ ಮೇಲೆ ಮತ್ತು ಮನುಕುಲದ ಮೇಲೆ ಸಾರ್ವಭೌಮನಾಗಿ ಆಳುವವನಾಗಿದ್ದಾನೆಂಬುದನ್ನು ಇದು ಬೋಧಿಸುತ್ತದೆ. ಅಲ್ಲದೇ ಇದು ಸರಿಯಾದ ಸಂಬಂಧದ ಪ್ರಾಮುಖ್ಯತೆಯ ಬಗ್ಗೆ ಒಂದು ಬಲವಾದ ಸಂದೇಶವನ್ನು ಹೊಂದಿರುವ ಪುಸ್ತಕವಾಗಿದೆ. ಅದು ದೇವರು ಮತ್ತು ಪ್ರಕೃತಿಯ ನಡುವೆ, ದೇವರು ಮತ್ತು ಮನುಷ್ಯನ ನಡುವೆ, ಮನುಷ್ಯ ಮತ್ತು ಮನುಷ್ಯನ

ನಡುವೆ ಮತ್ತು ಮನುಷ್ಯ ಮತ್ತು ದೇವರ ಸೃಷ್ಟಿಯ ನಡುವೆ ಇದು ದೇವರು ಮೊದಲು ಹೆಜ್ಜೆತೆಗೆದುಕೊಂಡು ಹೇಗೆ ತನ್ನ ಜನರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುತ್ತಾನೆ ಮತ್ತು ಆತನು ತನ್ನ ನಿರಂತರವಾದ ಪ್ರೀತಿ ಮತ್ತು ನಂಬಿಗಸ್ತಿಕೆಯನ್ನು ಹೇಗೆ ವ್ಯಕ್ತಪಡಿಸುತ್ತಾನೆ ಎಂಬುದನ್ನು ನಮಗೆ ಪರಿಚಯಿಸುತ್ತದೆ. ಮುಂದೆ ಅದು ಪ್ರಾಣಕ್ಕೆ ಪ್ರಾಣಕ್ಕಾಗಿನ ಈಡಾಗಿ ಯಜ್ಞವನ್ನು ಸ್ಥಾಪಿಸುತ್ತದೆ. ಮತ್ತು ಸೈತಾನನ ಎಲ್ಲಾ ಬಲಗಳಿಂದ ಬಿಡುಗಡೆಗಾಗಿನ ದೇವರ ಒದಗಿಸುವಿಕೆಯನ್ನು ಸೂಚಿಸುತ್ತದೆ. ಅಲ್ಲದೇ ಇದು ನಮಗೆ ನಂಬಿಕೆಯ ವಿಷಯವನ್ನು ಸಹ ಪರಿಚಯಿಸುತ್ತದೆ. “ಅಬ್ರಾಮನು ಯೆಹೋವನನ್ನು ನಂಬಿದನು, ಯೆಹೋವನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು” (15:6). ಇಬ್ರಿಯ ಪತ್ರಿಕೆ 11 ನೇ ಅಧ್ಯಾಯದಲ್ಲಿನ ಹೆಚ್ಚಿನ “ನಂಬಿಕೆಯ ವೀರರುಗಳೆಲ್ಲಾ” ಆದಿಕಾಂಡದವರೆಂಬುದರಲ್ಲಿ ಆಶ್ಚರ್ಯವಿಲ್ಲ. ಆದಿಕಾಂಡದ ಮೊದಲ ಮೂರು ಅಧ್ಯಾಯಗಳ ಅನೇಕ ವಿಷಯಗಳು ಪ್ರಕಟಣೆಯ ಕೊನೆಯ ಮೂರು ಅಧ್ಯಾಯಗಳಲ್ಲಿ ತಿರುಗಿ ಬರುವುದನ್ನು ನಾವು ಗಮನಿಸಲೇಬೇಕು. ಸೃಷ್ಟಿ ಮತ್ತು ಮಾನವನ ಕುರಿತ ದೇವರ ಕಥೆಯ ಪ್ರಾರಂಭ ಮತ್ತು ಅಂತ್ಯದ ನಡುವಿನ ಸಂಬಂಧವು ಕಾಕತಾಳೀಯವಲ್ಲ.

**ವಿಷಯಾಂಶ ಮತ್ತು ರಚನೆ**

ಆದಿಕಾಂಡದ ವಿಷಯಾಂಶವು ಪೀಠಿಕೆಯ ಪ್ರಾರಂಭದಲ್ಲಿಯೇ ತಿಳಿಸಲ್ಪಟ್ಟಿದೆ. ಆದಿಕಾಂಡವನ್ನು ಎರಡು ರೀತಿಯಲ್ಲಿ ರಚನೆ ಮಾಡಬಹುದಾಗಿದೆ. ಮೊದಲನೆಯದು ಕಥೆಗಳನ್ನಾಧರಿಸಿದೆ.

**ಅ. ಪ್ರಾಚೀನ (ಆದಿಕಾಲದ) ಇತಿಹಾಸ 1:1 - 11:26**

1. ಸೃಷ್ಟಿ 1:1 - 2:3
2. ಏದೆನ್ ತೋಟದಲ್ಲಿ ಆದಾಮ ಮತ್ತು ಹವ್ವ, 2:4-25
3. ಪಾಪ (ಪತನ), ಅಧ್ಯಾಯ 3
4. ಕಾಯಿನ ಮತ್ತು ಹೇಬೆಲ, ಅಧ್ಯಾಯ 4
5. ಆದಾಮನಿಂದ ನೋಹನವರೆಗಿನ ವಂಶಾವಳಿ, ಅಧ್ಯಾಯ
6. ಜಲಪ್ರಳಯ ಮತ್ತು ನೋಹನೊಂದಿಗೆ ದೇವರ ಒಡಂಬಡಿಕೆ, 6:1-9:29
7. ಜನಾಂಗಗಳ ಪಟ್ಟಿ, ಬಾಬೆಲ್ ಗೋಪುರ ಮತ್ತು ಜನಾಂಗಗಳ ಚದುರುವಿಕೆ, 10:1-11:26

**ಆ. ಪಿತೃ ಪ್ರಧಾನ ಇತಿಹಾಸ 11:27-50:26**

1. ಅಬ್ರಹಾಮ, 11:27-25:11
2. ಇಷ್ಮಾಯೇಲನ ಸಂತತಿ, 25:12-18
3. ಯಾಕೋಬ, 25:19-35:29
4. ಏಸಾವನ ಸಂತತಿ, 36:1-37:1
5. ಯೋಸೇಫ, 37:2-50:26

**ಅ. ಪೀಠಿಕೆ 1:1-2:3**

### ಆ. ಹತ್ತು ವಿವರಗಳು (ಪಟ್ಟಿಗಳು), 2:4-50:26

1. ಮೊದಲ ವಿವರ: ಆಕಾಶ ಮತ್ತು ಭೂಮಿಯದು, 2:4-4:26
2. ಎರಡನೇ ವಿವರ: ಆದಾಮನ ವಂಶಾವಳಿಯದು, 5:1-6:8
3. ಮೂರನೇ ವಿವರ: ನೋಹನದು, 6:9-9:26
4. ನಾಲ್ಕನೇ ವಿವರ: ಶೇಮ್, ಹಾಮ್, ಯೆಫೆತರದು, 10:1-11:9
5. ಐದನೇ ವಿವರ: ಶೇಮನದು, 11:10-26
6. ಆರನೇ ವಿವರ: ತೆರಹನದು, 11:27-25:11
7. ಏಳನೇ ವಿವರ: ಅಬ್ರಹಾಮನ ಮಗನಾದ ಇಷ್ಮಾಯೇಲನದು, 25:12-18
8. ಎಂಟನೇ ವಿವರ: ಅಬ್ರಹಾಮನ ಮಗನಾದ ಇಸಾಕನದು, 25:19-35:39
9. ಒಂಬತ್ತನೇ ವಿವರ: ಏಸಾವನದು, 36:1-37:1
10. ಹತ್ತನೇ ವಿವರ: ಯಾಕೋಬನದು, 37:2-50:26

**ಪ್ರಶ್ನೆಗಳು**

1. ಪುಸ್ತಕದ ಹೆಸರು ಮತ್ತು ಅದು ಎಲ್ಲಿಂದ ಬಂದಿತೆಂಬುದನ್ನು ವಿವರಿಸಿರಿ.
2. ಆದಿಕಾಂಡದ ಕಥೆಗಳು ಮೂರು ಭೌಗೋಳಿಕ ಪ್ರದೇಶಗಳಲ್ಲಿ ಸಂಭವಿಸುತ್ತವೆ, ಅವು ಯಾವುವು?
3. ಆದಿಕಾಂಡವನ್ನು ಬರೆದವರು ಯಾರು? ಅದನ್ನು ಯಾವಾಗ ಬರೆದರು?
4. ಆದಿಕಾಂಡದಲ್ಲಿ ನಾವು ಯಾವ ರೀತಿಯ ಪಠ್ಯವನ್ನು ಕಾಣುತ್ತೇವೆ?
5. ಆದಿಕಾಂಡದ ಸಂದೇಶವನ್ನು ಕಲವೇ ಅಂಶಗಳಲ್ಲಿ ಸಾರಾಂಶಗೊಳಿಸಿರಿ.
6. ಆದಿಕಾಂಡದ ಕಥಾ ರಚನೆಯು ಎರಡು ಮುಖ್ಯ ಭಾಗಗಳನ್ನು ಒಳಗೊಂಡಿದೆ. ಅವು ಯಾವುವು?
7. ಆದಿಕಾಂಡದ “ಸಾಹಿತ್ಯದ/ಬರವಣಿಗೆಯ ರೂಪ/ರಚನೆ”ಯನ್ನು ವಿವರಿಸಿರಿ.

## ಆದಿಕಾಂಡ ಅಧ್ಯಯನ 1: ಆರಂಭ

### ಅ. ಪೀಠಿಕೆ

ಆದಿಯಲ್ಲಿ ದೇವರು ಭೂಮಿಯನ್ನು ಆಕಾಶವನ್ನು ಉಂಟುಮಾಡಿದನು (ಆದಿ 1:1). ಸತ್ಯವೇದದ ಮೊದಲ ಪುಸ್ತಕವಾದ ಆದಿಕಾಂಡವು ದೇವರು ವಿಶ್ವವನ್ನು ಸೃಷ್ಟಿಸುವ ವಿವರದೊಂದಿಗೆ ಪ್ರಾರಂಭವಾಗುತ್ತದೆ. ಅಂದರೆ ಹಗಲು ಮತ್ತು ರಾತ್ರಿ, ನೆಲ ಮತ್ತು ಸಮುದ್ರಗಳು, ಸಸ್ಯಗಳು, ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು, ಎಲ್ಲಾ ಬಗೆಯ ಬದುಕುವ ಜೀವಿಗಳು ಮತ್ತು ಮನುಷ್ಯ ಜೀವಿಯ ಸೃಷ್ಟಿ. *"ದೇವರು ತಾನು ಉಂಟು ಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಒಳ್ಳೇದಾಗಿತ್ತು"*(ಆದಿ.1:31). *"ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿಬಿಟ್ಟು ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡದ್ದರಿಂದ ಆ ದಿನವನ್ನು ಪರಿಶುದ್ಧ ದಿನವಾಗಿರಲಿ ಎಂದು ಆಶೀರ್ವದಿಸಿದನು"*(ಆದಿ.2:2-3).

ಈ ವಾಕ್ಯಭಾಗವು ಪದ್ಯರೂಪಿ ಲಕ್ಷಣವನ್ನು ಹೊಂದಿದೆ. ದೇವರು ಜಗತ್ತನ್ನು ಸೃಷ್ಟಿಸುವ ಕಾರ್ಯವು ಒಂದು ದಿನದಿಂದ ಮುಂದಿನದಕ್ಕೆ ಸಾಗುವಂತೆ ಇದು ಲಯಬದ್ಧವಾಗಿದೆ.

### ಆ. ಓದಿರಿ

ಆದಿಕಾಂಡ 1:1-2:3

### ಇ. ಟಿಪ್ಪಣಿಗಳು

*"ದೇವರು ಉಂಟುಮಾಡಿದನು"* (ವ.1): ಇಬ್ರಿಯ ಪಠ್ಯವು ದೇವರಿಗೆ "ಎಲೋಹಿಮ್" ಎಂಬ ಪದವನ್ನು ಉಪಯೋಗಿಸುತ್ತದೆ. ಇದು ಬಹುವಚನ ರೂಪವಾಗಿದೆ ಆದರೆ ಹಳೇ ಒಡಂಬಡಿಕೆಯಲ್ಲಿ ಇದು ಸಾಮಾನ್ಯವಾಗಿ ಇಸ್ರಾಯೇಲ್ಯರ ಒಬ್ಬನೇ ದೇವರನ್ನು ಸೂಚಿಸುತ್ತದೆ. ಬಹುವಚನ ರೂಪವು (ದೇವರುಗಳ) ಸಂಖ್ಯೆಯನ್ನು ಸೂಚಿಸುವುದಿಲ್ಲ, ಆದರೆ ಅದು ಮಹಿಮೆ ಮತ್ತು ಬಲ(ಶಕ್ತಿ)ವನ್ನು ಸೂಚಿಸುತ್ತದೆ. ಉಂಟುಮಾಡು ಎಂಬುವುದಕ್ಕಿರುವ ಇಬ್ರಿಯ ಪದವನ್ನು ಹಳೇ ಒಡಂಬಡಿಕೆಯಲ್ಲಿ ಮನುಷ್ಯನ ಬಗ್ಗೆ ಬಳಸಿಲ್ಲ, ಬದಲಾಗಿ ದೇವರ ಬಗ್ಗೆ ಮಾತ್ರ ಬಳಸಲಾಗಿದೆ.

*"ಆಕಾಶವನ್ನೂ ಭೂಮಿಯನ್ನೂ"* (1): ಎಲ್ಲಾ ಸಂಗತಿಗಳನ್ನು ಸೂಚಿಸಿ (ಹೋಲಿಸಿ ಯೆಶಾಯ 44:24: "ನಾನೇ ಸರ್ವಶಕ್ತನಾದ ಯೆಹೋವನು").

*"ಎರಡು ದೊಡ್ಡ ಬೆಳಕುಗಳನ್ನು"* (ವ.16): ಇದು ಸೂರ್ಯ ಮತ್ತು ಚಂದ್ರನನ್ನು ಸೂಚಿಸುತ್ತದೆ. ಅನ್ಯ ಜನಾಂಗಗಳು ಸೂರ್ಯ ಮತ್ತು ಚಂದ್ರನನ್ನು ದೇವರುಗಳೆಂಬುದಾಗಿ ಆರಾಧಿಸುವುದರಿಂದ ಈ ಎರಡು ಪದಗಳನ್ನು ಪಠ್ಯದಲ್ಲಿ ತಿಳಿಸದೇ ಇದ್ದಿರಬಹುದು.

*"ನಮ್ಮ"* (ವ.26): ಬಹುವಚನವನ್ನು ಹೇಗೇ ವ್ಯಾಖ್ಯಾನಿಸಬೇಕೆಂಬುದನ್ನು ಸತ್ಯವೇದ ಪಂಡಿತರು ಒಪ್ಪುವುದಿಲ್ಲ. ಬಹುಶಃ ಜೊಂಡರ್ವನ್ NIV ವಿಶ್ಲೇಷಣೆಯು ತಿಳಿಸಿದ ವಿವರಣೆಯು ಒಂದು ಉತ್ತಮವಾದ ವಿವರಣೆಯಾಗಿದೆ, ಅದು ವಚನ 26-27 ರಲ್ಲಿ "ದೇವರು" ಮತ್ತು "ಮನುಷ್ಯನ" ನಡುವೆ ಒಂದು ಸಮಾನಾಂತರತೆಯನ್ನು ಕಾಣುತ್ತದೆ. ಒಬ್ಬ ಮನುಷ್ಯನು ಗಂಡು ಮತ್ತು ಹೆಣ್ಣಾಗಿ ಅಂದರೆ ಬಹುತ್ವವಾಗಿ ಉಂಟುಮಾಡಲ್ಪಟ್ಟಿದ್ದಾನೆ. ಅದೇ ರೀತಿಯಲ್ಲಿ ಒಬ್ಬನೇ ದೇವರು ತನ್ನ ಬಹುತ್ವ(ವಚನ)ದ ಮಾತಿನ ಮೂಲಕ ("ನಮ್ಮ ಸ್ವರೂಪದಲ್ಲಿ ಮನುಷ್ಯರನ್ನು ಉಂಟು ಮಾಡೋಣ") ಮನುಷ್ಯರನ್ನು ಉಂಟುಮಾಡಿದನು.

*“ಸ್ವರೂಪದಲ್ಲಿ” ಹೋಲಿಕೆಗೆ ಸರಿಯಾಗಿ* (ವ.26): ಇವೆರಡೂ ಪದಗಳು ಸಮಾನಾರ್ಥಕಗಳಾಗಿವೆ. ಅದೇ ರೀತಿಯಲ್ಲಿ ಅವು ಆದಿಕಾಂಡದಲ್ಲಿ ಬೇರಡೆ ಸಹ (ನೋಡಿ 5:1 ಮತ್ತು 9:6) ಮತ್ತು ಹೊಸ ಒಡಂಬಡಿಕೆಯಲ್ಲಿ (1.ಕೊರಿಂಥ. 11:7, ಕೊಲೊ. 3:10, ಯಾಕೋಬ 3:9) ಅರ್ಥೈಸಲ್ಪಟ್ಟಿವೆ.

*“ಗಂಡು ಹೆಣ್ಣಾಗಿ”* (ವ.27): ಗಂಡು ಮತ್ತು ಹೆಣ್ಣು ಇಬ್ಬರೂ ಸಹ ದೇವರ ಸ್ವರೂಪವನ್ನು ಹೊತ್ತಿದ್ದಾರೆ. ಮುಂದಿನ ವಚನದಲ್ಲಿನ ಆಶೀರ್ವಾದವು ಅವರಿಬ್ಬರಿಗೂ ಸಮಾನವಾಗಿ ಅನ್ವಯಿಸುತ್ತದೆ.

*“ವಿಶ್ರಮಿಸಿಕೊಂಡನು”* (2:3): ಇಬ್ರಿಯ ಪದವು ಸಬ್ಬತ್ ಎಂಬ ಪದದ ಮೂಲವಾಗಿದೆ.

**ಈ. ಪ್ರಶ್ನೆಗಳು**

1. ದೇವರು ಮನುಷ್ಯರಿಗೆ ಕೊಟ್ಟ ನಿರ್ದೇಶನಗಳೇನು ?
2. ತನ್ನ ಸೃಷ್ಟಿಯ ಕುರಿತ ದೇವರ ಮೌಲ್ಯಮಾಪನವೇನು ?
3. ಯಾಕೆ ದೇವರು ಏಳನೇ ದಿನವನ್ನು ಪರಿಶುದ್ಧದಿನವನ್ನಾಗಿ ಮಾಡಿದನು ?

**ಊ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ಸುಂದರವಾದ ಸೃಷ್ಟಿಯ ಪದ್ಯರೂಪಿ ಕಥೆಯನ್ನು ಓದಿದ ನಂತರ ನಿಮ್ಮ ಯೋಚನೆ ಮತ್ತು ಭಾವನೆಗಳನ್ನು ಹಂಚಿಕೊಳ್ಳಿರಿ.
2. ಇಂದು ದಕ್ಷಿಣ ಭಾರತದವರಾದ ನಮಗೆ ಈ ವಾಕ್ಯಭಾಗವು ಹೊಂದಿರುವ ಸಂದೇಶವನ್ನು ಸಾರಾಂಶಗೊಳಿಸಿರಿ.

**ಆದಿಕಾಂಡ ಅಧ್ಯಯನ 2: ಆದಾಮ ಮತ್ತು ಹವ್ವ**

**ಅ. ಪೀಠಿಕೆ**

ಹಿಂದಿನ ಅಧ್ಯಾಯನದಲ್ಲಿ ದೇವರು ಜಗತ್ತನ್ನು ಸೃಷ್ಟಿಸಿ ಏಳನೇ ದಿನದಲ್ಲಿ ವಿಶ್ರಮಿಸಿಕೊಂಡ ಅಂಶವನ್ನು ಕಂಡಿದ್ದೇವೆ. ಈಗ ಏದೆನಿನಲ್ಲಿ ಒಂದು ತೋಟವನ್ನು ನೆಡುವ ಒಂದು ವರ್ಣನೆ ಮತ್ತು ಅದರಲ್ಲಿ ಆದಾಮ ಮತ್ತು ಹವ್ವರನ್ನು ಇಡುವುದನ್ನು ಕಾಣುತ್ತೇವೆ.

ಈ ವಾಕ್ಯಭಾಗದ ಬರವಣಿಗೆಯ ಶೈಲಿಯು ಹೆಚ್ಚು ನಿರೂಪಣಾತ್ಮಕವಾಗಿದ್ದು ಹಿಂದಿನ ವಾಕ್ಯಭಾಗದ ಶೈಲಿಯಂತೆ ಪದ್ಯರೂಪಿಯಾಗಿಲ್ಲ.

**ಆ. ಓದಿರಿ**

ಆದಿಕಾಂಡ 2:4-25

**ಇ. ಟಿಪ್ಪಣಿಗಳು**

*"ಮೂಡಣ ದಿಕ್ಕಿನಲ್ಲಿರುವ ಏದೆನ್ ಸೀಮೆಯಲ್ಲಿ"* (ವ.8): ಈ ತೋಟವು ಪ್ಯಾಲೆಸ್ತೇನಿನ ಪೂರ್ವಕ್ಕಿದೆ, ಭಾರತದ ಪೂರ್ವಕ್ಕಲ್ಲ. "ಏದೆನ್" ಎಂಬ ಇಬ್ರಿಯ ಪದಕ್ಕೆ ಹಲವಾರು ಅರ್ಥವಿದೆ. ಅದರಲ್ಲೊಂದು "ಆನಂದಿಸು" ಎಂದಾಗಿದೆ. ಇದು "ಪರದೈಸು" ಎಂಬ ಪದಕ್ಕೆ ಸಮಾನವಾಗಿದೆ. ತೋಟವನ್ನು ಏದೆನಿನಲ್ಲಿ ಮಾಡಲಾಯಿತು, ಹಾಗಾಗಿ ಇದು ಒಂದು ಉದ್ಯಾನವನದ ಹೆಸರಲ್ಲ, ಬದಲಾಗಿ ಈ ಉದ್ಯಾನವನ(ತೊಟ)ವಿರುವ ಸ್ಥಳದ ಹೆಸರಾಗಿದೆ.

*"ಜೀವದಾಯಕ ವೃಕ್ಷ"* (ವ.9): ಈ ಮಾತಿನ ಅರ್ಥ ಇದರ ಹಣ್ಣನ್ನು ತಿನ್ನುವವರು ಸಾಯುವುದಿಲ್ಲ, ಬದಲಾಗಿ ಜೀವವನ್ನು ಹೊಂದುತ್ತಾರೆ ಎಂದಾಗಿದೆ.

*"ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ವೃಕ್ಷ"* (ವ.9): ಈ ಮಾತಿನ ಅರ್ಥ ಈ ಹಣ್ಣನ್ನು ತಿನ್ನುವವರಿಗೆ ಒಳ್ಳೇದ್ದು ಮತ್ತು ಕೆಟ್ಟದ್ದರ ಅರಿವು ಬರುತ್ತದೆ, ಇದು ನೈತಿಕ ಜ್ಞಾನ ಮತ್ತು ವಿವೇಚನೆಯಾಗಿದೆ (ನೋಡಿ ಧರ್ಮೋ.1:39). ಈ ಜ್ಞಾನವು ಕೊನೆಗೆ ಮರಣಕ್ಕೆ ನಡೆಸುತ್ತದೆ (2:19, 3:3)

*"ಪೀಶೋನ್, ಹವೀಲ, ಗಿಹೋನ್, ಕೂಷ್"* (ವ.11,13): ಪೀಶೋನ್ ಮತ್ತು ಗಿಯೋನ್ ನದಿಗಳು ಎಲ್ಲಿವೆ ಎಂಬುದು ನಮಗೆ ತಿಳಿದಿಲ್ಲ. ಹವೀಲ ಎಂಬುದೂ ಒಂದು ಅಪರಿಚಿತ ದೇಶವಾಗಿದೆ. ಬಹುಶಃ ಇದು ಮೆಸೊಪೊಟಮಿಯದಲ್ಲಿರಬಹುದು. ಕೂಷ್ ಹೆಸರನ್ನು ವಿಭಿನ್ನ ದೇಶಗಳಿಗೆ ಬಳಸಲಾಗಿದೆ, ಇಲ್ಲಿ ಇದು ಬಹುಶಃ ಮೆಸೊಪೊಟಮಿಯದ ಒಂದು ಭಾಗವನ್ನು ಸೂಚಿಸಬಹುದು.

*"ಅಶ್ಶೂರ್"* (ವ.14): ಇದು ಮೆಸೊಪೊಟಮಿಯದ ಉತ್ತರಕ್ಕಿರುವ ಅಸ್ಸೀರಿಯ ರಾಷ್ಟ್ರದ ಪ್ರಾಚೀನ ರಾಜಧಾನಿಯಾಗಿತ್ತು. ಇದು ಟೈಗ್ರೀಸ್ ನದಿಯ ದಡದಲ್ಲಿತ್ತು.

*"ಯೂಫ್ರಟೀಸ್"* (ವ.14): ಇದು ಮೆಸೊಪೊಟಮಿಯಾದ ಒಂದು ಪ್ರಮುಖ ನದಿಯಾಗಿದೆ.

*"ವ್ಯವಸಾಯ ಮಾಡುವುದಕ್ಕೂ, ಕಾಯುವುದಕ್ಕೂ"* (ವ.15): ಇದಕ್ಕೆ ಪರ್ಯಾಯವಾದ ಭಾಷಾಂತರವೆಂದರೆ "ಆರಾಧಿಸುವುದಕ್ಕೂ, ವಿಧೇಯರಾಗುವುದಕ್ಕೂ" ಎಂದಾಗಿದೆ.

*"ಏನೇನು ಹೆಸರಿಡುವನು"* (ವ.19): "ಹೆಸರಿಡುವುದು" ಅಥವಾ "ಹೆಸರಿಡಿದು ಕರೆಯುವದು" ಹೆಸರಿಟ್ಟವುಗಳ ಮೇಲೆ ಪ್ರಾಭಲ್ಯವನ್ನು ಸಾಧಿಸುವುದಾಗಿದೆ.

*“ಬೆತ್ತಲಾಗಿದ್ದರೂ ನಾಚಿಕೊಳ್ಳಲಿಲ್ಲ”* (ವ.25): ನಾಚಿಕೆಯಿಂದ ಸ್ವತಂತ್ರರಾಗಿರುವುದು ಅವರಿಬ್ಬರಿಗೂ ನೈತಿಕವಾಗಿ ನಿರ್ದೋಷಿ(ನಿರ್ಮಲ)ಗಳಾಗಿದ್ದರೆಂಬುದನ್ನು ಸೂಚಿಸುತ್ತದೆ.

**ಈ. ಪ್ರಶ್ನೆಗಳು**

1. ಏದೆನಿನ ತೋಟವನ್ನು ವಿವರಿಸಿರಿ!
2. ದೇವರು ಆದಾಮನಿಗೆ ಕೊಟ್ಟ ನಿರ್ದೇಶನಗಳೇನು?
3. ಆದಾಮ, ಹವ್ವ ಮತ್ತು ಅವರ ಸಂಬಂಧದ ಬಗ್ಗೆ ಈ ವಾಕ್ಯಭಾಗವು ಏನೆಂದು ಹೇಳುತ್ತದೆ?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ವಾಕ್ಯಭಾಗದ ಕುರಿತು ನಿಮ್ಮ ಯೋಚನೆ ಮತ್ತು ಭಾವನೆಗಳನ್ನು ಹಂಚಿಕೊಳ್ಳಿರಿ.
2. ವಚನ 15 ರ ಟಿಪ್ಪಣಿಯನ್ನು ನೋಡಿರಿ. ನಮ್ಮ ಸತ್ಯವೇದದಲ್ಲಿನ ಭಾಷಾಂತರದ ಬದಲು ನಾವು ಪರ್ಯಾಯ ಭಾಷಾಂತರವನ್ನು ಆಯ್ದುಕೊಂಡರೆ ಏದೆನ್ ತೋಟದಲ್ಲಿನ ಮನುಷ್ಯನ ಅಸ್ತಿತ್ವದ ಕುರಿತು ನಮ್ಮ ತಿಳುವಳಿಕೆಗೆ ಏನಾಗುತ್ತದೆ?

**ಆದಿಕಾಂಡ ಅಧ್ಯಯನ 3: ಜಗತ್ತಿನ ಸೃಷ್ಟಿ**

**ಅ. ಪೀಠಿಕೆ**

ಹಳೇ ಒಡಂಬಡಿಕೆಯಲ್ಲಿ ಆಕಾಶ ಮತ್ತು ಭೂಮಿ ಎಂಬ ಮಾತು ದೇವರ ಇಡೀ ಸೃಷ್ಟಿಸಲ್ಪಟ್ಟ ಜಗತ್ತನ್ನು ಸೂಚಿಸುತ್ತದೆ. ಯೆಶಾಯನು "ಸರ್ವಕಾರ್ಯ" ಎಂಬ ಸಮನಾರ್ಥಕ ಹೇಳಿಕೆಯನ್ನು ದೇವರು ತನ್ನನ್ನು ಸೃಷ್ಟಿಕರ್ತನೆಂದು ವರ್ಣಿಸುವ ಹಿನ್ನಲೆಯಲ್ಲಿ ಉಪಯೋಗಿಸುತ್ತಾನೆ. *"ನಾನೇ ಸರ್ವಕಾರ್ಯ ಕರ್ತನಾದ ಯೆಹೋವನು"* (ಯೆಶಾಯ 44:24). ಹಾಗಾಗಿ ಆದಿಕಾಂಡದ ಒಂದನೇ ಅಧ್ಯಾಯದ ಮೊದಲ ವಚನವನ್ನು ಅಧ್ಯಾಯದ ಉಳಿದ ಭಾಗದಲ್ಲಿ ದಾಖಲಿಸಲ್ಪಟ್ಟ ಸೃಷ್ಟಿ ಕಥೆಯ ಒಂದು ಸಾರಾಂಶವನ್ನಾಗಿ ತಿಳಿದುಕೊಳ್ಳುವುದು ಸಮಂಜಸವಾಗಿದೆ. ಇಬ್ರಿಯ ಪಠ್ಯದಲ್ಲಿ "ಉಂಟು ಮಾಡು" ಎಂಬುವುದಕ್ಕಾಗಿ ಇರುವ ಪದವನ್ನು ದೇವರೊಂದಿಗೆ ಮಾತ್ರ ಉಪಯೋಗಿಸಲಾಗಿದೆ. ಕೇವಲ ದೇವರು ಮಾತ್ರ ನಿಜಾರ್ಥದಲ್ಲಿ ಉಂಟುಮಾಡಬಲ್ಲನು. ಈ ಪದವು ಏನು ಹೊಸದನ್ನು ಸೂಚಿಸುತ್ತದೆ ಏನೋ ಹೊಸ ಸಂಗತಿಯೂ ಅಸ್ತಿತ್ವಕ್ಕೆ ಬರುವುದಾಗಿರಬಹುದು ಅಥವಾ ಈ ಹಿಂದೆ ಅಸ್ತಿತ್ವದಲ್ಲಿರುವುದರಿಂದ ಏನೋ ಹೊಸದನ್ನು ಸೃಷ್ಟಿಸಿರುವುದು (ಕೀರ್ತನೆ 51:10 ರಲ್ಲಿ ದಾವೀದನು ದೇವರಿಗೆ ಮಾಡುವ ಪ್ರಾರ್ಥನೆಯಲ್ಲಿ ಇರುವಂತೆ: "ನನ್ನಲ್ಲಿ ಶುದ್ಧಹೃದಯವನ್ನು ನಿರ್ಮಿಸು"). ಎರಡು ಕಡೆ ಗಮನವು ದೇವರ ಸಾರ್ವಭೌಮ ಸೃಷ್ಟಿಯ ಕ್ರಿಯೆಯ ಮೇಲಿರುವುದಾಗಿದೆ. ಆದಿಕಾಂಡ 1:1-2:3 ಜಗತ್ತಿನ ಸೃಷ್ಟಿಯ ಒಂದು ವೈಜ್ಞಾನಿಕ ವಿವರವೆಂಬುದಾಗಿ ಓದುವುದು ಸಮಂಜಸವಾಗಿದೆ. ಪದ್ಯದ ಲಯಬದ್ಧವಾದ ಮತ್ತು ಪುನರಾವರ್ತನೆಯನ್ನೊಳಗೊಂಡ ಲಕ್ಷಣವು ಇದೊಂದು ಪದ್ಯರೂಪಿ ಪಠ್ಯವಾಗಿದೆ ಎಂಬುದನ್ನು ತೋರಿಸುತ್ತದೆ. ಆಧುನಿಕ ಭಾಷಾಂತರಕಾರರು ಪಠ್ಯವನ್ನು ಪದ್ಯರೂಪದಲ್ಲಿ ಜೋಡಿಸಲು ಬಯಸಿದ್ದರು. ಆಂಗ್ಲದ NIV ಮತ್ತು ಕನ್ನಡದ NIBV ಭಾಷಾಂತರಗಳು ಪಠ್ಯದ "ಅರೆ ಪಠ್ಯರೂಪಿ ಜೋಡಣೆಯನ್ನು ಆದುಕೊಂಡಿದ್ದಾರೆ".

ಒಂದನೇ ಅಧ್ಯಾಯದ ಗಮನಾರ್ಹವಾದ ಅಂಶವೇನೆಂದರೆ ಅದರ ರಚನೆ ಅಥವಾ ವಿನ್ಯಾಸದ ರೂಪವಾಗಿದೆ. ಎರಡನೇ ವಚನದಲ್ಲಿ ಭೂಮಿಯು ಬರಿದಾಗಿಯೂ ಕ್ರಮವಿಲ್ಲದೆಯೂ ಇತ್ತು ಎಂದು ಹೇಳುತ್ತದೆ. ಆರು ದಿನಗಳ ಸೃಷ್ಟಿಯ ಪ್ರಕ್ರಿಯೆಯಲ್ಲಿ ದೇವರು ಮೊದಲು ಭೂಮಿಗೆ ರೂಪ ಕೊಡುತ್ತಾನೆ. ಅನಂತರ ಆತನು ಅದನ್ನು ವಸ್ತುಗಳಿಂದ ತುಂಬಿಸುತ್ತಾನೆ. ಉದಾಹರಣಗೆ ಮೊದಲ ದಿನದಲ್ಲಿ ದೇವರು ಬೆಳಕನ್ನು ಸೃಷ್ಟಿಸುತ್ತಾನೆ, ಅನಂತರ ನಾಲ್ಕನೇ ದಿನದಲ್ಲಿ ಆತನು ಈ ರೂಪವನ್ನು ಸೂರ್ಯ, ಚಂದ್ರ ಮತ್ತು ನಕ್ಷತ್ರಗಳಿಂದ ತುಂಬಿಸುತ್ತಾನೆ.

ವಚನ 26 ರಲ್ಲಿ ಸೃಷ್ಟಿಯ ಕಥೆಯು ಒಂದು ಉನ್ನತವಾದ ಹಂತಕ್ಕೆ ಬರುತ್ತದೆ: ಆ ಮೇಲೆ ದೇವರು , *"ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ; ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ ಪಶುಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನ ಮಾಡಲಿ ಅಂದನು".* ಇಲ್ಲಿ ಮನುಷ್ಯನ ಸೃಷ್ಟಿಯ ಎರಡು ಅಂಶಗಳನ್ನು ನಾವು ಕಾಣುತ್ತೇವೆ: ಮೊದಲನೇಯದು, ಮನುಷ್ಯರು ದೇವರೊಂದಿಗೆ ಒಂದು ವಿಶೇಷವಾದ ಸಂಬಂಧವಿಟ್ಟುಕೊಳ್ಳುವುದಕ್ಕಾಗಿ ಸೃಷ್ಟಿಸಲ್ಪಟ್ಟಿದ್ದಾರೆ. "ಸ್ವರೂಪ" ಎಂಬ ಪದ ದೇವರು ಮತ್ತು ಮನುಷ್ಯರ ನಡುವಿನ ಈ ಸಂಬಂಧವನ್ನು ತಿಳಿಸುತ್ತದೆ. ದೇವಾಲಯದಲ್ಲಿ ಒಂದು ರೂಪವನ್ನು ನಾವು ಯೋಚಿಸಬಹುದು. ಇದು ಆರಾಧಕರಿಗೆ ಗೈರು ಹಾಜರಾಗಿರುವ ಒಬ್ಬ ದೇವರನ್ನು ನೆನಪಿಸುತ್ತದೆ. ಅದೇ ರೀತಿಯಲ್ಲಿ ಮನುಷ್ಯರು ಉಳಿದ ಸೃಷ್ಟಿಗೆ ದೇವರ ಸಾರ್ವಭೌಮ ಆಳ್ವಿಕೆಯ ಬಗ್ಗೆ ಒಂದು ಜ್ಞಾಪಕವಾಗಿದ್ದಾರೆಂಬ ಆದೇಶವನ್ನು ಹೊಂದಿದ್ದಾರೆ. ಆ ದೃಷ್ಠಿಕೋನದಲ್ಲಿ ಗಂಡು ಹೆಣ್ಣುಗಳಿಬ್ಬರೂ ಒಂದಾಗಿ, ಮನುಷ್ಯರು ಉಳಿದ ದೇವರ ಸೃಷ್ಟಿಯೊಂದಿಗೆ ಒಂದು ವಿಶೇಷವಾದ ಸಂಬಂಧವಿಟ್ಟುಕೊಳ್ಳುವುದಕ್ಕಾಗಿ ಸೃಷ್ಟಿಸಲ್ಪಟ್ಟಿದ್ದಾರೆ. ಮನುಷ್ಯರ ಕರ್ತವ್ಯವು ದೇವರು ಸೃಷ್ಟಿಸಿದ ಜಗತ್ತನ್ನು ಆಳುವುದಾಗಿದೆ. ಇದರರ್ಥ ದೇವರ ಸೃಷ್ಟಿಯೊಂದಿಗೆ ನಮ್ಮಿಷ್ಟ ಬಂದಂತೆ ನಾವು ಮಾಡಬಹುದೆಂದಲ್ಲ. ಇಲ್ಲಿ ನಾವಿದನ್ನು ಆತನ ಪ್ರತಿನಿಧಿಗಳೆಂಬುದಾಗಿ ತಿಳಿದು ಆತನ ಚಿತ್ತ ಮತ್ತು ಉದ್ದೇಶಕ್ಕನುಸಾರವಾಗಿ ಆಳಬೇಕು.

ಸೃಷ್ಟಿಕಥೆಯ ಪರಾಕಾಷ್ಠೆಯು ಆದಿ. 2:1-3 ರಲ್ಲಿ ದೇವರ ವಿಶ್ರಾಂತಿಯೊಂದಿಗೆ ಬರುತ್ತದೆ. ದೇವರು ಸಬ್ಬತ್ತಿನ ವಿಶ್ರಾಂತಿಯನ್ನು ಏಳನೇ ದಿನಕ್ಕಾಗಿ ಇಟ್ಟಿದ್ದಾನೆ. ನಮಗಿರುವ ಸಂದೇಶವೆಂದರೆ ನಾವು ಆತನ ಮಾದರಿಯನ್ನೇ ಹಿಂಬಾಲಿಸಬೇಕೆಂಬುದಾಗಿದೆ. ನಾವು ಆತನೊಂದಿಗೆ ತನ್ನ ವಿಶ್ರಾಂತಿಯಲ್ಲಿ ಸೇರಬೇಕೆಂದು ಆತನು ಆಹ್ವಾನಿಸುತ್ತಾನೆ.

**ಆ. ಪ್ರಶ್ನೆಗಳು**

ಮೇಲ್ಕಂಡ ಪೀಠಿಕೆ ಮತ್ತು ಆದಿ 1:1-2:3ನ್ನು ಓದಿರಿ. ಹಾಗೆಯೇ ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿರಿ. ನಿಮ್ಮದೇ ವಿವರಗಳನ್ನು ಬಳಸಿರಿ.

1. ದೇವರು ಹೇಗೆ ಸೃಷ್ಟಿಸಿದನು?
2. "ಉಂಟು ಮಾಡು" ಎಂಬ ಇಬ್ರಿಯ ಪದದ ಅರ್ಥವನ್ನು ವಿವರಿಸಿರಿ. ಕನ್ನಡದ NIBV ಭಾಷಾಂತರವು "ಸೃಷ್ಟಿಸು" ಎಂಬ ಪದವನ್ನು ಬಳಸುತ್ತೆ. ಇದು ಇಬ್ರಿಯ ಪದದ ಅರ್ಥವನ್ನೇ ಕೊಡುತ್ತದಾ?
3. ವಚನ 5 ರಲ್ಲಿ ಇಬ್ರಿಯ ಪಠ್ಯವು "ದಿನ" ಎಂಬ ಪದವನ್ನು ಎರಡು ಬಾರಿ ಉಪಯೋಗಿಸುತ್ತದೆ. ಮೊದಲ ಬಾರಿ ಇದು "ಹಗಲು, ಹಗಲಿನ ಬೆಳಕು" ಕತ್ತಲೆಗೆ ವಿರುದ್ಧವಾದದ್ದು, ಎರಡನೇ ಬಾರಿ "ಒಂದು ಇಡೀ ದಿನ" (ಮುಂಜಾನೆಯಿಂದ ಸಂಜೆಯವರೆಗೆ) ಎಂದರ್ಥವಾಗಿದೆ. ಕನ್ನಡದ NIBV ಭಾಷಾಂತರವು ಎರಡು ವಿಭಿನ್ನ ಪದಗಳನ್ನು ಉಪಯೋಗಿಸುತ್ತದೆ. ಅವು ಯಾವುವು? ಅದೇ ಇಬ್ರಿಯ ಪದವು 2:4 ರಲ್ಲಿ ದೇವರು ಭೂಮಿ ಆಕಾಶಗಳನ್ನು ಉಂಟುಮಾಡಿದಾಗಿನ ದೀರ್ಘಾವಧಿಯ ಸಮಯವನ್ನು ಸೂಚಿಸಿ ಉಪಯೋಗಿಸಲ್ಪಟ್ಟಿದೆ. ಕನ್ನಡದ NIBV ಇದನ್ನು ಹೇಗೆ ಭಾಷಾಂತರಿಸಿದೆ?
4. ಆರು ದಿನಗಳ ಸೃಷ್ಟಿಯು ದೇವರು ಮೊದಲು ಒಂದು ರೂಪ(ಕ್ರಮ)ವನ್ನು ಉಂಟುಮಾಡಿದನು (ಮೊದಲ ದಿನದ ಕ್ರಮವು ಬೆಳಕು) ಮತ್ತು ಅನಂತರ ಆತನು ಆ ಕ್ರಮ(ರೂಪ)ವನ್ನು ವಸ್ತುಗಳಿಂದ ತುಂಬಿಸಿದನು (ನಾಲ್ಕನೇ ದಿನದ ವಸ್ತುಗಳೆಂದರೆ ಆಕಾಶಕಾಯಗಳಾದ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು) ಎಂಬ ವಿಧಾನದೊಂದಿಗೆ ವಿನ್ಯಾಸಗೊಂಡಿದೆ ಎಂದು ನಾವು ನೋಡಿದ್ದೇವೆ. ಎರಡು ಭಾಗಗಳಿರುವ ಒಂದು ಪಟ್ಟಿ ಮಾಡಿರಿ. ಮೊದಲ ಭಾಗವನ್ನು "ರೂಪ" (ಕ್ರಮ) ಎಂದು ಎರಡನೇ ಭಾಗವನ್ನು "ವಸ್ತು"ಗಳೆಂದು ಕರೆಯಿರಿ. ಎಲ್ಲಾ ಆರು ದಿನಗಳಿಗಾಗಿನ ಪಠ್ಯದಲ್ಲಿ ತಿಳಿಸಿದ ಮಾಹಿತಿಗಳನ್ನುಪಯೋಗಿಸಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.
5. ಮನುಷ್ಯರು ದೇವರ ಸ್ವರೂಪದಲ್ಲಿ, ಆತನ ಹೋಲಿಕೆಯಲ್ಲಿ ಉಂಟು ಮಾಡಲ್ಪಟ್ಟರು ಎಂಬುದರ ಅರ್ಥವೇನು?
6. ಮನುಷ್ಯನು ತನ್ನ ಉಳಿದ ಸೃಷ್ಟಿಯೊಂದಿಗೆ ಹೇಗೆ ವ್ಯವಹರಿಸಬೇಕೆಂದು ದೇವರು ಬಯಸಿದನು?
7. ಆರು ದಿನಗಳ ಸೃಷ್ಟಿಯು ಅಂತ್ಯಕ್ಕೆ ಬಂದಿತು, "ಸಾಯಂಕಾಲವೂ ಪ್ರಾತಃಕಾಲವೂ ಆಗಿ…." . ಆದರೆ ಏಳನೇ ದಿನದ ಕುರಿತೇನು? ಆ ದಿನವು ಯಾವಾಗ ಮುಕ್ತಾಯವಾಯಿತು?

**ಇ. ಮುಕ್ತಾಯಗಳು**

1. ದೇವರು ಸೃಷ್ಟಿ ಮಾಡುವುದಕ್ಕಿಂತ ಮುಂಚೆ ಅಲ್ಲಿ ಏನೂ ಇರಲಿಲ್ಲ. ಭೂಮಿಯು ಕ್ರಮವಿಲ್ಲದೆಯೂ ಬರಿದಾಗಿಯೂ ಇತ್ತು. ಕೇವಲ ದೇವರ ಉಸಿರು/ಆತ್ಮ ಮಾತ್ರ ಇತ್ತು.
2. ದೇವರು ಸಮಸ್ತವನ್ನು ಮಾತಿನಿಂದ ಆಜ್ಞಾಪಿಸುವುದರಿಂದ ಸೃಷ್ಟಿಸಿದನು. ಹೀಗೆ ಸೃಷ್ಟಿಯು ದೇವರ ವೈಯಕ್ತಿಕ ಚಿತ್ತದ ಫಲಿತಾಂಶವಾಗಿದೆ.

3. ಪರಿಣಾಮವಾಗಿ ದೇವರ ಸೃಷ್ಟಿಯು ಸಂಪೂರ್ಣವಾಗಿ ಹೆಸರಿಡುವುದರ ಮೂಲಕ ಆತನು ತನ್ನ ಉದ್ದೇಶಗಳಿಗನುಸಾರವಾಗಿ ಅದನ್ನು ಪ್ರತ್ಯೇಕ ಪಾತ್ರಗಳಾಗಿ ನೇಮಿಸಿದನು.

4. ಆದಿಕಾಂಡದ ಮೊದಲೆರಡು ಅಧ್ಯಾಯಗಳಲ್ಲಿ "ದಿನ" ಎಂಬ ಇಬ್ರಿಯ ಪದವು ಮೂರು ವಿಭಿನ್ನವಾದ ಅರ್ಥಗಳೊಂದಿಗೆ ಬಳಸಲ್ಪಟ್ಟಿದೆ; ಹಗಲು, ಮೊದಲ ದಿನ (1:5) ಮತ್ತು ದಿನದಲ್ಲಿ (2:4).

5. ಆ ದಿನಗಳ ಸೃಷ್ಟಿಯ ರಚನೆ (ವಿನ್ಯಾಸವು ) ದೇವರು ಮೊದಲು ಒಂದು ರೂಪವನ್ನು (ದಿನ 1, 2 ಮತ್ತು 3) ಉಂಟುಮಾಡಿ ಅನಂತರ ಆ ರೂಪವನ್ನು "ವಸ್ತು"ಗಳಿಂದ ತುಂಬಿಸಿದನೆಂಬ (ದಿನ 4, 5, ಮತ್ತು 6) ಮಾದರಿಯಲ್ಲಿದೆ.

6. ಮನುಷ್ಯನ ಸೃಷ್ಟಿಯು ಸೃಷ್ಟಿಯ ಕಥೆಯಲ್ಲೇ ಅತ್ಯುನ್ನತವಾದ ಹಂತವಾಗಿದೆ. ದೇವರು ಮನುಷ್ಯನನ್ನು ಮನಸ್ಸಿನಲ್ಲಿ ಎರಡು ಉದ್ದೇಶಗಳನ್ನಿಟ್ಟುಕೊಂಡು ಉಂಟುಮಾಡಿದನು.

   ಅ. ಮೊದಲನೇಯದು, ತಾನು ಸೃಷ್ಟಿಸಿದ ಜಗತ್ತಿಗೆ ತನ್ನನ್ನು ಪ್ರತಿಬಿಂಬಿಸಲು

   ಆ. ಎರಡನೇಯದು, ತನ್ನ ಪರವಾಗಿ ತನ್ನ ಸೃಷ್ಟಿಯನ್ನು ನೋಡಿಕೊಳ್ಳಲು.

7. ಸೃಷ್ಟಿಯ ಕಥೆಯು "ದೇವರ ಸಬ್ಬತ್ತಿನ ವಿಶ್ರಾಂತಿ"ಯೊಂದಿಗೆ ಮುಕ್ತಾಯವಾಗುತ್ತದೆ. ಮನುಷ್ಯರು ತನ್ನೊಂದಿಗೆ ಶಾಶ್ವತವಾದ ವಿಶ್ರಾಂತಿಯೊಳಗೆ ಸೇರಬೇಕೆಂದು ಆಹ್ವಾನಿಸಿಟ್ಟಿದ್ದಾರೆಂಬುದೇ ಇದರ ಪ್ರಾಮುಖ್ಯತೆಯಾಗಿದೆ.

**ಈ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ದೇವರು ತನ್ನ ಶಕ್ತಿಶಾಲಿ ಕ್ರಿಯಾತ್ಮಕ ಮಾತಿನಿಂದ ಭೂಮಿ ಆಕಾಶಗಳನ್ನು ಉಂಟುಮಾಡಿದನು, ಖಂಡಿತವಾಗಿ ಇದು ಆತನ ಸಾರ್ವಭೌಮ ಚಿತ್ರದ ಒಂದು ವ್ಯಕ್ತಪಡಿಸುವಿಕೆಯಾಗಿದೆ. ಹಾಗಾದರೆ ಆತನ ಕ್ರಿಯಾತ್ಮಕ (ಶೀಲ) ಕಾರ್ಯದ ಫಲಿತಾಂಶಕ್ಕಾಗಿ ಅದು ಹೊಂದಿರುವ ಪರಿಣಾಮಗಳೇನು? ಪಠ್ಯದಲ್ಲಿ ನಾವೇನು ಕಾಣಬಹುದು?

2. ಇಂದಿನ ದಕ್ಷಿಣ ಭಾರತದ ವಿಶ್ವಾಸಿಗಳಿಗಾಗಿನ ಪರಿಣಾಮಗಳೇನಿರಬಹುದು!

   ಅ. ದೇವರು ಮನುಷ್ಯನನ್ನು ತನ್ನ "ಸ್ವರೂಪ" ಮತ್ತು "ಹೋಲಿಕೆಯಲ್ಲಿ" ಉಂಟುಮಾಡಿದನು?

   ಆ. ದೇವರು ಮನುಷ್ಯನಿಗೆ ಭೂಮಿಯನ್ನೆಲ್ಲ "ದೊರೆತನ ಮಾಡಲು" ಹೇಳಿದನು?

   ಇ. ದೇವರು ಮನುಷ್ಯನಿಗೆ ವಿಶ್ರಾಂತಿಯಲ್ಲಿ ಸೇರಲು ಆಹ್ವಾನಿಸುವುದು?

3. ಈ ಅಧ್ಯಾಯನವು ನಿಮಗೆ ಹೇಗೆ ಆದಿಕಾಂಡ 1:1-2:3 ರಲ್ಲಿನ ಸೃಷ್ಟಿಯ ಕಥೆಯನ್ನು ಒಂದು ಸರಿಯಾದ ತಿಳುವಳಿಕೆಯನ್ನು ಕೊಟ್ಟಿತೆಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

**ಉ. ಸತ್ಯವೇದ ಅಧ್ಯಯನವೊಂದನ್ನು ಸಿದ್ಧಪಡಿಸಿರಿ.**

ನಿಮ್ಮ ಸಭೆಗಾಗಿ "ಮನುಷ್ಯ ಮತ್ತು ದೇವರ ಸೃಷ್ಟಿ" ಎಂಬ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಲು ಈ ಅಧ್ಯಯದಲ್ಲಿ ನೀವು ಕಲಿತವುಗಳನ್ನೆಲ್ಲ (ಮತ್ತು ಹಿಂದಿನ ಆದಿಕಾಂಡ ಅಧ್ಯಯನ 1:1 ಆರಂಭ) ಉಪಯೋಗಿಸಿರಿ.

**ಆದಿಕಾಂಡ ಅಧ್ಯಯನ 4: ಮನುಷ್ಯನ ಪತನ (ಬೀಳುವಿಕೆ)**

**ಅ. ಪೀಠಿಕೆ**

ಈ ವಾಕ್ಯಭಾಗದಲ್ಲಿ ನಮಗೆ ಮನುಷ್ಯನ ಪತನದ ವಿವರವು ಕೊಡಲ್ಪಟ್ಟಿದೆ. ದೇವರ ಆಜ್ಞೆಗೆ ಅವಿಧೇಯರಾಗಲು ಸರ್ಪವು ಸ್ತ್ರೀಯನ್ನು ಶೋಧಿಸಿತು. ಆಕೆ ಆ ವನದ ಮಧ್ಯದಲ್ಲಿರುವ ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ವೃಕ್ಷದ ಹಣ್ಣನ್ನು ತಿಂದಳು (ಆದಿ. 2:17) ಮತ್ತು ಅದರಲ್ಲಿ ಕೆಲವನ್ನು ತನ್ನ ಗಂಡನಿಗೆ ತಿನ್ನಲು ಕೊಟ್ಟಳು. ಆಗ ಅವರು ತಾವು ಇನ್ನು ಬೆತ್ತಲೆಯಾಗಿದ್ದೇವೆಂಬುದರ ಅರಿವಾಗಿ ಅಂಜೂರ ಮರದ ಎಲೆಗಳಿಂದ ಮುಚ್ಚಿಕೊಂಡು, ದೇವರಿಗೆ ಹೆದರಿ ಮರಗಳ ಹಿಂದೆ ಅಡಗಿಸಿಕೊಂಡರು. ಅಲ್ಲಿ ಏನಾಯಿತೆಂಬುದನ್ನು ಆದಾಮನು ದೇವರಿಗೆ ಹೇಳಿದನು. ದೇವರು ಸರ್ಪವನ್ನೂ, ಭೂಮಿಯನ್ನೂ ಶಪಿಸಿದನು. ಅನಂತರ ಆ ಮನುಷ್ಯ ಮತ್ತು ಸ್ತ್ರೀಗೆ ಚರ್ಮದ ಅಂಗಿಗಳನ್ನು ಮಾಡಿ ತೊಡಿಸಿದನು ಮತ್ತು ಅವರನ್ನು ಏದೆನ್ ತೋಟದಿಂದ ಹೊರಡಿಸಿಬಿಟ್ಟನು.

**ಆ. ಓದಿರಿ**

ಆದಿಕಾಂಡ 3:1-24

**ಇ. ಟಿಪ್ಪಣಿಗಳು**

*ಸರ್ಪವು* (ವ.1): ಅದು ಹೇಗೆ ವರ್ಣಿಸಲ್ಪಟ್ಟಿದೆಯೆಂಬುದನ್ನು ಗಮನಿಸಿ; ಇದು ದೇವರು ಉಂಟುಮಾಡಿದ ಒಂದು ಭೂಜಂತುವಾಗಿದೆ.

*ಯುಕ್ತಿಯುಳ್ಳದ್ದಾಗಿತ್ತು* (ವ.1): ಇಬ್ರಿಯ ಪದವನ್ನು ಸಕರಾತ್ಮ ಮತ್ತು ನಕರಾತ್ಮಕವಾಗಿ ಸಹ ಬಳಸಬಹುದಾಗಿದೆ.

*ಕೆರೂಬಿಯರು* (ವ.24): ಇದು ಪರಲೋಕದ ಒಂದು ಜೀವಿಯಾದ ಕೆರೂಬಿಗೆ ಇಬ್ರಿಯ ಪದದ ಬಹುವಚನ ರೂಪವಾಗಿದೆ.

*ಕತ್ತಿ* (ವ.24): "ಕತ್ತಿಯು" ನ್ಯಾಯತೀರ್ಪನ್ನು ಸೂಚಿಸಬಹುದು.

**ಈ. ಪ್ರಶ್ನೆಗಳು**

1. ವಚನ 6 ರಲ್ಲಿ ನಮಗೆ ಕಂಡುಬರುವ ಸಾಮಾನ್ಯವಾದ ಮೂರು ಶೋಧನೆಗಳೇನು?
2. ಸರ್ಪದ ಸುಳ್ಳನ್ನು ವಿವರಿಸಿರಿ.
3. ತಾವು ಮಾಡಿದ್ದನ್ನು ಆ ಮನುಷ್ಯ ಮತ್ತು ಸ್ತ್ರೀ ದೇವರಿಗೆ ಹೇಗೆ ವಿವರಿಸಿದರು?
4. ಆದಿ. 3:15 ಕೆಲವೊಮ್ಮೆ "ಸತ್ಯವೇದದಲ್ಲಿನ ಮೊದಲ ಸುವಾರ್ತಾ ಸಂದೇಶ" ಎಂಬುದಾಗಿ ಕರೆಯಲ್ಪಟ್ಟಿದೆ ಯಾಕೆ?
5. ಈ ಕಥೆಯಲ್ಲಿನ ಮಾಹಿತಿಯಿಂದ ಪಾಪ(ಪತನ)ದಿಂದಾದ ಪರಿಣಾಮಗಳ ಪಟ್ಟಿಮಾಡಿರಿ.
6. ಏದೆನಿನಲ್ಲಿನ ತೋಟಕ್ಕೆ ಏನಾಯಿತು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಪ್ರಶ್ನೆ 1 ರ ಉತ್ತರವನ್ನು ನೋಡಿರಿ. ನಿಮ್ಮ ಸ್ವಂತ ಸಾಂಸ್ಕೃತಿಕ ಸನ್ನಿವೇಶಕ್ಕೆ ಉತ್ತರವನ್ನು ಅನ್ವಯಿಸಿರಿ ಮತ್ತು ಈ ಮೂರು ವಿಧಗಳಲ್ಲಿ ದಕ್ಷಿಣ ಭಾರತದಲ್ಲಿನ ಯೌವನಸ್ಥರನ್ನು ಶೋಧಿಸುವ ಸಂಗತಿಗಳಿಗೆ ಉದಾಹರಣೆ ಕೊಡಿರಿ.

2. ನಿಮ್ಮ ಎರಡನೇ ಪ್ರಶ್ನೆಯ ಉತ್ತರವನ್ನ ನೋಡಿರಿ. ಇಂದು ಸಹ ದಕ್ಷಿಣ ಭಾರತದ ಯೌವನಸ್ಥ ವಿಶ್ವಾಸಿಗಳನ್ನು ಮರುಳುಗೊಳಿಸಲು ಶೋಧಕನು ಹೇಗೆ ಅದೇ ರೀತಿಯ ಮೂರು ವಿಧಾನಗಳನ್ನು ಉಪಯೋಗಿಸುತ್ತಾನೆಂಬುದಕ್ಕೆ ಉದಾಹರಣೆ ಕೊಡಿರಿ.

3. ನಿಮ್ಮ 3ನೇ ಪ್ರಶ್ನೆಯ ಉತ್ತರವನ್ನು ನೋಡಿರಿ. ನೀವು ಮಾಡಿದ ಪಾಪವನ್ನು ಎದುರಿಸುವಾಗ ನೀವು ಹೇಗೆ ವರ್ತಿಸುವಿರಿ?

4. ಈ ವಾಕ್ಯಭಾಗದ ಕುರಿತ ನಿಮ್ಮ ಯೋಚನೆ ಮತ್ತು ಭಾವನೆಗಳನ್ನು ಹಂಚಿಕೊಳ್ಳಿರಿ. ನಿಮಗೆ ಸಿಕ್ಕ ಹೊಸ ಒಳನೋಟಗಳೇನು?

**ಆದಿಕಾಂಡ ಅಧ್ಯಯನ 5: ಏದೆನಿನಲ್ಲಿನ ತೋಟ ಮತ್ತು ಪತನ**

**ಅ. ಪೀಠಿಕೆ**

ಹಿಂದಿನ ವಾಕ್ಯಭಾಗದಲ್ಲಿನ ಸೃಷ್ಟಿಯ ಕಥೆ (ಆದಿ. 1) ಮತ್ತು ಆದಿಕಾಂಡದ 2 ನೇ ಅಧ್ಯಾಯದಲ್ಲಿನ ಏದೆನ್ ತೋಟದ ಕುರಿತಾದ ಕಥೆಯ ನಡುವಿನ ಸಂಬಂಧವನ್ನು ಅರ್ಥೈಸಿಕೊಳ್ಳುವ ಎರಡು ಬಗೆಗಳಿವೆ. ಅತ್ಯಂತ ಸಾಮಾನ್ಯವಾದ ಒಂದು ಬಗೆಯು ಆದಿಕಾಂಡ 2 ನೇ ಅಧ್ಯಾಯವನ್ನು ಎರಡನೇ ಸೃಷ್ಟಿಯ ಕಥೆಯೆಂಬುದಾಗಿ ಕಾಣುವುದಾಗಿದೆ. ಆದರೆ ಕಾಲರೇಖೆಗನುಗುಣವಾಗಿ ಈ ಎರಡು ಕಥೆಗಳನ್ನು ಒಟ್ಟಾಗಿ ಹೊಂದಿಸುವುದು ಕಷ್ಟಕರವಾಗಿದೆ. ಇದರಿಂದ ಗೊಂದಲ ಮತ್ತು ಸಮಸ್ಯೆಯಲ್ಲಿ ಸಿಲುಕಬೇಕಾಗುತ್ತದೆ. ಏದೆನಿನಲ್ಲಿ ತೋಟವನ್ನು ಇಡುವುದು ಮತ್ತು ಆ ತೋಟದಲ್ಲಿ ಪುರುಷ ಮತ್ತು ಸ್ತ್ರೀಯನ್ನು ತೋಟದಲ್ಲಿ ಇಡುವುದರ ಕುರಿತ ವಿವರವನ್ನು ಅತ್ಯುತ್ತಮವಾಗಿ ಅರ್ಥೈಸಿಕೊಳ್ಳುವ ವಿಧವೆಂದರೆ ದೇವರು ಮನುಷ್ಯರಿಗೆ ಅದರಲ್ಲಿ ವಾಸಿಸಬೇಕೆಂದು ಹೇಳಿದ ಒಂದು ಬಗೆಯ ಸಂಬಂಧದ ವರ್ಣನೆಯಾಗಿ ನೋಡುವುದಾಗಿದೆ.

ಎರಡು ಕಥೆಗಳ ದೃಷ್ಟಿಯು ವಿಭಿನ್ನವಾಗಿದೆ. ಆದಿಕಾಡ 1 ರಲ್ಲಿನ ಸೃಷ್ಟಿಯ ಕಥೆಯು ನಮಗೆ ಭೂಮಂಡಲದ ಸೃಷ್ಟಿಕರ್ತನಾಗಿ ದೇವರ ವಿಶ್ವಾತೀತ ದೃಷ್ಟಿಕೋನವನ್ನು ನಮಗೆ ತಿಳಿಸುತ್ತದೆ. ಇಲ್ಲಿ ದೇವರಿಗೆ "ಎಲೋಹಿಮ್" ಎಂಬ ಪದ ಬಳಸಲಾಗಿದೆ, ಇದರರ್ಥ ದೇವರು ಶಕ್ತನು ಮತ್ತು ಪ್ರಭಾವಯುಕ್ತನು ಎಂದಾಗಿದೆ. ಆದಿಕಾಂಡ 2 ರಲ್ಲಿರುವ ಕಥೆಯು ತೋಟದಲ್ಲಿ ತನ್ನೊಂದಿಗೆ ಒಂದು ವೈಯಕ್ತಿಕವಾದ ಸಂಬಂಧವನ್ನಿಟ್ಟುಕೊಂಡ ದೇವರೊಂದಿಗಿನ ಮನುಷ್ಯನ ಅನೋನ್ಯತೆಯ ಆತ್ಮೀಯತೆಯನ್ನು ಹತ್ತಿರವಾಗಿಸುತ್ತದೆ.

ಇಲ್ಲಿ ಈ ಕಥನವು ದೇವರಿಗೆ "ದೇವರಾದ ಯೆಹೋವನು" (ಎಲೋಹಿಮ್,ಯಾಹ್ವೆ) ಎಂಬ ಹೆಸರನ್ನು ಬಳಸುತ್ತದೆ, ಇಲ್ಲಿ ಎಲೋಹಿಮ್ (ದೇವರು) ಯೆಹೋವನೊಂದಿಗೆ ಸಂಯೋಜನೆಗೊಂಡಿದೆ ಯೆಹೋವ ಎಂಬುದು ದೇವರ ವೈಯಕ್ತಿಕ ಮತ್ತು ಒಡಂಬಡಿಕೆಯ ಹೆಸರಾಗಿದೆ. ಆದಿಕಾಂಡ 2 ನೇ ಅಧ್ಯಾಯವು ಆದಿಕಾಂಡ 1 ನೇ ಅಧ್ಯಾಯದ ಇನ್ನೊಂದು ಭಾಗವಾಗಿದೆ ಎಂದು ಹೇಳಲಾಗುತ್ತದೆ; ಭೂಮಂಡಲದ ಭವ್ಯವಾದ ಸೃಷ್ಟಿಯಿಂದ ನಾವೀಗ ಉದ್ಯಾನವನ್ನು ಅನ್ವೇಷಿಸಲು ಆಹ್ವಾನಿಸಲ್ಪಟ್ಟಿದ್ದೇವೆ.

ಆದಿಕಾಂಡ 1 ರಲ್ಲಿ ಭೂಮಿಯ ಮೇಲೆ ದೊರೆತನ ಮಾಡುವ ಅಧಿಕಾರ ಪುರುಷ ಮತ್ತು ಸ್ತ್ರೀಯರಿಬ್ಬರಿಗೂ ಕೊಡಲ್ಪಟ್ಟಿದೆ. ಆದಿಕಾಂಡ 2 ರಲ್ಲಿ ಆದಾಮನೊಬ್ಬನೆ ಮೊದಲು ತೋಟದಲ್ಲಿ ಕಾಣಿಸಿಕೊಳ್ಳುತ್ತಾನೆ. ಅಲ್ಲಿ ಆತನು ದೇವರ ಪ್ರಸನ್ನತೆಯ ಸಲಿಗೆ ಮತ್ತು ಆತ್ಮೀಯತೆಯನ್ನು ಆನಂದಿಸುತ್ತಾನೆ. ಆದರೆ ದೇವರು ಮನುಷ್ಯನು ಒಂಟಿಗನಾಗಿರುವದು ಸರಿಯಲ್ಲವೆಂಬುದನ್ನು ದೇವರು ಅರಿತುಕೊಳ್ಳುತ್ತಾನೆ. ಆತನಿಗೊಬ್ಬ ಸರಿಬೀಳುವ ಸಹಕಾರಿಯ ಅಗತ್ಯವಿದೆ, ಸರಿಬೀಳುವ ಸಹಕಾರಿಯನ್ನು ಪ್ರಾಣಿಗಳಲ್ಲಿ ಕಾಣಲಾಗದು ಹಾಗಾಗಿ ದೇವರು ಆತನಿಗೆ ಸಂಬಂಧಪಟ್ಟಿರುವವರನ್ನು ಅಂದರೆ ಆತನ ಎಲುಬುಗಳಿಂದ ಬಂದ ಎಲಬೂ ಮಾಂಸದಿಂದ ಬಂದ ಮಾಂಸವೂ ಆಗಿರುವವರನ್ನು ಸೃಷ್ಟಿಸುತ್ತಾನೆ. ಎರಡೂ ಲಿಂಗಗಳೂ ಸ್ಪಷ್ಟವಾಗಿ ಪೂರಕವಾಗಿದವೆ: ಅವರಿಬ್ಬರೂ ಒಂದೇ ದೇಹವಾಗಿದ್ದಾರೆ. ಗಂಡು ಹೆಣ್ಣನ್ನು ಸೃಷ್ಟಿಸುವಲ್ಲಿನ ದೇವರ ಉದ್ದೇಶದ ನೆರವೇರುವಿಕೆಯು ಆದಾಮ ಮತ್ತು ಹವ್ವರ ನಡುವಿನ ಮದುವೆಯ ಸಂಬಂಧದಲ್ಲಿ ತೋರಿಬರುತ್ತದೆ.

ಏದೆನಿನಲ್ಲಿ ಹುಟ್ಟಿ ಹರಿದು ವನಕ್ಕೆ ಜೀವವನ್ನು ಕೊಡುವ ನದಿಯು ಇಡೀ ಜಗತ್ತಿಗೆ ಒಂದು ಆಶೀರ್ವಾದದ ಕೇಂದ್ರವಾಗಿದೆ ಎಂದು ವರ್ಣಿಸಲ್ಪಟ್ಟಿದೆ. ಇದೇ ಜೀವಜಲದ ನದಿಯು ಪ್ರಕಟಣೆ 22:1-5 ರಲ್ಲಿ ದೇವರ ಸಿಂಹಾಸನದಿಂದ ಹರಿಯುತ್ತದೆ. ಇದರರ್ಥ ಉದ್ಯಾನದಲ್ಲಿ ಆದಾಮ ಮತ್ತು ಹವ್ವರು ಅನುಭವಿಸಿದ ಜೀವವನ್ನು ನೂತನ ಭೂಮ್ಯಾಕಾಶಗಳಲ್ಲಿನ ನಮಗಿರುವ ದೇವರ ಉದ್ದೇಶವೆಂಬುದಾಗಿ ಅರ್ಥೈಸಿಕೊಳ್ಳಬಹುದಾಗಿದೆ (ನೋಡಿ 2.ಪೇತ್ರ 3:13).

ದೇವರು ಮನುಷ್ಯನಿಗೆ ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣನ್ನು ತಿನ್ನಬಹುದು ಎಂದು ಹೇಳಿದನು. ಅನಂತರ ಆತನು ಒಂದು ಪ್ರಾಮುಖ್ಯವಾದ ನಿರ್ಬಂಧವನ್ನು ಸೇರಿಸುತ್ತಾನೆ; ಆದರೆ "ನೀವು ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು

ಮಾತ್ರ ತಿನ್ನಬಾರದು" ಮನುಷ್ಯರು ತನ್ನ ಆಜ್ಞೆಯಡಿಯಲ್ಲಿ ಬದುಕಬೇಕೆಂದು ದೇವರು ಬಯಸುತ್ತಾನೆ. ಅದು ಮನಷ್ಯನು ದೇವರನ್ನು ಸನ್ಮಾನಿಸುವ ಬಗೆಯಾಗಿದೆ.

ಆದಿಕಾಂಡ 3 ರಲ್ಲಿ ನಾವು ಮನುಷ್ಯನ ಒಳ್ಳೆದು ಕೆಟ್ಟದ್ದರ ಅರಿವನ್ನು ತಿಳಿಯುವ ಆಶೆಯು ಹೇಗೆ ಆತನು ದೇವರಿಗೆ ಸರಿಸಮಾನನಾಗಲು ಸೆಳೆಯಲ್ಪಡುವುದನ್ನು ಕಾಣಬಹುದು. ಆದರೆ ಫಲಿತಾಂಶವೆಂದರೆ ದೇವರು ಮತ್ತು ಮನುಷ್ಯನ ನಡುವಿನ ಸಾಮರಸ್ಯದ ಸಂಬಂಧವು ಮರೆಯಾಗುತ್ತದೆ. ಅದರ ಪರಿಣಾಮವು ನ್ಯಾಯತೀರ್ಪು ಮತ್ತು ಮರಣವಾಗಿದೆ.

ಆದಿಕಾಂಡ 3 ರಲ್ಲಿ ನಾವು ಮಾನವನ ಮುಗ್ಧತೆಯಿಂದ ಆತನ ಅಪರಾಧ ಮನೋಭಾವದೆಡೆಗೆ ಬದಲಾವಣೆಯನ್ನು ಕಾಣುತ್ತೇವೆ. ಮನುಷ್ಯ ಮತ್ತು ಸ್ತ್ರೀಯರಿಬ್ಬರೂ ಹೇಗೆ ದಂಗೆಯೆದ್ದು ಪಾಪಿಗಳಾದರೆಂಬುದನ್ನು ನಮಗೆ ತಿಳಿಸಲಾಗಿದೆ. ತೋಟದಲ್ಲಿ ಆದಾಮ ಮತ್ತು ಹವ್ವರಿಬ್ಬರೂ ಮಾಡಿದ್ದು ಇಡೀ ಮಾನವ ಕುಲದ ಮೇಲೆಯೇ ಪರಿಣಾಮ ಬೀರಿದೆ. ದೇವರು ಉಂಟುಮಾಡಿದ ಪ್ರಾಣಿಗಳೊಳಗೆ ಸರ್ಪವು ರೂಪದಲ್ಲಿ ಸೈತಾನನು ಪ್ರತಿನಿಧಿಸಿದ್ದಾನೆ. ಪಾಪವು ಸೃಷ್ಟಿಯೊಳಗೆ ಕಾರ್ಯ ಮಾಡುತ್ತದೆ ಎಂಬುದನ್ನು ತೋರಿಸುತ್ತದೆ. ಇದು ಸೃಷ್ಟಿಯ ಚಾರಿತ್ರಿಕ ಪ್ರಕ್ರಿಯೆಯ ಭಾಗವಾಗಿದೆ. ಖಂಡಿತವಾಗಿ ಪಾಪವು ದೇವರ ನಿಯಂತ್ರಣದಲ್ಲಿರಬೇಕು.

ಪಾಪವು ದೇವರು ಭರವಸೆಗೆ ಯೋಗ್ಯನೋ ಅಥವಾ ಇಲ್ಲವೋ ಎಂದು ಮನುಷ್ಯನು ಸಂದೇಹ ಪಡುವುದರಿಂದ ಪ್ರಾರಂಭವಾಗುತ್ತದೆ. ದೇವರು ಅಪ್ಪಣೆ ಕೊಟ್ಟಿರುವುದು ನಿಜವೋ? ಈ ಸಂದೇಹವು ಮನುಷ್ಯನು ದೇವರಿಂದ ಸ್ವತಂತ್ರನಾಗುವ ಬಯಕೆಯನ್ನು ತೀವ್ರಗೊಳಿಸುತ್ತದೆ; ನಿಮ್ಮ ಕಣ್ಣುಗಳು ತೆರೆಯುವವು, ನೀವು ದೇವರಂತೆ ಆಗುವಿರಿ. ಅಂತಿಮವಾಗಿ ಸ್ವಾತಂತ್ರ್ಯಕ್ಕಾಗಿನ ಈ ಆಶೆಯು ದೇವರಿಗೆ ಅವಿಧೇಯರಾಗುವಲ್ಲಿ ಪರಿಣಮಿಸುತ್ತದೆ. ಆ ಸ್ತ್ರೀಯು ಹಣ್ಣನ್ನು ತೆಗೆದುಕೊಂಡು ತಿಂದಳು, ಸಂಗಡ ಇದ್ದ ಗಂಡನಿಗೂ ಕೊಡಲು ಅವನೂ ತಿಂದನು.

ಪಾಪದಿಂದ ಮನುಷ್ಯನ ಪತನವಾಗಿ ಅದು ಮರಣವಾಗಿ ಪರಿಣಮಿಸಿತು. ತೋಟದಲ್ಲಿ ನಾವು ಎರಡು ವಿಶೇಷವಾದ ಮರಗಳನ್ನು ಕಾಣುತ್ತೇವೆ (ಆದಿ.2:9). ಮನುಷ್ಯನಿಗೆ ಜೀವವೃಕ್ಷದ ಹಣ್ಣನ್ನು ತಿನ್ನಲು ಅನುಮತಿಸಲಾಗಿತ್ತೇ ವಿನಃ ಒಳ್ಳೇದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನಲ್ಲ. ಒಂದು ವೇಳೆ ಆತನು ಎರಡನೇ ಮರದ ಹಣ್ಣನ್ನು ತಿಂದು ದೇವರಿಗೆ ಅವಿಧೇಯನಾದರೆ ಖಂಡಿತವಾಗಿ ಆತನು ಸಾಯುವನು. ಈ ಮರದ ಹಣ್ಣನ್ನು ತಿಂದರೆ ಅದು ಒಳ್ಳೇದು ಮತ್ತು ಕೆಟ್ಟದ್ದರ ಅರುಹನ್ನು ಉಂಟು ಮಾಡಿ ಆತನನ್ನು ದೇವರಂತೆ ಮಾಡುತ್ತಿತ್ತು. ಆದಿ. 3:22 ರಲ್ಲಿ ಪಾಪವು ಇದನ್ನು ಒಳಗೊಂಡಿದೆ ಎಂಬುದನ್ನು ದೇವರು ಸ್ಪಷ್ಟಪಡಿಸುತ್ತಾನೆ. *"ಈ ಮನುಷ್ಯನು ಒಳ್ಳೇದರ ಕೆಟ್ಟದರ ಭೇಧವನ್ನರಿತು ನಮ್ಮಲ್ಲಿ ಒಬ್ಬನಂತಾದನಲ್ಲಾ".* ಹೀಗೆ ಒಳ್ಳೇದರ ಕೆಟ್ಟದ್ದರ ಅರುಹನ್ನುಂಟುಮಾಡುವ ಮರದ ಫಲವನ್ನು ತಿನ್ನುವುದು ದೇವರೊಂದಿಗೆ ಸಮಾನತೆಯನ್ನು ಹೊಂದುವುದಾಗಿದೆ. ಒಳ್ಳೇದು ಮತ್ತು ಕೆಟ್ಟದ್ದನ್ನು ತಿಳುಕೊಳ್ಳುವುದು ಕೇವಲ ದೈವಿಕ ಭಾಗ್ಯವೆಂಬುದಾಗಿ ತೋರುತ್ತದೆ. ಒಳ್ಳೇದು ಮತ್ತು ಕೆಟ್ಟದ್ದು ಯಾವುದೆಂಬುದನ್ನು ಉಂಟು ಮಾಡಿರುವ ದೇವರು ಮಾತ್ರ ಒಳ್ಳೇದು ಮತ್ತು ಕೆಟ್ಟದ್ದನ್ನು ಬಲ್ಲವನಾಗಿದ್ದಾನೆ. ಇನ್ನೊಂದು ಮಾತಿನಲ್ಲಿ ಹೇಳಬೇಕೆಂದರೆ ಪತನವು ಮನುಷ್ಯನು ದೇವರೊಂದಿಗೆ ಸಮಾನನಾಗಲು ಮತ್ತು ಒಳ್ಳೇದು ಮತ್ತು ಕೆಟ್ಟದ್ದು ಯಾವುದೆಂಬುದನ್ನು ನಿರ್ಧರಿಸಲು ತನ್ನದೇ ಆದ ನಿಯಮಗಳನ್ನು ಹಕ್ಕನ್ನು ಪಡಕೊಂಡ ಒಂದು ಕಾರ್ಯಭಾಗವಾಗಿದೆ. ಕೇವಲ ದೇವರು ಮಾತ್ರ ಹಾಗೆ ಮಾಡಬಹುದಾಗಿದೆ.

ಪಾಪವು ಗಂಭೀರವಾದ ಪರಿಣಾಮವನ್ನೊಳಗೊಂಡಿದೆ. ಆದಿಕಾಂಡ 2 ರಲ್ಲಿ ತಿಳಿಸಿದ್ದು ದೇವರು ಕೊಟ್ಟ ಸಂಬಂಧಗಳು ಈಗ ವ್ಯತಿರಿಕ್ತವಾಗಿವೆ. ಸಂದೇಹವು ಬಂಡಾಯ ಮತ್ತು ಪಾಪಕ್ಕೆ ನಡೆಸುತ್ತದೆ. ಅನಂತರ ಅಪರಾಧ ಮತ್ತು ದೇವರಿಂದ ದೂರವಾಗಿರುವಿಕೆಯ ಮನೋಭಾವ ಉಂಟಾಗುತ್ತದೆ. ಗಂಡ – ಹೆಂಡತಿಯರ ನಡುವಿನ ಸಂಬಂಧವು ನಾಚಿಕೆಯಿಂದ ಮಲಿನವಾಗಿದೆ. ಮತ್ತು ತೋಟದ ಹೊರಗಿನ ಜಗತ್ತಿನೊಂದಿಗಿನ ಮನುಷ್ಯನ ಸಂಬಂಧವು ನೋವು ಮತ್ತು ಬಾಧೆಯ ಲಕ್ಷಣವನ್ನು ಪಡೆದುಕೊಂಡಿದೆ. ದೇವರ ಇಡೀ

ಸೃಷ್ಟಿಯನ್ನು ನಾಶಗೊಳಿಸುವುದಕ್ಕಾಗಿ ಪಾಪವು ಹೇಗೆ ಹತಾಶೆ ಮತ್ತು ಬಂಧನಕ್ಕೆ ನಡೆಸಿತೆಂಬುದನ್ನು ಪೌಲನು (ರೋಮ 8:20-21) ತಿಳಿಸುತ್ತಾನೆ. ದೇವರು ಆದಾಮ ಹವ್ವರನ್ನು ತಾನು ಮೊದಲು ಇಟ್ಟ ತೋಟದೊಳಗಿಂದ ಹೊರಡಿಸಿಬಿಡುತ್ತಾನೆ. ಅಲ್ಲಿಂದ ಅವರಿಗೆ ಜೀವವೃಕ್ಷದ ಹಣ್ಣನ್ನು ತಿನ್ನುವ ಮತ್ತು ಶಾಶ್ವತವಾಗಿ ಬದುಕುವ ಭಾಗ್ಯ ತಪ್ಪಿ ಹೋಗುತ್ತದೆ.

ಆದರೆ ಪತನದ ಹಿನ್ನೆಲೆಯೊಳಗೂ ದೇವರು ಸರ್ಪಕ್ಕೆ ಮಾಡುವ ವಾಗ್ದಾನದೊಂದಿಗೆ ತನ್ನ ರಕ್ಷಣೆಯ ಯೋಜನೆಯನ್ನು ಪ್ರಾರಂಭಿಸುತ್ತಾನೆ; *"ನಿನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ, ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು, ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ"*. ಈ ವಾಗ್ದಾನವನ್ನು ಯೇಸುವಿನ ಬೆಳಕಿನಡಿಯಲ್ಲಿ ಅರ್ಥೈಸಿಕೊಳ್ಳಬೇಕಿದೆ. ಆತನು ಶಿಲುಬೆ ಮೇಲೆ ಮರಣ ಹೊಂದುವಾಗ ಸೈತಾನನ ತಲೆಯನ್ನು ಜಜ್ಜಿದನು. ಸ್ವತಃ ತನ್ನ ಪರಿಪೂರ್ಣವಾದ ವಿಧೇಯತೆಯ ಮೂಲಕ ಆದಾಮನಿಂದಾದ ಪರಿಣಾಮಗಳನ್ನು ವ್ಯತಿರಿಕ್ತಗೊಳಿಸುವವನು ಆತನಾಗಿದ್ದಾನೆ. *"ಒಂದೇ ಅಪರಾಧದ ಮೂಲಕ ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯವು ಹೇಗೆ ಉಂಟಾಯಿತೋ ಹಾಗೆಯೇ ಒಂದೇ ಸತ್ಕಾರ್ಯದಿಂದ ಎಲ್ಲಾ ಮನುಷ್ಯರಿಗೆ ನೀತಿವಂತರೆಂಬ ನಿರ್ಣಯವು ಉಂಟಾಗಿ ಜೀವವನ್ನು ಫಲಿಸುತ್ತದೆ"* (ರೋಮಾ. 5:18). *ಆತನು ದೇವಸ್ವರೂಪಿಯಾಗಿದ್ದರೂ ದೇವರಿಗೆ ಸರಿಸಮಾನವಾಗಿರುವದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು"* (ಫಿಲಿಪ್ಪಿ. 2:6-8).

ಅದೇ ರೀತಿಯಲ್ಲಿ ಅವನು ಸೈತಾನನ್ನು ಸೋಲಿಸಿ ಮನುಷ್ಯನ ಪರಿಸ್ಥಿತಿ ಮೇಲಿನ ಸೈತಾನನ ಹಿಡಿತವನ್ನು ಮುರಿದು ಹಾಕಿದನು; "ಇದಲ್ಲದೆ ಮಕ್ಕಳು ರಕ್ತ ಮಾಂಸಧಾರಿಗಳಾಗಿರುವುದರಿಂದ ಆತನೂ ಅವರಂತೆಯೇ ಆದನು. ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿಬಿಡುವುದಕ್ಕೂ..." (ಇಬ್ರಿಯ 2:14).

**ಸೃಷ್ಟಿ ಮತ್ತು ದೇವರ ವಿಶ್ರಾಂತಿ**

**ಸೃಷ್ಟಿ** **ದೇವರ ವಿಶ್ರಾಂತಿ**

**ದಂಗೆ/ಪತನ**

**ಆ. ಪ್ರಶ್ನೆಗಳು**

ಮೇಲ್ಕಂಡ ಪೀಠಿಕೆ ಮತ್ತು ಆದಿ. 2:46 ಮತ್ತು ಆದಿ. 3:1-24 ಓದಿರಿ. ಆನಂತರ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸಿ. ಸಾಧ್ಯವಾದಷ್ಟು ನಿಮ್ಮದೇ ಪದಗಳನ್ನು ಉಪಯೋಗಿಸಿರಿ.

1. ಆದಿಕಾಂಡ 1 ಮತ್ತು 2 ರಲ್ಲಿನ ಎರಡು ವಿವರಗಳು ಪರಸ್ಪರ ಒಂದಕ್ಕೊಂದು ಹೇಗೆ ಸಂಬಂಧಿಸುತ್ತವೆ?
2. ಆದಿಕಾಂಡ 1 ಮತ್ತು 2 ರಲ್ಲಿ "ದೇವರಿಗಾಗಿ" ವಿಭಿನ್ನವಾದ ಇಬ್ರಿಯ ಪದಗಳು ಬಳಕೆಯ ಪ್ರಾಮುಖ್ಯತೆ ಏನು?
3. ಮನುಷ್ಯನನ್ನು ಸೃಷ್ಟಿಸುವ ದೇವರ ಉದ್ದೇಶವು ಅವರನ್ನು ಗಂಡು – ಹೆಣ್ಣಾಗಿ ಸೃಷ್ಟಿಸುವಲ್ಲಿ ಹೇಗೆ ನೆರವೇರಿದೆ ಎಂಬುದನ್ನು ವಿವರಿಸಿ.
4. ಯಾಕೆ ದೇವರು ಮನುಷ್ಯನಿಗೆ ಒಳ್ಳೇದು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಫಲವನ್ನು ತಿನ್ನಬಾರದೆಂದು ಹೇಳಿದನು?
5. ಪತನವು (ಪಾಪವು) ದೇವರ ಸೃಷ್ಟಿಯಲ್ಲಿ ಸ್ಥಾಪಿಸಿದ ಸೌಹಾರ್ದ ಸಂಬಂಧಗಳ ಮೂರು ಕ್ಷೇತ್ರಗಳನ್ನು ಅಡ್ಡಿಪಡಿಸಿತು ಹೇಗೆ?
6. ಆದಿಕಾಂಡ 3 ರಲ್ಲಿನ ಪತನ ಅಥವಾ ಪಾಪದ ಕುರಿತ ಕಥೆಯಲ್ಲಿ ದೇವರ ಕೃಪೆಯು ಹೇಗೆ ಕಾಣುತ್ತದೆ?

**ಇ. ಮುಕ್ತಾಯಗಳು**

1. ಆದಿಕಾಂಡ ಎರಡು ಪ್ರಾಥಮಿಕವಾಗಿ ಸೃಷ್ಟಿಯ ಎರಡನೇಯ ಕಥೆಯಲ್ಲಿ ಇದು ದೇವರು ಮನುಷ್ಯರು ಜೀವಿಸಬೇಕೆಂದು ಬಯಸುವ ಮೂರು ರೀತಿಯ ಸೌಹಾರ್ದ ಸಂಬಂಧಗಳನ್ನು ತಿಳಿಯಪಡಿಸುವ ತೋಟದಲ್ಲಿನ ಒಂದು ಜೀವಿತದ ಕಥೆಯಾಗಿದೆ.

   ಅ. ದೇವರೊಂದಿಗಿನ ಸಂಬಂಧ

   ಆ. ಪರಸ್ಪರ ಒಬ್ಬರಿಗೊಬ್ಬರ ನಡುವಿನ ಸಂಬಂಧ

   ಇ. ದೇವರು ಸೃಷ್ಟಿಸಿದ ಜಗತ್ತಿನೊಂದಿಗಿನ ಸಂಬಂಧ

2. ಗಂಡು – ಹೆಣ್ಣಿನ ನಡುವಿನ ಸಂಬಂಧದ ನಡುವಿನ ಒಂದು ಪ್ರಮುಖ ಅಂಶವೇನೆಂದರೆ ದೇವರು ಅವರನ್ನು ಪರಸ್ಪರ ತೃಪ್ತಿಗೊಳಿಸಬೇಕೆಂದು ಉಂಟುಮಾಡಿದ್ದಾನೆ. ಇದು ಆದಾಮ ಹವ್ವರ ನಡುವೆ ಮದುವೆಯ ಒಂದಾಗುವಿಕೆಯಲ್ಲಿ ತೋರಿ ಬಂದಿದೆ.

3. ಪಾಪವು ಮನುಷ್ಯರಿಗಾಗಿನ ದೇವರ ಉದ್ದೇಶವನ್ನು ಸಂದೇಹ ಪಡುವುದರ ಮೂಲಕ ಪ್ರಾರಂಭವಾಗಿ ದೇವರ ಆಜ್ಞೆಗೆ ಅವಿಧೇಯರಾಗುವುದರಲ್ಲಿ ಮುಂದುವರಿಯುತ್ತದೆ. ಪತನಕ್ಕೆ ನಡೆಸಿದ ಪಾಪವು ದೇವರಂತೆ ಆಗಬೇಕೆಂಬ ಮನುಷ್ಯನ ಬಯಕೆಯಾಗಿತ್ತು; ಯಾವುದು ಒಳ್ಳೇದು ಯಾವುದು ಕೆಟ್ಟದ್ದೆಂಬುದನ್ನು ಸ್ಥಾಪಿಸುವುದು ಕೇವಲ ದೇವರ ವಿಶೇಷತೆಯಾಗಿದೆ.

4. ಆದರೆ ಪತನವು ಒಂದು ವಾಸ್ತವಾಂಶವಾದ ಕೂಡಲೇ ದೇವರ ರಕ್ಷಣೆಯ ಯೋಜನೆಯು ಕಾರ್ಯಗತವಾಯಿತು; ಸ್ತ್ರೀಯ ಸಂತಾನದ ಮೂಲಕ (ಯೇಸು) ಒಂದು ದಿನ ಸೈತಾನನು ಸೋಲಿಸಲ್ಪಡುವನೆಂದು ದೇವರು ವಾಗ್ದಾನ ಮಾಡಿದನು.

**ಈ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಯಾಕೆ ಮನುಷ್ಯನು ಒಳ್ಳೇದು ಕೆಟ್ಟದ್ದರ ಅರುಹನ್ನುಂಟುಮಾಡುವ ಮರದ ಹಣ್ಣನ್ನು ತಿಂದ ನಂತರ ಜೀವವೃಕ್ಷದ ಹಣ್ಣನ್ನು ತಿನ್ನದೇ ಇರುವುದು ಅಷ್ಟು ಅವಶ್ಯಕವಾಗಿತ್ತು? ಹೇಗೆ ದೇವರು ಈ ರೀತಿ ಆಗದಂತೆ ನೋಡಿಕೊಂಡನು?

2. ಹೇಗೆ ಆದಿಕಾಂಡ 3 ರಲ್ಲಿನ ಕಥನವು ಮನುಷ್ಯನು ದೇವರಿಗೆ ತೋರಿದ ಅವಿಧೇಯತೆಯು ಎರಡು ಹಂತಗಳಲ್ಲಿ ಅಪರಾಧಿ ಮನೋಭಾವ (ಪಾಪಪ್ರಜ್ಞೆ) ಮತ್ತು ನಾಚಿಕೆಯನ್ನು ತಂದೊಡ್ಡಿತು?

3. ಪತನವು ದೇವರು ಮನುಷ್ಯರಲ್ಲಿರಬೇಕೆಂದು ಬಯಸಿದ ಸೌಹಾರ್ದ (ಸಾಮರಸ್ಯದ) ಸಂಬಂಧಗಳ ಮೇಲೆ ವಿನಾಶವನ್ನು ತಂದು ಹಾಕಿತು ಮತ್ತು ಸಂಬಂಧಗಳು ಯೇಸುವು ತನ್ನ ಮೊದಲನೆಯ ಬರೋಣದಲ್ಲಿ ದೇವರ ರಾಜ್ಯವನ್ನು ಈ ಲೋಕಕ್ಕೆ ಪರಿಚಯಿಸುವುದರ ಮೂಲಕ ಭಾಗಶಃ ಮರುಸ್ಥಾಪಿಸಲ್ಪಟ್ಟಿವೆ. ಯೇಸುವು ತನ್ನ ಪ್ರಭಾವ ಮತ್ತು ಬಲದೊಂದಿಗೆ ಹಿಂತಿರುಗುವಾಗ ಈ ಯುಗಾಂತ್ಯದಲ್ಲಿ ಸಂಪೂರ್ಣವಾಗಿ ಅವು ಮರುಸ್ಥಾಪಿಸಲ್ಪಡುತ್ತವೆ. ಈ ಮೂರು ಸಂಬಂಧಗಳಲ್ಲಿ ಒಂದನ್ನು ಆರಿಸಿಕೊಳ್ಳಿ (ಮೇಲ್ಕಂಡ "ಮುಕ್ತಾಯ" ಅಂಶ 1 ರಲ್ಲಿ ನೋಡಿ) ಮತ್ತು ಕೆಳಕಂಡ ನಾಲ್ಕು ದೃಷ್ಟಿಕೋನಗಳಿಂದ ವಿಮರ್ಶಿಸಿರಿ.

   ಅ. ಏದೆನಿನಲ್ಲಿನ ತೋಟದಲ್ಲಿ ಹೇಗಿತ್ತು?

   ಆ. ಇಂದಿನ ಭಾರತೀಯ ಸಮಾಜದಲ್ಲಿ ಅದು ಹೇಗಿದೆ?

   ಇ. ಇಂದು ದಕ್ಷಿಣ ಭಾರತದಲ್ಲಿನ ಸಭೆಯಲ್ಲಿ ಅದು ಹೇಗೆ ತೋರಿಬರುತ್ತದೆ?

ಈ. ನೂತನ ಭೂಮಿ – ಆಕಾಶಗಳು ಸ್ಥಾಪಿಸಲ್ಪಡುವಾಗ ಅದು ಹೇಗಿರುತ್ತದೆ?

4. ಹಿಂದಿನ ಪುಟದಲ್ಲಿನ ಸೃಷ್ಟಿ ಮತ್ತು ದೇವರ ವಿಶ್ರಾಂತಿಯ ಚಿತ್ರಪಟವನ್ನು ವಿವರಿಸಿರಿ.

**ಉ. ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.**

"ಏದೆನಿನಲ್ಲಿ ತೋಟ ಮತ್ತು ಪತನ" ಎಂಬ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಲು ಈ ಅಧ್ಯಯನದಲ್ಲಿ ನೀವು ಕಲಿತ ಸಂಗತಿಗಳನ್ನೆಲ್ಲಾ (ಮತ್ತು ಹಿಂದಿನ ಆದಿಕಾಂಡ ಅಧ್ಯಯನ 2: ಆದಾಮ ತ್ತು ಹವ್ವ ಮತ್ತು ಆದಿಕಾಂಡ 4: ಮನುಷ್ಯನ ಪತನ) ಉಪಯೋಗಿಸಿರಿ.

**ಆದಿಕಾಂಡ ಅಧ್ಯಯನ 6: ಕಾಯಿನ ಮತ್ತು ಹೇಬೆಲನು**

**ಅ. ಪೀಠಿಕೆ**

ಹವ್ವಳು ಇಬ್ಬರು ಗಂಡು ಮಕ್ಕಳಿಗೆ ಜನ್ಮವಿತ್ತಳು. ಅವರಲ್ಲಿ ಕಾಯಿನನು ವ್ಯವಸಾಯ ಮಾಡುವವನಾದನು, ಹೇಬೆಲನು ಕುರಿಕಾಯುವವನಾದನು. ಇಬ್ಬರೂ ಸಹ ತಮ್ಮ ದುಡಿಮೆಯ ಫಲವನ್ನು ತಂದು ಯೆಹೋವನಿಗೆ ಕಾಣಿಕೆಯಾಗಿ ಕೊಟ್ಟರು. ದೇವರು ಹೇಬೆಲನ ಕಾಣಿಕೆಯನ್ನು ಮೆಚ್ಚಿದನು ಆದರೆ ಕಾಯಿನನ ಕಾಣಿಕೆಯಿಂದ ಸಂತೋಷಗೊಳ್ಳಲಿಲ್ಲ. ಇದರಿಂದ ಕಾಯಿನನಿಗೆ ಕೋಪವುಂಟಾಯಿತು. ಆತನು ತನ್ನ ತಮ್ಮನನ್ನು ಹೊರಗೆ ಅಡವಿಗೆ ಕರೆಕೊಂಡು ಹೋಗಿ ಅವನ ಮೇಲೆ ಬಿದ್ದು ಅವನನ್ನು ಕೊಂದುಹಾಕಿದನು. ಇದರ ಪರಿಣಾಮವಾಗಿ ಕಾಯಿನನು ದೇಶಬಿಟ್ಟು ಹೋಗಬೇಕಾಯಿತು. ತದನಂತರ ಹವ್ವಳು ತನ್ನ ಮೂರನೇ ಮಗನಿಗೆ ಜನ್ಮವಿತ್ತಳು, ಅವನಿಗೆ ಸೇತನೆಂದು ಹೆಸರಿಡಲಾಯಿತು.

**ಆ. ಓದಿರಿ**

ಆದಿಕಾಂಡ 4:1-26

**ಇ. ಟಿಪ್ಪಣಿಗಳು**

*ಹೇಬೆಲ* (ವ.2): ಈ ಹೆಸರಿನ ಅರ್ಥ “ಉಸಿರು” ಅಥವಾ “ಹಬೆ” ಎಂದಾಗಿದೆ. ಇದೇ ಪದವನ್ನು ಪ್ರಸಂಗಿಯಲ್ಲಿ ವ್ಯರ್ಥ ಎಂಬುದಾಗಿ ಭಾಷಾಂತರಿಸಲ್ಪಟ್ಟಿದೆ. ಬಹುಶ: ಈ ಹೆಸರೇ ಹೇಬೆಲನ ಅಲ್ಪಾವಧಿಯ ಜೀವಿತಕ್ಕೆ ಸೂಚನೆಯಾಗಿದೆ.

*ನೋದು* (ವ.16): ಈ ಹೆಸರಿನ ಅರ್ಥ ಅಲೆದಾಡುವುದು. ನೋದು ಎಂಬ ಸ್ಥಳ ಇನ್ನೂ ಅಪರಿಚಿತವಾಗಿದೆ.

*ಸೇತನು* (ವ.25): ಬಹುಶಃ ಈ ಹೆಸರಿನ ಅರ್ಥ “ನೇಮಿಸಲ್ಪಟ್ಟವನು” ಎಂದಾಗಿದೆ.

**ಈ. ಪ್ರಶ್ನೆಗಳು**

1. ದೇವರಿಗೆ ಸಮರ್ಪಿಸಲಾದ ಕಾಯಿನ ಮತ್ತು ಹೇಬೆಲನ ಕಾಣಿಕೆಗಳು ಹೇಗೆ ವರ್ಣಿಸಲ್ಪಟ್ಟಿವೆ?
2. ಯಾಕೆ ದೇವರು ಕಾಯಿನನ ಮೇಲೆ ಒಂದು ಗುರುತನ್ನು ಇಟ್ಟನು?
3. ಲೆಮೆಕನ ಗುಣಲಕ್ಷಣಗಳನ್ನು ನೀವು ಹೇಗೆ ವರ್ಣಿಸುವಿರಿ?
4. 26 ನೇ ವಚನದ ಕೊನೇ ಭಾಗದ ಪ್ರಾಮುಖ್ಯತೆಯೇನಿರಬಹುದು?

ಉತ್ತರಿಸುವುದಕ್ಕಿಂತ ಮುನ್ನ ಸಂದರ್ಭವನ್ನು ಅಭ್ಯಸಿಸಿರಿ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

ಯಾಕೆ ದೇವರು ಹೇಬೆಲನ ಕಾಣಿಕೆಯನ್ನು ಮೆಚ್ಚಿದನು ಮತ್ತು ಕಾಯಿನನ ಕಾಣಿಕೆಯನ್ನು ಮೆಚ್ಚಲಿಲ್ಲವೆಂಬುದಾಗಿ ನೀವು ಯೋಚಿಸುವಿರಿ (ಅಲ್ಲದೆ ಇಬ್ರಿಯ 11:4 ಮತ್ತು 1.ಯೋಹಾನ 3:12ನ್ನು ನೋಡಿರಿ)?

1. ವ.6-8 ರಲ್ಲಿ ಕಾಯಿನನ ಸ್ಥಿತಿಯನ್ನು ದೇವರು ಹೇಗೆ ವರ್ಣಿಸಿದ್ದಾನೆ?
2. ಈ ಹಿಂದಿನ ಪ್ರಶ್ನೆಯ ಉತ್ತರದಿಂದ ನಾವೇನನ್ನು ಕಲಿಯಬಹುದು?
3. ಈ ವಾಕ್ಯ ಭಾಗದ ಕುರಿತು ನಿಮ್ಮ ಆಲೋಚನೆ ಮತ್ತು ಭಾವನೆಗಳನ್ನು ಹಂಚಿಕೊಳ್ಳಿರಿ.

**ಆದಿಕಾಂಡ ಅಧ್ಯಯನ 7: ಜಲಪ್ರಳಯ**

**ಅ. ಪೀಠಿಕೆ**

ಹೇಬೆಲ ಮತ್ತು ಕಾಯಿನನ ದುರಂತವಾಗಿ ಅನೇಕ ತಲೆಮಾರುಗಳು ಕಳೆದ ನಂತರ ನೋಹನು ಹುಟ್ಟಿದನು. ಆ ಸಮಯದಲ್ಲಿ ಭೂಮಿ ಮೇಲೆ ಮನುಷ್ಯರ ಸಂಖ್ಯೆ ಹೆಚ್ಚಾಯಿತು. ಅಲ್ಲದೇ ಅವರ ಕೆಟ್ಟತನ ಸಹ ಹೆಚ್ಚಾಯಿತು. ಇದರಿಂದ ದೇವರಿಗೆ ನೋವುಂಟಾಗಿ ಆತನು ಭೂಮಿ ಮೇಲೆ ಜಲಪ್ರಳಯವನ್ನುಂಟುಮಾಡಿ ಎಲ್ಲಾ ಜನರನ್ನು ಅಳಿಸಿಬಿಡಬೇಕೆಂದು ನಿರ್ಧರಿಸದನು. ಆದರೆ ನೋಹನು ನೀತಿವಂತನಾಗಿದ್ದನು. ಆ ನಿಮಿತ್ತ ದೇವರು ಆತನ ಕುಟುಂಬ ಮತ್ತು ಎಲ್ಲಾ ಪ್ರಾಣಿಗಳನ್ನು ರಕ್ಷಿಸುವುದಕ್ಕಾಗಿ (ಶುದ್ಧ ಪಶುಪಕ್ಷಿಗಳಲ್ಲಿ ಏಳು ಜೊತೆ) ನೋಹನಿಗೆ ಒಂದು ನಾವೆಯನ್ನು ಕಟ್ಟಲು ಹೇಳಿದನು. 150 ದಿನಗಳ ಕಾಲ ಭೂಮಿ ಮೇಲೆ ಧಾರಕಾರವಾಗಿ ಮಳೆ ಸುರಿದದ್ದರಿಂದ ಭೂಮಿ ಮೇಲಿನ ಎಲ್ಲಾ ಜೀವಿಗಳು ಲಯವಾದವು. ಆದರೆ ನಾವೆಯಲ್ಲಿದ್ದವುಗಳು ಮಾತ್ರ ಬದುಕಿಕೊಂಡವು. ನೀರು ಹೆಚ್ಚುತ್ತಾ ಬಂದಾಗ ನಾವೆಯು ಅರಾರಾಟ್ ಪರ್ವತದ ಮೇಲೆ ಬಂದು ನಿಂತಿತು. ನೋಹನು ಯಜ್ಞವೇದಿಯನ್ನು ಕಟ್ಟಿ ದೇವರಿಗೆ ಸರ್ವಾಂಗ ಹೋಮವನ್ನು ಸಮರ್ಪಿಸಿದನು. ದೇವರು ತಾನು ಇನ್ನೆಂದೂ ಸಹ ಜಲಪ್ರಳಯದಿಂದ ಭೂಮಿಯನ್ನು ನಾಶ ಮಾಡುವುದಿಲ್ಲವೆಂದು ನೋಹನಿಗೆ ಒಡಂಬಡಿಕೆ ಮಾಡಿಕೊಂಡನು. ಆಕಾಶದಲ್ಲಿನ ಮುಗಿಲು ಬಿಲ್ಲೇ ಈ ಒಡಂಬಡಿಕೆಗೆ ಗುರುತಾಗಿತ್ತು. ಶೇಮ್, ಹಾಮ್, ಯೆಫೆತ್ ಎಂಬ ಮೂವರು ನೋಹನ ಮಕ್ಕಳಾಗಿದ್ದರು.

**ಆ. ಓದಿರಿ**

ಆದಿಕಾಂಡ 6:5 - 9:19

**ಇ. ಟಿಪ್ಪಣಿಗಳು**

*ನಾವೆ* (ವ.6:14): ಇಬ್ರಿಯ ಪಠ್ಯವು ಈ ದೋಣಿಗೆ ಒಂದು ವಿಭಿನ್ನವಾದ ಪದವನ್ನು ಬಳಸುತ್ತದೆ. ಇದು ಒಂದು ಪೆಟ್ಟಿಗೆಯ ಆಕಾರದ್ದು ಎಂದು ಅರ್ಥ ಕೊಡುತ್ತದೆ. ಇದೇ ಪದವನ್ನು ಮೋಶೆಯ ಜೀವವನ್ನು ರಕ್ಷಿಸಿದ ಪೆಟ್ಟಿಗೆಗೆ ಸಹ ಬಳಸಲಾಗಿದೆ.

*6:15* : ಮೀಟರುಗಳಲ್ಲಿ ನಾವೆಯ ಅಳತೆ: 140 ಮೀಟರ್ ಉದ್ದ, 23 ಮೀಟರ್ ಅಗಲ ಮತ್ತು 14 ಮೀಟರ್ ಎತ್ತರ

*7:20* : ನೀರು ಬೆಟ್ಟಗಳಿಗಿಂತ 9 ಮೀಟರ್ ಹೆಚ್ಚಿತ್ತು.

*ನೆನಪಿಗೆ ತೆಗೆದುಕೊಂಡು* (ವ.8:1): ಹಳೇ ಒಡಂಬಡಿಕೆಯಲ್ಲಿ ನೆನಪು ಮಾಡಿಕೊ ಎಂಬ ಪದವು "ಕಾಳಜಿ ವಹಿಸು" ಎಂದಾಗಿ ಸಹ ಆಗುತ್ತದೆ.

*ಗಾಳಿ ಬೀಸುವಂತೆ ಮಾಡಲಾಗಿ* (ವ.8:1): ಇಬ್ರಿಯದಲ್ಲಿ "ಗಾಳಿ" ಮತ್ತು "ಆತ್ಮ"ಗಳೆರೆಡೂ ಸಹ ಒಂದೇ ಪದವಾಗಿವೆ. ಹಾಗಾಗಿ ಈ ವಚನವು 1:2 ರಲ್ಲಿನ ಸೃಷ್ಟಿಯ ಕಥೆಯೊಂದಿಗೆ ಹೋಲಿಸಬಹುದು.

*ಅರಾರಟ್ ಸೀಮೆಯ ಬೆಟ್ಟಗಳಲ್ಲಿ* (ವ.8:4): ಈ ಬೆಟ್ಟ ಸೀಮೆಯು ಪ್ರಸ್ತುತದಲ್ಲಿ ಟರ್ಕಿಯಲ್ಲಿ ಕಪ್ಪು ಸಮುದ್ರ ಮತ್ತು ಕ್ಯಾಸ್ಪಿಯನ್ ಸಮುದ್ರದ ನಡುವೆ ಇದೆ. ಇದು ಪ್ರಾಚೀನ ಮೆಸೊಪೊಟಮಿಯಾದ ಉತ್ತರಕ್ಕಿದೆ.

*ಎಣ್ಣೇಮರದ ಹೊಸ ಚಿಗುರು* (8:11): ಎಣ್ಣೇಮರವು ಬೆಟ್ಟಗಳಲ್ಲಿ ಅಷ್ಟು ಎತ್ತರ ಬೆಳೆಯುವುದಿಲ್ಲ, ಹಾಗಾಗಿ ಪಾರಿವಾಳವು ಕೆಳಮಟ್ಟದ ಸೀಮೆಗೆ ಹೋಗಿರಬಹುದು.

*ಎರಡನೆಯ ತಿಂಗಳಿನ ಇಪ್ಪತ್ತೇಳನೆಯ ದಿನದಲ್ಲಿ* (ವ.8:14): ಇದು ಪ್ರಳಯವು ಪ್ರಾರಂಭವಾಗಿ ಸುಮಾರು ಒಂದು ವರ್ಷದ ನಂತರ (7:11 ಹೋಲಿಸಿ)

*ಅದರ ಸುವಾಸನೆಯು ಯೆಹೋವನಿಗೆ ಗಮಗಮಿಸಲು* (ವ.8:21): ದೇವರು ನೋಹನು ಅರ್ಪಿಸಿದ ಆರಾಧನೆಯಲ್ಲಿ (ಯಜ್ಞ) ಸಂತೋಷಪಟ್ಟನೆಂಬುದನ್ನು ಇದು ಸೂಚಿಸುತ್ತದೆ.

**ಈ. ಪ್ರಶ್ನೆಗಳು**

1. ಈ ಕಥೆಯಲ್ಲಿ ನೋಹನನ್ನು ಹೇಗೆ ವರ್ಣಿಸಲಾಗಿದೆ?
2. ಜಲಪ್ರಳಯದಿಂದ ಎಷ್ಟು ಜನರು ರಕ್ಷಿಸಲ್ಪಟ್ಟರು?
3. ಎಲ್ಲ ನೀರು ಎಲ್ಲಿಂದ ಬಂತು?
4. ಈ ಕಥೆಯಲ್ಲಿ ಪಾರಿವಾಳವು ವಹಿಸುವ ಪಾತ್ರವೇನು?
5. ದೇವರು ನೋಹ ಮತ್ತು ಆತನ ಮಕ್ಕಳಿಗೆ ಏನೆಂದು ಆಜ್ಞಾಪಿಸಿದನು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಯಾವ ಕಾರಣಕ್ಕಾಗಿ ದೇವರು ನೋಹನಿಗೆ ಶುದ್ಧ ಪಶುಗಳಲ್ಲಿ ಏಳು ಜೊತೆ ಗಂಡು – ಹೆಣ್ಣುಗಳನ್ನು ಆದರೆ ಎರಡೇ ಜೊತೆ ಅಶುದ್ಧ ಪ್ರಾಣಿಗಳನ್ನು ತೆಗೆದುಕೊಳ್ಳಲು ಹೇಳಿರಬಹುದು?
2. ಯಾವ ರೀತಿಯಲ್ಲಿ 8:1 ಜಲಪ್ರಳಯದ ಕಥೆಯಲ್ಲಿ ಒಂದು ಮಹತ್ವದ ತಿರುವಿನ ಅಂಶವಾಗಿದೆ?
3. ಜಲಪ್ರಳಯದ ನಂತರವೂ ಭೂಮಿ ಮೇಲೆ ಪಾಪದ ಸಮಸ್ಯೆಗಳಿದ್ದಿರಬಹುದು. **ನೋಹ ಮತ್ತು ಜಲಪ್ರಳಯದ ಕುರಿತಾದ ಇದು ಹೇಗೆ ಸ್ಪಷ್ಟವಾಗಿದೆ?**
4. ಈ ವಾಕ್ಯಭಾಗದ ಕುರಿತು ನಿಮ್ಮ ಆಲೋಚನೆ ಮತ್ತು ಭಾವನೆಗಳನ್ನು ಹಂಚಿಕೊಳ್ಳಿರಿ. ಇದರಿಂದ ನಿಮಗೆ ಸಿಕ್ಕ ಹೊಸ ಒಳನೋಟಗಳೇನು?

**ಆದಿಕಾಂಡ ಅಧ್ಯಯನ 8: ಬಾಬೆಲ್ ಗೋಪುರ**

**ಅ. ಪೀಠಿಕೆ**

ಆ ದಿನಗಳಲ್ಲಿ ಲೋಕದಲ್ಲಿರುವವರೆಲ್ಲರಿಗೂ ಒಂದೇ ಭಾಷೆಯಿತ್ತು (ಆದಿ.11:1). ಜನರು ಬಾಬೆಲಿನಲ್ಲಿ (ಶಿನಾರ್) ವಾಸಮಾಡಿಕೊಂಡಿರುವಾಗ ಒಂದು ಎತ್ತರವಾದ ಗೋಪುರವುಳ್ಳ ಪಟ್ಟಣವನ್ನು ಕಟ್ಟಬೇಕೆಂದು ನಿರ್ಧರಿಸಿದರು. ಆದರೆ ದೇವರು ಒಬ್ಬರ ಮಾತು ಒಬ್ಬರಿಗೆ ತಿಳಿಯದಂತೆ ಅವರ ಭಾಷೆಯನ್ನು ತಾರುಮಾರು ಮಾಡಿದನು. ಅನಂತರ ದೇವರು ಜನರನ್ನು ಲೋಕದಲ್ಲೆಲ್ಲಾ ಚದುರಿಸಿಬಿಟ್ಟನು. ಈ ಪಟ್ಟಣಕ್ಕೆ "ಬಾಬೆಲ್" ಎಂದು ಕರೆಯಲಾಗಿದೆ.

**ಆ. ಓದಿರಿ**

ಆದಿಕಾಂಡ 11:1-9

**ಇ. ಟಿಪ್ಪಣಿಗಳು**

*ಲೋಕದವರೆಲ್ಲರಿಗೂ* (ವ.1): ಇದು ಜಲಪ್ರಳಯದಲ್ಲಿ ಪಾರಾದವರು ಮತ್ತು ಅವರ ಸಂತತಿಯವರನ್ನು ಸೂಚಿಸುತ್ತದೆ.

ಶಿನಾರ್ (ವ.2): ಬಾಬೆಲಿಗಿರುವ ಇನ್ನೊಂದು ಹೆಸರು.

*ಒಂದು ಪಟ್ಟಣವನ್ನೂ, ಗೋಪುರವನ್ನೂ* (ವ.4): ಕನ್ನಡದ NIBV ಯಲ್ಲಿ ಕೇವಲ ಗೋಪುರ ಎಂದಿದೆ. ಈ ಇಬ್ರಿಯ ಹೇಳಿಕೆಯನ್ನು "ಗೋಪುರವುಳ್ಳ ನಗರ" ಎಂದು ಅರ್ಥೈಸಿಕೊಳ್ಳಬಹುದು.

*ಬಾಬೆಲ್* (ವ.9): ಇದು ಬಾಬೆಲ್ ಪಟ್ಟಣವಾಗಿದೆ. ಕನ್ನಡದ ಭಾಷಾಂತರದಲ್ಲಿ "ಬಾಬೆಲ್" ಎಂದಿದೆ. ಇಬ್ರಿಯದಲ್ಲಿ "ತಾರುಮಾರು" ಮತ್ತು "ಬಾಬೆಲ್" ಎಂಬ ಹೆಸರು ಒಂದೇ ರೀತಿ ಅರ್ಥವನ್ನು ಕೊಡುತ್ತವೆ. ಮೆಸೊಪೊಟೆಮಿಯಾದ ಭಾಷೆಯಲ್ಲಿ "ಬಾಬೆಲ್" ಎಂದರೆ "ದೇವರ ದ್ವಾರ" ಎಂದಾಗಿದೆ.

**ಈ. ಪ್ರಶ್ನೆಗಳು**

1. ಯಾಕೆ ಬಾಬೆಲಿನಲ್ಲಿನ ಜನರು ಅಂತಹ ಎತ್ತರವಾದ ಗೋಪುರವನ್ನು ಕಟ್ಟಬೇಕೆಂದು ಬಯಸಿದರು?
2. ಯಾಕೆ ದೇವರು ಅವರ ಭಾಷೆಯನ್ನು ತಾರುಮಾರು ಮಾಡಿದರು?
3. ಭಾಷೆಯನ್ನು ತಾರುಮಾರು ಮಾಡಿದ ಮೇಲೆ ಏನಾಯಿತು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

ಜನಾಂಗ(ಲೋಕ)ವು ಒಂದೇ ಭಾಷೆಯನ್ನು ಹೊಂದಿರುವ ಪ್ರಾಮುಖ್ಯತೆಯ ಬಗ್ಗೆ ಈ ಕಥೆಯು ನಮಗೆ ಏನೆಂದು ಹೇಳುತ್ತದೆ? ಈ ಕಥೆಯ ಬೆಳಕಿನಲ್ಲಿ ಭಾರತೀಯ ಸನ್ನಿವೇಶದ ಬಗ್ಗೆ ನೀವು ಏನೆಂದು ಯೋಚಿಸುವಿರಿ?

1. ಈ ಕಥೆಯು ಮನುಷ್ಯರ ಬಗ್ಗೆ ಆತನ ಸೃಜನಶೀಲತೆ (ಕ್ರಿಯಾಶೀಲತೆ) ಮತ್ತು ಪ್ರಯತ್ನದ ಬಗ್ಗೆ ಈ ಕಥೆ ನಮಗೆ ಏನೆಂದು ಹೇಳುತ್ತದೆ?
2. ಈ ವಾಕ್ಯಭಾಗದ ಕುರಿತು ನಿಮ್ಮ ಆಲೋಚನೆ ಮತ್ತು ಭಾವನೆಗಳನ್ನು ಹಂಚಿಕೊಳ್ಳಿರಿ.

**ಆದಿಕಾಂಡ ಅಧ್ಯಯನ 9: ಪಾಪದ ಹರಡುವಿಕೆ**

**ಅ. ಪೀಠಿಕೆ**

**1. ಅವಲೋಕನ**

1) ಪತನದ ನಂತರ ಭೂಮಿ ಮೇಲಿನ ಪಾಪದ ಹರಡುವಿಕೆಯು ನಾಲ್ಕು ಪ್ರಮುಖ ಕಥೆಗಳ ಮೂಲಕ ವರ್ಣಿಸಲ್ಪಟ್ಟಿದೆ:

ಅ. ಕಾಯಿನ ಮತ್ತು ಹೇಬೆಲ, ಆದಿ. 4:1-16

ಆ. ದೇವಪುತ್ರರು ಮತ್ತು ಮನುಷ್ಯಪುತ್ರಿಯರು, ಆದಿ. 6:1-4. ಈ ಎರಡು ಹೇಳಿಕೆಗಳಿಗೆ ಸತ್ಯವೇದ ವಿಶ್ಲೇಷಕರು ಅನೇಕ ವಿವರಣೆಗಳನ್ನು ಕೊಡುತ್ತಾರೆ. ದೇವಪುತ್ರರೆಂದರೆ ಸೇತನ ಕುಲದಲ್ಲಿನ ದೇವರಿಗೆ ಭಯಭಕ್ತಿಯುಳ್ಳ ಪುರುಷರು ಮತ್ತು ಮನುಷ್ಯ ಪುತ್ರಿಯರೆಂದರೆ ಕಾಯಿನನ ದುಷ್ಟ ಕುಲದ ಸ್ತ್ರೀಯರಾಗಿದ್ದಾರೆ ಎಂಬುದಾಗಿ ಅರ್ಥೈಸಿಕೊಳ್ಳುವುದು ಹೆಚ್ಚು ಸಮರ್ಪಕವಾದುದೆಂಬುದಾಗಿ ನಾನೆಣಿಸುತ್ತೇನೆ.

ಇ. ಜಲಪ್ರಳಯ, ಆದಿ. 6:5 – 9:17

ಈ. ಬಾಬೆಲ್ ಗೋಪುರ, ಆದಿ. 11:1-9

2) ಈ ಕಥೆಗಳು ಆದಿಕಾಂಡ 3 ರಲ್ಲಿನ ಪತನದ ವಿವರದಲ್ಲಿ ನಾವು ಕಾಣುವ ಮೂರು ಭಾಗಗಳ ವಿಧಾನವನ್ನು ಅನುಸರಿಸುತ್ತವೆ. ಪಾಪದಿಂದ ದೇವರ ನ್ಯಾಯತೀರ್ಪು ಬಂದಿದೆ ಆದರೂ ಕೃಪೆಯು ಆತನ ನ್ಯಾಯತೀರ್ಪಿನ ತೀವ್ರತೆಯನ್ನು ಸೀಮಿತಗೊಳಿಸುತ್ತದೆ.

**2. ಜಲಪ್ರಳಯ**

"ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವುದನ್ನು ಅವರು ಹೃದಯದಲ್ಲಿ ಯೋಚಿಸುವುದೆಲ್ಲವೂ ಯಾವಾಗಲೂ ಬರೀ ಕೆಟ್ಟದ್ದಾಗಿರುವುದನ್ನು ಯೆಹೋವನು ನೋಡಿ ತಾನು ಭೂಮಿಯ ಮೇಲೆ ಮನುಷ್ಯರನ್ನು ಉಂಟುಮಾಡಿದ್ದಕ್ಕೆ ಪಶ್ಚಾತ್ತಾಪಪಟ್ಟು ತನ್ನ ಹೃದಯದಲ್ಲಿ ನೊಂದುಕೊಂಡನು" (ಆದಿ. 6:5-6). ದೇವರು ಸೃಷ್ಟಿಯ ಮೇಲೆ ನ್ಯಾಯತೀರ್ಪನ್ನು ಘೋಷಿಸುವುದರ ಮೂಲಕ ಪ್ರತಿಕ್ರಿಯಿಸಿದನು.

ಆದರೆ ದೇವರ ನೇರ ಮಧ್ಯಸ್ಥಿಕೆಯಿಂದ ನೋಹ ಮತ್ತು ಆತನ ಕುಟುಂಬವು ರಕ್ಷಿಸಲ್ಪಟ್ಟಿತು. ಅಲ್ಲದೇ ದೇವರು ತನ್ನ ಒಡಂಬಡಿಕೆಯನ್ನು ಕಾದುಕೊಳ್ಳುವುದಕ್ಕಾಗಿ ಪಶು, ಪಕ್ಷಿ, ಮತ್ತು ಸರಿಸೃಪಗಳಲ್ಲಿ ಒಂದು ಪ್ರತಿನಿಧಿಗಳ ಗುಂಪನ್ನು ರಕ್ಷಿಸುವಂತೆ ಮಾಡಿದ್ದಾನೆ.

ಆದರೆ ನಿನ್ನ ಕೂಡ ನನ್ನ ನಿಬಂಧನೆಯನ್ನು ಮಾಡುತ್ತೇನೆ. ನೀನು ಹೆಂಡತಿ ಮಕ್ಕಳು ಸೊಸೆಯರು ಸಹಿತವಾಗಿ ನಾವೆಯಲ್ಲಿ ಸೇರಬೇಕು. ಇದಲ್ಲದೆ ಜೀವಿಗಳ ಪ್ರತಿ ಜಾತಿಯಲ್ಲಿಯೂ ಒಂದು ಗಂಡು ಒಂದು ಹೆಣ್ಣು ಹೀಗೆ ಎರಡೆರಡನ್ನು ನಾವೆಯಲ್ಲಿ ಸೇರಿಸಿ ನಿನ್ನೊಂದಿಗೆ ಉಳಿಸಿ ಕಾಪಾಡಬೇಕು" (ಆದಿ. 6:18-19). ಇಲ್ಲಿ ನಾವು ಮೊದಲ ಬಾರಿಗೆ ನಿಬಂಧನೆ (ಒಡಬಂಡಿಕೆ) ಎಂಬ ಸತ್ಯವೇದದ ರೂಪವನ್ನು ನಾವು ಕಾಣಬಹುದು. ಇದು "ಸ್ಥಾಪಿಸುವುದು" ಎಂಬುದಾಗಿ ಭಾಷಾಂತರಿಸಲ್ಪಟ್ಟ ಇಬ್ರಿಯ ಪದದೊಂದಿಗೆ ಉಪಯೋಗಿಸಲ್ಪಟ್ಟಿದೆ. ಅಲ್ಲದೇ ಇದು "ದೃಢಪಡಿಸುವುದು, ಪುನಃಸ್ಥಾಪಿಸುವುದು" ಎಂದು ಸಹ ಅರ್ಥ ಕೊಡುತ್ತದೆ. ಹೀಗೆ ಈ ವಚನವು ದೇವರು ನೋಹನಿಗೆ ಸಂಪೂರ್ಣವಾಗಿ ಒಂದು ಹೊಸ ನಿಬಂಧನೆಯನ್ನು (ಒಡಂಬಡಿಕೆ) ವಾಗ್ದಾನ ಮಾಡುತ್ತಿಲ್ಲವೆಂಬುದನ್ನು ಸೂಚಿಸುತ್ತದೆ. ಇಲ್ಲಿ ದೇವರು ಜಗತ್ತನ್ನು ಸೃಷ್ಟಿಸಿದಾಗ ಆ ಸೃಷ್ಟಿಯ ಕಥೆಯಲ್ಲಿ ನಿಬಂಧನೆ ಎಂಬ ಪದವನ್ನು ಬಳಸದಿದ್ದರೂ ಸಹ ಆತನು ತನ್ನ ಸೃಷ್ಟಿಗೆ ಸ್ವತಃ

ತಾನೇ ಬದ್ಧನಾಗಿದ್ದನು. ತನ್ನ ಸೃಷ್ಠಿಯೊಂದಿಗಿನ ದೇವರ ಬದ್ಧತೆಯು ಒಂದು ಒಡಂಬಡಿಕೆಯಾಗಿತ್ತು. ಆದಿಕಾಂಡ 9:8-17 ರಲ್ಲಿ ನಾವು ಜಲಪ್ರಳಯದ ನಂತರ ದೇವರು ಮಾಡುತ್ತಿರುವ ಒಡಂಬಡಿಕೆಯು ಕೇವಲ ನೋಹನೊಂದಿಗಿನ ಒಡಂಬಡಿಕೆಯಲ್ಲ ಎಂಬುದನ್ನು ಸ್ಪಷ್ಟವಾಗಿ ಕಾಣಬಹುದು. ಇದು ದೇವರು ಮತ್ತು ಆತನ ಸೃಷ್ಟಿಯೊಂದಿಗಿನ ಒಡಂಬಡಿಕೆ ಸಹ ಆಗಿದೆ. “ನಾನು ನಿಮ್ಮನ್ನು ನಿಮ್ಮ ಸಂತತಿಯವರನ್ನು ನಿಮ್ಮ ಕೂಡ ನಾವೆಯಿಂದ ಹೊರಟು ಬಂದ ಪಶುಪಕ್ಷಿ ಮೃಗಾದಿ ಸಕಲ ಭೂಜಂತುಗಳನ್ನು ಕುರಿತು ಸ್ಥಿರಪ್ರತಿಜ್ಞೆ ಮಾಡುತ್ತೇನೆ” (ಆದಿ. 9:9-10). ಹಾಗಾಗಿ ನೋಹನೊಂದಿಗಿನ ದೇವರ ಒಡಂಬಡಿಕೆಯನ್ನು ನಾವು ಆತನ ಸಂಕಲ್ಪದ ನವೀಕರಣ ಅಥವಾ ತನ್ನ ಸೃಷ್ಟಿಯೊಂದಿಗಿನ ಆತನ ಒಡಂಬಡಿಕೆ ಎಂದು ಅರ್ಥೈಸಿಕೊಳ್ಳಬೇಕಿದೆ. ಪಾಪವು ಇನ್ನೂ ಇರುವಾಗಲೂ ಸಹ ತನ್ನ ಮೂಲ ಉದ್ದೇಶವನ್ನು ಬಿಡಬಾರದೆಂದು ದೇವರು ಆಶಿಸುತ್ತಾನೆ. ತಾನು ಲೋಕವನ್ನು ಸೃಷ್ಟಿಸುವಾಗ ಇದ್ದ ಸಂಬಂಧವನ್ನು ಪಾಲಿಸಬೇಕೆಂದು ದೇವರು ಬಯಸುತ್ತಾನೆ. ಅಲ್ಲಿ ನ್ಯಾಯತೀರ್ಪಿರಬೇಕು (ಜಲಪ್ರಳಯ) ಆದರೆ ರಕ್ಷಣೆಯು ನ್ಯಾಯತೀರ್ಪಿನ ಮೂಲಕ (ನೋಹ, ಆತನ ಕುಟುಂಬ ಮತ್ತು ಬದುಕುವ ಪ್ರಾಣಿಗಳು ಜಲಪ್ರಳಯದಿಂದ ರಕ್ಷಿಸಲ್ಪಟ್ಟವು) ಸಾಧ್ಯವಾಗಿದೆ. ಈ ರಕ್ಷಣೆಯು ದೇವರ ಕೃಪೆ ಮತ್ತು ಕರುಣೆಯ ಪ್ರತೀಕವಾಗಿದೆ. ಆದಿಕಾಂಡ 9:1-7 ಜಲಪ್ರಳಯದ ನಂತರದ ಒಂದು ಹೊಸ ಆರಂಭವನ್ನು ತಿಳಿಸುತ್ತದೆ. ಪುನಃ ಮನುಷ್ಯನಿಗೆ ಫಲಭರಿತವಾಗಿರಲು ಮತ್ತು ಸಂಖ್ಯೆಯಲ್ಲಿ ಹೆಚ್ಚಲು ಭೂಲೋಕದಲ್ಲೆಲ್ಲಾ ತುಂಬಿಕೊಂಡು ಅದನ್ನು ನೋಡಿಕೊಳ್ಳುವಂತೆ ಆಜ್ಞಾಪಿಸುತ್ತಾನೆ. ಭೂಮಿಯನ್ನು ನಾಶ ಮಾಡಲು ಪುನಃ ಜಲಪ್ರಳಯವನ್ನು ಕಳುಹಿಸುವುದಿಲ್ಲವೆಂದು ದೇವರು ವಾಗ್ದಾನ ಮಾಡಿರುತ್ತಾನೆ.

### 3. ಬಾಬೆಲ್ ಗೋಪುರ

ಬಾಬೆಲ್ ಗೋಪುರದ ಕಥೆಯು ಪಾಪದ ಹರಡುವಿಕೆಯ ಕುರಿತಾದ ಕಥಾ ಸರಣಿಯಲ್ಲಿ ಕೊನೆಯದಾಗಿದೆ. ಈ ಕಥನದಲ್ಲಿ ಯಾವುದೇ ದೈವಿಕ ಕೃಪೆಯು ಕಾಣುವುದಿಲ್ಲ. ಇದು ಮನುಕುಲವು ಮುಂದುವರಿಯುತ್ತದಾ ಇಲ್ಲವಾ ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ.

ಈ ಕಥೆಯು ಪ್ರಾಚೀನ ಮಾನವನ ಕನಸಾದ ಒಂದೇ ಸಾಮಾನ್ಯ ಭಾಷೆ, ಒಂದೇ ಸಾಮಾಜಿಕ ಸಂಸ್ಕೃತಿ, ಒಂದೇ ಕುಲಕ್ಕೆ ಒಂದು ಉತ್ತಮವಾದ ಉದಾಹರಣೆಯಾಗಿದೆ. ಇವೆಲ್ಲವುಗಳಿಗೆ ಆಕಾಶವನ್ನು ಮುಟ್ಟುವ ಗೋಪುರವನ್ನು ಕಟ್ಟುವುದೇ ಸಂಕೇತವಾಗಿದೆ. ಆದರೆ ಯಾಕೆ ದೇವರು ಇಳಿದು ಬಂದು ಮನುಷ್ಯರ ಈ ದೊಡ್ಡ ಯೋಜನೆಯನ್ನು ತಾರುಮಾರು ಮಾಡಿದನು? ಈ ಕಥೆಯಲ್ಲಿ ಖಂಡಿಸಲ್ಪಟ್ಟಿದ್ದು ಕಟ್ಟಡವಲ್ಲ, ಆದರೆ “ದೊಡ್ಡ ಹೆಸರನ್ನು ಪಡೆಯೋಣ” ಎಂಬ ಮನುಷ್ಯನ ಗರ್ವವಾಗಿದೆ. ಬಾಬೆಲಿನ ಜನರ ಪಾಪವು ದೇವರ ಸಾರ್ವಭೌಮತೆಯನ್ನು ಅರಿತುಕೊಳ್ಳದೆ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಮಟ್ಟಗಳಲ್ಲಿ ಮನುಷ್ಯನ ಐಚ್ಚಿಕತೆಯನ್ನು ಸಾಧಿಸಲು ಪ್ರಯತ್ನಿಸುವುದಾಗಿತ್ತು.

ಆದಿಕಾಂಡ 3 ಮನುಷ್ಯರ ಪತನವನ್ನು ಚಿತ್ರಿಸಿದರೆ, ಆದಿಕಾಂಡ 11 ಸಮಾಜದ ಪತನವನ್ನು ಚಿತ್ರಿಸುತ್ತದೆಂಬುದಾಗಿ ಹೇಳಬಹುದು. ಬಾಬೆಲ್ ಗೋಪುರವು ಸಂಪೂರ್ಣವಾಗಿ ಪಾಪದ ಹರಡುವಿಕೆಯನ್ನು ಸೂಚಿಸುತ್ತದೆ. ಆದಿಕಾಂಡ 3 ರಲ್ಲಿ ಏನಾಯಿತೆಂಬುದು ಈಗ ಅದರ ತಾರ್ಕಿಕ ತಲುಪಿದೆ. ಬಾಬೆಲ್ ಪತನದೊಂದಿಗೆ ಪ್ರಾರಂಭವಾದ ರಸ್ತೆಯು ಕೊನೆಯಾಗಿದೆ. ಹೀಗೆ ಈ ಕಥೆಯು ಪತನದ ಜಾಗತಿಕ ಫಲಿಣವನ್ನು ಪ್ರತಿನಿಧಿಸುತ್ತದೆಂಬುದಾಗಿ ನಾವು ಹೇಳಬಹುದು. ಇದರರ್ಥ ಬಾಬೆಲ್ ಜಲ ಪ್ರಳಯಕ್ಕಿಂತಲೂ ಹೆಚ್ಚಾಗಿ ವಿಶಾಲವಾದ ಪರಿಣಾಮಗಳನ್ನು ಹೊಂದಿದೆ.

### 4. ಶೇಮನಿಂದ ಅಬ್ರಹಾಮನವರೆಗೆ

ಬಾಬೆಲ್ ಗೋಪುರದ ಕಥೆಯ ನಂತರ ನಮ್ಮನ್ನು ಶೇಮ್ ನಿಂದ ಅಬ್ರಹಾಮನವರೆಗೆ ಕೊಂಡೊಯ್ಯುವ ಒಂದು ಜನಾಂಗಗಳ ಕಟ್ಟಿ ಕಂಡುಬರುತ್ತದೆ. ಇದು ನಮ್ಮನ್ನು ಒಂದು ಹೊಸ ಆರಂಭಕ್ಕೆ ನಡೆಸುತ್ತದೆ. “ಯೆಹೋವನು ಅಬ್ರಾಮನಿಗೆ ನೀನು ಸ್ವದೇಶವನ್ನೂ, ಬಂಧುಬಳಗವನ್ನೂ, ತಂದೆಯ ಮನೆಯನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟು ಹೋಗು. ನಾನು ನಿನ್ನನ್ನು ದೊಡ್ಡ

ಜನಾಂಗವಾಗುವಂತೆ ಮಾಡಿ ಆಶೀರ್ವದಿಸಿ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು, ನೀನು ಆಶೀರ್ವಾದ ನಿಧಿಯಾಗುವಿ" (ಆದಿ.12:1-2). ಇಲ್ಲಿ ಅಬ್ರಹಾಮನು ಒಂದು "ಹೊಸ ಸೃಷ್ಟಿಯಾಗಿ" ಚಿತ್ರಿಸಲ್ಪಟ್ಟಿದ್ದಾನೆ. ಆತನು ಆದಿಕಾಂಡ 3 ರಲ್ಲಿನ ಪತನದಿಂದ ಆದಿಕಾಂಡ 11 ರವರೆಗಿನ ಪಾಪದ ಹರಡುವಿಕೆಗೆ ದೇವರ ಉತ್ತರವಾಗಿದ್ದಾನೆ. ಬಾಬೆಲಿನ ಜನರು ತಮಗೋಸ್ಕರ ಒಂದು ಹೆಸರನ್ನು ಮಾಡಲು ಬಯಸಿದ್ದರು. ಆದರೆ ಇಲ್ಲಿ ಸ್ವತಃ ದೇವರೇ ಅಬ್ರಹಾಮನ ಹೆಸರನ್ನು ಪ್ರಖ್ಯಾತಿಗೆ ತರುವೆನೆಂದು ವಾಗ್ದಾನ ಮಾಡುತ್ತಾನೆ. ಗೋಪುರವನ್ನು ಕಟ್ಟುವುದರ ಮೂಲಕ ಬಾಬೆಲಿನ ಜನರು ಸಾಧಿಸಲು ಪ್ರಯತ್ನಿಸಿದ ಐಕ್ಯತೆಯನ್ನು ಸ್ವತಃ ದೇವರೇ ಅಬ್ರಹಾಮನ ಮೂಲಕ ಸಾಧಿಸುತ್ತಾನೆ. ಅಬ್ರಹಾಮನೊಂದಿಗಿನ ದೇವರ ಒಡಂಬಡಿಕೆಯು ಕ್ರಿಸ್ತನಲ್ಲಿ ನೆರವೇರಿದಾಗ, ದೇವರ ಸೃಷ್ಟಿಯ ಮೇಲೆ ಮನುಷ್ಯನು ತಂದು ಹಾಕಿದ ವಿಂಗಡನೆಗಳು ಮತ್ತು ಅಸ್ಪಷ್ಟತೆಗಳು ಖಂಡಿತವಾಗಿ ವ್ಯತಿರಿಕ್ತವಾಗುತ್ತವೆ.

**ಆ. ಪ್ರಶ್ನೆಗಳು**

ಮೇಲ್ಕಂಡ ಪೀಠಿಕೆ ಮತ್ತು ಆದಿ. 4:1-16, 6:1 - 9:17, 11:1-9ನ್ನು ಓದಿರಿ. ಕೆಳಕಂಡ ಪ್ರಶ್ನೆಗಳಿಗೆ ನಿಮ್ಮದೇ ಮಾತಿನಲ್ಲಿ ಉತ್ತರಿಸಿರಿ.

1. ಕಾಯಿನ ಮತ್ತು ಹೇಬೆಲನು (ಆದಿ. 4:1-16): ಸಂಕ್ಷಿಪ್ತವಾಗಿ ಮೂರು ಭಾಗಗಳ ವಿಧಾನವನ್ನು ತಿಳಿಸಿರಿ.

    ಅ. ಪಾಪ

    ಆ. ದೇವರ ನ್ಯಾಯತೀರ್ಪು

    ಇ. ದೇವರ ಕೃಪೆಯ ಸ್ಪಷ್ಟತೆ (ಗೋಚರತೆ)

2. ದೇವಪುತ್ರರು ಮತ್ತು ಮನುಷ್ಯಪುತ್ರಿಯರು (ಆದಿ. 6:1-4): ಮೂರು ಭಾಗಗಳ ವಿಧಾನವನ್ನು ತಿಳಿಸಿರಿ.

    ಅ. ಪಾಪ

    ಆ. ದೇವರ ನ್ಯಾಯತೀರ್ಪು

    ಇ. ದೇವರ ಕೃಪೆಯ ಸ್ಪಷ್ಟತೆ (ಸಾಕ್ಷತೆ)

3. ಜಲಪ್ರಳಯ (ಆದಿ. 6:5 – 9:17): ಸಂಕ್ಷಿಪ್ತವಾಗಿ ಮೂರು ಭಾಗಗಳ ವಿಧಾನವನ್ನು ವಿವರಿಸಿರಿ.

    ಅ. ಪಾಪ

    ಆ. ದೇವರ ನ್ಯಾಯತೀರ್ಪು

    ಇ. ದೇವರ ಕೃಪೆಯ ಗೋಚರತೆ

4. ಬಾಬೆಲ್ ಗೋಪುರ (ಆದಿ. 11:1-9): ಸಂಕ್ಷಿಪ್ತವಾಗಿ ಮೂರು ಭಾಗಗಳ ವಿಧಾನವನ್ನು ತಿಳಿಸಿರಿ.

    ಅ. ಪಾಪ

    ಆ. ದೇವರ ನ್ಯಾಯತೀರ್ಪು

    ಇ. ದೇವರ ಕೃಪೆಯ ಗೋಚರತೆ

5. ಆದಿ. 9:8-17 ರಲ್ಲಿ ದೇವರು ಸ್ಥಾಪಿಸಿದ ಒಡಂಬಡಿಕೆಯಲ್ಲಿ ಯಾರೆಲ್ಲ ಸೇರಿದ್ದರು?

6. ಬಾಬೆಲ್ ಗೋಪುರದ ಕಟ್ಟೋಣವು ಏನನ್ನು ಸೂಚಿಸುತ್ತದೆ?

7. ಆದಿ. 11:10-26 ರಲ್ಲಿನ ಜನಾಂಗಗಳ ಪಟ್ಟಿಯ ಉದ್ದೇಶವೇನು?

**ಇ. ಮುಕ್ತಾಯಗಳು**

1. ಪತನದ ನಂತರದ ಭೂಮಿ ಮೇಲಿನ ಪಾಪದ ಹರಡುವಿಕೆಯು (ಆದಿ. 3) ಆದಿಕಾಂಡ 6:1 ರಲ್ಲಿ ನಾಲ್ಕು ಪ್ರಮುಖ ಕಥನಗಳ ಮೂಲಕ ವರ್ಣಿಸಲ್ಪಟ್ಟಿದೆ. ಕಾಯಿನನು ತನ್ನ ತಮ್ಮನಾದ ಹೇಬೆಲನನ್ನು ಕೊಲ್ಲುತ್ತಾನೆ, ದೇವಜನರು ಮತ್ತು ದೇವಭಕ್ತಿಯಿಲ್ಲದವರ ನಡುವೆ ಅಂತರ್ಜಾತಿ ವಿವಾಹ, ಮನುಷ್ಯರ ಕೆಟ್ಟತನವು ದೇವರು ಜಲಪ್ರಳಯವನ್ನು ಬರಮಾಡುತ್ತದೆ, ಮತ್ತು ಬಾಬೆಲ್ ಗೋಪುರವನ್ನು ಕಟ್ಟುವುದರಲ್ಲಿ ಮನುಷ್ಯರ ಸೊಕ್ಕು ಅಥವಾ ಅಹಂಕಾರ ತೋರುತ್ತದೆ.

2. ಮನುಷ್ಯನ ಪಾಪವು ಪ್ರತಿ ನಾಲ್ಕು ಕಥನಗಳಲ್ಲೂ ದೇವರ ನ್ಯಾಯತೀರ್ಪನ್ನು ತರುತ್ತದೆ.

3. ಆದರೆ ದೇವರ ನ್ಯಾಯತೀರ್ಪು ಆತನ ಕೃಪೆಯಿಂದ ಮೆತ್ತ(ಹಗುರ)ಗಾಗುತ್ತದೆ: ಉದಾ: ಕಾಯಿನನು ಶಪಿಸಲ್ಪಟ್ಟು, ಹೊರಹಾಕಲ್ಪಟ್ಟು ಮನೆಯಿಲ್ಲದವನಾಗಿ ಅಲೆದಾಡುವವನಾಗುತ್ತಾನೆ, ಆದರೂ ಆತನು ಸಂರಕ್ಷಿಸಲ್ಪಡುತ್ತಾನೆ.

4. ನೋಹ ಮತ್ತು ಉಳಿದ ಎಲ್ಲಾ ಜೀವಗಳೊಂದಿಗಿನ ದೇವ ಒಡಂಬಡಿಕೆಯು ತಾನು ಸೃಷ್ಟಿಸಿದ ಲೋಕ ಮತ್ತು ಮನುಷ್ಯನೊಂದಿಗಿನ ದೇವರ ಪ್ರಾರಂಭಿಕ ಒಡಂಬಡಿಕೆಯ ಒಂದು ಮರುಸ್ಥಾಪನೆಯಾಗಿದೆ.

5. ಆದಿಕಾಂಡ 3 ರಲ್ಲಿ ಮನುಷ್ಯರ ಪತನದೊಂದಿಗೆ ಪ್ರಾರಂಭವಾದದ್ದು ಆದಿಕಾಂಡ 11ರಲ್ಲಿನ ಮಾನವ ಸಮಾಜದ ಪತನದೊಂದಿಗೆ ಕೊನೆಗೊಳ್ಳುತ್ತದೆ. ಬಾಬೆಲ್ ಗೋಪುರವು ಪತನದೊಂದಿಗೆ ಪ್ರಾರಂಭವಾದ ರಸ್ತೆಯು ಕೊನೆಯಾಗಿದೆ. ಪಾಪದ ಪರಿಣಾಮವು ವಿಶ್ವವ್ಯಾಪಿಯಾಗುತ್ತದೆ.

6. ಆದರೆ ತಮ್ಮ ಅಹಂಕಾರ ಮತ್ತು ದೇವರ ಸಾರ್ವಭೌಮತೆಯನ್ನು ತಿರಸ್ಕರಿಸಿದ್ದರಿಂದ ಮನುಷ್ಯರು ಸಾಧಿಸಲಾರದ್ದನ್ನು ಸ್ವತಃ ದೇವರೇ ಸಾಧಿಸುವನು. ಹೀಗೆ ಅಬ್ರಹಾಮನನ್ನು ತನ್ನ ಮೆಸೊಪೊಟಮಿಯಾ/ಬಾಬೆಲ್ ದೇಶವನ್ನು ಬಿಟ್ಟು ಬರುವಂತೆ ಕರೆದು ಆತನನ್ನು ದೊಡ್ಡ ಜನಾಂಗ ಮತ್ತು ಆಶೀರ್ವಾದ ನಿಧಿಯಾಗುವಂತೆ ಮಾಡುವೆನೆಂದು ವಾಗ್ದಾನ ಮಾಡುವುದರ ಮೂಲಕ ದೇವರು ತನ್ನ ಯೋಜನೆಯನ್ನು ಚಾಲನೆಯಲ್ಲಿಟ್ಟಿದ್ದನು. ಈ ವಾಗ್ದಾನವು ಅಂತಿಮವಾಗಿ ಯೇಸು ಕ್ರಿಸ್ತನಲ್ಲಿ ನೇರವೇರಿತು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. "ನಿಬಂಧನೆ" ಎಂಬ ಪದವನ್ನು ಸತ್ಯವೇದದಲ್ಲಿ ಮೊದಲ ಬಾರಿಗೆ ಆದಿ. 6:18 ರಲ್ಲಿ ಕಾಣಬಹುದಾಗಿದೆ. ಆದರೆ "ನಿಬಂಧನೆ/ಒಡಂಬಡಿಕೆಯ ಅಂಶವು" ಸತ್ಯವೇದದಲ್ಲಿ ಈ ಹಿಂದೆ ಹೇಗೆ ಬಳಸಲ್ಪಟ್ಟಿದೆ ಎಂದು ವಿವರಿಸಿರಿ.

2. ಬಾಬೆಲ್ ಗೋಪುರದ ಕಥೆಯ ಪ್ರಾಮುಖ್ಯತೆಯನ್ನು ವಿವರಿಸಿರಿ.

3. ಯಾವ ರೀತಿಯಲ್ಲಿ ಅಬ್ರಹಾಮನ ಕರೆಯು ಒಂದು ಹೊಸ ಆರಂಭವಾಗಿದೆ?

4. ಆದಿಕಾಂಡ 3-11 ರಲ್ಲಿನ ಕಥನದಲ್ಲಿ ವರ್ಣಿಸಲ್ಪಟ್ಟಂತೆ ಪಾಪದ ಹರಡುವಿಕೆಯ ಕುರಿತಾಗಿ ಈ ಅಧ್ಯಯನವು ಹೇಗೆ ಒಂದು ಹೊಸ ತಿಳುವಳಿಕೆಯನ್ನು ಕೊಟ್ಟಿತೆಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

### ಊ. ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ

ಈ ಅಧ್ಯಯನದಲ್ಲಿ ಕಲಿತ ಸಂಗತಿಗಳನ್ನು ಉಪಯೋಗಿಸಿ (ಹಿಂದಿನ ಅಧ್ಯಯನ, ಆದಿಕಾಂಡ ಅಧ್ಯಯನ 2: ಆದಾಮ ಮತ್ತು ಹವ್ವ ಮತ್ತು ಆದಿಕಾಂಡ ಅಧ್ಯಯನ 4: ಮನುಷ್ಯನ ಪತನ) ನಿಮ್ಮ ಸಭೆಗಾಗಿ “ಪಾಪ – ನ್ಯಾಯತೀರ್ಪು-ಕೃಪೆ” ಎಂಬ ಸತ್ಯವೇದ ಅಧ್ಯಯನವೊಂದನ್ನು ಸಿದ್ಧಪಡಿಸಿರಿ.

## ಆದಿಕಾಂಡ ಅಧ್ಯಯನ 10: ಅಬ್ರಹಾಮ ಮತ್ತು ದೇವರ ವಾಗ್ದಾನಗಳು

### ಅ. ಪೀಠಿಕೆ

ಶೇಮನ ನಂತರ ಅನೇಕ ತಲೆಮಾರುಗಳಾದ ಮೇಲೆ ತೆರೆಹನು ಜನಿಸಿದನು. ಆತನು ತನ್ನ ಮಗನಾದ ಅಬ್ರಾಮ ಮತ್ತು ಇತರ ಕುಟುಂಬದ ಸದಸ್ಯರೊಂದಿಗೆ ಕಲ್ದೀಯರ ಊರ್ ಎಂಬ ಪಟ್ಟಣದಲ್ಲಿ ವಾಸಿಸಿದನು. ಊರ್ ಪಟ್ಟಣದಿಂದ ಅವರು ಹಾರಾನಿಗೆ ಬಂದು ವಾಸಿಸಿದರು, ತೆರಹನು ಅಲ್ಲಿಯೇ ಸತ್ತನು. ಅನಂತರ ದೇವರು ಅಬ್ರಹಾಮನಿಗೆ ಆತನ ಸ್ವದೇಶವನ್ನೂ, ಸ್ವಜನರನ್ನೂ ಬಿಟ್ಟು ಕಾನಾನ್ ದೇಶಕ್ಕೆ ಹೋಗಲು ಹೇಳಿದನು. ದೇವರು ಅಬ್ರಹಾಮನನ್ನು ದೊಡ್ಡ ಜನಾಂಗವಾಗುವಂತೆ ಮಾಡಿ ಆಶೀರ್ವದಿಸಿ, ಲೋಕದ ಎಲ್ಲಾ ಜನರಿಗೆ ಆಶೀರ್ವಾದದ ನಿಧಿಯಾಗುವಂತೆ ಮಾಡುವವನಾಗಿದ್ದನು. ಅಲ್ಲದೆ ದೇವರು ಆತನಿಗೂ ಆತನ ಸಂತತಿಗೂ ಕಾನಾನ್ ದೇಶವನ್ನು ವಾಗ್ದಾನಮಾಡಿದನು. ಭೀಕರವಾದ ಕ್ಷಾಮದ ವೇಳೆ ಅಬ್ರಾಮನು ಐಗುಪ್ತಕ್ಕೆ ಹೋದನು, ಅಲ್ಲಿ ಅರಸನಾದ ಫರೋಹನನು ಅಬ್ರಾಮನ ಹೆಂಡತಿಯಾದ ಸಾರಯಳ ನಿಮಿತ್ತ ಇಕ್ಕಟ್ಟಿಗೆ ಸಿಲುಕಿದನು. ಅವರು ಕಾನಾನಿಗೆ ಹಿಂತಿರುಗಿದ ಮೇಲೆ ಅಬ್ರಾಮನು ತನ್ನ ತಮ್ಮನ ಮಗನಾದ ಲೋಟನನ್ನು ಅಗಲಬೇಕಾಯಿತು. ಅವರಿಬ್ಬರ ಕುರಿದನಗಳು ಅಪಾರವಾಗಿದ್ದರಿಂದ ಅವರಿಗೆ ಸ್ಥಳ ಸಾಲದೇ ಹೋಯಿತು. ಲೋಟನು ಯೊರ್ದನ್ ಹೊಳೆಯ ಸುತ್ತಲ ಪ್ರದೇಶದಲ್ಲಿ ವಾಸಿಸಿದನು, ಆದರೆ ಅಬ್ರಾಮನು ಕಾನಾನಿನಲ್ಲಿಯೇ ಉಳಿದುಕೊಂಡನು. ದೇವರು ತನ್ನ ವಾಗ್ದಾನವನ್ನು ನವೀಕರಿಸಿದನು. ಅಬ್ರಾಮನ ಸಂತತಿಯು ಭೂಮಿಯ ಧೂಳಿನಷ್ಟು ಅಸಂಖ್ಯಾತವಾಗಿರುವುದು ಮತ್ತು ದೇವರು ಅಬ್ರಹಾಮನು ನೋಡುವ ದೇಶವನ್ನೆಲ್ಲಾ ಆತನಿಗೆ ಕೊಡುವನು.

### ಆ. ಓದಿರಿ

ಆದಿಕಾಂಡ 11:27 – 13:18

### ಇ. ಟಿಪ್ಪಣಿಗಳು

*ಅಬ್ರಾಮ* (11:27): ನಂತರ ಆತನ ಹೆಸರು ಅಬ್ರಹಾಮನೆಂದು ಬದಲಾಯಿಸಿತು (ಆದಿ. 17:5)

*ಕಲ್ದೀಯರ ಊರ್* (11:28): ಇದು ಅಬ್ರಹಾಮನ ಕುಟುಂಬದ ಸ್ವಸ್ಥಳವಾಗಿತ್ತು. ಇದು ಬಾಬೆಲಿನ ಆಗ್ನೇಯಕ್ಕೆ ಸುಮಾರು 220 ಕೀ.ಮೀ ದೂರದ ಮೆಸೊಪೊಟಮಿಯಾದ ದಕ್ಷಿಣ ಭಾಗದಲ್ಲಿತ್ತು. ಪುರಾತತ್ವಶಾಸ್ತ್ರಜ್ಞರು ಈ ಸ್ಥಳವನ್ನು ಉತ್ಖನನ ಮಾಡಿ ಅಬ್ರಹಾಮನಿಗಿಂತ ಹಿಂದೆ ನಾಗರೀಕತೆಯು ಅಲ್ಲಿರುವುದನ್ನು ಕಂಡುಹಿಡಿದಿದ್ದಾರೆ. ಕಲ್ದೀಯ ಎಂಬ ಪದದ ಅರ್ಥ ಸ್ಥಳೀಯ ಭಾಷೆಯಲ್ಲಿ "ಆಕ್ರಮಣ" ಎಂದಾಗಿದೆ.

*ಹಾರಾನ್* ( 11:31): ಇದು ಮೆಸೊಪೊಟಮಿಯಾದ ಉತ್ತರಕ್ಕಿರುವ ಒಂದು ಪಟ್ಟಣವಾಗಿತ್ತು. ಇದು ಲೋಟನ ತಂದೆಯಾದ ಹಾರಾನನ ಹೆಸರಲ್ಲ. ಇಬ್ರಿಯದಲ್ಲಿ ಅವು ವಿಭಿನ್ನವಾಗಿ ಉಚ್ಚರಿಸುತ್ತವೆ. ಅಬ್ರಹಾಮನ ಸಮಯದಲ್ಲಿ ಹಾರಾನ್ ಒಂದು ಪ್ರಮುಖ ವಾಣಿಜ್ಯ ನಗರಿಯಾಗಿತ್ತು.

*ಶೆಕೆಮ್* (12:6): ಇದು ಮಧ್ಯ ಕಾನಾನಿನ ಬೆಟ್ಟ ಪ್ರದೇಶದಲ್ಲಿನ ಒಂದು ಪ್ರಮುಖ ಪಟ್ಟಣವಾಗಿತ್ತು.

*ಬೇತೇಲ್* (12:8): ಇದು ಯೆರೂಸಲೇಮಿನ ಹತ್ತಿರ ಶೆಕೆಮಿನ ದಕ್ಷಿಣಕ್ಕಿರುವ ಒಂದು ಪ್ರಮುಖ ಪಟ್ಟಣವಾಗಿದೆ.

*ದಕ್ಷಿಣ ಸೀಮೆ* (12:9): ಇದು ಕಾನಾನಿನ ದಕ್ಷಿಣ ಭಾಗದ ಮರುಭೂಮಿ ಪ್ರದೇಶವನ್ನು ಸೂಚಿಸುತ್ತದೆ.

*ಫರೋಹ* (12:15): ಇದು ಐಗುಪ್ತದ ಅರಸರಿಗಾಗಿನ ಒಂದು ಹೆಸರಾಗಿದೆ.

*ಚೋಗರ್* (13:10): ಇದು ಮೃತ ಸಮುದ್ರದ ದಕ್ಷಿಣ ಭಾಗದಲ್ಲಿರುವ ಒಂದು ಕಾನಾನ್ಯ ಪಟ್ಟಣವಾಗಿದೆ (ಆದಿ. 19:20-22 ಸಹ ನೋಡಿ).

*ಸೊದೋಮ್* (13:13): ಈ ಪಟ್ಟಣವು ನಂತರದಲ್ಲಿ ಅದರ ದುಷ್ಟತನದ ನಿಮಿತ್ತ ದೇವರಿಂದ ನಾಶವಾಯಿತು (ಆದಿ. 19).

*ಭೂಮಿಯ ದೂಳಿನಷ್ಟು* (13:16): ಇದು ಅಸಂಖ್ಯ ಎಂಬುದಕ್ಕೆ ಒಂದು ಸಾಮಾನ್ಯವಾದ ಪ್ರಾಚೀನ ಉಪಮೇಯವಾಗಿದೆ.

*ಹೆಬ್ರೋನ್* (13:19): ಇದು ಕಾನಾನಿನ ದಕ್ಷಿಣದ ಒಂದು ಪಟ್ಟಣವಾಗಿದೆ.

**ಈ. ಪ್ರಶ್ನೆಗಳು**

1. ಈ ಅಧ್ಯಯಗಳಲ್ಲಿ ಮೂರು ಸಂದರ್ಭಗಳಲ್ಲಿ ದೇವರು ಅಬ್ರಾಮನೊಂದಿಗೆ ವಾಗ್ದಾನಗಳನ್ನು ಮಾಡುತ್ತಾನೆ. ಯಾವ ವಚನಗಳಲ್ಲಿ ಈ ವಾಗ್ದಾನಗಳನ್ನು ನಾವು ಕಾಣಬಹುದು ಮತ್ತು ದೇವರು ಅಬ್ರಾಮನಿಗೆ ಏನೆಂದು ವಾಗ್ದಾನ ಮಾಡುತ್ತಾನೆ?
2. ಐಗುಪ್ತದಲ್ಲಿ ಅಬ್ರಾಮ, ಸಾರಯಳು ಮತ್ತು ಫರೋಹರ ನಡುವೆ ಏನಾಗುತ್ತದೆ?
3. ಆದಿ. 22:17ನ್ನು ನೋಡಿರಿ. ಅಲ್ಲಿ ನಾವು "ಭೂಮಿಯ ಧೂಳಿನಷ್ಟು" ಎಂಬುದಕ್ಕೆ ಯಾವ ಸಮಾನಾರ್ಥಕವನ್ನು ಕಾಣುತ್ತೇವೆ?
4. ಯಾಕೆ ಲೋಟ ಯೊರ್ದನಿನ ಸುತ್ತಣ ಪ್ರದೇಶವನ್ನು ಆದುಕೊಂಡನು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಯಾಕೆ ಅಬ್ರಹಾಮನ ಕುರಿತ ಕಥೆಯಲ್ಲಿ ಸಾರಾಯಳ ಬಂಜೆತನವನ್ನು ಪದೇ ಪದೇ ಒತ್ತಿ ಹೇಳಲಾಗಿದೆ ಎಂಬುದಾಗಿ ನೀವು ಯೋಚಿಸುವಿರಿ (11:30, 15:2-3, 16:1, 17:17)?
2. "ಐಗುಪ್ತದಲ್ಲಿ ಅಬ್ರಾಮನು" ಎಂಬ ವಾಕ್ಯಭಾಗದಲ್ಲಿ ನಾವು ಅಬ್ರಾಮನ ಯಾವ ಚಿತ್ರಣವನ್ನು ಕಾಣುತ್ತೇವೆ (ಆದಿ. 12:10-20)? ಕಾರಣ ಕೊಡಿ, ಈ ಕಥೆಯಿಂದ ನಾವೇನನ್ನು ಕಲಿಯಬಹುದು?
3. "ಅಬ್ರಾಮನೂ ಲೋಟನೂ ಅಗಲಿದ್ದು" ಎಂಬ ವಾಕ್ಯಭಾಗದಲ್ಲಿ ನಾವು ಅಬ್ರಾಮನ ಯಾವ ಚಿತ್ರಣ ಕಾಣುತ್ತೇವೆ (ಆದಿ.13:1-13). ನಿಮ್ಮ ಉತ್ತರಕ್ಕೆ ಕಾರಣಗಳನ್ನು ಕೊಡಿರಿ. ಈ ಕಥೆಯಿಂದ ನಾವೇನನ್ನು ಕಲಿಯಬಹುದು?

**ಆದಿಕಾಂಡ ಅಧ್ಯಯನ 11: ಮೆಲ್ಕೀಚೆದೆಕನು, ಅಬ್ರಹಾಮನೊಂದಿಗೆ ದೇವರ ಒಡಂಬಡಿಕೆ**

**ಅ. ಪೀಠಿಕೆ**

ಯುದ್ಧವೊಂದರಲ್ಲಿ ಸೊದೋಮನ್ನು ವಶಪಡಿಸಿಕೊಳ್ಳಲಾಗುತ್ತದೆ. ಲೋಟನನ್ನು ಆತನ ಕುಟುಂಬ ಮತ್ತು ಆಸ್ತಿಯೆಲ್ಲವನ್ನೂ ಸೆರೆಹಿಡಿದು ಉತ್ತರಕ್ಕೆ ಒಯ್ಯಲಾಗುತ್ತದೆ. ಇದನ್ನು ಕೇಳಿದೊಡನೇ ಅಬ್ರಾಮನು ಬೆನ್ನಟ್ಟಿ ಹೋಗುತ್ತಾನೆ. ಕೊನೆಗೋ ಆತನು ಎಲ್ಲಾ ಆಸ್ತಿ ಸಮೇತ ಲೋಟನನ್ನೂ, ಆತನ ಕುಟುಂಬವನ್ನೂ ಹಿಂತಿರುಗಿ ತರುತ್ತಾನೆ. ಹಿಂದಿರುಗುವಾಗ ದಾರಿಯಲ್ಲಿ ಅಬ್ರಾಮನನ್ನು ಆಶೀರ್ವದಿಸುವುದಕ್ಕಾಗಿ ಸಾಲೇಮಿನ ಅರಸನೂ, ಪರಾತ್ಪರನಾದ ದೇವರ ಯಾಜಕನೂ ಆದ ಮೆಲ್ಕೀಚೆದೆಕನು ಬಂದನು. ಅಬ್ರಾಮನು ತಾನು ಗೆದ್ದು ತಂದ ಎಲ್ಲಾ ವಸ್ತುಗಳಲ್ಲಿ ಹತ್ತನೆಯ ಒಂದು ಭಾಗವನ್ನು ಅವನಿಗೆ ಕೊಟ್ಟನು (ಆದಿ. 14:20). ಇದಾದ ಮೇಲೆ ದೇವರು ಅಬ್ರಾಮನೊಂದಿಗೆ ದರ್ಶದಲ್ಲಿ ಮಾತಾನಾಡುತ್ತಾನೆ. ದೇವರು ಆತನಿಗೆ ಸ್ವಂತ: ಬಾಧ್ಯಸ್ಥನು ಮತ್ತು ಆತನ ಸಂತಾನ ಆಕಾಶದ ನಕ್ಷತ್ರಗಳಷ್ಟು ಅಸಂಖ್ಯಾತವಾಗಿರುವುದೆಂದು ವಾಗ್ದಾನಮಾಡುತ್ತಾನೆ. ಅಲ್ಲದೆ ಆತನು ದೇಶವನ್ನೂ ವಾಗ್ದಾನ ಮಾಡಿ ಐಗುಪ್ತದಲ್ಲಿ ಇಸ್ರಾಯೇಲ್ಯರ ಬಾಧೆ ಮತ್ತು ಕಾನಾನ್ ದೇಶಕ್ಕೆ ಅವರ ಹಿಂತಿರುಗಿ ಬರೋಣವನ್ನೂ ಸಹ ಪ್ರಕಟಪಡಿಸುತ್ತಾನೆ. ಅನಂತರ ದೇವರು ಅಬ್ರಾಮನೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುತ್ತಾನೆ.

**ಆ. ಓದಿರಿ**

ಆದಿ. 14:13 – 15:19

**ಇ. ಟಿಪ್ಪಣಿಗಳು**

14:1: ಈ ನಾಲ್ಕು ಸಾಮ್ರಾಜ್ಯಗಳು ಮೆಸೊಪೊಟಮಿಯಾದಲ್ಲಿವೆ.

14:2: ಈ ಐದು ಸಾಮ್ರಾಜ್ಯಗಳು ಮೃತಸಮುದ್ರದ ತಗ್ಗಿನಲ್ಲಿವೆ, ಇಲ್ಲಿ ಅದನ್ನು "ಸಿದ್ದೀಮ್ ತಗ್ಗು" ಎಂದು ಕರೆಯಲಾಗಿದೆ (ವ.3).

14:5-6: ಈ ವಚನಗಳಲ್ಲಿ ತಿಳಿಸಲಾದ ಸ್ರಾಮ್ರಾಜ್ಯಗಳು ಯೊರ್ದನ್ ಹೊಳೆ ಮತ್ತು ಮೃತಸಮುದ್ರದ ಪೂರ್ವಕ್ಕಿವೆ.

14:7: ಇಲ್ಲಿ ತಿಳಿಸಲಾದ ಸ್ಥಳಗಳು ಮೃತ ಸಮುದ್ರದ ದಕ್ಷಿಣಕ್ಕಿವೆ.

*ದಾನೂರಿನವರೆಗೂ … ದಮಸ್ಕ ಪಟ್ಟಣ* (14:14-15): ದಾನ್ ಎಂಬುದು ಉತ್ತರ ಕಾನಾನಿನಲ್ಲಿನ ಒಂದು ಪಟ್ಟಣವಾಗಿದೆ. ದಾನ್ ಎಂಬ ಹೆಸರು ಇದಕ್ಕೆ ನಂತರ ಕೊಡಲಾಯಿತು (ನೋಡಿ ನ್ಯಾಯಸ್ಥಾಪಕ 18:29). ದಮಸ್ಕವು ಇನ್ನೂ ಉತ್ತರಕ್ಕಿದೆ.

*ಅರಸನ ತಗ್ಗು* (14:17): ಇದು ಯೆರೂಸಲೇಮಿನ ಹತ್ತಿರವಿದೆ.

*ಮೆಲ್ಕೀಚೆದೆಕನು* (14:19): ಈತನನ್ನು "ಸಾಲೇಮಿನ ಅರಸನು" (ಇದರರ್ಥ "ಸಮಾಧಾನ" ಮತ್ತು ಯೆರೂಸಲೇಮಿನ ಸಂಕ್ಷಿಪ್ತ ರೂಪವಾಗಿದೆ) ಮತ್ತು "ಪರಾತ್ಪರನಾದ ದೇವರ ಯಾಜಕನೂ" ಆಗಿದ್ದನೆಂಬುದಾಗಿ ವರ್ಣಿಸಲಾಗಿದೆ. ಈತನ ಹೆಸರಿನ ಅರ್ಥ "ನೀತಿಯ ರಾಜ" ಎಂದಾಗಿದೆ. ಈತನು ಅಬ್ರಹಾಮನಿಗೆ ಸತ್ಕಾರ ಮಾಡುವುದಕ್ಕಾಗಿ ಆ ದಿನದ ದೈನಂದಿನ ಆಹಾರ ಮತ್ತು ಪಾನೀಯವಾದ ರೊಟ್ಟಿ ಮತ್ತು ದ್ರಾಕ್ಷಾರಸವನ್ನು ತರುತ್ತಾನೆ. ವಚನ 3 ರಲ್ಲಿ ಪ್ರಸ್ತಾಪಿಸಲಾದ ಮೆಲ್ಕೀಚೆದಕನು ಮೆಸ್ಸೀಯನ ಕುರಿತ 110 ನೇ ಕೀರ್ತನೆಯಲ್ಲಿಯೂ ಕಂಡುಬಂದಿದ್ದು ಅದನ್ನು ಇಬ್ರಿಯ 5:6 ರಲ್ಲಿ ಬಳಸಲಾಗಿದೆ.

*ಕೈಯೆತ್ತಿ* (14:23): ಒಬ್ಬನು ಆಣೆ ಮಾಡುವಾಗ ಕೈಯೆತ್ತುವನು.

*ಗುರಾಣಿ* (15:1): ಈ ಪದವು ಇಬ್ರಿಯದಲ್ಲಿ "ಅರಸ" ಎಂಬ ಹೆಚ್ಚುವರಿ ಅರ್ಥ ಹೊಂದಿದೆ.

15:6: ಈ ವಚನವು ಹೊಸ ಒಡಂಬಡಿಕೆಯಲ್ಲಿ ಪೌಲನಿಂದ (ರೋಮಾ 4:3, 22, ಗಲಾತ್ಯ 3:6) ಮತ್ತು ಯಾಕೋಬನಿಂದ (ಯಾಕೋಬ 2:23) ಉಪಯೋಗಿಸಲ್ಪಟ್ಟಿದೆ. ಪೌಲನು ಅಬ್ರಹಾಮನನ್ನು "ನಂಬುವವರೆಲ್ಲರಿಗೂ ಮೂಲತಂದೆ" ಎಂದು ಕರೆಯುತ್ತಾನೆ (ರೋಮ.14:11).

*ಮಣಕ, ಆಡು, ಟಗರು...ಇವುಗಳನ್ನೆಲ್ಲಾ ಕಡಿದು ಎರಡೆರಡು ಹೋಳುಮಾಡಿ ತುಂಡಿಗೆ ತುಂಡನ್ನೂ ಇಟ್ಟನು...ಹೊಗೆ ಹಾಯುವ ಒಲೆಯೂ ಉರಿಯುವ ದೀವಟಿಗೆಯೂ ಕಾಣಿಸಿ ಆ ತುಂಡುಗಳ ನಡುವೆ ಹೋದವು* (15:9-10,17): ಇಲ್ಲಿ ನಾವು ಪ್ರಚೀನ ಕಾಲದಲ್ಲಿ ಒಡಂಬಡಿಕೆಗಳನ್ನು ಯಾವ ರೀತಿ ಶಾಸ್ತ್ರೋಕ್ತವಾಗಿ ಮಾಡಲಾಗುತ್ತಿತ್ತೆಂಬ ವರ್ಣನೆಯನ್ನು ಕಾಣಬಹುದು (ಯರೆ.34:18 ರೊಂದಿಗೆ ಹೋಲಿಸಿ). ಹೊಗೆ ಹಾಯುವ ಒಲೆಯು ದೇವರನ್ನು ಸೂಚಿಸುತ್ತದೆ (ಹೋಲಿಸಿ ವಿಮೋ.19:18). ಈ ಒಡಂಬಡಿಕೆಯನ್ನು ದೇವರೇ ಮಾಡಿದನು ಅಬ್ರಹಾಮನು ಈ ವಾಗ್ದಾನಗಳ ಸ್ವೀಕೃತನಾಗಿದ್ದಾನೆ.

**ಈ. ಪ್ರಶ್ನೆಗಳು**

1. ಸಿದ್ದೀಮಿನ ತಗ್ಗಿನಲ್ಲಿನ ಯುದ್ಧದ ನಂತರ ಲೋಟನಿಗೆ ಏನಾಯಿತು"
2. ಈ ವಾಕ್ಯಭಾಗದಲ್ಲಿ ಮೆಲ್ಕೀಚೆದಕನು ದೇವರನ್ನು ಹೇಗೆ ವರ್ಣಿಸುತ್ತಾನೆ?
3. ಯಾಕೆ ಅಬ್ರಾಮನು ಸೊದೋಮಿಗೆ ತಂದ ವಸ್ತುಗಳನ್ನು ಇಟ್ಟುಕೊಳ್ಳಲು ನಿರಾಕರಿಸಿದನು?
4. ಎಲೀಯೆಜರ ಯಾರು? ಮತ್ತು ಯಾಕೆ ಅಬ್ರಾಮನು ಆತನ ಹೆಸರನ್ನು ದೇವರಿಗೆ ಸೂಚಿಸುತ್ತಾನೆ?
5. ಅಧ್ಯಾಯ 15 ರಲ್ಲಿ ದೇವರು ಅಬ್ರಹಾಮನಿಗೆ ಅನೇಕ ವಾಗ್ದಾನಗಳನ್ನು ಮಾಡುತ್ತಾನೆ ಅವು ಯಾವುವು? ಅವನ್ನು ಯಾವ ಯಾವ ಅಧ್ಯಾಯಗಳಲ್ಲಿ ಕಾಣುತ್ತೇವೆ?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಅಬ್ರಾಮನು ಲೋಟನನ್ನು ರಕ್ಷಿಸುವ ಕುರಿತ ಕಥೆಯಲ್ಲಿ ಅಬ್ರಾಮನ ಯಾವ ಚಿತ್ರಣವನ್ನು ನಾವು ಕಾಣುತ್ತೇವೆ (ಆದಿ. 14:13-16, 21-24) ? ನಿಮ್ಮ ಉತ್ತರಗಳಿಗೆ ಕಾರಣ ಕೊಡಿರಿ. ಈ ಕಥೆಯಿಂದ ನಾವೇನನ್ನು ಕಲಿಯಬಹುದು?
2. ದೇವರ ವಾಗ್ದಾನ ಮತ್ತು ಆದಿ. 15 ರಲ್ಲಿ ತಿಳಿಸಿದಂತೆ ದೇವರ ಒಡಂಬಡಿಕೆಯನ್ನು ಹೊಂದುವಾಗ ಅಬ್ರಾಮನು ಹೇಗೆ ಭಾವಿಸಿರಬಹುದೆಂಬುದಾಗಿ ನೀವು ಯೋಚಿಸುವಿರಿ? ನಿಮ್ಮ ಊಹೆಗಳನ್ನು ಪರಸ್ಪರ ಹಂಚಿಕೊಳ್ಳಿರಿ.

**ಆದಿಕಾಂಡ ಅಧ್ಯಯನ 12: ಹಾಗರಳು ಮತ್ತು ಇಷ್ಮಾಯೇಲ್**

**ಅ. ಪೀಠಿಕೆ**

ಸಾರಾಯಳಿಗೆ ಮಕ್ಕಳಿರಲಿಲ್ಲ, ಆದುದರಿಂದ ಆಕೆಯು ಅಬ್ರಾಮನಿಗೆ ತನ್ನ ಐಗುಪ್ತ ದೇಶದ ದಾಸಿಯಾದ ಹಾಗರಳನ್ನು ಮದುವೆಯಾಗಲು ಹೇಳಿದಳು. ಅಬ್ರಾಮನು ಒಪ್ಪಿದನು ಮತ್ತು ಹಾಗರಳು ಗರ್ಭಿಣಿಯಾದಳು. ಸಾರಯಳು ಅವಳನ್ನು ಬಾಧಿಸಿದಾಗ ಅವಳು ಮರಳುಕಾಡಿನತ್ತ ಓಡಿ ಹೋದಳು. ಅಲ್ಲಿ ಕರ್ತನ ದೂತನು ಹಾಗರಳಿಗೆ ಕಾಣಿಸಿಕೊಂಡು ಆಕೆಗೆ ಹಿಂತಿರುಗಿ ನೀನು ಮನೆಗೆ ಹೋಗು ಮತ್ತು ನಿನ್ನ ಮಗನಾದ ಇಷ್ಮಾಯೇಲನ ಸಂತತಿಯು ಅಪಾರವಾಗಿರುವುದೆಂದು ವಾಗ್ದಾನ ಮಾಡಿದನು. ಇಷ್ಮಾಯೇಲನು ಹುಟ್ಟುವಾಗ ಅಬ್ರಹಾಮನಿಗೆ 86 ವರ್ಷ ಪ್ರಾಯವಾಗಿತ್ತು.

**ಆ. ಓದಿರಿ**

ಆದಿ. 6:1-16

**ಇ. ಟಿಪ್ಪಣಿಗಳು**

*ನೀನು ನನ್ನ ದಾಸಿಯ ಬಳಿಗೆ ಹೋಗಬೇಕು* (ವ.2): ಪ್ರಾಚೀನ ಕಾಲದಲ್ಲಿ ಇದೊಂದು ಸಾಮಾನ್ಯವಾದ ಪದ್ಧತಿಯಾಗಿತ್ತು. ಒಂದು ಕುಟುಂಬವು ಒಬ್ಬ ಬಾಧ್ಯಸ್ಥನನ್ನು ಹೊಂದಿರುವುದು ಅತೀ ಪ್ರಾಮುಖ್ಯವಾದುದ್ದಾಗಿತ್ತು.

*ಯೆಹೋವನ ದೂತನು* (ವ.7): ಹಳೇ ಒಡಂಬಡಿಕೆಯಲ್ಲಿ ಇದೊಂದು ಸಾಮಾನ್ಯ ಹೇಳಿಕೆಯಾಗಿದೆ. ಇಬ್ರಿಯದಲ್ಲಿ "ದೂತನು" ಎಂದರೆ ಸಂದೇಶಕ ಎಂದಾಗಿದೆ. ಈ ಸಂದೇಶಕನನ್ನು ದೇವರೆಂಬುದಾಗಿ ಸಹ ಪರಿಗಣಿಸಲಾಗಿದೆ. ಆತನು ಏಕ ವಚನದಲ್ಲಿ ದೇವರ ಪರವಾಗಿ ಮಾತಾಡುವನು (ವ.10). ಆದರೆ ಆತನು ದೇವರ ಸಂದೇಶಕನಾಗುವುದರಿಂದ ಆತನಿಂದ ವಿಶೇಷವಾದವನಾಗಿದ್ದಾನೆ. ಹೆಚ್ಚಿನ ಉದಾಹರಣೆಗೆ ಆದಿಕಾಂಡ 22:11-12, 31:11-13, ವಿಮೋ. 3:2-4, ನ್ಯಾಯ. 2:1 .

*ನಿನಗೆ ಬಹುಸಂತಾನವಾಗ ಮಾಡುವೆನು. ಅದು ಲೆಕ್ಕಿಸಕೂಡದಷ್ಟು ಅಪರಿಮಿತವಾಗಿರುವದು* (ವ.10): ಆದಿ. 25:13-16 ರಲ್ಲಿ ಈ ವಾಗ್ದಾನವು ಹೇಗೆ ನೆರವೇರಲು ಪ್ರಾರಂಭಿಸಿರುವುದನ್ನು ಕಾಣಬಹುದು.

*ಕಾಡುಗತ್ತೆಯಂತೆ* (ವ.12): ಈ ಮಾತು ಮರಳುಕಾಡಿನಲ್ಲಿನ ನೆಲೆಯಿಲ್ಲದ ಮತ್ತು ಅಲೆದಾಡುವ ಜೀವಿತವನ್ನು ಸೂಚಿಸುತ್ತದೆ.

*ಲಹೈರೋಹಿ* (ವ.14): ಇಬ್ರಿಯದಲ್ಲಿ ಇದರರ್ಥ "ನನ್ನನ್ನು ನೋಡುವ ಜೀವಸ್ವರೂಪನ" ಎಂದಾಗಿದೆ.

**ಈ. ಪ್ರಶ್ನೆಗಳು**

1. ಯಾಕೆ ಅಬ್ರಾಮನು ಹಾಗರಳೊಂದಿಗೆ ಮಲಗಿದನು?
2. ಹಾಗರಳು ತಾನು ಬಸುರಾದಾಗ ಹೇಗೆ ವರ್ತಿಸಿದಳು?
3. ಸಾರಾಯಳು ಹೇಗೆ ವರ್ತಿಸಿದಳು?
4. ಮರಳುಕಾಡಿನಲ್ಲಿನ ಒರತೆಯ ಬಳಿ ದೂತನು ಹಾಗರಳಿಗೆ ತಂದ ಸಂದೇಶವೇನು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ಕಥೆಯಲ್ಲಿ ಅಬ್ರಹಾಮನ ಯಾವ ಚಿತ್ರಣವನ್ನು ನಾವು ಕಾಣುತ್ತೇವೆ? ನಿಮ್ಮ ಉತ್ತರಕ್ಕೆ ಕಾರಣ ಕೊಡಿರಿ.

2. ಈ ಕಥೆಯಲ್ಲಿ ಸಾರಯಳ ಯಾವ ಚಿತ್ರಣವನ್ನು ನಾವು ಕಾಣುತ್ತೇವೆ? ನಿಮ್ಮ ಉತ್ತರಕ್ಕೆ ಕಾರಣ ಕೊಡಿರಿ.

3. ಈ ಕಥೆಯಲ್ಲಿ ಹಾಗರಳ ಯಾವ ಚಿತ್ರಣವನ್ನು ಕಾಣುತ್ತೇವೆ? ನಿಮ್ಮ ಉತ್ತರಕ್ಕೆ ಕಾರಣ ಕೊಡಿರಿ.

4. ಈ ಕಥೆಯ ಮೂರು ಮುಖ್ಯ ದೃಶ್ಯಗಳಲ್ಲಿ ಹಾಗರಳಿಗೆ ಹೇಗನಿಸಿರಬೇಕೆಂಬುದಾಗಿ ನೀವು ಯೋಚಿಸುವಿರಿ? ನಿಮ್ಮ ಕಲ್ಪನೆಗಳನ್ನು ಉಪಯೋಗಿಸಿ ಪರಸ್ಪರ ಒಬ್ಬರಿಗೊಬ್ಬರು ಹಂಚಿಕೊಳ್ಳಿರಿ:

   ಅ. ದೃಷ್ಯ 1: ಸಾರಾಯಳು ಹಾಗರಳನ್ನು ಅಬ್ರಹಾಮನಿಗೆ ಎರಡನೇ ಹೆಂಡತಿಯನ್ನಾಗಿ ಕೊಡುತ್ತಾಳೆ.

   ಆ. ದೃಷ್ಯ 2: ಹಾಗರಳು ಮತ್ತು ಸಾರಾಯಳು

   ಇ. ದೃಷ್ಯ 3: ಹಾಗರಳು ಮತ್ತು ಯೆಹೋವನ ದೂತನು

5. ಈ ಕಥೆಯಿಂದ ನಾವೇನನ್ನು ಕಲಿಯಬಹುದು?

**ಆದಿಕಾಂಡ ಅಧ್ಯಯನ 13: ಸುನ್ನತಿಯ ಒಡಂಬಡಿಕೆ**

**ಅ. ಪೀಠಿಕೆ**

ಹದಿಮೂರು ವರುಷಗಳಾದ ಮೇಲೆ ಪುನಃ ದೇವರು ಅಬ್ರಾಮನಿಗೆ ಕಾಣಿಸಿಕೊಂಡು ಆತನೊಂದಿಗೆ ಒಡಂಬಡಿಕೆಯನ್ನು ದೃಢಪಡಿಸಿದನು. ಅಲ್ಲದೆ ದೇವರು ಆತನ ಹೆಸರನ್ನು ಅಬ್ರಾಮನಿಂದ "ಅಬ್ರಹಾಮ"ನೆಂಬುದಾಗಿ ಬದಲಿಸಿದನು. ಒಡಂಬಡಿಕೆಗೆ ಎಲ್ಲಾ ಗಂಡಸರ ಸುನ್ನತಿಯೇ ಗುರುತಾಗಿತ್ತು. ಅನಂತರ ದೇವರು ಸಾರಯಳ ಹೆಸರನ್ನು "ಸಾರಾ" ಎಂದು ಬದಲಿಸಿ ಅವರಿಗೆ ಇಸಾಕನೆಂದು ಕರೆಯಲ್ಪಡುವ ಮಗನನ್ನು ನಿಮಗೆ ಕೊಡುವೆನೆಂಬುದಾಗಿ ವಾಗ್ದಾನ ಮಾಡುತ್ತಾನೆ. ಅಲ್ಲದೆ ದೇವರು ಅವನೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡು ಅವರ ಅನ್ಯ ಸಂತತಿಯವರಲ್ಲಿ ಶಾಶ್ವತವಾಗಿರಬೇಕೆಂದು ಹೇಳುತ್ತಾನೆ (ಆದಿ.17:19). ಅದೇ ದಿನದಲ್ಲಿ ಎಲ್ಲಾ ಗಂಡಸರು ಅಬ್ರಹಾಮನ ಮನೆಯಲ್ಲಿ ಹುಟ್ಟಿದ ಎಲ್ಲಾ ಗಂಡು ಮಕ್ಕಳಿಗೂ ಸುನ್ನತಿಯಾಯಿತು.

**ಆ. ಓದಿರಿ**

ಆದಿಕಾಂಡ 19:1-27

**ಇ. ಟಿಪ್ಪಣಿಗಳು**

*ಸರ್ವಶಕ್ತನಾದ ದೇವರು* (ವ.1): ಇದರ ಇಬ್ರಿಯ ರೂಪ ಎಲ್-ಶಡಾಯ್ ಎಂದಾಗಿದೆ, ಶಡಾಯ್ ಎಂದರೆ ಅಸ್ಪಷ್ಟ ಎಂದಾಗಿದೆ. ಈ ವಿಶೇಷ ಹೆಸರಿನಿಂದಲೇ ದೇವರು ಪಿತೃಗಳಿಗೆ (ಪೂರ್ವಕರಿಗೆ) ತನ್ನನ್ನು ಪ್ರಕಟಿಸಿಕೊಂಡನು. (ಅಲ್ಲದೆ ಆದಿ. 35:11 ದೇವರು ಯಾಕೋಬನೊಂದಿಗೆ ಮಾತಾಡಿದ್ದು, ಮತ್ತು ವಿಮೋ. 6:3 ದೇವರು ಮೋಶೆಗೆ ತನ್ನನ್ನು ಪರಿಚಯಿಸಿದ್ದನ್ನು ನೋಡಿರಿ).

*ಅಬ್ರಾಮ ... ಅಬ್ರಹಾಮ* (ವ.5): ಅಬ್ರಾಮ ಎಂದರೆ "ಗೌರವಾನ್ವಿತ ತಂದೆ", ಅಬ್ರಹಾಮ ಎಂದರೆ "ಸಮೂಹದ ತಂದೆ" ಎಂದರ್ಥ. ಹೆಸರನ್ನು ಬದಲಿಸುವುದು ಒಬ್ಬ ವ್ಯಕ್ತಿಯ ಜೀವನದಲ್ಲಿ ಹೊಸ ಸಂತತಿಯ ಪ್ರಾರಂಭವನ್ನು ಸೂಚಿಸುತ್ತದೆ.

*ಜನಾಂಗಗಳು*: (ವ.8) ದೇವರ ದೃಷ್ಟಿಕೋನದಿಂದ ಈ ಒಡಂಬಡಿಕೆಯು ಶಾಶ್ವತವಾದುದ್ದಾಗಿದೆ ಆದರೆ ಇದೇ ವಾಕ್ಯಭಾಗ ಮತ್ತು ಇಸ್ರಾಯೇಲ್ಯರ ಚರಿತ್ರೆಯು ಇದು ಮನುಷ್ಯರಿಂದ ಮೀರುವಂತಾಗಿದೆ ಎಂದು ಹೇಳುತ್ತದೆ (ನೋಡಿ ವ.14, ಹೋಲಿಸಿ ಯೆಶಾಯ 24:5, ಯೆರೆ. 31:32).

*ಸಾರಯಳು ... ಸಾರಾ* (ವ.15): ಸಾರಾ ಎಂದರೆ "ರಾಣಿ", ಸಾರಯಳು ಎಂಬುದು ಅದೇ ರೀತಿಯ ಅರ್ಥ ಕೊಡಬಹುದು. ಆದರೆ ಪ್ರಮುಖ ಸಂಗತಿಯೇನೆಂದರೆ ಒಂದು ಹೊಸ ಸಂಗತಿಯ ಗುರುತಾಗಿ ಆಕೆಯ ಹೆಸರನ್ನು ಬದಲಾಯಿಸಲಾಯಿತು.

*ನೀನಂತೂ* (ವ.9): ಇಲ್ಲಿ ದೇವರೊಂದಿಗಿನ ಅಬ್ರಹಾಮನ ಒಡಂಬಡಿಕೆಯ ಸಮರ್ಪಣೆಯ ಒಂದು ವರ್ಣನೆ ಕಂಡುಬರುತ್ತದೆ. ಹೋಲಿಸಿ ನಾನಂತೂ (ವ.4), ಇದು ಈ ಹಿಂದೆ ದೇವರ ಸಮರ್ಪಣೆ(ಸಂಕಲ್ಪ)ಯನ್ನು ಪರಿಚಯಿಸುತ್ತದೆ.

*ನಕ್ಕು ... ಇಸಾಕ* (ವ.17, 19): ಇಸಾಕ ಎಂದರೆ "ನಗುತ್ತಾನೆ" ಎಂದರ್ಥ.

**ಈ. ಪ್ರಶ್ನೆಗಳು**

1. ಈ ಅಧ್ಯಾಯದಲ್ಲಿ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನಗಳ ಸಂಗತಿಗಳನ್ನು ಪಟ್ಟಿಮಾಡಿರಿ.

2. ಅಬ್ರಹಾಮನ ಮತ್ತು ಆತನ ಸಂತತಿಯು ಒಡಂಬಡಿಕೆಯ ಯಾವ ಗುರುತನ್ನು ಪಾಲಿಸಬೇಕಿತ್ತು?

3. **ಯಾಕೆ ಅಬ್ರಹಾಮನು ನಕ್ಕನು?**

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ಕಥೆಯಲ್ಲಿ ಅಬ್ರಹಾಮನ ಯಾವ ಚಿತ್ರಣವನ್ನು ನಾವು ಕಾಣುತ್ತೇವೆ? ನಿಮ್ಮ ಉತ್ತರಕ್ಕೆ ಕಾರಣ ಕೊಡಿರಿ.
2. ಈ ವಾಕ್ಯಭಾಗದ ಕುರಿತಾದ ನಿಮ್ಮ ಆಲೋಚನೆ ಮತ್ತು ಭಾವನೆಯನ್ನು ಹಂಚಿಕೊಳ್ಳಿರಿ. ಇದರಿಂದ ನಿಮಗೆ ಸಿಕ್ಕ ಹೊಸ ಆಲೋಚನೆಗಳೇನು?

**ಆದಿಕಾಂಡ ಅಧ್ಯಯನ 14: ಮೂರು ಮಂದಿ ಸಂದರ್ಶಕರು**

**ಅ. ಪೀಠಿಕೆ**

ಪುನಃ ದೇವರು ಅಬ್ರಹಾಮನಿಗೆ ಮಮ್ರೇತೋಪಿನ ಬಳಿಯಲ್ಲಿ ಕಾಣಿಸಿಕೊಂಡನು. ಮೂವರು ತನ್ನ ಗುಡಾರದ ಬಳಿಯಲ್ಲಿರುವದನ್ನು ಕಂಡು ಅಬ್ರಹಾಮನು ಅವರನ್ನು ಕಾಲುತೊಳಕೊಳ್ಳಲು ಮತ್ತು ಊಟ ಮಾಡಲು ಆಹ್ವಾನಿಸಿದನು. ಅಡುಗೆ ಸಿದ್ಧವಾಗುತ್ತಿರುವಾಗ ಅವರು ಸಾರಳು ಎಲ್ಲಿ ಎಂದು ಕೇಳಿದರು, ಆಕೆ ಗುಡಾರದಲ್ಲಿದ್ದಳು. ಮುಂದಿನ ವರ್ಷ ಇದೇ ಸಮಯ ತಾವು ತಿರುಗಿ ಬರುವಾಗ ಆಕೆಗೊಬ್ಬ ಮಗನಿರುವನೆಂಬ ದೇವರ ವಾಗ್ದಾನವನ್ನು ಕೇಳಿದೊಡನೆ ಆಕೆ ನಕ್ಕಳು.

**ಆ. ಓದಿರಿ**

ಆದಿ. 18:1-15

**ಇ. ಟಿಪ್ಪಣಿಗಳು**

*ಮಮ್ರೇತೋಪಿನ* (ವ.14): NIBV ಭಾಷಾಂತರ ಸರಿಯಿಲ್ಲ.

*ಮೂರು ಮಂದಿ ಪುರುಷರು* (ವ.2): ಆದಿ. 19:1 ರೊಂದಿಗಿನ ಹೋಲಿಕೆಯು ಈ ಮೂರು ಮಂದಿ ಪುರುಷರಲ್ಲಿ ಇಬ್ಬರು ದೇವದೂತರಾಗಿದ್ದರೆಂದು ತಿಳಿಸುತ್ತದೆ. ಮೂರನೇಯವನು ಯೆಹೋವನ ದೂತನಾಗಿರಬಹುದು ( ಹೋಲಿಸಿ ಆದಿಕಾಂಡ ಅಧ್ಯಯನ 12).

ವ.10: ವಚನ 14 ರೊಂದಿಗೆ ಹೋಲಿಸಿ

**ಈ. ಪ್ರಶ್ನೆಗಳು**

1. ಈ ಕಥೆಯಲ್ಲಿ ಕರ್ತನು ಅಬ್ರಹಾಮನಿಗೆ ಹೇಗೆ ಕಾಣಿಸಿಕೊಂಡನು?
2. ಈ ಮೂವರು ಸಂದರ್ಶಕರಿಗಾಗಿ ಅಬ್ರಹಾಮನು ಯಾವ ಬಗೆಯ ಆಹಾರವನ್ನು ಸಿದ್ಧಪಡಿಸಿದನು?
3. ಈ ಮೂರು ಮಂದಿ ಪುರುಷರ ಬೇಟಿಯು ದೇವರ ಬೇಟಿ ಸಹ ಆಗುತ್ತೆಂಬುದನ್ನು ನಾವು ಯಾವ ವಚನದಲ್ಲಿ ತಿಳಿದುಕೊಳ್ಳುತ್ತೇವೆ?
4. ಯಾಕೆ ಸಾರಳು ತಾನು ನಕ್ಕಿದನ್ನು ಅಲ್ಲಗಳೆದಳು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ವಚನ 14 ರಲ್ಲಿನ ಪ್ರಶ್ನೆಯನ್ನು ("ಯೆಹೋವನಿಗೆ ಅಸಾಧ್ಯವಾದದ್ದುಂಟೋ") ನಾವು ಹೇಗೆ ಅರ್ಥೈಸಿಕೊಳ್ಳಬೇಕಿದೆ?
2. ಈ ಕಥೆಯಲ್ಲಿ ಸಾರಳ ಯಾವ ಚಿತ್ರಣವನ್ನು ಕಾಣುತ್ತೇವೆ? ನಿಮ್ಮ ಉತ್ತರಗಳಿಗೆ ಕಾರಣ ಕೊಡಿರಿ.
3. ಈ ಕಥೆಯಲ್ಲಿ ಅಬ್ರಹಾಮನ ಯಾವ ಚಿತ್ರಣ ಕಾಣುತ್ತೇವೆ? ಕಾರಣ ಕೊಡಿರಿ.
4. ವಚನ 14 ಅನ್ನು ಪೌಲನು ("ಬರುವ ವರುಷದ ಇದೇ ಕಾಲದಲ್ಲಿ ನಾನು ನಿನ್ನ ಬಳಿಗೆ ಬಂದಾಗ ಸಾರಳಿಗೆ ಮಗನಿರುವನು") ರೋಮಾಪುರದ ಪತ್ರಿಕೆಯಲ್ಲಿ ಬಳಸುತ್ತಾನೆ. ಈ ವಾಕ್ಯವನ್ನು ಉಪಯೋಗಿಸುವದರಿಂದ ಆತನು ಹೇಳುವ ಅಂಶವೇನು (ಓದಿ ರೋಮಾ. 9:6-9)?

5. ಈ ವಾಕ್ಯಭಾಗದ ಕುರಿತು ನಿಮ್ಮ ಆಲೋಚನೆ ಮತ್ತು ಭಾವನೆಗಳನ್ನು ಹಂಚಿಕೊಳ್ಳಿರಿ.

**ಆದಿಕಾಂಡ ಅಧ್ಯಯನ 15: ಸೊದೋಮ್ ಮತ್ತು ಗೊಮೋರಗಳ ನಾಶನ**

**ಅ. ಪೀಠಿಕೆ**

ದೇವರು ಅಬ್ರಹಾಮನಿಗೆ ತಾನು ಸೊದೋಮ್ ಮತ್ತು ಗೊಮೋರ ಪಟ್ಟಣಗಳನ್ನು ನಾಶ ಮಾಡಲು ಹೊರಟಿರುವೆನೆಂಬುದಾಗಿ ಹೇಳುತ್ತಾನೆ. ಆಗ ಅಬ್ರಹಾಮನು ದೇವರ ಬಳಿ ತಾಳ್ಮೆಯಿಂದಿದ್ದು ದುಷ್ಟರೊಂದಿಗೆ ಇರುವ ನೀತಿವಂತರನ್ನೂ ನಾಶ ಮಾಡಬಾರದೆಂದು ಬೇಡಿಕೊಂಡನು. ಅಂತಿಮವಾಗಿ ದೇವರು ಅಲ್ಲಿ ಹತ್ತು ಮಂದಿ ನೀತಿವಂತರು ಸಿಕ್ಕರೆ ಆ ಪಟ್ಟಣವನ್ನು ನಾಶ ಮಾಡುವುದಿಲ್ಲವೆಂದು ಮಾತು ಕೊಡುತ್ತಾನೆ. ಸಾಯಾಂಕಾಲದ ವೇಳೆ ಇಬ್ಬರು ದೂತರು ಸೊದೋಮಿಗೆ ಬಂದರು ಮತ್ತು ಲೋಟನು ಅವರನ್ನು ತನ್ನ ಮನೆಗೆ ಕರೆಯುತ್ತಾನೆ. ರಾತ್ರಿಯ ವೇಳೆ ಸೊದೋಮಿನ ಪಟ್ಟಣದವರು ಲೋಟನ ಮನೆಯನ್ನು ಸುತ್ತುವರೆದು ಲೋಟನ ಬಳಿ ಆ ಇಬ್ಬರು ಅತಿಥಿಗಳನ್ನು ಹೊರಗೆ ತೆಗೆದುಕೊಂಡು ಬಾ, ತಾವು ಅವರೊಂದಿಗೆ ಸಂಗಮ ಮಾಡಬೇಕೆಂದು ಬೇಡಿಕೆಯಿಡುತ್ತಾರೆ. ಆದರೆ ಲೋಟನು ಅದನ್ನು ನಿರಾಕರಿಸಿ ತನ್ನ ಇಬ್ಬರು ಹೆಣ್ಣು ಮಕ್ಕಳನ್ನು ಅವರ ಬದಲಿಗೆ ಕೊಡುತ್ತಾನೆ. ಮುಂಜಾನೆಯ ವೇಳೆ ಲೋಟನೂ ಅವನ ಹೆಂಡತಿಯೂ ಮಕ್ಕಳೂ ದೂತರ ಮುಖಾಂತರ ಪಟ್ಟಣದ ಹೊರಗೆ ಕಳಿಸಲ್ಪಟ್ಟರು. "ಆಗ ಯೆಹೋವನು ಸೊದೋಮ್ ಗೊಮೋರಗಳ ಮೇಲೆ ಆಕಾಶದಿಂದ ಅಗ್ನಿಗಂಧಕಳನ್ನು ಸುರಿಸಿದನು" (ಆದಿ. 19:24).

**ಆ. ಓದಿರಿ**

ಆದಿ. 18:16 – 19:29

**ಇ. ಟಿಪ್ಪಣಿಗಳು**

*ಸೊದೋಮ ಗೊಮೋರ* (ಆದಿ. 18:16, 20): ಸೊದೋಮ್ ಮೃತ ಸಮುದ್ರದ ಸಮೀಪವಿರುವ ಪಟ್ಟಣವಾಗಿದೆ, ಆದರೆ ಇದರ ನಿರ್ದಿಷ್ಟ ಸ್ಥಳ ತಿಳಿದಿಲ್ಲ, ಗೊಮೋರ ಸಹ ಇದೇ ಸ್ಥಳದಲ್ಲಿದೆ.

*ಆ ಊರಿನವರ ಪಾಪವು ಎಷ್ಟೋ ಘೋರವಾದದ್ದು* (ವ.18:20): ಆದಿ. 13:13 ರಲ್ಲಿನ "ಸೊದೋಮ್ ಪಟ್ಟಣದವರು ದುಷ್ಟರೂ ಯೆಹೋವನಿಗೆ ಮಹಾಪರಾಧಿಗಳು ಆಗಿದ್ದರು" ಇದರೊಂದಿಗೆ ಹೋಲಿಸಿ.

*ನೋಡಿ* (ವ.18:21): ದೇವರು ಕೇವಲ ಒಳ್ಳೆಯ ಉದ್ದೇಶದಿಂದ ಕಾರ್ಯ ಮಾಡುತ್ತಾನೆಂಬುದಾಗಿ ಈ ಅಲಂಕಾರಿಕ ಹೇಳಿಕೆಯಾಗಿದೆ. ಆ ಪಟ್ಟಣಗಳ ಮೇಲೆ ನ್ಯಾಯತೀರ್ಪನ್ನು ವಿಧಿಸುವುದಕ್ಕಿಂದ ಮೊದಲೇ ದೇವರಿಗೆ ಸೊದೋಮಿನಲ್ಲಿನ ಸ್ಥಿತಿಯ ಬಗ್ಗೆ ವೈಯಕ್ತಿಕ ತಿಳುವಳಿಕೆಯಿತ್ತು.

*ಸ್ವಾಮಿ ... ಸ್ವಾಮಿ* (18:27, 30, 31, 32, 33): ತನ್ನ ವಿಜ್ಞಾಪನೆಯಲ್ಲಿ ಅಬ್ರಹಾಮನು ಈ ಹಿಂದಿನ ಕಥೆಯಲ್ಲಿನ ಸಂದರ್ಶಕರೊಂದಿಗೆ ಹೇಳಿದಂತೆ ದೇವರನ್ನು "ಸ್ವಾಮಿ" ಎಂದು ಕರೆಯುತ್ತಾನೆ. ಆತನು ದೇವರು "ಯೆಹೋವ" ಎಂಬ ವೈಯಕ್ತಿಕ ಹೆಸರನ್ನು ಬಳಸುವುದಿಲ್ಲ. ಹಾಗಾಗಿ ಕನ್ನಡದ NIBV ಭಾಷಾಂತರ ತಪ್ಪಾಗಿದೆ. ವಚನ 17-22 ರಲ್ಲಿ ದೇವರ ಹೆಸರನ್ನು ಬಳಸಿದಂತೆ ನಿರೂಪಕನು ವಚನ 33 ರಲ್ಲಿ ಮುಂದುವರೆಸುತ್ತಾನೆ.

*ತನ್ನ ಸ್ಥಳಕ್ಕೆ* (18:33): ಅಬ್ರಹಾಮನ ಮನೆಯು ಮಮ್ರೇತೋಪಿನ ಬಳಿಯಲ್ಲಿತ್ತು (18:1).

*ಊರ ಬಾಗಲಲ್ಲಿ* (19:1): ಲೋಟನು ನಗರ ಸಭೆಯ ಸದಸ್ಯನಾಗಿದ್ದಿರಬಹುದೆಂಬುದನ್ನು ಸೂಚಿಸುತ್ತದೆ.

*ಚೋಗರ್* (19:22): ಈ ಹೆಸರಿನ ಅರ್ಥ "ಸಣ್ಣ" ಎಂದಾಗಿದೆ.

**ಈ. ಪ್ರಶ್ನೆಗಳು**

1. ಯಾಕೆ ದೇವರು ತನ್ನ ಯೋಜನೆಯನ್ನು ಅಬ್ರಹಾಮನಿಗೆ ತಿಳಿಸಬೇಕೆಂದು ನಿರ್ಧರಿಸಿದನು?
2. ಯಾಕೆ ದೇವರು ಸೊದೋಮನ್ನು ನೋಡಲು ಬಂದನು?
3. ಲೋಟನ ಹೆಣ್ಣು ಮಕ್ಕಳೊಂದಿಗೆ ನಿಶ್ಚಯಗೊಂಡಿದ್ದ ಪುರುಷರಿಗೇನಾಯಿತು?
4. ಲೋಟನ ಹೆಂಡತಿಗೇನಾಯಿತು? ಯಾಕೆ?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. "ಅಬ್ರಹಾಮನು ಸೊದೋಮಿಗಾಗಿ ವಿಜ್ಞಾಪನೆ ಮಾಡಿಕೊಂಡ" ಕಥೆಯನ್ನು ಅಭ್ಯಾಸಿಸಿರಿ

   (ಆದಿ. 18:16 – 35). ಅನಂತರ ಈ ಪ್ರಶ್ನೆಗಳಿಗೆ ಉತ್ತರಿಸಿರಿ:

   ಅ. ಯಾಕೆ ವಚನ 23 ರಲ್ಲಿ ಅಬ್ರಹಾಮನು ದೇವರಿಗೆ ಕೇಳುವ ಪ್ರಶ್ನೆಯು ಆಶ್ಚರ್ಯಕರವಾಗಿದೆ?

   ಆ. ಯಾಕೆ ಅಬ್ರಹಾಮನು ಸೊದೋಮಿಗಾಗಿನ ತನ್ನ ವಿಜ್ಞಾಪನೆಯನ್ನು ಸೀಮಿತಗೊಳಿಸಿದನೆಂಬುದಾಗಿ ನೀವು ಯೋಚಿಸುವಿರಿ? ಗೊಮೋರದ ಕುರಿತೇನು?

   ಇ. ವಚನ 33 ಯಾಕೆ ಅಬ್ರಹಾಮನೊಂದಿಗೆ ಮಾತಾಡುವುದನ್ನು ಮುಗಿಸಿದನೆಂಬುದಾಗಿ ನೀವು ಆಲೋಚಿಸಿರಿವಿರಿ?
2. ಈ ಕಥೆಯಲ್ಲಿ ಅಬ್ರಹಾಮನ ಚಿತ್ರಣವೇನು? ಕಾರಣ ಕೊಡಿರಿ.
3. ಈ ಕಥೆಯಲ್ಲಿ ಲೋಟನ ಕುರಿತ ಚಿತ್ರಣವೇನು? ಕಾರಣ ಕೊಡಿರಿ.
4. ಈ ವಾಕ್ಯಭಾಗದ ಕುರಿತು ನಿಮ್ಮ ಆಲೋಚನೆ ಮತ್ತು ಭಾವನೆಗಳನ್ನು ಹಂಚಿಕೊಳ್ಳಿರಿ.

**ಆದಿಕಾಂಡ ಅಧ್ಯಯನ 16: ಇಸಾಕನ ಜನನ, ಹಾಗರ್ ಮತ್ತು ಇಷ್ಮಾಯೇಲ್**

**ಅ. ಪೀಠಿಕೆ**

ದೇವರು ಸಾರಳಿಗೆ ಮಾಡಿದ ವಾಗ್ದಾನವನ್ನು ಉಳಿಸಿಕೊಂಡನು. ಆಕೆಯು ಗರ್ಭಿಣಿಯಾಗಿ ಒಬ್ಬ ಮಗನಿಗೆ ಜನ್ಮಕೊಟ್ಟಳು. ಅಬ್ರಹಾಮನು ಆತನನ್ನು ಇಸಾಕನೆಂದು ಕರೆದು ಅವನಿಗೆ ಸುನ್ನತಿ ಮಾಡಿಸಿದನು. ಕೆಲ ದಿನಗಳಾದ ಮೇಲೆ ಸಾರಳು ಅಬ್ರಹಾಮನಿಗೆ ಹಾಗರ ಮತ್ತು ಇಷ್ಮಾಯೇಲನನ್ನು ದೂರ ಕಳಿಸಬೇಕೆಂದು ಹೇಳಿದಳು. ಹಾಗರ್ ಮತ್ತು ಆ ಹುಡುಗನು ಕಾಡಿನೊಳಗೆ ಹೋದರು. ಅವರ ಬಳಿ ಇದ್ದ ನೀರು ಖಾಲಿಯಾದಾಗ ಸಾಯಬೇಕೆಂದು ಕೂತುಕೊಂಡಿದ್ದರು. ಆದರೆ ಆ ಹುಡುಗನ ಮೊರೆಯನ್ನು ದೇವರು ಕೇಳಿ ಅವರನ್ನು ರಕ್ಷಿಸಿದನು.

**ಆ. ಓದಿರಿ**

ಆದಿಕಾಂಡ 21:1-21

**ಇ. ಟಿಪ್ಪಣಿಗಳು**

*ಇಸಾಕನು* (ವ.3): ಈ ಹೆಸರಿನ ಅರ್ಥ "ನಗುತ್ತಾನೆ" ಎಂದಾಗಿದೆ.

*ಬೆಳೆದು* (ವ.8): ಆ ದಿನಗಳಲ್ಲಿ ಕೂಸುಗಳು ಎರಡು ಅಥವಾ ಮೂರು ವರ್ಷ ಪ್ರಾಯವಾದಾಗ ಬೆಳೆದು ಮೊಲೆ ಬಿಡುತ್ತಿದ್ದವು. ಹೀಗಾಗಿ ವ.7 ವ.8 ರ ನಡುವೆ ಕೆಲವು ವರ್ಷಗಳು ಕಳೆದಿರಬೇಕು.

*ದಾಸಿಯ ಮಗನು* (ವ.10): ಈ ಸಮಯದಲ್ಲಿ ಅಬ್ರಹಾಮ ಮತ್ತು ಹಾಗರಳ ಮಗನಾದ ಇಷ್ಮಾಯೇಲನಿಗೆ ಸುಮಾರು 17 ವರ್ಷ ಪ್ರಾಯವಾಗಿದ್ದಿರಬಹುದು.

*ಇಸಾಕನಿಂದ ಹುಟ್ಟುವವರೇ ನಿನ್ನ ಸಂತತಿ ಅನ್ನಿಸಿಕೊಳ್ಳುವರು* (ವ.17): ಈ ಹೇಳಿಕೆಯು ಹೊಸ ಒಡಂಬಡಿಕೆಯಲ್ಲಿ ಎರಡು ಬಾರಿ ಬಳಸಲ್ಪಟ್ಟಿದೆ: ರೋಮ 9:17 ರಲ್ಲಿ ಪೌಲನಿಂದ ಮತ್ತು ಇಬ್ರಿಯರಿಗೆ 11:18ರಲ್ಲಿ.

*ಬೇರ್ಷೆಬ* (ವ.14): ಇದು ಕಾನಾನಿನ ದಕ್ಷಿಣ ಭಾಗದಲ್ಲಿನ ಒಂದು ಪ್ರಮುಖ ಪಟ್ಟಣವಾಗಿದೆ.

*ದೇವರಿಗೆ ಕೇಳಿಸಿತು* (ವ.17): ಇಷ್ಮಾಯೇಲ ಎಂದರೆ "ದೇವರು ಕೇಳುತ್ತಾನೆ" ಎಂದಾಗಿದೆ.

*ಪಾರಾನಿನ ಅರಣ್ಯ* (ವ.21): ಈ ಅರಣ್ಯವು ಸೀನಾಯಿ ಪ್ರಾಂತ್ಯದ ಒಂದು ಭಾಗವಾಗಿದೆ. (ವಿಮೋಚನಕಾಂಡ ನಕ್ಷೆಯನ್ನು ನೋಡಿ)

**ಈ. ಪ್ರಶ್ನೆಗಳು**

1. ಇಸಾಕನು ಹುಟ್ಟಿದ ಮೇಲೆ ಸಾರಳು ಏನನ್ನು ಮಾಡಿದಳು? ಯಾಕೆ ಆಕೆ ಹಾಗೆಂದಳೆಂಬುದಾಗಿ ನೀವು ಯೋಚಿಸುವಿರಿ?
2. ಯಾಕೆ ಸಾರಳು ಇಷ್ಮಾಯೇಲನನ್ನು ತನ್ನ ಕುಟುಂಬದೊಂದಿಗೆ ಇರಲು ಬಯಸಲಿಲ್ಲ? ಆಕೆಯ ಮನವಿಯು ಸಮಂಜಸವಾದದ್ದು ಎಂಬುದಾಗಿ ನೀವು ಯೋಚಿಸುವಿರಾ?
3. ಇಷ್ಮಾಯೇಲನ ಕುರಿತಾಗಿ ದೇವರು ಅಬ್ರಹಾಮನಿಗೆ ಏನೆಂದು ವಾಗ್ದಾನ ಮಾಡಿದನು?
4. ದೇವರು ಹಾಗರ್ ಮತ್ತು ಇಷ್ಮಾಯೇಲನನ್ನು ಹೇಗೆ ರಕ್ಷಿಸಿದನು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಯಾಕೆ ಅಬ್ರಹಾಮನು ಹಾಗರ್ ಮತ್ತು ಇಷ್ಮಾಯೇಲರನ್ನು ದೂರ ಕಳಿಸುವುದರ ಕುರಿತು ಸಾರಯಳ ಮನವಿಯ ಬಗ್ಗೆ ಬೇಸರಗೊಂಡನು?

2. ಈ ನಾಲ್ಕು ದೃಶ್ಯಗಳಲ್ಲಿ ಅಬ್ರಹಾಮನು ಹೇಗೆ ಭಾವಿಸಿದನೆಂಬುದಾಗಿ ನೀವು ಯೋಚಿಸುವಿರಿ? ನಿಮ್ಮ ಕಲ್ಪನೆಗಳನ್ನುಪಯೋಗಿಸಿ ಪರಸ್ಪರ ಒಬ್ಬರಿಗೊಬ್ಬರು ಹಂಚಿಕೊಳ್ಳಿರಿ:

   ಅ. ಇಸಾಕನು ಹುಟ್ಟಿದ್ದು (ವ.1-5).

   ಆ. ಸಾರಳು ಅಬ್ರಹಾಮನಿಗೆ ಇಷ್ಮಾಯೇಲ ಮತ್ತು ಹಾಗರಳನ್ನು ದೂರ ಕಳಿಸಬೇಕೆಂದು ಹೇಳುತ್ತಾಳೆ.

   ಇ. ದೇವರು ಅಬ್ರಹಾಮನಿಗೆ ಸಾರಳು ಹೇಳಿದಂತೆಯೇ ಆಗಲಿ ಎಂದು ಹೇಳುತ್ತಾನೆ (ವ.11-13)

   ಈ. ಅಬ್ರಹಾಮನು ನೀರು ಮತ್ತು ಆಹಾರವನ್ನು ಸಿದ್ಧಪಡಿಸಿ ಮರುದಿನ ಮುಂಜಾನೆ ಹಾಗರ್ ಮತ್ತು ಇಷ್ಮಾಯೇಲರನ್ನು ಕಳುಹಿಸಿಕೊಡುತ್ತಾನೆ (ವ.14).

3. ಈ ನಾಲ್ಕು ದೃಶ್ಯಗಳಲ್ಲಿ ಹಾಗರಳು ಹೇಗೆ ಭಾವಿಸಿರಬಹುದೆಂಬುದಾಗಿ ನೀವು ಆಲೋಚಿಸಿರಿರುವಿರಿ? ನಿಮ್ಮ ಕಲ್ಪನೆಗಳನ್ನು ಉಪಯೋಗಿಸಿ ಪರಸ್ಪರ ಒಬ್ಬರಿಗೊಬ್ಬರು ಹಂಚಿಕೊಳ್ಳಿರಿ.

   ಅ. ಕೆಟ್ಟ ಸುದ್ದಿಗಳು: ಆಕೆ ಮತ್ತು ಇಷ್ಮಾಯೇಲರು ಮರುದಿನ ಮುಂಜಾನೆ ಹೊರಡಬೇಕು.

   ಆ. ಬೀಳ್ಕೊಡುಗೆ (ವ.14)

   ಇ. "ಮಗುವು ಸಾಯುವುದನ್ನು ನೋಡಲಾರೆನು" (ವ.15-16)

   ಈ. ದೇವರ ರಕ್ಷಣೆ (ವ.17-19)

4. ಈ ವಾಕ್ಯಭಾಗದ ಕುರಿತು ನಿಮ್ಮ ಆಲೋಚನೆ ಮತ್ತು ಭಾವನೆಗಳನ್ನು ಹಂಚಿಕೊಳ್ಳಿರಿ.

**ಆದಿಕಾಂಡ ಅಧ್ಯಯನ 17: ಅಬ್ರಹಾಮನು ಪರೀಕ್ಷಿಸಲ್ಪಟ್ಟದ್ದು**

**ಅ. ಪೀಠಿಕೆ**

"ಈ ಸಂಗತಿಗಳು ಆದ ಮೇಲೆ ದೇವರು ಅಬ್ರಹಾಮನನ್ನು ಪರಿಶೋಧಿಸಿದನು" (ಆದಿ. 22:1). ದೇವರು ಅಬ್ರಹಾಮನಿಗೆ ತನ್ನ ಒಬ್ಬನೇ ಮಗನಾದ ಇಸಾಕನನ್ನು ಮೊರೀಯ ದೇಶಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಆತನನ್ನು ಸರ್ವಾಂಗ ಹೋಮವಾಗಿ ಅರ್ಪಿಸಬೇಕೆಂದು ಹೇಳುತ್ತಾನೆ. ಅಬ್ರಹಾಮನು ವಿಧೇಯನಾದನು. ಮರುದಿನ ಬೆಳಿಗ್ಗೆ ಆತನು ಕೆಲ ಕಟ್ಟಿಗೆಯನ್ನು ತೆಗೆದುಕೊಂಡು ತನ್ನ ಮಗ ಮತ್ತು ಇಬ್ಬರು ಸೇವಕರೊಂದಿಗೆ ಬೇರ್ಷೆಬದಿಂದ ಹೊರಡುತ್ತಾನೆ. ಅವರು ಅಲ್ಲಿಗೆ ಬಂದಾಗ ಅಬ್ರಹಾಮನು ವೇದಿಯನ್ನು ಕಟ್ಟಿ, ಕಟ್ಟಿಗೆಯನ್ನು ಒಟ್ಟಿ ತನ್ನ ಮಗನ ಕೈಕಾಲುಗಳನ್ನು ಕಟ್ಟಿ ವೇದಿಯ ಕಟ್ಟಿಗೆಯ ಮೇಲೆ ಇಡುತ್ತಾನೆ. ತನ್ನ ಮಗನನ್ನು ವಧಿಸಲು ಕತ್ತಿಯನ್ನು ಎತ್ತಿದೊಡನೆಯೇ ಯೆಹೋವನ ದೂತನು ಅಬ್ರಹಾಮನೇ ಎಂದು ಕರೆದು ಆ ಹುಡುಗನಿಗೆ ಏನೂ ಮಾಡಬೇಡ ಎಂದು ಹೇಳಿದನು. ಅಬ್ರಹಾಮನು ಕಣ್ಣೆತ್ತಿ ನೋಡಿದಾಗ ಪೊದೆಯಲ್ಲಿ ಸಿಕ್ಕಿಕೊಂಡ ಟಗರನ್ನು ಕಾಣುತ್ತಾನೆ. ಅವನು ಹೋಗಿ ಅದನ್ನು ಹಿಡಿದು ತಂದು ತನ್ನ ಮಗನಿಗೆ ಬದಲಾಗಿ ಹೋಮ ಮಾಡಿದನು" (22:13). ಅನಂತರ ಯೆಹೋವನ ದೂತನು ಪುನ: ಮಾತನಾಡಿ ಅವನನ್ನು ಆಶೀರ್ವದಿಸಿದನು. ಅನಂತರ ಅಬ್ರಹಾಮನು ಬೇರ್ಷೆಬದಲ್ಲಿ ವಾಸವಾಗಿದ್ದನು.

**ಆ. ಓದಿರಿ**

ಆದಿಕಾಂಡ 22:1-19

**ಇ. ಟಿಪ್ಪಣಿಗಳು**

*ಈ ಸಂಗತಿಗಳು ಆದ ಮೇಲೆ* (ವ.1): ಹಿಂದಿನ ಕಥೆಯಾಗಿ ಅನೇಕ ವರುಷಗಳು ಉರುಳಿರಬಹುದು (ಆದಿ. 21:34 ರೊಂದಿಗೆ ಹೋಲಿಸಿ). ಈ ಇಸಾಕನು ಒಬ್ಬ ಯೌವನಸ್ಥ ಹುಡುಗನಾಗಿದ್ದನು.

*ಮೊರೀಯ ದೇಶದ* (ವ.2): ಮೊರೀಯವು ಯೆರೂಸಲೇಮಿನಲ್ಲಿದೆ ಮತ್ತು ಇಲ್ಲಿಯೇ ಸೊಲೊಮೋನನು ದೇವಾಲಯವನ್ನು ಕಟ್ಟಿದನೆಂಬುದಾಗಿ (ಅಬ್ರಹಾಮನ ನಂತರ ಸಾವಿರಾರು ವರ್ಷಗಳಾದ ಮೇಲೆ) 2.ಪೂರ್ವಕಾಲ ವೃತ್ತಾಂತ 3:1 ರಲ್ಲಿ ನಾವು ಓದುತ್ತೇವೆ. ಇಂದು ಅಲ್ಲಿ "ಕಲ್ಲಿನ ಗುಮ್ಮಟ"(ಡೋಮ್ ಆಫ್ ರಾಕ್)ವೆಂದು ಕರೆಯಲ್ಪಡುವ ಒಂದು ದೊಡ್ಡ ಮುಸ್ಲಿಂ ಕಟ್ಟಡವು ದೇವಾಲಯದ ಜಾಗದಲ್ಲಿದೆ. ಆ ಗುಮ್ಮಟದ ಕೆಳಗೆ ಒಂದು ಬಂಡೆಯಿದೆ, ಇದರ ಮೇಲೆಯೇ ಅಬ್ರಹಾಮನ ಇಸಾಕನನ್ನು ಮಲಗಿಸಿದ್ದನೆಂಬುದಾಗಿ ಜನರು ಹೇಳುತ್ತಾರೆ. ಕೆಲವು ಸತ್ಯವೇದ ಪಂಡಿತರ ಪ್ರಕಾರ, ಅಬ್ರಹಾಮನು ಇಸಾಕನನ್ನು ಕೊಂಡೊಯ್ದ ಮೊರೀಯ ಮತ್ತು ಸೊಲೊಮೋನನು ದೇವಾಲಯವನ್ನು ಕಟ್ಟಿದ ಮೊರೀಯ ಎಂಬ ಎರಡು ವಿಭಿನ್ನ ಮೊರೀಯಗಳಿವೆ.

*ಮಗನೂ* (ವ.5): ಈ ಇಬ್ರಿಯ ಪದವನ್ನು ಸಣ್ಣ ಹುಡುಗ ಅಥವಾ ಯೌವನಸ್ಥನಿಗೆ ಉಪಯೋಗಿಸಬಹುದಾಗಿದೆ.

**ಈ. ಪ್ರಶ್ನೆಗಳು**

1. ಈ ಕಥೆಯಲ್ಲಿ ಇಸಾಕ ಮತ್ತು ಅಬ್ರಹಾಮನ ನಡುವೆ ಒಂದು ಸಂಕ್ಷಿಪ್ತವಾದ ಸಂಭಾಷಣೆಯಿದೆ. ಅವರು ಯಾವುದರ ಬಗ್ಗೆ ಮಾತನಾಡುತ್ತಾರೆ?
2. ಅಬ್ರಹಾಮನು ಇಸಾಕನನ್ನು ಕೊಲ್ಲುವುದನ್ನು ತಡೆದ ನಂತರ ಯೆಹೋವನ ದೂತನು ಏನೆಂದು ಹೇಳುತ್ತಾನೆ?
3. ದೇವರು ಅಬ್ರಹಾಮನಿಗೆ ಏನೆಂದು ವಾಗ್ದಾನ ಮಾಡುತ್ತಾನೆ?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ಕಥೆಯಿಂದ ದೇವರಲ್ಲಿನ ಅಬ್ರಹಾಮನ ನಂಬಿಕೆ ಮತ್ತು ಭರವಸೆಯ ಬಗ್ಗೆ ನಾವೇನನ್ನು ಕಲಿಯುತ್ತೇವೆ?
2. ಈ ಕಥೆ ಮತ್ತು ಯೇಸುವಿನ ತ್ಯಾಗಮಯ ಮರಣದ ನಡುವಿನ ಸಮಾನತೆಗಳ ಪಟ್ಟಿ ಮಾಡಿರಿ.
3. ಈ ವಾಕ್ಯಭಾಗದ ಕುರಿತಾದ ನಿಮ್ಮ ಭಾವನೆ ಮತ್ತು ಆಲೋಚನೆಗಳನ್ನು ಹಂಚಿಕೊಳ್ಳಿರಿ.

**ಆದಿಕಾಂಡ ಅಧ್ಯಯನ 18: ಇಸಾಕ ಮತ್ತು ರೆಬೆಕ್ಕ**

**ಅ. ಪೀಠಿಕೆ**

ಸಾರಳು ಸಾಯುವಾಗ 127 ವರ್ಷ ಪ್ರಾಯದವಳಾಗಿದ್ದಳು ಮತ್ತು ಅಬ್ರಹಾಮನು ಆಕೆಯನ್ನು ಹಿತ್ತಿಯನಾದ ಎಫ್ರೋನಿನಿಂದ ಖರೀದಿಸಿದ ಮಕ್ಪೇಲದ ಗವಿಯಲ್ಲಿ ಸಮಾಧಿ ಮಾಡಿದನು (ಆದಿ. 23:1-2, 17-20). ಅನಂತರ ಅಬ್ರಹಾಮನು ತನ್ನ ಮಗನಾದ ಇಸಾಕನಿಗಾಗಿ ಹೆಣ್ಣನ್ನು ತರುವುದಕ್ಕಾಗಿ ತನ್ನ ಸ್ವದೇಶವಾದ ಮೆಸೊಪೊಟಮಿಯಾದ ಉತ್ತರ ಭಾಗದಲ್ಲಿರುವ ನಾಹೋರನ ಸೀಮೆಗೆ ತನ್ನ ಹಿರಿಯ ಸೇವಕನನ್ನು ಕಳುಹಿಸುತ್ತಾನೆ. ಆತನು ಅಲ್ಲಿಗೆ ಹೋದ ಮೇಲೆ ಊರ ಹೊರಗಿನ ಒಂದು ಬಾವಿಯ ಹತ್ತಿರ ನಿಂತು ಇಸಾಕನಿಗೆ ಒಂದು ಸರಿಬೀಳುವ ಹೆಣ್ಣನ್ನು ಕಂಡುಕೊಳ್ಳುವಂತೆ ಮಾರ್ಗದರ್ಶನ ಮಾಡಬೇಕೆಂದು ದೇವರಿಗೆ ಪ್ರಾರ್ಥಿಸುತ್ತಾನೆ. ಆ ಹೆಣ್ಣು ರೆಬೆಕ್ಕಳೆಂಬ ಅಬ್ರಹಾಮನ ತಮ್ಮನಾದ ನಾಹೋರನ ಮೊಮ್ಮಗಳಾಗಿದ್ದಳು. ಅನಂತರ ಸೇವಕನು ಆಕೆಯ ಮೂಗಿಗೆ ಮೂಗುತಿಯನ್ನೂ, ಆಕೆಯ ಕೈಗೆ ಚಿನ್ನದ ಬಳೆಯನ್ನೂ ಇಟ್ಟನು. ರೆಬೆಕ್ಕಳ ಅಣ್ಣನಾದ ಲಾಬಾನನು ಆ ಸೇವಕನನ್ನು ತಮ್ಮ ಮನೆಗೆ ಬಂದು ಉಳುಕೊಳ್ಳಬೇಕೆಂದು ಕೇಳಿಕೊಂಡನು. ಅವನಿಗೆ ಊಟಕ್ಕೆ ಬಡಿಸಿದಾಗ ಅವನು ತಾನು ಬಂದ ಉದ್ದೇಶವನ್ನು ತಿಳಿಸದೆ ಊಟ ಮಾಡುವುದಿಲ್ಲವೆಂದು ಹೇಳಿದನು. ಸೇವಕನು ಹೇಳಿದ್ದನ್ನೆಲ್ಲ ಲಾಬಾನನೂ ಅವನ ತಂದೆಯೂ ಕೇಳಿದಾಗ "ಈ ಕಾರ್ಯವು ಯೆಹೋವನಿಂದಲೇ ಉಂಟಾಯಿತು. ರೆಬೆಕ್ಕಳನ್ನು ನಿನ್ನ ವಶಕ್ಕೆ ಕೊಡುತ್ತೇವೆ; ಕರೆದುಕೊಂಡು ಹೋಗಬಹುದು; ಯೆಹೋವನು ಹೇಳಿದಂತೆಯೇ ಆಕೆ ನಿನ್ನ ದಣಿಯ ಮಗನಿಗೆ ಹೆಂಡತಿಯಾಗಲಿ" ಅಂದರು (ಆದಿ. 24:50-51). ಮರುದಿನವೇ ಸೇವಕನೂ ಆತನ ಜನರೂ ರಬೆಕ್ಕ ಮತ್ತು ಆಕೆಯ ದಾಸಿಯರೊಂದಿಗೆ ಕಾನಾನಿಗೆ ತಿರುಗಿ ಪ್ರಯಾಣಿಸಿದರು. ಇಸಾಕನು ರೆಬೆಕ್ಕಳನ್ನು ತನ್ನ ತಾಯಿಯಾದ ಸಾರಳ ಗುಡಾರಕ್ಕೆ ಕರೆದುಕೊಂಡು ಹೋಗಿ ಆಕೆಯನ್ನು ಮದುವೆಯಾದನು. ಅಬ್ರಹಾಮನು ತನ್ನ 175 ನೇ ಪ್ರಾಯದಲ್ಲಿ ಮರಣ ಹೊಂದಿದನು ಮತ್ತು ಆತನನ್ನು ಮಕ್ಪೇಲದಲ್ಲಿನ ಗವಿಯಲ್ಲಿ ಆತನ ಹೆಂಡತಿಯಾದ ಸಾರಳ ಸಮಾಧಿಯಲ್ಲಿಯೇ ಸಮಾಧಿ ಮಾಡಲಾಯಿತು (ಆದಿ. 25:7-11).

**ಆ. ಓದಿರಿ**

ಆದಿಕಾಂಡ 24:1-67

**ಇ. ಟಿಪ್ಪಣಿಗಳು**

*ಹಿರೀ ಸೇವಕ* (ವ.2): ಆದಿಕಾಂಡ 15:2 ರಲ್ಲಿ ತಿಳಿಸಿದ ದಮಸ್ಕದ ಎಲೀಯೇಜರನೇ ಇರಬಹುದು.

*ತೊಡೆಯ ಕೆಳಗೆ ಕೈಯಿಟ್ಟು* (ವ.4): ಒಬ್ಬರ ತೊಡೆ ಕೆಳಗೆ ಕೈಯಿಡುವದು ಪ್ರಮಾಣವನ್ನು ಇನ್ನೂ ಪವಿತ್ರ ಮತ್ತು ಗಂಭೀರವಾಗಿಸುತ್ತಿತ್ತು.

*ಅರಾಮ್ ಸೀಮೆಗೆ ... ನಾಹೋರನು* (ವ.10): ಇದು ಎರಡು ನದಿಗಳ ನಡುವಿನ ಸೀಮೆಯಾಗಿದೆ (ಯೂಫ್ರೇಟೀಸ್ ಮತ್ತು ಟೈಗ್ರೀಸ್ ). ಇದು ಮೆಸೊಪೊಟಮಿಯಾದ ವಾಯುವ್ಯಕ್ಕಿರುವ ಪದ್ದನ್ ಅರಾಮಿನ ಪಶ್ಚಿಮ ಭಾಗವನ್ನು ಸೂಚಿಸುತ್ತದೆ. ಅಬ್ರಹಾಮನು ತನ್ನ ಕುಟುಂಬದೊಂದಿಗೆ ಕಾನಾನಿಗೆ ಹೋಗುವುದಕ್ಕಿಂತ ಮುಂಚೆ ಇದ್ದ ಹಾರಾನ್ ಪಟ್ಟಣ ಇಲ್ಲಿಯೇ ಇತ್ತು. ನಾಹೋರ್ ಎಂಬುದು ಅದೇ ಸೀಮೆಯ ಪಟ್ಟಣವಾಗಿತ್ತು.

*ಒಂದು ಚಿನ್ನದ ಮೂಗುತಿ ಮತ್ತು ಎರಡು ಚಿನ್ನದ ಬಳೆಗಳನ್ನು* (ವ.22): ಮೂಗಿನ ಮೂಗುತಿಯು 5.5 ಗ್ರಾಂ ಮತ್ತು ಕೈಬಳೆಯು 110 ಗ್ರಾಂ ತೂಕವಿದ್ದವು.

*ಲಹೈರೋಹಿ ಬಾವಿ* (ವ.62): ಇದು ಕಾನಾನಿನ ದಕ್ಷಿಣ ಸೀಮೆಯ ಮರಳುಗಾಡಿನಲ್ಲಿನ ಬಾವಿಯ ಹೆಸರಾಗಿತ್ತು. ಇಲ್ಲಿಯೇ ದೇವರು ಹಾಗರಳು ಅಬ್ರಹಾಮ್ ಮತ್ತು ಸಾರಳಿಂದ ಓಡಿ ಹೋಗುತ್ತಿರುವಾಗ ಅವಳನ್ನು ಕಾಪಾಡಿದ್ದನು (ನೋಡಿ ಆದಿ.16:6-14).

**ಈ. ಪ್ರಶ್ನೆಗಳು**

1. ಅಬ್ರಹಾಮನಿಗೆ ಮಾಡಿದ ಪ್ರಮಾಣವನ್ನು ನೆರವೇರಿಸುವುದರ ಬಗ್ಗೆ ಸೇವಕನ ಕಾಳಜಿಯೇನಾಗಿತ್ತು?
2. ಅಬ್ರಹಾಮನ ಉತ್ತರದಲ್ಲಿನ ಮುಖ್ಯ ಅಂಶವೇನಾಗಿತ್ತು?
3. ಇಸಾಕನಿಗೆ ಸರಿಯಾದ ಕನ್ಯೆಯನ್ನು ಹುಡುಕುವಂತೆ ಮಾರ್ಗದರ್ಶನ ಮಾಡಬೇಕೆಂದು ಹಿರೀ ಸೇವಕನು ದೇವರ ಬಳಿ ಯಾವ ಗುರುತನ್ನು ಕೇಳಿದನು?
4. ಬೆತೂವೇಲನು ಯಾರು? ಮತ್ತು ಆತನು ಇಸಾಕನ ಸಂಬಂಧಿಯಾ?
5. ಲಾಬಾನನು ಸೇವಕನಿಗೆ ತೋರಿದ ಅತಿಥಿ ಸತ್ಕಾರವನ್ನು ವಿವರಿಸಿ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ವಾಕ್ಯಭಾಗದಲ್ಲಿನ ಈ ನಾಲ್ಕು ವ್ಯಕ್ತಿಗಳ ಯಾವ ಚಿತ್ರಣವು ನಮಗೆ ಸಿಗುತ್ತದೆ? ಕಾರಣ ಕೊಡಿರಿ.

   ಅ. ಅಬ್ರಹಾಮ

   ಆ. ಹಿರೀ ಸೇವಕ

   ಇ. ರೆಬೆಕ್ಕ

   ಈ. ಇಸಾಕ

2. ಈ ವಾಕ್ಯಭಾಗದ ಕುರಿತು ನಿಮ್ಮ ಆಲೋಚನೆ ಮತ್ತು ಭಾವನೆಗಳನ್ನು ಹಂಚಿಕೊಳ್ಳಿರಿ. ಇದರಿಂದ ನಿಮಗೆ ಸಿಗುವ ಒಳನೋಟಗಳೇನು?
3. ಈ ಸುಂದರವಾದ ಕಥೆಯನ್ನು "ಇಸಾಕನಿಗಾಗಿ ಒಂದು ಕನ್ಯೆ" ಎಂಬ ನಾಟಕಕ್ಕೆ ಅಳವಡಿಸಿರಿ. ಸಂಭಾಷಣೆಯನ್ನೆಲ್ಲಾ ಸೇರಿಸಿರಿ.

**ಆದಿಕಾಂಡ ಅಧ್ಯಯನ 19: ಯಾಕೋಬ ಮತ್ತು ಏಸಾವ**

**ಅ. ಪೀಠಿಕೆ**

ರೆಬೆಕ್ಕಳು ಅವಳಿ ಮಕ್ಕಳಿಗೆ ಜನ್ಮಕೊಟ್ಟಳು. ಏಸಾವನು ಹುಟ್ಟಿದ ಕೂಡಲೇ ಯಾಕೋಬನು ಹುಟ್ಟಿದನು. ಆದರೆ ಏಸಾವನು ಆಹಾರಕ್ಕಾಗಿ ಯಾಕೋಬನಿಗೆ ತನ್ನ ಚೊಚ್ಚಲತನದ ಹಕ್ಕನ್ನು ಮಾರಿಬಿಟ್ಟನು. ಹೀಗೆ ಏಸಾವನು ತನ್ನ ಚೊಚ್ಚಲತನದ ಹಕ್ಕನ್ನು ತಾತ್ಸಾರಮಾಡಿದನು (ವ.25:34). ಇಸಾಕನಿಗೆ ಮುಪ್ಪಿನಿಂದ ಕಣ್ಣು ಕಾಣಲಾರದಷ್ಟು ಮೊಬ್ಬಾಗಿರಲು (ಆದಿ. 27:1), ಅವನು ಏಸಾವನಿಗೆ ಬೇಟೆಯಾಡಿ ತನಗೋಸ್ಕರ ಊಟವನ್ನು ಸಿದ್ಧಮಾಡು ಅನಂತರ ತಾನು ನಿನ್ನನ್ನು ಆಶೀರ್ವದಿಸುತ್ತೇನೆ ಎಂದು ಹೇಳಿದನು. ರೆಬೆಕ್ಕಳು ಇದನ್ನು ಕೇಳಿಸಿಕೊಂಡಳು. ಆಕೆ ಯಾಕೋಬನ ಬಳಿ ಎರಡು ಆಡಿನ ಮರಿಗಳನ್ನು ತೆಗೆದುಕೊಂಡು ಬಾ, ತಾನು ರುಚಿಪದಾರ್ಥವನ್ನು ನಿನ್ನ ತಂದೆಗಾಗಿ ಸಿದ್ಧಮಾಡುತ್ತೇನೆ ಅನಂತರ ನೀನು ಆತನ ಬಳಿ ಆಶೀರ್ವದಿಸಬೇಕೆಂದು ಹೇಳು ಅಂದಳು. ಯಾಕೋಬನು ತನ್ನ ತಾಯಿ ಹೇಳಿದಂತೆಯೇ ಮಾಡಿದನು ಮತ್ತು ಏಸಾವನು ಬೇಟೆಯಿಂದ ಹಿಂತಿರುಗಿ ಬರುವುದಕ್ಕಿಂತ ಮೊದಲೇ ತನ್ನ ತಂದೆಯಿಂದ ಆಶೀರ್ವಾದ ಪಡಕೊಂಡನು. ಏಸಾವನು ಮೋಸಕ್ಕೊಳಗಾದನು.

**ಆ. ಓದಿರಿ**

ಆದಿಕಾಂಡ 25:21-24, 27:1-10

**ಇ. ಟಿಪ್ಪಣಿಗಳು**

*ಆಕೆ ಬಂಜೆಯಾಗಿರಲಾಗಿ* (25:21): ರೆಬೆಕ್ಕಳು 20 ವರ್ಷಗಳ ಕಾಲ ಬಂಜೆಯಾಗಿದ್ದಳು. (ವ.20ನ್ನುವ.26 ರೊಂದಿಗೆ ಹೋಲಿಸಿ)

*ಎರಡು ಜನಾಂಗಗಳು* (ವ.25:23): ಏಸಾವನು ಏದೋಮ್ಯರಿಗೆ ತಂದೆಯಾಗುವುದಕ್ಕಿದ್ದನು, ಯಾಕೋಬನು ಇಸ್ರಾಯೇಲ್ಯರ ತಂದೆಯಾಗಲಿಕ್ಕಿದ್ದನು.

*ಏಸಾವ … ಯಾಕೋಬ* (ವ.25:26): ಏಸಾವನೆಂದರೆ "ರೋಮವುಳ್ಳದ್ದು" ಎಂದರ್ಥ. ಇದು ಆತನ "ಏದೋಮ್" (ವ.30) ಎಂಬ ಇನ್ನೊಂದು ಹೆಸರನ್ನು ಸೂಚಿಸುತ್ತದೆ. ಇದು ಅನಂತರ ಆತನು ವಾಸಿಸಿದ ದೇಶದ ಹೆಸರಾಯಿತು. ಯಾಕೋಬ ಎಂದರೆ "ಹಿಮ್ಮಡಿ ಹಿಡಿದವ", ಅಲಂಕಾರಿಕವಾಗಿ ಇದು "ಮೋಸ ಮಾಡುವವ" ಎಂಬ ಅರ್ಥ ಕೊಡುತ್ತದೆ.

*ಚೊಚ್ಚಲತನದ ಹಕ್ಕು* (ವ.25:31): ಆ ದಿನಗಳಲ್ಲಿ ಚೊಚ್ಚಲತನದ ಹಕ್ಕು ಮೊದಲು ಹುಟ್ಟಿದ ಮಗನಿಗೆ ಸೇರಿದ ಬಾಧ್ಯತೆಯ ಹಕ್ಕನ್ನು ಒಳಗೊಂಡಿತ್ತು.

*ಚೊಚ್ಚಲತನದ ಹಕ್ಕು … ಆಶೀರ್ವಾದ* (ವ.27:36): "ಚೊಚ್ಚಲತನದ ಹಕ್ಕು" ಮತ್ತು "ಆಶೀರ್ವಾದಕ್ಕಾಗಿ"ನ ಇಬ್ರಿಯ ಪದಗಳು ಒಂದೇ ಆಗಿವೆ.

**ಈ. ಪ್ರಶ್ನೆಗಳು**

1. ಯಾಕೆ ರೆಬೆಕ್ಕ ತನ್ನ ಗರ್ಭಧಾರಣೆಯ ಬಗ್ಗೆ ಚಿಂತಿತಳಾದಳು?
2. ಯಾಕೆ ಏಸಾವನು ಕೆಲ ಪದಾರ್ಥಗಳಿಗಾಗಿ ತನ್ನ ಚೊಚ್ಚಲತನದ ಹಕ್ಕನ್ನು ಯಾಕೋಬನಿಗೆ ಮಾರಿದನು?
3. ಯಾಕೋಬನು ಹೇಗೆ ತನ್ನ ತಂದೆಗೆ ಮೋಸಮಾಡಿ ಆತನ ಆಶೀರ್ವಾದವನ್ನು ಪಡಕೊಂಡನು?
4. ಆತನನ್ನು ಆಶೀರ್ವದಿಸಿದ ನಂತರ ಇಸಾಕನು ಯಾಕೋಬನಿಗೆ ಏನೆಂದು ವಾಗ್ದಾನ ಮಾಡಿದನು?

5. ಯಾಕೋಬನು ತಮಗೆ ಮೋಸ ಮಾಡಿದನೆಂಬುದನ್ನು ತಿಳಿದಾಗ ಇಸಾಕ ಮತ್ತು ಏಸಾವರು ಹೇಗೆ ಪ್ರತಿಕ್ರಿಸಿದರು?

6. ಇಸಾಕನು ಏಸಾವನ ಮೇಲೆ ನುಡಿದ ದೈವೋಕ್ತಿಗಳ ನಾಲ್ಕು ಅಂಶಗಳನ್ನು ಪುನಃ ಹೇಳಿರಿ. ನಿಮ್ಮ ಪದಗಳನ್ನು ಉಪಯೋಗಿಸಿರಿ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಏಸಾವ ಮತ್ತು ಯಾಕೋಬನ ಜನನ ಮತ್ತು ಬಾಲ್ಯದ ಕುರಿತಾದ ವಾಕ್ಯಭಾಗವು (ಆದಿ. 25:21-28) ಆ ಇಬ್ಬರು ಸಹೋದರರ ಮತ್ತು ಅವರ ಸಂತತಿಯ ನಡುವಿನ ಭವಿಷ್ಯದ ಸಂಘರ್ಷಗಳ ಸುಳಿಯನ್ನು ಒಳಗೊಂಡಿದೆ. ಆ ಸುಳಿವುಗಳ ಪಟ್ಟಿ ಮಾಡಿರಿ.

2. ಈ ಎರಡು ವಾಕ್ಯ ಭಾಗಗಳಲ್ಲಿ ಈ ಮೂವರು ವ್ಯಕ್ತಿಗಳ ಯಾವ ಚಿತ್ರಣ ನಮಗೆ ಸಿಗುತ್ತದೆ. ಕಾರಣ ಕೊಡಿರಿ.

   ಅ. ರೆಬೆಕ್ಕ

   ಆ. ಏಸಾವ

   ಇ. ಯೋಕೋಬ

**ಆದಿಕಾಂಡ ಅಧ್ಯಯನ 20: ಪದ್ದನ್ ಅರಾಮಿನಲ್ಲಿ ಯಾಕೋಬನು**

**ಅ. ಪೀಠಿಕೆ**

ಏಸಾವನು ಯಾಕೋಬನ ಮೇಲೆ ತೀರಾ ಕೋಪಗೊಂಡು ಆತನನ್ನು ಕೊಲ್ಲಬೇಕೆಂದು ಆಲೋಚಿಸಿರಿದನು. ರೆಬಕ್ಕಳು ಇದನ್ನು ಕೇಳಿಸಿಕೊಂಡು ಯಾಕೋಬನಿಗೆ ಮೆಸೊಪೊಟಮಿಯಾದ ಪದ್ದನ್ ಅರಾಮಿನಲ್ಲಿರುವ ತನ್ನಣ್ಣನಾದ ಲಾಬಾನನ ಬಳಿಗೆ ಓಡಿ ಹೋಗಬೇಕೆಂದು ಹೇಳಿದಳು. ಆತನು ಬರುವಾಗ ಆತನ ತಂದೆಯಾದ ಇಸಾಕನು ಅವನನ್ನು ಆಶೀರ್ವದಿಸಿ ನೀನು ಕಾನಾನ್ಯ ಸ್ತ್ರೀಯರನ್ನು ಮದುವೆಯಾಗಬೇಡ ಆದರೆ ಮೆಸೊಪೊಟೋಮಿಯಾದಲ್ಲಿನ ತನ್ನ ಸೋದರ ಸಂಬಂಧಿಯಿಂದ ಹೆಣ್ಣನ್ನು ತೆಗೆದುಕೊಳ್ಳಬೇಕೆಂದು ಹೇಳಿದನು. ಹೀಗೆ ಯಾಕೋಬನು ಬೇರ್ಷದಬಲ್ಲಿನ ತನ್ನ ಮನೆಯನ್ನು ಬಿಡುತ್ತಾನೆ. ಒಂದು ರಾತ್ರಿ ಆತನು ಬಯಲಿನಲ್ಲಿ ಕಲ್ಲನ್ನು ತನ್ನ ತಲೆಗಿಂಬಾಗಿ ಇಟ್ಟುಕೊಂಡು ಮಲಗಿದನು. ರಾತ್ರಿ ವೇಳೆ ಆತನಿಗೊಂದು ಕನಸು ಬಿದ್ದಿತು. ಅದರಲ್ಲಿ ಆತನು ಆಕಾಶವನ್ನು ಮುಟ್ಟುವ ಒಂದು ಏಣಿಯನ್ನು ಕಂಡನು, ಅಲ್ಲಿ ದೇವರು ನಿಂತಿದ್ದನು. ದೇವರು ಯಾಕೋಬನಿಗೆ ಈ ರೀತಿ ವಾಗ್ದಾನ ಮಾಡಿದನು: *"ನಾನು ನಿನ್ನ ತಂದೆಯಾದ ಅಬ್ರಹಾಮನ ದೇವರೂ ಆಗಿರುವ ಯೆಹೋವನು. ನೀನು ಮಲಗಿಕೊಂಡಿರುವ ಈ ದೇಶವನ್ನು ನಿನಗೂ ನಿನ್ನ ಸಂತತಿಗೂ ಕೊಡುತ್ತೇನೆ. ನಿನ್ನ ಸಂತತಿಯು ಭೂಮಿಯ ಧೂಳಿನಂತೆ ಅಸಂಖ್ಯವಾಗುವದು; ನೀನು ಪೂರ್ವಪಶ್ಚಿಮದಕ್ಷಿಣೋತ್ತರ ದಿಕ್ಕುಗಳಿಗೆ ಹರಡಿಕೊಳ್ಳುವಿ. ನಿನ್ನ ಮೂಲಕವೂ ಭೂಮಿಯ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು"* (ಆದಿ:28:13-14). ಯಾಕೋಬನು ಈ ಸ್ಥಳವನ್ನು 'ಬೇತೇಲ್", ಎಂದು ಕರೆದನು. "ದೇವರ ಮನೆ" ಎಂಬುದು ಇದರರ್ಥ. ಅಲ್ಲದೆ ಅವನು ಹರಕೆಮಾಡಿಕೊಂಡನು.

ಯಾಕೋಬನು ಪದ್ದನ್ ಅರಾಮಿಗೆ ಬಂದಾಗ ಅಲ್ಲಿ ತನ್ನ ಸೋದರ ಮಾವನಾದ ಲಾಬಾನನನ್ನೂ ಅವನ ಮಗಳಾದ ರಾಹೇಲಳನ್ನು ಸಂಧಿಸಿದನು, ಅವರು ಆತನನ್ನು ತಮ್ಮ ಮನೆಯಲ್ಲಿ ಉಳುಕೊಳ್ಳಲು ಹೇಳಿದರು. ಯಾಕೋಬನು ರಾಹೇಲಳನ್ನು ಪ್ರೀತಿಸಿದನು, ಮತ್ತು ಆಕೆಗೋಸ್ಕರ ಏಳು ವರುಷ ಸೇವೆ ಮಾಡಿದನು. ಏಳು ವರುಷಗಳಾದ ಮೇಲೆ ಮದುವೆಯನ್ನು ಸಿದ್ದಪಡಿಸಲಾಯಿತು. ಯಾಕೋಬನು ಮದುವೆಯ ರಾತ್ರಿ ಮುಗಿಸಿ ಬೆಳಿಗ್ಗೆ ಎದ್ದಾಗ ಲಾಬಾನನು ಆತನಿಗೆ ರಾಹೇಲಳ ಬದಲಾಗಿ ಆಕೆಯ ಅಕ್ಕನಾದ ಲೇಯಳನ್ನು ಕೊಟ್ಟನೆಂಬುದನ್ನು ತಿಳುಕೊಂಡನು. ಆದರೆ ಲಾಬಾನನು ರಾಹೇಲಳನ್ನೂ ಆತನಿಗೆ ಕೊಡಲು ಸಂತೋಷಗೊಂಡನು, ಆದರೆ ಆತನು ಆಕೆಗಾಗಿ ಇನ್ನೂ ಏಳು ವರುಷ ಸೇವೆ ಮಾಡಬೇಕೆಂದು ಷರತ್ತನಿಟ್ಟನು. ಆದರೆ ಯಾಕೋಬನು ರಾಹೇಲಳನ್ನು ಲೇಯಳಿಗಿಂತ ಹೆಚ್ಚಾಗಿ ಪ್ರೀತಿಸಿದನು (ಆದಿ. 29:30). ದೇವರು ಲೇಯಳಿಗೆ ನಾಲ್ಕು ಮಂದಿ ಗಂಡು ಮಕ್ಕಳನ್ನು ಕೊಟ್ಟು ಆಶೀರ್ವದಿಸಿದನು. ರಾಹೇಲಳು ಬಂಜೆಯಾಗಿದ್ದಳು. ಆಗ ರಾಹೇಲಳು ತನ್ನ ದಾಸಿಯಾದ ಬಿಲ್ಹಳನ್ನು ಯಾಕೋಬನಿಗೆ ಹೆಂಡತಿಯಾಗುವುದಕ್ಕೆ ಕೊಟ್ಟಳು ಮತ್ತು ಆಕೆ ಆತನಿಗೆ ಎರಡು ಗಂಡು ಮಕ್ಕಳನ್ನು ಹೆತ್ತಳು. ಇದರಿಂದ ಲೇಯಳು ಬೇಸರಗೊಂಡು ತನ್ನ ದಾಸಿಯಾದ ಜಿಲ್ಪಳನ್ನು ಯಾಕೋಬನಿಗೆ ಕೊಡಲು ಆಕೆ ಎರಡು ಗಂಡು ಮಕ್ಕಳಿಗೆ ಜನ್ಮವಿತ್ತಳು. ಅನಂತರ ಲೇಯಳು ಇನ್ನಿಬ್ಬರು ಗಂಡು ಮಕ್ಕಳು ಮತ್ತು ಒಂದು ಮಗಳನ್ನು ಹೆತ್ತಳು. ಕೊನೆಗೂ ದೇವರು ರಾಹೇಲಳನ್ನು ನೆನಸಿಕೊಂಡು (ಆದಿ. 30:22) ಆಕೆಯ ಮೊರೆಯನ್ನು ಕೇಳಿದಾಗ ಆಕೆ ತನ್ನ ಮೊದಲ ಮಗನಾದ ಯೋಸೇಫನಿಗೆ ಜನ್ಮ ಕೊಟ್ಟಳು. ಯಾಕೋಬನು ಪದ್ದನ್ ಅರಾಮನ್ನು ಬಿಡಬೇಕೆಂದು ಯೋಚಿಸಿದನು, ಆದರೆ ಲಾಬಾನನು ಅವನಿಗೆ ಇಲ್ಲಿಯೇ ಇರು ಇದರಿಂದ ತಮ್ಮ ಮೇಲೆ ದೇವರ ಆಶೀರ್ವಾದವು ಇರುವುದೆಂಬುದಾಗಿ ಹೇಳಿದನು. ಯಾಕೋಬನು ತನಗೆ ಪ್ರತ್ಯೇಕ ಆಡುಕುರಿಗಳನ್ನು ಕೊಡುವುದಾದರೆ ಉಳುಕೊಳ್ಳುವೆನೆಂಬುದಾಗಿ ಮಾತು ಕೊಟ್ಟನು, ಲಾಬಾನನು ಒಪ್ಪಿದನು. ಕೆಲ ಕಾಲ ಕಳೆದ ಮೇಲೆ ಯಾಕೋಬನ ಪಶುಗಳು ಹೇರಳವಾಗಿ ಆತನು ಬಹು ಸಂಪತ್ತುಳ್ಳವನಾದನು. ಆಗ ಯಾಕೋಬನ ಮೇಲಿನ ಲಾಬಾನನ ಮುಖಭಾವ ಬದಲಾಯಿತು. ಹಾಗಾಗಿ ದೇವರು ಯಾಕೋಬನಿಗೆ ಪದ್ದನ್ ಅರಾಮನ್ನು ಬಿಟ್ಟು ಕಾನಾನಿಗೆ ಹಿಂತಿರುಗಿ ಹೋಗಬೇಕೆಂದು ಹೇಳಿದನು.

ಲಾಬಾನನಿಗೆ ಹೇಳದೇ ತನ್ನ ಹೆಂಡತಿಯರನ್ನೂ, ಮಕ್ಕಳನ್ನೂ, ತನಗಿದ್ದ ಎಲ್ಲಾ ಪಶುಗಳನ್ನೂ ಮತ್ತು ಸಂಪತ್ತನ್ನೆಲ್ಲಾ ತೆಗೆದುಕೊಂಡು ಹೊರಟನು. ಎರಡು ದಿನಗಳಾದ ಮೇಲೆ ಯಾಕೋಬನು ಪರಾರಿಯಾಗಿದ್ದಾನೆಂಬುದನ್ನು ಲಾಬಾನನು ತಿಳಿದುಕೊಂಡನು. ಆತನು ತನ್ನ ಬಂಧು ಜನರನ್ನು ಕೂಡಿಸಿಕೊಂಡು ಏಳು ದಿನ ಪ್ರಯಾಣ ಮಾಡಿ ಯಾಕೋಬನನ್ನು ಹಿಂದಟ್ಟಿ ಗಿಲ್ಯಾದ್ ಬೆಟ್ಟದ ಸೀಮೆಯಲ್ಲಿ ಅವನನ್ನು ಸಂಧಿಸಿದನು (ಆದಿ. 31:23). ಲಾಬಾನನು ಯಾಕೋಬನಿಗೆ ನೀನ್ಯಾಕೆ ನನಗೆ ಮೋಸಗೊಳಿಸಿ ಕಳ್ಳತನದಿಂದ ಓಡಿಬಂದೆ, ನನ್ನ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಮುದ್ದಿಡುವುದಕ್ಕೂ ಆಗದಂತೆ ಮಾಡಿದಿ ಎಂದು ಹೇಳಿದನು. ಹಾಗೆಯೇ ಆತನು "ನನ್ನ ದೇವರುಗಳನ್ನು ಕದ್ದದ್ದು ಯಾಕೆ?" ಎಂದು ಕೇಳಿದನು (ಆದಿ. 31:30). ಯಾಕೋಬನು ಆತನಿಗೆ ನಿನ್ನಿಂದ ಯಾರೂ ಏನನ್ನು ಕದ್ದಿಲ್ಲವೆಂದು ಹೇಳಿ ಲಾಬಾನನಿಗೆ ಗುಡಾರವನ್ನೆಲ್ಲಾ ಹುಡುಕಲು ಹೇಳಿದನು. ನಿಜವೆಂದರೆ ರಾಹೇಲಳು ಅವರ ಮನೆಯ ದೇವರುಗಳನ್ನು ತನ್ನ ತಂದೆಯ ಮನೆಯನ್ನು ಬಿಡುವಾಗ ಕದ್ದು ತಂದಿದ್ದಳು. ಆದರೆ ಅವು ಲಾಬಾನನಿಗೆ ಗುಡಾರದಲ್ಲಿ ಸಿಗದೆ ಹೋಯಿತು. ಯಾಕೋಬನು ಲಾಬಾನನ ಮೇಲೆ ಕೋಪಗೊಂಡು ತಾನು ಆತನ ಬಳಿ ಇಪ್ಪತ್ತು ವರ್ಷಗಳ ಕಾಲ ಸೇವೆ ಮಾಡಿದ ಸಂದರ್ಭದಲ್ಲಿ ಪಟ್ಟ ಬಾಧೆಗಳ ಪಟ್ಟಿಯನ್ನೆಲ್ಲ ಆತನ ಮುಂದಿಡುತ್ತಾನೆ. ಅನಂತರ ಅವರಿಬ್ಬರೂ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುತ್ತಾರೆ (ಆದಿ. 31:44).

**ಆ. ಓದಿರಿ**

ಆದಿಕಾಂಡ 27:41 – 31:55

**ಇ. ಟಿಪ್ಪಣಿಗಳು**

ಸ್ಥಳದ ಹೆಸರುಗಳಿಗಾಗಿ ಆದಿಕಾಂಡ ಅಧ್ಯಯನ 18 ಮತ್ತು ಫಲವತ್ತಾದ ಪ್ರದೇಶದ ನಕ್ಷೆ ನೋಡಿರಿ.

*ಹಿತ್ತಿಯರಾದ* (27:46): ಹಳೇ ಒಡಂಬಡಿಕೆಯ ಆರಂಭಿಕ ದಿನಗಳಲ್ಲಿ ಹಿತ್ತಿಯರು ವಿಶಾಲವಾದ ಫಲವತ್ತಾದ ಪ್ರದೇಶದಲ್ಲೆಲ್ಲಾ ಹರಡಿಕೊಂಡಿದ್ದರು, ಅಲ್ಲದೆ ಅವರು ಇಂದಿನ ಟರ್ಕಿಯನ್ನು ಹತೋಟಿಯಲ್ಲಿಟ್ಟುಕೊಂಡಿದ್ದರು. ಅಬ್ರಹಾಮನು ಮತ್ತು ಆತನ ಸಂತತಿಯವರು ಅದರ ಸಂಪರ್ಕದಲ್ಲಿದ್ದರು.

*ಬೇತೇಲ್* (28:19): ಇದರರ್ಥ "ದೇವರ ಮನೆ".

*ಮೊಮ್ಮಗ* (29:5): ಇಬ್ರಿಯ ಪಠ್ಯದಲ್ಲಿ (ಮತ್ತು ಕನ್ನಡದ NIBV ಭಾಷಾಂತರದಲ್ಲಿ) "ಮಗ" ಎಂದಿದೆ, ಇದು ಗಂಡು ಸಂತತಿಯನ್ನು ಸೂಚಿಸುತ್ತದೆ. ಲಾಬಾನನು ನಾಹೋರನ ಮೊಮ್ಮಗನಾಗಿದ್ದನು.

*ಸ್ವರವೆತ್ತಿ ಕಣ್ಣೀರುಸುರಿಸಿ* (29:11): ಯಾಕೋಬನು ಸಂತೋಷದಿಂದ ಅಳುತ್ತಾನೆ.

*ನನಗೂ* (30:3): "ನನ್ನ ತೊಡೆಯ ಮೇಲೆ" ಎಂಬ ಇಬ್ರಿಯ ಹೇಳಿಕೆಯು ಒಂದು ರೀತಿಯ ದತ್ತುತನವನ್ನು ಸೂಚಿಸುತ್ತದೆ.

*ಆದಕ್ಕೆ ಯೋಸೇಫನೆಂದು ಹೆಸರಿಟ್ಟಳು* (30:24): ಯೋಸೇಫ ಎಂದರೆ "ಹೆಚ್ಚಾಗಿ ದಯಪಾಲಿಸಲಿ" ಎಂದರ್ಥ.

*ಹತ್ತು ಸಾರಿ* (31:7): ಈ ಮಾತು 'ಯಾವಾಗಲೂ' ಎಂದರ್ಥವಾಗಿದೆ.

**ಈ. ಪ್ರಶ್ನೆಗಳು**

1. ಇಸಾಕನು ಯಾಕೋಬನಿಗೆ ಮಾಡುವ ಆಶೀರ್ವಾದವು ಏನೆಲ್ಲ ಒಳಗೊಂಡಿದೆ?

2. ಇಸಾಕನು ಯಾಕೋಬನನ್ನು ಆಶೀರ್ವದಿಸಿದ್ದನ್ನು ಕೇಳಿಸಿಕೊಂಡಾಗ ಏಸಾವನು ಹೇಗೆ ಪ್ರತಿಕ್ರಿಯಿಸಿದನು?

3. ಯಾಕೋಬನಿಗೆ ಬೇತೇಲಿನಲ್ಲಾದ ಕನಸಿನಲ್ಲಿ ದೇವರು ತನ್ನನ್ನು ಹೇಗೆ ಗುರುತಿಸಿಕೊಳ್ಳುತ್ತಾನೆ?

4. ಯಾಕೋಬನು ರಾಹೇಲಳನ್ನು ಹೇಗೆ ಸಂಧಿಸುತ್ತಾನೆ?

5. ಯಾಕೆ ಲಾಬಾನನು ಯಾಕೋಬನಿಗೆ ರಾಹೇಲಳ ಬದಲಿಗೆ ಲೇಯಳನ್ನು ಕೊಡುತ್ತಾನೆ?

6. ಯಾಕೆ ರಾಹೇಲಳು ತನ್ನ ಅಕ್ಕನ ಮೇಲೆ ಹೊಟ್ಟೆಕಿಚ್ಚುಪಟ್ಟಳು?

7. ಯಾಕೋಬನಿಗೆ ಹನ್ನೊಂದು ಮಂದಿ ಗಂಡು ಮಕ್ಕಳನ್ನು ಹೆತ್ತ ಸ್ತ್ರೀಯರು ಯಾರು?

8. ತಾನು ಒಪ್ಪಿಕೊಂಡ ಹದಿನಾಲ್ಕು ವರುಷಗಳ ನಂತರವೂ ಯಾಕೋಬನು ಯಾಕೆ ಲಾಬಾನನ ಬಳಿ ಉಳಿದುಕೊಳ್ಳುತ್ತಾನೆ?

9. ಯಾಕೆ ಯಾಕೋಬನು ಕೊನೆಗೂ ಕಾನಾನಿಗೆ ಹಿಂತಿರುಗಲು ಬಯಸುತ್ತಾನೆ?

10. ಲಾಬಾನನು ಗುಡಾರಗಳ ಬಳಿ ಹುಡುಕಲು ಬಂದಾಗ ರಾಹೇಲಳು ಹೇಗೆ ಆತನ ಮನೆಯ ವಿಗ್ರಹಗಳನ್ನು ಬಚ್ಚಿಟ್ಟಳು?

11. ಗಿಲ್ಯಾದಿನ ಮಿಚ್ಪಾದಲ್ಲಿನ ಲಾಬಾನ ಮತ್ತು ಯಾಕೋಬನ ನಡುವಿನ ಒಡಂಬಡಿಕೆಯ ಷರತ್ತುಗಳೇನಾಗಿದ್ದವು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಯಾಕೋಬನು ಬೇತೇಲಿನಲ್ಲಿ ದೇವರೊಂದಿಗೆ ಹರಕೆ ಮಾಡಿಕೊಂಡನು. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

2. ಗಿಲ್ಯಾದಿನ ಬೆಟ್ಟದ ಸೀಮೆಯಲ್ಲಿ ಯಾಕೋಬನನ್ನು ಬೆನ್ನಟ್ಟಿದಾಗ ಲಾಬಾನನು ಅವನ ಮೇಲೆ ಅನೇಕ ಆರೋಪಗಳನ್ನು ಹೊರಿಸಿದನು (ಆದಿ. 31:25-30). ಈ ಆರೋಪಗಳನ್ನು ನೋಡಿರಿ. ಯಾವುದು ಸಮಂಜಸವಾದದ್ದು ಮತ್ತು ಯಾವುದು ಸಮಂಜಸವಾದುದ್ದಲ್ಲವೆಂಬುದಾಗಿ ಯೋಚಿಸುವಿರಿ? ಯಾಕೆ?

3. ಲಾಬಾನನಿಗೆ ಯಾಕೋಬನ ಜನರ ಬಳಿ ತನ್ನ ದೇವರುಗಳು ಸಿಕ್ಕುವುದೇ ಇಲ್ಲ. ಇದರಿಂದ ಯಾಕೋಬನಿಗೆ ಕೋಪ ಬರುತ್ತದೆ. ಹಾಗಾಗಿ ಆತನು ಲಾಬಾನನ ಮೇಲೆ ಅನೇಕ ಆರೋಪಗಳನ್ನು ಮಾಡುತ್ತಾನೆ. ಆ ಆರೋಪಗಳನ್ನು ನೋಡಿರಿ. ಯಾವುವು ಸಮಂಜಸವಾದವುಗಳು ಮತ್ತು ಯಾವವು ಸಮಂಜಸವಾದವುಗಳಲ್ಲವೆಂಬುದಾಗಿ ನೀವು ಪರಿಗಣಿಸುವಿರಿ?

4. ಈ ಅಧ್ಯಯನದಿಂದ ನಾವು ಕಲಿಯಬಹುದಾದ ಕೆಲವು ಪ್ರಾಮುಖ್ಯ ಸಂಗತಿಗಳನ್ನು ಪಟ್ಟಿಮಾಡಿರಿ.

**ಆದಿಕಾಂಡ ಅಧ್ಯಯನ 21: ಯಾಕೋಬನು ಕಾನಾನಿಗೆ ಹಿಂತಿರುಗಿದ್ದು**

**ಅ. ಪೀಠಿಕೆ**

ಯಾಕೋಬನು ತನ್ನ ಹೆಂಡತಿ, ಮಕ್ಕಳು, ಸೇವಕರು, ಪಶುಗಳೊಂದಿಗೆ ತನ್ನ ಪ್ರಯಾಣವನ್ನು ಮುಂದುವರೆಸಿದನು, ಹಾಗೆಯೇ ಆತನು ತನ್ನ ಅಣ್ಣನನ್ನು ಸಂಧಿಸುವುದರ ಬಗ್ಗೆ ಬಹು ಕಳವಳಗೊಂಡನು. ಏಸಾವನು ತನ್ನನ್ನು ಸಂಧಿಸಲು ನಾನೂರು ಜನರ ಸಮೇತ ಬರುತ್ತಿದ್ದಾನೆಂಬುದನ್ನು ಕೇಳಿದಾಗ ಆತನು ತನ್ನ ಜನ ಮತ್ತು ಆಸ್ತಿಯನ್ನು ಎರಡು ಗುಂಪುಗಳಾಗಿ ವಿಂಗಡಿಸಿದನು. ಒಂದು ವೇಳೆ ಏಸಾವನು ಅಕ್ರಮಣ ಮಾಡಿದರೆ ಒಂದು ಪಾಳಯ ತಪ್ಪಿಸಿಕೊಂಡು ಹೋಗಬಹುದೆಂದುಕೊಂಡನು. ಅಲ್ಲದೆ ಆತನು ಹಿಂದೆ ದೇವರು ಮಾಡಿದ ವಾಗ್ದಾನಗಳನ್ನೆಲ್ಲಾ ಜ್ಞಾಪಿಸಿಕೊಂಡು ತನ್ನ ಅಣ್ಣನ ಕೈಯಿಂದ ತನ್ನನ್ನು ರಕ್ಷಿಸಬೇಕೆಂದು ದೇವರಲ್ಲಿ ಪ್ರಾರ್ಥಿಸುತ್ತಾನೆ. "ಆ ರಾತ್ರಿ ಅವನು ತನ್ನ ಇಬ್ಬರು ಹೆಂಡಿರನ್ನೂ ಇಬ್ಬರು ದಾಸಿಯರನ್ನೂ ಹನ್ನೊಂದು ಮಂದಿ ಮಕ್ಕಳನ್ನೂ ಕರೆದುಕೊಂಡು ಯಬ್ಬೋಕ್ ಹೊಳೆಯನ್ನು ದಾಟುವ ಸ್ಥಳದಲ್ಲಿ ದಾಟಿದನು" (ಆದಿ. 32:22). ಆತನು ತನ್ನ ಕುಟುಂಬವನ್ನು ಮುಂದೆ ಕಳಿಸಿ ಒಂಟಿಗನಾಗಿ ಹಿಂದೆ ನಿಂತಿರಲು "ಯಾರೋ ಒಬ್ಬ ಪುರುಷನು ಬೆಳಗಾಗುವ ತನಕ ಅವನ ಸಂಗಡ ಹೋರಾಡಿದನು" (ಆದಿ. 32:24).

"ಯಾಕೋಬನು, ನಾನು ದೇವರನ್ನೇ ಪ್ರತ್ಯಕ್ಷವಾಗಿ ನೋಡಿದ್ದೇನಲ್ಲಾ, ಆದರೂ ನನ್ನ ಪ್ರಾಣ ಉಳಿದದೆ ಅಂದುಕೊಂಡು ಆ ಸ್ಥಳಕ್ಕೆ "ಪೆನೀಯೇಲ್" ಎಂದು ಹೆಸರಿಟ್ಟನು" (ಆದಿ. 32:30). ಆ ಮುಂಜಾನೆ ಇಪ್ಪತ್ತು ವರ್ಷಗಳ ಬೇರ್ಪಡುವಿಕೆಯ ನಂತರ ಇಬ್ಬರೂ ಸಹೋದರರು ಸಂಧಿಸದರು. ಯಾಕೋಬನೂ ತೀರಾ ನಿತ್ರಾಣನಾಗಿದ್ದನು, "ಆದರೆ ಏಸಾವನು ಅವನನ್ನು ಎದುರುಗೊಳ್ಳುವುದಕ್ಕೆ ಓಡಿಬಂದು ಅವನ ಕೊರಳನ್ನು ಅಪ್ಪಿಕೊಂಡು ಮುದ್ದಿಟ್ಟನು, ಅವರಿಬ್ಬರೂ ಕಣ್ಣೀರು ಸುರಿಸಿದರು" (ಆದಿ. 33:4). ಏಸಾವನು ಯಾಕೋಬನಿಗೆ ತನ್ನ ಸೇಯಿರ್ ಸೀಮೆಗೆ ಬರಲು ಹೇಳಿದನು (ಎದೋಮ್). ಆದರೆ ಯಾಕೋಬನು ಕಾನಾನಿನ ಶೆಕೆಮಿನಲ್ಲಿ ವಾಸಮಾಡಿದನು. ಶೆಕೆಮಿನಲ್ಲಿ ಯಾಕೋಬನ ಮಗಳಾದ ದೀನಳು ಅಧಿಕಾರಿಯ ಮಗನಿಂದ ಅತ್ಯಾಚಾರಕ್ಕೊಳಗಾದಳು. ಆದರೆ ಅವಳ ಅಣ್ಣಂದಿರಾದ ಸಿಮೆಯೋನ್ ಮತ್ತು ಲೇವಿ ಶೆಕೆಮಿನಲ್ಲಿ ಜನರನ್ನೆಲ್ಲಾ ಕೊಲ್ಲುವುದರ ಮೂಲಕ ಸೇಡು ತೀರಿಸಿಕೊಂಡರು (ಆದಿ. ಅಧ್ಯಾಯ 34).

ಅನಂತರ ದೇವರು ಯಾಕೋಬನಿಗೆ "ನೀನು ಈ ಸ್ಥಳವನ್ನು ಬಿಟ್ಟು ಗಟ್ಟಾ ಹತ್ತಿ ಬೇತೇಲಿಗೆ ಹೋಗಿ ಅಲ್ಲೇ ವಾಸಮಾಡು. ನಿನ್ನ ಅಣ್ಣನಾದ ಏಸಾವನ ಬಳಿಯಿಂದ ಓಡಿ ಹೋದ ಕಾಲದಲ್ಲಿ ದೇವರು ಅಲ್ಲಿ ನಿನಗೆ ದರ್ಶನ ಕೊಟ್ಟನಲ್ಲಾ, ಆತನಿಗಾಗಿ ಯಜ್ಞವೇದಿಯನ್ನು ಕಟ್ಟಿಸು ಎಂದು ಹೇಳಿದನು" (ಆದಿ. 35:1). ಬೇತೇಲಿನಲ್ಲಿ ದೇವರು ಪುನಃ ಯಾಕೋಬನಿಗೆ ಕಾಣಿಸಿಕೊಂಡು ಆತನನ್ನು ಆಶೀರ್ವದಿಸಿ ಆತನಿಗೆ "ಇಸ್ರಾಯೇಲ್" ಎಂಬ ಹೆಸರನ್ನು ಕೊಟ್ಟನು. ಅವರು ಬೇತೇಲನ್ನು ಬಿಟ್ಟು ಹೊರಟ ಮೇಲೆ ಹೆರಿಗೆ ಕಾಲ ಬಂದಾಗ ರಾಹೇಲಳು ಸತ್ತಳು ಆದರೆ ಅವಳ ಮಗನು ಬದುಕಿಕೊಂಡನು. ಯಾಕೋಬನು ಆ ಮಗನನ್ನು ಬೆನ್ಯಾಮಿನ್ ಎಂದು ಕರೆದನು. ಯಾಕೋಬನು ತನ್ನ ತಂದೆಯಾದ ಇಸಾಕನೊಂದಿಗೆ ಹೆಬ್ರೋನಿನಲ್ಲಿ ವಾಸಿಸಿದನು. ಇಸಾಕನು 180 ನೆಯ ಪ್ರಾಯದಲ್ಲಿ ಮರಣ ಹೊಂದಿದನು. ಆದಿಕಾಂಡ 35:23-26 ರಲ್ಲಿ ನಾವು ಯಾಕೋಬನ ಹನ್ನೆರಡು ಮಕ್ಕಳ ಪಟ್ಟಿಯನ್ನು ಕಾಣುತ್ತೇವೆ.

**ಆ. ಓದಿರಿ**

ಆದಿಕಾಂಡ 32:1 – 33:20, 35:1-29

**ಇ. ಟಿಪ್ಪಣಿಗಳು**

*ಮಹನಯಿಮ್* (32:2): ಗ್ರೀಕಿನಲ್ಲಿ "ಎರಡು ಪಾಳಯಗಳು" ಎಂದರ್ಥವಾಗಿದೆ. ಇದು ಯೊರ್ದನ್ ಹೊಳೆಯ ಪೂರ್ವದಲ್ಲಿನ ಗಿಲ್ಯಾದಿನಲ್ಲಿತ್ತು.

*ಯಬ್ಬೋಕ್* (ವ.32:22): ಇದು ಪೂರ್ವದ ಪ್ರಸ್ಥಭೂಮಿಯಿಂದ ಯೊರ್ದನ್ ಹೊಳೆಗೆ ಹರಿಯುವ ಒಂದು ಪ್ರಮುಖ ಹೊಳೆಯಾಗಿದೆ.

*ಒಬ್ಬ ಪುರುಷನು ಹೋರಾಡಿದನು* (32:24): ಈ ಮನುಷ್ಯ ಹೋರಾಟದಲ್ಲಿ ಕೊನೆಗೆ ಯಾಕೋಬನಿಗೆ "ದೇವರ ಸಂಗಡಲೂ ಮನುಷ್ಯರ ಸಂಗಡಲೂ ಹೋರಾಡಿ ಗೆದ್ದವನು" (ವ.28) ಎಂದು ಹೇಳುತ್ತಾನೆ. ಯಾಕೋಬನು ತನ್ನ ಅನುಭವವನ್ನು "ನಾನು ದೇವರನ್ನೇ ಪ್ರತ್ಯಕ್ಷವಾಗಿ ನೋಡಿದ್ದೇನಲ್ಲಾ" (ವ.30) ಎಂದು ವರ್ಣಿಸುತ್ತಾನೆ. ಇಬ್ರಿಯದಲ್ಲಿ "ಹೋರಾಡು", "ಯಾಕೋಬ" ಮತ್ತು "ಯಬ್ಬೋಕ್" ಎಂಬ ಪದಗಳು ಸಮಾನ ಪದಗಳಾಗಿವೆ.

*ಇಸ್ರಾಯೇಲ್* (32:28): ಈ ಹೆಸರಿನ ಅರ್ಥ "ದೇವರ ಸಂಗಡ ಹೋರಾಡಿದ ಮನುಷ್ಯ" ಎಂದಾಗಿದೆ.

*ಪೆನೀಯೇಲ್* (32:30): ಈ ಇಬ್ರಿಯ ಪದದ ಅರ್ಥ "ದೇವರ ದರ್ಶನ" ಎಂದಾಗಿದೆ.

*ಶೆಕೆಮ್* (33:18): ಶೆಕೆಮ್ ಎಂಬುದು ಮಧ್ಯಕಾನಾನಿನಲ್ಲಿನ ಒಂದು ಪ್ರಮುಖ ನಗರವಾಗಿದೆ.

*ಮುರುವುಗಳನ್ನು* (35:16): ಮುರುವುಗಳನ್ನು ಧರಿಸುವುದು ಒಂದು ಅನ್ಯಜನರ ಪದ್ಧತಿಯಾಗಿತ್ತು.

*ಎಫ್ರಾತ* (35:16): ನಂತರದಲ್ಲಿ ಈ ಪಟ್ಟಣವನ್ನು "ಬೇತ್ಲೆಹೇಮ್" ಎಂದು ಕರೆಯಲಾಯಿತು (ವ.19ನ್ನು ನೋಡಿ).

*ಬೆನೋನಿ … ಬೆನ್ಯಾಮಿನ್* (35:18): ಇಬ್ರಿಯದಲ್ಲಿ ಮೊದಲ ಹೆಸರಿನ ಅರ್ಥ "ದುಃಖದ ಮಗನು" ಮತ್ತು ಎರಡನೆಯ ಹೆಸರಿನ ಅರ್ಥ "ಬಲಭುಜವು" ಅಥವಾ "ದಕ್ಷಿಣದ ಮಗನು" ಎಂದಾಗಿದೆ. (ಬಹುಶಃ ಬೆನ್ಯಾಮೀನನು ಕಾನಾನಿನ ದಕ್ಷಿಣದಲ್ಲಿ ಹುಟ್ಟಿದನು ಮತ್ತು ಆತನ ಹನ್ನೊಂದು ಮಂದಿ ಅಣ್ಣಂದಿರು ಉತ್ತರದ ಮೆಸೊಪೊಟಮಿಯಾದಲ್ಲಿ ಜನಿಸಿದ್ದರಿಂದ ಹೀಗೆ ಕರೆದಿರಬಹುದು).

**ಈ. ಪ್ರಶ್ನೆಗಳು**

1. ಬೇಟಿಯಾಗುವುದಕ್ಕಿಂತ ಮೊದಲು ತನ್ನಣ್ಣನಾದ ಏಸಾವನನ್ನು ಸಮಾಧಾನಪಡಿಸುವುದಕ್ಕಾಗಿ ಯಾಕೋಬನು ಏನು ಮಾಡಿದನು?
2. ಪಿನೀಯೇಲಿನಲ್ಲಿ ಯಾಕೋಬನ ದೇಹಕ್ಕೆ ಏನಾಯಿತು?
3. ಯಾಕೋಬ ಮತ್ತು ಏಸಾವನ ನಡುವಿನ ಬೇಟಿಯಲ್ಲಿ ಏನಾಯಿತು?
4. ಯಾಕೋಬನು ಹೇಗೆ ಏಸಾವನನ್ನು ಪುನಃ ಮೋಸಗೊಳಿಸುತ್ತಾನೆ?
5. ಬೇತೇಲಿಗೆ ಹೋಗುವುದಕ್ಕಾಗಿ ಶೆಕೆಮನ್ನು ಬಿಡುವುದಕ್ಕಿಂತ ಮುಂಚೆ ಯಾಕೋಬನು ತನ್ನ ಮನೆಯವರಿಗೆ ಏನೆಂದು ಮಾಡಬೇಕೆಂದು ಹೇಳಿದನು?
6. ಬೇತೇಲಿನಲ್ಲಿ ದೇವರು ಯಾಕೋಬನಿಗೆ ಏನೆಂದು ವಾಗ್ದಾನ ಮಾಡಿದನು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಯಾಕೆ ಯಾಕೋಬನು ಏಸಾವನನ್ನು ಮೋಸಗೊಳಿಸಿ ಮತ್ತು ಆತನೊಂದಿಗೆ ಏದೋಮಿನಲ್ಲಿ ನೆಲೆಸದೆ ಕಾನಾನಿನ ಶೆಕೆಮಿಗೆ ಪ್ರಯಾಣಿಸಲು ನಿರ್ಧರಿಸಿದನೆಂಬುದಾಗಿ ನೀವು ಯೋಚಿಸುವಿರಿ?
2. ಪೆನೀಯೇಲಿನಲ್ಲಿನ ಯಾಕೋಬನ ಅನುಭವವು ದುಃಖಕರವಾದ್ದುದೆಂಬುದಾಗಿ (ಕಷ್ಟಕರ) ಅನೇಕ ಸತ್ಯವೇದ ಓದುಗರು ವರ್ಣಿಸುತ್ತಾರೆ. ನೀವಿದನ್ನು ಹೇಗೆ ತಿಳುದುಕೊಳ್ಳುವಿರಿ? ಯಾಕೋಬನೊಂದಿಗೆ ಹೋರಾಡಿದ ವ್ಯಕ್ತಿ ಯಾರು? ಯಾಕೆ ಆ ಪುರುಷನಿಗೆ ಯಾಕೋಬನನ್ನು ಜಯಿಸಲಾಗಲಿಲ್ಲ. ಆ ಪುರುಷನು ಯಾಕೋಬನಿಗೆ ನೀನು ದೇವರ ಸಂಗಡಲೂ ಮನುಷ್ಯರ

ಸಂಗಡಲೂ ಹೋರಾಡಿ ಗೆದ್ದವನಾದಿ ಎಂದು ಹೇಳಿದ್ದರ ಅರ್ಥವೇನು? ಪೆನೀಯೇಲಿನಂತ ಎಷ್ಟರ ಮಟ್ಟಿಗೆ ಯಾಕೋಬನು ಒಬ್ಬ ಬದಲಾದ ಮನುಷ್ಯನಾದನು?

3. ಈ ಮೂರು ಅಧ್ಯಾಯಗಳಲ್ಲಿನ ಈ ಕಥೆಗಳ ಕುರಿತಾದ ನಿಮ್ಮ ಆಲೋಚನೆ ಮತ್ತು ಭಾವನೆಗಳನ್ನು ಹಂಚಿಕೊಳ್ಳಿರಿ. ನಿಮಗೆ ಸಿಗುವ ಹೊಸ ಒಳನೋಟಗಳೇನು?

**ಆದಿಕಾಂಡ ಅಧ್ಯಯನ 22: ಯೋಸೇಫನು**

**ಅ. ಪೀಠಿಕೆ**

ಯೋಸೇಫನು ತನ್ನ ತಂದೆಯಾದ ಯಾಕೋಬನ ನೆಚ್ಚಿನ ಮಗನಾದುದ್ದರಿಂದ ಯೋಸೇಫನ ಅಣ್ಣಂದಿರು ಆತನ ಮೇಲೆ ಹೊಟ್ಟೆಕಿಚ್ಚುಪಟ್ಟರು. ಅಲ್ಲದೆ ಅವರು ಆತನನ್ನು ದ್ವೇಷಿಸಲು ಪ್ರಾರಂಭಿಸಿದರು. ಯೋಸೇಫನು ಹನ್ನೊಂದು ಸಿವುಡುಗಳು ಸುತ್ತಲೂ ಬಂದು ತನ್ನ ಸಿವುಡಿಗೆ ಅಡ್ಡ ಬಿದ್ದಿದ್ದರ ಕಥೆಯ ಕುರಿತಾಗಿ ಅವರಿಗೆ ಹೇಳಿದಾಗ ಅವರು ಆತನನ್ನು ದ್ವೇಷಿಸಿದರು (ಆದಿ.37:7). ಕೆಲ ಸಮಯದ ನಂತರ ಯೋಸೇಫನ ಅಣ್ಣಂದಿರು ಶೆಕೆಮಿನಲ್ಲಿ ತಂದೆಯ ಆಡುಕುರಿಗಳನ್ನು ಮೇಯಿಸುತ್ತಿದ್ದಾಗ ಅವರನ್ನು ನೋಡಿ ಬಾ ಎಂದು ಯಾಕೋಬನು ಯೋಸೇಫನನ್ನು ಕಳಿಸುತ್ತಾನೆ, ಅವರು ಯೋಸೇಫನು ತಮ್ಮ ಬಳಿಗೆ ಬರುತ್ತಿರುವದನ್ನು ದೂರದಿಂದ ನೋಡಿದಾಗಲೇ ಆತನನ್ನು ಕೊಲ್ಲುವುದಕ್ಕೆ ಒಳಸಂಚು ಮಾಡಿಕೊಂಡರು (ಆದಿ. 37:18). ಅದರೆ ಆತನನ್ನು ಅವರು ನೀರಿಲ್ಲದ ಒಂದು ಗುಂಡಿಯೊಳಗೆ ಹಾಕಿದರು, ಅನಂತರ ಅವರು ಅತನನ್ನು ಗಿಲ್ಯಾದಿನಿಂದ ಐಗುಪ್ತದೇಶಕ್ಕೆ ಪ್ರಯಾಣ ಮಾಡುತ್ತಾ ಬರುತ್ತಿರುವ ಇಷ್ಮಾಯೇಲ್ಯರ ಗುಂಪನ್ನು ಕಂಡು ಅವನನ್ನು ಅವರಿಗೆ ಮಾರಿದರು. ಅವರು ಅವನನ್ನು ಐಗುಪ್ತದ ಉದ್ಯೋಗಸ್ಥರಿಗೆ ಒಬ್ಬ ದಾಸನನ್ನಾಗಿ ಮಾರಿದರು.

**ಆ. ಓದಿರಿ**

ಆದಿ. 37:1-36

**ಈ. ಟಿಪ್ಪಣಿಗಳು**

*ಯಾಕೋಬ ... ಇಸ್ರಾಯೇಲನು* ( ವ 1,3 ): ಈ ಎರಡು ಹೆಸರೂ ಸಹ ಆದಿಕಾಂಡ 35 ನೇ ಅಧ್ಯಾಯದಿಂದ ಒಬ್ಬನೇ ವ್ಯಕ್ತಿಯ ಬಗ್ಗೆ ಬಳಸಲಾಗಿದೆ.

*ನಿನ್ನ ತಾಯಿಯೂ* (ವ.10): ಯೋಸೇಫನ ತಾಯಿಯಾದ ರಾಹೇಲಳು ಈಗಾಗಲೆ ಸತ್ತುಹೋಗಿದ್ದಳು (ಆದಿ. 35:19ನ್ನು ನೋಡಿ). ಹಾಗಾಗಿ ನಿನ್ನ ತಾಯಿ ಎಂಬುದು ಬಹುಶಃ ಯಾಕೋಬನ ಮೊದಲ ಹೆಂಡತಿಯಾದ ಲೇಯಳನ್ನು ಸೂಚಿಸುತ್ತಿರಬಹುದು.

*ಶೆಕೆಮ್* (ವ.12): ನಮ್ಮ ಹಿಂದಿನ ಅಧ್ಯಯನದಲ್ಲಿ ಯಾಕೋಬ ಮತ್ತು ಆತನ ಕುಟಂಬವು ದಕ್ಷಿಣಕ್ಕೆ ಬೇತೇಲಿನಿಂದ ಬೇತ್ಲೆಹೇಮಿಗೆ ಹೊರಟಿದ್ದರು. ಈ ಕಥೆಯು ಸಂಭವಿಸುವಾಗ ಅವರು ಬೇತೇಲಿನ ಉತ್ತರಕ್ಕಿರುವ ಶೆಕೆಮಿನಲ್ಲಿದ್ದರು.

*ದೋತಾನ್* (ವ.17): ಇದೊಂದು ಪ್ರಾಚೀನ ನಗರವಾಗಿದ್ದು ಶೆಕೆಮಿನ ಉತ್ತರಕ್ಕೆ ಸುಮಾರು 20 ಕಿ.ಮೀ. ದೂರದಲ್ಲಿತ್ತು.

*ರೂಬೇನ್* (ವ.21): ಈತನು ಯಾಕೋಬನ ಮಕ್ಕಳಲ್ಲಿ ಹಿರಿಯವನಾಗಿದ್ದನು, ಮತ್ತು ಯೋಸೇಫನಿಗಿಂತ ದೊಡ್ಡವನಾಗಿದ್ದನು.

*ಇಷ್ಮಾಯೇಲ್ಯರು ... ಮಿದ್ಯಾನ್ಯರು* (ವ.25,28): ಇಷ್ಮಾಯೇಲ್ಯನು ಅಬ್ರಹಾಮನ ಮಗನಾಗಿದ್ದನು. ಈತನು ಅರೇಬಿಯಾದಲ್ಲಿನ ಮರುಭೂಮಿ ಕುಲಗಳಿಗೆ ಪೂರ್ವಜನಾದನು.

*ಇಪ್ಪತ್ತು ರುಪಾಯಿಗಳಿಗೆ* (ವ.28): ಈ ಮೊತ್ತವು ಒಬ್ಬ ಯೌವನಸ್ಥ ಗುಲಾಮ(ದಾಸ)ನ ಮೊತ್ತವಾಗಿತ್ತೆಂಬುದಾಗಿ ಯಾಜಕಕಾಂಡ 27:5 ಹೇಳುತ್ತದೆ.

*ತನ್ನ ಬಟ್ಟೆಗಳನ್ನು ಹರಿದುಕೊಂಡು ... ಗೋಣೀತಟ್ಟು ಸುತ್ತಿಕೊಂಡು* (ವ.34): ಇವೆರಡೂ ದುಃಖ ಮತ್ತು ಗೋಳಾಟದ ಸಂಕೇತಗಳಾಗಿದ್ದವು.

*ಹೆಣ್ಣು ಮಕ್ಕಳೂ* (ವ.35): ಈ ಇಬ್ರಿಯ ಪದದ ಅರ್ಥವು ಸೊಸೆಯಂದಿರನ್ನೂ ಸಹ ಒಳಗೊಂಡಿದೆ.

**ಈ. ಪ್ರಶ್ನೆಗಳು**

1. ಯೋಸೇಫನ ಎರಡನೇ ಕನಸು ಏನಾಗಿತ್ತು? ಯಾಕೆ ಇದು ಆತನ ಮೊದಲ ಕನಸಿಗಿಂತ ಹೆಚ್ಚು ಬೇಸರದ್ದಾಗಿತ್ತು?

2. ಯಾರು ಯೋಸೇಫನ ಜೀವವನ್ನು ರಕ್ಷಿಸಿ ಆತನನ್ನು ಇಷ್ಮಾಯೇಲ್ಯರಿಗೆ ಮಾರಿಬಿಡೋಣ ಎಂಬ ಸಲಹೆ ಕೊಟ್ಟರು?

3. ಪೋಟೀಫರನು ಯಾರು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಯೋಸೇಫನ ಅಣ್ಣಂದಿರು ಆತನನ್ನು ಯಾಕೆ ದ್ವೇಷಿಸಿದರೆಂಬುದಕ್ಕೆ ಕಾರಣಗಳ ಪಟ್ಟಿಮಾಡಿರಿ. ಈ ಕಾರಣಗಳ ಬಗ್ಗೆ ನೀವೇನೆಂದು ಯೋಚಿಸುವಿರಿ? ಅವು ಸಮರ್ಪಕವಾ? ಇಲ್ಲವಾ?

2. ಯೋಸೇಫನು ಹಳೇ ಒಡಂಬಡಿಕೆಯ ಒಳ್ಳೆಯ ವ್ಯಕ್ತಿಗಳಲ್ಲಿ ಒಬ್ಬನಾಗಿದ್ದಾನೆ ಮತ್ತು ಆತನನ್ನು ತುಂಬಾ ಸಕಾರಾತ್ಮಕವಾಗಿ ಬಿಂಬಿಸಲಾಗಿದೆ. ಈ ಕಥೆಯಲ್ಲಿ ನೀವು ಆತನನ್ನು ಹೇಗೆ ಕಾಣುವಿರಿ? ಏನಾದರೂ ಬಲಹೀನತೆಯನ್ನು ನೀವು ಕಾಣುವಿರಾ?

3. ವ.34-35 ರಲ್ಲಿ ಯಾಕೋಬನ ದುಃಖವು ತೀರಾ ಮರುಗುವ ರೀತಿಯಲ್ಲಿ ವರ್ಣಿಸಲ್ಪಟ್ಟಿದೆ. ಆತನ ಸ್ಥಿತಿಯಲ್ಲಿ ನಿಮ್ಮನ್ನಿಟ್ಟುಕೊಳ್ಳಿರಿ. ಅನಂತರ ಕೆಳಕಂಡ ಒಂದನ್ನು ಪ್ರಯತ್ನಿಸಿರಿ:

   ಅ. ಒಂದು ಸ್ವಗತವನ್ನು ಬರೆಯಿರಿ. ಇದನ್ನು ನಿಮ್ಮ ಸ್ನೇಹಿತರಿಗೆ ತೋರಿಸಿರಿ.

   ಆ. ಒಂದು ಪದ(ಕವನ)ವನ್ನು ಬರೆಯಿರಿ.

4. ಈ ವಾಕ್ಯಭಾಗದ ಕುರಿತ ನಿಮ್ಮ ಭಾವನೆ ಮತ್ತು ಆಲೋಚನೆಗಳನ್ನು ಹಂಚಿಕೊಳ್ಳಿರಿ.

**ಆದಿಕಾಂಡ ಅಧ್ಯಯನ 23: ಐಗುಪ್ತದಲ್ಲಿ ಯೋಸೇಫನು**

**ಅ. ಪೀಠಿಕೆ**

“ಯೆಹೋವನು ಯೋಸೇಫನ ಸಂಗಡ ಇದ್ದದ್ದರಿಂದ ಅವನು ಏಳಿಗೆಯಾಗಿ ಐಗುಪ್ತನಾದ ತನ್ನ ದಣಿಯ ಮನೆಯೊಳಗೆ ಸೇವಕನಾದನು” (ಆದಿ. 39:2). ಹೀಗೆ ಯೋಸೇಫನು ಪೋಟೀಫರನ ದಯೆಹೊಂದಿ ಆತನ ಸೇವಕನಾದನು. “ದಣಿಯು ಅವನಿಗೆ ತನ್ನ ಮನೆಯಲ್ಲಿ ಪಾರುಪತ್ಯವನ್ನು ಕೊಟ್ಟು ತನ್ನ ಆಸ್ತಿಯನ್ನೆಲ್ಲಾ ಅವನ ವಶಕ್ಕೆ ಕೊಟ್ಟನು” (ಆದಿ. 39:4). ಯೋಸೇಫನ ನಿಮಿತ್ತ ದೇವರು, ಅವನ ಮನೆಯನ್ನೆಲ್ಲಾ ಆಶೀರ್ವದಿಸಿದನು. ಅದರ ಪರಿಣಾಮವಾಗಿ ಪೋಟೀಫರನು ಎಲ್ಲವನ್ನು ಯೋಸೇಫನ ವಶಕ್ಕೆ ಒಪ್ಪಿಸಿದನು. ಆದರೆ ಆತನ ಹೆಂಡತಿಯು ಯೋಸೇಫನೆಡೆಗೆ ಆಕರ್ಷಿತಳಾಗಿ ತನ್ನೊಂದಿಗೆ ಮಲಗಿಕೋ ಎಂದು ಹೇಳುತ್ತಾಳೆ. ಯೋಸೇಫನು ಇದನ್ನು ತಿರಸ್ಕರಿಸಿದಾಗ ಆಕೆಯು ಆತನ ಮೇಲೆ ಸುಳ್ಳು ದಾಖಲೆಗಳನ್ನು ಕೊಟ್ಟಳು. ಹಾಗಾಗಿ ಪೋಟೀಫರನು ಯೋಸೇಫನನ್ನು ಸೆರೆಮನೆಯಲ್ಲಿರಿಸಿದನು. ಆದರೆ ಸೆರೆಮನೆಯಲ್ಲಿಯೂ ಸಹ ದೇವರು ಆತನೊಂದಿಗಿದ್ದು ಆತನ ಎಲ್ಲಾ ಕಾರ್ಯದಲ್ಲಿ ಆತನಿಗೆ ಸಫಲತೆಯನ್ನು ಕೊಟ್ಟನು. “ಸೆರೆಮನೆಯ ಯಜಮಾನನು ಸೆರೆಯಲ್ಲಿದ್ದವರೆಲ್ಲರನ್ನೂ ಯೋಸೇಫನ ವಶಕ್ಕೆ ಕೊಟ್ಟುಬಿಟ್ಟನು. ಅಲ್ಲಿ ಮಾಡಬೇಕಾದದ್ದನ್ನೆಲ್ಲಾ ಯೋಸೇಫನೇ ಮಾಡಿದನು (ಆದಿ. 39:22)

ಕೆಲ ಸಮಯದ ನಂತರ ಅರಸನ ಪಾನಸೇವಕನು ಮತ್ತು ಭಕ್ಷ್ಯಕಾರನೂ ಅದೇ ಸೆರೆಮನೆಯಲ್ಲಿ ಹಾಕಲ್ಪಟ್ಟರು. ಅವರಿಬ್ಬರಿಗೂ ಒಂದೇ ಕನಸುಬಿದ್ದಿತು, ಆದರೆ ಅದು ಅವರಿಬ್ಬರಿಗೂ ಅರ್ಥವಾಗಲಿಲ್ಲ. ಹಾಗಾಗಿ ಅವರು ಯೋಸೇಫನಿಗೆ ಅದರ ಅರ್ಥವನ್ನು ಹೇಳಬೇಕೆಂದು ಕೇಳಿದರು. ಪಾನದಾಯಕನ ಕನಸಿನ ಅರ್ಥವೇನೆಂದರೆ ಅವನು ತನ್ನ ಉದ್ಯೋಗಕ್ಕೆ ಪುನಃ ಹಿಂತಿರುಗುವನು ಎಂದಾಗಿದೆ. ಯೋಸೇಫನು ಆತನಿಗೆ ಫರೋಹನಿಗೆ ತನ್ನ ಬಗ್ಗೆ ಒಳ್ಳೇದನ್ನು ಹೇಳಿ ನನಗೆ ಉಪಕಾರ ಮಾಡಬೇಕೆಂದು ಹೇಳಿದನು. ಆದರೆ ಪಾನದಾಯಕನು ಅದನ್ನು ಮಾಡಲು ಮರೆತುಬಿಟ್ಟನು.

ಎರಡು ವರುಷಗಳಾದ ಮೇಲೆ ಫರೋಹನಿಗೆ ಎರಡು ಕನಸುಗಳು ಬಿದ್ದವು (ಆದಿ. 41:1-7). ಜೋಯಿಸರಿಗೆ ಮತ್ತು ವಿದ್ವಾಂಸರಿಗೆ ಕನಸಿನ ಅರ್ಥವನ್ನು ತಿಳಿಸಲು ಆಗಲಿಲ್ಲ. ಆಗ ಪಾನದಾಯಕನು ಯೋಸೇಫನನ್ನು ನೆನಪುಮಾಡಿಕೊಂಡು, ಕನಸುಗಳ ಅರ್ಥವನ್ನು ತಿಳಿಸುವ ಆತನ ವರದ ಬಗ್ಗೆ ಫರೋಹನಿಗೆ ಹೇಳುತ್ತಾನೆ. ಫರೋಹನು ಯೋಸೇಫನನ್ನು ಕರೆಯಿಸಿ ತನ್ನ ಕನಸುಗಳ ಬಗ್ಗೆ ಆತನಿಗೆ ಹೇಳುತ್ತಾನೆ. “ಯೋಸೇಫನು ಫರೋಹನಿಗೆ – ತಾವು ಕಂಡ ಎರಡು ಕನಸುಗಳೂ ಒಂದೇ ವಿಷಯವಾದವುಗಳು, ದೇವರು ತಾನು ಮಾಡಬೇಕೆಂದಿರುವುದನ್ನು ಇವುಗಳ ಮೂಲಕ ತನಗೆ ತಿಳಿಸಿದ್ದಾನೆ (ಆದಿ. 41:25). “ಐಗುಪ್ತ ಪ್ರದೇಶದಲ್ಲೆಲ್ಲಾ ಬಹುವಿಶೇಷವಾದ ಏಳು ಸುಭಿಕ್ಷ ವರುಷಗಳೂ, ಅವುಗಳ ತರುವಾಯ ಏಳು ದುರ್ಭಿಕ್ಷ ವರುಷಗಳೂ ಬರುವವು” (ಆದಿ. 41:29-30). ಅನಂತರ ಯೋಸೇಫನು ಫರೋಹನಿಗೆ ಏಳು ಸುಭಿಕ್ಷ ವರುಷಗಳಲ್ಲಿ ಮುಂದಿನ ಏಳು ದುರ್ಭಿಕ್ಷ ವರುಷಗಳಿಗಾಗಿ ಆಹಾರಪದಾರ್ಥಗಳನ್ನು ಕೂಡಿಸಿಡಬೇಕೆಂದು ಹೇಳಿದನು. “ಆ ಮಾತು ಫರೋಹನಿಗೂ ಅವನ ಪರಿವಾರದವರಿಗೂ ಒಳ್ಳೇದಾಗಿ ತೋಚಿತು” (ಆದಿ. 41:37), ಮತ್ತು ಪರೋಹನು ಯೋಸೇಫನನ್ನು ಐಗುಪ್ತ ದೇಶದ ಮೇಲೆಲ್ಲಾ ಅಧಿಕಾರಿಯನ್ನಾಗಿ ಇಟ್ಟನು (ಆದಿ. 41:41).

ಯೋಸೇಫನು ಐಗುಪ್ತದ ಆಚಾರ್ಯನ ಮಗಳನ್ನು ಮದುವೆಯಾದನು ಮತ್ತು ಆಕೆ ಮನಸ್ಸೆ ಮತ್ತು ಎಫ್ರಾಯೀಮ್ ಎಂಬ ಇಬ್ಬರು ಗಂಡು ಮಕ್ಕಳಿಗೆ ಜನ್ಮಕೊಟ್ಟಳು. ಏಳು ವರ್ಷಗಳ ಸುಭಿಕ್ಷ ಮುಗಿದು “ಕ್ಷಾಮದ ಏಳು ವರುಷಗಳಿಗೆ ಪ್ರಾರಂಭವಾಯಿತು” (ಆದಿ. 41:54). ಈ ಕ್ಷಾಮವು ನೆರೆಯ ರಾಷ್ಟ್ರಗಳ ಮೇಲೆ ಸಹ ಪ್ರಭಾವ ಬೀರಿತು ಮತ್ತು “ಭೂಲೋಕದಲ್ಲೆಲ್ಲಾ ಬರವು ಭಯಂಕರವಾಗಿದ್ದರಿಂದ ಎಲ್ಲಾ ದೇಶದವರೂ ಧಾನ್ಯವನ್ನು ಕೊಂಡುಕೊಳ್ಳುವುದಕ್ಕಾಗಿ ಐಗುಪ್ತಕ್ಕೆ ಯೋಸೇಫನ ಬಳಿಗೆ ಬಂದರು” (ಆದಿ. 41:57).

**ಆ. ಓದಿರಿ**

**ಆದಿ.**

**ಇ. ಟಿಪ್ಪಣಿಗಳು**

*ಫರೋಹ* (39:2): ಇದು ಐಗುಪ್ತದ ಅರಸನ ಬಿರುದಾಗಿತ್ತು. ಐಗುಪ್ತ ಭಾಷೆಯಲ್ಲಿ ಇದರರ್ಥ "ಮಹಾಮನೆ" ಎಂದಾಗಿದೆ.

*ಅವನ ಮೇಲೆ ಕಣ್ಣುಹಾಕಿ* (39:7): ಈ ಮಾತಿನ ಅರ್ಥ ಆಕೆಯು ಆತನನ್ನು ಕಾಮದಾಸೆಯಿಂದ ನೋಡಿದಳು ಎಂದಾಗಿದೆ.

*ನಿನ್ನನ್ನು ಮೇಲಕ್ಕೆ ಎತ್ತಿ* (40:13): ಈ ಇಬ್ರಿಯ ಹೇಳಿಕೆ ಅರ್ಥ "ಬಿಡಿಸು" ಎಂದಾಗಿದೆ.

*ಕ್ಷೌರಮಾಡಿಸಿಕೊಂಡು* (41:14): ಹೆಚ್ಚಾಗಿ ಇಸ್ರಾಯೇಲ್ಯರು ಗಡ್ಡ ಬಿಡುತ್ತಿದ್ದರು, ಆದರೆ ಐಗುಪ್ತ್ಯರು ಗಡ್ಡ ತೆಗೆದಿರುತ್ತಿದ್ದರು.

*ಮುದ್ರಿಕೆಯನ್ನು ... ನಾರುಮಡಿಯನ್ನು ... ಕೊರಳಿಗೆ ಚಿನ್ನದ ಸರಪಣಿಯನ್ನು* (41:42): ಈ ಮೂರು ಬಹುಮಾನಗಳು ಫರೋಹನು ತನ್ನ ರಾಜ್ಯಾಧಿಕಾರವನ್ನು ಯೋಸೇಫನೊಂದಿಗೆ ಹಂಚಿಕೊಂಡನೆಂಬುದನ್ನು ಸೂಚಿಸುತ್ತದೆ.

*ಸಾಫ್ನತ್ಪನೇಹ* (41:45): ಈ ಐಗುಪ್ತ ಹೆಸರಿನ ಅರ್ಥ ಸ್ಪಷ್ಟವಾಗಿ ಗೊತ್ತಿಲ್ಲ, ಆದರೆ "ರಹಸ್ಯ ಸಂಗತಿಗಳನ್ನು ಕಂಡುಹಿಡಿಯುವವನು" ಅಥವಾ "ದೇವರು ಮಾತನಾಡುತ್ತಾನೆ ಮತ್ತು ಜೀವಿಸುತ್ತಾನೆ" ಎಂದಾಗಿರಬಹುದು.

*ಓನ್* (41:45): ಇದು ನೈಲ್ ಮುಖಜಭೂಮಿಯ ದಕ್ಷಿಣ ತುದಿಯಲ್ಲಿನ ಒಂದು ಪ್ರಾಮುಖ್ಯವಾದ ವಾಣಿಜ್ಯ ನಗರವಾಗಿತ್ತು. ಇದನ್ನು ನಂತರ ಹಿಲಿಯೋಪೊಲಿಸ್ ("ಸೂರ್ಯನಗರಿ" ಎಂದು ಗ್ರೀಕರಿಂದ ಕರೆಯಲಾಗಿದೆ ಮತ್ತು ಇದು ಐಗುಪ್ತ್ಯರ "ರಾ" ಎಂಬ ಸೂರ್ಯದೇವರ ಪೂಜಾಕೇಂದ್ರವಾಗಿತ್ತು.

*ಮನಸ್ಸೆ* (41:51): ಈ ಹೆಸರಿನ ಅರ್ಥ "ಮರೆಸುವವನು" ಎಂದಾಗಿದೆ. ಇದು "ಮರೆತುಬಿಡು" ಎಂಬ ಇಬ್ರಿಯ ಪದಕ್ಕೆ ಸಮಾನವಾಗಿದೆ.

*ಎಫ್ರಾಯೀಮ್* (41:52): ಈ ಹೆಸರು "ಎರಡರಷ್ಟು ಅಭಿವೃದ್ಧಿ" ಎಂಬ ಇಬ್ರಿಯ ಮಾತಿನ ಅರ್ಥವನ್ನು ಕೊಡುತ್ತದೆ.

*ಭೂಲೋಕದಲ್ಲೆಲ್ಲಾ* (41:57): ಈ ಅತಿಶಯೋಕ್ತಿಯ ಹೇಳಿಕೆಯು ಹಳೇ ಒಡಂಬಡಿಕೆಯ ಕಥನದ ದೃಷ್ಟಿಕೋನದಿಂದ ಇಡೀ ಲೋಕವನ್ನು ಸೂಚಿಸುತ್ತದೆ.

**ಈ. ಪ್ರಶ್ನೆಗಳು**

1. ಯಾಕೆ ಪೋಟೀಫರನ ಹೆಂಡತಿಯು ಯೋಸೇಫನ ಮೇಲೆ ಕಣ್ಣುಹಾಕಿದಳು?
2. ಏನೆಂದು ಪೋಟೀಫರನ ಹೆಂಡತಿಯು ಯೋಸೇಫನನ್ನು ದೂರುತ್ತಾಳೆ?
3. ಭಕ್ಷ್ಯಕಾರನ ಕನಸಿನ ಅರ್ಥವೇನಾಗಿತ್ತು?
4. ಫರೋಹನು ತನ್ನ ಕನಸಿನಲ್ಲಿ ಏನನ್ನು ಕಾಣುತ್ತಾನೆ?
5. ಫರೋಹನು ತನ್ನೆರಡು ಕನಸುಗಳ ಅರ್ಥವನ್ನು ವಿವರಿಸಿ ಹೇಳೆಂದಾಗ ಯೋಸೇಫನು ಏನೆಂದು ಉತ್ತರಿಸುತ್ತಾನೆ?
6. ಯೋಸೇಫನನ್ನು ಐಗುಪ್ತದ ಮೇಲೆಲ್ಲಾ ಅಧಿಕಾರಿಯನ್ನಾಗಿ ಇಟ್ಟಾಗ ಫರೋಹನು ಆತನನ್ನು ಹೇಗೆ ನೋಡಿಕೊಳ್ಳುತ್ತಾನೆ?
7. ಫರೋಹನ ಸೇವೆಗೆ ಬಂದಾಗ ಯೊಸೇಫನಿಗೆ ಎಷ್ಟು ವರುಷವಾಗಿತ್ತು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಐಗುಪ್ತದಲ್ಲಿನ ಯೋಸೇಫನ ಕಥೆಯು "ಯೆಹೋವನು ಯೋಸೇಫನ ಸಂಗಡ ಇದ್ದನು" (ಆದಿ. 39:2) ಎಂಬ ಮಾತಿನೊಂದಿಗೆ ಪ್ರಾರಂಭವಾಗುತ್ತದೆ. ದೇವರು ಯೋಸೇಫನೊಂದಿಗೆ ಇದ್ದದ್ದನ್ನು ಈ ಮೂರು ಅಧ್ಯಾಯಗಳು ಹೇಗೆ ತೋರಿಸುತ್ತವೆಂಬುದರ ಪಟ್ಟಿಯನ್ನು ಮಾಡಿರಿ.

2. ದೇವರ ದಯೆಯನ್ನು ಹೊಂದಿದ ವ್ಯಕ್ತಿ ಸಹ ಕೆಟ್ಟಜನರ ಬಳಿಗೆ ಬರುತ್ತಾನೆ. ಯಾವ ರೀತಿಯಲ್ಲಿ ಈ ಮೂರು ಅಧ್ಯಾಯಗಳಲ್ಲಿ ಯೋಸೇಫನು ಕೆಟ್ಟಜನರ ಬಳಿಗೆ ಬರುತ್ತಾನೆ? ಆದರೆ ಕೇಡನ್ನು ಸಹ ದೇವರು ಆತನ ಒಳ್ಳೆಯ ಉದ್ದೇಶಗಳಿಗೆ ಬಳಸಬಲ್ಲವನಾಗಿದ್ದಾನೆ. ಈ ರೀತಿ ಆಗುವುದನ್ನು ನಾವು ಈ ಮೂರು ಅಧ್ಯಾಯಗಳಲ್ಲಿ ಹೇಗೆ ಕಾಣುತ್ತೇವೆ?

3. ಈ ಮೂರು ಅಧ್ಯಾಯಗಳಲ್ಲಿ ಯೋಸೇಫನ ಗುಣಸ್ವಭಾವದ ಯಾವ ಚಿತ್ರಣ ನಮಗೆ ಸಿಗುತ್ತದೆ?

4. ಈ ಅಧ್ಯಯನದ ಕುರಿತ ನಿಮ್ಮ ಆಲೋಚನೆ ಮತ್ತು ಭಾವನೆಗಳನ್ನು ಹಂಚಿಕೊಳ್ಳಿರಿ:

   ಅ. ನಿಮಗೆ ಸಿಗುವ ಹೊಸ ಒಳನೋಟಗಳೇನು?

   ಆ. ಯಾವ ರೀತಿಯಲ್ಲಿ ಯೋಸೇಫನು ನಿಮಗೊಬ್ಬ ಮಾದರಿಯಾಗಬಲ್ಲನು?

## ಆದಿಕಾಂಡ ಅಧ್ಯಯನ 24: ಯೋಸೇಫ ಮತ್ತು ಆತನ ಅಣ್ಣಂದಿರು

### ಅ. ಪೀಠಿಕೆ

ದವಸಧಾನ್ಯವನ್ನು ಕೊಳ್ಳುವುದಕ್ಕಾಗಿ ಯಾಕೋಬನು ಯೋಸೇಫನ ಹತ್ತುಮಂದಿ ಅಣ್ಣಂದಿರನ್ನು ಐಗುಪ್ತಕ್ಕೆ ಕಳುಹಿಸುತ್ತಾನೆ. ಆದರೆ ಆತನು ತನ್ನ ಕಿರಿಯ ಮಗನಾದ ಬೆನ್ಯಾಮೀನನನ್ನು ಕಳಿಸುವುದಿಲ್ಲ. ಯೋಸೇಫನು ತನ್ನ ಅಣ್ಣಂದಿರ ಗುರುತು ಹಿಡಿಯುತ್ತಾನೆ ಆದರೆ ಅವರಿಗೆ ಆತನ ಗುರುತು ಸಿಗುವುದಿಲ್ಲ. ಆತನು ಅವರೊಂದಿಗೆ ಬಿರುನುಡಿಯೊಂದಿಗೆ ಮಾತನಾಡಿ ಮೂರು ದಿನಗಳವರಗೆ ಅವರನ್ನು ಕಾವಲಲ್ಲಿರಿಸುತ್ತಾನೆ. ಅನಂತರ ಆತನು ಸಿಮೆಯೋನನಿಗೆ ಬೇಡಿಗಳನ್ನು ಹಾಕಿಸಿ ಉಳಿದವರ ಚೀಲಗಳಲ್ಲಿ ಧಾನ್ಯಗಳನ್ನು ತುಂಬಿಸಿ, ತಮ್ಮ ಕಿರಿಯ ತಮ್ಮನನ್ನು ಕರೆತರಬೇಕೆಂದು ಹೇಳಿ ಅವರನ್ನು ಕಾನಾನಿಗೆ ಕಳುಹಿಸುತ್ತಾನೆ. ಅಲ್ಲದೆ ಆತನು ಅವರ ಚೀಲಗಳಲ್ಲಿ ಹಣದ ಚೀಲವನ್ನೂ ಇಡುತ್ತಾನೆ. ಆ ಅಣ್ಣಂದಿರು ತಮ್ಮ ಚೀಲಗಳಲ್ಲಿನ ಹಣವನ್ನು ಕಂಡಾಗ ಹೆದರುತ್ತಾರೆ.

ಕೆಲದಿನಗಳಲ್ಲಿ ಧಾನ್ಯವು ಮುಗಿದ ಮೇಲೆ ಪುನಃ ಅವರು ಹೆಚ್ಚು ಧಾನ್ಯವನ್ನು ಕೊಳ್ಳಲು ಐಗುಪ್ತಕ್ಕೆ ಹೋಗಬೇಕಾಗಿ ಬಂತು. ಯಾಕೋಬನು ಬೆನ್ಯಾಮೀನನನ್ನು ಅವರೊಂದಿಗೆ ಕಳಿಸಲು ಬಯಸಲಿಲ್ಲ, ಆದರೆ ಬೇರೆ ಮಾರ್ಗವೇ ಇರಲಿಲ್ಲ. ಆತನನ್ನು ಕಳಿಸಬೇಕೆಂಬುದು ಯೋಸೇಫನ ಬೇಡಿಕೆಯಾಗಿತ್ತು. ಯೆಹೂದನು ಬೆನ್ಯಾಮೀನನ ಸುರಕ್ಷತೆಯ ಬಗ್ಗೆ ಭರವಸೆ ಕೊಡುತ್ತಾನೆ. “ಆ ಮನುಷ್ಯರು ಆ ಕಾಣಿಕೆಯ ವಸ್ತುಗಳನ್ನು ಸಿದ್ಧಪಡಿಸಿ ಎರಡರಷ್ಟು ಹಣವನ್ನು ತೆಗೆದುಕೊಂಡು ಬೆನ್ಯಾಮೀನನನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೊರಟು ಐಗುಪ್ತ ದೇಶಕ್ಕೆ ಸೇರಿ ಯೋಸೇಫನೆದುರಲ್ಲಿ ನಿಂತುಕೊಂಡರು” (ಆದಿ. 43:15). ಯೋಸೇಫನು ಅವರನ್ನು ತನ್ನ ಮನೆಗೆ ಆಹ್ವಾನಿಸಿ ಅವರಿಗೋಸ್ಕರ ಊಟವನ್ನು ಸಿದ್ಧಪಡಿಸಿದನು. ಯೋಸೇಫನು ತನ್ನ ಚಿಕ್ಕ ತಮ್ಮನಾದ ಬೆನ್ಯಾಮೀನನನ್ನು ಕಂಡೊಡನೆ ದುಃಖ ತಾಳಲಾರದೆ ಅಳುವುದಕ್ಕೆ ಹೊರಟುಹೋದನು. ಮರುದಿನ ಅವನ ಅಣ್ಣಂದಿರು ಮನೆಗೆ ಹೊರಟುಹೋದರು. ಆದರೆ ಪುನಃ ಯೋಸೇಫನು ಮನೆವಾರ್ತೆಯವನಿಗೆ ಅವರ ಹಣವನ್ನು ಅವರ ಚೀಲದಲ್ಲಿ ಧಾನ್ಯದೊಂದಿಗೆ ಇಡಬೇಕೆಂದು ಹೇಳಿದನು. ಬೆನ್ಯಾಮೀನನ ಚೀಲದಲ್ಲಿ ಆತನು ಬೆಳ್ಳಿಯ ಪಾತ್ರೆಯನ್ನು ಇಟ್ಟನು. “ಅವರು ಪಟ್ಟಣವನ್ನು ಬಿಟ್ಟು ಸ್ವಲ್ಪದೂರ ಹೋಗುವಷ್ಟರಲ್ಲಿ ಯೋಸೇಫನು ತನ್ನ ಮನೆವಾರ್ತೆಯವನಿಗೆ ನೀನೆದ್ದು ಆ ಮನುಷ್ಯರನ್ನು ಹಿಂದಟ್ಟಿ – ನೀವು ಉಪಕಾರಕ್ಕೆ ಪ್ರತಿಯಾಗಿ ಯಾಕೆ ಅಪಕಾರ ಮಾಡಿದ್ದೀರಿ? ಆ ಪಾತ್ರೆಯಲ್ಲಿ ನನ್ನ ದಣಿಯು ಪಾನಮಾಡುತ್ತಾನಲ್ಲವೇ ಅದರಲ್ಲಿ ನೋಡಿ ಶಕುನಹೇಳುವದಿಲ್ಲವೇ ನೀವು ಮಾಡಿದ್ದು ಬಹಳ ಕೆಟ್ಟದ್ದು ಅನ್ನಬೇಕೆಂದು ಹೇಳಿದನು” (ಆದಿ. 44:4,5). ಆದರೆ ಅವರು ಅದನ್ನು ಅಲ್ಲಗಳೆದರು. ಮನೆವಾರ್ತೆಯವನು ಪರೀಕ್ಷಿಸಿ ನೋಡಿದಾಗ, ಬೆನ್ಯಾಮೀನನ ಚೀಲದಲ್ಲಿ ಯೋಸೇಫನ ಬೆಳ್ಳಿ ಪಾತ್ರೆಯು ಸಿಕ್ಕಿತು. ಆಗ ಅವರು ತಮ್ಮ ಬಟ್ಟೆಗಳನ್ನು ಹರಿದುಕೊಂಡು ಕತ್ತೆಗಳ ಮೇಲೆ ಚೀಲಗಳನ್ನು ಹೇರಿಕೊಂಡು ಪಟ್ಟಣಕ್ಕೆ ಹಿಂತಿರುಗಿ ಬಂದರು” (ಆದಿ. 44:13). ಬೆನ್ಯಾಮೀನನನ್ನು ತಾನು ಗುಲಾಮನನ್ನಾಗಿ ಇಟ್ಟುಕೊಳ್ಳುತ್ತೇನೆ, ಉಳಿದವರು ಮನಗೆ ಹೋಗಬಹುದೆಂದು ಯೋಸೇಫನು ಹೇಳಿದನು. ಆಗ ಯೆಹೂದನು, ಬೆನ್ಯಾಮೀನನನ್ನು ತಮ್ಮೊಂದಿಗೆ ಐಗುಪ್ತಕ್ಕೆ ಕಳಸಿದ ತಮ್ಮ ತಂದೆಯನ್ನು ಸಮಾಧಾನಪಡಿಸುವುದು ಕಷ್ಟ ಎಂದು ಹೇಳಿದನು. ಯೆಹೂದನು ಯೋಸೇಫನಿಗೆ ಬೆನ್ಯಾಮೀನನನ್ನು ತಂದೆಯ ಬಳಿಗೆ ತಿರುಗಿ ಕಳಿಸುವುದಾದರೆ ತಾನೇ ಆತನ ಬದಲಿಗೆ ಯೋಸೇಫನ ಗುಲಾಮನಾಗುತ್ತೇನೆಂದು ಹೇಳಿದನು. ಆತನಿದನ್ನು ಕೇಳಿದಾಗ ಯೊಸೇಫನಿಗೆ ತಡೆದುಕೊಳ್ಳಲಾಗಲಿಲ್ಲ. ಆತನು ತನ್ನ ಸೇವಕರನ್ನು ದೂರ ಕಳಿಸಿ ಅಳುವುದಕ್ಕೆ ಪ್ರಾರಂಭಿಸಿದನು. ಅನಂತರ ಆತನು ತನ್ನ ಅಣ್ಣಂದಿರಿಗೆ, “ನಾನು ಯೋಸೇಫನು, ನನ್ನ ತಂದೆ ಇನ್ನೂ ಇದ್ದಾನೋ ಎಂದು ಹೇಳಲು ಅವರು ಅವನ ಮುಂದೆ ತತ್ತರಗೊಂಡು ಉತ್ತರ ಕೊಡಲಾರದೆ ಹೋದರು” (ಆದಿ. 45:3). ಆತನವರಿಗೆ ತನ್ನನ್ನು ಮಾರಿದ್ದಕ್ಕೆ ವ್ಯಸನಪಟ್ಟು ದುಃಖಿಸಬೇಡಿರಿ ಎಂದು ಹೇಳಿದನು. ಯಾಕಂದರೆ ಪ್ರಾಣ ಸಂರಕ್ಷಣೆಗಾಗಿ ದೇವರು ಆತನನ್ನು ಅವರ ಮುಂದೆ ಕಳುಹಿಸಿದ್ದನು (ಆದಿ. 45:5).

ಅನಂತರ ಯೋಸೇಫನು ತನ್ನ ಸಹೋದರರಿಗೆ ಬೇಗನೆ ತಮ್ಮ ತಂದೆಯ ಬಳಿಗೆ ಹೋಗಿ ಆತನಿಗೆ ತನ್ನ ಮಕ್ಕಳು ಮೊಮ್ಮಕ್ಕಳು, ಕುರಿದನ ಮೊದಲಾದ ಸ್ವಾಸ್ಥ್ಯಸಹಿತ ಬಂದು ಐಗುಪ್ತದ ಗೋಷೆನ್ ಸೀಮೆಯಲ್ಲಿ ವಾಸಮಾಡಲು ಹೇಳಿರಿ ಎಂದು ಹೇಳಿದನು. “ಇಸ್ರಾಯೇಲನ

ಮಕ್ಕಳು ಅದೇ ಮೇರೆಗೆ ಮಾಡಿದರು. ಫರೋಹನ ಅಪ್ಪಣೆಯ ಪ್ರಕಾರ ಯೋಸೇಫನು ಅವರಿಗೆ ರಥಗಳನ್ನು ಮಾರ್ಗಕ್ಕೆ ಬೇಕಾದ ಆಹಾರವನ್ನು ಕೊಡಿಸಿದನು" (ಆದಿ. 45:21). "ಯೋಸೇಫನು ಇನ್ನೂ ಜೀವದಿಂದಿದ್ದಾನೆ, ಅವನು ಐಗುಪ್ತ ದೇಶದ ಸರ್ವಾಧಿಕಾರಿಯಾಗಿದ್ದಾನೆ ಎಂದು ತಿಳಿಸಲು ಅವನು ಸ್ತಬ್ಧನಾಗಿ ನಂಬಲಿಲ್ಲ" (ಆದಿ. 45:26). ಕೊನೆಗೆ ಆತನು ಚೇತರಿಸಿಕೊಂಡು "ನಾನು ಸಾಯುವುದಕ್ಕಿಂತ ಮುಂಚೆ ಹೋಗಿ ಅವನನ್ನು ನೋಡುವೆನು ಅಂದನು" (ಆದಿ. 45:28).

**ಆ. ಓದಿರಿ**

ಆದಿಕಾಂಡ 42:1 – 45:28

**ಇ. ಟಿಪ್ಪಣಿಗಳು**

*ಅವನ ಮುಂದೆಯೇ ಅಡ್ಡಬಿದ್ದರು* (42:6): ಯೋಸೇಫನು ಹುಡುಗನಾಗಿದ್ದಾಗ ಆತನ ಕನಸಿನೊಂದಿಗೆ ಹೋಲಿಸಿರಿ (ಆದಿ. 37:1-9).

*ಫರೋಹನ ಜೀವದಾಣೆ* (42:15): ಇದೊಂದು ಐಗುಪ್ತದ ಆಣೆ ಮಾಡುವ ಪದ್ಧತಿಯಾಗಿತ್ತು.

*ತನ್ನ ಒಡಹುಟ್ಟಿದ ತಮ್ಮನಾದ ಬೆನ್ಯಾಮೀನನು* (42:29): ಯೋಸೇಫ ಮತ್ತು ಬೆನ್ಯಾಮೀನನ ತಾಯಿಯು ರಾಹೇಲಳಾಗಿದ್ದಳು.

*ತಮ್ಮ ಬಟ್ಟೆಗಳನ್ನು ಹರಿದುಕೊಂಡು* (44:13): ಇದು ದುಃಖ ಮತ್ತು ಗೋಳಾಟದ ಸಂಕೇತವಾಗಿದೆ.

*ನಿಮ್ಮ ಜನ ಉಳಿಯುವಂತೆ* (45:7): ಯಾಕೋಬನ ಕುಟುಂಬವು ವಿಪತ್ತಿನಿಂದ ರಕ್ಷಿಸಲ್ಪಟ್ಟು, ನಿಮ್ಮ ಸಂತಾನವು ಅಸಂಖ್ಯಾತವಾಗುವುದೆಂದು ಅಬ್ರಹಾಮನು ಮತ್ತು ಯಾಕೋಬನಿಗೆ ದೇವರು ಮಾಡಿದ ವಾಗ್ದಾನವು ಇನ್ನೂ ಸಹ ಪ್ರಚಲಿತದಲ್ಲಿದೆ ಎಂಬುದು ಯೋಸೇಫನ ಮಾತಿನ ಅರ್ಥವಾಗಿದೆ.

*ಅಧಿಪತಿ* (45:8): ಇದು ಉನ್ನತ ಅಧಿಕಾರಿಗಳಿಗೆ ಕೊಡಲ್ಪಟ್ಟ ಒಂದು ಗೌರವಾನ್ವಿತ ಪದವಿಯಾಗಿದೆ.

*ಗೋಷೆನ್* (45:10): ಇದು ನೈಲ್ ಮುಖಜಭೂಮಿಯ ಈಶಾನ್ಯ ಭಾಗದಲ್ಲಿರುವ ಒಂದು ಪ್ರದೇಶವಾಗಿತ್ತು. ಈ ಭೂಮಿಯು ನಿರಾವರಿಯಿಂದ ಕೂಡಿದ್ದು ಕೃಷಿ ಮತ್ತು ಹುಲ್ಲುಗಾವಲಿಗೆ ಸರಿಹೊಂದುತ್ತಿತ್ತು.

*ಸ್ವತಃ ನಿಮ್ಮ ಸಂಗಡ ಮಾತಾಡಿದ್ದೇನಲ್ಲ* (45:12): ಯೋಸೇಫನು ಅನುವಾದಕರನ್ನು ಉಪಯೋಗಿಸದೆ ಅವರೊಂದಿಗೆ ನೇರವಾಗಿ ಇಬ್ರಿಯದಲ್ಲಿ ಮಾತನಾಡುತ್ತಿದ್ದನು.

**ಈ. ಪ್ರಶ್ನೆಗಳು**

1. ಯಾಕೆ ಬೆನ್ಯಾಮೀನನು ಮೊದಲು ಯೋಸೇಫನ ಉಳಿದ ಅಣ್ಣಂದಿರೊಂದಿಗೆ ಐಗುಪ್ತಕ್ಕೆ ಬರಲಿಲ್ಲ?
2. ಮುಂದಿನ ಬಾರಿ ಅವರು ಬರುವಾಗ ಬೆನ್ಯಾಮೀನನನ್ನು ಖಂಡಿತವಾಗಿ ಕರೆತರಲು ಯೋಸೇಫನು ತನ್ನ ಅಣ್ಣಂದಿರಗೆ ಯಾವ ಕಾರಣ ಕೊಟ್ಟನು?
3. ದವಸಧಾನ್ಯಕ್ಕಾಗಿ ಅವರು ಯೋಸೇಫನಿಗೆ ಕೊಟ್ಟ ಹಣಕ್ಕೆ ಏನಾಯಿತು?
4. ಅವರು ಎರಡನೇ ಬಾರಿ ಐಗುಪ್ತಕ್ಕೆ ಬಂದಾಗ ಯೊಸೇಫನು ತನ್ನ ಅಣ್ಣಂದಿರನ್ನು ಎಲ್ಲಿ ಸಂಧಿಸಿದನು? ಯಾಕೆ?
5. ಯೋಸೇಫನೊಂದಿಗೆ ಊಟದ ವೇಳೆ ಅವರ ವಯಸ್ಸಿನ ಪ್ರಕಾರ ಸರಿಯಾಗಿ ಕುಳ್ಳಿರಿಸದ್ದನ್ನು ಕಂಡು ಆತನ ಅಣ್ಣಂದಿರು ಯಾಕೆ ಆಶ್ಚರ್ಯಪಟ್ಟರು?

6. ಬೆನ್ಯಾಮೀನನ ಚೀಲದಲ್ಲಿ ಮನೆವಾರ್ತೆಯವನು ಕಂಡದ್ದೇನು?

7. ಯಾಕೆ ಅಣ್ಣಂದಿರು ಈ ಬಾರಿ ಐಗುಪ್ತಕ್ಕೆ ಗುಲಾಮರಾಗಿ ಹಿಂತಿರುಗಬೇಕಾಯಿತು?

8. ಇಸ್ರಾಯೇಲುಗಾಗಿ ತಮ್ಮ ಜನವು ಉಳಿಯಬೇಕೆಂದು ತನ್ನನ್ನು ಐಗುಪ್ತಕ್ಕೆ ಕಳಿಸಿದವರು ಯಾರೆಂಬುದಾಗಿ ಯೋಸೇಫನು ಹೇಳುತ್ತಾನೆ?

9. ಯೋಸೇಫನ ಅಣ್ಣಂದಿರು ಬಂದಿದ್ದಾರೆಂಬುದನ್ನು ತಿಳಿದಾಗ ಫರೋಹನೂ ಆತನ ಪರಿವಾರದವರೂ ಹೇಗೆ ಪ್ರತಿಕ್ರಿಯಿಸಿದರು?

10. ಯೋಸೇಫನು ಇನ್ನೂ ಜೀವಂತವಾಗಿದ್ದಾನೆಂಬುದನ್ನು ತಮ್ಮ ತಂದೆಗೆ ಮನವರಿಕೆ ಮಾಡಲು ಆತನ ಅಣ್ಣಂದಿರು ಏನು ಮಾಡಿದರು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಯೋಸೇಫನು ಅವರನ್ನು ಗುರುತು ಹಿಡಿದರೂ ಆತನ ಅಣ್ಣಂದಿರಿಗೆ ಯಾಕೆ ಆತನನ್ನು ಗುರುತಿಸಲಾಗಲಿಲ್ಲ?

2. ಈ ನಾಲ್ಕು ಅಧ್ಯಾಯಗಳಲ್ಲಿನ ಯೋಸೇಫ ಮತ್ತು ಆತನ ಅಣ್ಣಂದಿರ ನಡುವಿನ ಪರಸ್ಪರ ಮಾತುಕತೆಯನ್ನು ವಿಶ್ಲೇಷಿಸಿರಿ. ಈ ನಾಲ್ಕು ದೃಶ್ಯಗಳನ್ನು ನೋಡಿ, ಯೋಸೇಫನು ಹೇಗೆ ವರ್ತಿಸುತ್ತಾನೆ ಮತ್ತು ಆತನ ಅಣ್ಣಂದಿರು ಹೇಗೆ ವರ್ತಿಸುತ್ತಾರೆಂಬುದನ್ನು ಅಭ್ಯಾಸಿಸಿರಿ:

   ಅ. ದೃಶ್ಯ ಒಂದು: ಮೊದಲ ಬಾರಿ ಹತ್ತು ಅಣ್ಣಂದಿರು ದವಸಧಾನ್ಯ ಖರೀದಿಸಲು ಯೋಸೇಫನ ಬಳಿಗೆ ಬರುತ್ತಾರೆ (ಆದಿ. 42:6-26).

   ಆ. ದೃಶ್ಯ ಎರಡು: ಅಣ್ಣಂದಿರು ಎರಡನೇ ಬಾರಿಗೆ ಐಗುಪ್ತಕ್ಕೆ ಬರುತ್ತಾರೆ. ಈ ಬಾರಿ ಅವರು ಬೆನ್ಯಾಮೀನನನ್ನು ಕರೆತರುತ್ತಾರೆ (ಆದಿ. 43:15-34)

   ಇ. ದೃಶ್ಯ ಮೂರು: ಬೆನ್ಯಾಮೀನನ ಚೀಲದಲ್ಲಿ ಯೋಸೇಫನ ಪಾತ್ರೆ ಸಿಕ್ಕಾಗ ಮನೆವಾರ್ತೆಯವನು ಅಣ್ಣಂದಿರನ್ನು ತಿರುಗಿ ಕರೆತರುತ್ತಾನೆ (ಆದಿ. 44:14-34).

   ಈ. ದೃಶ್ಯ ನಾಲ್ಕು: ಯೋಸೇಫನು ತನ್ನ ಅಣ್ಣಂದಿರಿಗೆ ತಾನು ಯಾರೆಂಬುದನ್ನು ತಿಳಿಸುತ್ತಾನೆ (ಆದಿ. 45:1-15).

3. ಈಗ ಯಾಕೋಬನು ಮುದುಕನಾಗಿರುತ್ತಾನೆ, ಹಾಗಾಗಿ ಆತನು ಈ ವ್ಯವಹಾರದಲ್ಲಿ ಪಾಲುಗಾರನಾಗುವುದಿಲ್ಲ. ಆದರೆ ಯೋಸೇಫ ಮತ್ತು ಆತನ ಅಣ್ಣಂದಿರ ನಡುವೆ ಆಗುತ್ತಿರುವ ವಿಧ್ಯಮಾನಗಳು ಆತನ ಮೇಲೆ ಮಾನಸಿಕವಾಗಿ ಆಳವಾದ ಪರಿಣಾಮ ಬೀರುತ್ತವೆ. ಯಾಕೋಬನ ದೃಷ್ಟಿಕೋನದಿಂದ ಈ ಕಥೆಯನ್ನು ನಿಮ್ಮ ಮಾತಿನಲ್ಲಿ ಹೇಳಿರಿ. ಆತನಿಗೆ ತನ್ನ ಮಕ್ಕಳು ತಿಳಿಸಿದ ಸಂಗತಿಗಳಷ್ಟೇ ಗೊತ್ತು.

4. ಇಪ್ಪತ್ತು ವರ್ಷಗಳ ಹಿಂದೆ ಯೋಸೇಫನನ್ನು ಮಿದ್ಯಾನರಿಗೆ ಮಾರಿದಂದಿನಿಂದ ಆತನ **ಅಣ್ಣಂದಿಗೆ** ಹೇಗೆ ಬದಲಾಗಿದ್ದಾರೆಂಬುದನ್ನು ವಿವರಿಸಿರಿ.

5. ಈ ಅಧ್ಯಯನದ ಕುರಿತ ನಿಮ್ಮ ಆಲೋಚನೆ ಮತ್ತು ಭಾವನೆಗಳನ್ನು ಹಂಚಿಕೊಳ್ಳಿರಿ. ಇದರಿಂದ ನಿಮಗೆ ಸಿಗುವ ಒಳನೋಟಗಳೇನು?

**ಆದಿಕಾಂಡ ಅಧ್ಯಯನ 25: ಯಾಕೋಬ ಮತ್ತು ಆತನ ಕುಟುಂಬವು ಐಗುಪ್ತದಲ್ಲಿ ನೆಲೆಸುವುದು**

**ಅ. ಪೀಠಿಕೆ**

ಹೀಗೆ ಯಾಕೋಬನು ತನ್ನ ಇಡೀ ಕುಟುಂಬದೊಂದಿಗೆ ಐಗುಪ್ತಕ್ಕೆ ಹೋದನು. ಅಲ್ಲದೆ ಅವರು ದನಕುರಿಗಳನ್ನೂ ತಾವು ಕಾನಾನ್ ದೇಶದಲ್ಲಿ ಸಂಪಾದಿಸಿಕೊಂಡಿದ್ದ ಸೊತ್ತುಗಳನ್ನು ತೆಗೆದುಕೊಂಡು ಹೋದರು" (ಆದಿ. 46:6). ಯೋಸೇಫನ ಸಹೋದರರು ಫರೋಹನಿಗೆ ತಾವು ಕುರಿಕಾಯುವವರು ಮತ್ತು ಈಗ ಗೋಷನ್ ಸೀಮೆಯಲ್ಲಿ ವಾಸವಾಗಿದ್ದೇವೆಂಬುದಾಗಿ ವಿವರಿಸಿದರು. "ಯೋಸೇಫನು ತನ್ನ ತಂದೆಯಾದ ಯಾಕೋಬನನ್ನು ಕರಕೊಂಡು ಫರೋಹನ ಸನ್ನಿಧಿಯಲ್ಲಿ ನಿಲ್ಲಿಸಲು ಯಾಕೋಬನು ಫರೋಹನನ್ನು ಆಶೀರ್ವದಿಸಿದನು" (ಆದಿ. 47:7).

ಬರವು ಇನ್ನು ಕೆಲವರುಷ ಮುಂದುವರೆಯಿತು ಮತ್ತು ಐಗುಪ್ತದ ಜನರು ಬದುಕುಳಿಯುವುದಕ್ಕಾಗಿ ತಮ್ಮ ಹೊಲಗದ್ದೆಗಳನ್ನೂ, ಪಶುಗಳನ್ನೂ ಮತ್ತು ತಮ್ಮನ್ನೂ ಫರೋಹನಿಗೆ ಮಾರಬೇಕಾಗಿ ಬಂತು (ಅಧ್ಯಾಯ 47). ಯಾಕೋಬನು ಐಗುಪ್ತದಲ್ಲಿ ಹದಿನೇಳು ವರುಷ ಬದುಕಿದನು. ಆತನು ಸಾಯುವುದಕ್ಕಿಂತ ಮುಂಚೆ ಯೋಸೇಫ ಮತ್ತು ಮನಸ್ಸೆಯನ್ನು (ಅಧ್ಯಾಯ 48) ಮತ್ತು ತನ್ನ ಹನ್ನೆರಡು ಮಂದಿ ಮಕ್ಕಳನ್ನು ಆಶೀರ್ವದಿಸಿದನು (ಅಧ್ಯಾಯ 49). ಯಾಕೋಬನ ಶವಕ್ಕೆ ಐಗುಪ್ತದ ರೀತಿಯಂತೆಯೇ ಸುಗಂಧದ್ರವ್ಯಗಳನ್ನು ತುಂಬಿ ಸಿದ್ಧಪಡಿಸಲಾಯಿತು ಮತ್ತು ಫರೋಹನು ಯೋಸೇಫನಿಗೆ ಯಾಕೋಬನ ದೇಹವನ್ನು ಕಾನಾನ್ ದೇಶಕ್ಕೆ ಕೊಂಡೊಯ್ದು ಮಕ್ಪೇಲ ಬೈಲಿನಲ್ಲಿ ಮಮ್ರೆಗೆದುರಾಗಿರುವ ಗವಿಯಲ್ಲಿ ಸಮಾಧಿಮಾಡಲು ಅನುಮತಿಸಿದನು (ಆದಿ. 50:13).

ಅನಂತರ ಯೋಸೇಫನು ತನ್ನ ಅಣ್ಣಂದಿರಿಗೆ ಭರವಸೆಕೊಟ್ಟು ಅವರು ಈ ಹಿಂದೆ ಮಾಡಿದ್ದಕ್ಕಾಗಿ ಅವರನ್ನು ಕ್ಷಮಿಸಿದನು. ಈ ರೀತಿ ಆತನು ಅವರಿಗೆ ಹೇಳಿದನು: "ಹೆದರಬೇಡಿರಿ, ನಾನೇನು ದೇವರ ಪ್ರತಿನಿಧಿಯೇ? ನೀವಂತೂ ನನಗೆ ಕೇಡಾಗಬೇಕೆಂದು ಎಣಿಸಿದ್ದಿರಿ, ಆದರೆ ದೇವರು ಮೇಲಾಗಬೇಕೆಂದು ಸಂಕಲ್ಪಿಸಿದನು, ಈಗ ಅನುಭವಕ್ಕೆ ಬಂದ ಪ್ರಕಾರವೇ ಅನೇಕ ಪ್ರಾಣಿಗಳಿಗೆ ಸಂರಕ್ಷಣೆಯುಂಟಾಗುವಂತೆ ಮಾಡಿದನು" (ಆದಿ. 50:19-20). "ಯೋಸೇಫನೂ ಅವನ ತಂದೆಯ ಮನೆಯವರೂ ಐಗುಪ್ತದೇಶದಲ್ಲಿ ವಾಸಮಾಡಿದರು. ಯೋಸೇಫನು ನೂರಹತ್ತು ವರುಷ ಬದುಕಿದನು. ಅವನು ಎಫ್ರಾಯೀಮನ ಮಕ್ಕಳ ಮೊಮ್ಮಕ್ಕಳನ್ನು ನೋಡಿದನು" (ಆದಿ. 50:22-23). ಆತನು ಸಾಯುವುದಕ್ಕಿಂತ ಮುಂಚೆ ತನ್ನ ಕುಟುಂಬದವರಿಗೆ ಅವರು ಐಗುಪ್ತದೇಶವನ್ನು ಬಿಟ್ಟು ಕಾನಾನ್ ದೇಶಕ್ಕೆ ಹೋಗುವಾಗ ತನ್ನ ಶವವನ್ನು ತಮ್ಮ ಸಂಗಡ ಹೊತ್ತುಕೊಂಡು ಹೋಗಬೇಕೆಂದು ಹೇಳಿ ಅವರಿಂದ ಪ್ರಮಾಣಮಾಡಿಸಿದನು. ಅಲ್ಲಿಯವರೆಗೂ ಆತನ ಶವಕ್ಕೆ ಸುಗಂಧದ್ರವ್ಯಗಳನ್ನು ತುಂಬಿ ಐಗುಪ್ತದೇಶದೊಳಗೆ ಅದನ್ನು ಪೆಟ್ಟಿಗೆಯಲ್ಲಿ ಇರಿಸಿದರು (ಆದಿ. 50:26).

**ಆ. ಓದಿರಿ**

ಆದಿಕಾಂಡ 46:1-7, 26-34, 47:1-26, 49:28 - 50:26

**ಇ. ಟಿಪ್ಪಣಿಗಳು**

*ಇಸ್ರಾಯೇಲನು ತನಗಿದ್ದ ಸರ್ವಸ್ವವನ್ನು ತೆಗೆದುಕೊಂಡು ಬೇರ್ಷಬಕ್ಕೆ ಬಂದು* (46:1): ಬಹುಶಃ ಯಾಕೋಬನು ಹೆಬ್ರೋನಿನಲ್ಲಿ ವಾಸವಾಗಿದ್ದಿರಬಹುದು (ಹೋಲಿಸಿ ಆದಿ. 35:7), ಹಾಗಾಗಿ ಆತನು ಅಲ್ಲಿಂದಲೇ ತನ್ನ ಪ್ರಯಾಣವನ್ನು ಪ್ರಾರಂಭಿಸಿದನು. ಬೇರ್ಷಬವು ಹೆಬ್ರೋನಿನ ದಕ್ಷಿಣಕ್ಕಿದೆ.

*ತಾವೇ ಬಂದು ಅವನ ಮುಂದೆ ಅಡ್ಡಬಿದ್ದು* (50:18): ಇದು ಯೌವನನಾಗಿದ್ದಾಗ ಯೋಸೇಫನು ಕಂಡ ಕನಸಿನ ಅಂತಿಮ ನೆರವೇರಿಕೆಯಾಗಿದೆ.

*ನೀವು ನನ್ನ ಶವವನ್ನು ಹೊತ್ತುಕೊಂಡು ಹೋಗಬೇಕೆಂದು* (50:25): ಶತಮಾನಗಳ ನಂತರ ಮೋಶೆ ಮತ್ತು ಇಸ್ರಾಯೇಲ್ಯರು ಐಗುಪ್ತದಿಂದ ವಾಗ್ದಾನದ ದೇಶಕ್ಕೆ ಯೋಸೇಫನ ಶವವನ್ನು ಕೊಂಡೊಯ್ದಾಗ ಈ ಬೇಡಿಕೆಯು ನೆರವೇರಿತು (ವಿಮೋ. 13:19).

*ಯೋಸೇಫನು ನೂರಹತ್ತು ವರುಷದವನಾಗಿ ಸತ್ತನು* (50:26): 110 ವರ್ಷವು ಒಂದು ಆದರ್ಶ ಜೀವಾತಾವದಿಯೆಂಬುದಾಗಿ ಪ್ರಾಚೀನ ಐಗುಪ್ತದ ದಾಖಲೆಗಳು ತೋರಿಸುತ್ತವೆ. ಹೀಗೆ ಐಗುಪ್ತ್ಯರ ದೃಷ್ಟಿಕೋನದಿಂದ ಯೋಸೇಫನ ಜೀವನವು ನಿಜವಾಗಲೂ ಆಶೀರ್ವಧಿಸಲ್ಪಟ್ಟಿತ್ತು.

**ಈ. ಪ್ರಶ್ನೆಗಳು**

1. ಎದ್ದು ಐಗುಪ್ತಕ್ಕೆ ಹೋಗುವಂತೆ ದೇವರು ಯಾಕೋಬನಿಗೆ ಹೇಗೆ ಉತ್ತೇಜಿಸುತ್ತಾನೆ?
2. ಯಾಕೋಬನು ಅಲ್ಲಿ ವಾಸಿಸುವ ಸಮಯದಲ್ಲಿ ಐಗುಪ್ತದಲ್ಲಿನ ಯಾಕೋಬನ ಸಂತತಿಯ ಒಟ್ಟು ಸಂಖ್ಯೆಯು ಎಷ್ಟಾಗಿತ್ತು?
3. ಫರೋಹನು ತನ್ನ ಕುಟುಂಬವು ಗೋಷೆನ್ ಸೀಮೆಯಲ್ಲಿ ವಾಸಿಸಲು ಹೇಳುವಂತೆ ಮಾಡಲು ಯೋಸೇಫನು ಮಾಡಿದ ಉಪಾಯವೇನು?
4. ಬರದ ಸಮಯದಲ್ಲಿ ಯೋಸೇಫನ ಆಡಳಿತವು ಐಗುಪ್ತ್ಯರ ಮೇಲಿನ ಫರೋಹನ ನಿಯಂತ್ರಣವನ್ನು ಬಲಪಡಿಸಿತು. ಹೇಗೆ?
5. ಕಾನಾನಿಗೆ ಹೋಗಿ ತನ್ನ ತಂದೆಯಾದ ಯಾಕೋಬನನ್ನು ಅಲ್ಲಿ ಹೂಣಿಡಲು ಯೋಸೇಫನ ಜೊತೆಯಲ್ಲಿ ಯಾರೆಲ್ಲಾ ಹೋದರು?
6. ಸಾಯವುದಕ್ಕಿಂತ ಮುಂಚೆ ಯಾಕೋಬನು ಯೋಸೇಫನ ಅಣ್ಣಂದಿರಿಗೆ ನೀವು ಯೋಸೇಫನನ್ನು ಸಂಧಿಸಿ ನಿಮ್ಮ ತಪ್ಪು ಮತ್ತು ಪಾಪಗಳಿಗಾಗಿ ಆತನ ಬಳಿ ಕ್ಷಮೆಯನ್ನು ಕೇಳಬೇಕೆಂದು ಸಲಹೆಕೊಟ್ಟನು. ಅವರ ಮನವಿಗಳಿಗೆ ಯೋಸೇಫನು ಹೇಗೆ ಪ್ರತಿಕ್ರಿಯಿಸಿದನು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಆದಿಕಾಂಡದ ಈ ಕೊನೇ ಅಧ್ಯಾಯಗಳು ಸಕಾರಾತ್ಮಕ ಅಂಶಗಳನ್ನು ಒಳಗೊಂಡಿವೆ. ಈ ಅಧ್ಯಾಯನಗಳಲ್ಲಿ ನಿಮಗೆ ಕಂಡುಬರುವ ಸಕಾರಾತ್ಮಕ ಅಂಶಗಳ ಪಟ್ಟಿಮಾಡಿರಿ.
2. ಈ ಅಧ್ಯಯನದಲ್ಲಿನ ವಾಕ್ಯಭಾಗಗಳ ಕುರಿತ ನಿಮ್ಮ ಆಲೋಚನೆ ಮತ್ತು ಭಾವನೆಗಳನ್ನು ಹಂಚಿಕೊಳ್ಳಿರಿ.

**ಆದಿಕಾಂಡ ಅಧ್ಯಯನ 26: ಪೂರ್ವಜರು**

**ಅ. ಪೀಠಿಕೆ**

## 1. ಹಿನ್ನಲೆ:

ಆದಿಕಾಂಡ 12-50 ಅಬ್ರಹಾಮ, ಆತನ ಮಗನಾದ ಇಸಾಕ, ಮೊಮ್ಮಗ ಯಾಕೋಬ ಮತ್ತು ಆತನ ಹನ್ನೆರಡು ಮರಿಮಕ್ಕಳ (ವಿಶೇಷವಾಗಿ ಯೋಸೇಫ) ಮತ್ತು ಅವರ ಕುಟುಂಬಗಳ ಕಥೆಯನ್ನು ಹೇಳುತ್ತದೆ. ಈ ಪುರುಷರು ನಾಲ್ಕು ಸಂತತಿಯ ಪೂರ್ವಜರನ್ನು ಅಥವಾ ಇಸ್ರಾಯೇಲ್ ಜನಾಂಗದ ಪಿತೃಗಳನ್ನು ಹೊಂದಿದೆ. ಪರಿಣಾಮವಾಗಿ ಆದಿಕಾಂಡದ ಈ 38 ಅಧ್ಯಾಯಗಳನ್ನು "ಪೂರ್ವಜರ ಕಥನಗಳೆಂದು" ಕರೆಯಲಾಗಿದೆ.

ಈ ಕಥನಗಳು ಫಲವತ್ತಾದ ಮುಖಜಭೂಮಿಯೆಂಬ ಸ್ಥಳದಲ್ಲಿ ಸಂಭವಿಸುತ್ತವೆ. ಈ ಮಾತು ಮೆಸೊಪೊಟಮಿಯಾದ ಪೂರ್ವಭಾಗ ಮೆಡಿಟರೇನಿಯನ್ ತೀರದ ಮೇಲಿನಿಂದ ಕಾನಾನಿನ ಆಗ್ನೇಯ ಭಾಗ ಮತ್ತು ಐಗುಪ್ತದ ದಕ್ಷಿಣ ಭಾಗವನ್ನು ಸೂಚಿಸುತ್ತದೆ. ನಕ್ಷೆಯನ್ನು ನೋಡಿರಿ.

ಈ ಪ್ರಶ್ನೆಗೆ ಸರಳವಾದ ಉತ್ತರವಿಲ್ಲ: ನಮ್ಮ ಪೂರ್ವಜರು ಯಾವಾಗ ಜೀವಿಸಿದರು? ಸತ್ಯವೇದ ಪಂಡಿತರು ವಿಶಾಲವಾದ ದಿನಾಂಕಗಳನ್ನು ಸೂಚಿಸಿರುವರು ಮತ್ತು ಅವರೆಲ್ಲರೂ ಚಾರಿತ್ರಿಕ ವ್ಯಕ್ತಿಗಳಾಗಿದ್ದರೆಂಬುದನ್ನು ಸಹ ಅನೇಕರು ಅಲ್ಲಗಳೆದಿದ್ದಾರೆ. ಆದರೆ ಕಳೆದ ಶತಮಾನದ ಪುರಾತತ್ವ ಸಂಶೋಧನೆಗಳು ಮತ್ತು ಪುರಾತತ್ವ ಶಾಸ್ತ್ರಜ್ಞರ, ಇತಿಹಾಸಕಾರರ ಮತ್ತು ಭಾಷಾತಜ್ಞರ ಸೂಕ್ಷ್ಮ ಸಂಶೋಧನೆಗಳು ನಮ್ಮ ತಿಳುವಳಿಕೆಗಾಗಿ ಕ್ರಿಸ್ತನಿಗಿಂತ ಮುಂಚೆ ಎರಡು – ಮೂರು ಸಹಸ್ರ ವರುಷಗಳ ಅವಧಿಯಲ್ಲಿ ಫಲವತ್ತಾದ ಮುಖಜಭೂಮಿಯ ಇತಿಹಾಸ, ಸಂಸ್ಕೃತಿ, ವ್ಯಾಪಾರ ಮಾರ್ಗಗಳು ಮತ್ತು ಆರ್ಥಿಕ ಮತ್ತು ರಾಜಕೀಯ ಸ್ಥಿತಿಯನ್ನು ಸಹ ಸೇರಿಸಿವೆ. ಈ ಎಲ್ಲಾ ಸಂಶೋಧನೆಗಳ ಬೆಳಕಿನಲ್ಲಿ ಪೂರ್ವಜನರ ಕಥನಗಳನ್ನು ಓದುವುದು ಅಬ್ರಹಾಮನು ಹಾರಾನಿನಿಂದ ಕಾನಾನಿಗೆ ವಲಸೆ ಹೋದದ್ದು ಕ್ರಿ.ಪೂ. 2090 ರಲ್ಲಿ ಮತ್ತು ಯಾಕೋಬನು ಮತ್ತು ಆತನ ಕುಟುಂಬವು ಕಾನಾನಿನಿಂದ ಐಗುಪ್ತಕ್ಕೆ ಹೋದ ಘಟನೆ ಕ್ರಿ.ಪೂ. 1880 ರಲ್ಲಿ ಸಂಭವಿಸಿದೆ ಎಂದು ಊಹಿಸುವುದು ಸಮಂಜಸವಾಗಿದೆ.

## 2. ಅಬ್ರಹಾಮ

ಆದಿಕಾಂಡ 12:1-3, ಆದಿಕಾಂಡ 1-11ರ ಜಾಗತಿಕ ಇತಿಹಾಸ ಮತ್ತು ಸತ್ಯವೇದದ ಉಳಿದ ಭಾಗವು ಹೆಚ್ಚು ಗಮನಹರಿಸುವ ರಕ್ಷಣೆಯ ಇತಿಹಾಸದ ನಡುವೆ ಒಂದು ಸೇತುವೆಯನ್ನು ನಿರ್ಮಿಸುತ್ತದೆ. ಆದಿ. 12:1 ಮತ್ತು ಆದಿ. 1:3 ರ ನಡುವಿನ ಸಮಾನತೆಗಳನ್ನು ಗಮನಿಸಬೇಕು. ದೇವರು ಲೋಕದ ಚರಿತ್ರೆಯನ್ನು ಸೃಷ್ಟಿಯ ಕಾರ್ಯದೊಂದಿಗೆ ಪ್ರಾರಂಭಿಸುತ್ತಾನೆ. ಮತ್ತು ಆದಿ. 12 ರೊಂದಿಗೆ ಆತನು ಅದೇ ರೀತಿ ವಿಮೋಚನೆಯ ಕಾರ್ಯವನ್ನು ಪ್ರಾರಂಭಿಸುತ್ತಾನೆ. ಆದಿಕಾಂಡ 1 ರಲ್ಲಿ ದೇವರು ಮಾತಿನ ಮೂಲಕ ಸೃಷ್ಟಿಸಿದಂತೆ ಅಬ್ರಹಾಮನಿಂದ ಇಲ್ಲಿ ಕೇಳಿಸಿಕೊಂಡಂತೆ ಮಾತಿನ ಮೂಲಕವೇ ರಕ್ಷಿಸುತ್ತಾನೆ. ಹೀಗೆ ಅಬ್ರಹಾಮನ ಕರೆಯನ್ನು "ಒಂದು ಹೊಸ ಸೃಷ್ಟಿ"ಯಾಗಿ ನೋಡಬಹುದಾಗಿದೆ. "ಸ್ವದೇಶವನ್ನು ಬಂಧುಬಳಗವನ್ನು ತಂದೆಯ ಮನೆಯನ್ನು ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟುಹೋಗು" (ಆದಿ. 12:1) ಎಂಬ ಮಾತುಗಳು ಹಿಂದಿನ ಕಟ್ಟನ್ನು ಮುರಿದುಹಾಕಿ ದೇವರು ತೋರಿಸುವ ಗುರಿಯೆಡೆಗೆ ಹೋಗಲು ಇರುವ ಒಂದು ಕರೆಯಾಗಿದೆ. ಅಬ್ರಹಾಮನ ವಿಚಾರದಲ್ಲಿ ಇದು ದೇವರು ಆತನಿಗೆ ತೋರಿಸುವ ಒಂದು ನೆಲವಾಗಿದೆ. ಹೀಗೆ ಆದಿ. 12:1-13, ಆದಿ. 1-11 ಕ್ಕೆ ಒಂದು ಉತ್ತರವಾಗಿದೆ ಮತ್ತು ಬಾಬೆಲಿನ ನಂತರ ದೇವರ ಒಂದು ಹೊಸ ಹೆಜ್ಜೆಯಾಗಿದೆ. ಈ ಹಿಂದಿನ ಅಧ್ಯಯನದಲ್ಲಿ ನಾವು ನೋಡಿದಂತೆ ಆದಿಕಾಡ 11:10-32 ರಲ್ಲಿನ ವಂಶಾವಳಿಯು ಸಮಸ್ಯೆಯ ಮತ್ತು ಉತ್ತರದ ನಡುವೆ ಸಂಬಂಧವನ್ನು ಕಲ್ಪಿಸುತ್ತದೆ.

ಆದಿಕಾಂಡ 12:1-3 ರಲ್ಲಿ ನಾವು ಅನೇಕ ವಾಗ್ದಾನಗಳನ್ನು ಕಾಣುತ್ತೇವೆ. ಮೊದಲ ಎರಡು ವಚನಗಳಲ್ಲಿ ಅಬ್ರಹಾಮನಿಗೂ ಆತನ ಮನೆಗೂ ಸಂಬಂಧಿಸಿದ ಮೂರು ವಾಗ್ದಾನಗಳಿವೆ. ಈ ವಾಗ್ದಾನಗಳು ಭೂಮಿ, ಜನರು ಮತ್ತು ಹೆಸರಿನ ಕುರಿತಾಗಿವೆ. ಈ ಮೂರು ವಾಗ್ದಾನಗಳ ಫಲಿತಾಂಶವು ಲೋಕಕ್ಕಾಗಿನ, ಭೂಲೋಕದ ಎಲ್ಲಾ ಕುಲಕ್ಕಾಗಿನ ಆಶೀರ್ವಾದವಾಗಿದೆ. ಈ ಆಶೀರ್ವಾದವು ಅಬ್ರಹಾಮನ ಮೂಲಕ ಲೋಕಕ್ಕೆ ಇರುವುದಾಗಿದೆ. ಬಾಬೆಲಿನ ಪರಿಣಾಮವಾಗಿರುವ ಜನರ ಚದುರುವಿಕೆಯನ್ನು ಸರಿಪಡಿಸುವುದು ಇದರ ಉದ್ದೇಶವಾಗಿದೆ. ಇದನ್ನು ನಾವು ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು ಎಂಬ ಮಾತಿನಲ್ಲಿ ಕಾಣಬಹುದು. ತಮಗಾಗಿ ಹೆಸರನ್ನು ಮಾಡಬೇಕೆಂದು ಬಯಸುತ್ತಿದ್ದ ಬಾಬೆಲ್ ಗೋಪುರದ ಕೆಲಸಗಾರರಿಗೆ ತದ್ವಿರುದ್ಧವಾಗಿ ಇಲ್ಲಿ ದೇವರೇ ಅಬ್ರಹಾಮನ ಹೆಸರನ್ನು ಪ್ರಖ್ಯಾತಿಗೆ ತರುತ್ತಿದ್ದಾನೆ (ಆದಿ. 11:4). ಈ ಭೂಲೋಕದ ಎಲ್ಲಾ ಕುಲದವರಿಗೂ ಉಂಟಾಗುವ ಆಶೀರ್ವಾದವು ಎರಡು ಸಾವಿರ ವರ್ಷಗಳ ನಂತರದ ಯೇಸು ಕ್ರಿಸ್ತನ ಸುವಾರ್ತೆಯನ್ನು ನಿರೀಕ್ಷಿಸುತ್ತದೆ.

ಆದಿಕಾಂಡ 15 ರಲ್ಲಿ ನಾವು ಸ್ವಲ್ಪಕಾಲವಾದ ನಂತರ ದೇವರು ಅಬ್ರಹಾಮನೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆಯ ವಿಷಯವನ್ನು ಕಾಣುತ್ತೇವೆ. ಈ ಒಡಂಬಡಿಕೆಯನ್ನು ನಾವು ಏನೋ ಹೊಸತೆಂಬುದಾಗಿ ತಿಳಿದುಕೊಳ್ಳಬಾರದು. ಇದು ಆದಿ. 12:1-3 ರಲ್ಲಿನ ಅಬ್ರಹಾಮನ ಕರೆಯನ್ನು ಸೂಚಿಸುತ್ತದೆ. ಹಾಗಾಗಿ ಇದನ್ನು ದೇವರು ಮತ್ತು ಅಬ್ರಹಾಮನ ನಡುವೆ ಈಗಾಗಲೇ ಅಸ್ತಿತ್ವದಲ್ಲಿದ್ದ ಸಂಬಂಧದ ಖಚಿತತೆಯೆಂಬುದಾಗಿ ಅರ್ಥೈಸಿಕೊಳ್ಳಬೇಕಿದೆ. ಈಗ ಈ ಸಂಬಂಧವನ್ನು ಔಪಚಾರಿಕವಾಗಿ ಮಾಡಲಾಗಿದೆ. ಈ ಒಡಂಬಡಿಕೆಯು ಈ ಹಿಂದೆ ದೇವರು ಆತನಿಗೆ ಕೊಟ್ಟ ಎರಡು ವಾಗ್ದಾನಗಳಿಗೆ ಸಂಬಂಧಿಸಿದೆ: ಭೂಮಿ ಮತ್ತು ಸಂತತಿ. ಈ ಎರಡು ವಾಗ್ದಾನಗಳು ಇಸಾಕ ಮತ್ತು ಯಾಕೋಬನ ಕುರಿತ ಎರಡು ಪೂರ್ವಜರ ಕಥೆಗಳಿಗೆ ಸಂಬಂಧಿಸಿವೆ.

ಆದಿಕಾಂಡ 15 ರಲ್ಲಿ ಒಡಂಬಡಿಕೆಯನ್ನು ಮುಗಿಸುವವನು ದೇವರೇ ಎಂಬುದನ್ನು ನಾವು ಗಮನಿಸಬೇಕು. ತಾನು ಹಿಂದೆ ಅಬ್ರಹಾಮನಿಗೆ ಮಾಡಿದ ವಾಗ್ದಾನಗಳನ್ನು ನೆರವೇರಿಸುವೆನೆಂಬುದಾಗಿ ದೇವರು ಭರವಸೆ ಕೊಡುತ್ತಾನೆ ಮತ್ತು ಅಬ್ರಹಾಮನು ಯೆಹೋವನನ್ನು ನಂಬಿದನು (ವ.6). ಕರ್ತನು ಹೇಳುವುದು ನಿಜ ಮತ್ತು ಆತನ ಮಾತುಗಳೆಲ್ಲವೂ ಮಾನ್ಯವಾದುದ್ದಾಗಿವೆ ಎಂಬುದು ಆತನ ಹೃದಯಾಳದಲ್ಲಿ ಮನವರಿಕೆಯಾಗಿತ್ತು. ಆದರೆ ಅನೇಕ ವರ್ಷಗಳು ಕಾದ ನಂತರವೇ ಅಬ್ರಹಾಮನು ಇಸಾಕನ ಜನನದೊಂದಿಗೆ ದೇವರು ತನಗೆ ಮಾಡಿದ ವಾಗ್ದಾನದ ನೆರವೇರಿಕೆಯ ಮೊದಲ ಹಂತವನ್ನು ಕಾಣುತ್ತಾನೆ. ಅಬ್ರಹಾಮನು ತನ್ನ ಜೀವಿತಕಾಲದಲ್ಲಿ ಅಸಂಖ್ಯವಾದ ಸಂತತಿ ಅಥವಾ ಸೊತ್ತನ್ನು ಅನುಭವಿಸಲಿಲ್ಲ (ಕಾಣಲಿಲ್ಲ). ಆದರೆ ಇದರ ಹೊರತಾಗಿಯೂ ಆತನು "ಯೆಹೋವನನ್ನು ನಂಬಿದನು, ಯೆಹೋವನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು" (ಆದಿ. 15:6). ಅನೇಕ ವರ್ಷಗಳ ದೇವರಿಗಾಗಿನ ಪ್ರತ್ಯೇಕಿಸಲ್ಪಡುವುದಕ್ಕಾಗಿ ಸುನ್ನತಿಯು ಒಡಂಬಡಿಕೆಯ ಗುರುತಾಗಿ ಸೇರಿಸಲ್ಪಟ್ಟಿತು (ಆದಿ. 17).

### 3. ಇಸಾಕ ಮತ್ತು ಯಾಕೋಬ

ಆದಿಕಾಂಡದಲ್ಲಿ ಇಸಾಕನ ಬಗ್ಗೆ ಸಂಕ್ಷಿಪ್ತವಾದ ಮಾಹಿತಿಯಿದೆ. ಆದರೆ ಯಾಕೋಬನ ಕಥೆಯನ್ನು ಉದ್ದವಾಗಿ ಹೇಳಲಾಗಿದೆ. ಆತನು ಇಸ್ರಾಯೇಲಿನ ಹನ್ನೆರಡು ಕುಲಗಳ ಪಿತೃವಾಗಿದ್ದಾನೆ. ಯಾಕೋಬನ ಕಥೆಯು ಕಾನಾನಿನಲ್ಲಿ ಪ್ರಾರಂಭವಾಗಿ ಅಲ್ಲಿಯೇ ಮುಕ್ತಾಯವಾಗುತ್ತದೆ. ಆದರೆ ಯಾಕೋಬನ ಜೀವನದ ತಿರುವಿನ ಅಂಶವನ್ನು ಆದಿಕಾಂಡ 31 ರಲ್ಲಿ ಕಂಡುಬರುತ್ತದೆ. ಪದ್ದನ್ ಅರಾಮಿನಲ್ಲಿ ತನ್ನ ಮಾವನೊಂದಿಗಿನ ಇಪ್ಪತ್ತು ವರ್ಷಗಳ ಸೇವೆಯು ಅಂತ್ಯಕ್ಕೆ ಬರುತ್ತದೆ ಮತ್ತು ಆತನು ರಹಸ್ಯವಾಗಿ ತನ್ನ ಹೆಂಡತಿಯರು ಉಪಪತ್ನಿಯರು ಮತ್ತು ಅನೇಕ ಮಕ್ಕಳೊಂದಿಗೆ, ಸೇವಕರು, ಪಶುಗಳು ಮತ್ತು ಅಪಾರವಾದ ಸಂಪತ್ತಿನೊಂದಿಗೆ ಹೊರಟುಬರುತ್ತಾನೆ. ಲಾಬಾನನು ಆತನನ್ನು ಬೆನ್ನಟ್ಟಿ ಬಂದು ಹಿಡಿಯುತ್ತಾನೆ. ಕೊನೆಗೆ ಲಾಬಾನ ಮತ್ತು ಯಾಕೋಬರು ಒಪ್ಪಿಕೊಂಡು ಒಂದು ಒಡಂಬಡಿಕೆ ಮಾಡಿಕೊಳ್ಳುತ್ತಾರೆ. ಈ ಅಧ್ಯಾಯದಲ್ಲಿ ಯಾಕೋಬನನ್ನು ಅಪಾರವಾಗಿ ಆಶೀರ್ವದಿಸಲ್ಪಟ್ಟ ವ್ಯಕ್ತಿಯಾಗಿ ಬಿಂಬಿಸಲಾಗಿದೆ. ಈವರೆಗೆ ತನ್ನ ಮನೆ, ಸಹೋದರನಾದ ಏಸಾವ ಮತ್ತು ತನ್ನ ಸ್ಥಳದಿಂದ ಯಾಕೋಬನು ಅನುಭವಿಸಿದ ಅಗಲಿಕೆಯ ಕಥೆಗಳು ಈಗ ಆತನು ಕಾನಾನಿಗೆ ಹಿಂತಿರುಗುವಾಗ ವ್ಯತಿರಿಕ್ತವಾಗುತ್ತವೆ. ಆತನು ಆ ಸ್ಥಳವನ್ನು ಬಿಟ್ಟುಹೋಗುವಾಗ

ದೇವರು ಬೆತೇಲಿನಲ್ಲಿ ಆತನನ್ನು ಸಂಧಿಸುತ್ತಾನೆ (ಆದಿ. 28:10-17). ಈಗ ಆತನು ಹಿಂತಿರುಗುವಾಗ ಪುನಃ ದೇವರು ಆತನನ್ನು ಸಂಧಿಸುತ್ತಾನೆ (ಆದಿ. 32:22-32). ದೇವರು ಆತನನ್ನು ಆಶೀರ್ವದಿಸಿ ಆತನ ಹೆಸರನ್ನು ಇಸ್ರಾಯೇಲನೆಂಬುದಾಗಿ ಬದಲಿಸುತ್ತಾನೆ.

ಅಬ್ರಹಾಮ್, ಇಸಾಕ್ ಮತ್ತು ಯಾಕೋಬರ ಪೂರ್ವಜರ ಕಥನಗಳಿಗೆ ಒತ್ತುಕೊಟ್ಟಿರುವುದು ಆದಿಕಾಂಡ 12:1-3ರ ವಾಗ್ದಾನಗಳ ಭಾಗಗಳು ಹೇಗೆ ನೆರವೇರಿವೆ ಎಂಬುದನ್ನು ತೋರಿಸುವುದಕ್ಕಾಗಿದೆ ಎಂಬುದನ್ನು ನಾವು ಗಮನಿಸಲೇಬೇಕು. ಯಾಕೋಬನು ಕಾನಾನಿಗೆ ಹಿಂತಿರುಗುವಾಗ ಆತನಿಗೆ ಸಂತತಿಗಳು ಮತ್ತು ಹೆಸರು ಇದ್ದವು. ಆದರೆ ದೇಶದ ಮೇಲಿನ ಪೂರ್ವಜರ ಹಿಡಿತವು ಕ್ಷೀಣವಾಗಿತ್ತು. ಮುಂದೆ ಇಸ್ರಾಯೇಲ್ ಒಂದು ದೊಡ್ಡ ಜನಾಂಗವಾಗಿ ವಾಗ್ದಾನದ ದೇಶವನ್ನು ಹೊಂದಿಕೊಳ್ಳುವುದಕ್ಕಿಂತ ಮುಂಚೆ ದೈವಿಕ ನೇತೃತ್ವದ ಅವಶ್ಯಕತೆಯಿತ್ತು.

### 4. ಯೋಸೇಫ

ಯೋಸೇಫನ ಕುರಿತಾದ ಕಥೆಯು ಪೂರ್ವಜರ ಕಥೆಗಳಲ್ಲಿಯೇ ದೀರ್ಘವಾದುದ್ದಾಗಿದೆ. ಇದನ್ನು ಆದಿಕಾಂಡ 37-50 ರಲ್ಲಿ ಕಾಣಬಹುದು. ಈ ಕಥೆಯ ಕೇಂದ್ರವು ಯೋಸೇಫನು ತನ್ನ ಅಣ್ಣಂದಿರಿಗೆ ತನ್ನ ಗುರುತನ್ನು ತಿಳಿಸಿದಾಗಿನ ದೃಶ್ಯವಾಗಿದೆ (ಆದಿ. 45). ಯೋಸೇಫನು ತನ್ನ ಅಣ್ಣಂದಿರೊಂದಿಗೆ ಮಾತನಾಡುವಾಗ ಯೋಸೇಫನು ಐಗುಪ್ತಕ್ಕೆ ಬಂದ ಉದ್ದೇಶ ಪ್ರಕಟಿಸಲ್ಪಟ್ಟಿದೆ: *"ನಿಮ್ಮ ಜನವು ಭೂಮಿಯ ಮೇಲೆ ಉಳಿಯುವಂತೆಯೂ ನೀವು ಈ ವಿಪತ್ತಿಗೆ ಸಿಕ್ಕದೆ ಬಹುಜನವಾಗುವಂತೆಯೂ ದೇವರು ನನ್ನನ್ನು ನಿಮ್ಮ ಮುಂದೆ ಕಳುಹಿಸಿದನು"* (ಆದಿ. 45:7). ಐಗುಪ್ತದಲ್ಲಿ ಎಲ್ಲರೂ ಬದುಕಬಹುದು, ಮತ್ತು ಬದುಕಬಹುದಾದ ದೇಶದಲ್ಲಿ ಯೋಸೇಫನು ಅಧಿಕಾರದ ಕೇಂದ್ರದಲ್ಲಿದ್ದಾನೆ. ಅನೇಕ ವರ್ಷಗಳ ಬೇರ್ಪಡಿಸುವಿಕೆಯ ನಂತರ ಈಗ ಯೋಸೇಫನು ಪುನಃ ತನ್ನ ತಂದೆ ಮತ್ತು ಅಣ್ಣಂದಿರೊಂದಿಗೆ ಒಂದಾಗುತ್ತಾನೆ. ಪದ್ದನ್ ಅರಾಮಿನಲ್ಲಿ ಇಪ್ಪತ್ತು ವರ್ಷಗಳಿದ್ದ ನಂತರ ಯಾಕೋಬನು ತನ್ನ ಸ್ವದೇಶಕ್ಕೆ ಮರಳಿದಾಗ ಏನಾಯಿತೆಂಬುದನ್ನು ಇದು ನಮಗೆ ನೆನಪಿಸುತ್ತದೆ. ಇಸ್ರಾಯೇಲ್ ಎಂಬ ಒಂದು ಸಣ್ಣ ಜನಾಂಗ(ದೇಶ)ದೊಂದಿಗೆ ಆದಿಕಾಂಡವು ಮುಕ್ತಾಯವಾಗುತ್ತದೆ. ನೂರಾರು ವರ್ಷಗಳ ನಂತರ ಈ ಒಂದು ಸಣ್ಣ ದೇಶ(ಜನಾಂಗ)ವು ಬಹುದೊಡ್ಡ ಸಂಖ್ಯೆಯಲ್ಲಿ ಬೆಳೆಯುವುದನ್ನು ನಾವು ವಿಮೋಚನಕಾಂಡ ಪುಸ್ತಕದ ಆರಂಭದಲ್ಲಿ ನಾವು ಕಾಣಬಹುದು (ಆದಿ. 46:27ನ್ನು ವಿಮೋ. 1:5 ರೊಂದಿಗೆ ಹೋಲಿಸಿ). ವಿಮೋಚನಕಾಂಡ ಪುಸ್ತಕ ಸಹ ವಾಗ್ದಾತ್ತ ದೇಶದ ಒಂದು ಭಾಗಕ್ಕೆ ನಮ್ಮನ್ನು ನಡೆಸುತ್ತದೆ.

### ಆ. ಪ್ರಶ್ನೆಗಳು

ಮೇಲ್ಕಂಡ ಪೀಠಿಕೆ ಮತ್ತು ಆದಿ. 12:1-3, 15:1-21, 28:10-17, 31:1-55, 32:22-32, 45:1-8 ನ್ನು ಓದಿರಿ. ಹಾಗೆಯೇ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ. ಸಾಧ್ಯವಾದಷ್ಟು ನಿಮ್ಮದೇ ಪದಗಳನ್ನು ಬಳಸಿರಿ.

1. "ಪೂರ್ವಜರು" (ಪಿತೃಗಳು) ಎಂಬ ರೂಪವನ್ನು ವಿವರಿಸಿರಿ.
2. ಪೂರ್ವಜರ ಕಥೆಗಳು ಯಾವಾಗ ಮತ್ತು ಎಲ್ಲಿ ಸಂಭವಿಸಿರುತ್ತವೆ?
3. ಯಾವ ರೀತಿಯಲ್ಲಿ ಆದಿ. 12:1-3ನ್ನು ಆದಿಕಾಂಡದ ಮೊದಲ ಭಾಗ ಮತ್ತು ಉಳಿದ ಸತ್ಯವೇದದ ನಡುವೆ ಒಂದು "ಸೇತುವೆ" ಯಾಗಿ ಕಾಣಬಹುದು?
4. "ಹೆಸರು" ಎಂಬ ಪದವನ್ನು ಬಾಬೆಲ್ ಗೋಪುರದ ಕಥೆ ("ದೊಡ್ಡ ಹೆಸರನ್ನು ಪಡೆಯೋಣ") ಮತ್ತು ಅಬ್ರಹಾಮನ ಕರೆಯ ಕಥೆಯಲ್ಲಿ ಸಹ ಕಾಣಬಹುದು ("ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು"). ಇದರ ಪ್ರಾಮುಖ್ಯತೆಯೇನು?
5. ಆದಿ. 15 ರಲ್ಲಿ ಅಬ್ರಹಾಮನೊಂದಿಗಿನ ದೇವರ ಒಡಂಬಡಿಕೆ ಮತ್ತು ಆದಿ. 12:1-3 ರಲ್ಲಿನ ಅಬ್ರಹಾಮನ ಕರೆಯ ನಡುವಿನ ಸಂಬಂಧವೇನು?

6. ದೇವರು ಅಬ್ರಹಾಮನೊಂದಿಗೆ ಯಾವ ಒಡಂಬಡಿಕೆಯನ್ನು ಮಾಡಿಕೊಳ್ಳುತ್ತಾನೆ ಮತ್ತು ಎಷ್ಟರ ಮಟ್ಟಿಗೆ ಈ ವಾಗ್ದಾನಗಳು ತನ್ನ ಜೀವಿತಾವಧಿಯಲ್ಲಿ ನೆರವೇರುವುದನ್ನು ಅಬ್ರಹಾಮನು ಕಾಣುತ್ತಾನೆ?

7. ಯಾವ ರೀತಿಯಲ್ಲಿ ನಾವು ಆದಿಕಾಂಡ 31 ಯಾಕೋಬನ ಕಥೆಯಲ್ಲಿ ಒಂದು ತಿರುವಿನ ಅಂಶವಾಗಿದೆ ಎಂದು ಹೇಳಬಹುದು?

8. ಯೋಸೇಫನು ಐಗುಪ್ತಕ್ಕೆ ಬಂದಿದ್ದರ ಉದ್ದೇಶವೇನಾಗಿತ್ತು?

9. ಆದಿಕಾಂಡ ಪುಸ್ತಕದ ಕೊನೆಯಲ್ಲಿ ಎಷ್ಟರ ಮಟ್ಟಿಗೆ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನಗಳು ನೆರವೇರುತ್ತವೆ?

**ಇ. ಮುಖ್ಯಾಯಗಳು**

1. ಇಸ್ರಾಯೇಲ್ ದೇಶದ (ಜನಾಂದ) ಇತಿಹಾಸವು ಅಬ್ರಹಾಮನು ಇನ್ನೂ ಮೆಸೊಪೊಟಮಿಯಾದಲ್ಲಿರುವಾಗಲೇ ಸುಮಾರು ಕ್ರಿ.ಪೂ. 2090 ರಲ್ಲಿ ದೇವರು ಆತನೊಂದಿಗೆ ಮಾಡಿಕೊಂಡ ವಾಗ್ದಾನಗಳೊಂದಿಗೆ (ಆದಿ. 12:1-3) ಪ್ರಾರಂಭವಾಗುತ್ತದೆ.

2. ದೇವರು ಅಬ್ರಹಾಮನಿಗೆ ಒಂದು ಜನಾಂಗ, ಆ ಜನಾಂಗಕ್ಕೆ ಬೇಕಾದ ಭೂಮಿ, ಒಂದು ದೊಡ್ಡ ಹೆಸರು ಮತ್ತು ಆತನ ಮೂಲಕ ಎಲ್ಲಾ ಜನರಿಗೆ ಆಶೀರ್ವಾದವಾಗುವದೆಂದು ವಾಗ್ದಾನಮಾಡುತ್ತಾನೆ.

3. ಆದಿಕಾಂಡದಲ್ಲಿನ ಒಂದು ಮುಖ್ಯ ವಿಷಯವೇನೆಂದರೆ ಕೆಳಕಂಡ ಮೂರು ಸಂತತಿಯ ಪೂರ್ವಜರ ಕಥೆಗಳ ಮೂಲಕ ಈ ವಾಗ್ದಾನಗಳ ಭಾಗಗಳನ್ನು ಹೇಗೆ ನೆರವೇರಿಸಿದನೆಂಬುದಾಗಿದೆ: ಇಸಾಕ, ಯಾಕೋಬ ಮತ್ತು ಯೋಸೇಫ. ಆದರೆ ಪುಸ್ತಕದ ಕೊನೆಯಲ್ಲಿ ಅವು ಬರೀ ಭಾಗಶಃ ನೆರವೇರಿವೆ ಮತ್ತು ಅವುಗಳು ಕೇವಲ ಯೇಸು ಕ್ರಿಸ್ತನೊಂದಿಗೆ ನಿಜವಾಗಿ ನೆರವೇರುತ್ತವೆ.

4. ಆದಿಕಾಂಡ 12:1-3ನ್ನು ಕೇವಲ ಸತ್ಯವೇದದ ಕಥೆಯಲ್ಲಷ್ಟೇ ಅಲ್ಲ, ಮಾನವನ ಇತಿಹಾಸದಲ್ಲಿ ಸಹ ಒಂದು ತಿರುವಿನ ಅಂಶವೆಂಬುದಾಗಿದೆ ಅರಿತುಕೊಳ್ಳಬಹುದು. ಅಲ್ಲಿಯವರೆಗೆ ಮನುಷ್ಯ ಮತ್ತು ಸಮಾಜದ ಮೇಲಿನ ಪಾಪದ ಹಿಡಿತವು ಬಲಗೊಳ್ಳುತ್ತಲೇ ಬಂದಿದೆ. ಆದರೆ ಅಬ್ರಹಾಮನ ಕರೆಯು ದೇವರು ತನ್ನ ಬಿಡುಗಡೆಯ ಕಾರ್ಯವನ್ನು ಪ್ರಾರಂಭಿಸಿದಂತೆ ಒಂದು ಹೊಸ ಆರಂಭ, ಒಂದು ಹೊಸ ಸೃಷ್ಟಿಯಾಗಿದ್ದು ಇದು ಯೇಸು ಕ್ರಿಸ್ತನಲ್ಲಿ ಪೂರ್ಣವಾಗಿ ನೆರವೇರುವುದಾಗಿದೆ.

5. ಆದಿಕಾಂಡ 15 ರಲ್ಲಿ ದೇವರು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯು ದೇವರು ಈ ಹಿಂದೆ ಆತನೊಮದಿಗೆ ಮಾಡಿಕೊಂಡ ವಾಗ್ದಾನಗಳನ್ನು ದೃಢೀಕರಿಸಿದೆ (ಆದಿ. 12:1-3).

6. ದೇವರು ಅಬ್ರಹಾಮನೊಂದಿಗೆ ಮಾಡಿದ ಒಡಂಬಡಿಕೆ (ಆದಿ. 15:1-21) ಮತ್ತು ದೇವರು ಆತನಿಗೆ ಮಾಡಿದ ವಾಗ್ದಾನಗಳು (ನೋಡಿ ಆದಿ. 12:1-3, 17:1-27 ಮತ್ತು 22:1-19) ಯಾವುದೇ ಷರತ್ತಿಲ್ಲದವುಗಳಾಗಿವೆ. ಅವುಗಳ ನೆರವೇರಿಕೆಯು ಯಾವುದೇ ಮನುಷ್ಯನ ಅರ್ಹತೆಯ ಮೇಲೆ ಅವಲಂಬಿತವಾಗಿಲ್ಲ. ಅವು ದೇವರ ಕೃಪೆಯ ಪ್ರತೀಕಗಳಾಗಿವೆ. ಇವು ಅಬ್ರಹಾಮನು ಮಾಡಬೇಕಾದವುಗಳು: ಆತನು ದೇವರಲ್ಲಿ ನಂಬಿಕೆಯಿಡಬೇಕು, ಆತನು ದೇವರ ಮಾರ್ಗದರ್ಶನಕ್ಕೆ ವಿಧೇಯನಾಗಬೇಕಿತ್ತು ಮತ್ತು ಆತನು ಸುನ್ನತಿಯನ್ನು ಮಾಡಿಸಿಕೊಳ್ಳಬೇಕಾತ್ತು (ಒಡಂಬಡಿಕೆಯ ಸಂಕೇತ).

7. ಸ್ವತಃ ತನ್ನ ಜೀವಿತಾವಧಿಯಲ್ಲಿ ಅಲ್ಪ ಅಧಿಕಾರದ ಹೊರತಾಗಿಯೂ ದೇವರು ತನ್ನ ಒಡಂಬಡಿಕೆಯ ವಾಗ್ದಾನಗಳನ್ನು ನೆರವೇರಿಸುವನೆಂಬುದಾಗಿ ಅಬ್ರಹಾಮನು ದೇವರಲ್ಲಿ ಭರವಸವಿಟ್ಟು ಆತನನ್ನು ನಂಬಿದನು.

**ಈ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. "ಅಬ್ರಹಾಮನ ಕರೆಯು ಎಲ್ಲಾ ವಿಶ್ವಾಸಿಗಳಿಗೆ ಅನ್ವಯಿಸುವ ಕರೆಯ ಒಂದು ರೂಪವಾಗಿದೆ". ಈ ಹೇಳಿಕೆಯನ್ನು ವಿವರಿಸಿ ಸ್ವತಃ ನಿಮ್ಮ ಜೀವನ ಮತ್ತು ದಕ್ಷಿಣ ಭಾರತದ ಸಭೆಯ ಜೀವನದಲ್ಲಿ ಇದು ನಿಜವಾ ಎಂದು ನೋಡಿರಿ.

2. ಆದಿ. 12:1-3, 15:1-21, 17:1-27 ಮತ್ತು 22:1-19ನ್ನು ಪರಿಶೀಲಿಸಿರಿ. ದೇವರು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆ ಪೂರ್ವಾಪೇಕ್ಷಿತವಾದುದ್ದಾ? ಇದಕ್ಕೆ ಯಾವುದೇ ಹಂಗುಗಳಿವೆಯಾ? ಯಾವುದೇ ರೀತಿಯಲ್ಲಿ ಈ ವಾಗ್ದಾನವದ ನೆರವೇರಿಕೆಯು ಮನುಷ್ಯನ ಅರ್ಹತೆಯ ಮೇಲೆ ಅವಲಂಭಿತವಾಗಿತ್ತಾ?

3. ಆದಿಕಾಂಡ 12-50 ರ ಕಥೆಗಳಲ್ಲಿ ವಿವರಿಸಿದಂತೆ ಈ ಅಧ್ಯಯನವು ನಿಮಗೆ ಪೂರ್ವಜರೊಂದಿಗಿನ ದೇವರ ಮಾತುಕತೆಯು ಹೇಗೆ ಒಂದು ಉತ್ತಮವಾದ ತಿಳುವಳಿಕೆಯನ್ನು ಕೊಟ್ಟಿತೆಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

**ಉ. ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ**

ಈ ಅಧ್ಯಯನದಲ್ಲಿ ನೀವು ಕಲಿತ ಅಂಶಗಳನ್ನುಪಯೋಗಿಸಿ ನಿಮ್ಮ ಸಭೆಗಾಗಿ "ಅಬ್ರಹಾಮನಿಗೆ ಮತ್ತು ನಮಗೆ ದೇವರ ವಾಗ್ದಾನಗಳು" ಎಂಬ ಸತ್ಯವೇದ ಅಧ್ಯಯನವೊಂದನ್ನು ಸಿದ್ಧಪಡಿಸಿರಿ.

# ವಿಮೋಚನಕಾಂಡ ಅಧ್ಯಯನ

**ವಿಮೋಚನಕಾಂಡದ ಪರಿಚಯ**

**ಹೆಸರು**

ವಿಮೋಚನಕಾಂಡವು ಪಂಚಕಾಂಡದ ಎರಡನೆಯ ಪುಸ್ತಕವಾಗಿದೆ. ಇದಕ್ಕೆ ಇಂಗ್ಲಿಷ್ ಭಾಷೆಯಲ್ಲಿ 'ಎಕ್ಸೊಡಸ್' ಎಂಬ ಹೆಸರನ್ನು ಕೊಡಲಾಗಿದ್ದು, ಅದು ಗ್ರೀಕ್ ಪದವಾದ 'ಎಕ್ಸೊಡೊಸ್' ಎಂಬ ಪದದ ಲ್ಯಾಟಿನ್ ರೂಪವಾಗಿದೆ. *ಎಕ್ಸೊಡಸ್* ಎಂಬ ಪದವು ಹಳೆ ಒಡಂಬಡಿಕೆಯ ಸೆಪ್ಟಾಜಿಂಟ್ ಗ್ರೀಕ್ ಅನುವಾದದಿಂದ ಆರಿಸಲ್ಪಟ್ಟು ಅದರ ಅರ್ಥ 'ಹೊರಗೆ ಹೋಗುವುದು' ಎಂಬುದಾಗಿದೆ. ಅದರ ಹಿಬ್ರೂ ಹೆಸರನ್ನು ವಿಮೋಚನಕಾಂಡದ ಪ್ರಾರಂಭದ ವಾಕ್ಯಗಳಾದ 'ಆ ಹೆಸರುಗಳು ಹೀಗಿವೆ' ಎಂಬದರಿಂದ ಆರಿಸಲಾಗಿದೆ (ವಿಮೋ. 1:1).

ವಿಮೋಚನಕಾಂಡವು ಒಂದು ವ್ಯತ್ಯಾಸವಾದ ಪುಸ್ತಕವಾಗಿ ಬರೆಯಲ್ಪಡಲಿಲ್ಲ, ಬದಲಾಗಿ ಆದಿಕಾಂಡದಲ್ಲಿ ಪ್ರಾರಂಭಗೊಳ್ಳುವ ಮತ್ತು ಯಾಜಕಕಾಂಡ ಮತ್ತು ಅರಣ್ಯಕಾಂಡದಲ್ಲಿ ಮುಂದುವರೆಯುತ್ತಾ ಧರ್ಮೋಪದೇಶಕಾಂಡದಲ್ಲಿ ಅಂತ್ಯಗೊಳ್ಳುವ ಒಂದು ದೊಡ್ಡ ಕಥೆಯ ಎರಡನೆಯ ಭಾಗವಾಗಿ ಬರೆಯಲ್ಪಟ್ಟಿತು.

**ಹಿನ್ನಲೆ ಮತ್ತು ದಿನಾಂಕ**

ವಿಮೋಚನಕಾಂಡದ ಕಥೆಯು ಇಸ್ರಾಯೇಲರು ಈಜಿಪ್ಟಿನಲ್ಲಿ ತಂಗಿದ್ದರ ಒಂದು ಸಂಕ್ಷಿಪ್ತ ದಾಖಲೆಯೊಂದಿಗೆ ಪ್ರಾರಂಭಿಸುತ್ತದೆ. ಅವರು ಸಂಖ್ಯೆಯಲ್ಲಿ ವೃದ್ಧಿಗೊಂಡಿದ್ದರಿಂದ ಈಜಿಪ್ಟಿನ ಅರಸರುಗಳು (ಫರೋಹರು) ಅವರನ್ನು ಬಾಧಿಸಿದರು. ಈ ದಬ್ಬಾಳಿಕೆಯು ಕ್ರಮೇಣವಾಗಿ ಹದೆಗೆಟ್ಟಿತು. ಕ್ರಿ. ಪೂ. 1526 ರ ಸುಮಾರು ಒಂದು ಲೇವಿಯ ಕುಟುಂಬದಲ್ಲಿ ಒಂದು ಗಂಡು ಮಗು ಜನಿಸಿತು. ಆತನು ಅದ್ಭುತಕರವಾಗಿ ಈಜಿಪ್ಟಿನ ಅರಮನೆಯಲ್ಲಿ ಬೆಳೆದು ಬಂದನು. ಆತನಿಗೆ ಮೋಶೆ ಎಂದು ಹೆಸರಿಡಲಾಯಿತು. ಎಂಟು ವರ್ಷಗಳ ನಂತರ (ಸಾಂಪ್ರದಾಯಿಕ ದೃಷ್ಟಿಕೋನದ ಪ್ರಕಾರ ಸುಮಾರು ಕ್ರಿ. ಪೂ. 1446 ರಲ್ಲಿ) ಇಸ್ರಾಯೇಲರನ್ನು ಈಜಿಪ್ಟಿನಿಂದ ಬಿಡಿಸಿ ಅವರನ್ನು ವಾಗ್ದಾನ ದೇಶಕ್ಕೆ ನಡೆಸುವಂತೆ ದೇವರು ಆತನನ್ನು ಕರೆದನು. ಇಸ್ರಾಯೇಲರ ಇತಿಹಾಸದಲ್ಲಿನ ಈ ಪ್ರಮುಖ ಘಟನೆಯನ್ನು 'ನಿರ್ಗಮನ' ಎಂದು ಕರೆಯಲಾಗುತ್ತದೆ. ಬಹುಶಃ ತೃತೀಯ ತುತ್ಮೊಸ್ ಮತ್ತು ಆತನ ಮಗನಾದ ದ್ವಿತೀಯ ಅಮೆನ್‌ಹೊತೆಪ್‌ರು ಈ ಅವಧಿಯಲ್ಲಿ ಈಜಿಪ್ಟನ್ನು ಆಳಿದ ಫರೋಹರಾಗಿದ್ದರು.

ಇಸ್ರಾಯೇಲರು ಈಜಿಪ್ಟಿನಿಂದ ದಕ್ಷಿಣ ಮಾರ್ಗವನ್ನು ಹಿಡಿದು ಸಿನಾಯಿ ಪರ್ಯಾಯದ್ವೀಪದ ಪಶ್ಚಿಮ ಕರವಾಳಿಯುದ್ದಕ್ಕೂ ಸಾಗಿ ಮೂರು ತಿಂಗಳುಗಳ ನಂತರ ಸಿನಾಯಿ ಪರ್ವತವನ್ನು ತಲುಪಿದಂತೆ ತೋರುತ್ತದೆ (***ನಿರ್ಗಮನ*** ಎಂಬ ನಕ್ಷೆಯನ್ನು ನೋಡಿರಿ). ಅವರು ಸಿನಾಯಿ ಪರ್ವತದ ಕೆಳಗೆ ತಮ್ಮ ಪಾಳೆಯವನು ಹಾಕಿಕೊಂಡರು. ಅಲ್ಲಿ ದೇವರು ಅವರೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡನು, ಧರ್ಮಶಾಸ್ತ್ರವನ್ನು ಕೊಟ್ಟನು ಮತ್ತು ಒಡಂಬಡಿಕೆಯ ಮಂಜೂಷವನ್ನು ಹೊಂದಿದ ಒಂದು ದೇವದರ್ಶನ ಗುಡಾರವನ್ನು ಕಟ್ಟುವಂತೆ ಮೋಶೆಗೆ ನಿರ್ದೇಶನ ನೀಡಿದನು. ಇಸ್ರಾಯೇಲರು ಹೆಚ್ಚು ಕಡಿಮೆ ಒಂದು ವರ್ಷ ಸಿನಾಯಿ ಪರ್ವತದ ಸ್ಥಳದಲ್ಲಿ ತಂಗಿದ್ದರು. ವಿಮೋಚನಕಾಂಡವು ಕೊನೆಗೊಳ್ಳುವಾಗ, ಇಸ್ರಾಯೇಲರು ಇನ್ನೂ ಸಿನಾಯಿ ಪರ್ವತದ ಬಳಿಯಲ್ಲೇ ಪಾಳೆಯ ಹಾಕಿಕೊಂಡಿದ್ದರು.

ವಿಮೋಚನಕಾಂಡದ ಲೇಖಕನು ಮೋಶೆ ಎಂದು ಯೆಹೂದ್ಯರು ಹಾಗೂ ಕ್ರೈಸ್ತರು ಸಾಂಪ್ರದಾಯಿಕವಾಗಿ ಘೋಷಿಸಿಕೊಂಡಿದ್ದಾರೆ. ಈ ಅಂಶವನ್ನು ವಿಮೋಚನಕಾಂಡದಲ್ಲಿರುವ ಕೆಲವು ಹೇಳಿಕೆಗಳಿಂದಲೇ ಬಲಪಡಿಸಲಾಗಿದೆ (ಉದಾಹರಣೆಗೆ 24:4). ಸಿನಾಯಿ ಪರ್ವತದಿಂದ ಹೊರಟ ನಂತರ ಮತ್ತು 39 ವರ್ಷಗಳ ನಂತರ ಮೋವಾಬಿನ ಬಯಲುಸೀಮೆಗೆ ತಲುಪುವ ಮೊದಲು ಅರಣ್ಯದಲ್ಲಿ ಅಲೆದಾಡುತ್ತಿದ್ದ ಸಮಯದಲ್ಲಿ ಮೋಶೆಯುಬಹುಶಃ ವಿಮೋಚನಕಾಂಡವನ್ನು ಬರೆದಿರಬಹುದು.

**ಸಾಹಿತ್ಯ ಶೈಲಿ**

ವಿಮೋಚನಕಾಂಡವು ವಿವಿಧ ರೀತಿಯ ಪಠ್ಯಗಳನ್ನು ಒಳಗೊಂಡಿದೆ. ಅನೇಕ ಕಥೆಗಳಿವೆ, ಉದಾಹರಣೆಗೆ: ಈಜಿಪ್ಟಿನಲ್ಲಿ ಇಸ್ರಾಯೇಲರು; ಮೋಶೆಯ ಜನನ, ಪ್ರಾರಂಭದ ಜೀವನ ಮತ್ತು ಕರೆ; ಉಪದ್ರವಗಳು; ಮೊದಲ ಪಸ್ಕಹಬ್ಬ; ಸಮುದ್ರವನ್ನು ದಾಟಿದ್ದು; ಸಿನಾಯಿ ಪರ್ವತದ ಕಡೆಗೆ ಪಯಣ; ಸಿನಾಯಿ ಪರ್ವತದ ಬಳಿಯಲ್ಲಿ ನಡೆದ ಘಟನೆಗಳು; ದೇವದರ್ಶನ ಗುಡಾರವನ್ನು ಕಟ್ಟಿದ್ದು ಮತ್ತು ಅದರ ಪ್ರತಿಷ್ಠಾಪನೆ; ಮತ್ತು ಯೆಹೋವನ ಮಹಿಮೆಯು ಗುಡಾರವನ್ನು ತುಂಬಿಕೊಂಡದ್ದು.

ವಿಮೋಚನಕಾಂಡದ ಹೆಚ್ಚಿನ ಭಾಗವು ದೇವರು ಮೋಶೆಗೆ ನೀಡಿದ ನಿರ್ದೇಶನಗಳನ್ನು ಹೊಂದಿದೆ, ಉದಾಹರಣೆಗೆ: ಈಜಿಪ್ಟಿನ ಉಪದ್ರವಗಳ ಕುರಿತು; ದೇವದರ್ಶನ ಗುಡಾರವನ್ನು ಕಟ್ಟುವುದರ ಮತ್ತು ಅದರ ಸಾಮಾಗ್ರಿಗಳ ಕುರಿತು; ಮಂಜೂಷ ಮತ್ತು ಯಾಜಕರ

ವಸ್ತ್ರಗಳನ್ನು ಸಿದ್ಧಪಡಿಸುವುದರ ಕುರಿತು; ಯಾಜಕರ ಶುದ್ಧೀಕರಣ ಮತ್ತು ಗುಡಾರದ ಪ್ರತಿಷ್ಠಾಪನೆಯ ಕುರಿತು. ವಾಸ್ತವಿಕವಾಗಿ ಹೇಳಬೇಕಾದರೆ, 'ಯೆಹೋವನು ಮೋಶೆಗೆ ಹೀಗೆ ಹೇಳಿದನು' ಎಂಬ ಹೇಳಿಕೆಯು ವಿಮೋಚನಕಾಂಡದಲ್ಲಿ ಸುಮಾರು 50 ಬಾರಿ ಕಾಣಿಸಿಕೊಳ್ಳುತ್ತದೆ.

ವಿಮೋಚನಕಾಂಡವು ಎರಡು ಪ್ರಮುಖವಾದ ಧರ್ಮಶಾಸ್ತ್ರದ ಭಾಗಗಳನ್ನೂ ಸಹ ಹೊಂದಿದೆ. ಅಧ್ಯಾಯ 20 ರಲ್ಲಿ ದಶಾಜ್ಞೆಗಳನ್ನು ಕಾಣಬಹುದು ಮತ್ತು ಮುಂದಿನ ಎರಡು ಅಧ್ಯಾಯಗಳಲ್ಲಿ ಒಡಂಬಡಿಕೆಯ ಪುಸ್ತಕವನ್ನು ಕಾಣಬಹುದು.

ಅಂತಿಮವಾಗಿ, ನಾವು ಎರಡು ಕುತೂಹಲಕರವಾದ ಕಾವ್ಯರೂಪದ ಪಠ್ಯದ ಪ್ರಸ್ತಾವನೆಯನ್ನು ಮಾಡಲೇಬೇಕು: ಕೆಂಪು ಸಮುದ್ರವನ್ನು ದಾಟಿದ ನಂತರ ಮೋಶೆ ಮತ್ತು ಇಸ್ರಾಯೇಲರು ಹಾಡಿದ ಹಾಡು (15:1–18) ಮತ್ತು ಮೋಶೆಯ ಅಕ್ಕಳಾದ ಮಿರ್ಯಾಮಳು ಹಾಡಿದ ಅದೇ ಹಾಡಿನ ಕಿರಿಯ ಆವೃತ್ತಿ (15:21).

**ವಿಮೋಚನಕಾಂಡದ ಸಂದೇಶ**

ಹಳೆ ಒಡಂಬಡಿಕೆಯ ದೈವಶಾಸ್ತ್ರವನ್ನು ಮತ್ತು ದೇವರು ತನ್ನ ಒಡಂಬಡಿಕೆಯ ಜನರೊಂದಿಗೆ ವ್ಯವಹರಿಸುವ ರೀತಿಯನ್ನು ಅರ್ಥಮಾಡಿಕೊಳ್ಳಲು ವಿಮೋಚನಕಾಂಡವು ಒಂದು ಅತ್ಯಂತ ಪ್ರಾಮುಖ್ಯವಾದ ಪುಸ್ತಕವಾಗಿದೆ.

ಅಧ್ಯಾಯ 3 ರಲ್ಲಿ, ಮೋಶೆಗೆ ತನ್ನ 'ವೈಯಕ್ತಿಕ ಹೆಸರನ್ನು' ತಿಳಿಸುವುದರ ಮೂಲಕ ದೇವರು ತಾನು ಯಾರೆಂಬದನ್ನು ಪ್ರಕಟಿಸುತ್ತಾನೆ; ನಾನು ಇರುವಾತನೇ ಆಗಿದ್ದೇನೆ (3:14). ಮತ್ತು ಅಧ್ಯಾಯ 6 ರಲ್ಲಿ ಆತನು ಮೋಶೆಗೆ ತನ್ನ ಕುರಿತು ಇನ್ನೂ ಹೆಚ್ಚಾಗಿ ತಿಳಿಸುತ್ತಾನೆ; *ನಾನೇ ಯೆಹೋವನು, ನಾನೇ ಅಬ್ರಹಾಮನಿಗೂ ಇಸಾಕನಿಗೂ ಯಾಕೋಬನಿಗೂ ಸರ್ವಶಕ್ತನಾದ ದೇವರೆಂದು ಕಾಣಿಸಿಕೊಂಡೆನು. ಆದರೆ ಯೆಹೋವನೆಂಬ ನನ್ನ ಹೆಸರಿನಿಂದ ನಾನು ಅವರಿಗೆ ತಿಳಿಸಲ್ಪಡಲಿಲ್ಲ. ಕಾನಾನ್ ದೇಶವನ್ನು ಅಂದರೆ ಅವರು ವಾಸವಾಗಿದ್ದ ಅವರ ಪ್ರವಾಸದ ದೇಶವನ್ನು ನಾನು ಅವರಿಗೆ ಕೊಡುವೆನೆಂದು ಅವರ ಸಂಗಡ ನನ್ನ ಒಡಂಬಡಿಕೆಯನ್ನು ದೃಢಪಡಿಸಿದೆನು* (ವಿಮೋ. 62–4). ನಂತರ ಸಿನಾಯಿ ಪರ್ವತದ ಮೇಲೆ ಆತನು ತನ್ನನ್ನು ಮೋಶೆಗೆ ತೋರಿಸಿ ತಾನು ಯಾರೆಂಬದನ್ನು ಘೋಷಿಸಿದನು; *ಯೆಹೋವನು, ಯೆಹೋವನಾದ ದೇವರು, ಕರುಣಾಳುವೂ ಕೃಪಾಳುವೂ ದೀರ್ಘಶಾಂತನೂ ಒಳ್ಳೇತನದಲ್ಲಿ ಮತ್ತು ಸತ್ಯದಲ್ಲಿ ಸಮೃದ್ಧಿಯಾದಾತನೂ ಸಾವಿರ ತಲೆಗಳವರೆಗೂ ಕರುಣೆ ತೋರಿಸುವಾತನೂ ದೋಷವನ್ನು ಅಪರಾಧವನ್ನು ಪಾಪವನ್ನು ಕ್ಷಮಿಸುವಾತನೂ ಅಪರಾಧಿಯನ್ನು ಶಿಕ್ಷಿಸದೆ ಬಿಡದವನೂ ತಂದೆಗಳ ದೋಷವನ್ನು ಮಕ್ಕಳ ಮೇಲೆಯೂ ಮೊಮ್ಮಕ್ಕಳ ಮೇಲೆಯೂ ಮೂರನೆಯ ಮತ್ತು ನಾಲ್ಕನೆಯ ತಲೆಗಳವರೆಗೂ ಶಿಕ್ಷಿಸುವಾತನೂ ಎಂದು ಪ್ರಕಟಿಸಿಕೊಂಡನು* (ವಿಮೋ. 34:6–7). ಅಲ್ಲಿ ದೇವರು ಮೋಶೆಗೆ ಕಲ್ಲಿನ ಮೇಲೆ ಕೆತ್ತಿದ ದಶಾಜ್ಞೆಗಳನ್ನು ಕೊಟ್ಟನು. ವಿಮೋಚನಕಾಂಡದಲ್ಲಿ, ನಾವು ದೇವರ ಸತ್ಯತೆ ಮತ್ತು ನ್ಯಾಯ, ಆತನ ಪರಿಶುದ್ಧತೆ ಮತ್ತು ಆತನ ಕರುಣೆಯ ಕುರಿತು ಸಹ ಕಲಿತುಕೊಳ್ಳುತ್ತೇವೆ.

ದೇವರು ಇತಿಹಾಸದ ಮೇಲೆ ತನ್ನ ನಿಯಂತ್ರಣವನ್ನು ಹೊಂದಿದ್ದಾನೆ ಎಂಬ ಇನ್ನೊಂದು ಮುಖ್ಯವಾದ ಸತ್ಯವನ್ನು ವಿಮೋಚನಕಾಂಡದಲ್ಲಿ ಕಾಣಬಹುದು. ನಡೆಯಬೇಕಾದ ಸಂಗತಿಗಳ ಮೇಲೆ ಹತೋಟಿ ಹೊಂದಿದವನು ಪರಾಕ್ರಮಶಾಲಿಯಾದ ಫರೋಹನಲ್ಲ ಬದಲಾಗಿ ಇಸ್ರಾಯೇಲರ ಕರ್ತನಾಗಿದ್ದಾನೆ. ಈಜಿಪ್ಟಿನಿಂದಾದ ನಿರ್ಗಮನವು ಅನೇಕ ಶತಮಾನಗಳ ಹಿಂದೆ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನದ ನೆರವೇರುವಿಕೆಯ ಒಂದು ಪ್ರಾರಂಭವಾಗಿತ್ತು. ಆ ವಾಗ್ದಾನವೇನೆಂದರೆ, ಅಬ್ರಹಾಮನ ಸಂತತಿಯು ಕೇವಲ ಅಸಂಖ್ಯರಾಗುವುದು ಮಾತ್ರವಲ್ಲದೆ ಅವರು ವಾಗ್ದಾನ ದೇಶವನ್ನು ಸ್ವತ್ತಾಗಿ ಪಡೆಯುವರು ಎಂಬದಾಗಿದೆ. ನಂತರದ ಹಳೆ ಒಡಂಬಡಿಕೆ ಪಠ್ಯಗಳು ಈ ನಿರ್ಣಾಯಕವಾದ ಐತಿಹಾಸಿಕ ಘಟನೆಯನ್ನು ಪದೇ ಪದೇ ಗಮನಕ್ಕೆ ತರುತ್ತದೆ.

ಸತ್ಯವೇದದ ನೈತಿಕತೆಯನ್ನು ನಾವು ಅರ್ಥಮಾಡಿಕೊಳ್ಳಲು ವಿಮೋಚನಕಾಂಡವು ಮುಖ್ಯ ಪಠ್ಯಗಳನ್ನೂ ಸಹ ಹೊಂದಿದೆ. ಇಲ್ಲಿ ನಾವು ದಶಾಜ್ಞೆಗಳನ್ನು ಕಾಣುತ್ತೇವೆ, ಅವುಗಳು ಮೋಶೆಯ ದಿನಗಳಿಂದ ಇಲ್ಲಿಯವರೆಗೂ ಯೆಹೂದ್ಯ–ಕ್ರೈಸ್ತ ಜೀವನದ ನೈತಿಕ ನಡವಳಿಕೆಗೆ ಒಂದು ಬುನಾದಿಯನ್ನು ರೂಪಿಸಿವೆ. ಆದರೆ ಈ ಆಜ್ಞೆಗಳ ಮೂಲವು ಸ್ವತಃ ಯೆಹೋವನು ಮತ್ತು ಆತನ ಪ್ರೀತಿಯುಳ್ಳ ಮತ್ತು ಕರುಣೆಯುಳ್ಳ ಗುಣವೇ ಆಗಿದೆ. ಅದನ್ನು ಇಸ್ರಾಯೇಲರು ಪಸ್ಕಹಬ್ಬದ, ನಿರ್ಗಮನದ ಮತ್ತು ಸಿನಾಯಿಯ ಒಡಂಬಡಿಕೆಯ ಘಟನೆಗಳ ಮೂಲಕ ಅನುಭವಿಸಿದರು.

ಯಾಜಕಕಾಂಡದ ಹೆಚ್ಚಿನ ಭಾಗವು ದೇವದರ್ಶನ ಗುಡಾರಕ್ಕೆ ಪ್ರತ್ಯೇಕಿಸಲಾಗಿದೆ. ಮೊದಲು ದೇವರು ಮೋಶೆಗೆ ಅದನ್ನು ಹೇಗೆ ಕಟ್ಟಬೇಕು ಎನ್ನುವುದರ ಕುರಿತು ವಿವರವಾದ ನಿರ್ದೇಶನವನ್ನು ನೀಡುತ್ತಾನೆ. ನಂತರ ಒಡಂಬಡಿಕೆಯ ಮಂಜೂಷವನ್ನು, ದೇವದರ್ಶನ ಗುಡಾರ ಮತ್ತು ಅದರ ಸಾಮಾಗ್ರಿಗಳನ್ನು ವಾಸ್ತವಿಕವಾಗಿ ಸಿದ್ಧಪಡಿಸಿದ್ದರ ಮತ್ತು ಯಾಜಕರ ವಸ್ತ್ರಗಳ ಕುರಿತು ಸಹ ಉದ್ದವಾಗಿ ವಿವರಿಸಲಾಗಿದೆ. ಅಂತಿಮವಾಗಿ ದೇವದರ್ಶನ ಗುಡಾರವು ಪ್ರತಿಷ್ಠಾಪಿಸಲ್ಪಟ್ಟು ಯೆಹೋವನ ಮಹಿಮೆಯು ಅದನ್ನು ತುಂಬಿಕೊಳ್ಳುತ್ತದೆ. ಇಸ್ರಾಯೇಲರು ದೇವರ ನಿರ್ದೇಶನಗಳಿಗೆ ಅನುಸಾರವಾಗಿ ಆತನನ್ನು ಆರಾಧಿಸುವಾಗ ಪರಾಕ್ರಮಶಾಲಿಯಾದ ಮತ್ತು ಅಲೌಕಿಕ ದೇವರು ತನ್ನ ಜನರ ಮಧ್ಯದಲ್ಲಿ ವಾಸಿಸಲು ಬರುತ್ತಾನೆ. ಇಲ್ಲಿ ನಾವು 'ಆರಾಧನೆಯ ದೈವಶಾಸ್ತ್ರವನ್ನು' ಕಾಣುತ್ತೇವೆ.

ವಿಮೋಚನಕಾಂಡದ ಕಥೆಗಳಲ್ಲಿ ಮೋಶೆಯು ಪ್ರಮುಖ ಪಾತ್ರವನ್ನು ವಹಿಸುತ್ತಾನೆ. ಇಸ್ರಾಯೇಲರನ್ನು ಈಜಿಪ್ಟಿನ ಬಂಧನದಿಂದ ಬಿಡಿಸಿ ವಾಗ್ದಾನ ದೇಶಕ್ಕೆ ನಡೆಸಲು ದೇವರು ಆತನನ್ನು ನೇಮಿಸುತ್ತಾನೆ. ಮೋಶೆಯನ್ನು ಸಿನಾಯಿ ಒಡಂಬಡಿಕೆಯ ಮಧ್ಯವರ್ತಿಯಾಗಿಯೂ ಸಹ ದೇವರು ಆರಿಸಿಕೊಳ್ಳುತ್ತಾನೆ. ಆ ಪಾತ್ರದಲ್ಲಿ ಆತನು ದೇವರ ಮತ್ತು ಮಾನವರ ನಡುವಿನ ಅಂತಿಮವಾದ ಮತ್ತು ಪರಿಪೂರ್ಣವಾದ ಮಧ್ಯವರ್ತಿಯಾದ ಕ್ರಿಸ್ತನ ಕಡೆಗೆ ಆತನು ಬೆರಳು ಮಾಡಿ ತೋರಿಸುತ್ತಾನೆ. ಮೋಶೆಯು ಇಸ್ರಾಯೇಲರ ಮತ್ತು ಯೆಹೋವನ ನಡುವೆ ನಿಂತಿಕೊಂಡು ದೇವರ ಸತ್ಯಗಳನ್ನು ಅವರೊಂದಿಗೆ ಮಾತನಾಡುವವನಾಗಿ ಹಳೆ ಒಡಂಬಡಿಕೆಯ ಒಬ್ಬ ಶ್ರೇಷ್ಠ ಪ್ರವಾದಿಯೂ ಸಹ ಆಗಿದ್ದಾನೆ. ವಿಮೋಚನಕಾಂಡದಲ್ಲಿರುವ ಯಾಜಕತ್ವದ ಸ್ಥಾಪನೆಯು ಕ್ರಿಸ್ತನ ಕಡೆಗೆ ಬೆರಳು ಮಾಡಿ ತೋರಿಸುವ ಇನ್ನೊಂದು ಅಂಶವಾಗಿದೆ. ಕ್ರಿಸ್ತನೇ *ನಮಗೆ ಬೇಕಾದ ಮಹಾಯಾಜಕನು. ಈತನು ಪರಿಶುದ್ಧನೂ ಕೇಡು ಮಾಡದವನೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವಾತನು ಆಕಾಶಗಳಿಗಿಂತ ಉನ್ನತವಾಗಿ ಮಾಡಲ್ಪಟ್ಟಾತನೂ ಆಗಿದ್ದಾನೆ* (ಹಿಬ್ರಿಯರಿಗೆ 7:26).

**ವಿಷಯ ಮತ್ತು ರಚನೆ**

ವಿಮೋಚನಕಾಂಡವು ಮೂರು ಮುಖ್ಯ ಭಾಗಗಳನ್ನು ಒಳಗೊಂಡಿದೆ: ಮೊದಲ ಭಾಗದಲ್ಲಿ, ಇಸ್ರಾಯೇಲರು ಈಜಿಪ್ಟಿನಲ್ಲಿ ದಬ್ಬಾಳಿಕೆಗೆ ಒಳಗಾದದ್ದನ್ನು ನಾವು ನೋಡುತ್ತೇವೆ. ಆದರೆ ದೇಶದ ಮೇಲೆ ಬಂದ ಹತ್ತು ಉಪದ್ರವಗಳ ಪರಿಣಾಮವಾಗಿ ಅವರಿಗೆ ಅಂತಿಮವಾಗಿ ದೇಶವನ್ನು ಬಿಟ್ಟು ಹೋಗಲು ಅನುಮತಿಸಲಾಯಿತು. ಅವರು ಹೊರಡುವುದಕ್ಕಿಂತ ಮುಂಚೆ ಮೊದಲ ಪಸ್ಕಹಬ್ಬವನ್ನು ಆಚರಿಸಿದರು. ಎರಡನೆಯ ಭಾಗದಲ್ಲಿ, ಅವರು ಅದ್ಭುತಕರವಾಗಿ ಸಮುದ್ರವನ್ನು ದಾಟಿ ಈಜಿಪ್ಟಿನಿಂದ ಸಿನಾಯಿವರೆಗೆ ಪ್ರಯಾಣ ಮಾಡಿದರು. ಮೂರನೆಯ ಭಾಗವು ಸಿನಾಯಿ ಪರ್ವತದ ಬಳಿಯಲ್ಲಿ ಅವರು ತಂಗಿದ್ದ ಒಂದು ವರ್ಷವನ್ನು ಒಳಗೊಂಡಿದೆ. ಅಲ್ಲಿ ಯೆಹೋವನು ಅವರೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡು ಅವರಿಗೆ ಧರ್ಮಶಾಸ್ತ್ರವನ್ನು ಕೊಟ್ಟನು. ಅಲ್ಲಿ ದೇವರ ವಿವರವುಳ್ಳ ನಿರ್ದೇಶನಗಳಿಗೆ ಅನುಸಾರವಾಗಿ ದೇವದರ್ಶನ ಗುಡಾರವು ಕಟ್ಟಲ್ಪಟ್ಟಿತು.

ವಿಮೋಚನಕಾಂಡವನ್ನು ಈ ರೀತಿಯಲ್ಲಿಯೂ ಸಹ ರಚಿಸಬಹುದು:


1. ಈಜಿಪ್ಟಿನಲ್ಲಿ ಬಾಧೆ, ನಿರ್ಗಮನ ಮತ್ತು ಸಿನಾಯಿ ಪರ್ವತದವರೆಗೆ ಪ್ರಯಾಣ, 1:1–18:27
    1) ಬಾಧೆ/ದಬ್ಬಾಳಿಕೆ; ಮೋಶೆಯ ಕರೆ, 1:1–6:27
    2) ಉಪದ್ರವಗಳು; ಪಸ್ಕಹಬ್ಬ, 6:28–13:16
    3) ನಿರ್ಗಮನ ಮತ್ತು ಸಮುದ್ರವನ್ನು ದಾಟಿದ್ದು, 13:17–15:21
    4) ಸಿನಾಯಿ ಪರ್ವತದವರೆಗೆ ಪ್ರಯಾಣ, 15:22–18:27
2. ಸಿನಾಯಿ ಪರ್ವತದ ಬಳಿ ಒಡಂಬಡಿಕೆ, 19:1–24:18
    1) ದೇವರು ತನ್ನನ್ನು ಮೋಶೆಗೆ ಸಿನಾಯಿ ಪರ್ವತದ ಮೇಲೆ ಪ್ರಕಟಿಸಿಕೊಂಡಿದ್ದು, 19:1–25
    2) ದಶಾಜ್ಞೆಗಳು, 20:1–21
    3) ಒಡಂಬಡಿಕೆಯ ಪುಸ್ತಕ ಮತ್ತು ಒಡಂಬಡಿಕೆಯ ಧೃಢೀಕರಣ, 20:22–24:18
3. ದೇವದರ್ಶನ ಗುಡಾರವನ್ನು ಕಟ್ಟುವುದರ ಕುರಿತು ನಿರ್ದೇಶನ, 25:1–31:18
    1) ದೇವದರ್ಶನ ಗುಡಾರದ ಅರ್ಪಣೆಗಳ ಕುರಿತಾದ; ಮಂಜೂಷ, ಗುಡಾರ ಮತ್ತು ಅದರ ಸಾಮಾಗ್ರಿಗಳ ಮತ್ತು ಯಾಜಕರ ವಸ್ತ್ರಗಳನ್ನು ಮಾಡುವುದರ ಕುರಿತಾದ; ಮತ್ತು ಯಾಜಕರ ಶುದ್ಧೀಕರಣದ ಕುರಿತಾದ ನಿರ್ದೇಶನಗಳು, 25:1–31:11
    2) ಸಬ್ಬತ್ ದಿನ
4. ಒಡಂಬಡಿಕೆಯು ಮುರಿಯಲ್ಪಟ್ಟಿದ್ದು ಮತ್ತು ನವೀಕರಿಸಲ್ಪಟ್ಟಿದ್ದು, 32:1–34:35
    1) ಬಂಗಾರದ ಬಸವ, 32:1–35
    2) ದೇವರ ಪ್ರಸನ್ನತೆ, 33:1–23
    3) ಒಡಂಬಡಿಕೆಯು ನವೀಕರಿಸಲ್ಪಟ್ಟಿದ್ದು, 34:1–35:3
5. ದೇವದರ್ಶನ ಗುಡಾರವನ್ನು ಕಟ್ಟಿದ್ದು ಮತ್ತು ಅದರ ಪ್ರತಿಷ್ಠಾಪನೆ, 35:4–40:38
    1) ದೇವದರ್ಶನ ಗುಡಾರ ಮತ್ತು ಅದರ ಸಾಮಾಗ್ರಿಗಳನ್ನು, ಮಂಜೂಷವನ್ನು ಮತ್ತು ಯಾಜಕರ ವಸ್ತ್ರಗಳನ್ನು ಸಿದ್ಧಪಡಿಸಿದ್ದು, 35:4–39:43
    2) ದೇವದರ್ಶನ ಗುಡಾರವು ಪೂರ್ಣಗೊಂಡಿದ್ದು; ಅದರ ಪ್ರತಿಷ್ಠಾಪನೆ ಮತ್ತು ಯೆಹೋವನ ಮಹಿಮೆ, 40:1–38

**ಪ್ರಶ್ನೆಗಳು**

1. ವಿಮೋಚನಕಾಂಡದ ಇಂಗ್ಲಿಷ್ ಹೆಸರು ಹೇಗೆ ಬಂತು ಮತ್ತು ಯಾಕೆ ಈ ಹೆಸರನ್ನು ಇಡಲಾಗಿದೆ?
2. ವಿಮೋಚನಕಾಂಡವು ಮೂಲಭೂತವಾಗಿ ಮೂರು ಭೌಗೋಳಿಕ ವ್ಯವಸ್ಥೆಯನ್ನು ಹೊಂದಿದೆ. ಅವುಗಳು ಯಾವವು?
3. ವಿಮೋಚನಕಾಂಡದಲ್ಲಿ ದಾಖಲಾಗಿರುವ ಘಟನೆಗಳು ಯಾವಾಗ ಸಂಭವಿಸಿದವು?
4. ವಿಮೋಚನಕಾಂಡದಲ್ಲಿರುವ ಎರಡು ಪ್ರಧಾನ ಪಠ್ಯಗಳು ಯಾವವು?
5. ವಿಮೋಚನಕಾಂಡದ ಸಂದೇಶವನ್ನು ಕೆಲವು ಅಂಶಗಳಲ್ಲಿ ಸಾರಾಂಶಗೊಳಿಸಿರಿ. ಹೆಚ್ಚು ವಿವರಗಳನ್ನು ನೀಡಬೇಡಿರಿ.
6. ವಿಮೋಚನಕಾಂಡದಲ್ಲಿ ದೇವರ ಗುಣವನ್ನು ತಿಳಿಸುವ ಕೆಲವು ಮುಖ್ಯ ಪದಗಳ ಒಂದು ಪಟ್ಟಿಯನ್ನು ಮಾಡಿರಿ.
7. ವಿಮೋಚನಕಾಂಡವನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಕೆಳಗೆ ಪಟ್ಟಿ ಮಾಡಿರುವ ಘಟನೆಗಳನ್ನು ವಿಮೋಚನಕಾಂಡದ ಯಾವ ವಿಭಾಗದಲ್ಲಿ ಕಾಣಬಹುದು?

    1) ಬಂಗಾರದ ಬಸವ
    2) ಪಸ್ಕಹಬ್ಬ
    3) ಸಮುದ್ರವನ್ನು ದಾಟಿದ್ದು
    4) ಸಬ್ಬತ್ ದಿನದ ಕುರಿತು ನಿರ್ದೇಶನಗಳು
    5) ಹತ್ತು ಉಪದ್ರವಗಳ ವಿವರಣೆ
    6) ದಶಾಜ್ಞೆಗಳು
    7) ಮೋಶೆಯ ಕರೆ
    8) ದೇವದರ್ಶನ ಗುಡಾರ ಕಟ್ಟಿದ್ದು





**ವಿಮೋಚನಕಾಂಡ ಅಧ್ಯಯನ 1: ಇಸ್ರಾಯೇಲರು ದಬ್ಬಾಳಿಕೆಗೆ ಒಳಗಾಗಿದ್ದು**

**ಅ. ಪರಿಚಯ**

ವಿಮೋಚನಕಾಂಡವು ಯೋಸೇಫನ ಕುಟುಂಬವನ್ನು ಹೊರತುಪಡಿಸಿ ಎಪ್ಪತ್ತು ಜನರ ಇಸ್ರಾಯೇಲರ ಒಂದು ಚಿಕ್ಕ ಗುಂಪು ಈಜಿಪ್ಟಿನಲ್ಲಿ ವಾಸವಾಗಿದ್ದರಿಂದ ಪ್ರಾರಂಭಿಸುತ್ತದೆ. ಆದರೆ ಯೋಸೇಫ ಮತ್ತು ಆತನ ಸಂತತಿಯ ಮರಣದ ನಂತರ ಆದ ಜನಸಂಖ್ಯಾ ಸ್ಪೋಟವು ಅತ್ಯಂತ ಗಣನೀಯವಾಗಿತ್ತು: *ಆದರೆ ಇಸ್ರಾಯೇಲನ ಮಕ್ಕಳು ಅತ್ಯಧಿಕವಾಗಿ ಅಭಿವೃದ್ಧಿಯಾಗಿ ಹೆಚ್ಚಿ ಹರಡಿಕೊಂಡು ಬಲಗೊಂಡರು. ಅದರಿಂದ ಆ ದೇಶವು ಅವರಿಂದ ತುಂಬಿತು* (ವಿಮೋ. 1:7). ನಂತರ ಇಸ್ರಾಯೇಲರ ಜನಸಮೂಹವನ್ನು ಕಂಡು ಸಂತೋಷಪಡದ ಒಬ್ಬ ಅರಸನು ಈಜಿಪ್ಟಿನಲ್ಲಿ ಅಧಿಕಾರಕ್ಕೆ ಬಂದನು. ಹಾಗಾಗಿ ಆತನು ಅವರ ಮೇಲೆ ದಬ್ಬಾಳಿಕೆ ನಡೆಸಿ ಕ್ರೂರವಾಗಿ ಅವರಿಂದ ದುಡಿಸಿಕೊಂಡು ಅವರ ಜೀವಿತಗಳನ್ನು ಬೇಸರಪಡಿಸಿದನು. ಅದಲ್ಲದೆ ಹುಟ್ಟುವ ಎಲ್ಲಾ ಗಂಡು ಮಕ್ಕಳನ್ನು ಕೊಂದು ಹೆಣ್ಣು ಮಕ್ಕಳನ್ನು ಮಾತ್ರ ಜೀವದಿಂದುಳಿಸಬೇಕೆಂದು ಅರಸನು ಹಿಬ್ರಿಯ ಸೂಲಗಿತ್ತಿಯರಿಗೆ ಆಜ್ಞಾಪಿಸಿದನು. ಆದರೆ ಸೂಲಗಿತ್ತಿಯರು ಅರಸನ ಆಜ್ಞೆಗಳನ್ನು ಪಾಲಿಸಲಿಲ್ಲ ಮತ್ತು ಇಸ್ರಾಯೇಲರ ಸಂಖ್ಯೆಯು ಇನ್ನೂ ಹೆಚ್ಚಿತು.

**ಆ. ಓದಿರಿ**

ವಿಮೋ. 1:1–22

**ಇ. ಟಿಪ್ಪಣಿ**

*ಯಾಕೋಬನ ಜೊತೆಗೆ ಈಜಿಪ್ಟಿಗೆ ತಮ್ಮ ತಮ್ಮ ಮನೆಯವರ ಸಂಗಡ ಬಂದ ಇಸ್ರಾಯೇಲನ ಮಕ್ಕಳು* (ವ. 1): ದೇವರು ಯಾಕೋಬನಿಗೆ ಒಂದು ಹೊಸ ಹೆಸರನ್ನು ಕೊಟ್ಟಿದ್ದನು, ಅದೇನೆಂದರೆ ಇಸ್ರಾಯೇಲ್ ಎಂಬುದಾಗಿ (ನೋಡಿರಿ ಆದಿ. 32:28). ಹಾಗಾಗಿ ಈ ವಚನದಲ್ಲಿ 'ಇಸ್ರಾಯೇಲ' ಮತ್ತು 'ಯಾಕೋಬ' ಎಂಬ ಎರಡೂ ಹೆಸರುಗಳು ಒಬ್ಬ ವ್ಯಕ್ತಿಯನ್ನೇ ಸೂಚಿಸುತ್ತವೆ.

*ಆ ದೇಶವು* (ವ. 7): ಇದು ಇಸ್ರಾಯೇಲರು ವಾಸವಾಗಿದ್ದ ಗೋಷೆನ್ ದೇಶವನ್ನು ಸೂಚಿಸುತ್ತದೆಯೇ ಹೊರತು ಇಡೀ ಈಜಿಪ್ಟ್ ದೇಶವನ್ನಲ್ಲ.

*ಹಿಬ್ರಿಯ* (ವ. 15): ಈ ಪದವನ್ನು ಅನ್ಯಜನರು ಇಸ್ರಾಯೇಲರನ್ನು ಸೂಚಿಸುವುದಕ್ಕಾಗಿ (ಆಗಾಗ್ಗೆ ನಕಾರಾತ್ಮಕವಾಗಿ) ಬಳಸುತಿದ್ದರು (ಹೋಲಿಸಿರಿ 'ಹಿಬ್ರಿಯನಾದ ಅಬ್ರಾಮನು', ಆದಿ. 14:13)

**ಈ. ಉತ್ತರಗಳು**

1. ಇಸ್ರಾಯೇಲರು ಹೆಚ್ಚಿದ್ದನ್ನು ಕಂಡಾಗ ಹೊಸ ಅರಸನು ಯಾಕೆ ಸಂತೋಷಪಡಲಿಲ್ಲ?
2. ಇಸ್ರಾಯೇಲರ ಜನಸಂಖ್ಯಾ ಸ್ಪೋಟವನ್ನು ತಡೆಗಟ್ಟಲು ಈಜಿಪ್ಟಿನ ಅಧಿಕಾರಿಗಳು ತೆಗೆದುಕೊಂಡ ಕ್ರಮಗಳ ಒಂದು ಪಟ್ಟಿಯನ್ನು ಮಾಡಿರಿ.
3. ದೇವರು ಯಾವ ರೀತಿಯಲ್ಲಿ ಸೂಲಗಿತ್ತಿಯರಿಗೆ ಯಾವ ರೀತಿಯಲ್ಲಿ ಒಳ್ಳೆಯದನ್ನು ಮಾಡಿದನು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ಅಧ್ಯಾಯದಲ್ಲಿ ದಾಖಲಾಗಿರುವ ಘಟನೆಗಳು ಒಂದು ದೀರ್ಘ ಕಾಲದ ಅವಧಿಯಲ್ಲಿ ನಡೆದವು. ಇದನ್ನು ಪಠ್ಯವು ನಮಗೆ ಹೇಗೆ ತೋರ್ಪಡಿಸುತ್ತದೆ?
2. ಹಿಬ್ರಿಯ ಸೂಲಗಿತ್ತಿಯರ ನಡತೆಯನ್ನು ನೀವು ಹೇಗೆ ಮೌಲ್ಯೀಕರಿಸುತ್ತೀರಿ?
3. ನೀವು ಅದೇ ಸಂಗತಿಯನ್ನು ಮಾಡುತ್ತಿದ್ದಿರೋ? ಯಾಕೆ ಮಾಡುತ್ತಿದ್ದಿರಿ – ಯಾಕೆ ಇಲ್ಲ?
4. ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಇಂದು ಈ ವಾಕ್ಯಭಾಗದಿಂದ ಏನನ್ನು ಕಲಿಯಬಹುದು?

**ವಿಮೋಚನಕಾಂಡ ಅಧ್ಯಯನ 2: ಮೋಶೆ ಮತ್ತು ಆತನು ಮಿದ್ಯಾನಿಗೆ ಓಡಿ ಹೋಗಿದ್ದು**

**ಅ. ಪರಿಚಯ**

ಮೋಶೆಯು ಜನಿಸಿದಾಗ ಆತನ ತಾಯಿಯು ಆತನನ್ನು ಮೂರು ತಿಂಗಳುಗಳ ಕಾಲ ಬಚ್ಚಿಟ್ಟಳು. ನಂತರ ಆಕೆಯು ಒಂದು ಪುಟ್ಟಿಯನ್ನು ಆತನಿಗಾಗಿ ಮಾಡಿ ನೈಲ್ ನದಿಯ ಅಂಚಿನಲ್ಲಿದ್ದ ಹುಲ್ಲಿನಲ್ಲಿ ಇಟ್ಟಳು. ಮೋಶೆಯ ಅಕ್ಕಳು ಆ ಪುಟ್ಟಿಯನ್ನು ಕಾವಲು ಕಾಯುತ್ತಿದ್ದಳು. ಫರೋಹನ ಮಗಳು ನದಿಯಲ್ಲಿ ಸ್ನಾನ ಮಾಡಲು ಬಂದಾಗ ಆ ಪುಟ್ಟಿಯನ್ನು ತೆಗೆದು ನೋಡಿ ಅದರೊಳಗೆ ಮಗು ಇರುವುದನ್ನು ಕಂಡಳು. ಆ ಮಗುವು ಒಂದು ಹಿಬ್ರಿಯ ಗಂಡು ಮಗುವೆಂದು ಅರಿತುಕೊಂಡಳು. ನಂತರ ಆಕೆಯು ಆತನನ್ನು ತನ್ನ ಮಗನನ್ನಾಗಿ ದತ್ತು ಪಡೆದಳು.

ಮೋಶೆಯು ದೊಡ್ಡವನಾದ ಮೇಲೆ ಒಂದು ದಿನ ಒಬ್ಬ ಈಜಿಪ್ಟಿನವನು ಒಬ್ಬ ಹಿಬ್ರಿಯನನ್ನು ಹೊಡೆಯುತ್ತಿರುವುದನ್ನು ಕಂಡನು. ಮೋಶೆಯು ಕೋಪಗೊಂಡು ಹೊಡೆದವನನ್ನು ಕೊಂದು ಹಾಕಿದನು. *ಫರೋಹನು ಈ ಮಾತುಗಳನ್ನು ಕೇಳಿದಾಗ ಮೋಶೆಯನ್ನು ಕೊಂದುಹಾಕುವುದಕ್ಕೆ ಹುಡುಕಿದನು. ಆದರೆ ಮೋಶೆಯು ಫರೋಹನ ಎದುರಿನಿಂದ ಓಡಿಹೋಗಿ ಮಿದ್ಯಾನ್ ದೇಶದಲ್ಲಿದ್ದ ಒಂದು ಬಾವಿಯ ಬಳಿಯಲ್ಲಿ ಕೂತು ಕೊಂಡನು* (ವಿಮೋ. 2:15). ಈಜಿಪ್ಟಿನಲ್ಲಿದ್ದ ಅರಸನು ತೀರಿಹೋದನು, ಆದರೆ ಇಸ್ರಾಯೇಲರ ಪರಿಸ್ಥಿತಿಯು ಸುದಾರಿಸಲಿಲ್ಲ. *ಇಸ್ರಾಯೇಲರು ದಾಸತ್ವದ ಕಾರಣದಿಂದ ನಿಟ್ಟುಸುರುಬಿಟ್ಟು ಕೂಗುತ್ತಿದ್ದರು. ದಾಸತ್ವದ ನಿಮಿತ್ತವಾಗಿ ಅವರ ಕೂಗು ದೇವರ ಬಳಿಗೆ ಏರಿ ಬಂತು* (ವಿಮೋ. 2:23). ದೇವರು ಅವರ ಕೂಗನ್ನು ಕೇಳಿದನು ಮತ್ತು *ಅಬ್ರಹಾಮನ ಸಂಗಡವೂ ಇಸಾಕನ ಸಂಗಡವೂ ಯಾಕೋಬನ ಸಂಗಡವೂ ತಾನು ಮಾಡಿದ ಒಡಂಬಡಿಕೆಯನ್ನು ಜ್ಞಾಪಕಮಾಡಿಕೊಂಡನು* (ವಿಮೋ. 2:24).

**ಆ. ಓದಿರಿ**

ವಿಮೋ. 2:1–25

**ಇ. ಟಿಪ್ಪಣಿ**

*ಆಪಿನ ಪೆಟ್ಟಿಗೆ ... ಹುಲ್ಲು* (ವ. 3): ಹಿಬ್ರಿಯ ಪಠ್ಯದಲ್ಲಿರುವ ಈ ಮೂರು ಪದಗಳು ಈಜಿಪ್ಟಿನ ಮೂಲವನ್ನು ಹೊಂದಿದೆ. ಆಪು (ಪ್ಯಾಪಿರಸ್) ಎಂಬದು ನೈಲ್ ನದಿಯ ಅಂಚಿನಲ್ಲಿ ಬಹಳವಾಗಿ ಬೆಳೆಯುವ ಅಗಲವುಳ್ಳ ಹುಲ್ಲಾಗಿದೆ. ಅದನ್ನು ಅನೇಕ ಉದ್ದೇಶಗಳಿಗಾಗಿ ಬಳಸುತ್ತಿದ್ದರು: ದೊಡ್ಡ ದೋಣಿಗಳಿಗಾಗಿ, ಪೆಟ್ಟಿಗೆ ಮತ್ತು ಪುಟ್ಟಿಗಾಗಿ ಮತ್ತು ವಿಶೇಷವಾಗಿ ಬರೆಯಲು ಒಂದು ರೀತಿಯ 'ಹಾಳೆಗಾಗಿ'. 'ಪೆಟ್ಟಿಗೆ' ಎಂಬದಕ್ಕಾಗಿ ಕೇವಲ ಇಲ್ಲಿ ಮತ್ತು ನೋಹನ ದೋಣಿಯ (ನಾವೆಯ) ಕುರಿತಾದ ಕಥೆಯಲ್ಲಿ ಮಾತ್ರ ಹಿಬ್ರೂ (ಹಿಬ್ರಿಯ) ಪದವನ್ನು ಬಳಸಲಾಗಿದೆ. 'ಹುಲ್ಲು' ಎಂಬ ಪದಕ್ಕೆ ಬಳಸಲಾಗಿರುವ ಹಿಬ್ರೂ ಪದವನ್ನು ಇಸ್ರಾಯೇಲರು ಈಜಿಪ್ಟಿನಿಂದ ನಿರ್ಗಮಿಸಿದಾಗ ದಾಟಿದ ಸಮುದ್ರದ ಹೆಸರಿಗೂ ಬಳಸಲಾಗಿದೆ, ಅದೇನೆಂದರೆ ಹುಲ್ಲಿನ ಸಮುದ್ರ (ವಿಮೋ. 15:4, ಸಾಧಾರಣವಾಗಿ ನಮ್ಮ ಅನುವಾದಗಳಲ್ಲಿ ಕೆಂಪು ಸಮುದ್ರ ಎಂದು ಕರೆಯಲಾಗುತ್ತದೆ).

*ಆತನ ಅಕ್ಕ* (ವ. 4): ನಂತರದಲ್ಲಿ ಆಕೆಯ ಹೆಸರು ಮಿರ್ಯಾಮಳು ಎಂಬುದಾಗಿ ನಮಗೆ ತಿಳಿಸಲ್ಪಟ್ಟಿದೆ (ವಿಮೋ. 15:20).

*ಮೋಶೆ* (ವ. 10): ಈ ಹೆಸರಿನ ಈಜಿಪ್ಟ್ ಭಾಷೆಯ ಅರ್ಥವೇನೆಂದರೆ, 'ಜನಿಸಿದ' ಅಥವಾ 'ಎಳೆಯಲ್ಪಟ್ಟ' ಎಂಬದಾಗಿದೆ. ಇದರ ಹಿಬ್ರೂ ಪದವೂ ಸಹ 'ಎಳೆಯುವುದು' ಎಂಬದಾಗಿದೆ.

*ಮೋಶೆಯು ದೊಡ್ಡವನಾದ ಮೇಲೆ* (ವ. 11): ಯೆಹೂದ್ಯ ಸಂಪ್ರದಾಯದ ಪ್ರಕಾರ (ಅ. ಕೃ. 7:23 ನ್ನು ನೋಡಿರಿ) ಈ ಸಮಯದಲ್ಲಿ ಮೋಶೆಗೆ 40 ವರ್ಷ ಪ್ರಾಯವಾಗಿತ್ತು.

*ಮಿದ್ಯಾನ್* (ವ. 15): ಈ ದೇಶಕ್ಕೆ ಅಬ್ರಹಾಮನ ಕಿರಿಯ ಮಕ್ಕಳಲ್ಲಿ ಒಬ್ಬನ ಹೆಸರನ್ನು ಇಟ್ಟಿದ್ದರು (ನೋಡಿರಿ ಆದಿ. 25:2). ಅದು ಕೆಂಪು ಸಮುದ್ರದ ಉತ್ತರಕ್ಕೆ ಮತ್ತು ಸಿನಾಯಿಯ ಆಗ್ನೇಯಕ್ಕೆ ಮತ್ತು ಅರೇಬಿಯದ ಪಶ್ಚಿಮಕ್ಕೆ ನೆಲೆಸಿದೆ. ಮೋಶೆಯು 40 ವರ್ಷಗಳ ಕಾಲ ಮಿದ್ಯಾನಿನಲ್ಲಿ ವಾಸಿಸಿದನು (ನೋಡಿರಿ ಅ. ಕೃ. 7:29–30); ಬಹಳ ದಿನಗಳಾದ ಮೇಲೆ ಎಂಬುದನ್ನು ಹೋಲಿಸಿರಿ (ವಿಮೋ. 2:23). ***ನಿರ್ಗಮನ*** ಎಂಬ ನಕ್ಷೆಯನ್ನು ನೋಡಿರಿ, ಅಲ್ಲಿ ಮಿದ್ಯಾನ್ ಸಿನಾಯಿ ಪರ್ಯಾಯ ದ್ವೀಪದ ಪೂರ್ವಕ್ಕೆ ಮತ್ತು ಕೆಂಪು ಸಮುದ್ರದ ಉತ್ತರಕ್ಕೆ ಕಾಣುತ್ತದೆ.

*ರೆಗೂವೇಲ* (ವ. 17): ಈ ಹೆಸರಿನ ಅರ್ಥ 'ದೇವರ ಸ್ನೇಹಿತ' ಎಂಬದಾಗಿದೆ. ಈತನು ಮಿದ್ಯಾನಿನ ಯಾಜಕನಾಗಿದ್ದನು (ವ. 16) ಮತ್ತು ಈತನನ್ನು ಇತ್ರೋನ ಎಂದು ಸಹ ಕರೆಯುತ್ತಿದ್ದರು (ವಿಮೋ. 3:1). ಇತ್ರೋ ಎಂಬ ಪದವು 'ಘನತೆವೆತ್ತ' ಎಂಬ ಅರ್ಥವನ್ನು ಹೊಂದಿದ್ದು ಅದು ಬಹುಶಃ ಆತನ ಬಿರುದಾಗಿದೆ.

*ಗೆರ್ಷೋಮ್* (ವ. 22): ಈ ಹೆಸರು ಹಿಬ್ರೂ ಪದವಾದ 'ಇಲ್ಲಿರುವ ಒಬ್ಬ ಪರದೇಶಿ' ಎಂಬದಕ್ಕೆ ಹೋಲುತ್ತದೆ.

*ದೇವರು ... ಅಬ್ರಹಾಮನ ಸಂಗಡವೂ ಇಸಾಕನ ಸಂಗಡವೂ ಯಾಕೋಬನ ಸಂಗಡವೂ ತಾನು ಮಾಡಿದ ಒಡಂಬಡಿಕೆಯನ್ನು ಜ್ಞಾಪಕಮಾಡಿಕೊಂಡನು* (ವ. 24): ನೋಡಿರಿ ಆದಿ. 15:17–18 ಮತ್ತು 17:7 (ಅಬ್ರಹಾಮನೊಂದಿಗೆ ದೇವರ ವಾಗ್ದಾನ), ಆದಿ. 17:19 ಮತ್ತು 26:24 (ಇಸಾಕನೊಂದಿಗೆ ದೇವರ ವಾಗ್ದಾನ) ಮತ್ತು ಆದಿ. 35:11–12 (ಯಾಕೋಬನೊಂದಿಗೆ ದೇವರ ವಾಗ್ದಾನ).

**ಈ. ಪ್ರಶ್ನೆಗಳು**

1. ಮೋಶೆಯು ಇಸ್ರಾಯೇಲಿನ ಯಾವ ಗೋತ್ರಕ್ಕೆ ಸೇರಿದವನು?
2. ಫರೋಹನ ಮಗಳು ಮಗುವಾದ ಮೋಶೆಯನ್ನು ಹೇಗೆ ಕಂಡುಕೊಂಡಳು?
3. ಮೋಶೆಯನ್ನು ಫರೋಹನ ಮಗಳು ದತ್ತು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಆತನನ್ನು ಯಾರು ಸಾಕಿದರು?
4. ಮೋಶೆಯು ಕೊಂದ ಈಜಿಪ್ಟಿನವನಿಗೆ ಏನಾಯಿತು?
5. ಮೋಶೆಯು ಈಜಿಪ್ಟನ್ನು ಬಿಟ್ಟು ಓಡಿ ಹೋದದ್ದು ಯಾಕೆ?
6. ಮೋಶೆಯು ಮಿದ್ಯಾನಿನಲ್ಲಿ ಹೆಂಡತಿಯನ್ನು ಹೇಗೆ ಪಡಕೊಂಡನು?
7. ಮಿದ್ಯಾನಿನಲ್ಲಿ ಮೋಶೆಯು ಬಹಳ ದಿನಗಳವರೆಗೆ ತಂಗಿದ್ದ ಅವಧಿಯಲ್ಲಿ ಏನಾಯಿತು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ವಿಮೋಚನಕಾಂಡದ ಮೊದಲ ಎರಡು ಅಧ್ಯಾಯಗಳಲ್ಲಿ ಸ್ತ್ರೀಯರು ಯಾವ ಪಾತ್ರವನ್ನು ವಹಿಸುತ್ತಾರೆ?
2. ಮೋಶೆಯು ಮಿದ್ಯಾನಿನಲ್ಲಿ 40 ವರ್ಷವನ್ನು ಕಳೆಯುವಾಗ ಆತನಿಗೆ ಹೇಗನ್ನಿಸಿರಬಹುದು ಎಂದು ನೀವು ಆಲೋಚಿಸುತ್ತೀರಿ?
3. ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಇಂದು ಈ ವಾಕ್ಯಭಾಗದಿಂದ ಏನನ್ನು ಕಲಿಯಬಹುದು?

**ವಿಮೋಚನಕಾಂಡ ಅಧ್ಯಯನ 3: ಮೋಶೆ ಮತ್ತು ಉರಿಯುವ ಪೊದೆ**

**ಅ. ಪರಿಚಯ**

ಮಿದ್ಯಾನಿನಲ್ಲಿ ಮೋಶೆಯು ಒಬ್ಬ ಕುರುಬನಾಗಿ ತನ್ನ ಮಾವನಿಗಾಗಿ ಕೆಲಸ ಮಾಡಿದನು. ಒಂದು ಸಮಯದಲ್ಲಿ ಆತನು ಇತ್ರೋವನ *ಮಂದೆಯನ್ನು ಮೇಯಿಸುತ್ತಿರಲಾಗಿ ಮಂದೆಯನ್ನು ಮರುಭೂಮಿಯ ಹಿಂಭಾಗಕ್ಕೆ ನಡಿಸಿಕೊಂಡುಹೋಗಿ ಹೋರೇಬ್ ಎಂಬ ದೇವಗಿರಿಗೆ ಬಂದನು. ಆಗ ಯೆಹೋವನ ದೂತನು ಪೊದೆಯೊಳಗಿಂದ ಅಗ್ನಿಜ್ವಾಲೆಯಲ್ಲಿ ಅವನಿಗೆ ಕಾಣಿಸಿಕೊಂಡನು. ಅವನು ನೋಡಿದಾಗ ಇಗೋ, ಪೊದೆಯು ಬೆಂಕಿಯಿಂದ ಉರಿಯುತ್ತಿತ್ತು*(ವಿಮೋ. 3:1–2).ದೇವರು ಆ ಪೊದೆಯೊಳಗಿನಿಂದ ಆತನೊಂದಿಗೆ ಮಾತನಾಡಿದನು. ಆತನು ತಾನು ಮೋಶೆಯ ಪೂರ್ವಜರುಗಳ ದೇವರಾಗಿದ್ದೇನೆ ಮತ್ತು ಈಜಿಪ್ಟಿನಲ್ಲಿರುವ ಇಸ್ರಾಯೇಲರ ಹಿಂಸೆಯನ್ನು ಕಂಡು ಕನಿಕರಪಡುತ್ತೇನೆ ಎಂದು ಹೇಳಿದನು. ಅದಲ್ಲದೆ ಆತನು *ಅವರನ್ನು ಈಜಿಪ್ಟಿನವರ ಕೈಯೊಳಗಿಂದ ಬಿಡುಗಡೆ ಮಾಡುವದಕ್ಕೂ ಆ ದೇಶದಿಂದ ಬಿಡಿಸಿ ಹಾಲೂ ಜೇನೂ ಹರಿಯುವ ವಿಸ್ತಾರವಾದ ಒಳ್ಳೆಯ ದೇಶಕ್ಕೆ … ನಡಿಸಿಕೊಂಡು ಹೋಗುವದಕ್ಕೂ* ಬಯಸುತ್ತೇನೆ ಅಂದನು (ವಿಮೋ. 3:8). ಇಸ್ರಾಯೇಲರನ್ನು ಈಜಿಪ್ಟಿನಿಂದ ಹೊರಗೆ ನಡೆಸಲು ದೇವರು ಮೋಶೆಯನ್ನು ಕರೆದನು.

**ಆ. ಓದಿರಿ**

ವಿಮೋ. 3:1–22

**ಇ. ಟಿಪ್ಪಣಿ**

*ಹೋರೇಬ್* (ವ. 1): ಸಿನಾಯಿ ಪರ್ಯಾಯ ದ್ವೀಪದ ಆಗ್ನೇಯ ಭಾಗದಲ್ಲಿರುವ ಈ ಪರ್ವತವನ್ನು ಸಿನಾಯಿ ಪರ್ವತ ಎಂದೂ ಸಹ ಕರೆಯಲಾಗುತ್ತದೆ, ***ನಿರ್ಗಮನ*** ನಕ್ಷೆಯನ್ನು ನೋಡಿರಿ.

ಯೆಹೋವನ ದೂತನು (ವ. 2): ಈ ಹೇಳಿಕೆಯು ಯೆಹೋವನ ಕಾಣಿಸಿಕೊಳ್ಳುವಿಕೆಯನ್ನು ಸೂಚಿಸುತ್ತದೆ (ವ. 4 ರಲ್ಲಿ ದೇವರು ಆತನನ್ನು ಕರೆದನು ಎಂಬುದು ಸ್ಪಷ್ಟವಾಗಿದೆ). ಆದಿ. 16:17 ರ ಟಿಪ್ಪಣಿಯನ್ನೂ ಸಹ ನೋಡಿರಿ.

*ಪರಿಶುದ್ಧ ಭೂಮಿ* (ವ. 5): ಆ ಭೂಮಿಯನ್ನು ಪರಿಶುದ್ಧ ಮಾಡಿದ್ದು ದೇವರ ಪ್ರಸನ್ನತೆಯಾಗಿದೆ.

*ಹಾಲೂ ಜೇನೂ ಹರಿಯುವ ದೇಶ* (ವ. 8): ಪಂಚಕಾಂಡದಲ್ಲಿ ಕಾನಾನ್ ದೇಶವು ಆಗಾಗ್ಗೆ 'ಹಾಲೂ ಜೇನೂ ಹರಿಯುವ ದೇಶ' ಎಂದು ಉಲ್ಲೇಖಿಸಲಾಗುತ್ತದೆ. ಅದರ ಹುಲ್ಲುಗಾವಲು ಕುರಿ ಮತ್ತು ಆಡುಗಳನ್ನು ಮೇಯಿಸಲು ಉತ್ತಮವಾಗಿದುದ್ದರಿಂದ ಅದು ಹಾಲು ಉತ್ಪಾದನೆಗೆ ಒಳ್ಳೆಯದಾಗಿತ್ತು. ಅವುಗಳು ಹೂವುಗಳಿಂದಲೂ ಸಹ ಕೂಡಿದ್ದು ಕಾಡುಜೇನುಗಳಿಗೆ ಒಳ್ಳೆಯ ಔತಣ ಒದಗಿಸುತ್ತಿತ್ತು.

*ಇರುವಾತನೇ ಆಗಿದ್ದೇನೆ* (ವ. 14): ??? ಈ ಹೆಸರು ನಂಬಿಗಸ್ತನು ಮತ್ತು ವಿಶ್ವಾಸಾರ್ಹನು ಎಂಬ ಆತನ ಗುಣವನ್ನು ವ್ಯಕ್ತಪಡಿಸುತ್ತದೆ. ಯೇಸು ತಾನು ದೇವರೆಂದು ಘೋಷಿಸಿಕೊಳ್ಳುತ್ತಾ ತನ್ನ ಕುರಿತು 'ಇರುವಾತನೇ ಅಥವಾ ನಾನೇ' ಎಂಬ ಹೇಳಿಕೆಯನ್ನು ಉಪಯೋಗಿಸಿದನು.

*ಯೆಹೋವನು* (ವ. 15): ಹಿಬ್ರೂ ಪಠ್ಯವು ಜಊಘಊ ಎಂಬ ನಾಲ್ಕು ವ್ಯಂಜನಾಕ್ಷರಗಳನ್ನು ಉಪಯೋಗಿಸುತ್ತದೆ, ಅದು ಬಹುಶಃ *ಯಾಹ್ವೆ* ಎಂಬುದನ್ನು ಸೂಚಿಸುತ್ತದೆ ಮತ್ತು ಅದರ ಅರ್ಥ 'ಆತನು ಇರುವಾತನು' ಎಂಬದಾಗಿದೆ. ಈ ಪದದ ಪವಿತ್ರತೆಯ ನಿಮಿತ್ತ ಅದನ್ನು ಉಚ್ಚರಿಸುತ್ತಿರಲಿಲ್ಲ. ಅದರ ಬದಲಾಗಿ ಯೆಹೂದ್ಯ ರಬ್ಬಿಗಳು *ಅಡೊನಾಯ್* ಎಂಬ ಹಿಬ್ರೂ ಪದವನ್ನು ಬಳಸುತ್ತಿದ್ದರು. *ಅಡೊನಾಯ್* ಅಂದರೆ *ಕರ್ತನು* ಎಂದರ್ಥ.

*ಹಿರಿಯರನ್ನು* (ವ, 16): ಕುಟುಂಬಗಳ ಮತ್ತು ಗೋತ್ರಗಳ ಯಜಮಾನನನ್ನು ಹಿರಿಯನೆಂದು ಕರೆಯುತ್ತಿದ್ದರು. ಅವರು ನ್ಯಾಯ ವಿಧಿಸುವವರಾಗಿ, ಸಮಾಲೋಚಕರಾಗಿ ಮತ್ತು ಸೇನಾ ನಾಯಕರುಗಳಾಗಿ ಕೆಲಸ ನಿರ್ವಹಿಸುತ್ತಿದ್ದರು.

*ಮೂರು ದಿನ ಪ್ರಯಾಣ ಮಾಡಿ* (ವ. 18): ಈ ಹೇಳಿಕೆಯ ಅರ್ಥವು ಬಹುಶಃ 'ಒಂದು ಚಿಕ್ಕ ಪ್ರಯಾಣ' ಎಂಬುದಾಗಿದೆ. ವಾಸ್ತವಿಕವಾಗಿ ಈಜಿಪ್ಟಿನಿಂದ ಸಿನಾಯಿ ಪರ್ವತಕ್ಕೆ ಪ್ರಯಾಣಿಸಬೇಕಾದರೆ ಮೂರು ದಿನಗಳಿಗಿಂತ ಹೆಚ್ಚಿನ ಸಮಯವು ಬೇಕಾಗುತ್ತಿತ್ತು.

*ನೀವು ಹೋಗುವಾಗ ಬರಿಗೈಯಲ್ಲಿ ಹೋಗುವುದಿಲ್ಲ* (ವ. 21): ಆದಿ. 15:14 ರಲ್ಲಿದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವನ್ನು ಹೋಲಿಸಿರಿ.

**ಈ. ಪ್ರಶ್ನೆಗಳು**

1. ಮೋಶೆಯು ಉರಿಯುವ ಪೊದೆಯನ್ನು ಕಂಡಾಗ ಯಾಕೆ ಆಶ್ಚರ್ಯಪಟ್ಟನು?
2. ಮೋಶೆಯು ಯಾಕೆ ಕೆರಗಳನ್ನು ಬಿಚ್ಚಬೇಕೆಂದು ಹೇಳಲ್ಪಟ್ಟನು?
3. ಮೋಶೆಯು ಯಾಕೆ ತನ್ನ ಮುಖವನ್ನು ಮುಚ್ಚಿಕೊಂಡನು?
4. ದೇವರು ಯಾಕೆ ಇಸ್ರಾಯೇಲರನ್ನು ಕನಿಕರಿಸಿದನು ಮತ್ತು ಅವರಿಗಾಗಿ ಆತನು ಮಾಡಿದ ಯೋಜನೆಯೇನು?

5. ಇಸ್ರಾಯೇಲರನ್ನು ಈಜಿಪ್ಟಿನಿಂದ ಹೊರಗೆ ಬರಮಾಡಲು ದೇವರು ಮೋಶೆಯನ್ನು ಕರೆದಾಗ ತನ್ನ ಕುರಿತು ಏನನ್ನು ಪ್ರಕಟಪಡಿಸಿದನು (ವಿಮೋ. 3)? ಒಂದು ಪಟ್ಟಿಯನ್ನು ಮಾಡಿರಿ!

6. ದೇವರು ಮೋಶೆಯನ್ನು ಹೇಗೆ ಉಪಯೋಗಿಸಬೇಕೆಂದು ಯೋಜಿಸಿಕೊಂಡನು?

7. ಮೋಶೆಯು ಹಿಂದೇಟು ಹಾಕಿದಾಗ ದೇವರು ಆತನಿಗೆ ಒಂದು ವಾಗ್ದಾನವನ್ನು ಮಾಡಿದನು. ದೇವರು ಮೋಶೆಗೆ ಮಾಡಿದ ವಾಗ್ದಾನವೇನು?

8. ದೇವರೇ ಮೋಶೆಯನ್ನು ಕಳುಹಿಸಿದ್ದಾನೆ ಎಂಬುದಕ್ಕೆ ದೇವರು ಆತನಿಗೆ ಕೊಟ್ಟ ಸೂಚನೆಯೇನು?

9. ಮೋಶೆಯ ಕುರಿತು ಇಸ್ರಾಯೇಲರ ಹಿರಿಯರಿಗೆ ದೇವರು ಕೊಟ್ಟ ಸಂದೇಶವೇನು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ದೇವರು ಹೋರೇಬ್ ಬೆಟ್ಟದ ಮೇಲೆ ಮೋಶೆಗೆ ಕಾಣಿಸಿಕೊಂಡ ಸನ್ನಿವೇಶದಲ್ಲಿ ಮೋಶೆಯ ಸ್ಥಾನದಲ್ಲಿ ನೀವು ಇರುವುದನ್ನು ಊಹಿಸಿಕೊಳ್ಳಿರಿ. ನಿಮಗೆ ಹೇಗನ್ನಿಸುತ್ತದೆ? ನೀವು ಹೇಗೆ ಪ್ರತಿಕ್ರಿಯಿಸುವಿರಿ? ನೀವು ಏನನ್ನು ಹೇಳುವಿರಿ? ದೇವರ ಕುರಿತು ನಿಮ್ಮ ತಿಳುವಳಿಕೆಯು ಏನಾಗಿರಬಹುದು? ನಂತರ ನಿಮ್ಮ ಅನುಭವದ ಕುರಿತು ಒಂದು ಪದ್ಯವನ್ನು (ಅಥವಾ ಒಂದು ಚಿಕ್ಕ ಸಾಕ್ಷಿಯನ್ನು) ಬರೆಯಿರಿ.

2. ಮೂರನೆಯ ಅಧ್ಯಾಯದ ಎರಡನೆಯ ಭಾಗವು ಮೋಶೆಯ ಮೂಲಕ ದೇವರು ಇಸ್ರಾಯೇಲರಿಗೆ ಕೊಟ್ಟ ಒಂದು ಪ್ರವಾದನಾ ಸಂದೇಶವನ್ನು ಹೊಂದಿದೆ. ಕೆಲವು ಮುಖ್ಯ ಅಂಶಗಳೊಂದಿಗೆ ಈ ಸಂದೇಶವನ್ನು ಸಾರಾಂಶಗೊಳಿಸಿರಿ.

3. ನೀವು ಪ್ರಶ್ನೆ 5 ಕ್ಕೆ ಉತ್ತರಿಸಿದ ಪಟ್ಟಿಯನ್ನು ಮತ್ತೊಮ್ಮೆ ಓದಿರಿ. ದೇವರ ಕುರಿತು ಸ್ವತಃ ನೀವು ಇವುಗಳಲ್ಲಿ (ಅಥವಾ ಇದಕ್ಕೆ ಹೋಲುವ) ಎಷ್ಟು ಸಂಗತಿಗಳನ್ನು ಅನುಭವಿಸಿದ್ದೀರಿ? ನಿಮ್ಮ ಸಾಕ್ಷಿಗಳನ್ನು ಹಂಚಿಕೊಳ್ಳಿರಿ.

**ವಿಮೋಚನಕಾಂಡ ಅಧ್ಯಯನ 4: ಮೋಶೆಯು ಹಿಂಜರಿಯುತ್ತಾ ಈಜಿಪ್ಟಿಗೆ ಹಿಂತಿರುಗಿದ್ದು**

**ಅ. ಪರಿಚಯ**

ದೇವರು ತನ್ನನ್ನು ಕರೆದಿದ್ದಾನೆ ಎಂಬುದನ್ನು ಜನರು ನಂಬುವುದಿಲ್ಲ ಎಂದು ಮೋಶೆ ಭಯಪಟ್ಟನು. ಹಾಗಾಗಿ ಅವರಿಗೆ ಮನವರಿಕೆ ಮಾಡಿಕೊಡಲು ದೇವರು ಆತನಿಗೆ ಮೂರು ಸೂಚನೆಗಳನ್ನು ಕೊಟ್ಟನು. ಆಗಲೂ ಸಹ ಮೋಶೆಯು ಹಿಂಜರಿದನು: ನನ್ನ ಯೆಹೋವನೇ, ನಾನು ಮೊದಲಿನಿಂದಲೂ ನೀನು ನಿನ್ನ ದಾಸನ ಸಂಗಡ ಮಾತನಾಡಿದಂದಿನಿಂದಲೂ ವಾಕ್ಚಾತುರ್ಯವಿಲ್ಲದವನು. ನನ್ನ ಮಾತೂ ನಾಲಿಗೆಯೂ ಮಂದವಾಗಿವೆ ಅಂದನು (ವಿಮೋ. 4:10). ಆಗ ದೇವರು ನಾನು ನಿನಗೆ ಮಾತನಾಡಲು ಸಹಾಯ ಮಾಡುವೆ ಮತ್ತು ಏನು ಹೇಳಬೇಕೆಂಬುದನ್ನು ಬೋಧಿಸುವೆ ಎಂದು ಆತನಿಗೆ ವಾಗ್ದಾನಮಾಡಿದನು. ಮೋಶೆಯು ಈಜಿಪ್ಟಿಗೆ ಹಿಂದಿರುಗುವುದಕ್ಕಿಂತ ಮುಂಚೆ, ಫರೋಹನು ಜನರನ್ನು ಹೋಗಲು ಅನುಮತಿಸಬೇಕಾದರೆ ಏನು ನಡೆಯಬೇಕು ಎಂಬುದನ್ನು ದೇವರು ಆತನಿಗೆ ಪ್ರಕಟಪಡಿಸಿದನು.

**ಆ. ಓದಿರಿ**

ವಿಮೋ. 4:1–31

**ಇ. ಟಿಪ್ಪಣಿ**

*ಕುಷ್ಠದಿಂದ* (ವ. 6): ನಮ್ಮ ಸತ್ಯವೇದಗಳಲ್ಲಿ'ಕುಷ್ಠ' ಎಂದು ಅನುವಾದಗೊಂಡಿರುವ ಹಿಬ್ರೂ ಪದವು ಕೇವಲ ಕುಷ್ಠರೋಗಕ್ಕಾಗಿ ಮಾತ್ರವಲ್ಲದೆ ಅನೇಕ ವಿಧವಾದ ಚರ್ಮ ರೋಗಗಳನ್ನು ಸೂಚಿಸಲು ಬಳಸಲಾಗುತ್ತಿತ್ತು.

*ಲೇವಿಯನಾದ ಆರೋನನು* (ವ. 14): ಇಲ್ಲಿ ಮೊದಲ ಬಾರಿಗೆ ಮೋಶೆಯ ಅಣ್ಣನಾದ ಆರೋನನ ಪ್ರಸ್ತಾವನೆ ಆಗುತ್ತಿದೆ. ಆತನು ಮೋಶೆಗಿಂತ ಮೂರು ವರ್ಷಗಳ ಮುಂಚೆ ಜನಿಸಿದ್ದನು, ಹಾಗಾಗಿ ಈಜಿಪ್ಟಿನ ಅರಸನು ಎಲ್ಲಾ ಇಸ್ರಾಯೇಲಿನ ನವಜಾತ ಗಂಡು ಮಕ್ಕಳನ್ನು ಕೊಲ್ಲಬೇಕೆಂದು ಆಜ್ಞಾಪಿಸಿದಾಗ ಆತನು ಆಗಾಗಲೇ ಅಂಬೆಗಾಲಿಡುವ ಕೂಸಾಗಿದ್ದನು.

*ತನ್ನ ಹೆಂಡತಿಯನ್ನೂ ಮಕ್ಕಳನ್ನೂ* (ವ. 20): ಮೋಶೆಯ ಹೆಂಡತಿಯ ಹೆಸರು ಚಿಪ್ಪೋರ ಮತ್ತು ಆತನ ಜೇಷ್ಠ ಪುತ್ರನ ಹೆಸರು ಗೆರ್ಷೋಮ್ (ವಿಮೋ. 2:22) ಎಂಬುದಾಗಿದೆ. ವಿಮೋ. 18:4 ರವರೆಗೆ ಆತನ ಎರಡನೆಯ ಮಗನಾದ ಎಲಿಯೇಜರ್‌ನ ಹೆಸರು ಎಲ್ಲಿಯೂ ಕಾಣುವುದಿಲ್ಲ.

*ಇಸ್ರಾಯೇಲು ... ನನ್ನ ಜೇಷ್ಠಪುತ್ರನೇ* (ವ. 22): ಈ ರೂಪಕಾಲಂಕಾರದ ಅರ್ಥವೇನೆಂದರೆ, ದೇವರು ಇಸ್ರಾಯೇಲರೊಂದಿಗೆ ಒಂದು ವಿಶೇಷವಾದ ಸಂಬಂಧವನ್ನು ಹೊಂದಿದ್ದನು ಮತ್ತು ಅವರು ಒಂದು ವಿಶೇಷವಾದ ರೀತಿಯಲ್ಲಿ ಆತನಿಗೆ ಸಂಬಂಧಪಟ್ಟಿದ್ದರು. ಹಿಬ್ರೂ ಭಾಷೆಯಲ್ಲಿ *ಮಗನು* ಎಂಬ ಪದವನ್ನು ಮೂರು ರೀತಿಯಲ್ಲಿ ಬಳಸಬಹುದು: ಅದು 'ಮಗನು' ಎಂಬ ಅರ್ಥವನ್ನು ಕೊಡಬಹುದು, ಅದು 'ಪುರುಷ ಸಂತತಿ' – ಅಂದರೆ ಮಗ, ಮೊಮ್ಮಗ ಇತ್ಯಾದಿ ಎಂಬ ಅರ್ಥವನ್ನು ಕೊಡಬಹುದು. ಅದಲ್ಲದೆ ಅದು ಗಂಡು ಮಕ್ಕಳನ್ನೂ ಮತ್ತು ಹೆಣ್ಣು ಮಕ್ಕಳನ್ನೂ ಸೂಚಿಸುತ್ತಾ'ಮಗು' ಎಂಬ ಅರ್ಥವನ್ನೂ ಸಹ ಕೊಡಬಹುದು.

*ನಿನ್ನ ಜೇಷ್ಠಪುತ್ರನನ್ನು ಕೊಲ್ಲುವೆನು* (ವ. 23): ಈ ಹೇಳಿಕೆಯು ಈಜಿಪ್ಟಿನ ಮೇಲೆ ಬರಲಿದ್ದ ಹತ್ತನೆಯ ಮತ್ತು ಕೊನೆಯ ಉಪದ್ರವವನ್ನು ಸೂಚಿಸುತ್ತದೆ.

*ಯೆಹೋವನು ಅವನೆದುರಿಗೆ ಬಂದು ಅವನನ್ನು ಕೊಲ್ಲುವುದಕ್ಕಿದ್ದಾಗ* (ವ. 24): ಇದರ ಹಿನ್ನೆಲೆಯು ನಮಗೆ ತಿಳಿಸುವುದೇನೆಂದರೆ ದೇವರು ಮೋಶೆಯನ್ನು ಕೊಲ್ಲಲು ಬಯಸಿದ್ದರ ಕಾರಣವೇನೆಂದರೆ ಮೋಶೆಯು ತನ್ನ ಮಗನಿಗೆ ಸುನ್ನತಿ ಮಾಡಿರಲಿಲ್ಲ. ಚಿಪ್ಪೋರಳು ಅಷ್ಟು ಬೇಗನೆ ಕ್ರಿಯಾಶೀಲಳಾಗಿದ್ದನ್ನು ಗಮನಿಸಿದರೆ ಬಹುಶಃ ಮೋಶೆಯು ಇದಕ್ಕಿಂತ ಮುಂಚೆಯೇ ಸುನ್ನತಿ ಮಾಡಿರದಿದ್ದಕ್ಕೆ ಆಕೆಯೇ ಕಾರಣವಾಗಿದ್ದಿರಬಹುದು.

**ಈ. ಪ್ರಶ್ನೆಗಳು**

1. ಮೋಶೆಯನ್ನು ಕಳುಹಿಸಿದ್ದು ದೇವರೇ ಎಂದು ಜನರು ನಂಬುವಂತೆ ದೇವರು ಮೋಶೆಗೆ ವಾಗ್ದಾನ ಮಾಡಿದ ಮೂರು ಸೂಚನೆಗಳು ಯಾವವು?
2. ದೇವರು ಮೋಶೆಗೆ ಮೂರು ಸೂಚನೆಗಳನ್ನು ಕೊಡುವೆನೆಂದು ವಾಗ್ದಾನ ಮಾಡಿದಾಗ ಆತನು ಹೇಗೆ ಪ್ರತಿಕ್ರಿಯಿಸಿದನು?
3. ದೇವರು ಮೋಶೆಯನ್ನು ಮನವೊಲಿಸಲು ಪ್ರಯತ್ನಿಸಿದಾಗ ದೇವರು ವ. 11–12 ರಲ್ಲಿ ಮುಂದಿಟ್ಟ ವಾದವನ್ನು ವಿವರಿಸಿರಿ.
4. ಯಾವ ರೀತಿಯಲ್ಲಿ ಮೋಶೆಯ ಅಣ್ಣನಾದ ಆರೋನನು ಆತನಿಗೆ ಸಹಾಯಕವಾಗಿರುವನು?
5. ಮೋಶೆಯು ಈಜಿಪ್ಟಿಗೆ ಹಿಂತಿರುಗಲು ಇತ್ರೋವಿನ ಅನುಮತಿಯನ್ನು ಕೇಳಿದಾಗ ಆತನು ಹೇಗೆ ಪ್ರತಿಕ್ರಿಯಿಸಿದನು?
6. ಮೋಶೆಯು ಈಜಿಪ್ಟಿಗೆ ಹಿಂತಿರುಗುವುದು ಹೇಗೆ ಸುರಕ್ಷಿತವಾಗಿತ್ತು?
7. ಮೋಶೆ ಮತ್ತು ಆತನ ಕುಟುಂಬದವರು ಮಿದ್ಯಾನಿನಿಂದ ಈಜಿಪ್ಟಿಗೆ ಪ್ರಯಾಣಿಸಿದಾಗ ಏನು ಸಂಭವಿಸಿತು?

8. ಆರೋನನು ಮೋಶೆಯನ್ನು ಹೋರೇಬಿನಲ್ಲಿ ಯಾಕೆ ಸಂಧಿಸಿದನು?

9. ಮೋಶೆ ಮತ್ತು ಆರೋನರು ಈಜಿಪ್ಟಿಗೆ ಹಿಂತಿರುಗಿದಾಗ ಇಸ್ರಾಯೇಲರು ಅವರನ್ನು ಹೇಗೆ ಸ್ವೀಕರಿಸಿದರು?

**ಊ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಮೋಶೆಯು ಹೋಗಿ ಇಸ್ರಾಯೇಲರನ್ನು ಈಜಿಪ್ಟಿನಿಂದ ಬಿಡಿಸಬೇಕೆಂದು ಆತನಿಗೆ ಮನವೊಲಿಸಲು ದೇವರು ಶ್ರಮಪಡಬೇಕಾಯಿತು. ಮೋಶೆಯು ವಿಧೇಯನಾಗಲು ಬಹಳ ಅಸಂತುಷ್ಟನಾಗಿದ್ದನು ಮತ್ತು ಐದು ಬಾರಿ ಈ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದನು. ಮೋಶೆಯ ವ್ಯಕ್ತಿತ್ವದ ಕುರಿತು ಇದು ಏನನ್ನು ಪ್ರಕಟಪಡಿಸುತ್ತದೆ? ದೇವರು ಹೇಗೆ ಪ್ರತಿಕ್ರಿಯಿಸಿದನು?

2. ಮೋಶೆಯ ಪ್ರಶ್ನೆಗಳನ್ನು ಮತ್ತೊಮ್ಮೆ ಗಮನಿಸಿರಿ. ನಿಮ್ಮ ಕುರಿತು ಏನು? ನೀವು ದೇವರಿಗೆ ಅಥವಾ ನಿಮ್ಮ ಸಭಾಪಾಲಕರಿಗೆ ಇದೇ ರೀತಿಯ ಪ್ರಶ್ನೆಗಳನ್ನು ಕೇಳುವುದರ ಮೂಲಕ ಎಂದಾದರೂ ದೇವರ ಕರೆಗೆ ವಿಧೇಯರಾಗಲು ತಪ್ಪಿಸಿಕೊಂಡಿದ್ದೀರೋ? ನಿಮ್ಮ ಸಾಕ್ಷಿಯನ್ನು ಹಂಚಿಕೊಳ್ಳಿರಿ.

3. ಮೋಶೆ, ಚಿಪ್ಪೋರ ಮತ್ತು ಅವರ ಮಗನ ಸುನ್ನತಿಯ ವಿಚಿತ್ರ ಕಥೆಯು ಅನೇಕ ಓದುಗರನ್ನು ಗೊಂದಲಪಡಿಸುತ್ತದೆ. ದೇವರು ಮೋಶೆಯನ್ನು ಸೇವೆಗೆ ಕರೆದದ್ದರ ಬೆಳಕಿನಲ್ಲಿ ನೀವು ಹೇಗೆ ಇದನ್ನು ಅರ್ಥವಿವರಿಸುತ್ತೀರಿ?

## ವಿಮೋಚನಕಾಂಡ ಅಧ್ಯಯನ 5: ಹುಲ್ಲಿಲ್ಲದೇ ಇಟ್ಟಿಗೆಗಳು

### ಅ. ಪರಿಚಯ

ಮೋಶೆ ಮತ್ತು ಆರೋನರು ಫರೋಹನ ಬಳಿಗೆ ಹೋಗಿ ತಮ್ಮ ಜನರಿಗೆ ಮರುಭೂಮಿಯಲ್ಲಿ ದೇವರಿಗಾಗಿ ಹಬ್ಬವನ್ನಾಚರಿಸಲು ಅನುಮತಿಸಬೇಕೆಂದು ಕೇಳಿದರು. ಆದರೆ ಫರೋಹನು ಹೀಗೆ ಉತ್ತರಿಸಿದನು: *ನಾನು ಆತನ ಮಾತಿಗೆ ವಿಧೇಯನಾಗಿ ಇಸ್ರಾಯೇಲ್ಯರನ್ನು ಕಳುಹಿಸಿ ಬಿಡುವಂತೆ ಆ ಯೆಹೋವನು ಯಾರು? ಆ ಯೆಹೋವನನ್ನು ನಾನರಿಯೆನು ಮತ್ತು ಇಸ್ರಾಯೇಲ್ಯರನ್ನೂ ಕಳುಹಿಸುವದಿಲ್ಲ* (ವಿಮೋ. 5:2). ಅದರ ಬದಲಾಗಿ ಇಸ್ರಾಯೇಲರು ಇನ್ನೂ ಕಷ್ಟಪಟ್ಟು ದುಡಿಯಬೇಕೆಂದು ಆಜ್ಞಾಪಿಸಿದನು. ಇಸ್ರಾಯೇಲರು ಇದಕ್ಕೆ ಮೋಶೆ ಮತ್ತು ಆರೋನರನ್ನು ದೂಷಿಸಿದರು.

### ಆ. ಓದಿರಿ

ವಿಮೋ. 5:1–21

### ಇ. ಟಿಪ್ಪಣಿ

*ಹಿಬ್ರಿಯರ* (ವ. 3): ಈ ಪದವು ಹಿಬ್ರಿಯ ಭಾಷೆ ಮಾತನಾಡುತ್ತಿದ್ದ ಇಸ್ರಾಯೇಲರನ್ನು ಉಲ್ಲೇಖಿಸುತ್ತದೆ.

*ಮರುಭೂಮಿಯಲ್ಲಿ ... ಬಲಿ ಅರ್ಪಿಸುವುದಕ್ಕೆ* (ವ. 3): ಇಸ್ರಾಯೇಲರು ಈಜಿಪ್ಟಿನಲ್ಲಿ ಬಲಿ ಅರ್ಪಿಸಲು ಆಗುತ್ತಿರಲಿಲ್ಲ, ಯಾಕೆಂದರೆ ಈಜಿಪ್ಟಿನವರು ದೇವರು ಬಯಸಿದಂತಹ ಬಲಿ ಅರ್ಪಣೆಗಳನ್ನು ಅನುಮತಿಸುತ್ತಿರಲಿಲ್ಲ (ವಿಮೋ. 8:26 ನ್ನು ಹೋಲಿಸಿರಿ).

*ಬಿಟ್ಟಿ ಕೆಲಸ ಮಾಡಿಸುವವರಿಗೂ ಅವರ ಅಧಿಕಾರಿಗಳಿಗೂ* (ವ. 6): ಅವರು ಈಜಿಪ್ಟಿನವರಾಗಿದ್ದರು. ಅಧಿಕಾರಿಗಳು ವಾಸ್ತವಿಕವಾದ ಕೆಲಸವನ್ನು ಮೇಲ್ವಿಚಾರಣೆ ನಡೆಸುತ್ತಿದ್ದ ಇಸ್ರಾಯೇಲರಾಗಿದ್ದರು (ನೋಡಿರಿ ವ. 14–16).

*ಹುಲ್ಲನ್ನು* (ವ. 7): ಮಣ್ಣನ್ನು ಬಿಗಿಯಾಗಿ ಹಿಡಿದುಕೊಳ್ಳಲು ಮತ್ತು ಇಟ್ಟಿಗೆಯನ್ನು ಬಲಪಡಿಸಲು ಇಟ್ಟಿಗೆಯ ನಿರ್ಮಾಣದಲ್ಲಿ ಹುಲ್ಲನ್ನು ಬಳಸುತ್ತಿದ್ದರು.

### ಈ. ಪ್ರಶ್ನೆಗಳು

1. ಮೋಶೆ ಮತ್ತು ಆರೋನರು ಫರೋಹನ ಬಳಿಗೆ ಹೋಗಿ ತಮ್ಮ ಜನರಿಗೆ ಮರುಭೂಮಿಯಲ್ಲಿ ದೇವರಿಗಾಗಿ ಹಬ್ಬವನ್ನಾಚರಿಸಲು ಅನುಮತಿಸಬೇಕೆಂದು ಕೇಳಿದಾಗ ಆತನು ಹೇಗೆ ಪ್ರತಿಕ್ರಿಯಿಸಿದನು?
2. ಮೋಶೆ ಮತ್ತು ಆರೋನರು ದೇವರೊಂದಿಗೆ ತಾವು ಹೊಂದಿದ್ದ ಸಂಬಂಧವನ್ನು ಹೇಗೆ ವಿವರಿಸಿದರು?
3. ಇಸ್ರಾಯೇಲರು ಮರುಭೂಮಿಯಲ್ಲಿ ದೇವರಿಗಾಗಿ ಹಬ್ಬವನ್ನಾಚರಿಸಬೇಕೆಂಬುದಕ್ಕೆ ಮೋಶೆ ಮತ್ತು ಆರೋನರು ಯಾವ ಕಾರಣ ಕೊಟ್ಟರು?
4. ಇಸ್ರಾಯೇಲರು ಇನ್ನೂ ಕಷ್ಟಪಟ್ಟು ದುಡಿಯಬೇಕೆಂಬುದಕ್ಕೆ ಫರೋಹನು ಯಾವ ಕಾರಣವನ್ನು ಕೊಟ್ಟನು?
5. ಇಸ್ರಾಯೇಲರು ಯಾವ ರೀತಿಯಲ್ಲಿ ಕಷ್ಟವಾದ ದುಡಿತಕ್ಕೆ ಒಳಗಾದರು?
6. ಈ ಕಠಿಣ ಕೆಲಸದ ಪರಿಣಾಮವಾಗಿ ಇಸ್ರಾಯೇಲಿನ ಅಧಿಕಾರಿಗಳು ಹೇಗೆ ಬಾಧೆಪಟ್ಟರು?

### ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಮೋಶೆ ಮತ್ತು ಆರೋನರು ದೇವರೊಂದಿಗೆ ತಾವು ಹೊಂದಿದ್ದ ಸಂಬಂಧಕ್ಕೂ ಮತ್ತು ಫರೋಹನು ದೇವರೊಂದಿಗೆ ಹೊಂದಿದ್ದ ಸಂಬಂಧಕ್ಕೂ ನಡುವೆ ಒಂದು ವ್ಯತ್ಯಾಸವಿದೆ. ಈ ವ್ಯತ್ಯಾಸವನ್ನು ವಿವರಿಸಿರಿ. ಇಂದು ನಾವು ದಕ್ಷಿಣ ಭಾರತದಲ್ಲಿರುವ ನಮ್ಮ ಸ್ವಂತ ಜೀವತಗಳಿಗಾಗಿ ಮತ್ತು ಸೇವೆಗಳಿಗಾಗಿ ಈ ವಾಸ್ತವಾಂಶದಿಂದ ಏನನ್ನು ಕಲಿಯಬಹುದು?
2. ವಿಮೋ. 5 ರಲ್ಲಿರುವ ಫರೋಹನ ಮನೋಭಾವನೆಯನ್ನು ನೀವು ಹೇಗೆ ವಿವರಿಸುವಿರಿ? ಅದು ನ್ಯಾಯವಾದುದ್ದೋ ಅಥವಾ ಅನ್ಯಾಯವಾದುದ್ದೋ? ನಿಮ್ಮ ತೀರ್ಪಿಗೆ ನಿಮ್ಮ ಸ್ವಂತ ಕಾರಣಗಳನ್ನು ಕೊಡಿರಿ.
3. ಇಸ್ರಾಯೇಲಿನ ಅಧಿಕಾರಿಗಳು ಮೋಶೆ ಮತ್ತು ಆರೋನರ ಬಳಿಗೆ ಬಂದು ಘೋರ ಸ್ಥಿತಿಗೆ ತಲುಪಿದ ಸನ್ನಿವೇಶಕ್ಕಾಗಿ ಅವರನ್ನು ದೂಷಿಸಿದರು. ಅವರು ಹೇಳಿದ ಸಂಗತಿಯನ್ನು ನೀವು ಹೇಗೆ ಅರ್ಥವಿವರಿಸುವಿರಿ (5:20–21)?



## ವಿಮೋಚನಕಾಂಡ ಅಧ್ಯಯನ 6: ದೇವರು ಮೋಶೆಗೆ ತನ್ನ ಒಡಂಬಡಿಕೆಯನ್ನು ಜ್ಞಾಪಿಸಿದ್ದು

### ಅ. ಪರಿಚಯ

ಇಸ್ರಾಯೇಲರ ಮೇಲ್ವಿಚಾರಕರು ಶಾಪ ಮತ್ತು ಆರೋಪಗಳೊಂದಿಗೆ ಮೋಶೆ ಮತ್ತು ಆರೋನರ ಬಳಿಗೆ ಬಂದಾಗ, ಹದೆಗೆಟ್ಟ ಪರಿಸ್ಥಿತಿಗಾಗಿ ಮೋಶೆಯು ತನ್ನ ಸರದಿಯ ಪ್ರಕಾರ ಆ ಆರೋಪವನ್ನು ದೇವರ ಮೇಲೆ ಹಾಕಿದನು.ದೇವರು ನಂತರ ಮೋಶೆಗೆ, ನಾನೇ ಯೆಹೋವನು, ಎಂಬ ತನ್ನ ಹೆಸರನ್ನು ಜ್ಞಾಪಿಸಿದನು. ಇಸ್ರಾಯೇಲರ ಪರಿಸ್ಥಿತಿಗಳನ್ನು ತಿಳಿದುಕೊಂಡಿರುವ ದೇವರು ಆತನಾಗಿದ್ದನು ಮತ್ತು ಆತನು ಅಬ್ರಹಾಮ, ಇಸಾಕ, ಯಾಕೋಬರ ಸಂಗಡ ತಾನು ಮಾಡಿಕೊಂಡಿರುವ ಒಡಂಬಡಿಕೆಯನ್ನು ಜ್ಞಾಪಿಸಿಕೊಂಡನು. ಆತನು ಇಸ್ರಾಯೇಲರನ್ನು ಈಜಿಪ್ಟಿನವರ ನೊಗದಿಂದ ಬಿಡಿಸಿ ಅವರಿಗೆ ಕಾನಾನ್ ದೇಶವನ್ನು ಕೊಡುವನು (ವಿಮೋ. 6:4). *ಮೋಶೆಯು ಇಸ್ರಾಯೇಲರಿಗೆ ಹಾಗೆ ಹೇಳಿದಾಗ ಅವರು ಮನೋವೇದನೆಯ ದೆಸೆಯಿಂದಲೂ ಕ್ರೂರವಾದ ದಾಸತ್ವದ ದೆಸೆಯಿಂದಲೂ ಮೋಶೆಯ ಮಾತನ್ನು ಕೇಳಲಿಲ್ಲ* (ವಿಮೋ. 6:9).

### ಆ. ಓದಿರಿ

ವಿಮೋ. 5:22–6:12

### ಇ. ಟಿಪ್ಪಣಿ

*ಸರ್ವಶಕ್ತನಾದ ದೇವರೆಂದು* (6:3): ಇದರ ಹಿಬ್ರೂ ಹೇಳಿಕೆಯು *ಎಲ್ ಶಡ್ಡಾಯ್* ಎಂಬುದಾಗಿದೆ. ಈ ಹಿಬ್ರೂ ಪದದ ಗ್ರೀಕ್ ಅನುವಾದದ ಅರ್ಥವು 'ಸರ್ವಶಕ್ತನು, ಪರಾಕ್ರಮನು' ಎಂಬುದಾಗಿದೆ (ಆದಿ. 17:1 ರ ಟಿಪ್ಪಣಿಯನ್ನೂ ಸಹ ನೋಡಿರಿ).

*ಆದರೆ ಯೆಹೋವನೆಂಬ ನನ್ನ ಹೆಸರಿನಿಂದ ನಾನು ಅವರಿಗೆ ತಿಳಿಸಲ್ಪಡಲಿಲ್ಲ* (6:3): ಇದರ ಅರ್ಥವೇನೆಂದರೆ, ಮೂಲ ಪಿತೃಗಳು ದೇವರು ತನ್ನ ಜನರ ವಿಮೋಚಕನು ಎಂಬ ದೇವರ ಪೂರ್ಣ ತಿಳುವಳಿಕೆಯನ್ನು ಹೊಂದಿರಲಿಲ್ಲ ಎಂಬುದಾಗಿದೆ. ಇಸ್ರಾಯೇಲರು ನಿರ್ಗಮನವನ್ನು ಅನುಭವಿಸಿದ ನಂತರ ಮಾತ್ರವೇ ಅವರು ಈ ಸತ್ಯವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. 'ತಿಳಿದುಕೊಳ್ಳುವುದು' ಎಂಬ ಹಿಬ್ರೂ ಪದವು 'ಅನುಭವದಿಂದ ಬರುವ ಜ್ಞಾನವನ್ನು' ಸೂಚಿಸುತ್ತದೆ.

*ನೆನಪಿಗೆ ತಂದುಕೊಂಡು*(6:5): ಹಳೆ ಒಡಂಬಡಿಕೆಯಲ್ಲಿ ಈ ಪದವು ಕೇವಲ 'ಜ್ಞಾಪಿಸಿಕೊಳ್ಳುವುದು' ಎಂಬ ಅರ್ಥದಲ್ಲಿ 'ನೆನಪಿಸಿಕೊಳ್ಳುವುದನ್ನು' ಉಲ್ಲೇಖಿಸುವುದಿಲ್ಲ. ಅದು ಚಿಂತೆಯನ್ನೂ ಸಹ ವ್ಯಕ್ತಪಡಿಸುತ್ತದೆ. ದೇವರು ಇಸ್ರಾಯೇಲರ ಪರಿಸ್ಥಿತಿಯ ಕುರಿತು ಚಿಂತಿಸುತ್ತಾನೆ ಮತ್ತು ಈಗ ಅವರ ಪರವಾಗಿ ಆತನು ಕಾರ್ಯಮಾಡಲು ಯೋಜಿಸುತ್ತಿದ್ದಾನೆ. ಆತನು ಒಡಂಬಡಿಕೆಯನ್ನು ನೆನಪಿಗೆ ತಂದುಕೊಳ್ಳುವಾಗ ಆತನು ತನ್ನ ಜೇಷ್ಠ ಪುತ್ರನಾದ (4:22) ಇಸ್ರಾಯೇಲರಿಗೆ ತನ್ನ ನಂಬಿಗಸ್ತಿಕೆ ಮತ್ತು ಶಾಶ್ವತ ಪ್ರೇಮವನ್ನು ಸಾಬೀತುಪಡಿಸುವನು.

*ಚಾಚಿದ ಬಾಹುವಿನಿಂದಲೂ* (6:6): ಇದು ದೇವರು ತನ್ನ ಜನರ ಪರವಾಗಿ ಪರಾಕ್ರಮ ಕಾರ್ಯಗಳ ಮೂಲಕ ನಿದರ್ಶಿಸಿದ ಮಹಾ ಶಕ್ತಿಯನ್ನು ಉಲ್ಲೇಖಿಸಲು ಬಳಸಲಾದ ರೂಪಕಾಲಂಕಾರವಾಗಿದೆ.

ದೊಡ್ಡ ನ್ಯಾಯತೀರ್ಪುಗಳಿಂದಲೂ (6:6): ದೇವರ ಪರಾಕ್ರಮ ಕಾರ್ಯಗಳಿಗೆ ಎರಡು ಮುಖಗಳಿದ್ದವು: ಇಸ್ರಾಯೇಲರಿಗೆ ವಿಮೋಚನೆ ಮತ್ತು ಈಜಿಪ್ಟಿನವರಿಗೆ ನ್ಯಾಯತೀರ್ಪು.

ಕೈಯನ್ನೆತ್ತಿ ಪ್ರಮಾಣಮಾಡಿದ (6:8): ಆಣೆಯಿಡುವ ಅಥವಾ ಪ್ರಮಾಣ ಮಾಡುವ ವ್ಯಕ್ತಿಯು ಇದೇ ರೀತಿಯಲ್ಲಿ ಕೈಯನ್ನೆತ್ತಿ ಪ್ರಮಾಣಮಾಡುತ್ತಿದ್ದನು.

### ಈ. ಪ್ರಶ್ನೆಗಳು

1. ವಿಮೋ. 5:22–23 ರಲ್ಲಿ ದೇವರ ವಿರುದ್ಧ ಮೋಶೆ ಮಾಡಿದ ಆಪಾದನೆಗಳನ್ನು ವಿವರಿಸಿರಿ?
2. ವಿಮೋ. 6:2–4 ರಲ್ಲಿ ದೇವರ ಕುರಿತು ಹಾಗೂ ಇಸ್ರಾಯೇಲರೊಂದಿಗೆ ಆತನು ಹೊಂದಿದ್ದ ಸಂಬಂಧದ ಕುರಿತು ನಾವು ಏನನ್ನು ಕಲಿಯುತ್ತೇವೆ?
3. ದೇವರು ಇಸ್ರಾಯೇಲಿನ ಜನರಿಗೆ ಏನನ್ನು ವಾಗ್ದಾನ ಮಾಡಿದನು (6:6–8)? ಒಂದು ಪಟ್ಟಿಯನ್ನು ಮಾಡಿರಿ.
4. ದೇವರು ಮೋಶೆಗೆ ಹೇಳಿದ್ದನ್ನು ಆತನು ಜನರಿಗೆ ತಿಳಿಸಿದಾಗ ಅವರು ಅದಕ್ಕೆ ಹೇಗೆ ಪ್ರತಿಕ್ರಿಯಿಸಿದರು?
5. ಇಸ್ರಾಯೇಲರನ್ನು ಹೋಗಗೊಡಿಸಬೇಕೆಂಬ ಸಂದೇಶದೊಂದಿಗೆ ಫರೋಹನ ಬಳಿಗೆ ಹೋಗಬೇಕೆಂದು ದೇವರು ಮೋಶೆಗೆ ಹೇಳಿದಾಗ ಆತನು ಯಾವ ನೆಪವನ್ನು ಕೊಟ್ಟನು?

### ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ

1. 'ನಾನೇ ಯೆಹೋವನು' ಎಂಬ ಹೇಳಿಕೆಯನ್ನು ವಿಮೋ. 6:2–8 ರಲ್ಲಿ ದೇವರು ನಾಲ್ಕು ಬಾರಿ ಬಳಸುತ್ತಾನೆ. ಅದು ಹೇಗೆ ಬಳಸಲಾಗಿದೆ ಎಂಬುದನ್ನು ಅಧ್ಯಯನ ಮಾಡಿರಿ. ನಿಮ್ಮ ಸಮಾರೋಪಗಳನ್ನು ಬರೆಯಿರಿ.
2. ದೇವರು ಅಬ್ರಹಾಮ ಮತ್ತು ಆತನ ಸಂತತಿಯೊಂದಿಗೆ ಮಾಡಿಕೊಂಡ ತನ್ನ ಒಡಂಬಡಿಕೆಯನ್ನು 'ನೆನಪಿಗೆ ತಂದುಕೊಂಡನು' ಎಂದು ಮೋಶೆಗೆ ಹೇಳುತ್ತಾನೆ. ನಿರ್ಗಮನ ಕಥೆಯ ಹಿನ್ನಲೆಯಲ್ಲಿ ಇದರ ಅರ್ಥವೇನಾಗಿತ್ತು?
3. ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಇಂದು ಈ ಅಧ್ಯಯನದಿಂದ ಏನನ್ನು ಕಲಿಯಬಹುದು?


**ವಿಮೋಚನಕಾಂಡ ಅಧ್ಯಯನ 7: ಆರೋನ, ಮೋಶೆ ಮತ್ತು ಮೊದಲ ಉಪದ್ರವ**

**ಅ. ಪರಿಚಯ**

ಮೋಶೆಯು ದೇವರ ಸಂದೇಶವನ್ನು ಫರೋಹನಿಗೆ ತಿಳಿಸಲು ಈಗಲೂ ಹಿಂಜರಿಯುತ್ತಿದ್ದನು. ಆದರೆ ದೇವರು ಮೋಶೆ ಮತ್ತು ಆರೋನರಿಗೆ ತನ್ನ ಯೋಜನೆಯನ್ನು ಮತ್ತೊಮ್ಮೆ ವಿವರಿಸಿದನು ಮತ್ತು ಅಂತಿಮವಾಗಿ ಅವರಿಗೆ ಮನವರಿಕೆಯಾಯಿತು: *ಮೋಶೆಯೂ ಆರೋನನೂ ಯೆಹೋವನು ತಮಗೆ ಆಜ್ಞಾಪಿಸಿದ ಪ್ರಕಾರವೇ ಮಾಡಿದರು. ಅವರು ಫರೋಹನ ಮುಂದೆ ಮಾತನಾಡುವಾಗ ಮೋಶೆಯು ಎಂಭತ್ತು ವರ್ಷದವನಾಗಿದ್ದನು, ಆರೋನನು ಎಂಭತ್ತುಮೂರು ವರ್ಷದವನಾಗಿದ್ದನು* (ವಿಮೋ. 7:6–7). ಈಜಿಪ್ಟಿನ ಮೇಲೆ ಬಂದ ಮೊದಲ ಉಪದ್ರವವು ದೇಶದ ಎಲ್ಲಾ ನೀರನ್ನು ರಕ್ತವಾಗಿ ಮಾರ್ಪಡಿಸಿತು. *ಆದರೆ ಈಜಿಪ್ಟಿನ ಮಂತ್ರಗಾರರು ತಮ್ಮ ಮಾಟಗಳಿಂದ ಹಾಗೆಯೇ ಮಾಡಿದರು* (ವಿಮೋ. 7:22).

**ಆ. ಓದಿರಿ**

ವಿಮೋ. 6:28–7:24



**ಇ. ಟಿಪ್ಪಣಿ**

ನಿನ್ನ ಸಹೋದರನಾದ ಆರೋನನು ನಿನ್ನ ಪ್ರವಾದಿಯಾಗಿರುವನು (7:1): ಇದರ ಅರ್ಥ ಆರೋನನು ಮೋಶೆಯ ಪರವಾಗಿ ಮಾತನಾಡುವನು ಎಂಬದಾಗಿದೆ. ಆತನು ಮೋಶೆಯ **'ಮುಖವಾಣಿ'**ಆಗಿರುವನು.

ದೊಡ್ಡ ನ್ಯಾಯತೀರ್ಪುಗಳಿಂದ (ವ. 4): ಇದೇ ಹೇಳಿಕೆಯನ್ನು 6:6 ರಲ್ಲಿ ಕಾಣಬಹುದು. ಅಲ್ಲಿರುವ ಟಿಪ್ಪಣಿಯನ್ನು ನೋಡಿರಿ.

ನಾನು ಈಜಿಪ್ಟಿನ ಮೇಲೆ ನನ್ನ ಕೈಯನ್ನಿಟ್ಟು (ವ. 5): ವಿಮೋ. 6:6 ರಲ್ಲಿರುವ **'ಚಾಚಿದ ಬಾಹುವಿನಿಂದಲೂ'** ಎಂಬುದನ್ನು ಹೋಲಿಸಿರಿ (ಆದಿ. 6:8 ರ ಟಿಪ್ಪಣಿಯನ್ನು ಓದಿರಿ)

ಸರ್ಪ (ವ. 9–10): ಅನೇಕ ಫರೋಹರುಗಳು ತಮ್ಮ ಟೋಪಿಯ ಮುಂದೆ ಕಬ್ಬಿಣದ ಒಂದು ಸರ್ಪವನ್ನು (ನಾಗರಹಾವನ್ನು) ಧರಿಸುತ್ತಿದ್ದರು. ಇದು ಅಧಿಕಾರದ ಒಂದು ಸಂಕೇತವಾಗಿದೆ. ಹಿಬ್ರೂ ಪಠ್ಯವು ಸರ್ಪಕ್ಕೆ ಇನ್ನೊಂದು ಪದವನ್ನು ಇಲ್ಲಿ ಬಳಸುತ್ತದೆ.

ಜ್ಞಾನಿಗಳನ್ನೂ ಮಂತ್ರವಾದಿಗಳನ್ನೂ (ವ. 11): ಸಂಪ್ರದಾಯದ ಪ್ರಕಾರ ಮೋಶೆ ಮತ್ತು ಆರೋನರನ್ನು ಇಬ್ಬರು ವಿರೋಧಿಸಿದರು. ಅವರ ಹೆಸರು ಯನ್ನ ಮತ್ತು ಯಂಬ್ರ. ಪೌಲನು 2 ತಿಮೋ. 3:8 ರಲ್ಲಿ ಅವರ ಬಗ್ಗೆ ತಿಳಿಸುತ್ತಾನೆ.

[ನೈಲ್] ನದಿಯಲ್ಲಿರುವ (ವ. 18): ಈಜಿಪ್ಟ್ ದೇಶವು ತನ್ನ ಉಳಿವಿಗಾಗಿ ಸಂಪೂರ್ಣವಾಗಿ ಈ ದೊಡ್ಡ ನದಿಯ ಮೇಲೆ ಆತುಕೊಂಡಿತ್ತು. ಈಜಿಪ್ಟಿನವರು ಅದನ್ನು ಹಪಿ ದೇವರ ರೂಪದಲ್ಲಿಯೂ ಆರಾಧಿಸುತ್ತಿದ್ದರು. (ಚಿತ್ರದಲ್ಲಿ ತೋರಿಸಿರುವಂತೆ) ಅದು ಜೋತಾಡುವ ಸ್ಥನಗಳನ್ನು ಹೊಂದಿರುವ ಒಬ್ಬ ಪುರುಷನ ಚಿತ್ರಣವನ್ನು ಹೊಂದಿತ್ತು. ಹಾಗಾಗಿ ಈ ಮೊದಲ ಉಪದ್ರವವನ್ನು ಈಜಿಪ್ಟಿನ ಧರ್ಮದ ಮೇಲೆ ಆದ ಒಂದು ದಾಳಿ ಎಂಬುದಾಗಿ ಅರ್ಥವಿವರಿಸಬಹುದು. ಹಿಬ್ರೂ ಹಳೆ ಒಡಂಬಡಿಕೆಯು **'ನೈಲ್'** ಎಂಬ ಹೆಸರನ್ನು ಬಳಸುವುದೇ ಇಲ್ಲ ಬದಲಾಗಿ ಅದನ್ನು **'ನದಿ'** ಎಂದು ಕರೆಯುತ್ತಾರೆ.

**ಈ. ಪ್ರಶ್ನೆಗಳು**

1. ಮೋಶೆಯು ದೇವರ ಸಂದೇಶವನ್ನು ಫರೋಹನಿಗೆ ತಿಳಿಸಲು ಈಗಲೂ ಹಿಂಜರಿಯುತ್ತಿದ್ದನು. ಈ ಬಾರಿ ಆತನ ನೆಪವು ಏನಾಗಿತ್ತು? ಮತ್ತು ದೇವರು ಹೇಗೆ ಆತನನ್ನು ಉತ್ತೇಜಿಸಿದನು?
2. ಈ ವಾಕ್ಯಭಾಗದ ಪ್ರಾರಂಭದಲ್ಲಿ ದೇವರು ಇಸ್ರಾಯೇಲರನ್ನು ಹೇಗೆ ವರ್ಣಿಸುತ್ತಾನೆ?
3. ವಿಮೋ. 7:6–7 ರಲ್ಲಿ ಮೋಶೆ ಮತ್ತು ಆರೋನರ ಕುರಿತು ನಾವು ಏನನ್ನು ಕಲಿತುಕೊಳ್ಳುತ್ತೇವೆ? ಈ ಮಾಹಿತಿಯ ಮಹತ್ವವು ಏನಾಗಿರಬಹುದು?

4. ಫರೋಹನ ಮುಂದೆ ಮೋಶೆ ಮತ್ತು ಆರೋನರು ಮಾಡಿದ ಮೊದಲ ಸೂಚಕಕಾರ್ಯವನ್ನು ಈಜಿಪ್ಟಿನ ಜ್ಞಾನಿಗಳು ಮತ್ತು ಮಂತ್ರವಾದಿಗಳು ಹೇಗೆ ನಕಲು ಮಾಡಲು ಸಾಧ್ಯವಾಯಿತು? ಆರೋನನ ಸೂಚಕಕಾರ್ಯವು ಹೇಗೆ ಶ್ರೇಷ್ಠವಾದದ್ದಾಗಿತ್ತು?

5. ಫರೋಹನು ಮೊದಲ ಸೂಚಕಕಾರ್ಯಕ್ಕೆ ಹೇಗೆ ಪ್ರತಿಕ್ರಿಯಿಸಿದನು?

6. ಮೊದಲ ಉಪದ್ರವವನ್ನು ಈಜಿಪ್ಟಿನ ಧರ್ಮದ ಮೇಲೆ ಆದ ಒಂದು ದಾಳಿ ಎಂಬುದಾಗಿ ಹೇಗೆ ಅರ್ಥಮಾಡಿಕೊಳ್ಳಬಹುದು?

7. ಈಜಿಪ್ಟಿನ ಮಾಂತ್ರಿಕರು ರಕ್ತದ ಉಪದ್ರವಕ್ಕೆ ಹೇಗೆ ಪ್ರತಿಕ್ರಿಯಿಸಿದರು? ಫರೋಹನು ಹೇಗೆ ಪ್ರತಿಕ್ರಿಯಿಸಿದನು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ದೇವರೊಂದಿಗಿನ ನಿಮ್ಮ ಸಂಬಂಧದ ಆಧಾರದ ಮೇಲೆ ದೇವರ 'ಪರಾಕ್ರಮ ಕೃತ್ಯಗಳು' (6:6 ಮತ್ತು 7:3–4) ಎರಡು ಮುಖಗಳನ್ನು ಹೊಂದಿವೆ. ಹೇಗೆ ಎಂಬುದನ್ನು ವಿವರಿಸಿರಿ.

2. ವಿಮೋಚನಕಾಂಡದ ಮೊದಲ ಆರು ಅಧ್ಯಾಯಗಳಲ್ಲಿ ವಿವರಿಸಲಾಗಿರುವಂತೆ ಮೋಶೆಯ ಗುಣ ವ್ಯಕ್ತಿತ್ವದ ಒಂದು ಅಧ್ಯಯನವನ್ನು ಮಾಡಿರಿ. ಮೊದಲು 'ಕೆಟ್ಟ ಗುಣಗಳ' ಒಂದು ಪಟ್ಟಿಯನ್ನು ಮಾಡಿರಿ. ನಂತರ 'ಒಳ್ಳೆ ಗುಣಗಳ' ಒಂದು ಪಟ್ಟಿಯನ್ನು ಮಾಡಿರಿ. ಅಂತಿಮವಾಗಿ ಒಂದು ವಾಕ್ಯದಲ್ಲಿ ನಿಮ್ಮ ಸಮಾರೋಪಗಳನ್ನು ಸಾರಾಂಶಗೊಳಿಸಿರಿ.

## ವಿಮೋಚನಕಾಂಡ ಅಧ್ಯಯನ 8: ಕಪ್ಪೆಗಳ, ಹೇನುಗಳ ಮತ್ತು ನೊಣಗಳ ಬಾಧೆಗಳು

### ಅ. ಪರಿಚಯ

ಎರಡನೆಯ ಬಾಧೆಯು ಇಡೀ ದೇಶವನ್ನು ಕಪ್ಪೆಗಳಿಂದ ತುಂಬಿಸಿತು. *ಆದರೆ ಮಂತ್ರಗಾರರು ತಮ್ಮ ಮಾಟಗಳಿಂದ ಹಾಗೆಯೇ ಮಾಡಿ ಕಪ್ಪೆಗಳನ್ನು ಈಜಿಪ್ಟ್ ದೇಶದ ಮೇಲೆ ಬರಮಾಡಿದರು* (ವಿಮೋ. 8:7). ಈ ಬಾರಿ ಪ್ರಾರಂಭದಲ್ಲಿ ಫರೋಹನು ಇಸ್ರಾಯೇಲರನ್ನು ಹೋಗಗೊಡಿಸಲು ತೀರ್ಮಾನಿಸಿಕೊಂಡನು, ಆದರೆ ಆತನು ನಂತರ ತನ್ನ ಮನಸ್ಸನ್ನು ಬದಲಾಯಿಸಿದನು. ಮೂರನೆಯ ಬಾಧೆಯು – ಅಂದರೆ ಹೇನುಗಳು – ದೇಶವನ್ನು ಹೊಡೆಯಿತು, ಮಾಂತ್ರಿಕರು ಇದನ್ನು ನಕಲು ಮಾಡಲಾಗಲಿಲ್ಲ. *ಆಗ ಮಂತ್ರಗಾರರು ಫರೋಹನಿಗೆ – 'ಇದು ದೇವರ ಬೆರಳಾಗಿದೆ' ಅಂದರು. ಆದರೆ ಯೆಹೋವನು ಹೇಳಿದಂತೆ ಫರೋಹನ ಹೃದಯವು ಕಠಿಣವಾಯಿತು; ಆದದರಿಂದ ಅವನು ಅವರ ಮಾತನ್ನು ಕೇಳಲಿಲ್ಲ* (ವಿಮೋ. 8:19). ನಾಲ್ಕನೆಯ ಉಪದ್ರವವು ನೊಣಗಳ ಹಿಂಡನ್ನು ಒಳಗೊಂಡಿದೆ.



### ಆ. ಓದಿರಿ

ವಿಮೋ. 8:1–32

### ಇ. ಟಿಪ್ಪಣಿ

*ಕಪ್ಪೆಗಳಿಂದ* (ವ. 2): ಈಜಿಪ್ಟಿನವರು ಕಪ್ಪೆಯನ್ನು ಹೆಕೆಟ್ ಎಂಬ ದೇವತೆಯ (ಚಿತ್ರವನ್ನು ನೋಡಿರಿ) ರೂಪದಲ್ಲಿ ಆರಾಧಿಸುತ್ತಿದ್ದರು.

*ಹೇನುಗಳಾಗುವವು* (ವ. 16): ಈ ವಾಕ್ಯಭಾಗದಲ್ಲಿ ಈ ಪದವು ಐದು ಬಾರಿ ಕಂಡುಬರುತ್ತದೆ. ಆದರೆ ಇದು ಹಳೆ ಒಡಂಬಡಿಕೆಯಲ್ಲಿ ಕೇವಲ ಇಲ್ಲಿ (ಮತ್ತು ಸಮಾಂತರದ ವಾಕ್ಯಭಾಗವಾದ ಕೀರ್ತನೆ 105:31 ರಲ್ಲಿ) ಮಾತ್ರ ಕಂಡುಬರುತ್ತದೆ, ಹಾಗಾಗಿ ಸತ್ಯವೇದ ಶಾಸ್ತ್ರಜ್ಞರುಗಳು ಇದು ಯಾವುದರ ಕುರಿತು ಉಲ್ಲೇಖಿಸುತ್ತದೆ ಎಂಬುದರ ಕುರಿತು ಖಚಿತವಾಗಿ ತಿಳಿದುಕೊಂಡಿಲ್ಲ. ಇದಕ್ಕೆ ಬಹುತೇಕ ಆಧುನಿಕ ಅನುವಾದಗಳಲ್ಲಿ '??' ಅಥವಾ 'ಹೇನುಗಳು' ಎಂಬ ಪದ ಬಳಸಲಾಗಿದೆ.

*ದೇವರ ಬೆರಳಾಗಿದೆ* (ವ. 19): ಈ ರೂಪಕಾಲಂಕಾರವು ದೇವರ ಅದ್ಭುತ ಶಕ್ತಿಗಳು ಕಾರ್ಯನಿರತವಾಗಿವೆ ಎಂಬುದನ್ನು ವ್ಯಕ್ತಪಡಿಸುತ್ತದೆ. ಯೇಸು ದೇವರ ಬೆರಳುಗಳಿಂದ ದೆವ್ವಗಳನ್ನು ಹೊರಗೆ ಓಡಿಸಿದನು (ಲೂಕ. 11:20).

### ಈ. ಪ್ರಶ್ನೆಗಳು

1. ಮೊದಲ ಎರಡು ಬಾಧೆಗಳ ನಡುವೆ ಎಷ್ಟು ಕಾಲ ಕಳೆದುಹೋಗಿತ್ತು?
2. ಫರೋಹನು ಎರಡನೆಯ ಬಾಧೆಗೆ ವ್ಯತ್ಯಾಸವಾಗಿ ಪ್ರತಿಕ್ರಿಯಿಸಿದನು. ಹೇಗೆ?
3. ಎರಡನೆಯ ಬಾಧೆಯ (ಕಪ್ಪೆಗಳು) ಪರಿಣಾಮವಾಗಿ ಮೋಶೆ ಮತ್ತು ಫರೋಹರು ಯಾವ ಒಪ್ಪಂದಕ್ಕೆ ತಲುಪಿದರು?
4. ಫರೋಹನು ತನ್ನ ಮನಸ್ಸನ್ನು ಯಾಕೆ ಬದಲಾಯಿಸಿದನು?
5. ಈಜಿಪ್ಟಿನ ಮಾಂತ್ರಿಕರು ಮೂರನೆಯ ಬಾಧೆಗೆ (ಹೇನುಗಳು) ಹೇಗೆ ಪ್ರತಿಕ್ರಿಯಿಸಿದರು?
6. ನಾಲ್ಕನೆಯ ಬಾಧೆಯ (ನೊಣಗಳು) ಜೊತೆಗೆ ದೇವರು ಯಾವ ವಿಶೇಷ ಸೂಚಕಕಾರ್ಯವನ್ನು ನಡೆಸಿದನು?
7. ಇಸ್ರಾಯೇಲರು ದೇವರಿಗೆ ಈಜಿಪ್ಟಿನಲ್ಲಿ ಬಲಿಗಳನ್ನು ಅರ್ಪಿಸಲಿ ಎಂಬ ಫರೋಹನ ಕೊಡುಗೆಯನ್ನು ಮೋಶೆಯು ಯಾಕೆ ಅಂಗೀಕರಿಸಲಿಲ್ಲ? ಹಾಗಾದರೆ ಅವರು ಯಾವ ಅಂತಿಮ ಒಪ್ಪಂದವನ್ನು ತಲುಪಿದರು?
8. ಫರೋಹನ ನಡವಳಿಕೆಯ ಕುರಿತು ಮೋಶೆಯ 'ಮೌಲ್ಯೀಕರಣ' ಏನಾಗಿತ್ತು? ಆತನು ಸರಿಯಾಗಿದ್ದನೋ?
9. ನಾಲ್ಕನೆಯ ಬಾಧೆಯು (ನೊಣಗಳು) ದೇಶದಿಂದ ಹೇಗೆ ತೆಗೆದುಹಾಕಲ್ಪಟ್ಟಿತು?

### ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಎರಡನೆಯ ಬಾಧೆಯು (ಕಪ್ಪೆಗಳು) ಈಜಿಪ್ಟಿನ ಧರ್ಮದ ಮೇಲೆ ಉಂಟಾದ ಒಂದು ದಾಳಿಯೆಂದು ಯಾವ ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು?
2. ನಾಲ್ಕನೆಯ ಬಾಧೆಯ (ನೊಣಗಳು) ಜೊತೆಗಿನ ದೇವರ 'ವಿಶೇಷ ಸೂಚಕಕಾರ್ಯದ' ಮಹತ್ವವೇನು?

3. ನಾಲ್ಕನೆಯ ಬಾಧೆಯ (ನೊಣಗಳು) ಕಥೆಯಲ್ಲಿ ಇನ್ನೊಂದು ಹೆಚ್ಚಿನ ಅಂಶವಿದೆ. ಅದು ಯಾವುದು?
4. ಇದುವರೆಗೂ ಫರೋಹನ ನಡವಳಿಕೆಯ ಕುರಿತು ನಿಮ್ಮ 'ಮೌಲ್ಯೀಕರಣ' ಏನಾಗಿದೆ?

**ವಿಮೋಚನಕಾಂಡ ಅಧ್ಯಯನ 9: ಹೆಚ್ಚಿನ ಬಾಧೆಗಳು: ದನಗಳಿಗೆ ಬಾಧೆ, ಹುಣ್ಣುಗಳಿಂದ ಮತ್ತು ಆಲಿಕಲ್ಲಿನ ಮಳೆಯಿಂದ ಬಾಧೆಗಳು**

**ಅ. ಪರಿಚಯ**

ಈಜಿಪ್ಟಿನ ಮೇಲೆ ಬಾಧೆಗಳು ಮುಂದುವರೆದವು. ಐದನೆಯ ಬಾಧೆಯು ಪಶುಗಳಿಗೆ ಸಾವನ್ನು ತಂದವು, ಆದರೆ ಇಸ್ರಾಯೇಲರ ಪಶುಗಳಿಗೆ ಯಾವ ಕೇಡನ್ನು ಉಂಟುಮಾಡಲಿಲ್ಲ. ನಂತರ ಇಡೀ ದೇಶದಾದ್ಯಂತ ಹರಡಿದಂತೆ ತೋರುವ ಹುಣ್ಣುಗಳ ಬಾಧೆಯು ಬಂದಿತು. ಏಳನೆಯ ಬಾಧೆಯು ಆಲಿಕಲ್ಲಿನ ಮಳೆಯನ್ನು ತಂದಿತು. *ಇಸ್ರಾಯೇಲರು ಇದ್ದ ಗೋಷೆನ್ ಸೀಮೆಯಲ್ಲಿ ಆನೆಕಲ್ಲಿನ ಮಳೆಯು ಇರಲಿಲ್ಲ*(ವಿಮೋ. 9:26).

**ಆ. ಓದಿರಿ**


ವಿಮೋ. 9:1–35

**ಇ. ಟಿಪ್ಪಣಿ**



*ಯೆಹೋವನ ಕೈ* (9:3): ಈ ರೂಪಕಾಲಂಕಾರವು ‘ದೇವರ ಬೆರಳು’ ಎಂಬದರ ಅರ್ಥಕ್ಕೆ ಸಮಾನವಾಗಿದೆ (ನೋಡಿರಿ 8:19).

*ಹೊಲದಲ್ಲಿರುವ ನಿನ್ನ ಪಶುಗಳ ಮೇಲೆ … ಕುದುರೆ ಕತ್ತೆ ಒಂಟೆ ಎತ್ತು ಕುರಿ ಇವುಗಳ ಮೇಲೆ* (9:3): ಈಜಿಪ್ಟಿಯನ್ನರು ಪ್ರಾಣಿಗಳಂತೆ ಅಥವಾ ಪ್ರಾಣಿಗಳ ತಲೆಯನ್ನು ಹೊಂದಿದಂತೆ ಬಿಂಬಿಸಲಾಗುತ್ತಿದ್ದ ಅನೇಕ ದೇವರುಗಳನ್ನು ಆರಾಧಿಸುತ್ತಿದ್ದರು, ಉದಾಹರಣೆಗೆ ಬಸವ–ದೈವನಾದ ಏಪಿಸ್ (ವಿಮೋ. 32:4), ಆಕಳು–ದೇವತೆಯಾದ ಹಾತೋರ್ (ಎಡಗಡೆಯಲ್ಲಿರುವ ಚಿತ್ರವನ್ನು ಗಮನಿಸಿರಿ), ಮತ್ತು ಟಗರು–ದೇವರಾದ ಖ್ನುಮ್ (ಮೇಲಿರುವ ಚಿತ್ರ).



*ಹುಣ್ಣುಗಳು* (ವ. 9): ಹಿಬ್ರೂ ಪದದ ಅರ್ಥವು ಹುಣ್ಣು ಅಥವಾ ಬೊಕ್ಕೆ ಎಂಬುದಾಗಿದೆ.

*ಯೆಹೋವನು ಫರೋಹನ ಹೃದಯವನ್ನು ಕಠಿಣಮಾಡಿದನು* (9:12): ಆರನೆಯ ಬಾಧೆಯಲ್ಲಿ (ಹುಣ್ಣುಗಳು) ಫರೋಹನ ಹೃದಯ ಕಠಿಣಪಡಿಸುವಿಕೆಯನ್ನು ದೇವರ ಮೇಲೆ ಹೊರಿಸಲಾಗಿದೆ; ಇದು ಈಗಾಗಲೇ 4:21 ಮತ್ತು 7:3 ರಲ್ಲಿ ಮುಂತಿಳಿಸಲಾಗಿತ್ತು. ಇದುವರೆಗೂ ಫರೋಹನು ತನ್ನ ಹೃದಯವನ್ನು ತಾನೇ ಕಠಿಣಪಡಿಸಿಕೊಂಡನು ಎಂಬುದಾಗಿ ನಾವು ಕಂಡಿದ್ದೇವೆ.

9:16: ದೇವರ ಸಾರ್ವಭೌಮತೆಯನ್ನು ಸೂಚಿಸುತ್ತಾ ಪೌಲನು ಈ ವಚನವನ್ನು ರೋಮಾ 9:17 ರಲ್ಲಿ ಉಲ್ಲೇಖಿಸುತ್ತಾನೆ.

9:31–32 ತೋರಿಸುವುದೇನೆಂದರೆ, ಜನವರಿ ಅಥವಾ ಫೆಬ್ರವರಿ ತಿಂಗಳಲ್ಲಿ ಸೆಣಬು ಮತ್ತು ಜವೆಗೋಧಿಯು ಮೊಗ್ಗನ್ನು ಬಿಟ್ಟಾಗ ಮತ್ತು ಗೋಧಿಯೂ ಕಡಲೆಯೂ ಇನ್ನೂ ಬೆಳೆಯದಿದ್ದಾಗ ಆಲಿಕಲ್ಲಿನ ಮಳೆಯು ಸುರಿಯಿತು.

*ನನ್ನ ಕೈಗಳನ್ನು ಚಾಚಿ* (ವ. 29): ಫಲವತ್ತಾದ ಅರ್ಧಚಂದ್ರಾಕೃತಿಯಲ್ಲಿರುವ ಕೆಲವು ಪುರಾತನ ವಸ್ತುಶಾಸ್ತ್ರದ ಸ್ಥಳಗಳಲ್ಲಿ ಪುರುಷರು ತಮ್ಮ ಕೈಗಳನ್ನು ಮೇಲೆತ್ತಿ ಚಾಚಿ ಪ್ರಾರ್ಥಿಸುತ್ತಿರುವ ಮೂರ್ತಿಗಳು ಸಿಕ್ಕಿವೆ.

*ಕಡಲೆ* (9:32): ಹಿಬ್ರೂ ಪದವು ಇಲ್ಲಿ ಒಂದು ಬಗೆಯ ಗೋಧಿಯನ್ನು ಉಲ್ಲೇಖಿಸುತ್ತಿರುವುದರಿಂದ ಕಡಲೆ ಎಂಬ ಅನುವಾದವು ತಪ್ಪಾದದ್ದು. ಪ್ರಾಚೀನ ಈಜಿಪ್ಟ್ ಸಮಾಧಿಗಳಲ್ಲಿ ಈ ಬಗೆಯ ಗೋಧಿ ಕಾಳುಗಳು ಸಿಕ್ಕಿವೆ. ಅದು ಗೋಧಿಯಷ್ಟು ಚೆನ್ನಾಗಿಲ್ಲದಿದ್ದರೂ ಒಣಗಿದ ಪ್ರದೇಶದಲ್ಲಿ ಚೆನ್ನಾಗಿ ಬೆಳೆಯುತ್ತದೆ.

**ಈ. ಪ್ರಶ್ನೆಗಳು**

1. 9:5 ರ ಮಹತ್ವವನ್ನು ವಿವರಿಸಿರಿ.
2. ಐದನೇ ಬಾಧೆಯ (ದನಗಳಿಗೆ ಬಾಧೆ) ಪರಿಣಾಮಗಳನ್ನು ಪರಿಶೋಧಿಸಲು ಫರೋಹನು ಆಳುಗಳನ್ನು ಕಳುಹಿಸಿದನು. ಅವರ ಪರಿಶೋಧನೆಯ ಪರಿಣಾಮವೇನಾಗಿತ್ತು?

3. ಹುಣ್ಣುಗಳು ಎಲ್ಲಿಂದ ಬಂದವು?

4. 9:16 ರಲ್ಲಿ ಫರೋಹನಿಗೆ ಬಂದ ದೇವರ ಸಂದೇಶವನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

5. ಆಲಿಕಲ್ಲಿನ ಮಳೆಯ ಪರಿಣಾಮವೇನಾಗಿತ್ತು?

6. ಆಲಿಕಲ್ಲಿನ ಮಳೆಯು ಈಜಿಪ್ಟನ್ನು ಹೊಡೆದಾಗ, ಫರೋಹನು ಮೊಟ್ಟಮೊದಲ ಬಾರಿಗೆ ತನ್ನ ಆತ್ಮಿಕ ಸ್ಥಿತಿಯ ಕುರಿತು ಅರಿವನ್ನು ಹೊಂದಿಕೊಂಡನು. ಹೇಗೆ ಎಂಬುದನ್ನು ವಿವರಿಸಿರಿ. ಈ ಹೊಸ ಅರಿವಿಕೆಯ ಪರಿಣಾಮವೇನಾಗಿತ್ತು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಐದನೇ ಬಾಧೆಯು (ದನಗಳಿಗೆ ಬಾಧೆ) ಈಜಿಪ್ಟಿನ ಧರ್ಮದ ಮೇಲೆ ಉಂಟಾದ ಒಂದು ದಾಳಿಯೆಂದು ಯಾವ ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು?

2. ನೀವು 9:12 ನ್ನು ಹೇಗೆ ಅರ್ಥವಿವರಿಸುವಿರಿ?

**ವಿಮೋಚನಕಾಂಡ ಅಧ್ಯಯನ 10: ಮಿಡಿತೆಗಳ ಮತ್ತು ಕಾರ್ಗತ್ತಲೆಯ ಬಾಧೆಗಳು**


**ಅ. ಪರಿಚಯ**

ಮುಂದಿನ ಎರಡು ಬಾಧೆಗಳು (ಎಂಟನೆಯ ಮತ್ತು ಒಂಭತ್ತನೆಯ, ಅಂದರೆ ಮಿಡಿತೆಗಳ ಮತ್ತು ಕಾರ್ಗತ್ತಲೆಯ) ಫರೋಹನಿಗೆ ಭಯ ಹುಟ್ಟಿಸಿದವು. ಮತ್ತೊಮ್ಮೆ ತಾನು ಪಾಪ ಮಾಡಿದನೆಂದು ಆತನು ಅರಿತುಕೊಂಡನು. ಆದರೆ ಬಾಧೆಯು ತಗ್ಗಿದ ಕೂಡಲೇ ಆತನು ತನ್ನ ಮನಸ್ಸನ್ನು ಬದಲಾಯಿಸಿಕೊಂಡನು. *ಆದರೆ ಯೆಹೋವನು ಫರೋಹನ ಹೃದಯವನ್ನು ಕಠಿಣಮಾಡಿದ್ದರಿಂದ ಅವನು ಇಸ್ರಾಯೇಲರನ್ನು ಕಳುಹಿಸದೆ ಹೋದನು* (ವಿಮೋ. 10:20). ಅಂತಿಮವಾಗಿ ಫರೋಹನು ಮೋಶೆಗೆ ಇನ್ನೊಮ್ಮೆ ನಿನ್ನ ಮುಖ ತೋರಿಸದಂತೆ ಹೊರಟುಹೋಗು ಎಂದು ಹೇಳಿದನು.

**ಆ. ಓದಿರಿ**

ವಿಮೋ. 10:1–29

**ಇ. ಟಿಪ್ಪಣಿ**



*ನಿನ್ನ ಮಕ್ಕಳಿಗೂ ನಿನ್ನ ಮಕ್ಕಳ ಮಕ್ಕಳಿಗೂ ... ತಿಳಿಸಬೇಕು* (10:2): ಇದು ಇಸ್ರಾಯೇಲರ ಧಾರ್ಮಿಕ ಜೀವನದ ಒಂದು ಅವಿಭಾಜ್ಯ ಅಂಗವಾಯಿತು, ಅದೇನೆಂದರೆ ಪ್ರತಿಯೊಂದು ತಲೆಮಾರಿನ ಜನರು ತಮ್ಮ ಮುಂದಿನ ತಲೆಮಾರಿಗೆ ತಮ್ಮ ಪೂರ್ವಜರನ್ನು ಯೆಹೋವನು ಈಜಿಪ್ಟಿನ ಬಂಧನದಿಂದ ಅದ್ಭುತಕರವಾಗಿ ವಿಮೋಚಿಸಿದ್ದರ ಕುರಿತು ನೆನಪಿಸಬೇಕಾಗಿತ್ತು (ಉದಾಹರಣೆಗೆ ನೋಡಿರಿ ಧರ್ಮೋ. 4:9; ಕೀರ್ತನೆ. 77:11–20; 78:4–6,43–53; 105:26–38; 106:7–12; 114:1–3;135:8–9; 136:10–15).

*ಮಿಡಿತೆಗಳನ್ನು* (10:4): ವಲಸೆಹೋಗುವ ಮಿಡಿತೆಗಳ ಹಿಂಡು ಬಂದು ತಕ್ಷಣವಾಗಿ ಎಲ್ಲಾ ಸಸ್ಯಗಳನ್ನು ಹಾಳು ಮಾಡಬಹುದಾಗಿತ್ತು. ಪ್ರಾಚೀನ ಕಾಲದಲ್ಲಿ 'ಮಿಡಿತೆಗಳ' ಕುರಿತು ಜನರು ಎಷ್ಟರ ಮಟ್ಟಿಗೆ ಭಯಪಡುತ್ತಿದ್ದರೆಂದರೆ ಅವುಗಳನ್ನು 'ನ್ಯಾಯತೀರ್ಪು' ಎಂಬ ಪದಕ್ಕೆ ರೂಪಕಾಲಂಕಾರವಾಗಿ ಬಳಸುತ್ತಿದ್ದರು.

*ಕೆಂಪು ಸಮುದ್ರದಲ್ಲಿ* (10:19): ಇದರ ಹಿಬ್ರೂ ಹೆಸರು *ಯಾಮ್ ಸುಫ್* ಎಂಬುದಾಗಿದೆ, ಅಂದರೆ 'ಆಪುಗಳ ಸಮುದ್ರ' ಎಂದರ್ಥ.

*ಕತ್ತಲೆ* (10:21): ಈಜಿಪ್ಟಿಯನ್ನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವಂತಹ ಇನ್ನೊಂದು ಸಂಗತಿಯು ಕತ್ತಲೆಯಾಗಿತ್ತು, ಯಾಕೆಂದರೆ ಅವರು ಸೂರ್ಯನನ್ನು 'ರಾ' ಎಂಬ ರೂಪದಲ್ಲಿ ಆರಾಧಿಸುತ್ತಿದ್ದರು, 'ರಾ' ಎಂಬುದು ಅವರ ದೇವರುಗಳಲ್ಲಿ ಒಂದು ಮುಖ್ಯವಾದ ದೇವರಾಗಿತ್ತು ('ರಾ' ಸೂರ್ಯನ ಸುತ್ತಲೂ ಸುತ್ತಿರುವ ಒಂದು ನಾಗರಹಾವನ್ನು ತನ್ನ ತಲೆಯ ಮೇಲೆ ಹೊತ್ತಿರುವ ಚಿತ್ರವನ್ನು ನೋಡಿರಿ).

**ಈ. ಪ್ರಶ್ನೆಗಳು**

1. ವಿಮೋ. 10:3 ರಲ್ಲಿ ಫರೋಹನಿಗೆ ಬಂದ ದೇವರ ಸಂದೇಶವು (*'ನನ್ನ ಸನ್ನಿಧಿಯಲ್ಲಿ ನೀನು ತಲೆ ತಗ್ಗಿಸಿಕೊಳ್ಳುವುದನ್ನು ಎಷ್ಟು ಕಾಲ ನಿರಾಕರಿಸುವೆ?'*) ಬಹುಶಃ ದೇವರು ಈಜಿಪ್ಟಿನ ಮೇಲೆ ಯಾಕೆ ಬಾಧೆಗಳನ್ನು ಕಳುಹಿಸಿದನು ಎಂಬುದಕ್ಕೆ ಮುಖ್ಯ ಕಾರಣವನ್ನು ವಿವರಿಸುತ್ತದೆ. ಈ ಹೇಳಿಕೆಯನ್ನು ವಿವರಿಸಿರಿ.
2. ಮಿಡಿತೆಗಳ ಬಾಧೆಯ ಪರಿಣಾಮವೇನಾಗಿತ್ತು?
3. ಮೋಶೆಯು ಎಂಟನೆಯ ಬಾಧೆಯ ಪ್ರಕಟನೆಯನ್ನು ಮಾಡಿದಾಗ ಈಜಿಪ್ಟಿನ ಅಧಿಕಾರಿಗಳಿಗೆ ಇನ್ನೂ ಸಹಿಸಿಕೊಳ್ಳಲಾಗಲಿಲ್ಲ. ಅವರು ಫರೋಹನಿಗೆ ಯಾವ ಸಲಹೆಯನ್ನು ನೀಡಿದರು? ಫರೋಹನು ಯಾವ ತೀರ್ಮಾನ ತೆಗೆದುಕೊಂಡನು?
4. ಒಂಭತ್ತನೆಯ ಬಾಧೆಯು (ಕಾರ್ಗತ್ತಲೆ) ಈಜಿಪ್ಟಿನ ಧರ್ಮದ ಮೇಲೆ ಉಂಟಾದ ಒಂದು ದಾಳಿಯೆಂದು ಯಾವ ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು?
5. ಒಂಭತ್ತನೆಯ ಬಾಧೆಯು (ಕಾರ್ಗತ್ತಲೆ) ಹೊಡೆದಾಗ, ಫರೋಹನು (ಸ್ತ್ರೀಯರು ಮತ್ತು ಮಕ್ಕಳನ್ನು ಒಳಗೊಂಡು) ಎಲ್ಲಾ ಇಸ್ರಾಯೇಲರನ್ನು ಹೋಗಗೊಡಿಸಿದನು – ಆದರೆ ಒಂದು ಷರತ್ತಿನ ಮೇಲೆ. ಆ ಷರತ್ತು ಏನಾಗಿತ್ತು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ವ. 7 ಮತ್ತು ವ. 10 ರಲ್ಲಿರುವ ಹಾಸ್ಯವನ್ನು ವಿವರಿಸಿರಿ.

2. ಇಂದು ದಕ್ಷಿಣ ಭಾರತದ ಕ್ರೈಸ್ತ ವಿಶ್ವಾಸಿಗಳಾದ ನಾವು ಫರೋಹನ ತಗ್ಗಿಸುವಿಕೆಯ ಕೊರತೆಯಿಂದ ಏನನ್ನು ಕಲಿತುಕೊಳ್ಳಬಹುದು?

3. ಅಧ್ಯಾಯ 7–10 ರಲ್ಲಿ ವಿವರಿಸಿರುವಂತೆ ಮೋಶೆಯ ವ್ಯಕ್ತಿತ್ವದ ಒಂದು ಅಧ್ಯಯನ ನಡೆಸಿರಿ. ಆತನ ಕುರಿತು ನೀವು ಈ ಹಿಂದೆ ನಡೆಸಿರುವ ಅಧ್ಯಯನಕ್ಕಿಂತ ಈಗ ಆತನು ಹೇಗೆ ಬದಲಾಗಿದ್ದಾನೆ ಎಂಬುದನ್ನು ವಿವರಿಸಿರಿ (ಅಧ್ಯಾಯ 2–6 ರ ಮೇಲೆ ಆಧಾರಿತವಾಗಿ, ನೋಡಿರಿ ***ವಿಮೋಚನಕಾಂಡ ಅಧ್ಯಯನ 7: ಆರೋನ, ಮೋಶೆ ಮತ್ತು ಮೊದಲ ಉಪದ್ರವ***).

4. ಈಜಿಪ್ಟಿನ ಮೇಲೆ ಬಂದ ಮೊದಲ ಒಂಭತ್ತು ಬಾಧೆಗಳ ದಾಖಲೆಗಳಲ್ಲಿ (ಯೆಹೋವನನ್ನು ಹೊರತುಪಡಿಸಿ) ಮೂರು ಮುಖ್ಯ 'ಪಾತ್ರಧಾರಿಗಳು' ಇದ್ದಾರೆ:

   1) ಮೋಶೆ ಮತ್ತು ಆರೋನ

   2) ಫರೋಹ ಮತ್ತು ಆತನ ಅಧಿಕಾರಿಗಳು

   3) ಇಸ್ರಾಯೇಲರು

   ಈ ಮೂರು 'ಪಾತ್ರಧಾರಿಗಳು' ಮೂರು ವ್ಯತ್ಯಾಸವಾದ ದೃಷ್ಟಿಕೋನದಲ್ಲಿ ಆ ಘಟನೆಗಳನ್ನು ಅನುಭವಿಸಿರಬಹುದು ಮತ್ತು ಅರ್ಥವಿವರಿಸಿರಬಹುದು. ಒಂದೊಂದಾಗಿ ಪ್ರತಿಯೊಂದು ದೃಷ್ಟಿಕೋನವನ್ನು ಆರಿಸಿಕೊಂಡು ಆಯಾ ದೃಷ್ಟಿಕೋನಕ್ಕೆ ತಕ್ಕಂತೆ ಕಥೆಯನ್ನು (ಅಥವಾ ಕಥೆಯ ಒಂದು ಭಾಗವನ್ನು) ಪುನಃ ತಿಳಿಸಿರಿ. ನೀವು ಆರಿಸಿಕೊಂಡಿರುವ ದೃಷ್ಟಿಕೋನವನ್ನು ಗಟ್ಟಿಯಾಗಿ ಹಿಡಿದುಕೊಳ್ಳಲು ಪ್ರಯತ್ನಿಸಿರಿ. ನೀವು ಪಾತ್ರಧಾರಿಯ ಸ್ಥಾನದಲ್ಲಿದ್ದು ಮಾತನಾಡುವುದಾದರೆ ಸುಲಭವೆನಿಸಬಹುದು, ಉದಾಹರಣೆಗೆ: 'ನಾನು ಫರೋಹನು. ಅನೇಕ ವರ್ಷಗಳ ಹಿಂದೆ ನನ್ನ ದೇಶವಾದ ಈಜಿಪ್ಟ್‌ನಲ್ಲಿ ಭಯಂಕರ ಸಂಗತಿಗಳು ನಡೆದವು. ಆ ದಿನಗಳಲ್ಲಿ ಒಂದು ವಿಚಿತ್ರವಾದ ಮತ್ತು ಅತೀ ದೊಡ್ಡ ಜನಸಂಖ್ಯೆಯುಳ್ಳ ವಿದೇಶಿಯರು – ಅವರನ್ನು ಇಸ್ರಾಯೇಲರು ಎಂದು ಕರೆಯುತ್ತಾರೆ – ನಮ್ಮ ದೇಶದಲ್ಲಿ ಬಿಟ್ಟಿ ಕೆಲಸ ಮಾಡುವ ಆಳುಗಳಾಗಿ ಜೀವಿಸುತ್ತಿದ್ದರು. ಅವರು ಸೋಮಾರಿಗಳಾಗಿದ್ದರು ಮತ್ತು ಹಠಮಾರಿಗಳಾಗಿದ್ದರು ...'

**ವಿಮೋಚನಕಾಂಡ ಅಧ್ಯಯನ 11: ಹತ್ತನೆಯ ಬಾಧೆ ಮತ್ತು ನಿರ್ಗಮನ**

**ಅ. ಪರಿಚಯ**

ಯೆಹೋವನು ಮೋಶೆಗೆ, ಇನ್ನು *ಒಂದೇ ಬಾಧೆಯನ್ನು ಫರೋಹನ ಮೇಲೆಯೂ ಈಜಿಪ್ಟಿನ ಮೇಲೆಯೂ ಬರಮಾಡುವೆನು. ಆಮೇಲೆ ಅವನು ನಿಮ್ಮನ್ನು ಇಲ್ಲಿಂದ ಕಳುಹಿಸುವನು; ಇಲ್ಲಿಂದ ನಿಮ್ಮನ್ನು ನಿಶ್ಚಯವಾಗಿ ಬಲವಂತದಿಂದ ಎಲ್ಲರನ್ನೂ ಕಳುಹಿಸಿಬಿಡುವನು* (ವಿಮೋ. 11:1). ಮೋಶೆಯು ಫರೋಹನಿಗೆ ಹತ್ತನೆಯ ಬಾಧೆಯ ಕುರಿತು (ಪ್ರತಿಯೊಬ್ಬ ಈಜಿಪ್ಟ್‌ನವನ ಜೇಷ್ಠಪುತ್ರನ ಸಾವು) ತಿಳಿಸಿದನು, ನಂತರ ಆತನು *ಕೋಪಾವೇಶವುಳ್ಳವನಾಗಿ* ಫರೋಹನ ಬಳಿಯಿಂದ ಹೊರಟು ಹೋದನು (ವಿಮೋ. 11:8). *ಯೆಹೋವನು ಈಜಿಪ್ಟ್ ದೇಶದಲ್ಲಿ ಈಜಿಪ್ಟಿನವರನ್ನು ಸಂಹರಿಸಿ ಇಸ್ರಾಯೇಲರ ಮನೆಗಳನ್ನು ಕಾಪಾಡುವ*ಸಮಯಕ್ಕಾಗಿ, ಅಂದರೆ ಪಸ್ಕಹಬ್ಬಕ್ಕಾಗಿ ಹೇಗೆ ಸಿದ್ಧಗೊಳ್ಳಬೇಕೆಂದು ದೇವರು ಮೋಶೆ ಮತ್ತು ಆರೋನರಿಗೆ ಆಜ್ಞಾಪಿಸಿದನು (ವಿಮೋ. 12:27). ಮಧ್ಯರಾತ್ರಿಯಲ್ಲಿ ... ಈಜಿಪ್ಟ್ ದೇಶದಲ್ಲಿದ್ದ ಎಲ್ಲಾ ಚೊಚ್ಚಲು ಮಕ್ಕಳನ್ನೂ ಪಶುಗಳಲ್ಲಿ ಚೊಚ್ಚಲಾದವುಗಳೆಲ್ಲವನ್ನೂ ಸಂಹರಿಸಿದನು (ವಿಮೋ. 12:29). ಅದೇ ರಾತ್ರಿಯಲ್ಲಿ ಫರೋಹನು ಮೋಶೆ ಮತ್ತು ಆರೋನರನ್ನು ಕರೆಸಿ ಅವರು ತಮ್ಮ ಎಲ್ಲಾ ಕುರಿದನಗಳ ಸಮೇತವಾಗಿ ಹೊರಟುಹೋಗುವಂತೆ ಹೇಳಿದನು. *ಆಗ ಇಸ್ರಾಯೇಲ್ಯರಲ್ಲಿ ಮಕ್ಕಳಲ್ಲದೆ ಗಂಡಸರು ಮಾತ್ರ ಆರು ಲಕ್ಷ ಕಾಲು ನಡಿಗೆಯಾಗಿ ರಮ್ಸೇಸನ್ನು ಬಿಟ್ಟು ಸುಕ್ಕೋತಿಗೆ ಪ್ರಯಾಣ ಮಾಡಿದರು* (ವಿಮೋ. 12:37). *ಇಸ್ರಾಯೇಲರು ಈಜಿಪ್ಟಿನಲ್ಲಿ ಪ್ರವಾಸವಾಗಿ ವಾಸಮಾಡಿದ್ದ ಕಾಲವು ನಾನೂರ ಮೂವತ್ತು ವರ್ಷಗಳಾಗಿದ್ದವು*(ವಿಮೋ. 12:40). ದೇವರು ನಂತರ ಮೋಶೆಗೆ ಪ್ರತಿಯೊಬ್ಬ ಜೇಷ್ಠಪುತ್ರನನ್ನು ಪ್ರತಿಷ್ಠೆಪಡಿಸುವಂತೆಯೂ ಮತ್ತು ಈಜಿಪ್ಟಿನಿಂದ ಸಿಕ್ಕ ಬಿಡುಗಡೆಯ ದಿನವನ್ನು ಆಚರಿಸುವಂತೆಯೂ ಆಜ್ಞಾಪಿಸಿದನು – ಇದನ್ನು ಮುಂದಿನ ದಿನಗಳಲ್ಲಿಯೂ ಮಾಡಬೇಕೆಂದು ಆಜ್ಞಾಪಿಸಿದನು.

**ಆ. ಓದಿರಿ**

ವಿಮೋ. 11:1–13:2

**ಇ. ಟಿಪ್ಪಣಿ**

*ಆಗ ಮೋಶೆಯು ಫರೋಹನಿಗೆ* (11:4): ಮೋಶೆಯು ಈಗಲೂ ಫರೋಹನೊಟ್ಟಿಗೆ ಮಾತನಾಡುತ್ತಿದ್ದನು (ನೋಡಿರಿ ವ. 8). ಹಾಗಾಗಿ ಈ ವಚನವು 10:29 ರಿಂದ ಕಥೆಯನ್ನು ಮುಂದುವರೆಸುತ್ತದೆ.

*ಈ ತಿಂಗಳು ನಿಮಗೆ ತಿಂಗಳುಗಳ ಆದಿಮಾಸವಾಗಿರಬೇಕು* (12:1): ಈ ಹೊಸ ಪಂಚಾಂಗಕ್ಕೆ ಕಾರಣವೇನೆಂದರೆ, ಅದು ಪಸ್ಕಹಬ್ಬ ಮತ್ತು ವಿಮೋಚನೆಯು ಇಸ್ರಾಯೇಲರ ಧಾರ್ಮಿಕ ಜೀವನದಲ್ಲಿ ಒಂದು ಹೊಸ ಸಂಗತಿಯನ್ನು ವ್ಯಕ್ತಪಡಿಸುವುದಕ್ಕಾಗಿದೆ. ಪ್ರಾಚೀನ ಇಸ್ರಾಯೇಲರು ಬಾಬಿಲೋನಿನ ಸೆರೆಯ ಅಂತ್ಯದ ನಂತರದವರೆಗೆ ಎರಡು ಪಂಚಾಂಗವನ್ನು ಬಳಸುತ್ತಿದ್ದರು: ಧಾರ್ಮಿಕ ಪಂಚಾಂಗವು ಮಾರ್ಚ್–ಏಪ್ರಿಲ್ ಸಮಯದಲ್ಲಿ ಪ್ರಾರಂಭವಾಗುತ್ತಿತ್ತು, ಈ ಸಮಯದಲ್ಲಿ ಪಸ್ಕಹಬ್ಬವು ಆಚರಿಸಲಾಗುತ್ತಿತ್ತು. ಕೃಷಿಕ ಪಂಚಾಂಗವು (ಅಥವಾ ನಾಗರಿಕ ಪಂಚಾಂಗವು) ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಪ್ರಾರಂಭವಾಗುತ್ತಿತ್ತು, ಈ ಸಮಯದಲ್ಲಿ ಗೋಧಿ ಮತ್ತು ಜವೆಗೋಧಿಯು ಬಿತ್ತಲಾಗುತ್ತಿತ್ತು. ಪ್ರಸ್ತುತ ಯೆಹೂದತ್ವವು ಕೇವಲ ಎರಡನೆಯ ಪಂಚಾಂಗವನ್ನು ಮಾತ್ರ ಬಳಸುತ್ತದೆ.

*ನಿರ್ದೋಷವಾಗಿರುವ* (12:5): ಪೇತ್ರನು ಈ ಹೇಳಿಕೆಯನ್ನು 1 ಪೇತ್ರ 1:19 ರಲ್ಲಿ ಯೇಸುವಿಗೆ ಅನ್ವಯಿಸುತ್ತಾನೆ *(ಪೂರ್ಣಾಂಗವಾದ ನಿಷ್ಕಳಂಕ ಕುರಿಮರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯ ರಕ್ತದಿಂದಲೇ).*

*ರಕ್ತದಲ್ಲಿ* (12:7): ಒಂದು ಜೀವದ ಬದಲಿಗೆ ಕೊಡಲ್ಪಡುವ ಒಂದು ಬಲಿಗೆ ರಕ್ತವು ಸಂಕೇತವಾಗಿದೆ.

*ಕಹಿಯಾದ ಪಲ್ಯಗಳ* (12:8): ಈಜಿಪ್ಟ್‌ನಲ್ಲಿ ಕಳೆದ ಕಹಿಯಾದ ಗುಲಾಮತನದ ವರ್ಷಗಳ ನೆನಪಿನಾರ್ಥವಾಗಿ ಇದು ತಿನ್ನಲ್ಪಡುತ್ತಿತ್ತು (ಹೋಲಿಸಿರಿ ವಿಮೋ. 1:14).

*ಹುಳಿಯಿಲ್ಲದ ರೊಟ್ಟಿಗಳನ್ನೂ* (12:8): ಇಸ್ರಾಯೇಲರು ಎಷ್ಟು ಅವಸರದಲ್ಲಿ ಈಜಿಪ್ಟ್ ಬಿಡಬೇಕಾಯಿತು ಎಂಬುದಕ್ಕೆ ಇದು ಸಂಕೇತವಾಗಿದೆ (ನೋಡಿರಿ ವ. 11, 39).

*ಪಸ್ಕವಾಗಿದೆ* (12:11): ಇದಕ್ಕೆ ಇಂಗ್ಲಿಷ್ ಭಾಷೆಯಲ್ಲಿ *'ಪಾಸ್ ಓವರ್'* ಎಂದು ಕರೆಯುತ್ತಾರೆ, ಅಂದರೆ ಯೆಹೋವನು (ತಮ್ಮ ಮನೆ ಬಾಗಿಲುಗಳ ಮೇಲಿನ ಮತ್ತು ಬದಿಗಿರುವ ನಿಲುವುಪಟ್ಟಿಗಳ ಮೇಲೆ ಯಜ್ಞದ ಕುರಿಯ ರಕ್ತವನ್ನು ಹಚ್ಚಿದ್ದ) ಇಸ್ರಾಯೇಲರ ಮನೆಗಳನ್ನು 'ಹಾದು ಹೋದನು' ಎಂಬುದಾಗಿದೆ, ಅದೇ ಸಮಯದಲ್ಲಿ ಈಜಿಪ್ಟ್‌ನ ಪ್ರತಿಯೊಂದು ಚೊಚ್ಚಲ ಗಂಡು ಕೊಲ್ಲಲ್ಪಟ್ಟಿತ್ತು (ನೋಡಿರಿ ವ. 13, 23 ಮತ್ತು 27).

*ರಕ್ತವು ನಿಮಗೆ ಗುರುತಾಗಿರುವುದು* (12:13): ಇದಕ್ಕಿಂತ ಮುಂಚೆ ಬಾಧೆಗಳು ಈಜಿಪ್ಟ್‌ನ ಮೇಲಿನ ದೇವರ ನ್ಯಾಯತೀರ್ಪಿನ ಸಂಕೇತವಾಗಿದ್ದವು. ಈಗ ನಿಲುವುಪಟ್ಟಿಗಳ ಮೇಲಿರುವ ರಕ್ತವು ಇಸ್ರಾಯೇಲಿನ ಕುರಿತು ದೇವರ ಕರುಣೆಯುಳ್ಳ ರಕ್ಷಣೆಯ ಸಂಕೇತವಾಗಿತ್ತು.

*ನಿಮ್ಮ ಸಂತತಿಗಳಲ್ಲಿ ಸದಾಕಾಲಕ್ಕೂ ಒಂದು ಶಾಸನವಾಗಿ ಈ ದಿನವನ್ನು ಆಚರಿಸಬೇಕು* (12:17): ಇಸ್ರಾಯೇಲರು ಈ ಆಜ್ಞೆಗೆ ವಿಧೇಯರಾದರು (ಉದಾಹರಣೆಗೆ ನೋಡಿರಿ ಅರಣ್ಯ 9:1–5; ಯೆಹೋ. 5:10; ಎಜ್ರ 6:19–22 ಮತ್ತು ಲೂಕ 2:41–42). ಯೇಸು

ಬಂಧಿತನಾಗಿ ಶುಭ ಶುಕ್ರವಾರದಂದು ಶಿಲುಬೆಗೆ ಏರಿಸಲ್ಪಡುವುದಕ್ಕಿಂತ ಮುಂಚೆ ತನ್ನ ಶಿಷ್ಯರೊಂದಿಗೆ ಈ ಹಬ್ಬವನ್ನು ಆಚರಿಸಿದನು. ಇಂದಿಗೂ ಸಹ ಪ್ರಪಂಚದಾದ್ಯಂತ ಯೆಹೂದ್ಯರು ಈ ಪಸ್ಕಹಬ್ಬವನ್ನು ಆಚರಿಸುತ್ತಾರೆ.

*ಇಸ್ರಾಯೇಲಿನೊಳಗಿಂದ ಹೊರಗೆ ಹಾಕಲ್ಪಡಬೇಕು* (12:15): ದೋಷಿಗೆ ಮರಣದಂಡನೆಯನ್ನು ವಿಧಿಸುವುದರ ಮೂಲಕ ಈ ಆಜ್ಞೆಯು ಕೈಕೊಳ್ಳಲಾಗುತ್ತಿತ್ತು (ನೋಡಿರಿ ವಿಮೋ. 31:14).

*ಹುಳಿಯಿಲ್ಲದ ರೊಟ್ಟಿಯ ಹಬ್ಬ* (12:17): ಈ ಹಬ್ಬವು ಪಸ್ಕಹಬ್ಬದ ಊಟದೊಂದಿಗೆ ಪ್ರಾರಂಭವಾಗಿ ಏಳು ದಿನಗಳವರೆಗೆ ಮುಂದುವರೆಯುತ್ತಿತ್ತು.

*ಕುರಿಗಳನ್ನು ಆಯ್ದುಕೊಂಡು ಪಸ್ಕಹಬ್ಬಕ್ಕಾಗಿ ಕೊಯ್ಯಿರಿ* (12:21): ಪೌಲನು ಈ ಹೇಳಿಕೆಯನ್ನು ಯೇಸುವಿನ ಕುರಿತಾಗಿ ಬಳಸುತ್ತಾನೆ. ಯೇಸು *ನಮ್ಮ ಪಸ್ಕದಕುರಿ*ಆಗಿದ್ದಾನೆ (1 ಕೊರಿ. 5:7).

*ಹಿಸ್ಸೋಪಿನ* (12:22): ಈ ಪದವು ಯಾವುದರ ಕುರಿತು ಉಲ್ಲೇಖಿಸುತ್ತದೆ ಎಂಬುದರ ಕುರಿತು ಸತ್ಯವೇದ ಶಾಸ್ತ್ರಜ್ಞರುಗಳು ಖಚಿತತೆಯನ್ನು ಹೊಂದಿಲ್ಲ.

*ಸಂಹಾರಕನು* (12:23): ಈ ಹೇಳಿಕೆಯು ದೇವರ ಚಿತ್ತವನ್ನು ನಡೆಸುವ ಯೆಹೋವನ ದೂತನನ್ನು ಉಲ್ಲೇಖಿಸುತ್ತದೆ.

*ನಿಮ್ಮ ಮಕ್ಕಳು ಈ ಆಚರಣೆಯ ಅರ್ಥವೇನು? ಎಂದು ಕೇಳಿದಾಗ* (12:26): ಇಂದಿಗೂ ಯೆಹೂದ್ಯರ ಮನೆಗಳಲ್ಲಿ ಪಸ್ಕಹಬ್ಬದ ಊಟವು ಆಚರಿಸಲ್ಪಡುವಾಗ ಮಕ್ಕಳಲ್ಲಿ ಯಾರಾದರೂ ಒಬ್ಬರು ಈ ಪ್ರಶ್ನೆಯನ್ನು ಕೇಳುವ ಸಂಪ್ರದಾಯವಿದೆ.

*ರಮ್ಸೇಸನ್ನು ಬಿಟ್ಟು ಸುಕ್ಕೋತಿಗೆ* (12:37): ***ವಿಮೋಚನೆ ಅಥವಾ ನಿರ್ಗಮನ*** ಎಂಬ ನಕ್ಷೆಯನ್ನು ನೋಡಿರಿ.

*ಒಂದು ಎಲುಬನ್ನಾದರೂ ಮುರಿಯಬಾರದು* (12:46): ಅರಣ್ಯಕಾಂಡ 9:12 ನ್ನು ಸಹ ನೋಡಿರಿ; ಹೋಲಿಸಿರಿ ಯೋಹಾನ 19:31–36, ಅಲ್ಲಿ ಕೀರ್ತನೆ 34:20 ಯೇಸುವಿನ ಕುರಿತಾಗಿ ಉಲ್ಲೇಖಿಸಲ್ಪಟ್ಟಿದೆ: *'ಆತನ ಎಲುಬುಗಳಲ್ಲಿ ಒಂದು ಎಲುಬನ್ನಾದರೂ ಮುರಿಯಬಾರದು' ಎಂಬ ಪವಿತ್ರ ಗ್ರಂಥದ ವಾಕ್ಯವು ನೆರವೇರುವಂತೆಯೇ ಇವೆಲ್ಲಾ ಸಂಭವಿಸಿದವು* (ಯೋಹಾನ 19:36).

*ಹುಟ್ಟಿರುವ ಪ್ರತಿಯೊಂದು ಚೊಚ್ಚಲ ಗಂಡನ್ನು ನನಗಾಗಿ ಪ್ರತಿಷ್ಠೆಪಡಿಸು* (13:2): ಹೋಲಿಸಿರಿ ವಿಮೋ. 4:22 ಮತ್ತು 12:12–13. ಹೊಸ ಒಡಂಬಡಿಕೆಯ ಸಮಯದಲ್ಲಿಯೂ ಯೆಹೂದ್ಯರು ಈ ನೇಮಕವನ್ನು ಪಾಲಿಸುತ್ತಿದ್ದರು: ಯೇಸು ಮರಿಯಳ ಚೊಚ್ಚಲ ಮಗನಾಗಿದ್ದ, ಹಾಗಾಗಿ ಯೋಸೇಫ ಮತ್ತು ಮರಿಯಳು ಆತನನ್ನು ಕರ್ತನಿಗೆ ಸಮರ್ಪಿಸುವುದಕ್ಕಾಗಿ ಯೆರುಸಲೇಮಿನಲ್ಲಿದ್ದ ದೇವಾಲಯಕ್ಕೆ ತೆಗೆದುಕೊಂಡು ಹೋದರು (ನೋಡಿರಿ ಲೂಕ 2:7, 22–23, ಅಲ್ಲಿ ವಿಮೋ. 13:2 ಉಲ್ಲೇಖಿಸಲಾಗಿದೆ).

**ಈ. ಪ್ರಶ್ನೆಗಳು**

1. ಪಸ್ಕಹಬ್ಬದ ಊಟವನ್ನು ಹೇಗೆ ಸಿದ್ಧಗೊಳಿಸಬೇಕಾಗಿತ್ತು ಮತ್ತು ಹೇಗೆ ತಿನ್ನಬೇಕಾಗಿತ್ತು? ಒಂದು ಪಟ್ಟಿಯನ್ನು ಮಾಡಿರಿ.
2. ಇಸ್ರಾಯೇಲರು ಈಜಿಪ್ಟ್‌ನ್ನು ಬಿಟ್ಟು ಹೊರಡುವುದಕ್ಕಿಂತ ಮುಂಚೆ ಈಜಿಪ್ಟಿಯನ್ನರಿಂದ ಏನನ್ನು ಪಡೆದರು?
3. ಈಜಿಪ್ಟ್‌ನ್ನು ಬಿಟ್ಟು ಬಂದವರ ಕುರಿತು ನಾವು ಏನನ್ನು ಕಲಿತುಕೊಳ್ಳುತ್ತೇವೆ?
4. ಪಸ್ಕದ ಕುರಿಯನ್ನು ಯಾರು ತಿನ್ನಬಾರದೆಂದು ನಿರಾಕರಿಸಲ್ಪಟ್ಟಿದ್ದರು? ಈ ನಿಯಮಕ್ಕೆ ಕಾರಣವೇನಾಗಿರಬಹುದು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಚೊಚ್ಚಲ ಗಂಡು ಮಕ್ಕಳ ಮರಣವನ್ನು ಈಜಿಪ್ಟಿಯನ್ನರು ಯಾಕೆ ಅಂತಿಮವಾದ ನಾಶನವಾಗಿ ಕಂಡರು ಎಂದು ನೀವು ಯೋಚಿಸುತ್ತೀರಿ?
2. ಪಸ್ಕಹಬ್ಬದ ರಾತ್ರಿ *ಈಜಿಪ್ಟಿನ ದೇವರುಗಳಿಗೆಲ್ಲಾ ನಾನು ನ್ಯಾಯ ತೀರಿಸುವೆನು* ಎಂದು ದೇವರು ಹೇಳಿದನು (ವಿಮೋ. 12:12). ಇದು ಏನನ್ನು ಉಲ್ಲೇಖಿಸುತ್ತದೆ ಎಂದು ನೀವು ಆಲೋಚಿಸುತ್ತೀರಿ?
3. ಪ್ರತಿಯೊಬ್ಬ ಚೊಚ್ಚಲ ಗಂಡುಮಗುವನ್ನು ತನಗಾಗಿ ಪ್ರತಿಷ್ಠೆಪಡಿಸಬೇಕೆಂದು ದೇವರು ಮೋಶೆಗೆ ಯಾಕೆ ಹೇಳಿದನೆಂದು ನೀವು ಆಲೋಚಿಸುತ್ತೀರಿ?
4. ಈ ಅಧ್ಯಯನದ ಬೆಳಕಿನಲ್ಲಿ ಯೇಸುವಿನ ಮತ್ತು ಆತನ ತ್ಯಾಗಪೂರ್ವಕ ಮರಣದ ಕುರಿತು ಆಲೋಚಿಸಿರಿ. ನಿಮ್ಮ ಕೆಲವು ಮುಖ್ಯ ಅಂಶಗಳನ್ನು ಬರೆಯಿರಿ.

**ವಿಮೋಚನಕಾಂಡ ಅಧ್ಯಯನ 12: ವಿಮೋಚನಕಾಂಡದಲ್ಲಿ ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನಗಳು**


**ಅ. ಪರಿಚಯ**

ವಿಮೋಚನಕಾಂಡದಲ್ಲಿ ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನಗಳ ನೆರವೇರುವಿಕೆಯ ಪ್ರಗತಿಯನ್ನು ನಾವು ಹಿಂಬಾಲಿಸಬಹುದು. ಖಂಡಿತವಾಗಲೂ ಅವುಗಳ ನಿಜವಾದ ನೆರವೇರುವಿಕೆಯು ಹೊಸ ಒಡಂಬಡಿಕೆಯಲ್ಲಿ ಯೇಸುವಿನೊಂದಿಗೆ ಮಾತ್ರ ಬರುವುದಾಗಿತ್ತು.

ನಾವು ವಿಮೋಚನಕಾಂಡದಲ್ಲಿ ನಡೆಯುವ ಸಂಗತಿಗಳ ಕುರಿತು ಅಧ್ಯಯನ ನಡೆಸುವುದಕ್ಕಾಗಿ ***ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನಗಳು***ಎಂಬ ರೇಖಾಪಟ್ಟಿಯನ್ನು ಬಳಸೋಣ. ಈ ವಚನಗಳನ್ನು ಕಂಡುಹಿಡಿಯಿರಿ, ನಂತರ ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿರಿ:

**ಆ. ಪ್ರಶ್ನೆಗಳು**

1. ಈ ಕೆಳಗಿನ ವಚನಗಳಲ್ಲಿ ಕಂಡಂತೆ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನಗಳ ಒಂದು ಪಟ್ಟಿಯನ್ನು ಮಾಡಿರಿ:
    1) ಆದಿ 12:2–3
    2) ಆದಿ 12:7
    3) ಆದಿ 13:14–17
2. ಕೆಳಗಿನ ರೇಖಾಪಟ್ಟಿಯು ಈ ವಾಗ್ದಾನಗಳನ್ನು ಹೇಗೆ ಬಿಂಬಿಸುತ್ತದೆ?
3. ನೀವು ರೇಖಾಪಟ್ಟಿಯ ಕೆಳಗಿನ ಭಾಗವನ್ನು ಹೇಗೆ ಅರ್ಥವಿವರಿಸುವಿರಿ?
4. ಈ ಹಂತದವರೆಗೆ ವಿಮೋಚನಕಾಂಡದಲ್ಲಿ ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನಗಳು ಎಷ್ಟರ ಮಟ್ಟಿಗೆ ನೆರವೇರಲ್ಪಟ್ಟಿವೆ?



**ವಿಮೋಚನಕಾಂಡ ಅಧ್ಯಯನ 13: ಸಮುದ್ರವನ್ನು ದಾಟಿದ್ದು**

**ಅ. ಪರಿಚಯ**

ಇಸ್ರಾಯೇಲರು ಈಜಿಪ್ಟನ್ನು ಬಿಟ್ಟಾಗ ಮೋಶೆಯು ಯೋಸೇಫನ ಎಲುಬುಗಳನ್ನು ತನ್ನೊಂದಿಗೆ ತೆಗೆದುಕೊಂಡು ಹೋದನು. ಯೋಸೇಫನು ಮರಣ ಹೊಂದುವುದಕ್ಕಿಂತ ಮುಂಚೆ ಅವರು ಹೀಗೆಯೇ ಮಾಡಬೇಕೆಂದು ಜನರಿಂದ ಪ್ರಮಾಣ ಮಾಡಿಸಿಕೊಂಡಿದ್ದನು. ಯೋಸೇಫನು ತನ್ನ ತಂದೆಯಾದ ಯಾಕೋಬನಂತೆಯೇ ಆತನಿಗೂ ಈಜಿಪ್ಟಿಯನ್ನರ ಸಂಪ್ರದಾಯದ ಪ್ರಕಾರ ಶವವು ಕೆಡದಂತೆ ಸುಗಂಧ ದ್ರವ್ಯಗಳನ್ನು ಹಾಕಿ ರಕ್ಷಿಸಲಾಗಿತ್ತು.

ದೇವರು ಒಂದು ಅದ್ಭುತಕರವಾದ ರೀತಿಯಲ್ಲಿ ಜನರನ್ನು ನಡೆಸಿದನು: *ಇದಲ್ಲದೆ ಅವರು ಹಗಲೂ ರಾತ್ರಿಯೂ ಪ್ರಯಾಣ ಮಾಡುವ ಹಾಗೆ ಯೆಹೋವನು ಹಗಲಲ್ಲಿ ಅವರಿಗೆ ದಾರಿ ತೋರಿಸುವುದಕ್ಕೆ ಮೇಘಸ್ತಂಭದಲ್ಲಿಯೂ ರಾತ್ರಿಯಲ್ಲಿ ಅವರಿಗೆ ಬೆಳಕು ಕೊಡುವದಕ್ಕೆ ಅಗ್ನಿಸ್ತಂಭದಲ್ಲಿಯೂ ಅವರ ಮುಂದೆ ಹೋದನು* (ವಿಮೋ. 13:21). ಪುನಃ ಫರೋಹನು ತನ್ನ ಮನಸ್ಸನ್ನು ಬದಲಾಯಿಸಿಕೊಂಡನು ಮತ್ತು ಆತನು ಇಸ್ರಾಯೇಲರನ್ನು ಕುದುರೆಗಳಿಂದಲೂ ಮತ್ತು ರಥಗಳಿಂದಲೂ ಮತ್ತು ಸೈನಿಕರಿಂದಲೂ ಬೆನ್ನಟ್ಟಿದನು. ಈಜಿಪ್ಟಿಯನ್ನರು ತಮಗೆ ಸಮೀಪಿಸಿದಾಗ, ಇಸ್ರಾಯೇಲರು ತಮಗಾದ ಸಂದಿಗ್ಧ ಪರಿಸ್ಥಿತಿಗಾಗಿ ಮೋಶೆಯನ್ನು ದೂಷಿಸಿದರು. ಮೋಶೆಯು ಅವರು ಭಯಪಡದಂತೆ ಮತ್ತು ಧೃಢವಾಗಿ ನಿಲ್ಲುವಂತೆ ಅವರಿಗೆ ಹೇಳಿದನು: *ಯೆಹೋವನು ನಿಮಗೋಸ್ಕರ ಯುದ್ಧಮಾಡುವನು; ಆದರೆ ನೀವು ವಿಶ್ರಾಂತಿಯಿಂದಿರಿ ಅಂದನು* (ವಿಮೋ. 14:14). ದೇವರು ನಂತರ ಇಸ್ರಾಯೇಲರು ಮುಂದಕ್ಕೆ ಸಾಗುವಂತೆ ಅಪ್ಪಣೆ ಕೊಡುವಂತೆಯೂ ಮತ್ತು ತನ್ನ ಕೋಲನ್ನು ಎತ್ತಿ ಸಮುದ್ರವನ್ನು ವಿಭಾಗಿಸುವಂತೆಯೂ ಹೇಳಿದನು. *ಆಗ ಮೋಶೆಯು ಸಮುದ್ರದ ಮೇಲೆ ತನ್ನ ಬಲಗೈಯನ್ನು ಚಾಚಲಾಗಿ ಯೆಹೋವನು ರಾತ್ರಿಯೆಲ್ಲಾ ಬಲವಾದ ಮೂಡಣ ಗಾಳಿಯಿಂದ ಸಮುದ್ರವನ್ನು ಹಿಂದಕ್ಕೆ ಹೋಗುವಂತೆ ಸಮುದ್ರವನ್ನು ಸರಿಸಿ ಒಣನೆಲ ಕಾಣಿಸುವಂತೆ ಮಾಡಿದನು; ಆಗ ನೀರುವಿಭಾಗವಾಯಿತು. ಹೀಗೆ ಇಸ್ರಾಯೇಲರು ಸಮುದ್ರದ ಮಧ್ಯದಲ್ಲಿ ಒಣಗಿದ ನೆಲದ ಮೇಲೆ ಹೊರಟು ಹೋದರು. ನೀರು ಅವರಿಗೆ ಎಡಬಲದಲ್ಲಿ ಗೋಡೆಯಾಗಿತ್ತು* (ವಿಮೋ. 14:21–22). ಈಜಿಪ್ಟಿಯನ್ನರು ಅವರ ಹಿಂದೆ ಸಮುದ್ರದೊಳಗೆ ಹಿಂಬಾಲಿಸುತ್ತಾ ಹೋದಾಗ, ದೇವರು ಅವರ ಮೇಲೆ ಗೊಂದಲವನ್ನು ತಂದು ಅವರ ರಥಗಳನ್ನು ಮುರಿದನು. ನಂತರ ಮುಂಜಾನೆಯಲ್ಲಿ ಮೋಶೆಯು ತನ್ನ ಕೈಯನ್ನು ಮತ್ತೊಮ್ಮೆ ಸಮುದ್ರದ ಮೇಲೆ ಚಾಚಲು ದೇವರು ಹೇಳಿದನು, ಆಗ *ನೀರು ತಿರಿಗಿ ಬಂದು ರಥಗಳೂ ಕುದುರೆಗಳೂ ಸವಾರರೂ ಅವರ ಹಿಂದೆ ಸಮುದ್ರದಲ್ಲಿ ಬರುತ್ತಿದ್ದ ಫರೋಹನ ಎಲ್ಲಾ ಸೈನ್ಯವೂ ಒಬ್ಬರೂ ಉಳಿಯದಂತೆ ಮುಳುಗಿತು* (ವಿಮೋ. 14:28). ಆದರೆ ಇಸ್ರಾಯೇಲರು ಸಮುದ್ರ ಮಾರ್ಗವಾಗಿ ಒಣನೆಲದ ಮೇಲೆ ನಡೆದು ಸಾಗಿದ್ದರು ಮತ್ತು *ಆ ದಿನದಲ್ಲಿ ಯೆಹೋವನು ಈ ಪ್ರಕಾರ ಇಸ್ರಾಯೇಲರನ್ನು ಈಜಿಪ್ಟಿನವರ ಕೈಯಿಂದ ರಕ್ಷಿಸಿದನು* (ವಿಮೋ. 14:30).

**ಆ. ಓದಿರಿ**

ವಿಮೋ. 13:17–14:31

**ಇ. ಟಿಪ್ಪಣಿ**

*ಫಿಲಿಷ್ಟಿಯರ ದೇಶದ ದಾರಿಯು* (13:17): ಈಜಿಪ್ಟಿನಿಂದ ಪಾಲೆಸ್ತೀನಿಗೆ ಪ್ರಯಾಣಿಸಲು ಅತ್ಯಂತ ಸಮೀಪವಿದ್ದ ಮತ್ತು ಸಾಮಾನ್ಯವಾದ ಮಾರ್ಗವು ಇದಾಗಿತ್ತು. ಅದು ಪೂರ್ವದಲ್ಲಿ ಗೋಷೆನ್‌ನಿಂದ ಪ್ರಾರಂಭಿಸಿ ಉತ್ತರಕ್ಕೆ ಮೆಡಿಟೆರೇನಿಯನ್ ಸಮುದ್ರದ ಕರಾವಳಿ ತೀರದುದ್ದಕ್ಕೂ ಸಾಗುತ್ತಿತ್ತು. ಅದರ ಮೊದಲ ಭಾಗವು ಈಜಿಪ್ಟಿಯನ್ ಕೋಟೆಗಳಿಂದ ಸುಭದ್ರವಾಗಿ ಕಾವಲು ಕಾಯಲಾಗುತ್ತಿತ್ತು ಮತ್ತು ಅದರ ಅಂತಿಮ ಭಾಗವು ವೈರಿಗಳಾದ ಫಿಲಿಷ್ಟಿಯರಿಂದ ಆಳಲ್ಪಡುತ್ತಿದ್ದ ಪ್ರದೇಶದ ಮುಖಾಂತರವಾಗಿತ್ತು. ***ನಿರ್ಗಮನ*** ಎಂಬ ನಕ್ಷೆಯನ್ನು ನೋಡಿರಿ.

*ಮರುಭೂಮಿಯಲ್ಲಿ* (13:18): ಈ ರಸ್ತೆಯು ಅತ್ಯಂತ ಉದ್ದವಾಗಿತ್ತು ಮತ್ತು ಸಿನಾಯಿ ಪರ್ಯಾಯದ್ವೀಪದ ಪಶ್ಚಿಮ ಕರಾವಳಿ ತೀರದುದ್ದಕ್ಕೂ ಸಾಗುತ್ತಿತ್ತು. ***ನಿರ್ಗಮನ*** ಎಂಬ ನಕ್ಷೆಯನ್ನು ನೋಡಿರಿ.

*ಯುದ್ಧಸನ್ನದ್ಧರಾಗಿ* (13:18): ಇಸ್ರಾಯೇಲರು ಈಗಷ್ಟೇ ಗುಲಾಮತನದಿಂದ ಹೊರಬಂದದ್ದನ್ನು ಪರಿಗಣಿಸುವುದಾದರೆ ಅವರು ಸರ್ವಾಯುಧವುಳ್ಳವರಾಗಿರಲಿಕ್ಕಿಲ್ಲ. ಹಾಗಾಗಿ ಅವರು ಬಹುಶಃ ಈಟಿ, ಕವಣೆ ಮತ್ತು ಬಿಲ್ಲು ಬಾಣಗಳಂತಹ ಆಯುಧಗಳನ್ನು ಹೊಂದಿದ್ದಿರಬಹುದು.

*ಯೋಸೇಫನ ಎಲುಬುಗಳನ್ನು ... ಪ್ರಮಾಣ* (13:19): ಆದಿಕಾಂಡ 50:24–25 ನ್ನು ನೋಡಿರಿ

*ಸುಕ್ಕೋತಿನಿಂದ ... ಏತಾಮಿನ* (13:20): ನಿರ್ಗಮನವು ರಾಮ್ಸೇಸ್‌ನಲ್ಲಿರುವ ನೈಲ್ ನದಿಮುಖಜಭೂಮಿಯಿಂದ ಪ್ರಾರಂಭವಾಯಿತು (ನೋಡಿರಿ 12:27). ಅಲ್ಲಿಂದ ಇಸ್ರಾಯೇಲರು ದಕ್ಷಿಣದಲ್ಲಿದ್ದ ಸುಕ್ಕೋತಿಗೆ ಪ್ರಯಾಣಿಸಿದರು (***ನಿರ್ಗಮನ*** ಎಂಬ ನಕ್ಷೆಯನ್ನು ನೋಡಿರಿ). ಏತಾಮಿನ ನಿಖರವಾದ ಸ್ಥಳವು ತಿಳಿದು ಬಂದಿಲ್ಲ, ಆದರೆ ಅದು ಮರುಭೂಮಿಯ ಅಂಚಿನಲ್ಲಿತ್ತು.

*ಮೇಘಸ್ತಂಭದಲ್ಲಿಯೂ ... ಅಗ್ನಿಸ್ತಂಭದಲ್ಲಿಯೂ* (13:21): ಇವುಗಳು ಇಸ್ರಾಯೇಲರೊಂದಿಗಿದ್ದ ದೇವರ ಪ್ರಸನ್ನತೆಯ ತೋರ್ಪಡುವಿಕೆಗಳಾಗಿದ್ದವು ಮತ್ತು ಇವುಗಳ ಮೂಲಕ ದೇವರು ತನ್ನ ಜನರನ್ನು ಅವರ ಪ್ರಯಾಣದಲ್ಲಿ ನಡೆಸಿದನು. ವ.14:19 ರಲ್ಲಿ ಮೇಘಸ್ತಂಭವು *ದೇವದೂತನೊಂದಿಗೆ* ಹತ್ತಿರದ ಸಂಬಂಧವನ್ನು ಹೊಂದಿದೆ.

*ಪೀಹಹೀರೋತಿಗೆ ... ಮಿಗ್ದೋಲಿಗೂ ... ಬಾಳ್ಜೆಫೋನಿಗೆ*(14:2): ಈ ಸ್ಥಳಗಳ ನಿಖರವಾದ ಜಾಗವು ತಿಳಿದುಬಂದಿಲ್ಲ. *ಮಿಗ್ದೋಲ್* ಅಂದರೆ 'ಕಾವಲು ಗೋಪುರ'.

*ನಾನೇ ಯೆಹೋವನೆಂದು ... ತಿಳಿಯುವರು* (14:4): 'ತಿಳಿಯುವರು' ಎಂಬ ಹಿಬ್ರೂ ಪದವು 'ಅನುಭವದಿಂದ ಬರುವ ಜ್ಞಾನವನ್ನು' ಅರ್ಥೈಸುತ್ತದೆ. ಈಜಿಪ್ಟಿಯನ್ನರು ಸಮುದ್ರದಲ್ಲಿ ನಾಶವಾದಾಗ ನಿಸ್ಸಂದೇಹವಾಗಿ ದೇವರ ಬಲವನ್ನು ಅನುಭವಿಸಿದರು.

*ಸಮುದ್ರ ತೀರದಲ್ಲಿ ಇಳಿದುಕೊಂಡಿರುವಾಗ* (14:9): ಈ ಸಮುದ್ರಕ್ಕೆ ಹಿಬ್ರೂ ಭಾಷೆಯಲ್ಲಿ ಪೂರ್ಣವಾದ ಹೆಸರು *ಯಾಮ್ ಸುಫ್* ಎಂಬುದಾಗಿದೆ (ನಾವು ಇದನ್ನು ವಿಮೋ. 13:18 ಮತ್ತು 15:4, 22 ರಿಂದ ತಿಳಿದುಕೊಳ್ಳುತ್ತೇವೆ). ಅದರ ಅರ್ಥ 'ಆಪುಗಳ ಸಮುದ್ರ' ಎಂಬುದಾಗಿದೆ. ಸಾಂಪ್ರದಾಯಿಕವಾದ ಇಂಗ್ಲಿಷ್ ಅನುವಾದದಲ್ಲಿ (ಮತ್ತು ಕನ್ನಡ ಎನ್.ಐ.ಬಿ.ವಿ ಅನುವಾದದಲ್ಲಿ) ಕೆಂಪು ಸಮುದ್ರ ಎಂಬುದಾಗಿದೆ, ಅದು ಆಫ್ರಿಕಾ ಮತ್ತು ಅರೇಬಿಯಾದ ನಡುವೆ ಇರುವ ಜಲಸಂಪನ್ಮೂಲದ ಆಧುನಿಕ ಹೆಸರಾಗಿದೆ. ವಿಮೋಚನಕಾಂಡದ ಕಥೆಯ ಹಿನ್ನಲೆಯು ಕೆಂಪು ಸಮುದ್ರದ ಉತ್ತರಕ್ಕೆ ಅವರು ಸಮುದ್ರವನ್ನು ದಾಟಿರಬಹುದು ಎಂಬುದನ್ನು ತೋರಿಸುತ್ತದೆ. ಅದು ನೈಲ್ ನದಿಮುಖಜಭೂಮಿಯ ಪೂರ್ವ ಮತ್ತು ಆಗ್ನೇಯದ ಮತ್ತು ಇಸ್ರಾಯೇಲರು ವಾಸಿಸಿದ ಗೋಷೆನ್‌ನ ಬಳಿಯಲ್ಲಿರುವ ಯಾವುದಾದರೊಂದು ಪ್ರದೇಶದಲ್ಲಿ ನಡೆದಿರಬಹುದು. ಆ ದಿನಗಳಲ್ಲಿ ಅಲ್ಲಿ ದೊಡ್ಡ ಕೆರೆಗಳು ಇದ್ದವು. ಸನ್ 1869 ರಲ್ಲಿ ಕಟ್ಟಲ್ಪಟ್ಟ ಸೂಯೆಜ್ ಕಾಲುವೆಯು ಆ ಇಡೀ ಪ್ರದೇಶದ ಭೂಪಟವನ್ನೇ ಬದಲಾಯಿಸಿತು. ***ನಿರ್ಗಮನ*** ಎಂಬ ನಕ್ಷೆಯನ್ನು ನೋಡಿರಿ.

**ಈ. ಪ್ರಶ್ನೆಗಳು**

1. ದೇವರು ಇಸ್ರಾಯೇಲರನ್ನು ಪಾಲೆಸ್ತೀನಿಗೆ ಸಮೀಪವಿದ್ದ ಮಾರ್ಗದಲ್ಲಿ ನಡೆಸದೆ ಮರುಭೂಮಿಯ ಮಾರ್ಗವಾಗಿ ಯಾಕೆ ನಡೆಸಿದನು?
2. ಇಸ್ರಾಯೇಲರನ್ನು ಹೋಗಗೊಡಿಸುವುದರ ಕುರಿತು ಫರೋಹನು ತನ್ನ ಮನಸ್ಸನ್ನು ಯಾಕೆ ಬದಲಾಯಿಸಿಕೊಂಡನು?
3. ಫರೋಹನ ಬದಲಾದ ಮನಸ್ಸನ್ನು ದೇವರ ದೃಷ್ಟಿಕೋನದಿಂದ ಹೇಗೆ ವಿವರಿಸಲಾಗಿದೆ?
4. ಜನರು ಸಮುದ್ರವನ್ನು ದಾಟುವುದಕ್ಕಿಂತ ಮುಂಚೆ ರಾತ್ರಿಯಲ್ಲಿ ಮೇಘಸ್ತಂಭಕ್ಕೆ ಏನಾಯಿತು?
5. ದೇವರು ಈಜಿಪ್ಟಿಯನ್ನರಿಗೆ ಮಾಡಿದ ಸಂಗತಿಯನ್ನು ಕಂಡಾಗ ಇಸ್ರಾಯೇಲರು ಹೇಗೆ ಪ್ರತಿಕ್ರಿಯಿಸಿದರು?
6. ಸಮುದ್ರವನ್ನು ದಾಟುವಾಗ ನಡೆದ ಸಂಗತಿಯಿಂದ ದೇವರು ಹೇಗೆ 'ಮಹಿಮೆ ಹೊಂದಿದನು'?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ಅಧ್ಯಯನದಲ್ಲಿ ಇಸ್ರಾಯೇಲರ ಮನಸ್ಥಿತಿಯಲ್ಲಿ ಉಂಟಾಗುವ ಬದಲಾವಣೆಗಳನ್ನು ವಿವರಿಸಿರಿ. ನಿಮ್ಮ ಅವಲೋಕನಗಳನ್ನು ಬರೆಯಿರಿ.
2. ಈ ಅಧ್ಯಯನದಲ್ಲಿ ನಾವು ಮೋಶೆಯ ಕುರಿತು ಯಾವ ಚಿತ್ರಣವನ್ನು ಕಾಣುತ್ತೇವೆ?
3. ವಿಮೋ. 14 ರಲ್ಲಿ ಇಸ್ರಾಯೇಲರು ಕೆಂಪು ಸಮುದ್ರವನ್ನು ದಾಟುವಾಗ ಮತ್ತು ಆ ಸಮುದ್ರದಲ್ಲಿ ಫರೋಹನ ಸೈನ್ಯವು ನಾಶವಾದಾಗ ದೇವರು ಅದ್ಭುತಕರವಾಗಿ ಕಾರ್ಯಾನ್ಮುಖನಾಗಿರುವುದನ್ನು ನಾವು ಕಾಣುತ್ತೇವೆ. ನೀವು ಇಸ್ರಾಯೇಲರ ಸಮುದಾಯದ ಒಬ್ಬ ವ್ಯಕ್ತಿಯೆಂಬಂತೆ ನಡೆದ ಘಟನೆಗಳನ್ನು ಹೇಳಿರಿ (ಆತನು ಕಂಡು ಕೇಳಿದಂತೆ, ಮೋಶೆಯು ದೇವರ ಮಾರ್ಗದರ್ಶನದ ಕುರಿತು ತಿಳಿಸಿದಂತೆ, ವಾಸ್ತವಿಕವಾಗಿ ನಡೆದದ್ದೇನು ... ಇತ್ಯಾದಿ). ಅದನ್ನು ನೀವು ಕಂಡಂತೆ ಹೇಳಿರಿ: 'ನಾವು ಈಜಿಪ್ಟನ್ನು ಬಿಟ್ಟಾಗ ಈ ಸಂಗತಿಗಳು ನಡೆದವು. ಮೊದಲು ನಾವು ರಾಮ್ಸೇಸನಿಂದ ಸುಕ್ಕೋತಿಗೆ ಪ್ರಯಾಣ ಮಾಡಿದೆವು. ನಾವು ಹೆಂಗಸರು ಮತ್ತು ಮಕ್ಕಳನ್ನು ಹೊರತುಪಡಿಸಿ ಸುಮಾರು ಆರು ಲಕ್ಷ ಪುರುಷರಿದ್ದೆವು. ನಮ್ಮೊಂದಿಗೆ ಈಜಿಪ್ಟಿನಿಂದ ಇತರೆ ಜನರ ಒಂದು ಗುಂಪು ಸಹ ಹೊರಟಿತು. ಈಗ ನಾವು ಕಟ್ಟಕಡೆಗೆ ವಾಗ್ದಾನ ದೇಶಕ್ಕೆ ಪ್ರಯಾಣ ಪ್ರಾರಂಭಿಸಿದ್ದೆವು! ಆದರೆ ನಮ್ಮ ಶ್ರೇಷ್ಠ ನಾಯಕನಾದ ಮೋಶೆಯು ನಮ್ಮನ್ನು ಫಿಲಿಷ್ಟಿಯರ ದೇಶದ ಮುಖಾಂತರ ನೇರವಾಗಿ ಕಾನಾನಿಗೆ ಕರೆದೊಯ್ಯಲಿಲ್ಲ. ಫಿಲಿಷ್ಟಿಯರ ನಮ್ಮ ವಿರುದ್ಧ ಯುದ್ಧಕ್ಕೆ ಬರಬಹುದು ಎಂದು ದೇವರು ಆತನಿಗೆ ತಿಳಿಸಿದ್ದನು. ಆಗ ನಾವು ಮನಗುಂದಿ ಹಿಂದಿರುಗಿ ಈಜಿಪ್ಟಿಗೆ ಹಿಂದಿರುಗೇವು ಎಂದುಕೊಂಡನು. ಹಾಗಾಗಿ ಮೋಶೆಯು ನಮ್ಮನ್ನು ಮರುಭೂಮಿಯ ಕಡೆಗೆ ದಕ್ಷಿಣಕ್ಕೆ ನಡೆಸಿದನು...'

**ವಿಮೋಚನಕಾಂಡ ಅಧ್ಯಯನ 14: ಮೋಶೆ ಮತ್ತು ಮಿರ್ಯಾಮಳ ಗೀತೆಗಳು**

**ಅ. ಪರಿಚಯ**

ವಿಮೋಚನಕಾಂಡ 15 ರಲ್ಲಿ ನಾವು ದೇವರು ಇಸ್ರಾಯೇಲರನ್ನು ಈಜಿಪ್ಟಿಯನ್ನರಿಂದ ಬಿಡಿಸಿದಾಗ ಮಾಡಿದ ಸಂಗತಿಗಳಿಗಾಗಿ ದೇವರನ್ನು ಮಹಿಮೆಪಡಿಸುವ ಎರಡು ಗೀತೆಗಳನ್ನು ಕಾಣುತ್ತೇವೆ. ಮೊದಲ ಹಾಡನ್ನು ಮೋಶೆ ಮತ್ತು ಇಸ್ರಾಯೇಲರು ಹಾಡಿದರು (ವ. 1). ಎರಡನೆಯ ಹಾಡನ್ನು ಮಿರ್ಯಾಮಳು ಅವರಿಗಾಗಿ ಹಾಡಿದಳು (ವ. 21).

**ಆ. ಓದಿರಿ**

ವಿಮೋ. 15:1–21

**ಇ. ಟಿಪ್ಪಣಿ**

15:1–18: ಇದು ಒಂದು ಹಾಡು (ವ. 1) ಅಥವಾ ಗೀತೆ ಆಗಿದೆ. ಅದು ಹಿಬ್ರೂ ಭಾಷೆಯಲ್ಲಿ ಪದ್ಯ ರೂಪದಲ್ಲಿ ಬರೆಯಲಾಗಿದೆ. ಇಂಗ್ಲಿಷ್ ಭಾಷೆಯಲ್ಲಿರುವ ಎನ್.ಐ.ವಿ. ಅನುವಾದವು ಈ ಪಠ್ಯವನ್ನು ಪದ್ಯವಾಗಿ ತೋರಿಸುತ್ತದೆ, ಆದರೆ ಕನ್ನಡ ಭಾಷೆಯಲ್ಲಿರುವ ಎನ್.ಐ.ಬಿ.ವಿ. ಅನುವಾದವು ಹೀಗೆ ತೋರಿಸುವುದಿಲ್ಲ. ಮಿರ್ಯಾಮಳ ಚಿಕ್ಕ ಗೀತೆಯೂ (15:21) ಸಹ ಪದ್ಯ ರೂಪದಲ್ಲಿದೆ.

*ಕುದುರೆಯನ್ನೂ ಕುದುರೆಯ ಸವಾರನನ್ನೂ ಸಮುದ್ರದಲ್ಲಿ ದಬ್ಬಿದ್ದಾನೆ* (ವ. 1): ಈ ವಾಕ್ಯದಲ್ಲಿ ನಾವು ಶಬ್ದಾಲಂಕಾರವನ್ನು ಕಾಣುತ್ತೇವೆ – ಮನುಷ್ಯತಾರೂಪಣೆಯೂ ಸಹ ಆದ ರೂಪಕಾಲಂಕಾರ. ಅದು ಒಂದು ರೂಪಕಾಲಂಕಾರವಾಗಿದೆ, ಯಾಕೆಂದರೆ ಅಕ್ಷರಶಃವಾಗಿ ನಡೆದ ಸಂಗತಿಯ ಒಂದು ಚಿತ್ರಣವನ್ನು ನಮಗೆ ಕೊಡುತ್ತದೆ: ಈಜಿಪ್ಟಿಯನ್ ಕುದುರೆಸವಾರರು ಮತ್ತು ರಥಗಳು ಒಣದಿದ ಸಮುದ್ರದಲ್ಲಿ ಇಸ್ರಾಯೇಲರನ್ನು ಬೆನ್ನಟ್ಟಿದರು. ಗಾಳಿಯು ನಿಂತು ನೀರು ತನ್ನ ಸ್ಥಳದಲ್ಲಿ ಮತ್ತೊಮ್ಮೆ ತುಂಬಿಕೊಂಡಾಗ ಅವರೆಲ್ಲರೂ ಮುಳುಗಿದರು. ಅದು ಒಂದು ಮನುಷ್ಯತಾರೂಪಣೆಯೂ ಸಹ ಆಗಿದೆ, ಯಾಕೆಂದರೆ ದೇವರು ಒಬ್ಬ ಬಲಿಷ್ಠ ಮನುಷ್ಯನ ರೂಪದಲ್ಲಿ ಈಜಿಪ್ಟಿಯನ್ನರನ್ನು ಸಮುದ್ರದಲ್ಲಿ ಎಸೆದನು ಎಂಬುದಾಗಿ ಚಿತ್ರಿಸಲ್ಪಟ್ಟಿದ್ದಾನೆ. ನಾವು 'ಕುದುರೆಯನ್ನೂ ಕುದುರೆಯ ಸವಾರನನ್ನೂ' ಎಂಬ ಹೇಳಿಕೆಯಲ್ಲಿ ಮೂರನೆಯ ಶಬ್ದಾಲಂಕಾರವನ್ನೂ ಸಹ ಕಾಣುತ್ತೇವೆ: ಒಂದು ಕುದುರೆ ಮತ್ತು ಒಬ್ಬ ಸವಾರನು ಎಲ್ಲಾ ಸವಾರರು, ಕುದುರೆಗಳು ಮತ್ತು ರಥಗಳನ್ನೊಳಗೊಂಡ ಇಡೀ ಈಜಿಪ್ಟಿಯನ್ ಸೈನ್ಯವನ್ನು ಪ್ರತಿನಿಧಿಸುತ್ತದೆ. ಈ ಶಬ್ದಾಲಂಕಾರವನ್ನು 'ಉಪಲಕ್ಷಣ' ಎಂಬುದಾಗಿಯೂ ಸಹ ಕರೆಯಬಹುದು.

*ನೀನು ವಿಮೋಚಿಸಿದ ಜನರನ್ನು* (ವ. 13): ಇದು ಯೆಹೋವನು ಇಸ್ರಾಯೇಲರನ್ನು ಈಜಿಪ್ಟಿನಿಂದ ಹೊರಗೆ ಕರೆತಂದ (ಅಥವಾ ವಿಮೋಚಿಸಿದ) ನಿರ್ಗಮನದ ಘಟನೆಯನ್ನು ಉಲ್ಲೇಖಿಸುತ್ತಿದೆ.

*ನಿನ್ನ ಪರಿಶುದ್ಧ ನಿವಾಸಕ್ಕೆ* (ವ. 13): ಇದು ಸ್ವತಃ ಯೆಹೋವನು ತಾನೇ ತನ್ನ ಜನರೊಂದಿಗೆ ಒಂದು ವಿಶೇಷವಾದ ರೀತಿಯಲ್ಲಿ ಚಿಯೋನ್ ಪರ್ವತದ ಮೇಲಿರುವ ಯೆರುಸಲೇಮಿನ ದೇವಾಲಯದಲ್ಲಿ ವಾಸಿಸುವ ಒಂದು ಸ್ಥಳವಾದ ವಾಗ್ದಾನ ದೇಶವನ್ನು ಉಲ್ಲೇಖಿಸುತ್ತದೆ.

*ನಿನ್ನ ಕೈಗಳು ಸ್ಥಾಪಿಸಿದ ಪರಿಶುದ್ಧ ನಿವಾಸದಲ್ಲಿಯೂ ನೀನು ವಾಸಿಸುವದಕ್ಕೆ ಮಾಡಿಕೊಂಡಿರುವ ನಿನ್ನ ಸ್ವಾಸ್ಥ್ಯದ ಪರ್ವತದಲ್ಲಿಯೂ*(ವ. 17): ಈ ಹೇಳಿಕೆಯು ವಾಗ್ದಾನ ದೇಶವನ್ನು ಅಥವಾ ಇನ್ನೂ ನಿರ್ದಿಷ್ಟವಾಗಿ ಯೆರುಸಲೇಮ್ ಮತ್ತು ಚಿಯೋನ್ ಪರ್ವತದಲ್ಲಿರುವ ಅದರ ದೇವಾಲಯವನ್ನು ಉಲ್ಲೇಖಿಸುತ್ತದೆ (ಮೇಲಿರುವ 'ನಿನ್ನ ಪರಿಶುದ್ಧ ನಿವಾಸಕ್ಕೆ' ಎಂಬ ಟಿಪ್ಪಣಿಯನ್ನೂ ಸಹ ನೋಡಿರಿ). ಅದಲ್ಲದೆ, ಈ ಹೇಳಿಕೆಯು ದೇವರ ಸಾರ್ವತ್ರಿಕ ಆಳ್ವಿಕೆ ಮತ್ತು ಆತನ ಶಾಶ್ವತ ಅಧಿಪತ್ಯದ ಕಡೆಗೆ ಬೆರಳು ಮಾಡಿ ತೋರಿಸುತ್ತದೆ.

*ಪ್ರವಾದಿನಿಯಾಗಿದ್ದ ಆರೋನನ ಸಹೋದರಿ ಮಿರ್ಯಾಮಳು* (ವ. 20): ಮಿರ್ಯಾಮಳು ಮೋಶೆ ಮತ್ತು ಆರೋನರ ಹಿರಿಯ ಸಹೋದರಿಯಾಗಿದ್ದಳು (ಅಕ್ಕ). ಮೋಶೆಯನ್ನು ಪೆಟ್ಟಿಗೆಯಲ್ಲಿ ಹಾಕಿದ ವಿಷಯಕ್ಕೆ ಸಂಬಂಧಪಟ್ಟಾಗ ತಿಳಿಸಲ್ಪಟ್ಟಿರುವ ಅನಾಮಧೇಯ ಸಹೋದರಿಯು (ಅಕ್ಕ) ಈಕೆಯೇ ಆಗಿರಬಹುದು (ವಿಮೋ. 2:4–7). ಆಕೆಯ ಪ್ರವಾದನಾ ವರವು ಅರಣ್ಯ. 12:1–2 ರಲ್ಲಿ ಉಲ್ಲೇಖಿಸಲಾಗಿದೆ.

**ಈ. ಪ್ರಶ್ನೆಗಳು**

1. ಮೋಶೆಯ ಗೀತೆಯನ್ನು (ವ. 1–18) ಎರಡು ಮುಖ್ಯ ಭಾಗವಾಗಿ ವಿಂಗಡಿಸಬಹುದು. ಹೇಗೆ?

2. ನಿಮ್ಮ ಸ್ವಂತ ಮಾತುಗಳಲ್ಲಿ ಕೆಳಗಿನ ಹೇಳಿಕೆಗಳನ್ನು ವಿವರಿಸಿರಿ:

   1) *ಯೆಹೋವನು ನನ್ನ ಬಲವೂ ಕೀರ್ತನೆಯೂ ಆಗಿದ್ದಾನೆ. ಆತನು ನನ್ನ ರಕ್ಷಣೆಯಾದನು (ವ. 2).*

   2) *ದೇವರುಗಳಲ್ಲಿ ಯೆಹೋವನೇ, ನಿನ್ನ ಹಾಗೆ ಯಾರಿದ್ದಾರೆ? ಪರಿಶುದ್ಧತ್ವದಲ್ಲಿ ಮಹಿಮೆ ಹೊಂದಿದವನೂ ಸ್ತೋತ್ರಗಳಲ್ಲಿ ಭಯಂಕರನೂ ಅದ್ಭುತಗಳನ್ನು ಮಾಡುವಾತನೂ ಆದ ನಿನ್ನ ಹಾಗೆ ಯಾರಿದ್ದಾರೆ? (ವ. 11)*

3. ಹಿಬ್ರೂ ಪದ್ಯವು ಸಮನಾರ್ಥ ಪದಗಳ ಮತ್ತು ಹೇಳಿಕೆಗಳ ವಿಶಾಲವಾದ ಬಳಕೆಯನ್ನು ಮಾಡುತ್ತದೆ. ಮೋಶೆಯ ಗೀತೆಯಿಂದ ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಡಿರಿ (ವ. 1–18).

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಮೋಶೆಯ ಗೀತೆಯನ್ನು (15:1–18) ಮತ್ತು ಮಿರ್ಯಾಮಳ ಗೀತೆಯನ್ನು (15:21) ಅಭ್ಯಸಿಸಿರಿ:

    1) ಕೆಲವು ರೂಪಕಾಲಂಕಾರಗಳನ್ನು ವಿವರಿಸಿರಿ.

    2) ಕೆಲವು ಮನುಷ್ಯತಾರೂಪಣೆಗಳನ್ನು ಕಂಡುಹಿಡಿದು ಬರೆಯಿರಿ.

    3) ಸಮಾಂತರತೆಗೆ ಕೆಲವು ಉದಾಹರಣೆಗಳನ್ನು ಕೊಡಿರಿ. ಅವುಗಳನ್ನು ವಿವರಿಸಿರಿ. ನೀವು ಜೆ.ವಿ. (ಜೀವವುಳ್ಳ ವಚನ) ಅನುವಾದವನ್ನು ಬಳಸುವುದಾದರೆ ಸುಲಭವೆನಿಸಬಹುದು, ಯಾಕೆಂದರೆ ಅದರಲ್ಲಿ ಪಠ್ಯವು ಪದ್ಯ ರೂಪದಲ್ಲಿ ಜೋಡಿಸಲಾಗಿದೆ.

    4) ಈ ಎರಡು ಅನುವಾದಗಳ ನಡುವೆ ಇರುವ ಸಂಬಂಧವನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

2. ಮೋಶೆಯ ಗೀತೆಯಲ್ಲಿ (15:1–8) ನಾವು ದೇವರ ಯಾವ ಚಿತ್ರಣವನ್ನು ಕಾಣುತ್ತೇವೆ?

3. ಮೇಲಿನ ಪ್ರಶ್ನೆಗೆ ನೀವು ಕೊಟ್ಟಿರುವ ಉತ್ತರಗಳ ಬೆಳಕಿನಲ್ಲಿ ನಿಮ್ಮ ಸ್ವಂತ ಜೀವನದ ಕುರಿತು ಆಲೋಚಿಸಿರಿ. ದೇವರ ಈ ಅಂಶಗಳನ್ನು ನಿಮ್ಮ ಸ್ವಂತ ಜೀವಿತದಲ್ಲಿ ಎಷ್ಟರ ಮಟ್ಟಿಗೆ ಅನುಭವಿಸಿದ್ದೀರಿ? ನಿಮ್ಮ ಸಾಕ್ಷಿಗಳನ್ನು ಹಂಚಿಕೊಳ್ಳಿರಿ.

**ವಿಮೋಚನಕಾಂಡ ಅಧ್ಯಯನ 15: ಮರುಭೂಮಿಯೊಳಗೆ**

**ಅ. ಪರಿಚಯ**

ಇಸ್ರಾಯೇಲರು ಸಮುದ್ರವನ್ನು ದಾಟಿದ ನಂತರ ದಕ್ಷಿಣಕ್ಕೆ ಮರುಭೂಮಿಯೊಳಗೆ ಸಾಗಿದರು. ಅವರು ಅಲ್ಲಿ ನೀರಿನ ಸಮಸ್ಯೆಯನ್ನು ಎದುರಿಸಿದರು. ಅವರು ಮಾರಾ ಎಂಬಲ್ಲಿಗೆ ಬಂದಾಗ ಅಲ್ಲಿನ ನೀರು ಕಹಿಯಾದದ್ದೆಂದು ಕಂಡುಕೊಂಡರು. ದೇವರು ಮೋಶೆಗೆ ಕಟ್ಟಿಗೆಯ ಒಂದು ತುಂಡನ್ನು ತೋರಿಸಿದನು, ಆತನು ಅದನ್ನು ತೆಗೆದುಕೊಂಡು ನೀರಿನಲ್ಲಿ ಎಸೆದಾಗ ಆ ನೀರು ಸಿಹಿಯಾಯಿತು. ಮಾರಾ ಎಂಬಲ್ಲಿ ದೇವರು ಒಂದು ಶಾಸನವನ್ನು ಮಾಡಿದನು. *ಆತನು, 'ನೀನು ನಿನ್ನ ದೇವರಾದ ಯೆಹೋವನ ಮಾತಿಗೆ ಶ್ರದ್ಧೆಯಿಂದ ಕಿವಿಗೊಟ್ಟು, ಆತನ ದೃಷ್ಟಿಯಲ್ಲಿ ಸರಿಯಾದದ್ದನ್ನು ಮಾಡಿ, ಆತನ ಆಜ್ಞೆಗಳಿಗೆ ಕಿವಿಗೊಟ್ಟು ಆತನ ನಿಯಮಗಳನ್ನು ಕೈಗೊಂಡರೆ, ಈಜಿಪ್ಟಿನ ಮೇಲೆ ಬರಮಾಡಿದ ಯಾವ ವ್ಯಾಧಿಯನ್ನೂ ನಿನ್ನ ಮೇಲೆ ಬರಮಾಡುವುದಿಲ್ಲ; ನಿನ್ನನ್ನು ಸ್ವಸ್ಥಪಡಿಸುವ ಯೆಹೋವನು ನಾನೇ ಆಗಿದ್ದೇನೆ' ಅಂದನು* (ವಿಮೋ. 15:26).

ಸ್ವಲ್ಪ ಕಾಲವಾದ ನಂತರ ಇಸ್ರಾಯೇಲರು ಸೀನ್ ಮರುಭೂಮಿಯನ್ನು ತಲುಪಿದರು. ಅವರು ಅಲ್ಲಿ ಗೊಣಗುಟ್ಟುತ್ತಾ ದೇವರು ಮರುಭೂಮಿಯಲ್ಲಿ ಹಸಿವೆಯಿಂದ ಸಾಯಿಸುವುದರ ಬದಲಾಗಿ ಸಾಕಾಗುವಷ್ಟು ಊಟವಿದ್ದ ಈಜಿಪ್ಟಿನಲ್ಲಿಯೇ ದೇವರ ಕೈಯಿಂದ ಸತ್ತುಹೋಗಿದ್ದರೆ ಒಳ್ಳೆಯದಾಗಿತ್ತು ಎಂದರು. *ಆಗ ಯೆಹೋವನು ಮೋಶೆಯ ಸಂಗಡ ಮಾತ ನಾಡಿ, 'ಇಸ್ರಾಯೇಲರಗೊಣಗುಟ್ಟುವಿಕೆಯನ್ನು ಕೇಳಿದ್ದೇನೆ. ಅವರ ಸಂಗಡ ನೀನು ಮಾತನಾಡಿ, 'ನೀವು ಸಂಜೆಯಲ್ಲಿ ಮಾಂಸವನ್ನು ಉಣ್ಣುವಿರಿ. ಬೆಳಿಗ್ಗೆ ರೊಟ್ಟಿಯಿಂದ ತೃಪ್ತರಾಗುವಿರಿ. ನಾನೇ ನಿಮ್ಮ ದೇವರಾದ ಯೆಹೋವನೆಂದು ತಿಳಿದುಕೊಳ್ಳುವಿರಿ' ಎಂದು ಅವರಿಗೆ ಹೇಳು ಅಂದನು*(ವಿಮೋ.16:11–12). *ಸಂಜೆಯಲ್ಲಿ ಲಾವಕ್ಕಿಗಳು ಬಂದು ಅವರ ಪಾಳೆಯವನ್ನು ಮುಚ್ಚಿಕೊಂಡವು* (ವಿಮೋ.16:13) ಮತ್ತು ಬೆಳಿಗ್ಗೆ ರೊಟ್ಟಿಯು ಮಂಜಿನ ರೀತಿಯಲ್ಲಿ ನೆಲದ ಮೇಲೆ ಆವರಿಸಿತ್ತು. *ಇಸ್ರಾಯೇಲರು ಅದಕ್ಕೆ 'ಮನ್ನ' ಎಂದು ಹೆಸರಿಟ್ಟರು. ಅದು ಕೊತ್ತಂಬರಿ ಬೀಜದಂತೆ ಬೆಳ್ಳಗಿತ್ತು. ಅದರ ರುಚಿಯು ಜೇನಿನಲ್ಲಿ ಕಲಸಿದ ದೋಸೆಯಂತೆ ಇತ್ತು* (ವಿಮೋ.16:31). *ಇಸ್ರಾಯೇಲರು ತಾವು ವಾಸವಾಗಿರತಕ್ಕ ದೇಶಕ್ಕೆ ಬರುವವರೆಗೆ ನಲವತ್ತು ವರ್ಷ ಮನ್ನವನ್ನು ತಿಂದರು. ಕಾನಾನ್ ದೇಶದ ಮೇರೆಗಳಿಗೆ ಬರುವವರೆಗೂ ಅವರು ಮನ್ನವನ್ನು ತಿಂದರು* (ವಿಮೋ.16:35).

**ಆ. ಓದಿರಿ**

ವಿಮೋ. 15:22–16:36

**ಇ. ಟಿಪ್ಪಣಿ**

*ಶೂರಿನ ಮರುಭೂಮಿಯೊಳಗೆ* (15:22): ಈ ಮರುಭೂಮಿಯು ಈಜಿಪ್ಟಿನ ಪೂರ್ವಕ್ಕೂ ಮತ್ತು ಸಿನಾಯಿ ಪರ್ಯಾಯ ದ್ವೀಪದ ಈಶಾನ್ಯದ ಭಾಗದಲ್ಲಿ ನೆಲೆಸಿತ್ತು (ನಿರ್ಗಮನ ಎಂಬ ನಕ್ಷೆಯನ್ನು ನೋಡಿರಿ). ಹಿಬ್ರೂ ಪದವಾದ ಶೂರ್ ಎಂಬುದರ ಅರ್ಥವು 'ಕೋಟೆಯ ಗೋಡೆ' ಎಂಬುದಾಗಿದೆ.

*ಮಾರಾ* (15:23): ಈ ಪದದ ಅರ್ಥವು ಹಿಬ್ರೂ ಭಾಷೆಯಲ್ಲಿ 'ಕಹಿತನ' ಅಥವಾ 'ಕಹಿ' ಎಂಬುದಾಗಿದೆ.

*ನಿನ್ನನ್ನು ಸ್ವಸ್ಥಪಡಿಸುವ ಯೆಹೋವನು ನಾನೇ ಆಗಿದ್ದೇನೆ* (15:26): ಇದರ ಹಿಬ್ರೂ ಹೇಳಿಕೆಯು ಯಾಹ್ವೆ ರಾಫಾ ಎಂಬುದಾಗಿದೆ.

*ಏಲೀಮಿಗೆ* (15:27): ಏಲೀಮ್ ಮಾರಾದ ಆಗ್ನೇಯಕ್ಕೆ ಅತೀ ಸಮೀಪದಲ್ಲಿದ್ದ ಸ್ಥಳವಾಗಿತ್ತು. ಈ ಹೆಸರು ಬಹುಶಃ ಒಂದು ರೀತಿಯ ಮರಗಳನ್ನು ಉಲ್ಲೇಖಿಸುತ್ತದೆ.

*ಸೀನ್ ಮರುಭೂಮಿ* (16:1): ಹಾಗಾಗಿ ಇಸ್ರಾಯೇಲರು ಸಿನಾಯಿ ಪರ್ವತದ ಕಡೆಗೆ ಆಗ್ನೇಯ ದಿಕ್ಕಿಗೆ ತಮ್ಮ ಪ್ರಯಾಣವನ್ನು ಮುಂದುವರೆಸಿದರು.

*ಎರಡನೆಯ ತಿಂಗಳಿನ ಹದಿನೈದನೆಯ ದಿನದಲ್ಲಿ* (16:1): ಈಗ ನಿರ್ಗಮನದ ನಂತರ ಸರಿಯಾಗಿ ಒಂದು ತಿಂಗಳು ಕಳೆದಿತ್ತು.

*ಯೆಹೋವನ ಮಹಿಮೆಯು ಮೇಘದಲ್ಲಿ ಪ್ರತ್ಯಕ್ಷವಾಯಿತು* (16:10): ವಿಮೋ. 24:15–17 ರೊಂದಿಗೆ ಹೋಲಿಸಿರಿ.

*ಓಮೆರ* (16:16): ಒಂದು ಓಮೆರವು ಬಹುಶಃ 2 ಲೀಟರ್‌ನಷ್ಟು ಆಗಿದ್ದಿರಬಹುದು.

*ಸಬ್ಬತ್* (16:23): ಸತ್ಯವೇದದಲ್ಲಿ ಮೊಟ್ಟಮೊದಲ ಬಾರಿಗೆ ಇಲ್ಲಿ ಸಬ್ಬತ್ ಎಂಬ ಪದವು ಕಂಡುಬರುತ್ತದೆ (ಆದರೆ ಆದಿ. 2:2–3 ರೊಂದಿಗೆ ಹೋಲಿಸಿರಿ, ಅಲ್ಲಿ *ಏಳನೆಯ ದಿನದಲ್ಲಿ ದೇವರು ತಾನು ಮಾಡಿದ್ದ ತನ್ನ ಕೆಲಸವನ್ನು ಮುಗಿಸಿದ ಮೇಲೆ ವಿಶ್ರಮಿಸಿಕೊಂಡನು. ಅನಂತರ ದೇವರು ಏಳನೆಯ ದಿನವನ್ನು ಆಶೀರ್ವದಿಸಿ ಅದನ್ನು ಪವಿತ್ರ ದಿನವನ್ನಾಗಿ ಮಾಡಿದನು* ಎಂಬುದಾಗಿ ಹೇಳಲ್ಪಟ್ಟಿದೆ). ಇದರ ಹಿಬ್ರೂ ಪದದ ಅರ್ಥವು 'ವಿಶ್ರಮಿಸು' ಎಂಬುದಾಗಿದೆ.

*ಮನ್ನ* (16:31): ಮನ್ನ ಅಂದರೆ ಹಿಬ್ರೂ ಭಾಷೆಯಲ್ಲಿ 'ಅದು ಏನು?' ಎಂಬುದಾಗಿದೆ.

*(ಸಾಕ್ಷಿಯ ಮುಂದೆ) ಸಾಕ್ಷಿಯಾಗಿ* (16:34): ಇದು ಮುಂಬರಲಿದ್ದ 'ಒಡಂಬಡಿಕೆಯ ಮಂಜೂಷವನ್ನು' ಸೂಚಿಸುತ್ತದೆ, ಅದು ಕಲ್ಲಿನ ಹಲಿಗೆಗಳ ಮೇಲೆ ಬರೆಯಲಾಗಿದ್ದ ದಶಾಜ್ಞೆಗಳನ್ನು ಹೊಂದಿದ್ದರಿಂದ 'ಸಾಕ್ಷಿ' ಎಂಬುದಾಗಿಯೂ ಸಹ ಕರೆಯಲ್ಪಡುತ್ತಿತ್ತು. ಕನ್ನಡ ಎನ್.ಐ.ಬಿ.ವಿ. ಅನುವಾದವು ಈ ಹಿಬ್ರೂ ಹೇಳಿಕೆಯನ್ನು ತಪ್ಪು ತಿಳಿದಿದೆ.

**ಈ. ಪ್ರಶ್ನೆಗಳು**

1. ಮಾರಾದ ಬಳಿಯಲ್ಲಿದ್ದ ನೀರು ಕಹಿಯಾದದ್ದೆಂದು ಇಸ್ರಾಯೇಲರು ಕಂಡುಕೊಂಡಾಗ ಅವರು ಏನು ಮಾಡಿದರು?
2. ಇಸ್ರಾಯೇಲರು ಮಾರಾ ಎಂಬ ಸ್ಥಳವನ್ನು ಬಿಟ್ಟ ನಂತರ ಎಲ್ಲಿ ಪಾಳೆಯವನ್ನು ಹಾಕಿದರು?
3. ಆರನೆಯ ದಿನದಲ್ಲಿ ಅವರು ಎರಡರಷ್ಟು ಮನ್ನವನ್ನು ಕೂಡಿಸಿಕೊಳ್ಳಬೇಕೆಂದು ಇಸ್ರಾಯೇಲರಿಗೆ ಯಾಕೆ ಹೇಳಲಾಯಿತು?
4. ಇಸ್ರಾಯೇಲರಿಗೆ ಮರುಭೂಮಿಯಲ್ಲಿ ರೊಟ್ಟಿ ಮತ್ತು ಮಾಂಸವನ್ನು ದೇವರು ಒದಗಿಸಿದ್ದಕ್ಕೆ ಮೋಶೆಗೆ ಯಾವ ಕಾರಣವನ್ನು ಕೊಟ್ಟನು?
5. ಇಸ್ರಾಯೇಲರ ಹಾಗೂ ಮನ್ನದ ಕುರಿತಾದ ಕಥೆಯು ಅವಿಧೇಯತೆಯ ಎರಡು ಸನ್ನಿವೇಶಗಳನ್ನು ಒಳಗೊಂಡಿದೆ. ಹೇಗೆ ಎಂಬುದನ್ನು ವಿವರಿಸಿರಿ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಮಾರಾ ಎಂಬಲ್ಲಿ ಇಸ್ರಾಯೇಲರ ಸನ್ನಿವೇಶವನ್ನು ಮನಸ್ಸಿನಲ್ಲಿಟುಕೊಂಡು *ಅಲ್ಲಿ ಆತನು ಅವರಿಗಾಗಿ ಒಂದು ನಿಯಮವನ್ನೂ ಒಂದು ಶಾಸನವನ್ನೂ ಮಾಡಿದನು* (15:25) ಎಂಬ ವಾಕ್ಯವನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?
2. ಮೇಲಿರುವ 5 ನೇ ಪ್ರಶ್ನೆಯಲ್ಲಿ, ಮನ್ನಕ್ಕೆ ಸಂಬಂಧಪಟ್ಟಂತೆ ಎರಡು ಅವಿಧೇಯತೆಯ ಸನ್ನಿವೇಶಗಳನ್ನು ಕಂಡಿದ್ದೇವೆ. ಈ ಎರಡೂ ಸನ್ನಿವೇಶಗಳಲ್ಲಿ 'ಭರವಸೆ' ಎಂಬುದು 'ಅವಿಧೇಯತೆಗೆ' ವಿರುದ್ಧಾರ್ಥ ಪದವಾಗಿ ತೋರುತ್ತದೆ. ಹೇಗೆ ಎಂಬುದನ್ನು ವಿವರಿಸಿರಿ.

**ವಿಮೋಚನಕಾಂಡ ಅಧ್ಯಯನ 16: ನೀರು ಮತ್ತು ಅಮಾಲೇಕ್ಯರು**

**ಅ. ಪರಿಚಯ**

ಇಸ್ರಾಯೇಲರ ಪ್ರಯಾಣವು ಸೀನ್ ಮರುಭೂಮಿಯಿಂದ ರೆಫೀದೀಮಿಗೆ ಮುಂದುವರೆಯಿತು. ಆದರೆ ಅವರು ಅಲ್ಲಿ ಎಲ್ಲಿಯೂ ನೀರನ್ನು ಕಾಣಲಿಲ್ಲ, ಹಾಗಾಗಿ ಮತ್ತೊಮ್ಮೆ ಜನರು ಮೋಶೆಗೆ ದೂರನ್ನು ಸಲ್ಲಿಸಿ ಆತನೊಂದಿಗೆ ಜಗಳವಾಡಿದರು. ಮೋಶೆಯು ದೇವರ ಕಡೆಗೆ ತಿರುಗಿಕೊಂಡನು. ಮೋಶೆಯು ತನ್ನ ಕೋಲಿನಿಂದ ಬಂಡೆಗೆ ಹೊಡೆಯುವಾಗ *ಜನರು ಕುಡಿಯುವಂತೆ ನೀರು ಹೊರಗೆ ಬರುವುದು* ಎಂದು ದೇವರು ಆತನಿಗೆ ಹೇಳಿದನು (ವಿಮೋ. 17:6).

ಮರುಭೂಮಿಯ ಜನರಾದ ಅಮಾಲೇಕ್ಯರು ರೆಫೀದೀಮಿನಲ್ಲಿ ಇಸ್ರಾಯೇಲರ ಮೇಲೆ ದಾಳಿ ಮಾಡಿದರು. ಯೆಹೋಶುವನು ಜನರ ಒಂದು ಗುಂಪನ್ನು ಆರಿಸಿಕೊಂಡು ವೈರಿಯೊಂದಿಗೆ ಹೋರಾಡುವಂತೆ ಮೋಶೆಯು ಆತನಿಗೆ ಹೇಳಿದನು. ಅದೇ ಸಮಯದಲ್ಲಿ ಮೋಶೆ, ಆರೋನ ಮತ್ತು ಹೂರರು ಗುಡ್ಡದ ಮೇಲೆ ನಿಂತರು. *ಮೋಶೆಯು ತನ್ನ ಕೈಯನ್ನು ಎತ್ತಿದಾಗ ಇಸ್ರಾಯೇಲ್ಯರು ಜಯಿಸಿದರು. ಅವನು ತನ್ನ ಕೈಯನ್ನು ಇಳಿಸಿದಾಗ ಅಮಾಲೇಕ್ಯರು ಜಯಿಸಿದರು* (ವಿಮೋ. 17:11). ಸೂರ್ಯ ಮುಳುಗುವುದರೊಳಗಾಗಿ ಯೆಹೋಶುವನು ಅಂತಿಮವಾಗಿ ಯುದ್ಧವನ್ನು ಜಯಿಸಿದ್ದನು. *ಮೋಶೆಯು ಬಲಿಪೀಠವನ್ನು ಕಟ್ಟಿ, ಅದಕ್ಕೆ 'ಯೆಹೋವ ನಿಸ್ಸೀ' ಎಂದು ಹೆಸರಿಟ್ಟನು* (ವಿಮೋ. 17:15).

**ಆ. ಓದಿರಿ**

ವಿಮೋ. 17:1–16

**ಇ. ಟಿಪ್ಪಣಿ**

*ರೆಫೀದೀಮಿನಲ್ಲಿ ... ಮಸ್ಸಾ ಮೆರಿಬಾ* (ವ. 1, 7): ಈ ಸ್ಥಳದ ನಿಖರವಾದ ಜಾಗವು ತಿಳಿದು ಬಂದಿಲ್ಲ. *ರೆಫೀದೀಮ್* ಎಂದರೆ ಹಿಬ್ರೂ ಭಾಷೆಯಲ್ಲಿ 'ಬಯಲು ಸೀಮೆ' ಅಥವಾ 'ವಿಶ್ರಾಂತಿಯ ಸ್ಥಳ' ಎಂಬುದಾಗಿರಬಹುದು. *ಮಸ್ಸಾ* ಅಂದರೆ 'ಪರೀಕ್ಷಿಸುವುದು' ಮತ್ತು *ಮೆರಿಬಾ* ಅಂದರೆ 'ಜಗಳವಾಡುವುದು'. ಕಾದೇಶ್ ಬರ್ನಿಯದ ಸಮೀಪದಲ್ಲಿ ಮೆರಿಬಾ ಎಂಬ ಇನ್ನೊಂದು ಸ್ಥಳವಿತ್ತು ಎಂಬುದನ್ನು ಗಮನಿಸಿರಿ (ನೋಡಿರಿ ಅರಣ್ಯಕಾಂಡ 20:1–13; ಧರ್ಮೋ. 32:51).

*ಅಮಾಲೇಕ್ಯರು* (ವ. 8): ಇವರು ಕಾನಾನಿನ ದಕ್ಷಿಣದ ಅಂಚಿನ ಭಾಗದಲ್ಲಿ, ಅಂದರೆ ನೆಗೆವ್‌ನಲ್ಲಿ, ಮುಖ್ಯವಾಗಿ ಜೀವಿಸುತ್ತಿದ್ದ ಒಂದು ಅಲೆಮಾರಿ ಜನರಾಗಿದ್ದರು.

*ಯೆಹೋಶುವ* (ವ. 9): ಯೆಹೋಶುವನ ಕುರಿತು ಇಲ್ಲಿ ಮೊಟ್ಟಮೊದಲ ಬಾರಿಗೆ ಉಲ್ಲೇಖಿಸಲಾಗಿದೆ. ಆತನು ನಂತರ ಮೋಶೆಯ ಸಹಾಯಕ ಮತ್ತು ಉತ್ತರಾಧಿಕಾರಿಯಾದನು.

*ಹೂರ* (ವ. 10): ಮೋಶೆ ಮತ್ತು ಯೆಹೋಶುವನು ಸಿನಾಯಿ ಪರ್ವತದ ಮೇಲೆ ಹೋದಾಗ ಇವನನ್ನೂ ಮತ್ತು ಆರೋನನನ್ನೂ ಇಸ್ರಾಯೇಲರ ನಡುವಿನ ವ್ಯಾಜ್ಯಗಳ ಮೇಲೆ ಮೇಲ್ವಿಚಾರಣೆಯನ್ನು ವಹಿಸಿದ್ದನು (ವಿಮೋ. 24:13–14). ಈತನು ದೇವದರ್ಶನ ಗುಡಾರ ಮತ್ತು ಅದರ ಸಾಮಾಗ್ರಿಗಳನ್ನು ಮಾಡುವುದರ ಜವಾಬ್ದಾರಿಯನ್ನು ಹೊತ್ತ ಬೆಚಲೇಲ ಎಂಬುವವನ ಮುತ್ತಜ್ಜನೂ ಸಹ ಆಗಿರಬಹುದು (ವಿಮೋ. 31:1–11).

*ಕೈಯನ್ನು ಎತ್ತಿದಾಗ* (ವ. 11): ಇದು ಯುದ್ಧದಲ್ಲಿ ದೇವರ ಸಹಾಯಕ್ಕಾಗಿ ಮೊರೆಯಿಡುವುದರ ಸಂಕೇತವಾಗಿತ್ತು.

*ಗ್ರಂಥದಲ್ಲಿ* (ವ. 14): ಒಂದು ಸುರುಳಿಯು (ಗ್ರಂಥವು) ಬರವಣಿಗೆಗೆ ಸೂಕ್ತವಾಗಲು ಚರ್ಮದಿಂದ ಅಥವಾ ಪ್ಯಾಪಿರಸ್ ಎಲೆಯಿಂದ ಮಾಡಲ್ಪಟ್ಟ ಒಂದು ಉದ್ದವಾದ ಪಟ್ಟಿಯಾಗಿತ್ತು. ಪಠ್ಯವನ್ನು ಉದ್ದವಾಗಿ ಬರೆದು ನಂತರ ಸುರುಳಿಯನ್ನು ಸುತ್ತಲಾಗುತ್ತಿತ್ತು. ಕನ್ನಡ ಎನ್.ಐ.ಬಿ.ವಿ.ಯ ಅನುವಾದವು (ಗ್ರಂಥದಲ್ಲಿ) ತಪ್ಪು ಗ್ರಹಿಕೆಯನ್ನು ಕೊಡುವಂತದ್ದಾಗಿದೆ, ಯಾಕೆಂದರೆ 'ಗ್ರಂಥ ಅಥವಾ ಪುಸ್ತಕವು' ಕ್ರೈಸ್ತ ಯುಗದವರೆಗೆ ಬಳಕೆಗೆ ಬಂದಿರಲಿಲ್ಲ ಎಂಬುದು ನಮಗೆ ತಿಳಿದದೆ.

*ಯೆಹೋವ ನಿಸ್ಸಿ*(ವ. 15): ಇಂಗ್ಲಿಶ್ ಭಾಷೆಯಲ್ಲಿ *ದ ಲಾರ್ಡ್ ಈಸ್ ಮೈ ಬ್ಯಾನರ್* ಅಂದರೆ *ಯೆಹೋವನು ನನ್ನ ಜಯಧ್ವಜ* ಎಂಬುದಾಗಿದೆ. ಇದರ ಹಿಬ್ರೂ ಹೇಳಿಕೆಯು *ಯಾಹ್ವೆ ನೆಸ್* ಎಂಬುದಾಗಿದೆ. ಕನ್ನಡ ಅನುವಾದಕರು 'ಧ್ವಜ' ಎಂಬ ಹಿಬ್ರೂ ಪದವನ್ನು ಅನುವಾದಿಸದೆ ಕೈಬಿಟ್ಟಿದ್ದಾರೆ. ಬಹುಶಃ 'ಧ್ವಜ' ಎಂಬುದು ಮೋಶೆಯ ಎತ್ತಿದ ಕೈಯನ್ನು ಉಲ್ಲೇಖಿಸುತ್ತದೆ. ದೇವರು ಅಮಾಲೇಕ್ಯರ ವಿರುದ್ಧ ತನ್ನ ಜನರನ್ನು ರಕ್ಷಿಸಿದಾಗ ದೇವರು ಪ್ರಕಟಿಸಿದ ಶಕ್ತಿಗೆ ಇದು ಸಾಕ್ಷಿಯಾಗಿತ್ತು.

**ಈ. ಪ್ರಶ್ನೆಗಳು**

1. ದೇವರು ಬಂಡೆಯಿಂದ ನೀರನ್ನು ಹೊರತಂದ ಸ್ಥಳಕ್ಕೆ ಏನೆಂದು ಕರೆಯಲಾಯಿತು?

2. ಇಸ್ರಾಯೇಲರು ಮಸ್ಸಾ (ಪರೀಕ್ಷೆ) ಎಂಬಲ್ಲಿ ಯೆಹೋವನನ್ನು ಯಾವ ರೀತಿಯಲ್ಲಿ ಪರೀಕ್ಷಿಸಿದರು?

3. ಅಮಾಲೇಕ್ಯರ ವಿರುದ್ಧ ಯುದ್ಧವು ನಡೆಯುತ್ತಿರುವಲ್ಲಿ ಮೋಶೆಯ ಕೈಗಳು ಆಯಾಸಗೊಂಡಾಗ ಆರೋನ ಮತ್ತು ಹೂರನು ಏನು ಮಾಡಿದರು?

4. ಅಮಾಲೇಕ್ಯರ ವಿರುದ್ಧ ನಡೆದ ಯುದ್ಧದ ನಂತರ ದೇವರು ಮೋಶೆಗೆ ಸುರುಳಿಯ ಮೇಲೆ ಏನನ್ನು ಬರೆಯಲು ಹೇಳಿದನು?

**ಊ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಹಿಂದಿನ ಅಧ್ಯಯನದಲ್ಲಿ ದೇವರು ಇಸ್ರಾಯೇಲರಿಗೆ ಮರುಭೂಮಿಯಲ್ಲಿ ನೀರು, ಆರೋಗ್ಯ ಮತ್ತು ಆಹಾರವನ್ನು ಹೇಗೆ ಒದಗಿಸಿದನು ಎಂಬುದನ್ನು ಕಂಡೆವು. ಈ ಅಧ್ಯಯನದಲ್ಲಿಯೂ ಸಹ ದೇವರು ಮತ್ತೊಮ್ಮೆ ಹೇಗೆ ಅವರಿಗೆ ನೀರನ್ನು ಒದಗಿಸಿದನು ಎಂಬುದನ್ನು ನೋಡಿದ್ದೇವೆ. ನಂತರ ಆತನು ದಾಳಿ ಮಾಡಿದ ವೈರಿಗಳ ವಿರುದ್ಧ ಅವರಿಗೆ ಜಯವನ್ನು ಕೊಟ್ಟನು. ನಿಮ್ಮ ಕುರಿತು ಏನು? ಗತಕಾಲದಲ್ಲಿ ದೇವರು ನಿಮ್ಮ ಅಗತ್ಯತೆಗಳನ್ನು, ಬಹುಶಃ ಅದ್ಭುತಕರವಾಗಿ, ಹೇಗೆ ಸಂಧಿಸಿದನು ಎಂಬುದರ ಕುರಿತು ಹಂಚಿಕೊಳ್ಳಿರಿ.

2. ಮರುಭೂಮಿಯಲ್ಲಿ ಇಸ್ರಾಯೇಲರು ಗೊಣಗುಟ್ಟುವವರಾಗಿದ್ದರು. ಅವರು ಮೋಶೆಯ ಮತ್ತು ದೇವರ ವಿರುದ್ಧ ಗೊಣಗುಟ್ಟಿದರು.

    1) ನಿಮಗೆ ಗೊಣಗುವ ಸಮಸ್ಯೆ ಇದೆಯೋ? ಯಾವ ರೀತಿಯಲ್ಲಿ? ನೀವು ಯಾವುದರ ಕುರಿತು ಗೊಣಗುತ್ತೀರಿ? ನಿಮ್ಮ ಗುಂಪುಗಳಲ್ಲಿ ಹಂಚಿಕೊಳ್ಳಿರಿ.

    2) ಪ್ರಪಂಚದಾದ್ಯಂತ ಮತ್ತು ದಕ್ಷಿಣ ಭಾರತದಲ್ಲಿಯೂ ಸಹ ಅನೇಕ ಸಭೆಗಳಲ್ಲಿ ಗೊಣಗುವುದು ಮತ್ತು ನಕರಾತ್ಮಕವಾದ ಮನೋಭಾವನೆಗಳು ಸಾಮಾನ್ಯವಾಗಿ ಕಂಡುಬರುವ ಸಮಸ್ಯೆಗಳಾಗಿವೆ. ಉದಾಹರಣೆಗಳನ್ನು ಕೊಡಿರಿ. ದಕ್ಷಿಣ ಭಾರತದಲ್ಲಿ ದೇವಜನರ ನಡುವೆ ಇರುವ ನಕರಾತ್ಮಕ ಮನೋಭಾವನೆಗಳನ್ನು ಸಂಭೋದಿಸಲು ಏನು ಮಾಡಬಹುದು? ನಿಮ್ಮ ಗುಂಪುಗಳಲ್ಲಿ ನಿಮ್ಮ ಸಲಹೆಗಳನ್ನು ಹಂಚಿಕೊಳ್ಳಿರಿ.

**ವಿಮೋಚನಕಾಂಡ ಅಧ್ಯಯನ 17: ಇತ್ರೋವನು ಮೋಶೆಯನ್ನು ಸಂದರ್ಶಿಸಿದ್ದು**

**ಅ. ಪರಿಚಯ**

ಮೋಶೆಯ ಮಾವನಾದ (ರೂವೇಲ ಎಂದೂ ಸಹ ಕರೆಯಲ್ಪಡುವ) ಇತ್ರೋವನು ಮೋಶೆಯ ಕುಟುಂಬದೊಂದಿಗೆ ಅರಣ್ಯದಲ್ಲಿದ್ದ ಇಸ್ರಾಯೇಲ್ ಜನರನ್ನು ಸಂಧಿಸಲು ಬಂದನು. ಮೋಶೆಯು ಬೆಳಗಿನಿಂದ ಸಂಜೆಯವರೆಗೆ ಜನರಿಗೆ ನ್ಯಾಯಾಧೀಶನಾಗಿ ಕುಳಿತಿದ್ದನ್ನು ಕಂಡಾಗ ಅತ್ಯಂತ ಆಶ್ಚರ್ಯಪಟ್ಟು ಹೀಗೆ ಕೇಳಿದನು:*ಇದೇನು ಜನರಿಗೆ ನೀನು ಮಾಡುವದು? ಯಾಕೆ ನೀನೊಬ್ಬನೇ ಕೂತಿರಲಾಗಿ ಜನರು ಬೆಳಗಿನಿಂದ ಸಂಜೆಯವರೆಗೆ ನಿನ್ನ ಬಳಿಯಲ್ಲಿ ನಿಂತಿದ್ದಾರೆ?* (ವಿಮೋ. 18:14). ನಂತರ ಮೋಶೆಯು ಮಾಡುತ್ತಿರುವುದು ಸರಿಯಲ್ಲ ಎಂದು ಆತನು ಹೇಳಿದನು. ಬದಲಾಗಿ ಮೋಶೆಯು ಎಲ್ಲಾ ಸಾಮಾನ್ಯವಾದ ನ್ಯಾಯತೀರ್ಪಿನ ವಿಚಾರಗಳನ್ನು ನಿರ್ವಹಿಸಶಕ್ತರಾದ ನ್ಯಾಯಾಧೀಶರುಗಳಿಗೆ ತನ್ನ ಕೆಲಸದ ಹೆಚ್ಚಿನ ಭಾಗವನ್ನು ವಹಿಸಿಕೊಡಬೇಕೆಂದು ಹೇಳಿದನು. ಆಗ ಮಾತ್ರ ಮೋಶೆಯು ತನ್ನ ಕಾರ್ಯಭಾರವನ್ನು ನಿರ್ವಹಿಸಲು ಸಾಧ್ಯವಾಗುವುದು. ಅದಲ್ಲದೆ, ಜನರು ತಮ್ಮ ಸಮಸ್ಯೆಗಳಿಗೆ ಬೇಗನೆ ಪರಿಹಾರವನ್ನು ಕಂಡುಕೊಳ್ಳುವುದರಲ್ಲಿ ಸಂತೋಷಪಡುವರು.

**ಆ. ಓದಿರಿ**

ವಿಮೋ. 18: 1–27

**ಇ. ಟಿಪ್ಪಣಿ**

*ಗೆರ್ಷೋಮ ... ಎಲಿಯೇಜರ್* (ವ. 3–4): ಗೆರ್ಷೋಮ ಎಂಬುದು 'ಇಲ್ಲಿರುವ ಒಬ್ಬ ಪರದೇಶಿ' ಎಂಬ ಹಿಬ್ರೂ ಹೇಳಿಕೆಯಂತಿದೆ (2:22 ನ್ನೂ ಸಹ ನೋಡಿರಿ). ಮೋಶೆಯ ಎರಡನೆಯ ಮಗ, ಅಂದರೆ ಎಲಿಯೇಜರನ ಹೆಸರನ್ನು ಇಲ್ಲಿ ಮೊದಲ ಬಾರಿಗೆ ಕಾಣುತ್ತೇವೆ. ಆತನ ಹೆಸರಿನ ಅರ್ಥವು 'ದೇವರು ಸಹಾಯಕನು' ಎಂಬುದಾಗಿದೆ ಮತ್ತು ಹಳೆ ಒಡಂಬಡಿಕೆಯ ಕಾಲದಲ್ಲಿ ಇದು ಒಂದು ಸಾಮಾನ್ಯವಾದ ಹೆಸರಾಗಿತ್ತು. ಆದಿಕಾಂಡದಲ್ಲಿ ಅಬ್ರಹಾಮನ ಸೇವಕರಲ್ಲಿ ಮುಖ್ಯಸ್ಥನಾದ 'ದಮಸ್ಕದ ಎಲಿಯೇಜರನನ್ನು' ಕಾಣುತ್ತೇವೆ.

*ದೇವರ ಬೆಟ್ಟ* (ವ. 5): ಸಿನಾಯಿ ಪರ್ವತ

*ರೊಟ್ಟಿ ತಿನ್ನುವುದಕ್ಕಾಗಿ* (ವ. 12): ಒಟ್ಟಾಗಿ ಊಟ ಮಾಡುವುದು ಸ್ನೇಹ ಮತ್ತು ಬಾಂಧವ್ಯದ ಸಂಕೇತವಾಗಿತ್ತು.

*ದೇವರ ವಿಷಯದಲ್ಲಿ ಕೇಳುವುದಕ್ಕಾಗಿ* (ವ. 15): ಜನರು ದೇವರ ಮಾರ್ಗದರ್ಶನಕ್ಕಾಗಿ ಮತ್ತು ಸಮಸ್ಯೆಗಳ ಪರಿಹಾರಕ್ಕಾಗಿ ಮೋಶೆಯ ಬಳಿ ಬರುತ್ತಿದ್ದರು.

**ಈ. ಪ್ರಶ್ನೆಗಳು**

1. ಇತ್ರೋ ಮತ್ತು ಮೋಶೆಯ ನಡುವಿನ ಸಂದರ್ಶನವನ್ನು ವಿವರಿಸಿರಿ.
2. ಮೋಶೆಯು ನಿರ್ಗಮನದ ಘಟನೆಯ ಕುರಿತು ತನ್ನ ಮಾವನಿಗೆ ಹೇಳಿದ ನಂತರ ಆತನ ಮಾವನು ಏನನ್ನು ತಿಳಿದುಕೊಂಡನು?
3. ಮೋಶೆಯು ಯಾಕೆ ಬೆಳಗಿನಿಂದ ಸಂಜೆಯವರೆಗೆ ಜನರಿಗೆ ನ್ಯಾಯಾಧೀಶನಾಗಿ ಕುಳಿತಿದ್ದನು ಎಂದು ಆತನ ಮಾವನು ಕೇಳಿದಾಗ ಮೋಶೆಯು ಏನೆಂದು ಉತ್ತರಿಸಿದನು?
4. ಮೋಶೆಯು ತನ್ನ ಕಾರ್ಯವನ್ನು ನಿರ್ವಹಿಸಿದ ಕ್ರಮದ ಕುರಿತು ಇತ್ರೋವನು ಏನೆಂದು ಟೀಕಿಸಿದನು?
5. ಮೋಶೆಯ ಕಾರ್ಯವನ್ನು ಮರು–ರಚಿಸಲು ಇತ್ರೋವನ ಸಲಹೆಗಳು ಏನಾಗಿದ್ದವು?
6. ಮೋಶೆಯು ತನ್ನ ಮಾವನ ಸಲಹೆಗೆ ಹೇಗೆ ಪ್ರತಿಕ್ರಿಯಿಸಿದನು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಇತ್ರೋವನು ಮೋಶೆಯನ್ನು ಮರುಭೂಮಿಯಲ್ಲಿ ಸಂಧಿಸಲು ಯಾಕೆ ಬಂದನು ಎಂದು ನೀವು ಆಲೋಚಿಸುತ್ತೀರಿ?
2. ಇತ್ರೋವನು ಕೇವಲ ಬುದ್ಧಿವಂತ ವ್ಯಕ್ತಿ ಮಾತ್ರವಾಗಿರದೆ ದೈವ–ಭಯವುಳ್ಳ ಮನುಷ್ಯನೂ ಸಹ ಆಗಿದ್ದನು ಎಂಬುದನ್ನು ಈ ಕಥೆಯು ತೋರಿಸುತ್ತದೆ. ಹೇಗೆ ಎಂಬುದನ್ನು ವಿವರಿಸಿರಿ.
3. ವಿಮೋ. 18 ನೇ ಅಧ್ಯಾಯವು ನಾಯಕತ್ವದ ಕುರಿತು ಶ್ರೇಷ್ಟ ಪಾಠಗಳನ್ನು ಹೊಂದಿದೆ. ನಾವು ಇಲ್ಲಿ ಎರಡು ಮುಖ್ಯ ನಾಯಕತ್ವದ ಸಮಸ್ಯೆಗಳು ಸಂಬೋಧಿಸಲ್ಪಟ್ಟಿರುವುದನ್ನು ಕಾಣುತ್ತೇವೆ:

    1) ಕೆಲಸವನ್ನು ಇತರರಿಗೆ ವಹಿಸುವುದು: ಅತ್ಯಂತ ಪ್ರಾಮುಖ್ಯವಾದ ಅಂಶಗಳ ಒಂದು ಪಟ್ಟಿಯನ್ನು ಮಾಡಿರಿ.

    2) ನಾಯಕತ್ವದ ಅರ್ಹತೆಗಳು: ಇತ್ರೋವನ ಸಲಹೆಗಳ ಒಂದು ಪಟ್ಟಿಯನ್ನು ಮಾಡಿರಿ.

4. ಮೇಲಿನ ಪ್ರಶ್ನೆಯ ಉತ್ತರಗಳ ಬೆಳಕಿನಲ್ಲಿ ನಿಮ್ಮ ಕುರಿತು ಹಾಗೂ ನಿಮ್ಮ ಸಭೆಯ ಕುರಿತು ನೋಡಿರಿ.

**ವಿಮೋಚನಕಾಂಡ ಅಧ್ಯಯನ 18: ಸಿನಾಯಿ ಪರ್ವತದ ಬಳಿಯಲ್ಲಿ**

**ಅ. ಪರಿಚಯ**

ಇಸ್ರಾಯೇಲರು ಈಜಿಪ್ಟನ್ನು ಬಿಟ್ಟ ಮೂರು ತಿಂಗಳುಗಳ ನಂತರ ಸಿನಾಯಿ ಮರುಭೂಮಿಗೆ ಬಂದು ತಲುಪಿದರು ಮತ್ತು ಅವರು ಬೆಟ್ಟಕ್ಕೆ ಎದುರಾಗಿ ಡೇರೆಗಳನ್ನು ಹಾಕಿಕೊಂಡರು (ವ. 2). ವಿಮೋಚನಕಾಂಡ ಪುಸ್ತಕದ ಉಳಿದೆಲ್ಲಾ ಭಾಗಕ್ಕೂ ಘಟನಾಸ್ಥಳವು ಇದೇ ಆಗಿರುತ್ತದೆ.

ವಿಮೋಚನಕಾಂಡದ ಈ ಭಾಗದಲ್ಲಿರುವ ಘಟನಾನುಕ್ರಮಣಿಕೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟಕರವಾಗಿದೆ (ಅಧ್ಯಾಯಗಳು 19–31). ಈ ಪಠ್ಯವನ್ನು ಸೂಕ್ಷ್ಮವಾಗಿ ಓದುವಾಗ ಮೋಶೆಯು ಪರ್ವತವನ್ನು ಐದು ಬಾರಿ ಏರಿದನು ಎಂಬುದನ್ನು ಸೂಚಿಸುವುದಾಗಿ ತೋರುತ್ತದೆ (ನಿಮ್ಮ ಸತ್ಯವೇದಗಳಲ್ಲಿ ಉಲ್ಲೇಖಗಳನ್ನು ನೋಡಿರಿ):

1. ಮೋಶೆಯು ಪರ್ವತದ ಮೇಲೆ ಹೋದಾಗ ಜನರಿಗಾಗಿ ದೇವರಿಂದ ಒಂದು ಸಂದೇಶವನ್ನು ಪಡೆದುಕೊಂಡನು. ಆತನು ಕೆಳಗಿಳಿದು ಬಂದು ಹಿರಿಯರನ್ನು ಕರೆಯಿಸಿ ದೇವರು ಹೇಳಿದ ಸಂದೇಶವನ್ನು ತಿಳಿಸಿದನು. ಇಸ್ರಾಯೇಲರು ದೇವರಿಗೆ ವಿಧೇಯರಾಗುವರೆಂದು ಪ್ರಮಾಣ ಮಾಡಿದರು (19:3–8).

2. ಮೋಶೆಯು ಹಿಂತಿರುಗಿ ದೇವರ ಬಳಿಗೆ ಬರಲು ಪರ್ವತವನ್ನೇರಿದನು. ಜನರು ತನ್ನ ಸ್ವರವನ್ನು ಕೇಳುವಂತೆ ತಾನು ದಟ್ಟವಾದ ಮೇಘದಲ್ಲಿ ಬಂದು ಮಾತನಾಡುವೆನೆಂದು ದೇವರು ಮೋಶೆಗೆ ಹೇಳಿದನು. ಜನರು ಮಾಡಿದ ಪ್ರಮಾಣವನ್ನು ಮೋಶೆಯು ತಿಳಿಸಿದನು. ಮೂರನೆಯ ದಿನದಲ್ಲಿ ಯೆಹೋವನ ದರ್ಶನಕ್ಕೆ ಸಿದ್ಧಗೊಳ್ಳುವಂತೆ ಜನರ ಶುದ್ಧೀಕರಣದ ಕುರಿತು ದೇವರು ಮೋಶೆಗೆ ಆಜ್ಞಾಪಿಸಿದನು. ಮೋಶೆಯು ಪರ್ವತದಿಂದ ಇಳಿದು ಬಂದನು (19:8–14).

3. ಜನರು ಶುದ್ಧೀಕರಿಸಲ್ಪಟ್ಟರು. ಮೂರನೆಯ ದಿನ ಬೆಳಿಗ್ಗೆ ಯೆಹೋವನು ಗುಡುಗಿನ ಮೇಘದಲ್ಲಿಯೂ ಮತ್ತು ತುತ್ತೂರಿಯ ಮಹಾಧ್ವನಿಯೊಂದಿಗೂ ಕಾಣಿಸಿಕೊಂಡನು. ಮೋಶೆಯು ಯೆಹೋವನನ್ನು ಭೇಟಿಯಾಗಲು ಪರ್ವತದ ಮೇಲೆ ಹೋಗುತ್ತಾನೆ. ಮೋಶೆಯು ಕೆಳಗೆ ಹೋಗಿ ಜನರನ್ನು ಎಚ್ಚರಿಸಿ ತನ್ನೊಂದಿಗೆ ಆರೋನನನ್ನು ಕರೆತರಲು ಯೆಹೋವನು ಹೇಳುತ್ತಾನೆ. ಮೋಶೆಯು ಕೆಳಗೆ ಬಂದು ಜನರಿಗೆ ತಿಳಿಸುತ್ತಾನೆ (19:14–25).

   ಅಧ್ಯಾಯ 20 ರ ಮೊದಲ ಭಾಗವು ದಶಾಜ್ಞೆಗಳನ್ನು ಒಳಗೊಂಡಿದೆ. ಅವುಗಳನ್ನು ಹೀಗೆ ಪರಿಚಯಿಸಲಾಗಿದೆ: ದೇವರು ಈ ಎಲ್ಲಾ ವಾಕ್ಯಗಳನ್ನು ಹೇಳಿದನು (20:1). ದೇವರು ಈ ವಾಕ್ಯಗಳನ್ನು ಯಾವಾಗ ಹೇಳಿದನು ಎಂಬುದು ಸ್ಪಷ್ಟವಾಗಿಲ್ಲ. ಬಹುಶಃ ಮೋಶೆಯು ಜನರನ್ನು ಎಚ್ಚರಿಸಲು ಕೆಳಗೆ ಹೋಗುವುದಕ್ಕಿಂತ ಮುಂಚೆ ಅವುಗಳನ್ನು ಆತನಿಗೆ ಕೊಟ್ಟಿರಬಹುದು.

   ದಶಾಜ್ಞೆಗಳ ತದನಂತರವೇ ಇನ್ನೊಮ್ಮೆ ಸಿಡಿಲು ಗುಡುಗು ಆದುದ್ದರ ಮತ್ತು ಜನರು ಭಯಭೀತರಾದುದ್ದರ ಕುರಿತು ತಿಳಿಸಲಾಗಿದೆ. ಮೋಶೆಯು ಅವರಿಗೆ ಆದರಣೆಯನ್ನು ನೀಡುತ್ತಾನೆ (20:18–20).

4. ಮೋಶೆಯು ಪರ್ವತದ ಮೇಲಿದ್ದ ದಟ್ಟವಾದ ಮೇಘದ ಸಮೀಪಕ್ಕೆ ಹೋದನು. ವಿಗ್ರಹಗಳ ಆರಾಧನೆ ಮಾಡಕೂಡದು ಮತ್ತು ಬಲಿಪೀಠಗಳನ್ನು ಹೇಗೆ ಮಾಡಬೇಕು ಎಂಬುದರ ಕುರಿತು ಯೆಹೋವನು ಮೊದಲು ಮೋಶೆಗೆ ಹೇಳಿದನು (20:21–26). ನಂತರ ದೇವರು ಒಡಂಬಡಿಕೆಯ ಗ್ರಂಥದೊಂದಿಗೆ (ಆಜ್ಞೆಗಳ ಸಂಕಲನಕ್ಕೆ ಕೊಡಲ್ಪಟ್ಟ ಈ ಹೆಸರನ್ನು 24:7 ರಲ್ಲಿ ಕಾಣಬಹುದು) ಮುಂದುವರೆಸುತ್ತಾನೆ. ಅಂತಿಮವಾಗಿ ಆತನು ವಾಗ್ದಾನ ದೇಶಕ್ಕೆ ಇಸ್ರಾಯೇಲರು ಹೋಗುವಂತೆ ಮಾರ್ಗವನ್ನು ಸಿದ್ಧಮಾಡುವೆನೆಂದು ವಾಗ್ದಾನ ಮಾಡುತ್ತಾನೆ (ಅಧ್ಯಾಯಗಳು 21–23). ದೇವರಿಂದ ಬಂದ ಈ ಎಲ್ಲಾ ಮಾತುಗಳ ನಂತರ ಮೋಶೆಯು ಪರ್ವತವನ್ನು ಇಳಿದು ಹೋಗಿರಬಹುದು. ಈ ವಾಸ್ತವಾಂಶವು ಪಠ್ಯದಲ್ಲಿ ನಿರ್ದಿಷ್ಟವಾಗಿ ತಿಳಿಸಲ್ಪಟ್ಟಿಲ್ಲ, ಆದರೆ ಮೋಶೆಯು ಆರೋನ, ಆತನ ಎರಡೂ ಮಕ್ಕಳನ್ನು ಮತ್ತು ಇಸ್ರಾಯೇಲಿನ ನಾಯಕರುಗಳ ಒಂದು ದೊಡ್ಡ ಗುಂಪನ್ನು ತನ್ನೊಂದಿಗೆ ಪರ್ವತದ ಮೇಲೆ ಕರೆತರಬೇಕೆಂಬ ಮಾತುಗಳಿಂದ 24 ನೇ ಅಧ್ಯಾಯವು ಪ್ರಾರಂಭಿಸುತ್ತದೆ.

5. ಆದರೆ ಮೋಶೆಯು ತನ್ನೊಂದಿಗೆ ಎಲ್ಲಾ ಇಸ್ರಾಯೇಲಿನ ನಾಯಕರುಗಳೊಂದಿಗೆ ಬರುವುದಕ್ಕಿಂತ ಮುಂಚೆ ಒಡಂಬಡಿಕೆಯು ಧೃಢೀಕರಿಸಲ್ಪಟ್ಟಿತು. ದೇವರು ತನಗೆ ಹೇಳಿದ್ದೆಲ್ಲವನ್ನೂ ಮೋಶೆಯು ಜನರಿಗೆ ತಿಳಿಸಿದನು. ಜನರು ಆಜ್ಞೆಯನ್ನು ಪಾಲಿಸುವರೆಂದು ಪ್ರಮಾಣ ಮಾಡಿದರು. ಮೋಶೆಯು ದೇವರು ಹೇಳಿದ್ದೆಲ್ಲವನ್ನೂ ಬರೆದನು. ಒಂದು ಬಲಿಪೀಠವು ಕಟ್ಟಲ್ಪಟ್ಟಿತು, ಹನ್ನೆರಡು ಕಲ್ಲಿನ ಸ್ಥಂಭಗಳು ನಿಲ್ಲಿಸಲ್ಪಟ್ಟವು, ಬಲಿಗಳು ಕೊಡಲಾಯಿತು, ಜನರಿಗಾಗಿ ಒಡಂಬಡಿಕೆಯ ಗ್ರಂಥವನ್ನು ಓದಲಾಯಿತು ಮತ್ತು ಒಡಂಬಡಿಕೆಯ ರಕ್ತವು ಜನರ ಮೇಲೆ ಚಿಮುಕಿಸಲಾಯಿತು (24:3–8).

   ಇವೆಲ್ಲವೂ ನಡೆದ ನಂತರ ಮೋಶೆ ಮತ್ತು ಇತರೆ ನಾಯಕರುಗಳು ಪರ್ವತವನ್ನೇರಿ ಹೋದರು. ಅಲ್ಲಿ ದೇವರು ತನ್ನನ್ನು ಅವರಿಗೆ ಪ್ರಕಟ ಮಾಡಿಕೊಂಡನು. ಮೋಶೆಯು ಇನ್ನೂ ಮೇಲೆ ಬಂದು ದಶಾಜ್ಞೆಗಳನ್ನು ಹೊಂದಿದ ಕಲ್ಲಿನ ಹಲಿಗೆಗಳನ್ನು ಸ್ವೀಕರಿಸಬೇಕೆಂದು ದೇವರು ಆತನನ್ನು ಆಹ್ವಾನಿಸಿದನು. ಮೋಶೆಯು ಪರ್ವತದ ಮೇಲೆ ನಲವತ್ತು ದಿವಸ ಹಗಲು ರಾತ್ರಿಯನ್ನು ಕಳೆದನು (24:1–2, 9–18).

ಈ ದೀರ್ಘವಾದ ವಾಸ್ತವ್ಯದ ಅವಧಿಯಲ್ಲಿ ಮೋಶೆಯು ಗುಡಾರದ ಮತ್ತು ಅದರ ಸಾಮಾಗ್ರಿಗಳ, ಯಾಜಕತ್ವದ ಹಾಗೂ ಇತರೆ ಆಚಾರಗಳ ಕುರಿತು ಆಜ್ಞೆಗಳನ್ನು ಪಡೆದನು. ಅಂತಿಮವಾಗಿ ದೇವರು ಆತನಿಗೆ ಸಾಕ್ಷಿಯ ಎರಡು ಹಲಿಗೆಗಳನ್ನು ಅಂದರೆ ದಶಾಜ್ಞೆಗಳನ್ನು ಕೊಟ್ಟನು (25:1–31:18).

ಮೋಶೆಯ ಗೈರಲ್ಲಿ ಇಸ್ರಾಯೇಲರ ಪಾಳೆಯದಲ್ಲಿ ನಡೆದ ಸಂಗತಿಗಳ ಕುರಿತಾದ ಕಥೆಯನ್ನು 32 ನೇ ಅಧ್ಯಾಯವು ಒಳಗೊಂಡಿದೆ: ಜನರು ಒಂದು ಬಂಗಾರದ ಬಸವನನ್ನು ಮಾಡಿ ಅದನ್ನು ಆರಾಧಿಸಿದರು. ದೇವರು ಅವರನ್ನು ನಾಶ ಮಾಡಬೇಕೆಂದಿದ್ದನು, ಆದರೆ ಮೋಶೆಯು ಅವರಿಗಾಗಿ ವಿಜ್ಞಾಪನೆ ಮಾಡಿದಾಗ ಆತನು ದಯೆ ತೋರಿದನು. ಮೋಶೆಯು ಎರಡು ಕಲ್ಲಿನ ಹಲಿಗೆಗಳೊಂದಿಗೆ ಪರ್ವತವನ್ನು ಇಳಿದು ಹೋದನು. ಆತನು ಪಾಳೆಯದಲ್ಲಿದ್ದ ಪರಿಸ್ಥಿತಿಯನ್ನು ಕಂಡು ರೋಷದಿಂದ ಕಲ್ಲಿನ ಹಲಿಗೆಗಳನ್ನು ಎಸೆದು ಒಡೆದುಬಿಟ್ಟನು ಮತ್ತು ಚಿನ್ನದ ಕರುವನ್ನು ನಾಶಮಾಡಿದನು, ನಂತರ ನಡೆದ ಘಟನೆಗೆ ಆರೋನನನ್ನು ದೂಷಿಸಿದನು.

34 ನೇ ಅಧ್ಯಾಯದಲ್ಲಿ ಮೋಶೆಯು ಹಿಂತಿರುಗಿ ಪರ್ವತದ ಮೇಲೆ ಹೋದನು. ಅಲ್ಲಿ ದೇವರು ತನ್ನ ಮಹಿಮೆಯನ್ನು ಅವನಿಗೆ ಪ್ರಕಟಿಸಿದನು ಮತ್ತು ಹೊಸದಾದ ಎರಡು ಕಲ್ಲಿನ ಹಲಿಗೆಗಳ ಮೇಲೆ ದಶಾಜ್ಞೆಗಳನ್ನು ಬರೆದನು. ಮೋಶೆಯು ಮತ್ತೊಮ್ಮೆ ನಲವತ್ತು ದಿವಸಗಳ ಕಾಲ ಹಗಲು ರಾತ್ರಿಯನ್ನು ಸಿನಾಯಿ ಪರ್ವತದ ಮೇಲೆ ಕಳೆದನು.

**ಆ. ಓದಿರಿ**

ವಿಮೋ 19–31 ಅಧ್ಯಾಯಗಳು. ಆದರೆ ಈ ಅಧ್ಯಾಯಗಳನ್ನು ಕೂಲಂಕುಷವಾಗಿ ಓದಬೇಡಿರಿ. ನೀವು ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಗುವಂತೆ ಮುಖ್ಯ ಅಂಶಗಳ ಒಂದು ಪಕ್ಷಿನೋಟವನ್ನು ಪಡೆದುಕೊಂಡರೆ ಸಾಕು. ಈ ವಾಕ್ಯಭಾಗಗಳನ್ನು ಇನ್ನೂ ವಿವರವಾಗಿ ಮುಂದಿನ ನಾಲ್ಕು ಅಧ್ಯಯನಗಳಲ್ಲಿ ನೀವು ಓದಲಿದ್ದೀರಿ.

**ಇ. ಟಿಪ್ಪಣಿ**

*ಇಸ್ರಾಯೇಲರು ಈಜಿಪ್ಟನ್ನು ಬಿಟ್ಟ ಮೂರನೆಯ ತಿಂಗಳಿನ ಅದೇ ದಿನದಲ್ಲಿ* (ವ. 1): ನಿರ್ಗಮನವು ಮಾರ್ಚ್–ಏಪ್ರಿಲ್ ತಿಂಗಳಲ್ಲಿ ನಡೆಯಿತು. ಹಾಗಾಗಿ ಇಸ್ರಾಯೇಲರು ಅದೇ ವರ್ಷದ ಜೂನ್–ಜುಲೈ ತಿಂಗಳಲ್ಲಿ ಸಿನಾಯಿ ಪರ್ವತವನ್ನು ತಲುಪಿದರು.

*ಸಿನಾಯಿ ಮರುಭೂಮಿ* (ವ. 1): ಸಿನಾಯಿ ಪರ್ಯಾಯದ್ವೀಪದ ದಕ್ಷಿಣ ಭಾಗದಲ್ಲಿ ಇದು ನೆಲೆಸಿತ್ತು (ನಿರ್ಗಮನ ಎಂಬ ನಕ್ಷೆಯನ್ನು ನೋಡಿರಿ).

**ಈ. ಪ್ರಶ್ನೆಗಳು**

ಮೇಲಿರುವ ಪರಿಚಯದಲ್ಲಿನ ಐದು ಅಂಶಗಳನ್ನು ಓದಿರಿ. ಓದುವಾಗ ನಿಮ್ಮ ಸ್ವಂತ ಸತ್ಯವೇದಗಳಲ್ಲಿ ವಿವಿಧ ಘಟನೆಗಳನ್ನು ಗುರುತಿಸಲು ಪ್ರಯತ್ನಿಸಿರಿ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ವಿಮೋ. 19:16–19 ನ್ನು 20:18–21 ರೊಂದಿಗೆ ಹೋಲಿಸಿರಿ. ಈ ವಾಕ್ಯಭಾಗಗಳು ಅತ್ಯಂತ ಸಮಾನರೂಪವುಳ್ಳದ್ದಾಗಿ ತೋರುತ್ತದೆ. ಅವುಗಳು ಒಂದೇ ಘಟನೆಯ ಕುರಿತು ಉಲ್ಲೇಖಿಸುತ್ತಿರುವ ಸಾಧ್ಯತೆಯಿದೆಯೇ? ಈ ಊಹೆಗೆ ಪರವಾದ ಮತ್ತು ವಿರೋಧಕ್ಕೆ ನಿಮ್ಮ ಕಾರಣಗಳನ್ನು ಕೊಡಿರಿ.

2. ಈ ಎರಡೂ ವಾಕ್ಯಭಾಗಗಳು ಒಂದೇ ಘಟನೆಯ ಕುರಿತು ಉಲ್ಲೇಖಿಸುತ್ತದೆ ಎಂದು ನಾವು ಅಂದುಕೊಳ್ಳೋಣ. ಇದರ ಪರಿಣಾಮವು ಏನಾಗಿರುವುದೆಂದರೆ, ವಿಮೋ. 19–20 ರಲ್ಲಿರುವ ಪಠ್ಯವು ಪೂರ್ಣವಾದ ಕಾಲಾನುಕ್ರಮದೊಂದಿಗೆ ಬರೆಯಲ್ಪಟ್ಟಿಲ್ಲ ಎಂದತ್ತಾಗುತ್ತದೆ. ಇದನ್ನು ನೀವು ಸಮ್ಮತಿಸುವುದಿಲ್ಲವೋ? ಯಾಕೆ – ಯಾಕೆ ಇಲ್ಲ ಎಂಬುದನ್ನು ವಿವರಿಸಿರಿ.

3. ಮೇಲಿರುವ ಪರಿಚಯದಲ್ಲಿ ಮಂಡಿಸಿರುವ 'ಘಟನಾನುಕ್ರಮಣಿಕೆಯನ್ನು' ಅಭ್ಯಸಿಸಿರಿ. ವಿಮೋ. 19:16–19 ಮತ್ತು 20:18–21 ಒಂದೇ ಘಟನೆಯ ವ್ಯತ್ಯಾಸವಾದ ನಿರೂಪಣೆಗಳು ಎಂಬಂತೆ ಅದನ್ನು ಬದಲಾಯಿಸಿರಿ. ಸುಳಿವು: ಮೋಶೆಯು ಪರ್ವತದ ಮೇಲೆ ಹೋದ ಸಂಖ್ಯೆಯನ್ನು ನೀವು ಐದರಿಂದ ನಾಲ್ಕಕ್ಕೆ ಇಳಿಸಬೇಕು.

**ವಿಮೋಚನಕಾಂಡ ಅಧ್ಯಯನ 19: ಸಿನಾಯಿ ಪರ್ವತದ ಮೇಲೆ ಮೋಶೆ**

**ಅ. ಪರಿಚಯ**

*ಮೋಶೆಯು ದೇವರ ಸನ್ನಿಧಿಗೆ ಬೆಟ್ಟದ ಮೇಲೆ ಹೋದನು. ಆಗ ಯೆಹೋವನು ಸಿನಾಯಿ ಪರ್ವತದ ಮೇಲಿನಿಂದ ಅವನನ್ನು ಕರೆದು ...* ಇಸ್ರಾಯೇಲರಿಗೆ ಹೇಳಬೇಕಾದುದ್ದನ್ನು ಆತನಿಗೆ ತಿಳಿಸಿದನು (ವಿಮೋ. 19:3). ದೇವರು ತಮಗೆ ಹೇಳಿರುವದ್ದೆಲ್ಲವನ್ನೂ ತಾವು ಮಾಡುವೆವು ಎಂದು ಜನರು ಪ್ರಮಾಣ ಮಾಡಿದರು. ನಂತರ ಜನರು ಶುದ್ಧೀಕರಿಸಲ್ಪಡಬೇಕೆಂದು ದೇವರು ಮೋಶೆಗೆ ಹೇಳಿದನು. *ಮೂರನೆಯ ದಿನದಲ್ಲಿ ಉದಯವಾದಾಗ ಬೆಟ್ಟದ ಮೇಲೆ ಗುಡುಗುಗಳೂ ಮಿಂಚುಗಳೂ ದಟ್ಟವಾದ ಮೇಘವೂ ತುತೂರಿಯ ಮಹಾ ಧ್ವನಿಯೂ ಉಂಟಾಯಿತು. ಪಾಳೆಯದಲ್ಲಿದ್ದ ಜನರೆಲ್ಲರೂ ನಡುಗಿದರು. ಆಗ ಮೋಶೆಯು ದೇವರನ್ನು ಸಂಧಿಸುವದಕ್ಕೆ ಜನರನ್ನು ಪಾಳೆಯದೊಳಗಿಂದ ಹೊರಗೆ ಬರಮಾಡಿದನು; ಆಗ ಅವರು ಬೆಟ್ಟದ ಕೆಳಗೆ ನಿಂತುಕೊಂಡರು* (ವಿಮೋ. 19:16–17). ಪರ್ವತವು ಹೊಗೆಯಿಂದ ಕೂಡಿದ್ದು ಬಹಳವಾಗಿ ಕಂಪಿಸಿತು. *ಯೆಹೋವನು ಸೀನಾಯಿ ಬೆಟ್ಟದ ತುದಿಯಲ್ಲಿ ಇಳಿದು ಬಂದು ಮೋಶೆಯನ್ನು ಬೆಟ್ಟದ ತುದಿಗೆ ಕರೆದನು* (ವಿಮೋ. 19:20).

**ಆ. ಓದಿರಿ**

ವಿಮೋ. 19:3–25

**ಇ. ಟಿಪ್ಪಣಿ**

*ಯಾಕೋಬನ ಮನೆತನದವರಿಗೆ ... ಇಸ್ರಾಯೇಲರಿಗೆ* (ವ. 3): ಈ ಹೇಳಿಕೆಗಳು ಸಮನಾರ್ಥ ಪದಗಳಾಗಿವೆ.

*ಹದ್ದು ತನ್ನ ಮರಿಗಳನ್ನು ತನ್ನ ರೆಕ್ಕೆಗಳ ಮೇಲೆ ಹೊತ್ತು* (ವ. 4): ಈ ರೂಪಕಾಲಂಕಾರವು ತನ್ನ ಜನರ ಕುರಿತಾಗಿ ದೇವರಿಗೆ ಇರುವ ಬಲವಾದ ಮತ್ತು ಪ್ರೀತಿಯುಳ್ಳ ಆರೈಕೆಯನ್ನು ವ್ಯಕ್ತಪಡಿಸುತ್ತದೆ.

*ಕಾಪಾಡಿದರೆ ... ಸಂಪತ್ತಾಗಿರುವಿರಿ* (ವ. 5): ದೇವರ ಒಡಂಬಡಿಕೆಯ ವಾಗ್ದಾನಗಳಿಗೆ ವಿಧೇಯತೆ ಮತ್ತು ನಂಬಿಗಸ್ತ ಭರವಸೆಯು ಷರತ್ತುಗಳಾಗಿವೆ.

*ಯಾಜಕರ ರಾಜ್ಯವೂ ಪರಿಶುದ್ಧ ಜನವೂ* (ವ. 6): ಇಸ್ರಾಯೇಲು ದೇವರ ರಾಜ್ಯವಾಗಬೇಕಾಗಿತ್ತು ಮತ್ತು ಶುದ್ಧೀಕರಿಸಲ್ಪಟ್ಟ ಯಾಜಕರಾಗಿ ಆತನನ್ನು ಸೇವಿಸಬೇಕಾಗಿತ್ತು. ಇತರೆ ಎಲ್ಲಾ ರಾಷ್ಟ್ರಗಳಿಂದ ವ್ಯತ್ಯಾಸವುಳ್ಳ ಮತ್ತು ಪ್ರತ್ಯೇಕಿಸಲ್ಪಟ್ಟ ಜನರು ಎಂಬ ಅರ್ಥದಲ್ಲಿ ಅವರು ಒಂದು ಪರಿಶುದ್ಧ ಜನರಾಗಬೇಕಾಗಿತ್ತು. ಪೇತ್ರನು ಕ್ರೈಸ್ತೀಯ ಸಭೆಯನ್ನು ಉಲ್ಲೇಖಿಸುತ್ತಾ ಈ ವಚನವನ್ನು ಪ್ರಸ್ತಾಪಿಸುತ್ತಾನೆ: *ಕತ್ತಲೆಯೊಳಗಿದ್ದ ನಿಮ್ಮನ್ನು ಕರೆದು ತನ್ನ ಆಶ್ಚರ್ಯಕರವಾದ ಬೆಳಕಿಗೆ ಸೇರಿಸಿದಾತನನ್ನುಕೊಂಡಾಡುವವರಾಗುವಂತೆ ನೀವು ಆಯಲ್ಪಟ್ಟ ಜನರೂ ರಾಜತನದ ಯಾಜಕರೂ ಪರಿಶುದ್ಧ ಜನಾಂಗವೂ ದೇವರ ಜನರೂ ಆಗಿದ್ದೀರಿ* (1 ಪೇತ್ರ. 2:9).

*ಜನರಿಗೋಸ್ಕರ ಸುತ್ತಲೂ ಮೇರೆಗಳನ್ನು ಮಾಡಿಸಿ* (ವ. 12): ದೇವರ ಪ್ರಸನ್ನತೆಯ ನಿಮಿತ್ತ ಪರ್ವತವೆಲ್ಲವೂ ಪರಿಶುದ್ಧವಾಗುವುದರಿಂದ ಇದು ಜನರನ್ನು ಸುರಕ್ಷಿತವಾಗಿಡುವುದು.

*ನೀವು ಲೈಂಗಿಕ ಸಂಬಂಧ ಮಾಡಬೇಡಿರಿ* (ವ. 15): ಇದು ಒಂದು ಪಾಪ ಎಂಬುದಾಗಿ ಅಲ್ಲ, ಬದಲಾಗಿ ಇದು ಶುದ್ಧಾಚಾರಕ್ಕೆ ಸಂಬಂಧಪಟ್ಟ ವಿಷಯವಾಗಿತ್ತು (ನೋಡಿರಿ ಯಾಜಕ. 15:18).

*ಅದನ್ನು ಶುದ್ಧಮಾಡೆಂದು* (ವ. 23): ಉರಿಯುತ್ತಿರುವ ಪೊದೆಯ ಕಥೆಯೊಂದಿಗೆ ಇದನ್ನು ಹೋಲಿಸಿರಿ (ವಿಮೋ. 3:5).

**ಈ. ಪ್ರಶ್ನೆಗಳು**

1. ವಿಮೋ. 19:3–6 ರಲ್ಲಿ ಮೋಶೆಯ ಮೂಲಕ ದೇವರು ಇಸ್ರಾಯೇಲರಿಗೆ ಕೊಟ್ಟ ಸಂದೇಶದಲ್ಲಿರುವ ಅಂಶಗಳ ಪಟ್ಟಿಯನ್ನು ಮಾಡಿರಿ.
2. ಮೋಶೆಯ ಮೂಲಕ ಇಸ್ರಾಯೇಲರಿಗೆ ಕೊಡಲ್ಪಟ್ಟ ಸಂದೇಶವನ್ನು ಅವರಿಗೆ ಹೇಗೆ ತಿಳಿಸಲಾಯಿತು?
3. ಮೋಶೆಯು ಎರಡನೆಯ ಬಾರಿ ಪರ್ವತದ ಮೇಲೆ ಹೋದಾಗ ದೇವರಿಗೆ ಆತನು ಏನನ್ನು ತಿಳಿಸಿದನು?
4. ಯೆಹೋವನು ಸಿನಾಯಿ ಪರ್ವತದ ಮೇಲೆ ಇಳಿದು ಬರುವ ದಿನಕ್ಕಾಗಿ ಇಸ್ರಾಯೇಲರು ಹೇಗೆ ಶುದ್ಧೀಕರಿಸಲ್ಪಟ್ಟರು?
5. ಪರ್ವತದ ಅತೀ ಸಮೀಪಕ್ಕೆ ಬಂದವರಿಗೆ ಏನಾಗುವುದು?
6. ಪರ್ವತದ ಮೇಲಿದ್ದ ದೇವರ ಪವಿತ್ರ ಪ್ರಸನ್ನತೆಯ ಗೋಚರವಾದ ಸೂಚನೆಗಳು ಏನಾಗಿದ್ದವು?

### ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ

1. ವಿಮೋ. 19 ರಲ್ಲಿ ನಾವು ಸಿನಾಯಿ ಪರ್ವತದ ಮೇಲೆ ದೇವರ ಪವಿತ್ರತೆಯು ಪ್ರಕಟಗೊಂಡಿರುವುದನ್ನು ಕಾಣುತ್ತೇವೆ. ಇಸ್ರಾಯೇಲಿನ ಸಮುದಾಯದ ಒಬ್ಬ ಸದಸ್ಯನ ದೃಷ್ಟಿಕೋನದಿಂದ ಘಟನೆಯನ್ನು ಮರು–ಹೇಳಿರಿ (ಆತನು ಕಂಡಿದ್ದು, ಕೇಳಿದ್ದು, ಮೋಶೆಯು ತಿಳಿಸಿದ್ದು, ಇಸ್ರಾಯೇಲರು ಪ್ರಮಾಣ ಮಾಡಿದ್ದು ...) ಆತನ ಸ್ಥಾನದಲ್ಲಿದ್ದುಕೊಂಡು ಅದನ್ನು ಹೇಳಿರಿ: 'ಈಜಿಪ್ಟನ್ನು ಬಿಟ್ಟು ಹೊರಟ ನಂತರ ಮೂರು ತಿಂಗಳುಗಳಾದ ಬಳಿಕ ನಾವು ಸಿನಾಯಿ ಪರ್ವತವನ್ನು ತಲುಪಿದೆವು ಮತ್ತು ಪರ್ವತದ ಕೆಳಗೆ ನಮ್ಮ ಪಾಳೆಯವನ್ನು ಹಾಕಿಕೊಂಡೆವು ...'

2. ಆಧುನಿಕ ಕ್ರೈಸ್ತೀಯ ಸಭೆಯು (ದಕ್ಷಿಣ ಭಾರತದ ಸಭೆಯನ್ನು ಒಳಗೊಂಡು) ದೇವರ ಪರಿಶುದ್ಧತೆಯ ಬಗ್ಗೆ ಹೆಚ್ಚು ಒತ್ತು ಕೊಡುವುದಿಲ್ಲ. ಬದಲಾಗಿ ದೇವರ ಪ್ರೀತಿ ಮತ್ತು ಕೃಪೆಯ ಮೇಲೆ ಹೆಚ್ಚಿನ ಗಮನ ಕೊಡುತ್ತಾರೆ – ಮತ್ತು ಬಹುಶಃ ವಿಶ್ವಾಸಿಗಳ ಪರಿಶುದ್ಧತೆಯ ಬಗ್ಗೆ ಹೆಚ್ಚಿನ ಗಮನ ಕೊಡುತ್ತಾರೆ. ನಿಮ್ಮ ಸ್ವಂತ ಸಭೆಯ ಕುರಿತು ಮತ್ತು ನಿಮ್ಮ ಸಭಾಪಾಲಕರ ಕುರಿತು ಮತ್ತು ದೇವರ ಪರಿಶುದ್ಧತೆಯ (ವಿಶ್ವಾಸಿಗಳ 'ಪರಿಶುದ್ಧತೆ' ಅಲ್ಲ!) ಕುರಿತಾದ ಬೋಧನೆಯ ಬಗ್ಗೆ ಹಂಚಿಕೊಳ್ಳಿರಿ. ನಂತರ ವಿಮೋ. 19 ರ ಬೆಳಕಿನಲ್ಲಿ ಅದರ ಕುರಿತು ಮಾತನಾಡಿರಿ.

3. ನಿಮ್ಮ ಕುರಿತು ಏನು? ನೀವು ಹೇಗೆ ನಿಮ್ಮ ಕ್ರಿಸ್ತೀಯ ಜೀವಿತದಲ್ಲಿ ದೇವರ ಪರಿಶುದ್ಧತೆಯನ್ನು ಅನುಭವಿಸಿದ್ದೀರಿ – ಮತ್ತು ಈಗ ಹೇಗೆ ಅನುಭವಿಸುತ್ತಿದ್ದೀರಿ? ನಿಮ್ಮ ಗುಂಪುಗಳಲ್ಲಿ ಹಂಚಿಕೊಳ್ಳಿರಿ.

**ವಿಮೋಚನಕಾಂಡ ಅಧ್ಯಯನ 20: ಮೋಶೆಯು ಧರ್ಮಶಾಸ್ತ್ರವನ್ನು ಪಡೆದದ್ದು**

**ಅ. ಪರಿಚಯ**

ಜನರು ತಮ್ಮನ್ನು ಶುದ್ಧಪಡಿಸಿಕೊಳ್ಳಬೇಕೆಂದು ದೇವರು ಮೋಶೆಗೆ ಹೇಳಿದನು. ಪರ್ವತವು ಹೊಗೆಯಿಂದ ಕೂಡಿದ್ದು ಬಹಳವಾಗಿ ಕಂಪಿಸಿತು. ಆಗ ಯೆಹೋವನು ಸೀನಾಯಿ ಬೆಟ್ಟದ ತುದಿಗೆ ಇಳಿದು ಬಂದು ಮೋಶೆಯನ್ನು ಬೆಟ್ಟದ ತುದಿಗೆ ಕರೆದನು(ವಿಮೋ. 19:20).ದೇವರು ಮೋಶೆಗೆ ಈ ಎಲ್ಲಾ ವಾಕ್ಯಗಳನ್ನು ಹೇಳಿ ದಶಾಜ್ಞೆಗಳು (ಅಥವಾ ಹತ್ತು ಮಾತುಗಳು) ಎಂದು ಕರೆಯಲ್ಪಡುವಂತದ್ದನ್ನು ಕೊಟ್ಟನು (ವಿಮೋ 20:2–17).

ನಂತರ ಬಲಿಪೀಠಗಳನ್ನು ಹೇಗೆ ಮಾಡಬೇಕು ಮತ್ತು ತನಗೆ ಕಾಣಿಕೆಗಳೊಂದಿಗೆ ಹೇಗೆ ಆರಾಧಿಸಬೇಕು ಎಂಬುದರ ಕುರಿತು ದೇವರು ಮೋಶೆಗೆ ಆಜ್ಞಾಪಿಸಿದನು (ವಿಮೋ. 20:22–26).

ನಂತರ ವಿಮೋ. 21–23 ರಲ್ಲಿ ಒಡಂಬಡಿಕೆಯ ಗ್ರಂಥ ಎಂದು ಕರೆಯಲ್ಪಡುವಂತದ್ದು ಕಾಣಲ್ಪಡುತ್ತದೆ (ವಿಮೋ. 24:7 ರೊಂದಿಗೆ ಹೋಲಿಸಿರಿ). ಅದು ಹಿಬ್ರೂ ಆಳುಗಳ, ಕೊಲೆ ಮತ್ತು ಗಾಯಗಳ, ಆಸ್ತಿ ಹಾನಿಯ, ಸಾಮಾಜಿಕ ಜವಾಬ್ದಾರಿಗಳ, ನ್ಯಾಯದ, ಸಬ್ಬತ್ ದಿನದ ಮತ್ತು ಮೂರು ವಾರ್ಷಿಕ ಹಬ್ಬಗಳ ಕುರಿತು ಆಜ್ಞೆಗಳನ್ನು ಹೊಂದಿದೆ.

**ಆ. ಓದಿರಿ**

ವಿಮೋ. 20:1–17; 20:22–23:19

**ಇ. ಟಿಪ್ಪಣಿ**

*ವಾಕ್ಯಗಳನ್ನು* (20:1): ಇದು 'ಒಡಂಬಡಿಕೆಯ ಷರತ್ತುಗಳಿಗೆ' ಕೊಡಲ್ಪಟ್ಟ ಒಂದು ತಾಂತ್ರಿಕ ಪದವಾಗಿದೆ. ಅದಲ್ಲದೆ ಅದು ಆ ಪ್ರದೇಶದಲ್ಲಿದ್ದ ಇತರೆ ಪ್ರಾಚೀನ ರಾಷ್ಟ್ರಗಳ ಮಧ್ಯದಲ್ಲಿಯೂ ಉಪಯೋಗಿಸಲ್ಪಡುತ್ತಿತ್ತು, ಉದಾಹರಣೆಗೆ ಹಿತ್ತೀಯರು. ಇಲ್ಲಿ (ಅಂದರೆ ವ. 3–17 ರಲ್ಲಿ) ದಾಖಲಾಗಿರುವ 'ವಾಕ್ಯಗಳನ್ನು' ದಶಾಜ್ಞೆಗಳು ಎಂದು ಕರೆಯಲಾಗುತ್ತದೆ (ನೋಡಿರಿ ವಿಮೋ. 34:28; ಧರ್ಮೋ. 4:13; 10:4).

*ನನ್ನ ಮುಂದೆ* (ವ. 3): ಇದರ ಅರ್ಥವೇನೆಂದರೆ, ಇಸ್ರಾಯೇಲರ ಹೃದಯಗಳಲ್ಲಿ ಮತ್ತು ಜೀವಿತಗಳಲ್ಲಿ ಯೆಹೋವನೊಬ್ಬನೇ ನಿಜವಾದ ಏಕಮಾತ್ರ ದೇವರಾಗಿರತಕ್ಕದ್ದು ಎಂಬುದಾಗಿದೆ.

*ರೋಷವುಳ್ಳ ದೇವರಾಗಿದ್ದೇನೆ* (ವ. 5): 'ರೋಷ' ಎಂದು ಬಳಸಲಾಗಿರುವ ಹಿಬ್ರೂ ಪದವು ದೇವರ ಕುರಿತಾಗಿ ಮಾತ್ರ ಬಳಸಲಾಗಿದೆಯೇ ಹೊರತು ಮನುಷ್ಯರ ಕುರಿತು ಎಂದಿಗೂ ಅಲ್ಲ. ಅದು ತನ್ನ ಒಡಂಬಡಿಕೆಯ ಜನರೊಂದಿಗೆ ದೇವರು ಬಯಸುವ ಪ್ರತ್ಯೇಕ ಸಂಬಂಧವನ್ನು ವ್ಯಕ್ತಪಡಿಸುತ್ತದೆ. ಕನ್ನಡ ಎನ್.ಐ.ಬಿ.ವಿ.ಯಲ್ಲಿರುವ 'ರೋಷ' ಎಂಬ ಪದವು ದಾರಿ ತಪ್ಪಿಸುವಂತದ್ದಾಗಿದೆ.

*ಮೂರನೆಯ ನಾಲ್ಕನೆಯ ತಲೆಗಳವರೆಗೂ* (ವ. 5): ಈ ಹೇಳಿಕೆಯನ್ನು ಬಹುಶಃ ಆ ದಿನಗಳ 'ವಿಸ್ತಾರವಾದ ಕುಟುಂಬಗಳ' ಸನ್ನಿವೇಶ ಹಿನ್ನಲೆಯಲ್ಲಿ ಅರ್ಥಮಾಡಿಕೊಳ್ಳಬೇಕು. ಬಹುತೇಕ ಕುಟುಂಬಗಳಲ್ಲಿ ಮೂರು ಅಥವಾ ನಾಲ್ಕು ತಲೆಮಾರಿನ ಸದಸ್ಯರು ಜೀವಿಸುತ್ತಿದ್ದರು.

*ನನ್ನನ್ನು ಹಗೆಮಾಡುವ ... ನನ್ನನ್ನು ಪ್ರೀತಿಸಿ* (ವ. 5–6): ಒಡಂಬಡಿಕೆಯ ದಸ್ತಾವೇಜುಗಳಲ್ಲಿ 'ಪ್ರೀತಿ' ಮತ್ತು 'ಹಗೆತನವು' ತಾಂತ್ರಿಕ ಪದಗಳಾಗಿದ್ದವು. ಈ ಪದಗಳನ್ನು 'ನನ್ನ ಒಡಂಬಡಿಕೆಯನ್ನು ತಿರಸ್ಕರಿಸುವ' ಮತ್ತು 'ನನ್ನ ಒಡಂಬಡಿಕೆಗೆ ನಂಬಿಗಸ್ತರಾಗಿರುವ' ಎಂಬ ಅರ್ಥದಲ್ಲಿ ತಿಳಿದುಕೊಳ್ಳಬೇಕು.

*ಯೆಹೋವನ ಹೆಸರನ್ನು ದುರುಪಯೋಗಪಡಿಸಿಕೊಳ್ಳಬಾರದು* (ವ. 7): ಇದರ ಅರ್ಥವೇನೆಂದರೆ, ದೇವರ ಹೆಸರಿನಲ್ಲಿ ಸುಳ್ಳು ಪ್ರಮಾಣ ಮಾಡುವುದು.

*ಸಬ್ಬತ್ ದಿನವನ್ನು ಪರಿಶುದ್ಧವಾಗಿ ಇಡುವಂತೆ* (ವ. 8): ಇದರ ಅರ್ಥ ಆ ದಿನವು ಪವಿತ್ರವಾದದ್ದು ಎಂಬುದಾಗಿದೆ. ಅದು ವಾರದ ಉಳಿದ ಆರು ದಿನಗಳಿಂದ ಪ್ರತ್ಯೇಕವಾಗಿದೆ (ಮತ್ತು ಅದರ ಪರಿಣಾಮವಾಗಿ ವ್ಯತ್ಯಾಸವಾಗಿದೆ).

*ನಿನ್ನ ತಂದೆ ತಾಯಿಗಳನ್ನು ಗೌರವಿಸು* (ವ. 12): ಪೋಷಕರನ್ನು ಗೌರವಿಸುವುದು ಅನೇಕ ಸಂಗತಿಗಳನ್ನು ಅರ್ಥೈಸುತ್ತದೆ: ಅವರಿಗೆ ಗೌರವ ತೋರಿಸುವುದು, ಅವರನ್ನು ಹೊಗಳುವುದು, ಅವರಿಗೆ ವಿಧೇಯರಾಗುವುದು ಮತ್ತು ಅವರ ಆರೈಕೆ ಮಾಡುವುದು.

*ನಿನಗೆ ಕೊಡುವ ದೇಶದಲ್ಲಿ* (ವ. 12): ಇದು ವಾಗ್ದಾನ ದೇಶವನ್ನು ಉಲ್ಲೇಖಿಸುತ್ತದೆ.

*ಆಕಾಶದಿಂದ* (ವ. 22): ಈ ಹೇಳಿಕೆಯು ದೇವರ ವಾಸಸ್ಥಳವನ್ನು ಉಲ್ಲೇಖಿಸುತ್ತದೆ. ದೇವರು ವಾಸ್ತವಿಕವಾಗಿ ಸಿನಾಯಿ ಪರ್ವತದ ಮೇಲಿದ್ದ ದಟ್ಟವಾದ ಕಾರ್ಗತ್ತಲಿನಿಂದ ಮೋಶೆಯೊಂದಿಗೆ ಮಾತನಾಡಿದನು.

*ದಹನ ಬಲಿಗಳನ್ನೂ* (ವ. 24): ಯಾಜಕಕಾಂಡ 1:3 ರ ಟಿಪ್ಪಣಿಯನ್ನು ನೋಡಿರಿ.

*ಸಮಾಧಾನ ಬಲಿಗಳನ್ನೂ* (ವ. 24): ಯಾಜಕಕಾಂಡ 3:1 ರ ಟಿಪ್ಪಣಿಯನ್ನು ನೋಡಿರಿ.

*ಉಳಿಯನ್ನು ಅದರ ಮೇಲೆ ಉಪಯೋಗಿಸಿದರೆ ಅದನ್ನು ಅಪವಿತ್ರ ಮಾಡಿದ ಹಾಗಾಗುತ್ತದೆ* (ವ. 25): ಇಂದು ನಮಗೆ ಇದರ ಕಾರಣವು ಸ್ಪಷ್ಟವಾಗಿ ತಿಳಿದಿಲ್ಲ. ಆದರೆ ಬಹುಶಃ ಅದು ವಿಗ್ರಹಾರಾಧಕರ ರೂಢಿಗಳಿಗೆ ಸಂಬಂಧಪಟ್ಟಿರಬಹುದು.

*ಸಾಯಬೇಕು* (ವಿಮೋ. 21:12): ವ. 14 ನ್ನೂ ಸಹ ನೋಡಿರಿ. ಹಳೆ ಒಡಂಬಡಿಕೆಯ ಕಾಲದಲ್ಲಿ ಉದ್ದೇಶಪೂರ್ವಕವಾದ ಕೊಲೆಯು ಅಕ್ಷಮ್ಯ ಅಪರಾಧವಾಗಿತ್ತು ಅಥವಾ ಅದಕ್ಕೆ ಕ್ಷಮಾಪಣೆ ಇರಲಿಲ್ಲ ಅಥವಾ ಅದಕ್ಕೆ ಪ್ರಾಯಶ್ಚಿತ್ತ ಇರಲಿಲ್ಲ. ಇನ್ನೂ ಇತರೆ ಅನೇಕ ಪಾಪಗಳಿಗೆ ಇದೇ ದಂಡನೆ ವಿಧಿಸಲಾಗುತ್ತಿತ್ತು (ಮತ್ತಾಯ 26:14–15).

**ಈ. ಪ್ರಶ್ನೆಗಳು**

1. ದೇವರು ದಶಾಜ್ಞೆಗ್ಗಳನ್ನು ಹೇಗೆ ಪರಿಚಯಿಸುತ್ತಾನೆ? ಈ ಪರಿಚಯದ ಮಹತ್ವವೇನು?
2. ದಶಾಜ್ಞೆಗಳನ್ನು ಪಡೆದವರು ಇಸ್ರಾಯೇಲರಾಗಿದ್ದರು. ಅವರು ಹೇಗೆ ವರ್ಣಿಸಲ್ಪಟ್ಟಿದ್ದಾರೆ? ಈ ವರ್ಣನೆಯ ಮಹತ್ವವೇನು?
3. ವಿಮೋ. 20:5–6 ರಲ್ಲಿ ಕಂಡುಬರುವ ವಿರೋಧತೆಯನ್ನು ವಿವರಿಸಿರಿ.
4. ಸಬ್ಬತ್ ದಿನವು ಯಾಕೆ ಪವಿತ್ರವಾದದ್ದು?
5. ಪೋಷಕರಿಗೆ ವಿಧೇಯರಾಗಬೇಕೆಂಬ ಆಜ್ಞೆಯೊಂದಿಗೆ ಹೊಂದಿಕೊಂಡಿರುವ ವಾಗ್ದಾನವೇನು?
6. ಮೊದಲು ವಿಮೋ. 20:3–17 ರಲ್ಲಿ ಪಟ್ಟಿ ಮಾಡಲಾಗಿರುವ ದಶಾಜ್ಞೆಗಳನ್ನು ಬರೆಯಿರಿ. ನಂತರ ಅವುಗಳನ್ನು ಬಾಯಿಪಾಠ ಮಾಡಿರಿ.
7. ದಶಾಜ್ಞೆಗಳನ್ನು ಕ್ರಿಸ್ತೀಯ ನೈತಿಕತೆಯ ಬೆಳಕಿನಲ್ಲಿ ಮೌಲ್ಯಮಾಪನ ಮಾಡಿರಿ. ಕ್ರಿಸ್ತೀಯ ವಿಶ್ವಾಸಿಗಳಿಗೆ ಈ ಆಜ್ಞೆಗಳಲ್ಲಿ ಯಾವುದು ಈಗಲೂ ಮಾನ್ಯತೆಯುಳ್ಳದ್ದಾಗಿದೆ? ಈ ಆಜ್ಞೆಗಳಲ್ಲಿ ಯಾವುದನ್ನು ನಾವು ಪಾಲಿಸಲು ತಲೆಕೆಡಿಸಿಕೊಳ್ಳುವುದಿಲ್ಲ? ಈ ಆಜ್ಞೆಗಳಲ್ಲಿ ಯಾವುದನ್ನು ನಾವು ಈಗಿನ ಕಾಲದಲ್ಲಿ ಮಾನ್ಯತೆಯುಳ್ಳದ್ದಾಗಿಲ್ಲ ಎಂದು ಪರಿಗಣಿಸುತ್ತೇವೆ? ಕೆಳಗಿರುವ ***ಆಲೋಚಿಸಿರಿ ಮತ್ತು ಚರ್ಚಿಸಿರಿ***ಎಂಬ ಭಾಗದ ಮೊದಲ ಪ್ರಶ್ನೆಯನ್ನೂ ಸಹ ನೋಡಿರಿ.
8. ಕೃಷಿ ಭೂಮಿಯನ್ನು ಏಳನೆಯ ವರ್ಷದಲ್ಲಿ ವ್ಯವಸಾಯ ಮಾಡದೆ ಬಿಟ್ಟುಬಿಡಬೇಕು. ಇದಕ್ಕೆ ಯಾವ ಕಾರಣ ಕೊಡಲ್ಪಟ್ಟಿದೆ?
9. ಏಳನೆಯ ದಿನದಲ್ಲಿ ಯಾವ ಕೆಲಸವನ್ನೂ ಮಾಡಬಾರದು. ಇದಕ್ಕೆ ಯಾವ ಕಾರಣ ಕೊಡಲ್ಪಟ್ಟಿದೆ?
10. ಮೂರು ವಾರ್ಷಿಕ ಹಬ್ಬಗಳು ಯಾವುವು?
11. ಒಡಂಬಡಿಕೆಯ ಗ್ರಂಥವನ್ನು ಓದಿರಿ (ವಿಮೋ. 21:2–23:19) ಮತ್ತು ಎರಡು ಪಟ್ಟಿಗಳನ್ನು ಮಾಡಿರಿ. ಮೊದಲ ಪಟ್ಟಿಯನ್ನು 'ನಾವು ಇಂದಿಗೂ ಪಾಲಿಸುವ ಆಜ್ಞೆಗಳು' ಎಂಬುದಾಗಿ ಕರೆಯಿರಿ, ಎರಡನೆಯ ಪಟ್ಟಿಯನ್ನು 'ನಾವು ಈಗಿನ ಕಾಲದಲ್ಲಿ ಪಾಲಿಸದಿರುವ ಆಜ್ಞೆಗಳು' ಎಂಬುದಾಗಿ ಕರೆಯಿರಿ. ಅಲ್ಲಿ ತಿಳಿಸಲ್ಪಟ್ಟಿರುವ ಎಲ್ಲಾ ಆಜ್ಞೆಗಳನ್ನು ತಿಳಿಸುವ ಅವಶ್ಯವಿಲ್ಲ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಮತ್ತೊಮ್ಮೆ ದಶಾಜ್ಞೆಗಳ ಪ್ರತಿಯೊಂದು ಆಜ್ಞೆಗಳನ್ನು ಓದಿರಿ:
    1) ಮೊದಲು ಆಜ್ಞೆಯ ಅರ್ಥವನ್ನು ವಿವರಿಸಿರಿ. ಆದಷ್ಟು ನಿಮ್ಮ ಸ್ವಂತ ವಾಕ್ಯಗಳನ್ನು ಬಳಸಿರಿ.
    2) ನಂತರ ನಿಮ್ಮ ಸ್ವಂತ ದಕ್ಷಿಣ ಭಾರತದ ಸನ್ನಿವೇಶಕ್ಕೆ ಈ ಆಜ್ಞೆಯ ಸಮಂಜಸತೆಯ ಕುರಿತು ಈ ಪ್ರಶ್ನೆಗಳಿಗೆ ಉತ್ತರಿಸುವುದರ ಮೂಲಕ ಚರ್ಚಿಸಿರಿ: ನಾವು ಈ ಆಜ್ಞೆಯನ್ನು ಪಾಲಿಸುತ್ತೇವೋ? ಹಾದಾದರೆ, ನಾವು ಅದನ್ನು ಹೇಗೆ ಪಾಲಿಸುತ್ತಿದ್ದೇವೆ? ಇಲ್ಲವಾದರೆ, ನಾವು ಯಾಕೆ ಅದನ್ನು ಪಾಲಿಸುತ್ತಿಲ್ಲ? ನಮ್ಮ ಸಂಸ್ಕೃತಿಯ ಮತ್ತು ಆತ್ಮಿಕತೆಯ ಸನ್ನಿವೇಶ ಹಿನ್ನಲೆಯಲ್ಲಿ ಈ ಆಜ್ಞೆಯೊಂದಿಗೆ ಯಾವ ಸಮಸ್ಯೆ ಕಷ್ಟಗಳು ಒಳಗೊಂಡಿವೆ?
2. ಈ ಅಧ್ಯಯನದಲ್ಲಿ ದಶಾಜ್ಞೆಗಳ ಹಾಗೂ ಒಡಂಬಡಿಕೆಯ ಗ್ರಂಥದಲ್ಲಿರುವ ಆಜ್ಞೆಗಳ ನಡುವೆ ಒಂದು ಮೂಲ ವ್ಯತ್ಯಾಸವಿದೆ ಎಂಬುದನ್ನು ಕಂಡುಕೊಂಡಿದ್ದೇವೆ.
    1) ಈ ವ್ಯತ್ಯಾಸವನ್ನು ವಿವರಿಸಿರಿ.
    2) ಇಂದು ಕ್ರಿಸ್ತೀಯ ವಿಶ್ವಾಸಿಗಳಿಗೆ ಈ ವ್ಯತ್ಯಾಸದಿಂದಾಗುವ ಪರಿಣಾಮವನ್ನು ವಿವರಿಸಿರಿ.

**ವಿಮೋಚನಕಾಂಡ ಅಧ್ಯಯನ 21: ಧರ್ಮಶಾಸ್ತ್ರ**


**ಅ. ಪರಿಚಯ**

ಸಿನಾಯಿ ಒಡಂಬಡಿಕೆಯ ಆಜ್ಞೆಗಳ ಕುರಿತು ಇರುವ ಎರಡು ಅಂಶಗಳನ್ನು ನಾವು ಅರ್ಥಮಾಡಿಕೊಳ್ಳಬೇಕು. ಮೊದಲನೆಯದು ನಿರ್ಗಮನ ಘಟನೆಯ ಮತ್ತು ಧರ್ಮಶಾಸ್ತ್ರದ ನಡುವೆ ಇರುವ ಸಂಬಂಧವಾಗಿದೆ. ಎರಡನೆಯದು (ಹಿಂದಿನ ಅಧ್ಯಯನದಲ್ಲಿ ತಿಳಿಸಲಾಗಿರುವಂತೆ) ದಶಾಜ್ಞೆಗಳ ಹಾಗೂ ಒಡಂಬಡಿಕೆಯ ಗ್ರಂಥದ (ಇಲ್ಲಿ ಅದನ್ನು ಒಡಂಬಡಿಕೆಯ ಸಂಹಿತೆಗಳು ಎಂದು ಕರೆಯಲಾಗಿದೆ) ನಡುವೆ ಇರುವ ಸಂಬಂಧವಾಗಿದೆ.

**ಆ. ಪ್ರಶ್ನೆಗಳು**

1. **ವಿಮೋಚನೆಯು ಧರ್ಮಶಾಸ್ತ್ರಕ್ಕಿಂತ ಮೊದಲು ಬರುತ್ತದೆ** ಎಂಬ ಕೆಳಗಿರುವ ಚಿತ್ರಣವನ್ನು ನಿರ್ಗಮನದ ಘಟನೆಯ ಹಾಗೂ ಸಿನಾಯಿ ಒಡಂಬಡಿಕೆಯ ಬೆಳಕಿನಲ್ಲಿ ಅಭ್ಯಸಿಸಿರಿ. ನಂತರ ನಿಮ್ಮ ಸಮಾರೋಪಗಳನ್ನು ಬರೆಯಿರಿ.
2. **ದಶಾಜ್ಞೆಗಳು ಮತ್ತು ಒಡಂಬಡಿಕೆಯ ಸಂಹಿತೆಗಳು** ಎಂಬ ಕೆಳಗಿರುವ ಇನ್ನೊಂದು ಚಿತ್ರಣವನ್ನು ಅಭ್ಯಸಿಸಿರಿ. ನಂತರ ನಿಮ್ಮ ಸಮಾರೋಪಗಳನ್ನು ಬರೆಯಿರಿ.

## ಧರ್ಮಶಾಸ್ತ್ರಕ್ಕಿಂತ ಮೊದಲು ವಿಮೋಚನೆ




## ದಶಾಜ್ಞೆಗಳು ಮತ್ತು ಒಡಂಬಡಿಕೆಯ ಶಾಸನಗಳು

**ದಶಾಜ್ಞೆಗಳು**




ನೇರವಾಗಿ ಇಸ್ರಾಯೇಲ್ಯರನ್ನು ಉದ್ದೇಶಿಸಿ ಹೇಳಲ್ಪಟ್ಟದ್ದು

ಸಾಮಾನ್ಯ ನಿಯಮಗಳು

**ಒಡಂಬಡಿಕೆಯ ಶಾಸನಗಳು**



**ವಿಮೋಚನಕಾಂಡ ಅಧ್ಯಯನ 22: ದೇವರ ದೂತನು ಮಾರ್ಗವನ್ನು ಸಿದ್ಧಮಾಡುವನು**

**ಅ. ಪರಿಚಯ**

ಸಿನಾಯಿ ಪರ್ವತದ ಮೇಲೆ ಮೋಶೆಯು ದಶಾಜ್ಞೆಗಳನ್ನು ಮತ್ತು ಒಡಂಬಡಿಕೆಯ ಗ್ರಂಥವನ್ನು ಹೊಂದಿಕೊಂಡನು. ನಂತರ ದೇವರು ತನ್ನ ದೂತನನ್ನು ಇಸ್ರಾಯೇಲರ ಮುಂದಾಗಿ ಕಳುಹಿಸಿ ಅವರನ್ನು ವಾಗ್ದಾನ ದೇಶದೊಳಗೆ ನಡೆಸುವನು ಎಂದು ವಾಗ್ದಾನ ಮಾಡಿದನು. ದೇವರು ಅವರನ್ನು ಆಶೀರ್ವದಿಸಿ ಅವರಿಗೆ ದೇಶವನ್ನು ಕೊಡುವನು. ಆದರೆ ಕಾನಾನಿನ ಜನರೊಂದಿಗೆ ಯಾವ ಒಡಂಬಡಿಕೆಯನ್ನೂ ಮಾಡಿಕೊಳ್ಳಬಾರದು ಅಥವಾ ಅವರನ್ನು ದೇಶದಲ್ಲಿ ವಾಸಿಸಲು ಬಿಡಬಾರದು.

**ಆ. ಓದಿರಿ**

ವಿಮೋ. 23:20–33

**ಇ. ಟಿಪ್ಪಣಿ**

*ನಾನು ಸಿದ್ಧ ಮಾಡಿದ ಸ್ಥಳಕ್ಕೆ* (ವ. 20): ಈ ಹೇಳಿಕೆಯು ವಾಗ್ದಾನ ದೇಶವಾದ ಕಾನಾನನ್ನು ಉಲ್ಲೇಖಿಸುತ್ತದೆ.

*ನನ್ನ ಹೆಸರು ಅವನಲ್ಲಿ ಇರುವುದರಿಂದ* (ವ. 21): ಇದರ ಅರ್ಥವೇನೆಂದರೆ, ದೇವದೂತನು ದೇವರನ್ನು ಪ್ರತಿನಿಧಿಸುತ್ತಿದ್ದಾನೆ ಮತ್ತು ದೇವರು ಆ ದೇವದೂತನಲ್ಲಿದ್ದಾನೆ ಎಂಬುದಾಗಿದೆ.

*ಅಮೋರಿಯರೂ ಹಿತ್ತಿಯರೂ ಪೆರಿಜೀಯರೂ ಕಾನಾನ್ಯರೂ ಹಿವ್ವಿಯರೂ ಯೆಬೂಸಿಯರೂ* (ವ. 23): ವಾಗ್ದಾನ ದೇಶದಲ್ಲಿ ಈ ಆರು ರಾಷ್ಟ್ರಗಳು ಜೀವಿಸುತ್ತಿದ್ದವು. ನಾವು ಪಂಚಕಾಂಡದಲ್ಲಿ ಕಾನಾನ್ಯ ರಾಷ್ಟ್ರಗಳ ವಿವಿಧ ಪಟ್ಟಿಗಳನ್ನು ಕಾಣುತ್ತೇವೆ. ಕೆಲವು ಕೇವಲ ಎರಡು ಹೆಸರುಗಳನ್ನು ಮಾತ್ರ ಹೊಂದಿವೆ (ಆದಿ. 13:7), ಇತರೆ ಮೂರನ್ನು (ವಿಮೋ. 23:28), ಐದನ್ನು (ಅರಣ್ಯ. 13:29), ಆರನ್ನು (ಇಲ್ಲಿ), ಏಳನ್ನು (ಧರ್ಮೋ. 7:1), ಹತ್ತನ್ನು (ಆದಿ 15:19–21) ಅಥವಾ ಹನ್ನೆರಡನ್ನು (ಆದಿ. 10:15–18) ಹೊಂದಿವೆ.

*ಕಡಜದ ಹುಳಗಳನ್ನು* (ವ. 28): ಈ ದೊಡ್ಡದಾದ ಮತ್ತು ಆಕ್ರಮಣಶೀಲ ಹುಳವು 'ನಿರುತ್ಸಾಹಕ್ಕೆ' ಅಥವಾ 'ಪಿಡುಗಿಗೆ' ಒಂದು ರೂಪಾಲಂಕಾರವಾಗಿ ಬಳಸಲಾಗುತ್ತಿತ್ತೆಂದು ತೋರುತ್ತದೆ. ಇದರ ಅರ್ಥವೇನೆಂದರೆ, ದೇಶವನ್ನು ಗೆದ್ದುಕೊಳ್ಳುವುದರಲ್ಲಿ ದೇವರು ತನ್ನ ಜನರ ಪರವಾಗಿ ಮಧ್ಯಸ್ತಿಕೆ ವಹಿಸುವನು ಎಂಬುದಾಗಿದೆ.

*ಫಿಲಿಷ್ಟಿಯರ ಸಮುದ್ರದವರೆಗೆ* (ವ. 31): ಈ ಹೇಳಿಕೆಯು ಮೆಡಿಟೆರೆನಿಯನ್ ಸಮುದ್ರವನ್ನು ಉಲ್ಲೇಖಿಸುತ್ತದೆ. ಫಿಲಿಷ್ಟಿಯರು ಅದರ ಪಶ್ಚಿಮ ತೀರಗಳಲ್ಲಿ ವಾಸಿಸುತ್ತಿದ್ದರು. ರೋಮನ್ ಕಾಲದಿಂದಲೂ ಈ ಭೌಗೋಳಿಕ ಪ್ರದೇಶಕ್ಕೆ ಬಳಸಲಾಗುತ್ತಿರುವ ಭೌಗೋಳಿಕ ಹೆಸರು 'ಪಾಲೆಸ್ತೀನ್'ಎಂಬುದಾಗಿದೆ ಮತ್ತು ಪಾಲೆಸ್ತೀನ್ ಎಂಬ ಹೆಸರು ಫಿಲಿಷ್ಟಿಯರು ಎಂಬ ಹೆಸರಿನಿಂದ ಆರಿಸಲಾಗಿದೆ.

*ಮರುಭೂಮಿಯಿಂದ ನದಿಯವರೆಗೆ* (ವ. 31): ಸಿನಾಯಿಯಈಶಾನ್ಯದಲ್ಲಿರುವ ಮರುಭೂಮಿಯಿಂದ ಯುಫ್ರೆಟಿಸ್ ನದಿಯವರೆಗೆ.

*ಉರುಲಾಗಿರುವುದು* (ವ. 33): ಇದು 'ನಾಶನಕ್ಕೆ ನಡೆಸುವ ಒಂದು ಬಲೆ' ಎಂಬುದರ ರೂಪಾಲಂಕಾರವಾಗಿದೆ.

**ಈ. ಪ್ರಶ್ನೆಗಳು**

1. ಈ ವಾಕ್ಯಭಾಗದ ರಚನೆಯು ಹೇಗಿದೆ ಮತ್ತು ಪಠ್ಯದ ಪ್ರತಿಯೊಂದು ಭಾಗದ ಪ್ರಧಾನ ವಿಷಯವೇನು?
2. ಇಸ್ರಾಯೇಲರು ದೇವದೂತನೊಂದಿಗೆ ಹೇಗೆ ನಡಕೊಳ್ಳಬೇಕಾಗಿತ್ತು?
3. ಇಸ್ರಾಯೇಲರು ಕಾನಾನಿನ ಜನರ ಧಾರ್ಮಿಕ ಆಚಾರಗಳ ಕುರಿತು ಹೇಗೆ ನಡಕೊಳ್ಳಬೇಕಾಗಿತ್ತು?
4. ಇಸ್ರಾಯೇಲರು ತನಗೆ ನಂಬಿಗಸ್ತರಾಗಿರುವುದಾದರೆ ದೇವರು ಅನೇಕ ಆಶೀರ್ವಾದಗಳನ್ನು ಅವರಿಗೆ ವಾಗ್ದಾನ ಮಾಡುತ್ತಾನೆ. ಆಶೀರ್ವಾದಗಳ ಒಂದು ಪಟ್ಟಿಯನ್ನು ಮಾಡಿರಿ.
5. ಇಸ್ರಾಯೇಲರು ಕಾನಾನಿನ ಜನರನ್ನು ದೇಶದಲ್ಲಿ ವಾಸಿಸಲು ಬಿಡಬಾರದು ಎಂದು ದೇವರು ಯಾಕೆ ಅವರಿಗೆ ಹೇಳಿದನು?
6. ನಾವು ಈ ವಾಕ್ಯಭಾಗದಿಂದ ವಾಗ್ದಾನ ದೇಶದ ವಿಸ್ತರಣೆಯ ಕುರಿತು ಏನನ್ನು ಕಲಿತುಕೊಳ್ಳುತ್ತೇವೆ?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ವಾಗ್ದಾನ ದೇಶವು ಇಸ್ರಾಯೇಲರ ಪ್ರಾಂತವಾಗಿ ಸ್ಥಾಪಿಸಲ್ಪಡಬೇಕಾದರೆ ದೇವರು ಮತ್ತು ಇಸ್ರಾಯೇಲರು ಹೇಗೆ ಒಟ್ಟಾಗಿ ಕೆಲಸ ಮಾಡಬೇಕಿತ್ತು ಎಂಬುದರ ಕುರಿತು ಅಭ್ಯಸಿಸಿರಿ. ನಿಮ್ಮ ಸಮಾರೋಪಗಳನ್ನು ಬರೆಯಿರಿ.
2. ನಿಮ್ಮ ಸ್ವಂತ ಜೀವನ ಮತ್ತು ಸೇವೆಗಾಗಿ ಇದರಿಂದ ನೀವು ಏನನ್ನು ಕಲಿತುಕೊಳ್ಳುತ್ತೀರಿ? ನಿಮ್ಮ ಸಮಾರೋಪಗಳನ್ನು ಬರೆಯಿರಿ.

**ವಿಮೋಚನಕಾಂಡ ಅಧ್ಯಯನ 23: ಒಡಂಬಡಿಕೆಯ ಧೃಢೀಕರಣ**

**ಅ. ಪರಿಚಯ**

ಮೋಶೆಯು ಸಿನಾಯಿ ಪರ್ವತದ ಮೇಲೆ ದಶಾಜ್ಞೆಗಳನ್ನು ಮತ್ತು ಒಡಂಬಡಿಕೆಯ ಗ್ರಂಥವನ್ನು ಹೊಂದಿದ ನಂತರ ಆತನು ಪರ್ವತವನ್ನಿಳಿದು ಇಸ್ರಾಯೇಲರಿಗೆ ಆಜ್ಞೆಗಳ ಕುರಿತು ತಿಳಿಸಿದನು. ಇಸ್ರಾಯೇಲರು ಅದಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದರು ಮತ್ತು ಒಡಂಬಡಿಕೆಯು ಧೃಢೀಕರಿಸಲ್ಪಟ್ಟಿತು.

ನಂತರ ಮೋಶೆಯು ಪುನಃ ಪರ್ವತದ ಮೇಲೆ ಹಿಂತಿರುಗಿ ಹೋದನು, ಈ ಬಾರಿ ಆತನು ಇಸ್ರಾಯೇಲ್ ನಾಯಕರುಗಳ ಒಂದು ದೊಡ್ಡ ಗುಂಪಿನೊಂದಿಗೆ ಹೋದನು. ಅಲ್ಲಿ ಯೆಹೋವನು ಇಸ್ರಾಯೇಲರ ಮಧ್ಯದಲ್ಲಿ ವಾಸಿಸುವಂತೆ ಅವರು ಹೇಗೆ ಒಂದು ಪರಿಶುದ್ಧ ಆಲಯವನ್ನು ಕಟ್ಟಬೇಕೆಂಬುದರ ಕುರಿತು ಮೋಶೆಗೆ ಆಜ್ಞಾಪಿಸಿದನು (ವಿಮೋ. 25–31). ದೇವರು ಮೋಶೆಗೆ ಸಬ್ಬತ್ ದಿನಗಳ ಕುರಿತೂ ಜ್ಞಾಪಿಸಿದನು.

*ಯೆಹೋವನು ಮೋಶೆಯ ಸಂಗಡ ಸೀನಾಯಿ ಬೆಟ್ಟದಲ್ಲಿ ಮಾತನಾಡಿ ಮುಗಿಸಿದ ಮೇಲೆ ಅವನಿಗೆ ಸಾಕ್ಷಿಯ ಎರಡು ಹಲಗೆಗಳನ್ನೂ ದೇವರುಬೆರಳಿನಿಂದ ಬರೆದ ಕಲ್ಲಿನ ಹಲಗೆಗಳನ್ನೂ ಕೊಟ್ಟನು* (ವಿಮೋ.31:18).

**ಆ. ಓದಿರಿ**

ವಿಮೋ. 34:3–11; 34:1–2, 9–18; 31:18

**ಇ. ಟಿಪ್ಪಣಿ**

*ನಾದಾಬನೂ ಅಬೀಹುವೂ* (ವ. 24:1): ಇವರು ಆರೋನನ ಎರಡು ಹಿರಿಯ ಪುತ್ರರಾಗಿದ್ದರು.

*ಎಲ್ಲಾ ಮಾತುಗಳನ್ನೂ ಎಲ್ಲಾ ನ್ಯಾಯವಿಧಿಗಳನ್ನೂ* (ವ. 3): ಮೊದಲ ಪದವು ದಶಾಜ್ಞೆಗಳನ್ನು ಉಲ್ಲೇಖಿಸುತ್ತದೆ, ಅವುಗಳನ್ನು ಹಿಬ್ರೂ ಬೈಬಲ್‌ನಲ್ಲಿ 'ಹತ್ತು ಮಾತುಗಳು' ಎಂದು ಕರೆಯಲಾಗಿದೆ. ಎರಡನೆಯ ಪದವು ಒಡಂಬಡಿಕೆಯ ಗ್ರಂಥದಲ್ಲಿ ದಾಖಲಾಗಿರುವ ಆಜ್ಞೆಗಳನ್ನು ಉಲ್ಲೇಖಿಸುತ್ತದೆ (ವ. 7 ನ್ನು ನೋಡಿರಿ).

*ಒಡಂಬಡಿಕೆಯ ಗ್ರಂಥವನ್ನು* (ವ. 7): ಮೋಶೆಯು ಸಿನಾಯಿ ಪರ್ವತದ ಮೇಲೆ ದೇವರಿಂದ ಪಡೆದ ಆಜ್ಞೆಗಳ ಕುರಿತು ಈ ಹೇಳಿಕೆಯನ್ನು ಇಲ್ಲಿ ಮೊದಲ ಬಾರಿಗೆ ಬಳಸಲಾಗಿದೆ (20:22–23:19; ಆದರೆ ಬಹುಶಃ ಅದು ದಶಾಜ್ಞೆಗಳನ್ನೂ, 20:2–17 ಮತ್ತು 23:20–33 ರಲ್ಲಿರುವ ಆಜ್ಞೆಗಳನ್ನೂ ಒಳಗೊಂಡಿರಬಹುದು). 'ಧರ್ಮಶಾಸ್ತ್ರದ ಪುಸ್ತಕ' ಮತ್ತು 'ಒಡಂಬಡಿಕೆಯ ಗ್ರಂಥ' ಎಂಬ ಹೇಳಿಕೆಗಳು ಇಸ್ರಾಯೇಲರ ಇತಿಹಾಸದಲ್ಲಿ ನಂತರ ಮತ್ತೊಮ್ಮೆ ಬಳಸಲಾಗಿವೆ. ಯೂದದ ಅರಸನಾದ ಯೋಷೀಯನ ಆಳ್ವಿಕೆಯ ಸಮಯದಲ್ಲಿ (ಕ್ರಿ. ಪೂ. 640–609), ಮಹಾಯಾಜಕನಾದ ಹಿಲ್ಕೀಯನು ದೇವಾಲಯದಲ್ಲಿ 'ಧರ್ಮಶಾಸ್ತ್ರದ ಪುಸ್ತಕವನ್ನು' ಕಂಡುಕೊಂಡನು. ಧರ್ಮಶಾಸ್ತ್ರದ ಪಾರಾಯಣವು ಒಡಂಬಡಿಕೆಯ ನವೀಕರಣಕ್ಕೆ ನಡೆಸಿತು (2 ಅರಸುಗಳು 22–23).

*ದೇವರು ಇಸ್ರಾಯೇಲರ ಶ್ರೇಷ್ಠರ ಮೇಲೆ ಕೈ ಹಾಕಲಿಲ್ಲ* (ವ. 11): ಅಂದರೆ ದೇವರು ಅವರನ್ನು ನಾಶಮಾಡಲಿಲ್ಲ ಎಂಬುದಾಗಿದೆ.

*ಊಟಮಾಡಿ ಪಾನಮಾಡಿದರು* (ವ. 11): ಇದು ಒಡಂಬಡಿಕೆಯ ಊಟವಾಗಿತ್ತು, ಇದು ಬಹುಶಃ ಈ ವಾಕ್ಯಭಾಗದ ಪ್ರಾರಂಭದಲ್ಲಿ ದಾಖಲಿಸಲಾಗಿರುವ ಒಡಂಬಡಿಕೆಯ ಧೃಢೀಕರಣದ ಸಂಭ್ರಮಾಚರಣೆಯಾಗಿರಬಹುದು.

*ಕಲ್ಲಿನ ಹಲಿಗೆಗಳನ್ನು* (ವ. 12): ಕೆಳಗಿರುವ 31:18 ರ ಟಿಪ್ಪಣಿಯನ್ನು ನೋಡಿರಿ.

*ಬೋಧನೆಗೋಸ್ಕರ* (ವ. 12): ಇದು ಇಸ್ರಾಯೇಲರು ಪಾಲಿಸುವುದಕ್ಕಾಗಿ ತನ್ನ ದೈವಿಕ ಒಡಂಬಡಿಕೆಯ ಕಟ್ಟಳೆಗಳಾಗಿ ಯೆಹೋವನು ಅವರಿಗೆ ಕೊಡುತ್ತಿದ್ದ ಆಜ್ಞೆಗಳನ್ನು ಉಲ್ಲೇಖಿಸುತ್ತದೆ.

*ಯೆಹೋವನ ಮಹಿಮೆಯು* (ವ. 16): 13:21 ರ ಟಿಪ್ಪಣಿಯನ್ನು ನೋಡಿರಿ (16:10 ರೊಂದಿಗೆ ಹೋಲಿಸಿರಿ).

*ಸಾಕ್ಷಿಯ ಎರಡು ಹಲಗೆಗಳನ್ನೂ ದೇವರುಬೆರಳಿನಿಂದ ಬರೆದ ಕಲ್ಲಿನ ಹಲಗೆಗಳನ್ನೂ (ವಿಮೋ. 31:18):* ಒಂದು ಒಡಂಬಡಿಕೆಯ ದಸ್ತಾವೇಜಿನ ಎರಡು ನಕಲು ಪ್ರತಿಗಳನ್ನು (ಎರಡೂ ಪಕ್ಷದವರಿಗೆ ಒಂದೊಂದು ಪ್ರತಿ) ಮಾಡಿಕೊಳ್ಳುವುದು ಆ ದಿನಗಳ ಸಂಪ್ರದಾಯವಾಗಿತ್ತು. ಸಿನಾಯಿ ಒಡಂಬಡಿಕೆಯ ಎರಡೂ ಹಲಿಗೆಗಳನ್ನು (ದೇವರ ಪ್ರತಿಯನ್ನು ಮತ್ತು ಇಸ್ರಾಯೇಲರ ಪ್ರತಿಯನ್ನು) ಒಡಂಬಡಿಕೆಯ ಮಂಜೂಷದಲ್ಲಿ ಇಡಲಾಯಿತು, ಅದನ್ನು ಶಾಸನದ ಮಂಜೂಷವೆಂದೂ ಸಹ ಕರೆಯುತ್ತಾರೆ (ದೇವರು ಮೋಶೆಗೆ ಆಜ್ಞಾಪಿಸಿದಂತೆ, 25:21). 'ಸಾಕ್ಷಿ' ಎಂಬುದಕ್ಕೆ ಬಳಸಲಾಗಿರುವ ಹಿಬ್ರೂ ಪದವು ಬಾಬಿಲೋನಿಯನ್ ಪದಕ್ಕೆ ಸಂಬಂಧಪಟ್ಟಿದ್ದು ಅದರ ಅರ್ಥ 'ಒಡಂಬಡಿಕೆಯ ಶಾಸನಗಳು' ಎಂಬುದಾಗಿದೆ. ಹಲಿಗೆಗಳು ದಶಾಜ್ಞೆಗಳನ್ನು ಒಳಗೊಂಡಿದ್ದವು (34:28 ರೊಂದಿಗೆ ಹೋಲಿಸಿರಿ).

**ಈ. ಪ್ರಶ್ನೆಗಳು**

1. ದೇವರು ಪರ್ವತದ ಮೇಲೆ ಹೇಳಿದ್ದನ್ನು ಮೋಶೆಯು ಇಸ್ರಾಯೇಲರಿಗೆ ತಿಳಿಸಿದಾಗ ಅವರು ಹೇಗೆ ಪ್ರತಿಕ್ರಿಯಿಸಿದರು?

2. ಆಗ ಮೋಶೆಯು ಏನು ಮಾಡಿದನು?

3. ಒಡಂಬಡಿಕೆಯು ಹೇಗೆ ಧೃಢೀಕರಿಸಲ್ಪಟ್ಟಿತು? ಒಂದು ಪಟ್ಟಿಯನ್ನು ಮಾಡಿರಿ.

4. ವ. 8 ರಲ್ಲಿರುವ 'ತರುವಾಯ' ಎಂಬ ಪದದ ಮಹತ್ವವೇನಾಗಿರಬಹುದು?

5. ಮೋಶೆಯೊಂದಿಗೆ ಪರ್ವತದ ಮೇಲೆ ಬರಲು ಯಾರಿಗೆ ಅನುಮತಿಯಾಯಿತು? ಆದರೆ ಮೋಶೆಗೂ ಅವರಿಗೂ ನಡುವೆ ಇದ್ದ ವ್ಯತ್ಯಾಸವೇನಾಗಿತ್ತು (ವ. 1–2, 9, 12)?

6. ದೇವರು ಪರ್ವತದ ಮೇಲೆ ಬಂದ ಮೋಶೆಗೂ ಹಾಗೂ ಇತರೆ ನಾಯಕರುಗಳಿಗೂ ತನ್ನನ್ನು ಹೇಗೆ ಪ್ರಕಟಪಡಿಸಿಕೊಂಡನು?

7. ಮೋಶೆಯು ಪರ್ವತದ ಇನ್ನೂ ಮೇಲಕ್ಕೆ ಬರಲು ಯಾಕೆ ಹೇಳಿದನು?

8. ಯೆಹೋಶುವನ ಕುರಿತು 24 ನೇ ಅಧ್ಯಾಯದಲ್ಲಿ ನಾವು ಏನನ್ನು ತಿಳಿದುಕೊಳ್ಳುತ್ತೇವೆ?

9. ಇಸ್ರಾಯೇಲರು ಪರ್ವತದ ಮೇಲೆ ದೇವರ ಪ್ರಸನ್ನತೆಯನ್ನು ಹೇಗೆ ಅನುಭವಿಸಿದರು?

10. ದೇವರು ಮೋಶೆಗೆ ಸಾಕ್ಷಿಯ ಎರಡು ಹಲಿಗೆಗಳನ್ನು ಕೊಡುವುದಕ್ಕಿಂತ ಮುಂಚೆ ಏನಾಯಿತು (31:18)?

11. ಕಲ್ಲಿನ ಎರಡು ಹಲಿಗೆಗಳನ್ನು 'ಸಾಕ್ಷಿಯ ಎರಡು ಹಲಿಗೆಗಳೆಂದು' ಯಾಕೆ ಕರೆಯಲಾಯಿತು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ವಾಕ್ಯಭಾಗದಲ್ಲಿ ಬಲಿ ಅರ್ಪಿಸಲ್ಪಟ್ಟ ಎತ್ತಿನ ರಕ್ತವನ್ನು ಹೇಗೆ ಬಳಸಲಾಗಿದೆ ಎಂಬುದನ್ನು ಅಭ್ಯಸಿಸಿರಿ. ನಿಮ್ಮ ಸಮಾರೋಪಗಳನ್ನು ಬರೆಯಿರಿ.

2. *ಆದರೆ ದೇವರು ಇಸ್ರಾಯೇಲರ ಶ್ರೇಷ್ಠರ ಮೇಲೆ ಕೈ ಹಾಕಲಿಲ್ಲ. ಅವರು ಸಹ ದೇವರನ್ನು ನೋಡಿ ...* ಎಂಬ ಹೇಳಿಕೆಯನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ (ವ. 11)?


**ವಿಮೋಚನಕಾಂಡ ಅಧ್ಯಯನ 24: ಚಿನ್ನದ ಕರು**

**ಅ. ಪರಿಚಯ**

ಮೋಶೆಯು ಪರ್ವತದ ಮೇಲೆ ಅನೇಕ ದಿನಗಳು ಉಳಿದುಕೊಡನು. ಇಸ್ರಾಯೇಲರು ತಾಳ್ಮೆಯನ್ನು ಕಳೆದುಕೊಂಡು ಒಂದು ಕರುವಿನ ವಿಗ್ರಹವನ್ನು ಮಾಡಿ ಅದನ್ನು ಆರಾಧಿಸಿದರು.

ಪರ್ವತದ ಮೇಲೆ, ದೇವರು ಮೋಶೆಗೆ ಜನರ ಧರ್ಮಭ್ರಷ್ಟತೆಯ ಕುರಿತು ತಿಳಿಸಿದನು. ದೇವರು ಅವರನ್ನು ನಾಶ ಮಾಡಿ ಅವರ ಬದಲಾಗಿ ಮೋಶೆಯನ್ನು *ದೊಡ್ಡ ಜನಾಂಗವನ್ನಾಗಿ* ಮಾಡಬೇಕೆಂದಿದ್ದನು (ವಿಮೋ. 32:10). ಆದರೆ ಮೋಶೆಯು ಇಸ್ರಾಯೇಲರ ಪರವಾಗಿ ಬೇಡಿಕೊಂಡನು.*ಆಗ ಯೆಹೋವನು ತನ್ನ ಜನರಿಗೆ ಮಾಡುತ್ತೇನೆಂದು ಹೇಳಿದ ಕೇಡಿನ ವಿಷಯದಲ್ಲಿ ಮನಸ್ಸನ್ನು ಮಾರ್ಪಡಿಸಿಕೊಂಡನು* (ವಿಮೋ. 32:14).

ಮೋಶೆಯು ಎರಡು ಕಲ್ಲಿನ ಹಲಿಗೆಗಳನ್ನು ತೆಗೆದುಕೊಂಡು ಪರ್ವತವನ್ನಿಳಿದು ಹೋದನು. ಆತನು ಮತ್ತು ಯೆಹೋಶುವನು ಇಸ್ರಾಯೇಲರ ಪಾಳೆಯದ ಸಮೀಪಕ್ಕೆ ಬಂದಾಗ ಅವರಿಬ್ಬರು ಚಿನ್ನದ ಕರುವನ್ನು ಮತ್ತು ಜನರು ನಾಟ್ಯವನ್ನು ಮತ್ತು ಕೂಗಾಟವನ್ನು ಕಂಡರು. ಆರೋನನು ನಡೆದ ಘಟನೆಯನ್ನು ಮೋಶೆಗೆ ವಿವರಿಸಿದನು. ಲೇವಿಯರು ತಮ್ಮ ಕತ್ತಿಗಳನ್ನು ತೆಗೆದುಕೊಂಡು ಜನರನ್ನು ಶಿಕ್ಷಿಸಬೇಕೆಂದು ಮೋಶೆಯು ಅವರಿಗೆ ಆಜ್ಞಾಪಿಸಿದನು. ಆ ದಿನ ಸುಮಾರು ಮೂರು ಸಾವಿರ ಜನರು ಕೊಲ್ಲಲ್ಪಟ್ಟರು. *ಮರುದಿನದಲ್ಲಿ ಮೋಶೆಯು ಜನರಿಗೆ, 'ನೀವು ದೊಡ್ಡ ಪಾಪವನ್ನು ಮಾಡಿದ್ದೀರಿ.ಆದದರಿಂದ ಈಗ ನಾನು ಯೆಹೋವನ ಬಳಿಗೆ ಹೋಗುವೆನು, ಒಂದು ವೇಳೆ ನಿಮ್ಮ ಪಾಪಕ್ಕಾಗಿ ನಾನು ಪ್ರಾಯಶ್ಚಿತ್ತ ಮಾಡಿಯೇನು ಅಂದನು* (ವಿಮೋ. 32:30). ಹಾಗಾಗಿ ಮೋಶೆಯು ಮತ್ತೊಮ್ಮೆ ದೇವರ ಬಳಿಯಲ್ಲಿ ಬೇಡಿಕೊಳ್ಳಲು ಪರ್ವತವನ್ನು ಏರಿ ಹೋದನು. ಪಾಪ ಮಾಡಿದ ಇಸ್ರಾಯೇಲರು ಮಾತ್ರ ಬಾಧಿಸಲ್ಪಟ್ಟರು.



**ಆ. ಓದಿರಿ**

ವಿಮೋ. 32:1–35

**ಇ. ಟಿಪ್ಪಣಿ**

*ತಡವಾದದ್ದನ್ನು* (ವ. 1): ಮೋಶೆಯು ಹಗಲಿರುಳು ನಲವತ್ತು ದಿವಸ ಪರ್ವತದ ಮೇಲಿದ್ದನು (24:18).

*ದೇವರುಗಳು* (ವ. 1, 4, 8, 23, 31): ಹಿಬ್ರೂ ಪದವಾದ ಎಲೋಹಿಮ್ ಬಹುವಚನವಾಗಿದೆ ('ದೇವರುಗಳು') ಆದರೆ ಅದು 'ಏಕ ದೇವರನ್ನು' ಅರ್ಥೈಸಬಹುದು (ಇದನ್ನು 'ಸಾರ್ವಭೌಮತ್ವದ ಬಹುವಚನ' ಎಂದು ಕರೆಯಲಾಗುತ್ತದೆ).

*ಎರಕ ಹೊಯ್ದ ಕರುವಾಗಿ* (ವ. 4): ಆ ಕರುವು ಬಹುಶಃ ಪ್ರಾಚೀನ ಈಜಿಪ್ಟಿನ ಅತ್ಯಂತ ಮುಖ್ಯ ದೇವರುಗಳಲ್ಲಿ ಒಂದಾದ ಈಜಿಪ್ಟಿಯನ್ ಬಸವ–ದೇವರಾದ ಏಪಿಸ್‌ನಂತೆ ಕಂಡಿರಬಹುದು (ಮೇಲಿನ ಚಿತ್ರವನ್ನು ಗಮನಿಸಿರಿ). ಆರೋನನು ಮಾಡಿದ ವಿಗ್ರಹವು ಕಟ್ಟಿಗೆಯಿಂದ ಮಾಡಲ್ಪಟ್ಟು ಬಂಗಾರದ ಲೇಪನವನ್ನು ಹೊಂದಿದ್ದಿರಬಹುದು ಅಥವಾ ಪೂರ್ಣವಾಗಿ ಬಂಗಾರದಲ್ಲಿ ಎರಕ ಹೊಯ್ದು ನಂತರ ಉಳಿಯಿಂದ ರೂಪಿಸಲ್ಪಟ್ಟಿರಬಹುದು. ಹಿಬ್ರೂ ಪಠ್ಯದಲ್ಲಿ 'ಎರಕ ಹೊಯ್ದು' ಎಂಬ ಪದವಿಲ್ಲ ಕೇವಲ 'ಮಾಡಲ್ಪಟ್ಟಿತು' ಎಂಬ ಪದ ಮಾತ್ರವಿದೆ.

*ಎದ್ದು ಕುಣಿದಾಡಿದರು* (ವ. 6): ಹಿಬ್ರೂ ಹೇಳಿಕೆಯು ಲೈಂಗಿಕ ಅರ್ಥವನ್ನು ಸೂಚಿಸುತ್ತದೆ.

*ನಿನ್ನ ಜನರು ... ನಿನ್ನ ಜನರ* (ವ. 7, 11): 'ನಿನ್ನ' ಎಂಬ ಸರ್ವನಾಮದ ಬಳಕೆಯನ್ನು ಗಮನಿಸಿರಿ. ದೇವರು ಮೋಶೆಯೊಂದಿಗೆ ಮಾತನಾಡುವಾಗ ಇಸ್ರಾಯೇಲರನ್ನು 'ನಿನ್ನ ಜನರು' ಎಂದು ಮೊದಲು ಕರೆಯುತ್ತಾನೆ. ನಂತರ ಮೋಶೆಯು ದೇವರೊಂದಿಗೆ ಮಾತನಾಡುವಾಗ ಅವರನ್ನು 'ನಿನ್ನ ಜನರು' ಎಂದು ಕರೆಯುತ್ತಾನೆ.

*ಇಸ್ರಾಯೇಲನನ್ನೂ* (ವ. 13): ಮೋಶೆಯು ಯಾಕೋಬನ ಹೊಸ ಹೆಸರನ್ನು ಬಳಸುತ್ತಿದ್ದಾನೆ.

*ಬೆಟ್ಟದಿಂದಿಳಿದನು* (ವ. 15): ಹಾಗಾಗಿ ಮೋಶೆಯು 24:18 ರಿಂದ ಪರ್ವತದ ಮೇಲೆಯೇ ಇದ್ದಾನೆ. ಈ ನಲವತ್ತು ದಿವಸಗಳ ಅವಧಿಯಲ್ಲಿ ದೇವರು ಆತನಿಗೆ ಗುಡಾರವನ್ನು ಹೇಗೆ ಕಟ್ಟಬೇಕೆಂಬುದರ ಕುರಿತು ಆಜ್ಞಾಪಣೆಗಳನ್ನು ಕೊಟ್ಟನು. ದೇವರು ಆತನಿಗೆ ಕಲ್ಲಿನ ಎರಡು ಹಲಿಗೆಗಳನ್ನೂ ಸಹ ಕೊಟ್ಟು ಇಸ್ರಾಯೇಲರ ಧರ್ಮಭ್ರಷ್ಟತೆಯ ಕುರಿತು ತಿಳಿಸಿದನು.

*ದೇವರ ಬರಹವೇ* (ವ. 16): 31:18 ರಲ್ಲಿರುವ 'ದೇವರು ಬೆರಳಿನಿಂದ ಬರೆದ' ಎಂಬ ರೂಪಕಾಲಂಕಾರಿಕ ಹೇಳಿಕೆಯೊಂದಿಗೆ ಹೋಲಿಸಿರಿ. ಅದು ದೇವರ ಸ್ವಂತ ಒಡಂಬಡಿಕೆಯಾಗಿದ್ದು ಕಲ್ಲಿನ ಹಲಿಗೆಗಳ ಮೇಲೆ ಬರೆಯಲ್ಪಟ್ಟ ಒಡಂಬಡಿಕೆಯ ಶಾಸನಗಳು ಆತನವೇ ಎಂದು ಈ ಹೇಳಿಕೆಗಳು ಸೂಚಿಸುತ್ತವೆ.

*ಒಡೆದುಬಿಟ್ಟನು* (ವ. 19): ಇಸ್ರಾಯೇಲರು ತಮ್ಮ ಧರ್ಮಭ್ರಷ್ಟತೆಯ ಮೂಲಕ ಒಡಂಬಡಿಕೆಯ ಶಾಸನಗಳನ್ನು ಮುರಿದರು ಎಂಬುದನ್ನು ಚಿತ್ರಿಸಲು ಕಲ್ಲಿನ ಹಲಿಗೆಗಳು ಒಡೆದು ಹಾಕಲ್ಪಟ್ಟವು.

*ನಿಮ್ಮನ್ನೇ ಯೆಹೋವನ ಸೇವೆಗೆ ಪ್ರತಿಷ್ಠಾಪಿಸಿಕೊಂಡಿದ್ದೀರಿ* (ವ. 29): ಮೋಶೆಯು ಬಹುಶಃ ಲೇವಿಯರು ಗುಡಾರದ ಪಾಲಕರಾಗಿ ಮತ್ತು ಯಾಜಕರ ಸಹಾಯಕರಾಗಿ ಪ್ರತ್ಯೇಕಿಸಲ್ಪಟ್ಟದ್ದರ ಕುರಿತು ಉಲ್ಲೇಖಿಸುತ್ತಿರಬಹುದು. ಈ ಸನ್ನಿವೇಶದಲ್ಲಿ ಮೋಶೆಗೆ ಅವರು ತೋರಿದ ವಿಧೇಯತೆಯು ಯೆಹೋವನಿಗೆ ಅವರು ಬರಲಿದ್ದ ದಿನಗಳಲ್ಲಿನ ಯೆಹೋವನ ಸೇವೆಗೆ ಅವರು ಯೋಗ್ಯರಾಗಿ ಕಂಡುಬರುವಂತೆ ಮಾಡಿತು, ಹಾಗಾಗಿ ಅವರು ಅದಕ್ಕಾಗಿ 'ಪ್ರತಿಷ್ಠಾಪಿಸಲ್ಪಟ್ಟಿದ್ದರು'.

*ನಿಮ್ಮ ಪಾಪಕ್ಕಾಗಿ ನಾನು ಪ್ರಾಯಶ್ಚಿತ್ತ ಮಾಡಿಯೇನು* (ವ. 30): ಮೋಶೆಯು ತನ್ನ ಜನರ ಪರವಾಗಿ ಮಧ್ಯವರ್ತಿ ಪ್ರಾರ್ಥನೆಯನ್ನು ಉಲ್ಲೇಖಿಸುತ್ತಿದ್ದಾನೆ ಎಂಬುದನ್ನು ಇದರ ಸನ್ನಿವೇಶವು ತೋರಿಸುತ್ತದೆ.

*ನೀನು ನನ್ನ ಹೆಸರನ್ನು ಬರೆದ ನಿನ್ನ ಗ್ರಂಥದಿಂದ ... ನಾನು ನನ್ನ ಪುಸ್ತಕದಿಂದ ಅಳಿಸಿಬಿಡುವೆನು* (ವ. 32–33): ಈ 'ಪುಸ್ತಕ' ಅಥವಾ 'ಗ್ರಂಥವು' ಕೀರ್ತನೆ 69:28 ರಲ್ಲಿ 'ಜೀವಗ್ರಂಥ' ಎಂದೂ ಮತ್ತು ಹೊಸ ಒಡಂಬಡಿಕೆಯಲ್ಲಿ (ಫಿಲಿಪ್ಪಿ 4:3; ಪ್ರಕಟನೆ 3:5; 20:12, 15; 21:27) 'ಜೀವಬಾಧ್ಯರ ಪಟ್ಟಿ' ಎಂದೂ ಕರೆಯಲಾಗಿದೆ. ಇದು ದೇವರಿಗೆ ಸಂಬಂಧಪಡುವ ಜನರ ಕುರಿತು ಬಳಸಲಾಗಿರುವ ರೂಪಕಾಲಂಕಾರವಾಗಿದೆ.

**ಈ. ಪ್ರಶ್ನೆಗಳು**


1. ಇಸ್ರಾಯೇಲರ ಧರ್ಮಭ್ರಷ್ಟತೆಯಲ್ಲಿ ಪರ್ವತದ ಮೇಲೆ ಮೋಶೆಯ ನಲವತ್ತು ದಿವಸಗಳ ಗೈರು ಯಾವ ಪಾತ್ರವನ್ನು ವಹಿಸಿತ್ತು?
2. ದೇವರು ಇಸ್ರಾಯೇಲರನ್ನು ಈ ಅಧ್ಯಾಯದಲ್ಲಿ ಹೇಗೆ ವರ್ಣಿಸುತ್ತಾನೆ ಮತ್ತು ಅವರಿಗೆ ಏನು ಮಾಡಬೇಕೆಂದು ಆಲೋಚಿಸಿದ್ದಾನೆ?
3. ದೇವರ ಮನಪರಿವರ್ತನೆ ಮಾಡಲು ಮೋಶೆಯು ಯಾವ ವಾದಗಳನ್ನು ಬಳಸುತ್ತಾನೆ?
4. ಕಲ್ಲಿನ ಹಲಿಗೆಗಳು ಹೇಗೆ ವರ್ಣಿಸಲ್ಪಟ್ಟಿವೆ?
5. ಮೋಶೆಯು ಇಸ್ರಾಯೇಲರ ಪಾಳೆಯದಲ್ಲಿ ನಡೆಯುತ್ತಿದ್ದದ್ದನ್ನು ಕಂಡಾಗ ಹೇಗೆ ಪ್ರತಿಕ್ರಿಯಿಸಿದನು?
6. ಚಿನ್ನದ ಕರುವನ್ನು ಮಾಡಿದ್ದಕ್ಕಾಗಿ ಮೋಶೆಯು ಆರೋನನನ್ನು ದೂರಿದಾಗ ಆತನು ತನ್ನನ್ನು ಹೇಗೆ ಪ್ರತಿಪಾದಿಸಿಕೊಂಡನು?
7. ಮೋಶೆಯು ಇಸ್ರಾಯೇಲರಿಗೆ ಕೊಟ್ಟ ಸವಾಲು ಏನಾಗಿತ್ತು ಮತ್ತು ಅವರು ಹೇಗೆ ಅದಕ್ಕೆ ಪ್ರತಿಕ್ರಿಯಿಸಿದರು?
8. ಮೋಶೆಯು ಮತ್ತೊಮ್ಮೆ ಅಧ್ಯಾಯದ ಕೊನೆಯಲ್ಲಿ ದೇವರೊಂದಿಗೆ ಹೇಗೆ ಬೇಡಿಕೊಳ್ಳುತ್ತಾನೆ. ಆತನು ಏನು ಹೇಳುತ್ತಾನೆ?
9. ದೇವರು ಅಧ್ಯಾಯದ ಕೊನೆಯಲ್ಲಿ ಮೋಶೆಗೆ ಏನು ಹೇಳುತ್ತಾನೆ?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಆರೋನನು ಬಸವನ ಮೂರ್ತಿಗೆ ಯಾವ ಹೆಸರನ್ನು ಕೊಟ್ಟನು? ಆತನು ಆ ಹೆಸರನ್ನು ಯಾಕೆ ಕೊಟ್ಟನೆಂದು ನೀವು ಆಲೋಚಿಸುತ್ತೀರಿ?
2. ಮೋಶೆಯು ಇಸ್ರಾಯೇಲರ ಧರ್ಮಭ್ರಷ್ಟತೆಯನ್ನು ಒಂದು 'ದೊಡ್ಡ ಪಾಪ' ಎಂದು ಕರೆಯುತ್ತಾನೆ (ವ. 21). ಅದು ಯಾಕೆ ಒಂದು ದೊಡ್ಡ ಪಾಪವಾಗಿತ್ತು?
3. ಚಿನ್ನದ ಕರುವನ್ನು ಮಾಡಿದ್ದಕ್ಕಾಗಿ ಮೋಶೆಯು ಆರೋನನನ್ನು ದೂರಿದನು. ನಿಮಗೆ ಹೇಗನ್ನಿಸುತ್ತದೆ? ಇಸ್ರಾಯೇಲರ ಧರ್ಮಭ್ರಷ್ಟತೆಗೆ ನಿಜವಾಗಲೂ ಆರೋನನು ಕಾರಣನೋ? ನಿಮ್ಮ ಸಮಾರೋಪಗಳನ್ನು ಬರೆಯಿರಿ.
4. ಒಂದು ಕಾಲೇಜಿನ ಪಠ್ಯಪುಸ್ತಕದಿಂದ ಆರಿಸಲಾದ ***ವಿಗ್ರಹಾರಾಧನೆಯ ಮುಂಚೆ ಮತ್ತು ನಂತರ***ಎಂಬ ಚಿತ್ರಣವನ್ನು ಅಭ್ಯಸಿಸಿರಿ. ಅದು ಸಿನಾಯಿ ಪರ್ವತದ ಬಳಿಯಲ್ಲಿ ಇಸ್ರಾಯೇಲರ ಧರ್ಮಭ್ರಷ್ಟತೆಯ ಪರಿಣಾಮದ ಒಂದು ಸರಿಯಾದ ಚಿತ್ರಣವನ್ನು ಕೊಡುತ್ತದೆ ಎಂದು ನಿಮಗೆ ಅನ್ನಿಸುತ್ತದೋ? ನಿಮ್ಮ ಸಮಾರೋಪಗಳನ್ನು ಬರೆಯಿರಿ.

5. ದೇವರ ಅದ್ಭುತಕರವಾದ ಮಧ್ಯಸ್ತಿಕೆಯ ನಿಮಿತ್ತ ಇಸ್ರಾಯೇಲರು ಈಜಿಪ್ಟಿನ ಬಂಧನದಿಂದ ವಿಮೋಚಿಸಲ್ಪಟ್ಟರು. ಇದರ ಹೊರತಾಗಿಯೂ, ಅವರ ನಾಯಕನಾದ ಮೋಶೆಯು ಅವರೊಂದಿಗೆ ಇಲ್ಲದಿದ್ದ ಕ್ಷಣದಲ್ಲಿಯೇ ಅವರು ಹಿಂಜಾರಿದರು. ನೀವು ನಿಮ್ಮ ಸ್ವಂತ ದಕ್ಷಿಣ ಭಾರತದ ಧಾರ್ಮಿಕ ಮತ್ತು ಸಾಂಪ್ರದಾಯಿಕ ಹಿನ್ನಲೆಯನ್ನು ಗಮನದಲ್ಲಿಟ್ಟುಕೊಂಡು ಇದರಿಂದ ಏನನ್ನು ಕಲಿಯಬಹುದು?

## ವಿಗ್ರಹಾರಾಧನೆಯ ಮುಂಚೆ ಮತ್ತು ನಂತರ



**ವಿಮೋಚನಕಾಂಡ ಅಧ್ಯಯನ 25: ಮೋಶೆ ಮತ್ತು ಯೆಹೋವನ ಮಹಿಮೆ**

**ಅ. ಪರಿಚಯ**

ದೇವರು ಈಗಲೂ ಸಹ ಇಸ್ರಾಯೇಲರ ಮನೋಭಾವನೆಯ ಕುರಿತು ಸಂತೋಷವುಳ್ಳವನಾಗಿರಲಿಲ್ಲ, ಹಾಗಾಗಿ ಆತನು ಅವರೊಂದಿಗೆ ಇನ್ನು ಮುಂದೆ ಹೋಗಬಾರದೆಂದು ತೀರ್ಮಾನಿಸಿಕೊಂಡನು. ಆದರೆ ಆತನು ಅವರಿಗೆ ಮುಂಚೆಯೇ ತಿಳಿಸಿದಂತೆ ತನ್ನ ವಾಗ್ದಾನವನ್ನು ಉಳಿಸಿಕೊಳ್ಳುವವನಾಗಿ ಆತನು ತನ್ನ ದೂತನನ್ನು ಅವರ ಮುಂದಾಗಿ ವಾಗ್ದಾನ ದೇಶದೊಳಗೆ ಕಳುಹಿಸಿಕೊಡಲಿದ್ದನು.

ಪಾಳೆಯದಿಂದ ಸ್ವಲ್ಪ ದೂರದಲ್ಲಿ ಮೋಶೆಯ ಗುಡಾರವಿತ್ತು. ಅದನ್ನು 'ದೇವದರ್ಶನದ ಗುಡಾರ' ಎಂದು ಕರೆಯಲಾಗುತ್ತಿತ್ತು ಮತ್ತು ಅಲ್ಲಿ *ಯೆಹೋವನು ಮೋಶೆಯ ಸಂಗಡ ಮುಖಾಮುಖಿಯಾಗಿ ಮಾತನಾಡುತ್ತಿದ್ದನು* (ವಿಮೋ. 33:11). ಮೋಶೆಯು ದೇವರಲ್ಲಿ ಬೇಡಿಕೊಂಡಾಗ ಆತನು ಇಸ್ರಾಯೇಲರೊಂದಿಗೆ ಹೋಗುವುದಕ್ಕೆ ಒಪ್ಪಿಕೊಂಡನು.

ದೇವರು ನಂತರ ಮೋಶೆಗೆ ದಶಾಜ್ಞೆಗಳು ಬರೆಯಲ್ಪಡುವುದಕ್ಕಾಗಿ ಎರಡು ಹೊಸ ಕಲ್ಲಿನ ಹಲಿಗೆಗಳನ್ನು ತೆಗೆದುಕೊಂಡು ಸಿನಾಯಿ ಪರ್ವತದ ಮೇಲೆ ಹಿಂತಿರುಗಿ ಬರಬೇಕೆಂದು ಹೇಳಿದನು. ಅಲ್ಲಿ *ಯೆಹೋವನು ಮೇಘದಲ್ಲಿ ಇಳಿದು ಬಂದು ಅವನ ಸಂಗಡ ಅಲ್ಲಿ ನಿಂತುಕೊಂಡು ಯೆಹೋವನ ಹೆಸರನ್ನು ಪ್ರಕಟಮಾಡಿದನು. ಯೆಹೋವನು ಅವನೆದುರಿಗೆ ಹಾದು ಹೋಗಿ, 'ಯೆಹೋವನು, ಯೆಹೋವನಾದ ದೇವರು, ಕರುಣಾಳುವೂ ಕೃಪಾಳುವೂ ದೀರ್ಘಶಾಂತನೂ ಒಳ್ಳೇತನದಲ್ಲಿ ಮತ್ತು ಸತ್ಯದಲ್ಲಿ ಸಮೃದ್ಧಿಯಾದಾತನೂ ...' ಎಂದು ಪ್ರಕಟಿಸಿಕೊಂಡನು*(ವಿಮೋ. 34:5–6). *ಆಗ ಮೋಶೆಯು ತ್ವರೆಪಟ್ಟು ನೆಲಕ್ಕೆ ಬಾಗಿ ಆತನನ್ನು ಆರಾಧಿಸಿದನು* (ವ. 8). ದೇವರು ಇಸ್ರಾಯೇಲರ ದುಷ್ಟತನಕ್ಕಾಗಿಯೂ ಅವರ ಪಾಪಕ್ಕಾಗಿಯೂ ಕ್ಷಮಿಸಬೇಕೆಂದು ಆತನಲ್ಲಿ ಬೇಡಿಕೊಂಡನು.

ದೇವರು ಇಸ್ರಾಯೇಲರೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡನು. ಆತನು ಮೋಶೆಗೆ ಅನೇಕ ಆಜ್ಞೆಗಳನ್ನು ತಿಳಿಸಿ ಅದನ್ನು ಬರೆಯಲು ಹೇಳಿದನು. ಯಾಕೆಂದರೆ, *'ಈ ವಾಕ್ಯಗಳ ಪ್ರಕಾರವೇ ನಿನ್ನ ಸಂಗಡಲೂ ಇಸ್ರಾಯೇಲಿನ ಸಂಗಡಲೂ ನಾನು ಒಡಂಬಡಿಕೆಯನ್ನು ಮಾಡಿದ್ದೇನೆ' ಅಂದನು. ಮೋಶೆಯು ಹಗಲಿರುಳು ನಲವತ್ತು ದಿವಸ ರೊಟ್ಟಿಯನ್ನು ತಿನ್ನದೆ ನೀರನ್ನು ಕುಡಿಯದೆ ಅಲ್ಲಿ ಯೆಹೋವನ ಸಂಗಡ* ಇದ್ದನು.ದೇವರು ಅಂತಿಮವಾಗಿ*ಒಡಂಬಡಿಕೆಯ ವಾಕ್ಯಗಳಾದ ಹತ್ತು ಆಜ್ಞೆಗಳನ್ನು ಹಲಗೆಗಳ ಮೇಲೆ ಬರೆದನು* (ವಿಮೋ. 34:27–28).

ಮೋಶೆಯು ಪರ್ವತವನ್ನಿಳಿದು ಕೆಳಗೆ ಬಂದಾಗ ಆತನ ಮುಖವು ಪ್ರಕಾಶಿಸುತ್ತಿತ್ತು ಯಾಕೆಂದರೆ ಆತನು ದೇವರೊಂದಿಗೆ ಮಾತನಾಡಿದ್ದನು (34:29–35). ಆತನು ಎಲ್ಲಾ ಇಸ್ರಾಯೇಲರನ್ನು ಒಟ್ಟುಗೂಡಿಸಿ ಅವರಿಗೆ ಸಬ್ಬತ್ ದಿನದ ಆಚರಣೆಯನ್ನು ನೆನಪಿಸಿದನು (35:1–3).

**ಆ. ಓದಿರಿ**

ವಿಮೋ. 33:1–34:35

**ಇ. ಟಿಪ್ಪಣಿ**

*ಕಾನಾನ್ಯರನ್ನೂ ... ಯೆಬೂಸಿಯರನ್ನೂ* (32:2): ವಿಮೋ. 20:23 ರ ಟಿಪ್ಪಣಿಯನ್ನು ನೋಡಿರಿ.

*ಹಾಲೂ ಜೇನೂ ಹರಿಯುವ ದೇಶಕ್ಕೆ* (33:3): ವಿಮೋ. 3:8 ರ ಟಿಪ್ಪಣಿಯನ್ನು ನೋಡಿರಿ.

*ತಮ್ಮ ಆಭರಣಗಳನ್ನು ತೆಗೆದುಬಿಟ್ಟರು* (33:6): ಆಭರಣಗಳನ್ನು ತೆಗೆದು ಬಿಡುವುದು ದುಃಖದ ಸಂಕೇತವಾಗಿತ್ತು.

*ಪಾಳೆಯದ ಹೊರಗಿರುವ ದೇವದರ್ಶನ ಗುಡಾರಕ್ಕೆ* (33:7): ಈ ದೇವದರ್ಶನ ಗುಡಾರವು ತಾತ್ಕಾಲಿಕವಾದ ನಿರ್ಮಾಣವಾಗಿತ್ತು. ಇನ್ನೊಂದು ದೇವದರ್ಶನ ಗುಡಾರವನ್ನು ನಂತರ ಇಸ್ರಾಯೇಲರ ಪಾಳೆಯದ ಮಧ್ಯದಲ್ಲಿ ನಿರ್ಮಿಸಲಾಯಿತು.

*ಮೇಘಸ್ತಂಭ* (33:9): ಈ ಸ್ತಂಭವು ದೇವರ ಪ್ರಸನ್ನತೆಯ ಸಂಕೇತವಾಗಿತ್ತು (ವಿಮೋ. 13:21; 19:16; 24:15–18 ನ್ನು ನೋಡಿರಿ).

*ಯೆಹೋವನು ಮೋಶೆಯ ಸಂಗಡ ಮುಖಾಮುಖಿಯಾಗಿ ಮಾತನಾಡುತ್ತಿದ್ದನು* (33:11): ಇದು ಒಂದು ಮನುಷ್ಯತಾರೋಪಣವಾಗಿದೆ. ದೇವರು ಮನುಷ್ಯನ ಮುಖವುಳ್ಳವನಂತೆ ಇಲ್ಲಿ ಬಿಂಬಿಸಲಾಗಿದೆ. ಇದು ದೇವರು ಮೋಶೆಯೊಂದಿಗೆ ಹೊಂದಿದ ನಿಕಟ ಸಂಪರ್ಕದ ಸಂಕೇತವಾಗಿದೆ.

*ಸನ್ನಿಧಾನವು* (33:14): ಇದರ ಹಿಬ್ರೂ ಪದವು 'ಮುಖ' ಎಂಬುದಾಗಿದೆ.

*ನಾನು ಒಂದು ಒಡಂಬಡಿಕೆಯನ್ನು ಮಾಡುತ್ತೇನೆ* (34:10): ಇಸ್ರಾಯೇಲರ ಧರ್ಮಭ್ರಷ್ಟತೆಯ ಪರಿಣಾಮವಾಗಿ ಮುರಿದು ಹೋಗಿದ್ದ ಒಡಂಬಡಿಕೆಯನ್ನು ದೇವರು ನವೀಕರಿಸುತ್ತಿದ್ದಾನೆ.

*ಅಶೇರ ವಿಗ್ರಹಸ್ತಂಭಗಳನ್ನು* (34:13): ಅಶೇರ ಒಬ್ಬ ಕಾನಾನ್ಯರ ದೇವತೆಯಾಗಿದ್ದು ಎಲ್‌ನ ಹೆಂಡತಿಯಾಗಿದ್ದಳು. ಆಕೆಯನ್ನು ಕಟ್ಟಿಗೆಯ ಕಂಬಗಳ ರೂಪದಲ್ಲಿ ಆರಾಧಿಸುತ್ತಿದ್ದರು.

*ರೋಷವುಳ್ಳವನು ಎಂದು ಹೆಸರುಳ್ಳ*(34:14): ವಿಮೋ. 20:5 ರ ಟಿಪ್ಪಣಿಯನ್ನು ನೋಡಿರಿ.

*ಎರಕಹೊಯ್ದ ವಿಗ್ರಹಗಳನ್ನು* (34:17): ಇಂತಹ ವಿಗ್ರಹಗಳನ್ನು ಒಂದು ಅಚ್ಚಿನಲ್ಲಿ ಅಥವಾ ಚೌಕಟ್ಟಿನ ಮೇಲೆ ಎರಕ ಹೊಯ್ಯುವುದರ ಮೂಲಕ ಮಾಡಲಾಗುತ್ತಿತ್ತು (32:4 ರ ಟಿಪ್ಪಣಿಯನ್ನು ನೋಡಿರಿ).

*ಮುಖವನ್ನು* (33:20, 23): ದೇವರು ಮೋಶೆಯೊಂದಿಗೆ 'ಮುಖಾಮುಖಿಯಾಗಿ' ದಿನನಿತ್ಯ ಮಾತನಾಡುತ್ತಿದ್ದನು ಎಂದು 33:11 ರಲ್ಲಿರುವ ಸಂಗತಿಯೊಂದಿಗೆ ಹೋಲಿಸುವಾಗ, ಎರಡೂ ಸನ್ನಿವೇಶಗಳಲ್ಲಿ 'ಮುಖ' ಎಂಬ ಪದವನ್ನು ರೂಪಕಾಲಂಕಾರವಾಗಿ ಅರ್ಥೈಸಿಕೊಳ್ಳಬೇಕೆಂದು ತಿಳಿದುಕೊಳ್ಳುತ್ತೇವೆ. ದೇವದರ್ಶನ ಗುಡಾರದಲ್ಲಿ ಇಸ್ರಾಯೇಲರು ಮೋಶೆಯ ಮೂಲಕ ದೇವರ ಬಳಿಗೆ ತಂದ ವಿಷಯಗಳ ಕುರಿತು ಮಾರ್ಗದರ್ಶನವನ್ನು ಕೇಳುತ್ತಾ ಮೋಶೆಯು ದೇವರ ಪ್ರಸನ್ನತೆಯನ್ನು ಅತ್ಯಂತ ನಿಕಟವಾಗಿ ('ಮುಖಾಮುಖಿಯಾಗಿ') ಅನುಭವಿಸಿದನು. ದೇವರು ಪರ್ವತದ ಮೇಲೆ ಮೋಶೆಗೆ ತನ್ನ ಪೂರ್ಣ ಮಹಿಮೆಯನ್ನು ಪ್ರಕಟಿಸಲು (ಆತನಿಗೆ 'ತನ್ನ ಮುಖವನ್ನು' ತೋರಿಸಲು) ಆಗಲಿಲ್ಲ, ಯಾಕೆಂದರೆ ಆ ಅನುಭವವನ್ನು ಮೋಶೆಯು ಹೊಂದಿದ್ದರೆ ಬದುಕುಳಿಯುತ್ತಿರಲಿಲ್ಲ.

*ಈ ವಾಕ್ಯಗಳನ್ನು ಬರೆ* (34:27): ದೇವರು ಈ ಅಧ್ಯಾಯದಲ್ಲಿ ಕಂಡುಬರುವ (ವ. 10–26) ಒಡಂಬಡಿಕೆಯ ಶಾಸನಗಳನ್ನು (ಆಜ್ಞೆಗಳನ್ನು) ಉಲ್ಲೇಖಿಸುತ್ತಿದ್ದಾನೆ.

*ಆತನು ... ಹಲಿಗೆಗಳ ಮೇಲೆ ಬರೆದನು* (34:28): ಇಲ್ಲಿ 'ಆತನು' ಎಂಬ ಪದವು ಯೆಹೋವನನ್ನು ಉಲ್ಲೇಖಿಸುತ್ತದೆ (ಮೋಶೆಯನ್ನಲ್ಲ). ಈ ವಚನವನ್ನು 34:1 ರೊಂದಿಗೆ ಹೋಲಿಸುವಾಗ ಇದು ಸ್ಪಷ್ಟವಾಗುತ್ತದೆ.

**ಈ. ಪ್ರಶ್ನೆಗಳು**

1. ಯೆಹೋವನು ಇಸ್ರಾಯೇಲರೊಂದಿಗೆ ಇನ್ನು ಮುಂದೆ ಹೋಗಬಾರದೆಂದು ಯಾಕೆ ತೀರ್ಮಾನಿಸಿದನು?
2. ಇಸ್ರಾಯೇಲರು ದುಃಖದ ಒಂದು ಸಂಕೇತವಾಗಿ ಏನನ್ನು ಮಾಡಿದರು?
3. ಮೋಶೆಯು ದೇವದರ್ಶನದ ಗುಡಾರದ ಒಳಗೆ ಹೋದಾಗ ಜನರು ಯಾಕೆ ನಿಂತುಕೊಂಡು ಆರಾಧಿಸಿದರು?
4. ದೇವದರ್ಶನದ ಗುಡಾರದ ಬಳಿಯಲ್ಲಿ ಮೋಶೆಯ ಜೊತೆಗೆ ಯಾರು ಇದ್ದರು?
5. ದೇವರು ತಮ್ಮ ಜೊತೆಗೆ ಹೋಗಬೇಕೆಂಬುದಕ್ಕೆ ಮೋಶೆಯು ಮಂಡಿಸಿದ ವಾದಗಳೇನು?
6. ದೇವರು ಯಾಕೆ ಅಂತಿಮವಾಗಿ ಇಸ್ರಾಯೇಲರೊಂದಿಗೆ ಹೋಗಲು ಒಪ್ಪಿಕೊಂಡನು?
7. ಮೋಶೆಯು ತನಗೆ ದೇವರ ಮಹಿಮೆಯನ್ನು ತೋರಿಸಬೇಕೆಂದು ಕೇಳಿದಾಗ ದೇವರು ಆತನಿಗೆ ಏನೆಂದು ಉತ್ತರಿಸಿದನು?
8. ಈ ಬಾರಿ ಮೋಶೆಯು ಪರ್ವತವನ್ನು ಏರಿ ಹೋದಾಗ ಆತನು ಅನುಭವಿಸಿದ ಸಂಗತಿಗಳ ಒಂದು ಪಟ್ಟಿಯನ್ನು ಮಾಡಿರಿ.
9. ದೇವರು ಇಸ್ರಾಯೇಲರಿಗೆ ಕಾನಾನಿನ ಮತ್ತು ಅಲ್ಲಿನ ಜನರ ಕುರಿತು ಯಾವ ಆಜ್ಞೆಗಳನ್ನು ಕೊಟ್ಟನು?
10. ಮೋಶೆಯು ಯಾಕೆ ಮುಸುಕು ಹಾಕಿಕೊಂಡನು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ಅಧ್ಯಾಯಗಳಲ್ಲಿ ದೇವರ ಕುರಿತು ನಾವು ಏನನ್ನು ಕಲಿತುಕೊಳ್ಳುತ್ತೇವೆ? ಒಂದು ಪಟ್ಟಿಯನ್ನು ಮಾಡಿರಿ.
2. ಈ ಎರಡು ಅಧ್ಯಾಯಗಳಲ್ಲಿ ಮೋಶೆಯ ಮತ್ತು ಆತನ ಆತ್ಮಿಕ ಜೀವನದ ಕುರಿತು ನಾವು ಏನನ್ನು ಕಲಿತುಕೊಳ್ಳುತ್ತೇವೆ? ಒಂದು ಪಟ್ಟಿಯನ್ನು ಮಾಡಿರಿ.
3. ಈ ಅಧ್ಯಯನದ ಮೂಲಕ ಮೋಶೆ, ಆತನ ಆತ್ಮಿಕ ಜೀವನ ಮತ್ತು ದೇವರೊಂದಿಗಿನ ಆತನ ಸಂಬಂಧದಿಂದ ನೀವು ಏನನ್ನು ಕಲಿತುಕೊಂಡಿದ್ದೀರಿ?

## ವಿಮೋಚನಕಾಂಡ ಅಧ್ಯಯನ 26: ದೇವದರ್ಶನ ಗುಡಾರ

### ಅ. ಪರಿಚಯ

ದೇವದರ್ಶನ ಗುಡಾರದ ಕುರಿತಾದ (ಅದರ ರಚನೆ, ಸಾಮಾಗ್ರಿಗಳು, ಯಾಜಕರು, ಯಾಜಕ ವಸ್ತ್ರಗಳು ಮತ್ತು ಇತರೆ ಆಚಾರಗಳ ಕುರಿತಾದ ವಿಷಯಗಳನ್ನು) ಮಾಹಿತಿಯನ್ನು ವಿಮೋಚನಕಾಂಡದಲ್ಲಿ ಎರಡು ಬಾರಿ ತಿಳಿಸಲಾಗಿದೆ.

ಮೊದಲು, ದೇವರು ಮೋಶೆಗೆ ಅದರ ಬಗ್ಗೆ ತಿಳಿಸಿ, ಅದನ್ನು ಹೇಗೆ ಮಾಡಬೇಕೆಂಬುದರ ಕುರಿತು ಆತನಿಗೆ ಎಲ್ಲಾ ಸೂಚನೆಗಳನ್ನು ಕೊಟ್ಟನು (ಅಧ್ಯಾಯಗಳು 25–31). ಪರ್ವತದ ಮೇಲೆ ಮೋಶೆಯು ಮೊದಲ ಬಾರಿಗೆ ನಾಲ್ವತ್ತು ಹಗಲಿರುಳನ್ನು ಕಳೆದ ಅವಧಿಯಲ್ಲಿ ಇದು ಸಂಭವಿಸಿತು ಮತ್ತು ಇದೇ ಅವಧಿಯಲ್ಲಿ ಆತನು ಕಲ್ಲಿನ ಹಲಿಗೆಗಳ ಮೊದಲ ಜೋಡಿಯನ್ನೂ ಸಹ ಪಡೆದನು.

ನಂತರ ದೇವದರ್ಶನ ಗುಡಾರದ ಕೆಲಸವು ವಾಸ್ತವಿಕವಾಗಿ ನಡೆದಾಗ ಅದರ ಕುರಿತಾದ ಎಲ್ಲಾ ಮಾಹಿತಿಗಳು ಮತ್ತೊಮ್ಮೆ ನಮಗೆ ತಿಳಿಸಲ್ಪಟ್ಟಿವೆ (ಅಧ್ಯಾಯಗಳು 35–40). ಇದು ಇಸ್ರಾಯೇಲರ ಧರ್ಮಭ್ರಷ್ಟತೆಯ ನಂತರ ಮತ್ತು ಪರ್ವತದ ಮೇಲೆ ಮೋಶೆಯು ಎರಡನೆಯ ಬಾರಿಗೆ ನಾಲ್ವತ್ತು ಹಗಲಿರುಳನ್ನು ಕಳೆದ ಅವಧಿಯಲ್ಲಿ ಇದು ಸಂಭವಿಸಿತು. ಇದೇ ಅವಧಿಯಲ್ಲಿ ಕಲ್ಲಿನ ಹಲಿಗೆಗಳ ಎರಡನೆಯ ಜೋಡಿಯು ಮಾಡಲ್ಪಟ್ಟಿತು. ವಿಮೋಚನಕಾಂಡದ ಕೊನೆಯ ಅಧ್ಯಾಯವು ದೇವದರ್ಶನ ಗುಡಾರವು ಹೇಗೆ ನಿರ್ಮಿಸಲ್ಪಟ್ಟಿತು ಮತ್ತು ಅದು ಹೇಗೆ ಯೆಹೋವನ ಮಹಿಮೆಯಿಂದ ತುಂಬಲ್ಪಟ್ಟಿತು ಎಂಬುದನ್ನು ತಿಳಿಸುವುದರ ಮೂಲಕ ಗುಡಾರದ ಕುರಿತು ಇನ್ನೂ ಹೆಚ್ಚಿನ ಮಾಹಿತಿಯನ್ನು ನಮಗೆ ಒದಗಿಸುತ್ತದೆ (40:1–35).

ಇಸ್ರಾಯೇಲರ ಅರಣ್ಯದಲ್ಲಿನ ಅಲೆದಾಟಗಳ ವರ್ಷಗಳೆಲ್ಲಾ ದೇವರು ಯಾವ ರೀತಿಯಾಗಿ ಅವರನ್ನು ನಡೆಸಿದನು ಎಂಬುದರ ಕುರಿತು ಮುಕ್ತಾಯದ ವಚನಗಳು ನಮಗೆ ತಿಳಿಸುತ್ತದೆ: *ಮೇಘವು ಗುಡಾರವನ್ನು ಬಿಟ್ಟು ಮೇಲಕ್ಕೆ ಹೋದಾಗ ಇಸ್ರಾಯೇಲರು ತಮ್ಮ ಪ್ರಯಾಣಕ್ಕಾಗಿ ಮುಂದೆ ಹೊರಡುತ್ತಿದ್ದರು. ಆದರೆ ಮೇಘವು ಎತ್ತಲ್ಪಡದೆ ಇರುವಾಗ ಅದು ಎತ್ತಲ್ಪಡುವ ದಿವಸದವರೆಗೆ ಅವರು ಪ್ರಯಾಣ ಮಾಡಲಿಲ್ಲ, ಏಕೆಂದರೆ ಇಸ್ರಾಯೇಲ್ಯರ ಮನೆಯವರೆಲ್ಲರ ಕಣ್ಣುಗಳ ಮುಂದೆ ಅವರ ಎಲ್ಲಾ ಪ್ರಯಾಣಗಳಲ್ಲಿ ಹಗಲಿನಲ್ಲಿ ಯೆಹೋವನ ಮೇಘವು ಗುಡಾರದ ಮೇಲೆ ಇತ್ತು. ರಾತ್ರಿಯಲ್ಲಿ ಅಗ್ನಿಯು ಅದರ ಮೇಲೆ ಇತ್ತು* (ವಿಮೋ. 40:36–38).

### ಆ. ಓದಿರಿ

ವಿಮೋ. 40:1–38. ನೀವು ಕೆಳಗಿರುವ ಪ್ರಶ್ನೆಗಳನ್ನು ಉತ್ತರಿಸುವಾಗ 25–31 ಮತ್ತು 35–39 ಅಧ್ಯಾಯಗಳ ಅನೇಕ ಭಾಗಗಳನ್ನೂ ಸಹ ಉಲ್ಲೇಖಿಸಲಿದ್ದೀರಿ.

### ಇ. ಟಿಪ್ಪಣಿ

ಈ ಟಿಪ್ಪಣಿಗಳು ಮೊದಲು ಕೆಲವು ಸಾಮಾನ್ಯ ವಿಷಯಗಳ ಕುರಿತು ಮಾತನಾಡುತ್ತದೆ. ನಂತರ ದೇವದರ್ಶನ ಗುಡಾರ, ಅದರ ಸಾಮಾಗ್ರಿಗಳ ಕುರಿತು ಟಿಪ್ಪಣಿ ಕೊಡಲಾಗಿದೆ. ಅದಾದ ನಂತರ ಬರುವುದು ಯಾಜಕರಿಗೆ ಸಂಬಂಧಪಟ್ಟ ವಿಷಯಗಳು.

*ಕಾಣಿಕೆಗಳು ಮತ್ತು ವಸ್ತುಗಳು* (35:4–28): ಇಸ್ರಾಯೇಲರು ಅವಶ್ಯವಿದ್ದದ್ದನ್ನೆಲ್ಲಾ ಕೊಟ್ಟರು: ಚಿನ್ನ, ಬೆಳ್ಳಿ, ತಾಮ್ರ, ನೀಲಿ, ಧೂಮ್ರ, ಕೆಂಪುವರ್ಣದ ನಯವಾದ ನಾರುಮಡಿ, ಮೇಕೆಯ ಕೂದಲು,ಕೆಂಪು ಬಣ್ಣದಲ್ಲಿ ಅದ್ದಿದ ಟಗರಿನ ಚರ್ಮಗಳು, ಕಡಲು ಹಂದಿಯ ಚರ್ಮಗಳು ಜಾಲೀಮರ.ದೀಪಕ್ಕೋಸ್ಕರ ಓಲಿವ್ ಎಣ್ಣೆ, ಅಭಿಷೇಕಿಸುವ ತೈಲಕ್ಕೋಸ್ಕರ ಮತ್ತು ಪರಿಮಳ ಧೂಪಕ್ಕೋಸ್ಕರ ಸುಗಂಧತೈಲ,ಮತ್ತು ರತ್ನಗಳು.

*ಬೆಚಲೇಲ ಮತ್ತು ಒಹೊಲಿಯಾಬ* (31:1–11; 35:30–36:7): ಈ ಎರಡು ಪುರುಷರು ಕೆಲಸದ ಜವಾಬ್ದಾರಿಯನ್ನು ಹೊತ್ತಿದ್ದರು, ಆದರೆ ಇಸ್ರಾಯೇಲಿನ ಎಲ್ಲಾ ಶಿಲ್ಪಿಗಳು ಅವರಿಗೆ ಸಹಾಯ ಮಾಡಿದರು (35:10–19).

*ಮೊಳ:* ಅಂದರೆ ಸುಮಾರು 45 ಸೆ.ಮೀ. ಅಥವಾ 1.47 ಅಡಿ. ಇಂಗ್ಲಿಶ್ ಭಾಷೆಯಲ್ಲಿ *ಕ್ಯೂಬಿಟ್* ಎಂಬುದಾಗಿ.

*ಅಂಗಳ* (27:9–19; 38:9–20): ಅದರ ಅಳತೆಯು 221.4 ಅಡಿ ಅಗಲ ಮತ್ತು 73.8 ಅಡಿ ಉದ್ದವಾಗಿದ್ದು 7.3 ಅಡಿ ಎತ್ತರದ ತೆರೆಗಳಿಂದ ಸುತ್ತುವರಿಯಲ್ಪಟ್ಟಿತ್ತು.

*ದೇವದರ್ಶನ ಗುಡಾರ* (26:1–37; 36:8–38): ಈ ಗುಡಾರವು ಎರಡು ಭಾಗಗಳನ್ನು ಹೊಂದಿತ್ತು, ಅವುಗಳು ಒಂದು ತೆರೆಯಿಂದ ವಿಭಾಗಿಸಲ್ಪಟ್ಟಿದ್ದವು. ಅತೀ ಪರಿಶುದ್ಧ ಸ್ಥಳವು ಒಂದು ಘನಾಕೃತಿಯ ರೂಪವನ್ನು ಹೊಂದಿದ್ದು 14.7 ಅಡಿಯುಳ್ಳ ಬದಿಯನ್ನು ಹೊಂದಿತ್ತು. ಅದರೊಳಗೆ ಮಂಜೂಷವು ಇಡಲಾಗಿತ್ತು. ಪರಿಶುದ್ಧ ಸ್ಥಳವೂ ಸಹ ಸಮಾನವಾದ ಅಗಲವನ್ನು ಹೊಂದಿದ್ದು 29.5 ಅಡಿ ಉದ್ದಳತೆಯನ್ನು ಹೊಂದಿತ್ತು. ಧೂಪವೇದಿ, ದೀಪಸ್ತಂಭ ಮತ್ತು ಮೇಜು ಅದರೊಳಗೆ ಇಡಲಾಗಿತ್ತು. ಕಟ್ಟಿಗೆಯ ನಿಲುವುಪಟ್ಟಿಗಳಿಂದ ಮತ್ತು ವಿವಿಧ ರೀತಿಯ ತೆರೆಗಳಿಂದ ಗುಡಾರವು ಮಾಡಲ್ಪಟ್ಟಿತ್ತು.

*ಮಂಜೂಷ* (25:10–22; 37:1–9): ಅದು 3.6 ಅಡಿ ಉದ್ದ, 2.21 ಅಡಿ ಅಗಲ ಮತ್ತು 2.21 ಅಡಿ ಎತ್ತರವುಳ್ಳದ್ದಾಗಿದ್ದು ಜಾಲೀ ಮರದಿಂದ ಮಾಡಲ್ಪಟ್ಟು ಬಂಗಾರದ ಲೇಪನ ಮಾಡಲಾಗಿತ್ತು. ಅದರೊಳಗೆ ಸಾಕ್ಷಿಯ ಎರಡು ಕಲ್ಲಿನ ಹಲಿಗೆಗಳು ಇಡಲಾಗಿದ್ದವು ಮತ್ತು

ಅದು ಅತೀ ಪವಿತ್ರ ಸ್ಥಳದಲ್ಲಿ ಇಡಲ್ಪಟ್ಟಿತ್ತು. ಅದನ್ನು ಎರಡು ಕೆರೂಬಿಗಳುಳ್ಳ (ರೆಕ್ಕೆಗಳುಳ್ಳ ಜೀವಿಗಳು) ಮುಚ್ಚಳದಿಂದ (ಅದನ್ನು **'ಕರುಣಾಸನ'** ಎಂದು ಕರೆಯಲಾಗುತ್ತಿತ್ತು) ಮುಚ್ಚಲಾಗಿತ್ತು.

*ಧೂಪವೇದಿಕೆ* (25:31–40; 37:17–24): ಇದೂ ಸಹ ಚಿನ್ನದಿಂದ ಮಾಡಲಾಗಿದ್ದು ಪವಿತ್ರ ಸ್ಥಳದಲ್ಲಿ ಇಡಲಾಗಿತ್ತು. ಇದನ್ನು ಒಂದು ಬಾದಾಮಿ ಮರದ ಆಕಾರದಲ್ಲಿ ರೂಪಿಸಲಾಗಿದ್ದು ಏಳು ದೀಪಗಳನ್ನು ಹೊಂದಿತ್ತು. ಈ ದೀಪಗಳು ಉರಿಯುವುದಕ್ಕಾಗಿ ಓಲೀವ್ ಎಣ್ಣೆಯನ್ನು ಬಳಸಲಾಗುತ್ತಿತ್ತು (25:6; 27:20; 35:8, 28).

*ರೊಟ್ಟಿ ಮೇಜು* (25:24–30; 37:10–16): ಇದೂ ಸಹ ಪವಿತ್ರ ಸ್ಥಳದಲ್ಲಿ ಇಡಲಾಗಿದ್ದು ಸಮ್ಮುಖದ ರೊಟ್ಟಿಗಾಗಿ ಬಳಸಲ್ಪಡುತ್ತಿತ್ತು. ಇದರೊಂದಿಗೆ ಪಾತ್ರೆಗಳು, ಧೂಪಾರತಿಗಳು, ಮುಚ್ಚಳಗಳು, ಬಟ್ಟಲಗಳು ಸಹ ಬಳಸಲಾಗುತ್ತಿದ್ದವು.

*ತೊಳೆಯುವುದಕ್ಕೆ ಬೋಗುಣಿ* (30:17–21; 38:8): ಇದು ಹಿತ್ತಾಳೆಯಿಂದ ಮಾಡಲಾಗಿದ್ದು ಯಾಜಕರು ತಮ್ಮ ಕೈಕಾಲುಗಳನ್ನು ತೊಳೆಯುವುದಕ್ಕಾಗಿ ಬಳಸಲಾಗುತ್ತಿತ್ತು. ಇದನ್ನು ಗುಡಾರದ ಅಂಗಳದಲ್ಲಿ ಇಡಲಾಗಿತ್ತು.

*ದಹನಬಲಿಗಾಗಿ ಬಲಿಪೀಠ* (27:1–19; 38:1–7): ಎರಡು ಬಲಿಪೀಠಗಳಲ್ಲಿ ಅತೀ ದೊಡ್ಡ ಬಲಿಪೀಠವು ಇದಾಗಿತ್ತು. ಇದು ಜಾಲೀಮರದಿಂದ ಮಾಡಲಾಗಿದ್ದು, 7.35 ಅಡಿ ಚಚ್ಚೌಕಾರದ ಮತ್ತು 4.41 ಅಡಿ ಎತ್ತರದ ಗಾತ್ರವುಳ್ಳದ್ದಾಗಿತ್ತು. ಅದರ ನಾಲ್ಕು ತುದಿಗಳಲ್ಲಿದ್ದ ಕೊಂಬುಗಳು ಹಿತ್ತಾಳೆಯಿಂದ ಹೊದಿಸಲಾಗಿದ್ದವು. ಅದನ್ನು ಪ್ರಾಣಿ ಬಲಿಗಳಿಗಾಗಿ ಬಳಸಲಾಗುತ್ತಿತ್ತು.

*ಯಾಜಕರ ವಸ್ತ್ರಗಳು* (28:1–43; 39:1–31): ಇವುಗಳು ಎದೆಪದಕ, ಎಫೋದ, ಅಂಗಿ, ಎಫೋದಿನ ನಿಲುವಂಗಿ, ಮುಂಡಾಸ ಮತ್ತು ನಡುಕಟ್ಟನ್ನು ಹೊಂದಿದ್ದವು. ಎಫೋದ್ ಎಂಬುದು ಒಂದು ತೋಳಿಲ್ಲದ ಬಟ್ಟೆಯಾಗಿದ್ದು ನಿಲುವಂಗಿಯ ಮೇಲೆ ಧರಿಸಲಾದ ಅಂಗಿಯ ಮೇಲೆ ಧರಿಸಲಾಗುತ್ತಿತ್ತು. ಎದೆಪದಕ ಎಂಬುದು ಎದೆಯ ಮೇಲೆ ಧರಿಸಲಾಗುತ್ತಿದ್ದ ಒಂದು ಅತ್ಯಂತ ಶೃಂಗಾರವುಳ್ಳ ಚೀಲವಾಗಿತ್ತು. ಅದು ಊರಿಮ್ ಮತ್ತು ತುಮ್ಮೀಮ್, ಅಂದರೆ ದೇವರ ಚಿತ್ತವನ್ನು ನಿರ್ಧರಿಸಲು ಬಳಸಲಾಗುತ್ತಿದ್ದ ಪವಿತ್ರ ಚೀಟಿಗಳನ್ನು, ಹೊಂದಿತ್ತು. ಕೇವಲ ಪ್ರಧಾನ ಯಾಜಕನು ಮಾತ್ರ ಪೂರ್ಣವಾದ ಉಡುಪನ್ನು ಧರಿಸುತ್ತಿದ್ದನು.

*ಅಭಿಷೇಕ ತೈಲ* (30:23–33; 37:29): ಈ ತೈಲವು ದೀಪಸ್ತಂಭದ ತೈಲದಿಂದ ಅತ್ಯಂತ ವ್ಯತ್ಯಾಸವುಳ್ಳದ್ದಾಗಿದ್ದು ಮಸಾಲೆ ಪದಾರ್ಥಗಳನ್ನು ಮತ್ತು ಸುಗಂಧಗಳನ್ನು ಹೊಂದಿತ್ತು. ಅದನ್ನು ಗುಡಾರ ಮತ್ತು ಅದರ ಸಾಮಾಗ್ರಿಗಳ ಮತ್ತು ಯಾಜಕರ ಶುದ್ಧೀಕರಣಕ್ಕಾಗಿ ಬಳಸಲಾಗುತ್ತಿತ್ತು.

**ಈ. ಪ್ರಶ್ನೆಗಳು**

1. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲು ಮುಂದಿನ ಹಾಳೆಗಳಲ್ಲಿರುವ ಗುಡಾರದ ಎರಡು ಚಿತ್ರಗಳನ್ನು ಅಭ್ಯಸಿಸಿರಿ ಮತ್ತು ಮೇಲೆ ತಿಳಿಸಿರುವ ಟಿಪ್ಪಣಿಗಳಲ್ಲಿರುವ ಮಾಹಿತಿಯನ್ನು ಬಳಸಿರಿ:
   1) ಎರಡೂ ಚಿತ್ರಗಳಲ್ಲಿರುವ ಅಂಗಳದ ಅಂತರವನ್ನು ತೋರಿಸಿರಿ.
   2) ಎರಡೂ ಚಿತ್ರಗಳಲ್ಲಿ ಗುಡಾರವನ್ನು ಕಂಡುಹಿಡಿಯಿರಿ.
   3) ಗುಡಾರದ ಯೋಜನೆಯನ್ನು ವಿವರಿಸಿರಿ.
   4) ಗುಡಾರದ ಸಾಮಾಗ್ರಿಗಳನ್ನು ಎಲ್ಲಿ ಇಡಲಾಗಿತ್ತು ಎಂಬುದನ್ನು ವಿವರಿಸಿರಿ.
   5) ಗುಡಾರದ ಸಾಮಾಗ್ರಿಗಳನ್ನು ವಿವರಿಸಿರಿ. ಅವುಗಳನ್ನು ಹೇಗೆ ಇನ್ನೊಂದೆಡೆಗೆ ಸಾಗಿಸಬಹುದಾಗಿತ್ತು (ನೋಡಿರಿ 37:5, 14, 27)?
2. ಗುಡಾರದ ಎರಡು ಚಿತ್ರಗಳು ನಿಮಗೆ ತೃಪ್ತಿಯನ್ನು ಕೊಟ್ಟಿವೆಯೋ? ಅಥವಾ ಕೆಲವು ಬದಲಾವಣೆಗಳನ್ನು ಮಾಡಬೇಕೆಂದು ನಿಮಗೆ ಅನ್ನಿಸುತ್ತದೋ? ವಿವರಿಸಿರಿ.
3. ಯಾಜಕರು ಯಾರಾಗಿದ್ದರು (28:1)?
4. ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸುವಾಗಮುಂದಿನ ಹಾಳೆಯಲ್ಲಿರುವ ಯಾಜಕನ ಚಿತ್ರವನ್ನು ಗಮನಿಸಿರಿ ಮತ್ತು ಮೇಲೆ ತಿಳಿಸಿರುವ ಟಿಪ್ಪಣಿಗಳಲ್ಲಿರುವ ಮಾಹಿತಿಯನ್ನು (ವಾಕ್ಯದ ಉಲ್ಲೇಖದೊಂದಿಗೆ) ಬಳಸಿರಿ.
   1) ಆ ಚಿತ್ರದಲ್ಲಿ ಈ ವಸ್ತ್ರಗಳನ್ನು ಕಂಡುಹಿಡಿಯಿರಿ: ಎದೆಪದಕ, ಎಫೋದ, ಅಂಗಿ, ಎಫೋದಿನ ನಿಲುವಂಗಿ, ಮುಂಡಾಸ ಮತ್ತು ನಡುಕಟ್ಟು.
   2) ಯಾಜಕನು ತನ್ನ ಕೈಯಲ್ಲಿ ಏನನ್ನು ಹಿಡಿದಿದ್ದಾನೆ ಎಂದು ನಿಮಗೆ ಅನ್ನಿಸುತ್ತದೆ?
   3) ಈ ಚಿತ್ರದಲ್ಲಿ ಊರಿಮ್ ಮತ್ತು ತುಮ್ಮೀಮ್ ಯಾಕೆ ಕಾಣಿಸುತ್ತಿಲ್ಲ?

4) ಯಾಜಕನ ಚಿತ್ರವು ನಿಮಗೆ ತೃಪ್ತಿಯನ್ನು ಕೊಟ್ಟಿದೆಯೋ? ಅಥವಾ ಕೆಲವು ಬದಲಾವಣೆಗಳನ್ನು ಮಾಡಬೇಕೆಂದು ನಿಮಗೆ ಅನ್ನಿಸುತ್ತದೋ? ವಿವರಿಸಿರಿ.

5) ಆತನ ಉಡುಪನ್ನು ಒಬ್ಬ ಭಾರತೀಯ ಕ್ರೈಸ್ತ ಸಭಾಪಾಲಕನ, ಒಬ್ಬ ಭಾರತೀಯ ಹಿಂದೂ ಅರ್ಚಕನ ಮತ್ತು ಭಾರತೀಯ ಮುಸ್ಲಿಮ್ ಮುಲ್ಲಾನ ಉಡುಪಿನೊಂದಿಗೆ ಹೋಲಿಸಿರಿ. ನೀವು ಗಮನಿಸುವ ಅಂಶಗಳನ್ನು ಬರೆಯಿರಿ.

5. ಗುಡಾರದ ನಿರ್ಮಾಣ (40:1–33):

1) ಈ ವಾಕ್ಯಭಾಗದ ರಚನೆಯನ್ನು ವಿವರಿಸಿರಿ. ಒಂದು ಹೇಳಿಕೆಯು ಪದೇ ಪದೇ ಪುನರಾವರ್ತಿಸಲಾಗಿದೆ. ಆ ಹೇಳಿಕೆ ಯಾವುದು?

2) ಶುದ್ಧೀಕರಣದ ಒಂದು ಭಾಗವನ್ನು ಅಲ್ಪವಾಗಿ ತಿಳಿಸಲಾಗಿದೆ. ಅದು ಯಾವುದು (ಅಧ್ಯಾಯ 29 ನ್ನು ಹೋಲಿಸಿರಿ)?

6. ದೇವರ ಮಹಿಮೆಯು ಗುಡಾರವನ್ನು ತುಂಬಿದಾಗ ಏನಾಯಿತು?

7. ಸಿನಾಯಿ ಪರ್ವತದಿಂದ ವಾಗ್ದಾನ ದೇಶದವರೆಗೆ ಇಸ್ರಾಯೇಲರು ಅಲೆದಾಡಿದಾಗ ದೇವರು ಅವರನ್ನು ಹೇಗೆ ಮಾರ್ಗದರ್ಶಿಸಿದನು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. 'ಕೆಲಸವನ್ನು ತೀರಿಸಿ ಮೋಶೆಯ ವಶಕ್ಕೆ ಕೊಟ್ಟದ್ದು' ಎಂಬ ವಾಕ್ಯಭಾಗವನ್ನು ಓದಿರಿ (39:32–43). ಅದರಲ್ಲಿರುವ ಪ್ರಧಾನವಾದ ಹೇಳಿಕೆಯು 'ಯೆಹೋವನು ಮೋಶೆಗೆ ಆಜ್ಞಾಪಿಸಿದ ಹಾಗೆಯೇ' ಎಂಬುದಾಗಿದೆ (ವ. 43, ವ. 32 ರೊಂದಿಗೆ ಹೋಲಿಸಿರಿ). ಈ ಹೇಳಿಕೆಯು ಕೆಳಗೆ ತಿಳಿಸಲ್ಪಟ್ಟಿರುವವರಿಗೆ ಯಾವ ಮಹತ್ವವನ್ನು ಹೊಂದಿದೆ ಎಂದು ನಿಮಗೆ ಅನ್ನಿಸುತ್ತದೆ?

1) ಮೋಶೆಗೆ

2) ಇಸ್ರಾಯೇಲರಿಗೆ

3) ನಮಗೆ


2. ಗುಡಾರವು ನಿರ್ಮಿಸಲ್ಪಟ್ಟಾಗ ಇಸ್ರಾಯೇಲರ ಆತ್ಮಿಕ ಜೀವನದಲ್ಲಿ ಉಂಟಾದ ಬದಲಾವಣೆಯನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ? ದೇವರು ಹಳೆಯ ದೇವದರ್ಶನ ಗುಡಾರದಲ್ಲಿ ಇದಕ್ಕೂ ಮುಂಚೆ ಮೋಶೆಯೊಂದಿಗೆ ಮಾತನಾಡುತ್ತಿದ್ದನು (33:7–11). ಆತನಿಗೆ ಈಗಿನಿಂದ ಹೊಸ ದೇವದರ್ಶನ ಗುಡಾರದೊಳಗೆ, ಅಂದರೆ ಗುಡಾರದೊಳಗೆ ಪ್ರವೇಶವಿರಲಿಲ್ಲ (40:35). ಯಾಕೆ?

3. ಇಸ್ರಾಯೇಲರು ಸಿನಾಯಿ ಪರ್ವತದ ಬಳಿಯಲ್ಲಿ ಕಳೆದ ಆ ವರ್ಷವನ್ನು ನೆನಪಿಸಿಕೊಳ್ಳಿರಿ. ಅದು ದೇವರು ತನ್ನನ್ನು ಪ್ರಕಟ ಮಾಡಿಕೊಂಡ ಮತ್ತು ಅವರೊಂದಿಗೆ ಮಾತನಾಡಿದ ವರ್ಷವಾಗಿತ್ತು. ಆತನು ಅದನ್ನು ಹೇಗೆ ಮಾಡಿದನು?


4. ದೇವರು ಇಂದಿನ ದಕ್ಷಿಣ ಭಾರತದ ವಿಶ್ವಾಸಿಗಳಾದ ನಮ್ಮೊಂದಿಗೆ ಹೇಗೆ ಮಾತನಾಡುತ್ತಾನೆ ಮತ್ತು ತನ್ನನ್ನು ಹೇಗೆ ಪ್ರಕಟಿಸಿಕೊಳ್ಳುತ್ತಾನೆ?



ಗುಡಾರದ ದೃಶ್ಯ



## ಗುಡಾರದ ಯೋಜನೆ



N
E
S
W
ದಹನಬಲಿಗಾಗಿ ಬಲಿಪೀಠ
ತೊಳೆಯುವುದಕ್ಕೆ ಬೋಗುಣಿ
ಪವಿತ್ರ ಸ್ಥಳ
ಮೇಜು
ಧೂಪ ವೇದಿಕೆ
ದೀಪಸ್ತಂಭ
ಅತಿಪವಿತ್ರ ಸ್ಥಳ
ಮಂಜೂಷ
ದೇವದರ್ಶನ ಗುಡಾರ

# ಯಾಜಕಕಾಂಡ ಅಧ್ಯಯನ

## ಯಾಜಕಕಾಂಡ ಪುಸ್ತಕದ ಪರಿಚಯ

### ಹೆಸರು

ಯಾಜಕಕಾಂಡವು ಪೆಂಟಟ್ಯೂಕ್‌ನ ಮೂರನೆಯ ಪುಸ್ತಕವಾಗಿದೆ. "ಲೆವಿಟಿಕಸ್" (ಯಾಜಕಕಾಂಡ) ಎಂಬ ಇಂಗ್ಲಿಶ್ ಪದವು ಹಳೆ ಒಡಂಬಡಿಕೆಯ ಗ್ರೀಕ್ ಭಾಷಾಂತರವಾದ "ಸೆಪ್ಟುವಾಜಿಂಟ್" ದಿಂದ ಬಂದಿದೆ. ಮತ್ತು ಇದು "ಲೆವಿಯರಿಗೆ ಸಂಬಂದಿಸಿದ್ದು" ಎಂಬ ಅರ್ಥವನ್ನು ಹೊಂದಿದೆ. ಈ ಪುಸ್ತಕದ ಮೊದಲ ಮಾತಾದ "ಆತನು ಕರೆದನು" ಎಂಬುದರಿಂದ ಈ ಪುಸ್ತಕವನ್ನು ಇಬ್ರಿಯ ಬೈಬಲ್‌ನಲ್ಲಿ ಗುರುತಿಸಲಾಗಿದೆ (ಕರ್ತನು ಮೋಶೆಯನ್ನು ಕರೆದನು ಓಖಗಿ). ಯೆಹೂದಿ ಪಂಡಿತರು ಈ ಪುಸ್ತಕವನ್ನು "ಯಾಜಕರಿಗಿರುವ ನಿಯಮಗಳು, ಬೋಧನೆಗಳು" ಎಂದು ಅರ್ಥೈಸುತ್ತಾರೆ.

ಇಡೀ ಜನಾಂಗದ ಪರ ಯಾಜಕೊಧ್ಯೋಗ ನಡೆಸುವದಕ್ಕಾಗಿ ದೇವರು ಇಸ್ರಾಯೇಲ್ಯರಲ್ಲಿ ಲೇವಿ ಕುಲವನ್ನು ನೇಮಿಸುತ್ತಾನೆ. ಈ ನಿಮಿತ್ಯ ಕೆವು ಲೇವಿಯರು (ಆರೋನನ ಸಂತಾನದವರು) ಯಾಜಕ ಕರ್ತವ್ಯಗಳನ್ನು ನಿರ್ವಹಿಸಿದರೆ, ಉಳಿದವರು ದೇವರ ಗುಡಾರ ಮತ್ತು ಅದರ ಒಳಗಣ ಪೀಠೋಪಕರಣಗಳ ಮೆಲ್ವಿಚಾರಣೆಯನ್ನು ನಡೆಸುತ್ತಾರೆ.

### ಪುಸ್ತಕದ ಕಾಲ ಮತ್ತು ಪರಿಸರ

*ಯೆಹೋವನು ಸೀನಾಯಿ ಬೆಟ್ಟದಲ್ಲಿ ಮೋಶೆಯ ಮೂಲಕ ಇಸ್ರಾಯೇಲ್ಯರಿಗೆ ಕೊಟ್ಟ ಆಜ್ಞೆಗಳು ಇವೆ* (27:34). ಪುಸ್ತಕದ ಕೊನೆಯಲ್ಲಿ ಬರುವ ಈ ವಚನವು ಇಸ್ರಯೇಲ್ಯರು ಸಿನಾಯಿ ಪರ್ವತದಲ್ಲಿ ಇಳುಕೊಂಡಿದ್ದ ವರ್ಷದಲ್ಲಿ ಮೋಶೆಗೆ ಯಾಜಕಕಾಂಡದ ಕನೂನುಗಳು ಕೊಡಲ್ಪಟ್ಟವು ಎಂದು ತಿಳಿಸುತ್ತದೆ. ಆದ್ದರಿಂದ ಈ ಪುಸ್ತಕದಲ್ಲಿ ಕಂಡುಬರುವ ಘಟನೆಗಳು ಕ್ರಿ. ಪೂ. 1444ರ ಸಮಯಕ್ಕೆ ಸಂಬಂಧಿಸಿದವುಗಳಾಗಿವೆ.

### ಸಾಹಿತ್ಯ ರೂಪ

ಯಜಕಕಾಂಡವು ಇಸ್ರಾಯೇಲ್ಯರ ಧಾರ್ಮಿಕ ಜೀವನಕ್ಕೆ ಸಂಬಂಧಿಸಿದ ಕಾನೂನುಗಳನ್ನು, ವಿಧಿನಿಯಮಗಳನ್ನು, ಬೋಧನೆಗಳನ್ನು ಒಳಗೊಂಡಿದೆ: ಯಜ್ಞಕ್ಕೆ ಸಂಬಂಧವಾದ ಪರಿಶುದ್ಧತೆ ಅಥವಾ ಪವಿತ್ರತೆ, ನೈತಿಕ ನಿಯಮಗಳು, ಪ್ರಾಯಶ್ಚಿತ್ತ ಯಜ್ಞದ ದಿನ, ಹಬ್ಬಗಳು ಮತ್ತು ಇತರ ಪವಿತ್ರ ದಿನಗಳು, ಸಬ್ಬತ್ ವರುಷ ಹಗೂ ಜೂಬಿಲಿ ಸಂವತ್ಸರ. 8ನೇ ಅಧ್ಯಾಯದಲ್ಲಿ ಯಾಜಕರ ಅಭಿಷೇಕ, 9ನೇ ಅಧ್ಯಾಯದಲ್ಲಿ ಅವರು ಮಾಡಬೇಕಾದ ಸೇವೆಗಳು ಹಾಗೂ 24ನೇ ಅಧ್ಯಾಯದಲ್ಲಿ ದೇವದೂಷಕನ ಮೇಲೆ ಕಲ್ಲೆಸೆದು ಕೊಲ್ಲುವುದು ಇವುಗಳ ಹೊರತಾಗಿ ಯಜ್ಞಗಳ ಬಗ್ಗೆ ಮತ್ತು ವಿಧಿನಿಯಮಗಳ ಬಗ್ಗೆ ವಿವರಣೆ ನೀಡುವ ಪರಿಚ್ಛೇಧಗಳನ್ನು ಈ ಪುಸ್ತಕದಲ್ಲಿ ಕಾಣುವುದು ಕಷ್ಟ.

ಕರ್ತನು (ಯೆಹೋವನು) ಮೋಶೆಗೆ ಹೇಳಿದ್ದು, "ಇಸ್ರಾಯೇಲ್ಯರಿಗೆ ಹೇಳಬೇಕಾದದ್ದು" ಎಂಬ ಮಾತಿನೊಂದಿಗೆ ಹೆಚ್ಚಿನ ವಿಚಾರಗಳು ಆರಂಬಗೊಳ್ಳುತ್ತವೆ: (4:1–2: ಹೋಲಿಸು 1:1–2; 8:1–2; 11:1–2; 16:2; 17:1–2; 18:1–2; 19:1–2; 25:1–2). ಆದಕಾರಣ ಈ ಇಡೀ ಪುಸ್ತಕದ ಹೆಚ್ಚಿನ ಪರಿಚ್ಛೇಧಗಳಲ್ಲಿ ದೇವರನ್ನು ನೇರವಾಗಿ ಎತ್ತಿ ತೋರಿಸಲಾಗಿದೆ.

### ಪುಸ್ತಕದ ಸಂದೇಶ

ದೇವರ ಗುಡಾರದ ನಿರ್ಮಾಣ ಹೇಗೆ? ಹಾಗೂಅದರ ಒಳಗಿನ ಪಿಠೋಪಕರಣಗಳ ವ್ಯವಸ್ಥೆ ಯವ ರೀತಿ ಇರಬೇಕು ಎಂಬುದರ ಬಗ್ಗೆ ದೇವರು ಮೋಶೆಗೆ ಆಜ್ಞಾಪಿಸಿದ್ದನ್ನು ನಾವು ವಿಮೋಚನಾಕಾಂಡದಲ್ಲಿ ಕಣುತ್ತೇವೆ. ಆದರೆ ಯಾಜಕಕಾಂಡದಲ್ಲಿ ದೇವರು ಮೋಶೆಗೆ ಹೇಳಿದ (ಮೋಶೆಯ ಮುಖಾಂತರ ಯಾಜಕರಿಗೆ ಮತ್ತು ಜನಸಾಮಾನ್ಯರಿಗೆ) "ದೇವರ ಗುಡಾರದಲ್ಲಿ ಹೇಗೆ ಯಜ್ಞದ ಆರಾಧನೆಯನ್ನು ನಡೆಸಬೇಕು ಮತ್ತು ರಾಷ್ಟ್ರೀಯ ವಿಶ್ರಾಂತಿ (ರಜಾ) ದಿನಗಳನ್ನು ಹೇಗೆ ಆಚರಿಸಬೇಕು" ಎಂಬುದರ ಕುರಿತು ತಿಳಿಸಲಾಗಿದೆ. ದೇವರು ಪರಿಶುದ್ಧನಾಗಿರುವದರಿಂದ ಇವುಗಳು ಪರಿಶುದ್ಧ ಜನರಿಂದಲೇ ನಡೆಸಲ್ಪಡಬೇಕು (19:2). ಆದಕಾರಣ ಸಂಸ್ಕಾರಗಳನ್ನು (ಯಜ್ಞ ಹೋಮಗಳನ್ನು) ನಡೆಸುವಲ್ಲಿ ಅಪವಿತ್ರತೆಯನ್ನು ಹೇಗೆ ದೂರವಿಡಬೇಕು ಮತ್ತು ಪರಿಶುದ್ಧತೆಯನ್ನು ಹೇಗೆ ಹೊಂದಬೇಕು ಎಂಬುದರ ಕುರಿತು ಸಲಹೆಗಳನ್ನು ನೀಡುವ ಅಗತ್ಯತೆಯನ್ನು ಇಲ್ಲಿ ಕಾಣುತ್ತೇವೆ.

### ವಸ್ತು ಮತ್ತು ರಚನೆ

ಇಸ್ರಾಯೇಲ್ಯರಿಗೆ ಸಿನಾಯಿ ಬೆಟ್ಟದಲ್ಲಾದ ಒಡಂಬಡಿಕೆಯು (ಸಿನಾಯ್ ಒಡಂಬಡಿಕೆ) ಭೂಲೋಕದಲ್ಲಿ ದೇವರ ರಾಜ್ಯದ ಚಿತ್ರಣ ಇಲ್ಲವೆ ನಿರೂಪಣೆಯಾಗಿದೆ. ಇಸ್ರಾಯೇಲ್ಯರ ಜೀವನದ ಎಲ್ಲಾ ಕ್ಷೇತ್ರಗಳ ಮೇಲೆ ಕರ್ತನ ಆಡಳಿತ ವಿಸ್ತರಣೆಯಾಗುವ ಮೂಲಕ ಆತನು ಅವರ

ಅರಸನಾಗುತ್ತಾನೆ. ಮತ್ತು ಆತನ ಪರಿಶುದ್ಧತೆಯು ಇಸ್ರಾಯೇಲ್ಯರ ಧಾರ್ಮಿಕ, ಸಾಮುದಾಯಿಕ ಮತ್ತು ವೈಯಕ್ತಿಕ ಜೀವನದಲ್ಲಿ ಪ್ರತಿಫಲಿಸಬೇಕು ಎಂದು ಅತ ಬಯಸುತ್ತಾನೆ (ವಿಧಿಸುತ್ತಾನೆ).

ಆದ್ದರಿಂದ ಪವಿತ್ರತೆಯು ಯಜಕಕಾಂಡದ ಮುಖ್ಯ ವಿಚಾರವಾಗುತ್ತದೆ – ದೇವರ ಪರಿಶುದ್ಧತೆ ಅದೇ ವೇಳೆ ಮಾನವನ ಪವಿತ್ರತೆ. ಮಾನ ಪವಿತ್ರನಾಗಿ "ಪರಿಶುದ್ಧತೆಯಲ್ಲೇ ದೇವರನ್ನು ಆರಾಧಿಸಬೇಕು. ಈ ನಿಟ್ಟಿನಲ್ಲಿ ದೇವರು ವಿವಿಧ ಯಜ್ಞಗಳಿಗೆ ಪೂರ್ಣಾಂಗವಾದ ಪ್ರಾಣಿಗಳು ಇರಬೇಕೇಂದು ಹೇಳುತ್ತಾನೆ (ಅಧ್ಯಾಯಗಳು 1–7). ಮುಂದೆ ಕುರೂಪವಿಲ್ಲದ ಇಲ್ಲವೆ ಅಂಗವಿಕಾರವಿಲ್ಲದ ಯಾಜಕರು ಯಜ್ಞಗಳನ್ನು ನಡೆಸಬೇಕು ಎನ್ನುತ್ತಾನೆ (ಅಧ್ಯಾಯಗಳು 8–10). ದೈನಂದಿನ ಜೀವನದ ವಿಚಾರಗಳಾದ – ಶಿಶು ಜನನದ ನಂತರದ ರಕ್ತಸ್ರಾವ (ಅಧ್ಯಾಯ 12); ಹುಣ್ಣುಗಳು, ದದ್ದುಗಳು, ಬೊಬ್ಬೆಗಳು ಮತ್ತು ಬೋಳುತಲೆ (ಅಧ್ಯಾಯಗಳು 13–14); ವ್ಯಕ್ತಿಯ ರಹಸ್ಯಾಂಗದಲ್ಲಾಗು ಸ್ರಾವ (15:1–18); ಸ್ತ್ರೀಯ ತಿಂಗಳ ಮುಟ್ಟಿನ ಸಮಯದ ವಿವಿಧ ಚಟುವಟಿಕೆಗಳು (15:19–33) ಇವೆಲ್ಲವೂ ಪರಿಪೂರ್ಣತೆಗೆ ಅಡ್ಡಿಯಗಿ ತಿಳಿಸಲ್ಪಟ್ಟಿವೆ. ಈ ವಿಚಾರಗಳು ಮನುಷ್ಯನ ಧಾರ್ಮಿಕ ನ್ಯೂನ್ಯತೆಗಳಾಗಿ ಗುರುತಿಸಲ್ಪಟ್ಟು ಅವನನ್ನು ಧಾರ್ಮಿಕವಾಗಿ ಅಪವಿತ್ರನನ್ನಾಗಿಸುತ್ತವೆ. ಉದಾ: ಪಾಳೆಯವು ದೇವರ ವಿಶೇಷ ಪ್ರಸನ್ನತೆಯುಳ್ಳ ಸ್ಥಳವಾಗಿರುವದರಿಂದ ಚರ್ಮರೋಗವಿರುವ ವ್ಯಕ್ತಿಯು ಪಾಳೆಯದ ಹೊರಗಿರಬೇಕು. ಯಾವಾಗ ಅವನು ಯಾಜಕರಿಂದ ಶುದ್ಧನು ಎಂದು ಘೋಷಿಸಲ್ಪಡುತ್ತನೋ ಆಗ ಅವನು ಪಳೆಯದ ಒಳಗೆ (ದೇವರ ಪ್ರಸನ್ನತೆಗೆ) ಬರಬಹುದು. ಆದರೆ ಸೂಚಿಸಲ್ಪಟ್ಟ ಪೂರ್ಣಾಂಗವಾದ ಯಜ್ಞಗಳನ್ನು ನೀಡುವ ಮೂಲಕ ಈ ಮೊದಲೇ ಅವನಿಗೆ ಪಾಳೆಯದ ಒಳಗೆ ಬರುವ ಅವಕಾಶವಿದೆ.

ಕಾಣಿಕೆಗಳು ಯಜ್ಞಗಳು (ಹೋಮಗಳು) ದೇವರಿಂದ ಆಜ್ಞಾಪಿಸಲ್ಪಟ್ಟಿರುತ್ತವೆ. ಒಂದು ವೇಳೆ ಇವುಗಳು ಸುತ್ತಲಿನ ರಾಷ್ಟ್ರಗಳ ಅನ್ಯಜನಾಂಗಗಳ ಯಜ್ಞಗಳಂತೆ ಕಂಡರೂ ಅವುಗಳ ಅರ್ಥವಿವರಣೆ ತುಂಬಾ ವ್ಯತ್ಯಾಸವಾಗಿವೆ. ಇಸ್ರಾಯೇಲ್ಯರು ಇವುಗಳ ಅರ್ಥವಿವರಣೆಯನ್ನು ಕರ್ತನ ಒಡಂಬಡಿಕೆಯ ಸಂಬಂಧದಿಂದ ಪಡೆದಿದ್ದಾರೆ. ಆದಕಾರಣ ಮೇಲಿನ ಎಲ್ಲ ವಿಚಾರಗಳು ಪ್ರಾಯಶ್ಚಿತ್ತಯಜ್ಞ ಮತ್ತು ಆರಾಧನೆಯ ಗುರುತುಗಳಾಗಿವೆ.

ಯಾಜಕಕಾಂಡ ಪುಸ್ತಕವು ಈ ರೀತಿಯಲ್ಲಿ ರಚನೆಗೊಂಡಿದೆ

1. ಐದು ಮುಖ್ಯ ಯಜ್ಞಗಳು, 1:1–7:38
2. ಯಾಜಕರು, 8:1–10:20
3. ಶುದ್ಧೀಕರಣದ ನಿಯಮಗಳು, 11:1–15:33
4. ಪ್ರಾಯಶ್ಚಿತ್ತ (ದೋಷಪರಿಹಾರಕ) ಯಜ್ಞದ ಮಹಾದಿನ, 16:1–34
5. ರಕ್ತ ಸೇವನೆ ನಿಷಿದ್ಧವಾದದ್ದು, 17:1–16
6. ನೈತಿಕ ನಿಯಮಗಳು, 18:1–20:27
7. ಯಾಜಕರಿಗಿರುವ ವಿಧಿಗಳು, 21:1–222:33
8. ನೇಮಿಸಲ್ಪಟ್ಟ ಕರ್ತನ (ಯೆಹೋವನ) ಹಬ್ಬಗಳು, 23:1–24:9
9. ದೇವದೂಷಕನ ಮೇಲೆ ಕಲ್ಲೆಸೆಯುವದು, 24:10–24
10. ಸಬ್ಬತ್ ವರ್ಷ ಮತ್ತು ಜೂಬಿಲಿ ಸಂವತ್ಸರ, 25:1–55
11. ಆಶೀರ್ವಾದಗಳು ಮತ್ತು ಶಾಪಗಳು, 26:1–46
12. ಕರ್ತನಿಗೆ ಹರಕೆಮಾಡಿದ್ದನ್ನು ಬಿಡಿಸಿಕೊಳ್ಳುವುದು, 27:1–34

**ಪ್ರಶ್ನೆಗಳು**

1. ಈ ಪುಸ್ತಕಕ್ಕೆ ಆಂಗ್ಲ ಭಾಷೆಯ ಹೆಸರು ಎಲ್ಲಿಂದ ಬಂದಿರುತ್ತದೆ ಮತ್ತು ಅದರ ಅರ್ಥವೇನು?
2. ಪುಸ್ತಕದ ಪರಿಸರ ಏನಾಗಿತ್ತು? (ಕಾಲ)
3. ಯಾವ ವಿಧದ ಪರಿಚ್ಛೇಧಗಳನ್ನು ಯಾಜಕಕಾಂಡದಲ್ಲಿ ಕಾಣುತ್ತೇವೆ?

4. ಯಾಕೆ ಈ ಪುಸ್ತಕದಲ್ಲಿ ದೇವರ ಕುರಿತು ಹೆಚ್ಚು ಅವದರಿಸಲಾಗಿದೆ?
5. ಈ ಪುಸ್ತಕದ ಮುಖ್ಯ ಸಂದೇಶವೇನು?
6. ಯಾಜಕಕಾಂಡ ಪುಸ್ತಕದಲ್ಲಿ "ಪರಿಶುದ್ಧತೆ"ಯು ಹೇಗೆ ಅರ್ಥವಿಸಲ್ಪಟ್ಟಿದೆ? ವಿವಿಧ ಉದಾಹರಣೆಗಳನ್ನು ನೀಡಿ.
7. ಇಸ್ರಾಯೇಲ್ಯರಲ್ಲಿದ್ದ ಕಾಣಿಕೆಗಳನ್ನು ಯಜ್ಞಗಳನ್ನು ಸುತ್ತಲಿನ ರಾಷ್ಟ್ರಗಳಲ್ಲಿ ಇಲ್ಲವೆ ಅನ್ಯ ಜನಾಂಗಗಳೊಂದಿಗೆ ಹೋಲಿಸಿ ನೋಡಿ.

## ಯಾಜಕಕಾಂಡ ಅಧ್ಯಯನ 1: ಕಾಣಿಕೆಗಳು ಮತ್ತು ಯಜ್ಞಗಳು

### ಅ. ಪರಿಚಯ

ಈ ಪುಸ್ತಕದ ಮೊದಲ 7 ಅಧ್ಯಾಯಗಳು ಕಾಣಿಕೆಗಳು ಮತ್ತು ಯಜ್ಞಗಳ ಬಗ್ಗೆ ತಿಳಿಸುತ್ತವೆ. ಸರ್ವಾಂಗಹೋಮ ಯಜ್ಞ, ಧಾನ್ಯಸಮರ್ಪಣ ಯಜ್ಞ, ಸಮಾಧಾನದ ಯಜ್ಞ, ಮತ್ತು ಪ್ರಾಯಶ್ಚಿತ್ತ ಯಜ್ಞ ಈ ಐದು ಯಜ್ಞಗಳು ಎರಡು ದೃಷ್ಟಿಕೋನಗಳಿಂದ ವಿವರಿಸಲ್ಪಟ್ಟಿವೆ (ಜಿ. 1:1–6:7, ಛ. 6:8–7:36). ಅಧ್ಯಾಯ 8 ಆರೋನ ಮತ್ತು ಆತನ ಮಕ್ಕಳು ಯಾಜಕರಾಗಿ ಪ್ರತಿಷ್ಠಿತರಾಗುವದನ್ನು ಮತ್ತು ಅದೇ ವೇಳೆ ಪ್ರತಿಷ್ಠೆಗೆ ಸಂಬಂಧಿಸಿದ ಯಜ್ಞದ ಕುರಿತು ವಿವರಣೆಯನ್ನು ನೀಡುತ್ತದೆ. 9ನೇ ಅಧ್ಯಾಯವು ಯಾಜಕರು ತಮ್ಮ ಉದ್ಯೋಗ ಆರಂಭಿಸಿದ್ದನ್ನು ಮತ್ತು ಅಲ್ಲಿ ಕರ್ತನ ಮಹಿಮೆ ಪ್ರತ್ಯಕ್ಷವಾಗಿ ಯಜ್ಞವೇದಿಯ ಮೇಲಿದ್ದ ಸರ್ವಾಂಗಹೋಮವನ್ನು ದಹಿಸಿದ್ದನ್ನು ತಿಳಿಸುತ್ತದೆ.

### ಆ. ಓದು

ಯಾಜಕಕಾಂಡ 1–9 ಅಧ್ಯಾಯಗಳು

### ಇ. ವ್ಯಾಖ್ಯಾನ

*ದರ್ಶನದ ಗುಡಾರ* (1:1): ದೇವದರ್ಶನ ಗುಡಾರ, ಬೇಟಿಯಾಗುವ ಗುಡಾರ (ಸ್ಥಳ)

*ಸರ್ವಾಂಗಹೋಮ* (1:3): ಈ ಅಧ್ಯಾಯದಲ್ಲಿ ತಿಳಿಸಿರುವಂತೆ ಇಸ್ರಯೇಲ್ಯರಲ್ಲಿ ಯಾವನಾದರೂ ಸ್ವ–ಇಚ್ಛೆಯಿಂದ ಸರ್ವಾಂಗಹೋಮವನ್ನು ಅರ್ಪಿಸಿ ದೇವರನ್ನು ಆರಾಧಿಸಬಹುದು. ಆದರೆ ಇದು ಅವನ ಪಾಪದ ಪ್ರಾಯಶ್ಚಿತ್ತ ಯಜ್ಞವೂ ಆಗಿರುತ್ತದೆ. ವಿಮೋಚನಕಾಂಡ 29:39–42ರ ಪ್ರಕಾರ ಸರ್ವಾಂಗಹೋಮವು ಎಲ್ಲ ಇಸ್ರಾಯೇಲ್ಯರಿಗಾಗಿ ಪ್ರತೀ ಮುಂಜಾನೆ ಮತ್ತು ಸಾಯಂಕಾಲ ಅರ್ಪಿಸಲ್ಪಡುತಿತ್ತು. ದೇವದರ್ಶನದ ಗುಡಾರದ ಎದುರಿಗಿರುವ ಯಜ್ಞವೇದಿಯಲ್ಲಿ ಸಮರ್ಪಿಸಲ್ಪಡುವ ಈ ಸರ್ವಾಂಗ ಹೋಮದಲ್ಲಿ ಇಡೀ ಪ್ರಾಣಿಯು ಸರ್ವಾಂಗಹೋಮವಾಗಿ ದಹಿಸಲ್ಪಡುತಿತ್ತು.

*ಊನವಿಲ್ಲದ್ದು* (1:3): ಪಶುವು ಪೂರ್ಣಾಂಗವಾದದ್ದಾಗಿರಬೇಕು.

*ಅವನು ಆ ಪಶುವಿನ ತಲೆಯ ಮೇಲೆ ಕೈ ಇಡಬೇಕು* (1:4): ಇದು ಕಾಣಿಕೆ ಇಲ್ಲವೆ ಯಜ್ಞ ಸಮರ್ಪಿಸುವವನು ಪಶುವಿನೊಡನೆ ಗುರುತಿಸಿಕೊಂಡದ್ದನ್ನು ಸೂಚಿಸುತ್ತದೆ. ಹೋಲಿಸು 16:21.

*ಪ್ರಾಯಶ್ಚಿತ್ತಯಜ್ಞ* (ದೋಷಪರಿಹಾರಕ ಯಜ್ಞ) (1:4): ಇಲ್ಲಿ ಬಳಸಲ್ಪಟ್ಟ ಇಬ್ರಿಯ ಪದವು "ಕ್ಷಮಿಸು ಮತ್ತು ಪಾಪವನ್ನು ಮನ್ನಿಸು" ಎಂಬ ಅರ್ಥ ನೀಡುತ್ತದೆ.

*ಧರ್ಮವನ್ನು ಸುಲಿದು* (ವ. 6): ಹೋಲಿಸು 7:8, ಸರ್ವಾಂಗ ಹೋಮದ ಧರ್ಮವನ್ನು ಯಾಜಕನೇ ಇಟ್ಟುಕೊಳ್ಳಬೇಕು.

*ಇದು ಕರ್ತನನ್ನು ಮೆಚ್ಚಿಸುವ ಸುವಾಸನೆಯಾಗಿದೆ* (1:9, 13, 17): ಹೊಗೆ ಮತ್ತು ಸುವಾಸನೆ ಇಲ್ಲವೆ ಪರಿಮಳ ಆರಾಧನೆಗೆ ಗುರುತುಗಳಾಗಿವೆ.

*ಧಾನ್ಯ ಸಮರ್ಪಣೆ* (2:1): ಈ ಕಾಣಿಕೆಯು ಹಿಟ್ಟು ಇಲ್ಲವೆ ಸುಟ್ಟ ಹಿಟ್ಟನ್ನು ಒಳಗೊಂಡಿದೆ. ಇದರ ಬಗ್ಗೆ ಹೆಚ್ಚಿನ ವಿವರಣೆ ಇಲ್ಲಿಲ್ಲ. ಆದರೆ ದೇವರ ಒಳ್ಳೆಯತನ ಮತ್ತು ಆತನು ಕೊಟ್ಟ ಧಾನ್ಯಗಳನ್ನು ನೆನಸಿ ಸ್ವಯಂಪ್ರೇರಿತರಾಗಿ ದೇವರನ್ನು ಆರಾಧಿಸುವ ಕಾರ್ಯ ಇದಾಗಿದೆ.

*ನೆನಪಿನ ಸ್ವಲ್ಪಭಾಗ* (2:2, 9,16): ಇಲ್ಲಿ ಇದು ಎರಡು ಅರ್ಥಗಳನ್ನು ಒಳಗೊಂಡಿದೆ. ಒಂದೆಡೆ ಎಲ್ಲ ಒಳ್ಳೆ ಸಂಗತಿಗಳು ದೇವರಿಂದ ಬರುತ್ತವೆ ಎಂಬುದನ್ನು ಆರಾಧಕನಿಗೆ ನೆನಪಿಸಿದರೆ, ಇನ್ನೊಂದೆಡೆ ಕಾಣಿಕೆಸಲ್ಲಿಸುವವನನ್ನು ಆಶೀರ್ವದಿಸು ಎಂದು ನೆನಪಿಸುವವನು ಕರ್ತನಿಗೆ ನೆನಪಿಸುತ್ತಾನೆ.

*ಹುಳಿಯಿಲ್ಲದ* (2:4, 11): ಹುಳಿ ಧಾನ್ಯಕಾಣಿಕೆಗೆ ಹೊರತಾದದ್ದು. ಇದು ಕೆಟ್ಟತನಕ್ಕೂ ಅಶುದ್ಧತೆಗೂ ಗುರುತು. ಹುಳಿಯಿಲ್ಲದ ರೊಟ್ಟಿ ಕೂಡಾ ಇಸ್ರಾಯೇಲ್ಯ ಐಗುಪ್ತದಿಂದ ಬಿಡುಗಡೆಯಾದದ್ದನ್ನು ತಿಳಿಸುತ್ತದೆ.

*ಉಪ್ಪು* (2:13): ಹೋಲಿಸು ಅರಣ್ಯಕಾಂಡ 18:19. ಆದರೆ ಇಲ್ಲಿ "ಉಪ್ಪಿನ ಒಡಂಬಡಿಕೆ"ಯ ಬಗ್ಗೆ ಸ್ಪಷ್ಟವಾದ ಅರ್ಥ ಕಾಣುವದಿಲ್ಲ. ಒಡಂಬಡಿಕೆಯನ್ನು ಮಾಡುವಲ್ಲಿ ಈ ನೈವೆದ್ಯವೂ ಒಂದು ಭಾಗವಾಗಿದೆ. ಈ ನೈವೇದ್ಯದ ಪದಾರ್ಥಗಳಲ್ಲಿ ಉಪ್ಪು ಬಳಕೆಯಾಗಿರುವದನ್ನು ಮಾತ್ರ ಇದು ತಿಳಿಸುತ್ತದೆ.

*ಸಮಾಧಾನದ ಯಜ್ಞ* (3:1): ಇಬ್ರಿಯ ಬೈಬಲ್‌ನಲ್ಲಿ ಇದಕ್ಕೆ "ಸಮಾಧಾನದ ಯಜ್ಞ" ಎನ್ನಲಾಗಿದೆ (ಕನ್ನಡದಲ್ಲೂ ಹೀಗೆಯೆ ಭಾಷಾಂತರಿಸಲಾಗಿದೆ). ಇಲ್ಲಿ ಸಮಾಧಾನ ಮತ್ತು ಅನ್ಯೋನ್ಯತೆ ಎಂಬ ಎರಡು ಮೂಲ ವಿಚಾರಗಳು ಅಡಗಿವೆ.

1. **ಸಮಾಧಾನ** – ಇದು ದೇವರು ಮತ್ತು ಆತನ ಜನರ ನಡುವೆ

2. **ಅನ್ಯೋನ್ಯತೆ**– ಇದು ದೇವರೊಂದಿಗೂ ಹಾಗೂ ನೈವೇಧ್ಯದ ಒಂದು ಭಾಗವನ್ನು ತಿನ್ನುವ ಯಾಜಕನೊಂದಿಗೂ ಕಾಣಿಕೆಯನ್ನು ಸಮರ್ಪಿಸುವವನು ಹೊಂದುವ ಅನ್ಯೋನ್ನತೆಯಾಗಿದೆ (ನೋಡಿ 7:15, 34). ಇದು ಸ್ವಯಂಪ್ರೇರಿತವಾದ ಕಾಣಿಕೆಯಾಗಿತ್ತು.

*ಸರ್ವಾಂಗಹೋಮದ ದ್ರವ್ಯದ ಮೇಲೆಯೇ* (3:5): ಪ್ರತಿದಿನ ಮುಂಜಾನೆ ಮತ್ತು ಸಂಜೆ ಇಡೀ ರಾಷ್ಟ್ರಕ್ಕಾಗಿ (ಸಮೂಹಕ್ಕಾಗಿ) ಸರ್ವಾಂಗಹೋಮವು ಅರ್ಪಿಸಲ್ಪಡುತಿತ್ತು. ಅಂತೆಯೆ ಈ ಹೋಮದ ಮೇಲೆಯೇ ಸಮಾಧಾನ ಯಜ್ಞವು ನಡೆಸಲ್ಪಡುತಿತ್ತು.

*ಆಹಾರವಾಗಿ ಯಜ್ಞವೇದಿಯ ಮೇಲಿನ ಹೋಮ* (3:11, 16): "ದೇವರಿಗೆ ಕಾಣಿಕೆ" ಇದೊಂದು ಅಲಂಕಾರಿಕ ಅರ್ಥವಿವರಣೆಯಾಗಿದೆ. ಇಸ್ರಾಯೇಲ್ಯರು ಯಜ್ಞಗಳನ್ನು ಅರ್ಪಿಸುವಲ್ಲಿ ತಮ್ಮ ಸುತ್ತಲಿನ ಅನ್ಯ ಜನಾಂಗದವರಲ್ಲಿದ್ದ "ದೇವರುಗಳಿಗಾಗಿ ಆಹಾರ" ಎಂಬುದಕ್ಕಿಂತ "ದೇವರಿಗೆ ಕಾಣಿಕೆ" ಎಂಬುದು ಭಿನ್ನವಾದದ್ದು.

*ಕೊಬ್ಬನ್ನಾಗಲಿ ರಕ್ತವನ್ನಾಗಲಿ ತಿನ್ನಕೂಡದು* (3:17): ಕೊಬ್ಬು ದೇವರಿಗೆ ಸೇರಿದ್ದು (ನೋಡಿ ವ. 16) ಮತ್ತು ರಕ್ತವನ್ನು ಬುಜಿಸುವುದು ನಿಷಿದ್ಧವಾದದ್ದು (ನೋಡಿ 17:10–12).

*ಅಭಿಷಿಕ್ತನಾದ ಯಾಜಕ* (4:3): ಮಹಾಯಾಜಕ

*ಅರ್ಪಿಸಲೇಬೇಕು* (4:3): ನಿರ್ಧಿಷ್ಟವಾದ ದೋಷಗಳಿಗಾಗಿ ದೋಷಪರಿಹಾರಕ ಯಜ್ಞ, ಪ್ರಾಯಶ್ಚಿತ್ತ ಯಜ್ಞಗಳನ್ನು ಅರ್ಪಿಸಲೇಬೇಕು. ಆದರೆ ಸರ್ವಾಂಗಹೋಮ, ಧಾನ್ಯ ಸಮರ್ಪಣೆ ಮತ್ತು ಸಮಾಧಾನ ಯಜ್ಞ ಇವುಗಳನ್ನು ಆರಾಧನೆಯಾಗಿ ಸ್ವ–ಇಚ್ಛೆಯಿಂದ ಅರ್ಪಿಸಬೇಕು.

*ತೆರೆ* (4:6): ಈ ತೆರೆಯು ಮಹಾಪರಿಶುದ್ಧ ಸ್ಥಳ ಮತ್ತು ಪರಿಶುದ್ದ ಸ್ಥಳ ಎಂಬುದಾಗಿ ದೇವದರ್ಶನ ಗುಡಾರವನ್ನು ಎರಡು ಭಾಗಗಳಾಗಿ ವಿಂಗಡಿಸುತ್ತದೆ.

*ಕೊಂಬುಗಳು* (4:7): ಧೂಪವೇದಿಯಲ್ಲಿ ನಾಲ್ಕು ಕೊಂಬುಗಳಿರುತ್ತವೆ (ನೋಡಿ ವಿಮೋ. 30:1–3) ಇವು ದೋಷಪರಿಹಾರಕ ಯಜ್ಞದ ಶಕ್ತಿಯನ್ನು ಸೂಚಿಸುತ್ತವೆ (ಹೋಲಿಸು ವಿಮೋ. 30:10).

*ಸಂಸ್ಕಾರದಲ್ಲಿ (ಶಾಸ್ತ್ರೋಕ್ತ) ಶುದ್ಧತೆ* (4:12): ಇದು ದೈಹಿಕ ಶುದ್ಧತೆಯನ್ನು ಕುರಿತದ್ದಲ್ಲ. ಧರ್ಮಶಾಸ್ತ್ರದ ಹಿನ್ನಲೆಯಲ್ಲಿ ಶುದ್ದತೆ ಮತ್ತು ಅಶುದ್ಧತೆ ಎಂಬುದು ಸಂಸ್ಕಾರಕ್ಕೆ (ಧಾರ್ಮಿಕ) ಸಂಬಂಧಿಸಿದ ಶುದ್ಧತೆಯಾಗಿದೆ.

*ವೇದಿ* (4:18): ದೇವದರ್ಶನ ಗುಡಾರಕ್ಕೆ ಸಂಬಂದಿಸಿ ಎರಡು ವೇದಿಗಳನ್ನು ಕಾಣುತ್ತೇವೆ. ಒಂದು ಪವಿತ್ರ ಸ್ಥಳದಲ್ಲಿ ಇಡಲ್ಪಟ್ಟಿರುವ ಧೂಪದ ವೇದಿ, ಇನ್ನೊಂದು ಅಂಗಳದಲ್ಲಿ ಇಡಲ್ಪಟ್ಟಿರುವ ಯಜ್ಞಗಳನ್ನು ನೆರವೇರಿಸುವ ಯಜ್ಞವೇದಿ. ಇದು ದೊಡ್ಡದಾದದ್ದು.

*ಕ್ಷಮಾಪಣೆಯಾಗುವದು* (4:20): ಪ್ರಮುಖ ವಿಚಾರವಾದ ಇದು ದೇವರ ಕ್ಷಮಾಪಣೆಯನ್ನು ಸೂಚಿಸುತ್ತದೆ. ಈ ಪದವು 4:20–6:7ರಲ್ಲಿ 9 ಬಾರಿ ಉಪಯೋಗವಾಗಿದೆ.

*ತಪ್ಪನ್ನು ಒಪ್ಪಿಕೊಳ್ಳುವದು* (5:5): ಕ್ಷಮಾಪಣೆಯು ಆಗಬೇಕಾಗಿದ್ದರೆ ಅದಕ್ಕೂ ಮೊದಲು ತಪ್ಪೊಪ್ಪಿಗೆಯು ಅಗತ್ಯವಾದದ್ದು.

ಅಪರಾಧ ಪ್ರಾಯಶ್ಚಿತ್ತ ಕಾಣಿಕೆ (5:15): ಈ ಕಾಣಿಕೆಯು ದೋಷಪರಿಹಾರಕ ಕಾಣಿಕೆಗೆ ಹತ್ತಿರವಾದದ್ದು. ಆದರೆ ಇದು ಅವನ ಅಪರಾಧದಿಂದಾದ ನಷ್ಟವನ್ನು ಭರಿಸುವ ಶೆಕಡಾ 20ರಷ್ಟು ದಂಡವನ್ನು ಒಳಗೊಂಡಿದೆ.

*ಹರಕೆ* (7:16): ಹರಕೆಯು ತನಗಾದ ಬಿಡುಗಡೆ ಇಲ್ಲವೆ ಆಶಿರ್ವಾದಕ್ಕೆ ಪ್ರತಿಯಾಗಿ ಮಾಡಿಕೊಂಡ ವಾಗ್ದಾನದ ಮೇರೆಗೆ ದೇವರಿಗೆ ಕಾಣಿಕೆಯನ್ನು ಸಲ್ಲಿಸುವದಾಗಿತ್ತು.

*ಅವನು ತನ್ನ ಕುಲದಿಂದ ತೆಗೆದುಹಾಕಲ್ಪಡಬೇಕು* (7:20, 25, 27): ಇದರ ಅರ್ಥ ಇಸ್ರಯೇಲ್ ಸಮುದಾಯದಿಂದ ವ್ಯಕ್ತಿಯನ್ನು ಬೇರ್ಪಡಿಸುವದು. ಅವನಿಗೆ ಮರಣದಂಡನೆಯಾಗುತ್ತಿತ್ತು (ನೋಡಿ 20:1–5), ಇಲ್ಲವೆ ಕೆಲವೊಮ್ಮೆ ಸಮುದಾಯದಿಂದ ಬಹಿಷ್ಕಾರ ಹಾಕಲ್ಪಡುತ್ತಿತ್ತು.

7:37–38 ಈ ವಚನಗಳು 1–8 ಅಧ್ಯಾಯಗಳಿಗೆ ಒಂದು ಸಾರಾಂಶವನ್ನಿಯುತ್ತವೆ. 8:14–36ರಲ್ಲಿ ಅಭಿಷೇಕದ ಕಾಣಿಕೆಯ ಕುರಿತ ವಿವರಣೆ ಇದೆ.

*ಅಭಿಷೇಕದ ತೈಲ* (8:2, 10–12, 30): ಈ ತೈಲವು ದೇವದರ್ಶನ ಗುಡಾರ ಮತ್ತು ಅದರ ಪವಿತ್ರ ವಸ್ತುಗಳನ್ನು ಅಭಿಷೇಕಿಸುವಲ್ಲಿ ಉಪಯೋಗವಾಗುತ್ತಿತ್ತು ಮಾತ್ರವಲ್ಲ ಯಾಜಕರ ಪ್ರತಿಷ್ಠೆಯ ಸಂದರ್ಭದಲ್ಲೂ ಬಳಕೆಯಾಗುತ್ತಿತ್ತು (ನೋಡಿ ವಿಮೋ. 40:9–16). ಮುಂದೆ ಇದು ಅರಸರನ್ನು ಮತ್ತು ಇತರ ನಾಯಕರನ್ನು ಅಭಿಷೇಕಿಸುವಲ್ಲಿಯೂ ಉಪಯೋಗವಾಗುತ್ತಿತ್ತು.

*ಮೇಲಂಗಿ (ಎಫೋದು)* (8:7): ಇದೊಂದು ಇಸ್ರಾಯೇಲ್ಯರ ಮಹಾಯಾಜಕರು ಧರಿಸುವ ತೋಳುಗಳಿಲ್ಲದ ಸುಂದರವಾದ ಮೇಲೊಧಿಕೆಯಾಗಿತ್ತು (ನೋಡಿ ವಿಮೋ. 28:6–10).

ಊರಿಮ್ ಮತ್ತು ತಮ್ಮಿಮ್ಮ್ (8:8): ಈ ವಸ್ತುಗಳು ಎಫೋದಿನಲ್ಲಿ ಎದೆಯ ಭಾಗದಲ್ಲಿ ಇಡಲ್ಪಟ್ಟಿರುತ್ತವೆ. ಮಹಾಯಾಜಕರು ಇವನ್ನು (ಹರಳುಗಳುಗಳಾಗಿದ್ದಿರಬಹುದು) ಮುಖ್ಯ ವಿಚಾರಗಳಲ್ಲಿ ದೇವರ ಮಾರ್ಗದರ್ಶನ ತಿಳಿಯಲು ಉಪಯೋಗಿಸುತ್ತದ್ದರು ಎಂಬುದಕ್ಕೆ ಸರಿಯಾದ ವಿವರಣೆಗಳಿಲ್ಲ.

*ಎಂಟನೆಯ ದಿನದಲ್ಲಿ* (9:1): ಅಭಿಷೇಕದ ಏಳನೆಯ ದಿನ ಮುಗಿದ ನಂತರ ಬರುವಂತದ್ದು.

*ಎತ್ತಲ್ಪಟ್ಟ ಕಾಣಿಕೆ (ತಿಚಿತಿಜ ಠಜಿಜಿಜಡಿುಟಿಬ)* (9:21):ಇದು ಕಾಣಿಕೆ ಎತ್ತಲ್ಪಡುವದನ್ನು ಮತ್ತು ಅದು ದೇವರಿಗೆ ಅರ್ಪಿತವಾಗುವದನ್ನು ತಿಳಿಸುತ್ತದೆ.

**ಈ. ಪ್ರಶ್ನೆಗಳು**

1. ಅಧ್ಯಾಯ 1ರಿಂದ 7ರಲ್ಲಿ ತಿಳಿಸಲ್ಪಟ್ಟ ಐದು ಕಾಣಿಕೆಗಳು (ಯಜ್ಞಗಳು) ಯಾವವು?
2. ಈ ಕಾಣಿಕೆಗಳು ಯಾವ ಆಧಾರದ ಮೇಲೆ ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟಿವೆ ಮತ್ತು ಹೇಗೆ?
3. ಈ ಕಾಣಿಕೆಗಳು ಕಾಣಿಕೆ ಸಮರ್ಪಿಸುವವನ ಆಧಾರದ ಮೇಲೆ ಎರಡು ಗುಂಪುಗಳಾಗಿ ವಿಂಗಡಿಸಲ್ಪಟ್ಟಿವೆ. ಇದು ಹೇಗೆ?
4. ಯಾಜಕ. 1:3–17 ಮತ್ತು 6:8–13 ಈ ಎರಡೂ ಮೂಲಗಳಲ್ಲಿರುವ ಸರ್ವಾಂಗಹೋಮವನ್ನು ಹೋಲಿಸಿ ನೋಡಿ ಮತ್ತು ಇಲ್ಲಿ ಮುಖ್ಯ ವ್ಯತ್ಯಾಸವೇನೆಂದು ತಿಳಿಸಿ.
5. 2ನೇ ಅಧ್ಯಾಯದಲ್ಲಿ ವಿವರಿಸಲ್ಪಟ್ಟ ಧಾನ್ಯಸಮರ್ಪಣ ಯಜ್ಞದ ವಿಧಗಳು ಯವವು?
6. 4ನೇ ಅಧ್ಯಾಯದಲ್ಲಿ ದೋಷಪರಿಹಾರಕ ಯಜ್ಞಗಳನ್ನು ಅರ್ಪಿಸಬೇಕಾದವರು ನಾಲ್ಕು ವರ್ಗದ ಜನರು ಎಂದು ಹೇಳಲಾಗಿದೆ. ಯಾರು ಅವರು?
7. ದೋಷಪರಿಹಾರಕ ಯಜ್ಞಗಳನ್ನು ಸಮರ್ಪಿಸಬೇಕಾದ ವ್ಯಕ್ತಿಯ ಯಾವ ಪಾಪಗಳು (ದೋಷಗಳು) 5ನೇ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿವೆ?
8. ಅಪರಾಧಕ್ಕಾಗಿ ಪ್ರಾಯಶ್ಚಿತ್ತ ಯಜ್ಞವನ್ನು ಸಮರ್ಪಿಸಬೇಕಾದ ವ್ಯಕ್ತಿಯ ಯಾವ ಪಾಪಗಳು 5 ಮತ್ತು 6ನೇ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿವೆ?
9. 8ನೇ ಅಧ್ಯಾಯದಲ್ಲಿ ತಿಳಿಸಲ್ಪಟ್ಟ ಆರೋನ ಮತ್ತು ಅವನ ಮಕ್ಕಳ ಅಭಿಷೇಕದ ಸಂಧರ್ಭದಲ್ಲಿ ಬರುವ ಮುಖ್ಯ ವಿಚಾರಗಳನ್ನು (ಘಟನೆಗಳನ್ನು) ಪಟ್ಟಿ ಮಾಡಿ.
10. ಅಧ್ಯಾಯ 9ರಲ್ಲಿ ಆರೋನ ಮತ್ತು ಅವನ ಮಕ್ಕಳು ದೇವದರ್ಶನ ಗುಡಾರದಲ್ಲಿ ಯಾಜಕ ಸೇವೆಯನ್ನು ಆರಂಭಿಸುತ್ತಾರೆ ಮತ್ತು ಕರ್ತನ ಎದುರಿನಲ್ಲಿ ವಿವಿಧ ಕಾಣಿಕೆಗಳನ್ನು (ಯಜ್ಞಗಳನ್ನು) ಸಮರ್ಪಿಉತ್ತಾರೆ.

    ಅ) ಅವರು ಅರ್ಪಿಸಿದ ಕಾಣಿಕೆಗಳನ್ನು ಪಟ್ಟಿ ಮಾಡಿರಿ.

    ಬ) ಈ ಕಾಣಿಕೆಗಳ ಅರ್ಥ ಮಹತ್ವಗಳಿಂದ ನಾವು ಕಲಿಯಬೇಕಾದದ್ದೇನು?

11. ದೇವದರ್ಶನ ಗುಡಾರದಿಂದ (Tabernacle) ಮೋಶೆ ಆರೋನರು ಹೊರಗೆ ಬಂದಾಗ ಅಲ್ಲಿ ದೇವರ ಮಹಿಮೆ ಹೇಗೆ ಪ್ರಕಟವಾಯಿತು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ವಿಚಾರದ ಬಗ್ಗೆ ನಿನಗೆ ಈ ಹಿಂದಿಗಿಂತಲೂ ಇದೂ ಒಂದು ಸುದೀರ್ಘ ಅಧ್ಯಯನವಾಗಿರಬಹುದು. ನಿನಗೆ ಇಷ್ಟವಾದ ನೀನು ಆಲೋಚಿಸಿದ ಕೆಲವು ವಿಚಾರಗಳನ್ನು ಪಟ್ಟಿ ಮಾಡು ಮತ್ತು ಯಾಕೆ ಆ ವಿಚಾರಗಳನ್ನು ಆಯ್ದುಕೊಂಡಿ ಎಂಬುದಕ್ಕೆ ಕಾರಣ ಕೊಡಿ.
2. ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಇಂದು ಯಾಜಕಕಾಂಡದಿಂದ ಏನಾದರೂ ಕಲಿಯಬಹುದೇ ಎಂಬುದನ್ನು ಆಲೋಚಿಸು. ಆ ಬಗ್ಗೆ ಪಟ್ಟಿ ಮಾಡಿ ಕಾರಣಗಳನ್ನು ನೀಡಿ.

**ಯಾಜಕಕಾಂಡ ಅಧ್ಯಯನ 2: ದೋಷಪರಿಹಾರಕ ಯಜ್ಞದ ಮಾಹಾದಿನ**

**ಅ. ಪರಿಚಯ**

ಇಸ್ರಾಯೇಲ್ಯರು ತಮ್ಮ ವಿವಿಧ ಪಾಪಗಳ ಕ್ಷಮಾಪಣೆಗಾಗಿ ಉತ್ತಮವಾದ ಧಾರ್ಮಿ ವಿಧಿನಿಯಮಗಳನ್ನು ಇಡೀ ವರ್ಷದುದ್ದಕ್ಕೂ ಹೊಂದಿದ್ದರು. ಆದರೆ ಕಳೆದ ವರ್ಷ ದೋಷಪರಿಹಾರವಾಗದೇ ಉಳಿದ ಪಾಪಗಳು ಮತ್ತು ಅಪರಾಧಗಳ ನಿಮಿತ್ಯ ಬಾದೆ ಪಡುತ್ತಿರುವಲ್ಲಿ ಇಡೀ ಇಸ್ರಾಯೇಲ್ ಸಮುದಾಕ್ಕಾಗಿ ದೋಷಪರಿಹಾರವನ್ನು ನೆರವೇರಿಸಲು ಮಹಾಯಾಜಕನು ದೇವದರ್ಶನ ಗುಡಾರದಲ್ಲಿ ತೆರೆಯ ಹಿಂದಿರುವ ಮಹಾ ಪರಿಶುದ್ದ ಸ್ಥಳವನ್ನು ಪ್ರವೇಶಿಸುವನು. ಅಲ್ಲಿ ಒಡಂಬಡಿಕೆಯ ಪೆಟ್ಟಿಗೆಯು ಇಡಲ್ಪಟ್ಟಿರುವುದು. ಇಲ್ಲಿ ಪವಿತ್ರ ಸ್ಥಳಗಳು ಮತ್ತು ಯಾಜಕರ ಸಂಸ್ಕಾರದ ಪಾತ್ರಗಳು ಸ್ವತಃ ಪವಿತ್ರಿಕರಿಸಲ್ಪಡುವವು. ಇದನ್ನು ದೋಷಪರಿಹಾರದ ಮಹಾದಿನ ಎಂದು ಕರೆಯಲಾಗುತ್ತಿತ್ತು. ಇದು ಸಾಮಾನ್ಯವಾಗಿ ಸೆಪ್ಟಂಬರ್‌ನಿಂದ ಅಕ್ಟೋಬರ್‌ವರೆಗೆ ನಡೆಸಲ್ಪಡುತ್ತಿತ್ತು. ಈ ದಿನದ ಗಾಭೀರ್ಯತೆಯನ್ನು ಹೆಚ್ಚಿಸುವದಕ್ಕಾಗಿ ಇಡೀ ರಾಷ್ಟ್ರವು ಉಪವಾಸ ಆಚರಿಸುತ್ತಿತ್ತು. "ಉಪವಾಸವು" ಹೇಗೆ ಇಸ್ರಾಯೇಲ್ಯರು ದೇವರ ಆಜ್ಞೆಗೆ ತಮ್ಮನ್ನೇ ಒಪ್ಪಿಸಿದರು ಎಂಬುದನ್ನು ತಿಳಿಸುತ್ತದೆ (16:29, 31).

**ಆ. ಓದು**

ಯಾಜಕಕಾಂಡ 16ನೇ ಅಧ್ಯಾಯ

**ಇ. ವ್ಯಾಖ್ಯಾನ**

ಆರೋನನ ಎರಡು ಮಕ್ಕಳು ಕರ್ತನ ಸನ್ನಿಧಿಗೆ ಬಂದಾಗ ಸತ್ತುಹೋದರು (ವ. 1): ನಾದಾಬ್ ಮತ್ತು ಅಬೀಹು ದೇವರ ಆಜ್ಞೆಗೆ ಅವಿಧೆಯರಾದ್ದರಿಮದ ಕರ್ತನ ಬೆಂಕಿಯು ಅವರನ್ನು ದಹಿಸಿಬಿಟ್ಟಿತು. ಇದನ್ನು 10:1–2ರಲ್ಲಿ ತಿಳಿಸಲಾಗಿದೆ.

*ದೋಷಪರಿಹಾರಕವು ಮಂಜೂಷ ಪೆಟ್ಟಿಗೆಯ ಮುದ್ರೆಯಾಗಿದೆ* (ವ. 2): ಇಸ್ರಾಯೇಲ್ಯರಿಗೆ ದೋಷಪರಿಹಾರವನ್ನು ಮಾಡಲು ಆ ದಿನದಲ್ಲಿ ದೋಷಪರಿಹಾರಕ ಯಜ್ಞದ ರಕ್ತವನ್ನು ಪೆಟ್ಟಿಗೆಯ ಮುಚ್ಚಳಕ್ಕೆ ಚಿಮುಕಿಸಲಾಗಿರುತ್ತಿತ್ತು.

*ಪವಿತ್ರ ಸ್ಥಳ* (ವ. 3): ಇಲ್ಲಿ ಇದು ಮಹಾ ಪವಿತ್ರ ಸ್ಥಳವನ್ನು ಸೂಚಿಸುತ್ತದೆ. (ಹೋಲಿಸಿ ವ. 2).

*ಹೋರಿ* (ವ. 3): ಇದು ಆರೋನ ಮತ್ತು ಅವನ ಮನೆಯವರ ಪರವಾಗಿ ಪ್ರಾಯಶ್ಚಿತ್ತ ಯಜ್ಞವಾಗಿ ಅರ್ಪಿಸಲ್ಪಡುತ್ತಿತ್ತು (ನೋಡಿ ವ. 6, 11).

*ಟಗರು* (ವ. 3): ಇದು ಮಹಾಯಾಜಕನ ದೋಷಪರಿಹಾರಕ್ಕಾಗಿ ಯಜ್ಞವಾಗಿ ಅರ್ಪಿಸಲ್ಪಡುತ್ತಿತ್ತು (ನೋಡಿ ವ.24).

*ದೋಷಪರಹಾರಕ ಯಜ್ಞಕ್ಕಾಗಿ ಎರಡು ಹೋತಗಳು* (ವ. 5): ಇದರಲ್ಲಿ ಒಂದು ಹೋತು ಜನರ ದೋಷಪರಿಹಾರಕ ಯಜ್ಞಕ್ಕಾಗಿ ಬಳಸಲ್ಪಡುತ್ತಿತ್ತು: ಇದರ ರಕ್ತವನ್ನು ಮಂಜೂಷ ಪೆಟ್ಟಿಗೆಯ ಮುಂದೆ, ಮುಚ್ಚಳದ ಮೇಲೆ, ಹಾಗೂ ಮಹಾ ಪರಿಶುದ್ಧ ಸ್ಥಳದಲ್ಲಿ ಚಿಮುಕಿಸಲಾಗುತ್ತಿತ್ತು. ಇದಲ್ಲದೆ ಇದರ ರಕ್ತವನ್ನು ಸರ್ವಾಂಗಹೋಮದ ವೇದಿಯ ಕೊಂಬುಗಳಿಗೂ ಹಚ್ಚಲಾಗುತ್ತಿತ್ತು. ಇದರ ದೇಹವನ್ನು ಸಮೂಹದ ಹೊರಗೆ ಸುಡುತ್ತಿದ್ದರು (ನೋಡಿ ವ. 9, 15–16, 18, 27). ಯಜ್ಞದ ಪಶುವಾದ ಇನ್ನೊಂದು ಹೋತನ್ನು ಇಡೀ ರಾಷ್ಟ್ರದ (ಇಸ್ರಾಯೇಲ್ಯರ) ಪಾಪಗಳಿಗಾಗಿ ಜೀವಂತವಾಗಿ ಕಾಡಿಗೆ ಕಳುಹಿಸಲಾಗುತ್ತಿತ್ತು (ನೋಡಿ ವ. 21). ಈ ಹೋತು ಪಾಪಗಳು ಮತ್ತು ಅಪರಾಧಗಳು ತೆಗೆಯಲ್ಪಟ್ಟಿದ್ದಕ್ಕೆ ಗುರುತಾಗಿತ್ತು.

*ಟಗರು* ( ವ. 5): ಇದು ಎರಡನೆಯದು. ಇದು ಜನರ ದೋಷಪರಿಹಾರದ ಯಜ್ಞಕ್ಕಾಗಿ ಇರುವ ಟಗರು ( ಹೋಲಿಸು ವ. 3: ನೋಡಿ ವ. 24).

*ಹಜಾಜೇಲನಿಗೋಸ್ಕರ ಹೋತ(ಹರಕೆ ಹೋತ)* (ವ. 8, 10, 26): "ಹಜಾಜೇಲ್" ಎಂಬ ಇಬ್ರಿಯ ಪದ "ಬಿಡಿಸಲ್ಪಟ್ಟ ಹೋತ", "ಕಳುಹಿಸಲ್ಪಟ್ಟ" ಇಲ್ಲವೆ "ದೂರಕ್ಕೆ ಕಳುಹಿಸಿದ ಹೋತ" ಎಂಬ ಅರ್ಥವನ್ನು ನೀಡುತ್ತದೆ. ಕನ್ನಡ ಜೆ.ವಿ. ಭಾಷಾಂತರದಲ್ಲಿ ಇದನ್ನು ಇತರ ಭಾಷಾಂತರಗಳಲ್ಲಿ ಇರುವಂತೆ (ಉದಾ: ಆಂಗ್ಲ ಓಖಖಗಿ ಮತ್ತು ಇಖಗಿ) "ಹಜಾಜೇಲನಿಗೋಸ್ಕರ" ಎಂದು ವ್ಯಕ್ತಿಯ ಹೆಸರಿನ ಹಾಗೆ ಭಾಷಾಂತರಿಸಲಾಗಿದೆ. ಇದು ಕೆಲವೊಮ್ಮೆ ಮರಳುಗಾಡಿನ ದುರ್ಗಮ ಸ್ಥಳ ಎಂದು, ಮರಳುಗಾಡಿನ ದೇವತೆ ಇಲ್ಲವೆ ದೊಬ್ಬಲ್ಪಟ್ಟ ದೂತರ ನಾಯಕನೆಂದೂ ಅರ್ಥವಿಸಲಾಗಿದೆ.

*ದರ್ಶನದ ಗುಡಾರ* (ವ. 16, 17,20): 16ನೇ ಅಧ್ಯಾಯದಲ್ಲಿ ತಿಳಿಸಿರುವಂತೆ ಇದು ದೇವದರ್ಶನ ಗುಡಾರದ ಹೆಚ್ಚಿನ ಭಾಗವನ್ನು ಒಳಗೊಂಡಿದೆ (ತೆರೆಗಿಂತಲೂ ಮುಂಚಿನ ಜಾಗ), ಇದು ಪವಿತ್ರ ಸ್ಥಳವಾಗಿದೆ.

*ಪಾಳೆಯದ ಹೊರಗೆ* (27): ನೋಡಿ 4:12, ಈ ಸ್ಥಳದಲ್ಲಿ ಈಗಾಗಲೆ ಹೇಳಿದಂತೆ ಧಾರ್ಮಿಕ ಶುದ್ಧಾಚಾರವನ್ನು ನೆರವೇರಿಸುವದಕ್ಕಾಗಿ ಯಜ್ಞದ ಪಶುಗಳನ್ನು ಇಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದರು (ವಿಮೋ. 29:14ರಲ್ಲಿ ದೇವರು ಮೋಶೆಗೆ ಸಿನಾಯ್ ಪರ್ವತದಲ್ಲಿ ನೀಡಿದ ಸೂಚನೆಗಳನ್ನು ನೋಡಿ).

*ನಿಮ್ಮ ಕೆಲಸಗಳನ್ನು ಬಿಟ್ಟು* (ವ. 29, 31): ಮೂಲ ಭಾಷೆಯಲ್ಲಿ ಇದರ ಅರ್ಥ "ತೊಂದರೆ ತೆಗೆದುಕೊಂಡವರಾಗಿ" ಅಥವಾ "ವಿನಮ್ರತೆಯುಳ್ಳವರಾಗಿ" ಎಂದರ್ಥ. ಇಸ್ರಾಯೇಲ್ಯರು ಇದನ್ನು "ಉಪವಾಸ" ಎಂದು ಅರ್ಥವಿಸಿಕೊಂಡರು. ಪ್ರಾಯಶ್ಚಿತ್ತ ಯಜ್ಞದ ಮಹಾದಿನದಲ್ಲಿ ಮಾತ್ರ ಉಪವಾಸದ ಆಚರಣೆ ಇತ್ತು ಎಂದು ಹಳೆ ಒಡಂಬಡಿಕೆ ತಿಳಿಸುತ್ತದೆ. ಆದರೆ ನಂತರದಲ್ಲಿ ಇತರ ಉಪವಾಸದ ದಿನಗಳು ಯೆಹೂದಿ ಸಂಪ್ರದಾಯಗಳಿಂದ ಕ್ಯಾಲೆಂಡರ್‌ಗೆ ಸೇರಿಸಲ್ಪಟ್ಟವು.

*ಏಳನೆಯ ತಿಂಗಳು* (ವ. 29): ನಮ್ಮ ಇಂದಿನ ಕ್ಯಾಲೆಂಡರ್ ಪ್ರಕಾರ ಇದು ಸೆಪ್ಟಂಬರ್–ಅಕ್ಟೋಬರ್ ಆಗಿದೆ. ಇದು ತುತ್ತೂರಿಗಳ ಹಬ್ಬದಿಂದ ಆರಂಭಗೊಳ್ಳುತ್ತಿತ್ತು. ಮತ್ತು ಪ್ರಾಯಶ್ಚಿತ್ತ (ದೋಷಪರಿಹಾರಕ) ಯಜ್ಞದ ದಿನ (10ನೇ ದಿನ) ಗುಡಾರಗಳ ಹಬ್ಬ (15ನೇ ದಿನದಿಂದ 21ನೇ ದಿನದವರೆಗೆ) ನಡೆಯುತ್ತಿದ್ದವು.

**ಈ. ಪ್ರಶ್ನೆಗಳು**

1. ಆರೋನನು ಹೇಗೆ ಧೂಪವನ್ನು ಅರ್ಪಿಸುತ್ತಿದ್ದನು?
2. ವಚನ 3 ಮತ್ತು 5ರಲ್ಲಿ ತಿಳಿಸಲ್ಪಟ್ಟ ಐದು ಪಶುಗಳು ಪ್ರಾಯಶ್ಚಿತ್ತ (ದೋಷಪರಿಹಾರಕ) ಯಜ್ಞದ ದಿನದಲ್ಲಿ ಯಾವ ಉದ್ದೇಶಕ್ಕಾಗಿ ಬಳಸಲ್ಪಡುತ್ತಿದ್ದವು?
3. ಮೊದಲನೆ ಹೋತನ್ನು ಯಜ್ಞವರ್ಪಿಸಿದಾಗ ನಡೆಯುದ್ದ ಚಟುವಟಿಕೆಗಳನ್ನು ವಿವರಿಸಿ.
4. ಎರಡನೆ ಹೋತನಿ ಕುರಿತ ವಿಚಾರಗಳನ್ನು ವಿವರಿಸಿ.
5. ದೋಷಪರಿಹಾರಕ ಯಜ್ಞದ ದಿನದಲ್ಲಿ ನಡೆಯುದ್ದ ಎಲ್ಲ ಚಟುವಟಿಕೆಗಳನ್ನು ಪಟ್ಟಿ ಮಾಡಿ.
6. ಈ ಅಧ್ಯಾಯದ ಸಾರಾಂಶವನ್ನು ಅಭ್ಯಾಸಿಸಿ (ವ. 34) ಮತ್ತು ಇಲ್ಲಿ ನೀವು ಗಮನಿಸಿದ ವಿಚಾರಗಳನ್ನು ತಿಳಿಸಿ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. 16ನೇ ಅಧ್ಯಾಯದಲ್ಲಿ ಬರುವ ಧಾರ್ಮಿಕ ವಿಧಿಯಾಚರಣೆಗಳು ಸರಿಯಾದ ಕಾಲಾನುಗತಿಯಲ್ಲಿ ತಿಳಿಸಲ್ಪಡದೆ ಇರುವದರಿಂದ ಇಂದಿನ ಓದುಗರನ್ನು ಗೊಂದಲಕ್ಕೆ ನಡೆಸುತ್ತಿವೆ. ಇದು ಯಾಕೆ? ಈ ಹಿನ್ನಲೆಯಲ್ಲಿ ದೋಷಪರಿಹಾರಕ ದಿನದ ವಿಧಿಯಾಚರಣೆಗಳ ಕುರಿತು ಸರಿಯಾದ ಕಾಲಾನುಗತಿಯನ್ನು ತಿಳಿಸಲು ಪ್ರಯತ್ನಿಸಿ.
2. ಯಾವ ಆರ್ಥದಲ್ಲಿ ಎರಡು ಹೋತುಗಳು ಯೇಸುವನ್ನು ಸೂಚಿಸುತ್ತವೆ?

   ಅ) ಯಜ್ಞವಾಗಿ ಅರ್ಪಿಸಲ್ಪಟ್ಟ ಹೋತು. ಈ ಕೆಳಗಿನ ಹೊಸ ಒಡಂಡಿಕೆಯ ಭಾಗಗಳನ್ನು ನೋಡಿ: ರೋಮಾ. 3:23–25; ಇಬ್ರಿಯ 9:13–14, 21–22; 13:11–13; 1ಯೋಹಾನ 2:2.

   ಆ) ಕಳುಹಿಸಲ್ಪಟ್ಟ (ಬಿಡಿಸಲ್ಪಟ್ಟ) ಹೋತು. ಈ ಕೆಳಗಿನ ಹೊಸ ಒಡಂಡಿಕೆಯ ಭಾಗಗಳನ್ನು ನೋಡಿ: ಯೋಹಾನ 1:29; ಇಬ್ರಿಯ 9:27–28; 1ಯೋಹಾನ 3:4

   ನಿಮ್ಮ ಸಾರಾಂಶವನ್ನು ಬರೆಯಿರಿ
3. ಇಬ್ರಿಯ ಪತ್ರಿಕೆಯ ಗ್ರಂಥಕರ್ತನು "ಪಾಳೆಯದ ಹೊರಗೆ" ಎಂಬ ಯಾಜಕಕಾಂಡದ (ಯಾಜಕ. 16:27) ವಿಚಾರವನ್ನು ಮೂರು ಬಾರಿ ಬಳಸಿದ್ದಾನೆ (ಇಬ್ರಿಯ 13:11–13). ಈ ಮೂರು ನಿದರ್ಶನಗಳಲ್ಲಿ ಅವನು ಏನನ್ನು ಸೂಚಿಸುತ್ತಾನೆ ಎಂಬುದನ್ನು ವಿವರಿಸಿ.

**ಯಾಜಕಕಾಂಡ ಅಧ್ಯಯನ 3: ಯಜ್ಞ ಮತ್ತು ಒಡಂಬಡಿಕೆ**

**ಅ. ಪರಿಚಯ**

ಯಜ್ಞವು ಒಳಗೊಂಡ ಪಶುಗಳು, ಧಾನ್ಯ ಮತ್ತು ದ್ರವ್ಯಗಳು ಹಳೆ ಒಡಂಬಡಿಕೆಯ ಕಾಲದಲ್ಲಿ ಕೇವಲ ಇಸ್ರಾಯೇಲ್ಯರಲ್ಲಿದ್ದ ಮಾತ್ರ ಇದ್ದ ವಿಚಾರಗಳಲ್ಲ. ಇದಕ್ಕೆ ಸಮಾಂತರವಾದ ಆಚರಣೆಗಳನ್ನು ಸುತ್ತಲಿನ ಅನ್ಯದೇಶಗಳವರಲ್ಲಿಯೂ ಕಾಣಬಹುದಾಗಿತ್ತು.

ಅನ್ಯರಲ್ಲಿದ್ದ ಯಜ್ಞಯಾಗಾದಿಗಳು ತಮಗೆ ನೀರು ಅಹಾರವನ್ನು ಅನುಗ್ರಹಿಸುವದಕ್ಕಾಗಿ ದೇವರುಗಳನ್ನು ಒಲಿಸಿಕೊಳ್ಳುವ ಉದ್ದೇವನ್ನು ಹೊಂದಿದ್ದವು. ಒಂದು ವೇಳೆ ಯಜ್ಞಗಳಿಂದ ದೇವರುಗಳು ಒಲಿದರೆ ಅವುಗಳಿಂದ ಆರಾಧಕರಿಗೆ ದಯೆ ದೊರಕುತ್ತಿತ್ತು.

ವ್ಯತಿರಿಕ್ತವಾಗಿ ಹಳೆ ಒಡಂಬಡಿಕೆಯಲ್ಲಿ ಕಂಡುಬರುವ ಇಸ್ರಾಯೇಲ್ಯರ ಧಾರ್ಮಿಕ ಯಜ್ಞಗಳು ಒಡಂಬಡಿಕೆಯ ಚೌಕಟ್ಟಿನಲ್ಲಿ ಕೊಡಲ್ಪಟ್ಟವುಗಳು. ಇಸ್ರಾಯೇಲ್ಯರ ಮತ್ತು ಅವರ ದೇವರ ಮಧ್ಯದ ಸಂಬಂಧವನ್ನು ಬೆಳೆಸುವ ನಿಟ್ಟಿನಲ್ಲಿ ಯಜ್ಞಗಳು ಇಲ್ಲ. ಬದಲು ಅವು ಈಗಾಗಲೇ ಉಭಯರ ಮಧ್ಯೆ ಉಂಟಾಗಿರುವ ಸಂಬಂಧದ ಮೂಲವನ್ನು ಹೊಂದಿವೆ. ಇಲ್ಲಿ ಮೊದಲು ಒಡಂಬಡಿಕೆ ಆನಂತರ ಯಜ್ಞಗಳು.

ಮತ್ತೊಮ್ಮೆ ಯಾಜಕಕಾಮಡದ 1–7, 9 ಮತ್ತು 16ನೇ ಅಧ್ಯಾಯಗಳನ್ನು ಓದಿ ಕೆಳಗಿನ ಎರಡೂ ಪ್ರಶ್ನೆಗಳನ್ನು ಉತ್ತರಿಸಿ.

**ಆ. ಪ್ರಶ್ನೆಗಳು**

1. ಯಜ್ಞದ ವಿಧಿಯಾಚರಣೆ ಒಂದು ನಿರ್ದಿಷ್ಟವಾದ ಮಾದರಿಯನ್ನು ಹೊಂದಿದೆ ಅಲ್ಲದೆ ಅದು ಆರು ಹಂತಗಳನ್ನು ಒಳಗೊಂಡಿದೆ. ಅವು ಯಾವವು ಮತ್ತು ಎಲ್ಲಿವೆ (ಕೊಡಲ್ಪಟ್ಟ ವಾಕ್ಯದ ಭಾಗಗಳು ಉತ್ತರವನ್ನು ಕಂಡುಕೊಳ್ಳಲು ಸಹಾಹಿಸುತ್ತವೆ.)?

   ಅ. ನೋಡಿ 1:1; 2:1; 3:1; 4:3, 14,23,28; 5:14.

   ಆ. ನೋಡಿ 1:4; 3:2; 4:4.

   ಇ. ನೋಡಿ 1:5; 3:2; 4:4.

   ಈ. ನೋಡಿ 1:5; 3:2; 4:5–7; 7:2.

   ಉ. ನೋಡಿ 1:8–9; 3:3–5; 4:8–10; 7:3–5.

   ಊ. ನೋಡಿ 3:17; 6:26, 29; 7:6.

2. ಯಾಜಕಕಾಂಡ 4:20ರಲ್ಲಿ "ಪ್ರಾಯಶ್ಚಿತ್ತ ಮಾಡು" (ದೋಷಪರಿಹಾರ ಮಾಡು) ಎಂಬುದಾಗಿ ಕಾಣುತ್ತೇವೆ. ಈ ಇಬ್ರಿಯ ಕ್ರೀಯಾಪದವು ಬಹುಶಃ ತುಂಬಾ ಹಳೆಯ ಅರ್ಥವಾದ "ನಾಶಪಡಿಸು", "ಸ್ವಚ್ಚಗೊಳಿಸು" ಎಂಬುದಕ್ಕೆ ಸಂಬಂಧಿಸಿದ್ದು ಈ ಹಿನ್ನಲೆಯಲ್ಲಿ ಪಾಪವು ಕನಿಷ್ಠಪಕ್ಷ "ಕೊಳೆ" ಇಲ್ಲವೆ "ಮಲೀನ"ವಾದದ್ದಾಗಿದೆ. ದೋಷಪರಿಹಾರಕ ಯಜ್ಞದ ಮಹಾದಿನದ ವಿಧಿಯಾಚರಣೆಗಳು (ಅಧ್ಯಾಯ 16) ಈ ಮೂಲ ಅರ್ಥಕ್ಕೆ ಪೂರಕವಾಗಿವೆ. ಇದು ಹೇಗೆ?

3. 9ನೇ ಅಧ್ಯಾಯದಲ್ಲಿ ಯಾಜಕರು ಮೊದಲ ಬಾರಿಗೆ ತಮ್ಮ ಸೇವೆಯನ್ನು ಆರಂಬಿಸಿ ಯಜ್ಞಗಳನ್ನು ಅರ್ಪಿಸಿದರು

   ಅ. ಅವರು ಅರ್ಪಿಸಿದ ನಾಲ್ಕು ವಿಧಧ ಕಾಣಿಕೆಗಳು (ಯಜ್ಞಗಳು) ಯಾವವು?

   ಆ. ವಾಸ್ತವವಾಗಿ ಇವುಗಳಲ್ಲಿ ಒಂದು ಇನ್ನೊಂದು ಇನ್ನೊಂದು ಕಾಣಿಕೆಯ ಭಾಗವಲ್ಲವೆ? ವಿವರಿಸಿ.

   ಇ. 9ನೇ ಅಧ್ಯಾಯದ ಈ ಮೂರು ಕಾಣಿಕೆಗಳ (ಅಥವಾ ನಾಲ್ಕು) ಕ್ರಮವನ್ನು 1:3–6:7 ಮತ್ತು 6:8–7:38ರ ಕ್ರಮದೊಂದಿಗೆ ಹೋಲಿಸಿ. ನಿಮ್ಮ ಅನಿಸಿಕೆ ಏನು?

**ಇ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಹಳೆ ಒಡಂಬಡಿಕೆಯ ಯಜ್ಞಗಳು ಯಾವ ವಿಧದಲ್ಲಿ (ಅರ್ಥದಲ್ಲಿ) ದೇವರು ಇಸ್ರಾಯೇಲ್ಯರೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು ಸೂಚಿಸುತ್ತವೆ?

2. ಪ್ರಶ್ನೆ 3 ಗೆ ಸಂಬಂಧಿಸಿ 9ನೇ ಅಧ್ಯಾಯದಲ್ಲಿ ಕಂಡುಬಂದ ಆರೋನ ಮತ್ತು ಆತನ ಮಕ್ಕಳು ಅರ್ಪಿಸಿದ ಯಜ್ಞಗಳ ಕ್ರಮವು ಈ ಹಿಂದಿನ ವಾಕ್ಯಭಾಗಗಳಲ್ಲಿ ಕಂಡಂದ್ದಕ್ಕಿಂತಲೂ ಹೆಚ್ಚು ಸರಿಯಾದದ್ದು. ಈ ಕ್ರಮವು: ದೋಷಪರಿಹಾರಕ ಯಜ್ಞ, ನಂತರ ಸವಾಂಗಹೋಮ (ಧಾನ್ಯ ಸಮರ್ಪಣೆಯೊಂದಿಗೆ), ಆನಂತರ ಸಮಾಧಾನದ ಯಜ್ಞ (ಹೋಲಿಸು ಅರಣ್ಯಕಾಂಡ 6:16–17 ಇಲ್ಲಿಯೂ ಇದೇ ಕ್ರಮವನ್ನು ಕಾಣುತ್ತೇವೆ). ಈ ಸರಿಯಾದ ಕ್ರಮದ ಯಜ್ಞಗಳ ವ್ಯವಸ್ಥೆಯ ಹಿಂದಿರುವ ದೈವಶಾಸ್ತ್ರವೇನು?

3. ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಇಂದು ಈ ಅಧ್ಯಯನದಿಂದ ಕಲಿಯುವಂಥದ್ದೇನು?

**ಈ. ಈ ಅಧ್ಯಯನದಿಂದ ಕಂಡು ಬಂದ ತಿಳುವಳಿಕೆಗಳು (ಸಾರಾಂಶಗಳು)**

1. ಹಳೆ ಒಡಂಬಡಿಕೆಯ ಇಸ್ರಾಯೇಲ್ಯರಲ್ಲಿದ್ದ ಯಜ್ಞಗಳು ಮೇಲ್ನೋಟಕ್ಕೆ ಸುತ್ತಲಿನ ಅನ್ಯಜನಾಂಗಗಳವರಲ್ಲಿದ್ದ ಯಜ್ಞಗಳಂತೆ ಕಂಡರೂ ಅವುಗಳ ಅರ್ಥ ವಿಭಿನ್ನವಾದದ್ದು.

2. ಇಸ್ರಾಯೇಲ್ಯರ ಯಜ್ಞಗಳ ವ್ಯವಸ್ಥೆಯು ದೇವರು ಜನರೊಂದಿಗೆ ಮಾಡಿಕೊಂಡ ಒಡಂಬಡಿಕೆಯ ಪ್ರತೀಕವಾಗಿದೆ. ಇದನ್ನು ಒಡಂಬಡಿಯ ಹಿನ್ನಲೆಯಲ್ಲಿ ಮಾತ್ರ ಅರ್ಥವಿಸಲು ಸಾಧ್ಯ.

3. ಹಳೆ ಒಡಂಬಡಿಕೆಯ ಯಜ್ಞದ ಅರ್ಥ ಮತ್ತು ಅದರ ಕಾರ್ಯ ವ್ಯವಸ್ಥೆಯನ್ನು ಆಧರಿಸಿ ಅದರ ಸಾರಾಂಶವನ್ನು ಎರಡು ಹೇಳಿಕೆಗಳಲ್ಲಿ ಕ್ರೂಡೀಕರಿಸಬಹುದು.

   ಯಜ್ಞವು ಒಡಂಬಡಿಕೆಯ ಸಂಬಂಧದ ಚೌಕಟ್ಟಿನಲ್ಲಿ ಶುದ್ಧೀಕರಣವನ್ನು ತರುತ್ತದೆ.

   ವ್ಯಕ್ತಿಯು ತನ್ನನ್ನು ದೇವರಿಗೆ ಅರ್ಪಿಸುವಲ್ಲಿ ಯಜ್ಞವು ನಿರಂತರವಾಗಿ ಅದನ್ನು ನವೀಕರಿಸುತ್ತದೆ.

4. ಈ ಅಧ್ಯಯನದಿಂದ ಹೊಸ ಒಡಂಬಡಿಕೆಯಲ್ಲಿ ಬದುಕುವ ನಾವು ನಮ್ಮನ್ನು ನಿರಂತರವೂ ಶುದ್ಧೀಕರಿಸಿಕೊಂಡು ಮತ್ತು ದೇವರೊಂದಿಗಿನ ನಮ್ಮ ಒಡಂಬಡಿಕೆಯ ಸಂಬಂಧವನ್ನು ಪುನರ್‌ನವೀಕರಿಸಿಕೊಂಡು ಜೀವಿಸುವ ಪಾಠವನ್ನು ಕಲಿಯುತ್ತೇವೆ. ಯೇಸು ಕ್ರಿಸ್ತ ಮರಣ ಮತ್ತು ಪುನರುತ್ಥಾನದ ಮೂಲಕ ದೇವರು ಈ ಒಡಂಬಡಿಕೆಯ ಸಂಬಂಧವನ್ನು ನಮಗೂ ವಿಸ್ತರಿಸಿದ್ದಾನೆ. ದಿನನಿತ್ಯದ ನಮ್ಮ ಬಾಳಿನಲ್ಲಿ ಯೇಸುವನ್ನು ನಮ್ಮನ್ನು ಒಪ್ಪಿಸಿ, ನಮ್ಮ ಜೀವನಗಳನ್ನು ನವೀಕರಿಸಲು ಪವಿತ್ರಾತ್ಮನನ್ನು ಆವ್ಹಾನಿಸುವದು ಅಗತ್ಯವಾಗಿದೆ.

**ಯಾಜಕಕಾಂಡ ಅಧ್ಯಯನ 4: ಯಾಜಕತ್ವ (ಪುರೋಹಿತ್ಯ)**

**ಅ. ಪರಿಚಯ**

ದೇವರ ಗುಡಾರದಲ್ಲಿ ಕರ್ತನಿಗೆ ಯಜ್ಞಗಳನ್ನು ಅರ್ಪಿಸುವದು ನೇಮಕವಾದ ಯಾಜಕರ ಪಾತ್ರವಾಗಿತ್ತು ಎಂಬುದನ್ನು ಈ ಹಿಂದಿನ ಅಧ್ಯಯನಗಳಲ್ಲಿ ನೋಡಿದ್ದೇವೆ. 8ನೇ ಅಧ್ಯಾಯವು ಆರೋನ ಮತ್ತು ಆತನ ಮಕ್ಕಳು ಈ ಕೆಲಸಕ್ಕಾಗಿ ಅಭಿಷಿಕ್ತರಾದದ್ದನ್ನು ತಿಳಿಸುತ್ತದೆ. ನಂತರದ ಅಧ್ಯಾಯವು ಅವರು ತಮಗಾಗಿ ಮತ್ತು ಜನರಿಗಾಗಿ ದೋಷಪರಿಹಾರಕ ಯಜ್ಞಗಳನ್ನು, ಸರ್ವಾಂಗಹೋಮ, ಸಮಾಧಾನದ ಯಜ್ಞಗಳನ್ನು ಅರ್ಪಿಸುವ ಮೂಲಕ ತಮ್ಮ ಸೇವೆಯನ್ನು ಆರಂಭಿಸಿದ್ದನ್ನು ತಿಳಿಸುತ್ತದೆ.

ಆದರೆ ಯಜ್ಞಗಳನ್ನು ಅರ್ಪಿಸುವದು ಮಾತ್ರ ಯಾಜಕರ ಕಾರ್ಯವಾಗಿರಲಿಲ್ಲ. ಯಾಜಕರು ಧರ್ಮಶಾಸ್ತ್ರದ ಬೋಧಕರು ಕೂಡಾ ಆಗಿದ್ದರು. ಯಾಜಕಕಾಂಡ 10:10–11ರಲ್ಲಿ ದೇವರು ಆರೋನನಿಗೆ ಅವನು ಅವನ ಮಕ್ಕಳು ಮೀಸಲಾದ ವಸ್ತುಗಳನ್ನೂ ಅಲ್ಲದ ವಸ್ತುಗಳನ್ನೂ, ಶುದ್ಧವಾದವುಗಳನ್ನೂ ಅಶುದ್ಧವಾದವುಗಳನ್ನೂ ವಿವೇಚಿಸುವದೂ ಮತ್ರವಲ್ಲ ಕರ್ತನು ಮೋಶೆಯ ಮೂಲಕ ಇಸ್ರಾಯೇಲ್ಯರಿಗೆ ಮಾಡಿದ ಎಲ್ಲಾ ಆಜ್ಞೆಗಳನ್ನು ಬೋಧಿಸುವದು ನಿಮ್ಮ ಕರ್ತವ್ಯವಾಗಿದೆ ಎಂದು ಹೇಳಿದನು. ಮೋಶೆ ಇಸ್ರಾಯೇಲ್ ಕುಲಗಳಿಗೆ ತನ್ನ ವಿಧಾಯದ ಆಶೀರ್ವಾದಗಳನ್ನು ತಿಳಿಸುವಾಗ ಲೇವಿಯರು ಮಾಡಬೇಕಾದ ಕಾರ್ಯಗಳನ್ನು ಹೀಗೆ ವಿವರಿಸಿದನು–

> *ಅವರು ಯಾಕೋಬ್ ವಂಶದವರಿಗೆ ನಿನ್ನ ನಿರ್ಣಯಗಳನ್ನು ತಿಳಿಸುವರು;*
>
> *ಇಸ್ರಾಯೇಲ್ಯರಿಗೆ ನಿನ್ನ ಧರ್ಮಶಾಸ್ತ್ರವನ್ನು ಕಲಿಸುವರು.*
>
> *ನಿನ್ನ ಸನ್ನಿಧಿಯಲ್ಲಿ ಧೂಪಹಾಕುವರು;*
>
> *ನಿನ್ನ ಯಜ್ಞವೇದಿಯ ಮೇಲೆ ಸರ್ವಾಂಗಹೋಮಗಳನ್ನು ಸಮರ್ಪಿಸುವರು (ಧರ್ಮೋಪದೇಶಕಾಂಡ 33:10).*

ಮೋಶೆ ಇಲ್ಲಿ ಲೇವಿಯರ ಅಧಿಕೃತ ಸೇವೆಗಳಾದ ದೇವರ ಗುಡಾರದಲ್ಲಿ ಮಾಡಬೇಕಾದ ಯಜ್ಞದ ಕಾರ್ಯಗಳ ಮೊದಲು ಅವರ ಬೋಧನೆಯ ಕೆಲಸಗಳನ್ನು ತಿಳಿಸುತ್ತಾನೆ.

ಹಳೆ ಒಡಂಬಡಿಕೆಯ ಕಾನೂನು ವ್ಯವಸ್ಥೆಯು ಮೋಶೆಯ ಧರ್ಮಶಾಸ್ತ್ರದ ಮೇಲೆ ಆಧಾರಗೊಂಡಿದ್ದು, ಯಾಜಕರ ನ್ಯಾಯದ ಆಡಳಿತವು ಧರ್ಮಶಾಸ್ತ್ರದ ಬೋಧನೆಯೊಂದಿಗೆ ನಿಕಟ ಸಂಬಂಧ ಹೊಂದಿದೆ. ಮುಂದಿನ ವಾಗ್ದತ್ತ ದೇಶದಲ್ಲಿನ ಇಸ್ರಾಯೇಲ್ಯರ ಜೀವನದ ಕುರಿತ ನಿಯಮಗಳನ್ನು ಒಳಗೊಂಡಿರು ಧರ್ಮಶಾಸ್ತ್ರವು ನ್ಯಾಯಾಧಿಪತಿಗಳ ನ್ಯಾಯಾಸನಗಳು ಇದ್ದನ್ನು ತಿಳಿಸುತ್ತದೆ (ಉದಾ: ಧರ್ಮೋ. 25:1–3). ಆದರೆ ನ್ಯಾಯಾಧಿಪತಿಗಳು ಕೆಲವು ಕ್ಲಿಷ್ಟಕರವಾದ ಕಾನೂನಿನ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಅಸಮರ್ಥರಾದಾಗ ಅಂಥಹ ಸಮಸ್ಯೆಗಳನ್ನು ಯಾಜಕರ ಬಳಿ ತರಲಾಗುತ್ತಿತ್ತು (ಧರ್ಮೋ. 17:8–13; ಇದನ್ನೂ ನೋಡಿ ಧರ್ಮೋ. 21:1–5).

ಯಾಜಕತ್ವದ ಇತಿಹಾಸವು ಜಟಿಲವಾದದ್ದು ಮತ್ತು ಈ ಬಗ್ಗೆ ಇರುವ ಕೆಲವು ಸತ್ಯವೇದದ ಸಾಕ್ಷಿಗಳನ್ನು ಅರ್ಥವಿಸುವದು ಕಷ್ಟವಾದದ್ದು. ಹೆಚ್ಚಿನ ವೇದಪಂಡಿತರು ಅಭಿಪ್ರಾಯಪಡುವಂತೆ ಮೂಲದಲ್ಲಿ ಒಂದು ಸ್ಥಿರವಾದ ಯಾಜಕೊಧ್ಯೋಗವೇ ಇರಲಿಲ್ಲ. ಲೇವಿ ಕುಲವು ಇತರ ಉಳಿದ ಕುಲಗಳಂತೆ ಒಂದು ಸಾಮಾನ್ಯ ಕುಲವಾಗಿತ್ತು ಎಂಬುದನ್ನು ಆದಿಕಾಂಡ ಪುಸ್ತಕದಲ್ಲಿ ಕಂಡುಕೊಳ್ಳುತ್ತೇವೆ (ಆದಿ. 34:24; 49:5).

ಮೋಶೆಯ ಕಾಲದಲ್ಲಿ ಲೇವಿ ಕುಲವು ಇಸ್ರಾಯೇಲ್ಯರ ಆರಾಧನೆಯಲ್ಲಿ ಸೇವೆಗೈಯಲು ಪ್ರತ್ಯೇಕಿಸಲ್ಪಟ್ಟಿತು (ವಿಮೋ. 28:1; 29:9, 44; 3):30; 40:13; ಯಾಜಕ. 8ನೇ ಅಧ್ಯಾಯ). ಇದು ಇಸ್ರಾಯೇಲ್ಯರು ಸಿನಾಯ್ ಪರ್ವತದಲ್ಲಿ ಇಳುಕೊಂಡಿದ್ದಾಗ ನಡೆಯಿತು. ಆ ಸಮಯದ ನಂತರ ಯಾಜಕರು ಲೇವಿ ಕುಲದವರು ಮಾತ್ರವಾಗಿರದೆ, ಮೋಶೆಯ ಅಣ್ಣನಾದ ಆರೋನನ ಕುಟುಂಬದವರೂ ಯಾಜಕರಾಗಿದ್ದರು. ಮಹಾಯಾಜಕ ಸ್ಥಾನವು ಆರೋನನ ಕುಟುಂಬದಲ್ಲಿ ಅವನ ಮಗನಾದ ಎಲ್ಲಾಜಾರನ ಉಪ–ಕುಟುಂಬಕ್ಕೆ ಸೀಮಿತವಾಗಿತ್ತು (ಅರಣ್ಯಕಾಂಡ 3:32; 4:16; 20:26). ಅಲ್ಲಿ ಯಾವಾಗಲೂ ಯಾಜಕರು ಮತ್ತು ಲೇವಿಯರು ಎಂಬ ಉಪ–ವಿಭಾಗಗಳು ಇದ್ದವು ಎಂಬುದು ಸ್ಪಷ್ಟವಾಗುತ್ತದೆ.

ಲೇವಿಯರು ಇಸ್ರಾಯೇಲ್ಯರ ಚೊಚ್ಚಲು ಮಕ್ಕಳಿಗೆ ಪರ್ಯಾಯವಾಗಿದ್ದರು (ಬದಲಿ).

ನೂರಾರು ವರ್ಷಗಳ ನಂತರ ಅರಸನಾದ ದಾವೀದನು ಯಾಜಕೊಧ್ಯೋಗವನ್ನು 24 ಗುಂಪುಗಳಾಗಿ ವಿಂಗಡಿಸಿದನು (1 ಪೂ.ಕಾ.ವೃ. 24:1–19).

ಆದರೆ ಮೋಶೆಯ ಕಾಲದ ನಂತರ ಇಸ್ರಾಯೇಲ್ಯರಲ್ಲಿ ಅನೇಕರು ಅಂದರೆ ಯಾಜಕರಲ್ಲದ ವ್ಯಕ್ತಿಗಳೂ ಯಜ್ಞವರ್ಪಿಸುತ್ತಿದ್ದರು ಎಂದು ತಿಳಿದುಬರುತ್ತದೆ. ಈ ಬಗ್ಗೆ ನ್ಯಾಯಸ್ಥಾಪಕರು, ಸಮುವೇಲನು ಮತ್ತು ಅರಸುಗಳು ಪುಸ್ತಕದಲ್ಲಿ ಅನೇಕ ಉದಾಹರಣೆಗಳನ್ನು ಕಾನಬಹುದು. ಗಿದ್ಯೋನನು ತಾನು ಪಶುವನ್ನು ಯಜ್ಞವರ್ಪಿಸಿದ ಸ್ಥಳದಲ್ಲಿ ಹೊಸ ಯಜ್ಞವೇದಿಯನ್ನು ಕಟ್ಟಿದನು (ನ್ಯಾಯಾ. 6:23–28). ಸಂಸೋನನ ತಂದೆಯಾದ ಮಾನೋಹನು ಒಂದು ಹೋತನ್ನೂ ಧಾನ್ಯವನ್ನು ಕರ್ತನಿಗೆ ಅರ್ಪಿಸಿದನು (ನ್ಯಾಯಾ. 13:19). ಏಲಿಯ ಕಾಲದಲ್ಲಿ ಅವರರವರ ಕಾಣಿಕೆಗಳನ್ನು ತಾವೇ ಸಮರ್ಪಿಸುವದು ಇಸ್ರಾಯೇಲ್ಯರಲ್ಲಿ ಸಾಮಾನ್ಯವಾಗಿತ್ತು (1ಸಮು. 2:12–15). ಮಂಜೂಷ ಪೆಟ್ಟಿಗೆಯ ಯೆರೂಸಲೇಮಿಗೆ ತರಲ್ಪಟ್ಟಾಗ ದಾವಿದನು ತಾನೇ ಯಜ್ಞವನ್ನು ಅರ್ಪಿಸಿದನು (2ಸಮು. 6:12–13, 17–19). ಇದಲ್ಲದೆ ಅವನು ಯೆಬೂಸಿಯನಾದ ಅರೌನನ ಕಣದಲ್ಲಿ ಯಜ್ಞವೇದಿಯನ್ನು ಕಟ್ಟಿ ಅದರ ಮೇಲೆ ಸರ್ವಾಂಗ ಹೋಮಗಳನ್ನೂ ಸಮಾಧಾನ ಯಜ್ಞಗಳನ್ನು ಸಮರ್ಪಿಸಿದನು (2ಸಮು. 24:18–25). ಕರ್ಮೆಲ್ ಬೆಟ್ಟದಲ್ಲಿ ಬಾಳನ ಪ್ರವಾದಿಗಳನ್ನು ಪಂಥಾಹ್ವಾನಕ್ಕೆ ಕರೆದ ಎಲಿಯ ಪ್ರವಾದಿಯ ನಾಟಕೀಯ ಘಟನೆಯಲ್ಲಿ, ಯಜ್ಞವನ್ನರ್ಪಿಸಲು ಯೆಹೋವನು ತಾನೇ ಬೆಂಕಿಯನ್ನು ಕಳುಹಿಸಿದನು (1ಅರಸು. 18).

ಒಂದೆಡೆ ಆರೋನನ ಕುಂಬದ ಯಾಜಕರು ದೇವರಿಗೆ ಯಜ್ಞಗಳನ್ನು ಅರ್ಪಿಸುವದಕ್ಕೆ ನೇಮಕವಾಗಿದ್ದರೆ, ಇನ್ನೊಂದೆಡೆ ಇಸ್ರಾಯೇಲ್ಯರ ಇತರ ಕುಲಗಳ ವ್ಯಕ್ತಿಗಳು ಯಜ್ಞವರ್ಪಿಸಿದ್ದನ್ನೂ ಮತ್ರವಲ್ಲ ಇನ್ನೂ ಕೆಲವು ಸಾರಿ ಈ ಬಗ್ಗೆ ದೇವರಿಂದ ನೇರವಾಗಿ ಬಂದ ಆಜ್ಞೆಗಳಿಗೆ ಜನರು ವಿಧೇಯರಾದದ್ದನ್ನೂ ಕಾಣುತ್ತೇವೆ. ಈ ಗೊಂದಲದ ವಿಚಾರವನ್ನು ಪರಿಹರಿಸಿ ತಿಳಿಯುವದು ಹೇಗೆ? ಇಲ್ಲಿ ಅಧಿಕೃತ ಆರಾಧನೆಗಳು ಮತ್ತು ಸ್ಥಳಿಯ ಆರಾಧನೆಗಳು (ಯಜ್ಞಗಳು) ಎಂಬ ವಿಂಗಡನೆಯೇ ಇದಕ್ಕೆ ಪರಿಹಾರ. ಅಧಿಕೃತ ಆರಾಧನೆಗಳಲ್ಲಿ ಇಡೀ ಜನಾಂಗ (ರಾಷ್ಟ್ರ) ದೇವರ ಮುಂದೆ ನಿಲ್ಲುತ್ತದೆ ಮತ್ತು ಇಲ್ಲಿ ಆರೋನನ ಕುಟುಂಬದವರು ಯಾಜಕರಾಗಿ ಸೇವೆಗೈಯುವರು. ಇನ್ನೊಂದೆಡೆ ಸ್ಥಳಿಯ ಆರಾಧನೆಗಳು– ಇವು ಹೆಚ್ಚಿನಾಂಶ ಬೆಬಿಲೋನಿನ ಸೇರೆಗಿಂತ ಮೊದಲಿನ ಕಾಲದಲ್ಲಿ ಕಂಡುಬಂದವುಗಳು ಮತ್ತು ಆಗ ಯಾವುದೇ ಇಸ್ರಾಯೇಲ್ಯನೊಬ್ಬನು ಯಜ್ಞವನ್ನು ಅರ್ಪಿಸುವ ಕಾಲ ಅದಾಗಿತ್ತು.

**ಆ. ಪ್ರಶ್ನೆಗಳು**

1. ಮೇಲಿನ ವಿಚಾರವನ್ನು ಮತ್ತು ಅದರಲ್ಲಿರುವ ಬೈಬಲ್ ವಾಕ್ಯಗಳನ್ನು ನೋಡಿ, ಕೆಳಗೆ ಕೊಡಲ್ಪಟ್ಟ ಪ್ರಶ್ನೆಗಳನ್ನು ನಿಮ್ಮ ವಾಕ್ಯಗಳಲ್ಲಿ ಉತ್ತರಿಸಿರಿ.

   ಅ. ಇಸ್ರಾಯೇಲ್ಯರಲ್ಲಿದ್ದ ಯಾಜಕೋಧ್ಯೋಗದ ಕಾರ್ಯಗಳನ್ನು ಧರ್ಮೋ. 33:10ರ ದೃಷ್ಟಿಕೋನದಲ್ಲಿ ವಿವರಿಸಿ.

   ಆ. ಧರ್ಮೋ. 21:1–5ರಲ್ಲಿ ಯಜಕೋಧ್ಯೋಗದ ಯಾವ ಹೆಚ್ಚಿನ ಕಾರ್ಯವನ್ನು ಕಾಣುತ್ತಿರಿ?

   ಇ. ಯಾಜಕೊಧ್ಯೋಗದ ಯಾವ ಕಾರ್ಯಗಳು ಈ ಕೆಳಗಿನ ಭಾಗಗಳಲ್ಲಿ ತಿಳಿಸಲ್ಪಟ್ಟಿವೆ?

   - ಯಾಜಕ. 10:10–11
   - ಯಾಜಕ. 9:22
   - ಧರ್ಮೋ. 17:10

   ಈ. "ದೇವರ ಸಮಾಧಾನ" ಎಂದು ಕರೆಯಲ್ಪಟ್ಟ ಯಜ್ಞವೇದಿಯನ್ನು ಗಿದ್ಯೋನನು ಎಲ್ಲಿ ಕಟ್ಟಿದನು?

   ಉ. ಎಲಿಯನು ಅರ್ಪಿಸಿದ, ಕರ್ಮೆಲ್ ಬೆಟ್ಟದ ಮೇಲಿನ ಯಜ್ಞವೇದಿಯ ಕುರಿತು ತಿಳಿಸಿ.

   ಊ. ಅರಣ್ಯಕಾಂಡ 3:45ರ ಪ್ರಕಾರ ಲೇವಿಯರ ಮಹತ್ವವೇನು?

2. ಆರೋನ ಮತ್ತು ಆತನ ಮಕ್ಕಳು ಇಸ್ರಾಯೇಲ್ಯರ ಚರಿತ್ರೆಯಲ್ಲಿ ಯಾವ ಹಂತದಲ್ಲಿ ಅವರು ಯಾಜಕರಾಗಿ ಅಭಿಷೇಕ ಹೊಂದಿದರು? ಯಾಕೆ?

**ಇ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಇಸ್ರಾಯೇಲ್ಯರ ಯಾಜಕೊಧ್ಯೋಗದ ಚರಿತ್ರೆಯು ಹಳೆ ಒಡಂಬಡಿಕೆಯ ಬರಹಗಳಲ್ಲಿ ಹೇಗೆ ಒಂದು ಜಟೀಲವಾದ ವಿಷಯವಾಗಿ ಕಂಡುಬಂದಿದೆ?

2. ಮೊದಲನೆಯ ಸಾರಾಂಶವನ್ನು ಗಮನಿಸಿ: ಮೂರೂ ಯಾಜಕೀಯ ಕಾರ್ಯಗಳಿಗೆ ಬೇಕಾದ ಅರ್ಹತೆಗಳು ಅವಶ್ಯಕತೆಗಳು (ಅಧಿಕೃತ ಮತ್ತು ವೈಯಕ್ತಿಕ) ಏನು?

3. ಈ ಅಧ್ಯಯನದಿಂದ ಹಳೆ ಒಡಂಬಡಿಕೆಯ ಕಲದ ಯಾಜಕೊಧ್ಯೋಗದ ಬಗ್ಗೆ ಕಲಿಯು ಹೋಸ ವಿಚಾರಗಳೇನು?

**ಈ. ಸಾರಾಂಶಗಳು**

1. ಹಳೆ ಒಡಂಬಡಿಕೆಯ ಯಾಜಕರು ಮೂರು ಕಾರ್ಯಗಳನ್ನು ಹೊಂದಿದ್ದರು:

ಅ) ಅವರು ಮೊದಲು ದೇವರ ಗುಡಾರದಲ್ಲಿ ನಂತರ ಯೆರೂಸಲೆಮ್ ದೇವಾಲಯದಲ್ಲಿ ಕಾಣಿಕೆಗಳನ್ನು ಯಜ್ಞಗಳನ್ನು ಸಮರ್ಪಿಸುತ್ತಿದ್ದರು.

ಆ) ಅವರು ಜನರಿಗೆ ಧರ್ಮೋಪದೇಶ ಮಾಡುತ್ತಿದ್ದರು: ಯೆಹೋವನು ಆರೋನನಿಗೆ... ಯೆಹೋವನು ಮೋಶೆಯ ಮೂಲಕ ಇಸ್ರಾಯೇಲ್ಯರಿಗೆ ಮಾಡಿದ ಎಲ್ಲಾ ಆಜ್ಞೆಗಲನ್ನು ಜನರಿಗೆ ಬೋಧಿಸುವದು ನಿಮ್ಮ ಕರ್ತವ್ಯವಾಗಿದೆ ಎಂದು ಹೇಳಿದನು (ಯಾಜಕ 10:8–11).

ಇ) ಧರ್ಮಶಾಸ್ತ್ರಕ್ಕೆ ಸಂಬಂದಿಸಿ ಅವರು ನ್ಯಾಯಾಸ್ಥಾಪಕರಿಗೆ ಸಹಾಯ ಮಾಡುತ್ತಿದ್ದರು: ಸರಿಯಾಗಿ ವಿವೇಚಿಸುವದು ನಿಮ್ಮ ಶಕ್ತಿಗೆ ಮೀರಿದ ಪಕ್ಷಕ್ಕೆ... ಲೇವಿಯರ ಮತ್ತು ಆ ಕಾಲದ ನ್ಯಾಯಾಧಿಪತಿಗಳ ಬಳಿಗೆ ಹೋಗಿ ವಿಚಾರಿಸಲು ನೀವು ಕೊಡಬೇಕಾದ ತೀರ್ಪನ್ನು ಅವರು ತಿಳಿಸುವರು (ಧರ್ಮೋ. 17:8–9).

2. ಪುರಾತನ ಇಸ್ರಾಯೇಲ್ಯರಲ್ಲಿ ಯಜ್ಞ ಅರ್ಪಿಸುವಲ್ಲಿ ಎರಡು ವ್ಯವಸ್ಥೆಗಳು ಬೆಳೆದು ಬಂದ ಹಾಗೆ ಕಾಣುತ್ತವೆ:

ಅ. ಅಧಿಕೃತ ಮತ್ತು ರಾಷ್ಟ್ರೀಯವಾದ ಯಾಜಕ ವ್ಯವಸ್ಥೆಯು ಆರಾಧನೆಯ ಕೇಂದ್ರವಾಗಿತ್ತು. ಇದು ದೇವರ ಗುಡಾರದಲ್ಲಿ ನಂತರ ಯೆರೂಸಲೆಮ್ ದೇವಾಲಯದಲ್ಲಿ ಇತ್ತು. ಇಲ್ಲಿ ಆರೋನನ ಕುಟುಂಬದಿಂದ ಬಂದ ಯಾಜಕರು ಮಾತ್ರ ಸೇವೆಗೈಯುತ್ತಿದ್ದರು. ಇಲ್ಲಿ ವೈಯಕ್ತಿವಾದ ಮಾತ್ರವಲ್ಲ ಇಡೀ ಜನಾಂಗ (ರಾಷ್ಟ್ರಕ್ಕೆ) ಸಂಬದಿಸಿ ಯಜ್ಞಗಳನ್ನು ಕರ್ತನಿಗೆ ಅರ್ಪಿಸಲಾಗುತ್ತಿತ್ತು

ಆ. ವೈಯಕ್ತಿಕ ಯಾಜಕೀಯ ವ್ಯವಸ್ಥೆಯಲ್ಲಿ ಇಸ್ರಾಯೇಲ್ಯರಲ್ಲಿ ಯಾರೂ ಕೂಡಾ ಕರ್ತನಿಗೆ ದೇಶದ ಯಾವ ಭಾಗದಲ್ಲಾದರೂ ಯಜ್ಞವನ್ನು ಸಮರ್ಪಿಸಬಹುದಾಗಿತ್ತು.

3. ಮೂಲದಲ್ಲಿ ಲೇವಿ ಕುಲವು ಇಸ್ರಾಯೆಲಿನ ಇತರ ಉಳಿದ ಕುಲಗಳಂತೆ ಒಂದು ಸಾಮಾನ್ಯ ಕುಲವಾಗಿತ್ತು. ಆದರೆ ಮೋಶೆಯ ಕಾಲದಲ್ಲಿ ಇಸ್ರಾಯೇಲ್ಯರು ಸಿನಾಯ್ ಪರ್ವತದಲ್ಲಿ ಇಳುಕೊಂಡಿದ್ದಾಗ ದೇವರು ಲೇವಿ ಕುಲವನ್ನು ಧಾರ್ಮಿಕ ಕರ್ತವ್ಯಗಳನ್ನು ನಿರ್ವಹಿಸುವದಕ್ಕಾಗಿ ಪ್ರತ್ಯೇಕಿಸಿದನು.

4. ಲೇವಿಯರನ್ನು ಎರಡು ಮುಖ್ಯ ಗುಂಪುಗಳಾಗಿ ವಿಂಗಡಿಸಬಹುದು:

ಅ. ಆರೋನನ ಕುಟುಂಬದಿಂದ ಬಂದವರು ಯಾಜಕರು. ಆದರೆ ಆರೋನನ ಮಗನಾದ ಎಲ್ಲಾಜಾರನ ಕುಟುಂಬದವರಿಗೆ ಮಾತ್ರ ಮಹಾ ಯಾಜಕರಾಗುವ ಅವಕಾಶವಿತ್ತು.

ಆ. ಉಳಿದ ಲೇವಿಯರು ಯಾಜಕವಲ್ಲದ ಇತರ ಧಾರ್ಮಿಕ ಕರ್ತವ್ಯಗಳನ್ನು ನಿರ್ವಹಿಸುತಿದ್ದರು.

**ಯಾಜಕಕಾಂಡ ಅಧ್ಯಯನ 5: ಬಾಣಂತಿಯರ ಶುದ್ಧೀಕರಣ**

**ಅ. ಪರಿಚಯ**

ಯಜಕಕಾಂಡದ 11ರಿಂದ 15 ಅಧ್ಯಾಯಗಳು "ಕಳೆದುಹೋದ ಸಂಸ್ಕಾರಗಳ ಶುದ್ಧತೆ" ಇಲ್ಲವೆ "ಕಳೆದುಹೋದ ಧಾರ್ಮಿಕ ಶುದ್ಧತೆಯ" ಕುರಿತು ತಿಳಿಸುತ್ತವೆ. ಕೆಲವು ವಿಧದ ಆಹಾರಗಳು ಅಶುದ್ಧವಾದವುಗಳು ಆದ್ದರಿಂದ ಅವನ್ನು ದೂರವಿಡಬೇಕು. ಮಗುವಿಗೆ ಜನ್ಮ ನೀಡಿದ ಸ್ತ್ರೀ ಧಾರ್ಮಿಕವಾಗಿ ಅಶುದ್ಧಳು ಅದ್ದರಿಂದ ಅವಳು ಶುದ್ಧೀಕರಣದ ಪ್ರಕ್ರಿಯೆಗೆ ಒಳಪಡಬೇಕು. ಸಾಂಕ್ರಾಮಿಕವಾದ ಚರ್ಮ ರೋಗಗಳು ಮತ್ತು ದದ್ದು ಇರುವವರನ್ನು ಪಾಳೆಯದಿಂದ ತೆಗೆಬೇಕು ಯಾಕೆಂದರೆ ಅವು ಇಸ್ರಾಯೇಲ್ಯರ ಪಾಳೆಯವನ್ನು ಕಲುಷಿತಗೊಳಿಸುತ್ತವೆ. ಇಸ್ರಾಯೇಲ್ಯರ ಒಡಂಬಡಿಕೆಯ ದೇವರು ಪರಿಶುದ್ಧನಾಗಿರುವದರಿಂದ ಮತ್ತು ಪಾಳೆಯದಲ್ಲಿ ತನ್ನ ಜನರೊಂದಿಗೆ ಕಾಣಿಸಿಕೊಳ್ಳುವರಿಂದ (ಪ್ರಸನ್ನನಾಗುವದರಿಂದ) "ಪಾಳೆಯವು ಪರಿಶುದ್ಧವಾಗಿರಲೇಬೇಕು" ಮತ್ತು "ಇಸ್ರಾಯೇಲ್ಯರೂ ಪರಿಶುದ್ಧರಾಗಿರಬೇಕು".

**ಆ. ಓದಿ:** ಯಾಜಕಕಾಂಡ ಅಧ್ಯಾಯ 12

**ಇ. ವ್ಯಾಖ್ಯಾನ**

*ಅಶುದ್ಧ* (ವ. 2): ರಕ್ತಸ್ರಾವವು ತಾಯಿಯನ್ನು ಅಶುದ್ಧಳನ್ನಾಗಿಸಿತ್ತೇ (ನೋಡಿ ವ. 7) ಹೊರತು ಮಗುವಿಗೆ ಜನ್ಮ ನೀಡಿದ್ದು ಅವಳನ್ನು ಅಶುದ್ಧಳನ್ನಾಗಿಸಿರಲಿಲ್ಲ.

*ತಿಂಗಳ ಮುಟ್ಟು* (ವ. 2): ಮಹಿಳೆಯ ತಿಂಗಳ ಮುಟ್ಟಿನಿಂದಾಗುವ ಧಾರ್ಮಿಕ ಅಶುದ್ದತೆಯ ಕುರಿತು 15:19–24ರಲ್ಲಿ ವಿವರಿಸಲಾಗಿದೆ.

**ಈ. ಪ್ರಶ್ನೆಗಳು**

1. ಮಗುವಿನ ಜನನ ಮತ್ತು ತಾಯಿಯು ದೇವರ ಗುಡಾರಕ್ಕೆ ಕಾಣಿಕೆಗಳನ್ನು ತರುವ ಸಮಯವನ್ನು ಎರಡು ಅವಧಿಗಳಾಗಿ ವಿಂಗಡಿಸಲಾಗಿದೆ. ಇದು ಹೇಗೆ?
2. ಮಹಿಳೆಯ ಶುದ್ಧೀಕರಣದ ಅವಧಿಯು ಮುಗಿದ ನಂತರ ಆಕೆ ಯಾವ ಕಾಣಿಕೆಯನ್ನು ತರುವದು ಅಗತ್ಯವಾಗಿತ್ತು?
3. ಸಾಮಾನ್ಯ ಮಹಿಳೆ ಮತ್ತು ಬಡ ಮಹಿಳೆ ಇವರಿಬ್ಬರೂ ಕಾಣಿಕೆಗಳನ್ನು ನೀಡಬೇಕಾಗಿರುವಲ್ಲಿ ಇರುವ ವ್ಯತ್ಯಾಸಗಳೇನು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ಹಿಂದೆ ನೀವು ಮಾಡಿದ ಅಧ್ಯಯನದ ಬೇಳಕಿನಲ್ಲಿ ಒಬ್ಬ ಮಹಿಳೆ (ಸ್ತ್ರೀ) ಮಗುವಿಗೆ ಜನನ ನೀಡಿದಾಗ ಶುದ್ಧೀಕರಣಕ್ಕಾಗಿ ದೋಷಪರಿಹಾರಕ ಕಾಣಿಕೆಯನ್ನು (ಧಾನ್ಯ ಸಮರ್ಪಣೆ ಅಥವಾ ಸಮಾಧಾನ ಯಜ್ಞದ ಬದಲು) ನೀಡಬೇಕಾದ ಅಗತ್ಯತೆ ಏನು?
2. ಗಂಡು ಮಗುವಿನ ಜನನ ನಂತರದ ಶುದ್ಧೀಕರಣದ ಅವಧಿಗಿಂತಲೂ ಹೆಣ್ಣು ಮಗುವಿನ ಜನನ ನಂತರದ ಶುದ್ಧೀಕರಣದ ಅವಧಿಯು ದೀರ್ಘವಾದದ್ದೆಂದು ನಮಗೆ ತಿಳಿದುಬರುತ್ತದೆ. ಈ ಬಗ್ಗೆ ವ್ಯತ್ಯಾಸ ಮಾಡಲು ದೇವರು ಯಾಕೆ ಹೇಳಿದನು ಎಂಬುದಕ್ಕೆ ಏನಾದರೂ ಕಾರಣಗಳಿವೆಯೇ? ಆಲೋಚಿಸು.

**ಯಾಜಕಕಾಂಡ ಅಧ್ಯಯನ 6: ಹಬ್ಬ ಹರಿದಿನಗಳು**

**ಅ. ಪರಿಚಯ**

ಯೆಹೋವನು ಮೋಶೆಗೆ ಹೇಳಿದ್ದೇನೆಂದರೆ, "ನೀನು ಇಸ್ರಾಯೇಲ್ಯರಿಗೆ ಹೀಗೆ ಆಜ್ಞಾಪಿಸಬೇಕು: 'ಯೆಹೋವನಿಂದ ನೇಮಕವಾದ ಹಬ್ಬಗಳ ದಿನಗಳು ಇವೆ, ಈ ದಿನಗಳಲ್ಲಿ ದೇವಾರಾಧನೆಗಾಗಿ ಸಭೆಕೂಡಬೇಕೆಂಬದಾಗಿ ಸಾರಬೇಕು" (ಯಾಜಕ. 23:1–2). ಹಳೆ ಒಡಂಬಡಿಕೆಯ ಇಸ್ರಾಯೇಲ್ಯರ ಜೀವನದಲ್ಲಿ ಹಬ್ಬಗಳು ಬಹಳ ಪ್ರಾಮುಖ್ಯವಾದ ಪಾತ್ರವನ್ನು ವಹಿಸಿದ್ದವು. ಧಾರ್ಮಿಕ ಈ ಉತ್ಸವಗಳು (ದೋಷಪರಿಹಾರಕ ದಿನವನ್ನು ಹೊರತುಪಡಿಸಿ) ಯಾವಾಗಲೂ ಸಂತೋಷ ಮತ್ತು ಹರ್ಷಗಳಿಂದ ಕೂಡಿರುತ್ತಿದ್ದವು.

ನಾವು ಯಾಜಕಕಾಂಡದ 23ನೇ ಅಧ್ಯಾಯವನ್ನು (ವಿಮೋಚನಾಕಾಂಡ, ಅರಣ್ಯಕಾಂಡ ಮತ್ತು ಧರ್ಮೋಪದೇಶಕಾಂಡ ಪುಸ್ತಕಗಳಲ್ಲೂ ಇದಕ್ಕೆ ಸಂಬಂದಿಸಿದ ಪರಿಚ್ಛೇಧಗಳಿವೆ) ನೋಡುವಾಗ ಅಲ್ಲಿ ಪ್ರಾಚೀನ ಇಸ್ರಾಯೇಲ್ಯರಲ್ಲಿದ್ದ ಮೂರು ಮುಖ್ಯ ಕೃತಜ್ಞತಾ ಹಬ್ಬಗಳನ್ನು ಕಾಣುತ್ತೇವೆ:

1. ಪಸ್ಕ ಹಬ್ಬ: ವಸಂತಕಾಲದ ಹಬ್ಬ (ಮಾರ್ಚ್–ಎಪ್ರಿಲ್). ಇದು ಈಗಿಪ್ತಿನಿಂದಾದ ಬಿಡುಗಡೆಯನ್ನು ಸ್ಮರಿಸುವದಾಗಿತ್ತು.
2. ಪ್ರಥಮ ಫಲಗಳ ಹಬ್ಬ (ಅಥವಾ ವಾರಗಳ ಹಬ್ಬ): ಇದು ವಸಂತಕಾಲದ ನಂತರ ಬರುವಂತದ್ದು (ಮೇ–ಜೂನ್) ಮತ್ತು ಸುಗ್ಗಿಯ ಆರಂಭದಲ್ಲಿ ಆಚರಿಸಲ್ಪಡುವಂತದ್ದು.
3. ಗುಡಾರಗಳ ಹಬ್ಬ (ಪರ್ಣಶಾಲೆಗಳ ಹಬ್ಬ): ಇದು ಶರತ್ಕಾಲ ಅಂದರೆ ವ್ಯವಸಾಯದ ವರ್ಷದ ಕೋನೆಯಲ್ಲಿ ಆಚರಿಸಲ್ಪಡುವಂತದು (ಸೆಪ್ಟಂಬರ್–ಅಕ್ಟೊಬರ್).

ಈ ಹಬ್ಬಗಳಿಗೂ ಮತ್ತು ಅಂದು ಸುತ್ತಮುತ್ತಲಿನ ರಾಷ್ಟ್ರಗಳ ಅನ್ಯಜನಾಂಗಗಳಲ್ಲಿದ್ದ ಪದ್ಧತಿ ಸಂಪ್ರದಯಗಳಿಗೂ ಅನೇಕ ಸಾಮ್ಯತೆಗಳು ಹೋಲಿಕೆಗಳು ಇದ್ದವು. ಅದರೆ ಅವುಗಳ ಉದ್ದೇಶಗಳು ತುಂಬಾ ವ್ಯತ್ಯಾಸವಾಗಿದ್ದವು. ಅನ್ಯರಲ್ಲಿದ್ದ ಹಬ್ಬಗಳು ಮುಖ್ಯವಾಗಿ ಭೂಮಿಯ ಫಲತ್ವವನ್ನು ಹೆಚ್ಚಿಸಿಕೊಳ್ಳುವತ್ತ ಕೇಂದ್ರೀಕೃತವಾಗಿದ್ದವು. ಆದರೆ ಇಸ್ರಾಯೇಲ್ಯರಲ್ಲಿದ್ದ ಈ ಮೂರೂ ಕೃತಜ್ಞತಾ ಹಬ್ಬಗಳಲ್ಲಿ ಈ ಉದ್ಧೇಶ ಕಾಣುವದೇ ಇಲ್ಲ. ಭೂಮಿಯ ಫಲತ್ವತೆಯನ್ನು ಹೇಚ್ಚಿಸುವದಕ್ಕಾಗಿ ಈ ಹಬ್ಬಗಳು ದೇವರಿಗೆ "ಆಮೀಷ ಒಡ್ಡುವ" ಅಥವಾ "ಲಂಚ ಕೊಡುವ" ಹಾಗೆ ಬಳಸಲ್ಪಡಲಿಲ್ಲ.

ವಾರಗಳ ಹಬ್ಬವನ್ನು (ಪ್ರಥಮಫಲ) ನಂತರದಲ್ಲಿ ಸಿನಾಯಿಯಲ್ಲಿ ಕೊಡಲ್ಪಟ್ಟ ಧರ್ಮಶಾಸ್ತ್ರಕ್ಕೆ ಸಂಬಂಧಿಸಿಲಾಯಿತು. ಮತ್ತು ಗುಡಾರಗಳ ಹಬ್ಬವನ್ನು ವಾಗ್ದತ್ತ ದೇಶಕ್ಕೆ ಸಾಗುವಲ್ಲಿ ಅರಣ್ಯದಲ್ಲಾದ ಅದ್ಭುತಗಳೊಂದಿಗೆ ಸಂಬಂಧಿಸಲಾಯಿತು.

ದೋಷಪರಿಹಾರಕ ಮಹಾದಿನವು ಪ್ರಾಚೀನ ಇಸ್ರಾಯೇಲ್ಯರಲ್ಲಿ ನಾಲ್ಕನೆಯ ವಾರ್ಷಿಕ ಮಹಾ ಹಬ್ಬವಾಗಿತ್ತು. ಇದು ಏಳನೆಯ ತಿಂಗಳಿನ ಹತ್ತನೆಯ ದಿನದಲ್ಲಿ (ಸೆಪ್ಟಂಬರ್–ಅಕ್ಟೊಬರ್) ಇಡೀ ಇಸ್ರಾಯೇಲಿನ ಸಾಮೂಹಿಕ ದೋಷ ಇಲ್ಲವೆ ಅಫರಾಧವನ್ನು ಪರಿಹರಿಸುವ ಹಬ್ಬವಾಗಿ ಆಚರಿಸಲ್ಪಡುತ್ತಿತ್ತು.

ಕೇಲವು ವೇದ ಅಭಿಪ್ರಾಯಪಡುವಂತೆ ಇಸ್ರಾಯೇಲ್ಯರ ಅರಸನಿಗೆ ಸಂಬಂಧಿಸಿ ನಿರ್ಧಿಷ್ಟವಾದ ಹೋಸ ವರ್ಷದ ಹಬ್ಬವು ಇತ್ತು. ಆದರೆ ಈ ಬಗ್ಗೆ ಹಳೆ ಒಡಂಬಡಿಕೆಯಲ್ಲಿ ಯಾವ ಪರಿಚ್ಛೇಧಗಳನ್ನೂ ಕಾಣುವದಿಲ್ಲ.

**ಆ. ಓದು**

ಯಾಜಕಕಾಂಡ ಅಧ್ಯಾಯ 23

**ಇ. ವ್ಯಾಖ್ಯಾನ**

*ಸಬ್ಬತ್* (ವ. 3): ಇಲ್ಲಿ ಬಳಸಲ್ಪಟ್ಟ ಇಬ್ರಿಯ ಪದದ ಅರ್ಥ "ವಿಶ್ರಾಂತಿ". ಇಸ್ರಯೇಲ್ಯರು ವಾರದ ಏಳನೆಯ ದಿನವನ್ನು (ಇಂದಿನ ಶನಿವಾರವನ್ನು) ಸಂಪೂರ್ಣ ವಿಶ್ರಾಂತಿಯ ದಿನವನ್ನಾಗಿ ನೋಡುತ್ತಿದ್ದರು.

*ಮೊದಲನೆಯ ತಿಂಗಳು* (ವ. 5): ನಮ್ಮ ಆಧುನಿಕ ಕ್ಯಲೆಂಡರ್ ಪ್ರಕಾರ ಇದು ಮಾರ್ಚ–ಏಪ್ರಿಲ್.

*ಐವತ್ತು ದಿನಗಳು* (ವ. 16): ವಾರಗಳ ಹಬ್ಬವು ಮೂರನೆ ತಿಂಗಳಿನಲ್ಲಿ (ಮೇ– ಜೂನ್) ಆಚರಿಸಲ್ಪಡುತ್ತಿತ್ತು. ಹೋಸ ಒಡಂಬಡಿಕೆ ಇದನ್ನು ಪೆಂಟೆಕೊಸ್ತ ಎಂದು ಕರೆಯುತ್ತದೆ. ಗ್ರಿಕ್ ಭಾಷೆಯಲ್ಲಿ ಇದರ ಅರ್ಥ "ಐವತ್ತನೇ" ಎಂಬುದಾಗಿದೆ.

*ಏಳನೆಯ ತಿಂಗಳು* (ವ. 24): ನಮ್ಮ ಆಧುನಿಕ ಕ್ಯಲೆಂಡರ್ ಪ್ರಕಾರ ಇದು ಸೆಪ್ಟಂಬರ್–ಅಕ್ಟೊಬರ್.

*ತುತೂರಿಗಳ ಧ್ವನಿ* (ವ. 24): ವ್ಯವಸಾಯದ ಹಳೆ ವರ್ಷವು ಮುಕ್ತಾಯಕ್ಕೆ ಬಂದು ಹೊಸ ಋತು ಆರಂಭವಾಗುವದನ್ನು ತುತೂರಿಗಳ ಧ್ವನಿಯ ಮೂಲಕ ಇಡೀ ರಾಷ್ಟ್ರಕ್ಕೆ ತಿಳಿಸಲಾಗುತ್ತಿತ್ತು. ಕೀರ್ತನೆ 81:3ರಲ್ಲಿ ಕೊಂಬು ಕೂಡಾ ಪ್ರತೀ ತಿಂಗಳಿನ ಮೊದಲನೆಯ ದಿನದಲ್ಲಿ ಊದಲ್ಪಡುತ್ತಿತ್ತು ಎಂಬುದನ್ನು ತಿಳಿಯುತ್ತೇವೆ.

*ನಿಮ್ಮನ್ನು ನಿರಾಕರಿಸಿಕೊಳ್ಳಬೇಕು ಅಥವಾ ಉಪವಾಸ ಮಾಡಬೇಕು* (ವ.27): ದೋಷಪರಿಹಾರಕದ ಮಹಾದಿನವು ತಮ್ಮನ್ನು ತಾವು ನಿರಾಕರಿಸಿಕೊಳ್ಳುವಲ್ಲಿ ಉಪವಾಸದ ದಿನವೂ ಆಗಿತ್ತು.

**ಈ. ಪ್ರಶ್ನೆಗಳು**

1. ತಿಳಿಸಲ್ಪಟ್ಟ ಎಲ್ಲ ಹಬ್ಬಗಳನ್ನು ಪಟ್ಟಿ ಮಾಡಿ ಅವು ಯಾವಾಗ ಹೇಗೆ ಮತ್ತು ಯಾಕೆ ಆಚರಿಸಲ್ಪಡುತ್ತಿದ್ದವು ಎಂಬುದನ್ನು ತಿಳಿಸಿ. ಆಲೋಚಿಸು ಮತ್ತು ಚಚಿಸು ಎಂಬದರಲ್ಲಿನ ಎರಡನೇ ಪ್ರಶ್ನೆಯನ್ನೂ ನೋಡಿ.
2. ಇವುಗಳಲ್ಲಿ ಯಾವ ಹಬ್ಬವು ವ್ಯವಸಾಯದ ವರ್ಷಕ್ಕೆ ಸಂಬಂಧಿಸಿದೆ ಮತ್ತು ಹೇಗೆ?
3. ಇಸ್ರಾಯೇಲ್ಯರ ಕೃತಜ್ಞತಾ ಹಬ್ಬಗಳ ಆಚರಣೆಗಳನ್ನು ಅಂದಿನ ಕಾಲದ ಸುತ್ತಲಿನ ಅನ್ಯ ರಾಷ್ಟ್ರಗಳಲ್ಲಿದ್ದ ಸಂಪ್ರದಾಯಗಳೊಟ್ಟಗೆ ಹೋಲಿಸಿ ನೋಡಿ.
4. ದೋಷಪರಿಹಾರಕ ಮಹಾದಿನವು ಯಾಕೆ ಆಚರಿಸಲ್ಪಡುತ್ತಿತ್ತು?
5. ಯಾವ ಹಬ್ಬವು ಬಡವರಿಗೆ ಮತ್ತು ಪರದೇಶಸ್ಥರಿಗೆ ವಿಶೇಷ ರಿಯಾತಿ (ಕಾಳಜಿ) ಯನ್ನು ನೀಡಿತ್ತು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಹಳೆ ಒಡಂಬಡಿಕೆಯ ಕಾಲದಲ್ಲಿ ಇಸ್ರಾಯೇಲ್ಯರಿಗೆ ಹಬ್ಬಗಳ ಆಚರಣೆ ತುಂಬಾ ಪ್ರಾಮುಖ್ಯವಾಗಿದ್ದವು. ಇದು ವಿಮೋಚನಾಕಾಂಡ, ಯಾಜಕಕಾಂಡ, ಅರಣ್ಯಕಾಂಡ ಮತ್ತು ಧರ್ಮೋಪದೇಶಕಾಂಡದ ಹಲವು ಪರಿಚ್ಛೇಧಗಳಿಂದ ಸ್ಪಷ್ಟವಾಗುತ್ತದೆ. ನೀವು ಈಗಾಗಲೇ ಮಾಡಿದ ಹಬ್ಬಗಳ ಪಟ್ಟಿಯನ್ನು (ಪ್ರಶ್ನೆ ಆ1ಕ್ಕೆ ಸಂಬಂಧಿಸಿದ ನಿಮ್ಮ ಉತ್ತರ) ಮತ್ತು ಈ ಮುಂದಿನ ಪ್ರಶ್ನೆಯನ್ನು ಉತ್ತರಿಸಿ: ಯಾಕೆ ಈ ಹಬ್ಬಗಳು ತುಂಬಾ ಪ್ರಾಮುಖ್ಯವಾದವುಗಳು ಎಂದು ಪರಿಗಣಿಸುತ್ತಿರಿ?
2. ನಾಲ್ಕು ಮುಖ್ಯ ರಾಷ್ಟ್ರೀಯ ಹಬ್ಬಗಳ ಕುರಿತು ಒಂದು ಸರಳ ಕೋಷ್ಟಕವನ್ನು ತಯಾರಿಸಿ (ಮೂರು ಕೃತಜ್ಞತಾ ಮತ್ತು ಇನ್ನೊಂದು ದೋಷಪರಿಹಾರಕ). ಈ ಬಗ್ಗೆ ನಾಲ್ಕು ಕಲಮ್‌ಗಳನ್ನು ಮಾಡಿ: 1. ಹಬ್ಬದ ಹೆಸರು 2. ಆಚರಣೆಯ ಉದ್ಧೇಶ 3. ಹಬ್ಬದ ವಿಧ 4. ಯಾವ ನೆನಪಿಗಾಗಿ. ಈ ದಿಶೆಯಲ್ಲಿ ಪ್ರಶ್ನೆಗಳಲ್ಲಿ 2ನೇ ಪ್ರಶ್ನೆಯನ್ನೂ ನೋಡಿ.
3. ನಿಮ್ಮ ಸಭೆ (ಅಥವಾ ನಿಮ್ಮ ಕುಟುಂಬ) ಯಾವದಾದರೂ ಹಬ್ಬವನ್ನು ಆಚರಿಸುತ್ತಿದೆಯೇ? ಆಗ ಅಸಹಾಯಕರನ್ನು (ಬಡವರನ್ನು ಅಥವಾ ದಿಕ್ಕಿಲ್ಲದವರನ್ನು) ನೆನಸಿಕೊಂಡು ಅವರಿಗೆ ಏನಾದರೂ ಸಹಾಯ ಮಾಡುತ್ತದೆಯೇ? ನಿಮ್ಮ ಸಂಪ್ರದಾಯಗಲನ್ನು ಮತ್ತು ಅನುಭವಗಳನ್ನು ಹಂಚಿಕೊಳ್ಳಿರಿ.

**ಯಾಜಕಕಾಂಡ ಅಧ್ಯಯನ 7: ಸಬ್ಬತ್ ವರ್ಷ ಮತ್ತು ಜೂಬಿಲಿ ಸಂವತ್ಸರ**

**ಅ. ಪರಿಚಯ**

ಯಾಜಕಕಾಂಡ 25ನೇ ಅಧ್ಯಾಯವು ಪ್ರಾಚೀನ ಇಸ್ರಾಯೇಲ್ಯರಲ್ಲಿದ್ದ ಎರಡು ಪ್ರಾಮುಖ್ಯವಾದ ಧಾರ್ಮಿಕ ಮತ್ತು ಸಾಮಾಜಿಕ ಘಟನೆಗಳನ್ನು ವಿವರಿಸುತ್ತದೆ: ಅದು ಸಬ್ಬತ್ ವರ್ಷ ಮತ್ತು ಜೂಬಿಲಿ ಸಂವತ್ಸರ.

ಭೂವಿಯಲ್ಲಿನ ಹೋಲಗಳು ಕಳೆದ 6 ವರ್ಷಗಳಿಂದ ಸತತವಾಗಿ ಬೆಳೆಗಳನ್ನು ಬೆಳೆದು ಪಲವತ್ತತೆಯನ್ನು ಕಳಕೊಂಡು ಹಾಳಾಗುವಾಗ (ಪಾಳು ಬೀಳುವಾಗ) ಅಂದರೆ ಪ್ರತೀ ಏಳನೆಯ ವರ್ಷವು ಸಬ್ಬತ್ ವರ್ಷವೆಂದು ಘೋಷಿಸಲ್ಪಡುತ್ತಿತ್ತು.

ಪ್ರತೀ ಐವತ್ತನೆಯ ವರ್ಷವು ("ಏಳು ವರ್ಷಕ್ಕೊಂದರಂತೆ ಏಳು ಸಬ್ಬತ್ ವರ್ಷಗಳು" ಕಳೆದ ನಂತರ) ಜೂಬಿಲಿ ಸಂವತ್ಸರವು ಆಚರಿಸಲ್ಪಡುತ್ತಿತ್ತು. ಆಗ ಸಾಲಗಳನ್ನು ಬಿಡಲಾಗುತ್ತಿತ್ತು, ಗುಲಾಮರು ಬಿಡುಗಡೆಗೊಳ್ಳುತ್ತಿದ್ದರು ಮತ್ತು ವ್ಯವಸಾಯದ ಭೂಮಿಯು ಮೂಲ ಭೂ ಒಡೆಯರಿಗೆ ಹಿಂತಿರುಗುತ್ತಿತ್ತು. ಇದುಇಸ್ರಾಯೇಲ್ಯರಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅತಿಯಾದ ಬಡತನವನ್ನು ನಿರ್ಮೂಲಗೋಳಿಸುವ ದೇವರು ನೀಡುವ ಭರವಸೆಯಾಗಿತ್ತು.

**ಆ. ಓದಿರಿ**

ಯಜಕಕಾಂಡ ಅಧ್ಯಾಯ 25

**ಇ. ವ್ಯಾಖ್ಯಾನ**

*ಭೂಮಿಗೆ ಸಬ್ಬತ್ತಿನ ವಿಶ್ರಾಂತಿ* (ವ. 4): ಪ್ರಾಚೀನ ಇಸ್ರಯೇಲ್ಯರಲ್ಲಿ ನಿರಂತರವಾಗಿ ಬೆಳೆಗಳನ್ನು ಬೆಳೆಯದೆ ಭೂಮಿಯ ಪಲವತ್ತತೆಯನ್ನು ಕಾಪಾಡುವ ಮಾರ್ಗ ಇದಾಗಿತ್ತು.

*ಐವತ್ತನೆಯ ವರ್ಷ* (ವ. 10): ಬಹುಶಃ ಇದು ಭೂಮಿಯನ್ನು ಪಾಳು ಬಿಡುವ ವರ್ಷ (ಭೂಮಿಗೆ ವಿಶ್ರಾಂತಿಯ ವರ್ಷ). ಇದು ಏಳನೆ ಸಬ್ಬತ್ ವರ್ಷದ ನಂತರ ಬರುವಂತದು (ಮೇಲಿನ ವ್ಯಾಖ್ಯಾನವನ್ನು ನೋಡಿ).

*ಜೂಬಿಲಿ* (ವ 10): ಇಲ್ಲಿ ಬಳಸಲ್ಪಟ್ಟ ಇಬ್ರಿಯ ಪದ ಯೊಬೆಲ್. ಇದು "ಟಗರಿನ ಕೊಂಬು" ಎಂಬ ಅರ್ಥವನ್ನು ನೀಡುತ್ತದೆ.

*ಭೂಮಿಯ ಬಿಡುಗಡೆ* (ವ. 24): ಮೂಲ ಕುಟುಂಬಕ್ಕೆ ಭೂಮಿಯನ್ನು ಹಿಂದಿರಿಗಿಸುವದು ಎಂಬುದು ಇದರ ಅರ್ಥ.

*ಬಡ್ಡಿ* (ವ. 36, 37): ಇಲ್ಲಿ ಬಳಕೆಯಾದ ಇಬ್ರಿಯ ಪದದ ಅರ್ಥ ಬಹುಶಃ "ಅಧೀಕವಾದ ಬಡ್ಡಿ" ಎಂಬದಾಗಿ ಇರಬಹುದೇ ಹೊರತು ಬರಿ "ಬಡ್ಡಿ" ಅಲ್ಲ.

**ಈ. ಪ್ರಶ್ನೆಗಳು**

1. "ಬೆಳೆದದ್ದನ್ನು ಕೊಯ್ಯುವದಕ್ಕೆ" ಅಥವಾ "ದ್ರಾಕ್ಷೆಯನ್ನು ಕೊಯ್ಯುವದಕ್ಕೆ" ಅವಕಾಶವಿಲ್ಲ ಆ ಸಬ್ಬತ್ ವರ್ಷದಲ್ಲಿ ಇಸ್ರಾಯೆಲಿನ ಜನರು ಹೇಗೆ ಜೀವನ ಮಾಡುತ್ತಿದ್ದರು?
2. ಜೂಬಿಲಿ ವರ್ಷದಲ್ಲಿ ಬರುವ (ಅದಕ್ಕೆ ಸಂಬಂಧಿಸಿದ) ಬಹು ಮುಖ್ಯ ಸಂಗತಿಗಳನ್ನು ಪಟ್ಟಿ ಮಾಡಿ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಸಬ್ಬತ್ ವರ್ಷದ ಕುರಿತ (ಯಾಜಕ. 25:1–7) ವಾಕ್ಯಭಾಗದಲ್ಲಿ ವನಗಳು 6–7 ಮತ್ತು 5ರ ಮಧೆ ವಿರೋಧಬಾಸವಿದ್ದಂತೆ ಕಾಣುತ್ತದೆ.

   ಅಲ್ಲಿ ಸಹಜವಾಗಿ ಕಾಣುವ ವಿರೋಧಬಾಸವನ್ನು ವಿವರಿಸಿ.

   ಈ ವಚನಗಳು ಹೇಗೆ ಪರಸ್ಪರ ಪೂರಕವಾಗಬಹುದು?

2. ಜೂಬಿಲಿ ಸಂವತ್ಸರದ ಉದ್ಧೇಶವನ್ನು ನೀವು ಹೇಗೆ ಕ್ರೂಡೀಕರಿಸುತ್ತಿರಿ (ಸಂಕ್ಷಿಪ್ತಗೊಳಿಸುತ್ತಿರಿ)? ಇದರ ಉದ್ಧೇಶವು ಹೇಗೆ ನೇರವೇರಿದೆ?

3. ಇಂದು ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಸಬ್ಬತ್ ವರ್ಷ ಮತ್ತು ಜೂಬಿಲಿ ಸಂವತ್ಸರದ ಪರಿಚ್ಛೇಧಗಳಿಂದ (ವಾಕ್ಯ ಭಾಗಗಳಿಂದ) ಏನನ್ನು ಕಲಿಯಬಹುದು (ಯಾಜಕ. 25ನೇ ಅಧ್ಯಾಯ)?

## ಯಾಜಕಕಾಂಡ ಅಧ್ಯಯನ 8: ಯಜ್ಞದ ವ್ಯವಸ್ಥೆಯ ಪರಿಣಾಮ (ಪ್ರಭಾವ)

### ಅ. ಪರಿಚಯ

ಪ್ರವಾದಿಗಳ ಕಾಲದಲ್ಲಿ ಯಜ್ಞದ ವ್ಯವಸ್ಥೆಯು ತುಂಬಾ ವಿಮರ್ಶೆಗೆ ಒಳಗಾಗಿತ್ತು ಎಂಬುದನ್ನು ಹಳೆ ಒಡಂಬಡಿಕೆಯ ಪ್ರವಾದನಾ ಪುಸ್ತಕಗಳಲ್ಲಿ ಕಂಡುಬರುವ ದೈವೋಕ್ತಿಗಳಿಂದ ತಿಳಿಯುತ್ತೇವೆ (ಉದಾ: ಯೆಶಾಯ 1:10–11; ಯೆರೆ. 6:20; ಆಮೋಸ 5:22). ಆದ್ದರಿಂದ ನಾವು ಯಾಜಕಕಾಂಡದಲ್ಲಿ ಸಕಾರಾತ್ಮಕವಾಗಿ ಕಂಡ ಯಜ್ಞದ ವ್ಯವಸ್ಥೆಯನ್ನು ಪ್ರವಾದಿಗಳು ಒಪ್ಪಲಿಲ್ಲ ಎಂಬ ತೀರ್ಮಾನಕ್ಕೆ ಬರಬಹುದು. ಆದರೆ ಪ್ರವಾದಿಗಳಿದ್ದ ಕಾಲದಲ್ಲಿದ್ದ ಪರಿಸ್ಥಿತಿಯ ಹಿನ್ನಲೆಯಲ್ಲಿ ಪ್ರವಾದಿಗಳ ಮಾತುಗಳನ್ನು ಅರ್ಥಮಾಡಿಕೊಳ್ಳುವದಾದರೆ, ದೇವರ ಮಾತುಗಳನ್ನು ಸಾರುತ್ತಿದ್ದ ಅವರು ಯಜ್ಞದ ವ್ಯವಸ್ಥೆಯ ದುರುಪಯೋಗವನ್ನು ಖಂಡಿಸಿದರೆ ವಿನಃ ಯಜ್ಞದ ವ್ಯವಸ್ಥೆಯನ್ನಲ್ಲ. ಪ್ರವಾದಿಗಳು ಬಳಸಿದ ಭಾಷೆ ತುಂಬಾ ಕಠಿಣವಾದದ್ದು. ಅದರೆ ಅದರ ಉದ್ದೇಶ ಇಸ್ರಾಯೇಲ್ಯರ ಶೋಚನೀಯ ಸ್ಥಿತಿಯನ್ನು ಅವರ ಗಮನಕ್ಕೆ ತಂದು ಅವರು ತಮ್ಮ ದುರುಪಯೋಗವನ್ನು ಬಿಟ್ಟು ಸರಿಯಾಗುವದಕ್ಕೆ ಈ ಭಾಷೆಯನ್ನು ಉಪಯೋಗಿಸಿದರು.

ಆದ್ದರಿಂದ ಪ್ರವಾದಿಗಳ ಪುಸ್ತಕಗಳಲ್ಲಿ ಕಂಡು ಬಂದ ಕಾಣಿಗಳ ಮತ್ತು ಯಜ್ಞಗಳ ವಿಮರ್ಶೆಯು ಪ್ರವಾದಿಗಳು ಪ್ರಜ್ಞಾಪೂರ್ವಕವಾಗಿ ಹಳೆ ಒಡಂಬಡಿಕೆಯ ಯಜ್ಞದ ವ್ಯವಸ್ಥೆಯನ್ನು ಬವಿಷತ್ತಿನಲ್ಲಿ ಅದನ್ನು ಅರ್ಥಗರ್ಬಿತವಾಗಿ ನಡೆಸುವಲ್ಲಿ ಅದರ ಆಳಕ್ಕೆ ಹೋಗಿ ನೋಡಿ ಸರಿಪಡಿಸಲು ಪ್ರಯತ್ನಿಸಿದ್ದಕ್ಕೆ ಸಾಕ್ಷಿಯಾಗಿದೆ. ಇದನ್ನು ನಾವು ತಪ್ಪಾಗಿ ತಿಳಿಯಬಾರದು.

ಹಳೆ ಒಡಂಬಡಿಕೆಯ ಯಜ್ಞದ ವ್ಯವಸ್ಥೆ ಪಾಪಗಳನ್ನು ಪರಿಹರಿಸುವಲ್ಲಿ ಸೋತು ಹೋಯಿತು ಮತ್ತು ಅದರ ಒಂದೇ ಉದ್ದೇಶ ಏನೆಂದರೆ ಶಿಲುಬೆಯಲ್ಲಿನ ಯೇಸುವಿನ ಮರಣದ ಕಡೆಗೆ ಬೆರಳು ತೋರಿಸುವದು ಎಂದು ಯರಾದರೂ ಹೇಳಿದರೆ ಅದು ತಪ್ಪಾಗುತ್ತದೆ. ಇದೆ ವೇಳೆ ಹಳೆ ಒಡಂಬಡಿಕೆಯ ಯಜ್ಞಗಳು ಕೇವಲ ಧಾರ್ಮಿಕ ಆಚರಣೆಗಳು ಆದ್ದರಿಂದ ಅವು ನಿಜವಾಗಿಯೂ ವ್ಯಕ್ತಿಯ ಪಾಪದ ಜೀವನಕ್ಕೆ ಸಂಬಂಧಿಸಿಲ್ಲ ಎಂದು ಹೇಳಿದರೂ ತಪ್ಪಾಗುತ್ತದೆ.

ಹಳೆ ಒಡಂಬಡಿಕೆಯ ಯಜ್ಞಗಳು ಒಂದು ಸಂಪ್ರಾದಾಯವಾಗಿ ಇಲ್ಲವೆ ತತ್ಕಾಲದ ವ್ಯವಸ್ಥೆಯಾಗಿ ಕೊಡಲ್ಪಡಲಿಲ್ಲ. ಯಜ್ಞವು ಇಸ್ರಾಯೇಲ್ಯರಿಗೆ ದೇವರ ಒಂಡಂಡಿಕೆಯ ಚೌಕಟ್ಟಿನಲ್ಲಿ ಕ್ಷಮೆಯ ಸಾಧನವಾಗಿತ್ತು. ಆದರೆ ನಾವು ಈ ಹಿಂದೆ ನೋಡಿದಂತೆ ಈ ವ್ಯವಸ್ಥೆಯು ಹೋಸ ಸಂಬಂಧವನ್ನು ಕಟ್ಟುವದಕ್ಕಾಗಿಯಲ್ಲ ಬದಲು ಈಗಾಗಲೇ ಇದ್ದ ದೇವ–ಮಾನವ (ಆತನ ಜನರು) ಸಂಬಂಧವನ್ನು ಸರಿಪಡಿಸಿ ಬಲಪಡಿಸುವ ಉದ್ಧೇಶ ಹೊಂದಿತ್ತು.

ಕಾಣಿಕೆಗಳನ್ನು ಯಜ್ಞಗಳನ್ನು ಅರ್ಪಿಸುವದು ಆರಾಧಕನು ದೇವರಲ್ಲಿ ತನ್ನ ನಡತೆಯನ್ನು ಸರಿಪಡಿಸಿಕೊಳ್ಳುವದನ್ನು ತಿಳಿಸುತ್ತದೆ. ಆರಾಧಕನು ದೇವರ ಕ್ಷಮೆಯನ್ನು ಪಡೆಯಲು ಸರಿಯಾದ ಮನಸ್ಸಿನಿಂದ ದೇವರನ್ನು ಬೇಡಬೇಕು (ವಿನಂತಿಸಬೇಕು). ಈ ವ್ಯವಸ್ಥೆಯಲ್ಲಿ ಆರಾಧಕನು ತನ್ನ ಅಪರಾಧವನ್ನು ಅರಿಕೆ ಮಾಡಿದ ತರುವಾಯ ಅವನು ಕ್ಷಮಿಸಲ್ಪಡುವನು (ಯಾಜಕ. 4:35). ಈ ಕ್ಷಮಾಪಣೆಗೆ ಪಾಪದ ಅರಿಕೆಯ ಅಗತ್ಯತೆ ಇದೆ (ಅರಣ್ಯ. 5:6–7). ಆದ್ದರಿಂದ ಪ್ರಾಣಿಗಳನ್ನು ಯಜ್ಞವಾಗಿ ಅರ್ಪಿಸುವದು ಮತ್ತು ಧಾನ್ಯಗಳನ್ನು ಕಾಣಿಕೆಯಾಗಿ ನೀಡುವದರಿಂದ ಪಾಪದ ಪರಿಹಾರವನ್ನು ತನ್ನಿಂದ ತಾನೇ ತರುವದಿಲ್ಲ. ಈ ತಪ್ಪು ತಿಳುವಳಿಕೆಯನ್ನು ದೇವರು ಪ್ರವಾದಿಗಳ ಮೂಲಕ ಖಂಡಿಸಿದನು.

ಎಲ್ಲಾ ಪಾಪಗಳು ಮಾನವನ ಬಲಹೀನತೆ ಮತ್ತು ಅಸಡ್ಡೆಗಳಿಂದಾದವುಗಳು. ಅವರು ಸ್ವಯಂ ಪ್ರೇರಿತರಾಗಿಯೋ ಅಥವಾ ಮುಂದಾಲೋಚನೆಯಿಲ್ಲದೆಯೋ (ತಿಳಿದೋ ಅಥವಾ ತಿಳಿಯದೆಯೋ) ಇವುಗಳನ್ನು ಮಾಡಿರುತ್ತಾರೆ (ಯಾಜಕ 4:27–28, 31). ಕೆಲವು ವೇದ ಪಂಡಿತರು ಹಳೆ ಒಡಂಬಡಿಕೆ ಪಾಪಗಳನ್ನು ಸ್ವಯಂಪ್ರೇರಿತ ಮತ್ತು ಸ್ವಯಂಪ್ರೇರಿತವಲ್ಲದ ಪಾಪಗಳು ಎಂದು ಎರಡು ಭಾಗವಾಗಿ ವಿಂಗಡಿಸಿ, ಸ್ವಯಂಪ್ರೇರಿತವಲ್ಲದ ಪಾಪಗಳಿಗೆ ಮಾತ್ರ ಪ್ರಾಯಶ್ಚಿತ್ತ ಯಜ್ಞವು ಕ್ಷಮಾಪಣೆಯನ್ನು ತರುತ್ತದೆ ಎಂಬ ಚಿತ್ರಣವನ್ನು ನೀಡುತ್ತದೆ ಎಂದು ಅಭಿಪ್ರಯಪಡುತ್ತಾರೆ. ಅವರು ತಮ್ಮ ಈ ಆಲೋಚನೆಗೆ ಅರಣ್ಯಕಾಂಡ 15:29–31ನ್ನು ಆಧಾರ ಮಾಡಿಕೊಂಡಿದ್ದಾರೆ. ಅದರೆ ಜಾಗರೂಕತೆಯಿಂದ ಈ ಭಾಗವನ್ನು ಓದಿದರೆ ಇದು ಸಾಮಾನ್ಯವಾಗಿ ಸ್ವಯಂಪ್ರೇರಿತ ಪಾಪದ ಕುರಿತು ಮಾತನಾಡುವದಿಲ್ಲ. ಇದು ದೇವರ ಧರ್ಮಶಾಸ್ತ್ರವನ್ನು ಜನರು ಉಲ್ಲಂಘಿಸಿದ್ದನ್ನು ದೃಡಪಡಿಸುತ್ತದೆ. ಅಂತಹ ಜನರಿಗೆ ಕ್ಷಮೆಯು ಇಲ್ಲ, ಅವರ ಅಪರಾಧಗಳು ಅವರ ಮೇಲೆಯೇ ಉಳಿಯುತ್ತವೆ. ಇನ್ನೊಂದೆಡೆ ಅರಿಕೆ ಮಾಡಿದ ಎಲ್ಲ ಪಾಪಗಳು (ಅವು ಸ್ವಯಂಪ್ರೇರಿತ ಮತ್ತು ಸ್ವಯಂಪ್ರೇರಿತವಲ್ಲದ ಎರಡೂ ತರದ ಪಾಪಗಳಾಗಿರಬಹುದು) ಅವು ಯಾವಾಗಲೂ ಕ್ಷಮಿಸಲ್ಪಡುತ್ತವೆ ಎಂದು ಅರಣ್ಯಕಾಂಡ 5:6–7ರಲ್ಲಿ ಕಾಣುತ್ತೇವೆ.

"ಪಶುಗಳ ರಕ್ತವು ವ್ಯಕ್ತಿಯ ಪಾಪವನ್ನು ತೆಗೆಯುತ್ತದೆ" ಎಂಬುದನ್ನು ಹಳೆ ಒಡಂಬಡಿಕೆ ಬೋಧಿಸಲಾರದು ಎಂಬುದನ್ನು ನಾವು ತಿಳಿಯುವ ಅಗತ್ಯತೆ ಇದೆ. ಈ ಯಜ್ಞದ ವ್ಯವಸ್ಥೆಯನ್ನು ದೇವರು ಇಸ್ರಾಯೇಲ್ಯರಿಗೆ ಕೊಟ್ಟನಷ್ಟೆ. ಆದರೆ ಅಂತಿಮವಾಗಿ ಕ್ಷಮೆ

ನೀಡುವವನು ದೇವರು ಮಾತ್ರ. ದೇವರ ಈ ಕ್ಷಮಾಪಣೆಯು ಯಜ್ಞದ ವ್ಯವಸ್ಥೆಯ ಮೂಲಕ ಇಸ್ರಾಯೇಲ್ಯರಿಗೆ ಬಂದಿತ್ತು. ಅದ್ದರಿಂದ ಯಜ್ಞದ ಮೂಲಕ ಪಾಪಗಳ ಕ್ಷಮಾಪಣೆ ಎಂಬುದು ಹಳೆ ಒಡಂಡಿಕೆಯಲ್ಲಿ ಕಂಡುಬರುವ ಒಡಂಬಡಿಕೆಯ ಕೊಡುಗೆಯಾಗಿದೆ.

ಇದಲ್ಲದೆ ಹಳೆ ಒಡಂಬಡಿಕೆಯ ಯಜ್ಞದ ವ್ಯವಸ್ಥೆಯು ಮಿತಿಯುಳ್ಳದು ಎಂಬುದನ್ನು ನಾವು ನೆನಪು ಮಾಡಿಕೊಳ್ಳಬೇಕು. ಇದು ಅಪರಾಧಿಗೆ ಒಂದೇ ಸಾರಿ ಶಾಸ್ವತವಾದ ಸಮಾಧಾನವನ್ನು (ಪಾಪಪರಿಹಾರವನ್ನು) ನೀಡುವಂತದ್ದಲ್ಲ. ಯಜ್ಞಗಳನ್ನು ಪದೇ ಪದೆ ಅರ್ಪಿಸಬೇಕಾಗಿತ್ತು. ಪ್ರಾಯಶ್ಚಿತ್ತ ಯಜ್ಞದ ಮಹಾ ದಿನವು ವರ್ಷಂಪ್ರತಿ ಬರುತ್ತಿತ್ತು. ಅದ್ದರಿಂದ ಕ್ರಿಸ್ತನ ತ್ಯಾಗವು (ಶಿಲುಬೆ ಮರಣ) ಈ ಹಳೆ ವ್ಯಸ್ಥೆಗೆ ಬದಲಿ ವ್ಯವಸ್ಥೆ ಎಂಬುದನ್ನು ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಕಾಣುತ್ತೇವೆ. ಶಿಲುಬೆ ಮೇಲಿನ ಕ್ರಿಸ್ತನ ಮರಣವು ಅಂತಿಮವಾಗಿ ಹಳೆ ಒಡಂಬಡಿಕೆಯ ಯಜ್ಞದ ವ್ಯವಸ್ಥೆಗೆ ಕೊನೆಯನ್ನು ತಂದಿತು.

ಹಳೆ ಒಡಂಬಡಿಕೆಯ ಯಜ್ಞದ ವ್ಯವಸ್ಥೆಯಲ್ಲಿ ಪಾಪಗಳು ಕೇವಲ ಸಾಂಕೇತಿಕವಾಗಿ ಕ್ಷಮಿಸಲ್ಪಡುತ್ತಿದ್ದವು ಎಂದಲ್ಲ ಬದಲು ಅವು ನಿಜವಾಗಿಯೂ ಕ್ಷಮಿಸಲ್ಪಡುತ್ತಿದ್ದವು. ತನಗೆ ಕೊಡಲ್ಪಟ್ಟ ವ್ಯವಸ್ಥೆಯು ತನ್ನ ಸ್ವಯಂಪ್ರೇರಿತ ಮತ್ತು ಸ್ವಯಂಪ್ರೇರಿತವಲ್ಲದ ಪಾಪಗಳಿಗೆ ಸಿಮೀತವಾದದ್ದು ಎಂಬುದನ್ನು ದೇವರಿಗೆ ಭಯಪಡುವ ಇಸ್ರಾಯೇಲ್ಯರು ಅರ್ಥಮಾಡಿಕೊಂಡರು ಎಂದು ಹೇಳಿದರೂ ತಪ್ಪಾಗುತ್ತದೆ. ಯಾಕೆಂದರೆ ಅವರು ಇಲ್ಲಿ ಅರ್ಥಮಾಡಿಕೊಳ್ಳುವ ಅಗತ್ಯವೆ ಇಲ್ಲ. ಹೊಸ ಒಡಂಬಡಿಕೆಯ ಜನರಾದ ನಾವು ತಿಳಿದಿರುವಂತೆ ಇಡೀ ಲೋಕದ ಪಾಪಗಳಿಗಾಗಿ ಕೊಟ್ಟ ದೇವರ ಕುರಿಯ ಒಂದೇ ಯಜ್ಞದ ಆಧಾರದಲ್ಲಿ ಹಳೆ ಒಡಂಬಡಿಕೆಯ ಯಜ್ಞಗಳು ದೇವರ ದೃಷ್ಟಿಯಲ್ಲಿ ಬೆಲೆಯುಳ್ಳವುಗಳು ತಿಳಿದಿದ್ದೇವೆ. ಅದೇ ವೇಳೆ ನಾವು ಈ ಯಜ್ಞದ ವ್ಯವಸ್ಥೆಯು ಯೇಸು ಕ್ರಿಸ್ತನೆಡೆ ಕೈ ತೋರಿಸುತ್ತದೆ ಎಂಬುದನ್ನೂ ತಿಳಿದಿದ್ದೇವೆ. ಆದರೆ ಹಳೆ ಒಡಂಬಡಿಕೆಯ ಆರಾಧಕರು ಹಾಗಲ್ಲ – ಅವರು ಇದನ್ನು ತಿಳಿದಿರಲು ಸಾಧ್ಯವೇ ಇಲ್ಲ. ಅವರಿಗೆ ಈ ಯಜ್ಞದ ವ್ಯಸ್ಥೆಯು ಸಮಾಧಾನತರುವದಕ್ಕಾಗಿ ದೇವರಿಂದ ಕೊಡಲ್ಪಟ್ಟದ್ದು. ಇದು ಮುರಿದುಹೋದ ಒಡಂಬಡಿಯನ್ನು ಸರಿಪಡಿಸುವದಕ್ಕೆ ದೇವರು ಮಡಿದ ಮಾರ್ಗವಾಗಿತ್ತು. ಮತ್ತು ಅವರ ಪಾಪಗಳನ್ನು ಕ್ಷಮಿಸುವದಕ್ಕೆ ಇದು ದೇವರ ಯೋಜನೆಯಾಗಿತ್ತು.

**ಆ. ಪ್ರಶ್ನೆಗಳು**

ಈ ಮೇಲಿನ ವಿಚಾರವನ್ನು ಗಮನಿಸಿ ಕೆಳಗೆ ಕೊಡಲ್ಪಟ್ಟ ವಾಕ್ಯ ಭಾಗಗಳನ್ನು ಓದಿ, ಸಾಧ್ಯವಾದಷ್ಟು ನಿಮ್ಮ ಮಾತುಗಳಲ್ಲಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಯಾಜಕಕಾಂಡ 4:27–35ನ್ನು ಓದಿ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.

   ಸ್ವಯಂಪ್ರೇರಿತವಲ್ಲದ (ತಿಳಿಯದೇ ಮಾಡಿದ) ಪಾಪದ ಪರಿಣಾಮವೇನು?

   ಸಮುದಾಯ ಸದಸ್ಯನು ಮೇಕೆಯನ್ನು ಯಾಜಕನ ಬಳಿಗೆ ತಂದಾಗ ಏನು ಮಾಡಲಾಗುತ್ತದೆ?

   ಯಜಕರಿಂದ ಸಮಪಿಸಲ್ಪಟ್ಟ ಯಜ್ಞದ ಫಲವೇನು?

2. ಪ್ರವಾದಿಗಳಾದ ಯೇಶಾಯ, ಯೆರೆಮಿಯ, ಆಮೋಸರ ಕಾಲದಲ್ಲಿ ದೇವರು ಇಸ್ರಾಯೇಲ್ಯರ ಕಾಣಿಕೆಗಳನ್ನು ಯಜ್ಞಗಳನ್ನು ತಿರಸ್ಕರಿಸಲು ಕಾಣವೇನೆಂದು ನಿಮ್ಮ ಮಾತುಗಲಲ್ಲಿ ತಿಳಿಸಿ. ಕೆಳಗಿನ ವಾಕ್ಯ ಭಾಗಗಳನ್ನೂ ನೋಡಲು ಮರೆಯದಿರಿ.

   ಅ. ಯೆಶಾಯ 1:10–11

   ಆ. ಯೆರೆಮಿಯ 6:20

   ಇ. ಆಮೋಸ 5:22

3. ಹಳೆ ಒಡಂಬಡಿಕೆಯ ಯಜ್ಞದ ವ್ಯವಸ್ಥೆಯಲ್ಲಿ ಯಾವ ವಿಧದ ಪಾಪಗಳು ಕ್ಷಮಿಸಲ್ಪಡುತ್ತಿದ್ದವು?
4. ಯಾವ ಅರ್ಥದಲ್ಲಿ ಹಳೆ ಒಡಂಬಡಿಕೆಯ ಯಜ್ಞದ ವ್ಯವಸ್ಥೆಯು ಮಿತಿಯುಳ್ಳದ್ದು?
5. ಇಸ್ರಾಯೇಲ್ಯರೂ ತಿಳಿಯದ ಹಳೆ ಒಡಂಬಡಿಕೆಯ ಯಜ್ಞದ ವ್ಯವಸ್ಥೆಯ ಬಗ್ಗೆ ನಾವೇನು ತಿಳಿಯಬಹುದು?

**ಇ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ಅಧ್ಯಯನದ ಮೊದಲ ಭಾಗದಲ್ಲಿ ಹಳೆ ಒಡಂಬಡಿಕೆಯ ಯಜ್ಞ ವ್ಯವಸ್ಥೆಯ ಬಗ್ಗೆ ಕೆಲವು ಸಮಾನ್ಯ ತಪ್ಪಾಭಿಪ್ರಯಗಳನ್ನು ಚರ್ಚೆ ಮಾಡಿದ್ದೇವೆ. ಅವು ಯಾವವು? ಮತ್ತು ನೀವು ಹೇಗೆ ಈ ತಪ್ಪಾಭಿಪ್ರಾಯಗಣ್ನು ನೋಡುತ್ತಿರಿ?

2. ಈ ಅಧ್ಯಯದಲ್ಲಿ ಹಳೆ ಒಡಂಬಡಿಕೆಯ ಯಜ್ಞ ವ್ಯವಸ್ಥೆಯ ಬಗ್ಗೆ ನೀವು ಕಲಿತ ಹೊಸ ವಿಚಾರಗಳೇನು?

3. ಪ್ರವಾದಿಗಳ ಪುಸ್ತಕಗಳ ಕೆಲವು ಭಾಗಗಳು ಹಳೆ ಒಡಂಬಡಿಕೆಯ ವ್ಯಸ್ಥೆಯನ್ನು ದುರ್ಭಳಕೆ ಮಾಡಿಕೊಂಡದ್ದರ ವಿರುದ್ದ ಮಾತನಾಡುತ್ತವೆ (ಮೇಲಿನ ಪ್ರಶ್ನೆ ៖2ರ ಉತ್ತರವನ್ನು ನೋಡಿ). ಇದು ಹೊಸ ಒಡಂಬಡಿಕೆಗೆ ಸೇರಿದ ಇಂದಿನ ದಕ್ಷಿಣ ಭಾರತದ ವಿಶ್ವಾಸಿಗಳು "ಹೋಸ ಒಡಂಬಡಿಕೆಯ ಯಜ್ಞದ ವ್ಯವಸ್ಥೆಯನ್ನು" ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆ ಇದೆಯೆ? ಇಂದು ವೇಳೆ ಇದ್ದರೆ ಅದು ಹೇಗಿದೆ?

**ಈ. ಸಾರಾಂಶ**

ಹಳೆ ಒಡಂಬಡಿಕೆಯ ಯಜ್ಞದ ವ್ಯವಸ್ಥೆಯ ಈ ಅಧ್ಯಯನದಿಂದ ಬಂದ ಅದರ ಸಾರಾಂಶವನ್ನು ಐದು ಮುಖ್ಯ ವಿಚಾರಗಳಲ್ಲಿ ಕ್ರೂಡೀಕರಿಸಬಹುದು.

1. ಹಳೆ ಒಡಂಬಡಿಕಯಲ್ಲಿ ಇಸ್ರಯೇಲ್ಯ ಪಪಗಳೊಟ್ಟಿಗೆ ವ್ಯವಹರಿಸುವಲ್ಲಿ ಇದು ದೇವರ ಯೋಚನೆಯಾಗಿತ್ತು.

2. ಇದು ನಿಜವಾಗಿಯೂ ಅವರ ಪಾಪಗಳ ಕುರಿತದ್ದು: ದೇವರು ಅವರ ಪಾಪಗಳನ್ನು ಮನ್ನಿಸಿದನು, ಸ್ವಯಂಪ್ರೇರಿತವಲ್ಲದ ಅದೇ ವೇಳೆ ಸ್ವಯಂಪ್ರೇರಿತವಾದ (ತಿಳಿದೂ ಮತ್ತು ತಿಳಿಯದ) ಪಾಪಗಳನ್ನು ಮನ್ನಿಸಿದನು.

3. ಆದ್ದರಿಂದ ಯಜ್ಞದ ವ್ಯವಸ್ಥೆಯು ಯೇಸು ಕ್ರಿಸ್ತನ ತ್ಯಾಗದ ಮರಣವನ್ನು ಮೂನ್ಸೂಚಿಸುವ ಸಂಕೇತ ಮಾತ್ರವಾಗಿರಲಿಲ್ಲ.

4. ಆದರೆ ಇದು ನಿಜವಗಿಯೂ ಶಿಲುಬೆಯಲ್ಲಿನ ಯೇಸುವಿನ ತ್ಯಾಗದ ಮರನವನ್ನು ಮೂನ್ಸೂಚಿಸುತ್ತದೆ. ಇದನ್ನು ಹಳೆ ಒಡಂಬಡಿಕೆಯ ಪ್ರವಾದಿಗಳಾಗಲಿ ಮತ್ತು ಧರ್ಮನಿಷ್ಠ ಇಸ್ರಾಯೇಲ್ಯರಾಗಲಿ ತಿಳಿದಿರಲಿಲ್ಲ. ಅವರಿಗೆ ಈ ಯಜ್ಞದ ವ್ಯವಸ್ಥೆಯು ನಿಜವಾಗಿಯೂ ದೇವರು ಅವರ ಪಾಪಗಳನ್ನು ಮನ್ನಿಸುವ ಮಾರ್ಗವಾಗಿತ್ತು.

5. ಆದರೆ ಈ ವ್ಯವಸ್ಥೆಯ ಪರಿಣಾವು ಮಿತಿಯುಳ್ಳದ್ದು. ಸ್ಥಿರವಾದ ಮತ್ತು ಶಾಸ್ವತವಾದ ಕ್ಷಮೆಯನ್ನೂ ಸಮಾಧಾನವನ್ನು ನೀಡುವಲ್ಲಿ ಇದು ಅಸಹಾಯಕವಾದದ್ದು. ಪಾಪ ಮತ್ತು ಅಪರಾಧದ ಕಾಣಿಗಳು ಮತ್ತೆ ಮತ್ತೆ ಅರ್ಪಿಸಲ್ಪಡುತ್ತಲೇ ಇದ್ದವು. ಯೇಸು ಕ್ರಿಸ್ತನ ಮರಣದಲ್ಲಿ ಮಾತ್ರ ಪಾಪವು "ಎಲ್ಲರಿಗೂ ಒಂದೇ ಸಾರಿ" ಪರಿಹರಿಸಲ್ಪಟ್ಟಿತು.

# ಅರಣ್ಯಕಾಂಡ ಅಧ್ಯಯನ

**ಅರಣ್ಯಕಾಂಡದ ಪರಿಚಯ**

**ಹೆಸರು**

ಅರಣ್ಯಕಾಂಡವು ಪಂಚಕಾಂಡದ ನಾಲ್ಕನೆಯ ಪುಸ್ತಕವಾಗಿದೆ. ಅದರ ಹಿಬ್ರೂ ಶೀರ್ಷಿಕೆಯು ಹೀಗಿದೆ –'ಅರಣ್ಯದಲ್ಲಿ'. ಈ ಶೀರ್ಷಿಕೆಯನ್ನು ಪುಸ್ತಕದ ಮೊದಲ ವಾಕ್ಯದಿಂದ ಆರಿಸಿಕೊಳ್ಳಲಾಗಿದ್ದು ಪುಸ್ತಕದಲ್ಲಿ ಕಂಡುಬರುವ ವಿಷಯವನ್ನು ಸಾರಾಂಶವಾಗಿ ಹೇಳಲು ಸೂಕ್ತವಾಗಿದೆ. ಈ ಪುಸ್ತಕವನ್ನು ಇಂಗ್ಲಿಶ್ ಭಾಷೆಯಲ್ಲಿ 'ನಂಬರ್ಸ್' ಎಂದು ಕರೆಯಲಾಗುತ್ತದೆ. 'ನಂಬರ್ಸ್' ಎನ್ನುವ ಪದವನ್ನು ಹಳೆ ಒಡಂಬಡಿಕೆಯ ಗ್ರೀಕ್ ಸೆಪ್ಟುವಾಜಿಂಟ್ ಅನುವಾದಿಂದ ತೆಗೆದುಕೊಳ್ಳಲಾಗಿದ್ದು ಅಧ್ಯಾಯ 1 ಮತ್ತು 26 ರಲ್ಲಿ ಕಂಡುಬರುವ ಜನಗಣತಿಯ ಪಟ್ಟಿಗಳ ಮೇಲೆ ಆಧರಿತವಾಗಿದೆ.

**ಹಿನ್ನಲೆ ಮತ್ತು ದಿನಾಂಕ**

ಈ ಪುಸ್ತಕವು ಸಿನಾಯಿ ಪರ್ವತದ ಬಳಿಯಲ್ಲಿ ನಡೆದ ಘಟನೆಗಳ ನಂತರ ಇಸ್ರಾಯೇಲು ಮರುಭೂಮಿಯಲ್ಲಿ ಅಲೆದಾಡಿದ ಸುಮಾರು 39 ವರ್ಷಗಳ ದಾಖಲೆಯನ್ನು ಒಳಗೊಂಡಿದೆ (ಅರಣ್ಯ 1:1 ನ್ನು ಧರ್ಮೋ 1:1 ರೊಂದಿಗೆ ಹೋಲಿಸಿರಿ). ಇಸ್ರಾಯೇಲಿನ ಭೌಗೋಳಿಕ ಸ್ಥಳದ ಆಧಾರದ ಮೇಲೆ ಅದನ್ನು ಮೂರು ಮುಖ್ಯ ಭಾಗಗಳಾಗಿ ವಿಂಗಡಿಸಬಹುದು:

1. ವಾಗ್ದಾನ ದೇಶಕ್ಕಾಗಿ ಹೊರಡಲು ಇಸ್ರಾಯೇಲು ಸಿನಾಯಿ ಪರ್ವತದ ಬಳಿಯಲ್ಲಿ ಸಿದ್ಧಗೊಳ್ಳುತ್ತಿರುವುದು
2. ಸಿನಾಯಿ ಪರ್ವತದಿಂದ ಕಾದೇಶ್ ಬರ್ನಿಯದ ಮಾರ್ಗವಾಗಿ ಮೋವಾಬಿನ ಬಯಲು ಸೀಮೆಗಳವರೆಗೆ ಇಸ್ರಾಯೇಲು ಪ್ರಯಾಣಿಸಿದ್ದು
3. ವಾಗ್ದಾನ ದೇಶವನ್ನು ವಶಮಾಡಿಕೊಳ್ಳಲು ಎದುರುನೋಡುತ್ತಾ ಇಸ್ರಾಯೇಲು ಮೋವಾಬಿನ ಬಯಲು ಸೀಮೆಯಲ್ಲಿ ನಿಂತದ್ದು

ಪರಿಣಾಮವಾಗಿ ದಾಖಲಾಗಿರುವ ಈ ಘಟನೆಗಳು ಸುಮಾರು ಕ್ರಿ. ಪೂ. 1444 ರಿಂದ ಕ್ರಿ. ಪೂ. 1406 ರವರೆಗೆ ನಡೆದವು.

**ಸಾಹಿತ್ಯ ಶೈಲಿ**

ಈ ಪುಸ್ತಕವು ಸಾಹಿತ್ಯ ಶೈಲಿಗಳ ಒಂದು ಮಿಶ್ರಣವನ್ನು ಒಳಗೊಂಡಿದೆ. ನಾವು ಜನಗಣತಿಯನ್ನು (ಅಧ್ಯಾಯ 1 ಮತ್ತು 26), ಪಾಳೆಯದಲ್ಲಿ ಗುಡಾರಗಳನ್ನು ಹಾಕಿಕೊಳ್ಳುವ ಕ್ರಮದ ಕುರಿತು ಆದೇಶಗಳನ್ನು (ಅಧ್ಯಾಯ 2), ಕವಾಯತ್ತಿನ ಕ್ರಮದ ಕುರಿತಾದ ದಾಖಲೆಯನ್ನು (ಅಧ್ಯಾಯ 10), ಪ್ರಯಾಣದ ದಿನಚರಿ ಪುಸ್ತಕವನ್ನು (ಅಧ್ಯಾಯ 33), ವಿವಿಧ ವಿಷಯಗಳ ಕುರಿತು ಅನೇಕ ಆಜ್ಞೆಗಳನ್ನು ಮತ್ತು ಇನ್ನಿತರೆ ಸಂಗತಿಗಳನ್ನು ಕಾಣುತ್ತೇವೆ. ಇದರಲ್ಲಿರುವ ಬಹುತೇಕ ಆದೇಶ ಮತ್ತು ಕಾನೂನುಗಳು ನಮಗೆ ವಿಮೋಚನಕಾಂಡ, ಯಾಜಕಕಾಂಡ ಮತ್ತು ಧರ್ಮೋಪದೇಶಕಾಂಡವನ್ನು ನೆನಪಿಸುತ್ತದೆ. ಬಹುತೇಕ ಪಠ್ಯಗಳು ನಾಟಕೀಯವಾದ ಕಥಾವಿವರಣೆಗಳನ್ನು ಒಳಗೊಂಡಿದ್ದು ಅದರಲ್ಲಿ ಕೆಲವು ಎಲ್ಲರಿಗೂ ಅತ್ಯಂತ ಚಿರಪರಿಚಿತವಾಗಿದೆ.

**ಅರಣ್ಯಕಾಂಡದ ಸಂದೇಶ**

ಇಸ್ರಾಯೇಲರ ಅರಣ್ಯದಲ್ಲಿನ ಅಲೆದಾಟದ ಕಥೆಯ ಮೂಲಕ ಅರಣ್ಯಕಾಂಡದ ದೈವಶಾಸ್ತ್ರೀಯ ಸಂದೇಶವು ಕೊಡಲ್ಪಟ್ಟಿದೆ. ಪುಸ್ತಕದ ಪ್ರಾರಂಭದಲ್ಲಿ ಯೆಹೋವನು ಇಸ್ರಾಯೇಲನ್ನು ಒಂದು ಸೈನಿಕರ ಪಾಳೆಯವಾಗಿ ಕ್ರಮಪಡಿಸುತ್ತಾನೆ. ಆಕೆಯು ಸಿನಾಯಿ ಪರ್ವತದಿಂದ ಒಂದು ಜಯಭರಿತ ಸೈನ್ಯವೆಂಬಂತೆ ಮುಂದೆ ಸಾಗುತ್ತಾಳೆ. ಯೆಹೋವನು ಆಕೆಯನ್ನು ನಡೆಸುತ್ತಿದ್ದಾನೆ ಮತ್ತು ವಾಗ್ದಾನ ದೇಶದಲ್ಲಿ ದೇವರ ರಾಜ್ಯವು ಸ್ಥಾಪಿಸಲ್ಪಡಬೇಕೆಂಬುದೇ ಅದರ ಉದ್ದೇಶ. ಇದಕ್ಕೆ ಎದುರಾಗುವ ಎಲ್ಲಾ ರಾಷ್ಟ್ರಗಳು ಜಯಿಸಲ್ಪಡುವವು.

ಇಸ್ರಾಯೇಲು ಯೆಹೋವನ ವಿಮೋಚಿತ ಒಡಂಬಡಿಕೆಯ ಜನರಾಗಿ ಬಿಂಬಿಸಲ್ಪಟ್ಟಿದ್ದಾಳೆ. ಆಕೆಯು ದೇವರ ಸೇವಕ ಜನರಾಗಿರಲು ಕರೆಯಲ್ಪಟ್ಟಿದ್ದಾಳೆ. ದೇವರ ರಾಜ್ಯವನ್ನು ಭೂಮಿಯ ಮೇಲೆ ಸ್ಥಾಪಿಸುವುದು ಆಕೆಯ ಕೆಲಸವಾಗಿದೆ. ಆದರೆ ಆಕೆಯು ಹೇಗೆ ಸತತವಾಗಿ ಅವಿಧೇಯತೆಯ ಮೂಲಕ ಮತ್ತು ದಂಗೆಯ ಮೂಲಕ ಒಡಂಬಡಿಕೆಯನ್ನು ಉಲ್ಲಂಘಿಸಿದಳು ಎಂಬುದನ್ನು ಸಹ ನಾವು ಕಾಣುತ್ತೇವೆ.

**ವಿಷಯ ಮತ್ತು ರಚನೆ**

ಸಿನಾಯಿ ಪರ್ವತದಿಂದ ಕಾನಾನ್ ದೇಶದ ಗಡಿಯಲ್ಲಿದ್ದ ಮೋವಾಬಿನ ಬಯಲು ಸೀಮೆಗಳವರೆಗಿನ ಇಸ್ರಾಯೇಲಿನ ಪ್ರಯಾಣದ ಕಥೆಯನ್ನು ಅರಣ್ಯಕಾಂಡವು ವಿವರಿಸುತ್ತದೆ. ನಾವು ದೇವಜನರ ಗೊಣಗುವಿಕೆ ಮತ್ತು ದಂಗೆಯ ಕುರಿತು ಮತ್ತು ಆನಂತರ ಅವರ ಮೇಲೆ ಬಂದ ದೇವರ ನ್ಯಾಯತೀರ್ಪಿನ ಕುರಿತು ಓದುತ್ತೇವೆ. ದೇವರು ಈಜಿಪ್ಟಿನ ಗುಲಾಮತನದಿಂದ ಇಸ್ರಾಯೇಲರನ್ನು ರಕ್ಷಿಸಿ ಸಿನಾಯಿಯಲ್ಲಿ

ಅವರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಾಗ್ಯೂ ಆ ಜನರು ಆತನ ಕೃಪಾಕಾರ್ಯಗಳಿಗೆ ನಂಬಿಕೆ, ಕೃತಜ್ಞತೆ ಮತ್ತು ವಿಧೇಯತೆಯೊಂದಿಗೆ ಪ್ರತಿಕ್ರಿಯಿಸಲಿಲ್ಲ. ಅದಕ್ಕೆ ಬದಲಾಗಿ ಅವರು ಅಪನಂಬಿಕೆ, ಕೃತಘ್ನತೆ ಮತ್ತು ಸತತವಾದ ದಂಗೆಯೊಂದಿಗೆ ಪ್ರತಿಕ್ರಿಯಿಸಿದರು. ಅಷ್ಟೇ ಅಲ್ಲದೆ ಅವರು ಕಾನಾನನ್ನು ವಶಪಡಿಸಿಕೊಳ್ಳುವ ಕಾರ್ಯವನ್ನು ಕೈಬಿಡುವುದರ (ಅಧ್ಯಾಯ 14) ಮೂಲಕ ವಾಗ್ದಾನ ದೇಶಕ್ಕೂ ಸಹ 'ಒಲ್ಲೆ' ಎಂದರು. ಇದರ ಪರಿಣಾಮವಾಗಿ, ಅವರು ತಮ್ಮ ಉಳಿದ ಜೀವಮಾನವನ್ನು ಅರಣ್ಯದಲ್ಲಿಯೇ ಕಳೆಯಬೇಕೆಂದು ತೀರ್ಪು ಕೊಟ್ಟನು. ದೇವರು ಮೊದಲ ಸಂತತಿಗೆ ಕೊಟ್ಟ ವಾಗ್ದಾನದ ನೆರವೇರುವಿಕೆಯನ್ನು ಎರಡನೆಯ ಸಂತತಿಯು ಮಾತ್ರ ಅನುಭವಿಸುವುದು. ಹಾಗಾಗಿ ಶತ್ರು ರಾಷ್ಟ್ರಗಳ ವಿರುದ್ಧ ಮಾತ್ರವಲ್ಲದೆ ತನ್ನ ಸ್ವಂತ ಅವಿಧೇಯ ಜನರ ವಿರುದ್ಧವೂ ಸಹ ದೇವರ ಕೋಪವನ್ನು ಅರಣ್ಯಕಾಂಡವು ಹೇಗೆ ಪ್ರಸ್ತುತಪಡಿಸುತ್ತದೆ ಎಂಬುದನ್ನು ನಾವು ಕಾಣಬಹುದು. ಶ್ರೇಷ್ಠ ಪ್ರವಾದಿಯೂ ಹಾಗೂ ಯೆಹೋವನ ಸೇವಕನೂ ಆದ ಮೋಶೆಯೂ ಸಹ ದೇವರಿಗೆ ಅವಿಧೇಯನಾದಾಗ ಆತನ ಕೋಪದಿಂದ ತಪ್ಪಿಸಿಕೊಳ್ಳಲಾಗಲಿಲ್ಲ (ಅಧ್ಯಾಯ 20).

ದೇವರ ಕುರಿತು ಅವರ ಅಪನಂಬಿಗಸ್ತಿಕೆಯ ಹೊರತಾಗಿಯೂ ದೇವರು ತನ್ನ ಜನರಿಗೆ ನಂಬಿಗಸ್ತನಾಗಿ ಮುಂದುವರೆದು ಅವರಿಗಾಗಿ ತನ್ನ ಉದ್ದೇಶವನ್ನು ನೆರವೇರಿಸಿದನು. ನಾವು ಇದನ್ನು ಅಧ್ಯಾಯ 22–24 ರಲ್ಲಿರುವ ಬಿಳಾಮನ ಕುರಿತಾದ ಕಥೆಯಿಂದ ಅರ್ಥಮಾಡಿಕೊಳ್ಳುತ್ತೇವೆ. ಅರಸನಾದ ಬಾಲಾಕನು ಇಸ್ರಾಯೇಲರನ್ನು ಶಪಿಸುವುದಕ್ಕಾಗಿ ಆತನನ್ನು ಕರೆಸಿದ್ದನು. ಆದರೆ ಬಿಳಾಮನು ಅವರ ಮೇಲೆ ದೇವರ ಆಶೀರ್ವಾದವನ್ನು ಮಾತ್ರ ಹೇಳಲು ಸಾಧ್ಯವೆಂಬುದನ್ನು ಅರಿತುಕೊಂಡನು. ದೇವರು ತನ್ನ ಜನರಿಗಾಗಿ ರೂಪಿಸುವ ವಿಮೋಚನಾಕಾರ್ಯವನ್ನು ಯಾವ ಸಂಗತಿಯೂ ತಡೆಯಲಾಗುವುದಿಲ್ಲ ಎಂಬುದನ್ನು ಇದು ತೋರಿಸುತ್ತದೆ.

ಅರಣ್ಯಕಾಂಡವನ್ನು ಹೀಗೆ ರಚಿಸಬಹುದು:

1. ವಾಗ್ದಾನ ದೇಶಕ್ಕಾಗಿ ತೆರಳಲು ಸಿನಾಯಿ ಪರ್ವತದ ಬಳಿಯಲ್ಲಿ ಸಿದ್ಧಗೊಳ್ಳುತ್ತಿರುವ ಇಸ್ರಾಯೇಲ್, 1:1–10:10
    1) ಜನಗಣತಿ ಮತ್ತು ಪಾಳೆಯ ಕ್ರಮ
    2) ಶುದ್ಧಾಚಾರದ ಕಟ್ಟಳೆಗಳು, ಪಸ್ಕಹಬ್ಬವನ್ನು ಆಚರಿಸುವುದರ ಕುರಿತು
2. ಸಿನಾಯಿಯಿಂದ ಕಾದೇಶ್ ಬರ್ನಿಯಕ್ಕೆ ಪ್ರಯಾಣ, 10:11–12:16
    1) ಯೆಹೋವನಿಂದ ಲಾವಕ್ಕಿಗಳು
    2) ಮಿರ್ಯಾಮಳು ಮತ್ತು ಆರೋನರು ಮೋಶೆಯನ್ನು ವಿರೋಧಿಸಿದ್ದು
3. ಕಾದೇಶ್ ಬರ್ನಿಯದಲ್ಲಿ ಇಸ್ರಾಯೇಲರು, 13:1–20:13
    1) ಕಾನಾನ್ ದೇಶವನ್ನು ಪರಿಶೋಧಿಸಿದ್ದು
    2) ಇಸ್ರಾಯೇಲರ ದಂಗೆ
    3) ವಿವಿಧ ಕಟ್ಟಳೆಗಳು
    4) ಕೋರಹ ದಾತಾನ್ ಮತ್ತು ಅಬೀರಾಮರ ದಂಗೆ ಮತ್ತು ಆರೋನನ ಕೋಲು ಚಿಗುರಿದ್ದು
    5) ಬಂಡೆಯೊಳಗಿಂದ ನೀರು: ಮೆರೀಬದಲ್ಲಿ ಮೋಶೆಯು ದೇವರ ವಿರುದ್ಧ ಪಾಪ ಮಾಡಿದ್ದು
4. ಕಾದೇಶ್ ಬರ್ನಿಯದಿಂದ ಮೋವಾಬಿನ ಬಯಲುಗಳಿಗೆ ಪ್ರಯಾಣಿಸಿದ್ದು, 20:14–22:1
    1) ಆರೋನನ ಮರಣ
    2) ಕಂಚಿನ ಸರ್ಪ
    3) ಅಮೋರ್ಯರ ಅರಸನಾದ ಸೀಹೋನ ಮತ್ತು ಬಾಷಾನಿನ ಅರಸನಾದ ಓಗನ ಸೋಲು
5. ಮೋವಾಬಿನ ಬಯಲುಗಳಲ್ಲಿ ಇಸ್ರಾಯೇಲರು, 22:2–32:42
    1) ಬಾಲಾಕನು ಇಸ್ರಾಯೇಲರನ್ನು ಶಪಿಸುವುದಕ್ಕಾಗಿ ಬೀಳಾಮನನ್ನು ನೇಮಿಸಿದಾಗ ಅದರ ಪರಿಣಾಮವಾಗಿ ಆಶೀರ್ವಾದ ಬಂದದ್ದು

2) ಶಿಟ್ಟೀಮಿನಲ್ಲಿ ಇಸ್ರಾಯೇಲರನ್ನು ಮೋವಾಬ್ಯ ಸ್ತ್ರೀಯರು ಮೋಹಿಸಿದ್ದು

3) ಎರಡನೆಯ ಜನಗಣತಿ

4) ಒಂದು ಹೊಸ ಸಂತತಿಗಾಗಿ ಆಜ್ಞೆ ಮತ್ತು ಕಟ್ಟಳೆಗಳು

6. ಹೆಚ್ಚಿನ ವಿಷಯಗಳು: ಪ್ರಯಾಣದ ಹಂತಗಳು, ಕಾನಾನಿನ ವಿಭಾಗ

**ಪ್ರಶ್ನೆಗಳು**

1. ಅರಣ್ಯಕಾಂಡಕ್ಕೆ ಕೊಡಲಾಗಿರುವ ಇಂಗ್ಲಿಷ್ ಹೆಸರಿನ ಮೂಲವೇನು ಮತ್ತು ಯಾಕೆ ಆ ಹೆಸರನ್ನು ಇಡಲಾಗಿದೆ?
2. ಅರಣ್ಯಕಾಂಡದಲ್ಲಿ ಇಸ್ರಾಯೇಲರು ಹೇಗೆ ಚಿತ್ರಿಸಲ್ಪಟ್ಟಿದ್ದಾರೆ?
3. ಅರಣ್ಯಕಾಂಡದ ಹಿನ್ನೆಲೆ ಏನು?
4. ನಿರ್ಗಮನ ಎಂಬ ನಕ್ಷೆಯಲ್ಲಿ ಈ ಸ್ಥಳಗಳನ್ನು ಗುರುತಿಸಿರಿ: ಸಿನಾಯಿ ಪರ್ವತ, ಕಾದೇಶ್ ಬರ್ನಿಯ, ಮೋವಾಬ್.
5. ಅರಣ್ಯಕಾಂಡದಲ್ಲಿ ದಾಖಲಾಗಿರುವ ಘಟನೆಗಳು ಯಾವಾಗ ಸಂಭವಿಸಿದವು?
6. ಅರಣ್ಯಕಾಂಡದಲ್ಲಿ ಕಂಡುಬರುವ ಎರಡು ಅತ್ಯಂತ ಸಾಮಾನ್ಯವಾದ ಪಠ್ಯ ಪ್ರಕಾರಗಳು ಯಾವುವು?
7. ಇಸ್ರಾಯೇಲರು ಕಾನಾನನ್ನು ಪ್ರವೇಶಿಸಲು ತಿರಸ್ಕರಿಸಿದಾಗ ಅದರ ಪರಿಣಾಮವಾಗಿ ಏನಾಯಿತು?
8. ತನ್ನ ಜನರ ಕುರಿತು ಇರುವ ದೇವರ ನಂಬಿಗಸ್ತಿಕೆಯು ಬಿಳಾಮನ ಕುರಿತಾದ ಕಥೆಯಲ್ಲಿ ಯಾವ ರೀತಿಯಲ್ಲಿ ವ್ಯಕ್ತವಾಗಿದೆ?

**ಅರಣ್ಯಕಾಂಡ ಅಧ್ಯಯನ 1: ಮೊದಲನೆಯ ಜನಗಣತಿ; ಇಸ್ರಾಯೇಲರ ಪಾಳೆಯ**

**ಅ. ಪರಿಚಯ**

ಇಸ್ರಾಯೇಲರಲ್ಲಿ ಸೈನಿಕ ಸೇವೆ ಸಲ್ಲಿಸತಕ್ಕ ಎಲ್ಲಾ ಗಂಡಸರ ಒಂದು ಜನಗಣತಿಯನ್ನು ಮಾಡಬೇಕೆಂದು ಯೆಹೋವನು ಮೋಶೆ ಮತ್ತು ಆರೋನರಿಗೆ ಸಿನಾಯಿ ಮರುಭೂಮಿಯಲ್ಲಿ ಹೇಳುವುದರೊಂದಿಗೆ ಅರಣ್ಯಕಾಂಡವು ಪ್ರಾರಂಭಿಸುತ್ತದೆ. ಆದರೆ ಈ ಜನಗಣತಿಯಲ್ಲಿ ಲೇವಿಯ ಗೋತ್ರದವರನ್ನು ಸೇರಿಸಿರಲಿಲ್ಲ. ನಂತರ ದೇವದರ್ಶನ ಗುಡಾರವನ್ನು ಮಧ್ಯದಲ್ಲಿರಿಸಿ ಅದರ ಸುತ್ತಲೂ ಇಸ್ರಾಯೇಲ್ ಗೋತ್ರಗಳು ಪ್ರತಿಯೊಂದು ದಿಕ್ಕಿಗೆ ಮೂರು ಗೋತ್ರಗಳಂತೆ ಕ್ರಮವಾಗಿ ತಮ್ಮ ಗುಡಾರಗಳನ್ನು ಹಾಕಿಕೊಳ್ಳಬೇಕೆಂದು ದೇವರು ಅವರಿಗೆ ಹೇಳಿದನು.

**ಆ. ಓದಿರಿ**

ಅರಣ್ಯ. 1:1–4, 44–54; 2:1–2, 17, 32–34

**ಇ. ಟಿಪ್ಪಣಿ**

*ಯೆಹೋವನು ... ಮೋಶೆಯ ಸಂಗಡ ಮಾತನಾಡಿದನು* (1:1): ಅರಣ್ಯಕಾಂಡದ ಒಂದು ಆಕರ್ಷಕವಾದ ಸಂಗತಿಯು ಯೆಹೋವನು ಮೋಶೆಯ ಸಂಗಡ ಮಾತನಾಡಿದನು ಎಂದು ಆಗಾಗ್ಗೆ ಬರೆದಿರುವುದಾಗಿದೆ. ಈ ಸಂಗತಿಯನ್ನು 150 ಕ್ಕಿಂತಲೂ ಹೆಚ್ಚು ಬಾರಿ ವಿವಿಧ ರೀತಿಯ ಹೇಳಿಕೆಗಳೊಂದಿಗೆ ತಿಳಿಸಲಾಗಿದೆ. ದೇವರು ಒಬ್ಬ ವ್ಯಕ್ತಿಯೊಟ್ಟಿಗೆ ಮತ್ತು ಒಬ್ಬ ವ್ಯಕ್ತಿಯ ಮೂಲಕ ಮಾತನಾಡುವ ಅಂಶವು ಆತನು ಒಬ್ಬ ಪ್ರವಾದಿ ಎಂಬುದನ್ನು ಸೂಚಿಸುತ್ತದೆ (ಅರಣ್ಯ. 12:6–8 ರೊಂದಿಗೆ ಹೋಲಿಸಿರಿ).

*ದೇವದರ್ಶನದ ಗುಡಾರದೊಳಗೆ* (ವ. 1): ???

ಸಿನಾಯಿ ಮರುಭೂಮಿಯಲ್ಲಿ (ವ. 1): ಹಿಬ್ರೂ ಭಾಷೆಯಲ್ಲಿ ಮತ್ತು ಕನ್ನಡದಲ್ಲಿ ಈ ಪುಸ್ತಕಕ್ಕೆ ಕೊಡಲಾದ ಶೀರ್ಷಿಕೆಯನ್ನು ಇದೇ ಮೂಲದಿಂದ ತೆಗೆದುಕೊಳ್ಳಲಾಗಿದೆ.

*ಎರಡನೆಯ ವರ್ಷದ ಎರಡನೆಯ ತಿಂಗಳಿನ ಮೊದಲನೆಯ ದಿನದಲ್ಲಿ* (ವ. 1): ಈಜಿಪ್ಟಿನಿಂದ ನಿರ್ಗಮಿಸಿದ ನಂತರ ಈಗ ಹದಿಮೂರು ತಿಂಗಳುಗಳು ಕಳೆದಿದ್ದವು.

*ಒಟ್ಟು 6,03,550 ಮಂದಿಯಾಗಿದ್ದರು* (ವ. 46): ಸೈನಿಕ ಸೇವೆಗೆ ಸಿದ್ಧರಾಗಿದ್ದ ಪುರುಷರ ಈ ಸಂಖ್ಯೆಯು ಇಸ್ರಾಯೇಲರ ಒಟ್ಟು ಜನಸಂಖ್ಯೆ ಕನಿಷ್ಟ ಪಕ್ಷ 20,00,000 ಇದ್ದಿರಬಹುದೆಂಬುದನ್ನು ಸೂಚಿಸುತ್ತದೆ. ಈ ಅತೀ ದೊಡ್ಡ ಜನಸಂಖ್ಯೆಯು (ಐತಿಹಾಸಿಕ ಕಾಲಘಟ್ಟವನ್ನು ಮತ್ತು ಅರಣ್ಯದಲ್ಲಿ ಅಲೆದಾಡುವ ನೈಜ ಸ್ಥಿತಿಯನ್ನು ಪರಿಗಣಿಸುವಾಗ) ಸತ್ಯವೇದ ಶಾಸ್ತ್ರಜ್ಞರುಗಳನ್ನು ದಿಗ್ಭ್ರಮೆಗೊಳಿಸಿದೆ ಮತ್ತು ಅವರು ಅದಕ್ಕೆ ವಿವಿಧ ಸಲಹೆಗಳನ್ನು ಸೂಚಿಸಿದ್ದಾರೆ.

*ಸಾಕ್ಷಿಯ ಗುಡಾರವನ್ನು* (ವ. 50, 53): ಈ ಗುಡಾರದೊಳಗೆ ದಶಾಜ್ಞೆಗಳನ್ನು ಹೊಂದಿದ ಕಲ್ಲಿನ ಹಲಿಗೆಗಳನ್ನು ಒಳಗೊಂಡ ಮಂಜೂಷವನ್ನು (ಕಟ್ಟಿಗೆಯ ಪೆಟ್ಟಿಗೆಯನ್ನು) ಇಡಲಾಗಿತ್ತು.

**ಈ. ಪ್ರಶ್ನೆಗಳು**

1. ಜನಗಣತಿಯ ಉದ್ದೇಶವೇನಾಗಿತ್ತು?
2. ಜನಗಣತಿಯನ್ನು ಹೇಗೆ ಏರ್ಪಡಿಸಲಾಗಿತ್ತು?
3. ಲೇವಿಯರನ್ನು ಯಾಕೆ ಜನಗಣತಿಯಲ್ಲಿ ಸೇರಿಸಿರಲಿಲ್ಲ?
4. ಲೇವಿಯರ ಪಾಳೆಯವು ಎಲ್ಲಿತ್ತು ಮತ್ತು ಅವರು ಯಾಕೆ ಅಲ್ಲಿ ಪಾಳೆಯವನ್ನು ಹಾಕಿಕೊಂಡಿದ್ದರು?
5. ಮೋಶೆಯ ಮೂಲಕ ದೇವರು ಕೊಟ್ಟ ಆಜ್ಞೆಗಳಿಗೆ ಇಸ್ರಾಯೇಲರು ಹೇಗೆ ಪ್ರತಿಕ್ರಿಯಿಸಿದರು ಎಂಬುದರ ಕುರಿತು ನಮಗೆ ಏನನ್ನು ತಿಳಿಸಲಾಗಿದೆ?

**ಊ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಅರಣ್ಯಕಾಂಡದ ಮೊದಲ ಎರಡು ಅಧ್ಯಾಯಗಳಲ್ಲಿರುವ ಇಸ್ರಾಯೇಲರ ಸಂಘಟನೆಯ ಕುರಿತು ಓದುವಾಗ ಅದು ನಮ್ಮ ಮನಸ್ಸಿನ ಮೇಲೆ ಯಾವ ಪ್ರಭಾವವನ್ನು ಬೀರುತ್ತದೆ? ದಕ್ಷಿಣ ಭಾರತದ ದೇವಜನರಾದ ನಾವುಗಳು ಇದರಿಂದ ಏನನ್ನು ಕಲಿಯಬಹುದು?
2. ದೇವರ, ಮೋಶೆ ಮತ್ತು ಆರೋನರ ಹಾಗೂ ಜನರ ನಡುವಿನ ಸಂಬಂಧದ ಕುರಿತು ಅರಣ್ಯಕಾಂಡದ ಮೊದಲ ಎರಡು ಅಧ್ಯಾಯಗಳಲ್ಲಿ ಓದುವಾಗ ಅದು ನಮ್ಮ ಮನಸ್ಸಿನ ಮೇಲೆ ಯಾವ ಪ್ರಭಾವವನ್ನು ಬೀರುತ್ತದೆ? ದಕ್ಷಿಣ ಭಾರತದ ದೇವಜನರಾದ ನಾವುಗಳು ಇದರಿಂದ ಏನನ್ನು ಕಲಿಯಬಹುದು?

**ಅರಣ್ಯಕಾಂಡ ಅಧ್ಯಯನ 2: ಇಸ್ರಾಯೇಲರಿಗೆ ಆದರ್ಶ**

**ಅ. ಪರಿಚಯ**

ಅಧ್ಯಾಯ 1 ರಲ್ಲಿರುವ ಜನಗಣತಿಯು ಈಗಾಗಲೇ ಇಸ್ರಾಯೇಲರು ಒಂದು ದೊಡ್ಡ ಜನಾಂಗವಾಗಿ ಅಸಂಖ್ಯ ಜನರಾಗಿದ್ದರು ಎಂಬುದನ್ನು ತೋರಿಸುತ್ತದೆ.

ಇಸ್ರಾಯೇಲನ್ನು ಒಡಂಬಡಿಕೆಯ ಕರ್ತನು ವಾಸವಾಗಿರುವ ಹನ್ನೆರಡು ಗೋತ್ರಗಳ ಒಂದು ಆದರ್ಶ ಸಮುದಾಯವೆಂಬಂತೆ ವರ್ಣಿಸುವುದು ಅರಣ್ಯಕಾಂಡದ ಮೊದಲ ಹತ್ತು ಅಧ್ಯಾಯಗಳ ಮುಖ್ಯ ಉದ್ದೇಶವಾಗಿದೆ. ಈ ಕೆಳಗಿನ ಸಂಗತಿಗಳ ಮೂಲಕ ಇದು ನಿದರ್ಶಿಸಲ್ಪಟ್ಟಿದೆ: ಪಾಳೆಯದಲ್ಲಿ ಗುಡಾರಗಳನ್ನು ಹಾಕಿಕೊಳ್ಳುವ ಕ್ರಮ, ಇಸ್ರಾಯೇಲರು ಸಿನಾಯಿ ಪರ್ವತವನ್ನು ಬಿಟ್ಟಾಗ ಪಾಲಿಸಿದ ನಡೆಯ ಕ್ರಮ, ದೇವದರ್ಶನ ಗುಡಾರ, ದೇವರ ಪ್ರಸನ್ನತೆಯ ಮೇಘ, ಲೇವಿಯರ ಪಾತ್ರ, ಪಾಪ ನಿವಾರಣೆ ಸಂಬಂಧವಾದ ಕಟ್ಟಳೆಗಳು ಮತ್ತು ಸಾಂಪ್ರದಾಯಿಕ ಶುದ್ಧಾಚಾರಗಳು.

**ಆ. ಓದಿರಿ**

ಅರಣ್ಯಕಾಂಡ ಅಧ್ಯಾಯ 2, ಅಧ್ಯಾಯ 5; 7:1–3; 8:5–19; 9:6–10, 15–23; 10:11–28

**ಇ. ಪ್ರಶ್ನೆಗಳು**

1. ಇಸ್ರಾಯೇಲರ ಪಾಳೆಯದ ಮಧ್ಯದಲ್ಲಿ ಏನಿತ್ತು (ಅಧ್ಯಾಯ 2)? ಇದರ ಮಹತ್ವವೇನಾಗಿರಬಹುದು?
2. ಇಸ್ರಾಯೇಲರ ಪಾಳೆಯವನ್ನು ಯಾವ ರೀತಿಯಲ್ಲಿ ನಿಯೋಜಿಸಲಾಗಿತ್ತು ಎಂಬುದರ ಕುರಿತು ಒಂದು ಸರಳವಾದ ಚಿತ್ರಣವನ್ನು ಬಿಡಿಸಿರಿ (ಅಧ್ಯಾಯ 2)?
3. ಅಧ್ಯಾಯ 5 ಮೂರು ವಾಕ್ಯಭಾಗಗಳನ್ನು ಒಳಗೊಂಡಿದೆ. ಅವುಗಳು ಯಾವುದರ ಕುರಿತಾಗಿ ಮಾತನಾಡುತ್ತದೆ ಮತ್ತು ಅವುಗಳಲ್ಲಿ ಸಮಾನ್ಯವಾಗಿ ಕಂಡುಬರುವ ಸಂಗತಿ ಯಾವುದು?
4. ಅಧ್ಯಾಯ 7 ರ ಸನ್ನಿವೇಶ ಏನಾಗಿತ್ತು?
5. ಲೇವಿಯರು ಹೇಗೆ ಸಾಂಪ್ರದಾಯಿಕವಾಗಿ ಶುದ್ಧೀಕರಿಸಲ್ಪಟ್ಟು ತಮ್ಮ ಸೇವೆಗಾಗಿ ಪ್ರತ್ಯೇಕಿಸಲ್ಪಡುತ್ತಿದ್ದರು? ಈ ಸಂಸ್ಕಾರವು ಯಾವುದರ ಸಂಕೇತವಾಗಿದೆ (ಅಧ್ಯಾಯ 8)?
6. ಅಧ್ಯಾಯ 9:6–10 ರಲ್ಲಿ ಯಾವ ಸಮಸ್ಯೆಯ ಕುರಿತು ಮಾತನಾಡಲಾಗಿದೆ?
7. ಅಧ್ಯಾಯ 9:15–23 ರ ಸಂದೇಶವನ್ನು ನೀವು ಹೇಗೆ ಸಾರಾಂಶಗೊಳಿಸುವಿರಿ?
8. ಇಸ್ರಾಯೇಲರು ನಡೆದು ಸಾಗಬೇಕಾದ ಕ್ರಮದ ಒಂದು ಸರಳವಾದ ಚಿತ್ರಣವನ್ನು ಬಿಡಿಸಿರಿ (10:11–28)?
9. ಈ ವಚನಗಳನ್ನು ಓದಿರಿ: ಅರಣ್ಯ 1;45; 2:34; 4:49; 5:4; 8:4, 20; 9:5, 23. ಈ ವಚನಗಳು 'ಇಸ್ರಾಯೇಲರ ಆದರ್ಶದ' ಕುರಿತು ನಮಗೆ ಏನನ್ನು ಹೇಳುತ್ತವೆ?

**ಈ. ಸಮಾರೋಪಗಳು**

ಮೇಲಿನ ವಾಕ್ಯಭಾಗಗಳ ಅಧ್ಯಯನದಿಂದ ನಾವು ಈ ಸಮಾರೋಪಗಳನ್ನು ತಲುಪಬಹುದು:

1. ದೇವರು ದೇವದರ್ಶನ ಗುಡಾರದ ಮೂಲಕ ಇಸ್ರಾಯೇಲರ ಪಾಳೆಯದ ಮಧ್ಯದಲ್ಲಿದ್ದನು. ಇದು ಇಸ್ರಾಯೇಲರ ನಂಬಿಕೆ ಮತ್ತು ಕ್ರಿಯೆಗಳಿಗಾಗಿ ಒಡಂಬಡಿಕೆಯ ಕರ್ತನ ಕೇಂದ್ರತೆಯು ಅವಶ್ಯ ಎಂಬುದರ ಸಂಕೇತವಾಗಿತ್ತು.
2. ಇಸ್ರಾಯೇಲರು ತಮಗೆ ಮೋಶೆಯ ಮೂಲಕ ತಿಳಿಸಲಾಗುವ ಯೆಹೋವನ ಆಜ್ಞೆಗಳನ್ನು ಮತ್ತು ಮಾರ್ಗದರ್ಶನಗಳನ್ನು ಪಾಳಿಸಬೇಕೆಂಬುದು ಇದರ ಅರ್ಥವಾಗಿತ್ತು.
3. ದೇವರು ಪರಿಶುದ್ಧನಾಗಿರುವಂತೆ ಇಸ್ರಾಯೇಲರು ಪರಿಶುದ್ಧರಾಗಿರತಕ್ಕದ್ದು. ಅದರ ಪರಿಣಾಮವಾಗಿ,

1) ಇಸ್ರಾಯೇಲರು ದೇವರ ಹಾಗೂ ಆತನಿಗೆ ಸಂಬಂಧಪಟ್ಟ ಪವಿತ್ರ ವಸ್ತುಗಳ (ಮಂಜೂಷ, ದೇವದರ್ಶನ ಗುಡಾರ ಮತ್ತು ಅದರ ಸಾಮಾಗ್ರಿಗಳ) ಸಮೀಪಕ್ಕೆ ಬಾರದಂತೆ ಸಂರಕ್ಷಿಸಲ್ಪಡಬೇಕಾಗಿತ್ತು. ಯಾಜಕರುಗಳು ಮತ್ತು ಲೇವಿಯರು ಜನರನ್ನು ದೇವರ ಪರಿಶುದ್ಧತೆಯಿಂದ ಸಂರಕ್ಷಿಸಿದರು. ಇದು ಪಾಳೆಯದ ಕ್ರಮದಲ್ಲಿ ಕಂಡುಬರುತ್ತದೆ.

2) ಇಸ್ರಾಯೇಲರ ಪಾಳೆಯವು ಮತ್ತು ಸ್ವತಃ ಇಸ್ರಾಯೇಲರು ಸಾಂಪ್ರದಾಯಿಕವಾಗಿ ಶುದ್ಧರಾಗಿರಬೇಕಿತ್ತು. ಇದರ ಪರಿಣಾಮವಾಗಿ, ದೇವರು ಅವರಿಗೆ ಆಜ್ಞೆಗಳನ್ನು ಮತ್ತು ಶುದ್ಧಾಚಾರಗಳನ್ನು ಕೊಟ್ಟನು. ಅವರು ಅವುಗಳನ್ನು ಪಾಲಿಸಬೇಕಾಗಿತ್ತು.

3) ಜನರ ಪಾಪಕ್ಕೆ ಪ್ರಾಯಶ್ಚಿತ್ತವಾಗಬೇಕಾಗಿತ್ತು. ಅದನ್ನು ಯಜ್ಞಬಲಿಗಳ ಪದ್ಧತಿಯ ಮೂಲಕ ಮಾಡಲಾಗುತ್ತಿತ್ತು. ಇದರ ಪರಿಣಾಮವಾಗಿ, ದೇವರು ಅವರಿಗೆ ಈ ಪದ್ಧತಿಗೆ ಸಂಬಂಧಪಟ್ಟ ಆಜ್ಞೆಗಳನ್ನು ಕೊಟ್ಟನು.

4. ದೇವರು ತನ್ನ ಜನರನ್ನು ಅರಣ್ಯದಲ್ಲೆಲ್ಲಾ ನಡೆಸಿದನು:

1) ಇಸ್ರಾಯೇಲರು ಸೇನೆಯ ರೀತಿಯಲ್ಲಿ ವಾಗ್ದಾನ ದೇಶದ ಕಡೆಗೆ ಸಾಗಿದಾಗ ಆತನು ತನ್ನ ಜನರ ಮುಂದಾಗಿ ಹೋದನು (ಅದು ಯಾಜಕರು ಮಂಜೂಷವನ್ನು ಹೊರುವುದರ ಮೂಲಕ ಪ್ರತಿನಿಧಿಸಲ್ಪಟ್ಟಿದೆ).

2) ಆತನು ತನ್ನ ಮಹಿಮೆಯುಳ್ಳ ಪ್ರಸನ್ನತೆಯ ಸಂಕೇತವಾದ ಮೇಘದ ಚಲಿಸುವಿಕೆಗಳ ಮೂಲಕ ತನ್ನ ಜನರನ್ನು ನಡೆಸಿದನು.

5. ಅರಣ್ಯಕಾಂಡದ ಮೊದಲ ಹತ್ತು ಅಧ್ಯಾಯಗಳು 'ಇಸ್ರಾಯೇಲರಿಗಾಗಿ ದೇವರ ಆದರ್ಶದ' ಕುರಿತು ವಿವರಿಸುತ್ತವೆ. ಅದು ಮೇಲಿನ ನಾಲ್ಕು ಅಂಶಗಳ ಮೂಲಕ ನಿದರ್ಶಿಸಲ್ಪಟ್ಟಿದೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. 'ಇಸ್ರಾಯೇಲರಿಗಾಗಿ ದೇವರ ಆದರ್ಶದ' ವಿವಿಧ ಅಂಶಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ (ನಿಮ್ಮ ಪಠ್ಯಪುಸ್ತಕದ ಹಾಗೂ ನೋಟ್ ಬುಕ್‌ನ ಸಹಾಯವಿಲ್ಲದೆ) ವಿವರಿಸಿರಿ.
2. ಅರಣ್ಯದಲ್ಲಿನ ಅಲೆದಾಟಗಳ ಪ್ರಾರಂಭದ ಸಂದರ್ಭದಲ್ಲಿ ದೇವರ ಹಾಗು ಇಸ್ರಾಯೇಲರ ಕುರಿತು ಒಂದು ಉತ್ತಮವಾದ ತಿಳುವಳಿಕೆಯನ್ನು ಈ ಅಧ್ಯಯನವು ಹೇಗೆ ಕೊಟ್ಟಿದೆಯೆಂದು ನಿಮ್ಮ ಗುಂಪುಗಳಲ್ಲಿ ಹಂಚಿಕೊಳ್ಳಿರಿ.
3. 'ತನ್ನ ಜನರಿಗಾಗಿ ದೇವರ ಆದರ್ಶ' ಎಂಬಂತಹ ಸಂಗತಿಯು ಇಂದಿಗೂ ಸಹ ಇದೆ ಎಂದು ನಿಮಗೆ ಅನ್ನಿಸುತ್ತದೋ? ಯಾಕೆ – ಯಾಕೆ ಇಲ್ಲ?
4. 'ತನ್ನ ಜನರಿಗಾಗಿ ದೇವರ ಆದರ್ಶ' ಎಂಬಂತಹ ಸಂಗತಿಯು ಇಂದಿಗೂ ಸಹ ಇದೆ ಎಂದು ನಿಮಗೆ ಅನ್ನಿಸಿದರೆ ಈ ಆದರ್ಶದ ವಿವಿಧ ಅಂಶಗಳನ್ನು ಪಟ್ಟಿಮಾಡಿರಿ.

**ಊ. ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ**

ನೀವು ಈ ಅಧ್ಯಯನದಲ್ಲಿ ಕಲಿತಿರುವ ಸಂಗತಿಯನ್ನು ಬಳಸಿಕೊಂಡು 'ತನ್ನ ಜನರಿಗಾಗಿ ಇಂದು ದೇವರ ಆದರ್ಶ' ಎಂಬ ಸತ್ಯವೇದ ಅಧ್ಯಯನವನ್ನು ನಿಮ್ಮ ಸಭೆಗಾಗಿ ಸಿದ್ಧಪಡಿಸಿರಿ.

**ಅರಣ್ಯಕಾಂಡ ಅಧ್ಯಯನ 3: ಸಿನಾಯಿಯಿಂದ ಮುಂದೆ ಹೋದದ್ದು; ಯೆಹೋವನಿಂದ ಲಾವಕ್ಕಿಗಳು**

**ಅ. ಪರಿಚಯ**

ನಾವು ಅರಣ್ಯಕಾಂಡದ ಎರಡನೆಯ ಮುಖ್ಯ ಭಾಗದ ಪ್ರಾರಂಭಕ್ಕೆ ಬಂದಿದ್ದೇವೆ. ಸಿನಾಯಿ ಪರ್ವತದ ಪ್ರಾಂತದಲ್ಲಿ ಹನ್ನೊಂದು ತಿಂಗಳುಗಳನ್ನು ಕಳೆದ ನಂತರ ಇಸ್ರಾಯೇಲರು ವಾಗ್ದಾನ ದೇಶದ ಕಡೆಗೆ ಹೊರಟರು. ದೇವರು ಅವರಿಗೆ ನಡೆದು ಸಾಗಬೇಕಾದ ಕ್ರಮವನ್ನು ಕೊಡುತ್ತಾನೆ: ಮೊದಲು, ಯೆಹೂದವು ಮೂರು ಗೋತ್ರಗಳನ್ನು ನಡೆಸುವುದು, ಅವರ ಹಿಂದೆ ಲೇವಿಯರು ದೇವದರ್ಶನ ಗುಡಾರವನ್ನು ಹೊತ್ತುಕೊಂಡು ಬರುವರು. ಎರಡನೆಯದಾಗಿ, ರೂಬೇನ್ ಮೂರು ಗೋತ್ರಗಳನ್ನು ನಡೆಸುವುದು, ಅವರ ಹಿಂದೆ ಇತರೆ ಲೇವಿಯರು ಪವಿತ್ರವಾದ ದೇವದರ್ಶನ ಗುಡಾರದ ಸಾಮಾಗ್ರಿಗಳನ್ನು ಹೊತ್ತುಕೊಂಡು ಬರುವರು. ಮೂರನೆಯದಾಗಿ, ಮೂರು ಗೋತ್ರಗಳನ್ನು ನಡೆಸುವುದು. ಅಂತಿಮವಾಗಿ, ದಾನ್ ಕೊನೆಯ ಮೂರು ಗೋತ್ರಗಳನ್ನು ನಡೆಸುವುದು.

ಸಿನಾಯಿ ಪರ್ವತದಿಂದ ಪಾರಾನಿನ ಮರುಭೂಮಿಯವರೆಗಿನ ಮೊದಲ ಪ್ರಯಾಣದಲ್ಲಿ ದೇವರು ಅವರನ್ನು ತನ್ನ ಮೇಘದ ಮೂಲಕ ನಡೆಸಿದನು.

ಅತೀ ಬೇಗನೇ ಇಸ್ರಾಯೇಲರು ಪ್ರಯಾಣದ ಕಷ್ಟಗಳ ಕುರಿತು ದೂರತೊಡಗಿದರು. ಅದಲ್ಲದೆ, ಅವರೊಂದಿಗೆ ಬಂದಿದ್ದ ಅನ್ಯ ಜನಾಂಗದ ಜನರ ಗುಂಪು ಆಹಾರದ ಕುರಿತು ದೂರಿದರು. ಇದು ಹೆಚ್ಚಿನ ಗೊಣಗುವಿಕೆಗೆ ಕಾರಣವಾಯಿತು ಮತ್ತು ಅವರು ಯೆಹೋವನಿಗೆ ಕೋಪವನ್ನೆಬ್ಬಿಸಿದರು. ಮೋಶೆಯು ನಿರುತ್ಸಾಹಗೊಂಡು ತನ್ನ ಪ್ರಯಾಸವುಳ್ಳ ಸನ್ನಿವೇಶದ ಕುರಿತು ದೇವರಿಗೆ ದೂರಿದನು. ದೇವರು ಎಪ್ಪತ್ತು ಹಿರಿಯರನ್ನು ಮೋಶೆಗೆ ಸಹಾಯ ಮಾಡಲು ನೇಮಿಸುವುದರ ಮೂಲಕ ಪ್ರತಿಕ್ರಿಯಿಸಿದನು. ಇಸ್ರಾಯೇಲರಿಗೆ ತಿನ್ನಲು ಸಾಕಾಗುವಷ್ಟು ಮಾಂಸವನ್ನು ಕೊಡುವೆನೆಂದು ದೇವರು ವಾಗ್ದಾನ ಮಾಡಿ ಲಾವಕ್ಕಿಗಳನ್ನು ಕಳುಹಿಸಿಕೊಟ್ಟನು. ಆದರೆ ದೇವರ ಕೋಪವು ಅವರ ವಿರುದ್ಧ ಉರಿದು ಅವರ ಮೇಲೆ ಒಂದು ಘೋರ ವ್ಯಾಧಿಯು ಬರುವಂತೆ ಮಾಡಿದನು.

**ಆ. ಓದಿರಿ**

ಅರಣ್ಯ. 10:11–13, 33–36; 11:1–35

**ಇ. ಟಿಪ್ಪಣಿ**

*ಎರಡನೆಯ ವರ್ಷದ ಎರಡನೆಯ ತಿಂಗಳಿನ ಇಪ್ಪತ್ತನೆಯ ದಿವಸದಲ್ಲಿ* (10:11): ಈ ಸಮಯದಲ್ಲಿ ಇಸ್ರಾಯೇಲರು ಸಿನಾಯಿ ಪರ್ವತದ ಪ್ರಾಂತದಲ್ಲಿ ಹನ್ನೊಂದು ತಿಂಗಳುಗಳನ್ನು ಕಳೆದಿದ್ದರು. ವಾಗ್ದಾನ ದೇಶವನ್ನು ತಲುಪಲು ಸುಮಾರು ಮೂರು ತಿಂಗಳು ಸಾಕಾಗಿತ್ತು. ಅದರ ಬದಲಾಗಿ ಅವರು ಅರಣ್ಯದಲ್ಲಿ 39 ವರ್ಷಗಳು ಕಳೆಯಬೇಕಾಯಿತು.

*ಪಾರಾನೆಂಬ ಮರುಭೂಮಿಯಲ್ಲಿ* (ವ. 12): ಇದು ಸಿನಾಯಿ ಪರ್ಯಾಯ ದ್ವೀಪದ ಮಧ್ಯಭಾಗದಲ್ಲಿದ್ದ ಅರಣ್ಯ ಪ್ರಾಂತವಾಗಿತ್ತು. ನಿರ್ಗಮನ ಎಂಬ ನಕ್ಷೆಯನ್ನು ನೋಡಿರಿ.

*ತಬೇರ* (11:3): ಈ ಹೆಸರಿನ ಅರ್ಥ 'ದಹಿಸುವುದು' ಎಂಬುದಾಗಿದೆ.

*ಮಿಶ್ರ ಗುಂಪಿನ ಜನರು* (ವ. 4): ಈ ಹೇಳಿಕೆಯು ಇಸ್ರಾಯೇಲರೊಂದಿಗೆ ಈಜಿಪ್ಟಿನಿಂದ ಬಂದಿದ್ದ ಅನ್ಯ ಜನಾಂಗದ ಜನರನ್ನು ಸೂಚಿಸುತ್ತದೆ.

*ಮೀನನ್ನೂ, ಸವತೆಕಾಯಿಯನ್ನೂ, ಕರ್ಬೂಜಗಳನ್ನೂ, ಕಾಡುಳ್ಳಿ ನೀರುಳ್ಳಿ ಬೆಳ್ಳುಳ್ಳಿಗಳನ್ನೂ* (ವ. 5): ಈಜಿಪ್ಟಿನ ಆಹಾರ ಪದ್ಧತಿಯು ಸಸ್ಯಹಾರ ಹಾಗೂ ಮಾಂಸಹಾರ ಎರಡನ್ನೂ ಒಳಗೊಂಡಿತ್ತು ಎಂಬುದನ್ನು ಇದು ಸೂಚಿಸುತ್ತದೆ.

*ಯೆಹೋವನ ಕೈ ಮೋಟುಗೈಯೋ?* (ವ. 23): ಆ ಸನ್ನಿವೇಶವನ್ನು ಬಗೆಹರಿಸಲು ಯೆಹೋವನಿಗೆ ಶಕ್ತಿಯಿತ್ತೆಂದು ಈ ರೂಪಕಾಲಂಕಾರವು ವ್ಯಕ್ತಪಡಿಸುತ್ತದೆ.

*ಕಿಬ್ರೋತ್ ಹತಾವ* (ವ. 34): ಈ ಹೆಸರಿನ ಅರ್ಥ 'ಆಶೆಯ ಸಮಾಧಿಗಳು' ಅಥವಾ 'ಅತಿ ಆಸೆಯ ಸಮಾಧಿಗಳು' ಎಂದರ್ಥ.

**ಈ. ಪ್ರಶ್ನೆಗಳು**

1. ಜನಗಣತಿಯ ಕುರಿತು ದೇವರು ಮೋಶೆಗೆ ಮಾಡಿದ ಆಜ್ಞೆಗೂ ಹಾಗೂ ಸಿನಾಯಿ ಪರ್ವತದಲ್ಲಿದ್ದ ತಮ್ಮ ಪಾಳೆಯದಿಂದ ಇಸ್ರಾಯೇಲರು ಹೊರಡುವುದರ ನಡುವೆ ಎಷ್ಟು ಕಾಲ ಗತಿಸಿ ಹೋಗಿತ್ತು?

2. ಇಸ್ರಾಯೇಲರು ಸಿನಾಯಿ ಪರ್ವತದಲ್ಲಿದ್ದ ತಮ್ಮ ಪಾಳೆಯದಿಂದ ಯಾಕೆ ಹೊರಟರು?

3. ಅಧ್ಯಾಯ 11 ರಲ್ಲಿ ಎರಡು ಸಂಗತಿಗಳು ದೇವರಿಗೆ ಕೋಪವನ್ನೆಬ್ಬಿಸಿದವು. ಅವುಗಳು ಯಾವವು?

4. ಜನರ ದೂರುಗಳು ದೇವರಿಗೆ ಕೋಪವನ್ನೆಬ್ಬಿಸಿದಾಗ ಮೋಶೆಯು ಕಳವಳಗೊಂಡನು. ಮೋಶೆಯು ತನ್ನ ಸನ್ನಿವೇಶವನ್ನು ಹೇಗೆ ವಿವರಿಸಿದನು?

5. ಅಧಿಕ ಹೊರೆಯನ್ನು ಹೊತ್ತಿದ್ದ ಮೋಶೆಗೆ ದೇವರ ಪರಿಹಾರವೇನಾಗಿತ್ತು?

6. ಇಸ್ರಾಯೇಲರಿಗೆ ತಿನ್ನಲು ಮಾಂಸವನ್ನು ಒದಗಿಸುವೆನು ಎಂದು ದೇವರು ವಾಗ್ದಾನ ಮಾಡಿದಾಗ ಮೋಶೆಯು ಹೇಗೆ ಪ್ರತಿಕ್ರಿಯಿಸಿದನು?

7. ಎಲ್ಲಾ ದೇವಜನರ ಕುರಿತು ಮೋಶೆಗಿದ್ದ ಬಯಕೆಯೇನು?

8. ದೇವರು ಯಾಕೆ ಎಲ್ಲಾ ಜನರ ಮೇಲೆ ವ್ಯಾಧಿಯನ್ನು ಕಳುಹಿಸಿದನು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಅಧ್ಯಾಯ 11 ರಲ್ಲಿರುವ ದೇವರ, ಮೋಶೆಯ ಮತ್ತು ಜನರ ನಡುವಿನ ಸಂಬಂಧವನ್ನು ಅರಣ್ಯಕಾಂಡದ ಮೊದಲ ಹತ್ತು ಅಧ್ಯಾಯಗಳಲ್ಲಿರುವ ಸಂಬಂಧದೊಂದಿಗೆ ಹೋಲಿಸಿರಿ. ದಕ್ಷಿಣ ಭಾರತದಲ್ಲಿರುವ ಸಭೆಯು ಇದರಿಂದ ಏನನ್ನು ಕಲಿತುಕೊಳ್ಳಬಹುದು?

2. ಅಧ್ಯಾಯ 11 ರಲ್ಲಿ ದೇವರು ಮೋಶೆಗೆ ಎಪ್ಪತ್ತು ನಾಯಕರುಗಳನ್ನು ಒದಗಿಸಿದನು ಎಂಬುದನ್ನು ಕಾಣುತ್ತೇವೆ.

3. ಅದನ್ನು ಹೇಗೆ ಮಾಡಲಾಯಿತು?

4. ಈ ಕಥೆಯಿಂದ ನಾವು ಏನನ್ನು ಕಲಿತುಕೊಳ್ಳಬಹುದು?

**ಊ. ಸತ್ಯವೇದ ಅಧ್ಯಯನಗಳನ್ನು ಸಿದ್ಧಪಡಿಸಿರಿ**

ನೀವು ಈ ಅಧ್ಯಯನದಲ್ಲಿ ಕಲಿತ ವಿಷಯಗಳನ್ನು ಬಳಸಿಕೊಂಡು ನಿಮ್ಮ ಸಭೆಗಾಗಿ ಎರಡು ಸತ್ಯವೇದ ಅಧ್ಯಯನಗಳನ್ನು ಸಿದ್ಧಪಡಿಸಿರಿ. ನೀವು ಅದಕ್ಕೆ ಈ ಕೆಳಗಿನ ಶೀರ್ಷಿಕೆಗಳನ್ನು ಕೊಡಬಹುದು:

1. **'ಕಷ್ಟವನ್ನು ಎದುರಿಸುವುದು'**

2. '**ಅಧಿಕ ಹೊರೆ ಹೊತ್ತ ಸಭಾಪಾಲಕ**'

## ಅರಣ್ಯಕಾಂಡ ಅಧ್ಯಯನ 4: ಮಿರ್ಯಾಮಳು ಮತ್ತು ಆರೋನನು ಮೋಶೆಯನ್ನು ವಿರೋಧಿಸಿದ್ದು

### ಅ. ಪರಿಚಯ

ಅಧ್ಯಾಯ 11 ರಲ್ಲಿ, ಇಸ್ರಾಯೇಲರು ಅರಣ್ಯದಲ್ಲಿನ ತಮ್ಮ ಕಷ್ಟಗಳ ಕುರಿತು ಮೋಶೆಗೆ ದೂರಿದರು. ಅದರ ನಂತರದ ಅಧ್ಯಾಯದಲ್ಲಿ, ಸ್ವತಃ ಮೋಶೆಯ ಸ್ವಂತ ಸಹೋದರಿ ಮತ್ತು ಸಹೋದರ ಆತನ ನಾಯಕತ್ವವನ್ನು ವಿರೋಧಿಸಿದರು. ದೇವರೊಂದಿಗೆ ಆತನಿಗಿದ್ದ ವಿಶೇಷ ಸಂಬಂಧದ ಕುರಿತು ಅವರು ಅಸೂಯೆಪಟ್ಟರು. ದೇವರು ಮೂವರನ್ನೂ ದೇವದರ್ಶನ ಗುಡಾರದೊಳಗೆ ಕರೆದನು. ಅಲ್ಲಿ ಆತನು ಮೋಶೆಯು ತನ್ನ ನಂಬಿಗಸ್ತ ಸೇವಕನು ಮತ್ತು ಆತನೊಂದಿಗೆ ನಾನು ಮುಖಾಮುಖಿಯಾಗಿ ಮಾತನಾಡುತ್ತೇನೆ ಎಂಬುದನ್ನು ದೃಢೀಕರಿಸಿದನು. ದೇವರ ಕೋಪವು ಆರೋನ ಮತ್ತು ಮಿರ್ಯಾಮಳ ವಿರುದ್ಧ ಉರಿಯಿತು ಮತ್ತು ಆತನು ಮಿರ್ಯಾಮಳಿಗೆ ಕುಷ್ಠರೋಗವನ್ನು ಬರಮಾಡಿದನು. ಆದರೆ ಮೋಶೆಯು ಅವಳಿಗಾಗಿ ಪ್ರಾರ್ಥಿಸಿದಾಗ ದೇವರು ಅವಳನ್ನು ಗುಣಪಡಿಸಿದನು. ಮಿರ್ಯಾಮಳ ಏಳು ದಿನಗಳ ಬೇರ್ಪಡಿಸುವಿಕೆಯ ನಂತರ ಇಸ್ರಾಯೇಲರು ತಮ್ಮ ಪ್ರಯಾಣವನ್ನು ಪಾರಾನ್ ಮರುಭೂಮಿಗೆ ಮುಂದುವರೆಸಿದರು.

### ಆ. ಓದಿರಿ

ಅರಣ್ಯ. 12:1–16

### ಇ. ಟಿಪ್ಪಣಿ

*ಕೂಷ್ ದೇಶದ ಸ್ತ್ರೀಯನ್ನು ವಿವಾಹವಾಗಿದ್ದನು* (ವ. 1): ಕೂಷ್ ಎಂಬ ಹೆಸರುಳ್ಳ ಎರಡು ಸ್ಥಳಗಳಿದ್ದಂತೆ ತೋರುತ್ತದೆ, ಒಂದು ಆಫ್ರಿಕಾದಲ್ಲಿ (ಇಂದಿನ ಸುಡಾನ್/ಇಥಿಯೋಪಿಯ), ಇನ್ನೊಂದು ಅರೇಬಿಯದಲ್ಲಿ. ಮೋಶೆಯ ಪತ್ನಿಯಾದ ಚಿಪ್ಪೋರಳು ಮಿದ್ಯಾನಿನವಳಾಗಿದ್ದಳು. ಆ ದಿನಗಳಲ್ಲಿ ಸಿನಾಯಿ ಪರ್ಯಾಯ ದ್ವೀಪದ ಭಾಗಗಳನ್ನು ಮತ್ತು ಅರೇಬಿಯದ ಪಕ್ಕದ ಪ್ರಾಂತವನ್ನು ಮಿದ್ಯಾನ್ ಎಂದು ಕರೆಯಲಾಗುತ್ತಿತ್ತು. ಆದರೆ 'ಕೂಷ್ ದೇಶದ ಸ್ತ್ರೀ' ಚಿಪ್ಪೋರಳನ್ನು ಉಲ್ಲೇಖಿಸುತ್ತದೋ ಇಲ್ಲವೋ ನಮಗೆ ತಿಳಿಯದು. ಈ ವಾಕ್ಯದ ಹಿನ್ನಲೆಯನ್ನು ಗಮನಿಸುವಾಗ ಮೋಶೆಗೆ ಈಗ ಇನ್ನೊಬ್ಬ ಹೆಂಡತಿಯಿದ್ದಳು ಎಂಬುದನ್ನು ಸೂಚಿಸುವಂತೆ ತೋರುತ್ತದೆ.

*ದೀನನಾಗಿದ್ದನು* (ವ. 2): ಇದರ ಹಿಬ್ರೂ ಪದವು 'ಮಣಿದ' ಅಥವಾ 'ದುಃಖಿತ' ಎಂಬ ಅರ್ಥವನ್ನೂ ಸಹ ಕೊಡುತ್ತದೆ. ಈ ಅರ್ಥಗಳು ಈ ವಾಕ್ಯದ ಹಿನ್ನಲೆಗೆ ಸೂಕ್ತವಾಗಿವೆ; ಆದರೂ ಇಂಗ್ಲಿಷ್ ಮತ್ತು ಕನ್ನಡ ಅನುವಾದಗಳು 'ದೀನನು' ಎಂಬ ಪದವನ್ನು ಬಳಸಿವೆ.

*ನನ್ನ ಮನೆಯಲ್ಲೆಲ್ಲಾ* (ವ. 7): ಈ ಹೇಳಿಕೆಯು 'ಸಮಸ್ತ ಇಸ್ರಾಯೇಲರಲ್ಲಿ' ಎಂಬುದನ್ನು ಸೂಚಿಸುತ್ತದೆ.

*ಮುಖದ ಮೇಲೆ ಉಗುಳಿದರೆ* (ವ. 14): ಇದು ಬಹಿರಂಗವಾಗಿ ಖಂಡಿಸುವ ಒಂದು ಕ್ರಿಯೆಯಾಗಿತ್ತು (ಧರ್ಮೋ. 25:9; ಯೋಬ 30:10 ನ್ನು ಹೋಲಿಸಿರಿ).

*ಏಳು ದಿನ ನಾಚಿಕೆಯಿಂದ* (ವ. 14): ಒಬ್ಬ ವ್ಯಕ್ತಿಯು ಅಶುದ್ಧನಾದಾಗ ಏಳು ದಿನಗಳ ಕಾಲ ಎಲ್ಲರಿಂದ ಪ್ರತ್ಯೇಕವಾಗಿರಬೇಕಾದದ್ದು ಸಾಮಾನ್ಯವಾಗಿತ್ತು (ಹೋಲಿಸಿರಿ: ಯಾಜಕ. 14:8; 15:19; ಅರಣ್ಯ 19:11–12).

### ಈ. ಪ್ರಶ್ನೆಗಳು

1. ಮಿರ್ಯಾಮಳು ಮತ್ತು ಆರೋನನು ಮೋಶೆಯ ಹೆಂಡತಿಯ ನಿಮಿತ್ತವಾಗಿ ಆತನ ವಿರುದ್ಧ ಮಾತನಾಡಿದರು. ಆದರೆ ಅವರು ಮೋಶೆಗೆ ವಿರುದ್ಧವಾಗಿ ಮಾತನಾಡಿದ್ದರ ಹಿಂದಿನ ನಿಜವಾದ ಕಾರಣವೇನು?
2. ದೇವರು ಮೋಶೆಯೊಂದಿಗಿದ್ದ ತನ್ನ ಸಂಬಂಧವನ್ನು ಹೇಗೆ ವಿವರಿಸಿದನು?
3. ದೇವರು ಮಿರ್ಯಾಮಳನ್ನು ಹೇಗೆ ಶಿಕ್ಷಿಸಿದನು? ದೇವರು ಆರೋನನನ್ನು ಶಿಕ್ಷಿಸದೆ ಆಕೆಯನ್ನು ಮಾತ್ರ ಶಿಕ್ಷಿಸಿದ್ದಕ್ಕೆ ಕಾರಣವೇನಾಗಿರಬಹುದು?
4. ದೇವರ ಶಿಕ್ಷೆಗೆ ಮೋಶೆ ತೋರಿದ ಪ್ರತಿಕ್ರಿಯೆಯೇನು?
5. ಮಿರ್ಯಾಮಳು ಯಾಕೆ ಎಲ್ಲರಿಂದ ಪ್ರತ್ಯೇಕವಾಗಿ ಪಾಳೆಯದ ಹೊರಗೆ ಏಳು ದಿನಗಳ ಕಾಲ ಕಳೆಯಬೇಕಾಯಿತು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಇಡೀ ವಾಕ್ಯಭಾಗದ ಹಿನ್ನಲೆಯಲ್ಲಿ ವಚನ 3 ರ ಕುರಿತು ಆಲೋಚಿಸಿರಿ. 'ದೀನನು' ಎಂಬ ಅನುವಾದದ ಆಯ್ಕೆಗೆ ಕಾರಣ ಕೊಡಿರಿ. ನಂತರ 'ದುಃಖಿತ' ಎಂಬ ಅನುವಾದದ ಆಯ್ಕೆಗೆ ಕಾರಣ ಕೊಡಿರಿ.
2. ಈ ವಾಕ್ಯಭಾಗವು ಹೊಟ್ಟೆಕಿಚ್ಚಿನ ಕುರಿತಾದ ಒಂದು ಕಥೆಯಾಗಿದೆ. ಇಂದು ದಕ್ಷಿಣ ಭಾರತದಲ್ಲಿ ಜೀವಿಸುವ ನಾವು ಈ ಕಥೆಯಿಂದ ಏನನ್ನು ಕಲಿತುಕೊಳ್ಳಬಹುದು?
3. ಈ ವಾಕ್ಯಭಾಗದಲ್ಲಿ ಮೋಶೆಯನ್ನು ಅತ್ಯಂತ ಸುಂದರವಾಗಿ ವರ್ಣಿಸಲಾಗಿದೆ. ಮೋಶೆಯ ಕುರಿತಾದ ಈ ವರ್ಣನೆಯನ್ನು ಇಂದು ದಕ್ಷಿಣ ಭಾರತದಲ್ಲಿರುವ ದೇವಸೇವಕರುಗಳಿಗೆ ಒಂದು ಮಾದರಿಯಾಗಿ ಹೇಗೆ ಬಳಸಬಹುದು?

**ಊ. ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ**

ನೀವು ಈ ಅಧ್ಯಯನದಲ್ಲಿ ಕಲಿತಿರುವ ಸಂಗತಿಯನ್ನು ಬಳಸಿಕೊಂಡು **'ಮೋಶೆಯಂತಹ ಒಬ್ಬ ನಾಯಕ'** ಎಂಬ ಸತ್ಯವೇದ ಅಧ್ಯಯನವನ್ನು ನಿಮ್ಮ ಸಭೆಗಾಗಿ ಸಿದ್ಧಪಡಿಸಿರಿ.

**ಅರಣ್ಯಕಾಂಡ ಅಧ್ಯಯನ 5: ಕಾನಾನ್ ದೇಶದ ಪರೀಕ್ಷಣೆ; ಜನರ ದಂಗೆ**

**ಅ. ಪರಿಚಯ**

ಇಸ್ರಾಯೇಲ್ ಜನರು ವಾಗ್ದಾನ ದೇಶದ ದಕ್ಷಿಣದಲ್ಲಿದ್ದ ಪಾರಾನಿನ ಮರುಭೂಮಿಯಲ್ಲಿ ತಮ್ಮ ಪಾಳೆಯವನ್ನು ಹಾಕಿಕೊಂಡಿದ್ದರು (ಅರಣ್ಯ. 12:16). ಮೋಶೆಯು ಹನ್ನೆರಡು ಪುರುಷರನ್ನು ಆರಿಸಿಕೊಂಡು ಅವರನ್ನು ದಕ್ಷಿಣದಿಂದ ಉತ್ತರದವರೆಗೆ (ಸುಮಾರು 400 ಕಿ. ಮೀ. ದೂರದವರೆಗೆ) ಕಾನಾನ್ ದೇಶವನ್ನು ಪರೀಕ್ಷಿಸಲು ಕಳುಹಿಸಬೇಕೆಂದು ದೇವರು ಆಜ್ಞಾಪಿಸಿದನು. ಆ ಪುರುಷರು 40 ದಿನಗಳ ಕಾಲ ಸಂಚರಿಸಿದರು. ಅವರು ಅಲ್ಲಿಂದ ಹಿಂತಿರುಗಿದಾಗ ಆ ದೇಶದ ಫಲವತ್ತತೆಯ ಕುರಿತು ಮತ್ತು ನಿವಾಸಿಗಳ ಕುರಿತು ತಮ್ಮ ವರದಿಯನ್ನು ಒಪ್ಪಿಸಿದರು. ಜನರು ಅವರ ವರದಿಯನ್ನು ಕೇಳಿದಾಗ ಮೋಶೆ ಮತ್ತು ಆರೋನರ ವಿರುದ್ಧ ದಂಗೆ ಎದ್ದರು. ಇದು ದೇವರ ಕೋಪವು ಜನರ ಮೇಲೆ ಉರಿಯುವಂತೆ ಮಾಡಿತು ಮತ್ತು ಆತನು ಅವರನ್ನು ನಾಶಮಾಡಬೇಕೆಂದಿದ್ದನು. ಆದರೆ ಮೋಶೆಯು ಅವರಿಗಾಗಿ ಬೇಡಿಕೊಂಡನು. ದೇವರು ಮೋಶೆಯ ಪ್ರಾರ್ಥನೆಯನ್ನು ಕೇಳಿ ಜನರ ಪ್ರಾಣವನ್ನು ಉಳಿಸಿದನು. ಅದರ ಬದಲಾಗಿ ಅವರು 40 ವರ್ಷಗಳ ಕಾಲ ಅರಣ್ಯದಲ್ಲಿ ಕುರುಬರಂತೆ ತಮ್ಮ ಜೀವನವನ್ನು ಕಳೆಯಬೇಕೆಂದು ಶಿಕ್ಷೆಯನ್ನು ಕೊಟ್ಟನು. ನಂತರ ಇಸ್ರಾಯೇಲರು ವಾಗ್ದಾನ ದೇಶದ (ದಕ್ಷಿಣ ಅಂಚಿನ) ಗುಡ್ಡಗಾಡು ಪ್ರದೇಶದಲ್ಲಿ ವಾಸವಾಗಿದ್ದ ಅಮಾಲೇಕ್ಯರ ವಿರುದ್ಧ ಯುದ್ಧ ಮಾಡಲು ತೀರ್ಮಾನಿಸಿದರು. ಆದರೆ ಅವರು ಯುದ್ಧದಲ್ಲಿ ಸೋತು ಹೊರ್ಮಾದವರೆಗೂ ಬೆನ್ನಟ್ಟಲ್ಪಟ್ಟರು.

**ಆ. ಓದಿರಿ**

ಅರಣ್ಯ. 13:1–3, 26–33; 14:1–45

**ಇ. ಟಿಪ್ಪಣಿ**

*ಕಾನಾನ್ ದೇಶವನ್ನು ಪರೀಕ್ಷಿಸುವ ಹಾಗೆ ನೀನು ಜನರನ್ನು ಕಳುಹಿಸು* (13:2): ಧರ್ಮೋ. 1:22–23 ನ್ನು ಇದರೊಂದಿಗೆ ಹೋಲಿಸಿರಿ, ಅಲ್ಲಿ ಕಾನಾನ್ ದೇಶವನ್ನು ಪರೀಕ್ಷಿಸುವುದಕ್ಕಾಗಿ ಮೋಶೆಯ ಬಳಿಯಲ್ಲಿ ಜನರು ಮನವಿ ಸಲ್ಲಿಸಿದ್ದರು. ಹಾಗಾಗಿ ದೇವರು ಜನರ ಮನವಿಗೆ ಸ್ಪಂದಿಸಿ ಕಾನಾನ್ ದೇಶದ ಅನ್ವೇಷಣೆಗಾಗಿ ಚಾಲನೆ ನೀಡಲು ಮೋಶೆಗೆ ಆಜ್ಞೆ ಕೊಟ್ಟನು.

*ಅನಾಕನ ಮಕ್ಕಳನ್ನು ಅಲ್ಲಿ ನಾವು ಕಂಡೆವು* (ವ. 29): ಅನಾಕರು ಎತ್ತರವುಳ್ಳ ಜನರಾಗಿದ್ದರು (*ಅನಾಕ್* ಎಂಬ ಹಿಬ್ರೂ ಪದದ ಅರ್ಥ 'ಉದ್ದ-ಕುತ್ತಿಗೆಯುಳ್ಳ' ಅಥವಾ 'ದೈತ್ಯದೇಹಿ/ರಾಕ್ಷಸ' ಎಂಬುದಾಗಿದೆ).

*ಅಲ್ಲಿ ನೆಫೀಲಿಯರನ್ನು ಅಂದರೆ ರಾಕ್ಷಸಾಕಾರದ ಸಂತಾನವಾದ ಅನಾಕನ ಮಕ್ಕಳನ್ನು ಕಂಡೆವು* (ವ. 33): ನೆಫಿಲಿಮ್ ಎಂಬ ಹಿಬ್ರೂ ಪದದ ಅರ್ಥವು ಸ್ಪಷ್ಟವಾಗಿಲ್ಲ. ಇಲ್ಲಿ ಅರಣ್ಯಕಾಂಡದಲ್ಲಿ ಅದು 'ದೈತ್ಯದೇಹಿಗಳನ್ನು ಅಥವಾ ರಾಕ್ಷಸರನ್ನು' ಉಲ್ಲೇಖಿಸುತ್ತದೆ. ಅದನ್ನು ಆದಿ. 6:4 ರಲ್ಲಿಯೂ ಕಾಣಬಹುದು (ಅದು ಜಲಪ್ರಳಯಕ್ಕೂ ಮುಂಚೆ ನಡೆದದ್ದು).

*ಕಾಲೇಬನು* (ವ. 30): ಆತನು ಸ್ಥಳೀಯ ಇಸ್ರಾಯೇಲನಾಗಿರಲಿಲ್ಲ ಬದಲಾಗಿ ಏದೋಮಿನಿಂದ ಬಂದ ಕುಟುಂಬವಾದ ಕೆನಿಜ್ಜೀಯರಲ್ಲಿ ಜನಿಸಿದ್ದನು (ನೋಡಿರಿ 32:12). ಹೇಗಿದ್ದರೂ ಕಾಲೇಬನು ಯೂದ ಕುಲಕ್ಕೆ ಸಂಬಂಧಪಟ್ಟಿದ್ದನು (ನೋಡಿರಿ 13:6) ಮತ್ತು ನಂತರದ ಸಮಯದಲ್ಲಿ ಆತನಿಗೆ ಹೆಬ್ರೋನ್ ಕೊಡಲಾಯಿತು, ಅದು ಯೂದ ಕುಲಕ್ಕೆ ಸಂಬಂಧಪಟ್ಟ ಪ್ರಾಂತವಾಗಿತ್ತು (ನೋಡಿರಿ ಯೆಹೋ. 15:13).

*ನೂನನ ಮಗ ಯೆಹೋಶುವನು* (14:6): ಆತನು ಮೋಶೆಯ ಸಹಾಯಕನಾಗಿದ್ದನು (ನೋಡಿರಿ 11:28). ಯೆಹೋಶುವನು ನಂತರ ಮೋಶೆಯ ಉತ್ತರಾಧಿಕಾರಿಯಾಗಿ ಜನರನ್ನು ಯೋರ್ದಾನ್ ನದಿಯ ಆಚೆಗೆ ವಾಗ್ದಾನ ದೇಶದೊಳಗೆ ನಡೆಸಿದನು. ಆತನ ಮೂಲ ಹೆಸರು *ಹೋಶೇಯ* ಅಂದರೆ 'ರಕ್ಷಣೆ' ಎಂಬುದಾಗಿತ್ತು, ಆದರೆ ಮೋಶೆಯು ಅದನ್ನು *ಯೆಹೋಶುವ* ಅಂದರೆ 'ಯೆಹೋವನು ರಕ್ಷಿಸುವನು' ಎಂಬುದಾಗಿ ಬದಲಾಯಿಸಿದನು (ನೋಡಿರಿ 13:16).

*ನಿನ್ನನ್ನು ಅವರಿಗಿಂತ ದೊಡ್ಡದಾದ ಮತ್ತು ಬಲವುಳ್ಳ ಜನಾಂಗವನ್ನಾಗಿ ಮಾಡುವೆನು* (ವ. 12): ಈಗ ಎರಡನೆಯ ಬಾರಿ ದೇವರು ಮೋಶೆಗೆ ಈ ಸಂದೇಶವನ್ನು ತಿಳಿಸುತ್ತಿದ್ದಾನೆ, ವಿಮೋ. 32:10 ನ್ನು ಹೋಲಿಸಿರಿ.

14:37: ಆ ಹತ್ತು ಕೆಟ್ಟ ಗೂಢಾಚಾರರು ತಕ್ಷಣವಾಗಿ ನ್ಯಾಯತೀರ್ಪಿಗೆ ಗುರಿಯಾಗಿ ಒಂದು ವ್ಯಾಧಿಯಿಂತ ಸತ್ತರು.

**ಈ. ಪ್ರಶ್ನೆಗಳು**

1. ಕಾನಾನ್ ದೇಶವನ್ನು ಪರೀಕ್ಷಿಸಲು ಎಷ್ಟು ಮಂದಿ ಕಳುಹಿಸಲ್ಪಟ್ಟರು ಮತ್ತು ಅವರುಗಳು ಯಾರು?

2. ಅವರು ತಮ್ಮ ವರದಿಯೊಂದಿಗೆ ಹಿಂತಿರುಗಿದಾಗ ತಾವು ಕಂಡ ದೇಶವನ್ನು ಹೇಗೆ ವರ್ಣಿಸಿದರು? ಅವರ ಸಲಹೆಗಳು ಏನಾಗಿದ್ದವು?

3. ಇಸ್ರಾಯೇಲರು ಯಾಕೆ ಈಜಿಪ್ಟಿಗೆ ಹಿಂತಿರುಗಬೇಕೆಂದು ಬಯಸಿದರು?

4. ತಮ್ಮನ್ನು ಈಜಿಪ್ಟಿಗೆ ಹಿಂದಿರುಗೆ ನಡೆಸಲು ಒಬ್ಬ ಹೊಸ ನಾಯಕನನ್ನು ಆರಿಸಿಕೊಳ್ಳಲು ಜನರು ಬಯಸಿದಾಗ ಇಸ್ರಾಯೇಲ್ ನಾಯಕರುಗಳು ಹೇಗೆ ಪ್ರತಿಕ್ರಿಯಿಸಿದರು?

5. ಯೆಹೋಶುವ ಮತ್ತು ಕಾಲೇಬರು ತಿಳಿಸಿದ ಸಂದೇಶಕ್ಕೆ ಇಸ್ರಾಯೇಲರು ಹೇಗೆ ಪ್ರತಿಕ್ರಿಯಿಸಿದರು?

6. ದಂಗೆಕೋರ ಇಸ್ರಾಯೇಲರಿಗೆ ದೇವರು ಏನು ಮಾಡಲು ಬಯಸಿದನು?

7. ಮೋಶೆಯು ಯೆಹೋವನೊಂದಿಗೆ ಬೇಡಿಕೊಂಡಾಗ ಆತನು ಮಾಡಿದ ತರ್ಕಗಳೇನು?

8. ಯೆಹೋವನು ಅಂತಿಮವಾಗಿ ಇಸ್ರಾಯೇಲರ ಕುರಿತು ಯಾವ ತೀರ್ಮಾನವನ್ನು ಮಾಡಿದನು?

9. ಇಸ್ರಾಯೇಲರು ಯಾಕೆ ಅಮಾಲೇಕ್ಯರ ಹಾಗೂ ಕಾನಾನ್ಯರ ವಿರುದ್ಧ ಸೋತರು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ಕಥೆಯಲ್ಲಿರುವ ಎರಡು 'ಮಹಾಪುರುಷರು' ಕಾಲೇಬ್ ಮತ್ತು ಯೆಹೋಶುವರಾಗಿದ್ದರು. ಇಂದು ದಕ್ಷಿಣ ಭಾರತದಲ್ಲಿರುವ ಕ್ರೈಸ್ತ ನಾಯಕರುಗಳಾದ ನಾವು ಅವರ ನಡತೆ ಮತ್ತು ಮನೋಭಾವನೆಯಿಂದ ಏನನ್ನು ಕಲಿತುಕೊಳ್ಳಬಹುದು?

2. ಈ ಕಥೆಯಲ್ಲಿರುವ ಮೂರನೆಯ 'ಮಹಾಪುರುಷ' ಮೋಶೆಯಾಗಿದ್ದಾನೆ. ಇಂದು ದಕ್ಷಿಣ ಭಾರತದಲ್ಲಿರುವ ಕ್ರೈಸ್ತ ನಾಯಕರುಗಳಾದ ನಾವು ಆತನ ನಡತೆ ಮತ್ತು ಮನೋಭಾವನೆಯಿಂದ ಏನನ್ನು ಕಲಿತುಕೊಳ್ಳಬಹುದು?

**ಊ. ಸತ್ಯವೇದ ಅಧ್ಯಯನಗಳನ್ನು ಸಿದ್ಧಪಡಿಸಿರಿ**

ನೀವು ಈ ಅಧ್ಯಯನದಲ್ಲಿ ಕಲಿತಿರುವ ಸಂಗತಿಯನ್ನು ಬಳಸಿಕೊಂಡು ಎರಡು ಸತ್ಯವೇದ ಅಧ್ಯಯನಗಳನ್ನು ನಿಮ್ಮ ಸಭೆಗಾಗಿ ಸಿದ್ಧಪಡಿಸಿರಿ. ನೀವು ಅವುಗಳಿಗೆ ಈ ಶೀರ್ಷಿಕೆಗಳನ್ನು ಕೊಡಬಹುದು:

1. 'ಕಾಲೇಬ್ ಮತ್ತು ಯೆಹೋಶುವ – ಎರಡು ಮಾದರಿ ವ್ಯಕ್ತಿಗಳು'

2. 'ಮೋಶೆ – ಒಬ್ಬ ಮಾದರಿ ವ್ಯಕ್ತಿ'

**ಅರಣ್ಯಕಾಂಡ ಅಧ್ಯಯನ 6: ಬಂಡೆಯೊಳಗಿಂದ ನೀರು; ಆರೋನನ ಮರಣ**

**ಅ. ಪರಿಚಯ**

ಈಜಿಪ್ಟಿನಿಂದ ನಿರ್ಗಮನದ ನಂತರ ನಲವತ್ತನೆಯ ವರ್ಷದ ಪ್ರಾರಂಭದಲ್ಲಿ ಇಸ್ರಾಯೇಲರು ವಾಗ್ದಾನ ದೇಶದ ದಕ್ಷಿಣ ದಿಕ್ಕಿನಲ್ಲಿದ್ದ ಕಾದೇಶ್ ಬರ್ನಿಯದ ಬಳಿಯಲ್ಲಿ ಮತ್ತೊಮ್ಮೆ ಪಾಳೆಯವನ್ನು ಹಾಕಿದರು. ಇಸ್ರಾಯೇಲರ ಮೊದಲ ಸಂತತಿಯು ಅರಣ್ಯದಲ್ಲಿ ನಾಶವಾಗಿತ್ತು ಮತ್ತು ಈಗ ಒಂದು ಹೊಸ ಸಂತತಿಯು ಅವರ ಸ್ಥಾನದಲ್ಲಿತ್ತು. ಇಲ್ಲಿ ಮಿರ್ಯಾಮಳು ಸತ್ತು ಹೂಣಲ್ಪಟ್ಟಳು. ಆದರೆ ಎಲ್ಲಿಯೂ ಕುಡಿಯಲು ನೀರು ಸಿಗಲಿಲ್ಲ. ಹಾಗಾಗಿ ಮತ್ತೊಮ್ಮೆ ಜನರು ಈಜಿಪ್ಟ್ ದೇಶದೊಳಗಿಂದ ನೀರು ಮತ್ತು ಆಹಾರವಿಲ್ಲದ ಈ ಕೆಟ್ಟ ಸ್ಥಳಕ್ಕೆ ಕರೆತಂದರೆಂದು ಮೋಶೆ ಮತ್ತು ಆರೋನರ ವಿರುದ್ಧ ಜಗಳವಾಡಿದರು. ಮೋಶೆ ಮತ್ತು ಆರೋನರು ದೇವರ ಸಹಾಯಕ್ಕಾಗಿ ಮೊರೆ ಹೋದರು. ಅವರು ಬಂಡೆಯೊಂದಿಗೆ ಮಾತನಾಡಬೇಕು ಆಗ ದೇವರು ಜನರಿಗೂ ಮತ್ತು ಅವರ ಜಾನುವಾರುಗಳಿಗೂ ನೀರನ್ನು ಒದಗಿಸುವನೆಂದು ದೇವರು ಅವರಿಗೆ ಹೇಳಿದನು. ಆದರೆ ಮೋಶೆ ಮತ್ತು ಆರೋನರು ದೇವರ ಆಜ್ಞೆಯನ್ನು ಪಾಲಿಸುವುದಿಲ್ಲ. ಹಾಗಾಗಿ ದೇವರು ಅವರನ್ನು ಶಿಕ್ಷಿಸಿದನು: ಇಸ್ರಾಯೇಲರನ್ನು ವಾಗ್ದಾನ ದೇಶದೊಳಗೆ ಕರೆತರಲು ಆತನು ಅವರಿಗೆ ಅನುಮತಿಸಲಿಲ್ಲ. ಕೆಲವು ತಿಂಗಳುಗಳ ನಂತರ ಆರೋನನು ಹೋರ್ ಬೆಟ್ಟದ ಮೇಲೆ ತೀರಿಕೊಂಡನು.

**ಆ. ಓದಿರಿ**

ಅರಣ್ಯ. 20:1–13, 22–29

**ಇ. ಟಿಪ್ಪಣಿ**

*ಮೊದಲನೆಯ ತಿಂಗಳಲ್ಲಿ* (ವ. 1): ಇಲ್ಲಿ ವರ್ಷವು ತಿಳಿಸಲಾಗಿಲ್ಲ. ಆದರೆ ವ. 22–29 ಮತ್ತು 33:38 ರೊಂದಿಗೆ ಹೋಲಿಸುವಾಗ ಈ ಅಧ್ಯಾಯವು ನಿರ್ಗಮನದ ನಂತರದ ನಲವತ್ತನೆಯ ವರ್ಷದಲ್ಲಿ ಪ್ರಾರಂಭಿಸುತ್ತದೆ ಎಂಬುದನ್ನು ತಿಳಿಯಬಹುದು.

*ಜಿನ್ ಎಂಬ ಮರುಭೂಮಿಗೆ ... ಕಾದೇಶಿನಲ್ಲಿ* (ವ. 1): ಕಾನಾನಿನ ದಕ್ಷಿಣದಲ್ಲಿ ಜಿನ್ ಎಂಬ ಮರುಭೂಮಿಯಿತ್ತು. ಈ ಪ್ರಾಂತದ ದಕ್ಷಿಣ ಭಾಗದಲ್ಲಿ (ಆಗಾಗ್ಗೆ ಕಾದೇಶ್ ಬರ್ನಿಯ ಎಂದು ಕರೆಯಲಾಗುವ) ಕಾದೇಶ್ ನೆಲೆಸಿತ್ತು; 13:26 ನ್ನು ಹೋಲಿಸಿರಿ, ಅಲ್ಲಿ ಅದು ಪಾರಾನಿನ ಮರುಭೂಮಿಯಲ್ಲಿ ನೆಲೆಸಿರುವುದನ್ನು ಕಾಣುತ್ತೇವೆ. ಅದು ಜಿನ್‌ನ ದಕ್ಷಿಣ ಭಾಗದ ಹೆಸರಾಗಿತ್ತು (***ನಿರ್ಗಮನ*** ಎಂಬ ನಕ್ಷೆಯನ್ನು ನೋಡಿರಿ). ಈಗ ಒಂದು ತಲೆಮಾರಿನ ನಂತರ ಇಸ್ರಾಯೇಲರು ತಮ್ಮ ಮಹಾ ದಂಗೆಯ ಸ್ಥಳಕ್ಕೆ ಹಿಂದಿರುಗಿದ್ದಾರೆ (ನೋಡಿರಿ ಅಧ್ಯಾಯಗಳು 13–14).

*ಆಗ ಮೋಶೆಯು ಯೆಹೋವನ ಸನ್ನಿಧಿಯಿಂದ ಹೊರಟು ... ಕೋಲನ್ನು ತೆಗೆದುಕೊಂಡನು* (ವ. 9): ವ. 17:10 ನ್ನು ಹೋಲಿಸಿರಿ, ಅಲ್ಲಿ ಮೋಶೆಯು ಆರೋನನ ಕೋಲನ್ನು ದಂಗೆಯ ಸಂಕೇತವಾಗಿ ಸಾಕ್ಷಿಯ ಮುಂದೆ ಇಡಬೇಕೆಂದು ದೇವರು ಹೇಳಿದನು.

*ಮೆರೀಬಾ* (ವ. 13): ಹಿಬ್ರೂ ಭಾಷೆಯಲ್ಲಿ ಈ ಪದದ ಅರ್ಥವು 'ಜಗಳ' ಎಂಬುದಾಗಿದೆ. ವಿಮೋಚನಕಾಂಡದಲ್ಲಿ ಸಿನಾಯಿ ಪರ್ವತದ ಬಳಿಯಲ್ಲಿರುವ ರೆಫಿದಿಮ್‌ನ ಕುರಿತು ಇದೇ ಹೆಸರನ್ನು ಬಳಸಲಾಗಿದೆ. ಅಲ್ಲಿ ಮೂವತ್ತೊಂಭತ್ತು ವರ್ಷಗಳ ಹಿಂದೆ ದೇವರು ಮೋಶೆಗೆ ಬಂಡೆಯನ್ನು ಹೊಡೆಯಲು ಹೇಳಿದನು, ಆಗ ಜನರಿಗೆ ಕುಡಿಯಲು ನೀರು ಹೊರಗೆ ಬಂದಿತು (ನೋಡಿರಿ ವಿಮೋ. 17:1–7).

*ಎದೋಮ್ ದೇಶದ ಮೇರೆಯ ಮೇಲಿರುವ ಹೋರ್ ಎಂಬ ಬೆಟ್ಟದಲ್ಲಿ* (ವ. 23): ಹೋರ್ ಎಂಬುದು ಕಾದೇಶ್ ಬರ್ನಿಯದ ಸಮೀಪವಿರುವ ಬೆಟ್ಟವಾಗಿದೆ. ಎದೋಮ್‌ನ್ನು ಗುರುತಿಸಲು ***ನಿರ್ಗಮನ*** ಎಂಬ ನಕ್ಷೆಯನ್ನು ನೋಡಿರಿ.

**ಈ. ಪ್ರಶ್ನೆಗಳು**

1. ಕಾದೇಶ್ ಬರ್ನಿಯದಲ್ಲಿ ಜನರು ಯಾವುದರ ಕುರಿತಾಗಿ ದೂರಿದರು?
2. ಮೋಶೆ ಮತ್ತು ಆರೋನರು ಏನು ಮಾಡಬೇಕೆಂದು ದೇವರು ಹೇಳಿದನು ಮತ್ತು ಅದರ ಬದಲಾಗಿ ಅವರು ಏನು ಮಾಡಿದರು?
3. ಮೋಶೆ ಮತ್ತು ಆರೋನರ ನಡವಳಿಕೆಯ ಕುರಿತು ದೇವರ ತೀರ್ಪು ಏನಾಗಿತ್ತು ಮತ್ತು ಆತನು ಅವರನ್ನು ಯಾಕೆ ಶಿಕ್ಷಿಸಿದನು?
4. ಆರೋನನ ಮರಣದ ಸಮಯದಲ್ಲಿನ ಸನ್ನಿವೇಶವನ್ನು ವಿವರಿಸಿರಿ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಮೋಶೆ ಮತ್ತು ಆರೋನರು ಮೆರೀಬಾದಲ್ಲಿ ದೇವರ ಆಜ್ಞೆಯನ್ನು ಪಾಲಿಸದಿದ್ದಕ್ಕೆ ಕಾರಣಗಳೇನಾಗಿರಬಹುದು?

2. ಇಂದು ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಮೆರೀಬಾದ ಕಥೆಯಿಂದ ಏನನ್ನು ಕಲಿತುಕೊಳ್ಳಬಹುದು?
3. ನಾವು ಅರಣ್ಯ. 20:22–29 ರಲ್ಲಿರುವ ಆರೋನನ ಮರಣದ ಕಥೆಯಿಂದ ಏನನ್ನಾದರೂ ಕಲಿತುಕೊಳ್ಳಬಹುದು ಎಂದು ನೀವು ಭಾವಿಸುತ್ತೀರೋ? ಹೌದಾದರೆ, ಏನನ್ನು ಕಲಿತುಕೊಳ್ಳಬಹುದು?

**ಊ. ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ**

ನೀವು ಈ ಅಧ್ಯಯನದಲ್ಲಿ ಕಲಿತಿರುವ ಸಂಗತಿಯನ್ನು ಬಳಸಿಕೊಂಡು **'ದೇವರ ಮೇಲೆ ಭರವಸೆಯಿಟ್ಟು ಆತನಿಗೆ ವಿಧೇಯನಾಗು'** ಎಂಬ ಸತ್ಯವೇದ ಅಧ್ಯಯನವನ್ನು ನಿಮ್ಮ ಸಭೆಗಾಗಿ ಸಿದ್ಧಪಡಿಸಿರಿ.

**ಅರಣ್ಯಕಾಂಡ ಅಧ್ಯಯನ 7: ಆರಾದಿನ ನಾಶನ; ಕಂಚಿನ ಸರ್ಪ**

**ಅ. ಪರಿಚಯ**

21 ನೇ ಅಧ್ಯಾಯದಲ್ಲಿರುವ ಮೊದಲ ಎರಡು ಕಥೆಗಳೂ ಸಹ ಈಜಿಪ್ಟಿನಿಂದ ನಿರ್ಗಮನದ ನಂತರ ನಲವತ್ತನೆಯ ವರ್ಷದಲ್ಲಿ ನಡೆದವು. ಇಸ್ರಾಯೇಲರು ಇನ್ನೂ ಹೋರ್ ಬೆಟ್ಟದ ಬಳಿಯಲ್ಲಿ ಪಾಳೆಯವನ್ನು ಹಾಕಿಕೊಂಡಿದ್ದಾಗ ಒಬ್ಬ ಕಾನಾನಿನ ಅರಸನು ಅವರ ಮೇಲೆ ದಾಳಿ ಮಾಡಿದನು. ಆತನು ಆರಾದ್‌ನಲ್ಲಿ ಆಳುತ್ತಿದ್ದನು. ಆರಾದ್ ಪಟ್ಟಣವು ವಾಗ್ದಾನ ದೇಶದ ದಕ್ಷಿಣದ ಗಡಿಯಲ್ಲಿನ ನೆಗೆವ್ ಅರಣ್ಯದಲ್ಲಿತ್ತು. ದೇವರು ವೈರಿಗಳನ್ನು ತಮ್ಮ ಕೈಗೆ ಒಪ್ಪಿಸದ ಹೊರತು ತಮಗೆ ಯಾವ ಜಯವೂ ಸಿಗಲಾರದು ಎಂಬುದನ್ನು ಇಷ್ಟರೊಳಗಾಗಿ ಇಸ್ರಾಯೇಲರು ಕಲಿತಿದ್ದರು. ಹಾಗಾಗಿ ಅವರು ದೇವರಿಗೆ ಪ್ರಾರ್ಥಿಸಿ ಆರಾದಿನ ಎಲ್ಲಾ ಪಟ್ಟಣಗಳನ್ನು ನಾಶಮಾಡುವೆವೆಂದು ಪ್ರಮಾಣ ಮಾಡಿದರು. ದೇವರು ಅವರ ಪ್ರಾರ್ಥನೆಯನ್ನು ಕೇಳಿ ಅವರಿಗೆ ಜಯವನ್ನು ಅನುಗ್ರಹಿಸಿದನು.

ಮೃತ ಸಮುದ್ರದ ದಕ್ಷಿಣದಲ್ಲಿದ್ದ ಏದೋಮ್ ದೇಶದ ಅರಸನು ತನ್ನ ಪ್ರಾಂತವನ್ನು ಇಸ್ರಾಯೇಲರು ಹಾದು ಹೋಗಲು ಅನುಮತಿಸಿರಲಿಲ್ಲ (ಈ ಕಥೆಯನ್ನು ಅರಣ್ಯ. 20:14–21 ರಲ್ಲಿ ಕಾಣಬಹುದು). ಹಾಗಾಗಿ ಮೋಶೆಯು ಏದೋಮಿನ ದಕ್ಷಿಣಕ್ಕೆ ಕೆಂಪು ಸಮುದ್ರದ ಕಡೆಗೆ ಇಸ್ರಾಯೇಲರನ್ನು ನಡೆಸಿದನು. ಆದರೆ ಜನರು ತಾಳ್ಮೆಯಿಲ್ಲದವರಾಗಿ ತಮಗೆ ಬಂದ ಕಷ್ಟಗಳ ನಿಮಿತ್ತ ದೇವರನ್ನು ಮತ್ತು ಮೋಶೆಯನ್ನು ದೂಷಿಸಿದರು. ಆಗ ದೇವರು ಅವರ ನಡುವೆ ವಿಷಸರ್ಪಗಳನ್ನು ಕಳುಹಿಸಿದನು ಮತ್ತು ಆ ವಿಷಸರ್ಪಗಳಿಂದ ಕಚ್ಚಲ್ಪಟ್ಟ ಅನೇಕರು ಸತ್ತು ಹೋದರು. ಇಸ್ರಾಯೇಲರು ತಮ್ಮ ಮೇಲೆ ತಾವೇ ಈ ಶಾಪವನ್ನು ತಂದುಕೊಂಡರೆಂಬುದನ್ನು ಮನಗಂಡು ಯೆಹೋವನ ಕಡೆಗೆ ತಿರುಗಿದರು. ದೇವರು ಅವರಿಗಾಗಿ ಒಂದು ಪರಿಹಾರವನ್ನು ಒದಗಿಸಿದನು – ಒಂದು ಕಂಚಿನ ಸರ್ಪ.

**ಆ. ಓದಿರಿ**

ಅರಣ್ಯ. 21:1–9

**ಇ. ಟಿಪ್ಪಣಿ**

*ನೆಗೆಬಿನಲ್ಲಿ* (ವ. 1): ಇದು ಪೂರ್ವದಲ್ಲಿ ಮೃತ ಸಮುದ್ರ ಹಾಗೂ ಪಶ್ಚಿಮದಲ್ಲಿ ಮೆಡಿಟೆರೇನಿಯನ್ ಸಮುದ್ರದ ನಡುವೆ ಇದ್ದ ಮರುಭೂಮಿಯಾಗಿದೆ. ಇದು ಕಾನಾನಿನ ದಕ್ಷಿಣದಲ್ಲಿದೆ. ಈ ಹೆಸರಿನ ಅರ್ಥ 'ಒಣಗಿದ' ಮತ್ತು 'ದಕ್ಷಿಣ' ಎಂಬುದಾಗಿದೆ.

*ಸಂಪೂರ್ಣವಾಗಿ ನಾಶಮಾಡುವೆವು* (ವ. 2): ಈ ರೀತಿಯ ಹಿಬ್ರೂ ಹೇಳಿಕೆಯು ಸೂಚಿಸುವುದೇನೆಂದರೆ, ಒಂದು ಸಂಗತಿ ಅಥವಾ ಒಬ್ಬ ವ್ಯಕ್ತಿಯು ಸಂಪೂರ್ಣವಾಗಿ ನಾಶಮಾಡಲ್ಪಡುವಾಗ ಅದು ದೇವರಿಗೆ ಒಪ್ಪಿಸಲ್ಪಟ್ಟಿದೆ ಎಂಬುದಾಗಿದೆ.

*ಹೊರ್ಮಾ* (ವ. 3): ಈ ಹೆಸರಿನ ಅರ್ಥವು 'ನಾಶನಕ್ಕೆ ಸಮರ್ಪಿತವಾದ' ಎಂಬುದಾಗಿದೆ.ಅಮಾಲೇಕ್ಯರ ಹಾಗೂ ಕಾನಾನ್ಯರ ವಿರುದ್ಧ ಇಸ್ರಾಯೇಲರಿಗಾದ ಅಪಜಯದ ಹಿನ್ನೆಲೆಯಲ್ಲಿ ಈ ಸ್ಥಳವನ್ನು ಈ ಹಿಂದೆಯೂ ಪ್ರಸ್ತಾಪಿಸಲಾಗಿದೆ (ಅರಣ್ಯ. 14:40–45 ನ್ನು ನೋಡಿರಿ).

**ಈ. ಪ್ರಶ್ನೆಗಳು**

1. ಆರಾದನ್ನು ಹೊರ್ಮಾ ಎಂಬುದಾಗಿ ಯಾಕೆ ಹೆಸರಿಸಲಾಯಿತು?
2. ಯೆಹೋವನು ಯಾಕೆ ಇಸ್ರಾಯೇಲರ ನಡುವೆ ವಿಷಸರ್ಪಗಳನ್ನು ಕಳುಹಿಸಿದನು?
3. ಇಸ್ರಾಯೇಲರಿಗೆ ಕಳುಹಿಸಲ್ಪಟ್ಟ ದೇವರ ಶಿಕ್ಷೆಯು ಅವರಿಗೆ ಯಾವುದನ್ನು ಮನವರಿಕೆ ಮಾಡಿಸಿತು ಮತ್ತು ಅವರು ಮೋಶೆ ಏನನ್ನು ಮಾಡಬೇಕೆಂದು ಕೇಳಿಕೊಂಡರು?
4. ಕಂಚಿನ ಸರ್ಪದ ಉದ್ದೇಶವೇನಾಗಿತ್ತು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಹೊರ್ಮಾ ಅರಣ್ಯಕಾಂಡದ ಎರಡು ಕಥೆಗಳಲ್ಲಿ ಕಂಡುಬರುತ್ತದೆ. ಅವುಗಳನ್ನು 14:40–45 ರಲ್ಲಿ ಮತ್ತು 21:1–3 ರಲ್ಲಿ ಕಾಣಬಹುದು. ಈ ಎರಡು ಕಥೆಗಳನ್ನು ಹೋಲಿಸಿರಿ ಮತ್ತು ಅವುಗಳ ನಡುವೆ ಇರುವ ಸಮಾನತೆಗಳನ್ನು ಮತ್ತು ವ್ಯತ್ಯಾಸಗಳನ್ನು ಬರೆಯಿರಿ.
2. ನೀವು 21:6 ನ್ನು ಹೇಗೆ ಅರ್ಥಮಾಡಿಕೊಳ್ಳುವಿರಿ (*ಆಗ ಯೆಹೋವನು ಜನರೊಳಗೆ ವಿಷಸರ್ಪಗಳನ್ನು ಕಳುಹಿಸಿದನು. ಅವು ಜನರನ್ನು ಕಚ್ಚಿದ್ದರಿಂದ ಇಸ್ರಾಯೇಲರಲ್ಲಿ ಬಹು ಜನರು ಸತ್ತುಹೋದರು*)? *ದೀರ್ಘಶಾಂತನೂ ಮಹಾಪ್ರೀತಿಯುಳ್ಳವನೂ ಪಾಪವನ್ನೂ ತಿರುಗಿ ಬೀಳುವುದನ್ನು ಮನ್ನಿಸುವಾತನೂ* ಆಗಿರುವ ದೇವರು ಹೇಗೆ ತನ್ನ ಹಾಗೂ ತಾನು ನೇಮಿಸಿದ ನಾಯಕರ

ವಿರುದ್ಧ ಮಾತನಾಡುವವರ ಹಾಗೂ ತಮ್ಮ ಜೀವಿತಗಳಿಗೆ ದೇವರ ಒದಗಿಸುವಿಕೆಯ ಕುರಿತು ದೂರುವ ಜನರನ್ನು ಕೊಲ್ಲಲು ವಿಷಸರ್ಪಗಳನ್ನು ಕಳುಹಿಸಲು ಸಾಧ್ಯ?

3. ಯೇಸು ನಿಕೋದೇಮನೊಂದಿಗೆ ಮಾತನಾಡುತ್ತಿರುವಾಗ ಕಂಚಿನ ಸರ್ಪದ ಕಥೆಯನ್ನು ಉಲ್ಲೇಖಿಸಿದನು (ಯೋಹಾನ 3:14–15). ಅರಣ್ಯ. 21:6–9 ಹಾಗೂ ಯೋಹಾನ 3:14–15 ರ ನಡುವಿನ ಸಂಬಂಧವನ್ನು ನೀವು ಹೇಗೆ ವಿವರಿಸುವಿರಿ? ನೀವು ಯೋಚಿಸಲಾಗುವಷ್ಟು ಸಮಂಜಸವಾದ ಅಂಶಗಳನ್ನು ಬರೆಯಿರಿ.

4. ಇಂದು ದಕ್ಷಿಣ ಭಾರತದ ಸಭೆಗೆ ನಾಯಕತ್ವದ ಕುರಿತು ಕಂಚಿನ ಸರ್ಪದ ಕಥೆಯು ಏನನ್ನು ಕಲಿಸುತ್ತದೆ?

### ಊ. ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ

ನೀವು ಈ ಅಧ್ಯಯನದಲ್ಲಿ ಕಲಿತಿರುವ ಸಂಗತಿಯನ್ನು ಬಳಸಿಕೊಂಡು **'ಕಂಚಿನ ಸರ್ಪ'** ಎಂಬ ಸತ್ಯವೇದ ಅಧ್ಯಯನವನ್ನು ನಿಮ್ಮ ಸಭೆಗಾಗಿ ಸಿದ್ಧಪಡಿಸಿರಿ.

**ಅರಣ್ಯಕಾಂಡ ಅಧ್ಯಯನ 8: ಬಿಳಾಮನು**

**ಅ. ಪರಿಚಯ**

ಮೋವಾಬಿನ ಅರಸನಾದ ಬಾಲಾಕನು ಅಸಂಖ್ಯಾತರಾಗಿದ್ದ ಇಸ್ರಾಯೇಲರು ತನ್ನ ದೇಶವನ್ನು ಆಕ್ರಮಿಸಿಕೊಂಡು ಅದರ ಸಂಪತನ್ನು ಲೂಟಿ ಮಾಡುತ್ತಿರುವುದನ್ನು ಕಂಡು ಹೆದರಿದನು. ಹಾಗಾಗಿ ಆತನು ಮೆಸೊಪೊಟಾಮಿಯದಿಂದ ಜಗತ್–ಪ್ರಸಿದ್ಧ ಭವಿಷ್ಯ ನುಡಿಯುವವನಾದ ಅನ್ಯಜನಾಂಗದ ಬಿಳಾಮನನ್ನು ಇಸ್ರಾಯೇಲರ ವಿರುದ್ಧ ಶಪಿಸಲು ಕರೆಕಳುಹಿಸಿದನು. ಆತನು ಮೋವಾಬಿಗೆ ಪ್ರಯಾಣ ಮಾಡುತ್ತಿರುವಾಗ ಅವರ ಪ್ರಯಾಣವನ್ನು ತಡೆಯಲು ಬಿಚ್ಚು ಕತ್ತಿಯನ್ನು ಹಿಡಿದ ಒಬ್ಬ ದೇವದೂತನು ಆತನ ಕತ್ತೆಗೆ ಕಾಣಿಸಿಕೊಂಡನು. ಬಿಳಾಮನಿಗೆ ದೇವದೂತನು ಕಾಣಲಿಲ್ಲವಾದ್ದರಿಂದ ಹತೋಟಿಗೆ ಬಾರದ ಆ ಪ್ರಾಣಿಯನ್ನು ಬೆತ್ತದಿಂದ ಹೊಡೆದನು. ಅಂತಿಮವಾಗಿ ಯೆಹೋವನು ಬಿಳಾಮನ ಕಣ್ಣುಗಳನ್ನು ತೆರೆದಾಗ ಆತನು ದೇವದೂತನನ್ನು ಕಂಡನು. ಆತನು ಜಾಗರೂಕನಾಗಿದ್ದು ತಾನು ಹೇಳುವುದನ್ನು ಮಾತ್ರ ಹೇಳಬೇಕೆಂದು ಯೆಹೋವನು ಆತನಿಗೆ ತಿಳಿಸುತ್ತಾನೆ. ಕೊನೆಯಲ್ಲಿ ಬಿಳಾಮನು ಇಸ್ರಾಯೇಲರನ್ನು ಶಪಿಸುವುದರ ಬದಲಾಗಿ ಅವರನ್ನು ಆಶೀರ್ವದಿಸುತ್ತಾನೆ.

**ಆ. ಓದಿರಿ**

ಅರಣ್ಯ. 22–24 ಅಧ್ಯಾಯಗಳು

**ಇ. ಟಿಪ್ಪಣಿಗಳು**

*ಮೋವಾಬಿನ ಬಯಲುಗಳಲ್ಲಿ* (ವ. 1): ಮೃತ ಸಮುದ್ರದ ಉತ್ತರಕ್ಕೆ ಸಮೀಪದಲ್ಲಿ ಹಾಗೂ ಯೊರ್ದಾನ್ ನದಿಯ ಪೂರ್ವದಲ್ಲಿ ಮೋವಾಬ್ ನೆಲೆಸಿತ್ತು (***ನಿರ್ಗಮನ*** ಎಂಬ ನಕ್ಷೆಯನ್ನು ನೋಡಿರಿ). ಅಲ್ಲಿಂದ ಇಸ್ರಾಯೇಲರು ಯೆರಿಕೋ ಪಟ್ಟಣವನ್ನು ಮೊದಲುಗೊಂಡು ಕಾನಾನ್ ದೇಶದ ಮೇಲೆ ದಾಳಿ ಮಾಡಲಿದ್ದರು.

*ಬಾಲಾಕನು* (ವ. 2): ಮೋವಾಬಿನ ಅರಸನು (ವ. 4 ನ್ನು ನೋಡಿರಿ).

*ಮಿದ್ಯಾನ್ಯರ* (ವ. 4): ಮಿದ್ಯಾನ್ಯರು ಮೃತ ಸಮುದ್ರದ ಪೂರ್ವ ಮತ್ತು ದಕ್ಷಿಣದಲ್ಲಿ ನೆಲೆಸಿದ್ದರು. ವ. 7 ರಲ್ಲಿ ಇಸ್ರಾಯೇಲರನ್ನು ವಿರೋಧಿಸಲು ಬಾಲಾಕನು ಮಿದ್ಯಾನ್ಯರೊಂದಿಗೆ ಮೈತ್ರಿ ಮಾಡಿಕೊಂಡನೆಂದು ಕಾಣುತ್ತೇವೆ.

*ಬಿಳಾಮನು* (ವ. 5): ಈತನು ಮೆಸೊಪೊಟಾಮಿಯದ ವಾಯವ್ಯ ಭಾಗದಲ್ಲಿದ್ದ *ಪೆತೋರ್‌ನಲ್ಲಿ* ನೆಲೆಸಿದ್ದ ಒಬ್ಬ ಅನ್ಯಜನಾಂಗದ ಭವಿಷ್ಯ ಹೇಳುವವನಾಗಿದ್ದನು.

*ಯೆಹೋವನು ನನಗೆ ಹೇಳುವ ಪ್ರಕಾರ* (ವ. 8): ಬಿಳಾಮನು ಯೆಹೋವನ ಆರಾಧಕನಾಗಿದ್ದನು ಎಂದಾಗಲಿ ಅಥವಾ ಆತನು ಯೆಹೋವನಲ್ಲಿ ನಂಬಿಕೆಯಿಟ್ಟಿದ್ದನು ಎಂದಾಗಲಿ ಇದರ ಅರ್ಥವಲ್ಲ. ಈ ಕಥೆಯ ಹಿನ್ನೆಲೆಯು ಮತ್ತು ಬಿಳಾಮನ ಕುರಿತು ಸತ್ಯವೇದದಲ್ಲಿ ಉಲ್ಲೇಖವಾಗಿರುವ ಎಲ್ಲಾ ವಚನಗಳು ಆತನನ್ನು ಒಂದು ನಕಾರಾತ್ಮಕವಾದ ಬೆಳಕಿನಲ್ಲಿ ಪ್ರಸ್ತುತಪಡಿಸುತ್ತವೆ. ಇಸ್ರಾಯೇಲರ ದೇವರಾದ ಯೆಹೋವನನ್ನು ಸೇರಿಸಿಕೊಂಡು ತಾನು ಎಲ್ಲಾ ದೇವರುಗಳ ವಕ್ತಾರನೆಂದು ಘೋಷಿಸಿಕೊಂಡಿದ್ದನು ಎಂಬ ಅರ್ಥದಲ್ಲಿ ಬಿಳಾಮನ ಮಾತುಗಳನ್ನು ಕಾಣಬೇಕು.

*ನನ್ನ ಕೈಯಲ್ಲಿ ಕತ್ತಿ ಇದ್ದಿದ್ದರೆ ನಾನು ಈಗಲೇ ನಿನ್ನನ್ನು ಕೊಂದುಹಾಕುತ್ತಿದ್ದೆ* (ವ. 29): ಬಿಳಾಮನ ಈ ಮಾತುಗಳನ್ನು ವಾಚಕನು ಓದುವಾಗ ಅದರಲ್ಲಿರುವ ಹಾಸ್ಯವು ಆತನನ್ನು ಆಶ್ಚರ್ಯಗೊಳಿಸುತ್ತದೆ. ಒಬ್ಬ ದೇವದೂತನು ಬಿಚ್ಚುಗತ್ತಿಯನ್ನು ಹಿಡಿದು ನಿಂತಿದ್ದನು ಮತ್ತು ಒಂದು ವೇಳೆ ಆ ಕತ್ತೆಯು ಬಿಳಾಮನ ಪ್ರಾಣವನ್ನು ರಕ್ಷಿಸದೇ ಹೋಗಿದ್ದರೆ ಆ ದೇವದೂತನು ನಿಶ್ಚಯವಾಗಿಯೂ ಆತನನ್ನು ಕೊಂದು ಹಾಕುತ್ತಿದ್ದನು (ವ. 31 ಮತ್ತು 33 ನ್ನು ನೋಡಿರಿ).

*ಆಗ ಯೆಹೋವನು ಬಿಳಾಮನ ಕಣ್ಣುಗಳನ್ನು ತೆರೆದನು* (ವ. 31): ವ. 28 ನ್ನು ಹೋಲಿಸಿರಿ: *ಆಗ ಯೆಹೋವನು ಕತ್ತೆಯ ಬಾಯಿಯನ್ನು ತೆರೆದನು.*

*ಪದ್ಯರೂಪವಾಗಿ* (23:7): ಹಿಬ್ರೂ ಪದವಾದ ಮಶಲ್ ಸಾಮಾನ್ಯವಾಗಿ **'ಜ್ಞಾನೋಕ್ತಿ ಅಥವಾ ಗಾದೆ'** ಎಂಬುದಾಗಿ ಅನುವಾದಿಸಲ್ಪಡುತ್ತದೆ, ಆದರೆ ಇಲ್ಲಿ ಅದು ಒಂದು ಪ್ರವಾದನಾ ಪದ್ಯರೂಪವನ್ನು ಉಲ್ಲೇಖಿಸುತ್ತದೆ.

*ಅರಸನ* (ವ. 21): ಇದು ಪಂಚಕಾಂಡದಲ್ಲಿ ಕಂಡುಬರುವ ಯೆಹೋವನ ಅರಸತ್ವದ ಮೊಟ್ಟಮೊದಲ ಸ್ಪಷ್ಟ ಘೋಷಣೆಯಾಗಿದೆ.

*ಮುಂಚಿನ ಹಾಗೆ ಶಕುನಗಳನ್ನು* (24:1): ಜನರನ್ನು ಶಪಿಸಲು ಮತ್ತು ಆಶೀರ್ವದಿಸಲು ಬಿಳಾಮನು ಬಳಸುತ್ತಿದ್ದ ವಿಧಾನವು ಶಕುನ ಹೇಳುವುದರ ಮೂಲಕವಾಗಿತ್ತು ಎಂಬುದನ್ನು ಇದು ತೋರಿಸುತ್ತದೆ.

*ಸ್ಪಷ್ಟ ಕಣ್ಣುಳ್ಳ ಪುರುಷನು ನುಡಿದದ್ದು* (ವ. 3): ಬಿಳಾಮನ ಆತ್ಮಿಕ ಕಣ್ಣುಗಳನ್ನು ತೆರೆದದ್ದು ದೇವರಾಗಿದ್ದನು.

*ಅಗಾಗನಿಗಿಂತ* (ವ. 7): ಈ ಹೆಸರು ಬಹುಶಃ ಅಮಾಲೇಕ್ಯರ ಅರಸನನ್ನು ಉಲ್ಲೇಖಿಸುತ್ತದೆ (1 ಸಮು. 15:32; ವಿಮೋ. 17:8; ಮತ್ತು ಅರಣ್ಯ. 14:45 ನ್ನು ಹೋಲಿಸಿರಿ).

*ಮೊದಲನೆಯವನೇ ಅಮಾಲೇಕ್ಯನು* (ವ. 20): ಇಸ್ರಾಯೇಲರ ಮೇಲೆ ಮೊಟ್ಟಮೊದಲು ದಾಳಿ ಮಾಡಿದವರು ಅಮಾಲೇಕ್ಯರಾಗಿದ್ದರು (ವಿಮೋ. 17:8).

*ಕೇನ್ಯರನ್ನು* (ವ. 21): ಬಹುಶಃ ಇಲ್ಲಿ ಮಿದ್ಯಾನರ ಕುರಿತು ಈ ಹೆಸರನ್ನು ಬಳಸಲಾಗಿದೆ.

*ಅಶ್ಶೂರನು* (ವ. 22): ಇದು ಅಸ್ಸೀರಿಯದ ಪ್ರಮುಖ ಪಟ್ಟಣದ ಹೆಸರಾಗಿತ್ತು. ಇದನ್ನು ಆಗಾಗ್ಗೆ ಇಡೀ ರಾಷ್ಟ್ರವನ್ನು ಉಲ್ಲೇಖಿಸಲು ಬಳಸಲಾಗುತ್ತಿತ್ತು.

*ಕಿತ್ತೀಮಿನ ... ಏಬೆರರನ್ನೂ* (ವ. 24): ಇಲ್ಲಿ *ಕಿತ್ತೀಮ್* ಎಂಬುದು ಯಾವುದನ್ನು ಉಲ್ಲೇಖಿಸುತ್ತಿದೆ ಎಂಬುದು ಸ್ಪಷ್ಟವಾಗಿಲ್ಲ; *ಏಬೆರ* ಎಂಬುದು ಹಿಬ್ರಿಯರನ್ನು ಉಲ್ಲೇಖಿಸುತ್ತದೆ.

**ಈ. ಪ್ರಶ್ನೆಗಳು**

1. ಈ ಕಥೆಯು ಎಲ್ಲಿ ಸಂಭವಿಸಿತು?
2. ಬಾಲಾಕನು ಯಾರು ಮತ್ತು ಆತನಿಗಿದ್ದ ಚಿಂತೆ ಏನಾಗಿತ್ತು?
3. ಬಿಳಾಮನು ಯಾರು ಮತ್ತು ಆತನು ಯಾವ ಊರಿನವನು?
4. ಬಿಳಾಮನು ಇಸ್ರಾಯೇಲರನ್ನು ಶಪಿಸಲು ಕರೆಯಲ್ಪಟ್ಟಾಗ ಮೊದಲು ಯಾಕೆ ಹೋಗಲಿಲ್ಲ ಮತ್ತು ಆತನು ಅಂತಿಮವಾಗಿ ಒಪ್ಪಲು ಹೇಗೆ ಸಾಧ್ಯವಾಯಿತು?
5. ದೇವರು ಎಲ್ಲಿ ಕತ್ತೆಯ ಬಾಯಿಯನ್ನು ತೆರೆದು ಅದು ಮಾತನಾಡುವಂತೆ ಮಾಡಿದನು?
6. ಬಿಳಾಮನಿಗೆ ದೇವದೂತನು ಕೊಟ್ಟ ಸಂದೇಶವೇನು?
7. ಬಾಲಾಕನಿಗೂ ಹಾಗೂ ಮೋವಾಬಿನ ಸಮಸ್ತ ರಾಜಕುಮಾರರಿಗೂ ಬಿಳಾಮನ ಮೊದಲ ಸಂದೇಶವೇನಾಗಿತ್ತು?
8. ಬಿಳಾಮನ ಮೊದಲ ಹಾಗೂ ಎರಡನೆಯ ಸಂದೇಶದ ನಡುವೆ ಇರುವ ಮುಖ್ಯ ವ್ಯತ್ಯಾಸವೇನು?
9. ಬಿಳಾಮನ ಎರಡನೆಯ ಸಂದೇಶಕ್ಕೆ ಬಾಲಾಕನು ಹೇಗೆ ಪ್ರತಿಕ್ರಿಯಿಸಿದನು ಮತ್ತು ಬಿಳಾಮನು ಆತನಿಗೆ ಯಾವ ಉತ್ತರವನ್ನು ನೀಡಿದನು?
10. ಬಿಳಾಮನು ತನ್ನ ಮೂರನೆಯ ನುಡಿಯನ್ನು ಹೇಳಲು ಸಿದ್ಧಗೊಂಡಾಗ ಹೇಗೆ ವ್ಯತ್ಯಾಸವಾದ ರೀತಿಯಲ್ಲಿ ವರ್ತಿಸಿದನು?
11. ಬಾಲಾಕನು ಹೇಗೆ ಬಿಳಾಮನ ವಿರುದ್ಧ ಕೋಪವನ್ನು ವ್ಯಕ್ತಪಡಿಸಿದನು?
12. ಬಿಳಾಮನು ತನ್ನ ನಾಲ್ಕನೆಯ ನುಡಿಯಲ್ಲಿ ಏನನ್ನು ಕಂಡನು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಬಿಳಾಮ ಮತ್ತು ಆತನ ಕತ್ತೆಯ ಕಥೆಯು ಅರ್ಥಮಾಡಿಕೊಳ್ಳಲು ಕಷ್ಟಕರವಾಗಿದೆ. ವ. 22:20 ರಲ್ಲಿ ಬಿಳಾಮನು ಮೋವಾಬಿಗೆ ಹೋಗಲು ದೇವರು ಅನುಮತಿಸುತ್ತಾನೆ. ನಂತರ ಬಿಳಾಮನು ಹೊರಟಾಗ ದೇವರು ಕೋಪಿಸಿಕೊಳ್ಳುತ್ತಾನೆ (22:22), ಹಾಗಾಗಿ ಆತನು ಕತ್ತೆಯು ಅಲ್ಲಿಗೆ ಹೋಗದಂತೆ ತಡೆಯಲು ಮೂರು ಬಾರಿ ತನ್ನ ದೂತನನ್ನು ಕಳುಹಿಸಿಕೊಡುತ್ತಾನೆ (22:22, 24 ಮತ್ತು 26). ಅಂತಿಮವಾಗಿ ದೇವದೂತನು ತನ್ನನ್ನು ಬಿಳಾಮನಿಗೆ ಪ್ರಕಟಿಸಿಕೊಳ್ಳುತ್ತಾನೆ (22:31) ಮತ್ತು ತನ್ನ ಪ್ರಯಾಣವನ್ನು ಮುಂದುವರೆಸುವಂತೆ ಹೇಳುತ್ತಾನೆ (22:35). ನೀವು ಈ ಸ್ಪಷ್ಟವಾದ ವಿರೋಧಾಭಾಸವನ್ನು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

2. ನೀವು ಬಿಳಾಮನ ನಾಲ್ಕನೆಯ ನುಡಿಯನ್ನು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?
3. ಇಂದು ದಕ್ಷಿಣ ಭಾರತದಲ್ಲಿರುವ ವಿಶ್ವಾಸಿಗಳಾದ ನಾವು ಈ ಅಧ್ಯಾಯಗಳಲ್ಲಿರುವ ಬಿಳಾಮನ ಕಥೆಯಿಂದ ಯಾವ ಪಾಠಗಳನ್ನು ಕಲಿತುಕೊಳ್ಳಬಹುದು?

**ಊ. ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ**

ನೀವು ಈ ಅಧ್ಯಯನದಲ್ಲಿ ಕಲಿತಿರುವ ಸಂಗತಿಯನ್ನು ಬಳಸಿಕೊಂಡು **'ಬಿಳಾಮನು ನಮಗೆ ಏನನ್ನು ಕಲಿಸುತ್ತಾನೆ'** ಎಂಬ ಸತ್ಯವೇದ ಅಧ್ಯಯನವನ್ನು ನಿಮ್ಮ ಸಭೆಗಾಗಿ ಸಿದ್ಧಪಡಿಸಿರಿ.

**ಅರಣ್ಯಕಾಂಡ ಅಧ್ಯಯನ 9: ಎರಡನೆಯ ಜನಗಣತಿ; ಯೆಹೋಶುವನು ನೇಮಿಸಲ್ಪಟ್ಟದ್ದು**

**ಅ. ಪರಿಚಯ**

ಇಸ್ರಾಯೇಲರು ಮೋವಾಬಿನ ಬಯಲುಗಳಲ್ಲಿ ಪಾಳೆಯವನ್ನು ಹಾಕಿಕೊಂಡಿದ್ದಾಗ ಎರಡನೆಯ ಜನಗಣತಿಗಾಗಿ ಸಿದ್ಧತೆ ಮಾಡಬೇಕೆಂದು ದೇವರು ಮೋಶೆಗೆ ಹೇಳಿದನು. ವಾಗ್ದಾನ ದೇಶವನ್ನು ವಶಮಾಡಿಕೊಳ್ಳುವುದಕ್ಕಾಗಿ ಸೈನಿಕ ವೃತ್ತಿಗೆ ಸೇರಿಸಲು ಮೊದಲ ಜನಗಣತಿಯು ಮಾಡಲಾಗಿತ್ತು. ಅದರ ನಂತರ ಈಗ 39 ವರ್ಷಗಳು ಕಳೆದಿವೆ. ಆದರೆ ಆ ಸೈನಿಕರ ಸಂತತಿಯು ಮರುಭೂಮಿಯಲ್ಲಿನ ಅಲೆದಾಟಗಳಲ್ಲಿ ನಾಶವಾಯಿತು. ಈಗ ಹೊಸ ಸೈನಿಕರ ಒಂದು ಸಂತತಿಯ ಜನಗಣತಿಯನ್ನು ಮಾಡುವ ಸಮಯ ಬಂದಿದೆ (ಅಧ್ಯಾಯ 26).

ನಂತರ ಯೆಹೋಶುವನು ಇಸ್ರಾಯೇಲರ ನಾಯಕನಾಗುವಂತೆ ಮೋಶೆಯ ಉತ್ತರಾಧಿಕಾರಿಯಾಗಿ ನೇಮಿಸಲ್ಪಟ್ಟನು (ಅಧ್ಯಾಯ 27).

**ಆ. ಓದಿರಿ**

ಅರಣ್ಯ. 26:1–4, 62–65; 27:12–23

**ಇ. ಟಿಪ್ಪಣಿ**

*ವ್ಯಾಧಿಯ* (26:1): ಈ ವ್ಯಾಧಿಯ ಕುರಿತಾದ ಕಥೆಯು ಹಿಂದಿನ ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ (25:1–9). ಇದು ಇಸ್ರಾಯೇಲರ ಮೊದಲ ಸಂತತಿಯ ವಿರುದ್ಧ ದೇವರ ಅಂತಿಮವಾದ ತೀರ್ಪಾಗಿತ್ತು.

*ಆರೋನನ ಮಗನೂ ಯಾಜಕನೂ ಆಗಿರುವ ಎಲಿಯಾಜರನ* (ವ. 1) ಎಲಿಯಾಜರನು ತನ್ನ ತಂದೆಯಾದ ಆರೋನನ ಮರಣದ ನಂತರ ಮಹಾಯಾಜಕನಾದನು (20:28 ನ್ನು  ನೋಡಿರಿ).

*ಅಬಾರೀಮ್ ಪರ್ವತದ* (27:12): ಇದು ಮೃತ ಸಮುದ್ರದ ಪೂರ್ವದಲ್ಲಿದ್ದ ಪರ್ವತ ಶ್ರೇಣಿಯಾಗಿತ್ತು. ಅವುಗಳಲ್ಲಿನ ಒಂದು ಶಿಖರವು ನೆಬೋ ಪರ್ವತವಾಗಿತ್ತು, ಅಲ್ಲಿಂದ ಮೋಶೆಯು ಕಾನಾನ್ ದೇಶವನ್ನು ಕಂಡನು ಮತ್ತು ಅದೇ ಪರ್ವತದಲ್ಲಿ ಆತನು ಮೃತನಾದನು (ಧರ್ಮೋ. 32:48–50).

*ನನ್ನನ್ನು ಗೌರವಿಸದೆ ನನ್ನ ಆಜ್ಞೆಯನ್ನು ಮೀರಿದಿರಿ* (ವ. 14): ಈ ಕಥೆಯನ್ನು ಅರಣ್ಯ. 20:9–13 ರಲ್ಲಿ ಹೇಳಲಾಗಿದೆ.

27:20: ಈ ವಚನವು ಕನ್ನಡ ಅನುವಾದಗಳಲ್ಲಿ ಪೂರ್ಣವಾಗಿಲ್ಲ. ಮೋಶೆಯು 'ತನ್ನ ಕೆಲವು ಅಧಿಕಾರಗಳನ್ನು' ಯೆಹೋಶುವನಿಗೆ ಕೊಡಬೇಕೆಂದು ವಾಸ್ತವಿಕವಾಗಿ ದೇವರು ಮೋಶೆಗೆ ಹೇಳಿದನು.

**ಈ. ಪ್ರಶ್ನೆಗಳು**

1. ಎರಡು ಜನಗಣತಿಗಳನ್ನು ಹೋಲಿಸಿರಿ (ಅರಣ್ಯ. 1:1–4, 44–47; 26:1–4, 63–65). ಸಮಾನತೆಗಳೇನು ಮತ್ತು ವ್ಯತ್ಯಾಸಗಳೇನು?
2. ಇಸ್ರಾಯೇಲರ ಮೇಲೆ ಒಬ್ಬ ಹೊಸ ನಾಯಕನನ್ನು ನೇಮಿಸುವಂತೆ ಮೋಶೆಯು ಯಾಕೆ ದೇವರಲ್ಲಿ ಬೇಡಿಕೊಂಡನು?
3. ಯೆಹೋಶುವನು ಮೋಶೆಯ ಉತ್ತರಾಧಿಕಾರಿಯಾಗಲು ನೇಮಿಸಲ್ಪಟ್ಟಾಗ ತೆಗೆದುಕೊಳ್ಳಲ್ಪಟ್ಟ ಹೆಜ್ಜೆಗಳ ಒಂದು ಕಾಲಾನುಕ್ರಮವಾದ ಪಟ್ಟಿಯನ್ನು ಮಾಡಿರಿ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಹಳೆ ಒಡಂಬಡಿಕೆಯ ಕಾಲದಲ್ಲಿ 'ರಾಜಕೀಯ ಮತ್ತು ಆಡಳಿತದ' ನಾಯಕನ ಮತ್ತು 'ಯಾಜಕನ' ನಡುವಿನ ಸಂಬಂಧದ ಕುರಿತು ಯೆಹೋಶುವನ ನೇಮಕದ ಕಥೆಯಿಂದ ನಾವು ಏನನ್ನು ಕಲಿತುಕೊಳ್ಳುತ್ತೇವೆ? ಇದರ ಕುರಿತು ವೈಯಕ್ತಿಕವಾಗಿ ಯಾವುದಾದರೂ ಸಂಗತಿಯನ್ನು ಕಲಿತುಕೊಳ್ಳಬಹುದೋ?
2. ಇಂದು ದಕ್ಷಿಣ ಭಾರತದಲ್ಲಿರುವ ವಿಶ್ವಾಸಿಗಳಾದ ನಾವು ಮೋಶೆಯ ಉತ್ತರಾಧಿಕಾರಿಯಾಗಿ ಯೆಹೋಶುವನು ನೇಮಿಸಲ್ಪಟ್ಟದ್ದರ ಕಥೆಯಿಂದ ಯಾವ ಪಾಠಗಳನ್ನು ಕಲಿತುಕೊಳ್ಳಬಹುದು?

**ಊ. ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ**

ನೀವು ಈ ಅಧ್ಯಯನದಲ್ಲಿ ಕಲಿತಿರುವ ಸಂಗತಿಯನ್ನು ಬಳಸಿಕೊಂಡು 'ಮೋಶೆಯ ಉತ್ತರಾಧಿಕಾರಿಯಾದ ಯೆಹೋಶುವನು' ಎಂಬ ಸತ್ಯವೇದ ಅಧ್ಯಯನವನ್ನು ನಿಮ್ಮ ಸಭೆಗಾಗಿ ಸಿದ್ಧಪಡಿಸಿರಿ.

**ಅರಣ್ಯಕಾಂಡ ಅಧ್ಯಯನ 10: ಅರಣ್ಯದಲ್ಲಿ ದೇವರ ಕೃಪೆ**

**ಅ. ಪರಿಚಯ**

ಸಿನಾಯಿ ಪರ್ವತದಿಂದ ವಾಗ್ದಾನ ದೇಶದ ಗಡಿಯಲ್ಲಿದ್ದ ಮೋವಾಬಿನ ಬಯಲು ಸೀಮೆಗಳವರೆಗೆ ಸಾಗಿದ ಸುಮಾರು 39 ವರ್ಷಗಳ ಅರಣ್ಯದಲ್ಲಿನ ಅಲೆದಾಟಗಳ ಕಾಲದುದ್ದಕ್ಕೂ ದೇವರು ತೋರಿದ ಕೃಪೆ, ಒದಗಿಸುವಿಕೆಗಳು, ಸಂರಕ್ಷಣೆ ಮತ್ತು ಮಾರ್ಗದರ್ಶನವು ಅರಣ್ಯಕಾಂಡದಲ್ಲಿರುವ ಇನ್ನೊಂದು ಪ್ರಧಾನ ವಿಷಯವಾಗಿದೆ.

**ಆ. ಓದಿರಿ**

ಕೆಳಗಿರುವ ಪ್ರಶ್ನೆಗಳಲ್ಲಿರುವ ವಚನಗಳ ಕ್ರಮವಾಗಿ ಈ ಕೆಳಗೆ ವಚನಗಳನ್ನು ತಿಳಿಸಲಾಗಿದೆ:

1. ಅರಣ್ಯ. 10:1–10
2. ಅರಣ್ಯ. 9:15–23; 10:33–36
3. ಅರಣ್ಯ. 11:16–17, 24–25
4. ಅರಣ್ಯ. 11:6–9, 18–20, 31–34
5. ಅರಣ್ಯ. 20:1–11; 21:16–18; ವಿಮೋ. 17:1–7; ಧರ್ಮೋ. 29:5
6. ಅರಣ್ಯ. 21:4–9
7. ಅರಣ್ಯ. 21:1–3, 23–25 (ಧರ್ಮೋ. 2:24 ರೊಂದಿಗೆ ಹೋಲಿಸಿರಿ), 33–35
8. ಅರಣ್ಯ. 36:13
9. ಅರಣ್ಯ. 6:22–27; 24:10

**ಇ. ಪ್ರಶ್ನೆಗಳು**

1. ಇಸ್ರಾಯೇಲರು ಸಿನಾಯಿ ಪರ್ವತದಿಂದ ಹೊರಡುವುದಕ್ಕಿಂತ ಮುಂಚೆ ಮೋಶೆಯು ಎರಡು ಬೆಳ್ಳಿಯ ತುತ್ತೂರಿಗಳನ್ನು ಮಾಡಿಸಬೇಕೆಂದು ದೇವರು ಆಜ್ಞಾಪಿಸಿದನು (ಅರಣ್ಯ. 10:1–10). ಈ ಬೆಳ್ಳಿ ತುತ್ತೂರಿಗಳು ಯಾವ ರೀತಿಯಲ್ಲಿ ಅವರ ಅರಣ್ಯದಲ್ಲಿನ ಅಲೆದಾಟಗಳಿಗೆ ದೇವರ ಒದಗಿಸುವಿಕೆಯಾಗಿತ್ತು?
2. ದೇವರ ಮಾರ್ಗದರ್ಶನ (ಅರಣ್ಯ. 9:15–23; 10:33–36):
    1) ಇಸ್ರಾಯೇಲರು ಸಿನಾಯಿ ಪರ್ವತದಿಂದ ಹೊರಡುವಾಗ ದೇವರು ಅವರನ್ನು ನಡೆಸಿದ ಎರಡು ಮಾರ್ಗಗಳನ್ನು ವಿವರಿಸಿರಿ.
    2) ಯಾಜಕರು ಒಡಂಬಡಿಕೆಯ ಮಂಜೂಷವನ್ನು ಜನರ ಮುಂದೆ ಹೊತ್ತುಕೊಂಡು ಹೋದರು. ಈ ಮಾದರಿಯು ಯಾವ ರೀತಿಯಲ್ಲಿ ಇಸ್ರಾಯೇಲರಿಗಾಗಿ ದೇವರ ಒದಗಿಸುವಿಕೆಯನ್ನು ವ್ಯಕ್ತಪಡಿಸುತ್ತದೆ?
3. ಮೋಶೆಯು ಕೆಲಸದ ಒತ್ತಡದಿಂದ ಬಳಲಿದಾಗ ಮತ್ತು ನಿರಾಶನಾದಾಗ ದೇವರು ಆತನ ಸಮಸ್ಯೆಗೆ ಒಂದು ಪರಿಹಾರವನ್ನು ಕಲ್ಪಿಸಿದನು. ಆ ಪರಿಹಾರವೇನು (ಅರಣ್ಯ. 11:16–17, 24–25)? ಈ ಪರಿಹಾರವು ಯಾವ ರೀತಿಯಲ್ಲಿ ದೇವರ ಕೃಪೆಯನ್ನು ವ್ಯಕ್ತಪಡಿಸುತ್ತದೆ?
4. ಮೋಶೆಯು ಇಸ್ರಾಯೇಲರ ನಾಯಕನಾಗಿದ್ದನು. ಆದರೆ ಖಂಡಿತವಾಗಲೂ ಅಷ್ಟೊಂದು ಜನರಿಗೆ ಅರಣ್ಯದಲ್ಲಿ ಆಹಾರವನ್ನು ಒದಗಿಸುವುದು ಆತನಿಗೆ ಅಸಾಧ್ಯವಾಗಿತ್ತು. ಈ ಸಮಸ್ಯೆಗೆ ದೇವರು ಒದಗಿಸಿದ ಪರಿಹಾರವೇನು (ಅರಣ್ಯ. 11:6–9, 18–20, 31–34)? ಈ ಪರಿಹಾರವು ಯಾವ ರೀತಿಯಲ್ಲಿ ದೇವರ ಕೃಪೆಯನ್ನು ವ್ಯಕ್ತಪಡಿಸುತ್ತದೆ?
5. ಮರುಭೂಮಿಯಲ್ಲಿ ಜೀವಿಸುವ ಜನರಿಗೆ ಮುಖ್ಯವಾಗಿ ಆಗುವ ಕಷ್ಟವು ನೀರನ್ನು ಕಂಡುಕೊಳ್ಳುವುದಾಗಿದೆ. ಇನ್ನೊಂದು ಸಮಸ್ಯೆಯು ತಮಗಾಗಿ ಪಾದರಕ್ಷೆಗಳನ್ನು ಮತ್ತು ಉಡುಪುಗಳನ್ನು ಎಲ್ಲಿಂದ ಖರೀದಿಸಬೇಕು (ಅಥವಾ ಹೇಗೆ ತಯಾರಿಸಬೇಕು) ಎಂಬುದಾಗಿದೆ:

1) ಅರಣ್ಯಕಾಂಡದಲ್ಲಿ ದೇವರು ಇಸ್ರಾಯೇಲರಿಗಾಗಿ ನೀರನ್ನು ಒದಗಿಸಿದ್ದರ ಕುರಿತು ಎರಡು ಕಥೆಗಳಿವೆ (ಅರಣ್ಯ. 20:1–11; 21:16–18). ಈ ಎರಡೂ ಕಥೆಗಳು ದೇವರು ತನ್ನ ಜನರಿಗೆ ತನ್ನ ಕೃಪೆಯಿಂದ ನೀಡಿದ ಒದಗಿಸುವಿಕೆಗಳನ್ನು ವ್ಯಕ್ತಪಡಿಸುತ್ತವೆ. ಆದರೆ ಈ ಕಥೆಗಳಲ್ಲಿ ಜನರ ಭಾವನೆಯು ಒಂದಕ್ಕೊಂದು ಅತ್ಯಂತ ವ್ಯತ್ಯಾಸವಾಗಿವೆ. ಅವರ ಭಾವನೆಗಳನ್ನು ಹೋಲಿಸಿರಿ.

2) ದೇವರು ಅದ್ಭುತಕರವಾಗಿ ಇಸ್ರಾಯೇಲರಿಗೆ ನೀರನ್ನು ಒದಗಿಸಿದ ಇನ್ನೊಂದು ಸನ್ನಿವೇಶವನ್ನು (ಅರಣ್ಯಕಾಂಡವಲ್ಲ, ಬದಲಾಗಿ) ವಿಮೋಚನಕಾಂಡವು ದಾಖಲಿಸುತ್ತದೆ (ವಿಮೋ. 17:1–7). ದೇವರು ತನ್ನ ಕೃಪೆಯನ್ನು ಈ ಸನ್ನಿವೇಶದಲ್ಲಿ ಹೇಗೆ ವ್ಯಕ್ತಪಡಿಸಿದನು?

3) ಇಸ್ರಾಯೇಲರ ಅರಣ್ಯದಲ್ಲಿನ ಅಲೆದಾಟಗಳ ಸಮಯದಲ್ಲಿ ದೇವರು ಅವರಿಗೆ ನೀಡಿದ ಇತರೆ 'ಅದ್ಭುತಕರವಾದ ಒದಗಿಸುವಿಕೆಗಳ' ಕುರಿತು ನಮಗೆ ಕುತೂಹಲಕರವಾದ ಮಾಹಿತಿಗಳನ್ನು ಧರ್ಮೋ. 29:5 ತಿಳಿಸುತ್ತದೆ. ಆ ಅದ್ಭುತಗಳು ಯಾವುವು?

6. ನಾವು ಕಂಚಿನ ಸರ್ಪದ ಕುರಿತಾದ ವಾಕ್ಯಭಾಗವನ್ನು ಅರಣ್ಯ. 21:4–9 ರಲ್ಲಿ ಈಗಾಗಲೇ ಅಭ್ಯಸಿಸಿದ್ದೇವೆ (ನೋಡಿರಿ: ***ಅರಣ್ಯಕಾಂಡ ಅಧ್ಯಯನ 7: ಆರಾದಿನ ನಾಶನ; ಕಂಚಿನ ಸರ್ಪ***).ನೀವು ಈ ಕಥೆಯನ್ನು ಹೇಗೆ ಅರ್ಥವಿವರಿಸುತ್ತೀರಿ: ಇದು ಪ್ರಾಥಮಿಕವಾಗಿ ದೇವರ ಸಂರಕ್ಷಣೆಯನ್ನು ಚಿತ್ರಿಸುತ್ತದೋ ಅಥವಾ ಇದು ಪ್ರಾಥಮಿಕವಾಗಿ ದೇವರ ಕೃಪೆಯನ್ನು ಚಿತ್ರಿಸುತ್ತದೋ? ನಿಮ್ಮ ಕಾರಣಗಳನ್ನು ಕೊಡಿರಿ.

7. ಆರಾದಿನ ಅರಸನ (ಅರಣ್ಯ. 21:1–3), ಅರಸನಾದ ಸಿಹೋನನ (ಅರಣ್ಯ. 21:23–25. ಹೋಲಿಸಿರಿ. ಧರ್ಮೋ. 2:24) ಮತ್ತು ಅರಸನಾದ ಓಗನ (ಅರಣ್ಯ. 21:33–35) ಕುರಿತಾದ ಮೂರು ಕಥೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಸಂಗತಿಗಳೇನು?

8. ಅರಣ್ಯಕಾಂಡ ಪುಸ್ತಕವು 36:13 ರೊಂದಿಗೆ ಕೊನೆಗೊಳ್ಳುತ್ತದೆ. ಈ ವಚನವು ಇಸ್ರಾಯೇಲರಿಗಾಗಿ ದೇವರು ನೀಡಿದ ಎರಡು ಒದಗಿಸುವಿಕೆಗಳನ್ನು ಪ್ರತಿಬಿಂಬಿಸುತ್ತದೆ. ಅವುಗಳು ಯಾವುವು?

9. ದೇವರ ಆಶೀರ್ವಾದವು ಆತನ ಕೃಪೆಯ ಒಂದು ವ್ಯಕ್ತಪಡಿಸುವಿಕೆಯಾಗಿದೆ:

1) 'ಯಾಜಕರ ಆಶೀರ್ವಚನವನ್ನು' (ಅರಣ್ಯ. 6:22–27) ನಿಮ್ಮ ಸ್ವಂತ ವಾಕ್ಯಗಳಲ್ಲಿ ಮರು–ರಚಿಸಿ ಹೇಳಿರಿ.

2) ನಾವು ಅರಣ್ಯ. 22–24 ರಲ್ಲಿ ಅನ್ಯಮತೀಯನೂ ಕಣಿ ಹೇಳುವವನೂ ಆದ ಬಿಳಾಮನ ಕುರಿತು ಒಂದು ಉದ್ದವಾದ ಕಥೆಯನ್ನು ಈಗಾಗಲೇ ಅಭ್ಯಸಿಸಿದ್ದೇವೆ (ನೋಡಿರಿ: ***ಅರಣ್ಯಕಾಂಡ ಅಧ್ಯಯನ 8: ಬಿಳಾಮನು).*** ಆ ಕಥೆಯು ಅರಣ್ಯ. 24:10 ರಲ್ಲಿ ಸಾರಾಂಶಗೊಳಿಸಲ್ಪಟ್ಟಿದೆ. ಇಸ್ರಾಯೇಲರನ್ನು ಶಪಿಸಬೇಕೆಂಬ ಅರಸನಾದ ಬಾಲಾಕನ ಮನವಿಯನ್ನು ಬಿಳಾಮನು ಯಾಕೆ ನೆರವೇರಿಸಲಾಗಲಿಲ್ಲ?

**ಈ. ಸಮಾರೋಪಗಳು**

1. ನಾವು ಮೇಲಿನ ವಾಕ್ಯಭಾಗಗಳ ಅಧ್ಯಯನದಿಂದ ಈ ಸಮಾರೋಪಗಳನ್ನು ತಲುಪಬಹುದು:

1) ದೇವರು ಎರಡು ರೀತಿಯಲ್ಲಿ ಇಸ್ರಾಯೇಲರನ್ನು ಅರಣ್ಯದಲ್ಲಿನ ಅಲೆದಾಟಗಳಲ್ಲಿ ನಡೆಸಿದನು:

2) ಆತನು ಅವರನ್ನು ಮೇಘದ ಮೂಲಕ ನಡೆಸಿದನು.

2. ಆತನು ಅವರ ಮುಂದೆ ಹೋದನು. ಪ್ರಯಾಣಿಸುತ್ತಿದ್ದ ಜನರ ಮುಂದೆ ಯಾಜಕರು ಮಂಜೂಷವನ್ನು ಹೊತ್ತುಕೊಂಡು ಹೋಗುವುದು ಇದರ ಸಂಕೇತವಾಗಿತ್ತು.

3. ದೇವರು ಈ ವರ್ಷಗಳಲ್ಲಿ ಇಸ್ರಾಯೇಲರ ಭೌತಿಕ ಅಗತ್ಯತೆಗಳನ್ನು ಪೂರೈಸಿದನು: ಆಹಾರ, ನೀರು, ಬಟ್ಟೆ ಮತ್ತು ಪಾದರಕ್ಷೆ.

4. ದೇವರು ಅವರ ನಾಯಕತ್ವ ಅಗತ್ಯತೆಗಳನ್ನು ಪೂರೈಸಿದನು: ಮೋಶೆ ಮತ್ತು ಆರೋನ; ಎಪ್ಪತ್ತು ಸಹಾಯಕ ನಾಯಕರುಗಳು.

5. ದೇವರು ಇಸ್ರಾಯೇಲರಿಗೆ ಧರ್ಮಶಾಸ್ತ್ರವನ್ನು ಕೊಟ್ಟನು. ಅದರ ಆಜ್ಞೆಗಳು ಮತ್ತು ನಿಬಂಧನೆಗಳು ಅವರನ್ನು ಸಂರಕ್ಷಿಸಿ ದೇವರೊಂದಿಗೆ ಒಂದು ಒಡಂಬಡಿಕೆಯುಳ್ಳ ರೀತಿಯಲ್ಲಿ ಸಂಬಂಧವಿಟ್ಟುಕೊಳ್ಳುವಂತೆ ಸಹಾಯಮಾಡಿತು.

6. ದೇವರು ಅಯೋಗ್ಯರಾದ ಇಸ್ರಾಯೇಲರಿಗೆ ತನ್ನ ಪ್ರೀತಿ ಮತ್ತು ಕೃಪೆಯನ್ನು ವಿಸ್ತರಿಸಿದನು.

7. ದೇವರು ಇಸ್ರಾಯೇಲರನ್ನು ಅರಣ್ಯದಲ್ಲಿನ ಜೀವನದ ಅಪಾಯಗಳಿಂದ ಕಾಪಾಡಿದನು.

8. ಇಸ್ರಾಯೇಲರು ದೇವರನ್ನು ಪ್ರಧಾನ ಸ್ಥಾನದಲ್ಲಿಟ್ಟಾಗ ಮತ್ತು ಆತನ ಮಾರ್ಗದರ್ಶನಗಳನ್ನು ಪಾಲಿಸಿದಾಗ ದೇವರು ಅವರಿಗೆ ತಮ್ಮ ವೈರಿಗಳ ವಿರುದ್ಧ ಜಯವನ್ನು ಕೊಟ್ಟನು. ಆತನು ಯುದ್ಧದಲ್ಲಿ ಅವರ 'ಸೇನಾಧಿಪತಿಯಾಗಿದ್ದನು'.

9. ದೇವರ ಆಶೀರ್ವಾದವು ಇಸ್ರಾಯೇಲರನ್ನು ಶತ್ರುವಿನ ಶಾಪಗಳಿಂದ ಸಂರಕ್ಷಿಸುತ್ತಾ ಅವರ ಮೇಲೆ ನೆಲೆಸಿತ್ತು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಇಸ್ರಾಯೇಲರಿಗೆ ಅವರ ಅರಣ್ಯದಲ್ಲಿನ ಅಲೆದಾಟಗಳ ಅವಧಿಯಲ್ಲಿ ದೇವರು ತೋರಿಸಿದ ಕೃಪೆಯ ವಿವಿಧ ಅಂಶಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ (ನಿಮ್ಮ ನೋಟ್ಸ್‌ಗಳನ್ನಾಗಲಿ ಅಥವಾ ಪಠ್ಯಪುಸ್ತಕವನ್ನಾಗಲಿ ನೋಡಿ ಹೇಳಬೇಡಿರಿ).

2. ಅರಣ್ಯದಲ್ಲಿನ ಅಲೆದಾಟಗಳ ಅವಧಿಯಲ್ಲಿ ಇಸ್ರಾಯೇಲರು ದೇವರೊಂದಿಗೆ ಹೊಂದಿದ್ದ ಸಂಬಂಧದ ಕುರಿತು ಈ ಅಧ್ಯಯನವು ಹೇಗೆ ನಿಮ್ಮ ಉತ್ತಮವಾದ ತಿಳುವಳಿಕೆಯನ್ನು ಕೊಟ್ಟಿದೆ ಎಂದು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

3. ದೇವರು ನಮ್ಮ ಕುರಿತಾಗಿ ತೋರುವ ಕೃಪೆಯನ್ನು ಬಿಂಬಿಸಲು ಈ ಅಧ್ಯಯನವನ್ನು ಬಳಸಿಕೊಳ್ಳುವುದರ ಮೂಲಕ ಒಂದು ಪಟ್ಟಿಯನ್ನು ಮಾಡಿರಿ. ಇಂದು ನಾವು ಆತನ ಜನರಾಗಿದ್ದೇವೆ, ನಮ್ಮ ಪರಲೋಕದ ವಾಗ್ದಾನ ದೇಶದ ಕಡೆಗೆ ಸಾಗುತ್ತಾ ಈ ಲೋಕದಲ್ಲಿ ಯಾತ್ರಿಗಳಾಗಿದ್ದೇವೆ.

**ಊ. ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ**

ನೀವು ಈ ಅಧ್ಯಯನದಲ್ಲಿ ಕಲಿತಿರುವ ಸಂಗತಿಯನ್ನು ಬಳಸಿಕೊಂಡು 'ಇಂದು ತನ್ನ ಜನರಿಗಾಗಿ ದೇವರು ತೋರುವ ಕೃಪೆ' ಎಂಬ ಸತ್ಯವೇದ ಅಧ್ಯಯನವನ್ನು ನಿಮ್ಮ ಸಭೆಗಾಗಿ ಸಿದ್ಧಪಡಿಸಿರಿ.

**ಅರಣ್ಯಕಾಂಡ ಅಧ್ಯಯನ 11: ಆದರ್ಶದ ತಿರಸ್ಕಾರ**

**ಅ. ಪರಿಚಯ**

ದೇವರು ಇಸ್ರಾಯೇಲರಿಗಾಗಿ ಒಂದು ಆದರ್ಶವನ್ನು ಹೊಂದಿದ್ದನು. ಅವರಿಗೆ ಈ ಆದರ್ಶವು ಸ್ಪಷ್ಟವಾದ ರೀತಿಯಲ್ಲಿ ತಮ್ಮ ದೇವನೇಮಿತ ನಾಯಕನಾದ ಮೋಶೆಯ ಮೂಲಕ ತಿಳಿಸಲ್ಪಟ್ಟಿತು. ಸಿನಾಯಿ ಪರ್ವತದಲ್ಲಿ ದೇವರು ಅವರಿಗಾಗಿ ಹೊಂದಿದ ಆದರ್ಶವನ್ನು ಪಾಲಿಸಲು ಸಹಾಯಕವಾಗುವಂತೆ ಆಜ್ಞೆ ನಿಬಂಧನೆಗಳನ್ನು ಕೂಡಿದ ಧರ್ಮಶಾಸ್ತ್ರವನ್ನು ಅವರಿಗೆ ಕೊಟ್ಟನು. ಆದರೆ ಇವೆಲ್ಲದರ ಹೊರತಾಗಿಯೂ – ಹಾಗೂ ಅವರಿಗಾಗಿ ದೇವರು ಮಾಡಿದ ಎಲ್ಲಾ ಒದಗಿಸುವಿಕೆಗಳ ಹೊರತಾಗಿಯೂ – ಇಸ್ರಾಯೇಲರು ಆದರ್ಶವನ್ನು ತಿರಸ್ಕರಿಸಿದರು. ಈ ತಿರಸ್ಕಾರವು ಅರಣ್ಯಕಾಂಡದಲ್ಲಿರುವ ಪ್ರಧಾನ ವಿಷಯವಾಗಿದೆ.

**ಆ. ಓದಿರಿ**

ಈ ಕೆಳಗಿರುವ ಸಂಖ್ಯೆಗಳು ಕ್ರಮವಾಗಿ ಮುಂದಿನ ಭಾಗದಲ್ಲಿರುವ ಪ್ರಶ್ನೆಗಳಿಗೆ ಹೊಂದಿಕೊಂಡಿರುವುದನ್ನು ಗಮನಿಸಿರಿ.

1. ಮೋಶೆಯು ತಿರಸ್ಕರಿಸಲ್ಪಟ್ಟದ್ದು: ಅರಣ್ಯ. 12:1–2; 14:1–4; 16:1–3, 12–14, 41; 20:2–5; 21:4–5
2. ದೇವರ ಒದಗಿಸುವಿಕೆಗಳು ತಿರಸ್ಕರಿಸಲ್ಪಟ್ಟದ್ದು: ಅರಣ್ಯ. 11:4–6; 20:5; 21:5
3. ದೇವರು ತಿರಸ್ಕರಿಸಲ್ಪಟ್ಟದ್ದು: ಅರಣ್ಯ. 11:1, 4–6; 14:1–4, 11, 23, 35; 25:1–3
4. ದೇವರು ನೀಡಿದ ವಾಗ್ದಾನ ದೇಶದ ವರವು ತಿರಸ್ಕರಿಸಲ್ಪಟ್ಟದ್ದು: ಅರಣ್ಯ. 13:26–14:3
5. ದೇವರ ಸುವ್ಯವಸ್ಥಿತ ಪದ್ಧತಿಯು ತಿರಸ್ಕರಿಸಲ್ಪಟ್ಟದ್ದು: ಅರಣ್ಯ. 14:39–45

**ಇ. ಪ್ರಶ್ನೆಗಳು**

1. ಇಸ್ರಾಯೇಲರು ಮೋಶೆಯ ನಾಯಕತ್ವವನ್ನು ತಿರಸ್ಕರಿಸಿದ ವಿವಿಧ ಮಾರ್ಗಗಳನ್ನು ವಿವರಿಸಿರಿ (ಅರಣ್ಯ. 12:1–2; ಅರಣ್ಯ. 14:1–4; ಅರಣ್ಯ. 16:1–3, 12–14, 41; ಅರಣ್ಯ. 20:2–5; 21:4–5).
2. ಇಸ್ರಾಯೇಲರು ಹೇಗೆ ದೇವರ ಒದಗಿಸುವಿಕೆಗಳನ್ನು ತಿರಸ್ಕರಿಸಿದರು ಎಂಬುದನ್ನು ವಿವರಿಸಿರಿ (ಅರಣ್ಯ. 11:4–6; 20:5; 21:5)?
3. ಇಸ್ರಾಯೇಲರು ಹೇಗೆ ದೇವರನ್ನು ತಿರಸ್ಕರಿಸಿದರು (ಅರಣ್ಯ. 11:1, 4–6; 14:1–4, 11, 23, 35; 25:1–3)?
4. ಇಸ್ರಾಯೇಲರು ಯಾಕೆ ದೇವರು ನೀಡಿದ ವಾಗ್ದಾನ ದೇಶದ ವರವನ್ನು ತಿರಸ್ಕರಿಸಿದರು (ಅರಣ್ಯ. 13:26–14:3)?
5. ಅರಣ್ಯ. 10:13, 33–36 ನ್ನು ಅರಣ್ಯ. 14:39–45 ರೊಂದಿಗೆ ಹೋಲಿಸಿರಿ. ನಾವು ಈ ಹೋಲಿಕೆಯಿಂದ 'ದೇವರ ಸುವ್ಯವಸ್ಥಿತ ಪದ್ಧತಿಯ' ಕುರಿತು ಏನನ್ನು ಕಲಿಯುತ್ತೇವೆ?

**ಈ. ಸಮಾರೋಪಗಳು**

ಇಸ್ರಾಯೇಲರು ತಮಗೆ ದೇವರು ನೀಡಿದ ಆದರ್ಶಗಳನ್ನು ತಿರಸ್ಕರಿಸಿದ್ದರ ಕುರಿತು ಮೇಲಿನ ವಾಕ್ಯಭಾಗಗಳ ಅಧ್ಯಯನದಿಂದ ನಾವು ಈ ಸಮಾರೋಪಗಳಿಗೆ ತಲುಪಬಹುದು:

1. ಅವರು ತಮ್ಮ ನಾಯಕನನ್ನು ತಿರಸ್ಕರಿಸಿದರು. ಅರಣ್ಯಕಾಂಡವು ಮೋಶೆಯನ್ನು ಇಸ್ರಾಯೇಲರ ಅರಸನ ಸಮಾನವಾದ ಒಬ್ಬ ಸೈನ್ಯಾಧಿಕಾರಿಯಾಗಿ ಪ್ರಸ್ತುತಪಡಿಸುತ್ತದೆ. ಆತನೇ ಅಂತಿಮ ನಿರ್ಧಾರಗಳನ್ನು ಮಾಡುವವನು, ಆತನೇ ಅಪ್ಪಣೆಗಳನ್ನು ಕೊಡುವವನು, ಆತನೇ ವಿಮೋಚನೆಯನ್ನು ತರುವವನು ಮತ್ತು ಆತನೇ ಆರಾಧನೆಯನ್ನು ಕ್ರಮಪಡಿಸುವವನು. ಆತನೇ ನಿಜವಾದ ಪ್ರವಾದಿ ಮತ್ತು ಜನರ ಪರವಾಗಿ ಮೊರೆಯಿಡುವವನು. ಆದರೆ ಜನರು ಪದೇ ಪದೇ ಆತನನ್ನು ತಿರಸ್ಕರಿಸಿದರು.
2. ಅವರು ದೇವರ ಒದಗಿಸುವಿಕೆಗಳನ್ನು ತಿರಸ್ಕರಿಸಿದರು. ದೇವರು ಅರಣ್ಯದಲ್ಲಿ ಅವರ ಎಲ್ಲಾ ಅಗತ್ಯತೆಗಳನ್ನು ಸಂಧಿಸಿದನು. ಆತನು ಅವರಿಗೆ ಆಹಾರ ಮತ್ತು ನೀರನ್ನು ಒದಗಿಸಿದನು; ಆತನು ಅವರ ಉಡುಪುಗಳು ಮತ್ತು ಚಪ್ಪಲಿಗಳು ದೀರ್ಘಕಾಲ ಬಾಳಿಕೆ ಬರುವಂತೆ ಮಾಡಿದನು. ಆದರೆ ಅವರು ಆತನಿಗೆ ಕೃತಜ್ಞತೆ ಸಲ್ಲಿಸುವುದರ ಬದಲಾಗಿ ಗೊಣಗಿದರು ಮತ್ತು ದೂರಿದರು.
3. ಅವರು ದೇವರನ್ನು ತಿರಸ್ಕರಿಸಿದರು. ದೇವರು ಅವರನ್ನು ಕೇವಲ ಈಜಿಪ್ಟಿನ ದಾಸತ್ವದಿಂದ ಮಾತ್ರ ಬಿಡುಗಡೆಮಾಡಿರಲಿಲ್ಲ. ಆತನು ಅವರ ಸಂಗಡ ಸಿನಾಯಿ ಪರ್ವತದಲ್ಲಿ ಒಂದು ಒಡಂಬಡಿಕೆಯನ್ನು ಮಾಡಿಕೊಂಡನು. ಆದರೆ ಅರಣ್ಯದಲ್ಲಿನ ಅಲೆದಾಟಗಳ

ವರ್ಷಗಳಲ್ಲಿ ಅವರು ಆತನ ಪದೇ ಪದೇ ಆತನ ವಿರುದ್ಧ ದಂಗೆ ಎದ್ದರು. ಮೋವಾಬಿನ ಬಯಲುಗಳಲ್ಲಿ ಅವರು ಮೋವಾಬ್ಯರ ದೇವರನ್ನು ಆರಾಧಿಸಿದ್ದಲ್ಲದೆ ಮೋವಾಬ್ಯರ ಸ್ತ್ರೀಯರೊಂದಿಗೆ ವ್ಯಭಿಚಾರವನ್ನು ಸಹ ಮಾಡಿದರು.

4. ಅವರು ದೇವರು ನೀಡಿದ ವಾಗ್ದಾನ ದೇಶದ ವರವನ್ನು ತಿರಸ್ಕರಿಸಿದರು. ಹನ್ನೆರಡು ಗೂಢಾಚಾರರು ತಮ್ಮ ವರದಿಯೊಂದಿಗೆ ಹಿಂತಿರುಗಿದಾಗ ಅವರು ಕೇವಲ ಕಷ್ಟ ಮತ್ತು ಸಮಸ್ಯೆಗಳನ್ನು ಕಂಡರು. ಅವರು ದೇವರ ವರಕ್ಕೆ 'ನಾ ಒಲ್ಲೆ' ಎಂದರು. ಅದರ ಪರಿಣಾಮವಾಗಿ ಇಸ್ರಾಯೇಲರ ಇಡೀ ಒಂದು ತಲೆಮಾರು ಅರಣ್ಯದಲ್ಲಿ ಸಾಯಬೇಕಾಯಿತು.

5. ದೇವರು ಅವರಿಗೆ ಕೊಟ್ಟ ಸುವ್ಯವಸ್ಥಿತ ಪದ್ಧತಿಯನ್ನು ಅವರು ತಿರಸ್ಕರಿಸಿದರು. ಅರಣ್ಯಕಾಂಡದ ಪ್ರಾರಂಭದಲ್ಲಿ ಇಸ್ರಾಯೇಲನ್ನು ವಾಗ್ದಾನ ದೇಶವನ್ನು ವಶಮಾಡಿಕೊಳ್ಳಲು ಶಿಸ್ತಿನಿಂದ ಒಂದು ಮಹಾಸಮೂಹವಾಗಿ ನಡೆಯುತ್ತಿರುವ ರಾಷ್ಟ್ರವನ್ನಾಗಿ ವರ್ಣಿಸಲಾಗಿದೆ. ಆದರೆ ಕೆಲವೇ ಅಧ್ಯಾಯಗಳ ನಂತರ ಆಕೆಯು ಶಿಸ್ತಿಗೆ ಬಗ್ಗದ ದೊಂಬಿಯಾಗಿ, ದಂಗೆಕೋರಳಾಗಿ, ಗೊಣಗುವವಳಾಗಿ ಹಾಗೂ ಗೊಂದಲಕ್ಕೆ ಒಳಗಾದವಳಾಗಿ ಕಂಡುಬರುತ್ತಾಳೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ದೇವರು ತಮಗಾಗಿ ಹೊಂದಿದ್ದ ಆದರ್ಶವನ್ನು ಇಸ್ರಾಯೇಲರು ತಿರಸ್ಕರಿಸಿದ್ದರ ವಿವಿಧ ಅಂಶಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ (ನಿಮ್ಮ ನೋಟ್‌ಬುಕ್ ಅಥವಾ ಪಠ್ಯಪುಸ್ತಕವನ್ನು ನೋಡಿ ಹೇಳಬೇಡಿರಿ).

2. ಇಸ್ರಾಯೇಲರು ತಮ್ಮ ಅರಣ್ಯದಲ್ಲಿನ ಅಲೆದಾಟದ ಅವಧಿಯಲ್ಲಿ ದೇವರೊಂದಿಗೆ ಹಾಗೂ ಮೋಶೆಯೊಂದಿಗೆ ಕೃತಜ್ಞತೆಯಿಲ್ಲದವರಾಗಿ ಬುದ್ಧಿಹೀನವಾದ ರೀತಿಯಲ್ಲಿ ವರ್ತಿಸಿದ್ದರ ಕುರಿತು ಈ ಅಧ್ಯಯನವು ನಿಮಗೆ ಹೇಗೆ ಉತ್ತಮವಾದ ತಿಳುವಳಿಕೆಯನ್ನು ಕೊಟ್ಟಿದೆ ಎಂದು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

3. ಈ ಅಧ್ಯಯನದಿಂದ ದಕ್ಷಿಣ ಭಾರತದಲ್ಲಿರುವ ಸಭೆಯು ಕಲಿತುಕೊಳ್ಳಬಹುದಾದ ಸಂಗತಿಯ ಕುರಿತು ಒಂದು ಪಟ್ಟಿಯನ್ನು ಮಾಡಿರಿ.

**ಊ. ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ**

ನೀವು ಈ ಅಧ್ಯಯನದಲ್ಲಿ ಕಲಿತಿರುವ ಸಂಗತಿಯನ್ನು ಬಳಸಿಕೊಂಡು 'ದೇವರು ನಮಗಾಗಿ ಹೊಂದಿರುವ ಆದರ್ಶವನ್ನು ನಾವು ತಿರಸ್ಕರಿಸಬಾರದು' ಎಂಬ ಸತ್ಯವೇದ ಅಧ್ಯಯನವನ್ನು ನಿಮ್ಮ ಸಭೆಗಾಗಿ ಸಿದ್ಧಪಡಿಸಿರಿ.

**ಅರಣ್ಯಕಾಂಡ ಅಧ್ಯಯನ 12: ಹೊಸ ಸಂತತಿ**

**ಅ. ಪರಿಚಯ**

ಇಸ್ರಾಯೇಲರು ಹೊರ್ಮಾದ ಯುದ್ಧದಲ್ಲಿ ಕಾನಾನ್ಯರನ್ನು ಸೋಲಿಸಿದಾಗ ಅರಣ್ಯಕಾಂಡದ ಕಥೆಯಲ್ಲಿ ಒಂದು ತಿರುವು ಬರುತ್ತದೆ (ಅರಣ್ಯ. 21:1–3). ಇದೇ ಹೊರ್ಮಾದಲ್ಲಿ 39 ವರ್ಷಗಳ ಹಿಂದೆ ಇಸ್ರಾಯೇಲರ ಹಳೆಯ ಸಂತತಿಯು ಅಮಾಲೇಕ್ಯರಿಂದ ಹಾಗೂ ಕಾನಾನ್ಯರಿಂದ ಸೋಲಿಸಲ್ಪಟ್ಟಿತ್ತು. ವಾಗ್ದಾನ ದೇಶವನ್ನು ವಶಮಾಡಿಕೊಳ್ಳಬೇಕೆಂಬ ಯೆಹೋಶುವ ಮತ್ತು ಕಾಲೇಬರ ಸಲಹೆಯನ್ನು ಇಸ್ರಾಯೇಲರು ತಿರಸ್ಕರಿಸಿದಾಗ ಆದ ಮಹಾ ದಂಗೆಯ ನಂತರ ಈ ಘಟನೆಯು ಸಂಭವಿಸಿತ್ತು. ಆ ಸಂತತಿಯು ಅರಣ್ಯದಲ್ಲಿ ನಾಶವಾಗಬೇಕೆಂಬ ಶಿಕ್ಷೆಯನ್ನು ದೇವರು ಅವರಿಗೆ ನೀಡಿದನು ಮತ್ತು ವಾಗ್ದಾನ ದೇಶದ ಕುರಿತು ಕೆಟ್ಟ ವರದಿಯನ್ನು ಹರಡಲು ಕಾರಣರಾದ ಹತ್ತು ಗೂಢಾಚಾರರನ್ನು ವ್ಯಾಧಿಯಿಂದ ನಾಶಮಾಡಿದನು. ಇಸ್ರಾಯೇಲರು ತಮ್ಮ ತಪ್ಪನ್ನು ಅರಿತುಕೊಂಡು ಬಹಳವಾಗಿ ಅತ್ತರು. ನಂತರ ಅವರು ಭಯಭ್ರಾಂತರಾಗಿ ದೇವರ ಚಿತ್ತಕ್ಕೂ ಹಾಗೂ ಮೋಶೆಯ ಬುದ್ಧಿಮಾತಿಗೂ ವಿರುದ್ಧವಾಗಿ ಅಮಾಲೇಕ್ಯರ ಹಾಗೂ ಕಾನಾನ್ಯರ ವಿರುದ್ಧ ಯುದ್ಧಕ್ಕೆ ಹೋದರು. ಹಾಗಾಗಿ ಅವರು ಯುದ್ಧದಲ್ಲಿ ಸೋತು ಹೊರ್ಮಾದವರೆಗೆ ಅಟ್ಟಲ್ಪಟ್ಟರು (ಅರಣ್ಯ. 14:39–45).

ಇಸ್ರಾಯೇಲರ ಹೊಸ ಸಂತತಿಯು ಅರಣ್ಯ. 20:1 ರಲ್ಲಿನ ಕಥೆಯಲ್ಲಿ ಪ್ರವೇಶಿಸುತ್ತದೆ. ಆ ವಚನವು ನಿರ್ಗಮನದ ನಂತರದ ನಲವತ್ತನೆಯ ವರ್ಷದ ಮೊದಲ ತಿಂಗಳನ್ನು ಸೂಚಿಸುತ್ತದೆ.

ಈ ಎರಡು ಸಂತತಿಗಳು ಅರಣ್ಯಕಾಂಡದಲ್ಲಿರುವ ನಾಲ್ಕನೆಯ ಪ್ರಧಾನ ವಿಷಯವಾಗಿದೆ. ಮೊದಲ ಸಂತತಿಯು ಈಜಿಪ್ಟಿನಿಂದ ಬಿಡುಗಡೆ ಹೊಂದಿ ಅರಣ್ಯದಲ್ಲಿ ನಾಶವಾದ ಇಸ್ರಾಯೇಲರನ್ನು ಒಳಗೊಂಡಿತ್ತು. ಎರಡನೆಯ ಸಂತತಿಯು ಅರಣ್ಯದಲ್ಲಿ ಜನಿಸಿ ವಾಗ್ದಾನ ದೇಶವನ್ನು ಸ್ವಾಧೀನಮಾಡಿಕೊಂಡ ಇಸ್ರಾಯೇಲರನ್ನು ಒಳಗೊಂಡಿತ್ತು.

**ಆ. ಓದಿರಿ**

ಈ ಕೆಳಗಿರುವ ಸಂಖ್ಯೆಗಳು ಕ್ರಮವಾಗಿ ಮುಂದಿನ ಭಾಗದಲ್ಲಿರುವ ಪ್ರಶ್ನೆಗಳಿಗೆ ಹೊಂದಿಕೊಂಡಿರುವುದನ್ನು ಗಮನಿಸಿರಿ.

1. ಮೊದಲ ಸಂತತಿ: ಅರಣ್ಯ. 11:1–3, 4–6; 14:1–4
2. ಮೊದಲ ಸಂತತಿಯ ವಿರುದ್ಧ ದೇವರ ನ್ಯಾಯತೀರ್ಪು: ಅರಣ್ಯ. 14:5–38
3. ಹೊಸ ಸಂತತಿ: ಅರಣ್ಯ. 20:2–5; 21:4–5; 25:1–3
4. ಹೊಸ ಸಂತತಿಯೊಂದಿಗೆ ದೇವರು ಮಾಡಿದ ಕಾರ್ಯಗಳು: ಅರಣ್ಯ. 21:6–9; 25:4–5; 34:1
5. ನಂತರದ ಸಂತತಿಗಳು: ನ್ಯಾಯಸ್ಥಾಪಕರು. 2:6–3:6

**ಇ. ಪ್ರಶ್ನೆಗಳು**

1. ನೀವು ಮೊದಲ ಸಂತತಿಯನ್ನು ಹೇಗೆ ವರ್ಣಿಸುವಿರಿ (ಅರಣ್ಯ. 11:1–3, 4–6; 14:1–4)?
2. ಮೊದಲ ಸಂತತಿಯ ವಿರುದ್ಧ ದೇವರ ನ್ಯಾಯತೀರ್ಪನ್ನು ವಿವರಿಸಿರಿ (ಅರಣ್ಯ. 14:5–38): ಅವರು ಯಾಕೆ ನ್ಯಾಯತೀರ್ಪಿಗೆ ಒಳಗಾದರು? ಅವರು ಹೇಗೆ ನ್ಯಾಯತೀರಿಸಲ್ಪಟ್ಟರು?
3. ನೀವು ಮೊದಲ ಸಂತತಿಯನ್ನು ಹೇಗೆ ವರ್ಣಿಸುವಿರಿ (ಅರಣ್ಯ. 20:2–5; 21:4–5; 25:1–3)?
4. ಹೊಸ ಸಂತತಿಯೊಂದಿಗೆ ದೇವರು ಹೇಗೆ ವ್ಯವಹರಿಸಿದನು (ಅರಣ್ಯ. 21:6–9; 25:4–5; 34:1)?
5. ಇಸ್ರಾಯೇಲರ ನಂತರದ ಸಂತತಿಗಳನ್ನು ವಿವರಿಸಿರಿ (ನ್ಯಾಯಸ್ಥಾಪಕರು. 2:6–3:6)?

**ಈ. ಸಮಾರೋಪಗಳು**

1. ಇಸ್ರಾಯೇಲರ ದೂರುಗಳು ಮತ್ತು ದಂಗೆಯು ದೇವರಿಗೆ ಕೋಪವನ್ನೆಬ್ಬಿಸಿ ತಮ್ಮ ಮೇಲೆ ನ್ಯಾಯತೀರ್ಪನ್ನು ಬರಮಾಡಿಕೊಂಡರು. ವ್ಯತ್ಯಾಸವಾದ ಕಾಲಗಳಲ್ಲಿ ದೇವರ ಶಿಕ್ಷೆಯು ವ್ಯತ್ಯಾಸವಾದ ರೂಪದಲ್ಲಿ ಬಂದಾಗ್ಯೂ ಇದೇ ರೀತಿಯ ಸನ್ನಿವೇಶವು ಒಂದು ಸಂತತಿಯ ನಂತರ ಇನ್ನೊಂದು ಸಂತತಿಗೆ ಮುಂದುವರೆಯುತ್ತಾ ಹೋಯಿತು.

2. ಇಸ್ರಾಯೇಲರು ತಮ್ಮ ಇತಿಹಾಸದಿಂದ ಯಾವ ಪಾಠವನ್ನೂ ಕಲಿಯದೆ ಇರುವುದು ವಿಷಾದಕರವಾದ ಸಂಗತಿಯಾಗಿದೆ. ಪ್ರತಿಯೊಂದು ಸಂತತಿಯು ತನ್ನ ಬೆನ್ನನ್ನು ದೇವರಿಗೆ ತಿರುಗಿಸಿತು (ವ್ಯತ್ಯಾಸವಾದ ಕಾಲಗಳಲ್ಲಿ ಅವರ ಅವಿಧೇಯತೆ, ದಂಗೆ ಮತ್ತು ಪಾಪವು ವ್ಯತ್ಯಾಸವಾದ ರೂಪವನ್ನು ಪಡೆದಾಗ್ಯೂ ಅದು ನಡೆಯಿತು).

3. ಹೇಗಿದ್ದರೂ ದೇವರ ಶಿಕ್ಷೆಯು ಒಂದು ಒಳ್ಳೆಯ ಉದ್ದೇಶವನ್ನು ಹೊಂದಿತ್ತು. ಅದೇನೆಂದರೆ, ತನ್ನ ಜನರು ಪುನಃ ತನ್ನ ಕಡೆಗೆ ತಿರುಗಿಕೊಳ್ಳುವಂತೆ ಅವರನ್ನು ಪಶ್ಚಾತ್ತಾಪಕ್ಕೆ ನಡೆಸುವುದಾಗಿದೆ.

4. ಹಾಗಾಗಿ ದೇವರು ತನ್ನ ಜನರನ್ನು ಶಿಕ್ಷಿಸಿದಾಗ್ಯೂ ಆತನು ಕೃಪೆ ಮತ್ತು ಕರುಣೆಯಲ್ಲಿ ಶ್ರೀಮಂತನು ಎಂಬುದಾಗಿ ತನ್ನನ್ನು ಪ್ರಕಟಿಸಿಕೊಂಡನು. ಆತನು ತನ್ನ ಅವಿಧೇಯ ಮತ್ತು ಪಾಪವುಳ್ಳ ಜನರ ಕುರಿತು (ಸಂತತಿಯ ನಂತರ ಸಂತತಿಗೆ) ಕನಿಕರಪಟ್ಟನು.

5. ಇಸ್ರಾಯೇಲರಿಗೆ ಅವರ ಇತಿಹಾಸದುದ್ದಕ್ಕೂ ಒಳ್ಳೆಯ ನಾಯಕತ್ವವು ಪ್ರಾಮುಖ್ಯವಾಗಿತ್ತು. ಮೋಶೆಯು ಅವರ ಪರವಾಗಿ ದೇವರಲ್ಲಿ ಬೇಡಿಕೊಂಡನು. ಯೆಹೋಶುವ ಮತ್ತು ಆತನ ತಲೆಮಾರಿನ ನಾಯಕರುಗಳು ಇಸ್ರಾಯೇಲರನ್ನು ನೀತಿವಂತಿಕೆಯ ಮಾರ್ಗದಲ್ಲಿ ನಡೆಸಲು ಶಕ್ತರಾಗಿದ್ದರು.

6. ಆದರೆ ಒಳ್ಳೆಯ ನಾಯಕತ್ವವು ಎಲ್ಲಾ ಸಮಯದಲ್ಲಿ ಸಾಕಾಗಿರಲಿಲ್ಲ. ಒಬ್ಬ ಯಾಜಕನೂ, ಪ್ರವಾದಿಯೂ ಮತ್ತು ರಾಜನಂತಹ ಸೇನಾಧಿಪತಿಯೂ ಆದ ಮಹಾಪುರುಷ ಮೋಶೆಯ ನಾಯಕತ್ವದ ಅಡಿಯಲ್ಲಿಯೂ ಸಹ ಅವರು ಆತನ ವಿರುದ್ಧವಾಗಿಯೂ ಹಾಗೂ ದೇವರ ವಿರುದ್ಧವಾಗಿಯೂ ದಂಗೆ ಎದ್ದರು.

7. ದೇವರ ಹಾಗೂ ಆತನ ಪರಾಕ್ರಮ ಕಾರ್ಯಗಳ ಕುರಿತು ಇಸ್ರಾಯೇಲರಿಗೆ ಆದ ಒಂದು ವೈಯಕ್ತಿಕ ಅನುಭವವು ಪ್ರಾಮುಖ್ಯವಾದ ಅಂಶವಾಗಿದೆ. ಈ ವೈಯಕ್ತಿಕ ಅನುಭವಗಳ ನೆನಪು ಇಸ್ರಾಯೇಲರು ತಮ್ಮ ಒಡಂಬಡಿಕೆಯ ಕರ್ತನಿಗೆ ನಂಬಿಗಸ್ತರಾಗಿರಲು ಸಹಾಯ ಮಾಡಿತು.

### ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಇತಿಹಾಸದುದ್ದಕ್ಕೂ ಇಸ್ರಾಯೇಲರ ಹಾಗೂ ಅವರ ಒಡಂಬಡಿಕೆಯ ಕರ್ತನ ನಡುವಿನ ಸಂಬಂಧವು ಹೇಗಿತ್ತು ಎಂಬುದರ ಕುರಿತು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ (ನಿಮ್ಮ ನೋಟ್‌ಬುಕ್ ಅಥವಾ ಪಠ್ಯಪುಸ್ತಕವನ್ನಾಗಲಿ ನೋಡಿ ಹೇಳಬೇಡಿರಿ).

2. ಹಳೆ ಒಡಂಬಡಿಕೆಯ ಕಾಲದಲ್ಲಿನ ಇಸ್ರಾಯೇಲರ ಇತಿಹಾಸದ ಕುರಿತು ನಿಮಗೆ ಉತ್ತಮವಾದ ತಿಳುವಳಿಕೆಯನ್ನು ಕೊಡಲು ಈ ಅಧ್ಯಯನವು ಹೇಗೆ ಸಹಾಯಕಾರಿಯಾಯಿತು ಎಂಬುದನ್ನು ನಿಮ್ಮ ಗುಂಪಿನೊಂದಿಗೆ ಹಂಚಿಕೊಳ್ಳಿರಿ.

3. ಪ್ರತಿಯೊಂದು ಹೊಸ ಸಂತತಿಯು ಕರ್ತನೊಂದಿಗೆ ನಡೆಯಲು ಮತ್ತು ಆತನನ್ನು ನಂಬಿಗಸ್ತರಾಗಿ ಸೇವಿಸಲು ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಹೇಗೆ ಸಹಾಯಮಾಡಬಹುದು? ಒಂದು ಪಟ್ಟಿಯನ್ನು ಮಾಡಿರಿ.

### ಊ. ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ

ನೀವು ಈ ಅಧ್ಯಯನದಲ್ಲಿ ಕಲಿತಿರುವ ಸಂಗತಿಯನ್ನು ಬಳಸಿಕೊಂಡು ಸಭಾನಾಯಕರುಗಳಿಗಾಗಿ ಈ ಶೀರ್ಷಿಕೆಯುಳ್ಳ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ: 'ನಾವು ಯುವ ಸಂತತಿಗೆ ಕರ್ತನೊಂದಿಗೆ ನಡೆಯಲು ಮತ್ತು ಆತನನ್ನು ನಂಬಿಗಸ್ತರಾಗಿ ಸೇವಿಸಲು ಸಹಾಯ ಮಾಡೋಣ!'

# ಧರ್ಮೋಪದೇಶಕಾಂಡ ಅಧ್ಯಯನ

**ಧರ್ಮೋಪದೇಶಕಾಂಡದ ಪೀಠಿಕೆ**

**ಹೆಸರು**

ಧರ್ಮೋಪದೇಶಕಾಂಡವು ಪಂಚಕಾಂಡದಲ್ಲಿನ ಐದನೇಯ ಮತ್ತು ಕೊನೆಯ ಪುಸ್ತಕವಾಗಿದೆ. ಇದರ ಮೊದಲ ವಾಕ್ಯವಾದ 'ಇವುಗಳು ಮೋಶೆಯು ಮಾತನಾಡಿದ ಪದಗಳು' ಎಂಬುದರ ಮೂಲ ಆಧಾರದ ಮೇಲೆ ಇಬ್ರಿಯ ಸತ್ಯವೇದದಲ್ಲಿ ಇದನ್ನು 'ಪದಗಳು' ಎಂಬುದಾಗಿ ಕರೆಯಲಾಗಿದೆ. ಇದರ ಆಂಗ್ಲ ಹೆಸರು ಹಳೇ ಒಡಂಬಡಿಕೆಯ ಗ್ರೀಕ್ ತರ್ಜುಮೆಯ ಸೆಪ್ಟ್ಯಾಜೆಂಟ್ ನಿಂದ ಬಂದಿದೆ. ಇಲ್ಲಿ 17:18 ರಲ್ಲಿರುವ 'ಈ ಧರ್ಮಶಾಸ್ತ್ರದ ಒಂದು ಪ್ರತಿ' ಎಂಬ ಪದವಿನ್ಯಾಸವು "ಎರಡನೇಯ ಧರ್ಮಶಾಸ್ತ್ರ" (ಅಥವಾ "ಪುನರಾವರ್ತನೆಯಾದ ಧರ್ಮಶಾಸ್ತ್ರ") ಎಂದು ತಪ್ಪಾಗಿ ತರ್ಜುಮೆಯಾಗಿದೆ. ಆದರೆ ಇವೆಲ್ಲವುಗಳ ತಪ್ಪಿನ ಮಧ್ಯದಲ್ಲಿ, "ಧರ್ಮೋಪದೇಶಕಾಂಡ" ಪುಸ್ತಕವು ಒಳ್ಳೆಯ ಹೆಸರನ್ನು ಹೊಂದಿದೆ, ಯಾಕೆಂದರೆ ದೇವರು ತನ್ನ ಜನರಾದ ಇಸ್ರಾಯೇಲ್ಯರಿಗೆ ಸಿನಾಯ್ ಪರ್ವತದಲ್ಲಿ ಕೊಟ್ಟ ಧರ್ಮಶಾಸ್ತ್ರವು ನಿಜವಾಗಿ ಕೆಲವು ವಿಶಾಲತೆಯ ದೃಷ್ಟಿಕೋನದಿಂದ ಪುನರಾವರ್ತನೆಗೊಂಡಿದೆ.

**ದಿನಾಂಕ ಮತ್ತು ಜೋಡಣೆ**

ಪುಸ್ತಕವು ಯೊರ್ದನ್ ಹೊಳೆಯ ಪೂರ್ವದಿಕ್ಕಿನ ಮೋವಾಬ್ ಬಯಲು ಪ್ರದೇಶದ ಕಡೆಯಲ್ಲಿ ಪ್ರಾರಂಭಗೊಳ್ಳುತ್ತದೆ. ಈಗ ಇಸ್ರಾಯೇಲ್ಯರು ವಾಗ್ದಾನ ಮಾಡಲ್ಪಟ್ಟ ದೇಶದ ಹತ್ತಿರದಲ್ಲಿಯೇ ತಲುಪಿದ್ದಾರೆ. ಅವರು ಐಗುಪ್ತದೇಶವನ್ನು ಬಿಟ್ಟು 40 ವರ್ಷಗಳು ಕಳೆದವು. ಅವರ ಮರುಭೂಮಿಯಲ್ಲಿನ ಅಲೆದಾಟವು ಕೊನೆಯಾಗುತ್ತಾ ಬಂದಿದ್ದು ಮತ್ತು ಅವರ ಪಿತೃಗಳಿಗೆ ದೇವರು ವಾಗ್ದಾನ ಮಾಡಿದ ದೇಶವನ್ನು ಅತೀಬೇಗನೆ ಅವರು ವಶಪಡಿಸಿಕೊಳ್ಳುವುದರಲ್ಲಿದ್ದರು. ವಾಗ್ದಾನ ಮಾಡಲ್ಪಟ್ಟ ದೇಶದ ಕಡೆಗೆ ಜನರನ್ನು ಗೆಲುವಿನೊಂದಿಗೆ ಮುಂದೆ ನಡೆಸಲು, ಮೋಶೆಯು ತನ್ನ ನಾಯಕತ್ವವನ್ನು ಯೆಹೋಶುವನಿಗೆ ವರ್ಗಾಯಿಸುವ ಸಮಯ ಬಂದಿದೆ.

ಪರಿಣಾಮವಾಗಿ, ಈ ಪುಸ್ತಕದ ಕಥೆಯ ರಚನೆಯು ಕ್ರಿ.ಪೂ. 1406 ರಲ್ಲಿ ಜರುಗಿತು. ಐಗುಪ್ತದಲ್ಲಿನ ದಾಸತ್ವದ ಸಮಯ ಮತ್ತು ಮರುಭೂಮಿಯಲ್ಲಿನ ಅಲೆದಾಟದ ಸಂದರ್ಭಗಳಲ್ಲಿ ಉಂಟಾದ ಘಟನೆಗಳನ್ನು ಮೋಶೆಯು ಪುನಃ ಪುನಃ ಉಲ್ಲೇಖಿಸುತ್ತಿದ್ದಾನೆ. ಘಟನೆಗಳು ಕಾಲಾನುಕ್ರಮಣಿಕೆಯ ಕ್ರಮದಂತೆ ಯಾವಾಗಲು ತಿಳಿಸಲ್ಪಟ್ಟಿಲ್ಲ.

**ಸಾಹಿತ್ಯ ಶೈಲಿ**

ಇಸ್ರಾಯೇಲ್ಯರನ್ನು ಮೋಶೆಯು ಬಿಡುಗಡೆಗೊಳಿಸಿದ್ದ ಮಾತುಗಳನ್ನೇ ಪುಸ್ತಕವು ಬಹಳ ಪ್ರಮಾಣದಲ್ಲಿ ಒಳಗೊಂಡಿರುತ್ತದೆ. ಮಾತುಗಳನ್ನು ದೇವರು ತನ್ನ ಜನರೊಂದಿಗಿನ ತನ್ನ ಒಡಂಬಡಿಕೆಯನ್ನು ತನ್ನ ಮಾರ್ಗದಲ್ಲಿ ನವೀಕರಿಸುತ್ತಿದ್ದ ರೀತಿಯಲ್ಲಿ ಅರ್ಥಮಾಡಿಕೊಳ್ಳತಕ್ಕದ್ದು.

ಮೋಶೆಯು ವಾಗ್ದಾನ ಮಾಡಲ್ಪಟ್ಟ ದೇಶದಲ್ಲಿ ನೆಲೆಗೊಳ್ಳಲು ಹೋಗುತ್ತಿದ್ದ ಜನರಿಗೆ ಸಂಬಂಧಿಸುವಂತೆ ಪ್ರಮುಖವಾಗಿ ಆ ಧರ್ಮಶಾಸ್ತ್ರವನ್ನು ತನ್ನ ಮಾತಿನಲ್ಲಿ ಒತ್ತಿ ಹೇಳುತ್ತಿದ್ದಾನೆ. ಅರಣ್ಯಕಾಂಡ ಮತ್ತು ಯಾಜಕಕಾಂಡಗಳಲ್ಲಿ ನಾವು ಕಾಣುವಂತಹ ನಿಜಘಟನಾವಳಿಗಳನ್ನು ಹೋಲಿಸುವಾಗ ಅದರ ಲೇಖನ ಶೈಲಿಯು ಬಹಳ ವ್ಯತ್ಯಾಸವುಳ್ಳದ್ದಾಗಿದೆ. ಮೋಶೆಯು ಈಗ ತನ್ನ ಹೃದಯದಿಂದ ಮಾತನಾಡುತ್ತಿದ್ದಾನೆ. ಆತನ ಸಂದೇಶದ ಧ್ವನಿಯು ವೈಯಕ್ತಿಕ ಮತ್ತು ಹಾರ್ದಿಕ ಮಾತುಗಳಂತೆ ಇವೆ.

ಪುಸ್ತಕದಾದ್ಯಂತ ದೇವರು ಮತ್ತು ಆತನ ಜನರೊಂದಿಗಿನ ಪ್ರೀತಿಯ ಬಾಂಧವ್ಯದ ಪದವಿನ್ಯಾಸಗಳನ್ನು ನಾವು ಕಾಣಬಹುದು. ಇದು ಬಹಳ ಆಧ್ಯಾತ್ಮಿಕ ಪುಸ್ತಕವಾಗಿದೆ, ಮತ್ತು ಇದು ತನ್ನ ಓದುಗರು ದೇವರಿಗೆ ವಿಧೇಯರಾಗಲಿಕ್ಕೆ ಮತ್ತು ಆರಾಧನೆಗೆ ತಮ್ಮನ್ನು ತಾವೇ

ಒಪ್ಪಿಸಿಕೊಡುವಂತೆ ಪ್ರೋತ್ಸಾಹಿಸುತ್ತದೆ. ಇದು ಸತ್ಯವೇದದ ಉಳಿದ ಭಾಗಗಳಲ್ಲಿ ಬಹಳ ಸಮಯ ಉಲ್ಲೇಖಿಸಲ್ಪಟ್ಟಿದೆ ಮತ್ತು ವ್ಯಾಖ್ಯಾನಿಸಲ್ಪಟ್ಟಿದೆ.

**ಪುಸ್ತಕದ ಉದ್ದೇಶ**

ಧರ್ಮೋಪದೇಶಕಾಂಡವು ಹಳೇ ಒಡಂಬಡಿಕೆಯಲ್ಲಿಯೇ ಬಹಳ ದೈವಿಕ ಪುಸ್ತಕವಾಗಿದೆ. ಧರ್ಮೋಪದೇಶಕಾಂಡದಲ್ಲಿನ ಮೋಶೆಯ ಮಾತಿನ ಉದ್ದೇಶಗಳು 1:5 ರಲ್ಲಿ ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ, 'ಮೋಶೆಯು ಈ ಮುಂದಣ ಧರ್ಮಶಾಸ್ತ್ರವನ್ನು ವಿವರಿಸುವುದಕ್ಕೆ ಪ್ರಾರಂಭಿಸಿ ಹೇಳಿದನು'.

ಪ್ರಾರಂಭದಲ್ಲಿ ಸಿನಾಯ್ ಬೆಟ್ಟದ ಬಳಿಯಲ್ಲಿ ಒಡಂಬಡಿಕೆ ಮಾಡಿಕೊಂಡಿದ್ದ ಇಸ್ರಾಯೇಲಿನ ಸಂತತಿಯು ಅರಣ್ಯದಲ್ಲಿ ಸತ್ತುಹೋಗಿದ್ದಾರೆ (1:35-39ನ್ನು ನೋಡಿರಿ). ಮೋವಾಬ್ ಪ್ರದೇಶದಲ್ಲಿ ಡೇರೆ ಹಾಕಿಕೊಂಡ ಜನರು ಹೊಸ ಸಂತತಿಯವರಾಗಿದ್ದಾರೆ. ಅವರು ಐಗುಪ್ತ್ಯರಿಂದ ದೇವರು ಕೊಟ್ಟ ಮಹಿಮೆಯ ಜಯವನ್ನು ಅನುಭವಿಸಿರಲಿಲ್ಲ, ಮತ್ತು ಸಿನಾಯ್ ಪರ್ವತದಲ್ಲಿಯೂ ಸಹ ಅವರು ಇದ್ದಿಲ್ಲ. ಹಾಗಾಗಿ ಮೋಶೆಯು ತನ್ನ ಉಪನ್ಯಾಸದಲ್ಲಿ ಸಿನಾಯ್ ಪರ್ವತದ ಒಡಂಬಡಿಕೆಯನ್ನು ತರ್ಜುಮೆ ಮಾಡುತ್ತಿದ್ದಾನೆ, ಅಥವಾ ಇನ್ನೊಂದು ಪದದಲ್ಲಿ ಹೇಳಬೇಕಾದರೆ ವಿಮೋಚನಕಾಂಡ ಮತ್ತು ಯಾಜಕಕಾಂಡ ಪುಸ್ತಕಗಳ ಪಠ್ಯಕ್ರಮವನ್ನು ವಿವರಿಸುತ್ತಿದ್ದಾನೆ.

ಆದುದರಿಂದ ಧರ್ಮೋಪದೇಶಕಾಂಡವು ಹೊಸ ನಿಬಂಧನೆಗಳಾಗಿ ತಿಳಿಸಲ್ಪಟ್ಟಿಲ್ಲ. ಅದಕ್ಕೆ ಬದಲಾಗಿ ದೇವರು ಸಿನಾಯ್ ಪರ್ವತದಲ್ಲಿ ಕೊಟ್ಟ ಧರ್ಮಶಾಸ್ತ್ರವನ್ನು ಹೊಸ ಸಂತತಿಗೆ ವಿವರಿಸುತ್ತಿದೆ (5:22ನ್ನು ನೋಡಿರಿ). ಮತ್ತು ಸಿನಾಯ್ ಪರ್ವತದಲ್ಲಿ ನಡೆದ ಘಟನೆಗಳಿಗೆ ಇಸ್ರಾಯೇಲಿನ ಹೊಸ ಸಂತತಿಯು ಹೇಗೆ ಸಂಬಂಧಿಸಲ್ಪಟ್ಟಿದೆ ಎಂಬುದನ್ನು ಇದು ವಿವರಿಸುತ್ತದೆ.

ಇದರ ಅರ್ಥವೇನೆಂದರೆ ಮೋಶೆಯ ಉಪನ್ಯಾಸವು ಇಸ್ರಾಯೇಲ್ ಜನರು ಅವರ ಹೊಸ ಸ್ಥಳದಲ್ಲಿದ್ದಾಗ ನಿಬಂಧನೆಗಳನ್ನು ಪುನಃ ಪರಿಚಯಿಸುತ್ತಿದೆ. ಅಂದರೆ ದೇವರು ವಾಗ್ದಾನ ಮಾಡಿದ, ಕಾನಾನ್ ದೇಶದಲ್ಲಿ ಇಸ್ರಾಯೇಲ್ ಜನರು ನೆಲೆಗೊಳ್ಳುವುರಲ್ಲಿದ್ದರು, ಹಾಗಾಗಿ ಹೊಸ ಸ್ಥಳಗಳಲ್ಲಿರುವ ಜನರಿಗೆ ದೇವರ ಚಿತ್ತ ಮತ್ತು ನಿಬಂಧನೆಗಳನ್ನು ತಿಳಿಸಲಿಕ್ಕೆ ಮಧ್ಯವರ್ತಿಯಾಗಿರುವುದು ಆತನ ಪ್ರಮುಖ ಪಾತ್ರವಾಗಿತ್ತು.

**ಧರ್ಮೋಪದೇಶಕಾಂಡದ ಉದ್ದೇಶ**

ಧರ್ಮಶಾಸ್ತ್ರ

↓

→ ಸಿನಾಯ್ ಪರ್ವತದಲ್ಲಿ ಕೊಡಲ್ಪಟ್ಟಿದ್ದು

**ರಚನೆ ಮತ್ತು ಪಠ್ಯಕ್ರಮ**

ಮೋಶೆಯಿಂದ ತಿಳಿಸಲ್ಪಟ್ಟ ಮೂರು ಪ್ರಮುಖ ಉಪನ್ಯಾಸಗಳ ಸುತ್ತ ಧರ್ಮೋಪದೇಶಕಾಂಡವು ರಚಿಸಲ್ಪಟ್ಟಿದೆ:

1. ಪೀಠಿಕೆ (1:1-5): ಯೊರ್ದನ್ ಹೊಳೆಯ ಆಚೆ ಮೋವಾಬ್ಯರ ದೇಶದಲ್ಲಿ ಮೋಶೆಯು ಈ ಮುಂದಣ ಧರ್ಮಶಾಸ್ತ್ರವನ್ನು ವಿವರಿಸುವುದಕ್ಕೆ ಪ್ರಾರಂಭಿಸಿ ಹೇಳಿದನು.

2. ಮೋಶೆಯ ಮೊದಲ ಉಪನ್ಯಾಸ (1:6-4:40): ಇಸ್ರಾಯೇಲ್ಯರು ಹೋರೇಬಿನಿಂದ (ಸಿನಾಯ್ ಪರ್ವತ) ಯೊರ್ದನ್ ನದಿಗೆ ಪ್ರಯಾಣಿಸುವ ಸಂದರ್ಭದಲ್ಲಿ ದೇವರು ಅವರಿಗೆ ಮಾಡಿದ ಸಂಗತಿಗಳನ್ನು ಮೋಶೆಯು ಸಂಕ್ಷಿಪ್ತವಾಗಿ ತಿಳಿಸುತ್ತಿದ್ದಾನೆ. ಜನರು ಪದೇ ಪದೇ ದಂಗೆ ಏಳುವುದು, ದೇವರ ನ್ಯಾಯತೀರ್ಪು, ಮತ್ತು ದೇವರ ನಿಶ್ಚಲಕರುಣೆಯನ್ನು ಒತ್ತಿಹೇಳಲಾಗಿದೆ. ಜನರು ಗತಕಾಲದಲ್ಲಿ ನಡೆದ ಘಟನೆಗಳಿಂದ ಪಾಠವನ್ನು ಕಲಿತು, ಅವರಿಗೆ ತಾನು ಕೊಡಲಿಕ್ಕಿರುವ ನಿಬಂಧನೆಗಳನ್ನು ಮತ್ತು ದೇವರ ವಿಧಿಗಳನ್ನು ಹಿಂಬಾಲಿಸುವಂತೆ ಮೋಶೆಯು ಮನವಿ ಮಾಡಿಕೊಳ್ಳುತ್ತಿದ್ದಾನೆ.

3. ಮೋಶೆಯ ಎರಡನೇ ಉಪನ್ಯಾಸ (4:44-28:28): ಇದು ಪುಸ್ತಕದ ಪ್ರಮುಖ ಭಾಗವಾಗಿದೆ. ಅಧ್ಯಾಯ 5 ರಿಂದ 11 ರಲ್ಲಿ ಅಧ್ಯಾಯ 1 ರಿಂದ 4 ರ ವಿಷಯಗಳನ್ನು ಅಭಿವೃದ್ಧಿಪಡಿಸಿ ವಿಸ್ತರಿಸಲಾಗಿದೆ, ಅಂದರೆ ಇಸ್ರಾಯೇಲ್ಯರ ಗತಕಾಲದ ಇತಿಹಾಸದ ಮೂಲವಸ್ತುವಿನ ಪುನರಾವಲೋಕನವಾಗಿದೆ. ಅವುಗಳೂ ಸಹ ಅಧ್ಯಾಯ 12 ರಿಂದ 26 ರಲ್ಲಿ ಕಂಡುಬರುವ ನಿಬಂಧನೆಗಳ ವಿವರವುಳ್ಳ ಅಧಿಕ ಬಲವಾದ ಪೀಠಿಕೆಯನ್ನು ಒದಗಿಸುತ್ತದೆ.

   ಅಧ್ಯಾಯ 5 ರಲ್ಲಿ ದಶಾಜ್ಞೆಗಳು ಕಂಡುಬರುತ್ತವೆ. ಅವುಗಳು ಧರ್ಮಶಾಸ್ತ್ರದ ಸಾಮಾನ್ಯನಿಯಾಮವಳಿಗಳನ್ನು ತಿಳಿಯಪಡಿಸುತ್ತವೆ – 'ತನ್ನ ಜನರಿಗಾಗಿ ದೇವರ ಬದಲಾಗದ ಚಿತ್ತ'. ನಂತರದ ಅಧ್ಯಾಯಗಳಲ್ಲಿ ಯೆಹೂದ್ಯ ಜನರ "ನಂಬಿಕೆಯ ನಿವೇಧನೆ"ಯನ್ನು ನಾವು ಕಾಣಬಹುದು: ಇಸ್ರಾಯೇಲ್ಯರೇ, ಕೇಳಿರಿ; ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು; 6:4. ಇದು "ಮಹಾ ಆಜ್ಞೆ"ಯನ್ನು ಹಿಂಬಾಲಿಸುತ್ತದೆ (ನೀವು ನಿಮ್ಮ ದೇವರಾದ ಯೆಹೋವನನ್ನು ಪೂರ್ಣಹೃದಯದಿಂದಲೂ ಪೂರ್ಣಪ್ರಾಣದಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸಬೇಕು).

   ಅಧ್ಯಾಯ 27 ರಿಂದ 28 ಮುಂಚಿತವಾಗಿ ಕೊಡಲ್ಪಟ್ಟ ನಿಬಂಧನೆಗಳಿಗೆ ವಿಧೇಯರಾಗುವುದರಿಂದ ಅಥವಾ ಅವಿಧೇಯರಾಗುವುದರ ಪರಿಣಾಮದ ಆಶೀರ್ವಾದ ಮತ್ತು ಶಾಪವನ್ನು ಒಳಗೊಂಡಿದೆ.

4. ಮೋಶೆಯ ಮೂರನೇ ಉಪನ್ಯಾಸ (29:1-30:20): ದೇವರು ಮತ್ತು ಆತನ ಜನರ ಮಧ್ಯದಲ್ಲಿರುವ ಒಡಂಬಡಿಕೆಯ ಸಂಬಂಧವು ಸ್ಥಿರಗೊಳಿಸಲ್ಪಟ್ಟಿದೆ. ಈ ದೃಢೀಕರಣವು ಇಸ್ರಾಯೇಲ್ ಜನರ ಈಗಿನ ಸಂತತಿ ಮತ್ತು ಭವಿಷ್ಯದ ಸಂತತಿಗಳೆರಡನ್ನು ಒಳಗೊಂಡಿರುತ್ತದೆ. ಮೋಶೆಯ ಉಪನ್ಯಾಸದ (30:15-20) ಕೊನೆಯ ಶಬ್ದಗಳು ಬಹಳ ಬಲವುಳ್ಳದ್ದಾಗಿದೆ: ನೋಡಿರಿ; ನಾನು ಜೀವಶುಭಗಳನ್ನೂ ಮರಣಾಶುಭಗಳನ್ನೂ ಈಗ ನಿಮ್ಮ ಮುಂದೆ ಇಟ್ಟಿದ್ದೇನೆ (30:15).

5. ಮುಕ್ತಾಯ (31:1-34:12): ಯೆಹೋಶುವನು ಮೋಶೆಯ ಉತ್ತರಾಧಿಕಾರಿಯಾಗುತ್ತಾನೆ. ಮೋಶೆಯು ಧರ್ಮಶಾಸ್ತ್ರವನ್ನು ಬರೆದು ಅದನ್ನು ಯಾಜಕರಿಗೆ ಕೊಟ್ಟನು. ಆದರೆ ಮೋಶೆಯು ಇಸ್ರಾಯೇಲ್ಯರ ದಂಗೆಯನ್ನು ಕುರಿತು ಭವಿಷ್ಯನುಡಿಯುತ್ತಿದ್ದಾನೆ. ನಂತರದಲ್ಲಿ ಆತನು ದೇವರ ಸ್ಥಿರವಾದ ನಂಬಿಗಸ್ಥಿಕೆಯ ಕುರಿತು, ಮತ್ತು ತನ್ನ ಜನರಿಂದ ದೇವರು ಅಪೇಕ್ಷಿಸುತ್ತಿರುವ ನಂಬಿಗಸ್ಥಿಕೆಯ ಕುರಿತು ಜನರಿಗೆ ಸಂಬೋಧಿಸಲು ಪದ್ಯವನ್ನು ಅವಲಂಬಿಸುತ್ತಿದ್ದಾನೆ. ಮೋಶೆಯು ಇಸ್ರಾಯೇಲ್ಯರ 12 ಕುಲಗಳನ್ನು ಆಶೀರ್ವದಿಸುತ್ತಿದ್ದಾನೆ. ಕೊನೆಯದಾಗಿ ನೆಬೋ ಪರ್ವತದಲ್ಲಿ ಮೋಶೆಯ ಮರಣದ ಕುರಿತು ದಾಖಲಾಗಿದೆ.

**ಈ ಪಠ್ಯಪುಸ್ತಕದಲ್ಲಿ ಧರ್ಮೋಪದೇಶಕಾಂಡ**

ಈ ಪಠ್ಯಪುಸ್ತಕದಲ್ಲಿ ಧರ್ಮೋಪದೇಶಕಾಂಡದ ಕುರಿತಾದ ನಮ್ಮ ಅಧ್ಯಯನವು ಇಸ್ರಾಯೇಲ್ಯರು ಸಿನಾಯ್ ಪರ್ವತದಿಂದ ಕಾದೇಶ್ ಮೂಲಕವಾಗಿ ಮೋವಾಬ್ ಪ್ರದೇಶಕ್ಕೆ ಪ್ರಯಾಣಿಸಿದ ಪ್ರಯಾಣವನ್ನೊಳಗೊಂಡ ಎರಡು ಅಧ್ಯಯನಗಳಿಂದ ಪ್ರಾರಂಭವಾಗುತ್ತದೆ

(ಅಧ್ಯಾಯ 1-2), ಇಲ್ಲಿ ಮೋಶೆಯು ತನ್ನ ಮೂರು ಉಪನ್ಯಾಸಗಳನ್ನು ಮಾಡಲಿಕ್ಕಿದ್ದನು. ಮೂರನೇ ಅಧ್ಯಯನವು ಧರ್ಮಶಾಸ್ತ್ರವನ್ನು ಲಕ್ಷಿಸುವುದರ ಕುರಿತು ಇಸ್ರಾಯೇಲ್ಯರು ಮಾಡುವ ಆಯ್ಕೆಯ ಪರಿಣಾಮವನ್ನು ಅವಲೋಕಿಸುತ್ತದೆ. ಅವರು ಧರ್ಮಶಾಸ್ತ್ರವನ್ನು ಕೈಗೊಂಡು ನಡೆದರೆ ಆಶೀರ್ವಾದವನ್ನು ಅನುಭವಿಸುತ್ತಾರೆ. ಒಂದು ವೇಳೆ ಅವರು ಧರ್ಮಶಾಸ್ತ್ರಕ್ಕೆ ಅವಿಧೇಯರಾದರೆ ಅವರು ಶಾಪಕ್ಕೆ ಗುರಿಯಾಗುವರು.

ಧರ್ಮೋಪದೇಶಕಾಂಡದಲ್ಲಿ ಈ ಕೆಳಗಿನ ಏಳು ಅಧ್ಯಯನಗಳಿಂದ ಏಳು ಪ್ರಮುಖ ವಿಷಯಗಳು ಕಂಡುಬರುತ್ತವೆ. ಅವುಗಳೆಂದರೆ

1. ಸ್ಮರಣೆ
2. ಧರ್ಮಶಾಸ್ತ್ರ
3. ಪ್ರೀತಿ
4. ಪವಿತ್ರಯುದ್ಧ
5. ಮನುಷ್ಯನ ವಿಚಾರಯೋಗ್ಯ ವಿಷಯಗಳು
6. ವಾಗ್ದಾನ ಮಾಡಲ್ಪಟ್ಟ ದೇಶ
7. ದೇವರ ಸಿದ್ಧಾಂತಗಳು

ಕೊನೆಯ ಮೂರು ಅಧ್ಯಯನಗಳನ್ನು ನಾವು ಇಸ್ರಾಯೇಲ್ಯರು ಮೋವಾಬ್ ಪ್ರದೇಶದಲ್ಲಿದ್ದ ಐತಿಹಾಸಿಕ ಪರಿಸ್ಥಿತಿಯ ಅಧ್ಯಯನ ಮಾಡುವಾಗ ಹಿಂತಿರುಗಲಿದ್ದೇವೆ. ಆತನು ಸಾಯುವುದಕ್ಕಿಂತ ಮುಂಚೆ, ಆತನ ಉತ್ತರಾಧಿಕಾರಿಯಾಗಿ ಹಾಗೂ ಅವರ ನಾಯಕನನ್ನಾಗಿ ಯೆಹೋಶುವನನ್ನು ಆದೇಶಿಸುವುದಕ್ಕಾಗಿ ಇಸ್ರಾಯೇಲ್ಯರು ಸರಿಯಾದ ಆಯ್ಕೆ ಮಾಡುವಂತೆ ಮೋಶೆಯು ಆಹ್ವಾನಿಸುತ್ತಿದ್ದಾನೆ.

**ಪ್ರಶ್ನೆಗಳು**

1. ಪುಸ್ತಕದ ಜೋಡಣೆ ಏನಾಗಿದೆ?
2. ಈ ಪುಸ್ತಕದಲ್ಲಿನ ಘಟನಾವಳಿಗಳು ಯಾವಾಗ ನಡೆದವು?
3. ಪುಸ್ತಕದ ಪ್ರಮುಖ ಐದು ಮುಖ್ಯಭಾಗಗಳಾವುವು?
4. ಧರ್ಮೋಪದೇಶಕಾಂಡ ಪುಸ್ತಕದ ಉದ್ದೇಶ ಏನು?
5. ಧರ್ಮೋಪದೇಶಕಾಂಡದಲ್ಲಿನ ಧರ್ಮಶಾಸ್ತ್ರವು "ಅನ್ವಯಿಸಲ್ಪಡುವ ನಿಬಂಧನೆಗಳಾಗಿ"ದ್ದು ಆದರೆ ಅವುಗಳು "ಹೊಸ ನಿಬಂಧನೆಗಳಾಗಿ" ಯಾಕೆ ತರ್ಜುಮೆ ಮಾಡಲ್ಪಟ್ಟಿಲ್ಲ ಎಂಬುದನ್ನು ವಿವರಿಸಿ.
6. ಮೋಶೆಯು ತನ್ನ ಮೊದಲ ಉಪನ್ಯಾಸದಲ್ಲಿ ಇಸ್ರಾಯೇಲ್ಯರ ಇತಿಹಾಸದ ಮಾಹಿತಿಯನ್ನು ಸಿನಾಯ್ ಪರ್ವತದ ಘಟನೆಗಳಿಂದ ಯಾಕೆ ಪ್ರಾರಂಭಿಸುತ್ತಿದ್ದಾನೆ?
7. ಧರ್ಮೋಪದೇಶಕಾಂಡ ಪುಸ್ತಕದಲ್ಲಿ ಮೋಶೆಯ ಪ್ರಮುಖ ಪಾತ್ರ ಏನು?

**ಧರ್ಮೋಪದೇಶಕಾಂಡ ಅಧ್ಯಯನ 1: ಸಿನಾಯಿನಿಂದ ಕಾದೇಶಿಗೆ**

**ಅ. ಪೀಠಿಕೆ**

ಇದು ಎಲ್ಲಿ ಮತ್ತು ಯಾವಾಗ ಸಂಭವಿಸಿತು, ಎಂಬ ವಿಷಯಗಳೊಂದಿಗೆ ಮೊದಲನೇಯ ಅಧ್ಯಾಯವು ಪ್ರಾರಂಭಗೊಳ್ಳುತ್ತದೆ. 'ಮೋಶೆಯು ಈ ಮುಂದಣ ಧರ್ಮಶಾಸ್ತ್ರವನ್ನು ವಿವರಿಸುವುದಕ್ಕೆ ಪ್ರಾರಂಭಿಸಿದನು' (ವ.5) ಎಂಬ ವಾಕ್ಯದೊಂದಿಗೆ ಮೋಶೆಯ ಮೊದಲ ಸಂಭಾಷಣೆಯು ಪ್ರಾರಂಭಗೊಳ್ಳುತ್ತದೆ. ಆದರೆ ಮೋಶೆಯು ಪ್ರಾರಂಭದಲ್ಲಿ ಧರ್ಮಶಾಸ್ತ್ರದ ಕರಿತು ಮಾತನಾಡಲಿಲ್ಲ. ಅದಕ್ಕೆ ಬದಲಾಗಿ ಮೋಶೆಯು ಇಸ್ರಾಯೇಲ್ಯರು ಸಿನಾಯ್ ಪರ್ವತದಿಂದ ಕಾದೇಶಿಗೆ ಹೋಗುವ ಮಾರ್ಗದಲ್ಲಿ ಅರಣ್ಯದಲ್ಲಿ ಜರುಗಿದ ಕೆಲವು ಪ್ರಮುಖ ಘಟನೆಗಳ ಕಥೆಗಳಿಗೆ ಉಳಿದ ಅಧ್ಯಾಯಗಳು ಮೀಸಲಾಗಿರುತ್ತದೆ.

**ಆ. ಓದಿರಿ**

ಧರ್ಮೋಪದೇಶಕಾಂಡ 1:1-46

**ಇ. ವಿವರಣೆ**

*ಹೋರೇಬ್* (ವ.2): ಹೋರೇಬ್ ಧರ್ಮೋಪದೇಶಕಾಂಡದಲ್ಲಿ ಸಿನಾಯ್ ಪರ್ವತಕ್ಕೆ ಉಪಯೋಗಿಸುವ ಹೆಸರಾಗಿದೆ (33:2ನ್ನು ಹೊರತುಪಡಿಸಿ).

*ನಾಲ್ವತ್ತನೆಯ ವರುಷ* (ವ.3): ಐಗುಪ್ತದಿಂದ ಬಿಡುಗಡೆ ಹೊಂದಿದ ನಂತರದ 40 ವರ್ಷಗಳು.

*ಹನ್ನೊಂದನೆಯ ತಿಂಗಳು* (ವ.3): ಜನವರಿ-ಫೆಬ್ರುವರಿ

*ಈ ಮುಂದಣ ಧರ್ಮಶಾಸ್ತ್ರವನ್ನು* (ವ.5): ಇದು ಸಿನಾಯ್ ಪರ್ವತದಲ್ಲಿ ಜನರು ತಂಗಿದ್ದಾಗ ಜನರಿಗೆ ದೇವರು ಕೊಟ್ಟ ಧರ್ಮಶಾಸ್ತ್ರದ ಸಂಗ್ರಹವನ್ನು ಸೂಚಿಸುವ ಹೇಳಿಕೆಯಾಗಿದೆ. ಅವುಗಳು ವಿಮೋಚನಕಾಂಡದಲ್ಲಿ, ಯಾಜಕಕಾಂಡದಲ್ಲಿ ಮತ್ತು ಅರಣ್ಯಕಾಂಡದಲ್ಲಿ ದಾಖಲಿಸಲ್ಪಟ್ಟಿವೆ.

*ನಮ್ಮ ದೇವರಾದ ಯೆಹೋವನು* (ವ.6): ಇದು (ಮತ್ತು ಇದಕ್ಕೆ ಸಮಾಂತರವಾದ ಹೇಳಿಕೆ ನಿಮ್ಮ ದೇವರಾದ ಯೆಹೋವನು) ಧರ್ಮೋಪದೇಶಕಾಂಡದಲ್ಲಿ ಅತೀ ಹೆಚ್ಚಾಗಿ ದೇವರಿಗೆ ಉಪಯೋಗಿಸುವ ಸಾಮಾನ್ಯ ಶೀರ್ಷಿಕೆಯಾಗಿದೆ. ಇದು ಒಡಂಬಡಿಕೆಯುಳ್ಳ ದೇವರು ತನ್ನ ಜನರಿಗೆ ವ್ಯಕ್ತಿಗತನಾಗಿದ್ದಾನೆಂಬುದನ್ನು ಸೂಚಿಸುವಂತಹದ್ದಾಗಿದೆ.

ದೇವರು ಪಿತೃಗಳಿಗೂ ಮತ್ತು ಅವರ ಸಂತತಿಯವರಿಗೂ ವಾಗ್ದಾನ ಮಾಡಿದ ದೇಶದ ವಿಸ್ತೀರ್ಣೆಯ ಕುರಿತಾದ ವಿವರಣೆಯು ವ.7 ರಲ್ಲಿದೆ. – ತಗ್ಗಾದ ಪ್ರದೇಶ, ಬೆಟ್ಟದ ಮೇಲಿನ ಪ್ರದೇಶ, ಇಳಕಲಿನ ಪ್ರದೇಶ, ದಕ್ಷಿಣ ಸೀಮೆ, ಸಮುದ್ರತೀರ ಎಂಬ ನಾಡುಗಳನ್ನು ಒಳಗೊಂಡಿರುವ ಕಾನಾನ್ಯರ ದೇಶ, ಲೆಬನೋನ್ ಪರ್ವತ ಮತ್ತು ಯೂಫ್ರೇಟೀಸ್ ಎಂಬ ಮಹಾನದಿಯವರೆಗೆ ವಿಸ್ತರಿಸಿಕೊಂಡಿರುವ ಪ್ರದೇಶ ಇವುಗಳೇ.

*ಉನ್ನತಪುರುಷರು* (ವ.28): ಇವರು ಕಾನಾನ್ ದೇಶದ ಮುಂಚಿನ ನಿವಾಸಿಗಳಾಗಿದ್ದರು. ಅರಣ್ಯಕಾಂಡ 13:32-33 ರಲ್ಲಿ ಇವರನ್ನು ಅಸಾಧರಣಶಕ್ತಿಯ ಮನುಷ್ಯರೆಂದು ವಿವರಿಸುತ್ತದೆ.

*ಸೇಯೀರ್* (ವ.45): ಮೃತಸಮುದ್ರದ ದಕ್ಷಿಣ ಭಾಗದಲ್ಲಿರುವ ಗುಡ್ಡಗಾಡಿನ ದೇಶ (2:1ನ್ನು ಸಹ ನೋಡಿರಿ).

*ಕಾದೇಶ್* (ವ.46): ಕಾದೇಶ್ ಜಿನ್ ಮರುಭೂಮಿಯಲ್ಲಿರುವ ಪ್ರಾಂತ್ಯವಾಗಿತ್ತು (ಸಿನಾಯ್ ಪರ್ವತಶ್ರೇಣಿಯ ಉತ್ತರ ಭಾಗ). ಇಸ್ರಾಯೇಲ್ಯರು ತಮ್ಮ ಸಂಚಾರದ ಅವಧಿಯಲ್ಲಿ ಎರಡು ಸಾರಿ ತಂಗಿದ್ದರು.

**ಈ. ಪ್ರಶ್ನೆಗಳು**

1. ಧರ್ಮೋಪದೇಶಕಾಂಡದ ವಿವರವು ಎಲ್ಲಿ ಮತ್ತು ಯಾವಾಗ ಪ್ರಾರಂಭವಾಯಿತು?
2. ಮೋಶೆಯು ಇಸ್ರಾಯೇಲ್ಯರನ್ನು ಸಂಬೋಧಿಸುವಾಗ ಉಲ್ಲೇಖಿಸಿದ ಮೊದಲ ಸಂಗತಿ ಏನು?
3. ಮೋಶೆಯು ಹಿರಿಯರನ್ನು ನೇಮಿಸುವ ಆಲೋಚನೆಗೆ ಯಾಕೆ ಬಂದನು?
4. ಹಿರಿಯರೆಂದು ನೇಮಿಸಲ್ಪಟ್ಟವರಿಗೆ ಮೋಶೆಯು ಯಾವ ಅರ್ಹತೆಗಳನ್ನು ನಿರ್ಧರಿಸಿದನು/ಪರಿಗಣಿಸಿದನು?
5. ಕಾನಾನ್ ದೇಶವನ್ನು ಅನ್ವೇಷಿಸಿದ ನಂತರ ಹೋದಂತಹ ಸಂದೇಶಕಾರರು ಹಿಂತಿರುಗಿ ಬಂದು ಅದರ ಕುರಿತು ಏನು ಹೇಳಿದರು?
6. ಇಸ್ರಾಯೇಲ್ಯರು ಕಾನಾನ್ ದೇಶವನ್ನು ಪ್ರವೇಶಿಸಲು ಯಾಕೆ ಇಷ್ಟವುಳ್ಳವರಾಗಿದ್ದಿಲ್ಲ?
7. ಅವರ ಇಷ್ಟವಿಲ್ಲದಿರುವಿಕೆಯನ್ನು ದೇವರು ಹೇಗೆ ಪ್ರತಿಕ್ರಿಯಿಸಿದನು?
8. ಇಸ್ರಾಯೇಲ್ಯರು ಕಾನಾನಿನ ಬೆಟ್ಟಸೀಮೆಯಲ್ಲಿ ಯಾಕೆ ಜಯವನ್ನು ಹೊಂದಲಿಲ್ಲ?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಧರ್ಮೋ. 1:13-17 ರ ಬೆಳಕಿನಲ್ಲಿ ಒಬ್ಬ ಸಭಾನಾಯಕಕನಾಗಿ ನೀನೇ ಮೌಲ್ಯೀಕರಿಸು.
2. ಧರ್ಮೋ. 1:13-17 ರ ಬೆಳಕಿನಲ್ಲಿ ನಿನ್ನ ಸ್ವಂತ ಸಭೆಯ ನಾಯಕರನ್ನು ಮೌಲ್ಯೀಕರಿಸು.
3. ಕಾನಾನನ್ನು ಅನ್ವೇಷಣೆ ಮಾಡಿದ ಸಂದೇಶಕಾರರ ಮಾಹಿತಿ ಮತ್ತು ಈ ವಿಷಯವಾಗಿ ಇಸ್ರಾಯೇಲ್ಯರು ಎದ್ದ ದಂಗೆಯ ಕುರಿತಾದ ಮೋಶೆಯ ಮಾಹಿತಿಗಳಿಂದ ನೀವು ಕಲಿಯಲಿಕ್ಕಿರುವ ಅಂಶಗಳನ್ನು ಪಟ್ಟಿಮಾಡಿರಿ.

**ಊ. ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ**

ಯೌವನಸ್ಥರ ಒಂದು ಗುಂಪಿಗಾಗಿ ಧರ್ಮೋ. 1:19-46 ರ ಆಧಾರದ ಮೇಲೆ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಮೇಲಿರುವ **ಉ. 3** ರ ಉತ್ತರವನ್ನು ಉಪಯೋಗಿಸಿಕೊಳ್ಳಿರಿ.

**ಧರ್ಮೋಪದೇಶಕಾಂಡ ಅಧ್ಯಯನ 2: ಕಾದೇಶಿನಿಂದ ಮೋವಾಬ್ಯಕ್ಕೆ**

**ಅ. ಪೀಠಿಕೆ**

ಇಸ್ರಾಯೇಲ್ಯರು ಸೇಯೀರ್ ಬೆಟ್ಟದ ಸೀಮೆಯಲ್ಲಿ ಅಮೋರಿಯರಿಂದ ಕಾದೇಶ್ ಬರ್ನೇಗೆ ಹಿಂತಿರುಗಿದರು (1:46). ಅವರ ಅನೇಕ ವರ್ಷಗಳ ಅಲೆದಾಟದ ನಂತರ ಕೊನೆಯಲ್ಲಿ ಮೋವಾಬಿನ ಜೆರೆದ್ ಹಳ್ಳವನ್ನು ದಾಟಲು ಅನುಮತಿಯನ್ನು ಪಡೆದರು. ಇಲ್ಲಿ ಮೋಶೆಯು ಅವರಿಗೆ ದೇವರ ಕಟ್ಟಳೆ ಮತ್ತು ಧರ್ಮಶಾಸ್ತ್ರವನ್ನು ಬೋಧಿಸಿದನು.

**ಆ. ಓದಿರಿ**

ಧರ್ಮೋ. 2:1-3, 14-18, 4:1-2

**ಇ. ವಿವರಣೆ**

*ಕೆಂಪುಸಮುದ್ರ* (2:1): ಪ್ರಾಯಶಃ ಮೋಶೆಯು ಕೆಂಪುಸಮುದ್ರದ ಈಶಾನ್ಯದಿಕ್ಕಿನ ಕೊಲ್ಲಿಯಾದ ಅಕ್ವಾಬಾ ಕೊಲ್ಲಿಯನ್ನು ಉಲ್ಲೇಖಿಸುತ್ತಿದ್ದಾನೆ (ವಿಮೋಚನಕಾಂಡ 10:19 ಮತ್ತು 14:9ವಿವರಣೆಯನ್ನು ಹೋಲಿಸಿರಿ, ಪ್ರಾಯಶಃ ನೈಲ್ ನದಿಯ ಮುಖಜ ಭೂಮಿಯ ನೀರಿನ ಮುಖ್ಯಭಾಗದ ಹತ್ತಿರ "ಕೆಂಪುಸಮುದ್ರದ" ಉಲ್ಲೇಖವಿರುತ್ತದೆ).

*ಜೆರೆದ್ ಹಳ್ಳ* (ವ.1): ಜೆರೆದ್ ಮೃತಸಮುದ್ರದ ದಕ್ಷಿಣ ಭಾಗದ ಕೊನೆಯಲ್ಲಿ ಹರಿಯುವ ನದಿಯಾಗಿದೆ. ಇದು ವರ್ಷದಲ್ಲಿ ಕೆಲವು ಸಮಯ ಬತ್ತಿರುತ್ತಿತ್ತು.

*ಅಮ್ಮೋನಿಯರು* (ವ.19): ಇವರು ಯೊರ್ದನ್ ಹೊಳೆ ಮತ್ತು ಮೃತಸಮುದ್ರದ ಪೂರ್ವದಿಕ್ಕಿನಲ್ಲಿರುವ ಉತ್ತರ ಮೋವಾಬ್ ದೇಶದಲ್ಲಿ ವಾಸಿಸುತ್ತಿದ್ದರು.

*ಇಸ್ರಾಯೇಲ್ಯರೇ, ಕೇಳಿರಿ* (4:1): ದೇವರು ತನ್ನ ಜನರು ಕೇಳಿ ವಿಧೇಯರಾಗುವಂತೆ ಕರೆಯುತ್ತಿದ್ದಾನೆ (5:1; 6:3-4; 9:1; 20:3 ಗಳನ್ನು ಹೋಲಿಸಿರಿ).

**ಈ. ಪ್ರಶ್ನೆಗಳು**

1. ಇಸ್ರಾಯೇಲ್ಯರು ಮೋವಾಬಿನ ಜೆರೆದ್ ಹಳ್ಳವನ್ನು ದಾಟುವ ಮುನ್ನ ಕಾದೇಶಿನ ಭೂಮಿಯಲ್ಲಿ ಎಷ್ಟು ಕಾಲ ಅಲೆದಾಡಿದರು?
2. ಇದು ಯಾಕೆ ಇಷ್ಟು ಸಮಯ ತೆಗೆದುಕೊಂಡಿತು?
3. ಮೋಶೆಯು ಬೋಧಿಸಿದ ಆಜ್ಞಾವಿಧಿಗಳ ಪ್ರಕಾರ ಇಸ್ರಾಯೇಲ್ಯರು ಏನು ಮಾಡಬೇಕಾಗಿತ್ತು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. 2:15ನ್ನು (ಯೆಹೋವನ ಹಸ್ತವು ಅವರಿಗೆ ವಿರೋಧವಾದುದರಿಂದ ಪಾಳೆಯದಲ್ಲಿ ಒಬ್ಬನೂ ಉಳಿಯದಂತೆ ನಾಶವಾದರು) ನೀನು ಹೇಗೆ ಅರ್ಥೈಸಿಕೊಳ್ಳುತ್ತೀ?
2. ಇಸ್ರಾಯೇಲ್ಯರು ದೇವರ ಆಜ್ಞಾವಿಧಿಗಳನ್ನು ಪಾಲಿಸಬೇಕೆಂಬುದನ್ನು ಮೋಶೆಯು ಕಾರಣಕೊಟ್ಟನು (4:1). ಇಂದು ದಕ್ಷಿಣ ಭಾರತದಲ್ಲಿರುವ ಕ್ರಿಸ್ತೀಯ ಜೀವಿತಕ್ಕೆ ಈ ಕಾರಣಗಳನ್ನು ನೀನು ಹೇಗೆ ಅಳವಡಿಸಿಕೊಳ್ಳುತ್ತೀ?
3. ದೇವರ ನಿಯಮವನ್ನು ಯಾವುದೇ ಕಾರಣಕ್ಕೂ ಬದಲಾಯಿಸಬಾರದೆಂದು ಮೋಶೆಯು ಇಸ್ರಾಯೇಲ್ಯರಿಗೆ ಹೇಳಿದನು (4:2). ಇಂದು ದಕ್ಷಿಣ ಭಾರತದಲ್ಲಿರುವ ಸಭೆಯ ಜೀವಿತಕ್ಕೆ ಈ ವಾಕ್ಯಭಾಗವನ್ನು ನೀನು ಹೇಗೆ ಅಳವಡಿಸುತ್ತೀ?

**ಊ. ಒಂದು ಸತ್ಯವೇದ ಅಧ್ಯಯನವನ್ನು ತಯಾರಿಸಿರಿ.**

ಸಭಾನಾಯಕರುಗಳಿಗಾಗಿ ಧರ್ಮೋ. 4:1-2 ರ ಆಧಾರದ ಮೇಲೆ ಒಂದು ಸತ್ಯವೇದ ಅಧ್ಯಯನವನ್ನು ತಯಾರಿಸಿರಿ. ಮೇಲಿರುವ **ಉ – 2 ಮತ್ತು 3** ರ ಉತ್ತರಗಳನ್ನು ನಿಮ್ಮ ಉಪಯೋಗಕ್ಕಾಗಿ ಉಪಯೋಗಿಸಿಕೊಳ್ಳಿರಿ.

**ಧರ್ಮೋಪದೇಶಕಾಂಡ ಅಧ್ಯಯನ 3: ಮೇಲು ಮತ್ತು ಕೇಡುಗಳು**

**ಅ. ಪೀಠಿಕೆ**

ಅಧ್ಯಾಯ 28 ರಲ್ಲಿ ಇಸ್ರಾಯೇಲ್ಯರು ಧರ್ಮಶಾಸ್ತ್ರದೊಂದಿಗೆ ಹೊಂದಿರುವ ಸಂಬಂಧದ ಆಯ್ಕೆಯಿಂದ ಉಂಟಾಗುವ ಪರಿಣಾಮದ ಕುರಿತು ದಾಖಲಾಗಿವೆ. ಒಂದುವೇಳೆ ಅವರು ದೇವರ ಆಜ್ಞೆಗಳಿಗೆ ವಿಧೇಯರಾಗಿ ನಡೆದರೆ ಅವರು ಆಶೀರ್ವಾದವನ್ನು ಅನುಭವಿಸಬಹುದು. ಒಂದುವೇಳೆ ಅವರು ದೇವರ ಆಜ್ಞೆಗಳಿಗೆ ಅವಿಧೇಯರಾಗಿ ನಡೆದರೆ ಶಾಪವನ್ನು ಅನುಭವಿಸಬಹುದಾಗಿದೆ.

**ಆ. ಓದಿರಿ**

ಧರ್ಮೋ. 28:1-68

**ಇ. ವಿವರಣೆ**

*ನಿಮ್ಮ ಪುಟ್ಟಿಗಳಿಗೂ ಕೊಣವಿಗೆಗಳಿಗೂ ಶುಭವುಂಟಾಗುವುದು* (ವ.5): ಇಲ್ಲಿ ನಾವು ಸಾಂಕೇತಿಕ ಭಾಷೆಯನ್ನು ಕಾಣಬಹುದು. ಅಡುಗೆ ಸಲಕರಣೆಗಳ ದೇವರ ಆಶೀರ್ವಾದ ಅಂದರೆ, 'ಅವರ ದಿನ ನಿತ್ಯದ ಆಹಾರವನ್ನು ಆತನು ಒದಗಿಸುತ್ತಾನೆಂಬುದಾಗಿ. ಅವರು ಊಟ ಮಾಡಲು ದೇವರು ಆಹಾರವನ್ನು ಒದಗಿಸುತ್ತಾನೆ.

*ಆಕಾಶದಲ್ಲಿನ ತನ್ನ ಜಲನಿಧಿಯನ್ನು ತೆರೆದು* (ವ.12): ಈ ರೂಪಾಲಂಕಾರವು ಪದವಿನ್ಯಾಸದ ಅರ್ಥವೇನೆಂದರೆ ದೇವರು ಅವರಿಗೆ ಮಳೆಯನ್ನು ಒದಗಿಸುತ್ತಾನೆ ಎಂಬುದಾಗಿ. ಹಾಗಾದರೆ ಇದು, 'ಎಲ್ಲಾ ಕಾಲಮಾನಗಳಲ್ಲಿ ನಿಮ್ಮ ದೇಶದ ಮೇಲೆ ಮಳೆಯನ್ನು ಕಳುಹಿಸುತ್ತೇನೆ' ಎಂಬ ಸತ್ಯತೆಯನ್ನು ಮನವರಿಕೆಮಾಡುವಂತಹದ್ದಾಗಿದೆ.

*ಮೇಲೆ ಆಕಾಶವೂ ತಾಮ್ರದಂತೆಯೂ, ಕೆಳಗೆ ಭೂಮಿಯೂ ಕಬ್ಬಿಣದಂತೆಯೂ* (ವ.23): ಇದು ಬರಗಾಲದ ರೂಪಾಲಂಕಾರವಾಗಿದೆ, ಮತ್ತು ಬರಗಾಲದಿಂದ ಭೂಮಿಯು ಒಣಗಿ ಗಟ್ಟಿಯಾಗುವುದಾಗಿದೆ.

*ಭೂಮಿಯ ಕೊನೆಯಿಂದ* (ವ.49): ಇಲ್ಲಿ ನಾವು ಸಾಂಕೇತಿಕ ಭಾಷಾ ಶೈಲಿ ಎಂದು ಕರೆಯಲ್ಪಡುವ ಅತಿಶಯೋಕ್ತಿಯನ್ನು ಕಾಣಬಹುದು. ಇದೇ ವಾಕ್ಯದಲ್ಲಿ 'ದೂರದಿಂದ' ಎಂಬ ಸಮಾನಾರ್ಥಕ ಪದವಿನ್ಯಾಸವನ್ನು ಕಾಣಬಹುದು.

*ಈ ಗ್ರಂಥ (ವ.58) ಮತ್ತು ಈ ಧರ್ಮಶಾಸ್ತ್ರ ಗ್ರಂಥದಲ್ಲಿ* (ವ.61): 31:24ನ್ನು ನೋಡಿರಿ, ಧರ್ಮೋ. 1:11-31:24 ರ ಪಠ್ಯದ ಪದವಿನ್ಯಾಸವು ಒಂದೇ ರೀತಿಯಾಗಿ ತೋರುವಂತಹದ್ದಾಗಿರುವುದನ್ನು.

**ಈ. ಪ್ರಶ್ನೆಗಳು**

1. ಇಸ್ರಾಯೇಲ್ಯರು ದೇವರಿಂದ ಈ ಎಲ್ಲಾ ಆಶೀರ್ವಾದಗಳನ್ನು ಸ್ವೀಕರಿಸುವುದಾದರೆ ಅವರ ಸ್ಥಿತಿಯು ಏನಾಗಿರಬಹುದು?
2. ಈ ವಾಕ್ಯಭಾಗದಲ್ಲಿ ನಾವು ಯಾವ ವಿಧವಾದ ಆಶೀರ್ವಾದಗಳನ್ನು ಕಂಡುಕೊಳ್ಳಬಹುದು? ಸತ್ಯವೇದದಲ್ಲಿರುವ ಪದವಿನ್ಯಾಸಗಳನ್ನು ನಕಲು ಮಾಡದೇ ನಿಮ್ಮ ಸ್ವಂತ ವಾಕ್ಯಗಳನ್ನು ಉಪಯೋಗಿಸಿರಿ.
3. ಇಸ್ರಾಯೇಲ್ಯರ ಮೇಲೆ ಆಶೀರ್ವಾದದ ಬದಲಾಗಿ ಯಾಕೆ ಶಾಪವು ಬಂದಿತ್ತು?
4. ಈ ವಾಕ್ಯಭಾಗದಲ್ಲಿ ಕಂಡುಬರುವ ಶಾಪಗಳನ್ನು ವಿವರಿಸಿರಿ? ಸತ್ಯವೇದದಲ್ಲಿರುವ ಪದವಿನ್ಯಾಸವನ್ನು ಹಾಗೇ ನಕಲು ಮಾಡದೆ ನಿಮ್ಮ ಸ್ವಂತ ವಾಕ್ಯಗಳನ್ನು ಉಪಯೋಗಿಸಿರಿ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಹಳೇ ಒಡಂಬಡಿಕೆಯಲ್ಲಿರುವ ಚಾರಿತ್ರಿಕ ಮತ್ತು ಪ್ರವಾದನಾ ಪುಸ್ತಕಗಳಲ್ಲಿ ದಾಖಲಾಗಿರುವ ಐತಿಹಾಸಿಕ ನಡೆಯ ಅವಧಿಯಲ್ಲಿ ಇಸ್ರಾಯೇಲ್ಯರಿಗೆ ನಿಜವಾಗಿ ಏನು ಸಂಭವಿಸಿತು? ಅವರು ಧರ್ಮಶಾಸ್ತ್ರವನ್ನು ಹಿಂಬಾಲಿಸಿ ದೇವರ ಆಶೀರ್ವಾದಗಳನ್ನು ಅನುಭವಿಸಿದ್ದರಾ? ಅಥವಾ ಅವರು ಧರ್ಮಶಾಸ್ತ್ರಕ್ಕೆ ಅವಿಧೇಯರಾಗಿ, ಅವರ ಅವಿಧೇಯತ್ವದ ಪರಿಣಾಮವನ್ನು ಅನುಭವಿಸಿದ್ದರಾ? ಇಸ್ರಾಯೇಲ್ಯರ ಇತಿಹಾಸದಲ್ಲಿ ನೀನು ಏನು ತೆಗೆದುಕೊಂಡಿದ್ದಿಯೋ ಅದನ್ನು ಹಂಚಿಕೋ. ಆಶೀರ್ವಾದ ಮತ್ತು ಶಾಪವನ್ನು ಹೆಚ್ಚು ಕೇಂದ್ರಿಕರಿಸು.

2. ಈ ಅಧ್ಯಾಯದಲ್ಲಿ ಆಶೀರ್ವಾದ ಮತ್ತು ಶಾಪದ ಕುರಿತಾಗಿ ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಏನನ್ನು ಕಲಿಯಬಹುದಾಗಿದೆ?

**ಊ. ಒಂದು ಸತ್ಯವೇದ ಅಧ್ಯಯನವನ್ನು ತಯಾರಿಸಿರಿ**

ಧರ್ಮೋ. 28 ರ ಅಧ್ಯಾಯದ ಆಧಾರದ ಮೇಲೆ ಸಭೆಯಲ್ಲಿರುವ ಯೌವನಸ್ಥರಿಗಾಗಿ ಒಂದು ಸತ್ಯವೇದ ಅಧ್ಯಯನವನ್ನು ತಯಾರಿಸಿರಿ. ಈ ಅಧ್ಯಯನದಲ್ಲಿ ನೀವು ಕಲಿತ ಅಂಶಗಳನ್ನು ಉಪಯೋಗಿಸಿರಿ. ಧರ್ಮೋ. 28 ನೇ ಅಧ್ಯಾಯದಿಂದ ನೀವು ಯಾವುದೇ ಸುಳ್ಳುಬೋಧನೆಯಾದ "ಅಭಿವೃದ್ಧಿ ಸಿದ್ಧಾಂತವನ್ನು" ಬೋಧಿಸಬೇಡಿರಿ. ಇಂದಿನ ವಿಶ್ವಾಸಿಗಳಾದ ನಾವು ನಮ್ಮ ಪರಿಸ್ಥಿತಿಗೆ ಅಧ್ಯಾಯ 28 ರಲ್ಲಿರುವ ಆಶೀರ್ವಾದಗಳು ಮತ್ತು ಶಾಪಗಳ ಪಟ್ಟಿಯನ್ನು ಇದ್ದಂತೆ ಯಾಕೆ ಅಳವಡಿಸಿಕೊಳ್ಳಬಾರದೆಂಬುದನ್ನು ವಿವರಿಸುವುದರಲ್ಲಿ ಜಾಗರೂಕರಾಗಿರಿ (ನಿಮ್ಮ ಉತ್ತರಕ್ಕಾಗಿ ಈ-2 ರ ಉತ್ತರವನ್ನು ನೋಡಿರಿ).

**ಧರ್ಮೋಪದೇಶಕಾಂಡ ಅಧ್ಯಯನ 4: 'ಜ್ಞಾಪಿಸಿಕೊಳ್ಳುವುದು'/ನೆನಪಿನಲ್ಲಿಟ್ಟುಕೊಳ್ಳುವುದು**

**ಅ. ಪೀಠಿಕೆ**

ಧರ್ಮೋಪದೇಶಕಾಂಡದಲ್ಲಿ 'ಜ್ಞಾಪಕ'ವು ಒಂದು ಮುಖ್ಯ ಪದವಾಗಿದೆ. ಪುಸ್ತಕದಾದ್ಯಂತ ಅನೇಕಾವರ್ತಿ ಈ ಪದವು ಕಂಡುಬಂದಿದೆ. ಈ ಅಭ್ಯಾಸದಲ್ಲಿ ಇಂತಹ ಕೆಲವು ವಾಕ್ಯಭಾಗಗಳನ್ನು ನೋಡುವವರಾಗಿ ಮತ್ತು ಇಸ್ರಾಯೇಲ್ಯರ ಐತಿಹಾಸಿಕ ಹಿನ್ನಲೆ ಮತ್ತು ಧರ್ಮಶಾಸ್ತ್ರದೊಂದಿಗೆ ಅವರಿಗಿರುವ ಸಂಬಂಧದೊಂದಿಗೆ "ಜ್ಞಾಪಕ" ಪದದ ಅರ್ಥವನ್ನು ತಿಳಿದುಕೊಳ್ಳಲಿಕ್ಕೆ ಪ್ರಯತ್ನಿಸುವವರಾಗಿರೋಣ.

**ಆ. ಓದಿರಿ**

1. ಧರ್ಮೋ. 4:10 (ಈ ವಾಕ್ಯಭಾಗದ ಇಬ್ರಿಯ ಪಠ್ಯದಲ್ಲಿ 'ಜ್ಞಾಪಕ' ಎಂಬ ಪದವು ಕಂಡುಬರುವುದಿಲ್ಲ. ಆದರೆ ಹಿಂದಿನ ವಾಕ್ಯದಲ್ಲಿ ಕಂಡುಬರುವ "ಮರೆಯಬೇಡಿರಿ" ಎಂಬ ಪದದಿಂದ 'ಜ್ಞಾಪಕ' ಎಂಬ ಪದದ ಕಲ್ಪನೆಯು ಬಂದಿದೆ)
2. ಧರ್ಮೋ. 5:15
3. ಧರ್ಮೋ. 7:18-19
4. ಧರ್ಮೋ. 8:2
5. ಧರ್ಮೋ. 9:7
6. ಧರ್ಮೋ. 11:6
7. ಧರ್ಮೋ. 15:15
8. ಧರ್ಮೋ. 16:12
9. ಧರ್ಮೋ. 24:9
10. ಧರ್ಮೋ. 25:17

**ಇ. ಪ್ರಶ್ನೆಗಳು**

ಈ ಮೇಲಿನ ಎಲ್ಲಾ 10 ವಚನಗಳನ್ನು ನೋಡಿರಿ. ಈ ಕೆಳಗಿನ ಎರಡು ಪ್ರಶ್ನೆಗಳೊಂದಿಗೆ ಪ್ರತಿಯೊಂದಕ್ಕೂ ಉತ್ತರಿಸಿರಿ.

ಅ. ಇಸ್ರಾಯೇಲ್ಯರು ಏನನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕೆಂದು ತಿಳಿಸಲಾಯಿತು?

ಆ. ಹಿನ್ನಲೆಯನ್ನು ನೋಡಿರಿ ಮತ್ತು ಇದನ್ನು ಅವರು ಯಾಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿತ್ತು?

**ಈ. ಉಪಸಂಹಾರ**

ಮೇಲಿರುವ ವಾಕ್ಯಭಾಗದ ನಮ್ಮ ಅಧ್ಯಯನದ ಉಪಸಂಹಾರವನ್ನು ನಾವು ಈ ರೀತಿಯಾಗಿ ಚಿತ್ರಿಸಬಹುದು.

1. ಇಸ್ರಾಯೇಲ್ಯರು ದೇವರೊಂದಿಗೆ ಹೇಗೆ ತಮ್ಮ ಸಂಬಂಧವನ್ನು ಇಟ್ಟುಕೊಳ್ಳಬೇಕೆಂಬುದಕ್ಕೆ ಜ್ಞಾಪಕವು ಬಹಳ ಪ್ರಾಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತದೆ. ಇದು ಕರ್ತನ ಒಡಂಬಡಿಕೆಗೆ ಅವರ ಪ್ರತಿಕ್ರಿಯೆಯ ಒಂದು ಭಾಗವಾಗಿದೆ.

2. ಜ್ಞಾಪಕವು ಭೂತ ಮತ್ತು ವರ್ತಮಾನ ಕಾಲಗಳ ಮಧ್ಯದಲ್ಲಿ ಸಂಬಂಧವನ್ನು ಏರ್ಪಡಿಸುತ್ತದೆ. ಇದು ಆಧುನಿಕ ಇಸ್ರಾಯೇಲಿನ ಪೀಳಿಗೆಯು ತಮ್ಮ ಜನರ ಐತಿಹಾಸಿಕತೆಯೊಂದಿಗೆ ಇಟ್ಟುಕೊಳ್ಳುವ ಬಾಂಧ್ಯವ್ಯವಾಗಿದೆ. ಈ ಆಧುನಿಕ ಪೀಳಿಗೆಯು ಐಗುಪ್ತದಲ್ಲಿ ದಾಸತ್ವವನ್ನು ಅಥವಾ ವಿಮೋಚನೆಯನ್ನು, ಅಥವಾ ಸಿನಾಯ್ ಪರ್ವತದಲ್ಲಿನ ಒಡಂಬಡಿಕೆಯನ್ನು, ಅಥವಾ ಮಾರ್ಗತಪ್ಪಿ ಅಡವಿಯಲ್ಲಿ ಸಂಚರಿಸುವಾಗ ಉಂಟಾದ ಯಾವುದೇ ಘಟನೆಗಳನ್ನು ಇವರು ಅನುಭವಿಸಿಲ್ಲ. ಮತ್ತು ಅವರ ಮಕ್ಕಳು – ಹಾಗೂ ನಂತರದ ಸಂತತಿ – ನಂತರದಲ್ಲಿ ಮಾರ್ಗತಪ್ಪಿ ಅಡವಿಯಲ್ಲಿ ಸಂಚರಿಸುವಾಗ ದೇವರ ಒದಗಿಸುವಿಕೆಯನ್ನು, ಅಥವಾ ವಾಗ್ದಾನದ ದೇಶವನ್ನು ವಶಪಡಿಸಿಕೊಳ್ಳುವುದರಲ್ಲಿ ದೇವರ ಬಲವಾದ ಹಸ್ತದಲ್ಲಿ ಯಾವುದೇ ಕಾರ್ಯಗಳನ್ನು ಅವರು ಅನುಭವಿಸಿಲ್ಲ. ಆದರೆ ಜ್ಞಾಪಕವು ಕಳೆದುಹೋದ ಘಟನೆಗಳನ್ನು ಪುನಃ ವರ್ತಮಾನಕ್ಕೆ ತರುವಂತದ್ದಾಗಿದೆ. ಜ್ಞಾಪಕವು ಭೂತಕಾಲದ ಘಟನೆಗಳನ್ನು ವರ್ತಮಾನದಲ್ಲಿರುವ ಅವರ ಜೀವಿತದೊಂದಿಗೆ ಸಂಬಂಧವನ್ನು ಕಲ್ಪಿಸುತ್ತದೆ.

3. ಭೂತಕಾಲದಲ್ಲಿನ ಘಟನೆಗಳನ್ನು ಜ್ಞಾಪಕಮಾಡಿಕೊಳ್ಳುವುದರಿಂದ ಇಸ್ರಾಯೇಲ್ಯರು ಭವಿಷ್ಯವನ್ನು ಎದುರಿಸಲು ನಂಬಿಕೆಯಲ್ಲಿ ಬಲವನ್ನು ಹೊಂದುತ್ತಾರೆ. ಧರ್ಮೋ. 7:17-18 ರಲ್ಲಿ, ದೇವರಾದ ಯೆಹೋವನು ಫರೋಹನಿಗೂ ಐಗುಪ್ತ್ಯರೆಲ್ಲರಿಗೂ ತನ್ನ ಜನರನ್ನು ಹೊರಡಿಸುವುದಕ್ಕೆ ಮಾಡಿದ್ದನ್ನು ಇಸ್ರಾಯೇಲರೂ ನೆನಪುಮಾಡಿಕೊಳ್ಳಲು ಹೇಳಲಾಗಿದೆ. ಅವರು ಸ್ವತಃ ಅನುಭವಿಸದೆ ಇರುವ ಈ ಭೂತಕಾಲದ ಘಟನೆಗಳನ್ನು ನೆನಪುಮಾಡಿಕೊಳ್ಳುವುದರಿಂದ, ಕರ್ತನನ್ನು ಇನ್ನೂ ಹೆಚ್ಚಾಗಿ ಅರ್ಥೈಸಿಕೊಂಡು ಆತನ ಬಲವಾದ ಪ್ರಸನ್ನತೆಯಲ್ಲಿ ನಂಬಿಕೆಯಿಡಲು ಇದು ಅವರಿಗೆ ಸಹಾಯಮಾಡುತ್ತದೆ. ವಾಗ್ದಾನ ದೇಶವನ್ನು ವಶಪಡಿಸಿಕೊಳ್ಳಲಿಕ್ಕಿರುವಾಗ ಅವರು ಅತೀ ಬೇಗನೆ ಭಯಂಕರ ಮತ್ತು ಬಲಶಾಲಿಗಳಾದ ವೈರಿಗಳನ್ನು ಎದುರಿಸಬೇಕಾಗಿತ್ತು. ಆದರೆ ಅವರ ಜನರ ಐತಿಹಾಸಿಕ ಘಟನೆಗಳನ್ನು ನೆನಪುಮಾಡಿಕೊಳ್ಳುವುದರಿಂದ, ಕರ್ತನ ಒಡಂಬಡಿಕೆಯೊಂದಿಗೆ ಅವರಿಗಿದ್ದ ಸಂಬಂಧವನ್ನು ನೆನಪುಮಾಡಿಕೊಳ್ಳುವಾಗ ಅವರಲ್ಲಿರುವ ಭಯವು ತೆಗೆಯಲ್ಪಡುವುದು.

4. ಜ್ಞಾಪಿಸಿಕೊಳ್ಳುವುದು ಧರ್ಮಶಾಸ್ತ್ರಕ್ಕೆ ವಿಧೇಯರಾಗಲು ಹಿನ್ನಲೆಯನ್ನು ಒದಗಿಸುತ್ತದೆ. ಇಸ್ರಾಯೇಲ್ಯರು ಆಜ್ಞೆಗಳನ್ನು ಭಾವನಾರೂಪವಾದ ನಿಯಮಗಳೆಂದು ಅರ್ಥೈಸಿಕೊಳ್ಳಬಾರದೆಂಬುದಾಗಿ ಮೋಶೆಯು ಪದೇ ಪದೇ ನೆನಪಿಸುತ್ತಿದ್ದನು. ಆಜ್ಞೆಗಳು ಇಸ್ರಾಯೇಲ್ಯರಿಗೆ ಸಂಬಂಧಿಸಿದ ದೇವರ ಕೃಪೆಯ ಚಟುವಟಿಕೆಗಳಲ್ಲಿ ಒಂದಾಗಿದೆ, ಇತಿಹಾಸದಲ್ಲಿ ತನ್ನ ಬೇರನ್ನು ಹೊಂದಿರುವ ಒಂದು ಚಟುವಟಿಕೆಯಾಗಿದೆ. ಹಾಗಾದರೆ ಜ್ಞಾಪಿಸಿಕೊಳ್ಳುವುದರ ಹಿನ್ನಲೆಯು ಧರ್ಮಶಾಸ್ತ್ರಕ್ಕೆ ವಿಧೇಯರಾಗಲಿಕ್ಕೆ ಸ್ಥಳಮಾಡಿಕೊಡುತ್ತದೆ.

5. ಧರ್ಮೋ. 8:1-6 ರಲ್ಲಿ 40 ವರ್ಷಗಳ ಕಾಲ ಅರಣ್ಯದಲ್ಲಿ ತನ್ನ ಜನರೊಂದಿಗೆ ದೇವರು ಹೊಂದಿದ್ದ ಬಾಂಧವ್ಯದ ಕುರಿತಾದ ಸಾರಾಂಶವನ್ನು ನಾವು ಕಾಣಬಹುದು: ದೇವರು, ಹಸಿವೆಯ ಮೂಲಕ ಅವರನ್ನು ತಗ್ಗಿಸಿದನು, ಅವರು ತನ್ನ ಆಜ್ಞೆಗಳನ್ನು ಪಾಲಿಸುತ್ತಾರೋ ಎಂಬುದಕ್ಕೆ ಅವರ ಹೃದಯಗಳನ್ನು ಪರೀಕ್ಷಿಸಿದನು, ಅವರ ಎಲ್ಲಾ ಕೊರತೆಗಳನ್ನು ನೀಗಿಸಿದನು, ಅತನ ಮಾತನ್ನು ಕೇಳುವಂತೆ ಬೋಧಿಸಿದನು, ಅವರನ್ನು ಶಿಸ್ತಿಗೆ ಒಳಪಡಿಸಿ ನಡೆಸಿದನು. ಹಾಗಾಗಿ ಈ ಐತಿಹಾಸಿಕ ಘಟನೆಗಳನ್ನು ಇಸ್ರಾಯೇಲ್ಯರು ನೆನಪಿಸಿಕೊಳ್ಳುವುದರಿಂದ ಅವರು ಆತನ ಆಜ್ಞೆಗಳನ್ನು ಅನುಸರಿಸುವವರಾಗಿ ಆತನು ಹೇಳಿದ ಮಾರ್ಗದಲ್ಲೇ ನಡೆದು ಆತನಲ್ಲಿ ಭಯಭಕ್ತಿಯುಳ್ಳವರಾಗಿರಲು ಹಿನ್ನಲೆಯನ್ನು ಒದಗಿಸುತ್ತದೆ. ಇಸ್ರಾಯೇಲ್ಯರು ಧರ್ಮಶಾಸ್ತ್ರವನ್ನು ನೆರವೇರಿಸುವುದರಿಂದ ದೇವಜನರಾಗುವುದಿಲ್ಲ. ಇಸ್ರಾಯೇಲ್ಯರು ಈಗಾಗಲೇ ವಿಮೋಚಕರಾಗಿದ್ದಾರೆ. ಪರಿಣಾಮವಾಗಿ ಅವರು ವಿಧೇಯರಾಗಲೇಬೇಕು. ವಿಧೇಯರಾಗುವುದರಲ್ಲಿ ವಿಫಲರಾದರೆ ಜ್ಞಾಪಿಸಿಕೊಳ್ಳುವುದರಲ್ಲಿ ವಿಫಲರಾದಂತೆ: ನಾನು ಈಗ ನಿಮಗೆ ಬೋಧಿಸುವ ನಿಮ್ಮ ದೇವರಾದ ಯೆಹೋವನ ಆಜ್ಞಾವಿಧಿನಿರ್ಣಯಗಳನ್ನು ಕೈಕೊಳ್ಳದವರೂ ಆತನನ್ನು ಮರೆಯುವವರೂ ಆಗಬೇಡಿರಿ, ನೋಡಿರಿ (8:11).

6. ಆದರೆ ಇಸ್ರಾಯೇಲ್ಯರು ಧರ್ಮಶಾಸ್ತ್ರಕ್ಕೆ ವಿಧೇಯರಾಗುವಂತಹದ್ದು ಸಹ ಅವರ ಇತಿಹಾಸವನ್ನು ನೆನಪಿಸಿಕೊಳ್ಳಲಿಕ್ಕಿರುವ ಒಂದು ಉಪಕರಣವಾಗಿರುತ್ತದೆ. ಈ ನಿಜಾಂಶವು ಇಸ್ರಾಯೇಲ್ಯರಿಗೆ ಜ್ಞಾಪಿಸಿಕೊಳ್ಳುವಂತಹದ್ದು ಎಷ್ಟು ಪ್ರಾಮುಖ್ಯವಾದದ್ದೆಂದು ನಮಗೆ ತೋರಿಸುತ್ತದೆ. ಧರ್ಮೋ. 5:15 ರ ಸನ್ನಿವೇಶವನ್ನು ಪುನಃ ನೋಡಿರಿ. ಇಸ್ರಾಯೇಲ್ಯರು ಐಗುಪ್ತದಲ್ಲಿ ಗುಲಾಮಗಿರಿಯಲ್ಲಿದ್ದಾಗ ಮಾಡಿದ ನಿರಂತರವಾದ ಕಠಿಣ ಕೆಲಸವನ್ನು ನೆನಪಿಸಿಕೊಳ್ಳುವಾಗ ಅವರು ಪರಿಪೂರ್ಣ ವಿಶ್ರಾಂತಿಯ ದಿನವನ್ನು ಗೌರವಿಸುವಂತವರಾಗಿರುತ್ತಾರೆ. ಇದು ಸಬ್ಬತ್ ದಿನದ ಆಜ್ಞೆಯನ್ನು ಪಾಲಿಸುವುದಕ್ಕೆ ಉತ್ತೇಜನ ನೀಡುತ್ತದೆ. ಇದೇ ಸಮಯದಲ್ಲಿ ಇಸ್ರಾಯೇಲ್ಯರು ಸಬ್ಬತ್ ದಿನದ ಆಜ್ಞೆಯನ್ನು ಪಾಲಿಸುವುದರಿಂದ ಅವರ ರಕ್ಷಣೆಯ ಐತಿಹಾಸಿಕತೆಯನ್ನು ನೆನಪಿಸುವಂತಹದ್ದಾಗಿದೆ. ಹಾಗಾದರೆ ಸಬ್ಬತ್ ದಿನವನ್ನು ಆಚರಿಸುವ ಉದ್ದೇಶ ಕಳೆದ ಕಾಲದಲ್ಲಿ ತನ್ನ ಜನರಿಗಾಗಿ ದೇವರು ಮಾಡಿದ ಮಹತ್ಕಾರ್ಯಗಳನ್ನು ನೆನಪಿಸುವಂತಹದ್ದಾಗಿದೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಧರ್ಮೋಪದೇಶಕಾಂಡದಲ್ಲಿ ಉಪಯೋಗಿಸಲ್ಪಟ್ಟ 'ಜ್ಞಾಪಕ' ಅಥವಾ 'ನೆನಪು' ಶಬ್ದವನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವ್ಯತ್ಯಾಸವಾದ ವಿಷಯಾಂಶಗಳನ್ನು ಸಾರಾಂಶಗೊಳಿಸಿರಿ?

2. ಧರ್ಮೋ. 24:17-22ನ್ನು ಅಭ್ಯಾಸಿಸಿರಿ ಮತ್ತು ಇಸ್ರಾಯೇಲ್ಯರು ಕೆಳಗಿನ ನಾಲ್ಕು ಆಜ್ಞೆಗಳನ್ನು ಯಾಕೆ ಪಾಲಿಸಲೇಬೇಕಾಗಿತ್ತು ಎಂಬುದನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ:

   ಅ. ಪರದೇಶಿಯ ಅಥವಾ ದಿಕ್ಕಿಲ್ಲದವನ ವ್ಯಾಜ್ಯವನ್ನು ವಿಚಾರಿಸುವಾಗ ನ್ಯಾಯವನ್ನು ಕಸಿದುಕೊಳ್ಳಬಾರದು.

   ಆ. ವಿಧವೆಯಿಂದ ಉಡುವ ಬಟ್ಟೆಯನ್ನು ಒತ್ತೆಯಿಡಿಸಿಕೊಳ್ಳಬಾರದು.

   ಇ. ಪೈರುಗಳನ್ನು ಕೊಯ್ಯುವಾಗ ಒಂದು ಸಿವುಡನ್ನು ಹೊಲದಲ್ಲೇ ಮರೆತು ಬಂದರೆ ಅದನ್ನು ತರುವುದುಕ್ಕೆ ಹಿಂದಕ್ಕೆ ಹೋಗಬಾರದು.

   ಈ. ಎಣ್ಣೆಯ ಮರಗಳಲ್ಲಿ ರೆಂಬೆಗಳನ್ನು ಹೊಡೆದು ಕಾಯಿಗಳನ್ನು ಉದುರಿಸಿದ ಮೇಲೆ ಪುನಃ ಉದುರಿಸುವುದಕ್ಕೆ ಹೋಗಬಾರದು

3. ಯೇಸು ಕ್ರಿಸ್ತನು ತನ್ನ ಶಿಷ್ಯರೊಂದಿಗೆ ಕೊನೆಯ ಪಸ್ಕದ ಊಟವನ್ನು ಆಚರಿಸುವಾಗ ಆತನು "ನೆನಪಿಸಿಕೊಳ್ಳಿ" ಎಂಬ ಪದವನ್ನು ಬಳಸಿದನು: "ಬಳಿಕ ಆತನು ರೊಟ್ಟಿಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಮುರಿದು ಅವರಿಗೆ ಕೊಟ್ಟು – ಇದು ನಿಮಗೋಸ್ಕರ ಕೊಟ್ಟಿರುವ ನನ್ನ ದೇಹ; ನನ್ನನ್ನು ನೆನಸಿಕೊಳ್ಳುವುದಕ್ಕೋಸ್ಕರ ಹೀಗೆ ಮಾಡಿರಿ ಅಂದನು" (ಲೂಕ 22:19). ಆತನ ಶಿಷ್ಯರು ಭಕ್ತಿಯುಳ್ಳ ಯೆಹೂದ್ಯರಾದ ನಿಮಿತ್ತ ಅವರಿಗೆ ಧರ್ಮೋಪದೇಶಕಾಂಡದ ಬೋಧನೆಯು ಚೆನ್ನಾಗಿ ತಿಳಿದಿತ್ತು. ಹಾಗಾದರೆ "ನೆನಪಿಸಿಕೊಳ್ಳುವಿಕೆ" ಪದವಿನ್ಯಾಸವನ್ನು ಅವರು ಹೇಗೆ ಅರ್ಥೈಸಿಕೊಂಡಿರಬಹುದೆಂಬುದನ್ನು ನೀನು ಹೇಗೆ ಆಲೋಚಿಸುತ್ತಿ?

**ಊ. ಒಂದು ಸತ್ಯವೇದ ಅಧ್ಯಯನವನ್ನು ತಯಾರಿಸಿರಿ**

ಲೂಕ 22:19-20 ನ್ನು ಉಪಯೋಗಿಸಿಕೊಂಡು ಒಂದು ಸತ್ಯವೇದ ಅಧ್ಯಯನವನ್ನು ತಯಾರಿಸಿರಿ. ನಿಮ್ಮ ಅಧ್ಯಯನವನ್ನು "ನನ್ನನ್ನು ನೆನಸಿಕೊಳ್ಳುವುದಕ್ಕೋಸ್ಕರ ಹೀಗೆ ಮಾಡಿರಿ' ಎಂಬುದಾಗಿ ಕರೆಯಬಹುದು!

**ಧರ್ಮೋಪದೇಶಕಾಂಡ ಅಧ್ಯಯನ 5: ಧರ್ಮಶಾಸ್ತ್ರ**

**ಅ. ಪೀಠಿಕೆ**

ಧರ್ಮೋಪದೇಶಕಾಂಡದಲ್ಲಿ ಇಸ್ರಾಯೇಲ್ಯರ ಧರ್ಮಶಾಸ್ತ್ರದ ಸ್ವರೂಪವು ಮತ್ತೊಂದು ಪ್ರಮುಖ ವಿಷಯವಾಗಿದೆ. ಹಳೇ ಒಡಂಬಡಿಕೆಯಲ್ಲಿ ಧರ್ಮಶಾಸ್ತ್ರಕ್ಕೆ ಅತಿಹೆಚ್ಚಾಗಿ ಬಳಸಲ್ಪಡುವ ಇಬ್ರಿಯ ಪದವೆಂದರೆ 'ಥೋರಾ'. ಈ ಪದವು ಆಧುನಿಕ ನ್ಯಾಯಾಂಗ ವ್ಯವಹಾರದಲ್ಲಿ ಕಾನೂನು ಎಂಬ ಅರ್ಥವನ್ನು ಕೊಡುವದಿಲ್ಲ. ಇದನ್ನು "ಮಾಹಿತಿಗಳು" ಅಥವಾ "ಜೀವನದ ಮಾರ್ಗದರ್ಶನ"ಗಳೆಂದು ತರ್ಜುಮೆ ಮಾಡಬಹುದು. 'ಥೋರಾ' ಸಿನಾಯ್ ಬೆಟ್ಟದಲ್ಲಿ ದೇವರು ತನ್ನ ಜನರೊಂದಿಗೆ ಮಾಡಿಕೊಂಡ ಕೃಪೆಯುಳ್ಳ ಒಡಂಬಡಿಕೆಯ ಮೂಲವಾಗಿದೆ.

**ಆ. ಓದಿರಿ**

ಧರ್ಮೋಪದೇಶಕಾಂಡ 4:1-14; 6:20-25; 7:6-16

**ಇ. ಪ್ರಶ್ನೆಗಳು**

1. ಧರ್ಮೋ. 4:1-14 ಮತ್ತು 7:6-16 ನಿಂದ 'ಧರ್ಮಶಾಸ್ತ್ರ'(ಥೋರಾ)ದ ಅರ್ಥದ ಕುರಿತು ನಾವು ಏನನ್ನು ಕಲಿಯಬಹುದು? ಸಾಧ್ಯವಾದಷ್ಟು ನಿಮ್ಮ ಸ್ವಂತ ವಾಕ್ಯಗಳನ್ನು ಬಳಸಿ ಒಂದು ಪಟ್ಟಿಯನ್ನು ಮಾಡಿರಿ.
2. ಧರ್ಮೋ. 4:1-14 ಮತ್ತು 7:6-16 ನಿಂದ ಇಸ್ರಾಯೇಲ್ಯರ ಮತ್ತು ದೇವರ ಮಧ್ಯದಲ್ಲಿ ಬಾಂಧವ್ಯವನ್ನು ಬೆಸೆಯುವಲ್ಲಿ ಧರ್ಮಶಾಸ್ತ್ರದ ಪಾತ್ರದ ಕುರಿತು ನಾವು ಏನನ್ನು ಕಲಿಯುತ್ತೇವೆ?
3. ಧರ್ಮಶಾಸ್ತ್ರವು ಸಾಮುದಾಯಿಕವಾಗಿ ಇಸ್ರಾಯೇಲ್ ರಾಷ್ಟ್ರಕ್ಕೆ ಮಾತ್ರ ಸೀಮಿತವಾಗಿಲ್ಲ. ಇದು ವ್ಯಕ್ತಿಗತವಾದದ್ದು. ಧರ್ಮೋ. 6:20-25 ರಲ್ಲಿ ಇದು ಕಂಡುಬಂದಿದೆ ಎಂಬುದಾಗಿ ನಿಮ್ಮ ಸ್ವಂತ ವಾಕ್ಯದಲ್ಲಿ ಉತ್ತರಿಸಿರಿ?
4. ಧರ್ಮೋ. 6:20-25 ಭೂತ ಮತ್ತು ವರ್ತಮಾನ ಕಾಲಗಳ ಮಧ್ಯದಲ್ಲಿ ಯಾವ ಸಂಬಂಧವನ್ನುಂಟುಮಾಡುತ್ತದೆ?

**ಈ. ಉಪಸಂಹಾರ**

ಈ ಮೇಲಿನ ವಾಕ್ಯಭಾಗದ ಅಧ್ಯಯನದಿಂದ ನಾವು ಈ ಕೆಳಗಿನ ಉಪಸಂಹಾರವನ್ನು ರಚಿಸಬಹುದು.

1. ಹಳೇ ಒಡಂಬಡಿಕೆಯ ಇಬ್ರಿಯ ಪದವಾದ "ಥೋರಾ"ವನ್ನು "ಜೀವಿತದ ಮಾರ್ಗಸೂಚಿ" ಅಥವಾ "ಸೂಚನೆಗಳು" ಎಂಬುದಾಗಿ ಅರ್ಥೈಸಿಕೊಳ್ಳತಕ್ಕದ್ದು. ಇದು ಆಧುನಿಕ ಅರ್ಥದಲ್ಲಿರುವ "ಕಾನೂನು" ಎಂಬರ್ಥವಲ್ಲ.
2. ದೇವರು ಮೋಶೆಯ ಮುಖಾಂತರ ಇಸ್ರಾಯೇಲ್ಯರಿಗೆ ಕೊಟ್ಟ "ಕರಾರುಗಳು, ವಿಧಿಗಳು ಮತ್ತು ಧರ್ಮಶಾಸ್ತ್ರವು" ವಾಗ್ದಾನ ಮಾಡಲ್ಪಟ್ಟ ದೇಶದಲ್ಲಿ ಅವರ ಭವಿಷ್ಯ ಹಾಗೂ ಪ್ರತಿನಿತ್ಯದ ಪ್ರಾಯೋಗಿಕ ಜೀವಿತಗಳಿಗೆ ಸಂಬಂಧಿಸಿದಂತುವುಗಳಾಗಿದ್ದವು.
3. "ಥೋರಾ"ದ ಸಂಪನ್ಮೂಲವು ಸಿನಾಯ್ ಪರ್ವತದಲ್ಲಿ ದೇವರು ಇಸ್ರಾಯೇಲರೊಂದಿಗೆ ಮಾಡಿಕೊಂಡ ಒಂಡಂಬಡಿಕೆಯಾಧರಿತವಾದದ್ದು.
4. ಇಸ್ರಾಯೇಲ್ಯರು "ಥೋರಾ"ವನ್ನು ಹೇಗೆ ಹಿಂಭಾಲಿಸುತ್ತಾರೋ ಅದರ ಮೇಲೆ ಅವರ ಅದೃಷ್ಟವು ಅವಲಂಬನೆಯಾಗಿದೆ. ಅವರು ಅದನ್ನು ಹಿಂಬಾಲಿಸಿದರೆ ಅವರ ಭವಿಷ್ಯವು ಆಶೀರ್ವದಿಸಲ್ಪಡುವುದು; ವಾಗ್ದಾನದ ದೇಶದಲ್ಲಿ ಜೀವಿಸುವರು, ಹೆಚ್ಚುವರು ಮತ್ತು ಸಮೃದ್ಧಿಯಾಗುವರು. ಒಂದು ವೇಳೆ ಅವರು ಇದನ್ನು ಹಿಂಬಾಲಿಸದಿದ್ದರೆ ಅವರ ಭವಿಷ್ಯವು ಹಾಳಾಗುವುದು.

5. ಇಸ್ರಾಯೇಲ್ಯರು "ಥೋರಾ"ವನ್ನು ಪಾಲಿಸುವುದರಿಂದ ಅವರು ಬೇರೆ ಎಲ್ಲಾ ರಾಷ್ಟ್ರಗಳಿಂದ ಪ್ರತ್ಯೇಕವಾಗಿರುತ್ತಾರೆ. ಪರಿಶುದ್ಧವಾಗಿರಲು ಇದು ಅವರಿಗೆ ಸಹಾಯಮಾಡುತ್ತದೆ.

6. ಒಡಂಬಡಿಕೆಯಿಂದ ಹೊರಬಂದ 'ಸಿನಾಯ್ ಒಡಂಬಡಿಕೆ ಮತ್ತು ಥೋರಾ' – ದೇವರು ತನ್ನ ಜನರಾದ ಇಸ್ರಾಯೇಲರೊಂದಿಗೆ ಇಟ್ಟುಕೊಂಡ ಹತ್ತಿರ ಸಂಬಂಧದ ಒಂದು ಪುರಾವೆಯಾಗಿದೆ.

7. 'ಥೋರಾ'ವನ್ನು ನಂಬಿಗಸ್ಥಿಕೆಯಿಂದ ಪಾಲಿಸುವಂತಹದ್ದು ಸಹ ಇಸ್ರಾಯೇಲ್ಯರ ಜ್ಞಾನ ಮತ್ತು ತಿಳುವಳಿಕೆಗೆ ಒಂದು ಪುರಾವೆಯಾಗಿದೆ. 'ಥೋರಾ'ವನ್ನು ಪಾಲಿಸುವುದು ಜ್ಞಾನವಾಗಿ ತೋರುತ್ತದೆ. ಇದು ಇಸ್ರಾಯೇಲ್ಯರು ಸೀನಾಯ್ ಪರ್ವತದ ಒಡಂಬಡಿಕೆಯಲ್ಲಿನ ತಮ್ಮ ಪಾತ್ರವನ್ನು ನೆರವೇರಿಸುತ್ತಿದ್ದಾರೆಂದು ತೋರಿಸುತ್ತದೆ. 'ಥೋರಾ'ವನ್ನು ಅಲಕ್ಷ್ಯಮಾಡುವಂತಹದ್ದು ಮೂರ್ಖತನ. ಇದು ಇಸ್ರಾಯೇಲ್ಯರು ಸಿನಾಯ್ ಪರ್ವತದ ಒಡಂಬಡಿಕೆಯಲ್ಲಿನ ತಮ್ಮ ಪಾತ್ರವನ್ನು ಅಲ್ಲಗಳೆಯುತ್ತಿದ್ದಾರೆಂದು ತೋರಿಸುತ್ತದೆ.

8. 'ಥೋರಾ'ವನ್ನು ಇಸ್ರಾಯೇಲ್ಯರು ಪಾಲಿಸುವಂತಹದ್ದು ಸಹ ದೇವರ ನೀತಿವಂತಿಕೆ ಮತ್ತು ತನ್ನ ಜನರಿಗಾಗಿ ಆತನ ನಂಬಿಗಸ್ಥಿಕೆಯ ಪ್ರೀತಿಯ ಒಂದು ಪುರಾವೆಯಾಗಿದೆ.

9. 'ಥೋರಾ' ಸಾಮೂಹಿಕವಾಗಿ ಮತ್ತು ವೈಯಕ್ತಿಕವಾಗಿ ಇಸ್ರಾಯೇಲ್ಯರ ಎಲ್ಲಾ ತಲೆಮಾರಿಗೆ ಅನ್ವಯಿಸಲ್ಪಡುತ್ತದೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಇಬ್ರಿಯ ಪದವಾದ 'ಥೋರಾ'ದ ಅರ್ಥವನ್ನು ನಿಮ್ಮ ಸ್ವಂತವಾಕ್ಯದಲ್ಲಿ ವಿವರಿಸಿರಿ.

2. ಈ ಒಂದು ಅಭ್ಯಾಸದಿಂದ ಹಳೇ ಒಡಂಬಡಿಕೆ ಕಲ್ಪನೆಯ ಧರ್ಮಶಾಸ್ತ್ರದ ಕುರಿತು ಉತ್ತಮ ತಿಳುವಳಿಕೆಯನ್ನು ನೀವು ಹೇಗೆ ಹೊಂದಿದ್ದಾರೆಂದು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

3. ನಿಮ್ಮ ಪ್ರಶ್ನೆಯನ್ನು ಉತ್ತರಿಸಲು **ಇ-4ನ್ನು** ಉಪಯೋಗಿಸಿ 'ಥೋರಾ' ಹೊಸ ಒಡಂಬಡಿಕೆಯ ಬೋಧನೆಯಾದ ಕೃಪೆ ಮತ್ತು ಧರ್ಮಶಾಸ್ತ್ರದ ಹತ್ತಿರ ಯಾವ ರೀತಿಯಾಗಿ ಬಂದಿದೆ ಎಂಬುದನ್ನು ವಿವರಿಸಿರಿ?

**4. ಈ ಹಿಂದಿನ ಪ್ರಶ್ನೆಗೆ ನಮ್ಮ ಉತ್ತರವನ್ನು ನಾವು ಕಂಡುಕೊಂಡಿದ್ದೇನೆಂದರೆ "ಇಸ್ರಾಯೇಲ್ಯರಿಗೆ**

**ಧರ್ಮೋಪದೇಶಕಾಂಡ ಅಧ್ಯಯನ 6: ಪ್ರೀತಿ**

**ಅ. ಪೀಠಿಕೆ**

ಧರ್ಮೋಪದೇಶಕಾಂಡದಲ್ಲಿ 'ಪ್ರೀತಿ' ಎಂಬ ಪದವು ಮೂರು ದೃಷ್ಟಿಕೋನಗಳಲ್ಲಿ ಹೇಗೆ ಉಪಯೋಗಿಸಲ್ಪಟ್ಟಿದೆ ಎಂಬುದನ್ನು ಈ ಅಧ್ಯಯನದಿಂದ ನಾವು ಪರೀಕ್ಷಿಸಬಹುದಾಗಿದೆ; ಇಸ್ರಾಯೇಲರಿಗಾಗಿ ದೇವರ ಪ್ರೀತಿ; ದೇವರಿಗಾಗಿ ಇಸ್ರಾಯೇಲರ ಪ್ರೀತಿ; ಮತ್ತು "ಪ್ರೀತಿ" ಮತ್ತು "ಭಯ"ದ ನಡುವಿನ ಸಂಬಂಧ.

ಆತನಿಗಾಗಿ ಇರುವ ಪ್ರೀತಿಯ ಸಂಪನ್ಮೂಲವು ದೇವರ ಪ್ರೀತಿ ಮತ್ತು ಆತನು ಆಯ್ಕೆ ಮಾಡಿಕೊಂಡ ಇಸ್ರಾಯೇಲರಾಗಿದ್ದರು. ಇಡೀ ಧರ್ಮಶಾಸ್ತ್ರವು ಈ ಒಂದು ಆಜ್ಞೆಯಲ್ಲಿ ಸಾರಾಂಶಗೊಂಡಿದೆ: ನೀವು ನಿಮ್ಮ ದೇವರಾದ ಯೆಹೋವನನ್ನು ಪೂರ್ಣಹೃದಯದಿಂದಲೂ ಪೂರ್ಣಪ್ರಾಣದಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸಬೇಕು (ಧರ್ಮೋ. 6:5). ಈ ಪ್ರೀತಿಯು ದೇವರ ವಿಧಿ ಮತ್ತು ನಿಯಮಾವಳಿಗಳನ್ನು ಯಾಂತ್ರಿಕವಾದ ವಿಧೇಯತ್ವದಿಂದ ಹಿಂಬಾಲಿಸುವಂತಹದ್ದಲ್ಲ. ಅದಕ್ಕೆ ಬದಲಾಗಿ ಇದನ್ನು ದೇವರ ಚಿತ್ತದ ನೇರವೇರುವಿಕೆಯ ಬೆಳವಣಿಗೆ ಮತ್ತು ಒಡಂಬಡಿಕೆಯ ಮಹತ್ವದ ಆಳದಲ್ಲಿ ಅರ್ಥಮಾಡಿಕೊಳ್ಳತಕ್ಕದ್ದು. ಪರಿಣಾಮವಾಗಿ, ಪ್ರೀತಿಯನ್ನು ದೇವರ ಸತ್ಯವೇದದಲ್ಲಿ ಅರ್ಥಮಾಡಿಕೊಳ್ಳತಕ್ಕದ್ದು, ಐಗುಪ್ತದಲ್ಲಿನ ಗುಲಾಮತನದಿಂದ ಇಸ್ರಾಯೇಲ್ಯರಿಗೆ ಮಾಡಿದ್ದು ಆತನ ಬಿಡುಗಡೆ ಮತ್ತು ಸಿನಾಯ್ ಪರ್ವತದಲ್ಲಿ ಅವರೊಂದಿಗೆ ಮಾಡಿಕೊಂಡ ಆತನ ಒಡಂಬಡಿಕೆ.

**ಆ. ಓದಿರಿ**

ಸೂಚನೆ: ಮುಂದಿರುವ ಸಂಖ್ಯೆಗಳು ಮುಂದೆ ಬರುವ ವಿಭಾಗದಲ್ಲಿರುವ ಪ್ರಶ್ನೆಗಳನ್ನು ಹಿಂಬಾಲಿಸುವಂತವುಗಳಾಗಿವೆ.

1. ಇಸ್ರಾಯೇಲರಿಗಾಗಿ ದೇವರ ಪ್ರೀತಿ: ಧರ್ಮೋ. 4:25-41; 7:7-9
2. ದೇವರಿಗಾಗಿ ಇಸ್ರಾಯೇಲ್ಯರ ಪ್ರೀತಿ: ಧರ್ಮೋ. 5:10; 6:4-9; 11:1,13-15,22-23; 13:1-5; 19:8-10; 30:15-20
3. "ಪ್ರೀತಿ" ಮತ್ತು "ಭಯ"ದ ನಡುವಿನ ಸಂಬಂಧ: ಧರ್ಮೋ. 10:12-13

**ಇ. ಪ್ರಶ್ನೆಗಳು**

1. ಧರ್ಮೋ. 4:25-41; 7:7-9 ರಿಂದ ಇಸ್ರಾಯೇಲರಿಗಾಗಿ ದೇವರ ಪ್ರೀತಿಯ ಕುರಿತು ನಾವು ಏನನ್ನು ಕಲಿಯುತ್ತೇವೆ? ಒಂದು ಪಟ್ಟಿಯನ್ನು ಮಾಡಿರಿ. ಸಾಧ್ಯವಾದಷ್ಟು ನಿಮ್ಮ ಸ್ವಂತ ವಾಕ್ಯಗಳನ್ನು ಉಪಯೋಗಿಸಿರಿ.
2. ಮೇಲಿನ ಸಂಖ್ಯೆ 2 ರಲ್ಲಿರುವ ವಾಕ್ಯಭಾಗಗಳಿಂದ ದೇವರಿಗಾಗಿ ಇಸ್ರಾಯೇಲ್ಯರಿಗೆ ಇರುವ ಪ್ರೀತಿಯ ಕುರಿತು ನಾವು ಏನನ್ನು ಕಲಿಯುತ್ತೇವೆ? ಒಂದು ಪಟ್ಟಿಯನ್ನು ಮಾಡಿರಿ. ಸಾಧ್ಯವಾದಷ್ಟು ನಿಮ್ಮ ಸ್ವಂತ ವಾಕ್ಯಗಳನ್ನು ಉಪಯೋಗಿಸಿರಿ.
3. ಧರ್ಮೋ. 10:12-13ನ್ನು ಓದಿರಿ. "ಪ್ರೀತಿ" ಮತ್ತು "ಭಯ"ದ ಮಧ್ಯ ಇರುವ ಸಂಬಧವನ್ನು ವಿವರಿಸಿರಿ. ನಿಮ್ಮ ವಾಕ್ಯಗಳನ್ನೇ ಉಪಯೋಗಿಸಿರಿ.

**ಈ. ಉಪಸಂಹಾರ**

ಮೇಲಿನ ವಾಕ್ಯಭಾಗದ ನಮ್ಮ ಅಭ್ಯಾಸದಿಂದ ಈ ಉಪಸಂಹಾರವನ್ನು ಚಿತ್ರಿಸಬಹುದಾಗಿದೆ.

1. ಆತನ ಜನರಿಗಾಗಿ ದೇವರ ಪ್ರೀತಿಯ ಕುರಿತು:

   ಅ. ಇದು ಅರ್ಹರಾಗಿರುವುದಕ್ಕಾಗಿ ಅಲ್ಲ ಬದಲಾಗಿ ಇದು ಆತನ ಕೃಪೆಯ ಒಂದು ಕೃಪೆಯಾಗಿದೆ.

ಆ. ಇದು ಒಂದು ಒಡಂಬಡಿಕೆಯ ಪ್ರೀತಿಯಾಗಿದೆ. ಇದು ಆತನ ನಂಬಿಗಸ್ಥಿಕೆಯನ್ನು ಪ್ರತಿಬಿಂಬಿಸುತ್ತದೆ ಮತ್ತು ಇದು ಆತನ ಜನರ ಎಲ್ಲಾ ಸಂತತಿಗಳಿಗೂ ವ್ಯಾಪಿಸುವಂತಹದ್ದಾಗಿದೆ ("ಆತನನ್ನು ಯಾರು ಪ್ರೀತಿಸುತ್ತಾರೋ ಅವರಿಗೆ").

ಇ. ಇದು ದೇವರ ಬಿಡುಗಡೆಯ ಕಾರ್ಯದ ಮೂಲಕ ವ್ಯಕ್ತವಾಗಿದೆ, ಆತನ ಜನರಿಗಾಗಿ ಆತನ ವಾಗ್ದಾನದ ನೆರವೇರಿಕೆಯಿಂದ ಮತ್ತು ಆತನ ಜನರಿಗಾಗಿ ಆತನ ಬಲವುಳ್ಳ ಪ್ರಸನ್ನತೆಯಿಂದ.

2. ದೇವರಿಗಾಗಿ ಇಸ್ರಾಯೇಲ್ಯಗಿರುವ ಪ್ರೀತಿಯ ಕುರಿತು:

ಅ. ಅವಳಿಗಾಗಿ ಆತನಿಗಿರುವ ಪ್ರೀತಿಗೆ ಸರಿಯಾದ ಪ್ರತಿಕ್ರಿಯೆಯು ದೇವರಿಗಾಗಿ ಅವಳಿಗಿರುವ ಪ್ರೀತಿಯಾಗಿದೆ (ಹೋಲಿಸಿರಿ 1 ಯೋಹಾನ 4:19 ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ).

ಆ. ಅವಳ ಪ್ರೀತಿಯು ಬರೀ "ಆಳವಾದ ಮಮತೆ" ಅಥವಾ "ಭಕ್ತಿ" ಅಥವಾ "ಅತೀಪ್ರೀತಿಯಿಂದ ಕೂಡಿದ್ದು" ಅಥವಾ ಭಾವನಾತ್ಮಕ ಪ್ರೀತಿ"ಗಳಲ್ಲ. ಅದು ಯಾವಾಗಲೂ ಕೆಲವು ವಿಧವಾದ ಕಾರ್ಯಚಟುವಟಿಕೆಗಳೊಂದಿಗೆ ಸಂಬಂಧಿಸಿರುತ್ತದೆ, ಅಂಥವುಗಳೆಂದರೆ ಆತನ ಮಾರ್ಗಗಳಲ್ಲಿ ನಡೆಯುವುದು (10:12), ಆತನ ಆಜ್ಞೆಗಳನ್ನು ಪಾಲಿಸುವುದು (5:10), ಆತನಿಗೆ ವಿಧೇಯರಾಗುವುದು (13:4), ಸಂಪೂರ್ಣಹೃದಯದಿಂದಲೂ ಮತ್ತು ಮನಸ್ಸಿನಿಂದಲೂ ಆತನನ್ನು ಸೇವಿಸುವುದು (11:13), ಆತನ ಸ್ವರಗಳಿಗೆ ವಿಧೇಯರಾಗಿ ಮತ್ತು ದೃಢವಾಗಿ ಆತನನ್ನು ಹಿಡಿದುಕೊಳ್ಳುವುದು (30:20). ಅದರಂತೆ ದೇವರಿಗಾಗಿ ಇಸ್ರಾಯೇಲರಿಗಿರುವ ಪ್ರೀತಿಯು ದೇವರನ್ನು ಮೆಚ್ಚಿಸುವಂತಹ ಕಾರ್ಯಚಟುವಟಿಕೆಗಳ ಮೂಲಕ ವ್ಯಕ್ತಪಡಿಸುವಂತಹದ್ದಾಗಿದೆ. ಇಸ್ರಾಯೇಲ್, ದೇವರೊಂದಿಗಿರುವ ಅವಳ ಒಡಂಬಡಿಕೆಯ ಸಂಬಂಧವು ಅವಳ ವಚನಬದ್ಧತೆಯಿಂದ ವ್ಯಕ್ತವಾಗುತ್ತದೆ. ಆತನಿಗೆ ಮೆಚ್ಚಿಕೆಯಾಗುಂತಹ ಆಕರ್ಷಕ ಚಟುವಟಿಕೆಗಳನ್ನು ಮಾಡುವಂತಹದ್ದೇ, ದೇವರಿಗಾಗಿ ಅವಳಿಗಿರುವ ಪ್ರೀತಿಯಾಗಿದೆ.

3. "ಪ್ರೀತಿ" ಮತ್ತು "ಭಯ"ದ ಮಧ್ಯದಲ್ಲಿರುವ ಸಂಬಂಧದ ಕುರಿತು: "ಪ್ರೀತಿ" ಮತ್ತು "ಭಯ"ಗಳೆರಡರಿಂದ ದೇವಜನರು ಆತನಿಗೆ ಸಂಬಂಧವುಳ್ಳವರಾಗಿದ್ದಾರೆ:

ಅ. ದೇವಜನರು ಆತನು ಯಾರೆಂಬುದನ್ನು ಮತ್ತು ಆತನ ಪರಿಶುದ್ಧತ್ವವನ್ನು ಯಾವಾಗ ಅರ್ಥೈಸಿಕೊಳ್ಳುತ್ತಾರೋ ಆಗ ಆತನಿಗಾಗಿ "ಭಯ"ವು ಅವರ ಸರಿಯಾದ ಮನೋವೃತ್ತಿಯಾಗಿರುತ್ತದೆ.

ಆ. "ಪ್ರೀತಿ"ಯು ಆತನು ಮಾಡಿದ (ಆತನ ಬಿಡುಗಡೆ) ಕಾರ್ಯಕ್ಕೆ ದೇವಜನರು ಆತನಿಗೆ ತೋರಿಸುವ ಸರಿಯಾದ ಪ್ರತಿಕ್ರಿಯೆಯಾಗಿರುತ್ತದೆ.

ಇ. "ದೇವರ ಭಯ"ವು ಆತನಲ್ಲಿ ನಂಬಿಕೆಯಿಟ್ಟಿದ್ದರ ಫಲಿತಾಂಶವಾಗಿರುತ್ತದೆ. ದೇವರ ಪ್ರೀತಿಯು ಆತನ ಚಿತ್ತವನ್ನು ಮಾಡುವುದರ ಫಲಿತಾಂಶವಾಗಿರುತ್ತದೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಧರ್ಮೋಪದೇಶಕಾಂಡವು ಆತನ ಜನರಿಗಾಗಿ ದೇವರ ಪ್ರೀತಿ ಮತ್ತು ಆತನಿಗಾಗಿ ಆತನ ಜನರ ಪ್ರೀತಿಯ ಮಧ್ಯದಲ್ಲಿರುವ ಸಂಬಂಧದ ಕುರಿತು ಹೇಗೆ ವರ್ಣಿಸುತ್ತದೆ ಎಂಬುದನ್ನು ಮೊದಲು ವಿವರಿಸಿರಿ. ದಯಮಾಡಿ ನಿಮ್ಮ ಟಿಪ್ಪಣಿಗಳನ್ನು ಉಲ್ಲೇಖಿಸಬೇಡಿ. ನಿಮ್ಮ ಸ್ವಂತ ಪದಗಳನ್ನು ಉಪಯೋಗಿಸಿರಿ.

2. ಅನಂತರ ನಿಮಗಾಗಿ ದೇವರ ಪ್ರೀತಿ ಮತ್ತು ದೇವರಿಗಾಗಿ ನಿಮ್ಮ ಪ್ರೀತಿಯನ್ನು ನಿಮ್ಮ ಸ್ವಂತ ಅನುಭವಗಳಲ್ಲಿ ಹಂಚಿಕೊಳ್ಳಿರಿ. ಧರ್ಮೋಪದೇಶಕಾಂಡದಲ್ಲಿ ನಾವು ನೋಡುವಂತೆ ಸರಿಹೋಲುವ ರೀತಿಯಲ್ಲೋ ಅಥವಾ ವ್ಯತ್ಯಾಸವಾಗಿಯೋ ಯಾವ ವಿಧದಲ್ಲಿ ನೀವು ಅನುಭವಿಸಿದ್ದೀರಿ?

3. ಧರ್ಮೋಪದೇಶಕಾಂಡವು “ದೇವರಿಗಾಗಿ ಪ್ರೀತಿ” ಮತ್ತು “ದೇವರ ಚಿತ್ತವನ್ನು ಮಾಡುವುದರ” ಮಧ್ಯದಲ್ಲಿರುವ ಸಂಬಂಧವನ್ನು ಹೇಗೆ ವರ್ಣಿಸುತ್ತದೆ ಎಂಬುದನ್ನು ಮೊದಲು ವಿವರಿಸಿರಿ. ನಿಮ್ಮ ಟಿಪ್ಪಣಿಗಳನ್ನು ಉಲ್ಲೇಖಿಸಬೇಡಿರಿ. ನಿಮ್ಮ ಸ್ವಂತ ಪದಗಳನ್ನು ಉಪಯೋಗಿಸಿರಿ.

4. ಅನಂತರ ನಿಮ್ಮ ಸ್ವಂತ ಕ್ರಿಸ್ತೀಯಜೀವನವನ್ನು ಧರ್ಮೋಪದೇಶಕಾಂಡದಲ್ಲಿ ಸಂಬಂಧವು ಹೇಗೆ ವರ್ಣಿಸಲ್ಪಟ್ಟಿದೆ ಎಂಬುದರ ಬೆಳಕಿನಲ್ಲಿ ನಮೂದಿಸಿರಿ? ಹೋಲಿಕೆಗಳು ಮತ್ತು ವ್ಯತ್ಯಾಸಗಳು?

5. ದೇವರಿಗೆ ಯಾಕೆ ನೀವು ಭಯಪಡುತ್ತೀರಿ? ಮತ್ತು ನಿಮ್ಮ ಕ್ರಿಸ್ತೀಯ ಜೀವನದ ನಡೆಯಲ್ಲಿ ತೋರಲ್ಪಡುವಂತೆ (ಅಥವಾ ಪ್ರಕಟವಾಗುವಂತೆ) ದೇವರಿಗಾಗಿ ನಿಮ್ಮ “ಪ್ರೀತಿ”ಯು ಹೇಗಿದೆ?

**ಊ. ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ**

“ದೇವರನ್ನು ಪ್ರೀತಿಸುವುದೆಂದರೆ ಆತನ ಚಿತ್ತವನ್ನು ಮಾಡುವುದು” ಎಂಬುದಾಗಿದೆ. ಕರೆಯಲ್ಪಡುವ ಶೀರ್ಷಿಕೆಯುಳ್ಳ ಒಂದು ಸತ್ಯವೇದ ಅಧ್ಯಯನವನ್ನು ಒಂದು ಯೌವನಸ್ಥ ಗುಂಪಿಗೆ ನೀವು ಈ ಅಭ್ಯಾಸದಿಂದ ಏನನ್ನು ಕಲಿತಿದ್ದೀರೋ ಅದನ್ನು ಉಪಯೋಗಿಸಿ ಸಿದ್ಧಮಾಡಿರಿ.

**ಧರ್ಮೋಪದೇಶಕಾಂಡ ಅಧ್ಯಯನ 7: ಪವಿತ್ರ/ಪರಿಶುದ್ಧ ಯುದ್ಧ**

**ಅ. ಪೀಠಿಕೆ**

ಯುದ್ಧ ಎಂಬ ವಿಷಯ ಧರ್ಮೋಪದೇಶಕಾಂಡದ ಎಲ್ಲಾ ಕಡೆಗಳಲ್ಲಿ ಕಂಡುಬರುತ್ತದೆ. ಯುದ್ಧದ ಕುರಿತು ನಿಯಮಗಳುಂಟು. ಯುದ್ಧದ ಕುರಿತು ಮಾತುಗಳು ಇದೆ. ಮತ್ತು ಯುದ್ಧದ ಕುರಿತು ಬೇರೆ ವಿಧವಾದ ಪಠ್ಯಗಳು ಇವೆ. ಆದರೆ ಧರ್ಮೋಪದೇಶಕಾಂಡದಲ್ಲಿ ನಾವು ಕಾಣುವಂತಹ "ಯುದ್ಧದ ಪಠ್ಯಗಳು" ಸಾಮಾನ್ಯವಾಗಿರುವ ಯುದ್ಧದ ಕುರಿತು ಅಲ್ಲ. ಅವುಗಳು ವಿಶೇಷ ರೀತಿಯ ಯುದ್ಧದ ಕುರಿತಾಗಿವೆ, ಅದರಂತೆಯೇ "ಪವಿತ್ರಯುದ್ಧ" ಎಂಬುದಾಗಿ ವರ್ಣಿಸಲ್ಪಟ್ಟಿದೆ. ದೇವರು ತನ್ನ ಜನರಿಗಾಗಿ ಹೋರಾಡಿದ ಯುದ್ಧ ಇದಾಗಿದೆ. ಪವಿತ್ರಯುದ್ಧದ ಮಾದರಿಯು ಐಗುಪ್ತದಿಂದ ವಿಮೋಚಿಸಲ್ಪಟ್ಟದ್ದಾಗಿದೆ: "ಆದರೆ ಮೋಶೆ ಆ ಜನರಿಗೆ – *ನೀವು ಅಂಜಬೇಡಿರಿ; ಸುಮ್ಮನೆ ನಿಂತುಕೊಂಡಿದ್ದು ಯೆಹೋವನು ಈ ಹೊತ್ತು ನಿಮ್ಮನ್ನು ರಕ್ಷಿಸುವ ರೀತಿಯನ್ನು ನೋಡಿರಿ. ನೀವು ಈ ಹೊತ್ತು ನೋಡುವ ಐಗುಪ್ತ್ಯರನ್ನು ಇನ್ನು ಮುಂದೆ ಎಂದಿಗೂ ನೋಡುವುದಿಲ್ಲ. ಯೆಹೋವನೇ ನಿಮಗಾಗಿ ಯುದ್ಧ ಮಾಡುವನು; ನೀವಂತು ಸುಮ್ಮನೇ ಇರ್ರಿ ಎಂದು ಹೇಳಿದನು"* (ವಿಮೋಚಕನ.14:13-14).

**ಆ. ಓದಿರಿ**

ಧರ್ಮೋಪದೇಶಕಾಂಡ 1:26-31; 1:41-46; 3:21-22

**ಇ. ಪ್ರಶ್ನೆಗಳು**

1. ಧರ್ಮೋ. 1:26-31 ರಿಂದ ನಾವು ಪವಿತ್ರಯುದ್ಧದ ಕುರಿತು ಏನನ್ನು ಕಲಿಯುತ್ತೇವೆ?
2. ಧರ್ಮೋ. 1:41-46 ರಿಂದ ನಾವು ಪವಿತ್ರಯುದ್ಧದ ಕುರಿತು ಏನನ್ನು ಕಲಿಯುತ್ತೇವೆ?
3. ಧರ್ಮೋ. 3:21-22 ರಿಂದ ನಾವು ಪವಿತ್ರಯುದ್ಧದ ಕುರಿತು ಏನನ್ನು ಕಲಿಯುತ್ತೇವೆ?

**ಈ. ಉಪಸಂಹಾರ**

ಧರ್ಮೋಪದೇಶಕಾಂಡದಲ್ಲಿನ ಪವಿತ್ರಯುದ್ಧದ ನಮ್ಮ ಅಧ್ಯಯನದಿಂದ ನಾವು ಈ ಕೆಳಗಿನ ಉಪಸಂಹಾರವನ್ನು ಚಿತ್ರಿಸಬಹುದು:

1. ಪವಿತ್ರದ ನಿಜ ಮೂಲ ಆಧಾರವೇನೆಂದರೆ "ನಿಮ್ಮ ಕರ್ತನಾದ ದೇವರು ನಿಮ್ಮ ಕೂಡ ಇದ್ದಾನೆ" ಎಂಬುದು.
2. ಹಾಗೆಯೇ ಇದರ ಪರಿಣಾಮವಾಗಿ, ವೈರಿಯು ಎಷ್ಟೇ ಬಲಿಷ್ಠನಾಗಿದ್ದರೂ ಮತ್ತು ಸುಸಜ್ಜಿತನಾಗಿದ್ದರೂ ಸಹ, ದೇವಜನರು ಹೆದರುವ ಅಗತ್ಯತೆಯಿಲ್ಲ.
3. ಜಯವು ಸೇನೆಯ ಪರಿಮಾಣವನ್ನು ಅವಲಂಬಿಸಿಲ್ಲ (ಅಥವಾ ಯುದ್ಧಸಾಮಾಗ್ರಿಗಳು ಮತ್ತು ಸಿಪಾಯಿಗಳ ಕೌಶಲ್ಯಗಳ ಮೇಲೆ ಅಲ್ಲ).
4. ಶತೃವಿನ ಬಲಹೀನತೆಯ ಮೇಲೆ ಆದರೂ ಜಯವು ಆಧಾರವಾಗಿಲ್ಲ.
5. ಜಯವು ದೇವರನ್ನು ಅವಲಂಬಿಸುತ್ತದೆ. ಜಯವನ್ನು ಕೊಡುವಾತನು ದೇವರೊಬ್ಬನೇ ಆಗಿದ್ದಾನೆ.
6. ಹಾಗಾಗಿ ಪವಿತ್ರಯುದ್ಧದಲ್ಲಿ ಯಾರು ಭಾಗವಹಿಸುತ್ತಾರೋ ಅವರು ದೇವರಲ್ಲಿ ನಂಬಿಕೆ ಇಡುವಂತಹದ್ದು ಬಹಳ ಪ್ರಾಮುಖ್ಯವಾದ ಅಗತ್ಯತೆಯಾಗಿದೆ.

7. ಪರಿಣಾಮವಾಗಿ, ಶತೃಗಳ ಮೇಲೆ ಜಯವನ್ನು ಕೊಡುವ ದೇವರಲ್ಲಿ ವಿಶ್ವಾಸವನ್ನು ಇಡದ ಜನರನ್ನು ಸೈನ್ಯದಲ್ಲಿ ಸೇರಿಸಿಕೊಳ್ಳಲಾಗದು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಧರ್ಮೋಪದೇಶಕಾಂಡದಲ್ಲಿ ಕಂಡುಬರುವ ಪವಿತ್ರಯುದ್ಧದ ಕಲ್ಪನೆಯನ್ನು ನಿಮ್ಮ ಸ್ವಂತ ಪದಗಳಲ್ಲಿ ಸಾರಾಂಶ ಹೇಳಿರಿ. ನಿಮ್ಮ ಟಿಪ್ಪಣಿಯನ್ನು ಉಲ್ಲೇಖಿಸಬೇಡಿರಿ.

2. ಹೊಸ ಒಡಂಬಡಿಕೆಯು ಸಹ ಪವಿತ್ರಯುದ್ಧದ ಕುರಿತು ಮಾತಾಡುತ್ತದೆ. ಎಫೆಸ. 6:10-18 ಮತ್ತು ಕೊಲೊ. 2:15 ಗಳನ್ನು ಓದಿರಿ, ನಂತರ ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿರಿ.

   ಅ. ಹೊಸ ಒಡಂಬಡಿಕೆಯ ಪವಿತ್ರಯುದ್ಧವು ಹಳೇ ಒಡಂಬಡಿಕೆಯ ಪವಿತ್ರಯುದ್ಧದಿಂದ ಯಾವ ಪ್ರಕಾರವಾಗಿ ವ್ಯತ್ಯಾಸವುಳ್ಳದ್ದಾಗಿದೆ?

   ಆ. ಎರಡು ಒಡಂಬಡಿಕೆಗಳಲ್ಲಿ ಕಂಡುಬರುವ ಪವಿತ್ರಯುದ್ಧದಲ್ಲಿ ಹೋರಾಡುವ ವ್ಯಕ್ತಿಗೆ ಅಗತ್ಯವಾಗಿ ಇರಬೇಕಾದ ಒಂದು ಅಂಶವುಂಟು ಆ ಅಗತ್ಯವಾದ ಅಂಶ ಯಾವುದು?

   ಇ. ಹೊಸ ಒಡಂಬಡಿಕೆಯ ಪವಿತ್ರಯುದ್ಧದ ಜಯದ ಕುರಿತು ನಾವು ಏನನ್ನು ಕಲಿಯುತ್ತೇವೆ?

**ಊ. ಸತ್ಯವೇದ ಅಧ್ಯಯನವನ್ನು ತಯಾರಿಸಿರಿ**

ಈ ಅಧ್ಯಯನದಿಂದ ನೀವು ಏನನ್ನು ಕಲಿತಿದ್ದಿರೋ ಅದನ್ನು ಉಪಯೋಗಿಸಿಕೊಂಡು "ನಮ್ಮ ಪವಿತ್ರಯುದ್ಧ" ಎಂದು ಸಾಮಾನ್ಯವಾಗಿ ಕರೆಯಲ್ಪಡುವಂತೆ ಸಭೆಯ ಜನರಿಗಾಗಿ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.

**ಧರ್ಮೋಪದೇಶಕಾಂಡ ಅಧ್ಯಯನ 8: ಮನುಷ್ಯರ ಆಲೋಚನೆಗಳು/ಯೋಚನೆಗಳು**

**ಅ. ಪೀಠಿಕೆ**

ಮನುಷ್ಯ ಸಂಬಂಧದಲ್ಲಿ ಯುದ್ಧದ ಕುರಿತಿರುವ ಕಾನೂನು ಮತ್ತು ಕಟ್ಟಳೆಗಳ ವೈಶಿಷ್ಟ್ಯವು ಆಶ್ಚರ್ಯಕರವಾಗಿರುತ್ತದೆ. ಧರ್ಮೋಪದೇಶಕಾಂಡದಲ್ಲಿ ಮನುಷ್ಯರ ಆಲೋಚನೆಗಳು ಕೂಡ ಗಣನೆಗೆ ತೆಗೆದುಕೊಂಡ ಪ್ರತ್ಯೇಕವಾದ ವಿಷಯಗಳಾಗಿವೆ. ಇಡೀಪುಸ್ತಕವು ಧರ್ಮಶಾಸ್ತ್ರವನ್ನು ಅನ್ವಯಿಸಿಕೊಳ್ಳುವುದರಿಂದ ಪರೋಪಕಾರಿಯ ಮಾರ್ಗದಲ್ಲಿರುವ ಗುಣಲಕ್ಷಣಗಳನ್ನು ವಿವರಿಸುತ್ತದೆ. ಮನುಷ್ಯನ ಜೀವನ ಮತ್ತು ವೈಯಕ್ತಿಕ ಸಂತೋಷದಲ್ಲಿ ಧರ್ಮಶಾಸ್ತ್ರವು ಹತ್ತಿಕೊಳ್ಳುವುದನ್ನು ಒತ್ತಿಹೇಳುತ್ತದೆ. ವಾಸ್ತವಿಕವಾಗಿ ಇದು ಮಾನವನ ಧ್ವನಿಯಲ್ಲಿ ಇಡೀಪುಸ್ತಕವನ್ನು ದಯಪಾಲಿಸುತ್ತದೆ.

**ಆ. ಓದಿರಿ**

ಸೂಚನೆ ಏನೆಂದರ ಈ ಸಂಖ್ಯೆಗಳು ಮುಂದಿನ ಭಾಗದಲ್ಲಿರುವ ಪ್ರಶ್ನೆಗಳ ಸಂಖ್ಯೆಗಳನ್ನು ಹಿಂಬಾಲಿಸುವಂತವುಗಳಾಗಿವೆ.

1. ಧರ್ಮೋ. 20:5-9
2. ಧರ್ಮೋ. 10:16; 14:28-29; 16:9-16; 24:17-18; 24:19-22

**ಇ. ಪ್ರಶ್ನೆಗಳು**

1. ಧರ್ಮೋ. 20:5-9 ರಿಂದ ಮನುಷ್ಯರ ಆಲೋಚನೆಗಳು ಮತ್ತು ಪವಿತ್ರಯುದ್ಧದ ಕುರಿತು ನಾವು ಏನನ್ನು ಕಲಿಯುತ್ತೇವೆ?
2. ಈ ಕೆಳಗಿನ ಪಠ್ಯಗಳಿಂದ ಮನುಷ್ಯರ ಇತರ ಆಲೋಚನೆಗಳ ಕುರಿತು ನಾವು ಏನನ್ನು ಕಲಿಯುತ್ತೇವೆ?

   ಅ. ಧರ್ಮೋ. 10:16-19

   ಆ. ಧರ್ಮೋ. 14:28-29

   ಇ. ಧರ್ಮೋ. 16:9-16

   ಈ. ಧರ್ಮೋ. 24:17-18

   ಉ. ಧರ್ಮೋ. 24:19-22

**ಈ. ಉಪಸಂಹಾರ**

ಧರ್ಮೋಪದೇಶಕಾಂಡದಲ್ಲಿನ ಮನುಷ್ಯರ ಆಲೋಚನೆಗಳ ಕುರಿತಾದ ನಮ್ಮ ಅಭ್ಯಾಸದಿಂದ ಈ ಉಪಸಂಹಾರವನ್ನು ನಾವು ಬರೆಯಬಹುದು:

1. ಪವಿತ್ರಯುದ್ಧದಲ್ಲಿ, ಸೈನ್ಯದ ಗಾತ್ರಕ್ಕಿಂತ ಮನುಷ್ಯರ ಆಲೋಚನೆಗಳು ಬಹಳ ಪ್ರಾಮುಖ್ಯವಾದದ್ದು. ಪರಿಣಾಮವಾಗಿ, ನೇಮಕವಾದ ಗುಂಪಿನ ಪುರುಷರು ಯುದ್ಧಕ್ಕೆ ಹೋಗುವುದರಿಂದ ಮುಕ್ತಹೊಂದಿದರು.
2. ದೇವಜನರು ದೇವರನ್ನು ಅನುಸರಿಸುವುದರಿಂದ ಅವರು ಯಾವುದೇ ಲಂಚವನ್ನು ತೆಗೆದುಕೊಳ್ಳದೆ ಮತ್ತು ಯಾವುದೇ ಪಕ್ಷಪಾತವನ್ನು ತೋರಿಸದೆ ಆತನ ಹಾಗಿರುವರು. ಸಮಾಜದಲ್ಲಿರುವ ದುರ್ಬಲರ ವಿಭಾಗದ ಪರವಾಗಿ ದೇವರು ಇರುವುದರಿಂದ ಸಾಮಾಜಿಕ ಕಾಳಜಿಯಲ್ಲಿ ಅವರ ಮನಸ್ಸು ಮತ್ತು ವರ್ತನೆಗಳು ಪ್ರತಿಬಿಂಬಿಸುವುದು ಅವಶ್ಯಕವಾಗಿದೆ.

3. ಸಮಾಜದಲ್ಲಿರುವ ಬಲಹೀನರ ಮತ್ತು ಬಹುನಷ್ಟದಲ್ಲಿರುವ ಗುಂಪುಗಳಿಗೆ ನ್ಯಾಯವನ್ನು ದಯಾಪಾಲಿಸುವುದು ಅವಶ್ಯಕವಾಗಿದೆ (ಪರದೇಶಿಗಳು, ತಂದೆ ಇಲ್ಲದವರು, ಮತ್ತು ವಿಧವೆಯರು).

4. "ವಾರಗಳ ಹಬ್ಬ" ಮತ್ತು "ಗುಡಾರದ ಹಬ್ಬಗಳಲ್ಲಿ" ಎರಡು ದೇಶಗಳಾದ್ಯಂತ ಸುಗ್ಗಿಗಳ ಹಬ್ಬವನ್ನು ಆಚರಿಸುವಾಗ ಹೆಚ್ಚುಕಡಿಮೆ ಇಲ್ಲದೆ ಸ್ವಾಸ್ಥ್ಯಯಿಲ್ಲದವರನ್ನು (ಲೇವಿಯರನ್ನು, ಗುಲಾಮರನ್ನು, ಪರದೇಶಿಗಳನ್ನು, ತಂದೆ ಇಲ್ಲದವರು ಮತ್ತು ವಿಧವೆಯರುನ್ನು) ಸೇರಿಸಿಕೊಳ್ಳುವುದು ಅವಶ್ಯಕವಾಗಿದೆ.

5. ತಮ್ಮನ್ನು ತಾವೇ ಪೋಷಿಸಿಕೊಳ್ಳಲಿಕ್ಕೆ ಆಗದೆ ಇರುವವರಿಗಾಗಿ (ಲೇವಿಯರು, ಪರದೇಶಿಗಳು, ತಂದೆಯಿಲ್ಲದವರು ಮತ್ತು ವಿಧವೆಯರು) ತೆರಿಗೆಗಳನ್ನು (ಪ್ರತಿಮೂರನೆಯ ವರುಷದ ಬೆಳೆಯ ದಶಮಭಾಗವನ್ನು) ಪೋಷಿಸಲಿಕ್ಕೆ ಉಪಯೋಗಿಸುವುದು ಅವಶ್ಯಕವಾಗಿದೆ.

ಈ ಐದು ಅಂಶಗಳು ಧರ್ಮೋಪದೇಶಕಾಂಡದಲ್ಲಿ ಸಾಮಾಜಿಕ ಮತ್ತು ಪರೋಪಕಾರಿಯ ಕಾಳಜಿಯ ಪ್ರಾಮುಖ್ಯತೆಯನ್ನು ತೋರಿಸುವಂತಹದ್ದಾಗಿದೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಧರ್ಮೋಪದೇಶಕಾಂಡದಲ್ಲಿ ಕಂಡುಬರುವ ಪರೋಪಕಾರದ ಆಲೋಚನೆಗಳ ಕುರಿತು ನಿಮ್ಮ ಸ್ವಂತ ವಾಕ್ಯಗಳಲ್ಲಿ ಸಾರಾಂಶವನ್ನು ಬರೆಯಿರಿ. ನಿಮ್ಮ ಟಿಪ್ಪಣಿಯನ್ನು ಉಲ್ಲೇಖಿಸಬೇಡಿರಿ.

2. ದಕ್ಷಿಣ ಭಾರತದ ಸಭೆಗಳ ಜೀವನದ ಬೆಳಕಿನಲ್ಲಿ ಈ ಕೆಳಗಿನ ಹೇಳಿಕೆಗಳನ್ನು ಪ್ರತಿಬಿಂಬಿಸಿರಿ:

   ಅ. ದೇವಜನರು ಸಭೆಯಲ್ಲಿ ಯಾವುದೇ ಪಕ್ಷಪಾತವನ್ನು ತೋರಿಸದೆ ಅವರು ದೇವರನ್ನು ಅನುಸರಿಸಿ ಆತನ    ಹಾಗಿರಬೇಕು.

   ಆ. ಸಭೆಯಲ್ಲಿರುವ ಬಲಹೀನರ ಮತ್ತು ಬಹುನಷ್ಟದಲ್ಲಿರುವ ಗುಂಪುಗಳಿಗೆ ನ್ಯಾಯವನ್ನು ದಯಾಪಾಲಿಸುವುದು ಅವಶ್ಯಕವಾಗಿದೆ.

   ಇ. ಸಭೆಗಳ ದಶಮಭಾಗಗಳನ್ನು ತಮ್ಮನ್ನು ತಾವೇ ಪೋಷಿಸಿಕೊಳ್ಳಲಿಕ್ಕೆ ಆಗದೆ ಇರುವವರಿಗಾಗಿ ಉಪಯೋಗಿಸುವುದು ಅವಶ್ಯಕವಾಗಿದೆ.

   ಈ. ಸಭೆಗಳ ಉತ್ಸವಗಳಲ್ಲಿ ಸ್ವಾಸ್ಥ್ಯಗಳಿಲ್ಲದವರನ್ನು ಸೇರಿಸಿಕೊಳ್ಳುವುದು ಅವಶ್ಯಕವಾಗಿದೆ.

3. ಮುಂಚಿನ ಪ್ರಶ್ನೆಗಳಲ್ಲಿ ಸೂಚಿಸಲ್ಪಟ್ಟ ನಾಲ್ಕು ಕ್ಷೇತ್ರಗಳಲ್ಲಿ ನಿಮ್ಮ ವೈಯಕ್ತಿಕ ಕ್ರೈಸ್ತೀಯ ಜೀವಿತದ ಕುರಿತು ಏನು? ನಿಮ್ಮ ಬಲಗಳನ್ನು ಮತ್ತು ಬಲಹೀನತೆಗಳನ್ನು ಪಟ್ಟಿಮಾಡಿರಿ.

**ಊ. ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ**

ನೀವು ಈ ಅಭ್ಯಾಸದಿಂದ ಏನನ್ನು ಕಲಿತಿದ್ದೀರೋ ಅದನ್ನು ಉಪಯೋಗಿಸಿಕೊಂಡು "ಧರ್ಮಪದೇಶಕಾಂಡದ ಬೆಳಕಿನಲ್ಲಿ ಸಭೆ ಮತ್ತು ಮನುಷ್ಯರ ಆಲೋಚನೆಗಳು" ಎಂಬುದಾಗಿ ಕರೆಯಲ್ಪಡುವ ಸತ್ಯವೇದ ಅಧ್ಯಯನವನ್ನು ತಯಾರಿಸಿರಿ.

### ಧರ್ಮೋಪದೇಶಕಾಂಡ ಅಧ್ಯಯನ 9: ವಾಗ್ದಾನದ ದೇಶ

**ಅ. ಪೀಠಿಕೆ**

ಈ ಅಧ್ಯಯನದಲ್ಲಿ ನಾವು ವಾಗ್ದಾನದ ದೇಶದ ಕುರಿತಾದ ಕೆಲವು ಪ್ರಮುಖ ಅಂಶಗಳನ್ನು ಪರಿಶೀಲಿಸೋಣ. ತನ್ನ ಸಂತತಿಯು ಕಾನಾನ್ ದೇಶವನ್ನು ಸ್ವಾಧೀನ ಮಾಡಿಕೊಳ್ಳುವರು ಎಂಬುದಾಗಿ ದೇವರು ನೂರಾರು ವರ್ಷಗಳ ಮುಂಚೆಯೇ ಅಬ್ರಹಾಮನೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡು ವಾಗ್ದಾನ ಮಾಡಿದ್ದನು (ಆದಿ. 12:6-7; 15:18-19; 17:8). ಹಾಗಾಗಿ ಕಾನಾನ್ ದೇಶವು ವಾಗ್ದಾನದ ದೇಶ ಆಯಿತು. ಸಿನಾಯ್ ಪರ್ವತದಲ್ಲಿ, ದೇವರು ಇಸ್ರಾಯೇಲ್ಯರಿಗೆ ಈ ವಾಗ್ದಾನಗಳನ್ನು ನವೀಕರಿಸಿರಿದನು (ವಿಮೋ. 23:23,31; 33:1-2). ಅಬ್ರಹಾಮನೊಂದಿಗಿನ ದೇವರ ವಾಗ್ದಾನ ಮತ್ತು ಸಿನಾಯ್ ಪರ್ವತದಲ್ಲಿ ಇಸ್ರಾಯೇಲ್ಯರೊಂದಿಗಿನ ದೇವರ ವಾಗ್ದಾನಗಳೆರಡನ್ನು ಧರ್ಮೋದೇಶಕಾಂಡವು ಒಟ್ಟಿಗೆ ಸೆಳೆಯುತ್ತದೆ. ದೇಶವನ್ನು ಸ್ವಾಧೀನಮಾಡಿಕೊಳ್ಳುವುದಕ್ಕಾಗಿ ಅವರಿಗೆ ಈಗ ಸಮಯ ಬಂದಿದೆ. ಈ ದೇಶವು ಇಸ್ರಾಯೇಲ್ಯರಿಗೆ ದೇವರಿಂದ ಬಂದ ಉಡುಗೊರೆಯಾಗಿದೆ, ಆದರೆ ಮೊದಲು ಅದನ್ನು ಗೆದ್ದುಕೊಳ್ಳಬೇಕು. ಅದು ಒಳ್ಳೆಯ ದೇಶವಾಗಿದೆ. ಇಸ್ರಾಯೇಲ್ಯರು ತಮ್ಮ ಜೀವಿತದಲ್ಲಿ ಒಂಡಂಬಡಿಕೆಯನ್ನು ಹಿಂಬಾಲಿಸುವುದರಿಂದ ಈ ದೇಶವು ಆಶೀರ್ವದಿಸಲ್ಪಡುವುದು. ಆದರೆ ಅವರು ಒಡಂಬಡಿಕೆಯನ್ನು ಮರೆತು ದೇಶವನ್ನು ಮಲಿನಮಾಡಿ, ದೇವರಿಗೆ ವಿರುದ್ಧವಾಗಿ ತಿರುಗಿಕೊಂಡರೆ ಆ ದೇಶವು ಶಾಪಕ್ಕೆ ಗುರಿಯಾಗುವುದು.

**ಆ. ಓದಿರಿ**

ಸೂಚನೆ ಏನೆಂದರೆ ಕೆಳಗಿರುವ ಸಂಖ್ಯೆಗಳು ಮುಂದಿನ ಭಾಗದಲ್ಲಿರುವ ಪ್ರಶ್ನೆಗಳ ಸಂಖ್ಯೆಗಳನ್ನು ಹಿಂಬಾಲಿಸುತ್ತವೆ.

1. ಧರ್ಮೋ. 1:8; 6:23; 7:8,13; 18:1; 10:11; 11:8; 30:20; 31:7; 34:4?
2. ಧರ್ಮೋ. 1:21,39; 2:29; 4:1, 40; 5:16, 33; 6:1; 15:4; 16:20; 26:1?
3. ಧರ್ಮೋ. 6:3; 8:7-9; 9:6; 11:9; 12:9-10; 26:9; 15?
4. ಧರ್ಮೋ. 3:20; 12:9-10; 25:19?
5. ಧರ್ಮೋ. 4:38; 7:1, 17-22; 9:1-5; 11:23; 33:27?
6. ಧರ್ಮೋ. 13:1-5, 12-18; 18:9-13; 20:18; 21:23; 24:4; 25:13-16?

**ಇ. ಪ್ರಶ್ನೆಗಳು**

1. ಈ ವಾಕ್ಯಗಳಲ್ಲಿರುವ ಸಾಮಾನ್ಯ ವಿಷಯಗಳೇನು: ಧರ್ಮೋ. 1:8; 6:23; 7:8, 13; 8:1; 10:11; 11:8; 30:20; 31:7; 34:4?
2. ಧರ್ಮೋ. 1:21, 39; 2:29; 4:1, 40; 5:16, 31, 33; 6:1; 15:4; 16:20; 26:1: ಈ ವಾಕ್ಯಭಾಗಗಲ್ಲಿರುವ ಸಾಮಾನ್ಯ ವಿಷಯಗಳೇನು?
3. ಧರ್ಮೋ. 6:3; 8:7-9; 9:6; 11:9; 12:9-10; 26:9; 15: ಈ ವಾಕ್ಯಭಾಗಗಳಲ್ಲಿರುವ ಸಾಮಾನ್ಯ ವಿಷಯಗಳೇನು?
4. ಧರ್ಮೋ. 3:20; 12:9-10; 25:19: ಈ ವಾಕ್ಯಗಳಲ್ಲಿರುವ ಸಾಮಾನ್ಯ ವಿಷಯಗಳೇನು?
5. ಧರ್ಮೋ. 4:38; 7:1, 17-22; 9:1-5; 11:23; 33:27: ಈ ವಾಕ್ಯಭಾಗಗಳಲ್ಲಿರುವ ಸಾಮಾನ್ಯ ವಿಷಯಗಳೇನು?

6. ಧರ್ಮೋ. 13:1-5, 12-18; 18:9-13; 20:18; 21:23; 24:4; 25:13-16: ಈ ವಾಕ್ಯಭಾಗಗಲ್ಲಿರುವ ಸಾಮಾನ್ಯ ವಿಷಯಗಳೇನು?

**ಈ. ಉಪಸಂಹಾರ**

ಈ ಮೇಲಿನ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳಿಂದ ನೀವು ಬರೆಯುವ ಉಪಸಂಹಾರ ಏನು? ಪಟ್ಟಿಯನ್ನು ಮಾಡಿರಿ. ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನೇ ಬಳಸಿರಿ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಧರ್ಮೋಪದೇಶಕಾಂಡದಲ್ಲಿ ಕಂಡುಬರುವ ವಾಗ್ದಾನ ದೇಶಕ್ಕೆ ಸಂಬಂಧಪಟ್ಟ ಅನೇಕ ವಿಧವಾದ ವಿಷಯಾಂಶಗಳನ್ನು ನಿಮ್ಮ ಸ್ವಂತ ಪದಗಳಲ್ಲಿ ಸಾರಾಂಶಗೊಳಿಸಿರಿ. ನಿಮ್ಮ ಟಿಪ್ಪಣಿಗಳನ್ನು ಉಲ್ಲೇಖಿಸಬೇಡಿರಿ?

2. ದಕ್ಷಿಣ ಭಾರತದಲ್ಲಿರುವ ಸಭೆಗಳ ಪ್ರಸ್ತುತ ಪರಿಸ್ಥಿತಿಗೆ "ವಾಗ್ದಾನ ದೇಶದ" ಕುರಿತಾದ ಧರ್ಮೋಪದೇಶಕಾಂಡದ ಬೋಧನೆಯನ್ನು ನೀವು ಹೇಗೆ ಅಳವಡಿಸಿಕೊಳ್ಳುತ್ತೀರಿ? ನಿಮ್ಮ ಉತ್ತರಗಳಿಗೆ ಮುಂಚಿನ ಕೆಲವು ಪ್ರಶ್ನೆಗಳನ್ನು ಉಪಯೋಗಿಸಿರಿ.

**ಊ. ಒಂದು ಸತ್ಯವೇದ ಅಧ್ಯಯನವನ್ನು ತಯಾರಿಸಿರಿ**

ಈ ಅಧ್ಯಯನದಿಂದ ನೀವು ಕಲಿತ ಅಂಶಗಳನ್ನು ಉಪಯೋಗಿಸಿಕೊಂಡು "ವಾಗ್ದಾನದ ದೇಶ" ಎಂಬುದಾಗಿ ಕರೆಯಲ್ಪಡುವ ಒಂದು ಸತ್ಯವೇದ ಅಧ್ಯಯನವನ್ನು ತಯಾರಿಸಿರಿ.

**ಧರ್ಮೋಪದೇಶಕಾಂಡ ಅಧ್ಯಯನ 10: ದೇವರ ಸಿದ್ಧಾಂತಗಳು**

**ಅ. ಪೀಠಿಕೆ**

ದೇವರ ಕುರಿತಾಗಿ ಧರ್ಮೋ. 6:4 ರಲ್ಲಿ ನಾವು ಪ್ರಮುಖ ಹೇಳಿಕೆಯನ್ನು ಕಾಣುತ್ತೇವೆ:

ಇಸ್ರಾಯೇಲ್ಯರೇ, ಕೇಳಿರಿ; ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು; ಈ ಹೇಳಿಕೆಯನ್ನು ಯೆಹೂದ್ಯರು "ತಮ್ಮ ನಂಬಿಕೆಯ" ಹೇಳಿಕೆಯನ್ನಾಗಿ ಇನ್ನೂ ಉಪಯೋಗಿಸುತ್ತಾರೆ. ಸತ್ಯವೇದ ಶಾಸ್ತ್ರಜ್ಞರು ಈ ಹೇಳಿಕೆಯನ್ನು ಧರ್ಮೋಪದೇಶಕಾಂಡದ ಹಿನ್ನೆಲೆಯಲ್ಲಿ ಹೇಗೆ ಅರ್ಥೈಸಿಕೊಳ್ಳಬಹುದೆಂಬುದನ್ನು ಚಿತ್ರಿಸಲು ಪ್ರಯತ್ನಿಸಿದ್ದಾರೆ:

- ಇದು ದೇವರನ್ನು ಇಸ್ರಾಯೇಲ್ಯರ ಒಡಂಬಡಿಕೆಯ ಕರ್ತನು ಎಂಬುದಾಗಿ ಸೂಚಿಸುವ, ದೇವರ ಸ್ವಭಾವದ ಕುರಿತಾದ ಹೇಳಿಕೆಯಾಗಿದೆಯೋ? ಬಹುಮಟ್ಟಿಗೆ ಅಲ್ಲ, ಆದಾಗ್ಯೂ ಇದನ್ನು ಬೇರೆಯಾಗಿ ನೋಡುವಾಗ ಇದು ಸತ್ಯವಾಗಿದೆ.
- ದೇವರ "ಏಕತೆ"ಯನ್ನು ಸೂಚಿಸುವ, ದೇವರ ಐಕ್ಯತೆಯ ಕುರಿತಾದ ಹೇಳಿಕೆಯಾಗಿದೆಯೋ? ಬಹುಮಟ್ಟಿಗೆ ಅಲ್ಲ, ಆದಾಗ್ಯೂ ಇದು ಸಹ ಸತ್ಯವಾಗಿದೆ.
- ಅದಕ್ಕೆ ಬದಲಾಗಿ, ಈ ಹೇಳಿಕೆಯನ್ನು ಬಹುಮಟ್ಟಿಗೆ "ನಮ್ಮ ದೇವರಾದ ಕರ್ತನು, ಕರ್ತನೊಬ್ಬನೇ" ಎಂದು ಅರ್ಥೈಸಿಕೊಳ್ಳತಕ್ಕದ್ದು.

ಹೀಗೆ ಇದು ಪ್ರತ್ಯೇಕವಾಗಿ ದೇವರನ್ನು ಆರಾಧಿಸುವ ವಿಧಾನದ ಕುರಿತಾದ ಪ್ರಾಥಮಿಕ ಹೇಳಿಕೆಯಾಗಿದೆ. ಇಸ್ರಾಯೇಲ್ಯರು ಇತರ ದೇವರುಗಳ ಪೈಪೋಟಿಯ ವಿಷಯದಲ್ಲಿ ಜಾಗ್ರತೆಯಿಂದ ಇರುವುದು. ಕರ್ತನಾದ ದೇವರು ನಿರ್ಬಂಧವಿಲ್ಲದ ರಾಜನಿಷ್ಠೆಯನ್ನು ಬಯಸುವಾತನು ಮತ್ತು ಪೈಪೋಟಿಯಿಲ್ಲದೆ ಇರುವಾತನು ಹಾಗೂ ತನಗೆ ಸಲ್ಲತಕ್ಕ ಗೌರವವನ್ನು ಬೇರೆಯವರಿಗೆ ಸಲ್ಲಗೊಡಿಸಲಾರನು. ಅಥವಾ ಧರ್ಮೋಪದೇಶಕಾಂಡದಲ್ಲಿನ ದೈವಶಾಸ್ತ್ರವನ್ನು ಕೆಲವರು ಈ ರೀತಿಯಾಗಿ ಸಾರಾಂಶಗೊಳಿಸಿದ್ದಾರೆ: "ದೈವಜನರ ಸಂಪೂರ್ಣ ವಚನಬದ್ಧತೆಯು, ಪುಸ್ತಕದಲ್ಲಿನ ದೈವಿಕ ಅಂಶದ ಮೂಲವಸ್ತುವಿನ ಪ್ರಾಮುಖ್ಯತೆಗೆ ಪೂರ್ಣ ಅರ್ಹತೆಯಿಲ್ಲದ್ದಾಗಿದೆ".

ಧರ್ಮೋಪದೇಶಕಾಂಡದಲ್ಲಿ ದೇವರು, ವೈಯಕ್ತಿಕವಾಗಿ, ಎಂದೆಂದಿಗೂ ಇರುವವನಾಗಿ, ಸರ್ವಶಕ್ತನಾಗಿ, ಪರಮಾಧಿಕಾರವುಳ್ಳವನಾಗಿ, ಉದ್ದೇಶಪೂರ್ವಕವಾಗಿ, ಪ್ರೀತಿಯುಳ್ಳವನಾಗಿ, ಪರಿಶುದ್ಧನಾಗಿ, ನೀತಿಯುಳ್ಳವನಾಗಿ, ಮತ್ತು ನಂಬಿಗಸ್ತ ದೇವರಾಗಿ ವಿವರಿಸಲ್ಪಟ್ಟಿದ್ದಾರೆ.

ಕರ್ತನಾದ ದೇವರು ಪ್ರತ್ಯೇಕವಾಗಿ ಆರಾಧಿಸಲ್ಪಡುವವನು ಆಗಿದ್ದಾನೆ, ಯೋಗ್ಯ ಆರಾಧನೆಯ ಪ್ರಶ್ನೆಯ ಕುರಿತು ಧರ್ಮೋಪದೇಶಕಾಂಡವು ವಿಶೇಷವಾಗಿ ಬಹುಜಾಗರೂಕತೆಯನ್ನು ವಹಿಸುತ್ತದೆ:

- ಕಾನಾನ್ಯರ ಹಳೆಯ ಪೂಜಾಸ್ಥಳಗಳೆಲ್ಲವು ಸಂಪೂರ್ಣವಾಗಿ ನಾಶವಾದವು (ಧರ್ಮೋ. 12:2-3).
- ಕಾನಾನ್ಯರ ರೀತಿಯಲ್ಲಿ ದೇವರನ್ನು ಆರಾಧಿಸಲೇಬಾರದು (ಧರ್ಮೋ. 12:4).
- ಅದಕ್ಕೆ ಬದಲಾಗಿ ಇಸ್ರಾಯೇಲ್ಯರು ಅವರ ದೇವರಾದ ಯೆಹೋವನು ತನ್ನ ಹೆಸರನ್ನು ಸ್ಥಾಪಿಸಿಕೊಳ್ಳುವುದಕ್ಕೂ ತಾನು ವಾಸಮಾಡುವುದಕ್ಕೂ ಅವರ ಎಲ್ಲಾ ಕುಲಗಳೊಳಗಿಂದ ಆದುಕೊಳ್ಳುವ ಸ್ಥಳದಲ್ಲೇ ಅವರು ಆತನ ದರ್ಶನಕ್ಕಾಗಿ ಕೂಡಬೇಕು. ಆ ಸ್ಥಳಕ್ಕೆ ಮಾತ್ರ ಅವರು ಯಜ್ಞವನ್ನು ಸಲ್ಲಿಸುವ ಪ್ರಾಣಿಗಳನ್ನು ಮತ್ತು ಕಾಣಿಕೆಗಳನ್ನು ಹೊತ್ತು ತರುವಂತವರಾಗಿರಬೇಕು

(ಧರ್ಮೋ. 12:5-7). “ತನ್ನ ಹೆಸರನ್ನು ಸ್ಥಾಪಿಸಿಕೊಳ್ಳುವುದಕ್ಕೂ ತಾನು ವಾಸಮಾಡುವುದಕ್ಕೂ” ಎಂಬುದು ಮಾಲೀಕತ್ವದ ಗುರುತಾಗಿ ಕಟ್ಟಡದ ಮೇಲೆ ಅವರ ಹೆಸರನ್ನು ಮುದ್ರೆಹಾಕುವಂತಹ ಮುಂಚಿನ ರೂಢಿ ಆಚರಣೆಯನ್ನು ಉಲ್ಲೇಖಿಸುತ್ತದೆ.

**ಆ. ಪ್ರಶ್ನೆಗಳು**

1. ಈ ಕೆಳಗಿನ ವಾಕ್ಯಗಳಿಂದ ನಾವು ದೇವರ ಕುರಿತು ಏನನ್ನು ಕಲಿಯುತ್ತೇವೆ?

   ಅ. ಧರ್ಮೋ. 33:27

   ಆ. ಧರ್ಮೋ. 32:8

   ಇ. ಧರ್ಮೋ. 3:24; 9:26

   ಈ. ಧರ್ಮೋ. 32:51

   ಉ. ಧರ್ಮೋ. 4:8; 32:4

   ಊ. ಧರ್ಮೋ. 4:37; 7:9, 3; 23:5; 33:3

   ಋ. ಧರ್ಮೋ. 7:9; 32:4

   ಎ. ಧರ್ಮೋ. 1:21, 31; 3:22; 5:6, 24; 6:5; 8:7; 10:12; 12:12; 14:26

2. “ಇಸ್ರಾಯೇಲ್ಯರೇ, ಕೇಳಿರಿ; ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು” ಎಂಬ ಈ ಹೇಳಿಕೆಯ ಅರ್ಥವನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ?

3. ಧರ್ಮೋ. 12:1-7 ರಿಂದ ಇಸ್ರಾಯೇಲ್ಯರು ದೇವರನ್ನು ಹೇಗೆ ಆರಾಧಿಸಬೇಕೆಂಬುದರ ಕುರಿತು ನಾವು ಏನನ್ನು ಕಲಿಯುತ್ತೇವೆ?

**ಇ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. “ಧರ್ಮೋಪದೇಶಕಾಂಡದ ಪ್ರಕಾರ ದೇವರ ಸಿದ್ಧಾಂತ ಮತ್ತು ದೇವರ ಆರಾಧನೆ”ಯನ್ನು ಸಾರಾಂಶಗೊಳಿಸಿರಿ? ನಿಮ್ಮ ಸ್ವಂತ ಪದಗಳನ್ನು ಉಪಯೋಗಿಸಿರಿ, ಪುಸ್ತಕವನ್ನು ನೋಡಬೇಡಿರಿ ಅಥವಾ ನಿಮ್ಮ ಟಿಪ್ಪಣಿಗಳನ್ನು ಉಲ್ಲೇಖಿಸಬೇಡಿರಿ.

2. ಧರ್ಮೋ. 12:1-7ನ್ನು ನಿಮ್ಮ ಸ್ವಂತ ದಕ್ಷಿಣ ಭಾರತದ ಹಿನ್ನಲೆಯಲ್ಲಿ ಹೇಗೆ ಅನ್ವಯಿಸಿಕೊಳ್ಳುತ್ತೀರಿ?

**ಈ. ಮನೆಗೆಲಸ**

ಧರ್ಮೋಪದೇಶಕಾಂಡ ಪುಸ್ತಕದ ಈ ಅಭ್ಯಾಸವು ದೇವರ ಕುರಿತಾದ ಎಲ್ಲಾ ವಿಷಯಾಂಶಗಳನ್ನು ವ್ಯಾಪಿಸಿಕೊಳ್ಳುವುದಿಲ್ಲ. ದೇವರ ಕುರಿತಾಗಿ ಹೆಚ್ಚಿನ ಮಾಹಿತಿಗಳನ್ನು ಕಂಡುಕೊಳ್ಳುವುದಕ್ಕಾಗಿ ಧರ್ಮೋಪದೇಶಕಾಂಡದ ಮುಂಚಿನ ಎಲ್ಲಾ ಅಭ್ಯಾಸಗಳನ್ನು ಉಪಯೋಗಿಸಿರಿ. ನಂತರದಲ್ಲಿ “ಧರ್ಮೋಪದೇಶಕಾಂಡದಲ್ಲಿ ದೇವರ ಸಿದ್ಧಾಂತ” ಎಂದು ಕರೆಯಲ್ಪಡುವ ಒಂದು ಸಣ್ಣ ಪ್ರಬಂಧವನ್ನು ಬರೆಯಿರಿ.

**ಉ. ಒಂದು ಸತ್ಯವೇದ ಅಧ್ಯಯನವನ್ನು ತಯಾರಿಸಿರಿ**

ಈ ಪಾಠಗಳಿಂದ ನೀವು ಏನನ್ನು ಕಲಿಸ್ತಿದ್ದಿರೋ ಅದನ್ನು ಉಪಯೋಗಿಸಿಕೊಂಡು ಹೊಸ ವಿಶ್ವಾಸಿಗಳಿಗಾಗಿ “ಸಂಪೂರ್ಣವಾಗಿ ಮುರಿಯಲ್ಪಡುವಿಕೆಯನ್ನು ದೇವರು ನಿರೀಕ್ಷಿಸುತ್ತಾನೆ” ಎಂದು ಕರೆಯಲ್ಪಡುವ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.

**ಧರ್ಮೋಪದೇಶಕಾಂಡ ಅಧ್ಯಯನ 11: ಜೀವ ಅಥವಾ ಮರಣ**

**ಅ. ಪೀಠಿಕೆ**

ಅಧ್ಯಾಯ 30 ಎರಡು ವಿಭಾಗಗಳನ್ನು ಒಳಗೊಂಡಿರುತ್ತದೆ:

1. ಇಸ್ರಾಯೇಲ್ಯರ ಭವಿಷ್ಯದ ಕುರಿತು ಮೋಶೆಯ ಪ್ರವಾದನೆಗಳು, ವ.1-10
2. ಇಸ್ರಾಯೇಲ್ಯರು ಸರಿಯಾದ ಆಯ್ಕೆಯನ್ನು ಮಾಡುವಂತೆ ಮೋಶೆಯ ಬೋಧನೆ, ವ.11-20

**ಆ. ಓದಿರಿ**

ಧರ್ಮೋ. 30:1-20

**ಇ. ವಿವರಣೆಗಳು**

*"ಸಂಪೂರ್ಣವಾದ ಹೃದಯದಿಂದಲೂ ಮನಸ್ಸಿನಿಂದಲೂ"* (ವ.2): ಇದು ಸಂಪೂರ್ಣವಾದ ವಚನಬದ್ಧತೆ ಮತ್ತು ಒಳಗೊಳ್ಳುವಿಕೆಯನ್ನು ವ್ಯಕ್ತಪಡಿಸುತ್ತದೆ. ಇದು ಮೂರು ಸನ್ನಿವೇಶಗಳಲ್ಲಿ ಉಪಯೋಗಿಸಲ್ಪಟ್ಟಿದೆ: 1. ದೇವಜನರು ಆತನನ್ನು ಹೇಗೆ ಹುಡುಕಬೇಕೆಂಬುದರ ಕುರಿತು, 2. ದೇವಜನರು ಹೇಗೆ ಆತನಿಗೆ ಭಯಪಡಬೇಕೆಂಬುದರ ಕುರಿತು, 3. ದೇವಜನರು ಆತನನ್ನು ಹೇಗೆ ಪ್ರೀತಿಸಬೇಕೆಂಬುದರ ಮತ್ತು ಸೇವಿಸಬೇಕೆಂಬುದರ ಕುರಿತು. ವ.6; 4:29; 6:5; 10:12; 11:13; 13:13; ಮತ್ತು 22:27 ಗಳನ್ನು ಹೋಲಿಸಿರಿ.

*ನಿಮ್ಮನ್ನು ಚದುರಿಸಿರುವ ಎಲ್ಲಾ ದೇಶಗಳಿಂದ ತಿರಿಗಿ ಕೂಡಿಸುವನು* (ವ.3): ಇಬ್ರಿಯ ಪಠ್ಯವನ್ನು "ಸೆರೆಯಿಂದ ನಿಮಗೆ ಬಿಡುಗಡೆಯುಂಟಾಗುತ್ತದೆ" ಎಂಬುದಾಗಿಯೂ ಸಹ ತರ್ಜುಮೆ ಮಾಡಬಹುದು.

*ನಿಮ್ಮ ಹೃದಯಕ್ಕೆ ಸುನ್ನತಿಮಾಡುವನು* (ವ.6): ಈ ರೂಪಾಲಂಕಾರದ ಪದವಿನ್ಯಾಸವು ಹೃದಯ ಮತ್ತು ಮನಸ್ಸುಗಳನ್ನು ಬದಲಾಯಿಸಿಕೊಳ್ಳುವುದರ ಉಲ್ಲೇಖವಾಗಿದೆ (ರೋಮ. 2:28-29ನ್ನು ಹೋಲಿಸಿರಿ).

*ನಿಮ್ಮ ಪಿತೃಗಳ* (ವ.9): ಇದು ಮೂಲ ಪಿತೃಗಳಾದ ಅಬ್ರಹಾಮ, ಇಸಾಕ ಮತ್ತು ಯಾಕೋಬರನ್ನು ಉಲ್ಲೇಖಿಸುತ್ತದೆ (ವ.20ನ್ನುನೋಡಿರಿ.

*ಈ ಧರ್ಮಶಾಸ್ತ್ರದ* (ವ.10): ಈ ಪದವಿನ್ಯಾಸವು ಬಹುಶಃ ಧರ್ಮೋಪದೇಶಕಾಂಡದಲ್ಲಿ ಸೇರಿರುವ ಮೋಶೆ ಬರೆದ ನಿಬಂಧನೆಗಳನ್ನು ಉಲ್ಲೇಖಿಸುತ್ತದೆ (31:9, 24ನ್ನು ನೋಡಿರಿ).

**ಈ. ಪ್ರಶ್ನೆಗಳು**

1. ಇಸ್ರಾಯೇಲ್ಯರ ಭವಿಷ್ಯದ ಕುರಿತ ಮೋಶೆಯ ಪ್ರವಾದನೆಯಲ್ಲಿನ ಪ್ರಮುಖ ಅಂಶಗಳನ್ನು ನಿಮ್ಮ ಸ್ವಂತ ಪದಗಳಲ್ಲಿ ವಿವರಿಸಿರಿ (ವ.1-10).
2. ಈ ವಾಕ್ಯಭಾಗವು ಸುನ್ನತಿಯ ಕುರಿತು ಏನನ್ನು ಹೇಳುತ್ತದೆ? ಈ ಸುನ್ನತಿಯ ಫಲಿತಾಂಶ ಏನಾಗಿತ್ತು?
3. ಇಸ್ರಾಯೇಲ್ಯರು ಮಾಡಬೇಕಾದದ್ದನ್ನು ಆಜ್ಞಾಪಿಸುವುದರ ಕುರಿತ ಕಠಿಣ ಸ್ಥಿತಿಯನ್ನು ಮೋಶೆಯು ಹೇಗೆ ವಿವರಿಸಿದನು (ವ.11-20)?
4. ಇಸ್ರಾಯೇಲ್ಯರ ಮುಂದೆ ಮೋಶೆಯು ಇಟ್ಟ ಎರಡು ಆಯ್ಕೆಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ (ವ.11-20)?

5. ಇಸ್ರಾಯೇಲ್ಯರು ಮೋಶೆ ಹೇಳಿದ್ದನ್ನು ಆಯ್ಕೆ ಮಾಡುವುದಕ್ಕೆ ಸಾಕ್ಷಿಗಳು ಯಾರಾಗಿದ್ದರು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಮೋಶೆಯ ಪ್ರವಾದನೆಯು (ವ.1-10) ಅದು ಪರಿಪೂರ್ಣವಾಗಿ 3400 ವರ್ಷಗಳು ಕಳೆದು ಹೋಗಿರುವ ದೃಷ್ಟಿಕೋನದಲ್ಲಿ ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
2. ಮೋಶೆಯು ಇಸ್ರಾಯೇಲ್ಯರಿಗೆ 3400 ವರ್ಷಗಳ ಮುಂಚೆ "ಜೀವ ಅಥವಾ ಮರಣವನ್ನು" ಸಮರ್ಪಿಸುವಂತೆ ಆಜ್ಞಾಪಿಸಿದ್ದನ್ನು ಇಂದಿನ ದಕ್ಷಿಣ ಭಾರತದ ಸಭೆಗಳಲ್ಲಿನ ಸೇವೆಗಳಿಗೆ ನೀವು ಹೇಗೆ ಅನ್ವಯಿಸಿಕೊಳ್ಳುವಿರಿ?

**ಊ. ಸತ್ಯವೇದ ಅಧ್ಯಯನವನ್ನು ತಯಾರಿಸಿರಿ**

ಧರ್ಮೋಪದೇಶಕಾಂಡ 30ನೇ ಅಧ್ಯಾಯದ ಆಧಾರದ ಮೇಲೆ ಸತ್ಯವೇದ ಅಧ್ಯಯನವನ್ನು ತಯಾರಿಸಲು ಈ ಅಧ್ಯಯನದಿಂದ ತಯಾರಿಸಿದ ನಿಮ್ಮ ಟಿಪ್ಪಣಿಗಳನ್ನು ಉಪಯೋಗಿಸಿಕೊಳ್ಳಿರಿ.

1. ಒಂದು ಅಧ್ಯಯನವನ್ನು ವ.1-10 ರ ಆಧಾರದ ಮೇಲೆ ಸಭಾನಾಯಕರುಗಳಿಗೆ
2. ಒಂದು ಅಧ್ಯಯನವನ್ನು ವ.11-20 ರ ಆಧಾರದ ಮೇಲೆ ಸಭಾಯೌವನಸ್ಥರುಗಳಿಗೆ

**ಧರ್ಮೋಪದೇಶಕಾಂಡ ಅಧ್ಯಯನ 12: ಮೋಶೆಯ ಉತ್ತರಾಧಿಕಾರಿಯಾಗಿ ಯೆಹೋಶುವನು**

**ಅ. ಪೀಠಿಕೆ**

ಈ ಅಧ್ಯಯನವು ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ:

1. ಇಸ್ರಾಯೇಲ್ಯರನ್ನು ವಾಗ್ದಾನ ದೇಶಕ್ಕೆ ನಡೆಸಲು ಯೆಹೋಶುವನಿಗೆ ಮೋಶೆ ಕೊಟ್ಟ ಆದೇಶ, ವ.1-8
2. ಪ್ರತಿ ಏಳು ವರ್ಷಕ್ಕೆ ಒಂದಾವರ್ತಿ ಜನರ ಮುಂದೆ ಯಾಜಕರು ಓದಬೇಕಾದ ಧರ್ಮಶಾಸ್ತ್ರವನ್ನು ಮತ್ತು ಬೋಧನೆಯನ್ನು ಮೋಶೆಯು ಬರೆದದ್ದು, ವ.9-13

**ಆ. ಓದಿರಿ**

ಧರ್ಮೋಪದೇಶಕಾಂಡ 31:1-13

**ಇ. ವಿವರಣೆಗಳು**

*ನಿರ್ವಹಿಸುವುದು ಇನ್ನು ನನ್ನಿಂದಾಗದು* (ವ.2): ಆತನ ಮುಪ್ಪಿನ ನಿಮಿತ್ತ ಉಂಟಾಗಿರುವ ಶಾರೀರಿಕ ಅಸಮರ್ಥತೆಯನ್ನು ಮೋಶೆಯು ಉಲ್ಲೇಖಿಸುತ್ತಿಲ್ಲ ಎಂಬುದಾಗಿ ಸನ್ನಿವೇಶವು ತೋರಿಸುತ್ತದೆ; ಇದು ಆತನು ಯೊರ್ದನ್ ಹೊಳೆಯನ್ನು ದಾಟದಂತೆ ದೇವರು ಅಪ್ಪಣೆ ಕೊಡುತ್ತಿಲ್ಲ ಎಂಬುದಾಗಿದೆ.

*ಸೀಹೋನ್ ಓಗನು* (ವ.4): 2:24-37 ರಲ್ಲಿ ಕಂಡುಬಂದ, ಹೆಷ್ಬೋನಿನ ಅರಸನಾಗಿದ್ದವನು, ಅಮೋರಿಯನಾದ ಸೀಯೋನನ ಸೋಲಿನ ಕಥೆಯನ್ನು ಕುರಿತಾಗಿದೆ. 3:1-11 ರಲ್ಲಿ ಹೇಳಲ್ಪಟ್ಟ ಬಾಷಾನಿನ ಅರಸನ ಸೋಲಿನ ಕಥೆಯಾಗಿದೆ.

*ಮೋಶೆ ಈ ಧರ್ಮಶಾಸ್ತ್ರವನ್ನು ಬರೆದು ಯೆಹೋವನ ಆಜ್ಞಾಶಾಸನಗಳ ಮಂಜೂಷವನ್ನು ಹೊರುವ ಲೇವಿಯರಾದ ಯಾಜಕರ ಮತ್ತು ಹಿರಿಯರ ವಶಕ್ಕೆ ಕೊಟ್ಟು* (ವ.9): ಮಂಜೂಷದ ಪೆಟ್ಟಿಗೆ ಮತ್ತು ಗೂಡಾರದ ಜವಾಬ್ದಾರಿಯನ್ನು ಲೇವಿಯರು ತೆಗೆದುಕೊಂಡಿದ್ದರು. ಧರ್ಮಶಾಸ್ತ್ರದ ಪುಸ್ತಕದ ಒಂದು ಪ್ರತಿಯನ್ನು ಮಂಜೂಷದ ಹತ್ತಿರ ಇಟ್ಟಿದ್ದರು (31:24-26ನ್ನು ನೋಡಿರಿ. ಮತ್ತು 30:10 ರ ವಿವರಣೆಯನ್ನು ಸಹ ನೋಡಿರಿ).

*ಪ್ರತಿ ಏಳು ವರುಷಗಳು ಪೂರ್ತಿಯಾದಾಗ ಬಿಡುಗಡೆಯ ಸಂವತ್ಸರದ ನೇಮಕಕಾಲ* (ವ.10): ವಿಮೋಚನಕಾಂಡ 23:10-11 ರ ಪ್ರಕಾರ ಆರು ವರುಷ ಅವರ ಹೊದಲ್ಲಿ ಬೀಜಬಿತ್ತಿ ಅದರ ಬೆಳೆಯನ್ನು ತೆಗೆದುಕೊಂಡು ಏಳನೆಯ ವರುಷದಲ್ಲಿ ಆ ಭೂಮಿಯನ್ನು ಬೀಳು ಬಿಡಬೇಕು, ಅವರ ದೇಶದಲ್ಲಿರುವ ಬಡವರು ಅದರಲ್ಲಿ ಬೆಳೆಯುವುದನ್ನು ತಿನ್ನಲಿ; ಅದೇ ರೀತಿಯಾಗಿ ಆ ವರ್ಷ ಎಲ್ಲಾ ಸಾಲಗಳು ರದ್ದಾಗುತ್ತಿದ್ದವು (ಧರ್ಮೋ. 15:1ನ್ನು ನೋಡಿರಿ).

*ಪರ್ಣಶಾಲೆಗಳ ಜಾತ್ರೆ* (ವ.10): ಸೆಪ್ಟಂಬರ್-ಅಕ್ಟೋಬರ್ ಮಾಸಗಳಲ್ಲಿ ಸುಗ್ಗಿಯ ಕೊನೆಯಲ್ಲಿ ಏಳನೇಯ ದಿನದಲ್ಲಿ ಹಬ್ಬವನ್ನು ಆಚರಿಸಲಾಗುತ್ತಿತ್ತು. ಇದು ಸಹ ಅರಣ್ಯದಲ್ಲಿ ಸಂಚರಿಸಿದ್ದನ್ನು ಜ್ಞಾಪಕಾರ್ಥವಾಗಿ ಆಚರಿಸಲಾಗುತ್ತಿತ್ತು.

*ನೀವು ಅವರೆಲ್ಲರೂ ಕೇಳಿಸುವಂತೆ ಈ ಧರ್ಮಶಾಸ್ತ್ರವನ್ನು ಅವರ ಮುಂದೆ ಓದಬೇಕು* (ವ.11): ಇಸ್ರಾಯೇಲ್ಯರಿಗೆ ಧರ್ಮಶಾಸ್ತ್ರವನ್ನು ಓದುವುದು ಮತ್ತು ಬೋಧಿಸುವುದು ಯಾಜಕರ ಪ್ರಮುಖ ಕಾರ್ಯಗಳಲ್ಲಿ ಒಂದಾಗಿತ್ತು (33:10; ಮಲಾಕಿ 2:4-9ನ್ನು ನೋಡಿರಿ).

**ಈ. ಪ್ರಶ್ನೆಗಳು**

1. ಈ ಸಮಯದಲ್ಲಿ ಮೋಶೆಗೆ ಎಷ್ಟು ವಯಸ್ಸಾಗಿತ್ತು?

2. ಇಸ್ರಾಯೇಲ್ಯರು ಯೊರ್ದನ್ ಹೊಳೆಯ ಆಚೆಕಡೆಯಲ್ಲಿರುವ ಕಾನಾನ್ಯರ ವಿರುದ್ಧ ಹೊರಟು ಹೋಗುತ್ತಿರುವಾಗ ಅವರು ಹೇಗೆ ಇರಬೇಕೆಂದು ಮೋಶೆಯು ಏನು ಹೇಳಿದನು? ಅದನ್ನು ಅವರಿಗೆ ಆತನು ಯಾಕೆ ಹೇಳಿದನು?

3. ಯೆಹೋಶುವನಿಗೆ ಮೋಶೆಯ ಸಲಹೆ ಏನಾಗಿತ್ತು?

4. ಮೋಶೆಯು ನಿಬಂಧನೆಯೊಂದಿಗೆ ಏನು ಮಾಡಿದನು ಮತ್ತು ಭವಿಷ್ಯದಲ್ಲಿ ನಿಬಂಧನೆಯ ವಿಷಯಾಂಶವನ್ನು ಇಸ್ರಾಯೇಲ್ಯರು ಹೇಗೆ ಕಲಿತರು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ವಾಗ್ದಾನ ಮಾಡಲ್ಪಟ್ಟ ದೇಶಕ್ಕೆ ಇಸ್ರಾಯೇಲ್ಯರನ್ನು ನಡೆಸಲು ದೇವರು ಮೋಶೆಗೆ ಯಾಕೆ ಅಪ್ಪಣೆ ಕೊಡಲಿಲ್ಲ? ನಿಮ್ಮ ಉತ್ತರವು ಧರ್ಮೋ. 1:37; 3:23-27; 4:21-22; ಅರಣ್ಯ. 20:2-13 ಇವುಗಳ ಆಧಾರದ ಮೇಲಿರಲಿ. ಇಂದು ನಮ್ಮ ದಕ್ಷಿಣ ಭಾರತದ ಸಭೆಯ ಹಿನ್ನಲೆಯಲ್ಲಿ ಈ "ನಿಷೇಧ" ಅಥವಾ "ತಡೆ"ಯನ್ನು ಯಾವ ವಿಶಾಲತೆಯಲ್ಲಿ ನಾವು ಅಳವಡಿಸಿಕೊಳ್ಳಬಹುದಾಗಿದೆ?

2. ತನ್ನ ಉತ್ತರಾಧಿಕಾರಿಯನ್ನಾಗಿ ಯೆಹೋಶುವನಿಗೆ ಅಧಿಕಾರಕೊಡುವುದರ ಕುರಿತು ಮೋಶೆ ಹೇಗೆ ನಿಭಾಯಿಸಿದನೆಂಬುದನ್ನು ಚಿಂತನೆಮಾಡಿರಿ? ಆತನು ಇದನ್ನು ಮಾಡಿದ ವಿಧಾನದಿಂದ ನಾವು ಏನನ್ನು ಕಲಿಯುತ್ತೇವೆ?

3. ಮೋಶೆ ಮತ್ತು ನಿಬಂಧನೆಯ ಕುರಿತ ಕಥೆಯಿಂದ ನಾವು ಏನನ್ನು ಕಲಿಯುತ್ತೇವೆ (ವ.9-13)?

**ಊ. ಸತ್ಯವೇದ ಅಧ್ಯಯನವನ್ನು ತಯಾರಿಸಿರಿ**

ಧರ್ಮೋ. 31:1-13 ರ ಆಧಾರದ ಮೇಲೆ ಎರಡು ಸತ್ಯವೇದ ಅಧ್ಯಯನವನ್ನು ತಯಾರಿಸುವಾಗ ಈ ಅಧ್ಯಯನದ ನಿಮ್ಮ ಟಿಪ್ಪಣಿಯ ಪುಸ್ತಕವನ್ನು ಉಪಯೋಗಿಸಿಕೊಳ್ಳಿ:

1. ವ.1-8 ರ ಆಧಾರದ ಮೇಲೆ ಸ್ಥಳೀಯ ಸಭಾನಾಯಕರುಗಳಿಗಾಗಿ ಒಂದು ಅಧ್ಯಯನ.

2. ವ.9-13 ರ ಆಧಾರದ ಮೇಲೆ ಸಾಮಾನ್ಯವಾಗಿ ವಿಶ್ವಾಸಿಗಳಿಗಾಗಿ ಒಂದು ಸಂದೇಶವನ್ನು ತಯಾರಿಸಿರಿ.

**ಧರ್ಮೋಪದೇಶಕಾಂಡ ಅಧ್ಯಯನ 13: ಮೋಶೆಯ ಮರಣ**

**ಅ. ಪೀಠಿಕೆ**

ಯೊರ್ದನ್ ಹೊಳೆಯ ಪೂರ್ವದಿಕ್ಕಿನಲ್ಲಿರುವ ಮೋವಾಬ್ ದೇಶದ ಹೋರೆಂಬ ಬೆಟ್ಟದಲ್ಲಿ ಆತನ ಸಾವಿನ ಕುರಿತು ದೇವರು ಮೋಶೆಗೆ ತಿಳಿಸುವ ಮಾಹಿತಿಯೊಂದಿಗೆ ಅಧ್ಯಾಯ 32 ಕೊನೆಗೊಳ್ಳುತ್ತದೆ. ಹಾಗೆಯೇ ದೇವರು ವಾಗ್ದಾನ ಮಾಡಲ್ಪಟ್ಟ ದೇಶವನ್ನು ಆತನಿಗೆ ದೂರದಿಂದ ನೋಡುವಂತೆ ಆಜ್ಞಾಪಿಸಿದನು. ಆದರೆ ಮೋಶೆಯು ಆ ವಾಗ್ದಾನದ ದೇಶವನ್ನು ಪ್ರವೇಶಿಸಲು ಅವಕಾಶವಿದ್ದಿಲ್ಲ ಯಾಕೆಂದರೆ ಅರಣ್ಯದಲ್ಲಿ ಅವರ ಅಲೆದಾಟದ ಸಮಯದಲ್ಲಿ ಮೆರೀಬಾ ಕಾದೇಶಿನಲ್ಲಿ ನಡೆದ ಘಟನೆಯ ನಿಮಿತ್ತ.

ಅಧ್ಯಾಯ 34 ಮೋಶೆಯು ವಾಗ್ದಾನ ಮಾಡಲ್ಪಟ್ಟ ದೇಶವನ್ನು ಪಿಸ್ಗಾ ಬೆಟ್ಟದ ಶಿಖರದ ತುದಿಯಿಂದ ನೋಡಿದ್ದು, ಮತ್ತು ಆತನ ಸಾವು ಹಾಗೂ ಶವಸಂಸ್ಕಾರ ಮತ್ತು ಇಸ್ರಾಯೇಲ್ಯರುನ್ನು ಮುಂದೆ ನಡೆಸಲು ಯೆಹೋಶುವನು ನಾಯಕತ್ವವನ್ನು ವಹಿಸಿಕೊಂಡ ಮಾಹಿತಿಗಳನ್ನು ನೀಡುತ್ತದೆ. ಧರ್ಮೋಪದೇಶಕಾಂಡವು ಮೋಶೆಯು ಒಬ್ಬ ದೇವರ ಮನುಷ್ಯ ಎಂದು ಮೌಲ್ಯಮಾಪನ ಮಾಡುವುದರ ಮೂಲಕವಾಗಿ ಮುಕ್ತಾಯಗೊಳ್ಳುತ್ತದೆ.

**ಆ. ಓದಿರಿ**

ಧರ್ಮೋ. 32:48-52; 34:1-12

**ಇ. ವಿವರಣೆ**

*ನೀನು ಈ ಅಬಾರೀಮ್ ಬೆಟ್ಟವನ್ನು ಅಂದರೆ ಮೋವಾಬ್ಯರ ದೇಶದಲ್ಲಿ ಯೆರಿಕೋ ಪಟ್ಟಣಕ್ಕೆ ಎದುರಾಗಿರುವ ನೆಬೋ ಬೆಟ್ಟವನ್ನು* (ವ.49): ವಿಮೋಚನಕಾಂಡದ ನಕ್ಷೆಯನ್ನು ನೋಡಿರಿ.

*ಪಿತೃಗಳಲ್ಲಿ ಸೇರಬೇಕು* (ವ.50): ಈ ರೂಪಾಲಂಕಾರದ ಅರ್ಥವೇನೆಂದರೆ "ಸಾವು".

*ಹೋರೆಂಬ ಬೆಟ್ಟ* (ವ.50): ಈ ಬೆಟ್ಟವು (ಬಹುಶಃ ಉತ್ತರಕ್ಕೆ ಒಂದು ದಿವಸದ ಪ್ರಯಾಣದಷ್ಟು ಅಥವಾ ಮೆರೀಬಾ ಕಾದೇಶಿನ ಈಶಾನ್ಯದ ಕಡೆ) ಆರೋನನು ಮರಣ ಹೊಂದಿ ಹೂಣಲ್ಪಟ್ಟ ಬೆಟ್ಟವಾಗಿತ್ತು (ಅರಣ್ಯಕಾಂಡ 20:22-29ನ್ನು ನೋಡಿರಿ).

*ಚಿನ್ ಅರಣ್ಯದಲ್ಲಿನ ಮೆರೀಬಾ ಕಾದೇಶ್* (ವ.51): ಚಿನ್ ಅರಣ್ಯವು ವಿಮೋಚನಕಾಂಡ ನಕ್ಷೆಯಲ್ಲಿ ಕಂಡುಬರುತ್ತದೆ; ಮೆರೀಬಾದಲ್ಲಿ ಏನು ಸಂಭವಿಸಿತೆಂಬುದು ಅರಣ್ಯಕಾಂಡ 20:2-13 ರಲ್ಲಿ ದಾಖಲಿಸಲ್ಪಟ್ಟಿದೆ.

*ಪಿಸ್ಗಾ* (34:1): ಇದು ನೆಬೋ ಪರ್ವತದ ಈಶಾನ್ಯ ದಿಕ್ಕಿನಲ್ಲಿರುವ ಸಣ್ಣ ಪರ್ವತಶಿಖರದ ಹೆಸರಾಗಿದೆ.

*ಆಗ ಯೆಹೋವನು (ಕಾನಾನ್) ದೇಶವನ್ನೆಲ್ಲಾ ತೋರಿಸಿದನು* (ವ.1): ನೆಬೋ ಪರ್ವತದಿಂದ ನೋಡಿದ ಪ್ರದೇಶದ ಸ್ಥಳಗಳ ಹೆಸರುಗಳು ವ.1-3 ರಲ್ಲಿ ಸೂಚಿಸುವುದೇನೆಂದರೆ, ಮೋಶೆಯು ಮೊದಲಿಗೆ ಉತ್ತರದಿಕ್ಕಿನ ಕಡೆಗೆ ನೋಡಿದಾಗ (ಗಿಲ್ಯಾದಿನಿಂದ ದಾನ್ ಪಟ್ಟಣದವರೆಗೂ) ನಂತರದಲ್ಲಿ ಆತನು ವಾಯುವ್ಯದಿಕ್ಕಿಗೆ ತಿರುಗಿದನು (ಎಲ್ಲಾ ನೆಫ್ತಾಲಿ ಪ್ರದೇಶ; ಎಫ್ರಾಯೀಮ್ ಮತ್ತು ಮನಸ್ಸೆ ಕುಲಗಳ ಸೀಮೆ), ನಂತರದಲ್ಲಿ ಪಶ್ಚಿಮದಿಕ್ಕಿಗೆ (ಪಶ್ಚಿಮ ಸಮುದ್ರದವರೆಗೂ ಯೆಹೂದ ಸೀಮೆ), ಮತ್ತು ಕೊನೆಯಲ್ಲಿ ದಕ್ಷಿಣದ ಕಡೆಗೆ ನೋಡಿದನು (ಚೋಗರೂರಿನ ತನಕ ಯೆರಿಕೋ ಎಂಬ ಖರ್ಜೂರಗಳ ಪಟ್ಟಣದ ಸುತ್ತಲಿರುವ ಮೈದಾನವನ್ನೆಲ್ಲಾ).

*ನಾನು ಅಬ್ರಹಾಮ್ ಇಸಾಕ್ ಯಾಕೋಬರಿಗೆ ಪ್ರಮಾಣ ಮಾಡಿ ಅವರ ಸಂತತಿಯವರಿಗೆ ಕೊಡುವೆನೆಂದು ವಾಗ್ದಾನ ಮಾಡಿದ ದೇಶವು ಇದೆ* (ವ.4): ಕಾನಾನ್ ದೇಶದ ಪ್ರದೇಶ (ಆದಿ. 17:8).

**ಈ. ಪ್ರಶ್ನೆಗಳು**

1. ಕಾನಾನ್ ದೇಶಕ್ಕೆ ಜನರನ್ನು ಮುನ್ನಡೆಸಲು ಮೋಶೆಗೆ ಯಾಕೆ ಅಪ್ಪಣೆ ಸಿಗಲಿಲ್ಲ?
2. ದೇವರು ನೆಬೋ ಪರ್ವತದಿಂದ ಮೋಶೆಗೆ ಏನನ್ನು ತೋರಿಸಿದನು?
3. ಮೋಶೆಯು ಹೇಗೆ ಹೂಣಲ್ಪಟ್ಟನು?
4. ಯೆಹೋಶುವನ ಕುರಿತು ಈ ವಾಕ್ಯಭಾಗವು ಹೇಗೆ ವಿವರಿಸುತ್ತದೆ?
5. ಮೋಶೆಯ ಕುರಿತ ಧರ್ಮೋಪದೇಶಕಾಂಡದ ಕೊನೆಯ ಮೌಲ್ಯಮಾಪನವೇನು?

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ನೆಬೋ ಪರ್ವತದಲ್ಲಿನ ಮೋಶೆಯ ಕುರಿತಾದ ಕಥೆಯಿಂದ ನಾವು ದೇವರ ನಂಬಿಗಸ್ಥಿಕೆಯ ಕುರಿತು ಏನನ್ನು ಕಲಿಯುತ್ತೇವೆ?
2. ಧರ್ಮೋಪದೇಶಕಾಂಡವು ಮೋಶೆಯ ಸೇವೆಯ ಕುರಿತ ನಿಜವಾದ ಸಕರಾತ್ಮಕ ಮೌಲ್ಯಮಾಪನವನ್ನು ನೀಡುವುದರೊಂದಿಗೆ ಕೊನೆಗೊಳ್ಳುತ್ತದೆ:

   ಅ. ಮೋಶೆಯ ಜೀವಿತ ಮತ್ತು ಸೇವೆಯಿಂದ ನೀವು ನೆನಪಿನಲ್ಲಿ ಇಟ್ಟುಕೊಂಡ ಅಂಶಗಳನ್ನು ನಿಮ್ಮ ಗುಂಪಿನಲ್ಲಿರುವ ಇತರ ಸದಸ್ಯರೊಂದಿಗೆ ಹಂಚಿಕೊಳ್ಳಿರಿ.

   ಆ. ಧರ್ಮೋಪದೇಶಕಾಂಡದ ಹೊಳೆಯುವ ಮೌಲ್ಯಮಾಪನವನ್ನು ನೀವು ಒಪ್ಪಿಕೊಳ್ಳುವಿರೋ? ಯಾಕೆ – ಯಾಕೆ ಇಲ್ಲ?
3. ನಿಮ್ಮ ಸಾವಿನ ನಂತರ ನೀವು ಹೇಗೆ ನೆನಪಿನಲ್ಲಿ ಉಳಿಯಲು ಬಯಸುತ್ತೀರಿ? ಒಂದು ಪಟ್ಟಿಯನ್ನು ತಯಾರಿಸಿರಿ. ನಂತರದಲ್ಲಿ ಆ ಪಟ್ಟಿಯು ಸತ್ಯವಾಗಬೇಕಾದರೆ ನಿಮ್ಮ ಜೀವಿತದಲ್ಲಿ ನೀವು ಬದಲಾಯಿಸಿಕೊಳ್ಳಬೇಕಾದ ಅಂಶಗಳನ್ನು ಚಿಂತನೆಮಾಡಿರಿ.

**ಊ. ಒಂದು ಸತ್ಯವೇದ ಅಧ್ಯಯನವನ್ನು ತಯಾರಿಸಿರಿ**

"ನೀವು ಹೇಗೆ ನೆನಪಿನಲ್ಲಿ ಉಳಿಯಲು ಬಯಸುತ್ತೀರಿ" ಎಂದು ಕರೆಯಲ್ಪಡುವ ಶೀರ್ಷಿಕೆಯಲ್ಲಿ ಒಂದು ಸತ್ಯವೇದ ಅಧ್ಯಯನ(ಅಥವಾ ಒಂದು ಸಂದೇಶ)ವನ್ನು ತಯಾರಿಸಿರಿ? ಈ ಅಧ್ಯಯನದಿಂದ ನೀವು ಏನನ್ನು ಕಲಿತಿದ್ದಿರೋ ಅದರ ಆಧಾರದ ಮೇಲೆ ನಿಮ್ಮ ಅಭ್ಯಾಸ ಅಥವಾ ಸಂದೇಶ ಇರಲಿ.

ಇದು ನಿಮ್ಮ ಹೊರ ರೇಖೆಯಾಗಿರಲಿ:

1. ಮೋಶೆ

   ಅ. ಉಪಸಂಹಾರದ ಮೌಲ್ಯಮಾಪನ: ಧರ್ಮೋ. 34:10-12

   ಆ. ಮೋಶೆಯ ಜೀವಿತ ಮತ್ತು ಸೇವೆಗಳಿಂದ ಕೆಲವು ಘಟನೆಗಳು:

   - ನಕಾರತ್ಮಕ ವಿಷಯಾಂಶಗಳ ದೃಷ್ಟಾಂತಗಳು
   - ಸಕಾರತ್ಮಕ ವಿಷಯಾಂಶಗಳ ದೃಷ್ಟಾಂತಗಳು

   ಇ. ಮೋಶೆಯ ಕುರಿತ ಉಪಸಂಹಾರ
2. ಅಳವಡಿಸುವಿಕೆ

ಅ. ನೀವು ಹೇಗೆ ನೆನಪಿನಲ್ಲಿ ಉಳಿಯಲಿಕ್ಕೆ ಬಯಸುತ್ತೀರಿ?

ಆ. ಇದು ನಿಜವಾಗಬೇಕಾದರೆ ನಿಮ್ಮ ಜೀವಿತದಲ್ಲಿ ನೀವು ಏನನ್ನು ಬದಲಾಯಿಸಿಕೊಳ್ಳಲು ಬಯಸುತ್ತೀರಿ?

# ಅಂತಿಮ ಅಧ್ಯಯನ

## ಹಳೆ ಒಡಬಂಡಿಕೆಯ ಧರ್ಮಶಾಸ್ತ್ರವನ್ನು ಹೇಗೆ ಅರ್ಥ ಮಾಡಿಕೊಳ್ಳುವುದು?

### ಪೀಠಿಕೆ

ಪಂಚಕಾಂಡದ ಈ ಅಂತಿಮ ಅಧ್ಯಯನವು ಮೋಶೆಯು ತೀರಿ ಹೋಗಿ 3400 ವರ್ಷಗಳ ನಂತರ ಜೀವಿಸುತ್ತಿರುವ ನಾವು ಹಳೆ ಒಡಬಂಡಿಕೆಯ ಆಜ್ಞೆಗಳನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ಮತ್ತು ಹೇಗೆ ಅನ್ವಯಿಸಿಕೊಳ್ಳಬೇಕು ಎಂಬ ಪ್ರಶ್ನೆಯ ಕುರಿತು ಚರ್ಚಿಸುತ್ತದೆ. ಹಾಗಾಗಿ ಇದು ಆಜ್ಞೆಗಳ ವ್ಯಾಖ್ಯಾನಶಾಸ್ತ್ರಗಳ ಕುರಿತು ಮಾತನಾಡುತ್ತದೆ. ನಿಶ್ಚಯವಾಗಲೂ ಹಿಂದಿನ ಅಧ್ಯಯನಗಳಲ್ಲಿ ಅನೇಕ ವ್ಯಾಖ್ಯಾನಶಾಸ್ತ್ರದ ಸಮಸ್ಯೆಗಳ ಕುರಿತು ಚರ್ಚಿಸಲಾಗಿದೆ. ನಿರ್ದಿಷ್ಟವಾಗಿ ಹೇಳಬೇಕಾದರೆ,ಪಂಚಕಾಂಡದ ಪಠ್ಯಗಳನ್ನು ನಮ್ಮ ಸ್ವಂತ ಕಾಲಕ್ಕೂ ಹಾಗೂ ಸನ್ನಿವೇಶಗಳಿಗೂ ಹೇಗೆ ಅನ್ವಯಿಸಿಕೊಳ್ಳಬೇಕೆಂದು 'ಆಲೋಚಿಸಿರಿ ಮತ್ತು ಚರ್ಚಿಸಿರಿ' ಎಂಬ ಭಾಗದ ಪ್ರಶ್ನೆಗಳು ನಮ್ಮನ್ನು ಯೋಚಿಸುವಂತೆ ಮಾಡಿವೆ.

ಈ ಅಧ್ಯಯನದಲ್ಲಿರುವ ಹೆಚ್ಚಿನ ಮಾಹಿತಿಯನ್ನು ಗೊರ್ಡನ್ ಡಿ. ಫೀ ಮತ್ತು ಡಗ್ಲಸ್ ಸ್ಟುವರ್ಟ್ ರವರ *ಹೌ ಟು ರೀಡ್ ದ ಬೈಬಲ್ ಫಾರ್ ಆಲ್ ಇಟ್ಸ್ ವರ್ಥ್* ಎಂಬ ಪುಸ್ತಕದಲ್ಲಿರುವ '*ದ ಲಾ: ಕವನೆಂಟ್ ಸ್ಟಿಪ್ಯುಲೇಶನ್ಸ್ ಫಾರ್ ಇಸ್ರಾಯೇಲ್*' ಎಂಬ ಅಧ್ಯಾಯದಿಂದ ಆರಿಸಿಕೊಳ್ಳಲಾಗಿದೆ. ಅಮೇರಿಕಾದಲ್ಲಿರುವ ಗೊರ್ಡನ್–ಕಾನ್ ವೆಲ್ ಥಿಯಾಲಾಜಿಕಲ್ ಸೆಮಿನರಿಯಲ್ಲಿ ಹಳೆ ಒಡಂಬಡಿಕೆಯ ಉಪನ್ಯಾಸಕರಾಗಿರುವ ಡಗ್ಲಸ್ ಸ್ಟುವರ್ಟ್‌ರವರು ಬರೆದಿರುವ ಆ ಅಧ್ಯಾಯದಿಂದ ಆರಿಸಿಕೊಂಡು ನಾನು ನನ್ನ ಅನೇಕ ಅಂಶಗಳನ್ನು ಮತ್ತು ಸಮಾರೋಪಗಳನ್ನು ನೀಡಿದ್ದೇನೆ.

### ಇಸ್ರಾಯೇಲರ ಇತಿಹಾಸದಲ್ಲಿ ಧರ್ಮಶಾಸ್ತ್ರ ವಹಿಸಿದ ಪಾತ್ರ

ಮೋಶೆಯು ಇಸ್ರಾಯೇಲರನ್ನು ವಾಗ್ದಾನ ದೇಶಕ್ಕೆ ನಡೆಸುವುದಕ್ಕಾಗಿ ಈಜಿಪ್ಟಿನ ಬಂಧನದಿಂದ ಅವರನ್ನು ಹೊರಗೆ ತಂದನು. ಸಿನಾಯ್ ಪರ್ವತದ ಬಳಿಯಲ್ಲಿ ಯೆಹೋವನು ಅವರೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡನು. ಅವರು ಈ ಒಡಂಬಡಿಕೆಯ ಮೂಲಕ ಒಂದು ಅತ್ಯಂತ ಸ್ಪಷ್ಟವಾದ ರೀತಿಯಲ್ಲಿ ದೇವರ ಜನರಾದರು. ಅವರು ಇತರೆ ಎಲ್ಲಾ ರಾಷ್ಟಗಳಿಗಿಂತ ವಿಭಿನ್ನರಾಗಿರಬೇಕಿತ್ತು ಮತ್ತು ಪ್ರತ್ಯೇಕಿಸಲ್ಪಡಬೇಕಿತ್ತು. ಆದರೆ ಒಂದು ದೊಡ್ಡ ಸಮಸ್ಯೆ ಎದುರಾಯಿತು. ಇಸ್ರಾಯೇಲರಿಗೆ ದೇವರ ಒಡಂಬಡಿಕೆಯ ಜನರಾಗಿರುವುದರ ಅರ್ಥ ತಿಳಿದಿರಲಿಲ್ಲ. ಅವರು ಪರಸ್ಪರ ಯಾವ ಸಂಬಂಧವುಳ್ಳವರಾಗಿದ್ದೇವೆ ಎಂಬುದನ್ನು ತಿಳಿದಿರಲಿಲ್ಲ ಮತ್ತುಅವರು ದೇವರೊಂದಿಗೆ ಯಾವ ಸಂಬಂಧವುಳ್ಳವರಾಗಿದ್ದೇವೆ ಎಂಬುದನ್ನು ತಿಳಿದಿರಲಿಲ್ಲ.

ಅನೇಕ ಸಂತತಿಗಳವರೆಗೆ ಇಸ್ರಾಯೇಲರು ಅಬ್ರಹಾಮ್, ಇಸಾಕ್ ಮತ್ತು ಯಾಕೋಬರ ದೇವರ ಕುರಿತು ಒಂದು ವಯಕ್ತಿಕ ತಿಳುವಳಿಕೆ ಇಲ್ಲದೆ ಈಜಿಪ್ಟಿನಲ್ಲಿ ವಾಸವಾಗಿದ್ದರು. ಈಜಿಪ್ಟಿಯನ್ನರು ಅನೇಕ ರೀತಿಯ ದೇವರುಗಳನ್ನು ಆರಾಧಿಸುತ್ತಿದ್ದರು. ಅವುಗಳಲ್ಲಿ ಅನೇಕ ದೇವರುಗಳು ಪ್ರಾಣಿಗಳ ರೂಪವುಳ್ಳದಾಗಿದ್ದವು.ಈಜಿಪ್ಟಿನ ಸಂಸ್ಕೃತಿಯು ಆಧುನಿಕ ಸಂಸ್ಕೃತಿಯಾಗಿತ್ತು. ಇಸ್ರಾಯೇಲರು ಈಜಿಪ್ಟಿನ ಜೀವನಶೈಲಿಯನ್ನು ಮತ್ತು ಸಂಸ್ಕೃತಿಯನ್ನು ಅಳವಡಿಸಿಕೊಂಡಿದ್ದರು. ಅರಣ್ಯಗಳಲ್ಲಿನ ಅಲೆದಾಟಗಳಲ್ಲಿ ಇಸ್ರಾಯೇಲರು ಆಗಾಗ್ಗೆ ಈಜಿಪ್ಟಿನಲ್ಲಿ ಕಳೆದ 'ಸುದಿನಗಳನ್ನು' ನೆನಪಿಸಿಕೊಳ್ಳುತ್ತಿದ್ದರು.

ಈಗ ಇಸ್ರಾಯೇಲರು ತಮಗೋಸ್ಕರವಾದ ಒಂದು ಸ್ವಂತ ದೇಶದ ಕಡೆಗೆ ಪ್ರಯಾಣಿಸುತ್ತಿದ್ದರು. ಆದರೆ ಆ ದೇಶದಲ್ಲಾಗಲೇ ಅನೇಕ ಕಾನಾನ್ಯ ಗೋತ್ರಗಳು ವಾಸವಾಗಿದ್ದವು. ಆ ಜನರು ಅನೇಕ ಪ್ರಾಕೃತಿಕ ಮತ್ತು ಫಲವತ್ತತೆಯ ದೇವರುಗಳನ್ನು ಯೆಹೋವನಿಗೆ ಅಸಹ್ಯ ಹುಟ್ಟಿಸುವ ರೀತಿಯಲ್ಲಿ ಆರಾಧಿಸುತ್ತಿದ್ದರು. ಕಾನಾನ್ಯರ ಧರ್ಮ ಹಾಗೂ ಸಂಸ್ಕೃತಿಗಳೆರಡೂ ಇಸ್ರಾಯೇಲರನ್ನು ವಿಗ್ರಹಾರಾಧನೆ ಮಾಡುವಂತೆ ಮತ್ತು ಅನೈತಿಕ ಆಚಾರಗಳನ್ನು ಪಾಲಿಸುವಂತೆ ಸೆಳೆದುಕೊಳ್ಳುವದು ಎಂಬುದನ್ನು ದೇವರು ತಿಳಿದಿದ್ದನು. ಹಾಗಾಗಿ ಕಾನಾನ್ಯರ ಧರ್ಮ ಹಾಗೂ ಸಂಸ್ಕೃತಿಯಿಂದ ದೇವರು ಅವರನ್ನು ಸಂರಕ್ಷಿಸಬೇಕಾಗಿತ್ತು. ಯಾಕೆಂದರೆ ಅವರು ಸ್ವಲ್ಪದರಲ್ಲೇ ಕಾನಾನ್ಯರ ದೇಶವನ್ನು ವಶಮಾಡಿಕೊಳ್ಳಲಿದ್ದರು.

ಆ ವರ್ಷದಲ್ಲಿ ಅಥವಾ ಅದರ ಮುಂದಿನ ವರ್ಷದಲ್ಲಿ ಇಸ್ರಾಯೇಲರು ಸಿನಾಯ್ ಪರ್ವತದ ಬಳಿಯಲ್ಲಿ ಪಾಳೆಯವನ್ನು ಹಾಕಿಕೊಂಡಿದ್ದಾಗ ದೇವರು ಅವರಿಗೆ ಧರ್ಮಶಾಸ್ತ್ರವನ್ನು ಕೊಟ್ಟನು. ಅದು ದೇವರು ಜನರಿಗೆ ಕೊಟ್ಟ ಒಂದು ವರವಾಗಿತ್ತು. ಅದು ದೇವರು ಅವರೊಂದಿಗೆ ಮಾಡಿಕೊಂಡ ಒಡಂಬಡಿಕೆಯ ಒಂದು ಭಾಗವಾಗಿತ್ತು. ಧರ್ಮಶಾಸ್ತ್ರವು ವಾಗ್ದಾನದೇಶದಲ್ಲಿನ ಭವಿಷ್ಯ ಜೀವನಕ್ಕಾಗಿ ಅವರಿಗೆ ಮಾರ್ಗದರ್ಶನ ನೀಡುವುದಾಗಿತ್ತು. ಧರ್ಮಶಾಸ್ತ್ರವು ಅವರು ದೇವರ ನಿಯಮಗಳಿಗನುಸಾರವಾಗಿ ಪರಸ್ಪರ ಯಾವ ಸಂಬಂಧವುಳ್ಳವರಾಗಿದ್ದೇವೆ ಎಂಬುದನ್ನು ತಿಳಿದುಕೊಳ್ಳುವಂತೆ ಸಹಾಯಮಾಡುವುದಾಗಿತ್ತು ಮತ್ತು ಅವರು ದೇವರಿಗೆ ಮೆಚ್ಚಿಕೆಯಾಗುವ ಹಾಗೂ ಸನ್ಮಾನ ತರುವ ರೀತಿಯಲ್ಲಿ ಯಾವ ಸಂಬಂಧವುಳ್ಳವರಾಗಿದ್ದೇವೆ ಎಂಬುದನ್ನು ತಿಳಿದುಕೊಳ್ಳುವಂತೆ ಧರ್ಮಶಾಸ್ತ್ರವು ಸಹಾಯಮಾಡುವುದಾಗಿತ್ತು.

ಇದೇ ಇಸ್ರಾಯೇಲರ ಇತಿಹಾಸದಲ್ಲಿ ಧರ್ಮಶಾಸ್ತ್ರವು ವಹಿಸಿದ ಪಾತ್ರವಾಗಿದೆ.

### ಪ್ರಶ್ನೆ 1

ಇಸ್ರಾಯೇಲರ ಇತಿಹಾಸದಲ್ಲಿ ಧರ್ಮಶಾಸ್ತ್ರವು ವಹಿಸಿದ ಪಾತ್ರವನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಸಾರಾಂಶಗೊಳಿಸಿರಿ. ಮೇಲಿರುವ ಪಠ್ಯವನ್ನಾಗಲಿ ಅಥವಾ ನಿಮ್ಮ ನೋಟ್ಸ್‌ಗಳನ್ನಾಗಲಿ ನೋಡಬೇಡಿರಿ.

**ಧರ್ಮಶಾಸ್ತ್ರ ಎಂದರೇನು?**

'ಧರ್ಮಶಾಸ್ತ್ರ' ಎಂಬ ಪದವನ್ನು ಐದು ವ್ಯತ್ಯಾಸವಾದ ರೀತಿಯಲ್ಲಿ ಬಳಸಲಾಗಿದೆ:

1. ಅದು ಇಸ್ರಾಯೇಲರು ಪಾಲಿಸಬೇಕಾಗಿದ್ದ 600 ಕ್ಕಿಂತ ಹೆಚ್ಚಿನ ಆಜ್ಞೆಗಳನ್ನು ಉಲ್ಲೇಖಿಸುತ್ತದೆ. ಹಾಗಾಗಿ ಈ ಅರ್ಥದಲ್ಲಿ ಈ ಪದವನ್ನು ಬಹುವಚನವಾಗಿ ಬಳಸಬಹುದು (ಆಜ್ಞೆಗಳು). ಮೋಶೆಯ ಮಾವನು 70 ಹಿರಿಯರಿಗೆ ನಿಯಮಗಳನ್ನು ಮತ್ತು ಆಜ್ಞೆಗಳನ್ನು ಕಲಿಸುವಂತೆ ಅವನಿಗೆ ಹೇಳಿದನು (ವಿಮೋ 18:20).

2. ಅದು ಎಲ್ಲಾ ಆಜ್ಞೆಗಳನ್ನು ಸೂಚಿಸುವುದಾಗಿದೆ. ಈ ಅರ್ಥದಲ್ಲಿ ಏಕವಚನವನ್ನು ಬಳಸಲಾಗುತ್ತದೆ (ಧರ್ಮಶಾಸ್ತ್ರ). ಪರ್ವತ ಪ್ರಸಂಗದಲ್ಲಿ ಯೇಸು ಹೀಗೆ ಹೇಳಿದನು: *ಭೂಮಿ ಆಕಾಶಗಳು ಗತಿಸಿ ಹೋಗುವವರೆಗೆ ಧರ್ಮಶಾಸ್ತ್ರವೆಲ್ಲಾ ನೆರವೇರುವುದೇ ಹೊರತು ಅದರಲ್ಲಿ ಒಂದು ಕನಿಷ್ಠವಾದರೂ, ಕನಿಷ್ಠ ಬಿಂದುವಾದರೂ ಅಳಿದುಹೋಗುವುದಿಲ್ಲವೆಂದು ನಾನು ನಿಮಗೆ ನಿಜವಾಗಿ ಹೇಳುತ್ತೇನೆ*(ಮತ್ತಾಯ 5:18).

3. ಅದನ್ನು ಪಂಚಕಾಂಡವನ್ನು ಉಲ್ಲೇಖಿಸಲು ಸಹ ಬಳಸಲಾಗುತ್ತದೆ.

4. ಅದನ್ನು ಹೊಸ ಒಡಂಬಡಿಕೆಯಲ್ಲಿ ಕೆಲವೊಮ್ಮೆ ಹಳೆ ಒಡಂಬಡಿಕೆಯ ಧಾರ್ಮಿಕ ಪದ್ಧತಿಯನ್ನು ಸಮಗ್ರವಾಗಿ ಸೂಚಿಸಲು ಒಂದು ದೈವಶಾಸ್ತ್ರೀಯ ಪದವಾಗಿ ಬಳಸಲಾಗುತ್ತದೆ. ಕೊರಿಂಥ ಸಭೆಗೆ ಪೌಲನು ಹೀಗೆ ಬರೆಯುತ್ತಾನೆ: *ಯೆಹೂದ್ಯರನ್ನು ಸಂಪಾದಿಸಿಕೊಳ್ಳುವಂತೆ ಯೆಹೂದ್ಯರಿಗೆ ಯೆಹೂದ್ಯನಂತಾದೆನು. ನಾನು ಧರ್ಮಶಾಸ್ತ್ರಕ್ಕೆ ಅಧೀನನಲ್ಲದವನಾದರೂ ಧರ್ಮಶಾಸ್ತ್ರಕ್ಕೆ ಅಧೀನರಾದವರನ್ನು ಸಂಪಾದಿಸಿಕೊಳ್ಳುವಂತೆ ಅವರಿಗಾಗಿ ಧರ್ಮಶಾಸ್ತ್ರಕ್ಕೆ ಅಧೀನನಂತಾದೆನು* (1 ಕೊರಿ. 9:20).

5. ಅದನ್ನು ಹೊಸ ಒಡಂಬಡಿಕೆಯಲ್ಲಿ ಇನ್ನೂ ಕೆಲವೊಮ್ಮೆ ಯೆಹೂದ್ಯ ರಬ್ಬೀಗಳು ಧರ್ಮಶಾಸ್ತ್ರವನ್ನು ಅರ್ಥವಿವರಿಸುವ ರೀತಿಯನ್ನು ಸೂಚಿಸಲು ಬಳಸಲಾಗಿದೆ. ಪೇತ್ರನು ಕೊರ್ನೇಲ್ಯನಿಗೆ ಹೀಗೆ ಹೇಳಿದನು: *ಅನ್ಯಜನರೊಂದಿಗೆ ಸಂಪರ್ಕವಿಟ್ಟುಕೊಳ್ಳುವುದಾಗಲಿ ಅನ್ಯರನ್ನು ಭೇಟಿ ಕೊಡುವುದಾಗಲಿ ಯೆಹೂದ್ಯರಿಗೆ ಸರಿಯಲ್ಲವೆಂದು ನೀವೆಲ್ಲರೂ ತಿಳಿದೇ ಇದ್ದೀರಿ. ಆದರೆ ಯಾವ ಮನುಷ್ಯನನ್ನೂ ಅಶುದ್ಧನು ಇಲ್ಲವೆ ನಿಷಿದ್ಧವಾದವನು ಎಂದು ಕರೆಯಬಾರದು ಎಂದು ದೇವರು ನನಗೆ ತೋರಿಸಿಕೊಟ್ಟಿದ್ದಾನೆ* (ಅ. ಕೃ. 10:28).

ಈ ಅಧ್ಯಯನದಲ್ಲಿ ನಾವು ಮೇಲಿರುವ 1 ಮತ್ತು 2 ಅಂಶಗಳನ್ನು ನೋಡಲಿದ್ದೇವೆ.

ಹೊಸ ಒಡಂಬಡಿಕೆಯಲ್ಲಿ ಪಂಚಕಾಂಡದ 5 ಪುಸ್ತಕವನ್ನು ಆಗಾಗ್ಗೆ 'ಧರ್ಮಶಾಸ್ತ್ರ' ಎಂದು ಉಲ್ಲೇಖಿಸಲಾಗಿದೆ. ಯೇಸು ತನ್ನ ಶಿಷ್ಯರಿಗೆ ಹೀಗೆ ಹೇಳಿದನು:*ಧರ್ಮಶಾಸ್ತ್ರವನ್ನಾಗಲಿ, ಪ್ರವಾದನೆಗಳನ್ನಾಗಲಿ ರದ್ದು ಮಾಡುವುದಕ್ಕೆ ನಾನು ಬಂದೆನೆಂದು ಭಾವಿಸಬೇಡಿರಿ. ನಾನು ಅವುಗಳನ್ನು ರದ್ದುಗೊಳಿಸಲು ಬರಲಿಲ್ಲ, ನೆರವೇರಿಸಲು ಬಂದೆನು* (ಮತ್ತಾಯ 5:17). ಇದಕ್ಕೆ ಸಂಬಂಧಿಸಿದಂತೆ 2 ಸಂಗತಿಯನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು:

1. ಆದಿಕಾಂಡವನ್ನು ಹೊರತುಪಡಿಸಿ ಪಂಚಕಾಂಡದ ಉಳಿದ ಕೇವಲ ನಾಲ್ಕು ಪುಸ್ತಕಗಳಲ್ಲಿ ಮಾತ್ರ ಈ ಸುಮಾರು 600 ಆಜ್ಞೆಗಳನ್ನು ಕಾಣಬಹುದು.

2. ಈ ಪುಸ್ತಕಗಳು (ನಿರ್ದಿಷ್ಟವಾಗಿ ಆದಿಕಾಂಡವು) ಹೆಚ್ಚಾಗಿ ಕಥಾನಿರೂಪಣೆಯನ್ನು ಹೊಂದಿದೆ. ಮತ್ತು ದೇವರ ಹಾಗೂ ಇಸ್ರಾಯೇಲರ ನಡುವಿನ ಒಡಂಬಡಿಕೆಯ ಧರ್ಮಶಾಸ್ತ್ರವನ್ನು ಈ ಕಥಾನಿರೂಪಣೆಯ ಹಿನ್ನಲೆಯಲ್ಲಿ ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯ.

**ಪ್ರಶ್ನೆ 2**

ಈ ಎರಡು ಪದಗಳು ಒಂದಕ್ಕೊಂದು ಹೇಗೆ ಸಂಬಂಧಿಸಿವೆ ಎಂಬುದನ್ನು ವಿವರಿಸಿರಿ: 'ಆಜ್ಞೆಗಳು' ಮತ್ತು 'ಧರ್ಮಶಾಸ್ತ್ರ'.

**ಕ್ರೈಸ್ತರು ಮತ್ತು ಧರ್ಮಶಾಸ್ತ್ರ**

ಧರ್ಮಶಾಸ್ತ್ರವು ಪ್ರಾಚೀನ ಇಸ್ರಾಯೇಲರ ದಿನನಿತ್ಯ ಜೀವನದ ಮೇಲೆ ಆಳವಾದ ಪರಿಣಾಮವನ್ನು ಬೀರಿತ್ತು ಎಂಬುದು ಸ್ಪಷ್ಟವಾಗಿದೆ. ಆದರೆ ಇಂದು ಜೀವಿಸುತ್ತಿರುವ ಕ್ರೈಸ್ತರಾದ ನಾವು ಈ ಕೆಳಗೆ ತಿಳಿಸಲಾಗಿರುವಂತಹ ಪ್ರಶ್ನೆಗಳಿಗೆ ಒಳ್ಳೆಯ ಮತ್ತು ಸಮರ್ಥನೀಯ ಉತ್ತರಗಳನ್ನು ಕಂಡುಕೊಳ್ಳಬೇಕಾಗಿದೆ:

- ಧರ್ಮಶಾಸ್ತ್ರವು ನಮಗೆ ಸ್ವಲ್ಪವಾದರೂ ಅನ್ವಯಿಸುವುದಿಲ್ಲವೋ?
- ಒಂದು ವೇಳೆ ಅನ್ವಯಿಸುವುದಾದರೆ *ಹೇಗೆ* ಅನ್ವಯಿಸುತ್ತದೆ?

ಇವುಗಳು ನಾವು ಉತ್ತರಿಸಲೇಬೇಕಾದ ಪ್ರಾಮುಖ್ಯ ವ್ಯಾಖ್ಯಾನಶಾಸ್ತ್ರೀಯ ಪ್ರಶ್ನೆಗಳಾಗಿವೆ.

**ಪ್ರಶ್ನೆ 3**

ಈ ಹೇಳಿಕೆಯ ಕುರಿತು ಆಲೋಚಿಸಿರಿ: 'ಕ್ರೈಸ್ತರಾದ ನಾವು ಒಂದು ದೇವರೊಂದಿಗೆ ಒಂದು ಹೊಸದಾದ ಒಡಂಬಡಿಕೆಯಲ್ಲಿ ಪಾಲುಗಾರರಾಗಿರುವುದರಿಂದ ಧರ್ಮಶಾಸ್ತ್ರವನ್ನು ಪಾಲಿಸಬೇಕಾಗಿಲ್ಲ'. ಈ ಹೇಳಿಕೆಯ ಕುರಿತು ಚರ್ಚಿಸಿರಿ. ನೀವು ಈ ಹೇಳಿಕೆಯನ್ನು ಒಪ್ಪುತ್ತೀರೋ? ಇಲ್ಲವೋ?

ಒಂದು ವೇಳೆ ನಿಮ್ಮ ಉತ್ತರ ಒಪ್ಪುತ್ತೇನೆ ಎನ್ನುವುದಾದರೆ, ಇಂದು ಜೀವಿಸುತ್ತಿರುವ ಕ್ರೈಸ್ತರು ಧರ್ಮಶಾಸ್ತ್ರವನ್ನು ಪಾಲಿಸುವ ಅವಶ್ಯವಿಲ್ಲ ಎಂಬ ನಿಲುವುಳ್ಳವರಾಗಿದ್ದೀರಿ ಎಂದರ್ಥ. ಹಾಗಿದ್ದಲ್ಲಿ: ನೀವು ಯೇಸುವಿನ ಮಾತುಗಳನ್ನು ಹೇಗೆ ವಿವರಿಸುವಿರಿ: *ಭೂಮಿ ಆಕಾಶಗಳು ಗತಿಸಿ ಹೋಗುವವರೆಗೆ ಧರ್ಮಶಾಸ್ತ್ರವೆಲ್ಲಾ ನೆರವೇರುವುದೇ ಹೊರತು ಅದರಲ್ಲಿ ಒಂದು ಕನಿಷ್ಠಾಕ್ಷರವಾದರೂ, ಕನಿಷ್ಠ ಬಿಂದುವಾದರೂ ಅಳಿದುಹೋಗುವುದಿಲ್ಲವೆಂದು ನಾನು ನಿಮಗೆ ಸತ್ಯವಾಗಿ ಹೇಳುತ್ತೇನೆ* (ಮತ್ತಾಯ 5:18)?

ಒಂದು ವೇಳೆ ನಿಮ್ಮ ಉತ್ತರ ಒಪ್ಪುವುದಿಲ್ಲ ಎನ್ನುವುದಾದರೆ, ಇಂದು ಜೀವಿಸುತ್ತಿರುವ ಕ್ರೈಸ್ತರೂ ಸಹ ಧರ್ಮಶಾಸ್ತ್ರವನ್ನು ಪಾಲಿಸಬೇಕು ಎಂಬ ನಿಲುವುಳ್ಳವರಾಗಿದ್ದೀರಿ ಎಂದರ್ಥ. ಹಾಗಿದ್ದಲ್ಲಿ: ಯೆರುಸಲೇಮಿನಲ್ಲಿ ದೇವಾಲಯವು ಅಸ್ತಿತ್ವದಲ್ಲಿಲ್ಲವಾದ್ದರಿಂದ ದೇವಾಲಯಕ್ಕೆ ಸಂಬಂಧಿಸಿದ ಆಚರಣೆಗಳು ಮತ್ತು ಬಲಿಗಳ ಕುರಿತು ಇರುವ ಆಜ್ಞೆಗಳನ್ನು ಹೇಗೆ ಪಾಲಿಸುತ್ತೀರಿ?

**ನಮಗಾಗಿ ಆರು ಮಾರ್ಗಸೂಚಿಗಳು**

ಇಂದಿನ ಕ್ರೈಸ್ತರ ಹಾಗೂ ಧರ್ಮಶಾಸ್ತ್ರದ ನಡುವೆ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುವಂತೆ ಡಗ್ಲಸ್ ಸ್ಟುವರ್ಟ್‌ರವರು ನಮಗೆ ಆರು ಮಾರ್ಗಸೂಚಿಗಳನ್ನು ನೀಡುತ್ತಾರೆ:

**ಮಾರ್ಗಸೂಚಿ 1. ಧರ್ಮಶಾಸ್ತ್ರವು ಒಂದು ಒಡಂಬಡಿಕೆಯಾಗಿದೆ**

ಒಂದು ಒಡಂಬಡಿಕೆಯು ಎರಡು ವ್ಯಕ್ತಿಗಳ ನಡುವೆ ಆಗುವ ಒಂದು ಒಪ್ಪಂದವಾಗಿದೆ. ಎರಡೂ ವ್ಯಕ್ತಿಗಳು ಪರಸ್ಪರ ನಿರ್ಬಂಧಗಳ ಅಡಿಯಲ್ಲಿ ಇರುವುವರಾಗಿದ್ದಾರೆ. ಈ ನಿರ್ಬಂಧಗಳನ್ನು ಒಪ್ಪಂದದಲ್ಲಿ ನಮೂದಿಸಲಾಗಿರುತ್ತದೆ.

ಹಳೆ ಒಡಂಬಡಿಕೆಯ ಕಾಲದಲ್ಲಿ ಒಬ್ಬ ಬಲಶಾಲಿಯಾದ ಅರಸನ ಹಾಗೂ ಹಿಡುವಳಿದಾರನ ನಡುವೆ ಒಡಂಬಡಿಕೆಗಳಾಗುತ್ತಿದ್ದವು. ಅರಸನು ಹಿಡುವಳಿದಾರನನ್ನು ಸಂರಕ್ಷಿಸುವೆನೆಂದು ಪ್ರಮಾಣ ಮಾಡುತ್ತಿದ್ದನು. ಆದರೆ ಈ ಸಂರಕ್ಷಣೆಗೆ ಷರತ್ತುಗಳು ಅನ್ವಯವಾಗುತ್ತಿದ್ದವು: ಆದರೆ ಹಿಡುವಳಿದಾರನು ಒಡಂಬಡಿಕೆಯ ಷರತ್ತುಗಳನ್ನು ಪಾಲಿಸುವುದರ ಮೂಲಕ ಅರಸನಿಗೆ ನಿಷ್ಠಾವಂತನಾಗಿರಬೇಕಿತ್ತು. ಆ ಷರತ್ತುಗಳನ್ನು ಉಲ್ಲಂಘಿಸಿದಾಗ ಒಡಂಬಡಿಕೆಗೆ ಅನುಸಾರವಾಗಿ ಅರಸನು ಆತನನ್ನು ಶಿಕ್ಷಿಸುತ್ತಿದ್ದನು.

ಹಳೆ ಒಡಂಬಡಿಕೆಯನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳಬೇಕಾದರೆ ಧರ್ಮಶಾಸ್ತ್ರದಲ್ಲಿರುವ ಒಡಂಬಡಿಕೆಯ ಭಾಗವನ್ನು ಅರ್ಥಮಾಡಿಕೊಳ್ಳುವುದು ಅವಶ್ಯವಾಗಿದೆ. ವಿಶೇಷವಾಗಿ ಇಸ್ರಾಯೇಲರ ಪ್ರವಾದಿಗಳ ಸೇವೆಯನ್ನು ಅರ್ಥಮಾಡಿಕೊಳ್ಳಲೂ ಸಹ ಒಡಂಬಡಿಕೆಯ ಭಾಗವನ್ನು ಅರ್ಥಮಾಡಿಕೊಳ್ಳುವುದು ಅವಶ್ಯವಾಗಿದೆ, ಯಾಕೆಂದರೆ ಅವರ ಮುಖ್ಯ ಪಾತ್ರಗಳಲ್ಲಿ ಒಂದು ಒಡಂಬಡಿಕೆಯನ್ನು ಜಾರಿಗೊಳಿಸುವುದಾಗಿತ್ತು.

ಧರ್ಮಶಾಸ್ತ್ರದಲ್ಲಿ ಷರತ್ತುಗಳ (ಆಜ್ಞೆಗಳ) ಮೂರು ಮುಖ್ಯ ವರ್ಗಗಳಿವೆ:

1. ಸಾಮಾಜಿಕ ಕಾನೂನುಗಳು: ಸಮಾಜದ ದೈನಂದಿನ ಜೀವನದ ಕುರಿತು ಕೊಡಲಾಗಿರುವ ಆಜ್ಞೆಗಳು.
2. ಆಚಾರಗಳ ಆಜ್ಞೆಗಳು: ಧಾರ್ಮಿಕ ಶುದ್ಧತೆ ಮತ್ತು (ಯಜ್ಞಬಲಿಗಳನ್ನು ಒಳಗೊಂಡು) ದೇವಾಲಯದ ಆಚರಣೆಗಳ ಕುರಿತು ಕೊಡಲಾಗಿರುವ ಆಜ್ಞೆಗಳು.
3. ನೈತಿಕ ಕಾನೂನುಗಳು: ನೈತಿಕವಾಗಿ ಯಾವುದು ಸರಿ ಮತ್ತು ಯಾವುದು ತಪ್ಪು ಎಂಬುದರ ಕುರಿತು ಕೊಡಲಾಗಿರುವ ಆಜ್ಞೆಗಳು.

**ಪ್ರಶ್ನೆ 4**

ಧರ್ಮಶಾಸ್ತ್ರವು ಒಡಂಬಡಿಕೆ ಆಧರಿತವಾಗಿದೆ ಎಂದು ನಾವು ತಿಳಿದುಕೊಳ್ಳಬೇಕು ಎಂದು ಹೇಳುವಾಗ ಅದು ಇಂದು ನಮ್ಮ ಮೇಲೆ ಯಾವ ಅನ್ವಯಗಳನ್ನು ತರುತ್ತದೆ?

**ಮಾರ್ಗಸೂಚಿ 2: ಹಳೆಯ ಒಡಂಬಡಿಕೆಯು ನಮ್ಮ ಒಡಂಬಡಿಕೆಯಲ್ಲ**

ಇಂದಿನ ಕ್ರೈಸ್ತರಾದ ನಾವು ಹಳೆಯ ಒಡಂಬಡಿಕೆಗೆ ಸಂಬಂಧಪಡದೆ ಯೇಸುವಿನ ರಕ್ತದಲ್ಲಿ ಹೊಸ ಒಡಂಬಡಿಕೆಗೆ ಸಂಬಂಧಪಟ್ಟಿದ್ದೇವೆ (ಲೂಕ 22:20). ಅದರ ಪರಿಣಾಮವಾಗಿ, ಹಳೆಯ ಒಡಂಬಡಿಕೆಯ ಯಾವುದೇ ಷರತ್ತುಗಳು (ಆಜ್ಞೆಗಳು) ನಮ್ಮ ಮೇಲೆ ಹೊರಿಸಲ್ಪಟ್ಟಿಲ್ಲ – ಹೊಸದಾದ ಒಡಂಬಡಿಕೆಯಲ್ಲಿ ನವೀಕರಿಸಲ್ಪಟ್ಟ ಷರತ್ತುಗಳನ್ನು *ಹೊರತುಪಡಿಸಿ*. ಹಾಗಾಗಿ ಇಂದು ಧರ್ಮಶಾಸ್ತ್ರವು ದೇವಜನರಿಗೆ ಯಾವ ರೀತಿಯಲ್ಲಿ ಅನ್ವಯಿಸುತ್ತದೆ ಎಂಬುದನ್ನು ಹೊಸದಾದ ಒಡಂಬಡಿಕೆಯಲ್ಲಿ ಕಂಡುಕೊಳ್ಳಬೇಕು.

ಇಂದಿನ ಕ್ರೈಸ್ತ ವಿಶ್ವಾಸಿಗಳಾದ ನಾವು ನಿಶ್ಚಯವಾಗಲೂ ಕರ್ತನಿಗೆ ನಿಷ್ಠಾವಂತರಾಗಿ ನಡೆದುಕೊಳ್ಳಲು ಕರೆಯಲ್ಪಟ್ಟಿದ್ದೇವೆ. ಆದರೆ ಈಗ ಬದಲಾಗಿರುವ ಸಂಗತಿಯೇನೆಂದರೆ, ಹೊಸದಾದ ಒಡಂಬಡಿಕೆಗೆ ಸಂಬಂಧಪಟ್ಟವರಾದ ನಾವು *ಹೇಗೆ* ನಮ್ಮ ನಿಷ್ಠೆಯನ್ನು ಆತನಿಗೆ ತೋರಿಸಬೇಕೆಂಬುದು.

**ಮಾರ್ಗಸೂಚಿ 3. ಎರಡು ರೀತಿಯ ಹಳೆಯ ಒಡಂಬಡಿಕೆಯ ಷರತ್ತುಗಳು ಸ್ಪಷ್ಟವಾಗಿ ಹೊಸದಾದ ಒಡಂಬಡಿಕೆಯಲ್ಲಿ ನವೀಕರಿಸಲ್ಪಟ್ಟಿಲ್ಲ**

ಮೇಲೆ ತಿಳಿಸಿರುವ ಷರತ್ತುಗಳ ಮೊದಲ ಎರಡು ವರ್ಗಗಳು ಸ್ಪಷ್ಟವಾಗಿ ಹೊಸದಾದ ಒಡಂಬಡಿಕೆಯಲ್ಲಿ ನವೀಕರಿಸಲ್ಪಟ್ಟಿಲ್ಲ:

1. ಇಸ್ರಾಯೇಲರ *ಸಾಮಾಜಿಕ ಕಾನೂನುಗಳು* ಸಮಾಜದ ದೈನಂದಿನ ಜೀವನವನ್ನು ರೂಪಿಸಿದ ಆಜ್ಞೆಗಳಾಗಿದ್ದವು. ಈ ಆಜ್ಞೆಗಳು ಆ ದಿನಗಳಲ್ಲಿ ಜೀವಿಸಿದ ಇಸ್ರಾಯೇಲರಿಗೆ ಮಾತ್ರ ಅನ್ವಯವಾಗಿದ್ದವು. ಇಂದು ಜೀವಿಸುತ್ತಿರುವ ಯಾವ ವ್ಯಕ್ತಿಯೂ ಸಹ ಪ್ರಾಚೀನ ಇಸ್ರಾಯೇಲಿನ ಪ್ರಜೆಯಲ್ಲವಾದ್ದರಿಂದ ಈ ಆಜ್ಞೆಗಳು ಇಂದು ಯಾರಿಗೂ ಅನ್ವಯವಾಗುವುದಿಲ್ಲ.

2. ಇಸ್ರಾಯೇಲರ *ಆಚಾರಗಳ ಆಜ್ಞೆಗಳು* ಧಾರ್ಮಿಕ ಶುದ್ಧತೆ ಮತ್ತು (ಯಜ್ಞಬಲಿಗಳನ್ನು ಒಳಗೊಂಡು) ದೇವಾಲಯದ ಆಚರಣೆಗಳನ್ನು ಹೇಗೆ ನಡೆಸಬೇಕೆಂದು ಜನರಿಗೆ ತಿಳಿಸಿತು. ಈ ಧಾರ್ಮಿಕ ಶುದ್ಧಾಚಾರಗಳು ಯೇಸು ಕಲ್ವಾರಿ ಕ್ರೂಜೆಯ ಮೇಲೆ ತನ್ನನ್ನು ಶಾಶ್ವತವಾದ ಬಲಿಯಾಗಿ ಅರ್ಪಿಸಿದಾಗ ಕೊನೆಗೊಂಡವು. ಹಾಗಾಗಿ ಈ ಆಜ್ಞೆಗಳು ಇಂದು ಯಾರಿಗೂ ಸಮಂಜಸವಾಗಿಲ್ಲ.

ಹಾಗಾದರೆ ನಾವು ಯೇಸುವಿನ ಈ ಮಾತುಗಳನ್ನು ಹೇಗೆ ಅರ್ಥಮಾಡಿಕೊಳ್ಳುವುದು: *ಧರ್ಮಶಾಸ್ತ್ರದ ಒಂದು ಚುಕ್ಕೆಯು ಬಿದ್ದು ಹೋಗುವುದಕ್ಕಿಂತ ಆಕಾಶವೂ ಭೂಮಿಯೂ ಅಳಿದು ಹೋಗುವುದು ಸುಲಭ* (ಲೂಕ 16:18)? ಪ್ರತಿಯೊಂದು ಆಜ್ಞೆಯೂ ಈಗಲೂ ಸಹ ಮಾನ್ಯತೆಯನ್ನು ಹೊಂದಿದೆ ಎಂಬುದು ಇದರ ಅರ್ಥವಲ್ಲವೇ? ಉತ್ತರ: ಇಲ್ಲ! ಯೇಸು ಹಾಗೆ ಹೇಳಲಿಲ್ಲ. ಧರ್ಮಶಾಸ್ತ್ರವು ಬದಲಾಗದು ಎಂಬುದು ಆತನು ಹೇಳಿದ್ದರ ಅರ್ಥವಾಗಿತ್ತು. ಯೇಸು ಕ್ರೂಜೆಯ ಮೇಲೆ ಮರಣವನ್ನು ಅನುಭವಿಸಿದಾಗ ಧರ್ಮಶಾಸ್ತ್ರವನ್ನು ಬದಲಾಯಿಸಲಿಲ್ಲ. ಆತನು ಧರ್ಮಶಾಸ್ತ್ರದ ಉದ್ದೇಶವನ್ನು ನೆರವೇರಿಸಿದನು. ಆತನು ಹಾಗೆ ಮಾಡುವುದರ ಮೂಲಕ ಅದರ ಕಾಲವನ್ನು ಅಂತ್ಯಗೊಳಿಸಿದನು. ಧರ್ಮಶಾಸ್ತ್ರದ ಈ ನೆರವೇರುವಿಕೆಯನ್ನು ಯೇಸು 'ಒಂದು ಹೊಸ ಆಜ್ಞೆ' (ಅಂದರೆ ಪ್ರೀತಿಯೆಂಬ ಆಜ್ಞೆ) ಎಂದು ಕರೆದನು: *ನಾನು ನಿಮಗೊಂದು ಹೊಸ ಆಜ್ಞೆಯನ್ನು ಕೊಡುತ್ತೇನೆ: ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು. ನಾನು ನಿಮ್ಮನ್ನು ಪ್ರೀತಿಸಿದ ಹಾಗೆಯೇ ನೀವೂ ಒಬ್ಬರನ್ನೊಬ್ಬರು ಪ್ರೀತಿಸಬೇಕು* (ಯೋಹಾನ 13:34).

**ಪ್ರಶ್ನೆ 5**

ಯಾಕೆ ಪ್ರಾಚೀನ ಇಸ್ರಾಯೇಲಿನ ಸಾಮಾಜಿಕ ಹಾಗೂ ಸಾಂಪ್ರದಾಯಿಕ ಆಜ್ಞೆಗಳು ದೇವಜನರಿಗೆ ಅನ್ವಯಿಸುವುದಿಲ್ಲ ಎಂಬುದನ್ನು ವಿವರಿಸಿರಿ.

**ಮಾರ್ಗಸೂಚಿ 4. ಹಳೆಯ ಒಡಂಬಡಿಕೆಯ ಒಂದು ಭಾಗವು ಹೊಸದಾದ ಒಡಂಬಡಿಕೆಯಲ್ಲಿ ನವೀಕರಿಸಲ್ಪಟ್ಟಿದೆ**

ಆದರೆ ಧರ್ಮಶಾಸ್ತ್ರದ ಮೂರನೆಯ ವಿಭಾಗದ ಕೆಲವು ಕ್ಷೇತ್ರಗಳು – ಅಂದರೆ ಹಳೆಯ ಒಡಂಬಡಿಕೆ ನೈತಿಕ ಕಾನೂನುಗಳು – ಇಂದಿನ ದೇವಜನರಿಗೂ ಅನ್ವಯಿಸುತ್ತದೆ. ಯಾಕೆಂದರೆ ಹೊಸದಾದ ಒಡಂಬಡಿಕೆಯ ಎರಡು ಮೂಲ ಆಜ್ಞೆಗಳನ್ನು ಬೆಂಬಲಿಸಲು ಹೊಸ ಒಡಂಬಡಿಕೆಯು ಅವುಗಳನ್ನು ಬಳಸುತ್ತದೆ (ಮತ್ತು ಧರ್ಮಶಾಸ್ತ್ರವು ಹಾಗೂ ಪ್ರವಾದಿಗಳ ಗ್ರಂಥಗಳು ಅದನ್ನು ಆಧರಿಸಿವೆ). ಆ ಎರಡು ಮೂಲ ಆಜ್ಞೆಗಳು ಯಾವವೆಂದರೆ:

1. ದೇವರನ್ನು ಪ್ರೀತಿಸುವುದು

2. ನೆರೆಯವನನ್ನು ಪ್ರೀತಿಸುವುದು

ಒಮ್ಮೆ ಧರ್ಮಶಾಸ್ತ್ರ ಪಂಡಿತನಾದ ಒಬ್ಬ ಫರಿಸಾಯನು ಯೇಸುವನ್ನು ಪರೀಕ್ಷಿಸಲು ಒಂದು ಕಠಿಣವಾದ ಪ್ರಶ್ನೆಯನ್ನು ಕೇಳಿದನು: *ಬೋಧಕನೇ, ಧರ್ಮಶಾಸ್ತ್ರದಲ್ಲಿ ಮಹಾ ಆಜ್ಞೆ ಯಾವುದು? ಎಂದು ಪ್ರಶ್ನಿಸಿದನು. ಯೇಸು ಅವನಿಗೆ, 'ನೀನು ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ಪೂರ್ಣಪ್ರಾಣದಿಂದಲೂ ಪೂರ್ಣಮನಸ್ಸಿನಿಂದಲೂ ಪ್ರೀತಿಸಬೇಕು. ಇದೇ ಮಹಾ ಆಜ್ಞೆಯೂ ಮೊದಲ ಆಜ್ಞೆಯೂ ಆಗಿದೆ. ಇದರಂತೆಯೇ ಇರುವ ಎರಡನೆಯ ಆಜ್ಞೆಯು, 'ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು' ಎಂಬುದೇ. 'ಇಡೀ ಧರ್ಮಶಾಸ್ತ್ರವೂ ಪ್ರವಾದಿಗಳ ಗ್ರಂಥಗಳೂ ಈ ಎರಡು ಆಜ್ಞೆಗಳ ಮೇಲೆ ಆಧಾರಗೊಂಡಿವೆ' ಎಂದನು* (ಮತ್ತಾಯ 22:36–40). ಯೇಸು ತನ್ನ ಪ್ರತ್ಯುತ್ತರದಲ್ಲಿ ಪಂಚಕಾಂಡದ ಎರಡು ಪದಗಳನ್ನು ಸೇರಿಸಿದನು (ಧರ್ಮೋ. 6:5 ಮತ್ತು ಯಾಜಕ. 19:18) ಮತ್ತು ಹಳೆಯ ಒಡಂಬಡಿಕೆಯ ಸಮಗ್ರ (600 ಕ್ಕಿಂತಲೂ ಹೆಚ್ಚಿನ) ಆಜ್ಞೆಗಳು ಈ ಎರಡು ಆಜ್ಞೆಗಳ ಮೇಲೆ ಆಧರಿತವಾಗಿವೆ ಎಂದು ಘೋಷಿಸಿದನು.

**ಮಾರ್ಗಸೂಚಿ 5. ಹಳೆಯ ಒಡಂಬಡಿಕೆಯ ಎಲ್ಲಾ ಆಜ್ಞೆಗಳು ಈಗ ನಮಗೆ ದೇವರು ನೀಡಿರುವ ಆಜ್ಞೆಗಳಾಗಿರದಿದ್ದಾಗ್ಯೂ ಅದು ನಮಗೆ ದೇವರ ವಾಕ್ಯವಾಗಿದೆ**

ನಾವು ತಿಳಿದುಕೊಳ್ಳಬೇಕೆಂದು ದೇವರು ಬಯಸುವ ಅನೇಕ ರೀತಿಯ ಆಜ್ಞೆಗಳನ್ನು ಸತ್ಯವೇದವು ಹೊಂದಿದೆ. ಅವುಗಳು ದೇವರ ಗುಣವನ್ನು (ಆತನ ಪರಿಶುದ್ಧತೆ, ಪ್ರೀತಿ, ಕಾಳಜಿಯನ್ನು) ವ್ಯಕ್ತಪಡಿಸುತ್ತವೆ ಮತ್ತು ದೇವರು ತನ್ನ ಜನರಿಂದ ಬಯಸುವ ವಿಷಯವನ್ನೂ

ಸಹ ಅವುಗಳು ವ್ಯಕ್ತಪಡಿಸುತ್ತವೆ. ಹಾಗಾಗಿ ಈ ಆಜ್ಞೆಗಳು ದೇವರ ವಾಕ್ಯವನ್ನು ಹೊಂದಿದೆ ಮತ್ತು ಆ ಅರ್ಥದಲ್ಲಿ ಮಾತನಾಡುವಾಗ ಇಂದಿಗೂ ಸಹ ಅದು ನಮಗೆ ದೇವರ ವಾಕ್ಯವಾಗಿದೆ. ಆದರೆ ಆ ಆಜ್ಞೆಗಳು ಆ ಕಾಲದಲ್ಲಿ ಜೀವಿಸಿದ ಇಸ್ರಾಯೇಲರಿಗಾಗಿ ಕೊಡಲ್ಪಟ್ಟಿದ್ದವು. ಅವರು ದೇವರ ಹಳೆಯ ಒಡಂಬಡಿಕೆಗೆ ಸೇರಿದ ಜನರಾಗಿದ್ದರು. ಆ ಆಜ್ಞೆಗಳು ಈಗಿನ ಕ್ರೈಸ್ತ ವಿಶ್ವಾಸಿಗಳಿಗೆ ಕೊಡಲ್ಪಟ್ಟಿಲ್ಲ.

ನಾವು ಒಂದು ಉದಾಹರಣೆಯನ್ನು ನೋಡೋಣ. ಧರ್ಮೋ. 22:8 ರಲ್ಲಿ ಒಂದು ಮನೆಯನ್ನು ಹೇಗೆ ಕಟ್ಟಬೇಕೆಂಬ ಒಂದು ಆಜ್ಞೆಯಿದೆ: ನೀನು ಹೊಸ ಮನೆಯನ್ನು ಕಟ್ಟಿದಾಗ ಯಾರೂ ಅದರ ಮೇಲಿನಿಂದ ಬಿದ್ದು ನಿನ್ನ ಮನೆಗೆ ರಕ್ತಾಪರಾಧ ಹೊರಿಸದ ಹಾಗೆ ನಿನ್ನ ಮಾಳಿಗೆಗೆ ಕಟಾಂಜನ ಕಟ್ಟಬೇಕು. ಇದು ಪ್ರಾಚೀನ ಇಸ್ರಾಯೇಲಿನಲ್ಲಿ ಮನೆಕಟ್ಟುವವನಿಗೆ ಕೊಡಲಾದ ಆಜ್ಞೆಯಾಗಿತ್ತು. ಆ ಕಾಲದಲ್ಲಿ ದೈನಂದಿನ ಬಳಕೆಗಾಗಿ ಮೇಲ್ಛಾವಣಿಯು ಸಮತಟ್ಟಾಗಿರುತ್ತಿತ್ತು. ಹಾಗಾಗಿ ಸುರಕ್ಷತೆಯ ಸಲುವಾಗಿ ಅವರು ನ್ನು ಕಟ್ಟಬೇಕಾಗಿತ್ತು. ಜನರ ಸುರಕ್ಷತೆಯ ಕುರಿತು ದೇವರು ಹೊಂದಿದ್ದ ಕಾಳಜಿಯನ್ನು ಈ ಆಜ್ಞೆಯು ವ್ಯಕ್ತಪಡಿಸುತ್ತದೆ. ಆದರೆ ಮಾಳಿಗೆಯನ್ನೇ ಬಳಸದ ದೇಶಗಳಲ್ಲಿ ಇದು ಒಂದು ಆಜ್ಞೆಯಾಗಿರುವುದಿಲ್ಲ. ಆದರೂ ಆ ಆಜ್ಞೆಯು ಅವರಿಗೆ ದೇವರ ವಾಕ್ಯವಾಗಿದೆ. ಹೇಗೆ? ಮನೆಕಟ್ಟಿಸುವ ಪ್ರತಿಯೊಬ್ಬ ವ್ಯಕ್ತಿಯೂ ಯಾವ ದೇಶದವನಾದರೂ ಸರಿ ಜನರ ಸುರಕ್ಷತೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಕಟ್ಟಡ ಕಟ್ಟಬೇಕೆಂದು ದೇವರು ಬಯಸುತ್ತಾನೆ. ಕಟ್ಟಲ್ಪಟ್ಟ ಮನೆಯು ಕುಸಿದು ಬೀಳಬಾರದು. ಆ ಕಟ್ಟದಿಂದ ಯಾವುದೇ ವಿದ್ಯುತ್ ಅವಘಡ ಸಂಭವಿಸಬಾರದು. ಆ ಕಟ್ಟದಿಂದ ಇನ್ನೊಬ್ಬರ ಪ್ರಾಣಹಾನಿಯಾಗಬಾರದು.. ಇತ್ಯಾದಿ.

**ಪ್ರಶ್ನೆ 6**

ಧರ್ಮೋ. 22:8 ಈಗಲೂ ಸಹ ನಮಗೆ (ದೇವರು ನೀಡಿರುವ ಆಜ್ಞೆಯಾಗಿರದಿದ್ದಾಗ್ಯೂ) ಯಾಕೆ ದೇವರ ವಾಕ್ಯವಾಗಿದೆ ಎಂಬುದನ್ನು ವಿವರಿಸಿರಿ.

**ಮಾರ್ಗಸೂಚಿ 6. ಹಳೆಯ ಒಡಂಬಡಿಕೆಯಿಂದ ಸ್ಪಷ್ಟವಾಗಿ ನವೀಕರಿಸಲಾದ ಆಜ್ಞೆಗಳನ್ನು ಮಾತ್ರ ಹೊಸ ಒಡಂಬಡಿಕೆಯ 'ಕ್ರಿಸ್ತನ ಆಜ್ಞೆಯ' ಭಾಗವೆಂದು ಪರಿಗಣಿಸಲ್ಪಡಬಹುದು**

ಡಗ್ಲಸ್ ಸ್ಟುವರ್ಟ್ ಅಂತಹ ಆಜ್ಞೆಗಳ ಎರಡು ಉದಾಹರಣೆಗಳನ್ನು ನೀಡುತ್ತಾರೆ:

1. ದಶಾಜ್ಞೆಗಳು: ಇವುಗಳನ್ನು ಹೊಸ ಒಡಂಬಡಿಕೆಯಲ್ಲಿ ಅನೇಕ ಬಾರಿ ಉಲ್ಲೇಖಿಸಲಾಗಿದೆ, ಉದಾಹರಣೆಗೆ ಪರ್ವತ ಪ್ರಸಂಗದಲ್ಲಿ (ಮತ್ತಾಯ 5:21–31, *ಕೊಲೆ ಮಾಡಬಾರದು, ವ್ಯಭಿಚಾರ ಮಾಡಬಾರದು* ಎಂಬುದರ ಕುರಿತು) ಮತ್ತು ಯೋಹಾನ 7:23 ರಲ್ಲಿ (ಸಬ್ಬತ್ ದಿನವನ್ನು ಆಚರಿಸುವುದರ ಕುರಿತು) ಯೇಸುವಿನಿಂದ ಉಲ್ಲೇಖಿಸಲಾಗಿದೆ.

2. ಧರ್ಮೋ. 6:5 ಮತ್ತು ಯಾಜಕ. 19:18 ರಲ್ಲಿರುವ ಎರಡು ದೊಡ್ಡ ಆಜ್ಞೆಗಳು: ಮೇಲಿರುವ ಮಾರ್ಗಸೂಚಿ 4 ನ್ನು ನೋಡಿರಿ.

ಇತರೆ ಯಾವ ಹಳೆಯ ಒಡಂಬಡಿಕೆ ಆಜ್ಞೆಗಳು ಕ್ರೈಸ್ತರ ಮೇಲೆ ಕಡ್ಡಾಯವಾಗಿ ಹೊರಿಸಲ್ಪಟ್ಟಿಲ್ಲ.

**ಪ್ರಶ್ನೆ 7**

ಇಂದಿನ ಕ್ರೈಸ್ತ ವಿಶ್ವಾಸಿಗಳಿಗೂ ಸಹ ದಶಾಜ್ಞೆಗಳು ಮತ್ತು ಹಳೆಯ ಒಡಂಬಡಿಕೆಎರಡು ದೊಡ್ಡ ಆಜ್ಞೆಗಳು ಯಾಕೆ ದೇವರ ಆಜ್ಞೆಗಳಾಗಿವೆ?

**ಇಸ್ರಾಯೇಲಿನಲ್ಲಿ ಮತ್ತು ಸತ್ಯವೇದದಲ್ಲಿ ಧರ್ಮಶಾಸ್ತ್ರದ ಪಾತ್ರ**

ಹಳೆಯ ಒಡಂಬಡಿಕೆಯ ಆಜ್ಞೆಗಳು ನಮಗೆ ನೀಡಲ್ಪಟ್ಟ ಆಜ್ಞೆಗಳಲ್ಲ ಎಂಬುದನ್ನು ನಾವು ಈಗಾಗಲೇ ಸ್ಪಷ್ಟಪಡಿಸಿದ್ದೇವೆ. ಆದಾಗ್ಯೂ ಅದು ಇಂದಿಗೂ ಸತ್ಯವೇದದ ಒಂದು ಮೌಲ್ಯಯುತ ಭಾಗವಾಗಿದೆ. ಅದು ಎರಡು ರೀತಿಯಲ್ಲಿ ಮೌಲ್ಯತೆಯುಳ್ಳದ್ದಾಗಿದೆ:

1. ಹಳೆ ಒಡಂಬಡಿಕೆಯ ಧರ್ಮಶಾಸ್ತ್ರವು ರಕ್ಷಣೆಯ ಇತಿಹಾಸದಲ್ಲಿ ತನ್ನದೊಂದು ಕಾರ್ಯವನ್ನು ನಿರ್ವಹಿಸುತ್ತದೆ. ಅದು ನಮ್ಮನ್ನು ಕ್ರಿಸ್ತನ ಕಡೆಗೆ ನಡೆಸುತ್ತದೆ. ಪೌಲನು ಅದನ್ನು ಈ ಮಾತುಗಳಲ್ಲಿ ಹೇಳುತ್ತಾನೆ: *ಆದರೆ ನಂಬಿಕೆ ಬರುವುದಕ್ಕೆ ಮೊದಲು ಪ್ರಕಟವಾಗಲಿರುವ ನಂಬಿಕೆಗೆ ಮುಚ್ಚಲ್ಪಟ್ಟವರಾಗಿ ನಾವು ಧರ್ಮಶಾಸ್ತ್ರದ ಅಧೀನದಲ್ಲಿ ಕಾಯಲ್ಪಟ್ಟೆವು. ನಾವು ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಡುವುದಕ್ಕಾಗಿ ಧರ್ಮಶಾಸ್ತ್ರವು ನಮ್ಮನ್ನು ಕ್ರಿಸ್ತನ ಬಳಿಗೆ ತರುವಂತೆ ನಮ್ಮ ಉಪಾಧ್ಯಾಯನಂತಿತ್ತು. ಆದರೆ ನಂಬಿಕೆಯು ಬಂದಿರುವುದರಿಂದ ಇನ್ನೆಂದಿಗೂ ನಾವು ಧರ್ಮಶಾಸ್ತ್ರದ ವಿಚಾರಣೆಯ ಅಡಿಯಲ್ಲಿರುವುದಿಲ್ಲ* (ಗಲಾತ್ಯ. 3:23–25).

2. ಇಸ್ರಾಯೇಲರು ಹೇಗೆ ದೇವರ ಜನರಾಗಿದ್ದರು ಎಂಬುದನ್ನು ನಾವು ಅರ್ಥಮಾಡಿಕೊಳ್ಳಲು ಹಳೆ ಒಡಂಬಡಿಕೆಯ ಧರ್ಮಶಾಸ್ತ್ರವು ನಮಗೆ ಸಹಾಯ ಮಾಡುತ್ತದೆ. ಧರ್ಮಶಾಸ್ತ್ರವು ದೇವರು ಇಸ್ರಾಯೇಲರಿಗೆ ಕೊಟ್ಟ ವರವಾಗಿತ್ತು. ಅವರ ವಿಗ್ರಹಾರಾಧಕ ನೆರೆರಾಷ್ಟ್ರಗಳಿಂದ ಇಸ್ರಾಯೇಲರನ್ನು ದೇವರು ಅದರ ಮೂಲಕ ಪ್ರತ್ಯೇಕಿಸಿದನು. ದೇವರು ತನ್ನ ಜನರನ್ನು ರಕ್ಷಿಸಲು ಧರ್ಮಶಾಸ್ತ್ರವನ್ನು ಒಂದು ವಿಧಾನವಾಗಿ ಬಳಸಲಿಲ್ಲ. ಹಳೆ ಒಡಂಬಡಿಕೆಯಲ್ಲಿ ಎಲ್ಲಿಯೂ ಸಹ ಒಬ್ಬ ವ್ಯಕ್ತಿಯು ಧರ್ಮಶಾಸ್ತ್ರವನ್ನು ಪಾಲಿಸುವುದರ ಮೂಲಕ ರಕ್ಷಣೆ ಹೊಂದಿದನು ಎಂಬುದರ ಕುರಿತು ಬರೆಯಲ್ಪಟ್ಟಿಲ್ಲ. ಅವರು ತಮ್ಮ ಕರ್ತನಾದ ಯೆಹೋವನನ್ನು ಹೇಗೆ ಪ್ರೀತಿಸಬೇಕು ಮತ್ತು ಒಬ್ಬರನ್ನೊಬ್ಬರು ಹೇಗೆ ಪ್ರೀತಿಸಬೇಕು ಎಂಬುದನ್ನು ಅವರಿಗೆ ತಿಳಿಸಿಕೊಡುವುದೇ ಧರ್ಮಶಾಸ್ತ್ರದ

ಕಾರ್ಯವಾಗಿತ್ತು. ಇದೇ ಕಾರಣದಿಂದಾಗಿ ಹಳೆ ಒಡಂಬಡಿಕೆಯಲ್ಲಿನ ನೀತಿವಂತರು ದೇವರ ಧರ್ಮಶಾಸ್ತ್ರದಲ್ಲಿ ಸಂತೋಷಿಸಿದರು (ಉದಾ. ಕೀರ್ತನೆ 19 ಮತ್ತು ಕೀರ್ತನೆ 119 ನ್ನು ನೋಡಿರಿ).

ಹಳೆ ಒಡಂಬಡಿಕೆಯಲ್ಲಿ ಇಸ್ರಾಯೇಲರಿಗಿದ್ದ ಸಮಸ್ಯೆಯು ಅವರು ಧರ್ಮಶಾಸ್ತ್ರವನ್ನು ಪಾಲಿಸಲು ಸಾಧ್ಯವಾಗಲಿಲ್ಲ ಎಂಬುದಲ್ಲ. ಅವರಿಗಿದ್ದ ಸಮಸ್ಯೆಯು ಅವರು ಅದನ್ನು ಪಾಲಿಸಲು ಬಯಸಲಿಲ್ಲ ಎಂಬುದಾಗಿದೆ. ಅವಿಧೇಯತೆಯೇ ಅವರಿಗಿದ್ದ ಸಮಸ್ಯೆಯಾಗಿತ್ತು. ಪ್ರಾಚೀನ ಇಸ್ರಾಯೇಲರ ಇತಿಹಾಸವು ನಿಜವಾಗಲೂ ಒಂದು ದುಃಖಕರವಾದ ಕಥೆಯಾಗಿದ್ದು ಅವರು ಪದೇ ಪದೇ ಯೆಹೋವನು ಅವರೊಂದಿಗೆ ಮಾಡಿಕೊಂಡಿದ್ದ ಒಡಂಬಡಿಕೆಗೆ ಹೇಗೆ ನಂಬಿಗಸ್ತರಾಗಿರಲಿಲ್ಲ ಎಂಬುದನ್ನು ಹೇಳುತ್ತದೆ. ಅದಕ್ಕೆ ಬದಲಾಗಿ ಅವರು ತಮ್ಮ ವಿಗ್ರಹಾರಾಧಕ ನೆರೆರಾಷ್ಟ್ರಗಳ ದೇವರುಗಳ ಕಡೆಗೆ ತಿರುಗಿಕೊಂಡರು:

*ರಾಷ್ಟ್ರಗಳ ದೇವರುಗಳು ಬೆಳ್ಳಿ ಬಂಗಾರದವುಗಳು,*

*ಅವು ಜನರ ಕೈಯಿಂದ ಮಾಡಲ್ಪಟ್ಟಿವೆ.*

*ಅವುಗಳಿಗೆ ಬಾಯಿಯಿದೆ, ಮಾತನಾಡುವುದಿಲ್ಲ.*

*ಕಣ್ಣುಗಳಿವೆ, ನೋಡುವುದಿಲ್ಲ.*

*ಕಿವಿಗಳಿವೆ, ಕೇಳಿಸಿಕೊಳ್ಳುವುದಿಲ್ಲ,*

*ಅವುಗಳ ಬಾಯಲ್ಲಿ ಶ್ವಾಸವೇ ಇಲ್ಲ.*

*ಅವುಗಳನ್ನು ಮಾಡುವವರು ಅವುಗಳಂತೆಯೇ ಇದ್ದಾರೆ.*

*ಅವುಗಳಲ್ಲಿ ನಂಬಿಕೆಯಿಡುವವರೂ ಹಾಗೆಯೇ ಇರುವರು.*

(ಕೀರ್ತನೆ 135:15–18)

ಕಾನಾನ್ಯರ ಬಾಳ್ ದೇವರುಗಳು ದುರಾಶೆ, ಚಪಲಚಿತ್ತತೆ ಮತ್ತು ಲೈಂಗಿಕ ಅನೈತಿಕಯಿಂದ ತುಂಬಿದ್ದವು ಮತ್ತು ಈ ದೇವರುಗಳನ್ನು ಹಿಂಬಾಲಿಸಿದ ಇಸ್ರಾಯೇಲರು ಅವುಗಳಂತೆಯೇ ಆದರು.

ಹಾಗಾಗಿ ಇಸ್ರಾಯೇಲರ ನಡುವೆ ಧರ್ಮಶಾಸ್ತ್ರದ ಪಾತ್ರವು ಮೂರು ತ್ರಿಗುಣವಾಗಿತ್ತು:

1. ಅದು ದೇವರ ಗುಣವನ್ನು ಪ್ರಕಟಪಡಿಸಿತು.
2. ಇಸ್ರಾಯೇಲರು ದೇವರನ್ನು ಹೇಗೆ ಆರಾಧಿಸಬೇಕೆಂದು ಅದು ತೋರಿಸಿತು.
3. ಮತ್ತು ಅವರು ಪರಸ್ಪರ ಪ್ರೀತಿಯುಳ್ಳ ಸಂಬಂಧದಲ್ಲಿ ಹೇಗೆ ಜೀವಿಸಬೇಕೆಂದು ಅದು ತೋರಿಸಿತು.

ದೇವರ ಜನರು ಹಳೆಯ ಒಡಂಬಡಿಕೆಯನ್ನು ಪಾಲಿಸಲು ಬಯಸಲಿಲ್ಲ. ದೇವರು ಅವರಿಗೆ ಒಂದು ಹೊಸ ಒಡಂಬಡಿಕೆಯನ್ನು ವಾಗ್ದಾನ ಮಾಡುವ ಮೂಲಕ ಅದಕ್ಕೆ ಪರಿಹಾರವನ್ನು ಒದಗಿಸಿದನು:

*ಇಗೋ, ನಾನು ಇಸ್ರಾಯೇಲಿನ ಮನೆತನದವರ ಸಂಗಡಲೂ*

*ಯೆಹೂದದ ಮನೆತನದವರ ಸಂಗಡಲೂ*

*ಹೊಸ ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು*

*ಬರುವವೆಂದು ಕರ್ತನು ಅನ್ನುತ್ತಾನೆ* (ಯೆರೆ. 31:31).

*ನಾನು ನಿಮ್ಮನ್ನು ಅನ್ಯಜನಾಂಗಗಳ ಮಧ್ಯದಿಂದ ತೆಗೆದು ಎಲ್ಲಾ ದೇಶಗಳೊಳಗಿಂದ ಕೂಡಿಸಿ ನಿಮ್ಮ ನಿಮ್ಮ ಸ್ವಂತ ದೇಶಗಳಲ್ಲಿ ಸೇರಿಸುವೆನು. ಆಮೇಲೆ ನಾನು ನಿಮ್ಮ ಮೇಲೆ ಶುದ್ಧವಾದ ನೀರನ್ನು ಚಿಮುಕಿಸುತ್ತೇನೆ ಮತ್ತು ನೀವು ಶುದ್ಧರಾಗುವಿರಿ; ಅಶುದ್ಧತ್ವಗಳಿಂದಲೂ ನಿಮ್ಮ ಎಲ್ಲಾ ವಿಗ್ರಹಗಳಿಂದಲೂ ನಿಮ್ಮನ್ನು ಶುದ್ಧೀಕರಿಸುವೆನು. ನಿನಗೆ ಹೊಸ ಹೃದಯವನ್ನು ಕೊಟ್ಟು ಹೊಸ ಆತ್ಮವನ್ನು ನಿಮ್ಮೊಳಗೆ ಇಡುವೆನು; ನಿಮ್ಮ ದೇಹದಿಂದ ಕಲ್ಲಿನ ಹೃದಯವನ್ನು ಹೊರಗೆ ತೆಗೆದು ನಿಮಗೆ ಮಾಂಸದ ಹೃದಯವನ್ನು ಕೊಡುತ್ತೇನೆ. ನನ್ನ ಆತ್ಮವನ್ನು ನಿಮ್ಮೊಳಗೆ ಇಡುವೆನು; ನೀವು ನನ್ನ ನಿಯಮಗಳಲ್ಲಿ ನಡೆಯುವ ಹಾಗೆ ಮಾಡುವೆನು ಮತ್ತು ನೀವು ನನ್ನ ನ್ಯಾಯವಿಧಿಗಳನ್ನು ಅನುಸರಿಸಿ ನಡೆಯುವಿರಿ. ನಾನು ನಿಮ್ಮ ತಂದೆಗಳಿಗೆ ಕೊಟ್ಟ ದೇಶದಲ್ಲಿ ವಾಸಿಸುವಿರಿ;* (ಯೆಹೆ. 36:24–28).

ಈ ಹೊಸ ಒಡಂಬಡಿಕೆಯು ಪವಿತ್ರಾತ್ಮನ ವರದೊಂದಿಗೆ ಜೊತೆಗೂಡಿರುವುದರಿಂದ ಅದು ಹಳೆಯ ಒಡಂಬಡಿಕೆಗಿಂತ ವ್ಯತ್ಯಾಸವಾದದ್ದಾಗಿದೆ. ಈ ಎರಡು ಒಡಂಬಡಿಕೆಗಳ ನಡುವೆ ಇರುವ ವ್ಯತ್ಯಾಸವನ್ನು ತೋರಿಸಲು ಪೌಲನು ಈ ಪದಗಳನ್ನು ಬಳಸುತ್ತಾನೆ: ಹೊಸ ಒಡಂಬಡಿಕೆಯ ಸೇವಕರಾಗುವಂತೆ ಆತನು ನಮಗೆ ಸಾಮಾರ್ಥ್ಯವನ್ನು ಕೊಟ್ಟಿರುತ್ತಾನೆ, *ಬರಹದ ಮೂಲಕವಾಗಿ ಅಲ್ಲ, ಆತ್ಮನ*

*ಮೂಲಕ* (2 ಕೊರಿ. 3:6). ದೇವರ ಪುತ್ರನ ಹೋಲಿಕೆಗೆ ಸಮಾನರಾಗುವಂತೆ ರೂಪಗಳ್ಳಲು ಪವಿತ್ರಾತ್ಮನು ದೇವಜನರಲ್ಲಿ ಕಾರ್ಯಮಾಡುತ್ತಾನೆ (ರೋಮಾ. 8:29).

ಹಾಗಾಗಿ ಪ್ರಾಚೀನ ಇಸ್ರಾಯೇಲಿನಲ್ಲಿ ಧರ್ಮಶಾಸ್ತ್ರದ ಉದ್ದೇಶವು 'ರಕ್ಷಣೆಯ ಮಾರ್ಗವನ್ನು' ಒದಗಿಸುವುದಾಗಿರಲಿಲ್ಲ. ಬದಲಾಗಿ, ದೇವರ ಹಾಗೂ ಆತನ ಜನರ ನಡುವೆ ನಿಷ್ಠೆಯನ್ನು ಸ್ಥಾಪಿಸುವ ಕಾರ್ಯವನ್ನು ಅದು ಮಾಡಿತು. ಇಸ್ರಾಯೇಲರು ದೇವರೊಂದಿಗೆ ಹೊಂದಿದ್ದ ನಿಷ್ಠೆಯ ಒಪ್ಪಂದದ ಷರತ್ತುಗಳನ್ನು ಅದು ಪ್ರತಿನಿಧಿಸಿತು.

ನೀವು ಕೆಳಗಿರುವ ನಾಲ್ಕು ಪ್ರಶ್ನೆಗಳನ್ನು ಉತ್ತರಿಸಲಿರುವಾಗ ನಿಮ್ಮ ಪಠ್ಯಪುಸ್ತಕವನ್ನಾಗಲಿ ಅಥವಾ ನಿಮ್ಮ ನೋಟ್ ಬುಕ್‌ಗಳನ್ನಾಗಲಿ ನೋಡಬೇಡಿರಿ!

**ಪ್ರಶ್ನೆಗಳು 8–11**

8. ಹಳೆಯ ಒಡಂಬಡಿಕೆಯ ಧರ್ಮಶಾಸ್ತ್ರವು ಇಂದಿನ ಕ್ರೈಸ್ತ ವಿಶ್ವಾಸಿಗಳಾದ ನಮಗೆ ಯಾವ ಎರಡು ರೀತಿಯಲ್ಲಿ ಮೌಲ್ಯತೆಯುಳ್ಳದ್ದಾಗಿದೆ?
9. ಇಸ್ರಾಯೇಲರಿಗೆ ಹಳೆಯ ಒಡಂಬಡಿಕೆಯ ಧರ್ಮಶಾಸ್ತ್ರದ ಉದ್ದೇಶವೇನಾಗಿತ್ತು?
10. ಧರ್ಮಶಾಸ್ತ್ರದ ಕುರಿತು ಪ್ರಾಚೀನ ಇಸ್ರಾಯೇಲರಿಗಿದ್ದ ದೊಡ್ಡ ಸಮಸ್ಯೆಯು ಏನಾಗಿತ್ತು?
11. ಹೊಸದಾದ ಒಡಂಬಡಿಕೆಯ ಮತ್ತು ಹಳೆಯ ಒಡಂಬಡಿಕೆಯ ನಡುವೆ ಇರುವ ಮುಖ್ಯ ವ್ಯತ್ಯಾಸವೇನೆಂದು ದೇವರು ಹೇಳಿದನು?

**ಧರ್ಮಶಾಸ್ತ್ರದ ಎರಡು ಮೂಲ ವಿಧಗಳು**

ಹಳೆಯ ಒಡಂಬಡಿಕೆಯಲ್ಲಿ ಸುಮಾರು 600 ಕ್ಕೂ ಹೆಚ್ಚು ಆಜ್ಞೆಗಳಿದ್ದಾಗ್ಯೂ ಧರ್ಮಶಾಸ್ತ್ರವು ಪ್ರಾಚೀನ ಇಸ್ರಾಯೇಲಿನ ಜೀವನ ಹಾಗೂ ಆರಾಧನೆಯ ಎಲ್ಲಾ ಅಂಶಗಳನ್ನು ಒಳಗೊಂಡಿರಲಿಲ್ಲ. ಯೆಹೋವನಿಗೆ ಒಡಂಬಡಿಕೆಯ ಅಡಿಯಲ್ಲಿ ನಿಷ್ಠೆಯಿಂದಿರುವುದರ ಅರ್ಥವೇನೆಂದು ಕೆಲವು ಉದಾಹರಣೆಗಳನ್ನು ಧರ್ಮಶಾಸ್ತ್ರವು ಕೊಟ್ಟಿತು.

**ಪ್ರಶ್ನೆ 12**

ಹಳೆಯ ಒಡಂಬಡಿಕೆಯಲ್ಲಿ ಸುಮಾರು 600 ಕ್ಕೂ ಹೆಚ್ಚು ಆಜ್ಞೆಗಳಿವೆ. ಭಾರತ ದೇಶದಲ್ಲಿ ಸಾವಿರಾರು ಕಾನೂನುಗಳಿವೆ (ಆಜ್ಞೆಗಳಿವೆ). ಈ ವ್ಯತ್ಯಾಸದ ಹಿಂದಿರುವ ಕಾರಣವನ್ನು ವಿವರಿಸಿರಿ?

ಈ ಹಳೆಯ ಒಡಂಬಡಿಕೆಯ ಆಜ್ಞೆಗಳು ಅಥವಾ ಧರ್ಮಶಾಸ್ತ್ರವು ಎರಡು ಮೂಲ ವಿಧಗಳಲ್ಲಿ ವ್ಯಕ್ತವಾಗಿವೆ:

ಮೊದಲ ವಿಧವು 'ಮಾಡಬೇಕು' ಅಥವಾ 'ಮಾಡಬೇಡ' ಎಂಬದನ್ನು ಒಳಗೊಂಡಿದೆ. ಇವುಗಳು ಪ್ರತಿಯೊಬ್ಬ ವ್ಯಕ್ತಿಯೂ ಪ್ರತಿಯೊಂದು ಸನ್ನಿವೇಶದಲ್ಲಿಯೂ ಪಾಲಿಸಲೇಬೇಕಾದ ನೇರವಾದ ಆಜ್ಞೆಗಳಾಗಿವೆ. ಉದಾಹರಣೆಗೆ:

> *ನೀವು ಕದಿಯಬಾರದು; ಒಬ್ಬರಿಗೊಬ್ಬರು ಸುಳ್ಳಾಡಿ ಮೋಸಮಾಡಬಾರದು.*
>
> *ಇದಲ್ಲದೆ ನನ್ನ ಹೆಸರಿನಲ್ಲಿ ಸುಳ್ಳು ಪ್ರಮಾಣಮಾಡಬಾರದು ನಿಮ್ಮ ದೇವರ ಹೆಸರನ್ನು ಅಪವಿತ್ರಮಾಡಬಾರದು; ನಾನೇ ಯೆಹೋವನು.*
>
> *ನಿನ್ನ ನೆರೆಯವನನ್ನು ವಂಚಿಸಬಾರದು ಅವನನ್ನು ಸುಲುಕೊಳ್ಳಬಾರದು* (ಯಾಜಕ. 19:11–13).

ಎರಡನೆಯ ವಿಧವು 'ಹೀಗೆ ಆದರೆ/ಮಾಡಿದರೆ..' ಎಂಬ ಷರತ್ತುಬದ್ಧ ಪದವನ್ನು ಒಳಗೊಂಡಿದೆ. ಇವುಗಳು ಪ್ರಕರಣ ಸಂಬಂಧಿತ ಆಜ್ಞೆಗಳಾಗಿದ್ದು ಕೆಲವು ವ್ಯಕ್ತಿಗಳಿಗೆ ಕೆಲವು ಸನ್ನಿವೇಶಗಳಲ್ಲಿ ಅನ್ವಯಿಸುವ ನಿರ್ದಿಷ್ಟ ಷರತ್ತುಗಳಾಗಿವೆ. ಉದಾಹರಣೆಗೆ:

> *ನಿನ್ನ ಸಹೋದರನಾದ ಇಬ್ರಿಯನಾಗಲಿ ಒಬ್ಬ ಇಬ್ರಿಯ ಸ್ತ್ರೀಯಾಗಲಿ ನಿನಗೆ ಮಾರಲ್ಪಟ್ಟು ಆರು ವರುಷ ನಿನಗೆ ಸೇವೆಮಾಡಿದ್ದರೆ ಏಳನೇ ವರುಷದಲ್ಲಿ ಅವನನ್ನು ಬಿಡುಗಡೆಮಾಡಿ ಕಳುಹಿಸಬೇಕು.*
>
> *ಅವನನ್ನು ಬಿಡುಗಡೆಮಾಡಿ ನಿನ್ನಿಂದ ಕಳುಹಿಸುವಾಗ ಬರೀ ಕೈಯಾಗಿ ಕಳುಹಿಸಿಬಿಡಬೇಡ.*
>
> *ನಿನ್ನ ಕುರಿಮಂದೆಯಿಂದಲೂ ಕಣದಿಂದಲೂ ಆಲೆಯಿಂದಲೂ ಅವನಿಗೆ ಧಾರಾಳವಾಗಿ ಕೊಡಬೇಕು; ನಿನ್ನ ದೇವರಾದ ಕರ್ತನು ನಿನಗೆ ಆಶೀರ್ವಾದವಾಗಿ ಕೊಟ್ಟದ್ದರಲ್ಲಿ ಅವನಿಗೆ ಕೊಡಬೇಕು.*
>
> *ನೀನು ಐಗುಪ್ತದೇಶದಲ್ಲಿ ದಾಸನಾಗಿದ್ದಿ ಎಂದೂ ನಿನ್ನ ದೇವರಾದ ಕರ್ತನು ನಿನ್ನನ್ನು ವಿಮೋಚಿದನೆಂದೂ ಜ್ಞಾಪಕಮಾಡಿಕೊಳ್ಳಬೇಕು; ಆದದರಿಂದ ನಾನು ಈಹೊತ್ತು ಇದನ್ನು ನಿನಗೆ ಆಜ್ಞಾಪಿಸುತ್ತೇನೆ.*
>
> *ಇದಲ್ಲದೆ ಅವನು ನಿನ್ನನ್ನೂ ನಿನ್ನ ಮನೆಯನ್ನೂ ಪ್ರೀತಿಮಾಡುವದರಿಂದಲೂ ನಿನ್ನ ಬಳಿಯಲ್ಲಿ ಸುಖವಾಗಿರುವದರಿಂದಲೂ–– ನಾನು ನಿನ್ನನ್ನು ಬಿಟ್ಟು ಹೋಗುವದಿಲ್ಲವೆಂದು ಹೇಳಿದರೆ*

*ನೀನು ದಬ್ಬಳವನ್ನು ತೆಗೆದುಕೊಂಡು ಅವನ ಕಿವಿಯನ್ನು ಬಾಗಲಿಗೆ ತಗಲಿಸಿ ಚುಚ್ಚಬೇಕು.*

*ಆಗ ಅವನು ನಿತ್ಯವಾಗಿ ನಿನ್ನ ದಾಸನಾಗಿರುವನು; ನಿನ್ನ ದಾಸಿಗೂ ಹಾಗೆಯೇ ಮಾಡಬೇಕು* (ಧರ್ಮೋ. 15:12–17).

**ಪ್ರಶ್ನೆ 13**

ಈ ಮೇಲ್ತಿಳಿಸಿರುವ ಧರ್ಮಶಾಸ್ತ್ರದ ಎರಡು ಮೂಲ ವಿಧಗಳ ನಡುವೆ ಇರುವ ವ್ಯತ್ಯಾಸವನ್ನು ವಿವರಿಸಿರಿ.

??? – ಒಂದು ಉದಾಹರಣೆ

ಮತ್ತೊಮ್ಮೆ ಯಾಜಕ. 19:11–13 ನ್ನು ಓದಿರಿ. ನಾವು ನಾಲ್ಕು ಅಂಶಗಳನ್ನು ಗಮನಿಸಬಹುದು:

ವಾಕ್ಯಭಾಗವು ನಾನೇ ಯೆಹೋವನು ಎಂಬದರೊಂದಿಗೆ ಕೊನೆಗೊಳ್ಳುತ್ತದೆ. ದೇವರ ನೇರವಾದ ಆಜ್ಞೆಗಳು ಹೇಗೆ ಆತನ ಸ್ವಂತ ಗುಣಕ್ಕೆ ಹೊಂದಿಕೊಂಡಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಈ ಆಜ್ಞೆಗಳನ್ನು ಪಾಲಿಸುವುದರ ಮೂಲಕ ಇಸ್ರಾಯೇಲರು ತಮ್ಮ ದೇವರನ್ನು ಆರಾಧಿಸುವರು – ಮತ್ತು ಆತನಂತೆ ಆಗುವರು. ಅವುಗಳು ಇಸ್ರಾಯೇಲರ ಮೇಲೆ ಎಲ್ಲಾ ಸಮಯದಲ್ಲೂ ಕಡ್ಡಾಯವಾಗಿದೆ.

ಈ ಆಜ್ಞೆಗಳನ್ನು ನೇರವಾದ ಆಜ್ಞೆಗಳಾಗಿ '...ಬಾರದು' ಎಂದು ಹೇಳಲಾಗಿದೆ.

ಅವುಗಳು ಎಲ್ಲಾ ವಿಷಯವನ್ನೂ ಒಳಗೊಂಡಿಲ್ಲ ಎಂಬುದು ಸ್ಪಷ್ಟವಾಗುತ್ತದೆ: ಕೇವಲ ಕೆಲವು ನೈತಿಕ ವಿಷಯಗಳನ್ನು ಮಾತ್ರ ಪ್ರಸ್ತಾಪಿಸಲಾಗಿದೆ. ಕೊಲೆ ಅಥವಾ ವ್ಯಭಿಚಾರದ ಬಗ್ಗೆ ಏನೂ ಹೇಳಲ್ಪಟ್ಟಿಲ್ಲ. ಹಾಗಾಗಿ ಧರ್ಮಶಾಸ್ತ್ರವು ಒಂದು ಮಾದರಿಯನ್ನು ಪಾಲಿಸುತ್ತದೆ. ಅದು ಪ್ರತಿಯೊಂದು ನೈತಿಕ ಸಮಸ್ಯೆಯನ್ನು ಪ್ರಸ್ತಾಪಿಸುವುದರ ಬದಲಾಗಿ ಉದಾಹರಣೆಗಳನ್ನು ಕೊಡುವುದರ ಮೂಲಕ ಒಂದು ಮಾನದಂಡವನ್ನು ಸ್ಥಿರಪಡಿಸುತ್ತದೆ. ಆದರೆ ಅದೇ ಸಮಯದಲ್ಲಿ ಈ ಆಜ್ಞೆಗಳು ಸಾರ್ವತ್ರಿಕ ಅನ್ವಯವನ್ನು ಹೊಂದಿವೆ. ಅವುಗಳನ್ನು ಎಲ್ಲಾ ಸ್ಥಳಗಳಲ್ಲಿರುವ ಎಲ್ಲಾ ಜನರು ಎಲ್ಲಾ ಸಮಯದಲ್ಲಿ ಪಾಲಿಸಲೇಬೇಕು.

ಅದರ ಪರಿಣಾಮವಾಗಿ, ವಿವಿಧ ಆಜ್ಞೆಗಳನ್ನು ಅನ್ವಯಿಸುವ ಮುನ್ನ ಧರ್ಮಶಾಸ್ತ್ರದ ಆತ್ಮವನ್ನು ಅರ್ಥ ಮಾಡಿಕೊಳ್ಳುವುದು ಅತ್ಯವಶ್ಯವಾಗಿತ್ತು. ಆದರೆ ಅಂತಹ ಉನ್ನತವಾದ ಮತ್ತು ಸರ್ವಸಮ್ಮತ ಮಾನದಂಡಗಳ ಬೆಳಕಿನ ಅಡಿಯಲ್ಲಿ ಯಾವ ಮನುಷ್ಯನೂ ದೇವರನ್ನು ಸತತವಾಗಿ ಮೆಚ್ಚಿಸಲು ಸಾಧ್ಯವಿಲ್ಲ.

ಇಲ್ಲಿ ನಾವು ಒಂದು ಅರ್ಥವಿವರಣಾಶಾಸ್ತ್ರೀಯ ಅಂಶವನ್ನು ಗಮನಿಸಬೇಕು: ದೇವಜನರು ತಮ್ಮ ಸ್ವಂತ ಶಕ್ತಿಯೊಂದ ದೇವರನ್ನು ಮೆಚ್ಚಿಸಲು ಸಾಧ್ಯವಿಲ್ಲ ಎಂಬುದನ್ನು ಪ್ರದರ್ಶಿಸುವುದು ಧರ್ಮಶಾಸ್ತ್ರದ ಪ್ರಾಥಮಿಕ ಉದ್ದೇಶವಾಗಿರಲಿಲ್ಲ. ಆದರೆ ಪ್ರತಿಯೊಂದು ಆಜ್ಞೆಯ ಹಿಂದಿರುವ ಧರ್ಮಶಾಸ್ತ್ರದ ಆತ್ಮವನ್ನು ನಾವು ಅರ್ಥಮಾಡಿಕೊಳ್ಳುವಾಗ ಈ ಸಂಗತಿಯು ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ. ದೇವರಿಗೆ ಸ್ತೋತ್ರವಾಗಲಿ! ಆತನ ದೃಷ್ಟಿಯಲ್ಲಿ ನಾವು ಅಂಗೀಕೃತಗೊಳ್ಳುವಂತೆ ದೇವರು – ಯೇಸುವಿನ ಮೂಲಕ –ನಮಗಾಗಿ ಒಂದು ಮಾರ್ಗವನ್ನು ಒದಗಿಸಿದನು. ಯೇಸುವಿಲ್ಲದೆ ನಾವೆಲ್ಲರೂ ನಮ್ಮ ಪಾಪಮಯ ಸ್ವಭಾವದ ನಿಯಂತ್ರಣದ ಅಡಿಯಲ್ಲಿ ಇರುವಂತವರಾಗಿದ್ದು ಆತನನ್ನು ಮೆಚ್ಚಿಸುವ ಯಾವ ನಿರೀಕ್ಷೆಯಿಲ್ಲದವರಾಗಿದ್ದೇವೆ. ಪೌಲನು ಅದನ್ನು ಹೀಗೆ ವ್ಯಕ್ತಪಡಿಸುತ್ತಾನೆ:*ಶರೀರವನ್ನು ಅನುಸರಿಸುವವರು ಅದಕ್ಕೆ ಸಂಬಂಧ ಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ; ಆತ್ಮನನ್ನನುಸರಿಸುವವರಾದರೋ ಆತ್ಮನಿಗೆ ಅದಕ್ಕೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. ಶರೀರಕ್ಕನುಸಾರವಾದ ಮನಸ್ಸು ಮರಣ: ಆತ್ಮೀಕವಾದ ಮನಸ್ಸುಜೀವವೂ ಸಮಾಧಾನವೂ ಆಗಿದೆ. ಶರೀರ ಸಂಬಂಧವಾದ ಮನಸ್ಸು ದೇವರಿಗೆ ಶತ್ರುತ್ವವು; ಕಾರಣವೇನಂದರೆ ಅಂಥ ಮನಸ್ಸು ದೇವರ ನಿಯಮಕ್ಕೆ ಒಳಪಡುವದಿಲ್ಲ, ಒಳಪಡುವದಕ್ಕಾಗುವದೂ ಇಲ್ಲ. ಹೀಗಿರಲಾಗಿ ಶರೀರಾಧೀನರು ದೇವರನ್ನು ಮೆಚ್ಚಿಸಲಾರರು. ನೀವಾದರೋ ನಿಮ್ಮಲ್ಲಿ ದೇವರಾತ್ಮನು ವಾಸವಾಗಿರುವದಾದರೆ ಶರೀರಾಧೀನರಲ್ಲ, ಆತ್ಮನಿಗೆ ಅಧೀನರಾಗಿದ್ದೀರಿ. ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ* (ರೋಮಾ. 8:5–9).

**ಪ್ರಶ್ನೆ 14**

ಆಜ್ಞೆಯ ವಿಶಾಲತೆಯನ್ನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿರಿ.

**ಆಜ್ಞೆ – ಒಂದು ಉದಾಹರಣೆ**

ಮತ್ತೊಮ್ಮೆ ಧರ್ಮೋ. 15:12–17 ನ್ನು ಓದಿರಿ.

ಆಜ್ಞೆಯು ಕೆಲವು ವ್ಯಕ್ತಿಗಳಿಗೆ ಕೆಲವು ಸನ್ನಿವೇಶಗಳಲ್ಲಿ ಮಾತ್ರ ಅನ್ವಯವಾಗುತ್ತದೆ – ಎಲ್ಲರಿಗೂ ಎಲ್ಲಾ ಸನ್ನಿವೇಶಗಳಲ್ಲಿ ಅನ್ವಯಿಸುವುದಿಲ್ಲ. ಅದು ಷರತ್ತುಬದ್ಧ ಪದವನ್ನು ಬಳಸುತ್ತದೆ ಮತ್ತು ಹೀಗೆ ಮಾಡಿದ್ದಲ್ಲಿ ಅಥವಾ ಆಗಿದ್ದಲ್ಲಿ ಮಾತ್ರ ಅನ್ವಯ ಎಂಬ ಅರ್ಥವನ್ನು ಕೊಡುತ್ತದೆ.

ಹಳೆ ಒಡಂಬಡಿಕೆಯಲ್ಲಿರುವ 600 ಕ್ಕೂ ಹೆಚ್ಚಿನ ಆಜ್ಞೆಗಳಲ್ಲಿ ಬಹುತೇಕ ಭಾಗವು ಇದೇ ರೀತಿಯ ಸನ್ನಿವೇಶಾಧಾರಿತ ಆಜ್ಞೆಗಳನ್ನು ಹೊಂದಿವೆ. ಅವುಗಳಲ್ಲಿ ಯಾವುದೂ ಸಹ ಹೊಸ ಒಡಂಬಡಿಕೆಯಲ್ಲಿ ನವೀಕರಿಸಲ್ಪಟ್ಟಿಲ್ಲ. ಅದಕ್ಕೆ ನಿಶ್ಚಯವಾಗಲೂ ಒಂದು ಒಳ್ಳೆಯ ಕಾರಣವಿದೆ. ಅಂತಹ ಆಜ್ಞೆಗಳು ಪ್ರಾಚೀನ ಇಸ್ರಾಯೇಲಿನಲ್ಲಿ ನಾಗರಿಕ, ಧಾರ್ಮಿಕ ಮತ್ತು ನೈತಿಕ ಜೀವನಕ್ಕೆ ಅನ್ವಯಿಸುತ್ತಿತ್ತು. ಹಾಗಾಗಿ ಅವುಗಳ ಗುಣವೇ ಅವುಗಳ ಅನ್ವಯವನ್ನು ಸೀಮಿತಗೊಳಿಸುತ್ತಿತ್ತು.

ಇಲ್ಲಿ ನಾವು ಅರ್ಥವಿವರಣಾಶಾಸ್ತ್ರಕ್ಕೆ ಸಂಬಂಧಿಸಿದ ಇನ್ನೊಂದು ಅಂಶವನ್ನು ಗಮನಿಸಬೇಕು: ಈ ಆಜ್ಞೆಗಳು ಇಂದು ನಮಗೆ ಅನ್ವಯಿಸುವುದಿಲ್ಲ. ಅವುಗಳು ನಮಗೆ ಅನ್ವಯಿಸದಿದ್ದಾಗ್ಯೂ ನಮಗೆ ದೇವರ ಮತ್ತು ತನ್ನ ಜನರಿಗಾಗಿ ಆತನ ಚಿತ್ತದ ಕುರಿತು ಅನೇಕ ಸಂಗತಿಗಳನ್ನು ಕಲಿಸಿಕೊಡುತ್ತವೆ. ಧರ್ಮೋಪದೇಶಕಾಂಡದಲ್ಲಿರುವ ವಾಕ್ಯಭಾಗವು ಪ್ರಕಟಿಸುವುದನ್ನು ನಾವು ನೋಡೋಣ:

1. ಪ್ರಾಚೀನ ಇಸ್ರಾಯೇಲಿನಲ್ಲಿ ಗುಲಾಮ ಪದ್ಧತಿಯ ದುರುಪಯೋಗವಾಗದಂತೆ ದೇವರು ಖಚಿತಪಡಿಸಿದನು. ಸ್ವತಃ ಇಸ್ರಾಯೇಲರು ಈಜಿಪ್ಟಿನ ಗುಲಾಮತನದಿಂದ ವಿಮೋಚಿಸಲ್ಪಟ್ಟಿದ್ದರು. ಹಾಗಾಗಿ ಈಗ ಅವರು ಗುಲಾಮರಿಗೆ ಕರುಣೆ ತೋರಿಸುವಂತವರಾಗಿರಬೇಕು.
2. ದೇವರು ಗುಲಾಮರನ್ನು ಪ್ರೀತಿಸುತ್ತಾನೆ.
3. ಪ್ರಾಚೀನ ಇಸ್ರಾಯೇಲಿನಲ್ಲಿದ್ದ ಗುಲಾಮ ಪದ್ಧತಿಯು ಹಗುರವಾಗಿತ್ತು ಮತ್ತು ಕೆಲವೊಮ್ಮೆ ಸ್ವಾತಂತ್ರವಾಗಿರುವುದಕ್ಕಿಂತ ಗುಲಾಮನಾಗಿರುವುದೇ ಕೆಲವರಿಗೆ ಉತ್ತಮವಾದ ಸ್ಥಿತಿಯಾಗಿತ್ತು.
4. ಗುಲಾಮರ ಯಜಮಾನರುಗಳಿಗೆ ತಮ್ಮ ಆಳುಗಳ ಕುರಿತು ಕೆಲವು ನಿರ್ಬಂಧಗಳ ಅಡಿಯಲ್ಲಿದ್ದರು.

ಹಾಗಾಗಿ ಕ್ರೈಸ್ತರಾದ ನಾವು ಈ ವಾಕ್ಯಭಾಗದಿಂದ ದೇವರ ಕುರಿತು ಅನೇಕ ಸಂಗತಿಗಳನ್ನು ಕಲಿತುಕೊಳ್ಳಬಹುದು: ಆತನು ನ್ಯಾಯವನ್ನು ಪಾಲಿಸಬೇಕೆಂದು ಆಜ್ಞಾಪಿಸಿದ್ದು, ಇಸ್ರಾಯೇಲ್ ಸಮುದಾಯಕ್ಕೆ ಆತನು ಹೊಂದಿದ್ದ ಆದರ್ಶ ಜೀವನ ಮತ್ತು ತನ್ನ ಜನರೊಂದಿಗೆ ಆತನು ಹೊಂದಿದ್ದ ಸಂಬಂಧ. 'ವಿಮೋಚನೆಯ' ಅರ್ಥವೇನೆಂದು ನಾವು ಇನ್ನೂ ಹೆಚ್ಚಾಗಿ ಕಲಿತುಕೊಳ್ಳುವಂತೆ ಅದು ನಮಗೆ ಸಹಾಯಮಾಡುತ್ತದೆ. ಹಾಗಾಗಿ ಈ ಕಾನೂನಾತ್ಮಕವಾದ ದೇವರ ವಾಕ್ಯಭಾಗವು ನಮಗೆ ನೀಡಲ್ಪಟ್ಟಿರುವ ಆಜ್ಞೆಯಲ್ಲದಿದ್ದರೂ ಅದು ಇಂದಿಗೂ ನಮಗೆ ದೇವರ ವಾಕ್ಯವಾಗಿದೆ.

**ಪ್ರಶ್ನೆಗಳು 15–16**

1. ಧರ್ಮೋ. 15:12–17 ಯಾವ ರೀತಿಯ ವ್ಯಕ್ತಿಗಳಿಗೆ ಯಾವ ರೀತಿಯ ಸನ್ನಿವೇಶಗಳಲ್ಲಿ ಮಾತ್ರ ಅನ್ವಯವಾಗುತ್ತದೆ? ಹಾಗಾದರೆ ಇಂದಿನ ಕ್ರೈಸ್ತ ವಿಶ್ವಾಸಿಗಳಿಗೆ ಈ ವಾಕ್ಯಗಳು ಯಾಕೆ ಅನ್ವಯಿಸುವುದಿಲ್ಲ?
2. ಧರ್ಮೋ. 15:12–17 ನಂತಹ ಒಂದು ಕಾನೂನಾತ್ಮಕವಾದ ವಾಕ್ಯಭಾಗದಿಂದ ನಾವು ಏನನ್ನು ಕಲಿತುಕೊಳ್ಳಬಹುದು?

**ಇಸ್ರಾಯೇಲರಿಗೆ ಧರ್ಮಶಾಸ್ತ್ರದಿಂದಾದ ಪ್ರಯೋಜನ**

ಮೊದಲು ನಾವು ಯಾವುದು ಧರ್ಮಶಾಸ್ತ್ರದ ಉದ್ದೇಶವಾಗಿರಲಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು:

1. ಧರ್ಮಶಾಸ್ತ್ರದ ಉದ್ದೇಶವು ನಿತ್ಯಜೀವವನ್ನು ಒದಗಿಸುವುದಲ್ಲ.
2. ಧರ್ಮಶಾಸ್ತ್ರದ ಉದ್ದೇಶವು ದೇವರ ಮುಂದೆ ನಿಜವಾದ ನೀತಿವಂತಿಕೆಯನ್ನು ಒದಗಿಸುವುದಲ್ಲ.

ಬದಲಾಗಿ, ಧರ್ಮಶಾಸ್ತ್ರವು ದೇವರು ತನ್ನ ಜನರಿಗೆ ತೋರಿದ ಕೃಪೆ ಮತ್ತು ಕರುಣೆಯ ಒಂದು ಉದಾಹರಣೆಯಾಗಿದೆ ಎಂದು ಅರ್ಥಮಾಡಿಕೊಳ್ಳಬೇಕು. ನಾವು ಈಗ ನಾಲ್ಕು ಉದಾಹರಣೆಗಳನ್ನು ನೋಡಿಕೊಳ್ಳೋಣ.

**1. ಆಹಾರಕ್ಕೆ ಸಂಬಂಧಿಸಿದ ಆಜ್ಞೆಗಳು**

ಹಂದಿ ಮಾಂಸವನ್ನು ತಿನ್ನಬಾರದೆಂಬ ಒಂದು ನಿಷೇದಾಜ್ಞೆಯನ್ನು ನಾವು ಯಾಜಕ. 11:7 ರಲ್ಲಿ ಕಾಣುತ್ತೇವೆ. ಇದು ನಮ್ಮ ಮೊದಲ ಉದಾಹರಣೆಯಾಗಿದೆ: *ಹಂದಿಯ ಗೊರಸು ಸೀಳಲ್ಪಟ್ಟಿದ್ದರೂ ಅದು ಮೇವನ್ನು ಮೆಲುಕು ಹಾಕುವುದಿಲ್ಲ. ಅದು ನಿಮಗೆ ಅಶುದ್ಧವಾಗಿರುವುದು.*

ಈ ನಿಷೇದಾಜ್ಞೆಯು ಹೇಗೆ ದೇವರು ತನ್ನ ಜನರಿಗೆ ತೋರಿದ ಕೃಪೆ ಮತ್ತು ಕರುಣೆಯ ಒಂದು ವ್ಯಕ್ತಪಡಿಸುವಿಕೆಯಾಗಿದೆ? ಅದು ಇಸ್ರಾಯೇಲರನ್ನು ಸಂರಕ್ಷಿಸಲ್ಪಡುವುದಕ್ಕಾಗಿತ್ತು:

1. ಅಂತಹ ವಾತಾವರಣದಲ್ಲಿ ಇತರೆ ಮಾಂಸಕ್ಕಿಂತ ಹಂದಿಯ ಮಾಂಸದಲ್ಲಿ ಹೆಚ್ಚು ರೋಗಗಳು ಹರಡುತ್ತಿತ್ತು.
2. ಅರಣ್ಯದಲ್ಲಾಗಲಿ ಅಥವಾ ಕಾನಾನಿನಲ್ಲಾಗಲಿ ಹಂದಿಯ ಸಾಕಣೆಯು ಆರ್ಥಿಕ ವ್ಯವಸ್ಥೆಯ ರೀತಿಯಲ್ಲಿ ಹೇಳಬೇಕಾದರೆ ಮೂರ್ಖತನವಾಗಿತ್ತು.
3. ಅನ್ಯದೇವರುಗಳನ್ನು ಆರಾಧಿಸುತ್ತಿದ್ದ ಇಸ್ರಾಯೇಲಿನ ನೆರೆಹೊರೆಯ ರಾಷ್ಟ್ರದವರು ಅವರ ದೇವರುಗಳಿಗೆ ಹಂದಿಗಳನ್ನು ಬಲಿಯಾಗಿ ಅರ್ಪಿಸುತ್ತಿದ್ದರು. ಇಸ್ರಾಯೇಲರು ಅವರ ಮಾರ್ಗಗಳನ್ನು ಅನುಸರಿಸುವ ಅಪಾಯದಲ್ಲಿದ್ದರು. ಅದನ್ನು ತಡೆಯಬೇಕಾಗಿತ್ತು.

**2. ರಕ್ತವನ್ನು ಸುರಿಸುವುದರ ಕುರಿತು ಆಜ್ಞೆಗಳು**

ಬಲಿಯಾಗಿ ಅರ್ಪಿಸಲ್ಪಟ್ಟ ಹೋರಿಯ ರಕ್ತವನ್ನು ಯಜ್ಞವೇದಿಯ ಮೇಲೆ ಹಾಕಬೇಕೆಂದು ಮೋಶೆಗೆ ಆಜ್ಞಾಪಿಸಲ್ಪಟ್ಟದ್ದನ್ನು ನಾವು ವಿಮೋ. 29:10–12 ರಲ್ಲಿ ಕಾಣುತ್ತೇವೆ. ಆ ಆಚರಣೆಯನ್ನು ನಂತರ ಮಹಾಯಾಜಕನು ಪ್ರತಿವರ್ಷ ಪ್ರಾಯಶ್ಚಿತ್ತ ದಿನದಂದು ಮುಂದುವರೆಸಿಕೊಂಡು ಹೋದನು. ಇದು ನಮ್ಮ ಎರಡನೆಯ ಉದಾಹರಣೆಯಾಗಿದೆ: *ಇದಲ್ಲದೆ ಆ ಹೋರಿಯನ್ನು ಸಭೆಯ ಗುಡಾರದ ಮುಂದೆ ತರಬೇಕು. ಆರೋನನೂ ಅವನ ಪುತ್ರರೂ ಹೋರಿಯ ತಲೆಯ ಮೇಲೆ ತಮ್ಮ ಕೈಗಳನ್ನು ಇಡಬೇಕು. ತರುವಾಯ ನೀನು ಆ*

*ಹೋರಿಯನ್ನು ಯೆಹೋವನ ಮುಂದೆ ದೇವದರ್ಶನ ಗುಡಾರದ ಬಾಗಿಲಲ್ಲಿ ವಧಿಸಬೇಕು. ನೀನು ಹೋರಿಯ ರಕ್ತವನ್ನು ತೆಗೆದುಕೊಂಡು ನಿನ್ನ ಬೆರಳಿನಿಂದ ಬಲಿಪೀಠದ ಅಡಿಯಲ್ಲಿ ಸುರಿಯಬೇಕು.*

ಈ ನಿಷೇದಾಜ್ಞೆಯು ಹೇಗೆ ದೇವರು ತನ್ನ ಜನರಿಗೆ ತೋರಿದ ಕೃಪೆ ಮತ್ತು ಕರುಣೆಯ ಒಂದು ವ್ಯಕ್ತಪಡಿಸುವಿಕೆಯಾಗಿದೆ? ಅದು ಇಸ್ರಾಯೇಲರಿಗೆ ಈ ಕೆಳಗಿನ ಸಂಗತಿಗಳನ್ನು ಪ್ರದರ್ಶಿಸುವುದಕ್ಕಾಗಿತ್ತು:

1. ಪಾಪಕ್ಕೆ ದಂಡನೆಯಾಗಬೇಕು
2. ದೇವರ ವಿರುದ್ಧ ಪಾಪಮಾಡುವವರು ಜೀವಿಸುವ ಯೋಗ್ಯತೆಯನ್ನು ಹೊಂದಿಲ್ಲ
3. ಪಾಪಿಯು ಮರಣದಂಡನೆಯಿಂದ ತಪ್ಪಿಸಿಕೊಳ್ಳಲು ದೇವರು ಒಂದು ಮಾರ್ಗವನ್ನು ಸಿದ್ಧಪಡಿಸಿದನು: ಪಾಪಿಯ ಸ್ಥಾನದಲ್ಲಿ ಇನ್ನೊಂದರ ರಕ್ತವು ಸುರಿಸಲ್ಪಡಬೇಕು.

ಅದಲ್ಲದೆ, ಪಾಪಿಯ ಸ್ಥಾನದಲ್ಲಿ ಕೊಲ್ಲಲ್ಪಡುತ್ತಿದ್ದ ಬಲಿಯು ಕ್ರೂಜೆಯ ಮೇಲೆ ಯೇಸು ಜನರಿಗಾಗಿ ತನ್ನ ಪ್ರಾಣವನ್ನು ನೀಡಿದ್ದರ ಸಂಕೇತವಾಗಿದೆ.

### ಅಸಹಜವಾದ ನಿಷೇದಾಜ್ಞೆಗಳು

ಮೇಕೆಯ ಮರಿಯನ್ನು ಅದರ ತಾಯಿಯ ಹಾಲಿನಲ್ಲಿ ಕುದಿಸಬಾರದೆಂಬ ಒಂದು ನಿಷೇದಾಜ್ಞೆಯನ್ನು ನಾವು ಧರ್ಮೋ. 14:21 ರಲ್ಲಿ ಕಾಣುತ್ತೇವೆ. ಇದು ನಮ್ಮ ಮೂರನೆಯ ಉದಾಹರಣೆಯಾಗಿದೆ:*ಮೇಕೆಯ ಮರಿಯನ್ನು ಅದರ ತಾಯಿಯ ಹಾಲಿನಲ್ಲಿ ಕುದಿಸಬಾರದು.*

ಇಂದು ಜೀವಿಸುತ್ತಿರುವ ನಮಗೆ ಇದು ಒಂದು ವಿಚಿತ್ರವಾದ ಆಜ್ಞೆ ಎಂಬುದಾಗಿ ಕಾಣಬಹುದು. ಹಾಗಾದರೆ ಈ ನಿಷೇದಾಜ್ಞೆಯು ಹೇಗೆ ದೇವರು ತನ್ನ ಜನರಿಗೆ ತೋರಿದ ಕೃಪೆ ಮತ್ತು ಕರುಣೆಯ ಒಂದು ವ್ಯಕ್ತಪಡಿಸುವಿಕೆಯಾಗಿದೆ? ಅದು ಕಾನಾನ್ಯರಿಂದ ಪಾಲಿಸಲಾಗುತ್ತಿದ್ದ ಮಂತ್ರ ತಂತ್ರಗಳಲ್ಲಿ ಮತ್ತು ಸಂತಾನಪ್ರಾಪ್ತಿಗಾಗಿ ಮಾಡಲಾಗಿತ್ತಿದ್ದ ಅನಿಷ್ಟ ಆಚರಣೆಗಳಲ್ಲಿ ಇಸ್ರಾಯೇಲರು ಭಾಗವಹಿಸದಂತೆ ತಡೆಯಿತು.

### ವಿಧೇಯರಿಗೆ ಆಶೀರ್ವಾದಗಳನ್ನು ನೀಡುವ ಆಜ್ಞೆಗಳು

ಮೂರನೆಯ ವರ್ಷದ ದಶಮಾಂಶವನ್ನು ಲೇವಿಯರಿಗಾಗಿ, ಅನ್ಯದೇಶದವನಿಗಾಗಿ, ದಿಕ್ಕಿಲ್ಲದವರಿಗಾಗಿ ಮತ್ತು ವಿಧವೆಯರಿಗಾಗಿ ತರಬೇಕೆಂಬ ಆಜ್ಞೆಯನ್ನು ಪಾಲಿಸುವ ಇಸ್ರಾಯೇಲರಿಗಾಗಿ ಆಶೀರ್ವಾದಗಳನ್ನು ವಾಗ್ದಾನಮಾಡುವುದರ ಕುರಿತು ನಾವು ಧರ್ಮೋ. 14:28–29 ರಲ್ಲಿ ಕಾಣುತ್ತೇವೆ. ಇದು ನಮ್ಮ ನಾಲ್ಕನೆಯ ಉದಾಹರಣೆಯಾಗಿದೆ: *ಪ್ರತಿ ಮೂರು ವರ್ಷಗಳ ಅಂತ್ಯದಲ್ಲಿ ಆಯಾ ವರ್ಷದಲ್ಲಿ ನಿನಗೆ ಸಿಕ್ಕಿದ ಹುಟ್ಟುವಳಿಯ ದಶಮಭಾಗವನ್ನೆಲ್ಲಾ ಹೊರಗೆ ತಂದು ನಿನ್ನ ಬಾಗಿಲುಗಳಲ್ಲಿ ಇಟ್ಟುಬಿಡಬೇಕು. ಆಗ ನಿನ್ನ ಸಂಗಡ ಪಾಲನ್ನೂ, ಸ್ವಾಸ್ಥ್ಯವನ್ನೂ ಹೊಂದದ ಲೇವಿಯನೂ ನಿನ್ನ ಬಾಗಿಲುಗಳಲ್ಲಿರುವ ಅನ್ಯದೇಶದವನೂ ದಿಕ್ಕಿಲ್ಲದವನೂ ವಿಧವೆಯೂ ಬಂದು ನಿನ್ನ ದೇವರಾದ ಯೆಹೋವನು ನಿನ್ನನ್ನೂ, ನೀನು ಮಾಡುವ ಎಲ್ಲಾ ಪ್ರಯತ್ನಗಳನ್ನೂ, ಆಶೀರ್ವದಿಸುವ ಹಾಗೆ ತಿಂದು ತೃಪ್ತರಾಗಲಿ.*

ಹಳೆ ಒಡಂಬಡಿಕೆಯ ಎಲ್ಲಾ ಆಜ್ಞೆಗಳು ಇಸ್ರಾಯೇಲರ ಮೇಲೆ ಆಶೀರ್ವಾದವನ್ನು ತರಲು ಉದ್ದೇಶಿಸಲ್ಪಟ್ಟದ್ದಾಗಿತ್ತು (ನೋಡಿರಿ ಯಾಜಕ. 26:3–16). ಆದರೆ ಕೆಲವು ಸನ್ನಿವೇಶಗಳಲ್ಲಿ, ಉದಾಹರಣೆಗೆ ಮೇಲಿನ ವಚನದಲ್ಲಿ, ಕೆಲವೊಂದು ಆಜ್ಞೆಯನ್ನು ಪಾಲಿಸುವಾಗ ಆಶೀರ್ವಾದ ಬರುತ್ತದೆ ಎಂಬುದು ನಿರ್ದಿಷ್ಟವಾಗಿ ತಿಳಿಸಲಾಗಿದೆ. ಈ ರೀತಿಯ ಆಜ್ಞೆಯನ್ನು ಪಾಲಿಸುವಾಗ ದಶಮಾಂಶವನ್ನು ಕೊಡುವವರ ಮೇಲೆ ದೇವರ ಆಶೀರ್ವಾದ ಬರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟಕರವಲ್ಲ.

ಅದಲ್ಲದೆ ದಶಮಾಂಶವನ್ನು ಕೊಡುವುದರ ಕುರಿತಾದ ಆಜ್ಞೆಯು ದೇಶದಲ್ಲಿರುವ ದುರ್ದೈವಿಗಳಿಗೆ ದೇವರು ಹೊಂದಿದ್ದ ಕರುಣೆ ಮತ್ತು ಕೃಪೆಯನ್ನು ಪ್ರಕಟಪಡಿಸುತ್ತದೆ: ಲೇವಿಯರು ತಮ್ಮ ಜೀವನೋಪಾಯಕ್ಕಾಗಿ ದಶಮಾಂಶದ ಮೇಲೆ ಆತುಕೊಂಡಿದ್ದರು; ಅನ್ಯದೇಶದವರು, ದಿಕ್ಕಿಲ್ಲದವರು ಮತ್ತು ವಿಧವೆಯರು ಇಸ್ರಾಯೇಲ್ ಸಮಾಜದಲ್ಲಿ ಬಲಹೀನವಾದ ಸಮುದಾಯದವರಾಗಿದ್ದರು.

### ಪ್ರಶ್ನೆ 17

ಹಳೆ ಒಡಂಬಡಿಕೆಯ ಆಜ್ಞೆಗಳಲ್ಲಿ ಕೆಲವು ನಮಗೆ ವಿಚಿತ್ರವಾಗಿ ಕಂಡುಬರುತ್ತದೆ. ಯಾಕೆಂದರೆ ಅದು ಇಂದಿನ ಕ್ರೈಸ್ತರಿಗೆ ಯಾವುದೇ ಅರ್ಥವನ್ನು ಕೊಡುವುದಿಲ್ಲ. ಪ್ರಾಚೀನ ಇಸ್ರಾಯೇಲರಿಗೆ ಪ್ರಯೋಜನವಾಗಲೆಂದು ಅಂತಹ ಆಜ್ಞೆಗಳನ್ನು ಹೇಗೆ ನೀಡಲಾಯಿತು ಎಂಬುದನ್ನು ವಿವರಿಸಿರಿ.

### ಸಾರಾಂಶ: ಕೆಲವು ಮುಖ್ಯ ಸಲಹೆಗಳು

ಡಗ್ಲಸ್ ಸ್ಟುವರ್ಟ್‌ರವರು ಹಳೆ ಒಡಂಬಡಿಕೆಯ ಆಜ್ಞೆಗಳ ಕುರಿತಾದ ಈ ಅಧ್ಯಾಯವನ್ನು ಇಂದಿನ ಕ್ರೈಸ್ತ ವಿಶ್ವಾಸಿಗಳಿಗೆ ಅರ್ಥವಿವರಣಾಶಾಸ್ತ್ರೀಯ ಮಾರ್ಗದರ್ಶನಗಳ ಒಂದು ಪಟ್ಟಿಯನ್ನು ನೀಡುವುದರ ಮೂಲಕ ಸಮಾರೋಪಗೊಳಿಸುತ್ತಾರೆ:

1. ಧರ್ಮಶಾಸ್ತ್ರವು ದೇವರಿಂದ ಪ್ರೇರಿತವಾದ ದೇವರವಾಕ್ಯವಾಗಿದೆ. ಅದನ್ನು ಇಸ್ರಾಯೇಲರಿಗೆ ಆಜ್ಞೆಗಳಾಗಿ ಕೊಡಲಾಗಿತ್ತು – ನಿಮಗಲ್ಲ.
2. ಧರ್ಮಶಾಸ್ತ್ರವು ಹಳೆಯ ಒಡಂಬಡಿಕೆಯ ಆಧಾರವಾಗಿತ್ತು – ಆದರೆ ಅವುಗಳಲ್ಲಿ ಕೆಲವನ್ನು ನಿರ್ದಿಷ್ಟವಾಗಿ ನವೀಕರಿಸಿದ್ದನ್ನು ಹೊರತುಪಡಿಸಿ ಅದು ಹೊಸದಾದ ಒಡಂಬಡಿಕೆಯ ಆಧಾರವಾಗಿಲ್ಲ.

3. ಧರ್ಮಶಾಸ್ತ್ರವು ದೇವರ ನ್ಯಾಯ, ಪ್ರೀತಿ ಮತ್ತು ಉನ್ನತ ಮಾನದಂಡಗಳನ್ನು ಪ್ರಕಟಿಸುತ್ತವೆ – ನಾವು ದೇವರ ಕರುಣೆಯನ್ನೂ ಸಹ ನೆನಪಿಸಿಕೊಳ್ಳಬೇಕು.
4. ಧರ್ಮಶಾಸ್ತ್ರವು ಒಂದು ಮಾದರಿಯನ್ನು ರೂಪಿಸುತ್ತದೆ, ಉದಾಹರಣೆಗಳನ್ನು ಕೊಡುತ್ತದೆ – ಆದರೆ ಅದು ಪರಿಪೂರ್ಣವಲ್ಲ ಮತ್ತು ಪ್ರತಿಯೊಂದು ಸನ್ನಿವೇಶವನ್ನು ಒಳಗೊಂಡಿಲ್ಲ.
5. ಧರ್ಮಶಾಸ್ತ್ರವು ಸಾರವು ಪ್ರವಾದಿಗಳ ಗ್ರಂಥದಲ್ಲಿ ಪುನರಾವರ್ತಿಸಲಾಗಿದೆ ಮತ್ತು ಹೊಸ ಒಡಂಬಡಿಕೆಯಲ್ಲಿ ನವೀಕರಿಸಲಾಗಿದೆ – ಆದರೆ ಹಳೆ ಒಡಂಬಡಿಕೆಯ ಆಜ್ಞೆಗಳು ಪ್ರವಾದಿಗಳಿಂದಲೂ ಹಾಗೂ ಹೊಸ ಒಡಂಬಡಿಕೆಯಲ್ಲಿ ಪದೇ ಪದೇ ಉಲ್ಲೇಖಿಸಲಾಗಿದೆ.
6. ಧರ್ಮಶಾಸ್ತ್ರವು ಇಸ್ರಾಯೇಲಿಗೆ ದೇವರು ಕೊಟ್ಟ ಉದಾರವಾದ ವರವಾಗಿದೆ – ಹೊರತು ಜನರ ಸ್ವಾತಂತ್ರವನ್ನು ಹತ್ತಿಕ್ಕುವ ನಿರ್ಬಂಧಗಳಲ್ಲ.

# ಆದಿಕಾಂಡ ಉತ್ತರಗಳು

**ಆದಿಕಾಂಡದ ಪರಿಚಯದ ಉತ್ತರಗಳು**

**ಪ್ರಶ್ನೆಗಳಿಗೆ ಉತ್ತರಗಳು**

1. ಈ ಪುಸ್ತಕದ ಆಂಗ್ಲ ಹೆಸರಿನ ಅರ್ಥ "ವಂಶಾವಳಿ" ಅಥವಾ "ಹುಟ್ಟು" ಅಥವಾ "ಉಗಮಗಳ ಕಥೆ" ಎಂದಾಗಿದೆ. ಇದು ಹಳೇ ಒಡಂಬಡಿಕೆಯ ಗ್ರೀಕ್ ಸೆಪ್ಟ್ಯುಜೆಂಟ್ ಭಾಷಾಂತರದಿಂದ ಬಂದಿದೆ. ಪುಸ್ತಕದ ಕನ್ನಡ ಹೆಸರು "ಆರಭಗಳು" ಎಂಬ ಇದರ ಇಬ್ರಿಯ ಹೆಸರಿಗೆ ಸಮಾನವಾಗಿದೆ. ಇದು 1:1ನ್ನು ಸೂಚಿಸುತ್ತದೆ, ಅದು ದೇವರು "ಆದಿಯಲ್ಲಿ" ಆಕಾಶವನ್ನು ಭೂಮಿಯನ್ನು ಉಂಟುಮಾಡಿದನೆಂದು ಹೇಳುತ್ತದೆ.

2. ಆದಿಕಾಂಡದ ಕಥೆಗಳು ಈ ಮೂರು ಭೌಗೋಳಿಕೆ ಪ್ರದೇಶಗಳಲ್ಲಿ ಸಂಭವಿಸುತ್ತವೆ:

   ಅ. ಮೆಸೊಪೊಟಮಿಯ – ಇಲ್ಲಿಯೇ ಮನುಕುಲದ ಚರಿತ್ರೆ ಪ್ರಾರಂಭವಾಗುತ್ತದೆ. ಇದು ಅಬ್ರಹಾಮನ ಸ್ವದೇಶವಾಗಿದೆ.

   ಆ. ಪ್ಯಾಲೆಸ್ತೀನ್ – ಇಲ್ಲಿಯೇ ಅಬ್ರಹಾಮ ಮತ್ತು ಆತನ ಸಂತತಿ ನೆಲೆಯೂರಿತ್ತು, ಇದು ವಾಗ್ದಾನದ ದೇಶವಾಗಿದೆ.

   ಇ. ಐಗುಪ್ತ – ಇಲ್ಲಿಯೇ ಯಾಕೋಬ ಮತ್ತು ಆತನ ಮಕ್ಕಳು ಯೋಸೇಫನೊಂದಿಗೆ ನೆಲೆಯೂರಿದರು.

3. ಮೋಶೆಯು ಆದಿಕಾಂಡ ಪುಸ್ತಕದ ಗ್ರಂಥಕರ್ತ ಮತ್ತು ಸಂಯೋಜಕನಾಗಿದ್ದಾನೆ. ಆತನ ನಂತರ ಕೆಲ ತಿದ್ದುಪಡಿಯಾಗಿದೆಯಷ್ಟೇ. ಬಹುಶಃ ಐಗುಪ್ತದಿಂದ ವಾಗ್ದಾನದ ದೇಶದ ಗಡಿಯವರೆಗೆ ಮರುಗಾಡಿನಲ್ಲಿ 40 ವರ್ಷಗಳ ಕಾಲ ಅಲೆದಾಡಿದ ವೇಳೆ ಮೋಶೆಯು ಪಂಚಕಾಂಡವನ್ನು ಬರೆದಿರಬಹುದು.

4. ಆದಿಕಾಂಡದಲ್ಲಿ ನಾವು ಮುಖ್ಯವಾಗಿ ಈ ರೀತಿಯ ಪಠ್ಯಗಳನ್ನು ಕಾಣಬಹುದು:

   ಅ. ಕಥೆಗಳ ಪ್ರಾಬಲ್ಯತೆ

   ಆ. ಅನೇಕ ವಂಶಾವಳಿಗಳು

   ಇ. ಹಲವು ಪದ್ಯರೂಪಿ ಪಠ್ಯಗಳು: ಚಿಕ್ಕ ಪದ್ಯಗಳು ಮತ್ತು ಸ್ವಲ್ಪ ದೀರ್ಘವಾದ ಆಶೀರ್ವಾದ

5. ಕೆಲವೇ ಅಂಶಗಳಲ್ಲಿ ಆದಿಕಾಂಡದ ಸಂದೇಶದ ಒಂದು ಸಾರಾಂಶ ಇಂತಿದೆ:

   ಅ. ಇದು ಅನೇಕ ಆರಂಭಗಳನ್ನು ಪ್ರಸ್ತುತಪಡಿಸುತ್ತದೆ: ಲೋಕದ, ಮನುಕುಲದ, ಪಾಪದ, ಸಮಾಜ ಮತ್ತು ನಾಗರೀಕತೆಯ ಆರಂಭ.

   ಆ. ಚೊಚ್ಚಲ ಮಗನಿಗಿಂತ ಕಿರೀ ಮಗನನ್ನು ಆರಿಸಿಕೊಳ್ಳುವುದರ ಮೂಲಕ ದೇವರು ಮನುಷ್ಯನ ಗತಿಯನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದಾನೆಂಬುದನ್ನು ನಮಗೆ ತೋರಿಸುತ್ತದೆ.

   ಇ. ಇದು ನಮಗೆ ಸ್ಥಾಪಿತ ಸತ್ಯವೇದದ ದೈವಶಾಸ್ತ್ರವನ್ನು ಪರಿಚಯಿಸುತ್ತದೆ. ಸಾರ್ವಭೌಮನಾದ ದೇವರು, ಒಡಂಬಡಿಕೆ, ದೇವರ ಪ್ರೀತಿ ಮತ್ತು ನಂಬಿಗಸ್ತಿಕೆ, ಪಾಪ ಮತ್ತು ವಿಮೋಚನೆ, ನಂಬಿಕೆಯ ವಿಷಯ, ಇತ್ಯಾದಿ.

6. ಆದಿಕಾಂಡ ಕಥಾರಚನೆಯು ಈ ಎರಡು ಮುಖ್ಯ ಭಾಗಗಳನ್ನು ಒಳಗೊಂಡಿದೆ:

   ಅ. ಪುಸ್ತಕದ ಮೊದಲ 11 ಅಧ್ಯಾಯಗಳಲ್ಲಿನ ಪುರಾತನ ಕಥೆ: ಸೃಷ್ಟಿಯಿಂದ ಜನಾಂಗಗಳ ಚದುರುವಿಕೆವರೆಗೆ

   ಆ. ಅಧ್ಯಾಯ 12 ರಿಂದ 50 ರವರೆಗಿನ ಪೂರ್ವಜರ ಕಥೆ: ಅಬ್ರಹಾಮನಿಂದ ಯೋಸೇಫನವರೆಗೆ

7. ಆದಿಕಾಂಡ ಬರವಣಿಗೆಯ ವಿನ್ಯಾಸ(ರೂಪ)ವು ಸುಮಾರು ಹತ್ತುಬಾರಿ ಕಂಡುಬರುವ "_______ರ ಪಟ್ಟಿ" ಎಂಬ ಹೇಳಿಕೆಯ ವಾಸ್ತವಾಂಶಗಳನ್ನು ಆಧರಿಸಿದೆ.

**ಆದಿಕಾಂಡ ಉತ್ತರಗಳು 1: ಆರಂಭ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ದೇವರು ಮನುಷ್ಯನಿಗೆ ಈ ನಿರ್ದೇಶನಗಳನ್ನು ಕೊಟ್ಟನು:

   ಅ. ಬಹುಸಂತಾನವುಳ್ಳವರಾಗಿ ಹೆಚ್ಚುವುದು ಮತ್ತು ಭೂಮಿಯಲ್ಲೆಲ್ಲಾ ತುಂಬಿಕೊಳ್ಳುವುದು

   ಆ. ದೇವರ ಸೃಷ್ಟಿಯ ಮೇಲೆ ದೊರೆತನ ಮಾಡುವುದು.

2. ತನ್ನ ಸೃಷ್ಟಿಯ ಕುರಿತ ದೇವರ ಮೌಲ್ಯಮಾಪನವು ಸಕಾರಾತ್ಮಕವಾದದ್ದಾಗಿದೆ: ಪ್ರತೀಬಾರಿ ತಾನು ಮಾಡಿದ್ದನ್ನು ಆತನು "ಒಳ್ಳೇದೆಂದು" ನೋಡಿದನು ಮತ್ತು ಆರನೆಯ ದಿನದ ಸಾಯಂಕಾಲದಲ್ಲಿ ತಾನು ತನ್ನ ಕೆಲಸವನ್ನು ಮುಗಿಸಿದಾಗ ಎಲ್ಲವನ್ನು ಒಳ್ಳೆಯದೆಂಬುದಾಗಿ ನಿರ್ಣಯಿಸಿದನು.

3. ದೇವರು ಆರು ದಿನಗಳ ಕಾಲ ಸೃಷ್ಟಿಯ ಕಾರ್ಯವನ್ನು ಮುಗಿಸಿ ಏಳನೇ ದಿನದಲ್ಲಿ ವಿಶ್ರಮಿಸಿಕೊಂಡದ್ದರಿಂದ ಆ ದಿನವನ್ನು ಪರಿಶುದ್ಧ ದಿನವನ್ನಾಗಿ ಮಾಡಿದನು. ಈ ದಿನವು ಉಳಿದ ದಿನಗಳಿಗಿಂತ ಪ್ರತ್ಯೇಕವಾಗಿತ್ತು. ಹೀಗೆ ಇದು "ಪ್ರತ್ಯೇಕಿಸಲ್ಪಟ್ಟದ್ದು" ಅಥವಾ ಪರಿಶುದ್ಧವಾದದ್ದು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –

2. ಇಂದಿನ ದಕ್ಷಿಣ ಭಾರತದ ವಿಶ್ವಾಸಿಗಳಿಗೆ ಈ ವಾಕ್ಯಭಾಗವು ಹೊಂದಿರುವ ಸಂದೇಶವನ್ನು ಈ ರೀತಿಯಾಗಿ ಸಾರಾಂಶಗೊಳಿಸಬಹುದು:

   ಅ. ದೇವರು ಈ ಲೋಕದ ಸೃಷ್ಟಿಕರ್ತನಾಗಿದ್ದಾನೆ. ಆತನ ಸೃಷ್ಟಿಯು ಸರಿಯಾಗಿ ಸಂಘಟಿಸಲ್ಪಟ್ಟಿದೆ ಮತ್ತು ವಿನ್ಯಾಸಗೊಂಡಿದೆ.

   ಆ. ಆತನು ಸೃಷ್ಟಿಸಿದ ಜಗತ್ತು ಮೂಲತಃ ಒಳ್ಳೇದಾಗಿತ್ತು. ಆದರೆ ತದನಂತರ ಕೆಟ್ಟುಹೋಯಿತು.

   ಇ. ದೇವರ ಸೃಷ್ಟಿಯಲ್ಲಿ ಮನುಷ್ಯರಿಗೆ ಒಂದು ಪ್ರತ್ಯೇಕವಾದ ಸ್ಥಾನಮಾನವಿದೆ. ನಾವು ದೇವರ ಜೊತೆಕೆಲಸ(ಮನೆವಾರ್ತೆ)ದವರೂ ಮತ್ತು ನಮ್ಮ ಮನೆವಾರ್ತೆಗಾಗಿ ಆತನಿಗೆ ಲೆಕ್ಕ ಒಪ್ಪಿಸುವವರೂ (ಜವಾಬ್ದಾರರೂ) ಆಗಿದ್ದೇವೆ.

   ಈ. ಪ್ರಾರಂಭದಿಂದ ಗಂಡು ಮತ್ತು ಹೆಣ್ಣುಗಳಿಬ್ಬರೂ ಸಮಾನರಾಗಿದ್ದಾರೆ: ಇಬ್ಬರೂ ಸಹ ದೇವರ ಸ್ವರೂಪ ಮತ್ತು ಹೋಲಿಕೆಯನ್ನು ಹೊಂದಿದ್ದಾರೆ, ಇಬ್ಬರಿಗೂ ಒಂದೇ ಮನೆವಾರ್ತೆಯ ಜವಬ್ದಾರಿಗಳಿವೆ ಮತ್ತು ಇಬ್ಬರೂ ಸಹ ದೇವರಿಂದ ಒಂದೇ ರೀತಿಯ ಆಶೀರ್ವಾದ ಹೊಂದಿದ್ದಾರೆ. ಖಂಡಿತವಾಗಿ ಗಂಡು ಮತ್ತು ಹೆಣ್ಣಿನಲ್ಲಿ ಯಾವುದೇ ಅಸಮಾನತೆಗಳಿದ್ದರೆ ಅದು ಪಾಪದ ಪರಿಣಾಮವಾಗಿದೆ.

**ಆದಿಕಾಂಡ ಉತ್ತರಗಳು 2: ಆದಾಮ ಮತ್ತು ಹವ್ವ**

**ಈ. ಪ್ರಶ್ನೆಗಳಿಗೆ ಉತ್ತರಿಸಿರಿ**

1. ಏದೆನಿನಲ್ಲಿನ ಉಧ್ಯಾನವು ಪರದೈಸು ಎಂಬುದಾಗಿ ಬಿಂಬಿಸಲ್ಪಟ್ಟಿದೆ:

   ಅ. ಇದರಲ್ಲಿ ಅನೇಕ ಫಲಕೊಡುವ ಮತ್ತು ಸುಂದರ ಮರಗಳಿದ್ದವು

   ಆ. ಇದಕ್ಕೆ ನೀರು ಒದಗುತಿತ್ತು

   ಇ. ಅದರಲ್ಲಿ ಮರಣವಿರಲಿಲ್ಲ

   ಈ. ಅಲ್ಲಿ ನಾಚಿಕೆ ಅಥವಾ ಪಾಪಪ್ರಜ್ಞೆಯಿರಲಿಲ್ಲ

   ಉ. ದೇವರು ಅಲ್ಲಿ ಸುಖಪಡಲು ಮತ್ತು ಅದನ್ನು ನೋಡಿಕೊಳ್ಳುವ ಜವಾಬ್ಧಾರಿಯನ್ನು ಮನುಷ್ಯನಿಗೆ ಕೊಟ್ಟನು

   ಊ. ಅಲ್ಲಿ ಮನುಷ್ಯನು ಒಬ್ಬಂಟಿಯಾಗಿರಲಿಲ್ಲ

2. ದೇವರು ಆದಾಮನಿಗೆ ಈ ಆದೇಶ ಕೊಟ್ಟನು:

   ಅ. ಅದನ್ನು ನೋಡಿಕೊಳ್ಳುವುದು

   ಆ. ಅದರಲ್ಲಿ ಸುಖಪಡುವುದು

3. ಆದಾಮ ಮತ್ತು ಹವ್ವ ಮತ್ತು ಅವರ ಸಂಬಂಧದ ಬಗ್ಗೆ ಈ ವಾಕ್ಯಭಾಗವು ಈ ರೀತಿ ಹೇಳುತ್ತದೆ:

   ಅ. ಅವರಿಗೆ ಒಬ್ಬರಿಗೊಬ್ಬರ ಅವಶ್ಯಕತೆಯಿತ್ತು. ಮನುಷ್ಯನು ಒಬ್ಬಂಟಿಗನಾಗಿರುವುದು ಒಳ್ಳೇದಾಗಿರಲಿಲ್ಲ

   ಆ. ಅವರಿಬ್ಬರೂ ಒಂದೇ ದ್ರವ್ಯದಿಂದ ಸೃಷ್ಟಿಸಲ್ಪಟ್ಟವರು, ಸ್ತ್ರೀಯು ಪುರುಷನ ಎಲುಬು ಮತ್ತು ಮಾಂಸದಿಂದಾಗಿದ್ದಾಳೆ

   ಇ. ಅವರಿಬ್ಬರೂ ಪರಸ್ಪರ ಸಂಬಂಧಿಸಿದವರಾಗಿದ್ದಾರೆ. ಅವರಿಬ್ಬರ ಐಕ್ಯವು ಕುಟುಂಬದಲ್ಲಿನ ರಕ್ತ ಸಂಬಂಧಕ್ಕಿಂತಲೂ ನಿಕಟವಾದುದ್ದಾಗಿದೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –

2. ಒಂದು ವೇಳೆ ನಾವು ನಮ್ಮ ಸತ್ಯವೇದದಲ್ಲಿನ 15 ನೇ ವಚನದಲ್ಲಿನ ಭಾಷಾಂತರದ ಹೊರತಾಗಿ ಪರ್ಯಾಯ ಭಾಷಾಂತರಗಳನ್ನು ಆರಿಸಿಕೊಂಡರೆ ತೋಟದಲ್ಲಿನ ಮನುಷ್ಯನ ಅಸ್ತಿತ್ವದ ಕುರಿತ ನಮ್ಮ ತಿಳುವಳಿಕೆ ಈ ರೀತಿ ಬದಲಾಗುತ್ತದೆ:

   ಅ. ತೋಟದಲ್ಲಿನ ಮನುಷ್ಯನ ಕಾರ್ಯವು, ತೋಟದಲ್ಲಿ ಸಮಯ ಮತ್ತು ಬಲವನ್ನು ಕಳೆಯುವುದಕ್ಕಿಂತ ದೇವರೊಂದಿಗೆ ಹೆಚ್ಚು ನಿಕಟವಾಗಿ ಇರುವುದಕ್ಕೆ ಒತ್ತುಕೊಡುವುದಾಗಿತ್ತು.

   ಆ. ಅಲ್ಲದೆ ಮನುಷ್ಯನು ದೇವರ ಆಜ್ಞೆಗೆ ಅವಿಧೇಯನಾಗಿ, ತಿನ್ನಬಾರದೆಂಬ ಹಣ್ಣನ್ನು ತಿಂದಾಗ ಮುಂದಿನ ಕಥೆಯು ಇನ್ನೂ ದುರಂತಮಯವಾಯಿತು.

   ಇ. ಕೊನೆಯದಾಗಿ, ತೋಟದಲ್ಲಿನ ಮನುಷ್ಯನ ಜೀವನ (ಸೃಷ್ಟಿಕಾರ್ಯವಿಲ್ಲ) ಮತ್ತು – ಪತನ (ಪಾಪದ) ನಂತರದ ಆತನ ಜೀವನದ (ಬಹಳಷ್ಟು ಕೃಷಿಕಾರ್ಯ) ನಡುವಿನ ತದ್ವಿರುದ್ಧತೆಯು ಇನ್ನೂ ತೀಕ್ಷ್ಣವಾಗುತ್ತದೆ.

**ಆದಿಕಾಂಡ ಉತ್ತರಗಳು 3: ಭೂಮಂಡಲದ ಸೃಷ್ಟಿ**

**ಆ. ಪ್ರಶ್ನೆಗಳಿಗೆ ಉತ್ತರಿಸಿರಿ**

1. ದೇವರು ತನ್ನ ಮಾತಿನಿಂದ ಸೃಷ್ಟಿಮಾಡಿದನು: "ದೇವರು ಅನ್ನಲು"…….

2. "ಉಂಟುಮಾಡು" ಎಂಬ ಇಬ್ರಿಯ ಪದವನ್ನು ದೇವರ ಬಗ್ಗೆ ಮಾತ್ರ ಬಳಸಲಾಗಿದೆ. ದೇವರು ತನ್ನ ಸಾರ್ವಭೌಮ ಸೃಷ್ಟಿಶೀಲ ಶಕ್ತಿಯ ಮೂಲಕ ಏನೋ ಹೊಸತನ್ನು ತರುತ್ತಾನೆಂಬುದನ್ನು ಸೂಚಿಸುತ್ತದೆ. ಕನ್ನಡದ "ಸೃಷ್ಟಿಸು" ಎಂಬ ಪದ ಸಹ ಇದೇ ಅರ್ಥವನ್ನು ಕೊಡುತ್ತದೆ.

3. ಕನ್ನಡದ NIBV "ದಿನ" ಎಂಬ ಇಬ್ರಿಯ ಪದವನ್ನು ಮೊದಲು ಹಗಲು (ಕತ್ತಲಿಗೆ ವಿರುದ್ಧವಾದದ್ದು), ಎರಡನೆ ಬಾರಿ ದಿವು (ಪೂರ್ಣದಿನ ಮುಂಜಾನೆಯಿಂದ ಸಾಯಂಕಾಲದವರೆಗೆ) ಎಂದು ಭಾಷಾಂತರಿಸಿದೆ. 2:4b ಯಲ್ಲಿ ಇದೇ ಇಬ್ರಿಯ ಪದವು ದೇವರು ಭೂಮಿ ಆಕಾಶಗಳನ್ನು ಉಂಟುಮಾಡಿದ ದೀರ್ಘಾವಧಿಯನ್ನು ಸೂಚಿಸುತ್ತದೆ. ಕನ್ನಡದ NIBV ಆಗ (ಮಾಡಿದಾಗ) ಎಂಬ ಪ್ರತ್ಯಯವನ್ನು ಉಪಯೋಗಿಸಿ ಭಾಷಾಂತರಿಸುತ್ತದೆ.

4. 6 ದಿನಗಳ ಸೃಷ್ಟಿಯ ವಿನ್ಯಾಸವನ್ನು ತಿಳಿಸುವ ಪಟ್ಟಿ ಇಂತಿದೆ:

| ರೂಪ | ಅಂಶ |
|---|---|
| ದಿನ 1: ಬೆಳಕು | ದಿನ 4: ಸೂರ್ಯ/ಚಂದ್ರ/ನಕ್ಷತ್ರಗಳು |
| ದಿನ 2: ನೀರು/ಆಕಾಶ | ದಿನ 5: ಮೀನು/ಪಕ್ಷಿಗಳು |
| ದಿನ 3: ನೆಲ/ಕಾಯಿಪಲ್ಯ | ದಿನ 6: ಮೃಗಗಳು/ಮನುಷ್ಯರು |

5. ಮನುಷ್ಯರು ದೇವರ ಸ್ವರೂಪದಲ್ಲಿ, ಆತನ ಹೋಲಿಕೆಯಲ್ಲಿ ಸೃಷ್ಟಿಸಲ್ಪಟ್ಟಿದ್ದಾರೆ. ಇದರರ್ಥ ದೇವರು ಯಾರಾಗಿದ್ದಾನೆ, ಆತನು ಭೂಮಂಡಲದ ಸೃಷ್ಟಿಕರ್ತನೂ ಮತ್ತು ಸಾರ್ವಭೌಮ ಅಧಿಕಾರಿಯೂ ಆಗಿದ್ದಾನೆಂಬುದರ ಬಗ್ಗೆ ಜ್ಞಾಪಕಪಡಿಸುವವರಾಗಿ ಆದೇಶ ಹೊಂದಿದವರಾಗಿದ್ದೇವೆ.

6. ದೇವರ ಇತರ ಸೃಷ್ಟಿಯೊಂದಿಗಿನ ಮನುಷ್ಯನ ಸಂಬಂಧವು ದೊರೆತನ ಮಾಡುವುದಾಗಿದೆ (ನೋಡಿಕೊಳ್ಳುವವನು, ಮನೆವಾರ್ತೆಯು) ದೇವರು ತನಗೆ ಮಹಿಮೆಯನ್ನು ತರುವ ರೀತಿಯಲ್ಲಿ ನಾವು ಆತನ ಸೃಷ್ಟಿಯನ್ನು ನೋಡಿಕೊಳ್ಳಬೇಕೆಂದು ಬಯಸುತ್ತಾನೆ.

7. ಆರು ದಿನಗಳ ಸೃಷ್ಟಿಯು ಕೊನೆಗೊಳ್ಳುತ್ತದೆ. ಆದರೆ ಏಳನೇ ದಿನವು ಎಂದಿಗೂ ಕೊನೆಗೊಳ್ಳುವುದಿಲ್ಲ. ಸಬ್ಬತ್ತಿನ ವಿಶ್ರಾಂತಿಯು ಸದಾಕಾಲವೂ ಇರುವುದಾಗಿದೆ. ಮುಂದಿನ ವಚನವು (ಆದಿ. 2:4-25) ಈ ವಿಶ್ರಾಂತಿಯು ದೇವರೊಂದಿಗಿನ ಮನುಷ್ಯನ ಕೆಟ್ಟುಹೋಗದ ಸಂಬಂಧವನ್ನು ಒಳಗೊಂಡಿರುತ್ತದೆಂಬುದನ್ನು ತೋರಿಸುತ್ತದೆ. ಈ ಸಂಬಂಧವು ಪಾಪದಿಂದ (ಬೀಳುವಿಕೆ) ಕೆಟ್ಟುಹೋಗಿತ್ತು. ಆದರೆ ಶುಭಸಂದೇಶವೆಂದರೆ ನಾವು ದೇವಜನರಿಗಾಗಿನ ಸಬ್ಬತ್ ವಿಶ್ರಾಂತಿಯನ್ನು ಮುನ್ನೋಡಬಹುದು (ಇಬ್ರಿಯ 4:9). ಸತ್ಯವೇದವು ಪರದೈಸು ಸರಿಯಾಗುವ ಒಂದು ವರ್ಣನೆಯೊಂದಿಗೆ ಮುಕ್ತಾಯಗೊಳ್ಳುತ್ತದೆ (ಪ್ರಕಟಣೆ 21-22). ದೇವರು ನಮ್ಮನ್ನು ನಾವು ಆತನೊಂದಿಗಿನ ಸಂಬಂಧದಲ್ಲಿ ಉಲ್ಲಾಸಿಸಬೇಕೆಂಬ ಉದ್ದೇಶದಿಂದ ಸೃಷ್ಟಿಸಿದನು. ಹಾಗಾದರೆ ಈ "ವಿಶ್ರಾಂತಿಯು" ಪೂರ್ಣಗೊಳ್ಳುವುದು ಹೇಗೆ? ಯೇಸು ಕ್ರಿಸ್ತನು ಮತ್ತು ಶಿಲುಬೆ ಮೇಲಿನ ಆತನ ಮರಣದ ಕುರಿತ ಸಂದೇಶವು ಈ ಪ್ರಶ್ನೆಯನ್ನು ಉತ್ತರಿಸುತ್ತದೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ದೇವರು ತನ್ನ ಶಕ್ತಿಶಾಲಿ ಮತ್ತು ಕ್ರಿಯಾಶೀಲ ಮಾತಿನ ಮೂಲಕ ಭೂಮಿ ಮತ್ತು ಆಕಾಶವನ್ನು ಸೃಷ್ಟಿಸಿದ್ದು ಆತನ ಸಾರ್ವಭೌಮ ಕ್ರಿಯಾಶೀಲ ಚಿತ್ತದ ಒಂದು ಪ್ರತೀಕವಾಗಿತ್ತು. ದೇವರ ಸೃಷ್ಟಿಯು ಪರಿಪೂರ್ಣವಾಗಿ ಆತನ ಉದ್ದೇಶಗಳನ್ನು ನೆರವೇರಿಸಿತು. ಇದನ್ನು ನಾವು ಸ್ವತಃ ದೇವರು ತನ್ನ ಕಾರ್ಯವನ್ನು ಮೌಲ್ಯಮಾಪನ ಮಾಡುವುದರಲ್ಲಿ ನಾವು ಕಾಣಬಹುದು. ಆತನದನ್ನು ಒಳ್ಳೇದೆಂದು ನೋಡಿದನು. ತಾನು ಉಂಟುಮಾಡಿದ್ದಕ್ಕೆ ಹೆಸರಿಡುವ ಮೂಲಕ ಆತನದನ್ನು ತನ್ನ ಉದ್ದೇಶಕ್ಕನುಸಾರವಾಗಿ ಪ್ರತ್ಯೇಕ ಪಾತ್ರಗಳಿಗಾಗಿ ನೇಮಿಸಿದನು.

2. ಇಂದಿನ ದಕ್ಷಿಣ ಭಾರತದ ವಿಶ್ವಾಸಿಗಳಿಗಾಗಿನ ಪರಿಣಾಮಗಳು:

   ಅ. ದೇವರು ಮನುಷ್ಯನನ್ನು "ತನ್ನ ಸ್ವರೂಪ ಮತ್ತು ಹೋಲಿಕೆಯಲ್ಲಿ" ಉಂಟುಮಾಡಿದನು: ನಾವು ಆತನನ್ನು ಮತ್ತು ಆತನ ಪ್ರೀತಿಯನ್ನು ನಮ್ಮ ಸುತ್ತಣ ಜನರಿಗೆ ಪ್ರತಿಬಿಂಬಿಸಬೇಕು. ನಿಜವೆಂದರೆ ನಾವು ಅವರಿಗೆ ದೇವರನ್ನು ಪ್ರತಿನಿಧಿಸುವವರಾಗಿದ್ದೇವೆ. ಸಭೆ ಮತ್ತು ಪ್ರತಿ ಕ್ರೈಸ್ತ ವಿಶ್ವಾಸಿ ಸಹ ಇದರ ಬಗ್ಗೆ ಅರಿವುಳ್ಳವರಾಗಿರಬೇಕಾಗಿದೆ.

   ಆ. ದೇವರು ಮನುಷ್ಯನಿಗೆ ಭೂಮಿಯ ಮೇಲೆ "ದೊರೆತನ ಮಾಡಲು" ಹೇಳಿದನು: ನಾವು ದೇವರ ಮನೆವಾರ್ತೆಯವರಾಗಿದ್ದು ಆತನು ತಾನು ಸೃಷ್ಟಿಸಿದ ಜಗತ್ತನ್ನು ನೋಡಿಕೊಳ್ಳಬೇಕೆಂಬ ಜವಾಬ್ದಾರಿಯನ್ನು ನಮಗೆ ಕೊಟ್ಟಿದ್ದಾನೆ. ದೇವರ ಸೃಷ್ಟಿಯನ್ನು ದುರಪಯೋಗಪಡಿಸುವ ಅಥವಾ ಕೆಡಿಸುವ ಅಧಿಕಾರ ನಮಗಿಲ್ಲ. ಹಾಗಾಗಿ ಸಭೆ ಮತ್ತು ಪ್ರತಿ ಕ್ರೈಸ್ತ ವಿಶ್ವಾಸಿಗೆ ಇದೊಂದು ದೊಡ್ಡ ಸವಾಲಾಗಿದೆ.

   ಇ. ದೇವರು ಮನುಷ್ಯನನ್ನು ತನ್ನ ವಿಶ್ರಾಂತಿಯಲ್ಲಿ ಸೇರಬೇಕೆಂದು ಆಹ್ವಾನಿಸುತ್ತಾನೆ: ಈ ವಿಶ್ರಾಂತಿಯನ್ನು ದೇವರ ರಾಜ್ಯದಲ್ಲಿ ಕಾಣಬಹುದು. ಆ ರಾಜ್ಯಕ್ಕಾಗಿನ ಬಾಗಿಲು ಯೇಸುವೇ ಆಗಿದ್ದಾನೆ. ಆತನು ತನ್ನನ್ನು ಸ್ವಂತ ರಕ್ಷಕನಾಗಿ ಅಂಗೀಕರಿಸಿಕೊಳ್ಳುವುದರ ಮೂಲಕ ಆತನ ರಾಜ್ಯದೊಳಗೆ ಸೇರಬೇಕೆಂದು ನಮ್ಮೊಬ್ಬಬ್ಬರನ್ನು ಆಹ್ವಾನಿಸುತ್ತಾನೆ. ಅಲ್ಲದೆ ಆತನು ತನ್ನ ಸಾಮ್ರಾಜ್ಯದ ಅರಸನಾಗಿದ್ದಾನೆ. ಆತನು ಪ್ರತೀ ವಿಶ್ವಾಸಿಗಳ ಹೃದಯದಲ್ಲಿ ಆಳ್ವಿಕೆ ಮಾಡಲು ಬಯಸುತ್ತಾನೆ. ತಿರುಗಿ ಬಂದು ತನ್ನ ಆಳ್ವಿಕೆಯನ್ನು ಸಂಪೂರ್ಣವಾಗಿ ಸ್ಥಾಪಿಸುವವರೆಗೆ, ತನ್ನ ರಾಜ್ಯದ ಕುರಿತ ಸುವಾರ್ತೆಯನ್ನು ಸಾರಬೇಕೆಂದು ನಮಗೆ ಆಜ್ಞೆಕೊಟ್ಟಿದ್ದಾನೆ. ಆಗ ಆತನಲ್ಲಿ ನಂಬಿಕೆಯಿಡುವ ನಾವೆಲ್ಲರೂ ನಮ್ಮ ಸಬ್ಬತ್ತಿನ ವಿಶ್ರಾಂತಿಯಲ್ಲಿ ಸೇರಿ ಸದಾಕಾಲವೂ ಆತನೊಂದಿಗಿರುವೆವು. ಇದು ಸಭೆಯ ನಿರೀಕ್ಷೆಯಾಗಿದ್ದು, ಪ್ರತಿ ಕ್ರೈಸ್ತ ವಿಶ್ವಾಸಿಗಳ ನಿರೀಕ್ಷೆ ಆಗಬೇಕಿದೆ.

**ಆದಿಕಾಂಡ ಉತ್ತರಗಳು 4: ಮನುಷ್ಯನ ಪತನ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಆದಿ. 3:6 ರಲ್ಲಿ ನಾವು ಮೂರು ಮೂಲ ಶೋಧನೆಗಳನ್ನು ಕಾಣುತ್ತೇವೆ:

   ಅ. ಒಳ್ಳೆಯ ರುಚಿಕೊಡುವಂತದ್ದು ನಮ್ಮನ್ನು ಶೋಧನೆಗೆ ನಡೆಸುತ್ತದೆ

   ಆ. ನೋಡುವುದಕ್ಕೆ ಉತ್ತಮವಾಗಿರುವುದು ನಮ್ಮನ್ನು ಶೋಧನೆಗೆ ನಡೆಸುತ್ತದೆ

   ಇ. ನಮಗೆ ಜ್ಞಾನವನ್ನು ಕೊಡುತ್ತದೆಂದು ಮಾತುಕೊಡುವ ಸಂಗತಿ ನಮ್ಮನ್ನು ಶೋಧನೆಗೆ ನಡೆಸುತ್ತದೆ

2. ಸರ್ಪವು ಹೇಳಿದ ಸುಳ್ಳುಗಳು ಇಂತಿವೆ:

   ಅ. ಆಕೆಗೆ ದೇವರು ಹೇಳಿದ್ದರ ಕುರಿತ ಆಕೆಯ ಅರ್ಥವಿವರಣೆಯನ್ನು ಪ್ರಶ್ನಿಸುವುದರ ಮೂಲಕ ಅದು ಪ್ರಾರಂಭಿಸಿತು. "ದೇವರು ಅಪ್ಪಣೆಕೊಟ್ಟಿರುವುದು ನಿಜವೋ?"

   ಆ. ಅವಿಧೇಯತೆಯಿಂದ ಎಂತಹ ಪರಿಣಾಮ ಬಂದೊದಗುತ್ತದೆಂಬುದಾಗಿ ದೇವರು ಸ್ತ್ರೀಗೆ ಹೇಳಿದ್ದನ್ನು ಅಲ್ಲಗಳೆಯುತ್ತದೆಂಬುದಾಗಿ ದೇವರು ಸ್ತ್ರೀಗೆ ಹೇಳಿದ್ದನ್ನು ಅಲ್ಲಗಳೆಯುವುದರ ಮೂಲಕ ಅದು ಸುಳ್ಳನ್ನು ಮುಂದುವರೆಸುತ್ತದೆ: "ನೀವು ಹೇಗೂ ಸಾಯುವುದಿಲ್ಲ".

   ಇ. ಅನಂತರ ಅದು ದೇವರ ಪ್ರಾಮಾಣಿಕತೆಯನ್ನು ಪ್ರಶ್ನಿಸುವುದರೊಂದಿಗೆ ಸ್ತ್ರೀಯನ್ನು ಮೋಸಗೊಳಿಸುತ್ತದೆ: "ನಿಮ್ಮ ಕಣ್ಣುಗಳು ತೆರೆಯಲ್ಪಡುವವು, ನೀವು ದೇವರಂತೆ ಆಗಿ … ಇದು ದೇವರಿಗೆ ಚೆನ್ನಾಗಿ ಗೊತ್ತುಂಟು".

3. ತಾವು ಮಾಡಿದ್ದನ್ನು ಸ್ತ್ರೀ ಮತ್ತು ಪುರುಷರಿಬ್ಬರೂ ಈ ರೀತಿಯಾಗಿ ದೇವರಿಗೆ ವಿವರಿಸಿದರು:

   ಅ. ಪುರುಷನು ದೇವರು ತನಗೆ ಕೊಟ್ಟ ಸ್ತ್ರೀಯನ್ನು ದೂರುತ್ತಾನೆ. ಅಲ್ಲದೆ ಆತನು ತಿನ್ನಬಾರದೆಂದು ಹೇಳಿದ ಹಣ್ಣನ್ನು ತನಗೆ ಕೊಟ್ಟದ್ದಕ್ಕಾಗಿ ಸ್ತ್ರೀಯನ್ನು ದೂರುತ್ತಾನೆ. ಹೀಗೆ ಆತನು ಸ್ವತಃ ತನ್ನ ಜವಾಬ್ದಾರಿಯನ್ನು ಅರಿತುಕೊಳ್ಳಲಿಲ್ಲ.

   ಆ. ಆ ಸ್ತ್ರೀಯು ಸರ್ಪವನ್ನು ದೂರಿದಳು. ಹೀಗೆ ಆಕೆ ತನ್ನ ಗಂಡನಂತೆಯೇ ಆದಳು.

4. ಆದಿಕಾಂಡ 3:15ನ್ನು ಕೆಲವೊಮ್ಮೆ "ಸತ್ಯವೇದದಲ್ಲಿನ ಮೊದಲ ಸುವಾರ್ತಾ ಸಂದೇಶ"ವೆಂಬುದಾಗಿ ಕರೆಯಲಾಗಿದೆ, ಯಾಕೆಂದರೆ "ಸಂತಾನ" ಎಂಬುದನ್ನು ಸೈತಾನನ ತಲೆಯನ್ನು ಜಜ್ಜಿಹಾಕಿ, ಶಿಲುಬೆ ಮೇಲೆ ಮರಣಹೊಂದಿ ಮನುಕುಲಕ್ಕೆ ರಕ್ಷಣೆಯನ್ನು ತಂದ ಯೇಸುವಿನ ಕುರಿತ ಪ್ರವಾದನೆಯೆಂಬುದಾಗಿ ಅರ್ಥೈಸಿಕೊಳ್ಳಲಾಗುತ್ತದೆ.

5. ಈ ವಾಕ್ಯಭಾಗದ ಆಧಾರದ ಮೇಲೆ ಪಾಪ(ಪತನ)ದ ಪರಿಣಾಮಗಳ ಪಟ್ಟಿ ಇಂತಿದೆ:

   ಅ. ಮನುಷ್ಯರು ತಮ್ಮ ಅಮರತ್ವವನ್ನು ಕಳಕೊಂಡರು: ಈಗ ಮರಣವೇ ಗತಿಯಾಯಿತು.

   ಆ. ಮನುಷ್ಯರು ತಮ್ಮ ನೈತಿಕ ಮುಗ್ಧತೆಯನ್ನು (ನಿರ್ದೋಶತ್ವ) ಕಳಕೊಂಡರು. ಈಗ ತಮ್ಮ ನೈತಿಕ ಬೆತ್ತಲೆಯ ಬಗ್ಗೆ ಜಾಗ್ರತೆ ಬಂದಿದೆ.

   ಇ. ಮನುಷ್ಯರು ದೇವರೊಂದಿಗಿನ ಅನ್ಯೋನ್ಯತೆಯನ್ನು ಕಳೆದುಕೊಂಡರು: ಈಗ ಅವರು ದೇವರ ಪ್ರಸನ್ನತೆಯಿಂದ ಅಡಗಿಕೊಳ್ಳುವಂತಾಗಿದೆ.

ಈ. ಗಂಡು ಮತ್ತು ಹೆಣ್ಣಿನ ನಡುವಿನ ಮೂಲ ಸಂಬಂಧವು ಕೆಟ್ಟುಹೋಗಿದೆ: ಈಗ ಪುರುಷನು ಸ್ತ್ರೀಯ ಮೇಲೆ ಅಧಿಕಾರ ಸಾಧಿಸುತ್ತಾನೆ ಮತ್ತು ಆಕೆಗೆ ಆತನ ಮೇಲೆ ಆಶೆಯಿದೆ.

ಉ. ಮನುಷ್ಯರು ಪರದೈಸಿನಲ್ಲಿ ವಾಸಿಸದಂತಾಯಿತು: ಸ್ತ್ರೀಯರು ನೋವಿನಿಂದ ಮಕ್ಕಳನ್ನು ಹೆರಬೇಕಾಗಿದೆ ಮತ್ತು ಪುರುಷರು ಜೀವನೋಪಾಯಕ್ಕಾಗಿ ಬೆವರು ಸುರಿಸಿ ಶ್ರಮೆಪಡಬೇಕಾಗಿದೆ.

6. ಏದೆನಿನಲ್ಲಿನ ವಾಗ್ದಾನವನ್ನು ಮನುಷ್ಯನಿಗೆ ಮುಚ್ಚಿಹೋಯಿತು ಮತ್ತು ಅದು ದೇವರ ನ್ಯಾಯತೀರ್ಪಿನ ಕತ್ತಿಯನ್ನು ಹಿಡಿದಿರುವ ದೇವದೂತರಿಂದ ಕಾಯಲ್ಪಟ್ಟಿರುತ್ತದೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –

2. –

3. ನೀವು ಹೇಗೆ ವರ್ತಿಸುವಿರೆಂಬುದು ನನಗೆ ಗೊತ್ತಿಲ್ಲ, ಆದರೆ ಸತ್ಯವೇದದ ಈ ವಾಕ್ಯಭಾಗದಲ್ಲಿನ ಸ್ತ್ರೀಪುರುಷರು ಮಾಡಿದಂತೆ ನೀವು ಮಾಡುವುದಿಲ್ಲವೆಂಬುದಾಗಿ ನಾನು ಭಾವಿಸುತ್ತೇನೆ. ನಾವು ಈ ರೀತಿ ಮಾಡಬೇಕೆಂಬುದಾಗಿ ನಾನು ಭಾವಿಸುತ್ತೇನೆ:

ಅ. ನಾವು ನಮ್ಮ ತಪ್ಪನ್ನು/ಪಾಪವನ್ನು ತಿಳಿದುಕೊಳ್ಳಬೇಕು. ನಾವದನ್ನು ಅರಿಕೆಮಾಡಲೇಬೇಕು.

ಆ. ನಾವು ದೇವರಿಂದಷ್ಟೇ ಅಲ್ಲ ನಾವು ತಪ್ಪುಮಾಡಿದ ಜನರಿಂದ ಸಹ ಕ್ಷಮೆಯನ್ನು ಕೇಳಬೇಕು.

ಇ. ಸಾಧ್ಯವಾದರೆ ನಾವು ತಿದ್ದಿಕೊಳ್ಳಬೇಕು. ನಾವು ಮಾಡಿದ್ದಕ್ಕಾಗಿ ಪರಿಣಾಮವನ್ನು ಎದುರಿಸಲು ನಾವು ಸಿದ್ಧರಿರಬೇಕು.

ಈ. ನಾವು ಹಿಂದಿಗಿಂತ ಸ್ವಲ್ಪ ಹೆಚ್ಚಾಗಿ ದೀನರಾಗಿ, ಬುದ್ಧಿವಂತರಾಗಿ ಮುಂದೆ ಸಾಗಬೇಕು.

4. –

**ಆದಿಕಾಂಡ ಉತ್ತರಗಳು 5: ಏದೆನಿನಲ್ಲಿನ ತೋಟ ಮತ್ತು ಪತನ**

**ಆ. ಪ್ರಶ್ನೆಗಳಿಗೆ ಉತ್ತರಗಳು**

1. ಆದಿಕಾಂಡ 1 ಮತ್ತು ಆದಿಕಾಂಡ 2 ರಲ್ಲಿ ಎರಡು ವಿಷಯ(ವಾಕ್ಯಭಾಗ)ಗಳು ದೇವರ ಕ್ರಿಯಾಶೀಲ ಕಾರ್ಯದ ಎರಡು ವಿಭಿನ್ನ ಅಂಶಗಳನ್ನು ವರ್ಣಿಸುತ್ತವೆ. ಆದಿಕಾಂಡ 1 ರಲ್ಲಿ ದೇವರು ಭೂಮಂಡಲವನ್ನು ಸೃಷ್ಟಿಸುತ್ತಾನೆ. ಇಲ್ಲೊಂದು ದೊಡ್ಡ ದೃಷ್ಟಿಕೋನವನ್ನು ನಾವು ಕಾಣಬಹುದು. ಬೆಳಕು ಮತ್ತು ಕತ್ತಲು, ಆಕಾಶ ಮತ್ತು ನದಿಗಳು, ಆಕಾಶ ಕಾಯಗಳು ಮತ್ತು ಭೂಮಿ (ನೆಲ), ಕಾಯಿಪಲ್ಯ ಮತ್ತು ಪ್ರಾಣಿಗಳು ಮತ್ತು ಕೊನೆಯದಾಗಿ ದೇವರ ಸ್ವರೂಪದಲ್ಲಿ ಮನುಷ್ಯನನ್ನು ಸೃಷ್ಟಿಸಲಾಯಿತು. ಆದಿಕಾಂಡ 2 ದೇವರು ಮನುಷ್ಯನ ಕುರಿತಾಗಿ ತಿಳಿಸುವ ಸಂಬಂಧವನ್ನು ವರ್ಣಿಸುತ್ತದೆ: ದೇವರೊಂದಿಗೆ ಅನ್ಯೋನ್ಯವಾಗಿರುವುದು, ಗಂಡು ಮತ್ತು ಹೆಣ್ಣಿನ ನಡುವೆ ಏಕತೆ ಮತ್ತು ಉಧ್ಯಾನದಲ್ಲಿ ದೇವರ ಇತರ ಸೃಷ್ಟಿಯೊಂದಿಗೆ ಸೌಹಾರ್ದದಿಂದಿರುವುದು.

2. ಆದಿಕಾಂಡ 1 ರಲ್ಲಿ (ಎಲೋಹಿಮ್) ಮತ್ತು ಆದಿಕಾಂಡ 2 ರಲ್ಲಿ (ಎಲೋಹಿಮ್ ಯೆಹೋವ) ಎಂಬುದಾಗಿ ದೇವರಿಗೆ ವಿಭಿನ್ನವಾದ ಇಬ್ರಿಯ ಪದಗಳನ್ನು ಬಳಸಲಾಗಿದೆ. ಇದು ಈ ಎರಡು ಕಥೆಗಳ ವಿಭಿನ್ನವಾದ ದೃಷ್ಟಿಕೋನಗಳಿಗೆ ಒತ್ತುಕೊಡುತ್ತದೆ. ಆದಿಕಾಂಡ 1 ಮಹಿಮೆ ಮತ್ತು ಶಕ್ತಿಪೂರ್ಣನಾದ ಸೃಷ್ಟಿಕರ್ತ ದೇವರನ್ನು ತಿಳಿಸುತ್ತದೆ. ಆದಿಕಾಂಡ 2 ಯೆಹೋವ ಎಂಬ ತನ್ನ ವೈಯಕ್ತಿಕ ಒಡಂಬಡಿಕೆ ಹೆಸರನ್ನು ಬಳಸಿ ಒಬ್ಬ ವೈಯಕ್ತಿಕ ದೇವರನ್ನು ತಿಳಿಯಪಡಿಸುತ್ತದೆ.

3. ಮನುಷ್ಯನನ್ನು ಸೃಷ್ಟಿಸುವಲ್ಲಿನ ದೇವರ ಉದ್ದೇಶವು ಅವರನ್ನು "ಗಂಡು ಹೆಣ್ಣಾಗಿ" ಸೃಷ್ಟಿಸುವಲ್ಲಿ ನೆರವೇರುತ್ತದೆ. ಮನುಷ್ಯನು ಒಬ್ಬಂಟಿಗನಾಗಿರುವುದು ಸರಿಯಲ್ಲವೆಂಬುದಾಗಿ ದೇವರು ನೋಡಿದನು. ಹಾಗಾಗಿ ಆತನು ಆತನ ಎಲುಬಿಗೆ ಎಲಬೂ, ಮಾಂಸಕ್ಕೆ ಮಾಂಸವೂ ಆಗಿರುವ ಸ್ತ್ರೀಯನ್ನು ಉಂಟುಮಾಡಿದನು. ಈಗ ಅವರಿಬ್ಬರೂ ಒಂದೇ ಶರೀರವಾಗಿದ್ದಾರೆ. ಒಟ್ಟಾಗಿ ಅವರು ದೇವರ ಸ್ವರೂಪವಾಗಿದ್ದಾರೆ. ಒಟ್ಟಾಗಿ ಅವರಿಬ್ಬರೂ ಈ ಲೋಕದಲ್ಲಿ ದೇವರನ್ನು ಪ್ರತಿನಿಧಿಸುತ್ತಾರೆ. ಒಟ್ಟಾಗಿ ಅವರಿಬ್ಬರೂ ಸಹ ದೇವರ ಸೃಷ್ಟಿಯನ್ನು ನೋಡಿಕೊಳ್ಳುವವರಾಗಿದ್ದಾರೆ.

4. ಒಳ್ಳೇದರ ಕೆಟ್ಟದ್ದರ ಅರುಹವನ್ನು ಹುಟ್ಟಿಸುವ ಮರದ ಹಣ್ಣನ್ನು ತಿನ್ನುವುದು, ಯಾವುದು ಒಳ್ಳೇದು ಮತ್ತು ಯಾವುದು ಕೆಟ್ಟದೆಂಬುದನ್ನು ನಿರ್ಧರಿಸಲು ಬಯಸುವ ರೀತಿಯಲ್ಲಿ ದೇವರಂತೆ ಆಗಬೇಕೆಂಬ ಆಸೆಯನ್ನು ಸೂಚಿಸುತ್ತದೆ. ಕೇವಲ ದೇವರು ಮಾತ್ರ ಅದನ್ನು ಮಾಡುವವನಾಗಿದ್ದಾನೆ. ಹಾಗಾಗಿ ದೇವರು ಮನುಷ್ಯನಿಗೆ ಆ ಮರದ ಹಣ್ಣನ್ನು ತಿನ್ನಬಾರದೆಂದು ಹೇಳಿದನು.

5. ಪತನ(ಪಾಪ)ವು ದೇವರು ತನ್ನ ಸೃಷ್ಟಿಯಲ್ಲಿ ಈ ಮೂರು ಕ್ಷೇತ್ರಗಳಲ್ಲಿ ಸ್ಥಾಪಿಸಿದ ಸಾಮರಸ್ಯದ ಸಂಬಂಧಗಳನ್ನು ಹಾಳುಮಾಡಿತು:

   ಅ. ಮನುಷ್ಯ ಮತ್ತು ದೇವರ ನಡುವಿನ ಸಂಬಂಧ

   ಆ. ಗಂಡು ಮತ್ತು ಹೆಣ್ಣಿನ ನಡುವಿನ ಸಂಬಂಧ

   ಇ. ಮನುಷ್ಯ ಮತ್ತು ದೇವರು ಸೃಷ್ಟಿಸಿದ ಜಗತ್ತಿನೊಂದಿಗಿನ ಸಂಬಂಧ

6. ಆದಿಕಾಂಡ 3 ರಲ್ಲಿ ಪತನದ ಕಥೆಯಲ್ಲಿನ ದೇವರ ಕೃಪೆಯನ್ನು ದೇವರು ಸರ್ಪಕ್ಕೆ ಮಾಡಿದ ವಾಗ್ದಾನದಲ್ಲಿ ಕಾಣಬಹುದು: "ನಿನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ" (ಆದಿ. 3:15). ಈ ವಾಗ್ದಾನವು ಸತ್ಯವೇದದಲ್ಲಿನ ಮೊದಲ ಸುವಾರ್ತಾ ಸಂದೇಶವಾಗಿದೆ. ಇದು ಯೇಸು ಕ್ರಿಸ್ತನಲ್ಲಿನ ದೇವರ ರಕ್ಷಣೆಯನ್ನು ಮುಂತಿಳಿಸುತ್ತದೆ.

**ಈ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಒಳ್ಳೇದು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿಂದನಂತರ ಜೀವವೃಕ್ಷ ಫಲವನ್ನು ತಿನ್ನದೇ ಇರುವುದು ಅವಶ್ಯಕವಾಗಿತ್ತು. ಒಂದು ವೇಳೆ ತಿಂದರೆ ಮನುಷ್ಯನ ಪತನದ ಸ್ಥಿತಿಯು ಸದಾಕಾಲವೂ ಇರುತ್ತಿತ್ತು. ಈ ರೀತಿ ಆಗಬಾರದೆಂದು ದೇವರು ಮನುಷ್ಯನನ್ನು ತೋಟದಿಂದ ಹೊರಹಾಕಿ ಅಲ್ಲಿ ಜೀವವೃಕ್ಷವನ್ನು ಕಾಯುವುದಕ್ಕಾಗಿ ಕೆರೂಬಿಯರನ್ನು ನಿಲ್ಲಿಸಿದನು (ಆದಿ. 3:24).

2. ಆದಿಕಾಂಡ 3 ರಲ್ಲಿನ ಕಥೆಯು ಮನುಷ್ಯನು ದೇವರಿಗೆ ತೋರಿದ ಅವಿಧೇಯತೆಯು ಎರಡು ರೀತಿಯಲ್ಲಿ ಅಪರಾಧ ಮನೋಭಾವ ಮತ್ತು ನಂಬಿಕೆಯಲ್ಲಿ ಪರಿಣಮಿಸಿತೆಂಬುದನ್ನು ಕಾಣಬಹುದು:

   ಅ. ಆದಾಮ ಮತ್ತು ಹವ್ವರು ದೇವರಿಂದ ಅಡಗಿಕೊಂಡರು: ಅವರ ಅಪರಾಧ ಮನೋಭಾವವು ಅವರ ಬೆತ್ತಲೆತನವನ್ನು ಹೊರಪಡಿಸಿ ಅವರು ದೇವರಿಗೆ ಭಯಪಡುವಂತೆ ಮಾಡಿತು.

   ಆ. ತಾವು ಬೆತ್ತಲಾಗಿದ್ದೇವೆಂಬುದನ್ನು ಆದಾಮ ಹವ್ವರು ತಿಳಿದಾಗ ಅವರು ಅಂಜೂರದ ಎಲೆಗಳಿಂದ ಮುಚ್ಚಿಕೊಂಡರು. ಅವರು ತಮ್ಮ ಬೆತ್ತಲೆತನದ ನಿಮಿತ್ತ ನಾಚಿಕೊಂಡರು.

3. –

**ಆದಿಕಾಂಡ ಉತ್ತರಗಳು 6: ಕಾಯಿನ ಮತ್ತು ಹೇಬೆಲ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಕಾಯಿನ ಮತ್ತು ಹೇಬೆಲರು ದೇವರಿಗೆ ಅರ್ಪಿಸಿದ ಕಾಣಿಕೆ(ಯಜ್ಞ)ಗಳು ಈ ರೀತಿಯಾಗಿ ವರ್ಣಿಸಲ್ಪಟ್ಟಿವೆ:

   ಅ. ಕಾಯಿನನು ತನ್ನ ಹೊಲದ ಬೆಳೆಯಲ್ಲಿ ಕೆಲವನ್ನು ತಂದು ದೇವರಿಗೆ ಕಾಣಿಕೆಯಾಗಿ ಅರ್ಪಿಸಿದನು.

   ಆ. ಹೇಬೆಲನು ತನ್ನ ಹಿಂಡಿನಿಂದ ಚೊಚ್ಚಲ ಕುರಿಗಳನ್ನು ದೇವರಿಗೆ ಕಾಣಿಕೆಯಾಗಿ ತಂದನು.

2. ದೇವರು ಕಾಯಿನನಿಗೆ ಸಂರಕ್ಷಣೆಯನ್ನು ಕೊಡುವುದಕ್ಕಾಗಿ ಆತನ ಮೇಲೆ ಒಂದು ಗುರುತನ್ನಿಟ್ಟನು. ಇದು ಆತನನ್ನು ಹಿಂಸಿಸಲು ಬಯಸುವವರಿಗೆ ಒಂದು ಎಚ್ಚರಿಕೆಯ ಗುರುತಾಗಿತ್ತು.

3. ಲೆಮೆಕನ ಗುಣಸ್ವಭಾವವನ್ನು ನಾನು ಈ ರೀತಿ ವರ್ಣಿಸುವೆನು:

   ಅ. ಆತನು ಗರ್ವಿಷ್ಠನೂ ಸೊಕ್ಕಿನವನೂ ಆಗಿದ್ದನು

   ಆ. ಆತನು ಪ್ರತೀಕಾರ ತೆಗೆದುಕೊಳ್ಳುವವನಾಗಿದ್ದನು

   ಇ. ಆತನು ಒರಟಾದವನೂ ಮತ್ತು ಕ್ರೂರಿಯೂ ಆಗಿದ್ದನು

4. ಹಿನ್ನಲೆಯನ್ನು ನಾವು ನೋಡುವುದಾದರೆ ವಚನ 26 ರ ಕಡೇ ಭಾಗದ ಪ್ರಾಮುಖ್ಯತೆಯು ಕಾಯಿನನ ಸಂತತಿ ಮತ್ತು ಸೇತನ ಸಂತತಿಯ ನಡುವಿನ ತದ್ವಿರುದ್ಧತೆಯನ್ನು ತೋರಿಸುವುದಾಗಿದೆ. ಈ ವಾಕ್ಯಭಾಗದಲ್ಲಿ ತಿಳಿಸಲಾದ ಕಾಯಿನನ ಕೊನೆಯ ಸಂತತಿ ಲೆಮೆಕನಾಗಿದ್ದು, ಆತನು ಗರ್ವಿಷ್ಠನೂ ಮತ್ತು ಹಿಂಸಾಪ್ರವೃತ್ತಿಯವನೂ ಆಗಿದ್ದನು. ಇದಕ್ಕೆ ತದ್ವಿರುದ್ಧವಾಗಿ ಸೇತನ ಮಗನಾದ ಎನೋಷನ ಸಮಯದಲ್ಲಿ ಜನರು ಪುನಃ ದೇವರೆಡೆಗೆ ತಿರುಗಲು ಪ್ರಾರಂಭಿಸಿದರು. ಹೀಗೆ ಸೇತನ ಕುಟುಂಬವು (ಸಂತತಿ) ದೈವಭಕ್ತಿಯುಳ್ಳದ್ದಾಗಿದ್ದು ಕಾಯಿನನ ಸಂತತಿ ದೈವಭಕ್ತಿಯಿಲ್ಲದ್ದಾಗಿದೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ದೇವರು ಹೇಬೆಲನ ಕಾಣಿಕೆಯನ್ನು ಮೆಚ್ಚಿದನು ಆದರೆ ಕಾಯಿನನ ಕಾಣಿಕೆಯನ್ನು ಮೆಚ್ಚಲಿಲ್ಲ (ಇಬ್ರಿಯ 11:4 ಮತ್ತು 1 ಯೋಹಾನ 3:12ನ್ನು ನೋಡಿರಿ):

   ಅ. ಇದಕ್ಕೆ ಕಾರಣ ಕಾಯಿನನ ಕಾಣಿಕೆ ಸಸ್ಯಹಾರವಾಗಿತ್ತು ಮತ್ತು ಹೇಬೆಲನು ಅರ್ಪಿಸಿದ ಕಾಣಿಕೆ ಮಾಂಸಾಹಾರವಾಗಿದ್ದು ರಕ್ತದಿಂದ ಕೂಡಿತ್ತೆಂಬುದಲ್ಲ.

   ಆ. ಇದಕ್ಕೆ ಕಾರಣ ದೇವರೆಡಗಿನ ಅವರ ಮನೋಭಾವನೆಯಲ್ಲಿನ ವ್ಯತ್ಯಾಸ. ಕಾಯಿನನ ಕಾಣಿಕೆಯು ಜವಾಬ್ದಾರಿರಹಿತ ಮತ್ತು ಉದಾರತೆಯಿಲ್ಲದ್ದಾಗಿತ್ತು. ಹೇಬೆಲನ ಕಾಣಿಕೆಯು ಉದಾರವಾಗಿತ್ತು. ಇಬ್ರಿಯ 11:4 ಇದನ್ನು ಈ ರೀತಿ ವಿವರಿಸುತ್ತದೆ: "ನಂಬಿಕೆಯಿಂದಲೇ ಹೇಬೆಲನು ಕಾಯಿನನ ಯಜ್ಞಕ್ಕಿಂತ ಶ್ರೇಷ್ಠವಾದ ಯಜ್ಞವನ್ನು ದೇವರಿಗೆ ಸಮರ್ಪಿಸಿದನು". ಈ ಸಹೋದರರ ಮನೋಭಾವದಲ್ಲಿನ ವ್ಯತ್ಯಾಸದ ನಿಮಿತ್ತ ಯೋಹಾನನು ಕಾಯಿನನ ಕಾರ್ಯವನ್ನು ಕೆಡುಕಿನದು ಮತ್ತು ಹೇಬೆಲನ ಕಾರ್ಯವನ್ನು ನೀತಿಯುಳ್ಳದೆಂದು ಕರೆಯುತ್ತಾನೆ (1 ಯೋಹಾನ 3:12).

2. ವ.6-8 ರಲ್ಲಿ ದೇವರು ಕಾಯಿನನ ಪರಿಸ್ಥಿತಿಯನ್ನು ಈ ರೀತಿ ವರ್ಣಿಸಿದ್ದಾನೆ:

ಅ. ದೇವರು ತನ್ನ ಕಾಣಿಕೆಯನ್ನು ಮೆಚ್ಚದೇ ಇದ್ದದ್ದರಿಂದ ಕಾಯಿನನು ಕೋಪಗೊಳ್ಳಲು ಕಾರಣವೇ ಇರಲಿಲ್ಲ. ಒಂದು ವೇಳೆ ಕಾಯಿನನ ಮನೋಭಾವ ಸರಿಯಾಗಿದ್ದರೆ ದೇವರು ಆತನ ಕಾಣಿಕೆಯಿಂದ ಸಂತೋಷಗೊಳ್ಳುತ್ತಿದ್ದಿರಬಹುದು.

ಆ. ಈಗ ತನಗೆ ಏನಾಗಬಹುದೆಂಬುದನ್ನು ನಿರ್ಧರಿಸುವ ಶಕ್ತಿ ಸ್ವತಃ ಕಾಯಿನನಿಗಿತ್ತು. ಪಾಪವು ಆತನನ್ನು ಹಿಡಿಯಬೇಕೆಂದು ಬಾಗಿಲಲ್ಲಿ ಹೊಂಚಿಕೊಂಡಿತ್ತು. ಒಂದು ವೇಳೆ ಆತನು ಸರಿಯಾದುದ್ದನ್ನು ಮಾಡಿದ್ದರೆ ಪಾಪವು ಆತನಿಂದ ದೂರವಿರುತ್ತಿತ್ತು. ಆದರೆ ಆತನು ಸರಿಯಾದುದ್ದನ್ನು ಮಾಡದೇ ಇದ್ದದ್ದರಿಂದ ಅದು ಆತನ ಮೇಲೆ ಎರಗಿತು.

ಇ. ಕಾಯಿನನು ದೇವರ ಬುದ್ಧಿವಾದವನ್ನು ಕೇಳಲಿಲ್ಲವೆಂಬುದನ್ನು ಮುಂದಿನ ವಚನದಲ್ಲಿ ಕಾಣಬಹುದು. ಬದಲಾಗಿ ಆತನು ತಮ್ಮನ ಮೇಲೆರಗಿದನು. ನಿಜಾರ್ಥದಲ್ಲಿ ಆತನು ಪಾಪದ ಆಕ್ರಮಣಕ್ಕೊಳಗಾಗಿದ್ದನು.

3. ನಮ್ಮ ಈ ಹಿಂದಿನ ಪ್ರಶ್ನೆಯ ಉತ್ತರದಿಮದ ನಾವು ಈ ಅಂಶಗಳನ್ನು ಕಲಿಯಬಹುದು:

ಅ. ನಮ್ಮ ಮನೋಭಾವನೆ ಸರಿಯಿರಬೇಕು. ಅದು ನಂಬಿಕೆಯಾಗಿರಬೇಕು.

ಆ. ನಾವು ತಪ್ಪನ್ನು ಮಾಡುವಾಗ ದೇವರೊಂದಿಗಾಗಲೀ, ನಮ್ಮ ಸಹವರ್ತಿಗಳೊಂದಿಗಾಗಲೀ ನಾವು ಕೋಪಿಸಿಕೊಳ್ಳಬಾರದು. ನಮ್ಮ ಪಾಪವು ದೇವರ ಅಥವಾ ನಮ್ಮ ಸಹೋದರರ ತಪ್ಪಲ್ಲ. ಇದು ಸ್ವತಃ ನಮ್ಮದೇ ತಪ್ಪಾಗಿದೆ.

ಇ. ನಾವು ಕೋಪದಲ್ಲಿರುವಾಗ ಪಾಪವು "ಬಾಗಿಲಲ್ಲಿ ಹೊಂಚಿಕೊಂಡಿರುವದು". ನಮ್ಮ ಜೀವಿತವನ್ನು ಪಾಪವು ನಿಯಂತ್ರಿಸಲು ನಾವು ಬಿಡಬಾರದು.

ಈ. ನಾವು ದೇವರ ಒಳ್ಳೆಯ ಬುದ್ಧಿಮಾತುಗಳಿಗೆ ಕಿವಿಗೊಡಬೇಕು. ಈ ಬುದ್ಧಿವಾದವನ್ನು ನಾವು ದೇವರ ವಾಕ್ಯಗಳಲ್ಲಿ ಕಾಣಬಹುದು. ನಾವು ದೇವರ ಮಾತಿಗೆ ಕಿವಿಗೊಟ್ಟು ವಿಧೇಯರಾದರೆ ನಾವು ಕಾಯಿನನಂತೆ ಕೊಲೆಗಾರರಾಗುವುದಿಲ್ಲ.

4. –

**ಆದಿಕಾಂಡ ಉತ್ತರಗಳು 7: ಜಲಪ್ರಳಯ**

**ಈ. ಪ್ರಶ್ನೆಗಳು**

1. ಈ ಕಥೆಯಲ್ಲಿ ನೋಹನು ಈ ರೀತಿ ವರ್ಣಿಸಲ್ಪಟ್ಟಿದ್ದಾನೆ:

   ಅ. ಆತನು ಯೆಹೋವನ ದೃಷ್ಟಿಯಲ್ಲಿ ದಯೆಹೊಂದಿದನು (6:8)

   ಆ. ಆತನು ನೀತಿವಂತನಾಗಿದ್ದನು (6:9, 7:1)

   ಇ. ಆತನು ತಪ್ಪಿಲ್ಲದವನಾಗಿದ್ದನು

   ಈ. ಆತನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದನು (6:9)

   ಉ. ಆತನು ವಿಧೇಯನಾಗಿದ್ದು ದೇವರು ಅಪ್ಪಣೆಕೊಟ್ಟ ಪ್ರಕಾರವೇ ಮಾಡಿದನು

   (6:22, 7:5,9,16)

   ಊ. ಆತನೊಬ್ಬ ಭಕ್ತಿವಂತ ಮನುಷ್ಯನಾಗಿದ್ದನು. ಹಾಗಾಗಿ ಆತನು ನಾವೆಯಿಂದ ಹೊರಬಂದೊಡನೆಯೇ ಯಜ್ಞವೇದಿಯನ್ನು ಕಟ್ಟಿ ದೇವರಿಗೆ ಹೋಮವನ್ನರ್ಪಿಸಿದನು (8:20).

   ಋ. ದೇವರು ಮೂಲತಃ ಮನುಕುಲಕ್ಕೆ ಕೊಟ್ಟ ಜವಾಬ್ದಾರಿಗಳನ್ನು ಹೊರುವಲ್ಲಿ ಆತನು ನಂಬಿಗಸ್ತನಾಗಿದ್ದನು (9:1-3). ಆದರೆ ಇದರರ್ಥ ನೋಹನು ತಪ್ಪಿಲ್ಲದವನಾಗಿದ್ದನೆಂದಲ್ಲ. ಮುಂದಿನ ಕಥೆಯಲ್ಲಿ (9:18-29) ಆತನು ಹೇಗೆ ದ್ರಾಕ್ಷಾರಸ ಕುಡಿದು ಮತ್ತನಾಗಿದ್ದನೆಂಬುದನ್ನು ನಾವು ನೋಡಬಹುದು. ಅನಂತರ ತನ್ನ ತಂದೆಯು ಕುಡಿದು ಬೆತ್ತಲಾಗಿ ಬಿದ್ದಿರುವುದನ್ನು ಕಂಡ ಮಗ ಹಾಮನನ್ನು ಶಪಿಸಿದನು.

2. ಜಲಪ್ರಳಯದಿಂದ ಎಂಟುಜನರು ರಕ್ಷಿಸಲ್ಪಟ್ಟರು: ನೋಹ ಮತ್ತು ಆತನ ಹೆಂಡತಿ, ಆತನ ಮೂವರು ಗಂಡು ಮಕ್ಕಳಾದ ಶೇಮ್, ಹಾಮ್ ಮತ್ತು ಯೆಫೆತ್ ಮತ್ತು ಅವರ ಹೆಂಡತಿಯರು (6:10,18, 7:13).

3. ಜಲಪ್ರಳಯದ ನೀರು ಎರಡು ಮೂಲದಿಂದ ಬರುತ್ತಿತ್ತು: ಭೂಮಿಯ ಆಳದಿಂದ ಬರುವ ಬುಗ್ಗೆಯ ನೀರು ಮತ್ತು ಆಕಾಶದಿಂದ ಬೀಳುವ ಮಳೆಯ ನೀರು.

4. ನೆಲವು ಈಗ ಪುನಃ ವಾಸಯೋಗ್ಯವಾಗಿದೆ ಎಂಬುದನ್ನು ಪಾರಿವಾಳವು ನೋಹನಿಗೆ ಸಾಬೀತುಪಡಿಸಿತು. ಪಾರಿವಾಳವು ಎಣ್ಣೇಮರದ ಹೊಸ ಚಿಗುರನ್ನು ಬಹುಶಃ ಭೂಮಿಯ ಕೆಳಮಟ್ಟದಿಂದ ತಂದಿರಬಹುದು. ಇದರರ್ಥ ನೀರು ಎತ್ತರವಾದ ಬೆಟ್ಟಗಳಷ್ಟೇ ಅಲ್ಲದೆ ಮರಗಳು ಬೆಳೆಯುವಷ್ಟರ ಮಟ್ಟಿಗೆ ಕೆಳಭಾಗದಿಂದ ಸಹ ಇಳಿದುಹೋಗಿತ್ತು.

5. ದೇವರು ನೋಹನಿಗೂ ಆತನ ಮಕ್ಕಳಿಗೂ ಕೊಟ್ಟ ಆದೇಶವು ಭೂಲೋಕದವನ್ನೆಲ್ಲಾ ತುಂಬಿಕೊಂಡು ಸ್ವಾಧೀನಪಡಿಸಿಕೊಳ್ಳುವುದಾಗಿತ್ತು (9:2). 1:26 ರಲ್ಲಿ ದೇವರು ಮನುಕುಲಕ್ಕೆ ಕೊಟ್ಟ ಆದೇಶದೊಂದಿಗೆ ಹೋಲಿಸಿರಿ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಜಲಪ್ರಳಯದ ನಂತರ ನೋಹನು ಶುದ್ಧಪಶುಗಳಲ್ಲಿ ಕೆಲವನ್ನು ಹೋಮಮಾಡಬೇಕಾಗಿತ್ತು (8:20), ಆ ಕಾರಣದಿಂದ ದೇವರು ಆತನಿಗೆ ಶುದ್ಧ ಪಶುಗಳಲ್ಲಿ ಏಳು ಜೊತೆ ಮತ್ತು ಅಶುದ್ಧ ಪಶುಗಳಲ್ಲಿ ಕೇವಲ ಎರಡು ಜೊತೆಗಳನ್ನು ತೆಗೆದುಕೊಳ್ಳಲು ಹೇಳಿದನು. ಅಲ್ಲದೆ ದೇವರು ಪಶುಗಳನ್ನು (ಶುದ್ಧ) ಆಹಾರವಾಗಿ ಮಾಡಿಕೊಳ್ಳಲು ಅನುಮತಿಸಿದನು (9:3).

2. ಅಧ್ಯಾಯ 8 ರಲ್ಲಿನ ಮೊದಲನೆಯ ವಚನವು ಜಲಪ್ರಳಯದ ಕಥೆಯಲ್ಲಿನ ಒಂದು ತಿರುವಿನ ಅಂಶವಾಗಿದೆ: ಹಿಂದಿನ ಅಧ್ಯಾಯಗಳು ದೇವರ ನ್ಯಾಯತೀರ್ಪಿನ ಮೇಲೆ ಗಮನಹರಿಸಿವೆ. ಈ ವಚನದಿಂದ ಗಮನವು ದೇವರ ಬಿಡುಗಡೆಯ ಮೇಲೆ ಹರಿದಿದೆ.

3. ಜಲಪ್ರಳಯದ ನಂತರ ಸಹ ಭೂಮಿ ಮೇಲೆ ಪಾಪದ ಸಮಸ್ಯೆಯಿತ್ತೆಂಬುದು ಈ ಕಥೆಯಿಂದ ಸ್ಪಷ್ಟವಾಗುತ್ತದೆ: ನೋಹನು ಅರ್ಪಿಸಿದ ಹೋಮವನ್ನು ದೇವರು ಮೆಚ್ಚಿದನು (8:21). ಹಾಗಾಗಿ ಆತನು ಮನುಷ್ಯರ ಮನಸ್ಸಂಕಲ್ಪವು ಚಿಕ್ಕಂದಿನಿಂದಲೂ ಕೆಟ್ಟದ್ದಾಗಿದ್ದರೂ ಭೂಮಿಯನ್ನು ಪುನಃ ಶಪಿಸಿ ಎಲ್ಲಾ ಜೀವಿಗಳನ್ನು ಮತ್ತೆಂದೂ ಸಂಹರಿಸುವುದಿಲ್ಲವೆಂದು ವಾಗ್ದಾನಮಾಡುತ್ತಾನೆ (8:21). ಪಾಪದೊಂದಿಗಿನ ಮನುಷ್ಯನ ಹೋರಾಟ ಮತ್ತು ರಕ್ಷಣೆಯ ಅವಶ್ಯಕತೆಯು ಮನುಷ್ಯನ ಇತಿಹಾಸದಲ್ಲಿ ಒಂದು ನಿರಂತರವಾಗಿ ಸಾಗುವ ಹೋರಾಟವಾಗಿದೆ ಎಂಬುದು ನಮ್ಮ ನಿರ್ಣಯವಾಗಿದೆ.

4. –

**ಆದಿಕಾಂಡ ಉತ್ತರಗಳು 8: ಬಾಬೆಲ್ ಗೋಪುರ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಬಾಬೆಲಿನ ಜನರು ಎರಡು ಕಾರಣಗಳಿಗಾಗಿ ಎತ್ತರವಾದ ಗೋಪುರವನ್ನು ಕಟ್ಟಲು ಬಯಸಿದರು:

   ಅ. ಅವರು ದೊಡ್ಡ ಹೆಸರನ್ನು ಮಾಡಬೇಕೆಂದಿದ್ದರು

   ಆ. ಅವರು ಚದುರದೆ ಒಂದೇ ಸ್ಥಳದಲ್ಲಿ ವಾಸಿಸಬೇಕೆಂದಿದ್ದರು

2. ದೇವರು ಅವರ ಭಾಷೆಯನ್ನು ತಾರುಮಾರುಮಾಡಿದ್ದರಿಂದ ಅವರಿಗೆ ಒಬ್ಬರ ಮಾತು ಒಬ್ಬರಿಗೆ ತಿಳಿಯದಂತಾಗಿ ಮುಂದೆ ಇಂತಹ ದೊಡ್ಡ ಕಾರ್ಯಕ್ಕೆ ಕೈಹಾಕದಂತಾಯಿತು.

3. ದೇವರು ಅವರ ಭಾಷೆಯನ್ನು ತಾರುಮಾರು ಮಾಡಿದ ನಂತರ ಅವರನ್ನು ಭೂಲೋಕದಲ್ಲೆಲ್ಲಾ ಚದುರಿಸಿಬಿಟ್ಟನು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಈ ಕಥೆಯು ದೇಶವೊಂದು ಒಂದೇ ಭಾಷೆಯನ್ನು ಹೊಂದುವ ಪ್ರಾಮುಖ್ಯತೆಯನ್ನು ಹೇಳುತ್ತದೆ. ಆಗ ಹೆಚ್ಚು ಪ್ರಗತಿಯಾಗುತ್ತದೆ ಮತ್ತು ದೇಶವೊಂದು ಒಂದೇ ಭಾಷೆಯನ್ನಾಡುವಾಗ ಸಾಧನೆ ಮಾಡಬಹುದು. ಇದನ್ನು ನಾವು ಇತ್ತೀಚಿನ ಏಷ್ಯಾದ ಇತಿಹಾಸದಲ್ಲಿ ಸಹ ಕಾಣಬಹುದು. ಎರಡನೇ ಮಹಾಯುದ್ಧದ ನಂತರದಲ್ಲಾದ ಜಪಾನಿನ ಅಪೂರ್ವ ಬೆಳವಣಿಗೆ ಮತ್ತು ಕಳೆದ ಕೆಲ ದಶಕಗಳಲ್ಲಿ ದಕ್ಷಿಣ ಕೋರಿಯಾದಲ್ಲಿನ ಆರ್ಥಿಕ ಬೆಳವಣಿಗೆ ಒಂದೇ ಸಾಮಾನ್ಯ ಭಾಷೆ ಮತ್ತು ಒಂದೇ ಸಾಮಾನ್ಯ ಸಾಂಸ್ಕೃತಿಕ ಗುರುತಾಗಿದೆ. ಚೀನಾದ ನಾಯಕರುಗಳು ಬಲವಂತವಾಗಿ ಒಂದೇ ಬಗೆಯ ಚೈನೀ ಭಾಷೆಯನ್ನು ದೇಶೀಯ ಭಾಷೆಯನ್ನಾಗಿ ಘೋಷಿಸಿದ್ದಾರೆ, ಇದು ಇತ್ತೀಚಿನ ವರ್ಷಗಳಲ್ಲಿ ಚೈನಾದ ಆರ್ಥಿಕ ಬೆಳವಣಿಗೆಯ ಮೇಲೆ ಸಕಾರಾತ್ಮಕ ಪ್ರಭಾವ ಬೀರಿದೆ. ಭಾರತೀಯ ಪರಿಸ್ಥಿತಿಯು ವಿಭಿನ್ನವಾಗಿದೆ! ಒಂದೇ ಸಾಮಾನ್ಯ ಭಾಷೆಯ ಕೊರತೆಯಿಂದ ರಾಷ್ಟ್ರೀಯ ನಾಯಕರಿಗೆ ರಾಷ್ಟ್ರವನ್ನು ಪ್ರಗತಿಯೆಡೆಗೆ ಮುನ್ನಡೆಸಲು ಕಷ್ಟವಾಗಿದೆ.

2. ಮನುಷ್ಯನ ಕ್ರಿಯಾಶೀಲ ಮತ್ತು ಪ್ರಯತ್ನವು ಆಶ್ಚರ್ಯಕರವಾಗಬಲ್ಲದೆಂಬುದಾಗಿ ಈ ಕಥೆಯು ನಮಗೆ ತಿಳಿಸುತ್ತದೆ. ಆದರೆ ಅದರಲ್ಲಿ ಅಪಾಯಗಳೂ ಇವೆ. ಗರ್ವ, ಸೊಕ್ಕು ಮತ್ತು ದೇವಭಕ್ತಿಯಿಲ್ಲದಿರುವುದು ಮನುಷ್ಯ ಪ್ರಗತಿಯೊಂದಿಗೆ ಸೇರಿಕೊಳ್ಳಬಹುದು. ನಮ್ಮೆಲ್ಲಾ ಪ್ರಯತ್ನಗಳಿಂದಾಗುವ ಯಶಸ್ಸನ್ನು ಕಾಣುವಾಗ ಸಹ ನಾವು ದೀನತೆಯಿಂದಿರಬೇಕೆಂಬುದು ನಮಗಿರುವ ಪಾಠವಾಗಿದೆ. ನಾವೆಲ್ಲಾ ದೇವರ ಸೃಷ್ಟಿಗಳಾಗಿದ್ದೇವೆ. ನಮ್ಮೆಲ್ಲಾ ವರಗಳು ಮತ್ತು ತಲಾಂತುಗಳೆಲ್ಲವೂ ದೇವರು ನಮಗೆ ಕೊಟ್ಟ ಕೊಡುಗೆಗಳಾಗಿವೆ. ಹಾಗಾಗಿ ನಾವು ಯಶಸ್ಸನ್ನು ಗಳಿಸಿದಾಗ ಮತ್ತು ದೊಡ್ಡ ಸಾಧನೆಗಳನ್ನು ಮಾಡುವಾಗ ವಿಶೇಷವಾಗಿ ನಾವು ದೇವರಿಗೆ ಮಹಿಮೆಯನ್ನು ಸಲ್ಲಿಸಬೇಕು. ಬಾಬೆಲಿನ ಜನರ ಪಾಪವು ಅವರ ಅನ್ವೇಷಣೆ, ಕ್ರಿಯಾಶೀಲತೆ ಮತ್ತು ಅವರ ಕಟ್ಟಡ ಕಾರ್ಯವಾಗಿರಲಿಲ್ಲ, ಅದು ಅವರ ಗರ್ವ ಮತ್ತು ದೇವಭಯವಿಲ್ಲದ ಸೊಕ್ಕಾಗಿತ್ತು.

3. –

**ಆದಿಕಾಂಡ ಉತ್ತರಗಳು 9: ಪಾಪದ ಹರಡುವಿಕೆ**

**ಆ. ಪ್ರಶ್ನೆಗಳಿಗೆ ಉತ್ತರಗಳು**

1. ಕಾಯಿನ ಮತ್ತು ಹೇಬೆಲ (ಆದಿ. 4:1-16): ಸಂಕ್ಷಿಪ್ತವಾಗಿ ಮೂರು ಭಾಗಗಳ ವಿಧಾನವನ್ನು ತಿಳಿಸಿರಿ:

   ಅ. ಪಾಪ: ಕಾಯಿನನು ತನ್ನ ತಮ್ಮನಾದ ಹೇಬೆಲನನ್ನು ಕೊಲ್ಲುತ್ತಾನೆ

   ಆ. ದೇವರ ನ್ಯಾಯತೀರ್ಪು: ಕಾಯಿನನು ಶಾಪಗ್ರಸ್ತನಾಗುತ್ತಾನೆ – ಭೂಮಿಯು ವ್ಯವಸಾಯ ಮಾಡಿದರೂ ಫಲಿಸುವುದಿಲ್ಲ ಮತ್ತು ಸ್ವತಃ ಕಾಯಿನನು ವಿಶ್ರಾಂತಿಯಿಲ್ಲದೆ ಅಲೆಯುವವನಾಗುತ್ತಾನೆ.

   ಇ. ದೇವರ ಕೃಪೆಯ ಸಾಕ್ಷಿ: ಕಾಯಿನನು ಕೊಲ್ಲಲ್ಪಡದಂತೆ ದೇವರೇ ಆತನ ಮೇಲೆ ಒಂದು ಗುರುತನ್ನಿಡುತ್ತಾನೆ.

2. ದೇವಪುತ್ರರು ಮತ್ತು ಮನುಷ್ಯಪುತ್ರಿಯರು (ಆದಿ. 6:1-4): ಸಂಕ್ಷಿಪ್ತವಾಗಿ ಮೂರು ಭಾಗಗಳ ವಿಧಾನವನ್ನು ತಿಳಿಸಿರಿ:

   ಅ. ಪಾಪ: ದೇವಪುತ್ರರು ಪಾಪಿಗಳಾದ ಸ್ತ್ರೀಯರನ್ನು ಮದುವೆಯಾಗಿ ಅವರಿಂದ ಮಕ್ಕಳನ್ನು ಪಡೆದರು.

   ಆ. ದೇವರ ನ್ಯಾಯತೀರ್ಪು: ದೇವರು ತನ್ನ ಜೀವಾತ್ಮವನ್ನು ಮನುಷ್ಯರೊಳಗಿಂದ ತೆಗೆಯಲು ಬಯಸಿದನು

   ಇ. ದೇವರ ಕೃಪೆಯ ಸಾಕ್ಷಿ: ಆದರೂ ದೇವರು ಮನುಷ್ಯನಿಗೆ ನೂರಾಇಪ್ಪತ್ತು ವರುಷಗಳ ಆಯುಸ್ಸನ್ನು ಅನುಗ್ರಹಿಸಿದನು.

3. ಜಲಪ್ರಳಯ (ಆದಿ. 6:5 – 9:17): ಮೂರು ಭಾಗಗಳ ವಿಧಾನವನ್ನು ಸಂಕ್ಷಿಪ್ತವಾಗಿ ತಿಳಿಸಿರಿ:

   ಅ. ಪಾಪ: ಜನರ ದುಷ್ಟತನವು ಹೆಚ್ಚಾಯಿತು ಮತ್ತು ಅವರ ಹೃದಯ ಮತ್ತು ಯೋಚನೆಯೆಲ್ಲಾ ಕೆಟ್ಟದ್ದಾಗಿತ್ತು.

   ಆ. ದೇವರ ನ್ಯಾಯತೀರ್ಪು: ದೇವರು ಮನುಷ್ಯರನ್ನು ಮತ್ತು ತಾನು ಸೃಷ್ಟಿಸಿದ ಪ್ರಾಣಿಗಳೆಲ್ಲವನ್ನೂ ಭೂಮಿ ಮೇಲಿಂದ ಅಳಿಸಿಬಿಡಬೇಕೆಂದು ಬಯಸಿದನು.

   ಇ. ದೇವರ ಕೃಪೆಯ ಸಾಕ್ಷಿ: ನೋಹ ಮತ್ತು ಆತನ ಕುಟುಂಬ ಮತ್ತು ಪ್ರತಿ ಪ್ರಾಣಿಗಳ ಒಂದು ಜೋಡಿ ಜಲಪ್ರಳಯದಿಂದ ರಕ್ಷಿಸಲ್ಪಟ್ಟವು. ಜಲಪ್ರಳವಾದ ನಂತರ ಜಲಪ್ರಳಯದಿಂದ ಭೂಮಿಯನ್ನು ಪುನಃ ನಾಶಮಾಡುವುದಿಲ್ಲವೆಂದು ವಾಗ್ದಾನಮಾಡುತ್ತಾನೆ.

4. ಬಾಬೆಲ್ ಗೋಪುರ (ಆದಿ. 11:1-9): ಮೂರು ಭಾಗಗಳ ವಿಧಾನವನ್ನು ಸಂಕ್ಷಿಪ್ತವಾಗಿ ತಿಳಿಸಿರಿ:

   ಅ. ಪಾಪ: ಅವರು ಗರ್ವಿಗಳೂ ಸೊಕ್ಕಿನವರೂ ಆಗಿದ್ದರು, ಆ ನಿಮಿತ್ತ ಅವರು ಎತ್ತರವಾದ ಗೋಪುರವನ್ನು ಕಟ್ಟುವುದರ ಮೂಲಕ ತಮಗಾಗಿ ದೊಡ್ಡ ಹೆಸರನ್ನು ಪಡೆಯಬೇಕೆಂದು ಬಯಸಿದರು. ಆದರೆ ಅವರು ದೇವರ ಸರ್ವಾಧಿಕಾರವನ್ನು ತಿಳಿಯದೇ ಹೋದರು.

   ಆ. ದೇವರ ನ್ಯಾಯತೀರ್ಪು: ದೇವರು ಅವರ ಭಾಷೆಯನ್ನು ತಾರುಮಾರುಮಾಡಿ ಅವರನ್ನು ಭೂಲೋಕದಲ್ಲೆಲ್ಲಾ ಚದುರಿಸಿಬಿಟ್ಟನು.

   ಇ. ದೇವರ ಕೃಪೆಯ ಸಾಕ್ಷಿ: ಸ್ವತಃ ಕಥೆಯಲ್ಲೇ ಕೃಪೆಯು ಕಂಡುಬರುವುದಿಲ್ಲ. ಆದರೆ ಮುಂದೆ ಬರುವ ವಂಶಾವಳಿಯ ಕಥೆಯು ಮಾನವನ ಪಾಪಕ್ಕೆ ದೇವರ ಕೊನೆಯ ಪರಿಹಾರಕ್ಕೆ ಆರಂಭದ ಅಂಶವಾಗಿರುವ ಅಬ್ರಹಾಮನವರೆಗೆ ನಡೆಸುತ್ತದೆ.

5. ಆದಿ. 9:8-17 ರಲ್ಲಿ ದೇವರು ಸ್ಥಾಪಿಸಿದ ಒಡಂಬಡಿಕೆಯಲ್ಲಿ ಇವೆಲ್ಲಾ ಒಳಗೊಂಡಿವೆ:

ಅ. ನೋಹ ಮತ್ತು ಆತನ ಸಂತತಿ

ಆ. ಭೂಮಿ ಮೇಲಿನ ಎಲ್ಲಾ ಬಗೆಯ ಜೀವಜಂತುಗಳು

6. ಬಾಬೆಲ್ ಗೋಪುರವನ್ನು ಕಟ್ಟುವುದು ಒಂದೇ ಭಾಷೆ, ಒಂದೇ ಸಾಮಾಜಿಕ ಸಂಸ್ಕೃತಿ, ಒಂದೇ ಕುಲ ಎಂಬ ಮನುಷ್ಯನ ಪ್ರಾಚೀನ ಕನಸನ್ನು ಸೂಚಿಸುತ್ತದೆ.

7. ಆದಿ. 11:10-26 ರಲ್ಲಿನ ವಂಶಾವಳಿಯ ಉದ್ದೇಶವು ಪತನದ ವಿಶ್ವವ್ಯಾಪಿ ಪರಿಣಾಮದೊಂದಿಗೆ ಮುಕ್ತಾಯವಾಗುವ ಆದಿಕಾಂಡ ಪುಸ್ತಕದ ಮೊದಲ ಭಾಗ (ಆದಿ. 1-11) ಮತ್ತು ದೇವರು ಅಬ್ರಹಾಮನನ್ನು ಕರೆಯುವುದರೊಂದಿಗೆ ಪ್ರಾರಂಭವಾಗುವ ಪುಸ್ತಕದ ಎರಡನೇ ಭಾಗಗಳ ನಡುವೆ ಒಂದು ಸೇತುವೆಯನ್ನು ರೂಪಿಸುವುದಾಗಿದೆ.

**ಈ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಸತ್ಯವೇದದಲ್ಲಿ ನಿಬಂಧನೆ (ಒಡಂಬಡಿಕೆ) ಎಂಬ ಪದವನ್ನು ಮೊದಲಬಾರಿಗೆ ಆದಿ. 6:18 ರಲ್ಲಿ ಕಾಣಬಹುದು. ಆದರೆ ಒಡಂಬಡಿಕೆಯ ವಿಷಯವನ್ನು ಪುಸ್ತಕದ ಮೊದಲ ಅಧ್ಯಾಯಗಳಲ್ಲೇ ಕಾಣಬಹುದು (ಸೃಷ್ಟಿಯ ಕಥೆಯಲ್ಲಿ ಮತ್ತು ಏದೆನ್ ತೋಟದಲ್ಲಿ ಆದಾಮ ಮತ್ತು ಹವ್ವರ ಕುರಿತ ಕಥೆಯಲ್ಲಿ). ಅಲ್ಲಿ ತನ್ನ ಸೃಷ್ಟಿಸಲ್ಪಟ್ಟ ಲೋಕಕ್ಕೆ ಬದ್ಧನಾಗಿ, ಅದನ್ನು ನೋಡಿಕೊಳ್ಳುವವನಾಗಿರಬೇಕೆಂದು ಮನುಷ್ಯನಿಗೆ ಆದೇಶಿಸುತ್ತಾನೆ.

2. ಬಾಬೆಲ್ ಗೋಪುರದ ಕಥೆಯ ಪ್ರಾಮುಖ್ಯತೆಯು ಸಮಾಜದ ಪತನವನ್ನು ಸೂಚಿಸುತ್ತದೆ. ಆದಿ. 3 ರಲ್ಲಿನ ಮನುಷ್ಯನ ಪಾಪ(ಪತನ)ಕ್ಕೆ ಇದು ತಾರ್ಕಿಕ ಮುಕ್ತಾಯವಾಗಿದೆ ಮತ್ತು ಇದು ಪಾಪದ ಹರಡುವಿಕೆಯನ್ನು ಸೂಚಿಸುತ್ತದೆ. ಬಾಬೆಲ್ ಪಾಪ(ಪತನ)ದೊಂದಿಗೆ ಪ್ರಾರಂಭವಾಗುವ ರಸ್ತೆಯ ಕೊನೆಯಾಗಿದೆ. ಇದು ಪಾಪದ ವಿಶ್ವವ್ಯಾಪಿ ಪರಿಣಾಮವನ್ನು ಪ್ರತಿನಿಧಿಸುತ್ತದೆ.

3. ದೇವರು ಅಬ್ರಹಾಮನನ್ನು ಕರೆದದ್ದು ಒಂದು ಹೊಸ ಆರಂಭವಾಗಿದೆ, ಯಾಕೆಂದರೆ ಅಬ್ರಹಾಮನ ಮೂಲಕ ದೇವರು ಮನುಷ್ಯನ ಪಾಪದ ಸಮಸ್ಯೆಗೆ ತನ್ನ ಕೊನೆಯ ಪರಿಹಾರವನ್ನು ಕಂಡುಕೊಳ್ಳುತ್ತಾನೆ. ಅಬ್ರಹಾಮನು ಇಸ್ರಾಯೇಲ್ ಜನಾಂಗದ ಪಿತೃವಾಗಿದ್ದಾನೆ ಮತ್ತು ಆತನ ಮೊಮ್ಮಗನಾದ ಯೇಸು ಲೋಕದ ರಕ್ಷಕನಾಗುತ್ತಾನೆ.

4. –

**ಆದಿಕಾಂಡ ಉತ್ತರಗಳು 10: ಅಬ್ರಾಮ ಮತ್ತು ದೇವರ ವಾಗ್ದಾನಗಳು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಈ ಅಧ್ಯಾಯಗಳಲ್ಲಿ ದೇವರು ಮೂರು ಸಂದರ್ಭಗಳಲ್ಲಿ ಅಬ್ರಾಮನೊಂದಿಗೆ ವಾಗ್ದಾನ ಮಾಡುತ್ತಾನೆ. ದೇವರು ಅಬ್ರಾಮನಿಗೆ ಮಾಡಿದ ವಾಗ್ದಾನ ಇಂತಿದೆ:

   ಅ. 12:2-3 ರಲ್ಲಿ (ಅಬ್ರಾಮನು ಇನ್ನೂ ಮೆಸೊಪೊಟಮಿಯಾದಲ್ಲಿರುವಾಗ) ದೇವರು ಅಬ್ರಾಮನಿಗೆ

   ವಾಗ್ದಾನಮಾಡುತ್ತಾನೆ:

   - ಆತನನ್ನು ದೊಡ್ಡ ಜನಾಂಗವಾಗುವಂತೆ ಮಾಡುವುದು
   - ಆತನ ಹೆಸರನ್ನು ಪ್ರಖ್ಯಾತಿಗೆ ತರುವುದು
   - ಆತನನ್ನು ಆಶೀರ್ವಾದದ ನಿಧಿಯನ್ನಾಗಿ ಮಾಡುವುದು

   ಆ. 12:7 ರಲ್ಲಿ (ಅಬ್ರಾಮನು ಕಾನಾನಿನಲ್ಲಿ ಶೆಕೆಮನ್ನು ಮುಟ್ಟಿದಾಗ) ದೇವರು ಅಬ್ರಾಮನಿಗೆ ಕಾನಾನನ್ನು ಆತನಿಗೂ ಆತನ ಸಂತತಿಗೂ ಕೊಡುವೆನೆಂಬುದಾಗಿ ವಾಗ್ದಾನಮಾಡುತ್ತಾನೆ.

   ಇ. 13:14-17 ರಲ್ಲಿ (ಅಬ್ರಾಮನು ಲೋಟನಿಂದ ಬೇರ್ಪಟ್ಟ ನಂತರ) ದೇವರು ಅಬ್ರಾಮನಿಗೆ ವಾಗ್ದಾನ ಮಾಡುತ್ತಾನೆ:

   - ಕಾಣುವ ದೇಶವನ್ನೆಲ್ಲಾ ಆತನಿಗೂ ಆತನ ಸಂತತಿಗೂ ಕೊಡುತ್ತೇನೆಂದು ಹೇಳುತ್ತಾನೆ
   - ಆತನ ಸಂತತಿಯನ್ನು ಅಸಂಖ್ಯವಾಗಿ ಮಾಡುವುದು

2. ಐಗುಪ್ತದಲ್ಲಿ ಅಬ್ರಾಮ, ಸಾರಯಳು ಮತ್ತು ಫರೋಹರ ನಡುವೆ ಈ ರೀತಿ ಆಯಿತು: ಕಾನಾನಿನಲ್ಲಿ ತೀವ್ರವಾದ ಬರವಿದ್ದುದ್ದರಿಂದ ಅಬ್ರಾಮ ಮತ್ತು ಸಾರಯಳು (ಅಬ್ರಾಮನ ಹೆಂಡತಿ ಅಲ್ಲದೆ ಆತನ ಮಲತಂಗಿ, ಆದಿ. 20:12ನ್ನು ನೋಡಿರಿ). ಐಗುಪ್ತಕ್ಕೆ ಹೋದರು. ಸುಂದರ ಸ್ತ್ರೀಯಾದ ಸಾರಯಳನ್ನು ನೋಡಿ ಫರೋಹನು ತನ್ನ ಹೆಂಡತಿಯನ್ನಾಗಿ ಮಾಡಿಕೊಂಡಾನೆಂದು ಅಬ್ರಾಮನು ಹೆದರಿದನು. ಹಾಗಾಗಿ ಅಬ್ರಾಮನು ಸಾರಯಳಿಗೆ ತಮಗಿಬ್ಬರಿಗೆ ಮದುವೆಯಾಗಿದೆ ಎಂಬುದನ್ನು ತಿಳಿಸದೆ ತಾವಿಬ್ಬರೂ ಅಣ್ಣತಂಗಿಯೆಂದು ಹೇಳಬೇಕೆಂದು ತಿಳಿಸಿದನು. ಪೂರ್ಣ ವಾಸ್ತವಾಂಶವನ್ನು ತಿಳಿಯದೆ ಅಬ್ರಾಮನ ಹೆಂಡತಿಯಾದ ಸಾರಯಳನ್ನು ಮದುವೆಯಾದ ಫರೋಹನನ್ನು ದೇವರು ಶಿಕ್ಷಿಸಿದನು. ಫರೋಹನಿಗೆ ಸತ್ಯವು ತಿಳಿದಾಗ ಆತನು ಅಬ್ರಾಮನನ್ನು ಬೈಯ್ದು ಆತನನ್ನೂ ಸಾರಯಳನ್ನೂ ಐಗುಪ್ತದಿಂದ ಕಳುಹಿಸಿಬಿಟ್ಟನು.

3. ಆದಿ. 22:17 ರಲ್ಲಿ "ಭೂಮಿ ಮೇಲಿನ ಧೂಳಿನಂತೆ" ಸಮಾನಾರ್ಥಕವಾಗಿರುವ ಎರಡು ಹೇಳಿಕೆಗಳನ್ನು ನಾವು ಕಾಣುತ್ತೇವೆ. ಅವೆಂದರೆ "ಆಕಾಶದ ನಕ್ಷತ್ರಗಳಂತೆಯೂ" ಮತ್ತು "ಸಮುದ್ರ ತೀರದಲ್ಲಿರುವ ಉಸುಬಿನಂತೆಯೂ".

4. ಲೋಟನು ಯೊರ್ದನಿನ ಬಯಲುಗಳಲ್ಲಿ ವಾಸಿಸಲು ಆರಿಸಿಕೊಂಡನು. ಯಾಕೆಂದರೆ ಅದು ನೀರಿನಿಂದ ಕೂಡಿದ್ದು ಫಲವತ್ತಾದ ಭೂಮಿಯಾಗಿತ್ತು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಅಬ್ರಹಾಮನ ಕುರಿತ ಕಥೆಯಲ್ಲಿ ಸಾರಯಳ ಬಂಜೆತನವನ್ನು ಪುನಃ ಪುನಃ ಒತ್ತಿ ಹೇಳಲಾಗಿದೆ (11:2-3, 16:1, 17:17). ಇದು ಈಗ ದೇವರು ಒಂದು ಹೊಸ ಮನುಕುಲವನ್ನು ಹೊರಡಿಸುವುದಕ್ಕಿದ್ದಾನೆಂಬುದನ್ನು ತೋರಿಸುವುದಾಗಿದೆ. ಅಬ್ರಾಮನು ಈ

ಹೊಸ ಮನುಕುಲದ ತಂದೆ, “ಜನಾಂಗಗಳ ಮೂಲ ಪಿತೃ”ವಾಗಲಿರುವನು (17:5). ಇದು ಬಿದ್ದುಹೋದ ಮನುಕುಲದ ಪಿತೃಗಳಾದ ಆದಾಮ ಮತ್ತು ನೋಹರಿಗೆ ತದ್ವಿರುದ್ಧವಾಗಿರುವುದು.

2. “ಅಬ್ರಾಮನು ಐಗುಪ್ತದಲ್ಲಿದ್ದಾಗಿನ” ವಾಕ್ಯಭಾಗದಲ್ಲಿ ಅಬ್ರಹಾಮನ ಬಗ್ಗೆ ನಮಗೆ ಒಂದು ನಕಾರಾತ್ಮಕವಾದ ಚಿತ್ರಣ ಕಂಡುಬರುತ್ತದೆ (ಆದಿ. 12:10-20). ಫರೋಹನೊಂದಿಗಿನ ವ್ಯವಹಾರಗಳಲ್ಲಿ ಆತನು ಪ್ರಾಮಾಣಿಕನಾಗಿರುವುದಿಲ್ಲ. ಇದು ಫರೋಹನನ ಮೇಲೆ ದೇವರ ದಂಡನೆಯನ್ನು ಬರಮಾಡಿತು. ಈ ಕಥೆಯು ನಮಗೆ ಪ್ರಾಮಾಣಿಕತೆ ಮತ್ತು ಮುಕ್ತತೆಯ ಪ್ರಾಮುಖ್ಯತೆಯನ್ನು ನೆನಪಿಸುತ್ತದೆ.

3. ಅಬ್ರಾಮ ಮತ್ತು ಲೋಟರು “ಬೇರ್ಪಟ್ಟ” ವಾಕ್ಯಭಾದಲ್ಲಿ ಅಬ್ರಹಾಮನ ಒಂದು ಸಕಾರಾತ್ಮಕವಾದ ಚಿತ್ರಣವನ್ನು ನಾವು ಕಾಣುತ್ತೇವೆ (ಆದಿ. 13:1-13). ಬೇರ್ಪಡುವಿಕೆಯ ವಿಷಯದಲ್ಲಿ ಆತನು ಜಾಣನಾಗಿರುತ್ತಾನೆ. ಲೋಟನು ಮೊದಲು ಸ್ಥಳವನ್ನು ಆರಿಸಿಕೊಳ್ಳಲು ಬಿಡುವಲ್ಲಿ ಆತನು ಸ್ವಾರ್ಥರಹಿತನಾಗಿರುತ್ತಾನೆ. ಲೋಟನು ಸ್ವಾರ್ಥಿಯಾಗಿದ್ದು ಉತ್ತಮವಾದ ಪ್ರದೇಶವನ್ನು ಆರಿಸಿಕೊಳ್ಳುತ್ತಾನೆ. ಈ ಕಥೆಯು ನಮಗೆ ಅಬ್ರಹಾಮನ ಉದಾತ್ತವಾದ ಗುಣಸ್ವಭಾವವನ್ನು ಅನುಕರಿಸಬೇಕೆಂದು ಉತ್ತೇಜಿಸುತ್ತದೆ.

**ಆದಿಕಾಂಡ ಉತ್ತರಗಳು 11: ಮೆಲ್ಕೀಚೆದೆಕನು, ಅಬ್ರಹಾಮನೊಂದಿಗೆ ದೇವರ ಒಡಂಬಡಿಕೆ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಸಿದ್ದೀಮಿನ ತಗ್ಗಿನಲ್ಲಿ ಯುದ್ಧದ ನಂತರ ಲೋಟನು ಮೆಸೊಪೊಟಮಿಯಾದ ನಾಲ್ಕು ಅರಸರಿಂದ ಸೆರೆಹಿಡಿಯಲ್ಪಟ್ಟನು. ಅವರು ಆತನ ಕುಟುಂಬ ಮತ್ತು ಸೊತ್ತನ್ನೆಲ್ಲಾ ತೆಗೆದುಕೊಂಡರು. ಆದರೆ ಅಬ್ರಹಾಮನು ಲೋಟನನ್ನು ಮತ್ತು ಆತನಿಗೆ ಸೇರಿದ್ದೆಲ್ಲವನ್ನು ಬಿಡಿಸಿ ಅವರನ್ನುತಿರುಗಿ ಸೊದೋಮಿಗೆ ಕರೆತಂದನು.

2. ಮೆಲ್ಕೀಚೆದೆಕನು (ಮತ್ತು ಅಬ್ರಾಮ) ಈ ವಾಕ್ಯಭಾಗದಲ್ಲಿ ದೇವರನ್ನು ಈ ರೀತಿ ವರ್ಣಿಸಿದ್ದಾನೆ:

   ಅ. ಆತನು ಪರಾತ್ಪರನಾದ ದೇವರು. ಇದರರ್ಥ ದೇವರು ಸರ್ವೋನ್ನತನಾಗಿದ್ದಾನೆ. ಮೆಲ್ಕೀಚೆದೆಕನು ಒಬ್ಬ ಕಾನಾನ್ಯ ಅರಸನಾಗಿದ್ದು, ದೇವರ ಕುರಿತು ಆತನ ತಿಳುವಳಿಕೆಯು ಸೀಮಿತವಾಗಿದ್ದಿರಬಹುದು. ಆದರೆ ಅಬ್ರಾಮನಿಗೆ ದೇವರ ಕುರಿತು ಸರಿಯಾದ ತಿಳುವಳಿಕೆಯಿದ್ದಿರಬೇಕು. ಮುಂದಿನ ಅಧ್ಯಾಯದಲ್ಲಿ ದೇವರು ಆತನೊಂದಿಗೆ ಒಡಂಬಡಿಕೆಯೊಂದನ್ನು ಮಾಡಿಕೊಳ್ಳುತ್ತಾನೆ.

   ಆ. ಆತನು ಭೂಮ್ಯಾಕಾಶಗಳ ನಿರ್ಮಾಣಿಕನಾಗಿದ್ದಾನೆ. ಇದರರ್ಥ ದೇವರು ಭೂಮಂಡಲವನ್ನು ಅದರಲ್ಲಿ ಇರುವುದೆಲ್ಲವನ್ನೂ ಉಂಟುಮಾಡಿದವನಾಗಿದ್ದಾನೆ. ಮೆಲ್ಕೀಚೆದೆಕ ಮತ್ತು ಅಬ್ರಾಮರಿಬ್ಬರೂ ಇದನ್ನು ನಂಬಿದ್ದರು.

3. ಅಬ್ರಾಮನು ಸೊದೋಮಿಗೆ ತಂದ ವಸ್ತುಗಳನ್ನು ಇಟ್ಟುಕೊಳ್ಳಲು ನಿರಾಕರಿಸಿದನು. ಯಾಕೆಂದರೆ ಆತನು ಸೊದೋಮಿನ ಅನೀತಿವಂತ ರಾಜನೊಂದಿಗೆ ವ್ಯವಹಾರ ಮಾಡಲು ಬಯಸಲಿಲ್ಲ. ಆತನು ಎಲ್ಲವನ್ನು ಸೊದೋಮಿಗೆ ಹಿಂತಿರುಗಿಸಿದನು. ಲೋಟನನ್ನು, ಆತನ ಕುಟುಂಬ ಮತ್ತು ಸೊತ್ತನ್ನು ಹಿಂತಿರುಗಿಸಿದನು. ಅಲ್ಲದೆ ಆತನು ಈಗಾಗಲೇ ಮೆಲ್ಕೀಚೆದೆಕನಿಗೆ ದಶಮಾಂಶವನ್ನು ಕೊಟ್ಟಿದ್ದನು (ವ.20).

4. ದಮಸ್ಕದ ಎಲೀಯೆಜೆರನು ಅಬ್ರಹಾಮನ ಮುಖ್ಯ ಸೇವಕನಾಗಿದ್ದನು. ಅಬ್ರಾಮನು ದೇವರಿಗೆ ಆತನ ಹೆಸರನ್ನು ಹೇಳುತ್ತಾನೆ, ಯಾಕೆಂದರೆ ಅಬ್ರಾಮನು ಅಪಾರವಾದ ಸಂಪತ್ತಿಗೆ ಪಾಲುಗಾರನಾಗುವವನಾಗಿದ್ದನು. ಬಾಧ್ಯಸ್ಥನಾಗಲು ಅಬ್ರಹಾಮನಿಗೆ ಮಕ್ಕಳಿರಲಿಲ್ಲ. ಮಕ್ಕಳಿಲ್ಲದವನಿಗೆ ಸೇವಕನನ್ನು ಬಾಧ್ಯಸ್ಥನಾಗಿ ಮಾಡುವುದು ಮೆಸೊಪೊಟಮಿಯದಲ್ಲಿನ ಒಂದು ಪದ್ಧತಿಯಾಗಿದ್ದಿರಬಹುದೆಂಬುದಾಗಿ ತೋರಿಬರುತ್ತದೆ.

5. 15 ನೇ ಅಧ್ಯಾಯದಲ್ಲಿ ದೇವರು ಅಬ್ರಹಾಮನಿಗೆ ಈ ಮೂರು ವಾಗ್ದಾನಗಳನ್ನು ಮಾಡುತ್ತಾನೆ:

   ಅ. ಆತನ ಹೊಟ್ಟೆಯಲ್ಲಿ ಹುಟ್ಟಿದ ಮಗನೇ ಬಾಧ್ಯಸ್ಥನಾಗುವನು, ವ.4

   ಆ. ಅಸಂಖ್ಯವಾದ ಸಂತಾನ, ವ.5

   ಇ. ದೇಶದ ಬಾಧ್ಯತೆ (ಕಾನಾನ್), ವ.7

   ಈ. ಅಬ್ರಹಾಮನ ಸಂತಾನದವರನ್ನು ದಾಸರನ್ನಾಗಿ ಮಾಡಿಕೊಂಡವರನ್ನು ಶಿಕ್ಷಿಸುವುದು, ವ.14

   ಉ. ನಾನೂರು ವರ್ಷಗಳ ದಾಸತ್ವದ ನಂತರ ಅಬ್ರಹಾಮನ ಸಂತಾನದವರನ್ನು ಬಿಡುಗಡೆಮಾಡುವುದು ಮತ್ತು ಅವರು ಬಹಳ ಆಸ್ತಿವಂತರಾಗಿ ಬರುವಂತೆ ಮಾಡುವುದು, ವ.14

ಊ. ನಾಲ್ಕನೆಯ ತಲಾಂತರದಲ್ಲಿ ಅಬ್ರಾಮನ ಸಂತತಿಯು ಕಾನಾನಿಗೆ ಹಿಂತಿರುಗಿ ಬಂದು ಅಲ್ಲಿನ ಜನಾಂಗದಿಂದ ಸೊತ್ತನ್ನೆಲ್ಲಾ ತೆಗೆದುಕೊಳ್ಳುವುದು, ವ.16,18. ದೇಶವು ದಕ್ಷಿಣದಲ್ಲಿ ಐಗುಪ್ತದಿಂದ ಉತ್ತರದಲ್ಲಿ ಯೂಫ್ರೇಟೀಸ್ ನದಿಯವರೆಗೂ ಹಬ್ಬಿರುವುದು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಅಬ್ರಾಮನು ಲೋಟನನ್ನು ಬಿಡಿಸುವ ಕಥೆಯಲ್ಲಿ ಅಬ್ರಹಾಮನ ಬಗ್ಗೆ ನಾವೊಂದು ಸಕಾರಾತ್ಮಕವಾದ ಚಿತ್ರಣವನ್ನು ಕಾಣುತ್ತೇವೆ (ಆದಿ. 14:13-16, 21-24). ಮೆಸೊಪೊಟಮಿಯಾದ ಅರಸರಿಂದ ಲೋಟನನ್ನೂ, ಆತನ ಕುಟುಂಬ ಮತ್ತು ಆಸ್ತಿಯನ್ನೆಲ್ಲಾ ಹಿಂತಿರುಗಿ ತರುವಲ್ಲಿ ಆತನೊಂದು ದಿಟ್ಟವಾದ ತೀರ್ಮಾನವನ್ನು ತೆಗೆದುಕೊಳ್ಳುತ್ತಾನೆ. ಆನಂತರ ಆತನು ದೇವರೇ ತನಗೆ ಈ ಜಯವನ್ನು ಕೊಟ್ಟನೆಂಬುದನ್ನು ತಿಳಿದುಕೊಂಡು ತಂದಿದ್ದ ಎಲ್ಲದರಲ್ಲಿ ಹತ್ತರಲ್ಲೊಂದು ಪಾಲನ್ನು ಮೆಲ್ಕೀಜೆದೆಕನಿಗೆ ("ಪರಾತ್ಪರ ದೇವರ ಯಾಜಕ") ಕೊಡುತ್ತಾನೆ. ಕೊನೆಗೆ ಸೊದೋಮಿನ ಅನೀತಿವಂತ ರಾಜನೊಂದಿಗೆ ವ್ಯವಹಾರ ಮಾಡಲು ನಿರಾಕರಿಸುತ್ತಾನೆ. ನಮ್ಮೆಲ್ಲ ಸಾಧನೆಗಳಿಗಾಗಿ ದೇವರನ್ನು ಸನ್ಮಾನಿಸಬೇಕು, ದೇವರ ಕಾರ್ಯಗಳಿಗಾಗಿ ದೇವರನ್ನು ಸನ್ಮಾನಿಸಬೇಕು, ದೇವರ ಕಾರ್ಯಗಳಿಗಾಗಿನ ಕೊಡುಗೆಗಳಲ್ಲಿ ನಂಬಿಗಸ್ತರಾಗಿರಬೇಕು ಮತ್ತು ಈ ಲೋಕದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬಾರದೆಂಬುದನ್ನು ಈ ಕಥೆಯು ನಮಗೆ ಬೋಧಿಸುತ್ತದೆ.

2. –

**ಆದಿಕಾಂಡ ಉತ್ತರಗಳು: 12: ಹಾಗರಳು ಮತ್ತು ಇಷ್ಮಾಯೇಲನು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಅಬ್ರಾಮನ ಹೆಂಡತಿಯಾದ ಸಾರಯಳೇ ಹಾಗರಳೊಂದಿಗೆ ಮಲಗಬೇಕೆಂದು ಆತನ ಬಳಿ ಕೇಳಿಕೊಳ್ಳುತ್ತಾಳೆ. ಸಾರಯಳು ಬಂಜೆಯಾಗಿದ್ದಳು ಆದರೆ ತನ್ನ ದಾಸಿಯಾದ ಹಾಗರಳ ಮೂಲಕವಾದರೂ ತನಗೆ ಸಂತಾನವಾಗಬಹುದೆಂಬುದಾಗಿ ನಿರೀಕ್ಷಿಸಿದಳು. ಹಾಗಾಗಿ ಆಕೆ ಹಾಗರಳನ್ನು ಅಬ್ರಾಮನಿಗೆ ಎರಡನೇ ಹೆಂಡತಿಯಾಗಿ ಕೊಟ್ಟಳು.

2. ತಾನು ಗರ್ಭಿಣಿಯಾಗಿದ್ದೇನೆಂಬುದನ್ನು ತಿಳಿದೊಡನೆಯೇ ಆಕೆ ಗರ್ವಪಟ್ಟು ತನ್ನ ಯಜಮಾನಿಯಾದ ಸಾರಯಳನ್ನು ತಾತ್ಸಾರ ಮಾಡಿದಳು.

3. ಸಾರಯಳು ಈ ರೀತಿಯಾಗಿ ನಡಕೊಂಡಳು:

   ಅ. ತನ್ನ ಈ ಸ್ಥಿತಿಗಾಗಿ ಆಕೆ ಮೊದಲು ಅಬ್ರಾಮನನ್ನು ದೂರಿದಳು

   ಆ. ನಿನಗೆ ಮನಬಂದಂತೆ ಆಕೆಗೆ ಮಾಡಬಹುದೆಂಬುದಾಗಿ ಅಬ್ರಾಮನು ಸಾರಯಳಿಗೆ ಹೇಳಿದನು. ಹಾಗಾಗಿ ಸಾರಯಳು ಹಾಗರಳನ್ನು ಬಾಧಿಸಲು ಪ್ರಾರಂಭಿಸಿದಳು.

4. ಮರುಳುಕಾಡಿನಲ್ಲಿ ಒರತೆಯ ಬಳಿ ಯೆಹೋವನ ದೂತನು ಹಾಗರಳಿಗೆ ಕಾಣಿಸಿಕೊಂಡನು. ಆತನು ಆಕೆಗೆ ನಿನ್ನ ಯಜಮಾನಿಯ ಬಳಿಗೆ ಹಿಂತಿರುಗಿ ಹೋಗಬೇಕೆಂದು ಹೇಳಿದನು. ಆಗ ಆತನು ಹಾಗರಳಿಗೆ ಅಸಂಖ್ಯವಾದ ಸಂತತಿಯನ್ನು ಕೊಡುವೆನೆಂಬುದಾಗಿ ವಾಗ್ದಾನಮಾಡಿದನು. ಅಲ್ಲದೆ ಆತನು ಆಕೆಯ ಮಗನಿಗೆ "ಇಷ್ಮಾಯೆಲ್" ("ದೇವರು ಕೇಳುವನು" ಎಂದರ್ಥ) ಎಂದು ಹೆಸರಿಡಬೇಕೆಂದು ಹೇಳಿದನು, ಮತ್ತು ಆತನ ಭವಿಷ್ಯವನ್ನು ಮುಂತಿಳಿಸಿದನು: ಆತನು ಕಾಡುಗತ್ತೆಯಂತೆ ಇರುವನು, ಅವನು ಎಲ್ಲರ ಮೇಲೆ ಕೈಯೆತ್ತುವನು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಈ ಕಥೆಯಲ್ಲಿ ನಾವು ಅಬ್ರಾಮನ ನಕಾರಾತ್ಮಕವಾದ ಚಿತ್ರಣವನ್ನು ಕಾಣುತ್ತೇವೆ:

   ಅ. ಆತನ ನಂಬಿಕೆಯು ಕ್ಷೀಣಿಸಿತ್ತು: ತನಗೊಬ್ಬ ಮಗನನ್ನು ಕೊಡುವೆನೆಂದು ದೇವರು ಹೇಳಿದ ವಾಗ್ದಾನವನ್ನು ಆತನು ಉಳಿಸಿಕೊಳ್ಳುತ್ತಾನೆಂಬುದಾಗಿ ಅಬ್ರಾಮನು ಯೋಚಿಸಲಿಲ್ಲ. ಹಾಗಾಗಿ ಆತನು ಹಾಗರಳನ್ನು ಎರಡನೇ ಹೆಂಡತಿಯಾಗಿ ಸ್ವೀಕರಿಸಬೇಕೆಂಬ ಸಾರಯಳ ಸಲಹೆಯನ್ನು ಆತನು ಒಪ್ಪಿ ಅಡ್ಡದಾರಿಯನ್ನು ಹಿಡಿಯುತ್ತಾನೆ.

   ಆ. ಆತನು ಪ್ರಾಮಾಣಿಕತೆ ಮತ್ತು ಧೈರ್ಯವನ್ನು ಕಳಕೊಳ್ಳುತ್ತಾನೆ: ತಪ್ಪೆಲ್ಲಾ ಸಾರಯಳದಾಗಿದ್ದರೂ ಆತನು ಆ ಸ್ಥಿತಿಗಾಗಿ ತಾನೇ ಹೊಣೆಗಾರನೆಂಬುದಾಗಿ ಸಾರಯಳ ಧೂಷಣೆಯನ್ನು ಒಪ್ಪುವಂತೆ ಕಾಣುತ್ತದೆ. ಅಲ್ಲದೆ ಆತನು ಹಾಗರಳನ್ನು ಬಾಧಿಸಲು ಸಾರಯಳಿಗೆ ಅನುಮತಿಸಿದನು.

2. ಈ ಕಥೆಯಲ್ಲಿ ಸಾರಯಳ ಒಂದು ನಕಾರಾತ್ಮಕವಾದ ಚಿತ್ರಣವನ್ನು ನಾವು ಕಾಣುತ್ತೇವೆ. ಸ್ವತಃ ತಾನೇ ಕಾರಣವಾಗಿದ್ದ ಸ್ಥಿತಿಗೆ ಆಕೆ ತನ್ನ ಗಂಡನನ್ನು ದೂರುತ್ತಾಳೆ. ಅಲ್ಲದೆ ಆಕೆ ಐಗುಪ್ತದ ತನ್ನ ದಾಸಿಯಾಗಿದ್ದ ಹಾಗರಳನ್ನು ಬಾಧಿಸುತ್ತಾಳೆ.

3. ಈ ಕಥೆಯಲ್ಲಿ ಹಾಗರಳ ಒಂದು ನಕಾರಾತ್ಮಕವಾದ ಚಿತ್ರಣವನ್ನು ನಾವು ಕಾಣುತ್ತೇವೆ. ಅಬ್ರಾಮನಿಗೆ ಆಕೆ ಬಸುರಾದಾಗ ಆಕೆ ಗರ್ವಪಡುತ್ತಾಳೆ. ತನ್ನ ಸೊಕ್ಕಿನ ಮೂಲಕ ಸೃಷ್ಟಿಯಾದ ಪರಿಸ್ಥಿತಿಯಿಂದ ಆಕೆ ಓಡಿಹೋಗುತ್ತಾಳೆ. ಆದರೆ ಯೆಹೋವನ ದೂತನ ಸಂದರ್ಶನವಾದ ನಂತರ ಆಕೆಯ ಮನೋಭಾವನೆ ಬದಲಾಗುತ್ತದೆ.

4. –

5. ಈ ಕಥೆಯಲ್ಲಿ ನಮಗಿರುವ ಪಾತವೇನೆಂದರೆ – ದೇವರ ವಾಗ್ದಾನ ನೆರವೇರಲು ಬಹುಸಮಯ ಹಿಡಿದರೂ ನಾವು ಆತನ ಮೇಲೆ ನಂಬಿಕೆಯಿಡಬೇಕಾಗಿದೆ. ಅಬ್ರಹಾಮನು ದೇವರ ಮೇಲಿನ ನಂಬಿಕೆಯನ್ನು ಕಳಕೊಳ್ಳಲು ಪ್ರಾರಂಭಿಸಿ, ಸಾರಯಳ ಶೋಧನೆಗೆ ಬಲಿಬಿದ್ದು ದೇವರು ತನ್ನ ವಾಗ್ದಾನ ನೆರವೇರಿಸಲು ಸಹಕರಿಸುವುದಕ್ಕಾಗಿ ಬೇರೆ ಮಾರ್ಗ ಹಿಡಿಯುತ್ತಾನೆ. ಆದರೆ ದೇವರೊಂದಿಗೆ ನಾವು ಹೀಗೆ ಮಾಡಬಾರದು. ಆತನಿಗೆ ನಮ್ಮ ಸಹಾಯ ಬೇಕಿಲ್ಲ. ಆತನು ನಮ್ಮ ನಂಬಿಕೆ ಮತ್ತು ವಿಧೇಯತೆ ಬಯಸುತ್ತಾನೆ.

**ಆದಿಕಾಂಡ ಉತ್ತರಗಳು 13: ಸುನ್ನತಿಯ ಒಡಂಬಡಿಕೆ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಈ ಅಧ್ಯಾಯದಲ್ಲಿ ದೇವರು ಅಬ್ರಾಮನಿಗೆ ಈ ವಾಗ್ದಾನ ಮಾಡುತ್ತಾನೆ:

   ಅ. ಆತನಿಗೆ ಅತ್ಯಧಿಕವಾದ ಸಂತತಿಯನ್ನು ಕೊಡುವದು, ವ.2,6

   ಆ. ಆತನು ಜನಾಂಗಗಳಿಗೆ ಮೂಲಪುರುಷನಾಗುವನು ಮತ್ತು ಆತನಿಂದ ಜನಾಂಗಗಳು ಉತ್ಪತ್ತಿಯಾಗುವವು, ವ.4,6

   ಇ. ತನ್ನ ಒಡಂಬಡಿಕೆಯು ಅಬ್ರಹಾಮನಿಗೂ ಮತ್ತು ಆತನ ಸಂತತಿಯ ನಡುವೆ ಶಾಶ್ವತವಾಗಿರುವುದು, ವ.7

   ಈ. ಅಬ್ರಹಾಮ ಮತ್ತು ಆತನ ಸಂತತಿಗೆ ಕಾನಾನ್ ದೇಶವನ್ನು ಶಾಶ್ವತ ಸ್ವಾಸ್ಥ್ಯವಾಗಿ ಕೊಡುವುದು, ವ.8

   ಉ. ಅವರು ದೇವರಾಗಿರುವುದು, ವ.7,8

   ಊ. ಸಾರಳು ಅಬ್ರಹಾಮನಿಗೆ ಮಗನನ್ನು ಹಡೆದು ಆತನಿಗೆ ಇಸಾಕನೆಂಬುದಾಗಿ ಕರೆಯುವರು, ವ.16,19

   ಋ. ಆತನು ಇಷ್ಮಾಯೇಲನನ್ನು ಆಶೀರ್ವದಿಸಿ, ಅಭಿವೃದ್ಧಿ ಮಾಡಿ ಅಧಿಕ ಸಂತಾನ ಕೊಡುವುದು, ವ.20

   ಎ. ದೇವರ ಒಡಂಬಡಿಕೆಯು ಇಸಾಕನ ಸಂಗಡಲೇ ಸ್ಥಾಪಿಸುವುದು, ವ.21

2. ಸುನ್ನತಿಯು ಅಬ್ರಹಾಮ ಮತ್ತು ಆತನ ಸಂತತಿಯು ಕೈಕೊಳ್ಳಬೇಕಾದ ಒಡಂಬಡಿಕೆಗೆ ಒಂದು ಗುರುತಾಗಿತ್ತು. ಎಂಟು ವರ್ಷ ಪ್ರಾಯದ ಗಂಡು ಮಕ್ಕಳೆಲ್ಲಾ ಸುನ್ನತಿ ಮಾಡಿಸಿಕೊಳ್ಳಬೇಕಾಗಿತ್ತು. ಇದು ಸೇವಕರು ಮತ್ತು ದಾಸರನ್ನು ಒಳಗೊಂಡಿತ್ತು.

3. ದೇವರು ಮಗನನ್ನು ಕೊಡುತ್ತೇನೆಂದು ಹೇಳಿದ ವಾಗ್ದಾನವನ್ನು ಆಲೋಚಿಸಿರಿ ಅಬ್ರಹಾಮನು ನಕ್ಕನು. ಆತನು ನೂರು ವರ್ಷದವನಾಗಿದ್ದರೆ, ಸಾರಳಿಗೆ ತೊಂಬತ್ತು ವರ್ಷ ಪ್ರಾಯವಾಗಿತ್ತು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಈ ಕಥೆಯಲ್ಲಿ ನಾವು ಅಬ್ರಹಾಮನ ಒಂದು ಮಿಶ್ರ ಚಿತ್ರಣವನ್ನು ಕಾಣುತ್ತೇವೆ:

   ಅ. ಸಕಾರಾತ್ಮಕವಾಗಿ: ಅಡ್ಡಬೀಳುವುದರ ಮೂಲಕ ಅಬ್ರಹಾಮನು ದೇವರ ಪ್ರಸನ್ನತೆಯನ್ನು ತಿಳಿದುಕೊಳ್ಳುತ್ತಾನೆ (ವ.3). ಎಲ್ಲಾ ಗಂಡಸರಿಗೆ ಸುನ್ನತಿಗಾಗಿ ಏರ್ಪಾಡು ಮಾಡುವುದರ ಮೂಲಕ ಆತನು ಒಡಂಬಡಿಕೆಯ ತನ್ನ ಪಾತ್ರವನ್ನು ಆತನು ನೆರವೇರಿಸುತ್ತಾನೆ (ವ.23-27).

   ಆ. ನಕಾರಾತ್ಮಕವಾಗಿ: ತಮ್ಮ ಮುಪ್ಪಿನ ಹೊರತಾಗಿಯೂ ದೇವರು ಆತನಿಗೂ ಮತ್ತು ಸಾರಳಿಗೂ ಸಂತಾನವನ್ನು ವಾಗ್ದಾನ ಮಾಡಿದಾಗ ಆತನಿಗೆ ತಲೆ ಮೇಲೆತ್ತಲು ಆಗಲಿಲ್ಲ (ವ.17). ತಮಗೊಬ್ಬ ಹೊಸ ಮಗನನ್ನು ಕೊಡುವುದರ ಬದಲು ದೇವರು ಇಷ್ಮಾಯೇಲನನ್ನೇ ಆಶೀರ್ವಧಿಸಬೇಕೆಂಬುದಾಗಿ ಆತನು ಬಯಸಿದಂತೆ ತೋರುತ್ತದೆ (ವ.18).

2. –

**ಆದಿಕಾಂಡ ಉತ್ತರಗಳು 14: ಮೂವರು ಸಂದರ್ಶಕರು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಈ ಕಥೆಯಲ್ಲಿ ಯೆಹೋವನು ಅಬ್ರಹಾಮನಿಗೆ ಮೂವರು ದೂತರ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. ಅದರಲ್ಲೊಬ್ಬನನ್ನು ಬಹುಶಃ "ಯೆಹೋವನ ದೂತನೆಂಬುದಾಗಿ" ತಿಳಿದುಕೊಳ್ಳಬೇಕು.

2. ಮೂವರು ಸಂದರ್ಶಕರಿಗಾಗಿ ಅಬ್ರಹಾಮನು ಈ ರೀತಿಯ ಆಹಾರ ಮತ್ತು ಪಾನವನ್ನು ಸಿದ್ಧಪಡಿಸಿದನು: ಆಗಷ್ಟೇ ಸಿದ್ಧಪಡಿಸಿದ ಸುಟ್ಟ ರೊಟ್ಟಿಗಳು ಮತ್ತು ಹಾಲು ಮೊಸರು ಮತ್ತು ಅಟ್ಟ ಮಾಂಸ.

3. ಆ ಮೂವರು ಪುರುಷರ ಬೇಟಿಯು ದೇವರ ಬೇಟಿ ಸಹ ಆಗಿತ್ತೆಂಬುದನ್ನು ನಾವು ತಿಳಿದುಕೊಳ್ಳಬಹುದು (ವ.10). ಅಲ್ಲಿ ಫಕ್ಕನೆ ಆ ಮೂವರು ಪುರುಷರನ್ನು "ಕರ್ತನು" ಎಂಬುದಾಗಿ ತಿಳಿಸಲಾಗಿದೆ. ಈ ವಚನವು ಈಗಾಗಲೇ ಇಡೀ ಕಥೆಯು ಯೆಹೋವನು ಅಬ್ರಹಾಮನಿಗೆ ದರ್ಶನ ಕೊಟ್ಟದ್ದರ ಕಥೆಯ ಕುರಿತಾಗಿ ಓದುಗರಿಗೆ ತಿಳಿಸಿದ ವಚನ ಒಂದನ್ನು ಸೂಚಿಸುತ್ತದೆ.

4. ಸಾರಳು ಯೆಹೋವನಿಗೆ ಭಯಪಟ್ಟದ್ದರಿಂದ ತಾನು ನಕ್ಕಿದ್ದನ್ನು ನಿರಾಕರಿಸಿದಳು. ಆದರೆ ದೇವರು ಆಕೆಯು ಸುಳ್ಳು ಹೇಳಿದ್ದನ್ನು ಕಂಡುಹಿಡಿದನು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ವಚನ 14 ರಲ್ಲಿನ ಪ್ರಶ್ನೆಯು ("ಯೆಹೋವನಿಗೆ ಅಸಾಧ್ಯವಾದದ್ದುಂಟೋ?") ನಿಜವಾದ ಪ್ರಶ್ನೆಯಲ್ಲ. ಇದನ್ನು ಅಲಂಕಾರಿಕ ಪ್ರಶ್ನೆಯೆನ್ನುವರು. ಅಂದರೆ ಒಂದು ಹೇಳಿಕೆಯು ಪ್ರಶ್ನೆಯ ರೂಪದಲ್ಲಿರುವದಾಗಿದೆ. ಹಾಗಾಗಿ ಇದರರ್ಥ "ದೇವರಿಗೆ ಯಾವುದೂ ಅಸಾಧ್ಯವಲ್ಲ".

2. ಈ ಕಥೆಯಲ್ಲಿ ಸಾರಳ ಒಂದು ಸಕಾರಾತ್ಮಕ ಚಿತ್ರಣವನ್ನು ನಾವು ಕಾಣುತ್ತೇವೆ. ಅಬ್ರಹಾಮನು ಹೇಳಿದಂತೆಯೇ ಆಕೆ ಬಂದ ಅತಿಥಿಗಳಿಗೆ ಆಹಾರವನ್ನು ಸಿದ್ಧಪಡಿಸಿದ್ದು ನಿಜ. ಅದು ಸಕಾರಾತ್ಮಕವಾದದ್ದು. ಆ ಮೂವರು ಅತಿಥಿಗಳು ಮತ್ತು ಅಬ್ರಹಾಮನ ನಡುವಿನ ಸಂಭಾಷಣೆಯ ಬಗ್ಗೆ ಆಕೆ ಕುತೂಹಲದಿಂದಿದ್ದಳು. ಅದು ಒಪ್ಪಬಹುದಾದ ಒಂದು ಗುಣವಾಗಿದೆ. ಆದರೆ ಮಗನ ಬಗ್ಗೆ ಒಂದು ಶುಭವಾರ್ತೆಯನ್ನು ಕೇಳಿದಾಗ ಆಕೆ ಅಪನಂಬಿಕೆಯಿಂದ ನಕ್ಕಳು. ಆಕೆ ದೇವರ ವಾಗ್ದಾನದಲ್ಲಿನ ನಂಬಿಕೆಯಲ್ಲಿ ಕೊರತೆಯುಳ್ಳವಳಾಗಿದ್ದಳು. ಅದು ನಕಾರಾತ್ಮಕವಾಗಿದೆ. ಆದರೆ ಅದಕ್ಕಿಂತಲೂ ಕೆಟ್ಟದ್ದೆಂದರೆ ತಾನು ನಕ್ಕದ್ದನ್ನು ಆಕೆ ಕರ್ತನೆದುರು ಅಲ್ಲಗಳೆದಳು.

3. ಈ ಕಥೆಯಲ್ಲಿ ಅಬ್ರಹಾಮನ ಒಂದು ಸಕಾರಾತ್ಮಕ ಚಿತ್ರಣವನ್ನು ನಾವು ಕಾಣುತ್ತೇವೆ. ಪ್ರಾಚೀನ ಕಾನಾನ್ಯ ಮತ್ತು ಮೆಸೊಪೊಟಮಿಯಾದ ಸಂಸ್ಕೃತಿಯ ಪ್ರಕಾರ ಆತನೊಬ್ಬ ಪರಿಪೂರ್ಣ ಅತಿಥಿಯಾಗಿದ್ದಾನೆ.

   ಅ. ಅತಿಥಿಗಳಿಗೆ ಬೇಕಾದ ಎಲ್ಲವನ್ನೂ ಅಂದರೆ ತೊಳಕೊಳ್ಳಲು ನೀರು, ಕುಳಿತುಕೊಳ್ಳಲು ನೆರಳು, ಆಹಾರ ಮತ್ತು ಪಾನೀಯವೆಲ್ಲವನ್ನೂ ಆತನು ಏರ್ಪಾಡು ಮಾಡಿದ್ದನು.

   ಆ. ಆತನು ಸಂಪೂರ್ಣವಾಗಿ ಸಭ್ಯತೆಯಿಂದ ನಡಕೊಂಡನು: ಆತನು ಬೊಗ್ಗಿ ನಮಸ್ಕರಿಸಿ ಅವರನ್ನು ವಂದಿಸಿದನು. ಆತನವರನ್ನು "ಸ್ವಾಮಿ" ಎಂಬುದಾಗಿ ಕರೆದನು. ಆತನು ತನ್ನನ್ನು ಅವರ ಸೇವಕನೆಂಬುದಾಗಿ ಕರಕೊಳ್ಳುತ್ತಾನೆ. ತನ್ನ ಮನೆಗೆ ಬಂದು ತನಗೆ ದೊಡ್ಡ ಉಪಕಾರ ಮಾಡಿದರೋ ಎಂಬಂತೆ ಆತನು ನಡಕೊಂಡನು. ಅವರು ಊಟ ಮಾಡುವವರೆಗೂ ಆತನು ಹತ್ತಿರ ನಿಂತುಕೊಂಡು ಉಪಚಾರಮಾಡಿದನು.

ಇ. ಆತನು ಅವರಿಗಾಗಿ ವಿಶೇಷ ಆಹಾರವನ್ನು ಸಿದ್ಧಪಡಿಸಿದನು: ಹಸನಾದ ಹಿಟ್ಟನ್ನು ನಾದಿ ರೊಟ್ಟಿಯನ್ನು ಮಾಡಬೇಕೆಂದು ಹೆಂಡತಿಗೆ ಹೇಳಿದನು. ಕೊಬ್ಬಿದ ಎಳೆ ಕರುವನ್ನು ತಂದು ಅಡುಗೆ ಮಾಡಿಸಿದನು. ಅನಂತರ ಹಾಲು ಮೊಸರನ್ನು ಆಹಾರದೊಂದಿಗೆ ಬಡಿಸಿದನು.

4. ವಚನ 14ನ್ನು ಪೌಲನು ("ಬರುವ ವರುಷ ಇದೇ ಕಾಲದಲ್ಲಿ ನಾನು ನಿನ್ನ ಬಳಿಗೆ ಬಂದಾಗ ಸಾರಳಿಗೆ ಮಗನಿರುವನು") ರೋಮಾ. 9:6-9 ರಲ್ಲಿ ಉಪಯೋಗಿಸುತ್ತಾನೆ. ಅಬ್ರಹಾಮನ ನಿಜವಾದ ಸಂತತಿ ಮತ್ತು ದೇವರ ಮಕ್ಕಳ ಕುರಿತಾಗಿ ತಿಳಿಸಲು ಆತನು ಇದನ್ನು ಉಪಯೋಗಿಸುತ್ತಾನೆ. ಕೇವಲ ವಾಗ್ದಾನದ ಮಕ್ಕಳು ಮತ್ತು ಅಬ್ರಹಾಮನ ಸಂತತಿ ದೇವರ ಮಕ್ಕಳಾಗಿದ್ದಾರೆಯೇ ವಿನಃ ಸ್ವಾಭಾವಿಕ ಮಕ್ಕಳಲ್ಲ.

5. –

**ಆದಿಕಾಂಡ ಉತ್ತರಗಳು 15: ಸೊದೋಮ್ ಮತ್ತು ಗೊಮೋರಗಳ ನಾಶನ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ದೇವರ ರಕ್ಷಣೆಯ ಯೋಜನೆಯಲ್ಲಿನ ಅಬ್ರಹಾಮನ ಭವಿಷ್ಯದ ಪಾತ್ರದ ನಿಮಿತ್ತ ದೇವರು ತನ್ನ ಯೋಜನೆಗಳನ್ನು ಅಬ್ರಹಾಮನಿಗೆ ಪ್ರಕಟಿಸಲು ನಿರ್ಧರಿಸಿದನು. ಅಬ್ರಹಾಮನ ಮೂಲಕ ಒಂದು ದೊಡ್ಡ ಮತ್ತು ಬಲಿಷ್ಠ ಜನಾಂಗ ಬರುವುದಾಗಿತ್ತು. ಅಬ್ರಹಾಮನ ಮೂಲಕ ಎಲ್ಲಾ ಜನಾಂಗಗಳಿಗೂ ಆಶೀರ್ವಾದವಾಗುವುದಾಗಿತ್ತು. ಅಬ್ರಹಾಮ ಮತ್ತು ಆತನ ಸಂತತಿಯ ಮೂಲಕ ದೇವರ ವಾಗ್ದಾನಗಳು ನೆರವೇರುವುದಾಗಿತ್ತು.

2. ತನಗೆ ತಿಳಿಸಿದಂತೆ ಸೊದೋಮಿನ ಪಾಪವು ನಿಜವಾಗಲೂ ಅಷ್ಟು ಕೆಟ್ಟದ್ದಾಗಿದೆಯಾ ಎಂಬುದನ್ನು ನೋಡುವ ಸಲುವಾಗಿ ದೇವರು ಸೊದೋಮಿಗೆ ಇಳಿದು ಬಂದನು.

3. ಲೋಟನ ಹೆಣ್ಣುಮಕ್ಕಳೊಂದಿಗೆ ನಿಶ್ಚಯಗೊಂಡಿದ್ದ ಯುವಕರು ಆ ಪರಿಸ್ಥಿತಿಯ ಗಂಭೀರತೆಯನ್ನು ನಂಬಲಿಲ್ಲ. ಹಾಗಾಗಿ ಅವರು ಸೊದೋಮನ್ನು ಬಿಟ್ಟು ಹೋಗಲು ನಿರಾಕರಿಸಿ ಪಟ್ಟಣದೊಂದಿಗೆ ನಾಶವಾಗಿ ಹೋದರು.

4. ಲೋಟನ ಹೆಂಡತಿಯು ಉಪ್ಪಿನ ಕಂಬವಾಗಿ ಮಾರ್ಪಟ್ಟಳು. ಆಕೆಯು ದೇವದೂತರ ಸಲಹೆಯನ್ನು ಕೇಳಲಿಲ್ಲ. ಬದಲಾಗಿ ಸೊದೋಮ್ ಗೊಮೋರಗಳು ನಾಶವಾಗುವುದನ್ನು ತಿರುಗಿ ನೋಡಿದಳು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. "ಅಬ್ರಹಾಮನು ದೇವರನ್ನು ಬೇಡಿಕೊಂಡದ್ದು" ಎಂಬ ವಾಕ್ಯಭಾಗವನ್ನಾಧರಿಸಿದ ಮೂರು ಪ್ರಶ್ನೆಗಳಿಗೆ ಉತ್ತರಗಳು (ಆದಿ. 18:16-35):

   ಅ. ವಚನ 23 ರಲ್ಲಿ ಅಬ್ರಹಾಮನು ದೇವರಿಗೆ ಕೇಳುವ ಪ್ರಶ್ನೆಯು ಆಶ್ಚರ್ಯಕರವಾಗಿದೆ. ಸೊದೋಮನ್ನು ನಾಶಪಡಿಸುತ್ತಾನೆಂಬ ದೇವರ ಯೋಜನೆಯ ಬಗ್ಗೆ ಹಿಂದಿನ ವಚನದಲ್ಲಿ ಏನೂ ತಿಳಿಸಿಲ್ಲ. ಈ ಕ್ಲಿಷ್ಟಕರತೆಯನ್ನು ವಿವರಿಸುವ ಅತ್ಯುತ್ತಮವಾದ ಬಗೆಯೆಂದರೆ ವಚನ 17 ರಲ್ಲಿ ಸ್ವತಃ ದೇವರು ತನಗೇ ಕೇಳಿಕೊಳ್ಳುವ ಪ್ರಶ್ನೆಯು ("ನಾನು ಮಾಡಬೇಕೆಂದಿರುವ ಕಾರ್ಯವನ್ನು ಅಬ್ರಹಾಮನಿಗೆ ಮರೆಮಾಡುವುದು ಸರಿಯೋ?") ತಾನು ಸೊದೋಮ್ ಮತ್ತು ಗೊಮೋರ ಪಟ್ಟಣಗಳನ್ನು ನಾಶ ಮಾಡಲು ಹೊರಟಿರುವೆನೆಂಬುದಾಗಿ ದೇವರು ಅಬ್ರಹಾಮನಿಗೆ ಹೇಳುವಂತೆ ಮಾಡಿದೆ ಎಂಬುದಾಗಿ ಊಹಿಸಿಕೊಳ್ಳುವುದಾಗಿದೆ.

   ಆ. ಸೊದೋಮಿಗಾಗಿನ ತನ್ನ ವಿಜ್ಞಾಪನೆಯನ್ನು ಸೀಮಿತಗೊಳಿಸುವಲ್ಲಿ ಅಬ್ರಹಾಮನಿಗೆ ವೈಯಕ್ತಿಕ ಕಾರಣಗಳಿದ್ದವೆಂಬುದಾಗಿ ನಾನೆಣಿಸುತ್ತೇನೆ. ಅಲ್ಲಿಯೇ ಆತನ ತಮ್ಮನ ಮಗನಾದ ಲೋಟ ಮತ್ತು ಆತನ ಕುಟುಂಬ ವಾಸವಾಗಿತ್ತು. ಆದರೆ ಗೊಮೋರದ ರಕ್ಷಣೆಯಲ್ಲಿ ಅಬ್ರಹಾಮನಿಗೆ ಯಾವುದೇ ವೈಯಕ್ತಿಕ ಆಸಕ್ತಿಯಿರಲಿಲ್ಲ.

   ಇ. ವಚನ 35 ರಲ್ಲಿ ದೇವರು ಅಬ್ರಹಾಮನೊಂದಿಗೆ ಮಾತನಾಡುವುದನ್ನು ಮುಗಿಸುತ್ತಾನೆ, ಯಾಕೆಂದರೆ ಅಬ್ರಹಾಮನ ವಿಜ್ಞಾಪನೆಯು ಮುಗಿದಿತ್ತು. ಸೊದೋಮಿನಲ್ಲಿ ಕನಿಷ್ಠಪಕ್ಷ ಹತ್ತುಮಂದಿ ನೀತಿವಂತರಿರಬಹುದೆಂಬುದಾಗಿ ಅಬ್ರಹಾಮನು ನಿಶ್ಚಯಿಸಿಕೊಂಡಿದ್ದನು.

2. ಈ ಕಥೆಯಲ್ಲಿ ಅಬ್ರಹಾಮನ ಒಂದು ಸಕಾರಾತ್ಮಕವಾದ ಚಿತ್ರಣವನ್ನು ನಾವು ಕಾಣುತ್ತೇವೆ. ದೇವರ ರಕ್ಷಣೆಯ ಕಥೆಯಲ್ಲಿನ ಆತನ ಪಾತ್ರಕ್ಕಾಗಿ ದೇವರು ಆತನಿಗೆ ತಿಳಿಯಪಡಿಸಿದನು (18:17-19). ಸೊದೋಮಿನಲ್ಲಿ ವಾಸವಾಗಿದ್ದ ನೀತಿವಂತರ ನಿಮಿತ್ತ ಆ ಪಟ್ಟಣದ ರಕ್ಷಣೆಗಾಗಿ ಮೊರೆಯಿಡುವಾಗ ಆತನು ದೇವರೊಂದಿಗೆ ಗೌರವ ಮತ್ತು ಆಪ್ತತೆಯೆರಡನ್ನೂ ತೋರ್ಪಡಿಸಿದನು

(18:22-23). ಅಲ್ಲದೆ ಆತನು ತನ್ನ ಪ್ರಾರ್ಥನೆಯಲ್ಲಿ ಸಹನೆಯಿಂದಿದ್ದನು. ಗ್ರಂಥಕರ್ತನು ಸಹ ದೇವರು ಅಬ್ರಹಾಮನನ್ನು ನೆನಸಿಕೊಂಡನೆಂಬುದಾಗಿ ಮುಕ್ತಾಯಗೊಳಿಸುತ್ತಾನೆ. ದೇವರು ಅಬ್ರಹಾಮನ ಕಳಕಳಿಗೆ ಸ್ಪಂದಿಸಿ ಲೋಟನನ್ನು ರಕ್ಷಿಸಿದನು.

3. ಈ ಕಥೆಯಲ್ಲಿ ನಾವು ಲೋಟನ ಒಂದು ಮಿಶ್ರ ಚಿತ್ರಣವನ್ನು ಕಾಣುತ್ತೇವೆ. ಆದರೆ ನಕಾರಾತ್ಮಕತೆಯೇ ಇದರಲ್ಲಿ ಪ್ರಬಲವಾಗಿದೆ:

ಅ. ಒಂದು ಸಕಾರಾತ್ಮಕ ಅಂಶ: ಆತನೊಬ್ಬ ಒಳ್ಳೆಯ ಅತಿಥೇಯನಾಗಿದ್ದು ದೂತರನ್ನು ತನ್ನ ಮನೆಗೆ ಆಹ್ವಾನಿಸಿ ಅವರಿಗೆ ಭೋಜನವನ್ನಿತ್ತನು ಮತ್ತು ಜನರು ಅವರನ್ನು ಕೆಟ್ಟದ್ದಾಗಿ ನೋಡಿಕೊಳ್ಳಲು ಅನುಮತಿಸುವುದಿಲ್ಲ.

ಆ. ಒಂದು ನಕಾರಾತ್ಮಕ ಅಂಶ: ದುಷ್ಟ ಜನರ ಗುಂಪಿಗೆ ತನ್ನ ಹೆಣ್ಣು ಮಕ್ಕಳನ್ನು ಬಲಿಕೊಡಲು ಸಹ ಆತನು ಸಿದ್ಧನಿದ್ದನು. ಸ್ವತಃ ತನ್ನ ಹೆಸರಿಗಿಂತ ಆತನು ತನ್ನ ಹೆಣ್ಣು ಮಕ್ಕಳ ಬಗ್ಗೆ ಹೆಚ್ಚು ಕಾಳಜಿಯುಳ್ಳವನಾಗಿದ್ದಿರಬೇಕು. ಅಲ್ಲದೆ ತನ್ನ ಅಳಿಯಂದಿರಿಗೆ ಪಟ್ಟಣವನ್ನು ಬಿಡಬೇಕೆಂದು ಮನವೊಲಿಸಲು ವಿಫಲನಾಗಿದ್ದನು. ಸ್ವತಃ ತಾನೇ ಅಲ್ಲಿಂದ ಹೊರಡಲು ಸಿದ್ಧನಿರಲಿಲ್ಲ. ಗುಡ್ಡಕ್ಕೆ ಓಡಿಹೋಗಬೇಕೆಂದು ಹೇಳಿದಾಗ ಆತನು ದೂತರನ್ನು ನಂಬಲಿಲ್ಲ. ಬದಲಾಗಿ ಚೋಗರಿಗೆ ಹೋಗಲು ಅನುಮತಿಸಬೇಕೆಂದು ಬೇಡಿಕೊಂಡನು.

4. –

**ಆದಿಕಾಂಡ ಉತ್ತರಗಳು 16: ಇಸಾಕನ ಜನನ, ಹಾಗರ್ ಮತ್ತು ಇಷ್ಮಾಯೇಲ್**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಇಸಾಕನು ಹುಟ್ಟಿದ ನಂತರ ದೇವರು ತನ್ನನ್ನು ನಗುವಂತೆ ಮಾಡಿದ್ದಾನೆಂಬುದಾಗಿ ಸಾರಳು ಹೇಳಿದಳು. ಇದು ಇಸಾಕನ ಹೆಸರನ್ನು ಸೂಚಿಸುತ್ತದೆ ("ಅಂದರೆ ನಗುತ್ತಾನೆ"). ಆಕೆಯ ಮನಸ್ಸಿನಲ್ಲಿ ಎರಡು ಸಂಗತಿಗಳಿದ್ದಿರಬಹುದು:

   ಅ. ಸಕಾರಾತ್ಮಕವಾಗಿ: ಕೊನೆಗೂ ಒಬ್ಬ ಮಗನನ್ನು ಕೊಡುವುದರ ಮೂಲಕ ದೇವರು ಆಕೆಯನ್ನು ಆಶೀರ್ವದಿಸಿದನು. ಈಗ ಆಕೆಯ ಜೀವನದಲ್ಲಿ ಸಂತೋಷ ಮತ್ತು ನಗುವಿದೆ.

   ಆ. ನಕಾರಾತ್ಮಕವಾಗಿ: "ವೃದ್ಧ ಮುದುಕಿಯು ಮಗುವನ್ನು ಹೆತ್ತು ಹಾಲುಣಿಸುತ್ತಾಳೆಂಬುದಾಗಿ" ಜನರು ಆಕೆಯನ್ನು ನೋಡಿ ನಕ್ಕಿರಬಹುದು.

2. ಇಷ್ಮಾಯೇಲನು ತನ್ನ ಮನೆಯಲ್ಲಿರುವುದನ್ನು ಸಾರಯಳು ಬಯಸಲಿಲ್ಲ, ಯಾಕೆಂದರೆ ಆತನು ತನ್ನ ಮಗನಾದ ಇಸಾಕನೊಂದಿಗೆ ಬಾಧ್ಯಸ್ಥನಾಗುವುದನ್ನು ಆಕೆ ಇಷ್ಟಪಡಲಿಲ್ಲ. ಆಕೆಯ ಈ ಬೇಡಿಕೆ ಸಮರ್ಪಕವಾದುದ್ದೆಂಬುದಾಗಿ ನನಗನಿಸುವುದಿಲ್ಲ. ಅಬ್ರಹಾಮನು ತುಂಬ ಶ್ರೀಮಂತ ವ್ಯಕ್ತಿಯಾಗಿದ್ದನು, ಹಾಗಾಗಿ ಆ ಇಬ್ಬರು ಮಕ್ಕಳಿಗೂ ಬೇಕಾದಷ್ಟು ಆಸ್ತಿಯಿತ್ತು. ನನಗನಿಸುತ್ತದೆ ಸಾರಯಳ ಬೇಡಿಕೆಯು ಆಕೆಯ ಸ್ವಭಾವವನ್ನು ತಿಳಿಸುತ್ತದೆ. ಅಂದರೆ ಆಕೆ ಹೊಟ್ಟೆಕಿಚ್ಚಿನವಳೂ, ಸಂಕುಚಿತ ಮನೋಭಾವದವಳೂ ಆಗಿದ್ದಳು.

3. ಇಷ್ಮಾಯೇಲನಿಗಾಗಿ ತಾನು ದೊಡ್ಡ ಉದ್ದೇಶವನ್ನಿಟ್ಟುಕೊಂಡಿದ್ದೇನೆಂಬುದಾಗಿ ದೇವರು ಅಬ್ರಹಾಮನಿಗೆ ವಾಗ್ದಾನ ಮಾಡುತ್ತಾನೆ. ಯಾಕೆಂದರೆ ಅಬ್ರಹಾಮನು ಇಷ್ಮಾಯೇಲನ ತಂದೆಯಾಗಿದ್ದರಿಂದ ದೇವರು ಇಷ್ಮಾಯೇಲನನ್ನು ದೊಡ್ಡ ಜನಾಂಗವನ್ನಾಗಿ ಮಾಡುವವನಾಗಿದ್ದನು.

4. ದೇವರು ಹಾಗರಳ ಕಣ್ಣನ್ನು ತೆರೆಯುವುದರ ಮೂಲಕ, ಆಕೆಯನ್ನೂ ಇಷ್ಮಾಯೇಲನನ್ನೂ ರಕ್ಷಿಸಿದನು. ಅಲ್ಲಿಯೇ ನೀರಿನ ಬಾವಿಯಿರುವುದನ್ನು ಆಕೆ ಕಂಡಳು. ಅವರು ತಿತ್ತಿಯಲ್ಲಿ ನೀರನ್ನು ತುಂಬಿಕೊಂಡು ತಮ್ಮ ಪ್ರಯಾಣವನ್ನು ದಕ್ಷಿಣದೆಡೆಗೆ ಮುಂದುವರೆಸಿದರು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಹಾಗರಳನ್ನೂ, ಇಷ್ಮಾಯೇಲನನ್ನೂ ಕಳಿಸಿಬೇಕೆಂಬ ಸಾರಯಳ ಬೇಡಿಕೆಯ ಬಗ್ಗೆ ಅಬ್ರಹಾಮನು ಎರಡು ಕಾರಣಗಳಿಗಾಗಿ ಕರೆಕರೆಕೊಂಡನು:

   ಅ. ಇಷ್ಮಾಯೇಲನು ಆತನ ಮಗನಾಗಿದ್ದನು ಮತ್ತು 17 ವರ್ಷಗಳ ಹಿಂದೆ ಹುಟ್ಟಿದಂದಿನಿಂದ ಆತನು ಕುಟುಂಬದ ಒಂದು ಭಾಗವಾಗಿದ್ದನು. ಹೀಗಾಗಿ ಅಬ್ರಹಾಮನು ಆತನನ್ನು ಪ್ರೀತಿಸಿದ್ದನು ಮತ್ತು ಆತನನ್ನು ಕಳಿಸಿಕೊಡಲು ಅಬ್ರಹಾಮನಿಗೆ ಮನಸ್ಸಿರಲಿಲ್ಲ.

   ಆ. ಸಮರ್ಪಕವಾದ ಕಾರಣವಿಲ್ಲದೆ ದಾಸಿಯ ಮಗನನ್ನು ಕಳಿಸಿಬಿಡುವಂತಿಲ್ಲ. ಆ ದಿನಗಳಲ್ಲಿನ ಮೆಸೊಪೊಟಮಿಯ ಮತ್ತು ಕಾನಾನ್ಯರ ಕಾನೂನಿನ ಪ್ರಕಾರ ದಾಸರಿಗೆ ಮತ್ತು ಅವರ ಮಕ್ಕಳಿಗೆ ಸಂರಕ್ಷಣೆಯಿತ್ತು.

2. –
3. –
4. –

**ಆದಿಕಾಂಡ ಉತ್ತರಗಳು 17: ಅಬ್ರಹಾಮನು ಪರೀಕ್ಷಿಸಲ್ಪಟ್ಟದ್ದು**

**ಈ. ಪ್ರಶ್ನೆಗಳಿಗೆ ಉತ್ತರಿಸಿರಿ**

1. ಈ ಕಥೆಯಲ್ಲಿ ಇಸಾಕ ಮತ್ತು ಅಬ್ರಹಾಮನ ಮಧ್ಯೆ ತೀರಾ ಸಂಕ್ಷಿಪ್ತವಾದ ಸಂಭಾಷಣೆಯಿದೆ. ಅವರು ದೇವರು ಒದಗಿಸಲಿರುವ ಯಜ್ಞದ ಕುರಿಯ ಬಗ್ಗೆ ಮಾತನಾಡುತ್ತಾರೆ (ವ.7).
2. ದೇವದೂತನು, ಅಬ್ರಹಾಮನನ್ನು ಇಸಾಕನನ್ನು ಕೊಲ್ಲುವುದನ್ನು ತಡೆದ ನಂತರ, ಅಬ್ರಹಾಮನಿಗೆ ಇದ್ದ ಒಬ್ಬನೇ ಮಗನನ್ನು ಕೊಲ್ಲಲು ಹಿಂಜರಿಯದೆ ಇದ್ದುದ್ದರಿಂದ ಆತನು ದೇವರಲ್ಲಿ ಭಯಭಕ್ತಿಯುಳ್ಳವನೆಂಬುದನ್ನು ಸಾಬೀತುಪಡಿಸಿದನೆಂದು ಹೇಳಿದನು.
3. ದೇವರು ಅಬ್ರಹಾಮನಿಗೆ ಈ ವಾಗ್ದಾನಗಳನ್ನು ಮಾಡುತ್ತಾನೆ:

ಅ. ದೇವರು ಆತನನ್ನು ಆಶೀರ್ವಧಿಸುವನು

ಆ. ದೇವರು ಆತನ ಸಂತಾನವನ್ನು ಅಸಂಖ್ಯಾತವಾಗಿ ಮಾಡುವನು

ಇ. ದೇವರು ಆತನ ಸಂತತಿಗೆ ಅವರ ವೈರಿಗಳ ಪಟ್ಟಣಗಳ ಸೊತ್ತನ್ನು ಕೊಡುವನು

ಈ. ಅಬ್ರಹಾಮನ ಸಂತತಿಯ ಮೂಲಕ ಲೋಕದ ಎಲ್ಲಾ ಜನಾಂಗಗಳಿಗೆ ಆಶೀರ್ವಾದವುಂಟಾಗುವುದು

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಈ ಕಥೆಯಿಂದ ಅಬ್ರಹಾಮನ ನಂಬಿಕೆ ಮತ್ತು ದೇವರಲ್ಲಿನ ಆತನ ಭರವಸದ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

ಅ. ಆತನು ದೇವರೆಡೆಗೆ ಒಂದು ದಾಸನ ಮನೋಭಾವವನ್ನು ಹೊಂದಿದ್ದನು: ದೇವರು ಆತನ ಹೆಸರನ್ನು ಕರೆದಾಗ, ಕೂಡಲೇ ಆತನು "ಇಗೋ ಇದ್ದೇನೆ" (ವ.1) ಎಂದು ಉತ್ತರಿಸಿದನು.

ಆ. ಇಸಾಕನನ್ನು ಬಲಿಕೊಡುವುದಕ್ಕೆ ದೇವರ ಸಲಹೆಯನ್ನು ಆತನು ಪ್ರಶ್ನಿಸಲಿಲ್ಲ (ವ.2).

ಇ. ದೇವರ ಆಜ್ಞೆಯನ್ನು ನೆರವೇರಿಸಲು ಆತನು ತಡಮಾಡಲಿಲ್ಲ, ಆದರೆ ಮರುದಿನ ಮುಂಜಾನೆಯೇ ಮನೆಯಿಂದ ಹೊರಡುತ್ತಾನೆ (ವ.3).

ಈ. ಆತನಿಗೆ ದೇವರಲ್ಲಿ ಪೂರ್ಣ ಭರವಸೆಯಿತ್ತು: ಆತನು ತನ್ನ ಸೇವಕರಿಗೆ ತಾನೂ ಮತ್ತು ಹುಡಗನೂ ತಿರುಗಿ ಬರುತ್ತೇವೆಂದು ಹೇಳುತ್ತಾನೆ (ವ.5). ಇಬ್ರಿಯ ಗ್ರಂಥಕರ್ತನು ಇದನ್ನು ಈ ರೀತಿ ಹೇಳುತ್ತಾನೆ: "ತನ್ನ ಮಗನು ಸತ್ತರೂ ದೇವರು ಅವನನ್ನು ಬದುಕಿಸಸಮರ್ಥನಾಗಿದ್ದಾನೆಂದು ತಿಳಿದುಕೊಂಡನು ಮತ್ತು ಸತ್ತವರೊಳಗಿಂದ ಜೀವಿತನಾಗಿ ಬಂದವನಂತೆ ಅವನನ್ನು ಹೊಂದಿದನು" (ಇಬ್ರಿಯ 11:19).

ಉ. ತಾನು ಇಸಾಕನಿಗೆ "ಹೋಮಕ್ಕೆ ಬೇಕಾದ ಕುರಿಯನ್ನು ದೇವರೇ ಒದಗಿಸುವನು" (ವ.8) ಎಂದು ಹೇಳಿದಂತೆ ಈ ಪರಿಸ್ಥಿತಿಗೆ ದೇವರು ತನ್ನದೇ ಆದ ಪರಿಹಾರವನ್ನು ಹೊಂದಿದ್ದಾನೆಂಬುದನ್ನು ಆತನು ತಿಳಿದಿದ್ದನು.

ಊ. ಆತನು ದೇವರ ಸಲಹೆಯನ್ನು ಮುಗಿಸುವುದಕ್ಕೆ ಹಿಂತೆಗೆಯಲಿಲ್ಲ: "ತನ್ನ ಮಗನನ್ನು ವಧಿಸುವುದಕ್ಕೆ ಅವನು ಕೈಚಾಚಿ ಕತ್ತಿಯನ್ನು ಹಿಡಿದುಕೊಂಡನು" (ವ.10).

2. ಈ ಕಥೆ ಮತ್ತು ಯೇಸು ಕ್ರಿಸ್ತನ ಬಲಿಯ ಮರಣದ ನಡುವಿನ ಕೆಲ ಸಮಾನತೆಗಳ ಪಟ್ಟಿ ಇಂತಿದೆ:

ಅ. ಕೇವಲ ಒಬ್ಬನೇ ಮಗನನ್ನು ಬಲಿಯರ್ಪಿಸಲಾಯಿತು: ವಚನ 2ನ್ನು 1 ಯೋಹಾನ 4:9 ರೊಂದಿಗೆ ಹೋಲಿಸಿ.

ಆ. ಸ್ವತಃ ದೇವರೇ ಯಜ್ಞದ ಕುರಿಮರಿಯನ್ನು ಒದಗಿಸಿದನು: ವಚನ 8 ಮತ್ತು 13ನ್ನು ಯೋಹಾನ 1:29,36 ರೊಂದಿಗೆ ಹೋಲಿಸಿ.

ಇ. ಇಬ್ಬರು ತಂದೆಯಂದಿರು ಮನಃಪೂರ್ವಕವಾಗಿ ತಮ್ಮ ಮಗನನ್ನು ಅರ್ಪಿಸಿದರು: ವಚನ 9 ಮತ್ತು 16ನ್ನು ಯೋಹಾನ 3:16 ಮತ್ತು ರೋಮಾ. 8:32 ರೊಂದಿಗೆ ಹೋಲಿಸಿ.

ಈ. ಒಂದು ಬದಲಿ ಬಲಿ: ವಚನ 13ನ್ನು ಮಾರ್ಕ 10:45 ರೊಂದಿಗೆ ಹೋಲಿಸಿ (ಇಸಾಕನ ಬದಲಿಗೆ ಟಗರು, ನಮ್ಮ ಬದಲಿಗೆ ಯೇಸು).

ಉ. ಬಲಿಯು ಬೆಟ್ಟದ ಮೇಲೆ ನಡೆಯಿತು: ವಚನ 14ನ್ನು ಮತ್ತಾ. 27:33 ರೊಂದಿಗೆ ಹೋಲಿಸಿ (ಗೊಲ್ಗೊಥಾ ಎಂದರೆ "ಕಪಾಲ ಸ್ಥಳ" ಎಂದರ್ಥ).

3. –

**ಆದಿಕಾಂಡ ಉತ್ತರಗಳು 18: ಇಸಾಕ ಮತ್ತು ರೆಬೆಕ್ಕ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ತಾನು ಅಬ್ರಹಾಮನಿಗೆ ಕೊಟ್ಟ ಆಣೆಯನ್ನು ನೆರವೇರಿಸಲು ಪರಿಸ್ಥಿತಿಗಳು ಅಸಾಧ್ಯವಾಗುವಂತೆ ಮಾಡಿದರೆ ಏನು ಮಾಡಬೇಕು ಎಂಬುದರ ಬಗ್ಗೆ ಸೇವಕನು ಚಿಂತಿತನಾಗಿದ್ದನು: ಬಹುಶಃ ಇಸಾಕನಿಗಾಗಿ ತಾನು ಆರಿಸಿದ ಹೆಣ್ಣು ಮೆಸೊಪೊಟಮಿಯಾವನ್ನು ಬಿಟ್ಟು ಕಾನಾನಿಗೆ ಬರಲು ಒಪ್ಪದಿದ್ದರೆ, ಆಗ ತಾನೇನು ಮಾಡಬೇಕೆಂದು ಆಲೋಚಿಸಿರಿದನು.

2. ಅಬ್ರಹಾಮನ ಉತ್ತರದಲ್ಲಿನ ಮುಖ್ಯ ಅಂಶವು ಯಾವ ಸನ್ನಿವೇಶದಲ್ಲಿಯೂ ಇಸಾಕನು ಮೆಸೊಪೊಟಮಿಯದಲ್ಲಿ ನೆಲೆಯಾಗದಂತೆ ಸೇವಕನು ನೋಡಿಕೊಳ್ಳುವುದಾಗಿತ್ತು.

3. ಇಸಾಕನಿಗೆ ಸರಿಬೀಳುವ ಹೆಣ್ಣನ್ನು ಆರಿಸಲು ಸಹಾಯಿಸುವಂತೆ ಮುಖ್ಯ ಸೇವಕನು ದೇವರ ಬಳಿ ಕೇಳಿದ ಗುರುತೇನೆಂದರೆ – ತನಗೆ ಕುಡಿಯಲು ನೀರನ್ನು ಕೊಡು ಎಂದು ಆಕೆಯ ಬಳಿ ಕೇಳುವಾಗ ಆಕೆ ತನ್ನ ಒಂಟೆಗಳಿಗೆ ಸಹ ನೀರನ್ನು ಕುಡಿಯಲು ಕೊಡುತ್ತೇನೆಂದು ಹೇಳುವುದಾಗಿತ್ತು.

4. ಬೆತೂವೇಲನು ಇಸಾಕನ ಸೋದರ ಸಂಬಂಧಿ (ಅಬ್ರಹಾಮನ ತಮ್ಮನ ಮಗನು).

5. ಲಾಬಾನನು ಅಬ್ರಹಾಮನ ಸೇವಕನಿಗೆ ಒಳ್ಳೆಯ ಅತಿಥಿಸತ್ಕಾರ ಮಾಡಿದನು: ಬಾವಿಯ ಬಳಿ ಆತನನ್ನು ಕರೆತರಲು ಈತನು ಬುಗ್ಗೆಯ ಬಳಿಗೆ ಓಡಿದನು ಮತ್ತು ಆತನನ್ನು ತನ್ನ ಮನೆಯಲ್ಲಿ ಉಳುಕೊಳ್ಳಲು ಆಹ್ವಾನಿಸಿದನು. ಆತನು ಒಂಟೆಯನ್ನೆಲ್ಲಾ ನೋಡಿಕೊಳ್ಳುತ್ತಾನೆ. ಸೇವಕನಿಗೆ ಮತ್ತು ಆತನ ಜನರಿಗೂ ಕಾಲು ತೊಳಕೊಳ್ಳಲು ನೀರನ್ನು ಮತ್ತು ಊಟಕ್ಕೆ ಆಹಾರವನ್ನು ಕೊಡುತ್ತಾನೆ. ಆತನು ಸೇವಕನ ಕಥೆಯಲ್ಲಿ ಜಾಗರೂಕನಾಗಿ ಕೇಳಿಸಿಕೊಳ್ಳುತ್ತಾನೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಈ ವಾಕ್ಯಭಾಗದಲ್ಲಿ ನಾವು ಈ ನಾಲ್ಕು ಜನರ ಚಿತ್ರಣಗಳನ್ನು ಕಾಣುತ್ತೇವೆ:

   **ಅ. ಅಬ್ರಹಾಮ:** ಆತನ ಒಂದು ಸಕಾರಾತ್ಮಕ ಚಿತ್ರಣ ನಮಗೆ ಸಿಗುತ್ತದೆ. ಆತನು ತನ್ನ ಮಗನ ಭವಿಷ್ಯದ ಬಗ್ಗೆ ಚಿಂತಿತನಾಗಿದ್ದಾನೆ. ಇಸಾಕನು ಕಾನಾನ್ಯ ಸ್ತ್ರೀಯರನ್ನು ಮದುವೆಯಾಗಬಾರದೆಂದು ಆತನು ಅಪೇಕ್ಷಿಸುತ್ತಾನೆ. ಆತನು ತನ್ನ ಹಿರೀಸೇವಕನ ಮೇಲೆ ನಂಬಿಕೆಯಿಟ್ಟು ಆತನಿಗೆ ಒಂದು ಪ್ರಾಮುಖ್ಯ ಕೆಲಸ ಕೊಟ್ಟು ಮುಂದೆ ಹೋಗಲು ಸ್ಪಷ್ಟವಾದ ಮತ್ತು ಸಕಾರಾತ್ಮಕವಾದ ಸಲಹೆಗಳನ್ನು ಕೊಡುತ್ತಾನೆ. ಆತನೊಬ್ಬ ದೇವರಲ್ಲಿ ಭಯಭಕ್ತಿಯುಳ್ಳ ವ್ಯಕ್ತಿಯಾಗಿದ್ದನು. ದೇವರೊಂದಿಗಿನ ತನ್ನ ಒಡಂಬಡಿಕೆಯನ್ನು ಪಾಲಿಸುವುದರ ಬಗ್ಗೆ ಆತನು ಚಿಂತಿತನಾಗಿದ್ದನು.

   **ಆ. ಹಿರೀಸೇವಕ:** ಆತನ ಒಂದು ಅತ್ಯುತ್ತಮ ಚಿತ್ರಣವನ್ನು ನಾವು ಕಾಣುತ್ತೇವೆ. ಆತನು ತನ್ನ ದಣಿಯಾದ ಅಬ್ರಹಾಮನಿಗೆ ವಿಧೇಯನಾಗಿದ್ದನು. ಆತನು ಅಬ್ರಹಾಮನ ಸೂಚನೆಗಳನ್ನು ತಪ್ಪದೆ ಪಾಲಿಸುತ್ತಾನೆ. ಆತನೊಬ್ಬ ದೇವಭಕ್ತಿಯುಳ್ಳ ಮನುಷ್ಯನಾಗಿದ್ದು ಮಾರ್ಗದರ್ಶನಕ್ಕಾಗಿ ದೇವರಲ್ಲಿ ಭರವಸವಿಡುತ್ತಾನೆ. ಆತನೊಬ್ಬ ಪ್ರಾರ್ಥನಾವೀರನಾಗಿದ್ದಾನೆ. ದೇವರು ಸದುತ್ತರ ಕೊಟ್ಟದ್ದಕ್ಕಾಗಿ ಮತ್ತು ಆತನ ನಂಬಿಗಸ್ತಿಕೆಗಾಗಿ ದೇವರಿಗೆ ಕೃತಜ್ಞತೆ ಸಲ್ಲಿಸುತ್ತಾನೆ. ಆತನೊಬ್ಬ ಒಬ್ಬ ಯೌವನಸ್ಥ ಹುಡುಗಿಯೊಂದಿಗೆ ಸಹ ಸಭ್ಯತೆಯಿಂದಿರುವ ವ್ಯಕ್ತಿಯಾಗಿದ್ದಾನೆ. ತನ್ನ ಕಾರ್ಯೋದ್ದೇಶದ ಬಗ್ಗೆ ಲಾಬಾನನಿಗೆ ಆತನು ಒಂದು ವಿವರವಾದ ಮತ್ತು ಪಾರದರ್ಶಕವಾದ ವರದಿಯನ್ನು ಕೊಡುತ್ತಾನೆ. ರೆಬೆಕ್ಕಳೊಂದಿಗೆ ಕಾನಾನಿಗೆ ಹಿಂತಿರುಗಿ ಬರುವ ಮೂಲಕ ತನ್ನ ಕೆಲಸವನ್ನು ಪೂರ್ಣಗೊಳಿಸಲು ಆತನು ಕಾತುರದಿಂದಿದ್ದಾನೆ.

**ಇ. ರೆಬೆಕ್ಕ:** ರಬೆಕ್ಕಳ ಒಂದು ಸಕಾರಾತ್ಮಕ ಚಿತ್ರಣವನ್ನು ನಾವು ಕಾಣುತ್ತೇವೆ. ಆಕೆಯು ಒಂದು ಒಳ್ಳೆಯ ಕುಟುಂಬದಿಂದ ಬಂದವಳಾಗಿದ್ದಾಳೆ. "ಸಭ್ಯಳೂ ಮತ್ತು ಸಹಾಯ ಮಾಡುವವಳೂ ಆಗಿದ್ದಳು. ಆಕೆಯು ದೇವರ ಚಿತ್ತಕ್ಕೆ ವಿಧೇಯಳಾಗುವವಳಾಗಿದ್ದು ತನ್ನ ಊರನ್ನು ಬಿಡಲು ತಡಮಾಡುವುದಿಲ್ಲ. ಆಕೆಯೊಬ್ಬ ಮಾನಸ್ಥೆಯಾಗಿದ್ದು ಇಸಾಕನನ್ನು ಸಂಧಿಸುವಾಗ ತನ್ನ ಮುಖವನ್ನು ಮುಚ್ಚಿಕೊಳ್ಳುತ್ತಾಳೆ.

**ಈ. ಇಸಾಕ:** ಈ ವಾಕ್ಯಭಾಗದಲ್ಲಿ ಆತನ ಬಗ್ಗೆ ನಾವು ಹೆಚ್ಚಾಗಿ ಕಲಿಯಲಾರೆವು. ಇನ್ನು ಆತನು ತನ್ನ ತಾಯಿಯ ಸಾವಿಗಾಗಿ ದುಃಖಿಸುತ್ತಿದ್ದನು. ಈಗ ಆತನು ತನ್ನ ವಧುವಿನ ಬರೋಣಕ್ಕಾಗಿ ಕಾಯುತ್ತಿರುತ್ತಾನೆ. ಆತನು ತನ್ನ ಮನೆಯನ್ನು ಬಿಟ್ಟು ಹೊರಗೆ ಧ್ಯಾನಕ್ಕಾಗಿ ಬಂದಿದ್ದನು. ಆತನು ರೆಬೆಕ್ಕಳನ್ನು ಕಂಡು ಸಂತೋಷಗೊಂಡು ಆಕೆಯನ್ನು ಪ್ರೀತಿಸಿದನು. ಒಬ್ಬ ಒಂಟಿ ಯೌವನಸ್ಥನ ಸುಂದರ ಮತ್ತು ಸಕಾರಾತ್ಮಕವಾದ ಚಿತ್ರಣವನ್ನು ನಾವು ಕಾಣುತ್ತೇವೆ.

2. –

3. –

**ಆದಿಕಾಂಡ ಉತ್ತರಗಳು 19: ಯಾಕೋಬ ಮತ್ತು ಏಸಾವ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ರೆಬೆಕ್ಕಳು ತನ್ನ ಗರ್ಭದ ಬಗ್ಗೆ ಚಿಂತಿತಳಾದಳು, ಯಾಕೆಂದರೆ ಆಕೆಯ ಗರ್ಭದೊಳಗೆ ಏನೋ ಹೋರಾಡಿದಂತೆ ಆಕೆಗನಿಸಿತು. ನಿನ್ನ ಗರ್ಭದೊಳಗೆ ಅವಳಿ ಮಕ್ಕಳಿವೆ ಮತ್ತು ಜನ್ಮಾರಭ್ಯ ಅವು ಪರಸ್ಪರ ವಿರೋಧವಾಗಿರುವವು ಎಂದು ದೇವರು ಆಕೆಗೆ ಹೇಳಿದನು.

2. ತಾನು ಸಾಯುವಂಥವನೆಂಬುದಾಗಿ ಪರಿಗಣಿಸಿ ಏಸಾವನು ಸ್ವಲ್ಪ ಆಹಾರಕ್ಕಾಗಿ ತನ್ನ ಚೊಚ್ಚಲತನದ ಹಕ್ಕನ್ನು ಯಾಕೋಬನಿಗೆ ಮಾರಿಬಿಟ್ಟನು. ತನಗೆ ಚೊಚ್ಚಲ ತನದ ಹಕ್ಕನ್ನು ಕೊಡುತ್ತೇನೆಂದು ಮೊದಲು ವಾಗ್ದಾನ ಮಾಡುವವರೆಗೂ ಯಾಕೋಬನು ಆಹಾರವನ್ನು ಆತನಿಗೆ ಕೊಡಲಿಲ್ಲ.

3. ಯಾಕೋಬನು ತನ್ನ ತಂದೆಯಾದ ಇಸಾಕನನ್ನು ಮೋಸಗೊಳಿಸಿ ಆತನ ಆಶೀರ್ವಾದವನ್ನು ಪಡಕೊಳ್ಳಲು ಶಕ್ತನಾದನು, ಯಾಕೆಂದರೆ ಆತನ ತಂದೆಯು ಕುರುಡನಾಗಿದ್ದು, ತಂದೆಯ ಆಶೀರ್ವಾದ ಪಡೆಯಲು ಯಾಕೋಬನು ಬಂದಾಗ ಆತನಿಗೆ ಕಾಣಿಸಲಿಲ್ಲ.

4. ಇಸಾಕನು ಯಾಕೋಬನನ್ನು ಆಶೀರ್ವದಿಸುವಾಗ ಆತನಿಗೆ ಈ ರೀತಿ ವಾಗ್ದಾನ ಮಾಡಿದನು:

   ಅ. ಸಮೃದ್ಧವಾದ ಭೂಲೋಕದ ಆಶೀರ್ವಾದ ಹೊಂದುವುದು

   ಆ. ಜನಾಂಗಗಳು ಮತ್ತು ಸ್ವಂತ ಅಣ್ಣತಮ್ಮಂದರಿಗೆ ದೊರೆಯಾಗುವುದು

   ಇ. ಆಶೀರ್ವದಿಸುವವರಿಗೆ ಆಶೀರ್ವಾದ, ಶಪಿಸುವವರಿಗೆ ಶಾಪವುಂಟಾಗುವುದು

5. ಯಾಕೋಬನು ತಮ್ಮ ಮೋಸಗೊಳಿಸಿದ್ದಾನೆಂಬುದನ್ನು ಇಸಾಕ ಮತ್ತು ಏಸಾವರಿಗೆ ತಿಳಿದುಬಂದಾಗ ಇಸಾಕನು ಗೊಂದಲಗೊಂಡು ಗಡಗಡನೆ ನಡುಗಿದರೆ, ಏಸಾವನು ಹತಾಶೆಯಿಂದ ದುಃಖಕ್ರಾಂತನಾಗಿ ಬಹಳವಾಗಿ ಅತ್ತನು.

6. ಇಸಾಕನು ಏಸಾವನ ಮೇಲೆ ನುಡಿದ ದೈವೋಕ್ತಿಗಳ ನಾಲ್ಕು ಅಂಶಗಳನ್ನು ಈ ರೀತಿ ಪುನಃ ಹೇಳಲಾಗಿದೆ:

   ಅ. ಆತನು ಯಾವುದೇ ಲೌಕಿಕ ಆಶೀರ್ವಾದಗಳನ್ನು ಅನುಭವಿಸಲಾರನು

   ಆ. ಆತನ ಜೀವನವು ಯುದ್ಧ ಮತ್ತು ಹೋರಾಟಗಳಿಂದಲೇ ತುಂಬಿರುವುದು

   ಇ. ಆತನು ತನ್ನ ತಮ್ಮನಾದ ಯೋಕೋಬನಿಗೆ ಸೇವಕನಾಗಿರುವನು

   ಈ. ಆದರೂ ಆತನು ಕೊಸರಿಕೊಂಡು ಸ್ವತಂತ್ರನಾಗಬಹುದು

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

ಏಸಾವ ಮತ್ತು ಯಾಕೋಬನ ಜನನ ಮತ್ತು ಬಾಲ್ಯದ ಕುರಿತಾದ ವಾಕ್ಯಭಾಗವು (ಆದಿ. 25:21-28) ಆ ಇಬ್ಬರು ಸಹೋದರರ ಮತ್ತು ಅವರ ಸಂತತಿಯ ನಡುವಿನ ಭವಿಷ್ಯದ ಸಂಘರ್ಷಗಳ ಸುಳಿವುಗಳು ಇಂತಿವೆ:

ಅ. ಈಗಾಗಲೇ ರೆಬೆಕ್ಕಳ ಗರ್ಭದಲ್ಲಿಯೇ ಎರಡು ಶಿಶುಗಳು ಪರಸ್ಪರ ಹೋರಾಡಿವೆ (ವ.22). ಇದರಿಂದ ಏನಾಗುತ್ತದೋ ಎಂಬುದಾಗಿ ರೆಬೆಕ್ಕಳು ಗಲಿಬಿಲಿಗೊಂಡಳು.

ಆ. ಹಾಗಾಗಿ ಆಕೆ ಯೊಹೋವನ ಸನ್ನಿಧಿಯಲ್ಲಿ ವಿಚಾರಿಸಿದಾಗ ಆತನು ಆಕೆಗೆ ಆಕೆಯ ಎರಡು ಮಕ್ಕಳು ಎರಡು ಪ್ರತ್ಯೇಕ ಜನಾಂಗಗಳಾಗುವವು, ಅವುಗಳಲ್ಲಿ ಒಂದು ಇನ್ನೊಂದಕ್ಕಿಂತ ಬಲಿಷ್ಠವಾಗುವುದು (ವ.23), ಅವರಿಬ್ಬರ ನಡುವೆ ಬಾಲ್ಯಾರಭ್ಯ ವಿರೋಧವಿರುವುದು, ಹಿರಿಯದು ಕಿರಿಯದಕ್ಕೆ ಸೇವೆ ಮಾಡುವುದು ಎಂದು ಹೇಳಿದನು.

ಇ. ಅವರ ಜನನವು ನಾಟಕೀಯವಾಗಿದ್ದು, ಮೊದಲು ಹುಟ್ಟುವುದಕ್ಕಾಗಿ ಅವು ಪರಸ್ಪರ ಹಾತೊರೆದವು (ವ.24-26).

ಈ. ಅವರಿಗಾಗಿನ ಅವರ ತಂದೆತಾಯಿಗಳ ಪ್ರೀತಿಯು ಸಹ ವಿಭಾಗಿಸಲ್ಪಟ್ಟಿತು: ಇಸಾಕನು ಏಸಾವನನ್ನು ಪ್ರೀತಿಸಿದರೆ, ರೆಬೆಕ್ಕಳು ಯಾಕೋಬನನ್ನು ಪ್ರೀತಿಸಿದಳು (ವ.28).

1. ಎರಡು ವಾಕ್ಯಭಾಗಗಳಲ್ಲಿ ಈ ಮೂರು ವ್ಯಕ್ತಿಗಳ ಈ ಚಿತ್ರಣಗಳನ್ನು ನಾವು ಕಾಣುತ್ತೇವೆ:

**ಅ. ರೆಬೆಕ್ಕ:** ಆಕೆಯ ಒಂದು ನಕಾರಾತ್ಮಕ ಚಿತ್ರಣ ನಮಗೆ ಸಿಗುತ್ತದೆ. ಆಕೆ ಮುಕ್ತವಾಗಿ ತನ್ನಿಬ್ಬರು ಮಕ್ಕಳಲ್ಲಿ ಒಬ್ಬನಿಗಿಂತ ಹೆಚ್ಚಾಗಿ ಇನ್ನೊಬ್ಬನನ್ನು ಪ್ರಿತಿಸುತ್ತಾಳೆ. ಆಕೆ ಗುಪ್ತವಾಗಿ ತನ್ನ ಗಂಡ ಮತ್ತು ಮಗನಾದ ಏಸಾವನ ಸಂಭಾಷಣೆಯನ್ನು ಕೇಳಿಸಿಕೊಳ್ಳುತ್ತಾಳೆ. ಆನಂತರ ಆಕೆಯೊಬ್ಬ ಸಂಚುಗಾರಳಾಗಿ ತಂದೆಯ ಕಡೆಯ ಆಶೀರ್ವಾದ ಪಡಕೊಳ್ಳಲು ಆತನನ್ನು ಹೇಗೆ ಮೋಸಗೊಳಿಸಬೇಕೆಂದು ಯಾಕೋಬನಿಗೆ ಸಲಹೆ ಕೊಡುತ್ತಾಳೆ. ಅಲ್ಲದೆ ಆಕೆ ಆತನಿಗೆ ರುಚಿಕರವಾದ ಅಡುಗೆ ಮಾಡಿಕೊಟ್ಟು ಏಸಾವನ ವಸ್ತುಗಳನ್ನು ಆತನಿಗೆ ತೊಡಿಸಿ ಆತನ ದೇಹವನ್ನು ಆಡಿನ ಮರಿಗಳ ಚರ್ಮದಿಂದ ಮುಚ್ಚಿ ಆತನ ಮೋಸತನದಲ್ಲಿ ಪಾಲುದಾರಳಾಗುತ್ತಾಳೆ.

**ಆ. ಏಸಾವ:** ಆತನ ಬೇಟೆಯಾಡುವ ಕೌಶಲ್ಯ ಮತ್ತು ತಂದೆಯಾದ ಇಸಾಕನು ಯಾಕೋಬನಿಗಿಂತ ಈತನನ್ನು ಪ್ರೀತಿಸಿದ್ದರ ಹೊರತಾಗಿಯೂ ಈತನ ಒಂದು ನಕಾರಾತ್ಮಕ ಚಿತ್ರಣವನ್ನು ನಾವು ಕಾಣುತ್ತೇವೆ. ಅಲ್ಪ ಆಹಾರಕ್ಕಾಗಿ ತನ್ನ ಚೊಚ್ಚಲತನದ ಹಕ್ಕನ್ನು ಮಾರುವಲ್ಲಿ ಏಸಾವನು ಬುದ್ಧಿಯಿಲ್ಲದವನಾಗಿದ್ದನು. ಇದರ ಬಗ್ಗೆ ಗ್ರಂಥಕರ್ತನು ಒಂದು ತೀಕ್ಷ್ಣವಾದ ಟೀಕೆಯನ್ನು ಮಾಡುತ್ತಾನೆ: “ಹೀಗೆ ಅವನು ತನ್ನ ಚೊಚ್ಚಲತನದ ಹಕ್ಕನ್ನು ತಾತ್ಸಾರ ಮಾಡಿದನು” (25:34).

**ಇ. ಯಾಕೋಬ:** ಈತನ ಬಗ್ಗೆ ನಾವೊಂದು ನಕಾರಾತ್ಮಕ ಚಿತ್ರಣವನ್ನು ನಾವು ಕಾಣುತ್ತೇವೆ. ಆಹಾರದ ಬದಲಿಗೆ ತನ್ನ ಅಣ್ಣನ ಚೊಚ್ಚಲತನದ ಹಕ್ಕನ್ನು ಕೊಡಬೇಕೆಂದು ಬೇಡಿಕೆಯಿಡುವಲ್ಲಿ ಈತನು ಅನೀತಿವಂತಿಕೆಯಿಂದ ವರ್ತಿಸುತ್ತಾನೆ. ಈತನು ಸಂಪೂರ್ಣವಾಗಿ ತನ್ನ ಮೋಸದ ತಾಯಿಯಾದ ರೆಬೆಕ್ಕಳ ಹಿಡಿತದಲ್ಲಿರುತ್ತಾನೆ. ಈತನೊಬ್ಬ ಮೋಸಗಾರನೂ ಮತ್ತು ಸುಳ್ಳುಗಾರನೂ ಆಗಿದ್ದು ಮೋಸದ ಮಗನಿಗಾಗಿ ಮೀಸಲಿಟ್ಟ ಆಶೀರ್ವಾದವನ್ನು ತಂದೆಯಿಂದ ಮೋಸತನದಿಂದ ಪಡಕೊಳ್ಳುತ್ತಾನೆ. ಅಲ್ಲದೆ ಈತನು “ನಿನ್ನ ದೇವರಾದ ಯೊಹೋವನು ಅದನ್ನು ನನ್ನೆದುರಿಗೆ ಬರಮಾಡಿದನು” ಎಂದು ತಂದೆಗೆ ಹೇಳಿ ಅದನ್ನು ಮುಚ್ಚುತ್ತಾನೆ. ಯಾಕೋಬನು ಎಷ್ಟರ ಮಟ್ಟಿಗೆ ಮೋಸಮಾಡಿದನೆಂಬುದನ್ನು ತಿಳಿದಾಗ ಆತನ ತಂದೆ ಮತ್ತು ಅಣ್ಣ ಸಹ ಆಶ್ಚರ್ಯಗೊಳ್ಳುತ್ತಾರೆ.

**ಆದಿಕಾಂಡ ಉತ್ತರಗಳು 20: ಪದ್ದನ್ ಅರಾಮಿನಲ್ಲಿ ಯಾಕೋಬನು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಇಸಾಕನು ಯಾಕೋಬನಿಗೆ ಕೊಟ್ಟ ಆಶೀರ್ವಾದವು ಮೊದಲು ಒಂದು ಎಚ್ಚರಿಕೆಯನ್ನು (ಅದು ಆತನು ಕಾನಾನ್ಯರ ಹೆಣ್ಣನ್ನು ಮದುವೆಯಾಗಬಾರದು), ಅನಂತರ ಪ್ರಬೋಧನೆ (ಆತನು ಮೆಸೊಪೊಟಮಿಯಾದಲ್ಲಿನ ತನ್ನ ಚಿಕ್ಕಪ್ಪನಾದ ಲಾಬಾನನ ಕುಟುಂಬದಿಂದ ಹೆಣ್ಣನ್ನು ತೆಗೆದುಕೊಳ್ಳಬೇಕು) ಮತ್ತು ಅಬ್ರಹಾಮನಿಗೆ ಮಾಡಿದ ದೇವರ ಆಶೀರ್ವಾದದ ಒಂದು ದೃಢೀಕರಣವನ್ನು ಒಳಗೊಂಡಿತ್ತು (ಅನೇಕ ಜನಾಂಗಗಳು ಮತ್ತು ಕಾನಾನ್ ದೇಶದ ಬಾಧ್ಯತೆ).

2. ಹೇಗೆ ಇಸಾಕನು ಯಾಕೋಬನನ್ನು ಆಶೀರ್ವದಿಸಿದನೆಂಬುದನ್ನು ಏಸಾವನು ತಿಳಿದಾಗ ಆತನು ತನ್ನ ತಂದೆಯನ್ನು ಬೇಸರಗೊಳಿಸಲು ಇಷ್ಮಾಯೇಲನ ಮಗಳನ್ನು ಮದುವೆಯಾದನು.

3. ಯಾಕೋಬನು ಬೇತೇಲಿನಲ್ಲಿ ಕಂಡ ಕನಸಿನಲ್ಲಿ ದೇವರು ತನ್ನನ್ನು ತನ್ನ ಒಡಂಬಡಿಕೆಯ ಹೆಸರಾದ ಯೆಹೋವ ಎಂಬ ಹೆಸರಿನಿಂದ ಅಜ್ಜನ ದೇವರೆಂಬುದಾಗಿ ಸೂಚಿಸುತ್ತಾನೆ.

4. ಯಾಕೋಬನು ರಾಹೇಲಳನ್ನು ಬಾವಿಯ ಬಳಿ ಸಂಧಿಸುತ್ತಾನೆ. ರಾಹೇಲಳು ತನ್ನ ಕುರಿಗಳ ಸಂಗಡ ಬಂದಾಗ ಯಾಕೋಬನು ಬಾವಿಯ ಮೇಲೆ ಮುಚ್ಚಿದ್ದ ಕಲ್ಲನ್ನು ಸರಿಸಿ ಅವುಗಳಿಗೆ ನೀರು ಕುಡಿಸಿದನು.

5. ರಾಹೇಲಳ ಬದಲಿಗೆ ಲೇಯಳನ್ನು ಕೊಡುವುದರ ಮೂಲಕ ಲಾಬಾನನು ಯಾಕೋಬನನ್ನು ಮೋಸಗೊಳಿಸಿದನು. ಹಿರಿಯ ಮಗಳನ್ನು ಮೊದಲು ಮದುವೆಯಾಗುವುದು ಸಂಪ್ರದಾಯವೆಂಬುದು ಆತನ ನೆಪವಾಗಿತ್ತು. ಆದರೆ ನಿಜವಾದ ಕಾರಣವು ಯಾಕೋಬನು ಆತನ ಬಳಿ ಇನ್ನೂ ದೀರ್ಘಕಾಲ ಇದ್ದು ಕೆಲಸ ಮಾಡುವುದಾಗಿತ್ತು ಮತ್ತು ಲೇಯಳೊಂದಿಗೆ ಏಳುದಿನಗಳ ಮದುವೆ ಸಂಭ್ರಮವನ್ನು ಕಳೆದ ಮೇಲೆ ಯಾಕೋಬನು ರಾಹೇಲಳನ್ನು ಮದುವೆಯಾಗಿ ಅನಂತರ ಏಳುವರ್ಷಗಳ ಕಾಲ ಲಾಬಾನನ ಸೇವೆ ಮಾಡಲು ಒಪ್ಪಿಕೊಂಡನು.

6. ತಾನು ಬಂಜೆಯಾಗಿರುವಾಗ, ಲೇಯಳು ನಾಲ್ಕು ಮಕ್ಕಳಿಗೆ ಜನ್ಮಕೊಟ್ಟದ್ದರಿಂದ ರಾಹೇಲಳು ತನ್ನ ಅಕ್ಕನ ಮೇಲೆ ಹೊಟ್ಟೆಕಿಚ್ಚುಪಟ್ಟಳು.

7. ಯಾಕೋಬನಿಗೆ ಹನ್ನೊಂದು ಮಂದಿ ಗಂಡು ಮಕ್ಕಳನ್ನು ಹೆತ್ತ ಸ್ತ್ರೀಯರೆಂದರೆ ಲೇಯಾ (ಆತನ ಮೊದಲ ಹೆಂಡತಿ: ಆರು ಗಂಡುಮಕ್ಕಳು), ಬಿಲ್ಹಾ (ಆತನ ಎರಡನೇ ಹೆಂಡತಿಯಾದ ರಾಹೇಲಳ ದಾಸಿ: ಎರಡು ಗಂಡು ಮಕ್ಕಳು), ಜಿಲ್ಪಳು (ಲೇಯಳ ದಾಸಿ: ಇಬ್ಬರು ಗಂಡು ಮಕ್ಕಳು) ಮತ್ತು ರಾಹೇಲಳು (ಆತನ ಎರಡನೇ ಹೆಂಡತಿ: ಇಲ್ಲಿ ಯೋಸೇಫನು ಹುಟ್ಟುತ್ತಾನೆ. ಹನ್ನೆರಡನೇ ಮಗನಾದ ಬೆನ್ಯಾಮೀನನು ನಂತರ ಹುಟ್ಟುತ್ತಾನೆ).

8. ಲಾಬಾನನೊಂದಿಗಿನ ಹದಿನಾಲ್ಕು ವರ್ಷಗಳ ಒಪ್ಪಂದವು ಮುಗಿದ ನಂತರ ಯಾಕೋಬನು ಕಾನಾನಿಗೆ ಹಿಂತಿರುಗಲು ಬಯಸಿದನು. ಆದರೆ ಯಾಕೋಬನಿಂದ ಬಂದ ಆಶೀರ್ವಾದಗಳ ನಿಮಿತ್ತ ಆತನು ಇನ್ನೂ ಅಲ್ಲಿಯೇ ಉಳಿಯಬೇಕೆಂದು ಲಾಬಾನನು ಬಯಸಿದನು. ಹೀಗಾಗಿ ಯಾಕೋಬನು ವಿಶಿಷ್ಟ ಬಣ್ಣದ್ದಾಗಿ ಹುಟ್ಟುವ ಆಡುಕುರಿಗಳು ತನ್ನದಾಗಬೇಕೆಂಬ ಷರತ್ತಿನ ಮೇರೆಗೆ ಅಲ್ಲಿರಲು ಒಪ್ಪುತ್ತಾನೆ. ಅನಂತರ ಆತನು ಆ ರೀತಿಯ ಬಣ್ಣದಲ್ಲಿಯೇ ಹೆಚ್ಚು ಮತ್ತು ಬಲಿಷ್ಠವಾದ ಆಡುಕುರಿಗಳು ಹುಟ್ಟುವಂತೆ ಉಪಾಯ ಮಾಡಿದನು.

9. ಯಾಕೋಬನು ಕಾನಾನಿಗೆ ಹಿಂತಿರುಗಲು ಆತನ ನಿರ್ಧಾರವನ್ನು ಪುಷ್ಟೀಕರಿಸಿದ ನಾಲ್ಕು ಅಂಶಗಳು:

ಅ. ಆತನೆಡೆಗಿನ ಲಾಬಾನನ ಮನೋಭಾವವು ಬದಲಾಗಿ ಆತನು ಮೊದಲಿನಂತೆ ಸ್ನೇಹಭಾವದಿಂದಿರಲಿಲ್ಲ (31:2).

ಆ. ತಮ್ಮ ತಂದೆಯ ಆಸ್ತಿಯಿಂದಲೇ ಯಾಕೋಬನು ಐಶ್ವರ್ಯವಂತನಾದನೆಂಬುದಾಗಿ ಆತನ ಮಕ್ಕಳು ದೂರಿದರು (31:1).

ಇ. ಯಾಕೋಬನ ತೀರ್ಮಾನವು ಸರಿಯಾದುದ್ದೆಂಬುದಾಗಿ ಆತನ ಹೆಂಡತಿಯರಿಗೆ ಸರಿ ಅನಿಸಿತು (31:14-16).

ಈ. ದೇವರು ಆತನೊಂದಿಗೆ ಮಾತನಾಡಿ ಆತನ ತಂದೆ ತಾತಂದಿರ ದೇಶಕ್ಕೆ ಹೋಗಬೇಕೆಂದು ಹೇಳುತ್ತಾನೆ (31:3).

10. ರಾಹೇಲಳು ಲಾಬಾನನ ಮನೆಯಲ್ಲಿದ್ದ ವಿಗ್ರಹಗಳನ್ನು ಗುಡಾರದೊಳಗೆ ಅಡಗಿಸಿಟ್ಟಳು. ಲಾಬಾನನು ಬಂದಾಗ ತಾನು ಮುಟ್ಟಾಗಿದ್ದೇನೆ ಏಳಲು ಹೇಳಬೇಡವೆಂದು ಹೇಳಿದಳು.

11. ಮಿಚ್ಪಾದಲ್ಲಿ ಲಾಬಾನ ಮತ್ತು ಯಾಕೋಬನ ನಡುವಿನ ಒಡಂಬಡಿಕೆಯ ಷರತ್ತುಗಳು ಇವಾಗಿದ್ದವು:

ಅ. ಯಾಕೋಬನು ಲಾಬಾನನ ಹೆಣ್ಣು ಮಕ್ಕಳನ್ನು ನೋಯಿಸುವಂತಿರಲಿಲ್ಲ ಅಥವಾ ಬೇರೆ ಸ್ತ್ರೀಯರನ್ನು ಮದುವೆಯಾಗುವಂತಿಲ್ಲ

ಆ. ಯಾಕೋಬನಾಗಲೀ, ಲಾಬಾನನಾಗಲೀ ಒಬ್ಬರಿಗೊಬ್ಬರು ಕೇಡು ಮಾಡಲು ನಿಲ್ಲಿಸಿದ ಕಲ್ಲುಕುಪ್ಪೆಯನ್ನು ದಾಟಿಬರುವಂತಿಲ್ಲ. ಯಜ್ಞ ಮತ್ತು ಭೋಜನವು ಅದರ ಒಡಂಬಡಿಕೆಗೆ ಮುದ್ರೆಯನ್ನೊತ್ತಿತು (ಆದಿ. 31:54).

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಯಾಕೋಬನು ಬೇತೇಲಿನಲ್ಲಿ ದೇವರಿಗೆ ಮಾಡಿಕೊಂಡ ಹರಕೆಯ ಬಗ್ಗೆ ನನ್ನ ಅಭಿಪ್ರಾಯ ಇಂತಿದೆ: ಅದೊಂದು ಅರೆಮನಸ್ಸಿನದ್ದು ಮತ್ತು ವ್ಯವಹಾರದಂತಿತ್ತು. "ದೇವರು ಬರಮಾಡಿದರೆ … ತಾನು ಸಮರ್ಪಿಸುವೆನು ಎಂದು ಹೇಳಿ ಯಾಕೋಬನು ದೇವರೊಂದಿಗೆ ಚೌಕಾಶಿ ಮಾಡಿದನು (28:20-22).

2. ಗಿಲ್ಯಾದಿನ ಬೆಟ್ಟಗಳಲ್ಲಿ ಆತನನ್ನು ಬೆನ್ನಟ್ಟಿದಾಗ ಯಾಕೋಬನ ವಿರುದ್ಧ ಲಾಬಾನನು ಮಾಡಿದ ಧೂಷಣೆಗಳು ಇಂತಿವೆ (31:25-30):

ಅ. ಯಾಕೋಬನು ಲಾಬಾನನನ್ನು ಮೋಸಗೊಳಿಸಿದ್ದಾನೆ. ಲಾಬಾನನ ಪರವಾಗಿ ಆಸ್ತಿವಂತನಾಗಲು ಯಾಕೋಬನು ಉಪಾಯವನ್ನು ಮಾಡಿದ್ದು ನಿಜವಾದರೂ ಈ ಧೂಷಣೆ ಸುಳ್ಳೆಂಬುದಾಗಿ ನಾನೆಣಿಸುತ್ತೇನೆ.

ಆ. ಯಾಕೋಬನು ಲಾಬಾನನ ಹೆಣ್ಣುಮಕ್ಕಳನ್ನು ಯುದ್ಧದಲ್ಲಿ ಸೆರೆಹಿಡಿದವರಂತೆ ಗುಪ್ತವಾಗಿ ಕೊಂಡೊಯ್ದನು. ಈ ಧೂಷಣೆಯು ನಿಜವಾಗಿತ್ತು.

ಇ. ಲಾಬಾನನು ತನ್ನ ಹೆಣ್ಣುಮಕ್ಕಳು ಮತ್ತು ಮೊಮ್ಮಕ್ಕಳಿಗೆ ಬೀಳ್ಕೊಡಲು ಯಾಕೋಬನು ಅನುಮತಿಸಲಿಲ್ಲ. ಈ ಧೂಷಣೆಯು ಸತ್ಯ.

ಈ. ಯಾಕೋಬನು ಲಾಬಾನನ ದೇವರುಗಳನ್ನು ಕದ್ದಿದ್ದನು. ಇದರ ಬಗ್ಗೆ ಯಾಕೋಬನು ಅರಿಯದಿದ್ದರೂ ಇದು ಸತ್ಯ.

3. ಲಾಬಾನನಿಗೆ ಯಾಕೋಬನ ಜನರ ಮಧ್ಯೆ ಆತನ ಮನೆಯ ವಿಗ್ರಹಗಳು ಸಿಗಲಿಲ್ಲ. ಇದು ಯಾಕೋಬನಿಗೆ ಕೋಪವನ್ನು ಬರಿಸಿತು. ಹಾಗಾಗಿ ಆತನು ತಿರುಗಿ ಲಾಬಾನನ ಮೇಲೆ ಅನೇಕ ಆರೋಪ ಮಾಡಿದನು (31:36-42). ಅವೆಂದರೆ:

ಅ. ಲಾಬಾನನು ಯಾಕೋಬನಿಗೆ ಕದ್ದಿದ್ದಾನೆಂದು ಸುಳ್ಳಾಗಿ ಆರೋಪಿಸಿದನು. ಈ ಆರೋಪವು ಸುಳ್ಳಾಗಿತ್ತು.

ಆ. ಲಾಬಾನನು ಕಠಿಣ ಮನುಷ್ಯನಾಗಿದ್ದಾನೆ. ಈ ಆರೋಪವು ನಿಜವಾಗಿರಬಹುದು.

ಇ. ಲಾಬಾನನು ಯಾಕೋಬನ ಸಂಬಳವನ್ನು ಹತ್ತುಬಾರಿ ಬದಲಿಸಿದನು. ಈ ಆರೋಪವು ನಿಜವಾಗಿರಬಹುದು.

ಈ. ದೇವರು ಯಾಕೋಬನನ್ನು ಆಶೀರ್ವದಿಸದಿದ್ದರೆ ಲಾಬಾನನು ಆತನನ್ನು ಬರಿಗೈಯಲ್ಲಿ ಕಳುಹಿಸುತ್ತಿದ್ದನು. ಈ ಆರೋಪವು ಬಹುಶಃ ಸುಳ್ಳಾಗಿರಬಹುದು.

4. ಈ ಅಧ್ಯಾಯನದಿಂದ ನಾವು ಕಲಿಯಬಹುದಾದ ನಾಲ್ಕು ಪ್ರಮುಖ ಸಂಗತಿಗಳು ಇಂತಿವೆ:

ಅ. ನಮ್ಮ ಕಾರ್ಯಗಳಿಗೆ ಪರಿಣಾಮಗಳಿವೆ: ಯಾಕೋಬನ ಮೋಸತನವು ಆತನ ಅಣ್ಣನಾದ ಏಸಾವನಿಗೆ ಸಿಟ್ಟುಬರುವಂತೆ ಮಾಡಿತು, ಹಾಗಾಗಿ ಆತನು ತನ್ನ ಜೀವವನ್ನು ರಕ್ಷಿಸಿಕೊಳ್ಳಲು ಬೇರೆಡೆ ಓಡಿಹೋಗಬೇಕಾಯಿತು.

ಆ. ದೇವರ ನಂಬಿಗಸ್ತಿಕೆಯು: ಯಾಕೋಬನ ಬಲಹೀನ ಮತ್ತು ಮೋಸತನದ ಗುಣಸ್ವಭಾವದ ಹೊರತಾಗಿಯೂ ದೇವರು ತನ್ನ ಒಡಂಬಡಿಕೆಯ ವಾಗ್ದಾನಗಳನ್ನು ನವೀಕರಿಸಿದನು. ಬೇತೇಲಿನಲ್ಲಿನ ಯಾಕೋಬನ ಷರತ್ತಿನ ಹರಕೆಯನ್ನೂ ಸಹ ದೇವರು ಖಂಡಿಸಲಿಲ್ಲ.

ಇ. ಈ ರೀತಿಯ ಅಧ್ಯಯನದಲ್ಲಿ ಕಂಡುಬರುವ ಸ್ವಭಾವ ಮತ್ತು ಪದ್ಧತಿಗಳನ್ನು ಆಚರಿಸದಂತೆ ನಾವು ಎಚ್ಚರಿಕೆಯಿಂದಿರಬೇಕು. ನಿಜಾಂಶವೆಂದರೆ ಅವು ಸತ್ಯವೇದದಲ್ಲಿ ದಾಖಲಾಗಿರುವದರಿಂದ ಅವನ್ನು ನಾವು ನಕಲಿ ಮಾಡಬೇಕೆಂದರ್ಥವಲ್ಲ. ಉದಾಹರಣೆಗೆ, ರಾಹೇಲಳನ್ನು ಇನ್ನೂ ಅವಮಾನಿಸಲು ಲೇಯಳು ಹೆಚ್ಚು ಮಕ್ಕಳನ್ನು ಪಡೆಯುವುದಕ್ಕಾಗಿ ಮೆಸೊಪೊಟಮಿಯಾದ ಕಾಮಜನಕಫಲಗಳನ್ನುಪಯೋಗಿಸುತ್ತಾಳೆ. ನಾವಿದನ್ನು ಪಾಲಿಸಬೇಕೆ? ಅಥವಾ ಪದ್ದನ್ ಅರಾಮಿನಲ್ಲಿಯೇ ಇರುವಂತೆ ಯಾಕೋಬನ ಮೇಲೆ ಒತ್ತಡ ಹೇರಲು ಲಾಬಾನನು ವಿಂಗಡನೆಯನ್ನುಪಯೋಗಿಸುತ್ತಾನೆ. ನಾವಿದನ್ನು ಮಾಡಬೇಕೆ? ಅಥವಾ ಯಾಕೋಬನು ತನ್ನ ಕುರಿಹಿಂಡನ್ನು ಹೆಚ್ಚಿಸಿ, ಲಾಬಾನನ ಹಿಂಡನ್ನು ಕಡಿಮೆಮಾಡಲು ಉಪಾಯ ಮಾಡುತ್ತಾನೆ. ನಾವಿದನ್ನು ಮಾಡಬೇಕೆ? ಅಥವಾ ತನ್ನೊಂದಿಗೆ ಕಾನಾನಿಗೆ ಒಯ್ಯುವುದಕ್ಕಾಗಿ ರಾಹೇಲಳು ತನ್ನ ಮನೆಯ ವಿಗ್ರಹಗಳನ್ನು ತನ್ನೊಂದಿಗೆ ಕೊಂಡೊಯ್ಯುತ್ತಾಳೆ. ನಾವು ವಿಗ್ರಹಗಳನ್ನು ಕದ್ದು ನಮ್ಮ ಮನೆಯಲ್ಲಿಟ್ಟುಕೊಳ್ಳಬೇಕೆ? ಖಂಡಿತವಾಗಿ ಇಲ್ಲ!

ಹೀಗೆ ಈ ರೀತಿಯ ಹಳೇ ಒಡಂಬಡಿಕೆ ಕಥೆಗಳು ನಮ್ಮ ನೈತಿಕ ಸ್ವಭಾವ ಮತ್ತು ಧಾರ್ಮಿಕ ಆಚರಣೆಗಳಿಗಾಗಿನ ವಿಧಾನವಾಗಿ ಕಾರ್ಯನಿರ್ವಹಿಸಲಾರವು. ಕೆಲವೊಮ್ಮೆ ಅವು ಭವಿಷ್ಯದ ಸಂತತಿಗೆ ಎಚ್ಚರಿಕೆಯಾಗಿ ಕಾರ್ಯನಿರ್ವಹಿಸುತ್ತವೆ. ಕೆಲವೊಮ್ಮೆ ಅವು ಈ ರೀತಿ ಸಂಭವಿಸಿತೆಂಬುದನ್ನು ತಿಳಿಸಲು ಸತ್ಯವೇದದಲ್ಲಿ ದಾಖಲಿಸಲ್ಪಟ್ಟಿವೆ. ನಮ್ಮ ನೈತಿಕ ಸ್ವಭಾವ ಮತ್ತು ಧಾರ್ಮಿಕ ಆಚರಣೆಗಳು ಸತ್ಯವೇದದ ಉಳಿದ ವಾಕ್ಯಭಾಗಗಳಲ್ಲಿ ಸ್ಪಷ್ಟವಾಗಿ ತಿಳಿಸಲ್ಪಟ್ಟ ದೈವಿಕ ನಿಯಮಗಳ ಮೇಲೆ ಆಧರಿಸಬೇಕಿದೆ.

ಈ. ಲಾಬಾನ ಮತ್ತು ಯಾಕೋಬರು ಪರಸ್ಪರ ಬೇಸರಗೊಂಡಿದ್ದರು. ಒಬ್ಬರ ವಿರುದ್ಧ ಒಬ್ಬರು ಮಾಡಿದ ಆರೋಪಗಳು ಗಂಭೀರವಾಗಿದ್ದವು (ಆದಿ. 31:35-42). ಆದರೆ ಕೊನೆಗೂ ಲಾಬಾನನು ಪರಸ್ಪರ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳೋಣವೆಂದು ಸಲಹೆ ಕೊಡುತ್ತಾನೆ (ಆದಿ. 31:45-55). ಇದೇ ರೀತಿಯಲ್ಲಿ ನಾವು ಅಸಮಾಧಾನ ಹೊಂದಿರುವ ಜನರೊಂದಿಗೆ ಸಮಾಧಾನ ಮಾಡಿಕೊಳ್ಳಲು ದಾರಿಯನ್ನು ಕಂಡುಕೊಳ್ಳಬೇಕಿದೆ. ಖಂಡಿತವಾಗಿ ಇನ್ನೊಬ್ಬರಿಗೆ ಹಾನಿಯಾಗುವಂತ ಗುರಿಯನ್ನು ನಾವು ದಾಟಿ ಮುಂದೆ ಹೋಗಬಾರದು ಎಂಬುದಾಗಿ ಒಂದು ಒಪ್ಪಂದ(ಒಡಂಬಡಿಕೆ)ವನ್ನು ಮಾಡಿಕೊಳ್ಳಬೇಕಿದೆ. "ಆದುದರಿಂದ ನಾವು ಸಮಾಧಾನಕ್ಕೂ ಪರಸ್ಪರ ಭಕ್ತಿವೃದ್ಧಿಗೂ ಅನುಕೂಲವಾಗಿರುವವಗಳನ್ನು ಸಾಧಿಸಿಕೊಳ್ಳೋಣ" (ರೋಮಾ. 14:19) ಎಂಬುದಾಗಿ ಪೌಲನು ಬರೆಯುತ್ತಾನೆ.

**ಆದಿಕಾಂಡ ಉತ್ತರಗಳು 21: ಯಾಕೋಬನು ಕಾನಾನಿಗೆ ಹಿಂತಿರುಗಿದ್ದು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಬೇಟಿಯಾಗುವುದಕ್ಕಿಂತ ಮುಂಚೆ ತನ್ನಣ್ಣನಾದ ಏಸಾವನನ್ನು ಸಮಾಧಾನಪಡಿಸುವುದಕ್ಕಾಗಿ ಯಾಕೋಬನು ಈ ರೀತಿ ಮಾಡುತ್ತಾನೆ:

   ಅ. ತಾನು ಹಿಂತಿರುಗಿ ಬರುತ್ತಿದ್ದೇನೆಂಬುದನ್ನು ತಿಳಿಸುವುದಕ್ಕಾಗಿ ಆತನು ಮೊದಲು ಏಸಾವನು ವಾಸಿಸುತ್ತಿರುವ ಏದೋಮಿಗೆ ಸೇವಕ(ಸಂದೇಶಕ)ರನ್ನು ಕಳುಹಿಸುತ್ತಾನೆ.

   ಆ. ಆದರೆ ಏಸಾವನು ದೊಡ್ಡ ಗುಂಪಿನ ಮನುಷ್ಯರ ಸಮೇತ ಬರುತ್ತಿದ್ದಾನೆಂಬುದನ್ನು ಕೇಳಿದಾಗ ಆತನು ಚಿಂತಿತನಾದನು. ಹಾಗಾಗಿ ಆತನು ತನ್ನಣ್ಣನಿಗಾಗಿ ನೂರಾರು ಆಡು, ಕುರಿ, ಒಂಟೆ, ಆಕಳು ಮತ್ತು ಕತ್ತೆಗಳನ್ನು ಆರಿಸಿಕೊಳ್ಳುತ್ತಾನೆ.

2. ಪೆನೀಯೇಲಿನಲ್ಲಿನ ಕುಸ್ತಿ ಪಂದ್ಯದಲ್ಲಿ ಯಾಕೋಬನ ತೊಡೆಗೆ ನೋವಾಯಿತು: ಆತನ ತೊಡೆಯ ಕೀಲು ತಪ್ಪಿತು ಮತ್ತು ಆತನು ಅದರಿಂದ ಕುಂಟಿಕೊಂಡು ನಡೆದನು.

3. ಯಕೋಬ ಮತ್ತು ಏಸಾವನ ನಡುವಿನ ಬೇಟಿಯು ಯಾಕೋಬನಿಗೆ ಪೇಚಿಗೆ ಸಿಲಿಕಿದಂತಾಯಿತು. ಇಪ್ಪತ್ತು ವರ್ಷಗಳ ಹಿಂದೆ ಆತನು ತನ್ನಣ್ಣನಾದ ಏಸಾವನಿಗೆ ತಂದೆಯಿಂದ ಬರುವ ಆಶೀರ್ವಾದದಲ್ಲಿ ಮೋಸಗೊಳಿಸಿ ತರಾತುರಿಯಲ್ಲಿ ಮನೆಯನ್ನು ಬಿಟ್ಟುಹೋಗಿದ್ದನು. ಈಗ ಏಸಾವನು ಸೇಡುತೀರಿಸಬಹುದೆಂದು ಈಗ ಆತನು ಹೆದರಿದನು. ಹಾಗಾಗಿ ಆತನು ತನ್ನಣ್ಣನನ್ನು ಮೆಚ್ಚಿಸಲು ತನ್ನೆಲ್ಲಾ ಆಸ್ತಿಯನ್ನು ತೋರಿಸುವಾಗ ವಿನಯದಿಂದ ವರ್ತಿಸಿದನು. ಇನ್ನೊಂದೆಡೆ ಏಸಾವನು ಆತನೆಡೆಗೆ ಓಡಿಬಂದು ಅವನ ಕೊರಳನ್ನು ಅಪ್ಪಿಕೊಂಡು ಮುದ್ದಿಟ್ಟನು.

4. ಯಾಕೋಬನು ತನ್ನ ಕುಟುಂಬವನ್ನು ಏದೋಮಿಗೆ ಕರೆತಂದು, ತನ್ನೊಂದಿಗೆ ಅಲ್ಲಿಯೇ ನೆಲಸಬೇಕೆಂದು ಏಸಾವನು ಬಯಸಿದ್ದನು. ಆತನು ಏಸಾವನಿಗೆ ಮುಂದೆ ನಡೆಯಲು ಹೇಳಿದನು. ತನ್ನ ಎಳೇ ಪ್ರಾಯದ ಪಶುಗಳಿಗೆ ತೊಂದರೆಯಾಗದಂತೆ ಆತನು ನಿಧಾನವಾಗಿ ನಡೆಯುತ್ತಾ ಆತನನ್ನು ಹಿಂಬಾಲಿಸಿದನು. ಆದರೆ ಯಾಕೋಬನು ಏದೋಮಿಗೆ ಹೋಗಲೇ ಇಲ್ಲ. ಬದಲಾಗಿ ಆತನು ಯೊರ್ದನ್ ಹೊಳೆಯ ಹತ್ತಿರದ ಸುಕ್ಕೋತಿನಲ್ಲಿ ಚಪ್ಪರ ಹಾಕಿಕೊಂಡನು. ಅಲ್ಲಿಂದ ಆತನು ಕಾನಾನಿನಲ್ಲಿನ ಶೆಕೆಮಿಗೆ ಹೋಗಿ ಅಲ್ಲಿ ಭೂಮಿಯನ್ನು ಖರೀದಿಸಿ ನೆಲೆಯೂರಿ ಒಂದು ಯಜ್ಞವೇದಿಯನ್ನು ಕಟ್ಟಿಸಿದನು.

5. ಯಾಕೋಬನು ತನ್ನ ಮನೆಯವರಿಗೆ ತಮ್ಮಲ್ಲಿರುವ ಎಲ್ಲಾ ಅನ್ಯದೇವರುಗಳನ್ನು ತಳ್ಳಿಬಿಟ್ಟು, ಬೇತೇಲಿಗೆ ಹೋಗುವುದಕ್ಕಿಂತ ಮುಂಚೆ ತಮ್ಮನ್ನು ಶುದ್ಧೀಕರಿಸಿಕೊಳ್ಳಬೇಕೆಂದು ಹೇಳಿದನು. ಯಾಕೋಬನು ಎಲ್ಲಾ ಅನ್ಯದೇವರುಗಳನ್ನೂ, ಕಿವಿಯಲ್ಲಿನ ಮುರುವುಗಳನ್ನೂ ಶೆಕೆಮಿನಲ್ಲಿನ ಏಲಾವೃಕ್ಷದ ಬುಡದಲ್ಲಿ ಹೂತಿಟ್ಟನು.

6. ಬೇತೇಲಿನಲ್ಲಿ ದೇವರು ಯಾಕೋಬನಿಗೆ ಮಾಡಿದ ವಾಗ್ದಾನಗಳು ಇಂತಿವೆ:

   ಅ. ಯಾಕೋಬನು ಬಹು ಸಂತಾನವುಳ್ಳವನಾಗಿ ಹೆಚ್ಚುವನು ಮತ್ತು ಅನೇಕ ಜನಾಂಗಗಳಿಗೂ ಮತ್ತು ಅರಸರಿಗೂ ಪಿತೃವಾಗುವನು.

   ಆ. ದೇವರು ಅಬ್ರಹಾಮ ಮತ್ತು ಇಸಾಕರಿಗೆ ವಾಗ್ದಾನ ಮಾಡಿದ ದೇಶವನ್ನು ಆತನಿಗೂ ಆತನ ಸಂತತಿಗೂ ಕೊಡುವನು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಏದೋಮಿನಲ್ಲಿ ನೆಲೆಸಲು ಯಾಕೋಬನು ಹೆದರಿದನು, ಯಾಕೆಂದರೆ ಏಸಾವನು ತನ್ನ ಸ್ವದೇಶದಲ್ಲಿ ತನ್ನ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಾಗಿ ಈ ಅವಕಾಶವನ್ನುಪಯೋಗಿಸಬಹುದೆಂಬುದಾಗಿ ಆಲೋಚಿಸಿರಿದನು. ಹಾಗಾಗಿ ಯಾಕೋಬನು ಕಾನಾನಿನಲ್ಲಿನ ಶೆಕೆಮಿಗೆ ಹೋಗಿ ಅಲ್ಲಿಯೇ ವಾಸಿಸಿದನು.

2. –

3. –

**ಆದಿಕಾಂಡ ಉತ್ತರಗಳು 22: ಯೋಸೇಫನು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ತನ್ನ ಎರಡನೇ ಕನಸಿನಲ್ಲಿ ಯೋಸೇಫನು ಸೂರ್ಯ, ಚಂದ್ರ ಮತ್ತು ಹನ್ನೊಂದು ನಕ್ಷತ್ರಗಳೂ ತನಗೆ ಅಡ್ಡಬೀಳುವುದನ್ನು ಕಂಡನು. ಯೋಸೇಫನಿಗೆ ಅಡ್ಡಬಿದ್ದವರು ತಾವೇ ಎಂಬುದಾಗಿ ಆತನ ಅಣ್ಣಂದಿರು ಮತ್ತು ಪೋಷಕರು ಅರಿತುಕೊಂಡರು. ಈ ಎರಡನೇ ಕನಸು ಮೊದಲನೆಯದಕ್ಕಿಂತ ಬೇಸರ ತರಿಸುವಂತದ್ದಾಗಿತ್ತು. ಯಾಕೆಂದರೆ ಇದು ಆತನ ಪೋಷಕರನ್ನು ಒಳಗೊಂಡಿತ್ತು. ಆ ದಿನದ ಸಂಸ್ಕೃತಿಯಲ್ಲಿ ವೃದ್ಧ ತಂದೆತಾಯಂದಿರು ಒಬ್ಬ ಹದಿಹರೆಯದ ಮಗನಿಗೆ ಅಡ್ಡಬೀಳುವುದನ್ನು ಊಹಿಸಲಾರದಾಗಿತ್ತು. ಆತನ ತಂದೆ ಬೈಯುವುದರಲ್ಲಿ ಅತಿಶಯವೇನಿಲ್ಲ.

2. ಆತನ ಹಿರಿಯ ಅಣ್ಣನಾದ ರೂಬೇನನು ಯೋಸೇಫನ ಪ್ರಾಣವನ್ನು ರಕ್ಷಿಸಿದನು. ಆತನನ್ನು ಕೊಲ್ಲಬಾರದೆಂದು ಇತರ ಸಹೋದರರೊಂದಿಗೆ ಮಾತನಾಡಿದನು. ಬದಲಾಗಿ ಆತನನ್ನು ಅವರು ಒಂದು ಹಾಳುಬಾವಿಯಲ್ಲಿ ಹಾಕಿಬಿಟ್ಟರು. ನಂತರದಲ್ಲಿ ರೂಬೇನನು ಯೋಸೇಫನನ್ನು ಮನೆಗೆ ಕರತರಬೇಕೆಂದೆಂದು ಆಲೋಚಿಸಿರಿದ್ದನು. ರೂಬೇನನು ಹೋದ ಮೇಲೆ ಯೋಸೇಫನನ್ನು ಇಷ್ಮಾಯೇಲ್ಯರಿಗೆ ಮಾರಿಬಿಡೋಣವೆಂದು ಯಹೂದನು ಸೂಚಿಸಿದನು. ಹಿಂತಿರುಗಿ ಬಂದಾಗ ಯೋಸೇಫನು ಕಾಣದಿದ್ದಾಗ ರೂಬೇನನು ಬೇಸರಗೊಂಡನು.

3. ಪೋಟೀಫರನು ಐಗುಪ್ತ ಅರಸನ ಉದ್ಯೋಗಸ್ಥನೂ, ಮೈಗಾವಲಿನವರ ದಳವಾಯಿಯೂ ಆಗಿದ್ದನು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಯೋಸೇಫನ ಅಣ್ಣಂದಿರು ಆತನನ್ನು ಇಷ್ಟಪಡದೆ ಇರುವುದಕ್ಕೆ ಕಾರಣ ಇಂತಿವೆ:

   ಅ. ಕುರಿಕಾಯುವವರಾದ ತಮ್ಮ ಕೆಲಸದ ಬಗ್ಗೆ ಅವರು ತಮ್ಮ ತಂದೆಯಾದ ಯಾಕೋಬನಿಗೆ ಸುಳ್ಳಾದ ಮಾಹಿತಿ ಕೊಡುತ್ತಿದ್ದರು. ಖಂಡಿತವಾಗಿ ಒಬ್ಬ ಸಣ್ಣ ಹುಡುಗನು ನಿಮ್ಮ ಕೆಲಸವನ್ನು ಟೀಕಿಸಿದರೆ ಅದನ್ನಾದರೂ ಸಹಿಸುವುದಿಲ್ಲ.

   ಆ. ಯೋಸೇಫನು ತನ್ನ ತಂದೆಗೆ ಪ್ರಿಯನಾದ ಮಗನಾದುದ್ದರಿಂದ ಅವರು ಆತನ ಮೇಲೆ ಹೊಟ್ಟೆಕಿಚ್ಚುಪಟ್ಟರು (ವ.3). ಖಂಡಿತವಾಗಿ ತಂದೆತಾಯಿ ಒಂದು ಮಗುವನ್ನು ಇನ್ನೊಂದು ಮಗುವಿಗಿಂತ ಹೆಚ್ಚಾಗಿ ಪ್ರೀತಿಸುವುದನ್ನು ತಪ್ಪಿಸಲಾಗಲ್ಲ. ಆದರೆ ಈ ಪ್ರೀತಿಯು ಬೇಧಭಾವವನ್ನುಂಟುಮಾಡುವಾಗ ಅಪಾಯಕಾರಿಯಾಗುತ್ತದೆ.

   ಇ. ಯೋಸೇಫನ ವಿಷಯದಲ್ಲಿ ಹೀಗಾಯಿತು. ಯಾಕೋಬನು ಯೋಸೇಫನಿಗೆ ಸುಂದರವಾದ ಒಂದು ನಿಲುವಂಗಿಯನ್ನು ಮಾಡಿಸಿಕೊಟ್ಟನು. ಇದು ಆತನ ಅಣ್ಣಂದಿರಲ್ಲಿ ಇನ್ನೂ ಹೊಟ್ಟೆಕಿಚ್ಚನ್ನುಂಟುಮಾಡಿತು. ಖಂಡಿತವಾಗಿ ಹೊಟ್ಟೆಕಿಚ್ಚುಪಡುವುದು ತಪ್ಪೆಂಬುದಾಗಿ ನಾವು ಯಾವಾಗಲೂ ಹೇಳುತ್ತೇವೆ ಆದರೆ ಯಾಕೋಬನ ಹುಚ್ಚುತನವು ಯೋಸೇಫ ಮತ್ತು ಆತನ ಅಣ್ಣಂದಿರ ಮಧ್ಯೆ ಹೇಗೆ ಸಮಸ್ಯೆಗೆ ನಡೆಸಿತೆಂಬುದನ್ನು ನಾವು ಕಾಣಬಹುದು.

   ಈ. ಕೊನೆಗೆ ಯೋಸೇಫನ ಕನಸು ಪರಿಸ್ಥಿತಿಯನ್ನು ಇನ್ನೂ ಬಿಗಡಾಯಿಸುತ್ತದೆ. ಕನಸುಗಳು ದೇವರಿಂದ ಬಂದದ್ದಾಗಿದ್ದು ನಂತರ ಅವು ನಿಜವೆಂಬುದಾಗಿ ಸಾಬೀತಾಗುವಂಥವುಗಳಾಗಿವೆ. ಹೀಗಾಗಿ ಇಂತಹ ಕನಸುಗಳಿಗಾಗಿ ಯೋಸೇಫನನ್ನು ದೂಷಿಸಲಾಗದು. ಆದರೆ ಅವುಗಳ ಬಗ್ಗೆ ಆತನು ಗರ್ವದಿಂದ ಹೇಳಿದ ಬಗೆಯು ಅಜ್ಞಾನದಿಂದ ಕೂಡಿದೆ. ಹೀಗಾಗಿ ಆತನ ಅಣ್ಣಂದಿರು ಕೋಪಗೊಂಡರು.

2. ಯೋಸೇಫನ ಬಗ್ಗೆ ಈ ಮೊದಲ ಕಥೆಯಲ್ಲಿ ನಾವು ಕಾಣುವ ಆತನ ಚಿತ್ರಣವು ಸಂಪೂರ್ಣವಾಗಿ ಸಕಾರಾತ್ಮಕವಾದುದ್ದಲ್ಲ. ಇದರಲ್ಲಿ ಗರ್ವ ಮತ್ತು ಸೊಕ್ಕನ್ನು ಕಾಣಬಹುದು. ಆತನಿನ್ನು ಚಿಕ್ಕವನಾಗಿರುವುದರಿಂದ ಇದೇನೂ ಆಶ್ಚರ್ಯಕರವಾದುದ್ದೇನಲ್ಲ.

3. –

4. –

**ಆದಿಕಾಂಡ ಉತ್ತರಗಳು 23: ಐಗುಪ್ತದಲ್ಲಿ ಯೋಸೇಫನು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಪೋಟೀಫರನ ಹೆಂಡತಿಯು ಯೋಸೇಫನ ಮೇಲೆ ಕಣ್ಣುಹಾಕಿದಳು, ಯಾಕೆಂದರೆ ಆತನೊಬ್ಬ ಸುಂದರ ತರುಣನಾಗಿದ್ದನು.

2. ಪೋಟೀಫರನ ಹೆಂಡತಿಯು ಯೋಸೇಫನು ತನ್ನನ್ನು ಅವಮಾನಪಡಿಸಿದನೆಂಬುದಾಗಿ ದೂರುತ್ತಾಳೆ. ಈ ವಾಕ್ಯಭಾಗದಲ್ಲಿನ ಸನ್ನಿವೇಶದಲ್ಲಿ ವರ್ಣಿಸಲ್ಪಟ್ಟಂತೆ ಆತನು ತನ್ನನ್ನು ಮಾನಭಂಗಪಡಿಸಲು ಪ್ರಯತ್ನಿಸಿದನೆಂಬುದಾಗಿ ದೂರುತ್ತಾಳೆ.

3. ಮೂರು ದಿನಗಳಲ್ಲಿ ಫರೋಹನು ತನ್ನನ್ನು ಗಲ್ಲಿಗೇರಿಸುವನು ಮತ್ತು ಹಕ್ಕಿಗಳು ಬಂದು ಆತನ ಮಾಂಸವನ್ನು ತಿನ್ನುವವೆಂಬುದು ಭಕ್ಷ್ಯಕಾರನ ಕನಸಿನ ಅರ್ಥವಾಗಿದೆ.

4. ತನ್ನ ಮೊದಲ ಕನಸಿನಲ್ಲಿ ಫರೋಹನು ಮೈಒಣಗಿದ ಏಳು ಆಕಳುಗಳು ಕೊಬ್ಬಿದ ಏಳು ಆಕಳುಗಳನ್ನು ತಿಂದುಬಿಡುವುದನ್ನು ಕಂಡನು. ತನ್ನ ಎರಡನೇ ಕನಸಿನಲ್ಲಿ ಬತ್ತಿಹೋಗಿದ್ದ ಏಳು ತೆನೆಗಳು ಪುಷ್ಟಿಯಾಗಿದ್ದ ಏಳು ತೆನೆಗಳನ್ನು ತಿನ್ನುವುದನ್ನು ಕಂಡನು.

5. ಫರೋಹನು ಯೋಸೇಫನಿಗೆ ತನ್ನ ಕನಸಿನ ಅರ್ಥವನ್ನು ತಿಳಿಸಲು ಹೇಳಿದಾಗ ಆತನು ತಾನದನ್ನು ಹೇಳಲು ಸಾಧ್ಯವಿಲ್ಲ ಆದರೆ ದೇವರು ಅದನ್ನು ತಿಳಿಸಲು ಸಾಧ್ಯ ಎಂದು ಉತ್ತರಿಸಿದನು.

6. ಫರೋಹನು ಯೋಸೇಫನನ್ನು ಐಗುಪ್ತದ ಮೇಲೆಲ್ಲಾ ಅಧಿಕಾರಿಯನ್ನಾಗಿ ನೇಮಿಸುವಾಗ ಆತನವನಿಗೆ ಮುದ್ರೆಯುಂಗರವನ್ನು ಹಾಕಿ, ನಾರುಮಡಿಯನ್ನು ಹೊದಿಸಿ, ಕೊರಳಿಗೆ ಚಿನ್ನದ ಸರಪಣಿಯನ್ನು ಹಾಕಿಸಿದನು. ಈ ಮೂರು ವಸ್ತುಗಳು ಫರೋಹನು ಈಗ ತನ್ನ ರಾಜಾಧಿಕಾರವನ್ನು ಯೋಸೇಫನೊಂದಿಗೆ ಹಂಚಿಕೊಂಡಿದ್ದಾನೆಂಬುದನ್ನು ಸೂಚಿಸುತ್ತದೆ. ಅಲ್ಲಿ ಫರೋಹನು ಯೋಸೇಫನನ್ನು ರಥದಲ್ಲಿ ಕುಳ್ಳಿರಿಸಿ ಮೆರವಣಿಗೆ ಮಾಡಿಸಿದನು.

7. ಯೋಸೇಫನು ಫರೋಹನಲ್ಲಿ ಸೇವೆಗೆ ಬಂದಾಗ ಆತನಿಗೆ ಮೂವತ್ತು ವರ್ಷ ಪ್ರಾಯವಾಗಿತ್ತು. ಹೀಗೆ ಯೋಸೇಫನು ಐಗುಪ್ತಕ್ಕೆ ದಾಸನಾಗಿ ಬಂದು 13 ವರ್ಷಗಳಾಗಿದ್ದವು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ದೇವರು ಯೋಸೇಫನ ಸಂಗಡ ಇದ್ದನೆಂಬುದನ್ನು ಈ ಮೂರು ಅಧ್ಯಾಯಗಳು ಈ ರೀತಿಯಾಗಿ ತೋರಿಸುತ್ತವೆ:

   ಅ. ಆತನು ಪೋಟೀಫರನ ಮನೆಯಲ್ಲಿ ಏಳಿಗೆಯಾದನು. ಆತನು ದಾಸನಾಗಿ ಬಂದನು ಮತ್ತು ಆತನು ಪೋಟೀಫರನ ಮುಖ್ಯ ಸೇವಕನಾದನು.

   ಆ. ಆತನು ಸೆರೆಮನೆಯಲ್ಲೂ ಏಳಿಗೆ ಹೊಂದಿದನು. ಆತನ ಮೆಲೆ ಅತ್ಯಾಚಾರಿಯೆಂಬ ಆರೋಪ ಹೊರಿಸಿದರೂ ಆತನು ಸೆರೆಮನೆಯಲ್ಲಿ ಮುಖ್ಯ ಸಹಾಯಕನಾದನು.

   ಇ. ಆತನು ಫರೋಹನ ಸೇವೆಯಲ್ಲಿ ಏಳಿಗೆ ಹೊಂದಿದನು. ಆತನೊಬ್ಬ ಬಿಡುಗಡೆ ಹೊಂದಿದ ಖೈದಿಯಾಗಿದ್ದನು. ಆದರೆ ಇಡೀ ಐಗುಪ್ತ ದೇಶದಲ್ಲೆಲ್ಲಾ ಸರ್ವಾಧಿಕಾರಿಯಾದನು.

2. ಆದರೆ ದೇವರ ದಯೆ ಹೊಂದಿದ ವ್ಯಕ್ತಿ ಸಹ ಕೆಟ್ಟ ಜನರ ಮಧ್ಯೆ ಇಡಲ್ಪಡಬಹುದು. ಯೋಸೇಫನು ಹೇಗೆ ದುಷ್ಟ (ಕೆಟ್ಟ) ಜನರ ಬಳಿಗೆ ಕರತರಲ್ಪಟ್ಟನು ಮತ್ತು ಹೇಗೆ ದೇವರು ಕೆಡುಕನ್ನು ಒಳಿತನ್ನಾಗಿ ಮಾಡಿದನೆಂಬುದನ್ನು ಈ ಮೂರು ಅಧ್ಯಾಯಗಳು ತೋರಿಸುತ್ತವೆ:

ಅ). ಪೋಟೀಫರನ ಹೆಂಡತಿಯು ಒಬ್ಬ ಮೋಹಿಸುವವಳೂ ಮತ್ತು ಸುಳ್ಳುಗಾರಳೂ ಆಗಿದ್ದಳು. ಯೋಸೇಫನನ್ನು ಮೋಹಿಸುವಲ್ಲಿ ಆಕೆ ವಿಫಲಳಾದಾಗ ಆತನ ಮೇಲೆ ತಪ್ಪುಹೊರಿಸಿ ತನ್ನ ಗಂಡನು ಆತನನ್ನು ಸೆರೆಮನೆಯಲ್ಲಿ ಹಾಕುವಂತೆ ತಂತ್ರ ಮಾಡಿದಳು. ಆದರೆ ದೇವರು ಈ ದುರಂತವನ್ನು ಇಡೀ ಐಗುಪ್ತ ದೇಶವನ್ನು ಮತ್ತು ಸ್ವತಃ ಯೋಸೇಫನ ಕುಟುಂಬವನ್ನು ಕಾಪಾಡುವುದಕ್ಕಾಗಿ ಉಪಯೋಗಿಸುತ್ತಾನೆ. ಒಂದು ವೇಳೆ ಯೋಸೇಫನು ಜೈಲಿನಲ್ಲಿ ಹಾಕಲ್ಪಡದಿದ್ದರೆ ಆತನಲ್ಲಿನ ಕನಸುಗಳನ್ನು ಬಿಡಿಸಿ ಅರ್ಥಹೇಳುವ ವರವು ಫರೋಹನಿಗೆ ತಿಳಿಯುತ್ತಿರಲಿಲ್ಲ. ಪೋಟೀಫರನ ಮೆನಯಲ್ಲಿ ಅರ್ಥವಿವರಿಸಲು ಕನಸುಗಳೇ ಆತನಿಗಿರಲಿಲ್ಲ.

ಆ). ಪಾನದಾಯಕನು ಯೋಸೇಫನ ಸಂಗತಿಯನ್ನು ಫರೋಹನ ಮುಂದೆ ಹೇಳುವೆನೆಂಬುದಾಗಿ ಮಾತುಕೊಡುತ್ತಾನೆ. ಆದರೆ ತಾನು ಬಿಡುಗಡೆಯಾದ ಕೂಡಲೇ ಆತನು ತನ್ನ ಮಾತನ್ನು ಮರೆತುಬಿಡುತ್ತಾನೆ. ಎರಡು ವರ್ಷಗಳ ತರುವಾಯ ಫರೋಹನಿಗೊಂದು ವಿಚಿತ್ರ ಕನಸು ಬಿದ್ದಾಗ ದೇವರು ಪಾನದಾಯಕನಿಗೆ ಯೋಸೇಫ ಮತ್ತು ಕನಸುಗಳ ಅರ್ಥ ವಿವರಿಸುವ ಆತನ ವರದ ಬಗ್ಗೆ ನೆನಪಿಸಿದನು.

3. ಈ ಮೂರು ಅಧ್ಯಾಯಗಳಲ್ಲಿ ಯೋಸೇಫನ ಗುಣಸ್ವಭಾವದ ಈ ಚಿತ್ರಣವನ್ನು ನಾವು ಕಾಣುತ್ತೇವೆ:

ಅ. ಆತನು ಪೋಟೀಫರನ ಮನೆ ಮತ್ತು ಸೆರೆಮನೆಯಲ್ಲಿ ಸಹ ಕಷ್ಟಪಟ್ಟು ಕೆಲಸ ಮಾಡುವವನೂ, ಪರಿಶ್ರಮಿಯೂ, ಅರ್ಹನೂ ಮತ್ತು ನಂಬಿಗಸ್ತನೂ ಆಗಿದ್ದನು.

ಆ. ಆತನೊಬ್ಬ ಸದ್ಗುಣಶೀಲನಾಗಿದ್ದು ಪದೇ ಪದೇ ಪೋಟೀಫರನ ಹೆಂಡತಿಯಿಂದ ಬಂದ ಲೈಂಗಿಕ ಶೋಧನೆಯನ್ನು ತಡೆದುಕೊಂಡನು.

ಇ. ಆತನು ಜ್ಞಾನಿಯಾಗಿದ್ದು ಹಿಂದಿಗಿಂತಲೂ ಹೆಚ್ಚು ದೀನನಾಗಿದ್ದನು. ಆತನು ತನ್ನ ಸಂಕಷ್ಟದ ಬಗ್ಗೆ ದೂರಲಿಲ್ಲ. ಪೋಟೀಫರನ ಹೆಂಡತಿ ಮಾಡಿದ ಸುಳ್ಳು ಆರೋಪದಿಂದ ತನ್ನನ್ನು ರಕ್ಷಿಸಿಕೊಳ್ಳಲು ಆತನು ದೊಡ್ಡ ರದ್ಧಾಂತ ಮಾಡಲಿಲ್ಲ. ಆತನು ಫರೋಹನ ಪರವಾಗಿ ಕೆಲಸ ಮಾಡುವಾಗ ಸಹ ಪೋಟೀಫರನ ಅಥವಾ ಆತನ ಪತ್ನಿಯ ಮೇಲೆ ಸೇಡು ತೀರಿಸಿಕೊಳ್ಳಲು ಪ್ರಯತ್ನಿಸಲಿಲ್ಲ.

ಈ. ಐಗುಪ್ತ್ಯರು ಸಹ ಆತನ ಜ್ಞಾನ ಮತ್ತು ಆಡಳಿತಾತ್ಮಕ ಸಾಮಾರ್ಥ್ಯವನ್ನು ಗುರುತಿಸಿದರು. ಪೋಟೀಫರನು ಆತನನ್ನು ತನ್ನ ಮನೆಯ ಮೇಲೆಲ್ಲಾ ಉಸ್ತುವಾರಿ ವಹಿಸಿದನು. ಫರೋಹನು ಆತನನ್ನು ಇಡೀ ಐಗುಪ್ತದ ಮೇಲೆಲ್ಲ ಅಧಿಕಾರಿಯನ್ನಾಗಿ ಇಟ್ಟನು. ಏಳು ವರ್ಷಗಳ ಕ್ಷಾಮಕ್ಕಾಗಿನ ಸಿದ್ಧತೆಯು ಯೋಸೇಫನ ಶ್ರೇಷ್ಠವಾದ ಆಡಳಿತಾತ್ಮಕ ಕೌಶಲ್ಯಗಳನ್ನು ತೋರಿಸಿತು.

ಉ. ಆತನು ತನ್ನ ಸಹ ಖೈದಿಗಳ ಕುಶಲೋಪರಿಯ ಬಗ್ಗೆ ಕಾಳಜಿಯುಳ್ಳವನಾಗಿದ್ದನು. ಭಕ್ಷ್ಯಕಾರ ಮತ್ತು ಪಾನದಾಯಕರ ಬಳಿ ಯಾಕೆ ಚಿಂತಿತರಾಗಿದ್ದಾರೆಂಬುದಾಗಿ ಆತನು ಕೇಳಿದನು.

ಊ. ಆತನು ಪ್ರಾಮಾಣಿಕನೂ, ಮುಕ್ತವಾಗಿ ಮಾತನಾಡುವವನೂ ಆಗಿದ್ದನು. ಭಕ್ಷ್ಯಕಾರನ ಕನಸಿನ ನಿಜವಾದ ಅರ್ಥವನ್ನು ಆತನು ಮುಚ್ಚಿಡಲಿಲ್ಲ.

ಋ. ಆತನೊಬ್ಬ ಭಕ್ತಿವಂತ ಮನುಷ್ಯನಾಗಿದ್ದನು. ಪೋಟೀಫರನ ಹೆಂಡತಿಯ ಆಶೆಗೆ ಮುಂದಾಗುವುದು ದೇವರಿಗೆ ವಿರುದ್ಧವಾಗಿ ಮಾಡುವ ಪಾಪವೆಂಬುದಾಗಿ ಆತನು ವಿವರಿಸುತ್ತಾನೆ. ಭಕ್ಷ್ಯಕಾರನಿಗೆ ಮತ್ತು ಪಾನದಾಯಕನಿಗೆ ಮತ್ತು ನಂತರ ಫರೋಹನಿಗೆ ಕನಸುಗಳಿಗೆ ಅರ್ಥವನ್ನು ತಿಳಿಸಿದವನು ದೇವರೇ ಎಂಬುದಾಗಿ ವಿವರಿಸುತ್ತಾನೆ. ದೇವರ ಆತ್ಮವು ಆತನಲ್ಲಿದೆ ಎಂಬುದನ್ನು ಫರೋಹನು ಸಹ ತಿಳಿದುಕೊಂಡನು.

4. –

**ಆದಿಕಾಂಡ ಉತ್ತರಗಳು 24: ಯೋಸೇಫ ಮತ್ತು ಆತನ ಅಣ್ಣಂದಿರು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಮೊದಲ ಬಾರಿಗೆ ಬೆನ್ಯಾಮೀನನು ಯೋಸೇಫನ ಇತರ ಅಣ್ಣಂದಿರೊಂದಿಗೆ ಐಗುಪ್ತಕ್ಕೆ ಬರುವುದಿಲ್ಲ. ಯಾಕೆಂದರೆ ಆತನಿಗೇನಾದರೂ ಆಗಬಹುದೆಂಬುದಾಗಿ ಅವರ ತಂದೆಯಾದ ಯಾಕೋಬನು ಹೆದರಿದ್ದನು. ಯೋಸೇಫನು ಕಾಣೆಯಾಗಿದ್ದ ದಿನದಿಂದ ಬೆನ್ಯಾಮೀನನೊಬ್ಬನೇ ರಾಹೇಲಳಿಗೆ ಹುಟ್ಟಿದ ಮಗನಾಗಿದ್ದನು. ರಾಹೇಲಳು ಯಾಕೋಬನ ಮುದ್ದಿನ ಮಡದಿಯಾಗಿದ್ದಳು.

2. ಯೋಸೇಫನು ತನ್ನ ಅಣ್ಣಂದಿರನ್ನು ಗೂಢಾಚಾರರೆಂಬುದಾಗಿ ದೂರಿದನು. ಅವರು ತಾವು ಯಾರು ಮತ್ತು ತಮ್ಮ ಕುಟುಂಬದ ಪರಿಸ್ಥಿತಿಯೇನೆಂಬುದಾಗಿ ವಿವರಿಸಿ ಹೇಳಿದರು. ಹಾಗಾಗಿ ಯೋಸೇಫನು ಅವರಿಗೆ ಮುಂದಿನ ಬಾರಿ ಬರುವಾಗ ಬೆನ್ಯಾಮೀನನನ್ನು ಕರಕೊಂಡು ಬರುವ ಮೂಲಕ ತಾವು ಹೇಳಿದ್ದು ಸತ್ಯವೆಂಬುದನ್ನು ಸಾಬೀತುಪಡಿಸಬೇಕೆಂದು ಹೇಳಿದನು.

3. ಸಹೋದರರು ಧಾನ್ಯಕ್ಕಾಗಿ ಯೋಸೇಫನಿಗೆ ಕೊಟ್ಟ ಹಣವನ್ನು ರಹಸ್ಯವಾಗಿ ಅವರಿಗೇ ಹಿಂತಿರುಗಿಸಲಾಯಿತು. ಅವರು ಪ್ರಯಾಣದಲ್ಲಿ ಹಿಂತಿರುಗುವಾಗ ತಮ್ಮ ಕತ್ತೆಗಳಿಗಾಗಿ ಧಾನ್ಯವನ್ನು ಕೊಡಲು ಚೀಲಗಳನ್ನು ಬಿಚ್ಚಿದಾಗ ಅವರು ತಮ್ಮ ಹಣವು ಚೀಲದಲ್ಲೇ ಇರುವುದನ್ನು ಕಂಡರು.

4. ಎರಡನೇ ಬಾರಿಗೆ ತನ್ನ ಸಹೋದರರು ಐಗುಪ್ತಕ್ಕೆ ಬಂದಾಗ ಯೋಸೇಫನು ಅವರನ್ನು ತನ್ನ ಮನೆಗೆ ಕರೆತರಬೇಕೆಂದು ತನ್ನ ಮನೆವಾರ್ತೆಯವನಿಗೆ ಹೇಳಿದನು, ಯಾಕೆಂದರೆ ಆತನು ಅವರಿಗೆ ಊಟವನ್ನು ಹಾಕಬೇಕೆಂದು ಬಯಸಿದ್ದನು.

5. ಯೋಸೇಫನೊಂದಿಗೆ ಊಟಕ್ಕೆ ಕುಳಿತಿರುವ ವೇಳೆ ಎಲ್ಲರನ್ನೂ ವಯಸ್ಸಿನ ಪ್ರಕಾರವೇ ಕುಳ್ಳಿರಿಸಿರುವುದನ್ನು ಕಂಡು ಆತನ ಅಣ್ಣಂದಿರು ಆಶ್ಚರ್ಯಪಟ್ಟರು, ಯಾಕೆಂದರೆ ಯೋಸೇಫನು ಅವರನ್ನು ವಯಸ್ಸಿನ ಪ್ರಕಾರವೇ ಕೂರಿಸಿದ್ದನು.

6. ಮನೆವಾರ್ತೆಯವನು ಬೆನ್ಯಾಮೀನನ ಚೀಲದಲ್ಲಿ ಹಣವನ್ನಲ್ಲದೆ ಯೋಸೇಫನು ಪಾನಮಾಡುವ ಪಾತ್ರೆಯನ್ನು ಕಂಡನು

7. ಈ ಬಾರಿ ಸಹೋದರರು ಐಗುಪ್ತಕ್ಕೆ ದಾಸರಾಗಿ ಹಿಂತಿರುಗಿದರು, ಯಾಕೆಂದರೆ ತಮ್ಮೊಳಗೆ ಯಾರಲ್ಲಾದರೂ ಯೋಸೇಫನ ಪಾನಪಾತ್ರೆಯು ಸಿಕ್ಕಿದರೆ ತಾವು ಆತನಿಗೆ ದಾಸರಾಗುವೆವು ಎಂಬುದಾಗಿ ಮನೆವಾರ್ತೆಯವನೊಂದಿಗೆ ಒಪ್ಪಂದಮಾಡಿಕೊಂಡಿದ್ದರು.

8. ಇಸ್ರಾಯೇಲ್ ಜನವು ಉಳಿಯುವುದಕ್ಕಾಗಿ ಅವರನ್ನು ಸಂರಕ್ಷಿಸಲು ದೇವರೇ ತನ್ನನ್ನು ಐಗುಪ್ತಕ್ಕೆ ಕಳಿಸಿದನೆಂಬುದಾಗಿ ಯೋಸೇಫನು ಹೇಳಿದನು.

9. ಯೋಸೇಫನ ಅಣ್ಣಂದಿರು ಬಂದಿದ್ದಾರೆಂಬುದಾಗಿ ಫರೋಹನಿಗೂ ಆತನ ಪರಿವಾರದವರಿಗೂ ತಿಳಿದಾಗ ಅವರು ಸಂತೋಷಗೊಂಡರು. ಅವರ ತಂದೆಯೂ, ಕುಟುಂಬವೂ ಐಗುಪ್ತಕ್ಕೆ ಬಂದು ನೆಲೆಸಬೇಕೆಂದೂ ಮತ್ತು ತಾವು ಅವರಿಗೆ ಉತ್ತಮವಾದ ಸ್ಥಳವನ್ನು ಕೊಡುವೆನೆಂಬುದಾಗಿ ಆಹ್ವಾನಿಸಿದನು.

10. ಯೋಸೇಫನು ಇನ್ನೂ ಜೀವದಿಂದಿದ್ದಾನೆಂಬುದಾಗಿ ತಮ್ಮ ತಂದೆಗೆ ಮನವರಿಗೆ ಮಾಡಿಕೊಡಲು ಯೋಸೇಫನ ಅಣ್ಣಂದಿರು ಕಷ್ಟಪಡಬೇಕಾಯಿತು. ಆದರೆ ಎರಡನೇ ಬಾರಿ ತಾವು ಐಗುಪ್ತಕ್ಕೆ ಹೋದಾಗ ನಡೆದ ಸಂಗತಿಯನ್ನೆಲ್ಲಾ ಆತನಿಗೆ ತಿಳಿಸಿದಾಗ ಮತ್ತು ತನ್ನನ್ನು ಐಗುಪ್ತಕ್ಕೆ ಕರತರುವುದಕ್ಕಾಗಿ ಯೋಸೇಫನು ಕಳಿಸಿದ ರಥಗಳನ್ನು ಯಾಕೋಬನು ನೋಡಿದಾಗ ಆತನು ನಂಬಿದನು.

**ಊ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಇಪ್ಪತ್ತು ವರ್ಷಗಳು ಕಳೆದುಹೋದರೂ ಯೋಸೇಫನು ತನ್ನ ಅಣ್ಣಂದಿರ ಗುರುತನ್ನು ಹಿಡಿದನು. ಆತನನ್ನು ಮಾರುವಾಗಲೇ ಅವರು ಪ್ರಾಯದವರಾಗಿದ್ದರು. ಅವರು ಈಗಲೂ ಅದೇ ರೀತಿಯ ಬಟ್ಟೆಗಳನ್ನು ಧರಿಸಿದವರಾಗಿ ಅದೇ ರೀತಿಯ ಕಾನಾನ್ಯ ಶೈಲಿಯ ಗಡ್ಡಗಳನ್ನು ಬಿಟ್ಟಿದವರಾಗಿದ್ದರು ಮತ್ತು ಅವರು ಇನ್ನೂ ಇಬ್ರಿಯದಲ್ಲೇ ಮಾತನಾಡಿದರು. ಹೀಗೆ ಅವರಲ್ಲೇನೂ ಬದಲಾವಣೆಯಿರಲಿಲ್ಲ. ಆದರೆ ಯೋಸೇಫನು ನೋಟದಲ್ಲಿ ತುಂಬಾ ವಿಭಿನ್ನನಾಗಿದ್ದನು. ಆತನು ಹದಿನೇಳು ವರ್ಷದಿಂದ ಈಗ ಒಬ್ಬ ಮಧ್ಯವಯಸ್ಕ ಪುರುಷನಾಗಿದ್ದನು. ಆತನು ಗಡ್ಡವನ್ನು ಬೋಳಿಸಿಕೊಂಡಿದ್ದನು. ಆತನು ಐಗುಪ್ತದ ಉಡುಪುಗಳನ್ನು ಧರಿಸಿಕೊಂಡಿದ್ದನು. ಆತನು ಒಂದು ದೊಡ್ಡ ಸಾಮ್ರಾಜ್ಯದ ಉನ್ನತ ಅಧಿಕಾರಿಯಾಗಿ ಎಲ್ಲ ಐಶ್ವರ್ಯ ಮತ್ತು ಅಧಿಕಾರವನ್ನು ಪ್ರದರ್ಶಿಸಿದನು. ಆತನು ಐಗುಪ್ತ ಭಾಷೆಯಲ್ಲಿ ಮಾತನಾಡಿದನು ಮತ್ತು ಅಣ್ಣಂದಿರೊಂದಿಗೆ ಮಾತನಾಡುವಾಗ ಅನುವಾದಕರನ್ನು ಬಳಸಿದನು.

2. ಈ ನಾಲ್ಕು ಅಧ್ಯಾಯಗಳ ನಾಲ್ಕು ಪ್ರಮುಖ ದೃಶ್ಯಗಳಲ್ಲಿ ಯೋಸೇಫ ಮತ್ತು ಆತನ ಅಣ್ಣಂದಿರ ನಡುವಿನ ಸಂವಾದ:

   ಅ). ದೃಶ್ಯ ಒಂದು: ಯೋಸೇಫನ ಬಳಿಯಿಂದ ಧಾನ್ಯವನ್ನು ಕೊಳ್ಳುವುದಕ್ಕಾಗಿ ಹತ್ತು ಮಂದಿ ಸಹೋದರರು ಮೊದಲ ಬಾರಿಗೆ ಬರುವುದು (ಆದಿ. 42:6-26):

   - ಯೋಸೇಫ: ಆತನು ತನ್ನನ್ನೊಬ್ಬ ಅಪರಿಚನಂತೆ ತೋರ್ಪಡಿಸಿಕೊಂಡು ಅವರೊಂದಿಗೆ ಖಠಿಣವಾಗಿ ಮಾತನಾಡುತ್ತಾನೆ. ಪದೇ ಪದೇ ಆತನವರನ್ನು ಗೂಡಾಚಾರರೆಂಬುದಾಗಿ ದೂರುತ್ತಾನೆ. ಆತನವರನ್ನು ಬೆದರಿಸಿ ಅವರೆಲ್ಲರನ್ನು ಸೆರೆಯಲ್ಲಿರಿಸುತ್ತಾನೆ.
   - ಆತನ ಸಹೋದರರು: ಅವರು ಯೋಸೇಫನ ಮುಂದೆ ಬಂದು ಆತನಿಗೆ ಅಡ್ಡ ಬೀಳುವರು ಮತ್ತು ಆತನಿಗೆ ಅತೀವ ಗೌರವ ಸಲ್ಲಿಸುವರು. ಅವರು ತಾವು ಯಾರೆಂಬುದಾಗಿ ದೀನತೆಯಿಂದ ವಿವರಿಸುತ್ತಾರೆ.

   ಆ). ದೃಶ್ಯ ಎರಡು: ಅಣ್ಣಂದಿರು ಎರಡನೇ ಬಾರಿಗೆ ಐಗುಪ್ತಕ್ಕೆ ಬರುತ್ತಾರೆ. ಈ ಬಾರಿ ಅವರು ಬೆನ್ಯಾಮೀನನನ್ನು ಕರೆತರುತ್ತಾರೆ (ಆದಿ. 43:15-34):

   - ಯೋಸೇಫ: ಆತನು ವಿನಯದಿಂದ ಅವರ ಮತ್ತು ಅವರ ತಂದೆಯ ಯೋಗಕ್ಷೇಮವನ್ನು ವಿಚಾರಿಸುತ್ತಾನೆ. ಆತನು ಬೆನ್ಯಾಮೀನನನ್ನು ಕಂಡೊಡನೆ ಕರುಳುಮರುಗಿ ಬೇಗನೇ ಎದ್ದು ಹೋಗಿ ಅಳುತ್ತಾನೆ. ಆತನು ತಿರುಗಿ ಬಂದು ಅವರಿಗೆ ಊಟ ಬಡಿಸುತ್ತಾನೆ ಮತ್ತು ಬೆನ್ಯಾಮೀನನಿಗೆ ಹೆಚ್ಚು ಪಾಲನ್ನು ಕೊಡತ್ತಾನೆ.
   - ಆತನ ಅಣ್ಣಂದಿರು: ಅವರನ್ನು ಯೋಸೇಫನ ಖಾಸಗಿ ನಿವಾಸಕ್ಕೆ ಕರೆತಂದದ್ದರಿಂದ ಹೆದರಿದರು. ಈಗ ತಮ್ಮನ್ನು ಹಿಡಿದು ದಾಸರನ್ನಾಗಿ ಮಾಡುತ್ತಾರೆಂಬುದಾಗಿ ಆಲೋಚಿಸಿರಿದರು. ತಮ್ಮ ಹಿಂದಿನ ಬೇಟಿಯ ನಂತರ ತಮ್ಮ ಚೀಲದಲ್ಲಿ ಸಿಕ್ಕ ಹಣದ ಬಗ್ಗೆ ಯೋಸೇಫನ ಮನೆವಾರ್ತೆಯವನಿಗೆ ವಿವರಿಸಲು ಪ್ರಯತ್ನಿಸುತ್ತಾರೆ. ಯೋಸೇಫನು ಮನೆಗೆ ಬಂದೊಡನೆಯೇ ತಮ್ಮ ತಂದೆಯಿಂದ ತಂದಿದ್ದ ಕಾಣಿಕೆಗಳನ್ನು ಆತನಿಗೆ ಕೊಟ್ಟರು. ಅವರು ಯೋಸೇಫನ ಮುಂದೆ ಅಡ್ಡಬಿದ್ದರು. ಅವರು ಗೌರವದಿಂದ ಆತನೊಂದಿಗೆ ಮಾತನಾಡುತ್ತಾರೆ. ತಾವು ಕುಳಿತ ಕ್ರಮದ ಬಗ್ಗೆ ಅವರು ಅಚ್ಚರಿಗೊಳ್ಳುತ್ತಾರೆ. ಅವರು ಯೋಸೇಫನೊಂದಿಗೆ ಒಂದು ಒಳ್ಳೆಯ ಊಟ ಮಾಡುತ್ತಾರೆ.

   ಇ). ದೃಶ್ಯ ಮೂರು: ಯೋಸೇಫನ ಪಾನಪಾತ್ರೆಯು ಬೆನ್ಯಾಮೀನನ ಚೀಲದಲ್ಲಿ ಸಿಕ್ಕೊಡನೆಯೇ ಮನೆವಾರ್ತೆಯವನು ಅವನ ಅಣ್ಣಂದಿರನ್ನೂ ತಿರುಗಿ ಕರೆತರುತ್ತಾರೆ (ಆದಿ. 44:14-34):

- ಯೋಸೇಫ: ಆತನು ಸೊಕ್ಕಿನಿಂದ ಮಾತನಾಡಿ ಶಕುನ ನೋಡುವ ಶಕ್ತಿ ತನಗಿದೆಯೆಂಬುದಾಗಿ ಹೇಳುತ್ತಾನೆ. ಆತನು ಅವರೆಲ್ಲರನ್ನೂ ಗುಲಾಮರಾಗಿ ಸ್ವೀಕರಿಸಲು ಒಪ್ಪದೆ ಒಬ್ಬನ ಮೇಲೆ (ಬೆನ್ಯಾಮೀನನ) ಅಪರಾಧವನ್ನು ಹೊರಿಸುತ್ತಾನೆ.

- ಆತನ ಅಣ್ಣಂದಿರು: ಅವರು ಯೋಸೇಫನ ಮುಂದೆ ಅಡ್ಡಬೀಳುತ್ತಾರೆ. ಯೆಹೂದನು ಪರವಾಗಿ ಅಪರಾಧವನ್ನು ಒಪ್ಪಿಕೊಳ್ಳುತ್ತಾನೆ. ಈಗ ತಾವು ಯೋಸೇಫನ ಗುಲಾಮರೆಂಬುದನ್ನು ಆತನು ತಿಳಿದುಕೊಳ್ಳುತ್ತಾನೆ. ಬೆನ್ಯಾಮಿನ್ ಮತ್ತು ತಮ್ಮ ತಂದೆಯೊಂದಿಗಿನ ಕ್ಲಿಷ್ಟಕರ ಸನ್ನಿವೇಶವನ್ನು ಯೆಹೂದನು ವಿವರಿಸುತ್ತಾನೆ ಮತ್ತು ಬೆನ್ಯಾಮೀನನ ಸ್ಥಾನದಲ್ಲಿ ತನ್ನನ್ನೇ ಗುಲಾಮನಾಗಿ ಒಪ್ಪಿಸಿಕೊಡುತ್ತಾನೆ.

ಈ). ದೃಶ್ಯ ನಾಲ್ಕು: ಯೋಸೇಫನು ತನ್ನ ಅಣ್ಣಂದಿರಿಗೆ ತನ್ನ ಗುರುತನ್ನು ತೋರ್ಪಡಿಸಿಕೊಳ್ಳುವನು (ಆದಿ. 45:1-15):

- ಯೋಸೇಫ: ಆತನಿಗೆ ತಡೆದುಕೊಳ್ಳಲಾಗುವುದಿಲ್ಲ. ಆತನು ತನ್ನ ಎಲ್ಲಾ ಐಗುಪ್ತ ಸೇವಕರನ್ನು ಹೊರಗೆ ಕಳುಹಿಸುತ್ತಾನೆ. ಅನಂತರ ಆತನು ಅಣ್ಣಂದಿರಿಗೆ ತನ್ನ ಗುರುತನ್ನು ತಿಳಿಸುತ್ತಾನೆ. ಆತನವರನ್ನು ಮನೊವೊಲಿಸಲು ಪ್ರಯತ್ನಿಸುತ್ತಾನೆ. ನಡೆದ ಎಲ್ಲಾ ಸಂಗತಿಗಳ ಮೂಲಕ ಹೇಗೆ ದೇವರ ಯೋಜನೆಯು ನೆರವೇರಿತೆಂಬುದನ್ನು ಆತನು ವಿವರಿಸುತ್ತಾನೆ. ಆತನು ಅವರೆಲ್ಲರನ್ನೂ (ಅವರ ತಂದೆ ಮತ್ತು ಕುಟುಂಬವನ್ನೊಳಗೊಂಡು) ಐಗುಪ್ತದಲ್ಲಿ ವಾಸಿಸುವುದಕ್ಕಾಗಿ ಆಹ್ವಾನಿಸುತ್ತಾನೆ. ಆತನು ಬೆನ್ಯಾಮೀನನನ್ನು ಅಪ್ಪಿಕೊಂಡು ಅಳುತ್ತಾನೆ. ಆತನು ಎಲ್ಲಾ ಅಣ್ಣಂದಿರಿಗೆ ಮುದ್ದಿಟ್ಟು ಅಳುತ್ತಾನೆ.

- ಆತನ ಅಣ್ಣಂದಿರು: ಯೋಸೇಫನು ಅವರ ಹೆಸರನ್ನು ಹೇಳಿದಾಗ ಅವರು ಭಯಭೀತರಾಗುತ್ತಾರೆ.

3. –

4. ಇಪ್ಪತ್ತು ವರ್ಷಗಳಿಂದ ಹಿಂದೆ ಆತನನ್ನು ಮಿದ್ಯಾನ್ಯರಿಗೆ ಒಬ್ಬ ದಾಸನಾಗಿ ಮಾರಿದಂದಿನಿಂದ ಯೋಸೇಫನ ಅಣ್ಣಂದಿರು ಹೇಗೆ ಬದಲಾದರೆಂಬುದಕ್ಕೆ ಮೂರು ಉದಾಹರಣೆಗಳು ಇಲ್ಲಿವೆ:

ಅ). ಅವರು ತಮ್ಮ ತಂದೆಯ ಭಾವನೆಗಳ ಬಗ್ಗೆ ಹೆಚ್ಚು ಚಿಂತಿತರಾಗಿದ್ದಾರೆ. ಈ ಹಿಂದೆ ಅವರು ಯೋಸೇಫನನ್ನು ಕೊಲ್ಲಲು ಆಲೋಚಿಸಿರಿದಾಗ ಮತ್ತು ಆತನನ್ನವರು ದಾಸನಾಗಿ ಮಾರಿದಾಗ ಅವರು ಕಠಿಣ ಹೃದಯದವರಾಗಿದ್ದರು. ಆದರೆ ಈಗ ಬೆನ್ಯಾಮೀನನಿಗೇನಾದರೂ ಆದರೆ ಯಾಕೋಬನಿಗೆ ಎಂತಹ ವೇದನೆಯಾಗಬಹುದೆಂಬುದಾಗಿ ಗಂಭೀರವಾಗಿ ಚಿಂತಿಸುತ್ತಾರೆ.

ಆ). ತಮ್ಮ ಮೊದಲ ಬೇಟಿಯ ಕೊನೆಯಲ್ಲಿ ಯೋಸೇಫನೊಂದಿಗೆ ವ್ಯವಹರಿಸುವಾಗ ಅವರು ಅನೇಕ ವರ್ಷಗಳ ಹಿಂದೆ ಯೋಸೇಫನಿಗೆ ತಾವು ಮಾಡಿದ ದ್ರೋಹಕ್ಕಾಗಿ ಮರುಗುತ್ತಾರೆ. ಈಗ ಅವರು ತಮ್ಮ ಹಳೆಯ ಪಾಪಕ್ಕಾಗಿ ಫಲವನ್ನು ಕೊಯ್ಯುತ್ತಿದ್ದಾರೆ (ಆದಿ. 42:21-22). ಅವರು ನೈತಿಕವಾಗಿ ಮತ್ತು ಆತ್ಮೀಕವಾಗಿ ಪರಿಪಕ್ವಗೊಂಡಿದ್ದಾರೆಂಬುದನ್ನು ಇದು ತೋರಿಸುತ್ತದೆ.

ಇ). ಬೆನ್ಯಾಮೀನನನ್ನು ಐಗುಪ್ತದಲ್ಲಿನ ಸೆರೆಯಿಂದ ಬಿಡಿಸಲು ಮತ್ತು ತಮ್ಮ ತಂದೆಯನ್ನು ಹೆಚ್ಚಾದ ಮಾನಸಿಕ ವ್ಯಥೆಯಿಂದ ಸಂರಕ್ಷಿಸುವುದಕ್ಕಾಗಿ ರೂಬೇನ್ (ಆದಿ. 42:37) ಮತ್ತು ಯೆಹೂದರಿಬ್ಬರೂ (ಆದಿ. 44:33) ತಮ್ಮನ್ನೇ ತಾವು ಬಲಿಯಾಗಿ ಕೊಡಲು ಸಹ ಸಿದ್ಧರಿರುತ್ತಾರೆ. ಇದೂ ಸಹ ಅವರು ಪರಿಪಕ್ವಹೊಂದಿದ್ದಾರೆಂಬುದನ್ನು ತೋರಿಸುತ್ತದೆ.

5. –

**ಆದಿಕಾಂಡ ಉತ್ತರಗಳು 25: ಯಾಕೋಬ ಮತ್ತು ಆತನ ಕುಟುಂಬವು ಐಗುಪ್ತಕ್ಕೆ ಬಂದು ನೆಲೆಸುವುದು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ದೇವರು ಯಾಕೋಬನಿಗೆ ರಾತ್ರಿಯ ಒಂದು ದರ್ಶನದಲ್ಲಿ ಐಗುಪ್ತಕ್ಕೆ ಇಳಿದು ಹೋಗಬೇಕೆಂದು ಉತ್ತೇಜಿಸುತ್ತಾನೆ. ಇದು ಯಾಕೋಬನು ಬೇರ್ಷಬದಲ್ಲಿ ದೇವರಿಗೆ ಯಜ್ಞಗಳನ್ನು ಮಾಡಿದಾಗ ಸಂಭವಿಸುತ್ತದೆ.

2. ಯಾಕೋಬನು ಅಲ್ಲಿ ಹೋಗಿ ನೆಲೆಸಿದಾಗ ಐಗುಪ್ತದಲ್ಲಿದ್ದ ಯಾಕೋಬನ ಕುಟುಂಬದವರ ಸಂಖ್ಯೆ ಒಟ್ಟು ಎಪ್ಪತ್ತು ಮಂದಿ. ಈ ಸಂಖ್ಯೆಯು ಯಾಕೋಬನ ಸೊಸೆಯಂದಿರನ್ನು ಒಳಗೊಂಡಿರಲಿಲ್ಲ. ಆದರೆ ಸಂಖ್ಯೆಗಳು ಗೊಂದಲವನ್ನುಂಟುಮಾಡುತ್ತವೆ: "ಒಟ್ಟು ಎಪ್ಪತ್ತೈದು ಮಂದಿ" ಎಂಬುದಾಗಿ ಅ.ಕೃ. 7:14 ಹೇಳುತ್ತದೆ (ಇದು ಹಳೇ ಒಡಂಬಡಿಕೆಯ ಗ್ರೀಕಿನ ಸೆಪ್ಟಾಜೆಂಟ್ ಭಾಷಾಂತರವನ್ನಾಧರಿಸಿದೆ).

3. ತನ್ನ ಕುಟುಂಬವು ಗೋಷೆನ್ ಸೀಮೆಯಲ್ಲಿ ವಾಸಿಸುವಂತೆ ಫರೋಹನು ಅನುಮತಿಸಲು ಯೋಸೇಫನು ಅವರು ಕುರಿಕಾಯುವವರು ಎಂಬುದಾಗಿ ಹೇಳಿಸಿದನು. ಐಗುಪ್ತ್ಯರು ಕುರಿಕಾಯುವವರನ್ನು ದ್ವೇಷಿಸುತ್ತಿದ್ದರು. ಹೀಗಾಗಿ ಇಸ್ರಾಯೇಲ್ಯರಿಗೆ ಗೋಷನ್ ಸೀಮೆಯಲ್ಲಿ ವಾಸಿಸಲು ಅನುಮತಿ ಸಿಕ್ಕಂತಾಗುವುದು. ಯೋಸೇಫನ ಉಪಾಯವು ಫಲಿಸಿತು ಮತ್ತು ಆತನ ಕುಟುಂಬಕ್ಕೆ ಗೋಷನ್ ಸೀಮೆಯು ಸಿಕ್ಕಿತು.

4. ಬರಗಾಲದ ವೇಳೆ ಯೋಸೇಫನ ಆಡಳಿತವು ಐಗುಪ್ತ್ಯರ ಮೇಲೆ ಫರೋಹನ ಹಿಡಿತವನ್ನು ಬಲಗೊಳಿಸಿತು. ಅದು ಈ ರೀತಿ ಆಯಿತು: ಜನರು ಆಹಾರಕ್ಕಾಗಿ ತಮ್ಮೆಲ್ಲಾ ಹಣವನ್ನು ವ್ಯಯಿಸಿದ ಮೇಲೆ ತಮ್ಮ ಪಶುಗಳನ್ನೆಲ್ಲಾ ಧಾನ್ಯಕ್ಕಾಗಿ ಕೊಡಬೇಕಾಯಿತು. ಅನಂತರ ಅವರು ಸಾಯದೆ ತಮ್ಮ ಪ್ರಾಣವನ್ನು ಉಳಿಸಿಕೊಳ್ಳುವುದಕ್ಕಾಗಿ ತಮ್ಮನ್ನೇ ಮಾರಿಕೊಳ್ಳಬೇಕಾಯಿತು. ಆದರೆ ಯೋಸೇಫನು ಅವರ ಹೊಲವನ್ನು ಅವರಿಗೇ ಕೊಟ್ಟು, ಅವರಿಗೆ ಬಿತ್ತಲು ಬೀಜವನ್ನು ಕೊಟ್ಟು ಅವರು ಬೆಳೆದ ಬೆಳೆಯಲ್ಲಿ ಐದರಲ್ಲೊಂದು ಭಾಗವನ್ನು ಫರೋಹನಿಗೆ ತೆರಿಗೆಯಾಗಿ ಕೊಡಬೇಕೆಂಬ ಷರತ್ತನ್ನು ವಿಧಿಸಿದನು. ಹೀಗೆ ಫರೋಹನು ಅವರೆಲ್ಲರ ಹೊಲವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡನು ಮತ್ತು ಜನರ ದುಡಿಮೆಯ ಮೂಲಕ ಅದರಿಂದ ಆದಾಯವನ್ನು ಪಡಕೊಂಡನು.

5. ತನ್ನ ತಂದೆಯನ್ನು ಹೂಣಿಡಲು ಕಾನಾನ್ ದೇಶಕ್ಕೆ ಹೋಗುವಾಗ ಯೋಸೇಫನೊಂದಿಗೆ ಫರೋಹನ ಪರಿವಾರದವರೂ ಮತ್ತು ಆತನ ಕುಟುಂಬದ ಮುಖಂಡರೆಲ್ಲರೂ ಹೋದರು.

6. ಯಾಕೋಬನು ಸಾಯುವುದಕ್ಕಿಂತ ಮುಂಚೆ ಯೋಸೇಫನ ಅಣ್ಣಂದಿರಿಗೆ ಯೋಸೇಫನ ಬಳಿಗೆ ಹೋಗಿ ನಿಮ್ಮ ಅಪರಾಧ ಪಾಪಗಳಿಗಾಗಿ ಆತನ ಬಳಿ ಕ್ಷಮೆಯನ್ನು ಕೇಳಬೇಕೆಂದು ಅಪ್ಪಣೆ ಮಾಡಿದ್ದನು. ಯೋಸೇಫನು ಅವರ ಮನವಿಗೆ ದಯೆತೋರಿದನು. ಆತನು ಅವರಿಗೆ ಭಯಪಡಬೇಡಿ ಎಂದು ಹೇಳಿ ಅವರನ್ನು ಅವರ ಮಕ್ಕಳನ್ನು ತಾನು ಪೋಷಿಸುವುದಾಗಿ ಮಾತುಕೊಟ್ಟನು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಆದಿಕಾಂಡದ ಈ ಕೊನೇ ಅಧ್ಯಾಯಗಳು ಸಕಾರಾತ್ಮಕ ಅಂಶಗಳನ್ನು ಒಳಗೊಂಡಿವೆ. ಈ ಅಧ್ಯಾಯನದಲ್ಲಿ ನಮಗೆ ಕಂಡುಬರುವ ಸಕಾರಾತ್ಮಕ ಅಂಶಗಳ ಒಂದು ಪಟ್ಟಿ ಇಂತಿದೆ:

   ಅ). ಐಗುಪ್ತ ದೇಶದಲ್ಲಿ ವಾಸವಾಗುವ ಯಾಕೋಬನ ನಿರ್ಧಾರವನ್ನು ದೇವರು ರಾತ್ರಿಯ ಕನಸಿನಲ್ಲಿ ದೃಢಪಡಿಸಿದನು.

ಆ). ಯಾಕೋಬ ಮತ್ತು ಆತನು ಕಟುಂಬದವರನ್ನು ಫರೋಹ ಮತ್ತು ಆತನ ಪರಿವಾರದವರೆಲ್ಲರೂ ಸಂತೋಷದಿಂದ ಬರಮಾಡಿಕೊಂಡರು.

ಇ). ಅವರಿಗೆ ಆ ದೇಶದಲ್ಲಿನ ಉತ್ತಮವಾದ ಸ್ಥಳವು ವಾಸಿಸಲು ಸಿಕ್ಕಿತು.

ಈ). ಐಗುಪ್ತ್ಯರು ಕುರುಬರನ್ನು ಹಗೆ ಮಾಡಿ, ತಮ್ಮದೇ ಸೀಮೆಯಲ್ಲಿ ವಾಸಿಸಲು ಬಯಸಿದಿದ್ದರೂ ಅವರಿಗಿಷ್ಟ ಬಂದಂತೆ ಅಲ್ಲಿರಲು ಅನುಮತಿಸಲಾಯಿತು.

ಉ). ಬರವಿದ್ದ ವರ್ಷಗಳುದ್ದಕ್ಕೂ ಯೋಸೇಫನು ಐಗುಪ್ತ ದೇಶದಲ್ಲಿ ಅಸಾಧಾರಣವಾದ ಕೌಶಲ್ಯದಿಂದ ಆಡಳಿತ ನಡೆಸುತ್ತಾನೆ.

ಊ). ಯಾಕೋಬನು ಸಂತುಷ್ಟನಾಗಿ ಮರಣ ಹೊಂದುತ್ತಾನೆ: ಆತನು ತನ್ನ ಕಳೆದು ಹೋದ ಮಗನೊಂದಿಗೆ ಪುನಃ ಸೇರುತ್ತಾನೆ. ಆತನು ಯೋಸೇಫನ ಮಕ್ಕಳನ್ನೂ ಮತ್ತು ಸ್ವತಃ ತನ್ನ ಮಕ್ಕಳನ್ನೂ ಆಶೀರ್ವದಿಸಿದನು. ಕಾನಾನಿನ ಮಮ್ರೆಯ ಬಳಿ ತನ್ನ ಪಿತೃಗಳ ಸ್ಮಶಾನಭೂಮಿಯಲ್ಲಿಯೇ ತನಗೆ ಸಮಾಧಿಮಾಡಬೇಕೆಂದು ಮಾತು ತೆಗೆದುಕೊಂಡನು.

ಋ). ಯೋಸೇಫನೂ ಆತನ ಅಣ್ಣಂದಿರೂ ಸಮಾಧಾನಗೊಂಡರು.

ಎ). ಯೋಸೇಫನ ಅಭೂತಪೂರ್ವ ಜೀವಿತದ ಮೂಲಕ ದೇವರು ತನ್ನ ಯೋಜನೆಯನ್ನು ನೆರವೇರಿಸಿದನು.

2. –

**ಆದಿಕಾಂಡ ಉತ್ತರಗಳು 26: ಪಿತೃಗಳು (ಪೂರ್ವಜರು)**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. "ಪಿತೃಗಳು" (ಪೂರ್ವಜರು) ಎಂಬ ಪದವು ಸಾಮಾನ್ಯವಾಗಿ ಇಸ್ರಾಯೇಲ್ ಜನಾಂಗವನ್ನು ಸ್ಥಾಪಿಸಿದ ಪಿತೃಗಳಾದ ಅಬ್ರಹಾಮ್, ಇಸಾಕ್, ಯಾಕೋಬ್ ಮತ್ತು ಯೋಸೇಫರನ್ನು ಸೂಚಿಸುತ್ತದೆ.

2. ಪಿತೃಗಳ ಕಥನವು ಕ್ರಿ.ಪೂ. 2000 ವರ್ಷಗಳ ಆಸುಪಾಸಿನಲ್ಲಿ ಸುಮಾರು 200 ವರ್ಷಗಳ ಅವಧಿಯಲ್ಲಿ ಫಲವತ್ತಾದ ಭೂಮಿಯಲ್ಲಿ (ಈಶಾನ್ಯದಲ್ಲಿ ಮೆಸೊಪೊಟಮಿಯಾದಿಂದ ನೈರುತ್ಯದಲ್ಲಿನ ಕಾನಾನಿನ ಮೂಲಕ ದಕ್ಷಿಣದಲ್ಲಿ ಐಗುಪ್ತದವರೆಗೆ) ಸಂಭವಿಸಿತು.

3. ಆದಿಕಾಂಡ 12:1-3ನ್ನು ಆದಿಕಾಂಡ ಮೊದಲ ಹನ್ನೊಂದು ಅಧ್ಯಾಯಗಳ ಜಾಗತಿಕ ಇತಿಹಾಸದ ನಡುವಿನ ಒಂದು ಸೇತುವೆಯಾಗಿ ಕಾಣಬಹುದು. ಇದು ಎಲ್ಲಾ ಕ್ಷೇತ್ರಗಳಲ್ಲಿ ಪರಿಣಾಮ ಬೀರುವುದರ ಮೂಲಕ ಲೋಕದಾದ್ಯಂತ ಪಾಪವು ಹರಡುವುದನ್ನು ವಿವರಿಸುತ್ತದೆ ಮತ್ತು ಸತ್ಯವೇದದ ಉಳಿದ ಭಾಗವು ದೇವರ ರಕ್ಷಣೆಯ ಇತಿಹಾಸದ ಮೇಲೆ ಗಮನಹರಿಸುತ್ತದೆ.

4. "ಹೆಸರು" ಪದವು ಬಾಬೆಲ್ ಗೋಪುರದ ("ದೊಡ್ಡ ಹೆಸರನ್ನು ಪಡೆಯೋಣ", ಆದಿ. 11:4) ಮತ್ತು ಅಬ್ರಹಾಮನ ಕರೆಯುವಿಕೆಯ ಕಥೆಯಲ್ಲಿ ("ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು", ಆದಿ. 12:2) ಕಂಡುಬರುತ್ತದೆ. ಇದು ಒಂದೆಡೆ ಬಾಬೆಲಿನಲ್ಲಿನ ಕಟ್ಟಡ ಕಟ್ಟುವವರು ದೇವರ ಸಾರ್ವಭೌಮತೆಯನ್ನು ಮರೆತು ಅಹಾಂಕಾರದಿಂದ ಹೆಸರನ್ನು ಬಯಸಿದ್ದು ಮತ್ತು ಇನ್ನೊಂದೆಡೆ ಅಬ್ರಹಾಮನ ಮೇಲಿನ ದೇವರ ಆಶೀರ್ವಾದ ಮತ್ತು ಆತನ ಮೂಲಕ ಭೂಲೋಕದ ಎಲ್ಲಾ ಜನಾಂಗಗಳಿಗೂ ಆಗುವ ಆಶೀರ್ವಾದದ ನಡುವೆ ತದ್ವಿರುದ್ಧತೆಯನ್ನು ತೋರಿಸುತ್ತದೆ, ಹೆಸರಿನ ಪುನರಾವರ್ತನೆಯು ಅಬ್ರಹಾಮನ ಮೇಲಿನ ದೇವರ ಆಶೀರ್ವಾದ ಮತ್ತು ಬಾಬೇಲಿನ ಮೇಲಿನ ದೇವರ ನ್ಯಾಯತೀರ್ಪಿನ ನಡುವಿನ ತದ್ವಿರುತದ್ಧತೆಯನ್ನು ತೋರಿಸುತ್ತದೆ.

5. ಆದಿಕಾಂಡ 15 ರಲ್ಲಿ ಅಬ್ರಹಾಮನೊಂದಿಗಿನ ದೇವರ ಒಡಂಬಡಿಕೆಯು ಆದಿ. 12:1-3 ರಲ್ಲಿನ ಅಬ್ರಹಾಮನ ಕರೆಯೊಂದಿಗೆ ನಿಕಟ ಸಂಬಂಧ ಹೊಂದಿದೆ. ಒಡಂಬಡಿಕೆಯನ್ನು ಅಬ್ರಹಾಮನ ಕರೆಯ ವೇಳೆ ದೇವರು ಆತನೊಂದಿಗೆ ಮಾಡಿಕೊಂಡ ವಾಗ್ದಾನಗಳನ್ನು ಅಧಿಕೃತಗೊಳಿಸುವುದೆಂಬುದಾಗಿ ಅರ್ಥೈಸಿಕೊಳ್ಳಬಹುದಾಗಿದೆ.

6. ದೇವರು ಅಬ್ರಹಾಮನಿಗೆ ಮೂರು ವಾಗ್ದಾನಗಳನ್ನು ಮಾಡುತ್ತಾನೆ: ದೇವರು ಆತನಿಗೆ ದೇಶವನ್ನು (ಭೂಮಿ), ಅಸಂಖ್ಯವಾದ ಸಂತತಿ/ದೊಡ್ಡ ಜನಾಂಗ ಮತ್ತು ಒಂದು ಪ್ರಖ್ಯಾತ ಹೆಸರನ್ನು ವಾಗ್ದಾನ ಮಾಡುತ್ತಾನೆ. ಆದರೆ ಆತನು ತನ್ನ ಸ್ವದೇಹದಿಂದ ಹುಟ್ಟಿದ ಮಗನನ್ನು (ಇಸಾಕ) ಹೊಂದಿದ್ದು ಆತನು ಅಸಂಖ್ಯವಾದ ಸಂತತಿಯಾಗುವುದೆಂಬ ವಾಗ್ದಾನದ ನೆರವೇರುವಿಕೆಯ ಆರಂಭವಾಗಿದ್ದನು.

7. ಆದಿಕಾಂಡ 31 ರಲ್ಲಿ ಕಂಡುಬರುವ ಯಾಕೋಬನ ಕಥೆಯಲ್ಲಿನ ತಿರುವು ಇಂತಿದೆ:

   ಅ). ಇಪ್ಪತ್ತು ವರ್ಷಗಳ ಕಾಲ ಪದ್ದನ್ ಅರಾಮಿನಲ್ಲಿರುವಾಗ ದೇವರು ಯಾಕೋಬನನ್ನು ಹೇರಳವಾಗಿ ಆಶೀರ್ವದಿಸಿದ್ದನು: ಆತನಿಗೆ ಅನೇಕ ಮಕ್ಕಳೂ ಮತ್ತು ಬಹಳಷ್ಟು ಸಂಪತ್ತೂ ಇತ್ತು.

   ಆ). ಈಗ ಆತನು ಕಾನಾನಿಗೆ ಹಿಂತಿರುಗುತ್ತಿದ್ದಾನೆ ಮತ್ತು ತನ್ನ ಮನೆ, ಅಣ್ಣನಾದ ಏಸಾವ, ತನ್ನ ದೇಶದಿಂದ ಆತನು ಅನುಭವಿಸಿದ ಅಗಲುವಿಕೆಯು ಈಗ ವ್ಯತಿರಿಕ್ತವಾಗಿದೆ. ಶೀಘ್ರದಲ್ಲಿಯೇ ಆತನು ತನ್ನ ಸ್ವದೇಶಕ್ಕೆ ಹಿಂತಿರುಗಲಿರುವನು. ಅಲ್ಲದೆ ಆತನು ತನ್ನ ಅಣ್ಣನಾದ ಏಸಾವನೊಂದಿಗೆ ಸಮಾಧಾನವನ್ನು ಹೊಂದಿ ತನ್ನ ತಂದೆಯಾದ ಇಸಾಕನನ್ನು ಸಂಧಿಸುವನು.

8. ತನ್ನ ಕುಟುಂಬ(ಮನೆಯವರನ್ನು)ವನ್ನು ಸಂರಕ್ಷಿಸುವುದೇ ಯೋಸೇಫನು ಐಗುಪ್ತಕ್ಕೆ ಬಂದುದ್ದರ ಉದ್ದೇಶವಾಗಿತ್ತು. ಇದು ದೇವರ ಯೋಜನೆಯಾಗಿದ್ದು, ಈ ರೀತಿ ಆತನು ಅಬ್ರಹಾಮನಿಗೆ ಮಾಡಿದ ವಾಗ್ದಾನವು ಮುಂದೆ ನೆರವೇರಬೇಕಾಗಿತ್ತು.

9. ಆದಿಕಾಂಡ ಪುಸ್ತಕದ ಕೊನೆಯಲ್ಲಿ ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನಗಳು ಕೇವಲ ಭಾಗಶಃ ನೆರವೇರುತ್ತವೆ: ಇಸ್ರಾಯೇಲ್ ಒಂದು ಸಣ್ಣ ಜನಾಂಗ(ರಾಷ್ಟ್ರ)ವಾಯಿತು (ಇದಕ್ಕೆ ಸುಮಾರು 200 ವರ್ಷ ಬೇಕಾಯಿತು), ಆದರೆ ವಾಗ್ದಾನದ ದೇಶವು ಭವಿಷ್ಯದಲ್ಲಿ ಸುಮಾರು 500 ವರ್ಷಗಳವರೆಗಿನದಾಗಿತ್ತು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. "ಅಬ್ರಹಾಮನ ಕರೆಯು ಎಲ್ಲಾ ವಿಶ್ವಾಸಿಗಳಿಗಾಗಿನ ಕರೆಯ ಒಂದು ಮಾದರಿ ಸಹ ಆಗಿದೆ". ಅಬ್ರಹಾಮನ ಕರೆಯು ಆತನ ಮತ್ತು ಆತನ ಸಂತತಿಯ ಮೇಲಿನ ದೇವರ ಆಶೀರ್ವಾದವನ್ನು ವ್ಯಕ್ತಪಡಿಸುತ್ತದೆ. ಒಂದು ನೂತನ "ವಾಗ್ದಾಥತ್ತ ದೇಶದಲ್ಲಿ (ಕಾನಾನ್) ನೆಲೆಸುವುದಕ್ಕಾಗಿ ತನ್ನ ಹಳೆಯ ದೇಶವನ್ನು (ಮೆಸೊಪೊಟಮಿಯ) ಬಿಟ್ಟನು. ಆತನು ಒಂದು ದೊಡ್ಡ ಜನಾಂಗದ ಪಿತನೆನಿಸಿಕೊಂಡನು. ಆತನ ಮೂಲಕ ಭೂಲೋಕದ ಎಲ್ಲಾ ಜನಾಂಗಗಳಿಗೂ ಆಶೀರ್ವಾದವಾಯಿತು. ಇದೆಲ್ಲವೂ ತನ್ನ ಜೀವಿತಾವಧಿಯಲ್ಲಿ ನೆರವೇರಿದ್ದನ್ನು ಆತನು ಕಾಣಲಿಲ್ಲ. ಆದರೆ ಆತನು ದೇವರಲ್ಲಿ ಮತ್ತು ಆತನ ವಾಗ್ದಾನಗಳಲ್ಲಿ ನಂಬಿಕೆಯಿಟ್ಟನು.

   ಇದೇ ವಿಧಾನವು ಎಲ್ಲಾ ವಿಶ್ವಾಸಿಗಳಿಗೂ ಸತ್ಯ(ನಿಜ)ವಾದುದ್ದಾಗಿದೆ. ದೇವರ ಕರೆಗೆ ನಾವು ಪ್ರತಿಕ್ರಿಯಿಸುವಾಗ ನಾವು ನಮ್ಮ ಹಳೆಯ ಪಾಪಮಯ ಜೀವಿತದ ಹಿನ್ನಲೆಯನ್ನು (ನಮ್ಮ ಮೆಸೊಪೊಟಮಿಯಾ) ಬಿಟ್ಟು ಬರುತ್ತೇವೆ. ನಾವು ನಮ್ಮ ನಮ್ಮ ವಾಗ್ದಾಥತ್ತ ದೇಶ ಪರಲೋಕದ ಹಾದಿಯಲ್ಲಿರುತ್ತೇವೆ. ನಾವೆಲ್ಲ ದೇವರಿಂದ ಆಶೀರ್ವದಿಸಲ್ಪಟ್ಟಿದ್ದೇವೆ. ನಮ್ಮ ನಿಮಿತ್ತ ನಾವು ಸಂಧಿಸುವ ಜನರು ಆಶೀರ್ವಾದ ಹೊಂದುತ್ತಾರೆ. ವಿಶೇಷವಾಗಿ ಅವರು ಸುವಾರ್ತೆಯನ್ನು ಕೇಳಿ ಯೇಸುವನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವಾಗ ಆಶೀರ್ವಾದ ಹೊಂದುತ್ತಾರೆ. ದೇವರ ವಾಗ್ದಾನಗಳೆಲ್ಲವೂ ನೆರವೇರಿದ್ದನ್ನು ನಾವಿನ್ನೂ ನೋಡಿಲ್ಲ ಮತ್ತು ನಾವಿನ್ನೂ ನಮ್ಮ ಗುರಿಯನ್ನು ಮುಟ್ಟಿಲ್ಲ. ಆದರೆ ನಾವು ದೇವರ ಮೇಲೆ ಭರವಸವಿಟ್ಟಿದ್ದೇವೆ, ನಾವು ಯೇಸುವಿನ ಮೂಲಕ ಸಿಕ್ಕ ಆತನ ರಕ್ಷಣೆಗಾಗಿ ದೇವರಿಗೆ ಕೃತಜ್ಞರಾಗಿದ್ದು ಯೇಸುವು ತನ್ನ ಮಹಿಮೆಯಲ್ಲಿ ಬರುವಾಗ ದೇವರು ತನ್ನೆಲ್ಲಾ ವಾಗ್ದಾನಗಳನ್ನು ನೆರವೇರಿಸುವನೆಂಬುದನ್ನು ಬಲ್ಲವರಾಗಿದ್ದೇವೆ. ಇದು ಸ್ವತಃ ನಿಮ್ಮ ಕ್ರೈಸ್ತೀಯ ಜೀವನ ಮತ್ತು ದಕ್ಷಿಣ ಭಾರತದ ಸಭಾ ಜೀವಿತದಲ್ಲಿ ನಿಜವಾಗಿರುವಂಥದ್ದಾಗಿದೆ.

2. ಆದಿಕಾಂಡ 12:1-3, 15:1-21, 17:1-27 ಮತ್ತು 22:1-19ನ್ನು ಪರಿಗಣಿಸುವಾಗ ನಾವಿದನ್ನು ಕಾಣಬಹುದು:

   ಅ). ಅಬ್ರಹಾಮನೊಂದಿಗಿನ ದೇವರ ಒಡಂಬಡಿಕೆಗೆ ಯಾವುದೇ ಪೂರ್ವಪೇಕ್ಷಿತವಿರಲಿಲ್ಲ. ದೇವರು ತನ್ನ ಒಡಂಬಡಿಕೆಯನ್ನು ಪ್ರಾರಂಭಿಸಲು ಅಬ್ರಹಾಮನಿಂದ ಏನೂ ಬೇಕಾಗಿರಲಿಲ್ಲ.

   ಆ). ಎಲ್ಲಾ ವಾಗ್ದಾನಗಳ ಪರವಾಗಿ ದೇವರು ನಿಂತನು. ಅಬ್ರಹಾಮನೂ ಏನನ್ನೂ ವಾಗ್ದಾನಮಾಡಬೇಕಿಲ್ಲ.

   ಇ. ದೇವರ ವಾಗ್ದಾನಗಳು ಷರತ್ತಿಲ್ಲದವುಗಳಾಗಿವೆ. ಈ ವಾಗ್ದಾನಗಳ ನೆರವೇರಿಕೆಯು ಮನುಷ್ಯನ ಅರ್ಹತೆಯ ಮೇಲೆ ಆಧಾರಿತವಾಗಿಲ್ಲ.

   ಈ). ಹಾಗಾದರೆ ಅಬ್ರಹಾಮನ ಜವಾಬ್ದಾರಿಗಳೇನು?

   - ಆತನು ದೇವರು ಮತ್ತು ಆತನ ವಾಗ್ದಾನಗಳನ್ನು ನಂಬಬೇಕಾಗಿತ್ತು (15:6).

- ಒಡಂಬಡಿಕೆಯ ಯಜ್ಞಕ್ಕಾಗಿ ಪಶುಗಳನ್ನು ತರಬೇಕೆಂದು ದೇವರು ಆತನನ್ನು ಕೇಳಿಕೊಂಡನು (15:10).
- ಅಲ್ಲದೆ ದೇವರು ಆತನಿಗೆ ಸುನ್ನತಿ ಮಾಡಿಸಿಕೊಳ್ಳುವುದರ ಮೂಲಕ ತನ್ನ ಒಡಂಬಡಿಕೆಯನ್ನು ಕೈಕೊಂಡು ನಡೆಯಬೇಕೆಂದು ಹೇಳಿದನು. ಇದು ಒಡಂಬಡಿಕೆಗೆ ಗುರುತಾಗಿತ್ತು (17:9-11).
- ವಿಧೇಯತೆ: ದೇವರು ನಿನ್ನ ಮಗನಾದ ಇಸಾಕನನ್ನು ಬಲಿಕೊಡಬೇಕೆಂದು ಅಬ್ರಹಾಮನನ್ನು ಕೇಳಿದಾಗ ಆತನು ವಿಧೇಯನಾಗಿ ಸರ್ವಾಂಗ ಹೋಮಕ್ಕಾಗಿ ದೇವರು ಕುರಿಮರಿಯನ್ನು ಒದಗಿಸುವನೆಂಬುದಾಗಿ ಭರವಸವಿಟ್ಟನು (22:8).

3. –

# ವಿಮೋಚನಕಾಂಡ ಉತ್ತರಗಳು

**ವಿಮೋಚನಕಾಂಡದ ಪರಿಚಯದ ಉತ್ತರಗಳು**

**ಪ್ರಶ್ನೆಗಳಿಗೆ ಉತ್ತರಗಳು**

1. ವಿಮೋಚನಕಾಂಡದ ಇಂಗ್ಲಿಷ್ ಹೆಸರು (*ಎಕ್ಸೊಡಸ್*) ಹಳೆ ಒಡಂಬಡಿಕೆಯ ಸೆಪ್ಟಾಜಿಂಟ್ ಗ್ರೀಕ್ ಅನುವಾದದಿಂದ ಆರಿಸಲ್ಪಟ್ಟು ಅದರ ಅರ್ಥ 'ಹೊರಗೆ ಹೋಗುವುದು' ಅಥವಾ 'ನಿರ್ಗಮನ' ಎಂಬುದಾಗಿದೆ. ಅದು ಒಂದು ಸೂಕ್ತವಾದ ಹೆಸರಾಗಿದೆ, ಯಾಕೆಂದರೆ ಇಸ್ರಾಯೇಲರು ಈಜಿಪ್ಟಿನಿಂದ ಹೇಗೆ ನಿರ್ಗಮಿಸಿದರು ಎಂಬುದನ್ನು ಅದು ವಿವರಿಸುತ್ತದೆ.
2. ವಿಮೋಚನಕಾಂಡವು ಮೂಲಭೂತವಾಗಿ ಈ ಮೂರು ಭೌಗೋಳಿಕ ವ್ಯವಸ್ಥೆಯನ್ನು ಹೊಂದಿದೆ:
   1) ಇಸ್ರಾಯೇಲರು ಬಂಧನದಲ್ಲಿ ಇಡಲ್ಪಟ್ಟಿದ್ದ ಈಜಿಪ್ಟ್
   2) ಈಜಿಪ್ಟ್ ಮತ್ತು ಸಿನಾಯಿ ಪರ್ವತದ ನಡುವಿನ ಮರುಭೂಮಿ
   3) ಇಸ್ರಾಯೇಲರು ಒಂದು ವರ್ಷದ ಕಾಲ ಪಾಳೆಯ ಹಾಕಿಕೊಂಡಿದ್ದ ಸಿನಾಯಿ ಪರ್ವತದ ಸುತ್ತಮುತ್ತಲಿನ ಪ್ರದೇಶ
3. ವಿಮೋಚನಕಾಂಡದಲ್ಲಿ ದಾಖಲಾಗಿರುವ ಘಟನೆಗಳು ಕ್ರಿ. ಪೂ. 1446 ರ ಸುಮಾರು ಸಂಭವಿಸಿದವು. ಇದು ನಿರ್ಗಮನದ ಸಾಂಪ್ರದಾಯಿಕ ದಿನಾಂಕವಾಗಿದೆ.
4. ವಿಮೋಚನಕಾಂಡದಲ್ಲಿರುವ ಎರಡು ಪ್ರಧಾನ ಪಠ್ಯಗಳು ಯಾವವೆಂದರೆ:
   1) ಕಥೆಗಳು
   2) ಮೋಶೆಗೆ ದೇವರು ನೀಡಿದ ನಿರ್ದೇಶನಗಳು. ಇವುಗಳು ದೇವರು ಮೋಶೆಯ ಮೂಲಕ ಇಸ್ರಾಯೇಲರಿಗೆ ಕೊಟ್ಟ ಮತ್ತು ವಿಮೋಚನಕಾಂಡದಲ್ಲಿ ಮೂರನೆಯ ಮುಖ್ಯ ಪಠ್ಯವಾದ ಆಜ್ಞೆಗಳಂತೆ ಅಲ್ಲ (ದಶಾಜ್ಞೆಗಳು ಮತ್ತು ಒಡಂಬಡಿಕೆಯ ಪುಸ್ತಕಕ್ಕೆ).
5. ವಿಮೋಚನಕಾಂಡದ ಸಂದೇಶವನ್ನು ಈ ಐದು ಅಂಶಗಳಲ್ಲಿ ಸಾರಾಂಶಗೊಳಿಸಬಹುದು:
   1) ದೇವರ ಮತ್ತು ಆತನ ಗುಣದ ಕುರಿತಾದ ಸಂದೇಶ
   2) ಮಾನವ ಇತಿಹಾಸವನ್ನು ನಿಯಂತ್ರಿಸುವವರು ಯಾರು ಎಂಬುದರ ಕುರಿತಾದ ಸಂದೇಶ. ಅದು ದೇವರಾಗಿದ್ದಾನೆ.
   3) ದೇವರ ಪ್ರೀತಿ ಮತ್ತು ಕರುಣೆಯಿಂದ ಹೊರಡುವ ಸತ್ಯವೇದದ ನೈತಿಕತೆಯ ಕುರಿತಾದ ಸಂದೇಶ
   4) ಆರಾಧನೆ ಮತ್ತು ತನ್ನ ಜನರ ಮಧ್ಯೆ ಇರುವ ದೇವರ ಪ್ರಸನ್ನತೆಯ ಕುರಿತಾದ ಸಂದೇಶ
   5) ನಾಯಕತ್ವದ ಕುರಿತಾದ ಸಂದೇಶ
6. ವಿಮೋಚನಕಾಂಡದಲ್ಲಿ ದೇವರ ಗುಣವನ್ನು ತಿಳಿಸುವ ಕೆಲವು ಮುಖ್ಯ ಪದಗಳ ಒಂದು ಪಟ್ಟಿಯು ಹೀಗಿದೆ: ಆತನು ನಂಬಿಗಸ್ತನು, ಕರುಣಾಮಯಿ, ಕನಿಕರವುಳ್ಳವನು, ಕೃಪಾಪೂರ್ಣನು, ದೀರ್ಘಶಾಂತನು, ಪರಿಶುದ್ಧನು, ನ್ಯಾಯವಂತನು, ಪರಾಕ್ರಮನು, ವೈಯಕ್ತಿಕನು, ತನ್ನ ಜನರೊಂದಿಗೆ ಇರುವವನು, ತನ್ನ ಒಡಂಬಡಿಕೆಯ ವಾಗ್ದಾನಗಳನ್ನು ನೆರವೇರಿಸುವವನು ಅಪರಾಧಿಯನ್ನು ಶಿಕ್ಷಿಸುವವನು, ಮಾನವ ಇತಿಹಾಸವನ್ನು ನಿಯಂತ್ರಿಸುವ ದೇವರು, ಬಿಡುಗಡೆ ಮತ್ತು ವಿಮೋಚನೆಯನ್ನು ಕೊಡುವ ದೇವರು, ಮಹಿಮೆಯ ದೇವರು
7. ಕೆಳಗೆ ಪಟ್ಟಿ ಮಾಡಿರುವ ಘಟನೆಗಳನ್ನು ವಿಮೋಚನಕಾಂಡದ ಈ ವಿಭಾಗದಲ್ಲಿ ಕಾಣಬಹುದು:
   1) ಬಂಗಾರದ ಬಸವ – ವಿಭಾಗ ಮೂರು (ಇಸ್ರಾಯೇಲರು ಸಿನಾಯಿ ಪರ್ವತದ ಬಳಿ ಪಾಳೆಯ ಹಾಕಿದ್ದರು)
   2) ಪಸ್ಕಹಬ್ಬ – ವಿಭಾಗ ಒಂದು (ಈಜಿಪ್ಟಿನಲ್ಲಿ ಇಸ್ರಾಯೇಲರು)
   3) ಸಮುದ್ರವನ್ನು ದಾಟಿದ್ದು – ವಿಭಾಗ ಎರಡು (ಇಸ್ರಾಯೇಲರು ಈಜಿಪ್ಟಿನಿಂದ ಸಿನಾಯಿ ಪರ್ವತದ ಕಡೆಗೆ ಪ್ರಯಾಣಿಸಿದ್ದು)
   4) ಸಬ್ಬತ್ ದಿನದ ಕುರಿತು ನಿರ್ದೇಶನಗಳು – ವಿಭಾಗ ಮೂರು (ಇಸ್ರಾಯೇಲರು ಸಿನಾಯಿ ಪರ್ವತದ ಬಳಿ ಪಾಳೆಯ ಹಾಕಿದ್ದರು)
   5) ಹತ್ತು ಬಾಧೆಗಳ ವಿವರಣೆ – ವಿಭಾಗ ಒಂದು (ಈಜಿಪ್ಟಿನಲ್ಲಿ ಇಸ್ರಾಯೇಲರು)
   6) ದಶಾಜ್ಞೆಗಳು – ವಿಭಾಗ ಮೂರು (ಇಸ್ರಾಯೇಲರು ಸಿನಾಯಿ ಪರ್ವತದ ಬಳಿ ಪಾಳೆಯ ಹಾಕಿದ್ದರು)
   7) ಮೋಶೆಯ ಕರೆ – ವಿಭಾಗ ಒಂದು (ಈಜಿಪ್ಟಿನಲ್ಲಿ ಇಸ್ರಾಯೇಲರು)
   8) ದೇವದರ್ಶನ ಗುಡಾರ ಕಟ್ಟಿದ್ದು – ವಿಭಾಗ ಮೂರು (ಇಸ್ರಾಯೇಲರು ಸಿನಾಯಿ ಪರ್ವತದ ಬಳಿ ಪಾಳೆಯ ಹಾಕಿದ್ದರು)

**ವಿಮೋಚನಕಾಂಡ ಉತ್ತರಗಳು 1: ಇಸ್ರಾಯೇಲರು ದಬ್ಬಾಳಿಕೆಗೆ ಒಳಗಾಗಿದ್ದು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಇಸ್ರಾಯೇಲರು ಹೆಚ್ಚಿದ್ದನ್ನು ಕಂಡಾಗ ಹೊಸ ಅರಸನು ಸಂತೋಷಪಡಲಿಲ್ಲ ಯಾಕೆಂದರೆ ಯುದ್ಧದ ಸಮಯದಲ್ಲಿ ಅವರು ವೈರಿಗಳ ಜೊತೆಗೆ ತಮ್ಮ ವಿರುದ್ಧ ಬರಬಹುದು ಮತ್ತು ನಂತರ ದೇಶವನ್ನು ಬಿಟ್ಟು ಹೋಗಬಹುದು ಎಂದು ಆತನು ಭಯಪಟ್ಟನು.
2. ಇಸ್ರಾಯೇಲರ ಜನಸಂಖ್ಯಾ ಸ್ಫೋಟವನ್ನು ತಡೆಗಟ್ಟಲು ಈಜಿಪ್ಟಿನ ಅಧಿಕಾರಿಗಳು ತೆಗೆದುಕೊಂಡ ಕ್ರಮಗಳ ಒಂದು ಪಟ್ಟಿಯು ಹೀಗಿದೆ:
   1) ಅವರು ಇಸ್ರಾಯೇಲರ ಹೊಸ ಪಟ್ಟಣಗಳನ್ನು ಕಟ್ಟುವ ಕಠಿಣ ಕೆಲಸದ ಮೇಲೆ ಮೇಲ್ವಿಚಾರಣೆ ನಡೆಸುವುದಕ್ಕಾಗಿ ಬಿಟ್ಟಿ ಕೆಲಸ ಮಾಡಿಸುವ ಮುಖ್ಯಸ್ಥರನ್ನು ನೇಮಿಸಿದರು.
   2) ಅದರಿಂದ ಪ್ರಯೋಜನವಾಗದಿದ್ದಾಗ ಅವರು ಇನ್ನೂ ಕಷ್ಟಪಟ್ಟು ಕೆಲಸ ಮಾಡುವಂತೆ ಮತ್ತು ಹೊಲದಲ್ಲಿಯೂ ಸಹ ಕೆಲಸಮಾಡುವಂತೆ ಒತ್ತಾಯಪಡಿಸಿದರು.
   3) ಅವರು ಹುಟ್ಟುವ ಎಲ್ಲಾ ಗಂಡು ಮಕ್ಕಳನ್ನು ಕೊಲ್ಲಬೇಕೆಂದು ಇಸ್ರಾಯೇಲರ ಸೂಲಗಿತ್ತಿಯರಿಗೆ ಆಜ್ಞಾಪಿಸಿದರು.
   4) ಅವರು ಹುಟ್ಟುವ ಗಂಡುಮಕ್ಕಳನ್ನೆಲ್ಲಾ ನೈಲ್ ನದಿಗೆ ಹಾಕಬೇಕೆಂದು ಈಜಿಪ್ಟಿಯನ್ನರಿಗೆ ಆಜ್ಞಾಪಿಸಿದರು.

3. ದೇವರು ಎರಡು ರೀತಿಯಲ್ಲಿ ಸೂಲಗಿತ್ತಿಯರಿಗೆ ಒಳ್ಳೆಯದನ್ನು ಮಾಡಿದನು:
   1) ಆತನು ಅವರು ಗಂಡು ಮಕ್ಕಳ ಪ್ರಾಣವನ್ನು ಉಳಿಸಿದರು ಎಂಬ ಅರಸನ ಆಪಾದನೆಯಿಂದ ಅವರನ್ನು ಸಂರಕ್ಷಿಸಿದನು. ಇದರ ಪರಿಣಾಮವಾಗಿ, ಇಸ್ರಾಯೇಲರು ಸಂಖ್ಯೆಯಲ್ಲಿ ಇನ್ನೂ ಹೆಚ್ಚಿದರು.
   2) ಆತನು ಅವರಿಗೆ ವಂಶಾಭಿವೃದ್ಧಿಯನ್ನು ಮಾಡಿದನು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಈ ಅಧ್ಯಾಯದಲ್ಲಿ ದಾಖಲಾಗಿರುವ ಘಟನೆಗಳು ಒಂದು ದೀರ್ಘ ಕಾಲದ ಅವಧಿಯಲ್ಲಿ ನಡೆದವು. ಇದನ್ನು ಪಠ್ಯದಲ್ಲಿರುವ ಸುಳಿವುಗಳಿಂದ ನಾವು ಕಾಣಬಹುದು:
   1) ಇಸ್ರಾಯೇಲರ ಮೊದಲ ಸಂತತಿಯು ಸತ್ತು ಹೋಗಿತ್ತು (ವ. 6)
   2) ಯೋಸೇಫನನ್ನು ಅರಿಯದ ಒಬ್ಬ ಹೊಸ ಅರಸನು ಅಧಿಕಾರಕ್ಕೆ ಬಂದನು (ವ. 7). ಎನ್.ಐ.ವಿ. ಸ್ಟಡಿ ಬೈಬಲ್ ಸೂಚಿಸುವ ಪ್ರಕಾರ 'ಯೋಸೇಪನ ಮರಣದ ಮತ್ತು ಹೊಸ ಅರಸನ ಏಳುವಿಕೆಗೂ ನಡುವೆ 200 ವರ್ಷಗಳಿಗಿಂತಲೂ ಹೆಚ್ಚು ಸಮಯಕಳೆದುಹೋಗಿತ್ತು'.
   3) ಇಸ್ರಾಯೇಲರು ಹೊಸ ಪಟ್ಟಣಗಳನ್ನು ಕಟ್ಟುವಂತೆ ಒತ್ತಾಯಿಸಲ್ಪಟ್ಟರು. ಇದು ದೀರ್ಘಕಾಲವನ್ನು ತೆಗೆದುಕೊಂಡಿರಬಹುದು. ನಂತರ ಅವರು ಹೊಲಗಳಲ್ಲಿಯೂ ಕೆಲಸ ಮಾಡಬೇಕಾಗಿತ್ತು.
   4) ಪದೇ ಪದೇ ಇಸ್ರಾಯೇಲರ ಸಂಖ್ಯೆ ಹೆಚ್ಚಿತು ಎಂದು ಹೇಳಲಾಗಿದೆ. ಇದು ಇಸ್ರಾಯೇಲರ ಒಂದು ಸಂತತಿಯ ನಂತರ ಇನ್ನೊಂದು ಸಂತತಿ ಬಂದದ್ದನ್ನು ಸೂಚಿಸುತ್ತದೆ. ಹಾಗಿದ್ದರೆ ಇದು ಶತಮಾನಗಳನ್ನು ಒಳಗೊಂಡಿರಬೇಕು. ಇಸ್ರಾಯೇಲರು ಒಟ್ಟು 430 ವರ್ಷಗಳ ಕಾಲ ಈಜಿಪ್ಟಿನಲ್ಲಿ ವಾಸವಾಗಿದ್ದರು (ನೋಡಿರಿ 12:40)
2. ಹಿಬ್ರಿಯ ಸೂಲಗಿತ್ತಿಯರ ನಡತೆಯನ್ನು ನಾನು ಹೀಗೆ ಮೌಲ್ಯೀಕರಿಸುತ್ತೇನೆ:
   1) ಅವರು ದೇವರಿಗೆ ಭಯಪಡುವವರಾಗಿದ್ದರು ಎಂಬುದು ಪಠ್ಯದಿಂದ ಸ್ಪಷ್ಟವಾಗುತ್ತದೆ (ವ. 17). ಹಾಗಾಗಿ ಅವರು ಗಂಡು ಕೂಸುಗಳನ್ನು ಕೊಲ್ಲಲು ನಿರಾಕರಿಸಿದರು.
   2) ಆದರೆ ಅವರು ನನಗೆ ನಿಷ್ಠೆ ಇಲ್ಲದವರೂ ಮತ್ತು ಅಪ್ರಾಮಾಣಿಕರೂ ಆಗಿದ್ದರೆಂದು ನನಗನ್ನಿಸುತ್ತದೆ. ಅವರು ಅರಸನ ನೇರವಾದ ಆಜ್ಞೆಗೆ ಅವಿಧೇಯರಾದರು, ಅದಲ್ಲದೆ ಏನು ಸಂಭವಿಸಿತು ಎಂದು ಕೇಳಿದಾಗ ಅವರು ಪೂರ್ಣ ಸತ್ಯವನ್ನು ಅರಸನಿಗೆ ಹೇಳಲಿಲ್ಲ.
   3) ಅವರು ಗಂಡು ಕೂಸುಗಳನ್ನು ಕೊಲ್ಲಬೇಕಾದ ವಿಷಯದಲ್ಲಿ ನಿಷ್ಠೆಯಿಲ್ಲದವರಾದದ್ದು ಅವರು ಮಾಡಿದ ಸರಿಯಾದ ಸಂಗತಿ ಎಂದು ನಾನು ಆಲೋಚಿಸುತ್ತೇನೆ. ಆದರೆ ನಡೆದ ಸಂಗತಿಯ ಪೂರ್ಣ ಸತ್ಯವನ್ನು ಹೇಳದಿದ್ದದ್ದು ಅವರು ಮಾಡಿದ ಸರಿಯಾದ ಸಂಗತಿ ಎಂದು ನಾನು ಆಲೋಚಿಸುವುದಿಲ್ಲ.

4) ಆದರೆ ಬಹುಶಃ ಅವರು ಸತ್ಯವನ್ನೇ ಹೇಳಿರಬಹುದು. ನಡೆದ ಸಂಗತಿ ಇದಾಗಿರಬಹುದು: ಒಬ್ಬ ಇಸ್ರಾಯೇಲಳು ಮಗುವಿಗೆ ಜನ್ಮ ನೀಡುತ್ತಿರುವಾಗ ದೇವರು ಆಕೆಗೆ ಒಂದು ಸುರಕ್ಷಿತವಾದ ಹೆರಿಗೆಯನ್ನು ಅನುಗ್ರಹಿಸುವನೆಂದು ಅವರು ಭರವಸವಿಟ್ಟರು. ಹಾಗಾಗಿ ಅವರು ಗಂಡು ನವಜಾತ ಶಿಶುವು ಸುರಕ್ಷಿತವಾಗಿ ಸ್ಥಳಾಂತರಿಸಲ್ಪಡುವವರೆಗೆ ತಾವು ಬರುವುದನ್ನು ತಡೆ ಮಾಡಿದರು.

5) ದೇವರು ಅವರಿಗೆ ದಯೆಯನ್ನು ತೋರಿಸಿದನು: ಆತನು ಅವರನ್ನು ಕೇಡಿನಿಂದ ರಕ್ಷಿಸಿ ಅವರಿಗೆ ಸಂತಾನಾಭಿವೃದ್ಧಿಯನ್ನು ಅನುಗ್ರಹಿಸಿದನು.

3. ನಾನೂ ಸಹ ಅದೇ ಸಂಗತಿಯನ್ನು ಮಾಡುತ್ತಿದ್ದೆ ಎಂದು ನಿರೀಕ್ಷಿಸುತ್ತೇನೆ. ಅವರು ದೇವರಿಗೆ ಭಯಪಡುವವರಾಗಿದ್ದರು ಮತ್ತು ಅರಸನ ದೇವಭಯವಿಲ್ಲದ ಆಜ್ಞೆಯನ್ನು ಪಾಲಿಸಲು ಅವರು ನಿರಾಕರಿಸಿದರು. ಅರಸನಿಗೆ ಒಂದು ತೃಪ್ತಿಕರ ಉತ್ತರವನ್ನು ಕೊಡಲು ಮತ್ತು ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಲು ಅವರು ಜಾಣ್ಮೆಯುಳ್ಳವರಾಗಿದ್ದರು. ಅವರ ಕ್ರಿಯೆಗಳನ್ನು ದೇವರು ಆಶೀರ್ವದಿಸಿದನು.

4. ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಇಂದು ಈ ವಾಕ್ಯಭಾಗದಿಂದ ಮೂರು ಮುಖ್ಯ ಸಂಗತಿಗಳನ್ನು ಕಲಿಯಬಹುದು:

1) ಅತ್ಯಂತ ಕಷ್ಟಕರವಾದ ಸಮಯವಿದ್ಯಾಗ್ಯೂ ದೇವರು ತನ್ನ ಜನರನ್ನು ಹೇಗೆ ಆಶೀರ್ವದಿಸುವನು ಎಂಬುದನ್ನು ನಾವು ಕಾಣುತ್ತೇವೆ. ದೇವರು ಎಲ್ಲವನ್ನೂ ತನ್ನ ನಿಯಂತ್ರಣದಲ್ಲಿರಿಸಿಕೊಂಡಿದ್ದಾನೆ.

2) ನಾವು ಅರಸುಗಳ ಮತ್ತು ಅಧಿಕಾರಿಗಳ ಮುಂದೆ ದೇವರಿಗೆ ವಿಧೇಯರಾಗಬೇಕು.

3) ನಾವು ದೇವಭಯವಿಲ್ಲದ ಜನರನ್ನು ಎದುರಿಸುವಾಗ ಜಾಣ್ಮೆಯುಳ್ಳವರಾಗಿ ನಡೆದುಕೊಳ್ಳಬೇಕು.

## ವಿಮೋಚನಕಾಂಡ ಉತ್ತರಗಳು 2: ಮೋಶೆ ಮತ್ತು ಆತನು ಮಿದ್ಯಾನಿಗೆ ಓಡಿ ಹೋಗಿದ್ದು

### ಈ. ಪ್ರಶ್ನೆಗಳಿಗೆ ಉತ್ತರಗಳು

1. ಮೋಶೆಯು ಲೇವಿಯ ಗೋತ್ರಕ್ಕೆ ಸೇರಿದವನು, ಆ ಗೋತ್ರವು ನಂತರ ಯಾಜಕ ಗೋತ್ರವಾಯಿತು.
2. ಫರೋಹನ ಮಗಳು ನೈಲ್ ನದಿಯಲ್ಲಿ ಸ್ನಾನ ಮಾಡುತ್ತಿರುವಾಗ ಒಂದು ಮಗು ಅಳುವುದನ್ನು ಕೇಳಿಸಿಕೊಂಡಳು. ಆಗ ಮಗುವಾದ ಮೋಶೆಯು ಒಂದು ಪುಟ್ಟಿಯಲ್ಲಿ ತೇಲುತ್ತಿರುವುದನ್ನು ಕಂಡಳು. ಆಕೆಯ ತಂದೆಯಾದ ಅರಸನು ಕೊಲ್ಲಲು ಬಯಸಿದ್ದ ಹಿಬ್ರಿಯ ಗಂಡು ಮಕ್ಕಳಲ್ಲಿ ಇದು ಒಂದು ಮಗುವೆಂದು ಅರಿತುಕೊಂಡಳು.
3. ಮೋಶೆಯನ್ನು ಫರೋಹನ ಮಗಳು ದತ್ತು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಆತನ ಸ್ವಂತ ತಾಯಿ ಆತನನ್ನು ಸಾಕಿದಳು.
4. ಮೋಶೆಯು ಈಜಿಪ್ಟಿನವನನ್ನು ಕೊಂದ ನಂತರ ಆತನನ್ನು ಮರುಳಿನಲ್ಲಿ ಮುಚ್ಚಿಹಾಕಿದನು.
5. ಫರೋಹನು ಮೋಶೆಯನ್ನು ಕೊಲ್ಲಬೇಕೆಂದದ್ದರಿಂದ ಆತನು ಈಜಿಪ್ಟನ್ನು ಬಿಟ್ಟು ಓಡಿ ಹೋದನು. ಮೋಶೆಯು ಒಬ್ಬ ಈಜಿಪ್ಟಿನವನನ್ನು ಕೊಂದು ಹಾಕಿದನು ಎಂಬ ಸುದ್ದಿಯನ್ನು ಫರೋಹನು ಕೇಳಿದ್ದನು.
6. ಮೋಶೆಯು ರೂವೇಲನ ಪುತ್ರಿಯರಿಗೆ ತಮ್ಮ ಕುರಿ ಮೇಕೆಗಳಿಗೆ ನೀರು ಕೊಡಿಸಲು ಸಹಾಯ ಮಾಡಿದ್ದರ ಫಲವಾಗಿ ಮಿದ್ಯಾನಿನಲ್ಲಿ ಹೆಂಡತಿಯನ್ನು ಪಡಕೊಂಡನು. ಮಿದ್ಯಾನಿನಲ್ಲಿ ಒಬ್ಬ ಯಾಜಕನಾಗಿದ್ದ ರೂವೇಲನು ತನ್ನ ಮನೆಯಲ್ಲಿ ಉಳುಕೊಳ್ಳಲು ಆತನನ್ನು ಆಹ್ವಾನಿಸಿ ತನ್ನ ಏಳು ಪುತ್ರಿಯರಲ್ಲಿ ಒಬ್ಬಳಾದ ಚಿಪ್ಪೋರಳನ್ನು ಆತನಿಗೆ ಹೆಂಡತಿಯಾಗಲು ಕೊಟ್ಟನು.
7. ಮಿದ್ಯಾನಿನಲ್ಲಿ ಮೋಶೆಯು ಬಹಳ ದಿನಗಳವರೆಗೆ ತಂಗಿದ್ದ ಅವಧಿಯಲ್ಲಿ ಆತನನ್ನು ಕೊಲ್ಲಬೇಕೆಂದಿದ್ದ ಈಜಿಪ್ಟಿನ ಅರಸನು ಸತ್ತು ಹೋದನು. ಆದರೆ ಇಸ್ರಾಯೇಲರ ಹಿಂಸೆಯು ಮುಂದುವರೆಯಿತು. ಅವರು ದೇವರಲ್ಲಿ ಕೂಗಿಕೊಂಡರು. ಆತನು ಅಬ್ರಹಾಮ, ಇಸಾಕ ಮತ್ತು ಯಾಕೋಬನ ಸಂಗಡ ತಾನು ಮಾಡಿದ ಒಡಂಬಡಿಕೆಯನ್ನು ಜ್ಞಾಪಕಮಾಡಿಕೊಂಡು ಅವರನ್ನು ಕರುಣಿಸಿದನು.

### ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು

1. ವಿಮೋಚನಕಾಂಡದ ಮೊದಲ ಎರಡು ಅಧ್ಯಾಯಗಳಲ್ಲಿ ಸ್ತ್ರೀಯರು ಮುಖ್ಯ ಪಾತ್ರವನ್ನು ವಹಿಸುತ್ತಾರೆ:
   1) ಸೂಲಗಿತ್ತಿಯರು ನವಜಾತ ಗಂಡು ಮಕ್ಕಳನ್ನು ರಕ್ಷಿಸಿದರು.
   2) ಇಸ್ರಾಯೇಲ್ ಸ್ತ್ರೀಯರು ಅರಸನ ಸಂಹಾರ ಯೋಜನೆಯಿಂದ ತಮ್ಮ ಗಂಡು ಮಕ್ಕಳನ್ನು ತಪ್ಪಿಸಿಕೊಳ್ಳುವಂತೆ ಆರೋಗ್ಯವಂತ ಶಿಶುಗಳಿಗೆ ಶೀಘ್ರವಾಗಿ ಜನ್ಮ ನೀಡಿದರು.
   3) ಮೋಶೆಯ ತಾಯಿಯು ಮತ್ತು ಅಕ್ಕಳು ಆತನ ಪ್ರಾಣವನ್ನು ಉಳಿಸಿದರು ಮತ್ತು ಫರೋಹನ ಮಗಳು ಆತನನ್ನು ಕಂಡುಕೊಂಡ ನಂತರವೂ ಆತನ ಪಾಲನೆಯನ್ನು ಮಾಡಿದರು.
   4) ಫರೋಹನ ಮಗಳು ಮೋಶೆಯನ್ನು ದತ್ತು ಪಡೆದಳು. ಆತನು ನಂತರ ಫರೋಹನನ್ನು ವಿರೋಧಿಸಿ ಇಸ್ರಾಯೇಲರನ್ನು ಈಜಿಪ್ಟಿನಿಂದ ಹೊರಗೆ ನಡೆಸಿದನು.
2. ನನಗನ್ನಿಸುವ ಪ್ರಕಾರ ಮೋಶೆಯು ಮಿದ್ಯಾನಿನಲ್ಲಿ 40 ವರ್ಷವನ್ನು ಕಳೆಯುವಾಗ ಆತನು ಅತ್ಯಂತ ನಿರಾಶೆಯುಳ್ಳವನಾಗಿದ್ದಿರಬಹುದು: ಆತನು ಈಜಿಪ್ಟಿನಲ್ಲಿ ಅನುಭವಿಸಿದ ಅರಮನೆಯ ಸುಖಭೋಗಗಳನ್ನು ನೆನೆಸುತ್ತಿದ್ದಿರಬಹುದು. ಆತನು ಮಿದ್ಯಾನಿನ ಮರುಭೂಮಿಯಲ್ಲಿ ತಿರುಗಾಡುತ್ತಾ ತನ್ನ ಮಾವನ ಮಂದೆಯನ್ನು ಮೇಯಿಸುವದರಲ್ಲಿ ಬೇಸರಪಟ್ಟಿರಬಹುದು. ತಾನು ಅನ್ಯದೇಶದಲ್ಲಿ ಒಬ್ಬ ಪರದೇಶಿಯಾಗಿದ್ದೇನೆ ಎಂದು ಆತನಿಗೆ ಅನ್ನಿಸಿರಬಹುದು (ಆತನ ತನ್ನ ಮಗನಿಗೆ 'ಇಲ್ಲಿರುವ ಒಬ್ಬ ಪರದೇಶಿ' ಎಂಬ ಹೆಸರನ್ನು ಸಹ ಇಟ್ಟನು). ಆತನು ಈಜಿಪ್ಟಿನಲ್ಲಿರುವ ಇಸ್ರಾಯೇಲರ ಪರಿಸ್ಥಿತಿಯನ್ನು ನೆನೆಸಿಕೊಂಡು ದೇವರು ನಿಜವಾಗಲೂ ತನ್ನ ಜನರ ಕುರಿತು ಚಿಂತಿಸುತ್ತಾನೋ ಎಂದು ಆಲೋಚಿಸಿರಬಹುದು.
3. ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಇಂದು ಈ ವಾಕ್ಯಭಾಗದಿಂದ ಮೂರು ಮುಖ್ಯವಾದ ಸಂಗತಿಗಳನ್ನು ಕಲಿಯಬಹುದು ಎಂದು ನಾನು ಆಲೋಚಿಸುತ್ತೇನೆ:
   1) ದೇವರು ಭವಿಷ್ಯದ ಸೇವೆಗಾಗಿ ನಮ್ಮನ್ನು ಸಿದ್ಧಪಡಿಸುತ್ತಿರುವಾಗ ತಾಳ್ಮೆಯಿಂದಿರಲು ಕಲಿತುಕೊಳ್ಳಬೇಕು. ಮೋಶೆಯು ನಾಲ್ವತ್ತು ವರ್ಷಗಳ ಕಾಲ ಅರಣ್ಯದಲ್ಲಿ ಇಸ್ರಾಯೇಲರನ್ನು (ದೇವರ 'ಮಂದೆಯನ್ನು') ನಡೆಸಲು ಸಾಧ್ಯವಾಗುವಂತೆ ದೇವರು ಮರುಭೂಮಿಯಲ್ಲಿ ಮಂದೆಯನ್ನು ಮೇಯಿಸುವ ನಾಲ್ವತ್ತು ವರ್ಷಗಳನ್ನು ಉಪಯೋಗಿಸಿದನು.
   2) ನಾವು ಕಷ್ಟ ಮತ್ತು ಶೋಧನೆಗಳನ್ನು ಹಾದು ಹೋಗುವಾಗ ದೇವರು ನಮ್ಮನ್ನು ಕನಿಕರಿಸುತ್ತಾನೆ ಮತ್ತು ನಮ್ಮ ಪ್ರಾರ್ಥನೆಗಳನ್ನು ಕೇಳುತ್ತಾನೆ ಎಂಬುದನ್ನು ಅರಿತುಕೊಳ್ಳಬೇಕು. ಆತನು ತನ್ನ ವಾಗ್ದಾನವನ್ನು ನೆನಪಿಸಿಕೊಳ್ಳುತ್ತಾನೆ ಮತ್ತು ನಮ್ಮ ವಿಮೋಚನೆಯನ್ನು ಯೋಜಿಸುತ್ತಾನೆ.

3) ದೇವರು ಪ್ರತಿಯೊಂದು ಪರಿಸ್ಥಿತಿಯ ಮೇಲೆಯೂ (ಅವುಗಳು ಎಷ್ಟೇ ದೆಸೆಗೆಟ್ಟದ್ದಾಗಿ ಮತ್ತು ಕಷ್ಟಕರವಾಗಿ ನಮಗೆ ತೋರಿದರೂ ಸಹ) ಹತೋಟಿ ಉಳ್ಳವನಾಗಿದ್ದಾನೆ ಎಂಬುದನ್ನು ನೆನಪಿಸಿಕೊಳ್ಳಬೇಕು.

**ವಿಮೋಚನಕಾಂಡ ಉತ್ತರಗಳು 3: ಮೋಶೆ ಮತ್ತು ಉರಿಯುವ ಪೊದೆ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಮೋಶೆಯು ಉರಿಯುವ ಪೊದೆಯನ್ನು ಕಂಡಾಗ ಆಶ್ಚರ್ಯಪಟ್ಟನು, ಯಾಕೆಂದರೆ ಉರಿಯುತ್ತಿದ್ದ ಪೊದೆಯು ಬೆಂಕಿಯಿಂದ ದಹಿಸಿ ಹೋಗಲಿಲ್ಲ.
2. ಮೋಶೆಯು ತನ್ನ ಕೆರಗಳನ್ನು ಬಿಚ್ಚಬೇಕೆಂದು ಹೇಳಲ್ಪಟ್ಟನು, ಯಾಕೆಂದರೆ ಆತನು ಪರಿಶುದ್ಧ ಭೂಮಿಯ ಮೇಲೆ ನಿಂತಿದ್ದನು. ಆ ಭೂಮಿಯು ಯಾಕೆ ಪರಿಶುದ್ಧವಾಗಿತ್ತೆಂದರೆ, ಖಂಡಿತವಾಗಲೂ ದೇವರು ತನ್ನ ಪರಿಶುದ್ಧತೆಯಲ್ಲಿ ಅಲ್ಲಿ ಉಪಸ್ಥಿತನಿದ್ದನು.
3. ಮೋಶೆಯು ತನ್ನ ಮುಖವನ್ನು ಮುಚ್ಚಿಕೊಂಡನು, ಯಾಕೆಂದರೆ ಆತನು ದೇವರನ್ನು ದೃಷ್ಟಿಸುವುದಕ್ಕೆ ಭಯಪಟ್ಟನು.
4. ದೇವರು ಇಸ್ರಾಯೇಲರ ಹಿಂಸೆಯ ನಿಮಿತ್ತ ಅವರನ್ನು ಕನಿಕರಿಸಿದನು. ಹಾಗಾಗಿ ಅವರನ್ನು ಈಜಿಪ್ಟಿನವರ ಕೈಗಳಿಂದ ಬಿಡಿಸಿ ಒಂದು ವಿಸ್ತಾರವಾದ ಒಳ್ಳೆಯ ದೇಶಕ್ಕೆ ಬರಮಾಡಬೇಕೆಂಬುದೇ ಆತನು ಮಾಡಿದ ಯೋಜನೆಯಾಗಿತ್ತು.
5. ಇಸ್ರಾಯೇಲರನ್ನು ಈಜಿಪ್ಟಿನಿಂದ ಹೊರಗೆ ಬರಮಾಡಲು ದೇವರು ಮೋಶೆಯನ್ನು ಕರೆದಾಗ ತನ್ನ ಕುರಿತು ಇದನ್ನು ಪ್ರಕಟಪಡಿಸಿದನು (ವಿಮೋ. 3):

   ಆತನು ಒಬ್ಬ ಪರಿಶುದ್ಧ ದೇವರೆಂದು (ವ. 5 ನ್ನು ಹೋಲಿಸಿರಿ)

   ಆತನು ಪೂರ್ವಜರುಗಳಾದ ಅಬ್ರಹಾಮ, ಇಸಾಕ ಮತ್ತು ಯಾಕೋಬರ ದೇವರೆಂದು (ವ. 6, 15)

   ಇಸ್ರಾಯೇಲರು ತನ್ನ ಜನರೆಂದು (ವ. 7)

   ಆತನು ಅವರ ಪ್ರಾರ್ಥನೆಗಳನ್ನು ಕೇಳಿ ಅವರ ವ್ಯಥೆಯನ್ನು ಕಂಡನೆಂದು ಮತ್ತು ಅವರ ಹಿಂಸೆಯನ್ನು ಕಂಡು ಕನಿಕರಪಡುತ್ತಾನೆಂದು (ವ. 7)

   ಆತನು ಅವರನ್ನು ಈಜಿಪ್ಟಿನವರ ಕೈಗಳಿಂದ ಬಿಡಿಸಿ ಒಂದು ವಿಸ್ತಾರವಾದ ಒಳ್ಳೆಯ ದೇಶಕ್ಕೆ ಬರಮಾಡಬೇಕೆಂದು ಯೋಜಿಸುತ್ತಾನೆ ಮತ್ತು ವಾಗ್ದಾನಮಾಡುತ್ತಾನೆಂದು (ವ. 8, 17)

   ತನ್ನ ಹೆಸರು 'ಇರುವಾತನೇ ಆಗಿದ್ದೇನೆ' ಮತ್ತು 'ಯೆಹೋವನು' ಎಂಬುದನ್ನು (ವ. 14–15)

   ಆತನು ಈಜಿಪ್ಟಿನಲ್ಲಿ ಅದ್ಭುತಕಾರ್ಯಗಳನ್ನು ಮಾಡುವನು ಆಗ ಅರಸನು ಇಸ್ರಾಯೇಲರನ್ನು ಹೋಗಗೊಡಿಸುವನು ಎಂದು (ವ. 19–20)

   ಆತನು ಒಬ್ಬ ಉದಾರ ಮನಸ್ಸುಳ್ಳವನೆಂದು: ಇಸ್ರಾಯೇಲರು ಈಜಿಪ್ಟನ್ನು ಬರಿಗೈಯಿಂದ ಬಿಟ್ಟು ಹೋಗುವುದಿಲ್ಲ ಎಂದು (ವ. 21–22)
6. ದೇವರು ಇಸ್ರಾಯೇಲರನ್ನು ಈಜಿಪ್ಟಿನಿಂದ ಹೊರಗೆ ಬರಮಾಡಲು ಮೋಶೆಯನ್ನು ಉಪಯೋಗಿಸಬೇಕೆಂದು ಯೋಜಿಸಿಕೊಂಡನು.
7. ಮೋಶೆಯು ಹಿಂದೇಟು ಹಾಕಿದಾಗ ದೇವರು ಆತನಿಗೆ ಒಂದು ವಾಗ್ದಾನವನ್ನು ಮಾಡಿದನು. ದೇವರು ಮೋಶೆಯ ಜೊತೆಗೆ ಇರುವೆನೆಂದು ವಾಗ್ದಾನ ಮಾಡಿದನು.
8. ದೇವರೇ ಮೋಶೆಯನ್ನು ಕಳುಹಿಸಿದ್ದಾನೆ ಎಂಬುದಕ್ಕೆ ದೇವರು ಆತನಿಗೆ ಕೊಟ್ಟ ಸೂಚನೆಯೇನೆಂದರೆ, ಇಸ್ರಾಯೇಲರು ಇದೇ ಬೆಟ್ಟದಲ್ಲಿ, ಅಂದರೆ ಹೋರೇಬಿನಲ್ಲಿ, ದೇವರನ್ನು ಆರಾಧಿಸುವರು ಎಂಬುದೇ (ವ. 2).
9. ಮೋಶೆಯ ಕುರಿತು ಇಸ್ರಾಯೇಲರ ಹಿರಿಯರಿಗೆ ದೇವರು ಕೊಟ್ಟ ಸಂದೇಶವೇನೆಂದರೆ, ದೇವರೇ ಆತನನ್ನು ಅವರ ಬಳಿಗೆ ಕಳುಹಿಸಿದನು ಹಾಗಾಗಿ ದೇವರು ಮೋಶೆಯನ್ನು ಅವರ ನಾಯಕನಾಗಲು ಕರೆದಿದ್ದನು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –
2. ಮೂರನೆಯ ಅಧ್ಯಾಯದ ಎರಡನೆಯ ಭಾಗವು ಮೋಶೆಯ ಮೂಲಕ ದೇವರು ಇಸ್ರಾಯೇಲರಿಗೆ ಕೊಟ್ಟ ಒಂದು ಪ್ರವಾದನಾ ಸಂದೇಶವನ್ನು ಹೊಂದಿದೆ. ಈ ಸಂದೇಶದ ಸಾರಾಂಶ ಹೀಗಿದೆ:

   ಸಂದೇಶದ ಮೊದಲ ಭಾಗವು ಎಲ್ಲಾ ಇಸ್ರಾಯೇಲರಿಗಾಗಿ ಇರುವುದಾಗಿದೆ: ಅವರ ಪೂರ್ವಜರುಗಳ ದೇವರಾದ ಯೆಹೋವನು ಮೋಶೆಯನ್ನು ಅವರ ಬಳಿಗೆ ಕಳುಹಿಸಿದನು (ವ. 15)

ಸಂದೇಶದ ಉಳಿದ ಭಾಗವು ಹಿರಿಯರಿಗಾಗಿ ಇರುವುದಾಗಿದೆ: ಮೊದಲು ದೇವರು ಅವರ ಹಿಂಸೆಯನ್ನು ಕಂಡಿದ್ದಾನೆ ಮತ್ತು ಅವರನ್ನು ಈಜಿಪ್ಟಿನಿಂದ ಹೊರಗೆ ಬರಮಾಡಿ ಒಳ್ಳೆಯ ದೇಶಕ್ಕೆ ನಡೆಸುವನೆಂದು ಆಶ್ವಾಸನೆಯನ್ನು ನೀಡುತ್ತಾನೆ.

ನಂತರ ಅವರು ಹೇಗೆ ಈಜಿಪ್ಟಿನಿಂದ ಹೊರಗೆ ಬರಮಾಡಲ್ಪಡುವರು ಎಂಬುದನ್ನು ದೇವರು ಅವರಿಗೆ ಹೇಳುತ್ತಾನೆ (ವ. 18–22). ಮೊದಲು ಮರುಭೂಮಿಯಲ್ಲಿ ಅವರು ಯೆಹೋವನನ್ನು ಆರಾಧಿಸಲು ಅನುಮತಿಸುವಂತೆ ಅರಸನ ಅಪ್ಪಣೆಯನ್ನು ಕೇಳಿಕೊಳ್ಳಬೇಕು. ಆದರೆ ಅರಸನು ಅವರನ್ನು ಹೋಗಲು ಅನುಮತಿಸುವುದಿಲ್ಲ. ದೇವರು ಈಜಿಪ್ಟಿನವರ ನಡುವೆ ಬಲವಾದ ಅದ್ಭುತಕಾರ್ಯಗಳನ್ನು ಮಾಡಿದ ನಂತರ ಮಾತ್ರ ಅರಸನು ಇಸ್ರಾಯೇಲಿಗೆ ಹೋಗಲು ಅನುಮತಿಸುವನು. ಅವರು ಕೊಳ್ಳೆಯೊಂದಿಗೆ ಆ ಸ್ಥಳವನ್ನು ಬಿಟ್ಟು ಬರುವರು.

3. –

**ವಿಮೋಚನಕಾಂಡ ಉತ್ತರಗಳು 4: ಮೋಶೆಯು ಹಿಂಜರಿಯುತ್ತಾ ಈಜಿಪ್ಟಿಗೆ ಹಿಂತಿರುಗಿದ್ದು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಮೋಶೆಯನ್ನು ಕಳುಹಿಸಿದ್ದು ದೇವರೇ ಎಂದು ಜನರು ನಂಬುವಂತೆ ದೇವರು ಮೋಶೆಗೆ ವಾಗ್ದಾನ ಮಾಡಿದ ಮೂರು ಸೂಚನೆಗಳು ಇವುಗಳಾಗಿವೆ:

   ಆತನ ಕೋಲು ಸರ್ಪವಾಗಿ ಮಾರ್ಪಡುವದು

   ಆತನ ಕೈ ಕುಷ್ಠದಿಂದ ಬೆಳ್ಳಗಾಗುವುದು

   ನೈಲ್ ನದಿಯ ನೀರು ಒಣ ನೆಲದ ಮೇಲೆ ಚೆಲ್ಲಿದಾಗ ರಕ್ತವಾಗಿ ಮಾರ್ಪಡುವದು

2. ದೇವರು ಮೋಶೆಗೆ ಮೂರು ಸೂಚನೆಗಳನ್ನು ಕೊಡುವೆನೆಂದು ವಾಗ್ದಾನ ಮಾಡಿದಾಗಲೂ ಸಹ ಆತನು ದೇವರ ಕರೆಗೆ ವಿಧೇಯನಾಗಕು ಮನಸ್ಸಿಲ್ಲದವನಾಗಿದ್ದನು. ಮೋಶೆಯು ತಾನು ವಾಕ್ಚಾತುರ್ಯವುಳ್ಳವನಲ್ಲ ಎಂಬುದನ್ನು ದೇವರಿಗೆ ತಿಳಿಸುತ್ತಾನೆ.

3. ದೇವರು ಮೋಶೆಯ ಹೊಸ ನೆಪವನ್ನು ಕೇಳಿದಾಗ ತಾನು ಯಾರಾಗಿದ್ದೇನೆ ಮತ್ತು ಏನನ್ನು ಮಾಡಲು ಶಕ್ತನಾಗಿದ್ದೇನೆ ಎಂಬುದರ ಕುರಿತು ಮೋಶೆಗೆ ಇರುವ ತಿಳುವಳಿಕೆಯನ್ನು ಪ್ರಶ್ನೆ ಮಾಡಿದನು. ಸೃಷ್ಟಿಕರ್ತನಾದ ದೇವರು ಮನುಷ್ಯನಿಗೆ ಬಾಯಿ, ಕಿವಿ ಮತ್ತು ಕಣ್ಣುಗಳನ್ನು ಕೊಟ್ಟಿದ್ದಾನೆ. ಹಾಗಾಗಿ ಆತನು ಮನುಷ್ಯನ ಇಂದ್ರಿಯಗಳ ಮೇಲೆ ಹತೋಟಿಯುಳ್ಳವನಾಗಿದ್ದಾನೆ. ಒಂದು ವೇಳೆ ದೇವರು ಮೋಶೆಗೆ ಪ್ರವಾದಿಸಲು ಹೇಳಿದರೆ ಏನು ಹೇಳಬೇಕೆಂಬುದನ್ನು ಆತನೇ ಬೋಧಿಸುವನು ಮತ್ತು ಸ್ಪಷ್ಟವಾದ ರೀತಿಯಲ್ಲಿ ಸರಿಯಾದದ್ದನ್ನು ಮಾತನಾಡಲು ಆತನೇ ಅವನಿಗೆ ಸಹಾಯ ಮಾಡುವನು.

4. ಮೋಶೆಯ ಅಣ್ಣನಾದ ಆರೋನನು ಆತನಿಗೆ ಸಹಾಯಕವಾಗಿರುವನು. ಆತನು ವಾಕ್ಚಾತುರ್ಯವುಳ್ಳವನಾಗಿದ್ದನು ಮತ್ತು ಮೋಶೆಯ ಪರವಾಗಿ ಆತನು ಮಾತನಾಡುವನು.

5. ಮೋಶೆಯು ಈಜಿಪ್ಟಿಗೆ ಹಿಂತಿರುಗಲು ಇತ್ರೋವಿನ ಅನುಮತಿಯನ್ನು ಕೇಳಿದಾಗ ಆತನು ಸಕಾರಾತ್ಮಕವಾಗಿ ಅದಕ್ಕೆ ಪ್ರತಿಕ್ರಿಯಿಸಿದನು. ಇತ್ರೋವನು ಕೇವಲ ಮೋಶೆಯ ಮಾವ ಮಾತ್ರ ಆಗಿರಲಿಲ್ಲ, ಮೋಶೆಯು ಆತನಿಗಾಗಿ ಕೆಲಸ ಮಾಡುತ್ತಿದ್ದನು. ಹಾಗಾಗಿ ಮೋಶೆಯು ತನ್ನ ಕುಟುಂಬದೊಂದಿಗೆ ಈಜಿಪ್ಟಿಗೆ ಹಿಂತಿರುಗುವ ಮೊದಲು ಇತ್ರೋವಿನ ಅನುಮತಿಯನ್ನು ಪಡೆಯಲು ಹೋರೇಬಿನಿಂದ ಮಿದ್ಯಾನಿಗೆ ಪ್ರಯಾಣ ಮಾಡಿದ್ದು ಯೋಗ್ಯವಾದ ಸಂಗತಿಯಾಗಿದೆ. ಅದಲ್ಲದೆ ಆತನು ಮಂದೆಯನ್ನು ಹಿಂತಿರುಗಿಸಬೇಕಿತ್ತು.

6. ಮೋಶೆಯು ಈಗ ಈಜಿಪ್ಟಿಗೆ ಹಿಂತಿರುಗುವುದು ಸುರಕ್ಷಿತವಾಗಿತ್ತು. ಮೋಶೆಯು ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಅಲ್ಲಿಂದ ಓಡಿ ಬಂದು ಈಗ ನಾಲ್ವತ್ತು ವರ್ಷಗಳು ಕಳೆದಿದ್ದವು. ಮೋಶೆಯನ್ನು ಕೊಲ್ಲಬೇಕೆಂದಿದ್ದ ಫರೋಹನು ಮತ್ತು ಆತನ ಎಲ್ಲಾ ಅಧಿಕಾರಿಗಳು ಈಗ ಸತ್ತು ಹೋಗಿದ್ದರು.

7. ಮೋಶೆ ಮತ್ತು ಆತನ ಕುಟುಂಬದವರು ಮಿದ್ಯಾನಿನಿಂದ ಈಜಿಪ್ಟಿಗೆ ಪ್ರಯಾಣಿಸಿದಾಗ ಎರಡು ಸಂಗತಿ ಸಂಭವಿಸಿತು:

   1) ಅವರು ಒಂದು ಸ್ಥಳದಲ್ಲಿ ಉಳಿದುಕೊಂಡಿರುವಾಗ ಚಿಪ್ಪೋರಳು ತಮ್ಮ ಮಗನಿಗೆ ಒಂದು ಅತ್ಯಂತ ನಾಟಕೀಯ ರೀತಿಯಲ್ಲಿ ಸುನ್ನತಿ ಮಾಡಿಸಿದಳು. ಆಕೆಯು ಮೋಶೆಯ ಪ್ರಾಣವನ್ನು ಉಳಿಸಲು ಹೀಗೆ ಮಾಡಿದಳು.

   2) ಮಿದ್ಯಾನಿಗೂ ಮತ್ತು ಈಜಿಪ್ಟಿಗೂ ನಡುವೆ ಇದ್ದ ಹೋರೇಬಿನಲ್ಲಿ ಮೋಶೆಯ ಅಣ್ಣನಾದ ಆರೋನನು ಆತನನ್ನು ಭೇಟಿಯಾಗಲು ಬಂದನು.

8. ಆರೋನನು ಮೋಶೆಯನ್ನು ಹೋರೇಬಿನಲ್ಲಿ ಸಂಧಿಸಲು ಕಾರಣವೇನೆಂದರೆ ಆತನು ದೇವರ ಮಾತಿಗೆ ವಿಧೇಯನಾಗಿದ್ದನು.

9. ಮೋಶೆ ಮತ್ತು ಆರೋನರು ಈಜಿಪ್ಟಿಗೆ ಹಿಂತಿರುಗಿದಾಗ ಇಸ್ರಾಯೇಲರು ಅವರನ್ನು ಸಂತೋಷದಿಂದ ಸ್ವೀಕರಿಸಿದರು:

   1) ಅವರು ದೇವರ ಕುರಿತು ಮೋಶೆ ಹೇಳಿದ ಸಾಕ್ಷಿಯನ್ನು ಕೇಳಿದರು.

   2) ಅವರು ಮೂರು ಸೂಚಕಕಾರ್ಯಗಳನ್ನು ಕಂಡಾಗ ನಂಬಿದರು.

   3) ದೇವರು ಅವರ ಪ್ರಾರ್ಥನೆಯನ್ನು ಕೇಳಿದ್ದಾನೆ ಎಂಬುದನ್ನು ಅವರು ತಿಳುಕೊಂಡಾಗ ದೇವರಿಗೆ ಅಡ್ಡಬಿದ್ದು ಆರಾಧಿಸಿದರು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಮೋಶೆಯು ಹೋಗಿ ಇಸ್ರಾಯೇಲರನ್ನು ಈಜಿಪ್ಟಿನಿಂದ ಬಿಡಿಸಬೇಕೆಂದು ಆತನಿಗೆ ಮನವೊಲಿಸಲು ದೇವರು ಶ್ರಮಪಡಬೇಕಾಯಿತು. ಮೋಶೆಯು ವಿಧೇಯನಾಗಲು ಬಹಳ ಅಸಂತುಷ್ಟನಾಗಿದ್ದನು ಮತ್ತು ಐದು ಬಾರಿ ಈ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು

ಪ್ರಯತ್ನಿಸಿದನು. ಇದು ಮೋಶೆಯ ವ್ಯಕ್ತಿತ್ವದ ಕುರಿತು ಅನೇಕ ವಿಷಯಗಳನ್ನು ಪ್ರಕಟಪಡಿಸುತ್ತದೆ. ಪ್ರತಿಯೊಂದು ಬಾರಿಯೂ ದೇವರು ಮೋಶೆಗೆ ಅತ್ಯಂತ ಸಮರ್ಪಕವಾಗಿ ಪ್ರತಿಕ್ರಿಯಿಸಿದನು.

1) ಮೋಶೆಯ ಮೊದಲ ಹಿಂಜಾರಿಕೆಯ ಹೇಳಿಕೆ: *ನಾನು ಎಷ್ಟರವನು?* (3:11) ಈ ಪ್ರಶ್ನೆಯು ಮೋಶೆಗೆ ಮನಸ್ಸಿಲ್ಲದಿರುವುದನ್ನೂ ಹಾಗೂ ಅಸುರಕ್ಷತೆಯ ಮನೋಭಾವನೆ ಇದ್ದದ್ದನ್ನೂ ವ್ಯಕ್ತಪಡಿಸುತ್ತದೆ. ದೇವರು ಆತನ ಸಂಗಡವಿರುವುದಾಗಿ ಮತ್ತು ಯಶಸ್ಸನ್ನು ಕೊಡುವುದಾಗಿ ಆತನಿಗೆ ವಾಗ್ದಾನ ಮಾಡುತ್ತಾನೆ (3:12).

2) ಮೋಶೆಯ ಎರಡನೆಯ ಹಿಂಜಾರಿಕೆಯ ಹೇಳಿಕೆ: *[ದೇವರ] ಹೆಸರು ಏನು?* (3:13) ದೇವರ ಗುಣದ ಕುರಿತು – ಅಂದರೆ, ದೇವರು ಶಾಶ್ವತವಾದವನೂ ಸದಾಕಾಲ ನಂಬಿಗಸ್ತನೂ ಮತ್ತು ಸದಾಕಾಲ ವಿಶ್ವಾಸಾರ್ಹನೂ ಆಗಿದ್ದಾನೆ ಎಂಬುದರ ಕುರಿತು – ಮೋಶೆಗೆ ಒಂದು ಸ್ಪಷ್ಟವಾದ ತಿಳುವಳಿಕೆ ಇರಲಿಲ್ಲ ಎಂಬುದನ್ನು ಈ ಪ್ರಶ್ನೆಯು ವ್ಯಕ್ತಪಡಿಸುತ್ತದೆ. ದೇವರು ತನ್ನ 'ವೈಯಕ್ತಿಕ' ಹೆಸರನ್ನು, ಆತನ ಒಡಂಬಡಿಕೆಯ ಹೆಸರನ್ನು, ಅಂದರೆ ನಾನೇ ಇರುವಾತನು ಎಂಬ ಹೆಸರನ್ನು ಪ್ರಕಟಪಡಿಸುತ್ತಾನೆ. ಆತನೇ ಯೆಹೋವನು.

3) ಮೋಶೆಯ ಮೂರನೆಯ ಹಿಂಜಾರಿಕೆಯ ಹೇಳಿಕೆ: *ಅವರು ನನ್ನನ್ನು ನಂಬದೆ ನನ್ನ ಮಾತಿಗೆ ಕಿವಿಗೊಡದೆ* ಹೋದರೆ? (4:1) ಈ ಪ್ರಶ್ನೆಯು ಮೋಶೆಗೆ ಆತ್ಮವಿಶ್ವಾಸವಿಲ್ಲದ್ದನ್ನು ವ್ಯಕ್ತಪಡಿಸುತ್ತದೆ. ಅದಲ್ಲದೆ ತನ್ನ ಸಂಗಡವಿರುವುದಾಗಿ ಮತ್ತು ಯಶಸ್ಸನ್ನು ಕೊಡುವುದಾಗಿ ಆತನಿಗೆ ವಾಗ್ದಾನ ಮಾಡಿದ ಯೆಹೋವನ ಮೇಲೆಯೂ ಆತನಿಗೆ ಹೆಚ್ಚು ವಿಶ್ವಾಸವಿರಲಿಲ್ಲ. ದೇವರು ಮೋಶೆಗೆ ಇಸ್ರಾಯೇಲರನ್ನು ಖಂಡಿತವಾಗಿ ಮನವೊಲಿಸುವ ಮೂರು ಸೂಚಕಕಾರ್ಯಗಳನ್ನು ಕೊಟ್ಟನು. ಈ ಮೂರು ಸೂಚಕಕಾರ್ಯಗಳು ನಿಜವಾಗಲೂ ಕಾರ್ಯಸಾಧಕವಾಗಿವೆ ಎಂಬುದನ್ನು ಮೋಶೆಯು ಅನುಭವಿಸುವಂತೆಯೂ ಸಹ ಆತನು ಮಾಡಿದನು.

4) ಮೋಶೆಯ ನಾಲ್ಕನೆಯ ಹಿಂಜಾರಿಕೆಯ ಹೇಳಿಕೆ: *ನನ್ನ ಮಾತೂ ನಾಲಿಗೆಯೂ ಮಂದವಾಗಿವೆ* (4:10). ಇಲ್ಲಿ ಮೋಶೆಯು ಧೈರ್ಯವಿಲ್ಲದ್ದನ್ನೂ ಮತ್ತು ದೇವರ ಮೇಲೆ ಭರವಸೆಯಿಟ್ಟು ಆತನಿಗೆ ವಿಧೇಯನಾಗಲು ಮನಸ್ಸಿಲ್ಲದ್ದನ್ನೂ ಬಹಿರಂಗಪಡಿಸುತ್ತಿದ್ದಾನೆ. ಮಾತು ದೇವರು ಕೊಡುವ ಒಂದು ವರವಾಗಿದೆ ಎಂದು ದೇವರು ಮೋಶೆಗೆ ಜ್ಞಾಪಿಸುತ್ತಾನೆ. ನಂತರ ಆತನು ಮೋಶೆಯ ಸತತವಾದ ಹಿಂಜಾರಿಕೆಯ ನಿಮಿತ್ತ ಕೋಪಗೊಂಡು ಮೋಶೆಯ ಪರವಾಗಿ ಮಾತನಾಡಲು ಆರೋನನನ್ನು ಆತನಿಗೆ ಕೊಡುತ್ತಾನೆ.

5) ಮೋಶೆಯ ಐದನೆಯ ಹಿಂಜಾರಿಕೆಯ ಹೇಳಿಕೆ: *... ಬೇರೊಬ್ಬನನ್ನು ಕಳುಹಿಸು ಎಂದು ಬೇಡುತ್ತೇನೆ* (4:13). ಇಲ್ಲಿ ಮೋಶೆಯು ತನಗೆ ಮನಸ್ಸಿಲ್ಲದ್ದನ್ನು ನಿಜವಾಗಲೂ ವ್ಯಕ್ತಪಡಿಸುತ್ತಿದ್ದಾನೆ. ದೇವರು ಮೊದಲು ಕೋಪಿಸಿಕೊಳ್ಳುತ್ತಾನೆ. ನಂತರ ಆತನು ಮೋಶೆಗೆ ಒಂದು '???ನ್ನು' ಒದಗಿಸುತ್ತಾನೆ: ಆತನ ಅಣ್ಣನಾದ ಆರೋನನು ಆತನ ಪರವಾಗಿ ಮಾತನಾಡುವನು.

2. –

3. ಮೋಶೆ, ಚಿಪ್ಪೋರ ಮತ್ತು ಅವರ ಮಗನ ಸುನ್ನತಿಯ ವಿಚಿತ್ರ ಕಥೆಯು ಅನೇಕ ಓದುಗರನ್ನು ಗೊಂದಲಪಡಿಸುತ್ತದೆ. ದೇವರು ಮೋಶೆಯನ್ನು ಸೇವೆಗೆ ಕರೆದದ್ದರ ಬೆಳಕಿನಲ್ಲಿ ನಾನು ಇದನ್ನು ಹೀಗೆ ಅರ್ಥವಿವರಿಸುತ್ತೇನೆ:

1) ಅದು ಸುನ್ನತಿಯ ಕುರಿತಾದ ಒಂದು ಕಥೆಯಾಗಿದೆ. ಮೋಶೆಯು ಮಗುವಾಗಿದ್ದಾಗಲೇ ಸುನ್ನತಿಯನ್ನು ಹೊಂದಿರಬಹುದು, ಯಾಕೆಂದರೆ ಆತನು ಒಂದು ಭಕ್ತಿವಂತ ಇಸ್ರಾಯೇಲ್ ಕುಟುಂಬದಲ್ಲಿ ಜನಿಸಿದ್ದನು ಮತ್ತು ಆತನ ಪ್ರಾರಂಭದ ವರ್ಷಗಳನ್ನು ಅವರೊಂದಿಗೆ ಕಳೆದಿದ್ದನು. ಆದರೆ ಯಾವುದೋ ಒಂದು ಕಾರಣಕ್ಕಾಗಿ ಆತನು ತನ್ನ ಮಗನಿಗೆ ಸುನ್ನತಿ ಮಾಡಿಸುವುದನ್ನು ಅಲಕ್ಷ್ಯ ಮಾಡಿದ್ದನು.

2) ಇದು ವಿಧೇಯತೆಯ ಕುರಿತಾದ ಒಂದು ಕಥೆಯಾಗಿದೆ: ಮೋಶೆಯು ತನ್ನ ಮಗನಿಗೆ ಸುನ್ನತಿ ಮಾಡಿಸದೆ ಇದ್ದುದ್ದರಿಂದ ಆತನು ದೇವರು ಅಬ್ರಹಾಮ ಮತ್ತು ಆತನ ಸಂತತಿಯೊಂದಿಗೆ ಮಾಡಿಕೊಂಡಿದ್ದ (ಆದಿ. 17:9–14) ಒಡಂಬಡಿಕೆಗೆ ವಿಧೇಯನಾಗಿರಲಿಲ್ಲ. ಹಾಗಾಗಿ ದೇವರಿ ಈಗ ಆತನ ಅವಿಧೇಯತೆಗಾಗಿ ಆತನನ್ನು ಶಿಕ್ಷಿಸಲು ಮುಂದಾಗಿದ್ದನು.

3) ಇದು ಸೇವೆಗೆ ಸಿದ್ಧರಾಗಿರುವುದರ ಕುರಿತಾದ ಒಂದು ಕಥೆಯಾಗಿದೆ: ಬಹಳ ಹಿಂಜರಿದ ನಂತರ ಮೋಶೆಯು ಅಂತಿಮವಾಗಿ ದೇವರ ಕರೆಯನ್ನು ಒಪ್ಪಿಕೊಂಡಿದ್ದನು. ಆತನು ನಾಲ್ವತ್ತು ವರ್ಷಗಳ ಪರದೇಶವಾಸದ ನಂತರ ಈಗ ಇಸ್ರಾಯೇಲರನ್ನು ಬಂಧನದಿಂದ ಬಿಡಿಸಿ ವಾಗ್ದಾನ ದೇಶಕ್ಕೆ ಅವರನ್ನು ನಡೆಸಲು ಈಜಿಪ್ಟಿಗೆ ಹಿಂತಿರುಗುತ್ತಿದ್ದನು. ಆದರೆ ಮೋಶೆಯು ಸೇವೆಗೆ ಸಿದ್ಧನಾಗಿರಲಿಲ್ಲ. ಆತನು ಒಡಂಬಡಿಕೆಗೆ ಅಪನಂಬಿಗಸ್ತನಾಗಿದ್ದನು. ಹಾಗಾಗಿ ದೇವರು ಆತನನ್ನು ಉಪಯೋಗಿಸಲು ಆಗಲಿಲ್ಲ. ಆತನು ದೇವರಿಂದ ಉಪಯೋಗಿಸಲ್ಪಡಲು ಒಂದು 'ಶುದ್ಧವಾದ ಪಾತ್ರೆ'ಯಾಗಿರಲಿಲ್ಲ. ಆತನು ಶುದ್ಧೀಕರಿಸಲ್ಪಡಬೇಕಿತ್ತು.

4) ಇದು ದೇವರು ಅದನ್ನು ಸರಿಪಡಿಸಲು ಒಂದು ಅನ್ಯದೇಶದ ಸ್ತ್ರೀಯನ್ನು (ಚಿಪ್ಪೋರಳು ಮಿದ್ಯಾನಿನವಳಾಗಿದ್ದಳು) ಬಳಸಿದ್ದರ ಕುರಿತಾದ ಒಂದು ಕಥೆಯಾಗಿದೆ: ಚಿಪ್ಪೋರಳು ಉಂಟಾದ ತಪ್ಪನ್ನು ಗ್ರಹಿಸಿದಳು. ಆಕೆಯು ತಾನು ಒಬ್ಬ ಸ್ತ್ರೀಯಾಗಿದ್ದರೂ ಸಹ ಮತ್ತು ತಮ್ಮ ಮಗನನ್ನು ಇಂತಹ ರಕ್ತಮಯ ಕ್ರಿಯೆಗೆ ಒಳಪಡಿಸುವುದು ಬಹುಶಃ ಆಕೆಗೆ ಒಂದು ಹೇಸಿಗೆಯ

ವಿಷಯವಾಗಿದ್ದರೂ ಸಹ ಅದನ್ನು ಸರಿಪಡಿಸಲು ಆಕೆಯು ಮನಸ್ಸುಳ್ಳವಳಾಗಿದ್ದಳು. ತಕ್ಕ ಸಮಯದಲ್ಲಿ ಆಕೆಯು ತೋರಿದ ಬುದ್ಧಿವಂತಿಕೆಯು ಕೇವಲ ಮೋಶೆಯ ಪ್ರಾಣವನ್ನು ಉಳಿಸಿದ್ದು ಮಾತ್ರವಲ್ಲದೆ ಇಸ್ರಾಯೇಲರ ನಾಯಕನಾಗಿ ಮೋಶೆಯ ಸೇವೆಯು ಮುಂದುವರೆಯುವಂತೆ ಅದು ಸಹಾಯ ಮಾಡಿತು.

5) ಆದರೆ ಈ ಕಥೆಯ ಕುರಿತು ಕೆಲವು ವಿಷಯಗಳು ನಮಗೆ ಅರ್ಥವಾಗುವುದಿಲ್ಲ:

- ದೇವರು ಮೋಶೆಯನ್ನು ಹೇಗೆ ಸಂಧಿಸಿದನು ಮತ್ತು ಆತನನ್ನು ಹೇಗೆ ಕೊಲ್ಲಲು ಮುಂದಾಗಿದ್ದನು? ಬಹುಶಃ ಮೋಶೆಗೆ ??? ಆಗಿರಬಹುದು ಅಥವಾ ಪ್ರಜ್ಞೆಯನ್ನು ಕಳೆದುಕೊಂಡಿದ್ದರಬಹುದು ಮತ್ತು ಬಹುಶಃ ಆತನು ಸಾಯಲಿದ್ದಾನೆ ಎಂದು ಚಿಪ್ಪೋರಳು ಅಂದುಕೊಂಡಿರಬಹುದು. ಹಾಗಾಗಿ ಈ ಕಥೆಯು ಮೋಶೆಗೆ ಏನಾಯಿತು ಎಂಬುದರ ಕುರಿತು ಆಕೆ ತಿಳುಕೊಂಡದ್ದನ್ನು ಪ್ರತಿಬಿಂಬಿಸುತ್ತದೆ: ಯೆಹೋವನು ಆತನನ್ನು ಕೊಲ್ಲುವುದಕ್ಕಿದ್ದನು.

- ಚಿಪ್ಪೋರಳು ಯಾಕೆ ಸುನ್ನತಿ ಮಾಡಬೇಕಾಯಿತು? ಮೋಶೆಯು ಅದನ್ನು ಮಾಡಬಹುದಿತ್ತಲ್ಲಾ? ಬಹುಶಃ ಮೋಶೆಗೆ ಪ್ರಜ್ಞೆಯಿಲ್ಲದ್ದರಿಂದ ಅಥವಾ ಅನಾರೋಗ್ಯದಿಂದ ಬಳಲುತ್ತಿದ್ದರಿಂದ ಅದನ್ನು ಮಾಡಲಾಗದೆ ಇದ್ದಿರಬಹುದು.

- ಚಿಪ್ಪೋರಳು ಯಾಕೆ ಸುನ್ನತಿಮಾಡಿ ಅದನ್ನು ಮೋಶೆಯ ಪಾದಗಳಿಗೆ ಮುಟ್ಟಿಸಿದಳು? ಬಹುಶಃ ಅದು ಮೋಶೆಯು ಈಗ ಸುನ್ನತಿ ಮಾಡಿಸಿ ತನ್ನ ಕರ್ತವ್ಯವನ್ನು ನೆರವೇರಿಸಿದ್ದಾನೆ ಎಂಬುದರ ಸಂಕೇತವಾಗಿರಬಹುದು. *ಆಗ ಯೆಹೋವನು ಅವನನ್ನು ಉಳಿಸಿದನು* ಎಂಬ ಪದಗಳು ದೇವರು ಆಕೆಯ ಕೃತ್ಯವನ್ನು ಅಂಗೀಕರಿಸಿದನು ಎಂಬುದನ್ನು ತೋರಿಸುತ್ತದೆ.

- *ಸುನ್ನತಿಯ ನಿಮಿತ್ತ ನೀನು ನನಗೆ ರಕ್ತಧಾರೆಯಿಂದ ಗಂಡನಾಗಿದ್ದೀಯೇ* ಎಂಬ ಮಾತುಗಳನ್ನು ಚಿಪ್ಪೋರಳು ಯಾಕೆ ಬಳಸಿದಳು? ಬಹುಶಃ ಇದು ಸುನ್ನತಿಮಾಡಿಸುವ ರಕ್ತಮಯ ಕ್ರಿಯೆಯಿಂದ ತನ್ನ ಗಂಡನ ಪ್ರಾಣ ಉಳಿಯಿತಲ್ಲಾ ಎಂಬುದನ್ನು ವ್ಯಕ್ತಪಡಿಸುವ ಒಂದು ರೀತಿಯಾಗಿರಬಹುದು. ಈಗ ಆತನು ಆಕೆಗೆ 'ರಕ್ತಧಾರೆಯಿಂದ ಗಂಡನಾಗಿದ್ದನು'.

**ವಿಮೋಚನಕಾಂಡ ಉತ್ತರಗಳು 6: ದೇವರು ಮೋಶೆಗೆ ತನ್ನ ಒಡಂಬಡಿಕೆಯನ್ನು ಜ್ಞಾಪಿಸಿದ್ದು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ವಿಮೋ. 5:22–23 ರಲ್ಲಿ ದೇವರ ವಿರುದ್ಧ ಮೋಶೆ ಮಾಡಿದ ಆಪಾದನೆಗಳನ್ನು ನಾನು ಹೀಗೆ ಅರ್ಥಮಾಡಿಕೊಳ್ಳುತ್ತೇನೆ:
    1) ಆತನು ಇಸ್ರಾಯೇಲರು ಅನುಭವಿಸುತ್ತಿರುವ ಕಷ್ಟಗಳಿಗಾಗಿ ದೇವರ ಮೇಲೆ ತಪ್ಪು ಹೊರಿಸುತ್ತಾನೆ.
    2) ಆತನು ತನ್ನ ಸ್ವಂತ ಜೀವಿತದ ಕುರಿತು ದೇವರ ಕರೆಯನ್ನು ಪ್ರಶ್ನಿಸುತ್ತಾನೆ: ದೇವರು ನಿಜವಾಗಲೂ ಇಸ್ರಾಯೇಲರಿಗೆ ಹೆಚ್ಚಿನ ಕಷ್ಟ ಹಿಂಸೆಯನ್ನು ಕೊಡಲು ತನ್ನನ್ನು ಕರೆದನೋ?
    3) ಆತನು ದೇವರಿಗೆ ತನ್ನ 'ಸೇವೆಯು' (ಅಂದರೆ, ಯೆಹೋವನ ಹೆಸರಿನಲ್ಲಿ ಫರೋಹನ ಮುಂದೆ ಮಾತನಾಡುವುದು) ಹೇಗೆ ಫರೋಹನು ಇಸ್ರಾಯೇಲರನ್ನು ಇನ್ನೂ ಕ್ರೂರವಾಗಿ ಕಾಣುವಂತೆ ಮಾಡಿದೆ ಎಂಬುದನ್ನು ವಿವರಿಸುತ್ತಾನೆ.
    4) ಆತನು ದೇವರು ಇಸ್ರಾಯೇಲರನ್ನು ಬಿಡಸಲಿಲ್ಲ ಎಂದು ಆಪಾದಿಸುತ್ತಾನೆ.
2. ವಿಮೋ. 6:2–4 ರಲ್ಲಿ ದೇವರ ಕುರಿತು ಹಾಗೂ ಇಸ್ರಾಯೇಲರೊಂದಿಗೆ ಆತನು ಹೊಂದಿದ್ದ ಸಂಬಂಧದ ಕುರಿತು ನಾವು ಸಂಗತಿಗಳನ್ನು ಕಲಿಯುತ್ತೇವೆ:
    1) ಆತನು ಇಸ್ರಾಯೇಲರಾದ 'ಸಂಸ್ಥಾಪಕ ಪಿತೃಗಳಿಗೆ' (ಮೂಲ ಪಿತೃಗಳಿಗೆ) ಕಾಣಿಸಿಕೊಂಡ ದೇವರಾಗಿದ್ದಾನೆ: ಅಬ್ರಹಾಮ, ಇಸಾಕ ಮತ್ತು ಯಾಕೋಬರಿಗೆ ಕಾಣಿಸಿಕೊಂಡವನು.
    2) ಆದರೆ ಆತನ ಕುರಿತು ಅವರಿಗಿದ್ದ ಜ್ಞಾನವು ಅಪರಿಪೂರ್ಣವಾಗಿತ್ತು. ಅವರು ಆತನನ್ನು ಕೇವಲ ಪರಾಕ್ರಮ ದೇವರೆಂದು ತಿಳಿದಿದ್ದರು. ಆತನು 'ಯೆಹೋವನು' ಎಂಬ ತನ್ನ ವೈಯಕ್ತಿಕ ಹೆಸರನ್ನು ಅವರಿಗೆ ಪ್ರಕಟಿಸಿರಲಿಲ್ಲ. ಅವರು ಆತನನ್ನು ತಮ್ಮ ವಿಮೋಚಕನಾಗಿ ತಿಳಿದಿರಲಿಲ್ಲ.
    3) ಆತನು ಮೂಲಪಿತೃಗಳೊಂದಿಗೆ ಒಂದು ಒಡಂಬಡಿಕೆಯನ್ನು ಸ್ಥಾಪಿಸಿದನು. ಈ ಒಡಂಬಡಿಕೆಯು ದೇವರು ಅವರ ಸ್ವಂತಕ್ಕಾಗಿ ಕೊಡುವ ದೇಶದ ವಾಗ್ದಾನವನ್ನು ಒಳಗೊಂಡಿತ್ತು. ಆ ದೇಶವು ಕಾನಾನ್ ಆಗಿದ್ದು ಅಲ್ಲಿ ಮೂಲಪಿತೃಗಳು ಪರದೇಶಿಗಳಾಗಿ ವಾಸಿಸಿದ್ದರು.
    4) ಆತನು ಇತಿಹಾಸದ ದೇವರು ಮಾತ್ರವಲ್ಲ. ಆತನು ವರ್ತಮಾನದ ದೇವರೂ ಸಹ ಆಗಿದ್ದಾನೆ. ಆತನು ಇಸ್ರಾಯೇಲರ ಪ್ರಸಕ್ತ ಹಿಂಸೆ ಕಷ್ಟಗಳನ್ನು ಅರಿತಿದ್ದಾನೆ. ಆತನು ಮೂಲಪಿತೃಗಳೊಂದಿಗೆ ತಾನು ಮಾಡಿಕೊಂಡಿರುವ ಒಡಂಬಡಿಕೆಯನ್ನು 'ಜ್ಞಾಪಿಸಿಕೊಳ್ಳುವಾಗ' ಆತನು ಈಜಿಪ್ಟಿನಲ್ಲಿರುವ ತನ್ನ ಜನರ ಕಷ್ಟವನ್ನು ಕಂಡು ಕನಿಕರಿಸುತ್ತಾನೆ. ಆತನು ಅವರಿಗಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾನೆ. ಈ ಯೋಜನೆಯು ಕೇವಲ ಗುಲಾಮತನದಿಂದ ಬಿಡುಗಡೆಯನ್ನು ಮಾತ್ರ ಒಳಗೊಳ್ಳದೆ ಇಸ್ರಾಯೇಲರಿಗಾಗಿ ದೇಶವನ್ನು ಕೊಡುವೆನೆಂಬ ಒಡಂಬಡಿಕೆಯ ವಾಗ್ದಾನದ ನೆರವೇರುವಿಕೆಯನ್ನೂ ಸಹ ಒಳಗೊಂಡಿದೆ.
    5) ದೇವರು ಇಸ್ರಾಯೇಲರನ್ನು 'ಜ್ಞಾಪಿಸಿಕೊಂಡು' ಅವರನ್ನು ಈಜಿಪ್ಟಿನಿಂದ ಬಿಡಿಸುವಾಗ ಅವರು ದೇವರನ್ನು ಒಂದು ಹೊಸ ರೀತಿಯಲ್ಲಿ 'ತಿಳಿದುಕೊಳ್ಳುವರು'. ಅವರು ಆತನನ್ನು ತಮ್ಮ ವಿಮೋಚಕನಾದ ಯೆಹೋವನ ಒಂದು ವೈಯಕ್ತಿಕ ಅನುಭವವನ್ನು ಹೊಂದಿಕೊಳ್ಳುವರು.
3. ದೇವರು ಇಸ್ರಾಯೇಲಿನ ಜನರಿಗೆ ಇದನ್ನು ವಾಗ್ದಾನ ಮಾಡಿದನು (6:6–8):
    1) ಆತನು ಈಜಿಪ್ಟಿಯನ್ನರ ಗುಲಾಮತನದ ನೊಗದಿಂದ ಅವರನ್ನು ಬಿಡಿಸುವನು.
    2) ದೇವರ ಈ ಪರಾಕ್ರಮ ಕಾರ್ಯವು ಇಸ್ರಾಯೇಲರಿಗೆ ವಿಮೋಚನೆಯನ್ನು ತರುವುದು ಆದರೆ ಈಜಿಪ್ಟಿಯನ್ನರಿಗೆ ನ್ಯಾಯತೀರ್ಪನ್ನು ತರುವುದು.
    3) ಆತನು ಇಸ್ರಾಯೇಲರನ್ನು ತನ್ನ ಸ್ವಂತ ಜನರನ್ನಾಗಿ ಮಾಡುವನು. ಮತ್ತು ಅವರು ಆತನನ್ನು ಯೆಹೋವನೆಂದು ಒಪ್ಪಿಕೊಳ್ಳುವರು.
    4) ಆತನು ಅವರನ್ನು ವಾಗ್ದಾನ ದೇಶಕ್ಕೆ ಕರೆತರುವನು.
    5) ಆತನು ಅವರಿಗೆ ಆ ದೇಶವನ್ನು ಸ್ವಂತ ಸ್ವತ್ತಾಗಿ ಕೊಡುವನು.
4. ದೇವರು ಮೋಶೆಗೆ ಹೇಳಿದ್ದನ್ನು ಆತನು ಜನರಿಗೆ ತಿಳಿಸಿದಾಗ ಅವರು ಅದಕ್ಕೆ ಕಿವಿಗೊಡಲಿಲ್ಲ, ಯಾಕೆಂದರೆ ಅವರ ಹಿಂಸೆ ಕಷ್ಟಗಳು ಅವರನ್ನು ಅಷ್ಟು ನಿರುತ್ಸಾಹಪಡಿಸಿದ್ದವು.

5. ಇಸ್ರಾಯೇಲರನ್ನು ಹೋಗಗೊಡಿಸಬೇಕೆಂಬ ಸಂದೇಶದೊಂದಿಗೆ ಫರೋಹನ ಬಳಿಗೆ ಹೋಗಬೇಕೆಂದು ದೇವರು ಮೋಶೆಗೆ ಹೇಳಿದಾಗ ಆತನು ಈ ನೆಪವನ್ನು ಕೊಟ್ಟನು: ಇಸ್ರಾಯೇಲರೇ ತನ್ನ ಮಾತನ್ನು ಕೇಳದಿದ್ದಾಗ ಫರೋಹನು ಮಾತನ್ನು ಕೇಳುವನು ಎಂದು ದೇವರು ಹೇಗೆ ನಿರೀಕ್ಷಿಸಲು ಸಾಧ್ಯ?

**ಊ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. 'ನಾನೇ ಯೆಹೋವನು' ಎಂಬ ಹೇಳಿಕೆಯನ್ನು ವಿಮೋ. 6:2–8 ರಲ್ಲಿ ದೇವರು ನಾಲ್ಕು ಬಾರಿ ಬಳಸುತ್ತಾನೆ. ಅದು ಹೀಗೆ ಬಳಸಲಾಗಿದೆ:

   1) ಮೊದಲ ಬಾರಿಗೆ (ವ. 2): ಅದು ದೇವರ ಸಂದೇಶವನ್ನು ಮೋಶೆಗೆ ಪರಿಚಯಿಸುತ್ತದೆ ಮತ್ತು ಯೆಹೋವನು ಪರಾಕ್ರಮನು, ಆತನು ಮೂಲಪಿತೃಗಳಿಗೆ ಕಾಣಿಸಿಕೊಂಡು ಅವರೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡನು ಎಂಬುದನ್ನು ಅದು ಗುರುತಿಸುತ್ತದೆ.

   2) ಎರಡನೆಯ ಬಾರಿ (ವ. 6): ಅದು ಇಸ್ರಾಯೇಲರನ್ನು ಈಜಿಪ್ಟಿನಲ್ಲಿರುವ ಬಂಧನದಿಂದ ವಿಮೋಚಿಸುವ ದೇವರ ಸಂದೇಶವನ್ನು ಧೃಢೀಕರಿಸುತ್ತದೆ.

   3) ಮೂರನೆಯ ಬಾರಿ (ವ. 7): ದೇವರು ಇಸ್ರಾಯೇಲರನ್ನು ಈಜಿಪ್ಟಿನಿಂದ ವಿಮೋಚಿಸಿದ ನಂತರ ಆತನು ಅವರನ್ನು ತನ್ನ ಸ್ವಂತ ಜನರನ್ನಾಗಿ ಮಾಡುವನು ಎಂಬುದನ್ನು ದೃಢೀಕರಿಸುತ್ತದೆ.

   4) ನಾಲ್ಕನೆಯ ಬಾರಿ (ವ. 8): ದೇವರು ಅವರನ್ನು ವಾಗ್ದಾನ ದೇಶಕ್ಕೆ ನಡೆಸುವನು ಮತ್ತು ಅದನ್ನು ಅವರಿಗೆ ಸ್ವಂತ ಸ್ವತ್ತಾಗಿ ಕೊಡುವನು ಎಂಬುದನ್ನು ದೃಢೀಕರಿಸುತ್ತದೆ.

2. ದೇವರು ಅಬ್ರಹಾಮ ಮತ್ತು ಆತನ ಸಂತತಿಯೊಂದಿಗೆ ಮಾಡಿಕೊಂಡ ತನ್ನ ಒಡಂಬಡಿಕೆಯನ್ನು 'ನೆನಪಿಗೆ ತಂದುಕೊಂಡನು' ಎಂದು ಮೋಶೆಗೆ ಹೇಳುತ್ತಾನೆ. ನಿರ್ಗಮನ ಕಥೆಯ ಹಿನ್ನಲೆಯಲ್ಲಿ ಇದರ ಅರ್ಥವೇನಾಗಿತ್ತೆಂದರೆ, ದೇವರು ಇಸ್ರಾಯೇಲರ ಪ್ರಸಕ್ತ ಸನ್ನಿವೇಶದ ಕುರಿತು ಚಿಂತಿಸುವವನಾಗಿದ್ದಾನೆ. ಆತನು ಇಸ್ರಾಯೇಲರನ್ನು ಈಜಿಪ್ಟಿನ ಬಂಧನದಿಂದ ಬಿಡಿಸುವುದರ ಮತ್ತು ವಾಗ್ದಾನ ದೇಶಕ್ಕೆ ಅವರನ್ನು ತರುವುದರ ಮೂಲಕ ಅಬ್ರಹಾಮನೊಂದಿಗೆ ತಾನು ಮಾಡಿದ ಒಡಂಬಡಿಕೆಗೆ ಬದ್ಧನೆಂದು ಸಾಬೀತುಪಡಿಸುವನು. ಮೂಲಪಿತೃಗಳು ಪರದೇಶಿಗಳಾಗಿ ಜೀವಿಸಿದ ಕಾನಾನ್ ದೇಶವು ಇಸ್ರಾಯೇಲರ ಸ್ವತ್ತಾಗುವುದು.

3. –

## ವಿಮೋಚನಕಾಂಡ ಉತ್ತರಗಳು 7: ಆರೋನ, ಮೋಶೆ ಮತ್ತು ಮೊದಲ ಬಾಧೆ

### ಈ. ಪ್ರಶ್ನೆಗಳಿಗೆ ಉತ್ತರಗಳು

1. ಮೋಶೆಯು ದೇವರ ಸಂದೇಶವನ್ನು ಫರೋಹನಿಗೆ ತಿಳಿಸಲು ಈಗಲೂ ಹಿಂಜರಿಯುತ್ತಿದ್ದನು. ಈ ಬಾರಿ ಆತನ ನೆಪವು ಏನಾಗಿತ್ತೆಂದರೆ, ತನಗೆ ಸ್ಪಷ್ಟವಾಗಿ ಮಾತನಾಡಲು ಬರುವುದಿಲ್ಲ ಎಂಬುದಾಗಿ. ಬಹುಶಃ 'ತೊದಲು ಮಾತನಾಡುವವನು' ಎಂಬ ಹೇಳಿಕೆಯು ಮೋಶೆಯು ತನ್ನನ್ನು ಒಬ್ಬ ವಾಕ್ಪಟುವೆಂದು ಪರಿಗಣಿಸಿರಲಿಲ್ಲ ಎಂಬುದನ್ನು ಅರ್ಥೈಸಬಹುದು. ಹೇಗಿದ್ದರೂ ದೇವರು ಆತನನ್ನು ಎರಡು ರೀತಿಯಲ್ಲಿ ಉತ್ತೇಜಿಸಿದನು: ಮೊದಲನೆಯದಾಗಿ, ಮೋಶೆಯು ಫರೋಹನ ಮುಂದೆ ಬರುವಾಗ ಆತನಿಗೆ ದೈವಿಕ ಅಧಿಕಾರವನ್ನು ದೇವರು ಕೊಡುವವನೆಂದನು. ಎರಡನೆಯದಾಗಿ, ದೇವರು ಆರೋನನನ್ನು ಮೋಶೆಯ 'ಬಾಯಿಯನ್ನಾಗಿ' ಮಾಡಿದನು. ಆರೋನನು ಮೋಶೆಯ ಪರವಾಗಿ ಮಾತನಾಡುವನು.

2. ಈ ವಾಕ್ಯಭಾಗದ ಪ್ರಾರಂಭದಲ್ಲಿ ದೇವರು ಇಸ್ರಾಯೇಲರನ್ನು 'ನನ್ನ ಜನರಾದ ಇಸ್ರಾಯೇಲ್ಯರು' ಎಂದು ವರ್ಣಿಸುತ್ತಾನೆ. ಇಸ್ರಾಯೇಲರು ಈಜಿಪ್ಟನ್ನು ಬಿಡುವಾಗ ಅದು ದೇಶದಿಂದ ಹೊರಗೆ ಬರುವ ಒಂದು ಮಹಾ ಸೈನ್ಯದಂತೆ ಇರುವುದು ಎಂದು ದೇವರು ವಾಗ್ದಾನ ಮಾಡಿದನು.

3. ವಿಮೋ. 7:6–7 ರಲ್ಲಿ ಮೋಶೆ ಮತ್ತು ಆರೋನರ ಕುರಿತು ನಾವು ಎರಡು ಸಂಗತಿಗಳನ್ನು ಕಲಿತುಕೊಳ್ಳುತ್ತೇವೆ:

   ಅವರು ಯೆಹೋವನು ಆಜ್ಞಾಪಿಸಿದಂತೆಯೇ ಮಾಡಿದರು. ಈ ಹೇಳಿಕೆಯ ಮಹತ್ವವೇನೆಂದರೆ, ಅವರು ಈಗ ದೇವರ ಸೇವೆ ಮಾಡಲು ಪೂರ್ಣವಾಗಿ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ಮೋಶೆಯು ಈಗ ಒಬ್ಬ ಪರಿವರ್ತನೆಯಾದ ವ್ಯಕ್ತಿಯಾಗಿದ್ದನು. ಆತನ ಗೊಂದಲ ಮತ್ತು ಮನಸ್ಸಿಲ್ಲದಿರುವುದು ಈಗ ಶಮನವಾಗಿತ್ತು. ಈಗಿನಿಂದ ಆತನು ಇಸ್ರಾಯೇಲರ ಒಬ್ಬ ಶ್ರೇಷ್ಠ ನಾಯಕನಾಗಿರುವನು. ಮತ್ತು ದೇವರು ಆತನನ್ನು ಬಲವಾಗಿ ಉಪಯೋಗಿಸಲು ಸಾಧ್ಯವಾಗಿತ್ತು.

   ಈಗ ಅವರಿಬ್ಬರೂ ಪ್ರಾಯಸ್ಥರೂ ಮತ್ತು ಅನುಭವಸ್ಥರೂ ಆಗಿದ್ದರು. ಮೋಶೆಯ ಕುರಿತು ಹೇಳುವುದಾದರೆ, ಆತನ ಆಯುಷ್ಯದ ಮೂರರಲ್ಲಿ ಎರಡು ಭಾಗವು ಕಳೆದುಹೋಗಿತ್ತು. ಆತನು ಈಜಿಪ್ಟಿನಿಂದ ಓಡಿಹೋದಾಗ ನಾಲ್ವತ್ತು ವರ್ಷದವನಾಗಿದ್ದನು. ಆ ದಿನದಿಂದ ಆತನು ಮಿದ್ಯಾನಿನಲ್ಲಿ ಮತ್ತು ಮರುಭೂಮಿಯಲ್ಲಿ ನಾಲ್ವತ್ತು ವರ್ಷಗಳ ಸಿದ್ಧತೆಯನ್ನು ಅನುಭವಿಸಿದನು. ಆತನ ಉಳಿದ ನಾಲ್ವತ್ತು ವರ್ಷಗಳ ಕಾಲ ಆತನು ತನ್ನ ಜನರನ್ನು ನಡೆಸುತ್ತಾ ಅವರ ಸೇವೆ ಮಾಡುವನು.

4. ಫರೋಹನ ಮುಂದೆ ಮೋಶೆ ಮತ್ತು ಆರೋನರು ಮಾಡಿದ ಮೊದಲ ಸೂಚಕಕಾರ್ಯವನ್ನು ಈಜಿಪ್ಟಿನ ಜ್ಞಾನಿಗಳು ಮತ್ತು ಮಂತ್ರವಾದಿಗಳು ನಕಲು ಮಾಡಲು ಸಾಧ್ಯವಾಯಿತು: ಅವರು ತಮ್ಮ ಕೋಲುಗಳನ್ನೂ ಸಹ ಫರೋಹನ ಮುಂದೆ ಬಿಸಾಡಿದರು ಮತ್ತು ಅವುಗಳೂ ಸಹ ಸರ್ಪಗಳಾದವು. ಅವರು ಇದನು ತಮ್ಮ 'ಮಾಟಗಳಿಂದ' ಇದನ್ನು ಮಾಡಲು ಸಾಧ್ಯವಾಯಿತು. ಆರೋನನ ಸೂಚಕಕಾರ್ಯವು ಶ್ರೇಷ್ಠವಾದದ್ದಾಗಿತ್ತು, ಯಾಕೆಂದರೆ ಆತನ ಕೋಲು ಅವರ ಕೋಲುಗಳನ್ನು ನುಂಗಿಬಿಟ್ಟಿತು.

5. ಮೊದಲ ಸೂಚಕಕಾರ್ಯವು ಆರೋನನ ಕೋಲು ಸರ್ಪವಾದ ಸಂಗತಿಯಾಗಿತ್ತು, ಅದನ್ನು ಈಜಿಪ್ಟಿನ ಜ್ಞಾನಿಗಳೂ ಮತ್ತು ಮಂತ್ರವಾದಿಗಳೂ ಸಹ ಮಾಡಿದರು. ಆರೋನನ ಸರ್ಪವು ಅವರ ಸರ್ಪಗಳನ್ನು ನುಂಗಿಬಿಟ್ಟಿತು. ಆದರೆ ದೇವರು ಮುಂತಿಳಿಸಿದಂತೆಯೇ ಫರೋಹನು ಈ ಸೂಚಕಕಾರ್ಯಕ್ಕೆ ತನ್ನ ಹೃದಯವನ್ನು ಕಠಿಣಪಡಿಸಿಕೊಳ್ಳುವುದರ ಮೂಲಕ ಪ್ರತಿಕ್ರಿಯಿಸಿದನು.

6. ಮೊದಲ ಬಾಧೆಯನ್ನು ಈಜಿಪ್ಟಿನ ಧರ್ಮದ ಮೇಲೆ ಆದ ಒಂದು ದಾಳಿ ಎಂಬುದಾಗಿ ಅರ್ಥಮಾಡಿಕೊಳ್ಳಬಹುದು, ಯಾಕೆಂದರೆ ಈಜಿಪ್ಟಿನವರು ಆ ನದಿಯನ್ನು ಹಪಿ ದೇವರ ರೂಪದಲ್ಲಿ ಆರಾಧಿಸುತ್ತಿದ್ದರು. ಆ ನದಿಯ ನೀರು ಮತ್ತು ಅದರ ವಾರ್ಷಿಕ ತುಂಬಿಹರಿಯುವಿಕೆಯು ದೇಶವನ್ನು ಫಲವತ್ತಾಗಿ ಮಾಡಿದ್ದರಿಂದ ಅದು ಈಜಿಪ್ಟಿನವರ ಉಳಿಯುವಿಕೆಗೆ ಮುಖ್ಯವಾಗಿತ್ತು.

7. ಈಜಿಪ್ಟಿನ ಮಾಂತ್ರಿಕರು ತಮ್ಮ ಮಾಟ ಮಂತ್ರಗಳ ಮೂಲಕ ಅದೇ ರೀತಿಯ ಒಂದು ಅದ್ಭುತವನ್ನು ನಡೆಸುವುದರ ಮೂಲಕ ರಕ್ತದ ಬಾಧೆಗೆ ಪ್ರತಿಕ್ರಿಯಿಸಿದರು. ಫರೋಹನು ಮೋಶೆ ಮತ್ತು ಆರೋನರಿಗೆ ಕಿವಿಗೊಡದೆ ಇರುವುದರ ಮೂಲಕ ಪ್ರತಿಕ್ರಿಯಿಸಿದನು.

### ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು

1. ದೇವರೊಂದಿಗಿನ ನಿಮ್ಮ ಸಂಬಂಧದ ಆಧಾರದ ಮೇಲೆ ದೇವರ 'ಪರಾಕ್ರಮ ಕೃತ್ಯಗಳು' (6:6 ಮತ್ತು 7:3–4) ಎರಡು ಮುಖಗಳನ್ನು ಹೊಂದಿವೆ:

   1) ಆತನಲ್ಲಿ ನಂಬಿಕೆಯಿಡುವವರಿಗೆ ಮತ್ತು ಆತನಿಗೆ ಸಂಬಂಧಪಡುವವರಿಗೆ (ನಿರ್ಗಮನ ಕಥೆಯಲ್ಲಿ – ಇಸ್ರಾಯೇಲರು) ದೇವರ ಪರಾಕ್ರಮ ಕೃತ್ಯಗಳು ಅದ್ಭುತಕರವಾದ ಸೂಚಕಕಾರ್ಯ ಮತ್ತು ಅದ್ಭುತಕಾರ್ಯಗಳಾಗಿವೆ. ಇವುಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು ವಿಮೋಚನೆಯಾಗಿದೆ, ಅಂದರೆ ಬಂಧನದಿಂದ ಸಿಗುವ ಬಿಡುಗಡೆಯಾಗಿದೆ.

2) ಆತನಲ್ಲಿ ನಂಬಿಕೆಯಿಡದವರಿಗೆ ಮತ್ತು ಆತನಿಗೆ ಸಂಬಂಧಪಡದವರಿಗೆ (ನಿರ್ಗಮನ ಕಥೆಯಲ್ಲಿ – ಫರೋಹ ಮತ್ತು ಆತನ ಜ್ಞಾನಿಗಳು) ದೇವರ ಪರಾಕ್ರಮ ಕೃತ್ಯಗಳು ನ್ಯಾಯತೀರ್ಪಿಗೆ ನಡೆಸುತ್ತವೆ. ಫರೋಹ ಮತ್ತು ಆತನ ಜ್ಞಾನಿಗಳು ದೇವರನ್ನು ಒಪ್ಪಿಕೊಳ್ಳಲು ನಿರಾಕರಿಸಿದರು. ಅದರ ಬದಲಾಗಿ ಅವರು ತಮ್ಮ ಹೃದಯಗಳನ್ನು ಕಠಿಣಪಡಿಸಿಕೊಂಡರು.

2. ವಿಮೋಚನಕಾಂಡದ ಮೊದಲ ಆರು ಅಧ್ಯಾಯಗಳಲ್ಲಿ ವಿವರಿಸಲಾಗಿರುವಂತೆ ಮೋಶೆಯ ಗುಣ ವ್ಯಕ್ತಿತ್ವದ ಒಂದು ಸರಳವಾದ ಅಧ್ಯಯನವು ಹೀಗಿದೆ:

1) ಕೆಟ್ಟ ಗುಣಗಳು:

- ಆತನು ದುಡುಕುವ ಮತ್ತು ಆವೇಗವುಳ್ಳ ವ್ಯಕ್ತಿಯಾಗಿದ್ದರಿಂದ ಈಜಿಪ್ಟಿನವನೊಬ್ಬನನ್ನು ಕೊಂದನು (2:11–13)
- ಆತನು ತನ್ನ ಕೃತ್ಯದ ಪರಿಣಾಮಗಳನ್ನು ಎದುರಿಸಲು ಧೈರ್ಯವಿಲ್ಲದವನಾಗಿದ್ದನು. ಹಾಗಾಗಿ ಆತನು ಈಜಿಪ್ಟಿಗೆ ಓಡಿ ಹೋದನು.
- ಆತನು ದೇವರ ಕರೆಗೆ ಪ್ರತಿಕ್ರಿಯಿಸಲು ಮನಸ್ಸಿಲ್ಲದವನಾಗಿದ್ದನು ಮತ್ತು ಎಲ್ಲಾ ವಿಧವಾದ ನೆಪಗಳನ್ನು ಹೇಳಿದನು (3:12–4:13).
- ಆತನು ತನ್ನ ಮಗನಿಗೆ ಸುನ್ನತಿ ಮಾಡಿಸಿರಲಿಲ್ಲವಾದ್ದರಿಂದ ಆತನು ಒಡಂಬಡಿಕೆಗೆ ನಂಬಿಗಸ್ತನಾಗಿರಲಿಲ್ಲ (4:24–26)

2) ಒಂದಾದರೂ ಒಳ್ಳೆ ಗುಣವನ್ನು ಕಂಡುಹಿಡಿಯುವುದು ಕಷ್ಟಕರವಾಗಿದೆ. ಹಾಗಾಗಿ ನನ್ನ ಸಮಾರೋಪವೇನೆಂದರೆ, ವಿಮೋಚನಕಾಂಡದ ಮೊದಲ ಭಾಗದಲ್ಲಿ ನಮಗೆ ಸಿಗುವ ಮೋಶೆಯ ಚಿತ್ರಣವು ಅತ್ಯಂತ ನಕರಾತ್ಮಕವಾಗಿದೆ.

**ವಿಮೋಚನಕಾಂಡ ಉತ್ತರಗಳು 8: ಕಪ್ಪೆಗಳ, ಹೇನುಗಳ ಮತ್ತು ನೊಣಗಳ ಬಾಧೆಗಳು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಮೊದಲ ಎರಡು ಬಾಧೆಗಳ ನಡುವೆ ಏಳು ದಿನಗಳು ಕಳೆದುಹೋಗಿದ್ದವು. ಬಾಧೆಗಳು ಒಂದು ದೀರ್ಘಕಾಲದವರೆಗೆ ನಡೆದವು ಎಂಬುದನ್ನು ಇದು ನಮಗೆ ತೋರಿಸುತ್ತದೆ.

2. ಫರೋಹನು ಮೊದಲನೆಯ ಬಾಧೆಗೆ (ನೈಲ್ ನದಿಯ ನೀರು ರಕ್ತವಾದದ್ದು) ತನ್ನ ಹೃದಯವನ್ನು ಕಠಿಣಪಡಿಸಿಕೊಳ್ಳುವುದರ ಮತ್ತು ಮೋಶೆ ಆರೋನರಿಗೆ ಕಿವಿಗೊಡದೆ ಇರುವುದರ ಮೂಲಕ ಪ್ರತಿಕ್ರಿಯಿಸಿದನು. ಆದರೆ ಆತನು ಎರಡನೆಯ ಬಾಧೆಗೆ ವ್ಯತ್ಯಾಸವಾಗಿ ಪ್ರತಿಕ್ರಿಯಿಸಿದನು: ದೇವರು ಕಪ್ಪೆಗಳನ್ನು ತೊಲಗಿಸುವಂತೆ ಮೋಶೆ ಆರೋನರು ಪ್ರಾರ್ಥಿಸಬೇಕೆಂದು ಆತನು ಕೇಳಿಕೊಂಡನು – ಆಗ ಆತನು ಇಸ್ರಾಯೇಲರನ್ನು ಹೋಗಗೊಡಿಸುವೆನು ಎಂದನು. ಆದರೆ ಕಪ್ಪೆಗಳು ಸತ್ತ ತಕ್ಷಣ ಆತನು ಪುನಃ ತನ್ನ ಹೃದಯವನ್ನು ಕಠಿಣಪಡಿಸಿಕೊಂಡನು.

3. ಎರಡನೆಯ ಬಾಧೆಯ (ಕಪ್ಪೆಗಳು) ಪರಿಣಾಮವಾಗಿ ಮೋಶೆ ಮತ್ತು ಫರೋಹರು ಒಂದು ಒಪ್ಪಂದಕ್ಕೆ ತಲುಪಿದರು. ದೇವರು ಕಪ್ಪೆಗಳನ್ನು ತೊಲಗಿಸುವಂತೆ ಮೋಶೆಯು ಪ್ರಾರ್ಥಿಸಬೇಕೆಂದು ಫರೋಹನು ಕೇಳಿಕೊಂಡನು. ಆಗ ಆತನು ಇಸ್ರಾಯೇಲರಿಗೆ ಹೊರಟು ಹೋಗಿ ಬಲಿ ಅರ್ಪಿಸಲು ಅನುಮತಿಸುವೆನು ಎಂದನು. ಫರೋಹನು ಇದಕ್ಕಾಗಿ ಒಂದು ಸಮಯವನ್ನು ನೇಮಿಸಬೇಕೆಂದು ಮೋಶೆ ಹೇಳಿದಾಗ, ಆತನು 'ನಾಳೆ' ಎಂದನು!

4. ಆದರೆ ಕಪ್ಪೆಗಳು ತೊಲಗಿ ಹೋಗಿದ್ದನ್ನು ಕಂಡ ತಕ್ಷಣವೇ ಫರೋಹನು ತನ್ನ ಮನಸ್ಸನ್ನು ಬದಲಾಯಿಸಿದನು. ಆತನು ಪುನಃ ತನ್ನ ಹೃದಯವನ್ನು ಕಠಿಣಪಡಿಸಿಕೊಂಡು ಮೋಶೆ ಆರೋನರಿಗೆ ಕಿವಿಗೊಡದೆ ಹೋದನು.

5. ಈಜಿಪ್ಟಿನ ಮಾಂತ್ರಿಕರು ಮೂರನೆಯ ಬಾಧೆಗೆ (ಹೇನುಗಳು) ಅಂತಿಮವಾಗಿ ದೇವರು ಕಾರ್ಯ ಮಾಡುತ್ತಿದ್ದಾನೆ ಎಂಬುದನ್ನು ಒಪ್ಪಿಕೊಳ್ಳುವುದರ ಮೂಲಕ ಪ್ರತಿಕ್ರಿಯಿಸಿದರು. ಅವರು ಹೀಗೆ ಮಾಡಲು ಕಾರಣವೇನೆಂದರೆ – ಮೊಟ್ಟಮೊದಲ ಬಾರಿಗೆ – ಅದ್ಭುತಕರ ಸೂಚಕಕಾರ್ಯವನ್ನು ನಕಲು ಮಾಡಲು ಸೋತಿದ್ದರು. ಇದರ ಹೊರತಾಗಿಯೂ ಫರೋಹನು ಕಿವಿಗೊಡಲು ನಿರಾಕರಿಸಿದನು.

6. ನಾಲ್ಕನೆಯ ಬಾಧೆಯ (ನೊಣಗಳು) ಜೊತೆಗೆ ದೇವರು ಒಂದು ವಿಶೇಷ ಸೂಚಕಕಾರ್ಯವನ್ನು ನಡೆಸಿದನು. ಈ ಬಾರಿ ಈಜಿಪ್ಟಿನ ಒಂದು ಭಾಗವಾಗಿದ್ದ ಗೋಷೆನ್ ದೇಶವನ್ನು ದೇವರು ಉಳಿಸಿದನು.

7. ಇಸ್ರಾಯೇಲರು ದೇವರಿಗೆ ಈಜಿಪ್ಟಿನಲ್ಲಿ ಬಲಿಗಳನ್ನು ಅರ್ಪಿಸಲಿ ಎಂಬ ಫರೋಹನ ಕೊಡುಗೆಯನ್ನು ಮೋಶೆಯು ಅಂಗೀಕರಿಸಲಿಲ್ಲ. ಆತನು ಅದಕ್ಕೆ ಕೊಟ್ಟ ಕಾರಣವೇನೆಂದರೆ, ಯೆಹೋವನು ಬಯಸುವ ಯಜ್ಞ ಬಲಿಗಳು ಈಜಿಪ್ಟಿನವರಿಗೆ ಅಸಹ್ಯವಾಗಿರುವುದು ಎಂದನು. ಅದರ ಪರಿಣಾಮವು ಇಸ್ರಾಯೇಲರಿಗೆ ಮಾರಣಾಂತಿಕವಾಗಿರುವುದು (ಈಜಿಪ್ಟಿನವರು ಅವರಿಗೆ ಕಲ್ಲೆಸೆಯುವರು). ಅವರು ಅಂತಿಮವಾಗಿ ಒಂದು ಒಪ್ಪಂದವನ್ನು ತಲುಪಿದರು: ಮೋಶೆಯು ಯೆಹೋವನಿಗೆ ನೊಣಗಳಿಂದ ಮುಕ್ತಿ ಕೊಡುವಂತೆ ಪ್ರಾರ್ಥಿಸಿದರೆ ಇಸ್ರಾಯೇಲರು ಮರುಭೂಮಿಯಲ್ಲಿ ಸ್ವಲ್ಪ ದೂರಕ್ಕೆ ಹೋಗುವಂತೆ ಫರೋಹವನು ಅನುಮತಿಸುವನು.

8. ಫರೋಹನ ನಡವಳಿಕೆಯ ಕುರಿತು ಮೋಶೆಯು ಮಾಡಿದ ನಕಾರಾತ್ಮಕ 'ಮೌಲ್ಯೀಕರಣ' ಸರಿಯಾಗಿತ್ತು: ಫರೋಹನು ಪುನಃ ವಂಚಿಸಿದನು. ನೊಣಗಳು ತೆಗೆದುಹಾಕಲ್ಪಟ್ಟ ತಕ್ಷಣವೇ ಫರೋಹನು ಇಸ್ರಾಯೇಲರಿಗೆ ದೇಶ ಬಿಟ್ಟು ಹೋಗಲು ಅನುಮತಿಸಲಿಲ್ಲ.

9. ಮೋಶೆಯು ಯೆಹೋವನಿಗೆ ಮಾಡಿದ ಪ್ರಾರ್ಥನೆಯ ಫಲವಾಗಿ ನಾಲ್ಕನೆಯ ಬಾಧೆಯು (ನೊಣಗಳು) ದೇಶದಿಂದ ತೆಗೆದುಹಾಕಲ್ಪಟ್ಟಿತು. *ಮೋಶೆಯು ಕೇಳಿದಂತೆಯೇ ಯೆಹೋವನು ಮಾಡಿದನು.* ಈ ಹಿಂದೆ *ಮೋಶೆ ಫರೋಹನ ಮೇಲೆ ಬರಮಾಡಿದ ಕಪ್ಪೆಗಳ ನಿಮಿತ್ತ ಯೆಹೋವನಿಗೆ ಮೊರೆಯಿಟ್ಟಾಗಲೂ* (ವ. 12) ಹಾಗೆಯೇ ಆಯಿತು. ಏಳನೆಯ ಬಾಧೆಯ (ಆಲಿಕಲ್ಲಿನ ಮಳೆ) ಸನ್ನಿವೇಶದಲ್ಲಿಯೂ ಪುನಃ ಹಾಗೆಯೇ ಆಗಲಿಕ್ಕಿತ್ತು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಎರಡನೆಯ ಬಾಧೆಯು (ಕಪ್ಪೆಗಳು) ಈಜಿಪ್ಟಿನ ಧರ್ಮದ ಮೇಲೆ ಉಂಟಾದ ಒಂದು ದಾಳಿಯೆಂದು ಅರ್ಥಮಾಡಿಕೊಳ್ಳಬಹುದು. ಈಜಿಪ್ಟಿನವರು ಕಪ್ಪೆಯನ್ನು ಹೆಕೆಟ್ ಎಂಬ ದೇವತೆಯ ರೂಪದಲ್ಲಿ ಆರಾಧಿಸುತ್ತಿದ್ದರು, ಅದು ನೈಲ್‌ನ ಫಲವತ್ತತೆಯ ಸಂಕೇತವಾಗಿತ್ತು. ಬಂಜೆಯಾದ ದೇಶಕ್ಕೆ ಫಲವತ್ತತೆಯನ್ನು ತಂದ ಪ್ರಸಿದ್ಧ ಈಜಿಪ್ಟ್ ದೇವತೆಯ ಮೇಲೆ ತಾನು ಅಧಿಕಾರ ಹೊಂದಿದ್ದನು ಎಂಬುದನ್ನು ಯೆಹೋವನು ತೋರಿಸಿಕೊಟ್ಟನು.

2. ನಾಲ್ಕನೆಯ ಬಾಧೆಯ (ನೊಣಗಳು) ಜೊತೆಗಿನ ದೇವರ 'ವಿಶೇಷ ಸೂಚಕಕಾರ್ಯವು' ಏನಾಗಿತ್ತೆಂದರೆ, ಅದು ಇಸ್ರಾಯೇಲರು ವಾಸವಾಗಿದ್ದ ಗೋಷೆನ್ ಸೀಮೆಯನ್ನು ಬಾಧಿಸಲಿಲ್ಲ. ಹಾಗಾಗಿ ಮೊಟ್ಟ ಮೊದಲ ಬಾರಿಗೆ ದೇವರು ಇಲ್ಲಿ ಮೋಶೆಯ ಜನರ ಹಾಗೂ ಫರೋಹನ ಜನರ ನಡುವೆ ಒಂದು ವ್ಯತ್ಯಾಸವನ್ನು ತೋರಿಸುತ್ತಾನೆ. ಇದು ಇಸ್ರಾಯೇಲರ ದೇವರಾದ ಯೆಹೋವನು ಈಜಿಪ್ಟಿನಲ್ಲಿದ್ದು ಈ ಸೂಚಕಕಾರ್ಯಗಳನ್ನು ಮಾಡಿದನು ಎಂಬುದಕ್ಕೆ ಫರೋಹನಿಗೆ ಮತ್ತು ಈಜಿಪ್ಟಿನವರಿಗೆ ಒಂದು

ಸೂಚನೆಯಾಗಿತ್ತು. ಅದನ್ನು ಮಾಡಿದ್ದು ಅವರ ಸ್ವಂತ ಸ್ಥಳೀಯ ದೇವರುಗಳಲ್ಲಿ ಒಂದಾಗಿರಲಿಲ್ಲ. ಆ ದಿನಗಳಲ್ಲಿ, ಒಂದು ದೇವತೆ ಅಥವಾ ದೇವರ ಶಕ್ತಿಯು ತನ್ನ ಸ್ವಂತ ದೇಶಕ್ಕೆ ಮತ್ತು ಸ್ವಂತ ಜನರಿಗೆ ಸೀಮಿತವಾಗಿತ್ತು ಎಂದು ಜನರು ತಿಳಿದುಕೊಂಡಿದ್ದರು. ಇಲ್ಲಿ ಇಸ್ರಾಯೇಲರ ದೇವರು ನಿರ್ದೋಷಿಗಳಾದ ಇಸ್ರಾಯೇಲರನ್ನು ನಾಲ್ಕನೆಯ ಬಾಧೆಯಿಂದ ತಪ್ಪಿಸುವುದರ ಮೂಲಕ ಮತ್ತು ಈಜಿಪ್ಟಿನವರ ಮೇಲೆ ಸ್ಥಳೀಯ ಈಜಿಪ್ಟಿನ ದೇವರುಗಳ ಬಲವನ್ನು ಇಲ್ಲದಂತೆ ಮಾಡುವುದರ ಮೂಲಕ ಈಜಿಪ್ಟಿನ ಮೇಲೆ ತನ್ನ ಬಲವನ್ನು ಸ್ಪಷ್ಟವಾಗಿ ಪ್ರಕಟಪಡಿಸುತ್ತಿದ್ದಾನೆ.

ಇದೇ ರೀತಿಯ ವ್ಯತ್ಯಾಸವನ್ನು ನಂತರ ಐದನೆಯ (ದನಗಳಿಗೆ ಬಾಧೆ), ಏಳನೆಯ (ಆಲಿಕಲ್ಲಿನ ಮಳೆ), ಒಂಭತ್ತನೆಯ (ಕಾರ್ಗತ್ತಲೆ), ಮತ್ತು ಹತ್ತನೆಯ (ಚೊಚ್ಚಲು ಮಕ್ಕಳ ಸಂಹಾರ) ಬಾಧೆಗಳಲ್ಲಿ ಕಾಣಬಹುದು.

3. ನಾಲ್ಕನೆಯ ಬಾಧೆಯ (ನೊಣಗಳು) ಕಥೆಯಲ್ಲಿ ಇನ್ನೊಂದು ಹೆಚ್ಚಿನ ಅಂಶವಿದೆ. ಅದು ಯಾವುದೆಂದರೆ, ದೇವರು ಮೋಶೆಯ ಮೂಲಕ ಫರೋಹನಿಗೆ ಮುನ್ನೆಚ್ಚರಿಕೆಯನ್ನು ಕೊಟ್ಟಿದ್ದು (ವ. 20). ಹೀಗೆ ಮಾಡುವುದರ ಮೂಲಕ, ದೇವರು ಫರೋಹ ಮತ್ತು ಈಜಿಪ್ಟಿನವರನ್ನು ನಾಲ್ಕನೆಯ ಬಾಧೆಯಿಂದ ಹೊಡೆಯುವ ಮುನ್ನ ಅವರಿಗೆ ಪಶ್ಚಾತ್ತಾಪಪಡಲು ಸಮಯ ಕೊಡುತ್ತಿದ್ದಾನೆ. ಇದೇ ರೀತಿಯ ಮುನ್ಸೂಚನೆಯನ್ನು ಐದನೆಯ (ದನಗಳಿಗೆ ಬಾಧೆ), ಆರನೆಯ (ಹುಣ್ಣುಗಳು), ಎಂಟನೆಯ (ಮಿಡಿತೆಗಳು), ಮತ್ತು ಹತ್ತನೆಯ (ಚೊಚ್ಚಲು ಮಕ್ಕಳ ಸಂಹಾರ) ಬಾಧೆಗಳಲ್ಲಿ ಕಾಣಬಹುದು.

4. ಇದುವರೆಗೂ ಫರೋಹನ ನಡವಳಿಕೆಯ ಕುರಿತು ನನ್ನ 'ಮೌಲ್ಯೀಕರಣವನ್ನು' ನಾಲ್ಕು ಅಂಶಗಳಲ್ಲಿ ಸಾರಾಂಶಗೊಳಿಸಬಹುದು:

   1) ಆತನು ಹಿಂದಿನ ಅನುಭವದಿಂದ ಕಲಿತುಕೊಳ್ಳಲು ಮನಸ್ಸಿಲ್ಲದವನಾಗಿದ್ದನು. ಬದಲಾಗಿ ಆತನು ತನ್ನ ಹೃದಯವನ್ನು ಸತತವಾಗಿ ಕಠಿಣಪಡಿಸಿಕೊಂಡನು.

   2) ಆತನು ತನ್ನ ಸ್ವಂತ ಜನರ ಯೋಗಕ್ಷೇಮದ ಕುರಿತು ಕಾಳಜಿ ಇಲ್ಲದವನಾಗಿದ್ದನು. ಆತನ ಹಟದ ನಿಮಿತ್ತ ಇಡೀ ದೇಶವು ಬಾಧೆ ಅನುಭವಿಸಬೇಕಾಯಿತು.

   3) ಆತನು ವಂಚಕನಾಗಿದ್ದನು. ಆತನು ಮೋಶೆಗೆ ಕೊಟ್ಟ ವಚನವನ್ನು ಪಾಲಿಸಲಿಲ್ಲ.

   4) ಆತನು ದೇವರ ಭಯವಿಲ್ಲದವನಾಗಿದ್ದನು. ಆತನು ದೇವರ ಅದ್ಭುತಕರ ಸೂಚಕಕಾರ್ಯಗಳು ತನ್ನ ಜೀವಿತವನ್ನು ಮುಟ್ಟುವಂತೆ ಅನುಮತಿಸಲಿಲ್ಲ. ಇದರ ಅಂತಿಮವಾದ ಪರಿಣಾಮವು ಆತನ ಜೀವಿತದ ಮೇಲೆ ದೇವರ ನ್ಯಾಯತೀರ್ಪನ್ನು ತಂದಿತು.

**ವಿಮೋಚನಕಾಂಡ ಉತ್ತರಗಳು 9: ಹೆಚ್ಚಿನ ಬಾಧೆಗಳು: ದನಗಳಿಗೆ ಬಾಧೆ, ಹುಣ್ಣುಗಳಿಂದ ಮತ್ತು ಆಲಿಕಲ್ಲಿನ ಮಳೆಯಿಂದ ಬಾಧೆಗಳು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. 9:5 ರ ಮಹತ್ವವು ದೇವರು ಈಜಿಪ್ಟಿಯನ್ನರಿಗೆ ಕೊಟ್ಟ ಎಚ್ಚರಿಕೆಯಲ್ಲಿ ಅಡಕವಾಗಿದೆ. ಅವರು ಐದನೆಯ ಬಾಧೆಯು ಹೊಡೆಯುವಷ್ಟರೊಳಗೆ ತಮ್ಮ ಎಲ್ಲಾ ಪಶುಗಳನ್ನು ಸುರಕ್ಷಿತವಾಗಿ ಕೊಟ್ಟಿಗೆಗೆ ಸೇರಿಸಲು ಸಮಯವನ್ನು ಹೊಂದಿದ್ದರು. ಬಾಧೆಯು ಹೊಲದಲ್ಲಿದ್ದ ಪಶುಗಳ ಮೇಲೆ ಮಾತ್ರ ಬಂದಿತ್ತು, ಕೊಟ್ಟಿಗೆಯಲ್ಲಿದ್ದ ಪಶುಗಳ ಮೇಲಲ್ಲ.
2. ಐದನೇ ಬಾಧೆಯ (ದನಗಳಿಗೆ ಬಾಧೆ) ಪರಿಣಾಮಗಳನ್ನು ಪರಿಶೋಧಿಸಲು ಫರೋಹನು ಆಳುಗಳನ್ನು ಕಳುಹಿಸಿದನು. ಅವರ ಪರಿಶೋಧನೆಯ ಪರಿಣಾಮವೇನಾಗಿತ್ತೆಂದರೆ, ಕೇವಲ ಈಜಿಪ್ಟಿಯನ್ನರ ಪಶುಗಳು ಮಾತ್ರ ಸತ್ತಿದ್ದವು. ಇಸ್ರಾಯೇಲರ ಪಶುಗಳಲ್ಲಿ ಒಂದೂ ಸತ್ತಿರಲಿಲ್ಲ. ಮತ್ತೊಮ್ಮೆ ದೇವರು ಇಸ್ರಾಯೇಲರ ಮತ್ತು ಈಜಿಪ್ಟಿಯನ್ನರ ನಡುವೆ ಒಂದು ವ್ಯತ್ಯಾಸವನ್ನು ಮಾಡಿದ್ದನು.
3. ಮೋಶೆ ಮತ್ತು ಆರೋನರು ಒಲೆಯಿಂದ ತೆಗೆದು ತಂದು ಗಾಳಿಯಲ್ಲಿ ತೂರಿದ ಬೂದಿಯಿಂದ ಹುಣ್ಣುಗಳು ಬಂದವು.
4. 9:16 ರಲ್ಲಿ ಫರೋಹನಿಗೆ ಬಂದ ದೇವರ ಸಂದೇಶವನ್ನು ನಾನು ಹೀಗೆ ಅರ್ಥಮಾಡಿಕೊಳ್ಳುತ್ತೇನೆ: ದೇವರು ಫರೋಹನನ್ನು ತನ್ನ ಸಾರ್ವಭೌಮ ಉದ್ದೇಶಗಳಿಗಾಗಿ ಬಳಸಿಕೊಂಡನು. ಆದರೂ ಫರೋಹನಿಗೆ ಆಯ್ಕೆ ಮಾಡುವ ಅವಕಾಶವಿತ್ತು ಎಂದು ನಾನು ಯೋಚಿಸುತ್ತೇನೆ. ಆತನು ಇಸ್ರಾಯೇಲರನ್ನು ಹೋಗಗೊಡಿಸುವುದರ ಮೂಲಕ ದೇವರ ಸಾರ್ವಭೌಮತೆಯನ್ನು ಗೌರವಿಸಬಹುದಾಗಿತ್ತು ಅಥವಾ ಆತನು ಮೋಶೆ ಮತ್ತು ಆರೋನರ ಮನವಿಗೆ ಕಿವಿಗೊಡದೆ ತನ್ನ ಹೃದಯವನ್ನು ಕಠಿಣಪಡಿಸಿಕೊಳ್ಳಬಹುದಾಗಿತ್ತು. ಆಗಲೂ ಸಹ ಫರೋಹನು ಇಸ್ರಾಯೇಲರನ್ನು ಹೋಗಗೊಡಿಸುವಂತೆ ಆತನಿಗೆ ಒತ್ತಾಯ ಹೇರುವುದರ ಮೂಲಕ ದೇವರು ತನ್ನ ಸಾರ್ವಭೌಮತೆಯನ್ನು ತೋರಿಸಲು ಆತನನ್ನು ಬಳಸಿಕೊಳ್ಳಲಿದ್ದನು.
5. ಆಲಿಕಲ್ಲಿನ ಮಳೆಯು ಗಂಭೀರವಾದ ಪರಿಣಾಮಗಳನ್ನು ಹೊಂದಿತ್ತು:

   ಅದು ಹೊಲದಲ್ಲಿದ್ದ ಮನುಷ್ಯರ ಮೇಲೆಯೂ ಪಶುಗಳ ಮೇಲೆಯೂ ಹೊಡೆಯಿತು.

   ಅದು ಬೆಳೆಯುತ್ತಿದ್ದ ಬೆಳೆಗಳನ್ನು ನಾಶಮಾಡಿತು.

   ಅದು ಮರಗಳನ್ನು ನಾಶಮಾಡಿತು.
6. ಆಲಿಕಲ್ಲಿನ ಮಳೆಯು ಈಜಿಪ್ಟನ್ನು ಹೊಡೆದಾಗ, ಫರೋಹನು ಮೊಟ್ಟಮೊದಲ ಬಾರಿಗೆ ತನ್ನ ಆತ್ಮಿಕ ಸ್ಥಿತಿಯ ಕುರಿತು ಅರಿವನ್ನು ಹೊಂದಿಕೊಂಡನು. ಆದರೆ ಈ ಅರಿವಿಕೆಯು ಯಾವುದೇ ಶಾಶ್ವತವಾದ ಪರಿಣಾಮವನ್ನು ಬೀರಲಿಲ್ಲ. ಮೋಶೆಯು ಸಂಶಯಪಟ್ಟಂತೆ (ಆದರೂ ನೀನು ಮತ್ತು ನಿನ್ನ ಅಧಿಕಾರಿಗಳು ದೇವರಾದ ಯೆಹೋವನಿಗೆ ಭಯಪಡುವುದಿಲ್ಲವೆಂದು ನಾನು ಬಲ್ಲೆನು' ವ. 30), ಫರೋಹನು ತನ್ನ ಮನಸ್ಸನ್ನು ಬದಲಾಯಿಸಿ ಇಸ್ರಾಯೇಲರಿಗೆ ಹೋಗಗೊಡಿಸದೆ ಮತ್ತೊಮ್ಮೆ ಪಾಪ ಮಾಡಿದನು (ವ. 34).

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಐದನೇ ಬಾಧೆಯು (ದನಗಳಿಗೆ ಬಾಧೆ) ಈಜಿಪ್ಟಿನ ಧರ್ಮದ ಮೇಲೆ ಉಂಟಾದ ಮತ್ತೊಂದು ದಾಳಿಯೆಂದು ಅರ್ಥಮಾಡಿಕೊಳ್ಳಬಹುದು. ಈಜಿಪ್ಟಿಯನ್ನರು ಪ್ರಾಣಿಗಳಂತೆ ಅಥವಾ ಪ್ರಾಣಿಗಳ ತಲೆಯನ್ನು ಹೊಂದಿದಂತೆ ಬಿಂಬಿಸಲಾಗುತ್ತಿದ್ದ ಅನೇಕ ದೇವರುಗಳನ್ನು ಆರಾಧಿಸುತ್ತಿದ್ದರು. ಅವುಗಳಲ್ಲಿ ಕೆಲವು ಹೀಗಿವೆ: ಬಸವ–ದೈವನಾದ ಏಪಿಸ್ ಮತ್ತು ನೆವಿಸ್, ಆಕಳು–ದೇವತೆಯಾದ ಹಾತೋರ್ ಮತ್ತು ಟಗರು–ದೇವರಾದ ಖ್ನುಮ್. ಹಾಗಾಗಿ ಈ ಬಾಧೆಯ ಮೂಲಕ ಇಸ್ರಾಯೇಲರ ದೇವರು ಈಜಿಪ್ಟಿನ ಮೇಲೆ ಅಧಿಕಾರವುಳ್ಳವನಾಗಿದ್ದಾನೆ ಎಂಬುದನ್ನು ತೋರಿಸಿದನು. ಆತನು ಗೋಷೆನ್‌ನಲ್ಲಿ ವಾಸಿಸಿದ ತನ್ನ ಜನರನ್ನು ಬಾಧೆಯಿಂದ ರಕ್ಷಿಸಿದನು. ಆದರೆ ಆತನು ಅನೇಕ ಈಜಿಪ್ಟಿಯನ್ ದೇವರುಗಳ ಮೇಲೆ ತನ್ನ ಬಲವನ್ನು ತೋರಿಸಿ ಈಜಿಪ್ಟಿಯನ್ನರ ಮೇಲೆ ನಾಶನವನ್ನು ಬರಮಾಡಿದನು.
2. ನಾನು 9:12 ನ್ನು ಹೀಗೆ ಅರ್ಥವಿವರಿಸುವೆನು:
   1) ಫರೋಹನು ಮೋಶೆ ಮತ್ತು ಆರೋನರ ಮೂಲಕ ಬಂದ ದೇವರ ಸಂದೇಶವನ್ನು ಅಂಗೀಕರಿಸದೆ ಪ್ರಾರಂಭದಿಂದಲೂ ತನ್ನ ಹೃದಯವನ್ನು ಕಠಿಣಪಡಿಸಿಕೊಂಡನು. ಯೆಹೋವನ ಕುರಿತು ತಾನು ತೋರಿದ ಸ್ವಂತ ನಿರಾಕರಣೆಯೇ ಆತನ ಹೃದಯವು ಕಠಿಣವಾಗುವಂತೆ ನಡೆಸಿತು.
   2) ಫರೋಹನು ತನ್ನ ಇಚ್ಛೆಯಂತೆ ಮಾಡಲು ದೇವರು ಅನುಮತಿಸಿದನು, ಅಂದರೆ ಮೋಶೆ ಮತ್ತು ಆರೋನರ ಮಾತಿಗೆ ಕಿವಿಗೊಡದಿರುವುದು. ಹಾಗಾಗಿ ಫರೋಹನು ತನ್ನ ಹೃದಯವನ್ನು ತಾನೇ ಕಠಿಣಪಡಿಸಿಕೊಳ್ಳಲು ದೇವರು ಬಿಟ್ಟುಕೊಟ್ಟನು ಎಂದು ನಾವು ಹೇಳಬಹುದಾಗಿದೆ. ಇದನ್ನು ವ್ಯಕ್ತಪಡಿಸಲು ಬಳಸಲಾಗಿರುವ ಹೇಳಿಕೆಯು ಹೀಗಿದೆ: 'ಯೆಹೋವನು ಫರೋಹನ ಹೃದಯವನ್ನು ಕಠಿಣ ಮಾಡಿದನು' (9:12; 10:1, 20, 27; 11:10)

3) ವಿಮೋಚನಾಕಾಂಡದ ಕಥೆಯ ಪ್ರಾರಂಭದಿಂದಲೂ ಹೀಗೆ ಸಂಭವಿಸುವುದೆಂದು ದೇವರು ತಿಳಿದಿದ್ದನು. ಈ ಕಾರಣದಿಂದಲೇ ಮೋಶೆಯು ದೇವರ ಸಂದೇಶದೊಂದಿಗೆ ಫರೋಹನನ್ನು ಎದುರುಗೊಳ್ಳಲು ಈಜಿಪ್ಟಿಗೆ ಹಿಂದಿರುಗುವ ಮುನ್ನವೇ ಆತನು ಮೋಶೆಗೆ ಹೀಗೆ ಹೇಳಬಹುದಾಗಿತ್ತು 'ಆದರೆ ನಾನು ಫರೋಹನ ಹೃದಯವನ್ನು ಕಠಿಣಪಡಿಸುವೆನು' (4:21).

**ವಿಮೋಚನಕಾಂಡ ಉತ್ತರಗಳು 10: ಮಿಡಿತೆಗಳ ಮತ್ತು ಕಾರ್ಗತ್ತಲೆಯ ಬಾಧೆಗಳು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ವಿಮೋ. 10:3 ರಲ್ಲಿ ಫರೋಹನಿಗೆ ಬಂದ ದೇವರ ಸಂದೇಶವು (*'ನನ್ನ ಸನ್ನಿಧಿಯಲ್ಲಿ ನೀನು ತಲೆ ತಗ್ಗಿಸಿಕೊಳ್ಳುವುದನ್ನು ಎಷ್ಟು ಕಾಲ ನಿರಾಕರಿಸುವೆ?'*) ಬಹುಶಃ ದೇವರು ಈಜಿಪ್ಟಿನ ಮೇಲೆ ಯಾಕೆ ಬಾಧೆಗಳನ್ನು ಕಳುಹಿಸಿದನು ಎಂಬುದಕ್ಕೆ ಮುಖ್ಯ ಕಾರಣವನ್ನು ವಿವರಿಸುತ್ತದೆ: ಫರೋಹನ ಮೂಲ ಪಾಪವು ಆತನು ತನ್ನನ್ನು ದೇವರ ಮುಂದೆ ತಗ್ಗಿಸಿಕೊಳ್ಳದಿರುವುದಾಗಿದೆ. ಇನ್ನೊಂದು ಮಾತಿನಲ್ಲಿ ಹೇಳಬೇಕಾದರೆ: ಆತನು ದೇವರನ್ನು ಮತ್ತು ಇಸ್ರಾಯೇಲರಿಗೋಸ್ಕರ ಆತನು ಮಾಡಿದ ಯೋಜನೆಯನ್ನು ಒಪ್ಪಲಿಲ್ಲ. ಈ ಹಠಮಾರಿತನದ ಮತ್ತು ಪಟ್ಟು ಹಿಡಿದ ಗರ್ವದ ಪರಿಣಾಮವಾಗಿ ಆತನ ಹೃದಯವು ಪದೇ ಪದೇ ಕಠಿಣವಾಯಿತು. ಆತನು ತನ್ನ ಹೃದಯವನ್ನು ತಾನೇ ಕಠಿಣಪಡಿಸಿಕೊಂಡನು. ಆತನು ತನ್ನನ್ನು ದೇವರ ಮುಂದೆ ತಗ್ಗಿಸಿಕೊಳಲು ನಿರಾಕರಿಸಿದಂತೆಲ್ಲಾ ದೇವರು ಈ ಹೃದಯ ಕಠಿಣಪಡಿಸಿಕೊಳ್ಳುವಿಕೆಯನ್ನು ಮುಂದುವರೆಯಲು ಬಿಟ್ಟನು, ಇದು 'ಯೆಹೋವನು ಫರೋಹನ ಹೃದಯವನ್ನು ಕಠಿಣಪಡಿಸಿದನು' ಎಂಬ ಪದಗಳಲ್ಲಿ ವ್ಯಕ್ತವಾಗಿದೆ.

2. ಮಿಡಿತೆಗಳ ಬಾಧೆಯ ಪರಿಣಾಮವೇನಾಗಿತ್ತೆಂದರೆ, ಅದು ಆಲಿಕಲ್ಲಿನ ಮಳೆಯ ಬಾಧೆಯಿಂದ ಬದುಕುಳಿದಿದ್ದ ಎಲ್ಲಾ ಸಸ್ಯಗಳನ್ನು ಸಂಪೂರ್ಣವಾಗಿ ನಾಶಮಾಡಿತು.

3. ಮೋಶೆಯು ಎಂಟನೆಯ ಬಾಧೆಯ ಪ್ರಕಟನೆಯನ್ನು ಮಾಡಿದಾಗ ಈಜಿಪ್ಟಿನ ಅಧಿಕಾರಿಗಳಿಗೆ ಇನ್ನೂ ಸಹಿಸಿಕೊಳ್ಳಲಾಗಲಿಲ್ಲ. ಅವರು ಫರೋಹನಿಗೆ ಇಸ್ರಾಯೇಲರನ್ನು ಕಳುಹಿಸಿಬಿಡು ಇಲ್ಲವಾದರೆ ನಮ್ಮ ದೇಶವು ನಾಶವಾಗುವುದು ಎಂಬ ಸಲಹೆಯನ್ನು ನೀಡಿದರು (ವ. 7). ಫರೋಹನು ಕೇವಲ ಇಸ್ರಾಯೇಲ್ ಗಂಡಸರಿಗೆ ಮಾತ್ರ ಮರುಭೂಮಿಯಲ್ಲಿ ದೇವರನ್ನು ಆರಾಧಿಸಲು ಬಿಡುವೆನೆಂದು ತೀರ್ಮಾನಿಸಿದನು; ಅವರು ತಮ್ಮ ಹೆಂಡತಿ ಮಕ್ಕಳನ್ನು ಈಜಿಪ್ಟ್‌ನಲ್ಲಿಯೇ ಬಿಟ್ಟು ಹೋಗಬೇಕಾಗಿತ್ತು. ಆದರೆ, ನಿಶ್ಚಯವಾಗಲೂ ಇದು ಅಸಮ್ಮತವಾಗಿತ್ತು.

4. ಒಂಭತ್ತನೆಯ ಬಾಧೆಯು (ಕಾರ್ಗತ್ತಲೆ) ಈಜಿಪ್ಟಿನ ಧರ್ಮದ ಮೇಲೆ ಉಂಟಾದ ಒಂದು ದಾಳಿಯೆಂದು ಅರ್ಥಮಾಡಿಕೊಳ್ಳಬಹುದು. ಈಜಿಪ್ಟಿನ ಒಂದು ಮುಖ್ಯ ದೇವರು ಸೂರ್ಯ–ದೇವನಾದ ರಾ ಆಗಿತ್ತು. ಹಾಗಾಗಿ ಇಸ್ರಾಯೇಲರ ದೇವರು ದೇಶದ ಮೇಲೆ ಕತ್ತಲೆಯನ್ನು ತಂದಾಗ ಅದು ರಾ ದೇವನಿಗೆ ಮತ್ತು ಆತನ ಶಕ್ತಿಗೆ ವಿರುದ್ಧವಾಗಿ ಒಂದು ಅಪಮಾನವಾಗಿತ್ತು.

5. ಒಂಭತ್ತನೆಯ ಬಾಧೆಯು (ಕಾರ್ಗತ್ತಲೆ) ಹೊಡೆದಾಗ, ಫರೋಹನು (ಸ್ತ್ರೀಯರು ಮತ್ತು ಮಕ್ಕಳನ್ನು ಒಳಗೊಂಡು) ಎಲ್ಲಾ ಇಸ್ರಾಯೇಲರನ್ನು ಹೋಗಗೊಡಿಸಿದನು. ಆದರೆ ಆತನು ಒಂದು ಷರತ್ತನು ವಿಧಿಸಿದನು: ಅದೇನೆಂದರೆ, ಅವರು ತಮ್ಮ ಕುರಿದನಗಳನ್ನು ಈಜಿಪ್ಟಿನಲ್ಲಿಯೇ ಬಿಟ್ಟು ಹೋಗಬೇಕಾಗಿತ್ತು. ಆದರೆ ಆ ಷರತ್ತು ನಿಶ್ಚಯವಾಗಲೂ ಅಸಮ್ಮತವಾಗಿತ್ತು, ಯಾಕೆಂದರೆ ಬಲಿಗಳಿಗಾಗಿ ಕೆಲವು ಪ್ರಾಣಿಗಳು ಬೇಕಾಗಿದ್ದವು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ವ. 7 ಮತ್ತು ವ. 10 ರಲ್ಲಿರುವ ಹಾಸ್ಯವನ್ನು ನಾನು ಹೀಗೆ ಅರ್ಥಮಾಡಿಕೊಳ್ಳುತ್ತೇನೆ:

   1) ವ. 7 ರಲ್ಲಿ ಈಜಿಪ್ಟಿನ ಅಧಿಕಾರಿಗಳು ಹಾಸ್ಯಕರವಾಗಿ ವ. 3 ರಲ್ಲಿರುವ ಮೋಶೆಯ ಪ್ರಶ್ನೆಯನ್ನು ಆಲೋಚಿಸುತ್ತಿದ್ದಾರೆ, ಅಲ್ಲಿ ದೇವರು ಮೋಶೆ ಮತ್ತು ಆರೋನರ ಮೂಲಕ ಫರೋಹನಿಗೆ ಹೀಗೆ ಕೇಳುತ್ತಾನೆ, *'ನನ್ನ ಸನ್ನಿಧಿಯಲ್ಲಿ ನೀನು ತಲೆ ತಗ್ಗಿಸಿಕೊಳ್ಳುವುದನ್ನು ಎಷ್ಟು ಕಾಲ ನಿರಾಕರಿಸುವೆ?'* ಅವರು ಇದನ್ನೇ ಒಂದು ಸಮಾನವಾದ ಪ್ರಶ್ನೆಯೊಂದಿಗೆ ಹೀಗೆ ಕೇಳಿದರು,*'ಇವನು ಎಷ್ಟು ಕಾಲ ನಮಗೆ ಉರುಳಾಗಿರಬೇಕು'.*

   2) *ವ. 10 ರಲ್ಲಿ ಫರೋಹನು ಮೋಶೆಯನ್ನು 'ಆಶೀರ್ವದಿಸುವಾಗ' ಹಾಸ್ಯವನ್ನು ಬಳಸುತ್ತಾನೆ: ?????*

2. ಇಂದು ದಕ್ಷಿಣ ಭಾರತದ ಕ್ರೈಸ್ತ ವಿಶ್ವಾಸಿಗಳಾದ ನಾವು ಫರೋಹನ ತಗ್ಗಿಸುವಿಕೆಯ ಕೊರತೆಯಿಂದ ಅನೇಕ ಸಂಗತಿಗಳನ್ನು ಕಲಿತುಕೊಳ್ಳಬಹುದು:

   1) ಗರ್ವದ ಜೊತೆಗೆ ಹಠವು ಸೇರಿಕೊಂಡಾಗ ನಾವು ವೈಯಕ್ತಿಕವಾಗಿ ಬಿದ್ದು ಹೋಗುತ್ತೇವೆ. ಅದು ನಮ್ಮ ಜೀವಿತದಲ್ಲಿ ದೇವರ ನ್ಯಾಯತೀರ್ಪನ್ನು ತರುತ್ತದೆ.

   2) ದೀನತೆಯ ಕೊರತೆಯು ನಮ್ಮ ಸೇವೆಯನ್ನೂ ಸಹ ನಾಶಮಾಡುತ್ತದೆ, ಫರೋಹನ ದೇಶವಾದ ಈಜಿಪ್ಟ್‌ನ ಮೇಲೆ ಅದು ಹೇಗೆ ನಾಶನವನ್ನು ತಂದಿತೋ ಅದೇ ರೀತಿಯಲ್ಲಿ ನಮಗೂ ಆಗುತ್ತದೆ.

   3) ಫರೋಹನ ಅಧಿಕಾರಿಗಳು ಆತನು ಇಸ್ರಾಯೇಲರ ದೇವರ ಕುರಿತು ಹಠಮಾರಿಯಾಗಿ ವಿರೋಧಿಸಿದ್ದರ ಕುರಿತು ಟೀಕಿಸಿದಂತೆಯೇ ನಮ್ಮ ಸ್ವಂತ ಜನರು ಮತ್ತು ಹಿಂಬಾಲಕರು ನಮ್ಮ ವಿರುದ್ಧವಾಗಿಯೇ ತಿರುಗಿಕೊಳ್ಳುವರು.

3. ಅಧ್ಯಾಯ 7–10 ರಲ್ಲಿ ವಿವರಿಸಿರುವಂತೆ ಮೋಶೆಯ ವ್ಯಕ್ತಿತ್ವದ ಒಂದು ಅಧ್ಯಯನವು ಕೆಳಗಿನ ಅಂಶಗಳನ್ನು ಹೊಂದಿರತಕ್ಕದ್ದು, ಅದು ಆತನ ಕುರಿತು ನಾವು ಈ ಹಿಂದೆ ನಡೆಸಿರುವ ಅಧ್ಯಯನಕ್ಕಿಂತ ಈಗ ಆತನು ಹೇಗೆ ಬದಲಾಗಿದ್ದಾನೆ ಎಂಬುದನ್ನು ತೋರಿಸುತ್ತದೆ

(ಅಧ್ಯಾಯ 2–6 ರ ಮೇಲೆ ಆಧಾರಿತವಾಗಿ, ನೋಡಿರಿ ***ವಿಮೋಚನಕಾಂಡ ಅಧ್ಯಯನ 7: ಆರೋನ, ಮೋಶೆ ಮತ್ತು ಮೊದಲ ಉಪದ್ರವ***):

1) ಈಗ ಆತನು ದೇವರಿಗೆ ವಿಧೇಯನಾಗಿದ್ದಾನೆ ಮತ್ತು ಆತನ ಆಜ್ಞೆಗಳನ್ನು ಪಾಲಿಸುತ್ತಾನೆ (7:6, 10, 20).
2) ಪದೇ ಪದೇ ಆತನು ಫರೋಹನ ಮುಂದೆ ಧೈರ್ಯವಾಗಿ ಬರುತ್ತಾನೆ ((8:9–11, 26–27, 29; 9:29–30; 10:3–6, 9, 25–26, 29).
3) ಈಗ ಆತನು ಫರೋಹ ಮತ್ತು ಆತನ ಅಧಿಕಾರಿಗಳೊಂದಿಗೆ ಪರಸ್ಪರ ವರ್ತಿಸುವಾಗ ತನ್ನ ಪರಿಪಕ್ವತೆಯನ್ನು, ಜ್ಞಾನವನ್ನು ಮತ್ತು ಆತ್ಮಿಕ ವಿವೇಚನೆಯನ್ನು ತೋರಿಸುತ್ತಾನೆ (8:9–10, 29; 9:30).

**ವಿಮೋಚನಕಾಂಡ ಉತ್ತರಗಳು 11: ಹತ್ತನೆಯ ಬಾಧೆ ಮತ್ತು ನಿರ್ಗಮನ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಪಸ್ಕಹಬ್ಬದ ಊಟವನ್ನು ಹೀಗೆ ಸಿದ್ಧಗೊಳಿಸಬೇಕಾಗಿತ್ತು ಮತ್ತು ತಿನ್ನಬೇಕಾಗಿತ್ತು:

   ದೋಷವಿಲ್ಲದ ಒಂದು ವರ್ಷದ ಕುರಿಮರಿಯನ್ನು ತಿಂಗಳ ಹತ್ತನೆಯ ದಿನ ಆರಿಸಲಾಗುತ್ತಿತ್ತು ಮತ್ತು ನಾಲ್ಕು ದಿನಗಳ ಕಾಲ ಅದನ್ನು ಇಟ್ಟುಕೊಳ್ಳುತ್ತಿದ್ದರು.

   ಹದಿನಾಲ್ಕನೆಯ ದಿನ ಸಂಜೆಯಲ್ಲಿ ಆ ಪ್ರಾಣಿಯನ್ನು ಕೊಲ್ಲಲಾಗುತ್ತಿತ್ತು.

   ಅದರ ಸ್ವಲ್ಪ ರಕ್ತವನ್ನು ಬಾಗಿಲಿನ ಸುತ್ತಲೂ ಹಚ್ಚುತ್ತಿದ್ದರು.

   ಅದೇ ರಾತ್ರಿಯಲ್ಲಿ ಆ ಪ್ರಾಣಿಯನ್ನು ಬೆಂಕಿಯ ಮೇಲೆ ಸುಟ್ಟು ಕಹಿಯಾದ ಪಲ್ಯಗಳ ಮತ್ತು ಹುಳಿಯಿಲ್ಲದ ರೊಟ್ಟಿಯ ಜೊತೆಗೆ ತಿನ್ನುತ್ತಿದ್ದರು. ಇಡೀ ಪ್ರಾಣಿಯನ್ನು ತಿನ್ನುತ್ತಿದ್ದರು; ಒಂದು ಪಕ್ಷ ಮಿಕ್ಕಿದ್ದಲ್ಲಿ ಅದನ್ನು ಮುಂಜಾನೆಯೊಳಗಾಗಿ ಸುಟ್ಟುಬಿಡಬೇಕಿತ್ತು.

2. ಇಸ್ರಾಯೇಲರು ಈಜಿಪ್ಟನ್ನು ಬಿಟ್ಟು ಹೊರಡುವುದಕ್ಕಿಂತ ಮುಂಚೆ ಈಜಿಪ್ಟಿಯನ್ನರಿಂದ ಚಿನ್ನ, ಬೆಳ್ಳಿ ಮತ್ತು ವಸ್ತ್ರಗಳನ್ನು ಪಡೆದರು. ಅವರು ಈಜಿಪ್ಟಿನವರನ್ನು 'ಸುಲಿಗೆ ಮಾಡಿದರು' ಎಂದು ಬರೆಯಲ್ಪಟ್ಟಿರುವುದರಿಂದ ಬಹುಶಃ ಹೆಚ್ಚಿನ ಗಾತ್ರದಲ್ಲಿ ಅದನ್ನು ಪಡೆದುಕೊಂಡಿರಬಹುದು. ಇನ್ನೊಂದು ಕಡೆಯಲ್ಲಿ ಈಜಿಪ್ಟಿಯನ್ನರು ಇಸ್ರಾಯೇಲರನ್ನು ಸಂತೋಷದಿಂದ ಕಳುಹಿಸಿಕೊಟ್ಟು ಅವರು ಕೇಳಿದ್ದನ್ನು ಕೊಟ್ಟುಬಿಟ್ಟರು.

3. ನಿರ್ಗಮನದ ಸಮಯದಲ್ಲಿ ಕೇವಲ ಇಸ್ರಾಯೇಲರು ಮಾತ್ರ ಈಜಿಪ್ಟನ್ನು ಬಿಟ್ಟು ಬರಲಿಲ್ಲ. ವಿಮೋಚನಕಾಂಡ 12:38 ರಲ್ಲಿ ಇನ್ನೂ ಅನೇಕ ಇತರೆ ಜನರೂ ಅವರ ಸಂಗಡ ಹೋದರೆಂದು ನೋಡುತ್ತೇವೆ. ಬಹುಶಃ ಈ ಕಾರಣದ ನಿಮಿತ್ತ *ಪಸ್ಕ ಹಬ್ಬದ ನಿಯಮಗಳನ್ನು* ನೀಡಬೇಕಾಗಿರಬಹುದು (12:43–49).

4. ವ. 43 ರಲ್ಲಿ ಯಾವ ಅನ್ಯನೂ/ವಿದೇಶಿಯು (ವ. 48 ರಲ್ಲಿಯೂ ಇದೇ ಪದವು ಬಳಸಲ್ಪಟ್ಟಿದೆ) ಪಸ್ಕದ ಕುರಿಯನ್ನು ತಿನ್ನಬಾರದೆಂದು ನಿರಾಕರಿಸಲ್ಪಟ್ಟಿದ್ದರು. ಆದರೆ ವ. 48 ನ್ನು ಗಮನಿಸುವಾಗ ತನ್ನ ಕುಟುಂಬದಲ್ಲಿರುವ ಎಲ್ಲಾ ಗಂಡಸರಿಗೆ ಸುನ್ನತಿ ಮಾಡಿಸಿರುವ ಯಾವ ಅನ್ಯನಾದರೂ/ವಿದೇಶಿಯಾದರೂ ಇದರಲ್ಲಿ ಪಾಲ್ಗೊಳ್ಳಬಹುದು ಎಂಬುದನ್ನು ಕಾಣುತ್ತೇವೆ. ಇದರ ಮೂಲಕ ನಾವು ತಿಳಿದುಕೊಳ್ಳುವುದೇನೆಂದರೆ, ಪಸ್ಕಹಬ್ಬದ ಊಟವು ಒಂದು ಸಾಮುದಾಯಿಕ ಆಚರಣೆಯಾಗಿತ್ತು. ಹಾಗಾಗಿ ಇಸ್ರಾಯೇಲಿನ ಸಮುದಾಯಕ್ಕೆ ಸೇರಿದ ಎಲ್ಲರೂ – ಇದಕ್ಕೆ ಸಾಕ್ಷಿಯಾಗಿ ಎಲ್ಲಾ ಗಂಡಸರ ಸುನ್ನತಿಯಾಗಬೇಕಿತ್ತು – ಇದರಲ್ಲಿ ಪಾಲ್ಗೊಳ್ಳಬಹುದಾಗಿತ್ತು; ಇತರರಿಗೆ ಅನುಮತಿ ಇರಲಿಲ್ಲ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಚೊಚ್ಚಲ ಗಂಡು ಮಕ್ಕಳ ಮರಣವನ್ನು ಈಜಿಪ್ಟಿಯನ್ನರು ಯಾಕೆ ಅಂತಿಮವಾದ ನಾಶನವಾಗಿ ಕಂಡಿದ್ದಕ್ಕೆ ಎರಡು ಕಾರಣಗಳಿವೆ:

   1) ಆ ದಿನಗಳ ಸಂಪ್ರದಾಯದಲ್ಲಿ ವಂಶ ರೇಖೆಯು ಚೊಚ್ಚಲ ಮಗನ ಮೂಲಕ ಮುಂದುವರೆಯುತ್ತಿತ್ತು. ಇದೇ ಕಾರಣದಿಂದಾಗಿ ಜೇಷ್ಠ ಪುತ್ರನು ಅಥವಾ ಚೊಚ್ಚಲ ಮಗನು ತನ್ನ ತಂದೆಯ ಆಸ್ತಿಯಲ್ಲಿ ಎರಡರಷ್ಟು ಪಾಲನ್ನು ಹೊಂದುತ್ತಿದ್ದನು (ನೋಡಿರಿ ಧರ್ಮೋ. 21:17). ಹಾಗಾಗಿ ಒಬ್ಬ ಪುರುಷನ ನಿರೀಕ್ಷೆ ಮತ್ತು ಕನಸುಗಳು ಜೇಷ್ಠ ಪುತ್ರನೊಂದಿಗೆ ಹೊಂದಿಕೊಂಡಿದ್ದವು.

   2) ಜೇಷ್ಠ ಪುತ್ರನು ಕುಟುಂಬವನ್ನು ಪ್ರತಿನಿಧಿಸುತ್ತಿದ್ದನು. ಹಾಗಾಗಿ ಎಲ್ಲಾ ಜೇಷ್ಠ ಪುತ್ರರ ಮೇಲೆ ಬಂದ ನ್ಯಾಯತೀರ್ಪು ಇಡೀ ದೇಶದ ಮೇಲೆ ಬಂದ ನ್ಯಾಯತೀರ್ಪಿನ ಒಂದು ಸಂಕೇತವಾಗಿತ್ತು.

2. ಪಸ್ಕಹಬ್ಬದ ರಾತ್ರಿ *ಈಜಿಪ್ಟಿನ ದೇವರುಗಳಿಗೆಲ್ಲಾ ನಾನು ನ್ಯಾಯ ತೀರಿಸುವೆನು* ಎಂದು ದೇವರು ಹೇಳಿದನು (ವಿಮೋ. 12:12). ಇದು ಎರಡು ಸಂಗತಿಗಳನ್ನು ಉಲ್ಲೇಖಿಸುತ್ತದೆ ಎಂಬುದಾಗಿ ಕಾಣಬಹುದೆಂದು ನಾನು ಆಲೋಚಿಸುತ್ತೇನೆ:

   1) ಆ ರಾತ್ರಿಯಲ್ಲಿ ಎಲ್ಲಾ ಚೊಚ್ಚಲ ಮಕ್ಕಳು ಸಂಹರಿಸಲ್ಪಡುತ್ತಿರುವಾಗ ಈಜಿಪ್ಟಿನ ಎಲ್ಲಾ ದೇವರುಗಳಿಗೆ ಮುಖಭಂಗವಾಯಿತು. ಅವುಗಳು ಸ್ಪಷ್ಟವಾಗಿ ಅಶಕ್ತವಾಗಿದ್ದವು. ಅದಲ್ಲದೆ, ಈಗಾಗಲೇ ಬಂದಿದ್ದ ಬಾಧೆಗಳ ನಿಮಿತ್ತ ಈಜಿಪ್ಟಿನ ಹಲವು ಪ್ರಾಣಿ ದೇವರುಗಳು ಮುಖಭಂಗಗೊಂಡಿದ್ದವು ಮತ್ತು ನ್ಯಾಯತೀರಿಸಲ್ಪಟ್ಟಿದ್ದವು.

   2) ಈಜಿಪ್ಟಿಯನ್ನರು ಎಲ್ಲಾ ರೀತಿಯ ಪ್ರಾಣಿ ದೇವರುಗಳನ್ನು ಆರಾಧಿಸುತ್ತಿದ್ದರು. ಈ ದೇವರುಗಳನ್ನು ಪ್ರತಿನಿಧಿಸುತ್ತಿದ್ದ ಎಲ್ಲಾ ಪ್ರಾಣಿಗಳ ಚೊಚ್ಚಲ ಜೀವಿಗಳು ಸಂಹರಿಸಲ್ಪಟ್ಟಾಗ ಅದು ಈಜಿಪ್ಟಿನ ಎಲ್ಲಾ ದೇವರುಗಳ ಮೇಲೆ ಬಂದ ನ್ಯಾಯತೀರ್ಪಾಗಿತ್ತು.

3. ಪ್ರತಿಯೊಬ್ಬ ಚೊಚ್ಚಲ ಗಂಡುಮಗುವನ್ನು ತನಗಾಗಿ ಪ್ರತಿಷ್ಠೆಪಡಿಸಬೇಕೆಂದು ದೇವರು ಮೋಶೆಗೆ ಹೇಳಿದನು. ಅದರ ಹಿನ್ನಲೆ ಹೀಗಿದೆ:

   1) ದೇವರು ಇಸ್ರಾಯೇಲನ್ನು ತನ್ನ ಜೇಷ್ಠಪುತ್ರನನ್ನಾಗಿ ದತ್ತು ತೆಗೆದುಕೊಂಡಿದ್ದನು: *ಯೆಹೋವನು ಹೀಗೆ ಹೇಳುತ್ತಾನೆ, 'ಇಸ್ರಾಯೇಲು ನನ್ನ ಮಗನು. ಅವನು ನನ್ನ ಜೇಷ್ಠಪುತ್ರನೇ'* (ವಿಮೋ. 4:22).

2) ದೇವರು ಇಸ್ರಾಯೇಲರ ಎಲ್ಲಾ ಜೇಷ್ಠಪುತ್ರರನ್ನು (ಪ್ರಾಣಿ ಮತ್ತು ಮನುಷ್ಯರು) ಹತ್ತನೆಯ ಬಾಧೆಯಿಂದ ಕೊಲ್ಲಲ್ಪಡದಂತೆ ರಕ್ಷಿಸಿದ್ದನು.

ಪರಿಣಾಮವಾಗಿ ಪ್ರತಿಯೊಬ್ಬ ಜೇಷ್ಠಪುತ್ರನು (ಪ್ರಾಣಿಯಾಗಲಿ ಅಥವಾ ಪುರುಷನಾಗಲಿ) ಆತನಿಗೆ ಸಂಬಂಧಪಟ್ಟಿದ್ದನು. ಪ್ರಾಣಿಗಳು ಬಲಿ ಕೊಡಲ್ಪಡುತ್ತಿದ್ದವು. ಆದರೆ ಚೊಚ್ಚಲ ಗಂಡು ಮಕ್ಕಳು 'ಪ್ರತಿಷ್ಠೆ ಪಡಿಸಲ್ಪಡುತ್ತಿದ್ದರು' ಮತ್ತು ಅವರ ಸ್ಥಳದಲ್ಲಿ ಪ್ರಾಣಿಗಳು ಬಲಿ ಅರ್ಪಿಸಲ್ಪಡುತ್ತಿದ್ದವು. ಹಾಗಾಗಿ ಆ ಮೊದಲ ಪಸ್ಕಹಬ್ಬದ ರಾತ್ರಿಯಲ್ಲಿ ದೇವರ ಪ್ರೀತಿಯ ಕೃತ್ಯದ ನೆನಪಿನಾರ್ಥವಾಗಿ ಇಸ್ರಾಯೇಲರು ತಮ್ಮ ಜನರ ಮತ್ತು ಪ್ರಾಣಿಗಳ ಚೊಚ್ಚಲ ಗಂಡು ಮಗುವನ್ನು ದೇವರಿಗಾಗಿ ಸಮರ್ಪಿಸುತ್ತಿದ್ದರು.

**ವಿಮೋಚನಕಾಂಡ ಉತ್ತರಗಳು 12: ವಿಮೋಚನಕಾಂಡದಲ್ಲಿ ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನಗಳು**

**ಆ. ಪ್ರಶ್ನೆಗಳಿಗೆ ಉತ್ತರಗಳು**

1. ಈ ಕೆಳಗಿನ ವಚನಗಳಲ್ಲಿ ಕಂಡಂತೆ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನಗಳ ಒಂದು ಪಟ್ಟಿಯು ಹೀಗಿದೆ:

    4) ಆದಿ 12:2–3: ಆತನನ್ನು ದೊಡ್ಡ ಜನಾಂಗವನ್ನಾಗಿ ಮಾಡುವುದು, ಆತನ ಹೆಸರನ್ನು ಪ್ರಸಿದ್ಧಪಡಿಸುವುದು, ಆತನನ್ನು ಆಶೀರ್ವಾದವಾಗಿ ಮಾಡುವುದು, ಆತನ ಮೂಲಕವಾಗಿ ಭೂಲೋಕದ ಎಲ್ಲಾ ಜನಾಂಗಗಳು ಆಶೀರ್ವದಿಸಲ್ಪಡುವುದು

    5) ಆದಿ 12:7: ಆತನಿಗೆ ಮತ್ತು ಆತನ ಸಂತತಿಗೆ ಕಾನಾನ್ ದೇಶವನ್ನು ಕೊಡುವುದು

    6) ಆದಿ 13:14–17: ಆತನಿಗೆ ಮತ್ತು ಆತನ ಸಂತತಿಗೆ ಇಡೀ ಕಾನಾನ್ ದೇಶವನ್ನು ಶಾಶ್ವತವಾಗಿ ಕೊಡುವುದು ಮತ್ತು ಆತನ ಸಂತತಿಯನ್ನು ಅಸಂಖ್ಯರಾಗಿ ಮಾಡುವುದು

2. ರೇಖಾಪಟ್ಟಿಯು ಈ ವಾಗ್ದಾನಗಳನ್ನು ಮೇಲಿನ ಚೌಕದಲ್ಲಿ ಹೀಗೆ ಬಿಂಬಿಸುತ್ತದೆ:

    1) **'ದೇಶ'** ಎಂಬ ಪದವು ಕಾನಾನ್ ದೇಶವನ್ನು ಉಲ್ಲೇಖಿಸುತ್ತದೆ, ಅದು ವಾಗ್ದಾನ ಮಾಡಲ್ಪಟ್ಟ ದೇಶ

    2) **'ದೊಡ್ಡ ಜನಾಂಗ'** ಎಂಬುದು ಒಂದು ದೊಡ್ಡ ರಾಷ್ಟ್ರವನ್ನು ಮತ್ತು ಅಸಂಖ್ಯ ಸಂತತಿಯನ್ನು ಉಲ್ಲೇಖಿಸುತ್ತದೆ

    3) **'ಭೂಲೋಕಕ್ಕೆ ಆಶೀರ್ವಾದ'** ಎಂಬುದು ಆತನ ಮೂಲಕವಾಗಿ ಭೂಲೋಕದ ಎಲ್ಲಾ ಜನಾಂಗಗಳು ಆಶೀರ್ವದಿಸಲ್ಪಡುವುದನ್ನು ಉಲ್ಲೇಖಿಸುತ್ತದೆ

3. ನಾನು ರೇಖಾಪಟ್ಟಿಯ ಕೆಳಗಿನ ಭಾಗವನ್ನು ಹೀಗೆ ಅರ್ಥವಿವರಿಸುತ್ತೇನೆ:

    1) ಮಧ್ಯದ ಚೌಕಾಕಾರವು (ನ್ಯಾಯತೀರ್ಪು/ರಕ್ಷಣೆಯ ಮಹಾಕಾರ್ಯಗಳು, ವಿಮೋಚನಕಾಂಡ 6–12) ದೇಶದ ಮತ್ತು ಒಂದು ಪ್ರಖ್ಯಾತಿಯುಳ್ಳ ಹೆಸರಿನ ವಾಗ್ದಾನಗಳು ನೆರವೇರುವಂತೆ ದೇವರು ಕಾರ್ಯಾನ್ಮುಖನಾಗಿರುವುದನ್ನು ತೋರಿಸುತ್ತದೆ. ಇಸ್ರಾಯೇಲರು ವಾಗ್ದಾನದೇಶಕ್ಕೆ ಪ್ರಯಾಣಮಾಡುವುದಕ್ಕಾಗಿ ಈಜಿಪ್ಟಿಯನ್ನರು ಅವರನ್ನು ಬಿಡಲು ಅವರ ಮೇಲೆ ನ್ಯಾಯತೀರ್ಪು ಬರುವುದು ಅವಶ್ಯವಾಗಿತ್ತು. ಈ ನ್ಯಾಯತೀರ್ಪು ಅವರು ಇಸ್ರಾಯೇಲಿನ (ಅಂದರೆ ಅಬ್ರಹಾಮ, ಇಸ್ಸಾಕ ಮತ್ತು ಯಾಕೋಬನ) ದೇವರ ಶ್ರೇಷ್ಟತೆಯನ್ನು ಅರಿತುಕೊಳ್ಳುವಂತೆಯೂ ಸಹ ಮಾಡಿತು. ದೇವರ ಅದೇ ಮಹಾಕಾರ್ಯಗಳು ಇಸ್ರಾಯೇಲರ ವಿಮೋಚನೆಯನ್ನು (ಅಥವಾ ರಕ್ಷಣೆಯನ್ನು) ಪರಿಣಾಮವಾಗಿ ತಂದಿತು.

    2) ಅತ್ಯಂತ ಕೆಳಗಿರುವ ಎರಡು ಚೌಕಗಳು ಮೇಲಿರುವ ಅಂಶಗಳ ಪರಿಣಾಮವನ್ನು ತೋರಿಸುತ್ತವೆ.

4. ಈ ಹಂತದವರೆಗೆ ವಿಮೋಚನಕಾಂಡದಲ್ಲಿ ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನಗಳು ಇಷ್ಟರ ಮಟ್ಟಿಗೆ ನೆರವೇರಲ್ಪಟ್ಟಿವೆ:

    1) ಇಸ್ರಾಯೇಲರು ಈಜಿಪ್ಟಿನಲ್ಲಿ 430 ವರ್ಷಗಳ ಕಾಲ ವಾಸವಾಗಿದ್ದ ಅವಧಿಯಲ್ಲಿ ಅತ್ಯಧಿಕವಾಗಿ ಅಸಂಖ್ಯರಾದರು (ವಿಮೋ. 1:7).

    2) ಅಂತಿಮವಾಗಿ ಇಸ್ರಾಯೇಲರು ವಾಗ್ದಾನದೇಶದ ಕಡೆಗೆ ಪ್ರಯಾಣ ಮಾಡತೊಡಗಿದರು.

    3) ಭೂಲೋಕಕ್ಕೆ ಆಶೀರ್ವಾದದ ವಾಗ್ದಾನವು ಯೇಸುವಿನ ಮೂಲಕ ಮಾತ್ರ ನೆರವೇರುವುದಾಗಿತ್ತು.

**ವಿಮೋಚನಕಾಂಡ ಉತ್ತರಗಳು 13: ಸಮುದ್ರವನ್ನು ದಾಟಿದ್ದು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ದೇವರು ಇಸ್ರಾಯೇಲರನ್ನು ಪಾಲೆಸ್ತೀನಿಗೆ ಸಮೀಪವಿದ್ದ ಮಾರ್ಗದಲ್ಲಿ ನಡೆಸಲಿಲ್ಲ. ಆ ರಸ್ತೆಯು ವೈರಿಗಳಾದ ಫಿಲಿಷ್ಟಿಯರ ಪ್ರದೇಶವನ್ನು ಹಾದು ಹೋಗುತ್ತಿತ್ತು ಮತ್ತು ಇಸ್ರಾಯೇಲರು ಫಿಲಿಷ್ಟಿಯರ ವಿರುದ್ಧ ಯುದ್ಧಕ್ಕೆ ಹೋಗಬೇಕಾಗಿ ಬಂದರೆ ಅವರು ಹಿಂತಿರುಗಿ ಈಜಿಪ್ಟಿಗೆ ಹಿಂದಿರುಗುವರು ಎಂದು ದೇವರು ಅಂದುಕೊಂಡನು. ಹಾಗಾಗಿ ಅದರ ಬದಲು ದೇವರು ಅವರನ್ನು ಕೆಂಪು ಸಮುದ್ರದ ಕಡೆಗೆ ಮರುಭೂಮಿಯ ಮಾರ್ಗವಾಗಿ ಕರೆದೊಯ್ದದನು.

2. ಇಸ್ರಾಯೇಲರನ್ನು ಹೋಗಗೊಡಿಸುವುದರ ಕುರಿತು ಫರೋಹನು ತನ್ನ ಮನಸ್ಸನ್ನು ಬದಲಾಯಿಸಿಕೊಂಡನು, ಯಾಕೆಂದರೆ ಈಗ ತನ್ನ ದೇಶವು ಅವರಿಂದ ದುಡಿಸಿಕೊಳ್ಳುತ್ತಿದ್ದದ್ದನ್ನು ಕಳೆದುಕೊಂಡಿತ್ತು.

3. ಫರೋಹನ ಬದಲಾದ ಮನಸ್ಸನ್ನು ದೇವರ ದೃಷ್ಟಿಕೋನದಿಂದ ಈ ಹೇಳಿಕೆಗಳಿಂದ ವಿವರಿಸಲಾಗಿದೆ:

   *ನಾನು ಅವನ (ಫರೋಹನ) ಹೃದಯವನ್ನು ಕಠಿಣ ಮಾಡುವೆನು* (ವ. 4)

   ಈಜಿಪ್ಟಿನ ಅರಸನಾದ ಫರೋಹನ ಹೃದಯವನ್ನು ಯೆಹೋವನು ಕಠಿಣಪಡಿಸಿದನು (ವ. 8)

   ದೈವಶಾಸ್ತ್ರೀಯವಾಗಿ ಈ ಎರಡು ಹೇಳಿಕೆಗಳನ್ನು ಅರ್ಥಮಾಡಿಕೊಳ್ಳಲು ಇರುವ ಅತ್ಯುತ್ತಮವಾದ ಮಾರ್ಗವೆಂದರೆ, ಫರೋಹನು ತಾನು ಈಗಾಗಲೇ ಮಾಡಬೇಕೆಂದು ನಿರ್ಧರಿಸಿದ್ದನ್ನು ಮಾಡಲು ದೇವರು ಅನುಮತಿಸಿದನು. ಈ ರೀತಿಯಾಗಿ: ಫರೋಹನು ಇಸ್ರಾಯೇಲರ ಕುರಿತು ತನ್ನ ಮನಸ್ಸನ್ನು ಬದಲಾಯಿಸಿಕೊಂಡು ಅವರನ್ನು ಪುನಃ ಈಜಿಪ್ಟಿಗೆ ಕರೆತರುವಂತೆ ತನ್ನ ಸೈನ್ಯವನ್ನು ಕಳುಹಿಸಿಕೊಟ್ಟನು. ದೇವರು ಅವನನ್ನು ತಡೆಯಲಿಲ್ಲ, ಬದಲಾಗಿ ಆತನು ಮುಂದುವರೆಯುವಂತೆ ಅನುಮತಿಸಿದನು. ಹಾಗಾಗಿ 'ದೇವರು ಫರೋಹನ ಮನಸ್ಸನ್ನು ಕಠಿಣ ಮಾಡಿದನು'.

   ಈಜಿಪ್ಟಿನ ಕುದುರೆ ಸವಾರರು ಇಸ್ರಾಯೇಲರನ್ನು ಬೆನ್ನಟ್ಟುತ್ತಾ ಸಮುದ್ರದೊಳಗೆ ಇಳಿದಾಗ ಇದೇ ರೀತಿಯ ಹೇಳಿಕೆಯನ್ನು ಕಾಣುತ್ತೇವೆ. ದೇವರ ದೃಷ್ಟಿಕೋನದಿಂದ ಅವರ ತೀರ್ಮಾನವನ್ನು ಹೀಗೆ ವ್ಯಕ್ತಪಡಿಸಲಾಗಿದೆ:

   *ನಾನು ಈಜಿಪ್ಟಿನವರ ಹೃದಯವನ್ನು ಕಠಿಣ ಮಾಡುತ್ತೇನೆ. ಅವರು ಇವರನ್ನು ಹಿಂದಟ್ಟುವರು* (ವ. 17).

4. ಜನರು ಸಮುದ್ರವನ್ನು ದಾಟುವುದಕ್ಕಿಂತ ಮುಂಚೆ ರಾತ್ರಿಯಲ್ಲಿ ಅವರ ಮುಂದೆ ಇದ್ದ ಮೇಘಸ್ತಂಭವು ತನ್ನ ಸ್ಥಳವನ್ನು ಬಿಟ್ಟು ಅವರ ಹಿಂದಕ್ಕೆ ಬಂದು ನಿಂತುಕೊಂಡಿತು. ಅದು ಈಜಿಪ್ಟಿಯನ್ ಸೇನೆಯ ಮತ್ತು ಇಸ್ರಾಯೇಲರ ನಡುವೆ ಕತ್ತಲನ್ನು ತಂದಿತು. ಆದರೆ ಇಸ್ರಾಯೇಲರ ಮುಂದೆ ಬೆಳಕು ಇದ್ದುದ್ದರಿಂದ ಅವರು ಸಮುದ್ರವನ್ನು ದಾಟುವಾಗ ಸ್ಪಷ್ಟವಾಗಿ ಎಲ್ಲವನ್ನೂ ಕಾಣಬಹುದಾಗಿತ್ತು.

5. ದೇವರು ಈಜಿಪ್ಟಿಯನ್ನರಿಗೆ ಮಾಡಿದ ಸಂಗತಿಯನ್ನು ಇಸ್ರಾಯೇಲರು ಕಂಡಾಗ, ಅವರು *ಯೆಹೋವನಿಗೆ ಭಯಪಟ್ಟು ಯೆಹೋವನಲ್ಲಿಯೂ ಆತನ ಸೇವಕನಾದ ಮೋಶೆಯಲ್ಲಿಯೂ ನಂಬಿಕೆ ಇಟ್ಟರು* (14:31).

6. ಸಮುದ್ರವನ್ನು ದಾಟುವಾಗ ನಡೆದ ಸಂಗತಿಯಿಂದ ದೇವರು 'ಫರೋಹನ, ಆತನ ರಥಗಳ ಮತ್ತು ಆತನ ಕುದುರೆ ಸವಾರರ ಮೂಲಕ ಮಹಿಮೆ ಹೊಂದಿದನು' (ವ. 4, 17–18).

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಈ ಅಧ್ಯಯನದಲ್ಲಿ ಇಸ್ರಾಯೇಲರ ಮನಸ್ಥಿತಿಯಲ್ಲಿ ಈ ರೀತಿಯ ಬದಲಾವಣೆಗಳು ಉಂಟಾದವು:

   1) ಜಯಭೇರಿಯಾದರು: ಇಸ್ರಾಯೇಲರು ಜಯಭರಿತರಾಗಿ, ಯುದ್ಧಸನ್ನದ್ಧರಾಗಿ ಯೋಸೇಫನ ಎಲುಬುಗಳನ್ನು ತಮ್ಮೊಂದಿಗೆ ತೆಗೆದುಕೊಂಡು ಈಜಿಪ್ಟಿನಿಂದ ಹೊರಟರು (13:18–19)

   2) ಭಯಭೀತರಾಗಿ ದೋಷಾರೋಪಣೆ ಮಾಡಿದರು: ಈಜಿಪ್ಟಿನ ಸೇನೆಯು ತಮ್ಮನ್ನು ಬೆನ್ನಟ್ಟುತ್ತಾ ಸಮೀಪಿಸುತ್ತಿರುವುದನ್ನು ಕಂಡಾಗ ಅವರು ಭಯಬ್ರಾಂತರಾದರು. ಅವರು ತಮ್ಮ ಪಾಡನ್ನು ಕಂಡು ಮೋಶೆಯ ಮೇಲೆ ಆರೋಪಗಳನ್ನು ಸುರಿಸಿದರು ಮತ್ತು ತಾವು ಈಜಿಪ್ಟಿನ ಬಂಧನದಲ್ಲಿ ಇದ್ದಿದ್ದರೆ ಉತ್ತಮವಾಗಿತ್ತು ಎಂದರು (14:10–12).

   3) ಭರವಸವಿಟ್ಟು ನಂಬಿದರು: ಈಜಿಪ್ಟಿಯನ್ನರು ಸಮುದ್ರದಲ್ಲಿ ನಾಶವಾದುದ್ದನ್ನು ಮತ್ತು ತಾವು ಸುರಕ್ಷಿತವಾಗಿ ಇನ್ನೊಂದೆಡೆ ಇದ್ದುದ್ದನ್ನು ಕಂಡಾಗ, ಅವರು ದೇವರ ಶಕ್ತಿಯನ್ನು ಅರ್ಥಮಾಡಿಕೊಂಡು ಆತನ ಸೇವಕನಾದ ಮೋಶೆಯ ಮೇಲೆ ಭರವಸವಿಟ್ಟರು (14:31).

   4) ಸಂತೋಷಭರಿತರಾದರು: ಕಟ್ಟಕಡೆಗೆ ಅವರು ಸ್ತುತಿ ಗೀತೆಯ ಮೂಲಕ ಮತ್ತು ತಾಳಗಳನ್ನು ಹಿಡಿದುಕೊಂಡು ನಾಟ್ಯವಾಡುತ್ತಾ ದೇವರ ಜಯವನ್ನು ಆಚರಿಸಿದರು.

2. ಈ ಅಧ್ಯಯನದಲ್ಲಿ ನಾವು ಮೋಶೆಯ ಕುರಿತು ಒಂದು ಸಕರಾತ್ಮಕವಾದ ಚಿತ್ರಣವನ್ನು ಕಾಣುತ್ತೇವೆ:

    1) ಆತನು ವಚನಬದ್ಧನು: ಆತನು ತನ್ನ ಪೂರ್ವಜರು ಯೋಸೇಫನಿಗೆ ಆತನ ದ್ರವ್ಯಗಳಿಂದ ಸಂರಕ್ಷಿಸಲ್ಪಟ್ಟ ಶವವನ್ನು (ಆತನ ಎಲುಬುಗಳನ್ನು) ಈಜಿಪ್ಟನ್ನು ಬಿಟ್ಟು ಹೋಗುವಾಗ ತಮ್ಮೊಂದಿಗೆ ತೆಗೆದುಕೊಂಡು ಹೋಗುತ್ತೇವೆ ಎಂದು ಮಾಡಿದ ಪ್ರಮಾಣವನ್ನು ನೆರವೇರಿಸುತ್ತಾನೆ (13:19).

    2) ಆತನು ತನ್ನ ಪ್ರವಾದನಾ ಪಾತ್ರಕ್ಕೆ ನಂಬಿಗಸ್ತನಾಗಿ ಜೀವಿಸಿದನು. ಆತನು ದೇವರ ಮತ್ತು ಇಸ್ರಾಯೇಲರ ನಡುವೆ ಮಧ್ಯವರ್ತಿ ವಹಿಸುವುದರ ಮೂಲಕ ಅದನ್ನು ಮಾಡಿದನು. ಈ ಅಧ್ಯಯನದುದ್ದಕ್ಕೂ ದೇವರು ಮೋಶೆಯೊಂದಿಗೆ ಮತ್ತು ಮೋಶೆಯ ಮೂಲಕ ಜನರೊಂದಿಗೆ ಹೇಗೆ ಮಾತನಾಡಿದನು ಎಂಬುದನ್ನು ಕಾಣುತ್ತೇವೆ (14:1–2; 13–15; 26).

    3) ದೆಸೆಗೆಟ್ಟ ಪರಿಸ್ಥಿತಿಯಂತೆ ಕಂಡಾಗಲೂ ಆತನು ನಂಬಿಗಸ್ತನಾಗಿ ದೇವರ ಆಜ್ಞೆಗಳನ್ನು ಕೇಳಿಸಿಕೊಂಡನು ಮತ್ತು ಅವುಗಳನ್ನು ಪಾಲಿಸಿದನು (13:17–18; 14:21, 27).

    4) ಆತನು ಜನರನ್ನು ನಡೆಸುತ್ತಾ (13:18; 14:4), ಉತ್ತೇಜಿಸುತ್ತಾ ಮತ್ತು ಬುದ್ಧಿ ಹೇಳುತ್ತಾ (14:13–14) ತನ್ನ ನಾಯಕತ್ವ ಜವಾಬ್ದಾರಿಗಳಿಗೆ ಯೋಗ್ಯನಾಗಿ ಜೀವಿಸಿದನು.

    5) ಇದರ ಪರಿಣಾಮವಾಗಿ ಆತನು ದೇವರಿಂದ ಬಲವಾಗಿ ಉಪಯೋಗಿಸಲ್ಪಟ್ಟನು. ಅದರ ಮೂಲಕ ಆತನು ಜನರ ನಂಬಿಕೆ ಮತ್ತು ಭರವಸೆಯನ್ನು ಸಾಧಿಸಿಕೊಂಡನು (14:31).

**ವಿಮೋಚನಕಾಂಡ ಉತ್ತರಗಳು 14: ಮೋಶೆ ಮತ್ತು ಮಿರ್ಯಾಮಳ ಗೀತೆಗಳು**

**ಈ. ಪ್ರಶ್ನೆಗಳಿಗೆ**

1. ಮೋಶೆಯ ಗೀತೆಯನ್ನು (ವ. 1–18) ಎರಡು ಮುಖ್ಯ ಭಾಗವಾಗಿ ಹೀಗೆ ವಿಂಗಡಿಸಬಹುದು:

   ಮೊದಲ ಭಾಗವು (ವ. 1–12) ದೇವರು ಕೆಂಪು ಸಮುದ್ರದ ಬಳಿ ಇಸ್ರಾಯೇಲರನ್ನು ಈಜಿಪ್ಟಿಯನ್ನರಿಂದ ಹೇಗೆ ವಿಮೋಚಿಸಿದನು ಎಂಬುದರ ಕಥೆಯನ್ನು ಹೇಳುತ್ತದೆ.

   ಎರಡನೆಯ ಭಾಗವು (ವ. 13–18) ದೇವರು ಭವಿಷ್ಯದಲ್ಲಿ ಕಾನಾನನ್ನು ಇಸ್ರಾಯೇಲರಿಗೆ ಹೇಗೆ ಕೊಡುವನು ಎಂಬುದರ ಕುರಿತಾಗಿದೆ.

2. ಈ ಕೆಳಗಿನ ಹೇಳಿಕೆಗಳನ್ನು ಹೀಗೆ ವಿವರಿಸಬಹುದು:

   3) *ಯೆಹೋವನು ನನ್ನ ಬಲವೂ ಕೀರ್ತನೆಯೂ ಆಗಿದ್ದಾನೆ. ಆತನು ನನ್ನ ರಕ್ಷಣೆಯಾದನು (ವ. 2):* ಯೆಹೋವನು ನನ್ನನ್ನು ರಕ್ಷಿಸಿದ್ದಾನೆ. ಆತನು ನನ್ನನ್ನು ರಕ್ಷಿಸಿದಾಗ ನಿಜವಾಗಲೂ ತನ್ನ ಶಕ್ತಿಯನ್ನು ತೋರಿಸಿದ್ದಾನೆ. ಆತನು ನನಗಾಗಿ ಮಾಡಿರುವ ಸಂಗತಿಗಾಗಿ ನಾನು ಹಾಡುತ್ತಾ ಆತನನ್ನು ಸ್ತುತಿಸುವೆನು.

   4) *ದೇವರುಗಳಲ್ಲಿ ಯೆಹೋವನೇ, ನಿನ್ನ ಹಾಗೆ ಯಾರಿದ್ದಾರೆ? ಪರಿಶುದ್ಧತ್ವದಲ್ಲಿ ಮಹಿಮೆ ಹೊಂದಿದವನೂ ಸ್ತೋತ್ರಗಳಲ್ಲಿ ಭಯಂಕರನೂ ಅದ್ಭುತಗಳನ್ನು ಮಾಡುವಾತನೂ ಆದ ನಿನ್ನ ಹಾಗೆ ಯಾರಿದ್ದಾರೆ? (ವ. 11):* ಯೆಹೋವನಂತೆ ಇನ್ನೊಬ್ಬನಿಲ್ಲ. ಅವಿಶ್ವಾಸಿಗಳ 'ದೇವರುಗಳು' ಎಂದು ಕರೆಸಿಕೊಳ್ಳುವ ವಿಗ್ರಹಗಳಿಗಿಂತ ವ್ಯತ್ಯಾಸವಾಗಿರುವ ಆತನು ಪರಿಶುದ್ಧನೂ, ಘನತೆಯುಳ್ಳವನೂ, ಮಹಿಮೆಯುಳ್ಳವನೂ ಆಗಿದ್ದು, ತನ್ನ ಜನರ ಹೃದಯಗಳಲ್ಲಿ ಭಯಭಕ್ತಿಯನ್ನು ಹುಟ್ಟಿಸುವವನಾಗಿದ್ದಾನೆ. ಆತನು ಸೂಚಕಕಾರ್ಯ ಮತ್ತು ಅದ್ಭುತಕಾರ್ಯಗಳನ್ನು ಮಾಡಲು ಶಕ್ತನಾಗಿದ್ದಾನೆ. ನಮ್ಮ ಕರ್ತನು ಅಪ್ರತಿಮನು! ಕರ್ತನೇ, ನಿನ್ನನ್ನು ಇತರೆ ದೇವರುಗಳೊಂದಿಗೆ ಹೋಲಿಸುವುದು ಒಂದು ದೊಡ್ಡ ಪಾಪವೇ ಸರಿ!

3. ಹಿಬ್ರೂ ಪದ್ಯವು ಸಮನಾರ್ಥ ಪದಗಳ ಮತ್ತು ಹೇಳಿಕೆಗಳ ವಿಶಾಲವಾದ ಬಳಕೆಯನ್ನು ಮಾಡುತ್ತದೆ. ಮೋಶೆಯ ಗೀತೆಯಿಂದ ಇದಕ್ಕೆ ಕೆಲವು ಉದಾಹರಣೆಗಳನ್ನು ಹೀಗಿವೆ (ವ. 1–18):

   1) ವಚನ 2: *ಆತನನ್ನು ಕೊಂಡಾಡುವೆನು ... ಆತನನ್ನು ಘನಪಡಿಸುವೆನು*

   2) ವಚನ 5: *ಆಳವಾದ ಜಲರಾಶಿ ... ಸಮುದ್ರದ ತಳ*

   *3)* ವಚನ 8: *ಒಟ್ಟುಗೂಡಿದವು ... ರಾಶಿಯಂತೆ*

   4) ವಚನ 14–15: *ದಿಗ್ಭ್ರಮೆಗೊಳ್ಳುವರು ... ಕಂಪನವು ... ಭಯವೂ ಹೆದರಿಕೆಯೂ ... ಸ್ತಬ್ದರಾಗುವರು*

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಮೋಶೆಯ ಗೀತೆಯನ್ನು (15:1–18) ಮತ್ತು ಮಿರ್ಯಾಮಳ ಗೀತೆಯನ್ನು (15:21) ಅಭ್ಯಸಿಸಿರಿ:

   1) ಕೆಲವು ರೂಪಕಾಲಂಕಾರಗಳನ್ನು ಹೀಗೆ ಅರ್ಥಮಾಡಿಕೊಳ್ಳತಕ್ಕದ್ದು:

      - *ನಿನ್ನ ಬಲಗೈ ಶತ್ರುವನ್ನು ಜಜ್ಜಿ ಪುಡಿಮಾಡಿತು* (ವ. 6): ದೇವರು ಜಯಭರಿತನಾದನು.
      - *ನಿನಗೆ ವಿರೋಧವಾಗಿ ಎದ್ದವರನ್ನು ಕೆಡವಿ ಬಿಟ್ಟಿರುವೆ* (ವ. 7): ದೇವರು ತನ್ನ ಶತ್ರುಗಳ ಮೇಲೆ ಜಯಿಸಿದನು.
      - *ನೀನು ಬೀಸಿದ ಬಿರುಸಾದ ಗಾಳಿಯಿಂದ* (ವ. 8): ದೇವರು ತನ್ನ ಬಲವಾದ ಗಾಳಿಯನ್ನು ಕಳುಹಿಸಿದನು.
      - *ಭೂಮಿಯು ಅವರನ್ನು ನುಂಗಿತು* (ವ. 12): ಅವರು ನಾಶವಾದರು
      - *ಕಾನಾನಿನ ನಿವಾಸಿಗಳೆಲ್ಲಾ ಕರಗಿ ಹೋಗುವರು* (ವ. 15): ಅವರು ವಶಪಡಿಸಿಕೊಳ್ಳಲು ಬರುವವರನ್ನು ತಡೆಯಲಾಗದೆ ಸುಲಭವಾಗಿ ಸೆರೆಯಾಗುವರು

   2) ದೇವರನ್ನು ಮನುಷ್ಯನೆಂಬಂತೆ ವರ್ಣಿಸುವ ಕೆಲವು ಮನುಷ್ಯತಾರೋಪಣೆಗಳು ಹೀಗಿವೆ:

      - *ಯೆಹೋವನು ಯುದ್ಧವೀರನು* (ವ. 3)

- *ನಿನ್ನ ಬಲಗೈ ಶತ್ರುವನ್ನು ಜಜ್ಜಿ ಪುಡಿಮಾಡಿತು* (ವ. 6)
- *ನಿನ್ನ ಶ್ವಾಸ ಊದಿದಾಗ* (ವ. 10)
- *ನಿನ್ನ ಬಲಗೈಯನ್ನು ಚಾಚಲು* (ವ. 12)
- *ನಿನ್ನ ಬಾಹುವಿನ ದೊಡ್ಡಸ್ತಿಕೆಯಿಂದ* (ವ. 16)

3) ಸಮಾಂತರತೆಗೆ ಮೂರು ಉದಾಹರಣೆಗಳು ಇಲ್ಲಿವೆ:

- ವಚನ 2 ಸಮಾಂತರತೆಗೆ ಒಂದು ಉದಾಹರಣೆಯಾಗಿದೆ: ಆತನು ನನ್ನ ದೇವರು. ಆತನನ್ನು ಕೊಂಡಾಡುವೆನು, ಎಂಬುದು ಹೆಚ್ಚು ಕಡಿಮೆ ಅದರ ಮುಂದಿನ ಸಾಲಿನಲ್ಲಿ ಬರುವ ಆತನು ನನ್ನ ತಂದೆಯ ದೇವರು, ನಾನು ಆತನನ್ನು ಘನಪಡಿಸುವೆನು ಎಂಬ ಅರ್ಥವನ್ನೇ ಕೊಡುತ್ತದೆ.
- ವಚನ 8 ಈ ರೀತಿಯಲ್ಲಿ ರಚಿಸಲಾಗಿದೆ: ಅದು ರೂಪಕಾಲಂಕಾರದ ಮತ್ತು ಮನುಷ್ಯತಾರೋಪ 'ಹೇಳಿಕೆಯೊಂದಿಗೆ' (ನೀನು ಬೀಸಿದ ಬಿರುಸಾದ ಗಾಳಿ) ಪ್ರಾರಂಭಿಸುತ್ತದೆ, ಅದರ ನಂತರ ಮೂರು ಸಮಾಂತರತೆಯುಳ್ಳ ರೂಪಕಾಲಂಕಾರಿಕ ಹೇಳಿಕೆಗಳು ಬರುತ್ತವೆ (ನೀರು ಒಟ್ಟುಗೂಡಿದವು. ಪ್ರವಾಹಗಳು ರಾಶಿಯಂತೆ ನಿಂತವು; ಜಲರಾಶಿಗಳು ಸಮುದ್ರದ ಮಧ್ಯದಲ್ಲಿ ಗಟ್ಟಿಯಾದವು). ಹಾಗಾಗಿ ಈ ವಚನವು ಸಮಾಂತರತೆಗೆ ಇನ್ನೊಂದು ಉದಾಹರಣೆಯಾಗಿದೆ.
- ಪಲ್ಲವಿಯು (ವ. 21, ವ. 1ನ್ನು ಹೋಲಿಸಿರಿ) ಸಮಾಂತರತೆಗೆ ಒಂದು ಉದಾಹರಣೆಯಾಗಿದೆ, *ನಾನು ಯೆಹೋವನಿಗೆ ಹಾಡುತ್ತೇನೆ* ಎಂಬ ಪ್ರೋತ್ಸಾಹಕ್ಕೆ ಹೆಚ್ಚಿನ ಅಂಶಗಳನ್ನು ಹೀಗೆ ಸೇರಿಸಲಾಗಿದೆ: ಮೊದಲು ನಾವು ಪ್ರೋತ್ಸಾಹಕ್ಕೆ ಕಾರಣವನ್ನು ಕಾಣುತ್ತೇವೆ (*ಏಕೆಂದರೆ ಆತನು ಪ್ರಭಾವದಿಂದ ಜಯಶಾಲಿಯಾದನು*); ನಂತರ ನಮಗೆ 'ಕಾರಣದ ಕಾರಣವು' ಕೊಡಲಾಗುತ್ತದೆ (ಆತನು ಯಾಕೆ ಪ್ರಭಾವದಿಂದ ಜಯಶಾಲಿಯಾದನೆಂದರೆ, *ಆತನು ಕುದುರೆಯನ್ನೂ ಕುದುರೆಯ ಸವಾರನನ್ನೂ ಸಮುದ್ರದಲ್ಲಿ ದಬ್ಬಿದ್ದಾನೆ*).

4) ಈ ಎರಡು ಅನುವಾದಗಳ ನಡುವೆ ಇರುವ ಸಂಬಂಧವನ್ನು ನಾನು ಹೀಗೆ ಅರ್ಥಮಾಡಿಕೊಳ್ಳುತ್ತೇನೆ: ಉದ್ದವಾದ ಹಾಡನ್ನು ಮೋಶೆಯು ಬರೆದನು (*ನಾನು ಯೆಹೋವನಿಗೆ ಹಾಡುತ್ತೇನೆ ...*) ಆದರೆ ಅದನ್ನು ಜನರು ಹಾಡಿದರು (ವ. 1). ಮಿರ್ಯಾಮಳು ಉದ್ದನೆಯ ಹಾಡಿನ ಪಲ್ಲವಿಯನ್ನು ಸೇರಿಸಿದ್ದಾಳೆ (*ನಾನು ಯೆಹೋವನಿಗೆ ಹಾಡುತ್ತೇನೆ ...* ಎಂಬುದನ್ನು *ಯೆಹೋವನಿಗೆ ಹಾಡಿರಿ ...* ಎಂಬ ಪ್ರೋತ್ಸಾಹಕ್ಕೆ ಬದಲಾಯಿಸಲಾಗಿದೆ).

2. ಮೋಶೆಯ ಗೀತೆಯಲ್ಲಿ (15:1–8) ನಾವು ದೇವರ ಈ ಚಿತ್ರಣವನ್ನು ಕಾಣುತ್ತೇವೆ:

1) ಆತನು ಮಹಿಮೆ ಹೊಂದಿದ ಸಾರ್ವಭೌಮ ದೇವರು, ಪವಿತ್ರತೆಯಲ್ಲಿ ಘನವುಳ್ಳವನು, ಅದ್ವಿತೀಯನು, ಶಾಶ್ವತ ಅಧಿಪತಿಯು, ಸ್ತುತಿಗೆ ಯೋಗ್ಯನು: ವ. 1, 7, 11, 18

2) ಆತನು ಒಬ್ಬ ಯುದ್ಧವೀರನು, ತನ್ನ ಜನರನ್ನು ಯುದ್ಧಕ್ಕೆ ನಡೆಸುವ ಒಬ್ಬ ಅರಸನು: ವ. 1, 3, 4, 6, 7

3) ಆತನು ತನ್ನ ಜನರ ಸಂರಕ್ಷಕನು ಮತ್ತು ರಕ್ಷಕನು, ಅವರ ವಿಮೋಚಕನು ಮತ್ತು ಅವರ ಮಾರ್ಗದರ್ಶಿ, ಆತನ ಪ್ರೀತಿಯು ಶಾಶ್ವತವಾದದ್ದು: ವ. 2, 13, 16

4) ಆತನು ವ್ಯಗ್ತಿಗತ ದೇವರು, ಆದರೂ ಮೂಲಪಿತೃಗಳ ದೇವರು, ತನ್ನ ವೈಯಕ್ತಿಕ ಹೆಸರನ್ನು ಪ್ರಕಟಿಸಿರುವ ದೇವರು: ವ. 2, 3

5) ಆತನು ಪ್ರಕೃತಿಯ ಮತ್ತು ಅದರ ಬಲಗಳ ಮೇಲೆ ಒಡೆಯನು, ಅದ್ಭುತಗಳನ್ನು ಮಾಡುವವನು: ವ. 8, 10, 11, 12

6) ಆತನು ತನ್ನ ಯೋಜನೆಗಳನ್ನು ಮತ್ತು ವಾಗ್ದಾನಗಳನ್ನು ನೆರವೇರಿಸುವ ಇತಿಹಾಸದ ದೇವರಾಗಿದ್ದಾನೆ: ವ. 13–17

**ವಿಮೋಚನಕಾಂಡ ಉತ್ತರಗಳು 15: ಮರುಭೂಮಿಯೊಳಗೆ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಮಾರಾದ ಬಳಿಯಲ್ಲಿದ್ದ ನೀರು ಕಹಿಯಾದದ್ದೆಂದು ಇಸ್ರಾಯೇಲರು ಕಂಡುಕೊಂಡಾಗ ಅವರು ಮೋಶೆಯ ವಿರುದ್ಧ ಗೊಣಗುಟ್ಟಿದರು.
2. ಇಸ್ರಾಯೇಲರು ಮಾರಾ ಎಂಬ ಸ್ಥಳವನ್ನು ಬಿಟ್ಟ ನಂತರ ಏಲೀಮಿನಲ್ಲಿ ಪಾಳೆಯವನ್ನು ಹಾಕಿದರು. ಅಲ್ಲಿ ಖರ್ಜೂರದ ಮರಗಳು ಮತ್ತು ಸಾಕಷ್ಟು ನೀರು ಇದ್ದವು.
3. ಏಳನೆಯ ದಿನ, ಅಂದರೆ ಸಬ್ಬತ್ ದಿನ, ಅಂದರೆ ಕೆಲಸವಿಲ್ಲದ ವಿಶ್ರಾಂತಿಯ ದಿನಕ್ಕೆ ಸಾಕಾಗುವಷ್ಟು ಉಳಿಯುವಂತೆ ಆರನೆಯ ದಿನದಲ್ಲಿಯೇ ಅವರು ಎರಡರಷ್ಟು ಮನ್ನವನ್ನು ಕೂಡಿಸಿಕೊಳ್ಳಬೇಕೆಂದು ಇಸ್ರಾಯೇಲರಿಗೆ ಯಾಕೆ ಹೇಳಲಾಯಿತು.
4. ಯೆಹೋವನೇ ಇಸ್ರಾಯೇಲರ ದೇವರೆಂದು ಅವರು ತಿಳಿದುಕೊಳ್ಳುವಂತೆ (ಅನುಭವಿಸುವಂತೆ) ಅವರಿಗೆ ಮರುಭೂಮಿಯಲ್ಲಿ ರೊಟ್ಟಿ ಮತ್ತು ಮಾಂಸವನ್ನು ತಾನು ಒದಗಿಸಿದನು ಎಂದು ದೇವರು ಮೋಶೆಗೆ ಕಾರಣವನ್ನು ಕೊಟ್ಟನು (ವಿಮೋ. 16:12).
5. ಇಸ್ರಾಯೇಲರ ಹಾಗೂ ಮನ್ನದ ಕುರಿತಾದ ಕಥೆಯು ಅವಿಧೇಯತೆಯ ಎರಡು ಸನ್ನಿವೇಶಗಳನ್ನು ಒಳಗೊಂಡಿದೆ:
   1) ಕೆಲವು ಇಸ್ರಾಯೇಲರು ಮೋಶೆಯ ಆಜ್ಞೆಗಳಿಗೆ ಲಕ್ಷ್ಯ ಕೊಡಲಿಲ್ಲ. ಹಾಗಾಗಿ ಅವರು ಒಂದು ಓಮೆರಕ್ಕಿಂತ ಹೆಚ್ಚಾಗಿ ಮನ್ನವನ್ನು ಕೂಡಿಸಿಕೊಂಡರು. ಅದು ಹಾಳಾಯಿತು. ಮೋಶೆಗೆ ಕೋಪ ಬಂದಿತು (16:20).
   2) ಇನ್ನೂ ಕೆಲವರು ಸಬ್ಬತ್ ದಿನದಂದು ಮನ್ನವನ್ನು ಕೂಡಿಸಲು ಹೋದರು. ಅವರಿಗೆ ಅದು ಎಲ್ಲಿಯೂ ಸಿಕ್ಕಲಿಲ್ಲ. ಮೋಶೆಯು ಅವರ ಅವಿಧೇಯತೆಗಾಗಿ ಅವರನ್ನು ಬೈದನು (16:27–29).

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಮಾರಾ ಎಂಬಲ್ಲಿ ಇಸ್ರಾಯೇಲರ ಸನ್ನಿವೇಶವನ್ನು ಮನಸ್ಸಿನಲ್ಲಿಟುಕೊಂಡು *ಅಲ್ಲಿ ಆತನು ಅವರಿಗಾಗಿ ಒಂದು ನಿಯಮವನ್ನೂ ಒಂದು ಶಾಸನವನ್ನೂ ಮಾಡಿದನು* (15:25) ಎಂಬ ವಾಕ್ಯವನ್ನು ನಾನು ಹೀಗೆ ಅರ್ಥಮಾಡಿಕೊಳ್ಳುತ್ತೇನೆ:

   ನಾವು ದೇವರಲ್ಲಿ ಇಟ್ಟಿರುವ ನಮ್ಮ ಭರವಸೆಯನ್ನು ಮತ್ತು ಆತನ ಚಿತ್ತಕ್ಕೆ ನಮ್ಮ ವಿಧೇಯತೆಯನ್ನು ಪ್ರದರ್ಶಿಸುವುದಕ್ಕಾಗಿ ಆತನು ನಮ್ಮನ್ನು ಪರೀಕ್ಷಿಸುತ್ತಾನೆ. ನಮ್ಮ ನಂಬಿಕೆಯನ್ನು ಧೃಢಪಡಿಸಲು ಮತ್ತು ಬಲಪಡಿಸಲು ಆತನು ನಮ್ಮನ್ನು ಪರೀಕ್ಷಿಸುತ್ತಾನೆ. ದೇವರು ತಾನು ಇಸ್ರಾಯೇಲರ ಸ್ವಸ್ಥಪಡಿಸುವಾತನು ಎಂಬುದನ್ನು ಅವರಿಗೆ ತೋರ್ಪಡಿಸುವುದಕ್ಕಾಗಿಯೂ ಮತ್ತು ತನ್ನ ಮೇಲೆ ಅವರಿಗಿದ್ದ ನಂಬಿಕೆ ಮತ್ತು ಭರವಸೆಯನ್ನು ಬಲಪಡಿಸುವುದಕ್ಕಾಗಿ ಮಾರಾ ಎಂಬಲ್ಲಿ ದೇವರು ಒಂದು ಅದ್ಭುತವನ್ನು ಮಾಡಿದನು. ಅವರು ಆತನಲ್ಲಿ ಭರವಸೆ ಇಟ್ಟಿದ್ದರೆ (ಆತನ ಆಜ್ಞೆಗಳಿಗೆ ಲಕ್ಷ್ಯಕೊಟ್ಟು ಆತನ ಎಲ್ಲಾ ಶಾಸನಗಳನ್ನು ಪಾಲಿಸಿದರೆ) ಆತನು ಬರುವ ದಿನಗಳಲ್ಲಿಯೂ ಅವರಿಗೆ ಸ್ವಸ್ಥಪಡಿಸುವಾತನಾಗಿರುವನು. ಅವರು ಗೊಣಗುಟ್ಟದೆ ತಮ್ಮ ದೇವರಾದ ಯೆಹೋವನ ಮೇಲೆ ಭರವಸೆ ಇಡತಕ್ಕದ್ದು.

2. ಮೇಲಿರುವ 5 ನೇ ಪ್ರಶ್ನೆಯಲ್ಲಿ, ಮನ್ನಕ್ಕೆ ಸಂಬಂಧಪಟ್ಟಂತೆ ಎರಡು ಅವಿಧೇಯತೆಯ ಸನ್ನಿವೇಶಗಳನ್ನು ಕಂಡಿದ್ದೇವೆ. ಈ ಎರಡೂ ಸನ್ನಿವೇಶಗಳಲ್ಲಿ 'ಭರವಸೆ' ಎಂಬುದು 'ಅವಿಧೇಯತೆಗೆ' ವಿರುದ್ಧವಾಗಿ ತೋರುತ್ತದೆ:

   ಧರ್ಮೋ. 9:23 ರಲ್ಲಿ ಮೋಶೆಯು ಇಸ್ರಾಯೇಲರಿಗೆ ಅರಣ್ಯದಲ್ಲಿ ಕಳೆದ ವರ್ಷಗಳನ್ನು ನೆನಪಿಸುವಾಗ ನಂಬಿಕೆ ಮತ್ತು ಭರವಸೆ ಎಂಬ ಪದಗಳನ್ನು ಒಟ್ಟಾಗಿ ಬಳಸುತ್ತಾನೆ: *ನೀವು ನಿಮ್ಮ ದೇವರಾದ ಯೆಹೋವನ ಅಪ್ಪಣೆಗೆ ವಿರೋಧವಾಗಿ ತಿರುಗಿಬಿದ್ದು ಆತನನ್ನು ನಂಬಲಿಲ್ಲ. ಆತನ ಮಾತನ್ನು ಕೇಳಲಿಲ್ಲ.*

   ಇದು ಒಂದು ಹಳೆಯ ಇಂಗ್ಲಿಷ್ ಹಾಡನ್ನು ನನಗೆ ನೆನಪಿಗೆ ತರುತ್ತದೆ, ಅದರ ಪಲ್ಲವಿ ಹೀಗಿದೆ:

   *ಭರವಸವಿಟ್ಟು ವಿಧೇಯನಾಗು (ಟ್ರಸ್ಟ್ ಅಂಡ್ ಒಬೆ)*

   *ಬೇರೆ ಮಾರ್ಗವಿಲ್ಲ (ಫಾರ್ ದೇರ್ ಈಸ್ ನೋ ಅದರ್ ವೇ)*

   *ಯೇಸುವಿನಲ್ಲಿ ಸಂತೋಷವಾಗಿರಲು (ಟು ಬಿ ಹ್ಯಾಪಿ ಇನ್ ಜೀಸಸ್)*

   *ಭರವಸವಿಟ್ಟು ವಿಧೇಯನಾಗು (ಬಟ್ ಟು ಟ್ರಸ್ಟ್ ಅಂಡ್ ಒಬೆ)*

ದೇವರು ತಮಗೆ ಪ್ರತಿದಿನ ಅರಣ್ಯದಲ್ಲಿ ಮನ್ನವನ್ನು ಒದಗಿಸುವನು ಎಂದು ಇಸ್ರಾಯೇಲರು ಆತನಲ್ಲಿ ಭರವಸವಿಟ್ಟಿದ್ದರೆ ಒಂದು ದಿನಕ್ಕೆ ಸಾಕಾಗುವಷ್ಟು ಮನ್ನವನ್ನು ಮಾತ್ರ ಪ್ರತಿದಿನ (ಆರನೆಯ ದಿನ ಮಾತ್ರ ಸಬ್ಬತ್ತಿನ ಸಲುವಾಗಿ ಎರಡರಷ್ಟು) ಕೂಡಿಸಿಕೊಳ್ಳಿರಿ ಎಂಬ ದೇವರ ಆಜ್ಞೆಗೆ ಅವರು ಅವಿಧೇಯರಾಗುತ್ತಿರಲಿಲ್ಲ. ಅದಲ್ಲದೆ ಅವರು ಸಬ್ಬತ್ ದಿನದಂದು ಮನ್ನವನ್ನು ಹುಡುಕುವ ವ್ಯರ್ಥ ಪ್ರಯಾಸವನ್ನೂ ಸಹ ಅರ್ಥಮಾಡಿಕೊಳ್ಳುತ್ತಿದ್ದರು. ಹಾಗಾಗಿ ನಾವು ಇಲ್ಲಿ ನೋಡುವುದೇನೆಂದರೆ, 'ಅವಿಧೇಯತೆಯ' ವಿರುದ್ಧಾರ್ಥವು ಕೇವಲ 'ವಿಧೇಯತೆ' ಮಾತ್ರವಲ್ಲ ಬದಲಾಗಿ 'ಭರವಸೆಯೂ' ಕೂಡ ಆಗಿದೆ. ಇಸ್ರಾಯೇಲರು ದೇವರನ್ನು ನಂಬಿದ್ದರೆ ಅದರ ಫಲವು ವಿಧೇಯತೆ ಆಗಿರುತ್ತಿತ್ತು. ಆದರೆ ಅವರು ದೇವರನ್ನು ನಂಬದೆ ಇದ್ದ ಕಾರಣ ಅದರ ಫಲ ಅವಿಧೇಯತೆ ಆಗಿತ್ತು.

ನಿಮ್ಮ ಸ್ವಂತ ಕ್ರೈಸ್ತೀಯ ಅನುಭವದಿಂದ ಈ ಕೆಳಗಿನ ಸಂಬಂಧಗಳ ಕುರಿತು ಉದಾಹರಣೆಗಳನ್ನು ಕೊಡಿರಿ:

- ಭರವಸೆ ಮತ್ತು ವಿಧೇಯತೆಯ ನಡುವಿನ ಸಂಬಂಧ
- ಭರವಸೆಯ ಕೊರತೆ ಮತ್ತು ಅವಿಧೇಯತೆಯ ನಡುವಿನ ಸಂಬಂಧ

**ವಿಮೋಚನಕಾಂಡ ಉತ್ತರಗಳು 16: ನೀರು ಮತ್ತು ಅಮಾಲೇಕ್ಯರು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ದೇವರು ಬಂಡೆಯಿಂದ ನೀರನ್ನು ಹೊರತಂದ ಸ್ಥಳಕ್ಕೆ ಮೂಲತಃ ರೆಫೀದೀಮ್ (ಅಂದರೆ 'ಬಯಲು ಸೀಮೆ' ಅಥವಾ 'ವಿಶ್ರಾಂತಿಯ ಸ್ಥಳ') ಎಂದು ಕರೆಯಲಾಗುತ್ತಿತ್ತು. ಆದರೆ ಅಲ್ಲಿ ನಡೆದ ಘಟನೆಯ ನಿಮಿತ್ತ ಮೋಶೆಯು ಅದನ್ನು ಮಸ್ಸಾ (ಅಂದರೆ 'ಪರೀಕ್ಷಿಸುವುದು') ಮತ್ತು ಮೆರಿಬಾ (ಅಂದರೆ 'ಜಗಳವಾಡುವುದು') ಎಂದು ಕರೆದನು.
2. ಇಸ್ರಾಯೇಲರು ಮಸ್ಸಾ (ಪರೀಕ್ಷೆ) ಎಂಬಲ್ಲಿ ಯೆಹೋವನನ್ನು ಪರೀಕ್ಷಿಸಿದರು ಯಾಕೆಂದರೆ ಅವರು ತಮ್ಮ ಮಧ್ಯದಲ್ಲಿದ್ದ ಆತನ ಪ್ರಸನ್ನತೆಯ ಕುರಿತು ವಿವಾದಿಸಿದರು. ಯೆಹೋವನು ತಮ್ಮ ಮಧ್ಯದಲ್ಲಿ ಇದ್ದಾನೋ ಇಲ್ಲವೋ ಎಂದು ಪರೀಕ್ಷಿಸಿದರು.
3. ಅಮಾಲೇಕ್ಯರ ವಿರುದ್ಧ ಯುದ್ಧವು ನಡೆಯುತ್ತಿರುವಲ್ಲಿ ಮೋಶೆಯ ಕೈಗಳು ಆಯಾಸಗೊಂಡಾಗ ಆರೋನ ಮತ್ತು ಹೂರನು ಆತನ ಕೈಗಳನ್ನು ಎತ್ತಿ ಹಿಡಿದರು. ಮೋಶೆಯ ಕೈಗಳು ಎತ್ತಲ್ಪಟ್ಟಿರುವವರೆಗೆ ಇಸ್ರಾಯೇಲ್ಯರು ಅಮಾಲೇಕ್ಯರ ವಿರುದ್ಧ ಜಯ ಸಾಧಿಸುತ್ತಿದ್ದರು.
4. ಅಮಾಲೇಕ್ಯರ ವಿರುದ್ಧ ನಡೆದ ಯುದ್ಧದ ನಂತರ ದೇವರು ಆ ಘಟನೆಯನ್ನು ಒಂದು ಸುರುಳಿಯ ಮೇಲೆ ಬರವಣಿಗೆಯ ಮೂಲಕ ದಾಖಲಿಸಲು ಹೇಳಿದನು.

**ವಿಮೋಚನಕಾಂಡ ಉತ್ತರಗಳು 17: ಇತ್ರೋವನು ಮೋಶೆಯನ್ನು ಸಂದರ್ಶಿಸಿದ್ದು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಇತ್ರೋ ಮತ್ತು ಮೋಶೆಯ ನಡುವಿನ ಸಂದರ್ಶನವು ಆ ದಿನಗಳ ಸಂಪ್ರದಾಯಗಳನ್ನು ಪಾಲಿಸಿರಬಹುದು:
    1) ಮೊದಲು, ಇತ್ರೋವನು ತನ್ನ ಆಗಮನದ ಕುರಿತು ಮುಂಚಿತವಾಗಿಯೇ ಮಾಹಿತಿಯನ್ನು ಕಳುಹಿಸಿಕೊಡುತ್ತಾನೆ.
    2) ನಂತರ, ಮೋಶೆಯು ತನ್ನ ಮಾವನು ಮನೆಗೆ ಬರುವ ಮುನ್ನವೇ ಮರುಭೂಮಿಯಲ್ಲಿ ಆತನನ್ನು ಭೇಟಿಯಾಗಲು ಹೋಗುತ್ತಾನೆ.
    3) ನಂತರ, ಮೋಶೆಯು ಇತ್ರೋವನನ್ನು ವಿನಯದಿಂದ ವಂದಿಸುತ್ತಾನೆ: ತನ್ನ ತಲೆಯನ್ನು ಬಾಗಿ, ಆತನಿಗೆ ಮುದ್ದಿಡುತ್ತಾನೆ.
    4) ಅಂತಿಮವಾಗಿ, ಮೋಶೆಯು ಇತ್ರೋವನನ್ನು ತನ್ನ ಗುಡಾರಕ್ಕೆ ಕರೆದೊಯ್ಯುತ್ತಾನೆ. ಅವರು ಅಲ್ಲಿ ವೈಯಕ್ತಿಕ ವಿಚಾರಗಳ ಕುರಿತು ಮಾತನಾಡುತ್ತಾರೆ.
2. ಮೋಶೆಯು ನಿರ್ಗಮನದ ಘಟನೆಯ ಕುರಿತು ತನ್ನ ಮಾವನಿಗೆ ಹೇಳಿದ ನಂತರ ಆತನ ಮಾವನು ಯೆಹೋವನ ಶ್ರೇಷ್ಠತೆಯನ್ನು ತಿಳಿದುಕೊಂಡನು. ನಂತರ ಆತನು ದೇವರಿಗಾಗಿ ದಹನ ಬಲಿಗಳನ್ನು ಏರ್ಪಡಿಸಿ ಸಮರ್ಪಿಸಿದನು.
3. ಮೋಶೆಯು ಯಾಕೆ ಬೆಳಗಿನಿಂದ ಸಂಜೆಯವರೆಗೆ ಜನರಿಗೆ ನ್ಯಾಯಾಧೀಶನಾಗಿ ಕುಳಿತಿದ್ದನು ಎಂದು ಆತನ ಮಾವನು ಕೇಳಿದಾಗ, ಜನರು ತಮ್ಮ ಎಲ್ಲಾ ವ್ಯಾಜ್ಯಗಳನ್ನು ಮತ್ತು ಪ್ರಶ್ನೆಗಳನ್ನು ತನ್ನ ಬಳಿಗೆ ತರುತ್ತಾರೆಂದು ಮೋಶೆಯು ಉತ್ತರಿಸಿದನು.
4. ಮೋಶೆಯು ತನ್ನ ಕಾರ್ಯವನ್ನು ನಿರ್ವಹಿಸಿದ ಕ್ರಮದ ಕುರಿತು ಇತ್ರೋವನು ಮಾಡಿದ ಟೀಕೆಯು ಎರಡು ಅಂಶಗಳನ್ನು ಒಳಗೊಂಡಿತ್ತು:
    1) ಮೊದಲು, ಮೋಶೆಯು ಒಬ್ಬನೇ ನಿರ್ವಹಿಸಲು ಸಾಧ್ಯವಾಗದಷ್ಟು ಕೆಲಸವಿತ್ತು. ಆತನು ಹೀಗೆಯೇ ಮುಂದುವರೆದರೆ ಬಳಲಿ ಹೋಗುವುದಕ್ಕಿದ್ದನು.
    2) ಎರಡನೆಯದಾಗಿ, ಜನರೂ ಸಹ ಬಳಲಿ ಹೋಗುವರು. ಬಹುಶಃ ಮೋಶೆಯ ಸಂದರ್ಶನಕ್ಕಾಗಿ ಅವರು ಅನೇಕ ತಾಸುಗಳು ಅಥವಾ ದಿನಗಳು ಕಾಯಬೇಕಾಗಿದ್ದಿರಬಹುದು, ಇಲ್ಲವೇ ಅವರು ಮೋಶೆಯ ಮುಂದೆ ತಮ್ಮ ವಿಷಯಗಳನ್ನು ಪ್ರಸ್ತಾಪಿಸುವುದಕ್ಕಾಗಿ ಸಾಲಿನಲ್ಲಿ ನಿಂತು ತಮ್ಮ ಸಮಯವನ್ನು ವ್ಯರ್ಥವಾಗಿ ಕಳಕೊಳ್ಳುತ್ತಿದ್ದಿರಬಹುದು.
5. ಮೋಶೆಯ ಕಾರ್ಯವನ್ನು ಮರು–ರಚಿಸಲು ಇತ್ರೋವನು ಎರಡು ಮುಖ್ಯ ಸಲಹೆಗಳನ್ನು ಕೊಟ್ಟನು:
    1) ಮೋಶೆಯು ಈಗಲೂ ಸಹ ದೇವರ ಮತ್ತು ಜನರ ನಡುವೆ ಮಧ್ಯವರ್ತಿಯಾಗಿರುವನು. ಆತನು ಜನರಿಂದ ಬಂದ ವಿಷಯಗಳನ್ನು ದೇವರ ಮುಂದೆ ತರುವ ಕೆಲಸವನ್ನು ಮುಂದುವರೆಸುವನು. ದೇವರ ಶಾಸನಗಳನ್ನು ಮತ್ತು ಆಜ್ಞೆಗಳನ್ನು ಜನರಿಗೆ ಬೋಧಿಸುವುದನ್ನೂ ಹಾಗೂ ಈ ಶಾಸನ ಮತ್ತು ಆಜ್ಞೆಗಳಿಗೆ ತಕ್ಕಂತೆ ತಮ್ಮ ಜೀವಿತಗಳನ್ನು ಹೇಗೆ ಜೀವಿಸಬೇಕು ಎಂಬುದನ್ನು ವಿವರಿಸುವುದನ್ನೂ ಆತನು ಮುಂದುವರೆಸುವನು. ತನ್ನ ಸಹಾಯಕರು ತನಗೆ ಒಪ್ಪಿಸಿದ ಕಠಿಣವಾದ ಪ್ರಕರಣಗಳನ್ನೂ ಸಹ ಆತನೇ ನಿರ್ವಹಿಸುವನು.
    2) ದಿನನಿತ್ಯದ ನ್ಯಾಯತೀರ್ಪಿನ ವಿಷಯಗಳನ್ನು ನಿರ್ವಹಿಸಲು ನಾಲ್ಕು ಹಂತಗಳಲ್ಲಿ ಸಹಾಯಕರುಗಳನ್ನು ಮೋಶೆಯು ಆರಿಸಿ ನೇಮಿಸಬೇಕು. ಈ ಸಹಾಯಕರುಗಳಿಗೆ ಈ ವಿಷಯಗಳ ಕುರಿತು ಅವಶ್ಯವಾದ ತೀರ್ಪುಗಳನ್ನು ಹೊರಡಿಸಲು ಅಧಿಕಾರವು ಕೊಡಲ್ಪಡಬೇಕು.
6. ಮೋಶೆಯು ತನ್ನ ಮಾವನ ಸಲಹೆಗೆ ಉತ್ತಮವಾಗಿ ಪ್ರತಿಕ್ರಿಯಿಸಿದನು. ಆತನು ದೈವ–ಭಯವುಳ್ಳವರೂ, ನಂಬಿಗಸ್ತರೂ, ಸತ್ಯವಂತರೂ ಮತ್ತು ನಿಸ್ವಾರ್ಥಿಗಳೂ ಆದ ಜನರನ್ನು ತನ್ನ ಅಡಿಯಲ್ಲಿ ನ್ಯಾಯಾಧೀಶರುಗಳಾಗಿ ಆರಿಸಿ ನೇಮಿಸಿದನು. ಅವರು ಸ್ವಂತವಾಗಿ ಎಲ್ಲಾ ಸಾಮಾನ್ಯ ಪ್ರಕರಣಗಳನ್ನು ನಿರ್ವಹಿಸಬೇಕಾಗಿತ್ತು ಮತ್ತು ಕೇವಲ ಕಠಿಣವಾದ ಪ್ರಕರಣಗಳನ್ನು ಮಾತ್ರ ಮೋಶೆಗೆ ಒಪ್ಪಿಸಬೇಕಾಗಿತ್ತು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಇತ್ರೋವನು ಮೋಶೆಯ ಹೆಂಡತಿಯಾದ ಚಿಪ್ಪೋರಳಿಂದ ನಿರ್ಗಮನದ ಕುರಿತು ಮಾಹಿತಿಯನ್ನು ತಂದ ಪರಿಣಾಮವಾಗಿ ಆತನು ಮೋಶೆಯನ್ನು ಮರುಭೂಮಿಯಲ್ಲಿ ಸಂಧಿಸಲು ಬಂದನು. ಮೋಶೆಯು ಚಿಪ್ಪೋರಳನ್ನೂ ಅವರ ಮಕ್ಕಳಾದ ಗೆರ್ಷೋಮ ಮತ್ತು ಎಲಿಯೇಜರನನ್ನೂ ಇತ್ರೋವನ ಬಳಿಗೆ ಕಳುಹಿಸಿಕೊಟ್ಟಿದ್ದನು (ವ. 2). ಆಕೆಯು ನಡೆದ ಸಂಗತಿಯನ್ನು ಇತ್ರೋವನಿಗೆ ಹೇಳಿದ್ದಳು (ವ. 1). ಹಾಗಾಗಿ ಇತ್ರೋವನು ಚಿಪ್ಪೋರಳ ಮತ್ತು ಎರಡು ಮಕ್ಕಳ ಜೊತೆಗೆ ಮೋಶೆಯನ್ನು ಸಂಧಿಸಲು ಮರುಭೂಮಿಗೆ ಬಂದನು (ವ. 5).

2. ಇತ್ರೋವನು ಕೇವಲ ಬುದ್ಧಿವಂತ ವ್ಯಕ್ತಿ ಮಾತ್ರವಾಗಿರದೆ ದೈವ–ಭಯವುಳ್ಳ ಮನುಷ್ಯನೂ ಸಹ ಆಗಿದ್ದನು:

   1) ಆತನು ತನ್ನ ಸಲಹೆಯನ್ನು ಮೋಶೆಗೆ ನೀಡಿದಾಗ, *ದೇವರು ನಿನ್ನ ಸಂಗಡ ಇರಲಿ* ಎಂದೂ ಸಹ ಹೇಳಿದನು (ವ. 19).

   2) ಆತನು ತನ್ನ ಸಲಹೆಯನ್ನು, *ಈ ಕಾರ್ಯವನ್ನು ಮಾಡುವುದಕ್ಕೆ ದೇವರು ನಿನಗೆ ಅಪ್ಪಣೆ ಕೊಟ್ಟರೆ ...* (ವ. 23).

3. ವಿಮೋ. 18 ನೇ ಅಧ್ಯಾಯವು ನಾಯಕತ್ವದ ಕುರಿತು ಶ್ರೇಷ್ಠವಾದ ಪಾಠಗಳನ್ನು ಹೊಂದಿದೆ. ನಾವು ಇಲ್ಲಿ ಎರಡು ಮುಖ್ಯ ನಾಯಕತ್ವದ ಸಮಸ್ಯೆಗಳು ಸಂಬೋಧಿಸಲ್ಪಟ್ಟಿರುವುದನ್ನು ಕಾಣುತ್ತೇವೆ:

   1) ಕೆಲಸವನ್ನು ಇತರರಿಗೆ ವಹಿಸುವುದು:

      - ಸರಿಯಾದ ಜನರನ್ನು ಹುಡುಕಿ ಅವರನ್ನು ನೇಮಿಸಬೇಕು ಮತ್ತು ಅವರು ಸ್ವಂತವಾಗಿ ಕಾರ್ಯ ಮಾಡ ಶಕ್ತರೆಂದು ಅವರ ಮೇಲೆ ಭರವಸವಿಡಬೇಕು; ಅವರ ಕೆಲಸದಲ್ಲಿ ತಲೆ ಹಾಕಬಾರದು; ಅವರ ತೀರ್ಮಾನಗಳನ್ನು ರದ್ದು ಮಾಡಬಾರದು (ಹಾಗೆ ಮಾಡಿದರೆ ಆ ವ್ಯಕ್ತಿ ಮಾತ್ರವಲ್ಲದೆ ಸಮುದಾಯದವರೂ ಸಹ ನಮ್ಮ ಕುರಿತು ಅಸಂತೋಷ ವ್ಯಕ್ತಪಡಿಸುತ್ತಾರೆ ಮತ್ತು ಗೊಂದಲಕ್ಕೆ ಒಳಗಾಗುತ್ತಾರೆ).

      - ಅವರ ಅಧಿಕಾರದ ಮಟ್ಟದ ಕುರಿತು ಅತ್ಯಂತ ಸ್ಪಷ್ಟವಾಗಿರಬೇಕು: ಮೋಶೆಯು ಕಠಿಣವಾದ ಪ್ರಕರಣಗಳನ್ನು ನಿರ್ವಹಿಸಿದನು, ಹೊಸ ನಾಯಕರುಗಳು ಉಳಿದವುಗಳನ್ನು ನೋಡಿಕೊಂಡರು. ಸಮುದಾಯದವರಿಗೂ ಸಹ ಇದು ಸ್ಪಷ್ಟವಾಗಬೇಕು: ಆಗ ಅವರೆಲ್ಲರೂ *ತಮ್ಮ ತಮ್ಮ ಸ್ಥಳಗಳಿಗೆ ಸಮಾಧಾನದಿಂದ ಹೋಗುವರು* (ವಿಮೋ. 18:23).

   2) ನಾಯಕತ್ವದ ಅರ್ಹತೆಗಳು (ಇತ್ರೋವನ ಸಲಹೆಗಳು)

      - ಸಾಮರ್ಥ್ಯ

      - ಇಡೀ ಸಮುದಾಯದ ಪ್ರತಿನಿಧಿತ್ವ

      - ತಮ್ಮ ಜೀವಿತಗಳನ್ನು ಹೇಗೆ ಜೀವಿಸಬೇಕು ಮತ್ತು ತಮ್ಮ ಕರ್ತವ್ಯಗಳನ್ನು ಹೇಗೆ ನಿರ್ವಹಿಸಬೇಕು ಎಂಬುದರ ಕುರಿತು ಜನರಿಗೆ ಬೋಧಿಸಿ ಉಪದೇಶಿಸಲು ಶಕ್ತರು

      - ದೈವ–ಭಯವುಳ್ಳವರು

      - ಸತ್ಯವಂತರು

      - ದುರಾಶೆಯನ್ನು (ಅಪ್ರಾಮಾಣಿಕವಾದ ಲಾಭವನ್ನು) ಹಗೆ ಮಾಡುವವರು

**ವಿಮೋಚನಕಾಂಡ ಉತ್ತರಗಳು 18: ಸಿನಾಯಿ ಪರ್ವತದ ಬಳಿಯಲ್ಲಿ**

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ವಿಮೋ. 19:16–19 ನ್ನು 20:18–21 ರೊಂದಿಗೆ ಹೋಲಿಸಿರಿ. ಈ ವಾಕ್ಯಭಾಗಗಳು ಅತ್ಯಂತ ಸಮಾನರೂಪವುಳ್ಳದ್ದಾಗಿ ತೋರುತ್ತದೆ. ಅವುಗಳು ಒಂದೇ ಘಟನೆಯ ಕುರಿತು ಉಲ್ಲೇಖಿಸುತ್ತಿರುವ ಸಾಧ್ಯತೆಯಿದೆ ಎಂದು ನಾನು ಯೋಚಿಸುತ್ತೇನೆ:

   1) ಅವುಗಳು ಎಷ್ಟರ ಮಟ್ಟಿಗೆ ಸಮಾನರೂಪವುಳ್ಳದ್ದಾಗಿದೆಯೆಂದರೆ, ಅವುಗಳು ಎರಡು ವ್ಯತ್ಯಾಸವಾದ ಸನ್ನಿವೇಶಗಳ ಕುರಿತು ಮಾತನಾಡುತ್ತಿವೆ ಎಂಬುದು ಅಸಂಭವನೀಯವಾಗಿದೆ.

   2) ವಿಮೋ. 19:20 ರಲ್ಲಿ ಯೆಹೋವನು ಮೋಶೆಯನ್ನು ಪರ್ವತದ ಶಿಖರಕ್ಕೆ ಕರೆಯುತ್ತಾನೆ. ಇದು 20:21 ನ್ನು ಉಲ್ಲೇಖಿಸುವ ಸಾಧ್ಯತೆಯಿದೆ: *ಮೋಶೆಯು ದೇವರಿದ್ದ ಕಾರ್ಗತ್ತಲೆಯ ಹತ್ತಿರ ಬಂದನು.*

   3) ಮೋಶೆಯು ತಾನು ಕೆಳಗೆ ಇಳಿದು ಹೋಗಿ ಜನರು ಪರ್ವತದಿಂದ ದೂರವಿರುವಂತೆ ಎಚ್ಚರಿಸುವುದು ಅವಶ್ಯವಿಲ್ಲವೆಂದು ಆಲೋಚಿಸಿರಬಹುದು (19:23). ಹಾಗಾಗಿ ಆತನು ಕೆಳಗೆ ಹೋಗಿರಲಿಕ್ಕಿಲ್ಲ.

   4) ಪಠ್ಯವು ಸರಿಯಾದ ಕಾಲನುಕ್ರಮದಲ್ಲಿ ಮಂಡಿಸಿಲ್ಲವಾದರೆ, 19:25 ನ್ನು (*ಮೋಶೆಯು ಜನರ ಬಳಿಗೆ ಇಳಿದು ಹೋಗಿ ಅವರಿಗೆ ಇದನ್ನೆಲ್ಲಾ ಹೇಳಿದನು*) 23 ನೇ ಅಧ್ಯಾಯದಲ್ಲಿ ದಾಖಲಾಗಿರುವ ಸಂಗತಿಯ ಸಮಾರೋಪ ಎಂಬುದಾಗಿ ಅರ್ಥಮಾಡಿಕೊಳ್ಳಬಹುದು. ಯಾಕೆಂದರೆ 24 ನೇ ಅಧ್ಯಾಯದ ಪ್ರಾರಂಭದಲ್ಲಿ ಮೋಶೆಯು ಆರೋನ ಮತ್ತು ಇತರರೊಂದಿಗೆ ಬರುವಂತೆ ದೇವರು ಹೇಳಿದನು.

2. ಈ ಎರಡೂ ವಾಕ್ಯಭಾಗಗಳು ಒಂದೇ ಘಟನೆಯ ಕುರಿತು ಉಲ್ಲೇಖಿಸುತ್ತದೆ ಎಂದು ನಾವು ಅಂದುಕೊಳ್ಳೋಣ. ಇದರ ಪರಿಣಾಮವು ಏನಾಗಿರುವುದೆಂದರೆ, ವಿಮೋ. 19–20 ರಲ್ಲಿರುವ ಪಠ್ಯವು ಪೂರ್ಣವಾದ ಕಾಲಾನುಕ್ರಮದೊಂದಿಗೆ ಬರೆಯಲ್ಪಟ್ಟಿಲ್ಲ ಎಂದತ್ತಾಗುತ್ತದೆ. ಇದನ್ನು ನಾನು ಸಮ್ಮತಿಸುತ್ತೇನೆ. ಸತ್ಯವೇದದಲ್ಲಿ ಸರಿಯಾದ ಕಾಲಾನುಕ್ರಮವಿಲ್ಲದಿರುವ ಪಠ್ಯಗಳ ಅನೇಕ ಉದಾಹರಣೆಗಳಿವೆ, ಉದಾಹರಣೆಗೆ ಎಜ್ರ–ನೆಹೆಮೀಯ ಮತ್ತು ಸಮಾನ ದೃಷ್ಟಿಯ ಸುವಾರ್ತೆಗಳು.

3. ***ಪರಿಚಯ*** ಎಂಬುದರದಲ್ಲಿ ಮಂಡಿಸಿರುವ **'ಘಟನಾನುಕ್ರಮಣಿಕೆಯನ್ನು'** ವಿಮೋ. 19:16–19 ಮತ್ತು 20:18–21 ಒಂದೇ ಘಟನೆಯ ವ್ಯತ್ಯಾಸವಾದ ನಿರೂಪಣೆಗಳು ಎಂಬಂತೆ ನಾವು ಅದನ್ನು ಬದಲಾಯಿಸಿದರೆ ಮೋಶೆಯು ಪರ್ವತದ ಮೇಲೆ ಹೋದ ಸಂಖ್ಯೆಯನ್ನು ನಾವು ಐದರಿಂದ ನಾಲ್ಕಕ್ಕೆ ಇಳಿಸಬೇಕು. ಮೂರು ಮತ್ತು ನಾಲ್ಕು ಬಾರಿಯು ಒಂದು ಬಾರಿ ಆಗುತ್ತದೆ. ಇದರ ಅರ್ಥವೇನೆಂದರೆ, ಒಡಂಬಡಿಕೆಯ ಗ್ರಂಥವು ಮತ್ತು ಇಸ್ರಾಯೇಲರು ವಾಗ್ದಾನ ದೇಶಕ್ಕೆ ಹೋಗಲು ಮಾರ್ಗವನ್ನು ಸಿದ್ಧಮಾಡುವ ವಾಗ್ದಾನವು (ಅಧ್ಯಾಯ 20–23) ಒಂದೇ ಭೇಟಿಯ ಅವಧಿಯಲ್ಲಿ ಕೊಡಲಾಗಿತ್ತು.

**ವಿಮೋಚನಕಾಂಡ ಉತ್ತರಗಳು 19: ಸಿನಾಯಿ ಪರ್ವತದ ಮೇಲೆ ಮೋಶೆ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ವಿಮೋ. 19:3–6 ರಲ್ಲಿ ಮೋಶೆಯ ಮೂಲಕ ದೇವರು ಇಸ್ರಾಯೇಲರಿಗೆ ಕೊಟ್ಟ ಸಂದೇಶದಲ್ಲಿರುವ ಅಂಶಗಳ ಪಟ್ಟಿಯು ಹೀಗಿದೆ:

   ಆತನು ಅವರಿಗೆ ಈಜಿಪ್ಟಿನಿಂದ ಉಂಟಾದ ವಿಮೋಚನೆಯನ್ನು ಮತ್ತು ಆತನು ಹೇಗೆ ಅವರನ್ನು ಸುರಕ್ಷಿತವಾಗಿ ಸಿನಾಯಿಗೆ ಕರೆತಂದನೆಂಬುದನ್ನು ಜ್ಞಾಪಿಸುತ್ತಾನೆ (ವ. 4).

   ಅವರು ಆತನಿಗೆ ವಿಧೇಯರಾಗಿ ಆತನ ಆಜ್ಞೆಗಳನ್ನು ಕೈಗೊಂಡರೆ – ಆತನು ಅವರನ್ನು ತನ್ನ ಸಂಪತ್ತಾಗಿ ಮಾಡಿಕೊಳ್ಳುವನೆಂದು ವಾಗ್ದಾನ ಮಾಡಿದನು (ವ. 5).

   ಆತನು ಅವರನ್ನು ಯಾಜಕರ ರಾಜ್ಯವಾಗಿಯೂ ಪರಿಶುದ್ಧ ಜನವಾಗಿಯೂ ಮಾಡುವನೆಂದು ವಾಗ್ದಾನ ಮಾಡಿದನು (ವ. 6). ಆದರೆ ಆತನು ಇಡೀ ಭೂಮಿಯ ಮೇಲೆಯೂ ಮತ್ತು ಎಲ್ಲಾ ರಾಷ್ಟ್ರಗಳ ಮೇಲೆಯೂ ಸಾರ್ವಭೌಮನಾಗಿದ್ದಾನೆ ಎಂಬುದನ್ನೂ ಸಹ ಅವರಿಗೆ ಜ್ಞಾಪಿಸುತ್ತಾನೆ (ವ. 5).

2. ಮೋಶೆಯ ಮೂಲಕ ಇಸ್ರಾಯೇಲರಿಗೆ ಕೊಡಲ್ಪಟ್ಟ ಸಂದೇಶವನ್ನು ಅವರಿಗೆ ಹೀಗೆ ತಿಳಿಸಲಾಯಿತು:

   ಮೊದಲು ಮೋಶೆಯು ಹಿರಿಯರನ್ನು ಕರೆದು ಯೆಹೋವನು ಆತನಿಗೆ ಹೇಳಿದ್ದನ್ನು ಅವರಿಗೆ ತಿಳಿಸಿದನು (ವ. 7).

   ನಂತರ ಎಲ್ಲಾ ಜನರಿಗೂ ಅದು ತಿಳಿಸಲ್ಪಟ್ಟಿರಬೇಕು, ಯಾಕೆಂದರೆ ದೇವರ ಸಂದೇಶಕ್ಕೆ ಪ್ರತಿಕ್ರಿಯಿಸಿದವರು ಅವರಾಗಿದ್ದರು (ವ. 8).

3. ಮೋಶೆಯು ಎರಡನೆಯ ಬಾರಿ ಪರ್ವತದ ಮೇಲೆ ಹೋದಾಗ, ಇಸ್ರಾಯೇಲರು ಯೆಹೋವನ ಆಜ್ಞೆಗಳನ್ನು ಪಾಲಿಸುವೆವು ಎಂದು ಮಾಡಿದ ಪ್ರಮಾಣದ ಕುರಿತು ದೇವರಿಗೆ ತಿಳಿಸಿರಬಹುದು (ವ. 8).

4. ಯೆಹೋವನು ಸಿನಾಯಿ ಪರ್ವತದ ಮೇಲೆ ಇಳಿದು ಬರುವ ದಿನಕ್ಕಾಗಿ ಇಸ್ರಾಯೇಲರು ತಮ್ಮನ್ನು ಶುದ್ಧಪಡಿಸಿಕೊಳ್ಳಲು ಎರಡು ಸಂಗತಿಗಳನ್ನು ಮಾಡಬೇಕಾಗಿತ್ತು:

   ಅವರು ತಮ್ಮ ವಸ್ತ್ರಗಳನ್ನು ತೊಳೆದುಕೊಳ್ಳಬೇಕಾಗಿತ್ತು (ಶಾರೀರಿಕವಾಗಿ ಶುದ್ಧರಾಗಲು)

   ಅವರು ಲೈಂಗಿಕ ಸಂಪರ್ಕದಿಂದ ದೂರವಿರಬೇಕಿತ್ತು (ಆಚಾರಬದ್ಧವಾಗಿ ಶುದ್ಧರಾಗಲು)

5. ಪರ್ವತದ ಅತೀ ಸಮೀಪಕ್ಕೆ ಬಂದ ಇಸ್ರಾಯೇಲರು (ಜನಸಾಮಾನ್ಯರು ಹಾಗೂ ಯಾಜಕರು) ಸಾಯುವರು.

6. ಪರ್ವತದ ಮೇಲಿದ್ದ ದೇವರ ಪವಿತ್ರ ಪ್ರಸನ್ನತೆಯ ಗೋಚರವಾದ ಸೂಚನೆಗಳು ಗುಡುಗು, ಮಿಂಚು, ತುತ್ತೂರಿಯ ಮಹಾ ಧ್ವನಿ, ಹೊಗೆ, ಬೆಂಕಿ ಮತ್ತು ಭೂಕಂಪಗಳಾಗಿದ್ದವು.

**ವಿಮೋಚನಕಾಂಡ ಉತ್ತರಗಳು 20: ಮೋಶೆಯು ಧರ್ಮಶಾಸ್ತ್ರವನ್ನು ಪಡೆದದ್ದು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ದೇವರು ತಾನು ಯಾರಾಗಿದ್ದಾನೆ ಮತ್ತು ಇಸ್ರಾಯೇಲರಿಗಾಗಿ ಏನನ್ನು ಮಾಡಿದ್ದಾನೆ ಎಂಬುದನ್ನು ತಿಳಿಸುವುದರ ಮೂಲಕ ದಶಾಜ್ಞೆಗಳನ್ನು ಪರಿಚಯಿಸುತ್ತಾನೆ. ಈ ಪರಿಚಯದ ಅತ್ಯಂತ ಮಹತ್ವವುಳ್ಳದ್ದಾಗಿದೆ: ಇಸ್ರಾಯೇಲರೊಂದಿಗಿರುವ ದೇವರ ಒಡಂಬಡಿಕೆಯೇ ದಶಾಜ್ಞೆಗ್ಗಳ ಹಿನ್ನಲೆಯಾಗಿದೆ ಎಂಬುದನ್ನು ಇದು ತೋರಿಸುತ್ತದೆ.

2. ದಶಾಜ್ಞೆಗಳನ್ನು ಪಡೆದವರು ಇಸ್ರಾಯೇಲರಾಗಿದ್ದರು. ಅವರು ಈಜಿಪ್ಟಿನಲ್ಲಿನ ದಾಸತ್ವದಿಂದ ದೇವರು ಹೊರತಂದ ಜನರಾಗಿ ವರ್ಣಿಸಲ್ಪಟ್ಟಿದ್ದಾರೆ. ಈ ವರ್ಣನೆಯ ಮಹತ್ವವೇನೆಂದರೆ, ಅದನ್ನು ಕೇವಲ ಒಡಂಬಡಿಕೆಯ ಸನ್ನಿವೇಶ ಹಿನ್ನಲೆಯಲ್ಲಿ (ಮೇಲಿನ ಉತ್ತರದಲ್ಲಿ ತಿಳಿಸಲ್ಪಟ್ಟಿದೆ) ಮಾತ್ರ ಅರ್ಥಮಾಡಿಕೊಳ್ಳದೆ ಇಸ್ರಾಯೇಲರನ್ನು ಒಂದು ರೀತಿಯ ಹೊಸದಾದ ದಾಸತ್ವದಲ್ಲಿ ತರುವುದು ಈ ಆಜ್ಞೆಗಳ ಗುರಿ ಆಗಿರಲಿಲ್ಲ ಎಂಬುದಾಗಿದೆ. ಬದಲಾಗಿ, ದಶಾಜ್ಞೆಗಳ ಉದ್ದೇಶವು ಅವರನ್ನು ಹೊಸದಾಗಿ ಸಾಧಿಸಿದ ಸ್ವಾತಂತ್ರ್ಯದಲ್ಲಿ ಸ್ಥಾಪಿಸುವುದಾಗಿತ್ತು. ಅವರು ಸ್ವಾತಂತ್ರ್ಯದಲ್ಲಿ ಹೇಗೆ ಜೀವಿಸಬೇಕೆಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿತ್ತು. ಈ ಉದ್ದೇಶಕ್ಕಾಗಿ ಅವರಿಗೆ ದಶಾಜ್ಞೆಗಳು ಅವಶ್ಯವಿದ್ದವು.

3. ವಿಮೋ. 20:5–6 ರಲ್ಲಿ ನಾವು ಪಾಪದ ಮಿತಿಯುಳ್ಳ ಪರಿಣಾಮಗಳ (ಕೇವಲ ಕೆಲವು ತಲೆಮಾರುಗಳು ಮಾತ್ರ ಅಥವಾ ಬಹುಶಃ ಪಾಪ ಮಾಡಿದ ಕುಟುಂಬಕ್ಕೆ ಮಾತ್ರ ಸೀಮಿತವಾದ) ಮತ್ತು ತನ್ನ ಒಡಂಬಡಿಕೆಯನು ಪಾಲಿಸುವವರ ಮೇಲಿರುವ ದೇವರ ಪ್ರೀತಿಯ ಧೀರ್ಘಕಾಲದ ಪರಿಣಾಮಗಳ ನಡುವೆ ಒಂದು ವಿರೋಧತೆಯನ್ನು ಕಾಣುತ್ತೇವೆ.

4. ಸಬ್ಬತ್ ದಿನವು ಯಾಕೆ ಪವಿತ್ರವಾದದ್ದು, ಯಾಕೆಂದರೆ ದೇವರು ಮೊದಲ ಆರು ದಿನಗಳಲ್ಲಿ ತನ್ನ ಸೃಷ್ಟಿಯ ಕಾರ್ಯವನ್ನು ಮುಗಿಸಿದ ನಂತರ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡಿದ್ದರಿಂದ ಹಾಗೆ ಮಾಡಿದನು.

5. ಪೋಷಕರಿಗೆ ವಿಧೇಯರಾಗಬೇಕೆಂಬ ಆಜ್ಞೆಯೊಂದಿಗೆ ಹೊಂದಿಕೊಂಡಿರುವ ವಾಗ್ದಾನವು 'ವಾಗ್ದಾನ ದೇಶದಲ್ಲಿ' ದೀರ್ಘಾಯುಷ್ಯ ಬಾಳುವುದಾಗಿದೆ.

6. ವಿಮೋ. 20:3–17 ರಲ್ಲಿ ಪಟ್ಟಿ ಮಾಡಲಾಗಿರುವ ದಶಾಜ್ಞೆಗಳು ಇವುಗಳಾಗಿವೆ:

   1) ನನ್ನ ಮುಂದೆ ನಿನಗೆ ಬೇರೆ ದೇವರುಗಳು ಇರಬಾರದು.

   2) ನಿನಗೆ ಯಾವ ವಿಗ್ರಹವನ್ನಾಗಲಿ ರೂಪವನ್ನಾಗಲಿ ನೀನು ಮಾಡಿಕೊಳ್ಳಬಾರದು.

   3) ನಿನ್ನ ದೇವರಾದ ಯೆಹೋವನ ಹೆಸರನ್ನು ವ್ಯರ್ಥವಾಗಿ ಎತ್ತಬಾರದು.

   4) ಸಬ್ಬತ್ ದಿನವನ್ನು ಪರಿಶುದ್ಧವಾಗಿ ಇರುವಂತೆ ಜ್ಞಾಪಕದಲ್ಲಿಟ್ಟುಕೋ.

   5) ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸು.

   6) ಕೊಲೆ ಮಾಡಬಾರದು.

   7) ವ್ಯಭಿಚಾರ ಮಾಡಬಾರದು.

   8) ಕದಿಯಬಾರದು.

   9) ನಿನ್ನ ನೆರೆಯವನಿಗೆ ವಿರೋಧವಾಗಿ ಸುಳ್ಳು ಸಾಕ್ಷಿ ಹೇಳಬಾರದು.

   10) ನಿನ್ನ ನೆರೆಯವನಿಗೆ ಸಂಬಂಧಪಡುವ ಯಾವದನ್ನೂ ಆಶಿಸಬಾರದು.

7. ಕ್ರಿಸ್ತೀಯ ನೈತಿಕತೆಯ ಬೆಳಕಿನಲ್ಲಿ ದಶಾಜ್ಞೆಗಳ ಮೌಲ್ಯಮಾಪನ:

   ಬಹುತೇಕ ಕ್ರಿಸ್ತೀಯ ವಿಶ್ವಾಸಿಗಳಿಗೆ ಈ ಆಜ್ಞೆಗಳು ಈಗಲೂ ಮಾನ್ಯತೆಯುಳ್ಳದ್ದಾಗಿದೆ: ಇತರೆ ದೇವರುಗಳಿರಬಾರದು; ವಿಗ್ರಹಗಳಿರಬಾರದು; ದೇವರ ನಾಮವನ್ನು ದುರುಪಯೋಗ ಮಾಡಬಾರದು; ಪೋಷಕರನ್ನು ಸನ್ಮಾನಿಸುವುದು; ಕೊಲೆಮಾಡಬಾರದು; ವ್ಯಭಿಚಾರ ಮಾಡಬಾರದು; ಕದಿಯಬಾರದು – ಒಟ್ಟು 6 ಆಜ್ಞೆಗಳು

   ಬಹುತೇಕ ಕ್ರಿಸ್ತೀಯ ವಿಶ್ವಾಸಿಗಳು ಈ ಆಜ್ಞೆಗಳನ್ನು ಪಾಲಿಸಲು ತಲೆಕೆಡಿಸಿಕೊಳ್ಳುವುದಿಲ್ಲ: ಸಬ್ಬತ್ ದಿನ; ಸುಳ್ಳು ಸಾಕ್ಷಿ ಹೇಳದಿರುವುದು; ನೆರೆಯವನದ್ದನ್ನು ಆಶಿಸದಿರುವುದು – ಒಟ್ಟು 4 ಆಜ್ಞೆಗಳು

   ಅನೇಕ ಕ್ರಿಸ್ತೀಯ ವಿಶ್ವಾಸಿಗಳು ಈ ಆಜ್ಞೆಗಳನ್ನು ಈಗಿನ ಕಾಲದಲ್ಲಿ ಮಾನ್ಯತೆಯುಳ್ಳದ್ದಾಗಿಲ್ಲ ಎಂದು ಪರಿಗಣಿಸುತ್ತಾರೆ: –

   ಗಮನಿಸಿರಿ: ಎಲ್ಲಾ ಆಜ್ಞೆಗಳು ಹೆಚ್ಚು ಕಡಿಮೆಯಾದರೂ ಇಂದಿಗೂ ಸಹ ಸಭೆಗೆ ಮಾನ್ಯತೆಯುಳ್ಳದ್ದಾಗಿದೆ. ಅವುಗಳು ದೈವಶಾಸ್ತ್ರೀಯವಾದ ಮತ್ತು ನೈತಿಕ ನಿಯಮಗಳನ್ನು ಹೊಂದಿವೆ.

8. ಕೃಷಿ ಭೂಮಿಯನ್ನು ಏಳನೆಯ ವರ್ಷದಲ್ಲಿ ವ್ಯವಸಾಯ ಮಾಡದೆ ಬಿಟ್ಟುಬಿಡಬೇಕು. ಇದಕ್ಕೆ ಕೊಡಲಾಗಿರುವ ಕಾರಣವೇನೆಂದರೆ, ಬಡ ಜನರಿಗೆ ಮತ್ತು ಕಾಡು ಮೃಗಗಳಿಗೆ ಆ ವರ್ಷವು ಸಹಾಯಕವಾಗಿರಲಿ ಎಂಬುದೇ.

9. ಏಳನೆಯ ದಿನದಲ್ಲಿ ಯಾವ ಕೆಲಸವನ್ನೂ ಮಾಡಬಾರದು. ಇದಕ್ಕೆ ಕೊಡಲಾಗಿರುವ ಕಾರಣವೇನೆಂದರೆ, ಪ್ರಾಣಿಗಳಿಗೆ, ಆಳುಗಳಿಗೆ ಮತ್ತು ಪರದೇಶಿಗಳಿಗೆ ವಿಶ್ರಮಿಸಿಲು ಮತ್ತು ದಣಿವಾರಿಸಿಕೊಳ್ಳಲು ಒಂದು ದಿನದ ಅವಶ್ಯವಿತ್ತು.

10. ಮೂರು ವಾರ್ಷಿಕ ಹಬ್ಬಗಳು ಯಾವುವೆಂದರೆ: ಹುಳಿಯಿಲ್ಲದ ರೊಟ್ಟಿಯ ಹಬ್ಬ (ಮಾರ್ಚ್–ಏಪ್ರಿಲ್ ತಿಂಗಳಲ್ಲಿ ಆಚರಿಸಲಾಗುತ್ತಿತ್ತು ಮತ್ತು ನಿರ್ಗಮನವನ್ನು ಜ್ಞಾಪಿಸಿಕೊಳ್ಳಲಾಗುತ್ತಿತ್ತು), ಸುಗ್ಗಿಯ ಹಬ್ಬ (ಮೇ–ಜೂನ್ ತಿಂಗಳಲ್ಲಿ ಆಚರಿಸಲಾಗುತ್ತಿತ್ತು ಮತ್ತು ಇದನ್ನು ವಾರಗಳ ಹಬ್ಬ ಅಥವಾ ಪಂಚಾಶತ್ತಮ ಎಂದೂ ಸಹ ಕರೆಯಲಾಗುತ್ತದೆ), ಮತ್ತು ಫಲಸಂಗ್ರಹದ ಹಬ್ಬ (ಸೆಪ್ಟೆಂಬರ್–ಅಕ್ಟೋಬರ್ ತಿಂಗಳಲ್ಲಿ ಆಚರಿಸಲಾಗುತ್ತಿತ್ತು ಮತ್ತು ಅರಣ್ಯದಲ್ಲಿ ಕಳೆದ ವರ್ಷಗಳನ್ನು ಜ್ಞಾಪಿಸಿಕೊಳ್ಳಲಾಗುತ್ತಿತ್ತು; ಇದನ್ನು ಗುಡಾರಗಳ ಹಬ್ಬ ಎಂದೂ ಸಹ ಕರೆಯಲಾಗುತ್ತದೆ).

11. ಒಡಂಬಡಿಕೆಯ ಗ್ರಂಥ (ವಿಮೋ. 21:2–23:19): ಇಂದು ನಾವು ಈ ಆಜ್ಞೆಗಳಿಗೆ ಹೇಗೆ ಹೊಂದಿಕೊಂಡಿದ್ದೇವೆ ಎಂಬುದಕ್ಕೆ ಕೆಲವು ಉದಾಹರಣೆಗಳು ಇಲ್ಲಿವೆ.

| **ನಾವು ಇಂದಿಗೂ ಪಾಲಿಸುವ ಆಜ್ಞೆಗಳು** | **ನಾವು ಈ ಕಾಲದಲ್ಲಿ ಪಾಲಿಸದಿರುವ ಆಜ್ಞೆಗಳು** |
|---|---|
| (ನೀವು ಯಾರಿಗಾದರೂ ಹಾನಿ ಮಾಡಿದ್ದಲ್ಲಿ ಪರಿಹಾರವಾಗಿ ಕೊಡುವ ಹಣ) | ಆರು ವರ್ಷಗಳ ನಂತರ ಹಿಬ್ರೂ ಆಳುಗಳಿಗೆ/ದಾಸರಿಗೆ ಏನು ಮಾಡಬೇಕು ಎಂಬುದು |
| (ವಿದೇಶಿಯರನ್ನು | ಕೊಲೆ, ಪೋಷಕರ ಮೇಲೆ ಹಲ್ಲೆ, ಅಪಹರಣ, ಪೋಷಕರನ್ನು ಶಪಿಸುವುದಕ್ಕೆ ಮರಣ ದಂಡನೆ |
| (ವಿಧವೆ ಮತ್ತು ಅನಾಥರನ್ನು ದುರುಪಯೋಗಪಡಿಸಿಕೊಳ್ಳದೆ ಇರುವುದು. ಕೆಲಸಗಾರರಿಗೆ ವೇತನ ಕೊಡದಿದ್ದಲ್ಲಿ ದಂಡ) | ಜೀವಕ್ಕೆ ಜೀವ, ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು, ಕೈಗೆ ಕೈ, ಗಾಯಕ್ಕೆ ಗಾಯ |
| | ಕಳ್ಳನು ತನ್ನ ಕಳ್ಳತನಕ್ಕೆ ಕ್ರಯ ಕಟ್ಟದಿದ್ದಲ್ಲಿ ಗುಲಾಮನಾಗಿ ಮಾರಾಟ |
| | ಮಂತ್ರವಾದಿಯು ಕೊಲ್ಲಲ್ಪಡಬೇಕು |
| | ಸ್ವಂತ ಜನರಿಗೆ ಕೊಟ್ಟ ಹಣಕ್ಕೆ ಬಡ್ಡಿ ತೆಗೆದುಕೊಳ್ಳಬಾರದು |
| | ಚೊಚ್ಚಲ ಮಗನನ್ನು ಬಿಡಿಸಿಕೊಳ್ಳುವುದು ಮತ್ತು ಚೊಚ್ಚಲ ಪ್ರಾಣಿಯನ್ನು ಬಲಿ ಕೊಡುವುದು |
| | ಮೂರು ವಾರ್ಷಿಕ ಹಬ್ಬಗಳನ್ನು ಆಚರಿಸುವುದು |

ಗಮನಿಸಿರಿ: ಒಡಂಬಡಿಕೆಯ ಗ್ರಂಥದ ಕೆಲವೇ ಆಜ್ಞೆಗಳು ಮಾತ್ರ ಇಂದಿನ ಸಭೆಗೆ ಮಾನ್ಯತೆಯುಳ್ಳದ್ದಾಗಿದೆ. ಅವುಗಳು ದೈವಶಾಸ್ತ್ರೀಯವಾದ ಮತ್ತು ನೈತಿಕ ನಿಯಮಗಳ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅನ್ವಯಗಳನ್ನು ಹೊಂದಿವೆ. ಇಂದು ಅವುಗಳ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸನ್ನಿವೇಶ ಹಿನ್ನಲೆಗಳು ಇಲ್ಲವಾದ್ದರಿಂದ ಈ ಆಜ್ಞೆಗಳು ಅನ್ವಯಗಳನ್ನು ಕಳಕೊಂಡಿವೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –

2. ದಶಾಜ್ಞೆಗಳು ಹಾಗೂ ಒಡಂಬಡಿಕೆಯ ಗ್ರಂಥದಲ್ಲಿರುವ ಆಜ್ಞೆಗಳು:

   3) ಅವುಗಳ ನಡುವೆ ಇರುವ ಮೂಲ ವ್ಯತ್ಯಾಸವು ಏನೆಂದರೆ, ದಶಾಜ್ಞೆಗಳು ದೈವಶಾಸ್ತ್ರೀಯವಾದ ಮತ್ತು ನೈತಿಕ ನಿಯಮಗಳನ್ನು ಒಳಗೊಂಡಿದೆ, ಆದರೆ ಒಡಂಬಡಿಕೆಯ ಗ್ರಂಥವು ಹಳೆ ಒಡಂಬಡಿಕೆಯ ಕಾಲದಲ್ಲಿದ್ದ ಇಸ್ರಾಯೇಲರ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸನ್ನಿವೇಶ ಹಿನ್ನಲೆಗಳಲ್ಲಿನ ದಶಾಜ್ಞೆಗಳ ಅನ್ವಯಗಳನ್ನು ಒಳಗೊಂಡಿದೆ.

4) ಇಂದು ಕ್ರಿಸ್ತೀಯ ವಿಶ್ವಾಸಿಗಳಾದ ನಮ್ಮ ಮೇಲೆ ಈ ವ್ಯತ್ಯಾಸವು ಮುಖ್ಯವಾದ ಪರಿಣಾಮಗಳನ್ನು ಹೊಂದಿದೆ: ದೇವಜನರು ಯಾವಾಗಲೂ ದಶಾಜ್ಞೆಗಳನ್ನು ಪಾಲಿಸಬೇಕು. ಆದರೆ ಒಡಂಬಡಿಕೆಯ ಗ್ರಂಥದಲ್ಲಿರುವ ಆಜ್ಞೆಗಳು ನಮಗೆ ಸಂಬಂಧಪಟ್ಟದ್ದಲ್ಲ. ಇದಕ್ಕೆ ಕಾರಣವೇನೆಂದರೆ, ನಮ್ಮ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸನ್ನಿವೇಶ ಹಿನ್ನಲೆಗಳು ಹಳೆ ಒಡಂಬಡಿಕೆಯ ಕಾಲಕ್ಕಿಂತ ಪೂರ್ಣವಾಗಿ ವಿಭಿನ್ನವಾಗಿವೆ.

**ವಿಮೋಚನಕಾಂಡ ಉತ್ತರಗಳು 21: ಧರ್ಮಶಾಸ್ತ್ರ**

**ಆ. ಪ್ರಶ್ನೆಗಳಿಗೆ ಉತ್ತರಗಳು**

1. **ವಿಮೋಚನೆಯು ಧರ್ಮಶಾಸ್ತ್ರಕ್ಕಿಂತ ಮೊದಲು ಬರುತ್ತದೆ** ಎಂಬ ಕೆಳಗಿರುವ ಚಿತ್ರಣವನ್ನು ಅಭ್ಯಸಿಸಿದ ನಂತರ ನನ್ನ ಸಮಾರೋಪಗಳು ಹೀಗಿವೆ:

    1) ಕಾನೂನುಗಳು (ನಿರ್ದಿಷ್ಟವಾಗಿ ದಶಾಜ್ಞೆಗಳು) ಸಿನಾಯಿ ಒಡಂಬಡಿಕೆಯ 'ಒಡಂಬಡಿಕೆಯ ನಿಯಮಗಳಾಗಿವೆ. ಅವುಗಳು ಸಿನಾಯಿ ಒಡಂಬಡಿಕೆಯನ್ನು ಪೂರ್ಣಗೊಳಿಸುತ್ತವೆ.

    2) ಆದರೆ ಸಿನಾಯಿ ಒಡಂಬಡಿಕೆಯು ನಿರ್ಗಮನದ ಘಟನೆಯ ನಂತರ ಬರುತ್ತದೆ

    3) ನಿರ್ಗಮನ ಘಟನೆಯು ಈಜಿಪ್ಟಿನಲ್ಲಿದ್ದ ತಮ್ಮ ಬಂಧನದಿಂದ ಇಸ್ರಾಯೇಲರನ್ನು ದೇವರು ವಿಮೋಚಿಸಿದ ಸಂಗತಿಯಾಗಿದೆ.

    4) ಹಾಗಾಗಿ ಮೊದಲು ವಿಮೋಚನೆ (ನಿರ್ಗಮನ) ಬರುತ್ತದೆ ನಂತರ ಧರ್ಮಶಾಸ್ತ್ರ (ಸಿನಾಯಿ ಒಡಂಬಡಿಕೆಯ 'ಸಾಕ್ಷಿ').

2. **ದಶಾಜ್ಞೆಗಳು ಮತ್ತು ಒಡಂಬಡಿಕೆಯ ಕಾಯಿದೆಗಳು** ಎಂಬ ಕೆಳಗಿರುವ ಇನ್ನೊಂದು ಚಿತ್ರಣವನ್ನು ಅಭ್ಯಸಿಸಿದ ನಂತರ ನನ್ನ ಸಮಾರೋಪಗಳು ಹೀಗಿವೆ:

    1) ಕೆಲವು ಸತ್ಯವೇದ ಶಾಸ್ತ್ರಜ್ಞರು ಘೋಷಿಸುವಂತೆ ದಶಾಜ್ಞೆಗಳು ನೇರವಾಗಿ ಇಸ್ರಾಯೇಲರಿಗೆ ಸಂಬೋಧಿಸಲ್ಪಟ್ಟದ್ದು ಎಂಬ ಹೇಳಿಕೆಯನ್ನು ನಾನು ಒಪ್ಪುವುದಿಲ್ಲ. ದೇವರು ಸಿನಾಯಿ ಪರ್ವತದ ಬಳಿಯಲ್ಲಿ ಮೋಶೆಯ ಮೂಲಕ ಮಾತನಾಡಿದನು, ಇಸ್ರಾಯೇಲರೊಂದಿಗೆ ನೇರವಾಗಿ ಮಾತನಾಡಲಿಲ್ಲ ಎಂಬುದನ್ನು ನಮ್ಮ ಹಿಂದಿನ ಅಧ್ಯಯನಗಳಲ್ಲಿ ಕಂಡಿದ್ದೇವೆ. ಧರ್ಮೋ. 5:5 ರಲ್ಲಿ, ದಶಾಜ್ಞೆಗಳ ಕುರಿತು ಎರಡನೆಯ ದಾಖಲೆಯನ್ನು ಅಲ್ಲಿ ಕಾಣುತ್ತೇವೆ, ಮೋಶೆಯು ಸ್ಪಷ್ಟವಾಗಿ ಹೀಗೆ ಹೇಳುತ್ತಾನೆ, *ಆ ಕಾಲದಲ್ಲಿ ನಾನು ಯೆಹೋವನ ವಾಕ್ಯವನ್ನು ನಿಮಗೆ ತಿಳಿಸುವ ಹಾಗೆ ಯೆಹೋವನಿಗೂ ನಿಮಗೂ ನಡುವೆ ನಿಂತಿದ್ದೆನು; ಏಕೆಂದರೆ ನೀವು ಆ ಬೆಂಕಿಗೆ ಭಯಪಟ್ಟು ಬೆಟ್ಟದ ಮೇಲೆ ಏರಲಿಲ್ಲ.* ಹಾಗಾಗಿ ದಶಾಜ್ಞೆಗಳು ಹಾಗೂ ಒಡಂಬಡಿಕೆಯ ಕಾಯಿದೆಗಳಲ್ಲಿರುವ ಕಾನೂನುಗಳು ಮೋಶೆಯ ಮೂಲಕ ಇಸ್ರಾಯೇಲರಿಗೆ ಕೊಡಲ್ಪಟ್ಟವು.

    2) ದಶಾಜ್ಞೆಗಳು ಸಾಮಾನ್ಯ ನಿಯಮಗಳನ್ನು ಹೊಂದಿವೆ ಎಂಬುದನ್ನು ನಾನು ಒಪ್ಪುತ್ತೇನೆ. ಹಾಗಾಗಿ ಈ ನಿಯಮಗಳು ದೇವಜನರಿಗೆ ಎಲ್ಲಾ ಕಾಲದಲ್ಲೂ, ಹಳೆ ಒಡಂಬಡಿಕೆಯ ಕಾಲದಲ್ಲೂ ಹಾಗೂ ಹೊಸ ಒಡಂಬಡಿಕೆಯ ಕಾಲದಲ್ಲೂ, ಮಾನ್ಯತೆಯನ್ನು ಹೊಂದಿದೆ.

    3) ಒಡಂಬಡಿಕೆಯ ಕಾಯಿದೆಗಳಲ್ಲಿರುವ ಕಾನೂನುಗಳು ದಶಾಜ್ಞೆಗಳ ಸಾಮಾನ್ಯ ನಿಯಮಗಳ ಅನ್ವಯಿಸುವಿಕೆಯಾಗಿವೆ ಎಂಬುದನ್ನು ನಾನು ಒಪ್ಪುತ್ತೇನೆ. ಅದರ ಅರ್ಥವೇನೆಂದರೆ, ಹಳೆ ಒಡಂಬಡಿಕೆಯ ಕಾಲದಲ್ಲಿದ್ದ ಇಸ್ರಾಯೇಲರ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸನ್ನಿವೇಶ ಹಿನ್ನಲೆಗಳನ್ನು ಅವುಗಳು ಪ್ರತಿಬಿಂಬಿಸುತ್ತವೆ ಎಂಬುದಾಗಿದೆ. ಇದರ ಪರಿಣಾಮವಾಗಿ, ಅವುಗಳು ಕ್ರೈಸ್ತ ವಿಶ್ವಾಸಿಗಳಿಗೆ ಅನ್ವಯಿಸುವುದಿಲ್ಲ.

    4) ಧರ್ಮಶಾಸ್ತ್ರವು ಚಿತ್ರಿಸಲ್ಪಟ್ಟಿರುವ ರೀತಿಯ ಕುರಿತು ನಾನು ಅಸಂತೋಷಪಡುತ್ತೇನೆ. ನಾವು ಅಧ್ಯಯನ 23 ರಲ್ಲಿ ನೋಡಲಿಕ್ಕಿರುವಂತೆ, ಕಲ್ಲಿನ ಎರಡು ಹಲಿಗೆಗಳು 'ಒಡಂಬಡಿಕೆಯ ನಿಯಮಗಳ' ('ಸಾಕ್ಷಿಯ') ನಕಲು ಪ್ರತಿಗಳಾಗಿದ್ದವು, 31:18 ರ ಟಿಪ್ಪಣಿಯನ್ನು ನೋಡಿರಿ.

**ವಿಮೋಚನಕಾಂಡ ಉತ್ತರಗಳು 22: ದೇವರ ದೂತನು ಮಾರ್ಗವನ್ನು ಸಿದ್ಧಮಾಡುವನು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಈ ವಾಕ್ಯಭಾಗದ ರಚನೆಯು ಎರಡು ಮುಖ್ಯ ಭಾಗಗಳನ್ನು ಹೊಂದಿದೆ:
   1) ದೇವರ ದೂತನು ಇಸ್ರಾಯೇಲರ ಮುಂದೆ ಹೋದದ್ದು, ವ. 20–26
   2) ದೇವರ ಭೀತಿಯು ಇಸ್ರಾಯೇಲರ ಮುಂದೆ ಕಳುಹಿಸಲ್ಪಟ್ಟದ್ದು, ವ. 27–33
2. ಇಸ್ರಾಯೇಲರು ದೇವದೂತನೊಂದಿಗೆ ಹೀಗೆ ನಡಕೊಳ್ಳಬೇಕಾಗಿತ್ತು:
   1) ಅವರು ಆತನು ಹೇಳುವುದನ್ನು ಲಕ್ಷ್ಯಕೊಟ್ಟು ಕೇಳಬೇಕಾಗಿತ್ತು ಮತ್ತು ಅದನ್ನು ಪಾಲಿಸಬೇಕಾಗಿತ್ತು.
   2) ಅವರು ಆತನ ವಿರುದ್ಧ ದಂಗೆ ಏಳಬಾರದು.
3. ಇಸ್ರಾಯೇಲರು ಕಾನಾನಿನ ಜನರ ಧಾರ್ಮಿಕ ಆಚಾರಗಳ ಕುರಿತು ಹೀಗೆ ನಡಕೊಳ್ಳಬೇಕಾಗಿತ್ತು:
   1) ಅವರು ಕಾನಾನ್ಯ ರಾಷ್ಟ್ರಗಳ ದೇವರುಗಳನ್ನು ಆರಾಧಿಸಬಾರದು.
   2) ಅವರು ಕಾನಾನ್ಯರ ಧಾರ್ಮಿಕ ಆಚಾರಗಳನ್ನು ಪಾಲಿಸಬಾರದು.
   3) ಅವರು ಕಾನಾನ್ಯರ ವಿಗ್ರಹಗಳನ್ನು ಮತ್ತು ಪೂಜಾ ಸ್ಥಳಗಳನ್ನು ನಾಶಮಾಡಬೇಕಾಗಿತ್ತು.
   4) ಅವರು ಕಾನಾನ್ಯರ ದೇವರುಗಳೊಂದಿಗೆ ಒಡಂಬಡಿಕೆಗಳನ್ನು ಮಾಡಿಕೊಳ್ಳಬಾರದು (ವ. 33).
4. ಇಸ್ರಾಯೇಲರು ತನಗೆ ನಂಬಿಗಸ್ತರಾಗಿರುವುದಾದರೆ ದೇವರು ಅನೇಕ ಆಶೀರ್ವಾದಗಳನ್ನು ಅವರಿಗೆ ವಾಗ್ದಾನ ಮಾಡುತ್ತಾನೆ:
   1) ದೇವರು ಅವರ ಆಹಾರವನ್ನು ಮತ್ತು ನೀರನ್ನು ಆಶೀರ್ವದಿಸುವನು.
   2) ದೇವರು ಅವರಿಂದ ರೋಗಗಳನ್ನು ತೆಗೆದುಹಾಕುವನು.
   3) ದೇವರು ಇಸ್ರಾಯೇಲಿನ ಸ್ತ್ರೀಯರಿಗೆ ಸುರಕ್ಷಿತವಾದ ಹೆರಿಗೆಯನ್ನು ದಯಪಾಲಿಸುವನು.
   4) ಇಸ್ರಾಯೇಲರು ಮುದಿ ವಯಸ್ಸಿನವರೆಗೂ ಜೀವಿಸುವಂತೆ ದೇವರು ಮಾಡುವನು
5. ಇಸ್ರಾಯೇಲರು ಕಾನಾನಿನ ಜನರನ್ನು ದೇಶದಲ್ಲಿ ವಾಸಿಸಲು ಬಿಡಬಾರದು ಎಂದು ದೇವರು ಅವರಿಗೆ ಹೇಳಿದನು. ಒಂದು ವೇಳೆ ಅವರನ್ನು ವಾಸಿಸಲು ಬಿಟ್ಟರೆ ಅವರ ಧರ್ಮವು ಇಸ್ರಾಯೇಲರನ್ನು ಬಲೆಗೆ ಸಿಕ್ಕಿಸಿ ಅವರನ್ನು ನಾಶಮಾಡುವದು.
6. ನಾವು ಈ ವಾಕ್ಯಭಾಗದಿಂದ ವಾಗ್ದಾನ ದೇಶವು ಕೆಂಪು ಸಮುದ್ರದಿಂದ ಮೇಡಿಟೆರೆನಿಯನ್ ಸಮುದ್ರದವರೆಗೂ ಹಾಗೂ ಸಿನಾಯಿಯ ಈಶಾನ್ಯದಿಂದ ಯುಫ್ರೇಟಿಸ್ ನದಿಯವರೆಗೂ ವಿಸ್ತರಿಸಲ್ಪಡುವುದು ಎಂಬುದನ್ನು ಕಲಿತುಕೊಳ್ಳುತ್ತೇವೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ವಾಗ್ದಾನ ದೇಶವು ಇಸ್ರಾಯೇಲರ ಪ್ರಾಂತವಾಗಿ ಸ್ಥಾಪಿಸಲ್ಪಡಬೇಕಾದರೆ ದೇವರು ಮತ್ತು ಇಸ್ರಾಯೇಲರು ಹೀಗೆ ಒಟ್ಟಾಗಿ ಕೆಲಸ ಮಾಡಬೇಕಿತ್ತು:
   1) ದೇವರು ಇಸ್ರಾಯೇಲರ ಮುಂದಾಗಿ ಹೋಗಿ ಅವರನ್ನು ಸಂರಕ್ಷಿಸಿ ವಾಗ್ದಾನ ದೇಶಕ್ಕೆ ಅವರನ್ನು ಕರೆತರುವನು.

      ಆದರೆ ಇಸ್ರಾಯೇಲರು ಆತನು ಹೇಳುವುದನ್ನು ಲಕ್ಷ್ಯಕೊಟ್ಟು ಕೇಳಬೇಕಾಗಿತ್ತು ಮತ್ತು ಅದನ್ನು ಪಾಲಿಸಬೇಕಾಗಿತ್ತು. ಅವರು ಆತನ ವಿರುದ್ಧ ದಂಗೆ ಏಳಬಾರದು.
   2) ದೇವರು ಇಸ್ರಾಯೇಲರ ವೈರಿಗಳನ್ನು ವಿರೋಧಿಸುವನು.

      ಆದರೆ ಇಸ್ರಾಯೇಲರು ದೇವರು ಹೇಳುವುದನ್ನು ಲಕ್ಷ್ಯಕೊಟ್ಟು ಕೇಳಬೇಕಾಗಿತ್ತು.
   3) ದೇವರು ಕಾನಾನ್ಯ ರಾಷ್ಟ್ರಗಳನ್ನು ಗಲಿಬಿಲಿಗೊಳಿಸುವನು, ಅವರನ್ನು ಹೊಡೆದೋಡಿಸುವನು ಮತ್ತು ಅವರನ್ನು ಅಳಿಸಿಬಿಡುವನು.

      ಆದರೆ ಇಸ್ರಾಯೇಲರು ಅವರ ದೇವರುಗಳನ್ನು ಆರಾಧಿಸಬಾರದು, ಅವರ ದೇವರುಗಳೊಂದಿಗೆ ಒಡಂಬಡಿಕೆಗಳನ್ನು ಮಾಡಿಕೊಳ್ಳಬಾರದು ಅಥವಾ ಅವರ ಧಾರ್ಮಿಕ ಆಚಾರಗಳನ್ನು ಪಾಲಿಸಲೂಬಾರದು. ಬದಲಾಗಿ ಅವರು ಕಾನಾನ್ಯರ ವಿಗ್ರಹಗಳನ್ನು ಮತ್ತು ಪೂಜಾ ಸ್ಥಳಗಳನ್ನು ನಾಶಮಾಡಬೇಕಾಗಿತ್ತು. ಅವರು ಕಾನಾನ್ಯರನ್ನು ದೇಶದಿಂದ ಹೊಡೆದೋಡಿಸಬೇಕಿತ್ತು.

      ಸಮಾರೋಪ: ಇಸ್ರಾಯೇಲರು ವಾಗ್ದಾನ ದೇಶವನ್ನು ವಶಪಡಿಸಿಕೊಳ್ಳಬೇಕಾದರೆ ಅವರು ದೇವರೊಂದಿಗೆ ಸಹಕರಿಸಬೇಕಾಗಿತ್ತು.

2. ಈ ವಾಕ್ಯಭಾಗದಿಂದ ಮತ್ತು ಮೇಲಿನ ಉತ್ತರಗಳಿಂದ ನಾವು ನಮ್ಮ ಸ್ವಂತ ಜೀವನ ಮತ್ತು ಸೇವೆಗಾಗಿ ಕೆಲವು ಆತ್ಮಿಕ ನಿಯಮಗಳನ್ನು ಕಲಿತುಕೊಳ್ಳಬಹುದು. ಆದರೆ ಈ ವಾಕ್ಯಭಾಗದಲ್ಲಿ ದೇವರು ಇಸ್ರಾಯೇಲರಿಗೆ ಹೇಳುವ ಎಲ್ಲಾ ಸಂಗತಿಯು ಇಂದಿನ ಕ್ರೈಸ್ತರಿಗೆ ಅನ್ವಯಿಸುವುದಿಲ್ಲ.

1) ನಮಗೆ ಅನ್ವಯಿಸುವ ಕೆಲವು ಆತ್ಮಿಕ ನಿಯಮಗಳು:

- ದೇವರಿಲ್ಲದೆ ನಾವು ಏನನ್ನೂ ಮಾಡಲು ಸಾಧ್ಯವಿಲ್ಲ. ಆತನು ನಮ್ಮ ಮುಂದಾಗಿ ಹೋಗುತ್ತಾನೆ, ನಮ್ಮನ್ನು ಸಂರಕ್ಷಿಸುತ್ತಾನೆ, ಆತನು ನಮ್ಮ ವೈರಿಗಳನ್ನು ನಮ್ಮ ಎದುರಿನಿಂದ ಓಡಿಸುತ್ತಾನೆ, ಆತನು ನಮಗೆ ಜಯವನ್ನು ಕೊಡುತ್ತಾನೆ.

- ಆದರೆ ನಾವು ಆತನ ಸ್ವರವನ್ನು ಕೇಳಬೇಕು ಮತ್ತು ಆತನಿಗೆ ವಿಧೇಯರಾಗಬೇಕು.

- ನಾವು ದೈವ–ಭಯವುಳ್ಳ ('ಪವಿತ್ರ') ಜನರಾಗಬೇಕು. ನಾವು ಅನ್ಯಜನರ ದೇವರುಗಳನ್ನು ಆರಾಧಿಸಬಾರದು. ನಾವು ಅನ್ಯಜನರ ಧಾರ್ಮಿಕ ಆಚಾರಗಳೊಂದಿಗೆ ರಾಜಿಯಾಗಬಾರದು.

2) ಇಸ್ರಾಯೇಲರೊಂದಿಗೆ ದೇವರ ಸಿನಾಯಿ ಒಡಂಬಡಿಕೆಯು ಮತ್ತು ಕಾನಾನ್ ದೇಶವನ್ನು ಅವರು ಸ್ವಾಧೀನಪಡಿಸಿಕೊಳ್ಳುವರು ಎಂದು ಆತನು ಅವರಿಗೆ ಮಾಡಿದ ವಾಗ್ದಾನಗಳು ಆ ಐತಿಹಾಸಿಕ ಸನ್ನಿವೇಶಕ್ಕೆ ಅದ್ವಿತೀಯವಾಗಿದ್ದವು. ಇದರ ಪರಿಣಾಮವೇನೆಂದರೆ, ಎಲ್ಲವೂ ನಮಗೆ ಅನ್ವಯಿಸುವುದಿಲ್ಲ ಎಂಬುದಾಗಿದೆ, ಉದಾಹರಣೆಗೆ:

- ನಾವು ನಮ್ಮ ದೇಶದಲ್ಲಿರುವ ಎಲ್ಲಾ ವಿಗ್ರಹಗಳನ್ನು ಮತ್ತು ಪೂಜಾ ಸ್ಥಳಗಳನ್ನು ನಾಶಮಾಡಬೇಕು ಎಂದು

- ಅಥವಾ ನಮ್ಮ ದೇಶದಿಂದ ಅಕ್ರೈಸ್ತರನ್ನು ಹೊಡೆದೋಡಿಸಬೇಕು ಎಂದು ಘೋಷಿಸಲು ಈ ವಾಕ್ಯಭಾಗವನ್ನು ಬಳಸಲು ಸಾಧ್ಯವಿಲ್ಲ.

3) ತನ್ನನ್ನು ಆರಾಧಿಸುವುದರ ಫಲವಾಗಿ ಕೊಡುವೆನೆಂದು ಯೆಹೋವನು ಇಸ್ರಾಯೇಲರಿಗೆ ಮಾಡಿದ ವಾಗ್ದಾನಗಳು ನೇರವಾಗಿ ನಮಗೂ ಅನ್ವಯಿಸುತ್ತದೆ ಎಂಬುದು ಸಂಶಯಾತ್ಮಕವಾಗಿದೆ (ವ. 25–26). ಈ ಲೋಕದಲ್ಲಿ ಕ್ರೈಸ್ತ ವಿಶ್ವಾಸಿಗಳಾಗಿ ನಾವು ಕೆಲವೊಮ್ಮೆ ಆಹಾರ ಮತ್ತು ನೀರಿನ ಕೊರತೆಯನ್ನು, ರೋಗವನ್ನು, ಗರ್ಭಸ್ರಾವವನ್ನು ಮತ್ತು ಬಂಜೆತನವನ್ನು, ಮೊಟಕುಗೊಳಿಸಲ್ಪಟ್ಟ ಜೀವನಾವಧಿಯನ್ನೂ ಸಹ ಅನುಭವಿಸುತ್ತೇವೆ. ಆದರೆ ಯೇಸು ಕ್ರಿಸ್ತನ ಬರೋಣದಲ್ಲಿ ದೇವರ ರಾಜ್ಯವು ಪೂರ್ಣ ಮಹಿಮೆಯೊಂದಿಗೆ ಬರುವಾಗ ಈ ಎಲ್ಲಾ ಸಂಗತಿಗಳು ನಶಿಸಿ ಹೋಗುತ್ತವೆ ಎಂಬುದನ್ನು ಬಲ್ಲೆವು. ಆಗ ಇನ್ನೆಂದಿಗೂ ರೋಗವಾಗಲಿ ಅಥವಾ ಮರಣವಾಗಲಿ, ಆಹಾರ ಮತ್ತು ನೀರಿನ ಕೊರತೆಯಾಗಲಿ ಇರುವುದಿಲ್ಲ.

**ವಿಮೋಚನಕಾಂಡ ಉತ್ತರಗಳು 23: ಒಡಂಬಡಿಕೆಯ ಧೃಢೀಕರಣ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ದೇವರು ಪರ್ವತದ ಮೇಲೆ ಹೇಳಿದ್ದನ್ನು ಮೋಶೆಯು ಇಸ್ರಾಯೇಲರಿಗೆ ತಿಳಿಸಿದಾಗ ಅವರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದರು ಮತ್ತು ಎಲ್ಲಾ ವಿಷಯಗಳಲ್ಲಿಯೂ ಯೆಹೋವನಿಗೆ ವಿಧೇಯರಾಗುವೆವು ಎಂದು ಪ್ರಮಾಣ ಮಾಡಿದರು.
2. ಆಗ ಮೋಶೆಯು ಯೆಹೋವನು ಹೇಳಿದ ಸಂಗತಿಯನ್ನೆಲ್ಲಾ ಬರೆದನು. ಅಮಾಲೇಕ್ಯರ ವಿರುದ್ಧ ಗಳಿಸಿದ ಜಯವನ್ನು ದಾಖಲಿಸಬೇಕೆಂದು ಇದಕ್ಕೂ ಮುಂಚೆ ಯೆಹೋವನು ಮೋಶೆಗೆ ಹೇಳಿದ್ದನು (ವಿಮೋ. 17:14).
3. ಒಡಂಬಡಿಕೆಯು ಹೀಗೆ ಧೃಢೀಕರಿಸಲ್ಪಟ್ಟಿತು:
    1) ಹನ್ನೆರಡು ಇಸ್ರಾಯೇಲ್ ಗೋತ್ರಗಳನ್ನು ಪ್ರತಿನಿಧಿಸಲು ಹನ್ನೆರಡು ಸ್ಥಂಬಗಳನ್ನು ನಿಲ್ಲಿಸಲಾಯಿತು.
    2) ಯೆಹೋವನಿಗೆ ದಹನಬಲಿಗಳನ್ನೂ ಸಮಾಧಾನ ಬಲಿಗಳನ್ನೂ ಅರ್ಪಿಸಲಾಯಿತು. ಮೋಶೆಯು ರಕ್ತವನ್ನು ಬಲಿಪೀಠದ ಮೇಲೆ ಚಿಮುಕಿಸಿದನು.
    3) ಮೋಶೆಯು ಧರ್ಮಶಾಸ್ತ್ರವನ್ನು ಓದಿದನು ಮತ್ತು ಜನರು ಅದಕ್ಕೆ ವಿಧೇಯರಾಗುವೆವೆಂದು ಪ್ರಮಾಣ ಮಾಡಿದರು.
    4) ಮೋಶೆಯು ಉಳಿದ ರಕ್ತವನ್ನು (ಮೋಶೆಯು ಅದನ್ನು 'ಒಡಂಬಡಿಕೆಯ ರಕ್ತ' ಎಂಬುದಾಗಿ ಕರೆದನು) ಜನರ ಮೇಲೆ ಚಿಮುಕಿಸಿದನು.
4. ವ. 8 ರಲ್ಲಿರುವ 'ತರುವಾಯ' ಎಂಬ ಪದದ ಮಹತ್ವವೇನಾಗಿತ್ತೆಂದರೆ, ಇಸ್ರಾಯೇಲರು ಮೊದಲು ಯೆಹೋವನ ಆಜ್ಞೆಗಳಿಗೆ ವಿಧೇಯರಾಗಬೇಕಿತ್ತು. ಆಗ ಮಾತ್ರ ಅವರು ದೇವರೊಂದಿಗಿನ ಒಡಂಬಡಿಕೆಯಲ್ಲಿ ಭಾಗವಹಿಸಬಹುದಾಗಿತ್ತು.
5. ಆರೋನನ ಇಬ್ಬರು ಮಕ್ಕಳಾದ ನಾದಾಬನೂ ಮತ್ತು ಅಬೀಹುವೂ ಮತ್ತು 70 ಇಸ್ರಾಯೇಲರ ನಾಯಕರುಗಳು (ಅವರಲ್ಲಿ ಯೆಹೋಶುವನು ಒಬ್ಬನು, ವ. 13 ನ್ನು ನೋಡಿರಿ) ಮೋಶೆಯೊಂದಿಗೆ ಪರ್ವತದ ಮೇಲೆ ಬರಲು ಅನುಮತಿಯಾಯಿತು. ಆದರೆ ಮೋಶೆಗೂ ಅವರಿಗೂ ನಡುವೆ ಇದ್ದ ವ್ಯತ್ಯಾಸವು ಅವರು ಎಷ್ಟು ಸಮೀಪ ಬರಬಹುದೆಂದು ಅನುಮತಿಸಲ್ಪಟ್ಟರು ಎಂಬುದರಲ್ಲಿ ಅಡಕವಾಗಿದೆ. ಮೋಶೆಯು ದೇವರ ಸಮೀಪಕ್ಕೆ ಬರುವಂತೆ ಅನುಮತಿಸಲ್ಪಟ್ಟನು ಮತ್ತು ಮೋಶೆಯೊಂದಿಗೆ ಮಾತ್ರ ದೇವರು ಮಾತನಾಡಿದನು. ಇತರರು ದೂರದಲ್ಲಿದ್ದುಕೊಂಡು ದೇವರನ್ನು ಆರಾಧಿಸಬಹುದಾಗಿತ್ತು.
6. ದೇವರು ರತ್ನದಿಂದ ಮಾಡಲ್ಪಟ್ಟ ಒಂದು ನೀಲಿ ಬಣ್ಣದ ನೆಲದ ಮೇಲೆ ನಿಂತವನಾಗಿ ಪರ್ವತದ ಮೇಲೆ ಬಂದ ಮೋಶೆಗೂ ಹಾಗೂ ಇತರೆ ನಾಯಕರುಗಳಿಗೂ ತನ್ನನ್ನು ಪ್ರಕಟಪಡಿಸಿಕೊಂಡನು.
7. ದೇವರು ಮೋಶೆಗೆ ಕಲ್ಲಿನ ಹಲಿಗೆಗಳನ್ನು ಕೊಡಬೇಕೆಂದಿದ್ದರಿಂದ ಆತನು ಪರ್ವತದ ಇನ್ನೂ ಮೇಲಕ್ಕೆ ಬರಲು ಹೇಳಿದನು (ವ. 12).
8. ಯೆಹೋಶುವನ ಕುರಿತು 24 ನೇ ಅಧ್ಯಾಯದಲ್ಲಿ ನಾವು ಕೇವಲ ಎರಡು ನಿಖರವಾದ ಅಂಶಗಳನ್ನು ತಿಳಿದುಕೊಳ್ಳುತ್ತೇವೆ. ಆತನು ಮೋಶೆಯ ಸಹಾಯಕನಾಗಿದ್ದನು ಮತ್ತು ಆತನು ಮೋಶೆಯೊಂದಿಗೆ ಪರ್ವತದ ಇನ್ನೂ ಮೇಲಕ್ಕೆ ಹೋದನು (ವ. 13). ಹಾಗಾಗಿ ಪರ್ವತದ ಮೇಲೆ ಕರೆತರಬೇಕೆಂದು ದೇವರು ಮೋಶೆಗೆ ಹೇಳಿದ ಆ ಎಪ್ಪತ್ತು ಹಿರಿಯರಲ್ಲಿ ಯೆಹೋಶುವನೂ ಒಬ್ಬನಾಗಿದ್ದಿರಬಹುದು ಎಂದು ನಾವು ಅಂದುಕೊಳ್ಳಬಹುದು (ವ. 1). ಕೇವಲ ಮೋಶೆಯು ಮಾತ್ರ ತನ್ನ ಸಮೀಪಕ್ಕೆ ಬರಬೇಕೆಂದು ದೇವರು ಹೇಳಿದ್ದರಿಂದ ಆತನು ಎಲ್ಲಾ ಸಮಯದಲ್ಲಿಯೂ ಮೋಶೆಯೊಂದಿಗೆ ಇರಲಿಲ್ಲ ಎಂದೂ ಸಹ ನಾವು ಅಂದುಕೊಳ್ಳಬಹುದು (ವ. 2). ಆದರೆ ಮೋಶೆಯು ದೇವರಿಂದ ಕಲ್ಲಿನ ಹಲಿಗೆಗಳನ್ನು ಪಡೆದ ನಂತರ ಆತನು ಮೋಶೆಯೊಂದಿಗೆ ಪರ್ವತದ ಮೇಲಿದ್ದನು (31:18) ಮತ್ತು ಪರ್ವತವನ್ನು ಇಳಿದು ಇಸ್ರಾಯೇಲರ ಪಾಳೆಯದ ಕಡೆಗೆ ಬರುತ್ತಿದ್ದನು (32:15–17) ಎಂಬುದು ನಮಗೆ ತಿಳಿದದೆ.
9. ಇಸ್ರಾಯೇಲರು ಪರ್ವತದ ತುದಿಯಲ್ಲಿ ದಹಿಸುವ ಅಗ್ನಿಯಂತೆ ದೇವರ ಪ್ರಸನ್ನತೆಯನ್ನು ಅನುಭವಿಸಿದರು (24:17). ಅವರು ಬಹುಶಃ ಮೋಶೆಯು ದೇವರ ಸಮೀಪಕ್ಕೆ ಬರಲು ಪ್ರವೇಶಿಸಿದ ಮೇಘವನ್ನೂ ಸಹ ಕಂಡಿರಬಹುದು (ವ. 15, 18).
10. ದೇವರು ಮೋಶೆಗೆ ಸಾಕ್ಷಿಯ ಎರಡು ಹಲಿಗೆಗಳನ್ನು ಕೊಡುವುದಕ್ಕಿಂತ ಮುಂಚೆ ಆತನು ಅವರಿಗೆ ಈ ಕೆಳಗಿನ ವಿಷಯಗಳ ಕುರಿತು ಆಜ್ಞೆಗಳನ್ನು ಕೊಟ್ಟನು: ದೇವದರ್ಶನ ಗುಡಾರಕ್ಕಾಗಿ ಕಾಣಿಕೆಗಳು (25:1–9), ಮಂಜೂಷ (25:10–22), ರೊಟ್ಟಿ ಮೇಜು (25:23–30), ಬಂಗಾರದ ದೀಪಸ್ತಂಭ (25:31–40), ಗುಡಾರ (26:1–37), ದಹನಬಲಿಗಾಗಿ ಬಲಿಪೀಠ (27:1–8), ಗುಡಾರದ ಅಂಗಳ (27:9–19), ದೀಪಸ್ತಂಭದ ದೀಪವನ್ನು ಉರಿಸುವುದಕ್ಕೆ ಎಣ್ಣೆ (27:20–21), ಯಾಜಕರು ಧರಿಸಬೇಕಾದ ವಸ್ತ್ರಗಳು (28:1–43), ಯಾಜಕರನ್ನು ಪ್ರತಿಷ್ಠಿಸಬೇಕಾದ ಕ್ರಮ (ಅಧ್ಯಾಯ 29), ಧೂಪವೇದಿಕೆ (30:1–10), ಪ್ರಾಯಶ್ಚಿತ್ತದ ಹಣ (30:11–16), ತೊಳೆಯುವುದಕ್ಕೆ ಬೋಗುಣಿ (30:17–21), ಅಭಿಷೇಕ ತೈಲ (30:22–33), ಪರಿಮಳ ದ್ರವ್ಯಗಳು (30:34–38), ಬೆಚಲೇಲ ಮತ್ತು ಒಹೊಲಿಯಾಬರು ಎಲ್ಲಾ ಕೆಲಸದ ಜವಾಬ್ದಾರಿಗಳನ್ನು ವಹಿಸಿಕೊಳ್ಳಬೇಕು (31:1–11) ಮತ್ತು ಸಬ್ಬತ್ ದಿನಾಚರಣೆ (31:12–18).

11. ಕಲ್ಲಿನ ಎರಡು ಹಲಿಗೆಗಳನ್ನು 'ಸಾಕ್ಷಿಯ ಎರಡು ಹಲಿಗೆಗಳೆಂದು' ಯಾಕೆಂದರೆ ಅವುಗಳು ಸಿನಾಯಿ ಪರ್ವತದ 'ಒಡಂಬಡಿಕೆಯ ಶಾಸನಗಳನ್ನು' (ದಶಾಜ್ಞೆಗಳನ್ನು) ಹೊಂದಿದ್ದವು (31:18 ರ ಟಿಪ್ಪಣಿಯನ್ನು ನೋಡಿರಿ, ಅಲ್ಲಿ ಈ ಎರಡೂ ಪದಗಳ ನಡುವೆ ಇರುವ ಸಂಬಂಧವನ್ನು ವಿವರಿಸಲಾಗಿದೆ).

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಈ ವಾಕ್ಯಭಾಗದಲ್ಲಿ ಬಲಿ ಅರ್ಪಿಸಲ್ಪಟ್ಟ ಎತ್ತಿನ ರಕ್ತವನ್ನು ಎರಡು ವ್ಯತ್ಯಾಸವಾದ ರೀತಿಯಲ್ಲಿ ಬಳಸಲಾಗಿದೆ:

    1) ಮೊದಲನೆಯದಾಗಿ, ರಕ್ತದ ಅರ್ಧ ಭಾಗವನ್ನು ಬಲಿಪೀಠದ ಮೇಲೆ ಚಿಮುಕಿಸಲಾಯಿತು. ಇಸ್ರಾಯೇಲರು ಅರ್ಪಿಸಿದ ಬಲಿಯನ್ನು ದೇವರು ಅಂಗೀಕರಿಸಿದ್ದಾನೆ ಮತ್ತು ಆತನು ಅವರಿಗೆ ಕ್ಷಮಾಪಣೆಯನ್ನು ಅನುಗ್ರಹಿಸುತ್ತಾನೆ ಎಂಬುದರ ಸಂಕೇತವಾಗಿದೆ.

    2) ಎರಡನೆಯದಾಗಿ, ರಕ್ತದ ಉಳಿದ ಭಾಗವನ್ನು ಜನರ ಮೇಲೆ ಚಿಮುಕಿಸಲಾಯಿತು. ಇದು ಇಸ್ರಾಯೇಲರು ಒಡಂಬಡಿಕೆಗೆ ಬದ್ಧರಾಗಿದ್ದಾರೆ ಎಂಬುದರ ಸಂಕೇತವಾಗಿದೆ. ಅವರ ಮೇಲೆ ಚಿಮುಕಿಸಲ್ಪಟ್ಟ ರಕ್ತವು ಒಡಂಬಡಿಕೆಯನ್ನು ಮಾನ್ಯ ಮಾಡುವುದರಿಂದ ಅವರು ಒಡಂಬಡಿಕೆಯ ಜನರಾಗುತ್ತಾರೆ.

2. *ಆದರೆ ದೇವರು ಇಸ್ರಾಯೇಲರ ಶ್ರೇಷ್ಠರ ಮೇಲೆ ಕೈ ಹಾಕಲಿಲ್ಲ. ಅವರು ಸಹ ದೇವರನ್ನು ನೋಡಿ ...* ಎಂಬ (ವ. 11) ಹೇಳಿಕೆಯನ್ನು ನಾನು ಹೀಗೆ ಅರ್ಥಮಾಡಿಕೊಳ್ಳುತ್ತೇನೆ:

    1) ಅವರು ಅಷ್ಟು ಸಮೀಪಕ್ಕೆ ಬಂದಿದ್ದಕ್ಕೆ ಮತ್ತು ಆತನನ್ನು 'ನೋಡಿದ್ದಕ್ಕೆ' ದೇವರು ಅವರನ್ನು ಶಿಕ್ಷಿಸಲಿಲ್ಲ. ಸ್ವತಃ ಆತನೇ ಅವರನ್ನು ಪರ್ವತದ ಮೇಲೆ ಬರಬೇಕೆಂದು ಕರೆದನು.

    2) ದೇವರು ಅನುಮತಿಸಿದ್ದಷ್ಟು ಮಾತ್ರ ಅವರು ಆತನನ್ನು 'ನೋಡಿದರು'. ಅವರು ದೇವರ ಪೂರ್ಣ ಮಹಿಮೆಯನ್ನು ನೋಡಲಿಲ್ಲ. ಅವರು ಅದನ್ನು ನೋಡಿ ಜೀವದಿಂದುಳಿಯುತ್ತಿರಲಿಲ್ಲ (33:20 ನ್ನು ಹೋಲಿಸಿರಿ, ಅಲ್ಲಿ ದೇವರು ಮೋಶೆಗೆ ಹೀಗೆ ಹೇಳುತ್ತಾನೆ; *ನೀನು ನನ್ನ ಮುಖವನ್ನು ನೋಡಲಾರಿ. ಏಕೆಂದರೆ ಯಾವ ಮನುಷ್ಯನೂ ನನ್ನನ್ನು ನೋಡಿ ಬದುಕುವುದಿಲ್ಲ*).

**ವಿಮೋಚನಕಾಂಡ ಉತ್ತರಗಳು 24: ಚಿನ್ನದ ಕರು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಇಸ್ರಾಯೇಲರ ಧರ್ಮಭ್ರಷ್ಟತೆಯಲ್ಲಿ ಪರ್ವತದ ಮೇಲೆ ಮೋಶೆಯ ನಲವತ್ತು ದಿವಸಗಳ ಗೈರು ಮುಖ್ಯ ಪಾತ್ರವನ್ನು ವಹಿಸಿರಬಹುದು: ಅವರು ಮೋಶೆಯ ನಾಯಕತ್ವವಿಲ್ಲದೆ ಅನೇಕ ದಿನಗಳನ್ನು ಕಳೆದರು. ಆರೋನನು ಅವರ ಆತ್ಮಿಕ ನಾಯಕನಾಗಿ ಮೋಶೆಯ ಸ್ಥಾನವನ್ನು ವಹಿಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂಬುದು ಸ್ಪಷ್ಟವಾಗಿ ತೋರುತ್ತದೆ.
2. ದೇವರು ಇಸ್ರಾಯೇಲರನ್ನು ಈ ಅಧ್ಯಾಯದಲ್ಲಿ ಹೀಗೆ ವರ್ಣಿಸುತ್ತಾನೆ:
    1) ಅವರು ಈಗಿನಿಂದ ಆತನ ಜನರಾಗಿರಲಿಲ್ಲ. ಆತನು ಮೋಶೆಗೆ ನಡೆದ ಸಂಗತಿಯನ್ನು ಹೇಳುವಾಗ 'ನಿನ್ನ ಜನರು' ಎಂದು ಅವರನ್ನು ಕರೆಯುತ್ತಾನೆ.
    2) ಅವರು ಸದೃಢರಾಗಿಲ್ಲದ ಕಾರಣ ಸುಲಭವಾಗಿ ಆತ್ಮಿಕ ಭ್ರಷ್ಟತೆಗೆ ಒಳಗಾದರು.
    3) ಅವರು ಒಡಂಬಡಿಕೆಯನ್ನು ಮುರಿಯುವ ಆತ್ಮಿಕ ನಡವಳಿಕೆಗಳಲ್ಲಿ ತೊಡಗಿದರು.
    4) ಅವರು ಹಟಮಾರಿಗಳು ಮತ್ತು ಬೊಗ್ಗದ ಕುತ್ತಿಗೆಯುಳ್ಳವರಾಗಿದ್ದರು.
    5) ಇವೆಲ್ಲವುಗಳ ಪರಿಣಾಮವಾಗಿ ದೇವರು ಈಗ ಅವರನ್ನು ನಾಶಮಾಡಬೇಕೆಂದಿದ್ದನು.
3. ದೇವರ ಮನಪರಿವರ್ತನೆ ಮಾಡಲು ಮೋಶೆಯು ಮೂರು ವಾದಗಳನ್ನು ಬಳಸುತ್ತಾನೆ:
    1) ದೇವರು ಇಸ್ರಾಯೇಲರನ್ನು ಈಜಿಪ್ಟಿನಿಂದ ಒಂದು ಅದ್ಭುತಕರವಾದ ರೀತಿಯಲ್ಲಿ ಹೊರಗೆ ನಡೆಸುವುದರ ಮೂಲಕ ತಾನು ಅವರಿಗೆ ಮಾಡಿದಂತಹ ಸಂಗತಿಯನ್ನು ಆತನು ನೆನಪಿಸಿಕೊಳ್ಳಬೇಕು.
    2) ದೇವರು ಈಜಿಪ್ಟಿಯನ್ನರ ಮಧ್ಯದಲ್ಲಿದ್ದ ತನ್ನ ಪ್ರಖ್ಯಾತಿಯನ್ನು ಪರಿಗಣಿಸಬೇಕು. ಈಗ ದೇವರು ಇಸ್ರಾಯೇಲರನ್ನು ನಾಶಮಾಡಿದರೆ ದೇವರು ಅವರನ್ನು ಮರುಭೂಮಿಯಲ್ಲಿ ನಾಶ ಮಾಡುವುದಕ್ಕಾಗಿ ಮಾತ್ರ ಅವರನ್ನು ಹೊರಗೆ ನಡೆಸಿದನು ಅಂದು ಅವರು ಘೋಷಿಸಿಕೊಳ್ಳುವರು.
    3) ನಿಮ್ಮ ಸಂತತಿಗಳನ್ನು ನಕ್ಷತ್ರಗಳಷ್ಟು ಅಸಂಖ್ಯರಾಗಿ ಮಾಡಿ ಅವರಿಗೆ ವಾಗ್ದಾನ ದೇಶವನ್ನು ಕೊಡುವೆನು ಎಂದು ದೇವರು ಅಬ್ರಹಾಮ, ಇಸಾಕ ಮತ್ತು ಯಾಕೋಬರಿಗೆ ತಾನು ಮಾಡಿದ ವಾಗ್ದಾನಗಳನ್ನು ನೆನಪಿಸಿಕೊಳ್ಳಬೇಕು.
4. ಕಲ್ಲಿನ ಹಲಿಗೆಗಳು ಹೀಗೆ ವರ್ಣಿಸಲ್ಪಟ್ಟಿವೆ:
    1) ಅವುಗಳು ಎರಡು ಇದ್ದವು. ಹಾಗಾಗಿ ಒಡಂಬಡಿಕೆಯ ಶಾಸನಗಳ ನಕಲಿ ಪ್ರತಿ ಮಾಡಲ್ಪಟ್ಟು ಎರಡು ಗುಂಪಿನವರಿಗೂ, ಅಂದರೆ, ದೇವರಿಗೆ ಮತ್ತು ಇಸ್ರಾಯೇಲರಿಗೆ, ತಲಾ ಒಂದಾಗಿ ದಾಖಲಿಸಲ್ಪಟ್ಟವು.
    2) ಅವುಗಳು ಸಾಕ್ಷಿಯ ಹಲಿಗೆಗಳಾಗಿದ್ದವು. 'ಸಾಕ್ಷಿ' ಅಂದರೆ 'ಒಡಂಬಡಿಕೆಯ ಶಾಸನಗಳು' ಎಂದರ್ಥ. ಅವುಗಳು ದೇವರು ಸಿನಾಯಿ ಪರ್ವತದ ಬಳಿಯಲ್ಲಿ ಇಸ್ರಾಯೇಲರೊಂದಿಗೆ ಮಾಡಿದ ಒಡಂಬಡಿಕೆಯ ಶರತ್ತುಗಳನ್ನು (ದಶಾಜ್ಞೆಗಳನ್ನು) ಒಳಗೊಂಡಿದ್ದವು.
    3) ಅವುಗಳು ದೇವರ ಕೈಕೆಲಸವಾಗಿದ್ದವು ಮತ್ತು ಬರಹವು ದೇವರ ಕೈಬರವಣಿಗೆಯಾಗಿತ್ತು. ಅದು ದೇವರ ಸ್ವಂತ ಒಡಂಬಡಿಕೆಯಾಗಿತ್ತು ಮತ್ತು ಕಲ್ಲಿನ ಹಲಿಗೆಗಳ ಮೇಲೆ ಬರೆಯಲ್ಪಟ್ಟ ಒಡಂಬಡಿಕೆಯ ಶಾಸನಗಳು ಆತನವಾಗಿದ್ದವು ಎಂಬುದನ್ನು ಈ ಹೇಳಿಕೆಗಳು ಸೂಚಿಸುತ್ತವೆ.
5. ಮೋಶೆಯು ಇಸ್ರಾಯೇಲರ ಪಾಳೆಯದಲ್ಲಿ ನಡೆಯುತ್ತಿದ್ದದ್ದನ್ನು ಕಂಡಾಗ ಹೀಗೆ ಪ್ರತಿಕ್ರಿಯಿಸಿದನು:
    1) ಆತನು ಅತ್ಯಂತ ಕೋಪಗೊಂಡನು.
    2) ಆತನು ಕಲ್ಲಿನ ಹಲಿಗೆಗಳನ್ನು ನೆಲದ ಮೇಲೆ ಬಿಸಾಡಿ ಅವುಗಳನ್ನು ಮುರಿದು ಬಿಟ್ಟನು. ಇಸ್ರಾಯೇಲರು ತಾವು ಮಾಡಿದ ಸಂಗತಿಯ ಮೂಲಕ ದೇವರೊಂದಿಗಿನ ಒಡಂಬಡಿಕೆಯನ್ನು ಮುರಿದುಬಿಟ್ಟರು ಎಂಬುದನ್ನು ಇದು ಚಿತ್ರಿಸಿತು.
    3) ಆತನು ವಿಗ್ರಹವನ್ನು ಸಂಪೂರ್ಣವಾಗಿ ನಾಶಮಾಡಿದನು.
    4) ಆತನು ವಿಗ್ರಹವನ್ನು ಪುಡಿ ಮಾಡಿ ಅದನ್ನು ನೀರಿನಲ್ಲಿ ಬೆರೆಸಿ ಅವರಿಗೆ ಕುಡಿಸಿದನು.
    5) ಆತನು ನಡೆದ ಸಂಗತಿಗಾಗಿ ಆರೋನನನ್ನು ದೂಷಿಸಿದನು ಮತ್ತು ಈ ಮಹಾ ಪಾಪವನ್ನು ಮಾಡುವಂತೆ ಆತನು ಜನರನ್ನು ನಡೆಸಿದನು ಎಂದು ಆತನನ್ನು ದೂಷಿಸಿದನು.

6. ಚಿನ್ನದ ಕರುವನ್ನು ಮಾಡಿದ್ದಕ್ಕಾಗಿ ಮೋಶೆಯು ಆರೋನನನ್ನು ದೂರಿದಾಗ ಆತನು ತನ್ನನ್ನು ಹೀಗೆ ಪ್ರತಿಪಾದಿಸಿಕೊಂಡನು:

   1) ಮೊದಲು ಆತನು ಆಪಾದನೆಯನ್ನು ಜನರ ಮತ್ತು ಅವರ ದುಷ್ಟತನದ ಮೇಲೆ ಹಾಕಿದನು. ಈಗ ಮೋಶೆಯು ತಮ್ಮ ಸಂಗಡವಿಲ್ಲದ್ದರಿಂದ ಅವರನ್ನು ಮುಂದೆ ನಡೆಸುವಂತೆ ವಿಗ್ರಹಗಳನ್ನು ಮಾಡಲು ಆರೋನನಿಗೆ ಜನರೇ ಹೇಳಿದರು.

   2) ನಂತರ ಚಿನ್ನದ ಕರುವು ಹೇಗೆ ಮಾಡಲ್ಪಟ್ಟಿತು ಎಂದು ಆತನು ವಿವರಿಸುತ್ತಾನೆ: ಆರೋನನು ಜನರಿಂದ ಆಭರಣಗಳನ್ನು ಶೇಖರಿಸಿದನು. ಆತನು ಅದನ್ನು ನಂತರ ಬೆಂಕಿಗೆ ಹಾಕಿದಾಗ ಈ ಕರುವು ಉಂಟಾಯಿತು!

7. ಇಸ್ರಾಯೇಲರು ಕ್ರಮವಿಲ್ಲದೆ ಅನಾಗರೀಕರಾಗಿ ವರ್ತಿಸುತ್ತಾ ತಮ್ಮ ವೈರಿಗಳ ಮುಂದೆ ಅಪಹಾಸ್ಯಕ್ಕೆ ಗುರಿಯಾದುದ್ದನ್ನು ಕಂಡನು. ಹಾಗಾಗಿ ಆತನು ಇಸ್ರಾಯೇಲರಿಗೆ ತಮ್ಮ ನಿಜ ಬಣ್ಣವನ್ನು ತೋರಿಸುವಂತೆ ಸವಾಲನ್ನು ಹಾಕಿದನು: ಯೆಹೋವನ ಪಕ್ಷದವರು ಮೋಶೆಯ ಬಳಿಗೆ ಬರಬೇಕೆಂದು ಹೇಳಿದನು.

   ಲೇವಿಯರೆಲ್ಲರೂ ಆತನಿಗೆ ಕಿವಿಗೊಟ್ಟು ಆತನ ಬಳಿಗೆ ಬಂದರು. ನಂತರ ಅವರೆಲ್ಲರೂ ಕತ್ತಿಗಳನ್ನು ತೆಗೆದುಕೊಂಡು ಪಾಳೆಯದ ಸುತ್ತಲೂ ನಡೆದು ಜನರನ್ನು ಕೊಲ್ಲಬೇಕೆಂದು ಮೋಶೆಯು ಅವರಿಗೆ ಹೇಳಿದನು. ಆ ದಿನ ಮೂರು ಸಾವಿರ ಜನರು ಕೊಲ್ಲಲ್ಪಟ್ಟರು.

8. ಮೋಶೆಯು ಮತ್ತೊಮ್ಮೆ ಅಧ್ಯಾಯದ ಕೊನೆಯಲ್ಲಿ ದೇವರೊಂದಿಗೆ ಬೇಡಿಕೊಳ್ಳುತ್ತಾನೆ:

   1) ಆತನು ಮೊದಲು ಇಸ್ರಾಯೇಲರು ಮಾಡಿದ ಮಹಾ ಪಾಪವನ್ನು ಅರಿಕೆಮಾಡುತ್ತಾನೆ.

   2) ನಂತರ ಆತನು ದೇವರು ಅವರ ಪಾಪಗಳನ್ನು ಕ್ಷಮಿಸುವಂತೆ ಬೇಡಿಕೊಳ್ಳುತ್ತಾನೆ. ಆತನು ಜನರ ಪ್ರಾಣಗಳಿಗೆ ಬದಲಾಗಿ ತನ್ನ ಸ್ವಂತ ಪ್ರಾಣವನ್ನು ಸಹ ಕೊಡಲು ಸಿದ್ಧನಿದ್ದಾನೆ.

9. ದೇವರು ಅಧ್ಯಾಯದ ಕೊನೆಯಲ್ಲಿ ಮೋಶೆಗೆ ಮೂರು ಸಂಗತಿಗಳನ್ನು ಹೇಳುತ್ತಾನೆ:

   1) ಪಾಪ ಮಾಡಿದವರು ಮಾತ್ರ ಶಿಕ್ಷೆ ಹೊಂದುವರು ಮತ್ತು ನಿಶ್ಚಯವಾಗಿ ಶಿಕ್ಷೆ ಹೊಂದುವರು ಎಂದು ದೇವರು ಮೋಶೆಗೆ ವಿವರಿಸುತ್ತಾನೆ.

   2) ಮೋಶೆಯು ಜನರ ನಾಯಕನಾಗಿ ಮುಂದುವರೆಯಬೇಕೆಂದು ದೇವರು ಆತನನ್ನು ಪ್ರೋತ್ಸಾಹಿಸಿದನು.

   3) ದೇವರು ಮೋಶೆಯ ಮುಂದಾಗಿ ಹೋಗುವನೆಂದು ವಾಗ್ದಾನ ಮಾಡಿದನು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಆರೋನನು ಬಸವನ ಮೂರ್ತಿಗೆ 'ಯೆಹೋವನು' ಎಂಬ ಹೆಸರನ್ನು ಕೊಟ್ಟನು. ಆತನು ಆ ಹೆಸರನ್ನು ಯಾಕೆ ಕೊಟ್ಟನೆಂಬುದು ಪಠ್ಯದಲ್ಲಿ ಸ್ಪಷ್ಟವಾಗಿ ತಿಳಿಸಲ್ಪಟ್ಟಿಲ್ಲ. ಬಹುಶಃ ಅದಕ್ಕೆ ಒಂದು ನಕಾರಾತ್ಮಕವಾದ ಮತ್ತು ಒಂದು ಸಕಾರಾತ್ಮಕವಾದ ಎರಡು ಮುಖ್ಯ ಸಾಧ್ಯತೆಗಳಿವೆ:

   1) ಯೆಹೋವನನ್ನು ಒಂದು ಕರುವಿನ ಮೂರ್ತಿಯ ಮೂಲಕ ಪ್ರತಿನಿಧಿಸಬಹುದೆಂದು ಆರೋನನು ವಾಸ್ತವಿಕವಾಗಿ ಯೋಚಿಸಿದನು. ಹಾಗಾಗಿ ಆತನು ತ್ವರಿತವಾಗಿ ತಮ್ಮ ಮುಂದಾಗಿ ವಾಗ್ದಾನ ದೇಶಕ್ಕೆ ಹೋಗಲು ಒಂದು ದೇವರನ್ನು ಮಾಡಬೇಕೆಂಬ ಜನರ ಸಲಹೆಗೆ ಸಮ್ಮತಿಸಿದನು. ಇದು ನನ್ನ ಅನಿಸಿಕೆಯ ಮೇರೆಗೆ ಆರೋನನ ಮೇಲೆ ಅತ್ಯಂತ ನಕಾರಾತ್ಮಕವಾದ ಬೆಳಕನ್ನು ಚೆಲ್ಲುತ್ತದೆ.

   2) ಈಜಿಪ್ಟಿನಿಂದ ತಮ್ಮನ್ನು ಬಿಡಿಸಿದ ಇಸ್ರಾಯೇಲಿನ ದೇವರೊಂದಿಗೆ ಜನರು ಯಾವುದಾದರೂ ಒಂದು ರೀತಿಯ ಸಂಪರ್ಕವನ್ನು ಇಟ್ಟುಕೊಳ್ಳಬೇಕೆಂದು ಆರೋನನು ಬಯಸಿದನು. ವಿಗ್ರಹವನ್ನು ಆರಾಧಿಸದಂತೆ ಇಸ್ರಾಯೇಲರನ್ನು ತಡೆಯಲು ತನಗೆ ಸಾಧ್ಯವಿಲ್ಲ ಎಂಬುದನ್ನು ಆರೋನನು ತಿಳಿದಿದ್ದನು. ಹಾಗಾಗಿ ಈಜಿಪ್ಟಿನ ಬಸವ ದೇವರಾದ ಏಪಿಸ್‌ನನ್ನು ಆರಾಧಿಸುವುದಕ್ಕಿಂತ ಯೆಹೋವನನ್ನು ಈ ಮೂರ್ತಿಯ ಮೂಲಕ ಆರಾಧಿಸುವುದು ಅವರಿಗೆ ಉತ್ತಮವಾಗಿತ್ತು. ಇದು ನನ್ನ ಅನಿಸಿಕೆಯ ಮೇರೆಗೆ ಆರೋನನ ಮೇಲೆ ಸ್ವಲ್ಪ ಮಟ್ಟಿಗೆ ಸಕಾರಾತ್ಮಕವಾದ ಬೆಳಕನ್ನು ಚೆಲ್ಲುತ್ತದೆ.

2. ಮೋಶೆಯು ಇಸ್ರಾಯೇಲರ ಧರ್ಮಭ್ರಷ್ಟತೆಯನ್ನು ಒಂದು 'ದೊಡ್ಡ ಪಾಪ' ಎಂದು ಕರೆಯುತ್ತಾನೆ (ವ. 21). ಅದು ಒಡಂಬಡಿಕೆಯ ಉಲ್ಲಂಘನೆಯಾಗಿದ್ದರಿಂದ ಒಂದು ದೊಡ್ಡ ಪಾಪವಾಗಿತ್ತು:

   1) ಮೊದಲ ಆಜ್ಞೆಯು ವಿಗ್ರಹಾರಾಧನೆಯನ್ನು ನಿಷೇಧಿಸುತ್ತದೆ. ಈ ಪಾಪವು ವಿಗ್ರಹಾರಾಧನೆಯ ಒಂದು ಸ್ಪಷ್ಟ ಪ್ರಕರಣವಾಗಿತ್ತು.

   2) ಎರಡನೆಯ ಆಜ್ಞೆಯು ದೇವರ ಮೂರ್ತಿಗಳನ್ನು ಮಾಡುವುದನ್ನು ಹಾಗೂ ಆರಾಧಿಸುವುದನ್ನು ನಿಷೇಧಿಸುತ್ತದೆ. ಈ ಪಾಪವು ಆ ಆಜ್ಞೆಯನ್ನು ಸಹ ಉಲ್ಲಂಘಿಸಿತು.

3) ಕೇವಲ ನಾಲ್ವತ್ತು ದಿನಗಳ ಹಿಂದಷ್ಟೇ ಇಸ್ರಾಯೇಲರು ಒಡಂಬಡಿಕೆಯನ್ನು ಧೃಢೀಕರಿಸಿದ್ದರು (ವಿಮೋ. 24:3–8). ಅವರು ಯೆಹೋವನ ಎಲ್ಲಾ ಆಜ್ಞೆಗಳನ್ನು ಕೈಗೊಳ್ಳುವೆವು ಎಂದು ಪ್ರಮಾಣ ಮಾಡಿದ್ದರು. ಅವರು ಬಲಿಯ ರಕ್ತದಿಂದ ಪ್ರೋಕ್ಷಿಸಲ್ಪಟ್ಟು ಒಡಂಬಡಿಕೆಗೆ ಬದ್ಧರಾಗಿದ್ದರು.

3. ಚಿನ್ನದ ಕರುವನ್ನು ಮಾಡಿದ್ದಕ್ಕಾಗಿ ಮೋಶೆಯು ಆರೋನನನ್ನು ದೂರಿದನು. ಆದರೆ ಇಸ್ರಾಯೇಲರ ಮೇಲೆಯೂ ಸಹ ಸ್ವಲ್ಪ ದೋಷವನ್ನು ಹೊರಿಸಬೇಕಾಗುತ್ತದೆಂದು ನನಗೆ ಅನ್ನಿಸುತ್ತದೆ:

1) ಆರೋನನು ಒಂದು ವಿಗ್ರಹವನ್ನು ಮಾಡಬೇಕೆಂದು ಕೇಳುವುದರಲ್ಲಿ ಇಸ್ರಾಯೇಲರು ಮುಂದಾಳತ್ವವನ್ನು ವಹಿಸಿದ್ದರು. ಅವರು ನಲವತ್ತು ದಿನಗಳ ಹಿಂದೆ ಒಡಂಬಡಿಕೆಯು ಧೃಢೀಕರಿಸಲ್ಪಟ್ಟಾಗ ತಾವು ಮಾಡಿದ ಪ್ರಮಾಣವನ್ನು ನೆನಪಿಸಿಕೊಳ್ಳಬೇಕಾಗಿತ್ತು. ಅವರು ದೇವರ ಮೇಲೆ ಹಾಗೂ ಮೋಶೆಯ ಮೇಲೆ ಭರವಸವಿಡಬೇಕಾಗಿತ್ತು. ಅವರು ಮೋಶೆಯು ಹಿಂತಿರುಗಿ ಬಂದು ಅವರನ್ನು ನಡೆಸುವವರೆಗೆ ಕಾಯಬೇಕಾಗಿತ್ತು.

2) ಆದರೆ ನಿಶ್ಚಯವಾಗಲೂ ಹೆಚ್ಚಿನ ದೋಷವನ್ನು ಆರೋನನ ಮೇಲೆ ಹೊರಿಸಬೇಕು. ಆತನು ಮೋಶೆಯ ಜೊತೆಗಿದ್ದು ಇಸ್ರಾಯೇಲರ ಸಂಗಡ ಈಜಿಪ್ಟಿನ ಮೇಲೆ ಬಂದ ಎಲ್ಲಾ ಬಾಧೆಗಳನ್ನು ಕಂಡಿದ್ದನು ಮತ್ತು ಅವರನ್ನು ಬಂಧನದಿಂದ ಹೊರಗೆ ನಡೆಸಿದ್ದನು. ಮೋಶೆಯು ಪರ್ವತದ ಇನ್ನೂ ಶಿಖರಕ್ಕೆ ದೇವರನ್ನು ಸಂಧಿಸಲು ಹೋದಾಗ ನಾಯಕತ್ವವನ್ನು ಆತನಿಗೆ (ಮತ್ತು ಹೂರನಿಗೆ, 24:14) ವಹಿಸಿದ್ದನು. ಇಸ್ರಾಯೇಲರು ತಾಳ್ಮೆಯಿಂದಿದ್ದು ಮೋಶೆಯು ಹಿಂತಿರುಗುವ ತನಕ ಕಾಯಬೇಕೆಂದು ಆತನು ಅವರಿಗೆ ಹೇಳಬೇಕಾಗಿತ್ತು. ದೇವರ ಪರಾಕ್ರಮವುಳ್ಳ ಕಾರ್ಯಗಳನ್ನು ಆತನು ಅವರಿಗೆ ಜ್ಞಾಪಿಸಿ ಅವರನ್ನು ಕಾನಾನಿಗೆ ನಡೆಸುವೆನೆಂದು ಭರವಸೆ ಕೊಡಬೇಕಾಗಿತ್ತು. ಅವರು ತಮ್ಮ ಒಡಂಬಡಿಕೆಯ ಪ್ರಮಾಣಗಳಿಗೆ ನಂಬಿಗಸ್ತರಾಗಿರುವಂತೆ ಆತನು ಅವರನ್ನು ಪ್ರೋತ್ಸಾಹಿಸಬೇಕಾಗಿತ್ತು. ಧರ್ಮಭ್ರಷ್ಟತೆಯ ಪರಿಣಾಮಗಳ ಕುರಿತು ಆತನು ಅವರನ್ನು ಎಚ್ಚರಿಸಬೇಕಾಗಿತ್ತು.

4. ಒಂದು ಕಾಲೇಜಿನ ಪಠ್ಯಪುಸ್ತಕದಿಂದ ಆರಿಸಲಾದ ***ವಿಗ್ರಹಾರಾಧನೆಯ ಮುಂಚೆ ಮತ್ತು ನಂತರ*** ಎಂಬ ಚಿತ್ರಣವನ್ನು ಅಭ್ಯಸಿಸಿರಿ. ಅದು ಸಿನಾಯಿ ಪರ್ವತದ ಬಳಿಯಲ್ಲಿ ಇಸ್ರಾಯೇಲರ ಧರ್ಮಭ್ರಷ್ಟತೆಯ ಪರಿಣಾಮದ ಒಂದು ಸರಿಯಾದ ಚಿತ್ರಣವನ್ನು ಕೊಡುತ್ತದೆ ಎಂದು ನನಗೆ ಅನ್ನಿಸುವುದಿಲ್ಲ. ಚಿನ್ನದ ಕರುವಿನ ಕಥೆಯ ಮುಂಚೆಯೇ ಮೋಶೆಯು ದೇವರ ಮತ್ತು ಜನರ ನಡುವೆ ಮಧ್ಯವರ್ತಿಯಾಗಿದ್ದನು. ವಿಮೋಚನಕಾಂಡ ಪುಸ್ತಕದ ಪ್ರಾರಂಭದಿಂದಲೇ ದೇವರು ಇಸ್ರಾಯೇಲರೊಂದಿಗೆ ಮೋಶೆಯ (ಮತ್ತು ಆರೋನನ) ಮೂಲಕ ಮಾತನಾಡುತ್ತಾನೆ. ದೇವರು ಅವರನ್ನು ದಿನದಲ್ಲಿ ಮೇಘಸ್ತಂಭದ ಮತ್ತು ರಾತ್ರಿಯಲ್ಲಿ ಅಗ್ನಿಸ್ತಂಭದ ಮೂಲಕವೂ ನೇರವಾಗಿ ನಡೆಸಿದನು ಎಂಬುದು ಸತ್ಯ (13:21). ಆದರೆ ಅದು ಚಿನ್ನದ ಕರುವಿನ ನಂತರ ಬದಲಾಗಲಿಲ್ಲ (ವಿಮೋ. 40:36–38).

5. –

**ವಿಮೋಚನಕಾಂಡ ಉತ್ತರಗಳು 25: ಮೋಶೆ ಮತ್ತು ಯೆಹೋವನ ಮಹಿಮೆ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಯೆಹೋವನು ಇಸ್ರಾಯೇಲರೊಂದಿಗೆ ಇನ್ನು ಮುಂದೆ ಹೋಗಬಾರದೆಂದು ತೀರ್ಮಾನಿಸಿದನು, ಯಾಕೆಂದರೆ ಅವರು ಅತ್ಯಂತ ಹಟಮಾರಿಗಳಾಗಿದ್ದರಿಂದ ಆತನು ಅವರ ಮೇಲೆ ಸಿಟ್ಟುಗೊಂಡು ಅವರನ್ನು ನಾಶಮಾಡಬಹುದೆಂದು ಹಾಗೆ ತೀರ್ಮಾನಿಸಿದನು (33:3, 5).
2. ಇಸ್ರಾಯೇಲರು ದುಃಖದ ಒಂದು ಸಂಕೇತವಾಗಿ ಆಭರಣಗಳನ್ನು ಹಾಕಿಕೊಳ್ಳಲಿಲ್ಲ (33:4).
3. ಮೋಶೆಯು ದೇವದರ್ಶನದ ಗುಡಾರದ ಒಳಗೆ ಹೋದಾಗ ಜನರು ನಿಂತುಕೊಂಡು ಆರಾಧಿಸಿದರು, ಯಾಕೆಂದರೆ ಅವರು ದೇವದರ್ಶನದ ಗುಡಾರದ ಪ್ರವೇಶ ದ್ವಾರದ ಬಳಿಯಲ್ಲಿ ಮೇಘಸ್ತಂಭವು ನಿಂತಿರುವುದನ್ನು ಕಂಡರು. ಹಾಗಾಗಿ ದೇವರು ಬಂದಿದ್ದಾನೆ ಮತ್ತು ಮೋಶೆಯೊಂದಿಗೆ ಮಾತನಾಡುತ್ತಿದ್ದಾನೆ ಎಂದು ಅವರು ತಿಳಿದುಕೊಂಡರು (33:8–11).
4. ದೇವದರ್ಶನದ ಗುಡಾರದ ಬಳಿಯಲ್ಲಿ ಮೋಶೆಯ ಜೊತೆಗೆ ಯೆಹೋಶುವನಿದ್ದನು. ಆತನು ಮೋಶೆಯ ಸಹಾಯಕನಾಗಿದ್ದನು. ಆದರೆ ದೇವದರ್ಶನದ ಗುಡಾರದ ಬಳಿಯಲ್ಲಿ ಆತನಿಗಿದ್ದ ಕೆಲಸದ ಕುರಿತಾಗಲಿ ಅಥವಾ ಆತನೊಂದಿಗೆ ದೇವರು ಪರಸ್ಪರವಾಗಿ ಮಾತನಾಡಿದ್ದರ ಕುರಿತಾಗಲಿ ಏನೂ ತಿಳಿಸಲ್ಪಟ್ಟಿಲ್ಲ.
5. ದೇವರು ತಮ್ಮ ಜೊತೆಗೆ ಹೋಗಬೇಕೆಂಬುದಕ್ಕೆ ಮೋಶೆಯು ಈ ಕೆಳಗಿನ ವಾದಗಳನ್ನು ಮಂಡಿಸಿದನು (33:15–16):
    1) ದೇವರು ಒಂದು ವೇಳೆ ಅವರೊಂದಿಗೆ ಹೋಗದಿದ್ದರೆ, ಅವರು ಸಿನಾಯಿ ಪರ್ವತವನ್ನು ಬಿಟ್ಟು ವಾಗ್ದಾನ ದೇಶದ ಕಡೆಗೆ ಪ್ರಯಾಣ ಮುಂದುವರೆಸುವಂತೆ ಹೇಳಬಾರದಿತ್ತು.
    2) ಮೋಶೆಯೊಂದಿಗೆ ಮತ್ತು ಇಸ್ರಾಯೇಲರೊಂದಿಗೆ ಇರುವ ದೇವರ ಪ್ರಸನ್ನತೆಯು ದೇವರು ಅವರ ಕುರಿತು ಸಂತೋಷವನ್ನು ವ್ಯಕ್ತಪಡಿಸುತ್ತಾನೆ ಎಂಬುದನ್ನು ತೋರಿಸುತ್ತದೆ.
    3) ಇಸ್ರಾಯೇಲರೊಂದಿಗೆ ಇರುವ ದೇವರ ಪ್ರಸನ್ನತೆಯು ಅವರನ್ನು ಇತರೆ ರಾಷ್ಟ್ರಗಳಿಗಿಂತ ವ್ಯತ್ಯಾಸವಾದ ರಾಷ್ಟ್ರವನ್ನಾಗಿ ಮಾಡಿತು.
6. ದೇವರು ಅಂತಿಮವಾಗಿ ಇಸ್ರಾಯೇಲರೊಂದಿಗೆ ಹೋಗಲು ಒಪ್ಪಿಕೊಂಡನು, ಯಾಕೆಂದರೆ ಆತನು ಮೋಶೆಯನ್ನು ಮೆಚ್ಚಿದನು ಮತ್ತು ಆತನ ಗುಣವನ್ನು ತಿಳಿದುಕೊಂಡಿದ್ದನು (ಆತನ 'ಹೆಸರಿನಿಂದ' ಆತನನ್ನು ತಿಳಿದಿದ್ದನು), 33:17.
7. ಮೋಶೆಯು ತನಗೆ ದೇವರ ಮಹಿಮೆಯನ್ನು ತೋರಿಸಬೇಕೆಂದು ಕೇಳಿದಾಗ ದೇವರು ಆತನಿಗೆ ಹೀಗೆ ಹೇಳಿದನು, ನಾನು ನನ್ನ ಒಳ್ಳೆಯತನವನ್ನೆಲ್ಲಾ ನಿನ್ನೆದುರಿಗೆ ಹೋಗ ಮಾಡಿ ನನ್ನ ಹೆಸರನ್ನು ನಿನ್ನ ಮುಂದೆ ಪ್ರಕಟಮಾಡುವೆನು. ದೇವರ ಹೆಸರು ಆತನ ಒಳ್ಳೆಯತನದ ಪ್ರತೀಕವಾಗಿದೆ. ಅದು ಆತನ ಕರುಣೆ ಮತ್ತು ದಯೆಯ ಮೂಲಕ ವ್ಯಕ್ತವಾಗುತ್ತದೆ. ಆದರೆ ಮೋಶೆಯು ದೇವರ ಮುಖವನ್ನು ನೋಡುವಂತೆ ಅನುಮತಿಸಲಾಗಲಿಲ್ಲ, ಯಾಕೆಂದರೆ ಅದು ಆತನ ಪ್ರಾಣವನ್ನು ತೆಗೆದುಬಿಡುತ್ತಿತ್ತು (33:19–23).
8. ಈ ಬಾರಿ ಮೋಶೆಯು ಪರ್ವತವನ್ನು ಏರಿ ಹೋದಾಗ ಆತನು ಅನುಭವಿಸಿದ ಸಂಗತಿಗಳ ಒಂದು ಪಟ್ಟಿಯು ಹೀಗಿದೆ (ಅಧ್ಯಾಯ 34):

    ಮೋಶೆಯು ಪರ್ವತವನ್ನು ಏರಿ ಬರುವುದಕ್ಕಿಂತ ಮುಂಚೆ ದೇವರು ಸಿದ್ಧಪಡಿಸಲು ಹೇಳಿದ್ದ ಎರಡು ಕಲ್ಲಿನ ಹಲಿಗೆಗಳನ್ನು ತನ್ನೊಂದಿಗೆ ತೆಗೆದುಕೊಂಡು ಬಂದನು (ವ. 1, 4).

    ದೇವರು ಮೇಘದಲ್ಲಿ ಪರ್ವತದ ಮೇಲೆ ಬಂದು ಮೋಶೆಯೊಂದಿಗೆ ನಿಂತುಕೊಂಡನು (ವ. 5).

    ದೇವರು ಅವನೆದುರಿಗೆ ಹಾದು ಹೋಗಿ ತನ್ನ ಹೆಸರನ್ನು ಪ್ರಕಟ ಮಾಡಿದನು (ವ. 5–7).

    ಮೋಶೆಯು ಅಡ್ಡ ಬಿದ್ದು ದೇವರನ್ನು ಆರಾಧಿಸಿದನು. ಆತನು ಮತ್ತೊಮ್ಮೆ ದೇವರು ಇಸ್ರಾಯೇಲರೊಂದಿಗೆ ವಾಗ್ದಾನದೇಶಕ್ಕೆ ಹೋಗಬೇಕೆಂದು ಆತನನ್ನು ಬೇಡಿಕೊಂಡನು (ವ. 8–9).

    ದೇವರು ಮೋಶೆಯೊಂದಿಗೆ (ಮತ್ತು ಆತನ ಮೂಲಕ ಇಸ್ರಾಯೇಲರೊಂದಿಗೆ, ವ. 27) ಒಂದು ಒಡಂಬಡಿಕೆಯನ್ನು ಮಾಡಿಕೊಂಡು ಆತನಿಗೆ ಒಡಂಬಡಿಕೆಯ ಶಾಸನಗಳನ್ನು ಕೊಟ್ಟನು (ವ. 10–27). ಈ ಶಾಸನಗಳು ಕೆಳಗಿನ ಆಜ್ಞೆಗಳನ್ನು ಒಳಗೊಂಡಿದ್ದವು:

    ಕಾನಾನ್ಯ ದೇಶಗಳೊಂದಿಗೆ ವೈವಾಹಿಕ ಸಂಬಂಧಗಳು ಮತ್ತು ಅವರ ವಿಗ್ರಹಗಳಿಗೆ ಅರ್ಪಿತವಾದ ಆಹಾರವನ್ನು ತಿನ್ನುವುದನ್ನು ಒಳಗೊಂಡು ಇತರೆ ಯಾವುದೇ ಒಪ್ಪಂದವನ್ನು ಅವರೊಂದಿಗೆ ಮಾಡಿಕೊಳ್ಳಬಾರದು.

    ಇತರೆ ದೇವರುಗಳನ್ನು ಆರಾಧಿಸಬಾರದು. ಬದಲಾಗಿ ಅವರು ಕಾನಾನ್ಯರ ಪೂಜಾಸ್ಥಳಗಳನ್ನು ಮತ್ತು ಅವರ ವಿಗ್ರಹಗಳನ್ನು ನಾಶಮಾಡಬೇಕು.

ಯಾವ ವಿಗ್ರಹಗಳನ್ನೂ ಮಾಡಿಕೊಳ್ಳಬಾರದು.

ಈಜಿಪ್ಟಿನಿಂದ ಆದ ಅವರ ವಿಮೋಚನೆಯ ಜ್ಞಾಪಕಾರ್ಥವಾಗಿ ಹುಳಿಯಿಲ್ಲದ ರೊಟ್ಟಿಯ ಹಬ್ಬವನ್ನು (ಪಸ್ಕ ಹಬ್ಬವನ್ನು) ಆಚರಿಸಬೇಕು. ಅದಲ್ಲದೆ ವಾರಗಳ ಹಬ್ಬವನ್ನು (ಪಂಚಾಶತ್ತಮ ದಿನ) ಮತ್ತು ಬೆಳೆ ಸಂಗ್ರಹದ ಹಬ್ಬವನ್ನು (ಗುಡಾರಗಳ ಹಬ್ಬ) ಸಹ ಆಚರಿಸಬೇಕು.

ಚೊಚ್ಚಲ ಮಗನನ್ನು ವಿಮೋಚಿಸಿಕೊಳ್ಳಬೇಕು

ಸಬ್ಬತ್ ದಿನವನ್ನು ಆಚರಿಸಬೇಕು

ಯಾವುದೇ ಯಜ್ಞಬಲಿಯೊಂದಿಗೆ ಹುಳಿ ಹಿಟ್ಟನ್ನು ಅರ್ಪಿಸಬಾರದು

ಪಸ್ಕ ಹಬ್ಬದ ಬಲಿಯಲ್ಲಿ ಯಾವುದನ್ನೂ ಬೆಳಗಿನವರೆಗೆ ಉಳಿಸಬಾರದು

ಪ್ರಥಮಫಲವನ್ನು ದೇವರ ಮನೆಗೆ ತರಬೇಕು

ಮೇಕೆಯ ಮರಿಯನ್ನು ಅದರ ತಾಯಿಯ ಹಾಲಿನಲ್ಲಿ ಬೇಯಿಸಬಾರದು. ಇಂದಿಗೂ ಸಹ ನಿಷ್ಠಾವಂತ ಯೆಹೂದ್ಯರು ತಮ್ಮ ಆಹಾರದಲ್ಲಿ ಮಾಂಸ ಮತ್ತು ಹಾಲಿನ ಉತ್ಪಾದನೆಗಳನ್ನು ಒಟ್ಟಿಗೆ ಬೆರೆಸುವುದಿಲ್ಲ.

ದೇವರು ಮೋಶೆಗೆ ಮೇಲಿರುವ ಆಜ್ಞೆಗಳನ್ನು ಉಲ್ಲೇಖಿಸಿ, ಒಡಂಬಡಿಕೆಯ ವಾಕ್ಯಗಳನ್ನು ಬರೆಯಲು ಹೇಳಿದನು (ವ. 27).

ದೇವರು ಹೊಸ ಕಲ್ಲಿನ ಹಲಿಗೆಗಳ ಮೇಲೆ *ಒಡಂಬಡಿಕೆಯ ವಾಕ್ಯಗಳಾದ ಹತ್ತು ಆಜ್ಞೆಗಳನ್ನು* ಬರೆದನು (ವ. 28).

ಮೋಶೆಯು ಹಗಲಿರುಳು ನಲವತ್ತು ದಿನಗಳನ್ನು ಕಳೆದ ನಂತರ ಎರಡು ಹೊಸ *ಸಾಕ್ಷಿಯ ಹಲಿಗೆಗಳನ್ನು ತನ್ನ ಕೈಯಲ್ಲಿ ಹಿಡಿದುಕೊಂಡು* ಪರ್ವತವನ್ನು ಇಳಿದು ಬಂದನು (ವ. 29).

9. ದೇವರು ಇಸ್ರಾಯೇಲರಿಗೆ ಕಾನಾನಿನ ಮತ್ತು ಅಲ್ಲಿನ ಜನರ ಕುರಿತು ಈ ಆಜ್ಞೆಗಳನ್ನು ಕೊಟ್ಟನು (34:12–16): ಅವರು ಕಾನಾನ್ಯರೊಂದಿಗೆ ಯಾವುದೇ ಒಪ್ಪಂದವನ್ನು ಮಾಡಿಕೊಳ್ಳಬಾರದು. ಇದು ಅವರ ದೇವರುಗಳನ್ನು ಆರಾಧಿಸುವುದು, ಅವರ ಧಾರ್ಮಿಕ ಆಚಾರಗಳನ್ನು ಪಾಲಿಸುವುದು, ಅವರ ವಿಗ್ರಹಗಳಿಗೆ ಅರ್ಪಿತವಾದ ಆಹಾರವನ್ನು ತಿನ್ನುವುದು ಈ ಸಂಗತಿಗಳನ್ನು ಒಳಗೊಂಡಿತ್ತು.

10. ಮೋಶೆಯು ದೇವರ ಸಂಗಡ ದೇವದರ್ಶನ ಗುಡಾರದಲ್ಲಿ ಇದ್ದ ನಂತರ ಆತನ ಮುಖವು ಪ್ರಕಾಶಿಸುತ್ತಿತ್ತು. ಇಸ್ರಾಯೇಲರು ಆ ಪ್ರಕಾಶವು ಕಳೆಗುಂದುವುದನ್ನು ನೋಡದಂತೆ ಆತನು ತನ್ನ ಮುಖಕ್ಕೆ ಮುಸುಕು ಹಾಕಿಕೊಂಡನು. ಆತನ ಮುಖವು ಪ್ರಕಾಶಿಸಿದರೂ ಪ್ರಕಾಶಿಸದಿದ್ದರೂ, ಇಸ್ರಾಯೇಲರು ಮೋಶೆಯನ್ನು ದೇವರ ಮತ್ತು ಅವರ ನಡುವಿನ ಮಧ್ಯವರ್ತಿಯಾಗಿ ಗೌರವಿಸಬೇಕು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಈ ಅಧ್ಯಾಯಗಳಲ್ಲಿ (33–34) ನಾವು ದೇವರ ಕುರಿತು ಈ ಸಂಗತಿಗಳನ್ನು ಕಲಿತುಕೊಳ್ಳುತ್ತೇವೆ:

ಆತನು ತನ್ನ ವಾಗ್ದಾನಗಳನ್ನು ನೆರವೇರಿಸುವ ದೇವರಾಗಿದ್ದಾನೆ. ಇದು ಮೂಲಪಿತೃಗಳಿಗೆ ಮಾಡಿದ ವಾಗ್ದಾನವನ್ನು ಹಾಗೂ ದೂತನನ್ನು ಕಳುಹಿಸಿ ಕಾನಾನ್ಯ ದೇಶಗಳನ್ನು ತಮ್ಮ ಮುಂದೆ ಹೊರಡಿಸಿಬಿಡುವೆನು ಎಂದು ಇಸ್ರಾಯೇಲರಿಗೆ ಮಾಡಿದ ವಾಗ್ದಾನವನ್ನು ಒಳಗೊಂಡಿದೆ.

ಆತನು ತನ್ನ 'ಮನಪರಿವರ್ತಸಿಕೊಳ್ಳುವ' ದೇವರಾಗಿದ್ದಾನೆ, ಯಾಕೆಂದರೆ ಆತನು ತನ್ನ ಗುಣಕ್ಕೆ ನಂಬಿಗಸ್ತನಾಗಿ ಮಾರ್ಪಡದವನಾಗಿದ್ದಾನೆ. ಇಸ್ರಾಯೇಲರು ತನ್ನೊಂದಿಗೆ ಮಾಡಿಕೊಂಡಿದ್ದ ಒಡಂಬಡಿಕೆಯನ್ನು ಕೈಕೊಳ್ಳಲು ಮನಸ್ಸು ಮಾಡುವವರೆಗೆ ಆತನು ಅವರೊಂದಿಗೆ ಹೋಗಬಾರದೆಂದಿದ್ದನು (33:3).

ಆತನು ತನ್ನ ಸೇವಕರುಗಳೊಂದಿಗೆ ಸಂವಹಿಸುವ ಮತ್ತು ವ್ಯವಹರಿಸುವ ದೇವರಾಗಿದ್ದಾನೆ (33:7, 11, 19).

ಆತನು ಒಬ್ಬ ಒಳ್ಳೆಯ ದೇವರಾಗಿದ್ದಾನೆ. ಆತನ ಒಳ್ಳೆಯತನವು ಆತನ ಕರುಣೆ ಮತ್ತು ಕನಿಕರದಿಂದ ವ್ಯಕ್ತವಾಗುತ್ತದೆ (33:19; 34:7).

ಆತನು ಒಬ್ಬ ಅಮೋಘವಾದ ಮತ್ತು ಪವಿತ್ರನಾದ ದೇವರಾಗಿದ್ದಾನೆ ಮತ್ತು ಒಬ್ಬ ಮನುಷ್ಯನು ಆತನ ಸಮೀಪಕ್ಕೆ ಬರುವುದು ಅಸಾಧ್ಯವಾಗಿದೆ (33:20, 23; 34:3, 10).

ಆತನು ತನ್ನ ಜನರೊಂದಿಗೆ ಒಡಂಬಡಿಕೆಗಳನ್ನು ಮಾಡಿಕೊಳ್ಳುವ ದೇವರಾಗಿದ್ದಾನೆ (34:10, 27) ಮತ್ತು ಆತನ ಒಡಂಬಡಿಕೆಗಳ ಶಾಸನಗಳನ್ನು ತನ್ನ ಜನರು ಪಾಲಿಸಬೇಕೆಂದು ಬಯಸುವ ದೇವರಾಗಿದ್ದಾನೆ (34:11–26).

ಆತನು ತನ್ನ ಜನರ ಮುಂದೆ ಅವರ ವೈರಿಗಳನ್ನು ಹೊರಡಿಸಿಬಿಡಲು ಶಕ್ತನಾದ ಬಲವುಳ್ಳ ದೇವರಾಗಿದ್ದಾನೆ (34:11).

ಆತನು ದೇವರುಗಳೆಂದು ಕರೆಯಲ್ಪಡುವ ಇತರೆ ಸಂಗತಿಗಳೊಂದಿಗೆ ಮತ್ತು ಅನ್ಯಜನರ ಧಾರ್ಮಿಕ ಆಚಾರಗಳೊಂದಿಗೆ ರಾಜಿಮಾಡಿಕೊಳ್ಳುವ ಜನರನ್ನು ಅಥವಾ ವಿಗ್ರಹಗಳನ್ನು ಮಾಡುವ ಮತ್ತು ಆರಾಧಿಸುವ ಜನರನ್ನು ಸಹಿಸದ 'ವೈರಾಗ್ಯವುಳ್ಳ' ದೇವರಾಗಿದ್ದಾನೆ (34:12–17).

2. ಈ ಎರಡು ಅಧ್ಯಾಯಗಳಲ್ಲಿ (33–34) ಮೋಶೆಯ ಮತ್ತು ಆತನ ಆತ್ಮಿಕ ಜೀವನದ ಕುರಿತು ನಾವು ಈ ಸಂಗತಿಗಳನ್ನು ಕಲಿತುಕೊಳ್ಳುತ್ತೇವೆ:

   ಮೋಶೆಯು ದೇವರೊಂದಿಗೆ ನಿಕಟವಾದ ಅನ್ಯೋನತೆಯನ್ನು ಹೊಂದಿದ್ದ ಮನುಷ್ಯನಾಗಿದ್ದನು. ದೇವರು ಆತನ ಸಂಗಡ ದೇವದರ್ಶನ ಗುಡಾರದಲ್ಲಿಯೂ ಮತ್ತು ಸಿನಾಯಿ ಪರ್ವತದ ಮೇಲೆಯೂ ಮಾತನಾಡಿದನು

   ಮೋಶೆಯು ಒಬ್ಬ 'ಪ್ರಾರ್ಥನಾ–ವೀರನಾಗಿದ್ದನು'. ಆತನು ದೇವರೊಂದಿಗೆ ಪ್ರಾರ್ಥನೆಯಲ್ಲಿ ಹೋರಾಡುತ್ತಾ ಇಸ್ರಾಯೇಲರೊಂದಿಗಿನ ಕಷ್ಟಗಳನ್ನು ವಿವರಿಸುತ್ತಾ, ಆತನ ವಾಗ್ದಾನಗಳನ್ನು ಜ್ಞಾಪಿಸುತ್ತಾ, ತನ್ನ ಮನಪರಿವರ್ತನೆ ಮಾಡಿಕೊಳ್ಳುವಂತೆ ಬೇಡುತ್ತಾ ಮತ್ತು ವಾಗ್ದಾನ ದೇಶದ ಕಡೆಗೆ ಅವರ ಪ್ರಯಾಣದಲ್ಲಿ ಆತನು ಬರುವಂತೆ ಆತನನ್ನು ಕೇಳಿಕೊಂಡನು.

   ಮೋಶೆಯು ದೇವರನ್ನು ಇನ್ನೂ ಉತ್ತಮವಾಗಿ ತಿಳುಕೊಳ್ಳಲು ಬಯಸಿದ ಮನುಷ್ಯನಾಗಿದ್ದನು. ಆತನು ಅನೇಕರು ಎಂದಾದರೊಮ್ಮೆ ಅನುಭವಿಸುವುದಕ್ಕಿಂತಲೂ ಎಷ್ಟೋ ಉನ್ನತವಾದ ರೀತಿಯಲ್ಲಿ ದೇವರು ತನಗೆ ಆತನ ಮಹಿಮೆಯನ್ನು ಪ್ರಕಟಿಸಬೇಕೆಂದು ಬಯಸಿದನು.

   ಮೋಶೆಯು ದೇವರೊಂದಿಗೆ ಹೆಚ್ಚು ಸಮಯ ಕಳೆಯುತ್ತಿದ್ದ ವ್ಯಕ್ತಿಯಾಗಿದ್ದನು. ಆತನು ಎರಡನೆಯ ಬಾರಿ ಪರ್ವತದ ಮೇಲೆ ದೇವರೊಂದಿಗೆ ನಲವತ್ತು ದಿವಸ ಹಗಲಿರುಳನ್ನು ಕಳೆದನು. ಆತನು ಪ್ರತಿನಿತ್ಯ ದೇವದರ್ಶನ ಗುಡಾರದಲ್ಲಿ ದೇವರನ್ನು ಸಂಧಿಸುತ್ತಿದ್ದನು.

   ಮೋಶೆಯು ಒಬ್ಬ ಆರಾಧಿಸುವ ವ್ಯಕ್ತಿಯಾಗಿದ್ದನು. ಆತನು ಪರ್ವತದ ಮೇಲೆ ದೇವರಿಗೆ ಅಡ್ಡ ಬಿದ್ದು ಆರಾಧಿಸಿದನು. ಆತನು ದೇವರೊಂದಿಗೆ ಸಮಯವನ್ನು ಕಳೆದಾಗ ಆತನ ಮುಖವು ಪ್ರಕಾಶಮಾನವುಳ್ಳದ್ದಾಯಿತು. ಆತನು ದೇವರೊಂದಿಗಿದ್ದನು ಎಂದು ಜನರು ನಿಜವಾಗಲೂ ನೋಡಿ ಅರ್ಥಮಾಡಿಕೊಳ್ಳಬಹುದಾಗಿತ್ತು.

   ಮೋಶೆಯು ದೇವರ ಹಾಗೂ ಇಸ್ರಾಯೇಲರ ನಡುವೆ ತಾನು ಒಬ್ಬ ಮಧ್ಯವರ್ತಿ ಎಂಬ ತನ್ನ ಪಾತ್ರವನ್ನು ಗಂಭೀರವಾಗಿ ಪರಿಗಣಿಸಿದ್ದನು. ಆತನು ಕೇವಲ ದೇವರು ಜನರೊಂದಿಗೆ ಮಾಡಿಕೊಂಡ ಒಡಂಬಡಿಕೆಯ ಮಧ್ಯವರ್ತಿ ಮಾತ್ರವಾಗಿರದೆ ಜನರ ಪ್ರಶ್ನೆಗಳನ್ನು ಮತ್ತು ಸಮಸ್ಯೆಗಳನ್ನು ಸಹ ದೇವರ ಮುಂದೆ ತಂದನು.

   ಮೋಶೆಯು ತಾನು ಸೇವೆ ಮಾಡಿದ ಜನರಿಂದ ಸನ್ಮಾನವನ್ನು ಪಡೆದ ಒಬ್ಬ ಆತ್ಮಿಕ ನಾಯಕನಾಗಿದ್ದನು. ಆತನು ದೇವರೊಂದಿಗೆ ಸಮಯವನ್ನು ಕಳೆಯುತ್ತಿದ್ದನು ಎಂದು ಅವರು ತಿಳಿದಿದ್ದರು. ದೇವರು ಆತನನ್ನು ಸಂಧಿಸಲು ಬರುವಾಘ ಅವರು ಎದ್ದು ನಿಂತು ದೇವರನ್ನು ಆರಾಧಿಸಿದರು. ದೇವರ ಪರಿಶುದ್ಧತೆಯು ಆತನ ಮುಖವನ್ನು ಪ್ರಕಾಶಿಸುವಂತೆ ಮಾಡಿದಾಗ ಅವರು ಆತನನ್ನು ಕಂಡು ಭಯಪಟ್ಟರು.

3. –

**ವಿಮೋಚನಕಾಂಡ ಉತ್ತರಗಳು 26: ದೇವದರ್ಶನ ಗುಡಾರ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. –

2. –

3. ಮೋಶೆಯ ಅಣ್ಣನಾದ ಆರೋನನು ಮತ್ತು ಆರೋನನ ನಾಲ್ಕು ಗಂಡು ಮಕ್ಕಳು ಯಾಜಕರಾಗಿದ್ದರು (28:1).

4. –

5. ಗುಡಾರದ ನಿರ್ಮಾಣ (40:1–33):

   1) ಈ ವಾಕ್ಯಭಾಗದ ರಚನೆಯು ಹೀಗಿದ್ದಂತೆ ತೋರುತ್ತದೆ:

      - ಮಂಜೂಷ, ಮೇಜು, ದೀಪಸ್ತಂಭ, ಚಿನ್ನದ ಬಲಿಪೀಠ, ದಹನಬಲಿಪೀಠ ಮತ್ತು ಗಂಗಾಳವನ್ನುಎಲ್ಲಿ ಮತ್ತು ಹೇಗೆ ಇಡಬೇಕೆಂಬುದರ ಕುರಿತು ಮತ್ತು ಗುಡಾರದ ಆವರಣವನ್ನು ನಿಲ್ಲಿಸುವುದರ ಕುರಿತು ದೇವರು ಮೋಶೆಗೆ ಆಜ್ಞಾಪಿಸುತ್ತಾನೆ (ವ. 1–8).
      - ಗುಡಾರ ಮತ್ತು ಅದರ ಎಲ್ಲಾ ಸಾಮಾಗ್ರಿಗಳ ಮತ್ತು ಸಲಕರಣೆಗಳ ಅಭಿಷೇಕ/ಶುದ್ಧೀಕರಣ (ವ. 9–11).
      - ಯಾಜಕರ, ಅಂದರೆ ಆರೋನ ಮತ್ತು ಆತನ ಪುತ್ರರ ಉಡಿಗೆ ತೊಡಿಗೆ, ಅಭಿಷೇಕ ಮತ್ತು ಶುದ್ಧೀಕರಣ (ವ. 12–16).
      - ಮೋಶೆಯು ದೇವರ ಆಜ್ಞಾನುಸಾರವಾಗಿ ಗುಡಾರವನ್ನು ನಿರ್ಮಿಸಿದ್ದು (ವ. 17–19).
      - ಮೋಶೆಯು ದೇವರು ಆಜ್ಞಾಪಿಸಿದಂತೆಯೇ ಮಂಜೂಷವನ್ನು ಗುಡಾರದ ಒಳಗೆ ಇಟ್ಟು ಪರದೆಯ ಹಿಂದೆ ಅದನ್ನು ಮರೆಮಾಡುತ್ತಾನೆ (ವ. 20–21).
      - ಮೋಶೆಯು ದೇವರ ಆಜ್ಞಾನುಸಾರವಾಗಿ ಮೇಜನ್ನು ಇರಿಸಿ ಅದರ ಮೇಲೆ ರೊಟ್ಟಿಯನ್ನು ಇಡುತ್ತಾನೆ (ವ. 22–23).
      - ಮೋಶೆಯು ದೇವರು ಆಜ್ಞಾಪಿಸಿದಂತೆಯೇ ದೀಪಸ್ತಂಭವನ್ನು ಅದರ ದೀಪಗಳೊಂದಿಗೆ ಇರಿಸುತ್ತಾನೆ (ವ. 24–25).
      - ಮೋಶೆಯು ದೇವರು ಆಜ್ಞಾಪಿಸಿದಂತೆಯೇ ಧೂಪವೇದಿಯನ್ನು ಅದರ ಧೂಪಗಳೊಂದಿಗೆ ಇರಿಸುತ್ತಾನೆ (ವ. 26–27). ನಂತರ ಆತನು ತೆರೆಯನ್ನು ಅಥವಾ ಪರದೆಯನ್ನು ದೇವದರ್ಶನ ಗುಡಾರದ ಪ್ರವೇಶದಲ್ಲಿ ಹಾಕುತ್ತಾನೆ (ವ. 28).
      - ಮೋಶೆಯು ದೇವರು ಆಜ್ಞಾಪಿಸಿದಂತೆಯೇ ದಹನಬಲಿಪೀಠವನ್ನು ನಿರ್ಮಿಸಿ ಅದರ ಮೇಲೆ ದಹನಬಲಿಗಳನ್ನೂ ಧಾನ್ಯಸಮರ್ಪಣೆಯನ್ನೂ ಅರ್ಪಿಸಿದನು (ವ. 29).
      - ಮೋಶೆಯು ದೇವರು ಆಜ್ಞಾಪಿಸಿದಂತೆಯೇ ಗಂಗಾಳವನ್ನು ಇರಿಸಿದನು (ವ. 30–33).
      - ಮೋಶೆಯು ಗುಡಾರದ ಅಂಗಳವನ್ನು ನಿಲ್ಲಿಸಿ ಅದರ ಪ್ರವೇಶಕ್ಕೆ ತೆರೆಯನ್ನು ತೂಗು ಹಾಕಿ ತನ್ನ ಕೆಲವನ್ನು ತೀರಿಸಿದನು (ವ. 33).

        'ಯೆಹೋವನು ಆಜ್ಞಾಪಿಸಿದಂತೆಯೇ' ಎಂಬ ಹೇಳಿಕೆಯು ಅನೇಕ ಬಾರಿ ಪುನರಾವರ್ತಿಸಲಾಗಿದೆ. ಇದು ಮೋಶೆಯು ಎಷ್ಟರ ಮಟ್ಟಿಗೆ ಚಾಚು ತಪ್ಪದೇ ದೇವರ ಮಾರ್ಗದರ್ಶನವನ್ನು ಪಾಲಿಸುವುದರಲ್ಲಿ ಗಮನ ವಹಿಸಿದ್ದನು ಎಂಬುದನ್ನು ತೋರಿಸುತ್ತದೆ.

   2) ಶುದ್ಧೀಕರಣದ ಒಂದು ಭಾಗವನ್ನು ಅಲ್ಪವಾಗಿ ತಿಳಿಸಲಾಗಿದೆ. ಅದು ಯಜ್ಞ ಬಲಿಗಳಾಗಿವೆ (ಅಧ್ಯಾಯ 29 ನ್ನು ಹೋಲಿಸಿರಿ).

6. ದೇವರ ಮಹಿಮೆಯು ಗುಡಾರವನ್ನು ತುಂಬಿದಾಗ ಮೋಶೆಯು ದೇವದರ್ಶನ ಗುಡಾರವನ್ನು ಪ್ರವೇಶಿಸಲಾಗಲಿಲ್ಲ (40:34–35).

7. ಸಿನಾಯಿ ಪರ್ವತದಿಂದ ವಾಗ್ದಾನ ದೇಶದವರೆಗೆ ಇಸ್ರಾಯೇಲರು ಅಲೆದಾಡಿದಾಗ ದೇವರು ಅವರನ್ನು ಮಾರ್ಗದರ್ಶಿಸಲು ದೇವದರ್ಶನ ಗುಡಾರವನ್ನು ಬಳಸಿದನು. ಮೇಘವು ದೇವದರ್ಶನ ಗುಡಾರದಿಂದ ಮೇಲೆ ಏರಿದಾಗ ಪ್ರಯಾಣ ಮುಂದುವರೆಸುವ ಸಮಯ ಬಂದಿದೆ ಎಂದು ಇಸ್ರಾಯೇಲರು ತಿಳಿಯುತ್ತಿದ್ದರು. ಅವರು ಮೇಘವನ್ನು ಹಿಂಬಾಲಿಸಿದರು ಮತ್ತು ಅದು ನಿಂತ ಸ್ಥಳದಲ್ಲಿ ಅವರು ತಂಗುತ್ತಿದ್ದರು.

### ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು

1. 'ಕೆಲಸವನ್ನು ತೀರಿಸಿ ಮೋಶೆಯ ವಶಕ್ಕೆ ಕೊಟ್ಟದ್ದು' ಎಂಬ ವಾಕ್ಯಭಾಗವನ್ನು ಓದಿರಿ (39:32–43). ಅದರಲ್ಲಿರುವ ಪ್ರಧಾನವಾದ ಹೇಳಿಕೆಯು *'ಯೆಹೋವನು ಮೋಶೆಗೆ ಆಜ್ಞಾಪಿಸಿದ ಹಾಗೆಯೇ'* ಎಂಬುದಾಗಿದೆ (ವ. 43, ವ. 32 ರೊಂದಿಗೆ ಹೋಲಿಸಿರಿ). ಈ ಹೇಳಿಕೆಯು ಕೆಳಗೆ ತಿಳಿಸಲ್ಪಟ್ಟಿರುವವರಿಗೆ ಈ ಮಹತ್ವವನ್ನು ಹೊಂದಿದೆ ಎಂದು ನನಗೆ ಅನ್ನಿಸುತ್ತದೆ:

    1) ಮೋಶೆಗೆ: ಆತನು ಸಿನಾಯಿ ಪರ್ವತದ ಮೇಲೆ ಕಳೆದ ಎರಡು ದೀರ್ಘಕಾಲದ ಅವಧಿಯಲ್ಲಿ ದೇವರೊಂದಿಗೆ ಒಂದು ವ್ಯಕ್ತಿಗತ ಅನುಭವವನ್ನು ಹೊಂದಿದ್ದನು, ಅದು ಮಾತ್ರವಲ್ಲದೆ ಹಳೆಯ ದೇವದರ್ಶನ ಗುಡಾರದಲ್ಲಿ ದೇವರೊಂದಿಗೆ ಮುಖಾಮುಖಿಯಾಗಿ ಮಾತನಾಡುವುದರ ಮೂಲಕವೂ ಸಹ ಒಂದು ವ್ಯಕ್ತಿಗತ ಅನುಭವವನ್ನು ಹೊಂದಿದ್ದನು. ಹೊಸ ದೇವದರ್ಶನ ಗುಡಾರವನ್ನು ಹೇಗೆ ಕಟ್ಟಬೇಕೆಂಬುದರ ಕುರಿತು ಒಂದು ವಿವರವಾದ ಆದೇಶಗಳನ್ನೂ ಸಹ ಹೊಂದಿದ್ದನು. ಈ ದೇವರ ಜ್ಞಾನ ಮತ್ತು ದೇವರ ಯೋಜನೆಯು ಎಲ್ಲವನ್ನೂ ದೇವರು ತನಗೆ ತಿಳಿಸಿದಂತೆಯೇ ನಿಖರವಾಗಿ ಮಾಡುವುದರ ಪ್ರಾಮುಖ್ಯತೆಯ ಕುರಿತು ಮೋಶೆಗೆ ಮನವರಿಕೆ ಮಾಡಿಕೊಟ್ಟಿತು.

    2) ಇಸ್ರಾಯೇಲರಿಗೆ: ಇಸ್ರಾಯೇಲರು ಚಿನ್ನದ ಕರುವನ್ನು ಮಾಡಿ ಅದನ್ನು ಆರಾಧಿಸುವುದರ ಮೂಲಕ ಘೋರ ಪಾಪವನ್ನು ಮಾಡಿದ್ದರು. ಆಗ ದೇವರು ಅವರನ್ನು ಬಿಟ್ಟು ಅವರೊಂದಿಗೆ ವಾಗ್ದಾನ ದೇಶಕ್ಕೆ ಹೋಗಬಾರದೆಂದು ಯೋಜಿಸಿಕೊಂಡನು. ಆದರೆ ಮೋಶೆಯು ಅವರ ಪರವಾಗಿ ದೇವರ ಮುಂದೆ ಪ್ರಾರ್ಥಿಸಿದನು. ಇಸ್ರಾಯೇಲರು ತಮ್ಮ ಪಾಠವನ್ನು ಈಗ ಕಲಿತಿದ್ದರು. ಅವರು ದೇವದರ್ಶನ ಗುಡಾರವನ್ನು ಕಟ್ಟುವುದನ್ನು ಒಳಗೊಂಡು ಎಲ್ಲದರಲ್ಲಿಯೂ ಅತ್ಯಂತ ವಿವರವಾಗಿ ತಮ್ಮ ಕುರಿತು ದೇವರು ಹೊಂದಿದ್ದ ಯೋಜನೆಯನ್ನು ಪಾಲಿಸಬೇಕೆಂದು ಅರಿತುಕೊಂಡರು.

    3) ನಮಗೆ: ಸಿನಾಯಿ ಪರ್ವತದ ಬಳಿಯಲ್ಲಿದ್ದ ಇಸ್ರಾಯೇಲರ ಕುರಿತ ಕಥೆಯು ದೇವಜನರು ದೇವರಿಗೆ ಮತ್ತು ಆತನ ಒಡಂಬಡಿಕೆಗೆ ವಿಧೇಯರಾಗುವುದರ ಪ್ರಾಮುಖ್ಯತೆಯನ್ನು ನಮಗೆ ಕಲಿಸುತ್ತದೆ. ನಾವು ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನದಿಂದ ಸ್ಥಾಪಿತಗೊಂಡ ಹೊಸ ಒಡಂಬಡಿಕೆಯಲ್ಲಿ ಜೀವಿಸುತ್ತಿದ್ದೇವೆ. ಆದ್ದರಿಂದ ನಾವು ನಮ್ಮ ಜೀವಿತಗಳನ್ನು ಹೊಸ ಒಡಂಬಡಿಕೆಯ ಕಥೆಗಳಲ್ಲಿ ಮತ್ತು ಬೋಧನೆಗಳಲ್ಲಿ ಪ್ರಕಟವಾಗಿರುವ ನಿಯಮಗಳಿಗೆ ಅನುಸಾರವಾಗಿ ಜೀವಿಸತಕ್ಕದ್ದು.

2. ದೇವರು ಹಳೆಯ ದೇವದರ್ಶನ ಗುಡಾರದಲ್ಲಿ ಇದಕ್ಕೂ ಮುಂಚೆ ಮೋಶೆಯೊಂದಿಗೆ ಮಾತನಾಡುತ್ತಿದ್ದನು (33:7–11). ಆತನಿಗೆ ಈಗಿನಿಂದ ಹೊಸ ದೇವದರ್ಶನ ಗುಡಾರದೊಳಗೆ, ಅಂದರೆ ಗುಡಾರದೊಳಗೆ ಪ್ರವೇಶವಿರಲಿಲ್ಲ (40:35). ಗುಡಾರವು ನಿರ್ಮಿಸಲ್ಪಟ್ಟಾಗ ಇಸ್ರಾಯೇಲರ ಆತ್ಮಿಕ ಜೀವನದಲ್ಲಿ ಉಂಟಾದ ಬದಲಾವಣೆಯನ್ನು ನಾನು ಹೀಗೆ ಅರ್ಥಮಾಡಿಕೊಳ್ಳುತ್ತೇನೆ:

    1) ದೇವರು ಇಸ್ರಾಯೇಲರೊಂದಿಗೆ ತನ್ನನ್ನು ಸಂಬಂಧಿಸಿಕೊಳ್ಳಲು ಬಯಸಿದ ಮಾರ್ಗವನ್ನು ಚಿನ್ನದ ಕರುವಿನ ಧರ್ಮಭ್ರಷ್ಟತೆಯು ಬದಲಾಯಿಸಿತು. ಅವರ ಪಾಪವು ಈ ಬದಲಾವಣೆಯನ್ನು ತಂದಿರಬಹುದು.

    2) ಇದಕ್ಕೂ ಮುಂಚೆ ಜನರ ಮತ್ತು ದೇವರ ನಡುವೆ ಮೋಶೆಯು ಮಧ್ಯವರ್ತಿಯಾಗಿದ್ದನು. ಇದು ಹಳೆಯ ದೇವದರ್ಶನ ಗುಡಾರದಲ್ಲಿ ನಿದರ್ಶಿಸಲ್ಪಟ್ಟಿದೆ. ಅಲ್ಲಿ ಇಸ್ರಾಯೇಲರ ಸಮಸ್ಯೆಗಳನ್ನು ಮೋಶೆಯು ದೇವರ ಮುಂದೆ ತರುತ್ತಿದ್ದನು.

    3) ಈಗ ಆತನು ಹೊಸ ದೇವದರ್ಶನ ಗುಡಾರದ ಮೂಲಕ ಜನರನ್ನು ಸಂಧಿಸುವನು ಮತ್ತು ಅವರ ಸಮಸ್ಯೆಗಳನ್ನು ಬಗೆಹರಿಸುವನು.

    4) ದೇವರು ಈಗ ಕೇವಲ ಶುದ್ಧೀಕರಿಸಲ್ಪಟ್ಟ ಯಾಜಕರುಗಳನ್ನು ಮಾತ್ರ ಹೊಸ ದೇವದರ್ಶನ ಗುಡಾರದಲ್ಲಿ ಸೇವೆ ಮಾಡಲು ಅನುಮತಿಸಿದನು. ಮೋಶೆಯು ಅವರ ಪೈಕಿ ಇರಲಿಲ್ಲವಾದ್ದರಿಂದ ಆತನಿಗೆ ಪ್ರವೇಶ ಇರಲಿಲ್ಲ. ಆದರೆ ಆತನ ಅಣ್ಣನಾದ ಆರೋನನು ಮತ್ತು ಆತನ ಪುತ್ರರು ಹೊಸ ದೇವದರ್ಶನ ಗುಡಾರದಲ್ಲಿ ಸೇವೆ ಸಲ್ಲಿಸಲು ಯಾಜಕರಾಗಿ ಶುದ್ಧೀಕರಿಸಲ್ಪಟ್ಟಿದ್ದರು. ಅವರಿಗೆ ಮಾತ್ರ ಅದರೊಳಗೆ ಪ್ರವೇಶವಿತ್ತು.

    5) ಈಗಿನಿಂದ, ದೇವರು ಹೊಸ ದೇವದರ್ಶನ ಗುಡಾರದಲ್ಲಿ ಇಸ್ರಾಯೇಲರೊಂದಿಗೆ ಇರುವನು. ಮೇಘವು ಗುಡಾರವನ್ನು ಬಿಟ್ಟು ಮೇಲಕ್ಕೆ ಹೋದಾಗ ಇಸ್ರಾಯೇಲರು ತಮ್ಮ ಡೇರೆಗಳನ್ನು ತೆಗೆದು ಪ್ರಯಾಣಕ್ಕಾಗಿ ಮುಂದೆ ಹೊರಡುತ್ತಿದ್ದರು (40:36–38).

3. ಇಸ್ರಾಯೇಲರು ಸಿನಾಯಿ ಪರ್ವತದ ಬಳಿಯಲ್ಲಿ ಕಳೆದ ಆ ವರ್ಷವನ್ನು ನೆನಪಿಸಿಕೊಳ್ಳಿರಿ. ಅದು ದೇವರು ತನ್ನನ್ನು ಪ್ರಕಟ ಮಾಡಿಕೊಂಡ ಮತ್ತು ಅವರೊಂದಿಗೆ ಮಾತನಾಡಿದ ವರ್ಷವಾಗಿತ್ತು. ಆತನು ಅದನ್ನು ಹೀಗೆ ಮಾಡಿದನು:

    1) ಆತನು ತನ್ನ ಒಡಂಬಡಿಕೆಯ ಶಾಸನಗಳ (ದಶಾಜ್ಞೆಗಳ) ಮತ್ತು ಒಡಂಬಡಿಕೆಯ ಪುಸ್ತಕದಲ್ಲಿರುವ ಆಜ್ಞೆಗಳ ಮೂಲಕ ಮಾಡಿದನು.

    2) ಹಳೆಯ ದೇವದರ್ಶನ ಗುಡಾರದಲ್ಲಿ ಮೋಶೆಯ ಮೂಲಕ ಮಾಡಿದನು.

3) ದೇವರೊಂದಿಗೆ ಮೋಶೆಯ ಅನುಭವಗಳ (ಇಸ್ರಾಯೇಲರಿಗಾಗಿ ಮಧ್ಯಸ್ಥಿಕೆಯ ಪ್ರಾರ್ಥನೆ; ದೇವರು ಸಿನಾಯಿ ಪರ್ವತದ ಮೇಲೆ ತನ್ನ ಮಹಿಮೆಯನ್ನು ಪ್ರಕಟಿಸುವುದರ) ಮೂಲಕ ಮಾಡಿದನು. ಮೋಶೆಯು ಆ ಅನುಭವಗಳನ್ನು ಎಲ್ಲರಿಗೂ ಓದಲಾಗುವಂತೆ ವಿಮೋಚನಕಾಂಡದಲ್ಲಿ ಬರೆದನು.

4) ಅವರು ಸಿನಾಯಿ ಪರ್ವತದ ಬಳಿಯಲ್ಲಿ ಒಂದು ವರ್ಷದ ಕಾಲ ತಂಗಿದ್ದಾಗ ದೇವರ ಮಹಿಮೆಯ ಬಲವಾದ ತೋರುವಿಕೆಗಳ ಮೂಲಕ ಮಾಡಿದನು.

4. ದೇವರು ಇಂದಿನ ದಕ್ಷಿಣ ಭಾರತದ ವಿಶ್ವಾಸಿಗಳಾದ ನಮ್ಮೊಂದಿಗೆ ಮಾತನಾಡುತ್ತಾನೆ ಮತ್ತು ತನ್ನನ್ನು ಪ್ರಕಟಿಸಿಕೊಳ್ಳುತ್ತಾನೆ, ಕೆಲವು ಉದಾಹರಣೆಗಳು ಹೀಗಿವೆ:

1) ಆತನು ತನ್ನ ಬರೆಯಲ್ಪಟ್ಟ ವಾಕ್ಯವಾದ ಸತ್ಯವೇದದ ಮೂಲಕ, ವಿಶೇಷವಾಗಿ ಹೊಸ ಒಡಂಬಡಿಕೆಯ ಪಠ್ಯದ ಮೂಲಕ

2) ಸಭೆಯ ನಾಯಕತ್ವದ ಮೂಲಕ: ಬೋಧಿಸುವ ಮತ್ತು ಪ್ರಸಂಗಿಸುವ ಸಭಾಪಾಲಕರುಗಳ ಮೂಲಕ; ಸಲಹೆ ಮತ್ತು ಬುದ್ಧಿಮಾತು ಹೇಳುವ ಸಮಾಲೋಚಕರ ಮೂಲಕ; ದೇವರಿಂದ ನಮಗಾಗಿ ವಿಶೇಷ ಸಂದೇಶವನ್ನು ತರುವ ಪ್ರವಾದಿಗಳ ಮೂಲಕ

3) ಆತನ ಪವಿತ್ರಾತ್ಮನ ಮೂಲಕ (ಮಾತ್ರವಲ್ಲದೆ ದೇವರ ವಾಕ್ಯವನ್ನು ನಾವು ಓದುವುದರ ಮೂಲಕ ಸೂಕ್ಷ್ಮತೆಯನ್ನು ಪಡಕೊಳ್ಳುವ ನಮ್ಮ ಮನಸ್ಸಾಕ್ಷಿಯ ಮೂಲಕ), ನಿರ್ದಿಷ್ಟವಾಗಿ ನಾವು ಪ್ರಾರ್ಥನೆಯಲ್ಲಿ ಸಮಯವನ್ನು ಕಳೆಯುವಾಗ

4) ಇತರೆ ಮಾರ್ಗಗಳು: ತೆರೆದ ಮತ್ತು ಮುಚ್ಚಿದ ಬಾಗಿಲುಗಳು; ಕನಸುಗಳು ಮತ್ತು ದರ್ಶನಗಳು; ಮತ್ತು ಇತ್ಯಾದಿ

# ಯಾಜಕಕಾಂಡ ಉತ್ತರಗಳು

**ಯಾಜಕಕಾಂಡ ಪುಸ್ತಕದ ಪರಿಚಯದ ಉತ್ತರಗಳು**

**ಪ್ರಶ್ನೆಗಳಿಗೆ ಉತ್ತರಗಳು**

1. "ಲೆವಿಟಿಕಸ್" (ಯಾಜಕಕಾಂಡ) ಎಂಬ ಆಂಗ್ಲ ಪದವು ಹಳೆ ಒಡಂಬಡಿಕೆಯ ಗ್ರೀಕ್ ಭಾಷಾಂತರವಾದ "ಸೆಪ್ಟೊಜೆಂಟ್" ದಿಂದ ಬಂದಿದೆ. ಇದು "ಲೇವಿಯರಿಗೆ ಸಂಬಂಧಿಸಿದ್ದು" ಎಂಬ ಅರ್ಥವನ್ನು ಹೊಂದಿದೆ. ಈ ಪುಸ್ತಕವು ಧಾರ್ಮಿಕ ಮತ್ತು ಸಂಸ್ಕಾರದ ವಿಚಾರಗಳನ್ನು ಹೊಂದಿದೆ. ಇಡೀ 12 ಕುಲಗಳ ಪರವಾಗಿ ಯಾಜಕೊದ್ಯೋಗ ನಡೆಸುವದಕ್ಕಾಗಿ ದೇವರು ಇಸ್ರಾಯೇಲರಲ್ಲಿ ಲೇವಿ ಕುಲವನ್ನು ನೇಮಿಸುತ್ತಾನೆ.

2. ಈ ಪುಸ್ತಕವು ಇಸ್ರಾಯೇಲರು ಸಿನಾಯಿ ಪರ್ವತದಲ್ಲಿ ಇಳುಕೊಂಡಿದ್ದ ಸಮಯದಲ್ಲಿ ಇಲ್ಲವೆ ಕ್ರಿ.ಪೂ. 1444ರ ಸಮಯದಲ್ಲಿ ರಚಿಸಲ್ಪಟ್ಟಿತು.

3. ಈ ಪುಸ್ತಕದಲ್ಲಿ ಕಂಡುಬರುವ ಮುಖ್ಯ ವಿಚಾರಗಳು ನಿಯಮಗಳು, ವಿಧಿಗಳು ಮತ್ತು ಕಾನೂನುಗಳು ಆಗಿವೆ.

4. ದೇವರು ನಿಯಮಗಳನ್ನು, ಕಾನೂನುಗಳನ್ನು ಮತ್ತು ಸೂಚನೆಗಳನ್ನು ಮೋಶೆಗೆ – ಮೋಶೆಯ ಮೂಲಕ ಯಾಜಕರಿಗೆ, ಲೇವಿಯರಿಗೆ ಮತ್ತು ಜನಸಾಮಾನ್ಯರಿಗೆ ನೀಡಿರುವದರಿಂದ ಈ ಪುಸ್ತಕದಲ್ಲಿ 'ದೇವರ' ಕುರಿತು ಹೆಚ್ಚು ಉಲ್ಲೇಖಿಸಲಾಗಿದೆ.

5. ಈ ಪುಸ್ತಕದ ಮುಖ್ಯ ಉದ್ದೇಶವು ಪರ್ಣಶಾಲೆಗಳ ಹಬ್ಬಗಳಲ್ಲಿ ನಡೆಸಲ್ಪಡುವ ಯಜ್ಞಗಳನ್ನು ಮತ್ತು ಕಾಣಿಕೆಗಳನ್ನು ಕುರಿತು ತಿಳಿಸುವದು, ರಾಷ್ಟ್ರೀಯ ಹಾಗೂ ಇತರ ರಜಾದಿನಗಳ ಮತ್ತು ಹಬ್ಬಗಳ ಕುರಿತು ಬೋಧಿಸುವದು, ಮಾತ್ರವಲ್ಲದೆ ಸಂಸ್ಕಾರಗಳಲ್ಲಿ ಇಸ್ರಾಯೇಲರಿಗಿರಬೇಕಾದ ಪರಿಶುದ್ಧತೆ ಹಾಗೂ ಪವಿತ್ರತೆಯ ಕುರಿತು ನಿರ್ದೇಶಿಸುವದೂ ಆಗಿದೆ.

6. ಯಾಜಕಕಾಂಡದಲ್ಲಿ ಪವಿತ್ರತೆಯು ಹೇಗೆ ಅರ್ಥೈಯಿಸಲ್ಪಟ್ಟಿದೆ ಎಂಬುದಕ್ಕೆ ಕೆಲವು ಉದಾಹರಣೆಗಳು ಇಲ್ಲಿವೆ:

   ಅ. ದೇವರು ಪರಿಶುದ್ಧನಾಗಿರುವದರಿಂದ ಆತನ ಜನರೂ ಪರಿಶುದ್ಧರಾಗಿರಬೇಕು.

   ಆ. ಇಸ್ರಾಯೇಲರ ಪಾಳೆಯದಲ್ಲಿ ದೇವರ ಪ್ರಸನ್ನತೆ ಇರುವದರಿಂದ ಅದು ಪವಿತ್ರವಾಗಿರಬೇಕು. ಹೀಗಿರುವಲ್ಲಿ ಪಾಳೆಯದಲ್ಲಿ ಯಾರೂ ಹಾಗೂ ಯಾವ ವಸ್ತುವೂ ಅಪವಿತ್ರವಾಗಿರಬಾರದು.

   ಇ. ದೈಹಿಕ ನ್ಯೂನ್ಯತೆಗಳು ಪವಿತ್ರತೆಯ ಕೊರತೆಯನ್ನು ಸೂಚಿಸುತ್ತವೆ: ಆದ್ದರಿಂದ ಎಲ್ಲ ತರದ ಯಜ್ಞದ ಪ್ರಾಣಿಗಳಲ್ಲಿ ನ್ಯೂನ್ಯತೆಗಳು ಇರಬಾರದು.

   ಈ. ಮಾನವನ ದೈನಂದಿನ ಜೀವನದ ಕೆಲವು ವಿಚಾರಗಳು ಅಪವಿತ್ರ ಎಂದು ಪರಿಗಣಿಸಲ್ಪಟ್ಟು ಆಧ್ಯಾತ್ಮಿಕ ಅಪವಿತ್ರತೆಯನ್ನು ಸೂಚಿಸುತ್ತವೆ. ಉದಾಹರಣೆಗೆ ಶಿಶು ಜನನ, ತಿಂಗಳ ಮುಟ್ಟು, ಬೋಳುತಲೆ ಮತ್ತು ಚರ್ಮದ ಮೇಲಿನ ಹುಣ್ಣುಗಳು (ದದ್ದುಗಳು).

   ಉ. ಧಾರ್ಮಿಕ ಪರಿಶುದ್ಧತೆಯನ್ನು ಹೊಂದಲೇಬೇಕು: ಈ ನಿಟ್ಟಿನಲ್ಲಿ ಯಾಜಕರು ಅಪವಿತ್ರತೆಯ ಮಟ್ಟವನ್ನು ಪರೀಕ್ಷಿಸಿ ಅದಕ್ಕೆ ತಕ್ಕದಾದ ಯಜ್ಞವನ್ನು ಮಾಡುವರು.

7. ಇಸ್ರಾಯೇಲರಲ್ಲಿದ್ದ ಯಜ್ಞಗಳು ಮತ್ತು ಕಾಣಿಕೆಗಳು ಸುತ್ತಲಿನ ಅನ್ಯ ರಾಷ್ಟ್ರಗಳವರ ಯಜ್ಞ ಕಾಣಿಕೆಗಳಂತೆ ಕಂಡರೂ ಅವು ಭಿನ್ನವಾಗಿದ್ದವು.

   ಅ. ಎರಡೂ ಕಡೆ ಅವುಗಳನ್ನು ನೆರವೇರಿಸುವಲ್ಲಿ (ಅರ್ಪಿಸುವಲ್ಲಿ) ಏಕರೂಪತೆ ಕಾಣುತ್ತಿತ್ತು: ಯಾಜಕರು ಪವಿತ್ರ ಸ್ಥಳದಲ್ಲಿ ಪ್ರಾಣಿಗಳನ್ನು ಆಹಾರವನ್ನು ಯಜ್ಞವಾಗಿ ಅರ್ಪಿಸುತ್ತಿದ್ದರು.

   ಆ. ಅವುಗಳ ಮಹತ್ವದಲ್ಲಿ (ಅರ್ಥಗಳಲ್ಲಿ) ಅವು ಭಿನ್ನವಾಗಿದ್ದವು: ಇಸ್ರಾಯೇಲರು ತಮ್ಮಲ್ಲಿದ್ದ ಯಜ್ಞದ ವ್ಯವಸ್ಥೆಯ ಅರ್ಥವನ್ನು ಕರ್ತನ ಒಡಂಬಡಿಕೆಯ ಸಂಬಂಧದಲ್ಲಿ ಹೊಂದಿದ್ದರು. ಮತ್ತು ಅವರ ಯಜ್ಞಗಳು ದೋಷಪರಿಹಾರ ಹಾಗೂ ಆರಾಧನೆಯನ್ನು ಸೂಚಿಸುತ್ತಿದ್ದವು. ಆದರೆ ಅನ್ಯರಲ್ಲಿದ್ದ ಯಜ್ಞಗಳು ತಮ್ಮ ದೇವತೆಗಳನ್ನು ಒಲಿಸಿಕೊಳ್ಳುವದಕ್ಕಾಗಿ ಬಳಕೆಯಲ್ಲಿದ್ದವುಗಳಾಗಿದ್ದವು.

**ಯಾಜಕಕಾಂಡ ಉತ್ತರಗಳು 1: ಕಾಣಿಕೆಗಳು ಮತ್ತು ಯಜ್ಞಗಳು**

**ಆ. ಪ್ರಶ್ನೆಗಳಿಗೆ ಉತ್ತರಗಳು**

1. ಅಧ್ಯಾಯ 1ರಿಂದ 7ರಲ್ಲಿ ತಿಳಿಸಲ್ಪಟ್ಟ 5 ವಿಧದ ಕಾಣಿಕೆಗಳು

   ಅ. ಸರ್ವಾಂಗಹೋಮ

   ಆ. ಧಾನ್ಯ ಸಮರ್ಪಣೆ

   ಇ. ಸಮಾಧಾನ ಯಜ್ಞ

   ಈ. ದೋಷಪರಿಹಾರಕ ಯಜ್ಞ

   ಉ. ಪ್ರಾಯಶ್ಚಿತ್ತ ಯಜ್ಞ

2. ಅರ್ಪಿಸಲ್ಪಡುವ ಕಾಣಿಕೆಗಳ ಆಧಾರದ ಮೇಲೆ ಈ ಕಾಣಿಕೆಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು.

   ಅ. ಪಶು ಕಾಣಿಕೆಗಳು: ಸರ್ವಾಂಗಹೋಮ, ಸಮಾಧಾನ ಯಜ್ಞ, ದೋಷಪರಿಹಾರಕ ಯಜ್ಞ ಮತ್ತು ಪ್ರಾಯಶ್ಚಿತ್ತ ಯಜ್ಞ

   ಆ. ಪಶುಗಳಿಲ್ಲದ ಕಾಣಿಕೆ (ರಕ್ತವಿಲ್ಲದ): ಧಾನ್ಯ ಸಮರ್ಪಣೆ

3. ಕಾಣಿಕೆಗಳನ್ನು ಸಮರ್ಪಿಸುವ ವ್ಯಕ್ತಿಯನ್ನು ಆಧರಿಸಿ ಈ ಕಾಣಿಕೆಗಳನ್ನು ಎರಡು ವಿಧದಲ್ಲಿ ವಿಂಗಡಿಸಬಹುದು.

   ಅ. ಆರಾಧನೆಗೈಯುವ ಸ್ವ ಇಚ್ಚೆಯ ಕಾಣಿಕೆಗಳು, ಆರಾಧನೆ, ಉಪಕಾರ ಸ್ಮರಣೆ ಇತ್ಯಾದಿ: ಸರ್ವಾಂಗಹೋಮ, ಧಾನ್ಯ ಸಮರ್ಪಣೆ, ಸಮಾಧಾನ ಯಜ್ಞ,

   ಆದರೆ ಸರ್ವಾಂಗಹೋಮವು ದೋಷಪರಿಹಾರಕ ಯಜ್ಞ ಮತ್ತು ಪ್ರಾಯಶ್ಚಿತ್ತ ಯಜ್ಞಗಳೊಟ್ಟಿಗೆ ಅಗತ್ಯವಾಗಿ ಮಾಡಬೇಕಾಗಿ ಕಾಣುತ್ತದೆ (ನೋಡಿ – ಯಾಜಕಕಾಂಡ ಅಧ್ಯಯನ –2: ದೋಷಪರಿಹಾರಕ ಮಹಾದಿನ).

   ಆ. ಅಪರಾಧದ ನಿಮಿತ್ತ ಅರ್ಪಿಸಲೇಬೇಕಾದ ಕಾಣಿಕೆಗಳು: ದೋಷಪರಿಹಾರಕ ಯಜ್ಞ ಮತ್ತು ಪ್ರಾಯಶ್ಚಿತ್ತ ಯಜ್ಞ, ಸರ್ವಾಂಗಹೋಮದ ಕುರಿತು ಮೇಲೆ ತಿಳಿಸಿದ್ದನ್ನು ನೋಡಿ.

4. ಸರ್ವಾಂಗಹೋಮದ ಕುರಿತು ತಿಳಿಸುವ ಎರಡು ಮೂಲಗಳಾದ ಯಾಜಕಕಾಂಡ 1:3–17ಕ್ಕೂ ಮತ್ತು 6:8–13ಗೂ ಇರುವ ಮುಖ್ಯ ವ್ಯತ್ಯಾಸವೆಂದರೆ:

   ಅ. ಸರ್ವಾಂಗಹೋಮವನ್ನು ಹೇಗೆ ಅರ್ಪಿಸಬೇಕು ಎಂಬುದನ್ನು ಇಸ್ರಾಯೇಲರಿಗೆ ತಿಳಿಸಲು ದೇವರು ಮೋಶೆಗೆ ಯಾಜಕಕಾಂಡ 1:3–17ರಲ್ಲಿ ಹೇಳುವದನ್ನು ನೋಡುತ್ತೇವೆ. ಆದ್ದರಿಂದ ಈ ಮೂಲವು ಕಾಣಿಕೆ ಅರ್ಪಿಸುವವನ ದೃಷ್ಟಿಕೋನವನ್ನು ಹೊಂದಿದೆ.

   ಆ. ಯಾಜಕಕಾಂಡ 6:8–16ರಲ್ಲಿ ಯಾಜಕರು ಅಪರಾಧಿಯ ಕಾಣಿಕೆಗಳನ್ನು ಅರ್ಪಿಸುವಲ್ಲಿ ನಡೆದುಕೊಳ್ಳಬೇಕಾದ ರೀತಿಯನ್ನು ದೇವರು ಮೋಶೆಗೆ ತಿಳಿಸುವದನ್ನು ಕಾಣುತ್ತೇವೆ. ಆದ್ದರಿಂದ ಈ ಮೂಲವು ಸರ್ವಾಂಗಹೋಮವನ್ನು ನಡೆಸುವ ನಿಟ್ಟಿನಲ್ಲಿ ಯಾಜಕರ ದೃಷ್ಟಿಕೋನವನ್ನು ಹೊಂದಿದೆ.

5. ಎರಡನೆಯ ಅಧ್ಯಾಯದಲ್ಲಿ ತಿಳಿಸಿರುವಂತೆ 4 ರೀತಿಯ ಧಾನ್ಯ ಸಮರ್ಪಣೆ ಕಾಣಿಕೆಗಳಿವೆ

   ಅ. ನಯವಾದ ಗೋದಿಹಿಟ್ಟಿನ ಕಾಣಿಕೆ (ಅಡುಗೆ ಮಾಡದ್ದು), ವಚನ 1–3

   ಆ. ಒಲೆಯಲ್ಲಿ ಬೆಯಿಸಿದ ಹುಳಿಯಿಲ್ಲದ ಗೋದಿಹಿಟ್ಟಿನ ಹೋಳಿಗೆ ಅಥವಾ ಕಡುಬಿನ ಕಾಣಿಕೆ, ವಚನ 4

   ಇ. ಕಬ್ಬಿಣದ ಹಂಚಿನ ಮೇಲೆ ತಯಾರಿಸಿದ ಕಾಣಿಕೆ, ವಚನ 5–6

   ಈ. ಬಾಂಡ್ಲೆಯಲ್ಲಿ ತಯಾರಿಸಿದ ಕಾಣಿಕೆ, ವಚನ 7

6. ನಾಲ್ಕನೆಯ ಅಧ್ಯಾಯದಲ್ಲಿ ದೋಷಪರಿಹಾರಕ ಯಜ್ಞವನ್ನು ಅರ್ಪಿಸಬೇಕಾದ 4 ವಿಧದ ಜನರನ್ನು ಸೂಚಿಸಲಾಗಿದೆ.

   ಅ. ಮಾಹಾಯಾಜಕ, ವಚನ 3–12

   ಆ. ಒಂದು ಸಮುದಾಯವಾಗಿ ಇಡೀ ಇಸ್ರಾಯೇಲರು, ವಚನ 13–21

   ಇ. ಇಸ್ರಾಯೇಲರ ನಾಯಕ, ವಚನ 22–26

   ಈ. ಇಸ್ರಾಯೇಲ್ ವ್ಯಕ್ತಿ, ವಚನ 27–31

7. ಅಪರಾಧಿಯು ತನ್ನ ವಿವಿಧ ಅಪರಾಧಗಳಿಗೆ ದೋಷಪರಿಹಾರಕ ಯಜ್ಞಗಳನ್ನು ಅರ್ಪಿಸಬೇಕಾದದ್ದನ್ನು ಐದನೆಯ ಅಧ್ಯಾಯದಲ್ಲಿ ತಿಳಿಸಲಾಗಿದೆ. ಆ ಅಪರಾಧಗಳು ಯಾವವೆಂದರೆ:

   ಅ. ತಾನು ಕಂಡು ಕೇಳಿದ್ದನ್ನು ತಿಳಿಸಬೇಕೇಂದು ಆಣೆಯಿದ್ದರೂ ಅದನ್ನು ತಿಳಿಸದೆ ಸುಮ್ಮನಿರುವದು, ವಚನ 1

   ಆ. ಧಾರ್ಮಿಕವಾಗಿ ಅಶುದ್ಧವಾದದ್ದು ವ್ಯಕ್ತಿಗೆ ತಗುಲಿದರೆ (ಮುಟ್ಟಿದರೆ) ಅವನು ಅಶುದ್ಧನು, ವಚನ 2

   ಇ. ಮಾನವನ ದೇಹದ ಯಾವುದಾದರೂ ಅಶುದ್ಧತೆ ವ್ಯಕ್ತಿಗೆ ತಗುಲಿದರೆ ಅವನು ಅಶುದ್ಧನು, ವಚನ 3

   ಈ. ತಾನು ಮಾಡುವದು ಏನೆಂದು ತಿಳಿಯದೆ ಆಣೆಯನ್ನು ಇಟ್ಟುಕೊಳ್ಳುವ ವ್ಯಕ್ತಿ, ವಚನ 4

8. ಒಬ್ಬ ಅಪರಾಧಿಯು ತನ್ನ ಅಪರಾಧಗಳಿಗೆ ಪ್ರಾಯಶ್ಚಿತ್ತ ಯಜ್ಞಗಳನ್ನು ಅರ್ಪಿಸಲೆಬೇಕೆಂದು ಅಧ್ಯಾಯ 5–6ರಲ್ಲಿ ತಿಳಿಸಲಾಗಿದೆ. ಆ ಅಪರಾಧಗಳು ಯಾವವೆಂದರೆ:

   ಅ. ವ್ಯಕ್ತಿಯು ದೇವರ ಪವಿತ್ರ ವಸ್ತುಗಳನ್ನು ಅಲಕ್ಷ ಮಾಡಿದರೆ, ವಚನ 14–16

   ಆ. ವ್ಯಕ್ತಿಯು ದೇವರ ಯಾವುದೇ ಆಜ್ಞೆಯನ್ನು ಉಲ್ಲಂಘಿಸಿದರೆ, ವಚನ 17–19

   ಇ. ವ್ಯಕ್ತಿಯು ತನ್ನ ನೆರೆಯವರೊಂದಿಗೆ ಯಾವುದೇ ವಿಧದಲ್ಲಿ ಸುಳ್ಳು, ವಂಚನೆ ಅಥವಾ ಮೋಸ ಮಾಡಿದರೆ, ವಚನ 1–7

9. ಎಂಟನೆಯ ಅಧ್ಯಾಯದಲ್ಲಿ ಬರುವ ಆರೋನ ಮತ್ತು ಅವನ ಮಕ್ಕಳ ದೀಕ್ಷೆಯ (ಅಭಿಷೇಕ) ಸಮಯಕ್ಕೆ ಸಂಬಂಧಿಸಿದ ಘಟನೆಗಳು ಯಾವವೆಂದರೆ:

   ಅ. ಸಿದ್ದತೆಗಳು: ದೀಕ್ಷೆಗೆ ಅಗತ್ಯವಾದವುಗಳೆಲ್ಲವನ್ನೂ ಮೋಶೆ ತರುವನು ಮತ್ತು ದೇವದರ್ಶನದ ಗುಡಾರದ ಮುಂದೆ ಸೇರಿ ಬರಲು ಜನರಿಗೆ ಕರೆ ನೀಡುವನು, ವಚನ 1–4.

   ಆ. ಉಡುಪು: ಆರೋನ ಮತ್ತು ಅವನ ಮಕ್ಕಳಿಗೆ ಮೋಶೆ ವಿಶೇಷ ಉಡುಪನ್ನು ಹಾಕಿಸುವದು, ವಚನ 5–9.

   ಇ. ಅಭಿಷೇಕ: ಮೋಶೆ ದೇವದರ್ಶನ ಗುಡಾರವನ್ನೂ ಅದರಲ್ಲಿನ ಪವಿತ್ರ ವಸ್ತುಗಳನ್ನೂ ಆರೋನ ಮತ್ತು ಅವನ ಮಕ್ಕಳನ್ನೂ ಅಭಿಷೇಕಿಸಿದನು, ವಚನ 10–13.

   ಈ. ಮೊದಲ ಯಜ್ಞ: ಮೋಶೆ ಪಶುವನ್ನು ಯಜ್ಞವರ್ಪಿಸಿದನು, ವಚನ 14–17.

   ಉ. ಸರ್ವಾಂಗಹೋಮಕ್ಕಾಗಿ ಟಗರಿನ ಯಜ್ಞ: ಮೋಶೆ ಸರ್ವಾಂಗಹೋಮವನ್ನು ನಡೆಸಿದನು, ವಚನ 18–21.

   ಊ. ದೀಕ್ಷೆಗೆ ಸಂಬಂಧಿಸಿದ ಯಜ್ಞ: ಮೋಶೆ ಇನ್ನೊಂದು ಟಗರನ್ನೂ ಮತ್ತು ರೊಟ್ಟಿಯನ್ನೂ ಯಜ್ಞವರ್ಪಿಸಿದನು, ವಚನ 22–29. ಈ ವಿಶೇಷ ಕಾಣಿಕೆಗಳು ಯಾಜಕರು ದೀಕ್ಷೆ ಹೊಂದುವ ಸಂದರ್ಭದಲ್ಲಿ ಮಾತ್ರ ನಡೆಸಲ್ಪಡುತ್ತವೆ.

   ಎ. ಪ್ರತಿಷ್ಠೆ: ಮೋಶೆ ಯಜ್ಞವೇದಿಯಿಂದ ರಕ್ತವನ್ನೂ ಮತ್ತು ಅಭಿಷೇಕದ ತೈಲವನ್ನೂ ತೆಗೆದುಕೊಂಡು ಆರೋನ, ಅವನ ಮಕ್ಕಳು ಮತ್ತು ಅವರ ವಸ್ತ್ರಗಳ ಮೇಲೆ ಚಿಮಿಕಿಸಿದನು, ವಚನ 30.

   ಏ. ಭೋಜನ: ಮೋಶೆ ಆರೋನ ಮತ್ತು ಅವನ ಮಕ್ಕಳಿಗೆ ಯಜ್ಞದಿಂದ ಮಾಂಸ, ಭಕ್ಷಗಳನ್ನು ತೆಗೆದುಕೊಂಡು ಊಟಮಾಡಲು ಸೂಚಿಸುತ್ತಾನೆ, ಅದನ್ನು ಅವರು ಊಟಮಾಡಿ ಏಳು ದಿವಸಗಳವರೆಗೂ ದೇವದರ್ಶನದ ಗುಡಾರದ ಬಾಗಲಿನ ಹತ್ತಿರ ಇರಲು ತಿಳಿಸುತ್ತಾನೆ, ವಚನ 31–36.

10. 9ನೇ ಅಧ್ಯಾಯದಲ್ಲಿ ಆರೋನ ಮತ್ತು ಅವನ ಮಕ್ಕಳು ತಮ್ಮ ಯಾಜಕೊಧ್ಯೋಗವನ್ನು ಆರಂಭಿಸಿದ್ದನ್ನು ತಿಳಿಸಲಾಗಿದೆ:

    ಅ. ಮೊದಲು ತಮಗಾಗಿ ಮತ್ತು ನಂತರ ಜನರಿಗಾಗಿ ಅವರು ಕರ್ತನ ಸನ್ನಿಧಿಯಲ್ಲಿ ನಡೆಸಬೇಕಾದ ಯಜ್ಞಗಳು:

    - ಸರ್ವಾಂಗಹೋಮ
    - ದೋಷಪರಿಹಾರಕ ಯಜ್ಞ
    - ಸಮಾಧಾನದ ಯಜ್ಞ: ಈ ಯಜ್ಞದ ಒಂದು ಭಾಗ ಈಗಾಗಲೇ ಕರ್ತನ ಸನ್ನಿದಿಯಲ್ಲಿ ಎತ್ತಲ್ಪಟ್ಟ ಯಜ್ಞವಾಗಿ ಅರ್ಪಿಸಲ್ಪಟ್ಟಿದೆ.
    - ಧಾನ್ಯ ಸಮರ್ಪಣ ಯಜ್ಞ

    ಆ. ಈ ಯಜ್ಞಗಳ ಮಹತ್ವದಿಂದ ನಾವು ಕಲಿಯಬೇಕಾದದ್ದು:

- ಯಜ್ಞಗಳು ದೇವರು ತನ್ನ ಜನರಿಗೆ ದರ್ಶನ ನೀಡಬೇಕು ಎಂಬ ನಿರೀಕ್ಷೆಯಿಂದ ಅರ್ಪಿಸಲ್ಪಡುತ್ತಿದ್ದವು, ವಚನ 4, 6
- ದೋಷಪರಿಹಾರಕ ಯಜ್ಞ ಮತ್ತು ಸರ್ವಾಂಗ ಹೋಮಗಳಿಂದ ಪಾಪಪರಿಹಾವು (ದೋಷಪರಿಹಾರ) ನಡೆಸಲ್ಪಡುತ್ತಿತ್ತು, ವಚನ 7

11. ಮೋಶೆ ಮತ್ತು ಆರೋನರು ದೇವದರ್ಶನ ಗುಡಾರದಿಂದ ಹೊರ ಬರಲು ಕರ್ತನ ಮಹಿಮೆಯು ಜನರೆಲ್ಲರಿಗೆ ಪ್ರತ್ಯಕ್ಷವಾಯಿತು: ಕರ್ತನ ಸನ್ನಿಧಿಯಿಂದ ಬೆಂಕಿಯು ಹೊರಟು ಯಜ್ಞವೇದಿಯ ಮೇಲಿದ್ದ ಯಜ್ಞಗಳನ್ನು ದಹಿಸಿತು, ವಚನ 24.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –
2. ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಇಂದು ಯಾಜಕಕಾಂಡ 9ನೇ ಅಧ್ಯಾಯದಿಂದ ಕಲಿಯಬೇಕಾದ ಕೆಲವು ವಿಚಾರಗಳು ಏನೆಂದರೆ:

   ಅ. ಹಳೆ ಒಡಂಬಡಿಕೆಯ ಕಾಲದಲ್ಲಿ ದೇವದರ್ಶನ ಗುಡಾರದ ಯಜ್ಞ ವ್ಯವಸ್ಥೆಯ ಮೂಲಕ ಹೇಗೆ ತನ್ನನ್ನು ಆರಾಧಿಸಬೇಕು ಎಂಬ ಮಾರ್ಗಸೂಚಿಗಳನ್ನು ದೇವರು ಇಸ್ರಾಯೇಲರಿಗೆ ಮೋಶೆಯ ಮೂಲಕ ನೀಡಿದನು. ಹೊಸ ಒಡಂಬಡಿಕೆಯ ಕಾಲದಲ್ಲಿ ಬದುಕುವ ನಾವು ದೇವರನ್ನು ಹೇಗೆ ಆರಾಧನೆಗೈಯಬೇಕು ಎಂಬುದರ ಕುರಿತು ಮಾರ್ಗದರ್ಶನಗಳನ್ನು ಇಡೀ ಸತ್ಯವೇದದಲ್ಲಿ ವಿಶೇಷವಾಗಿ ಹೊಸ ಒಡಂಬಡಿಕೆಯಲ್ಲಿ ಕಾಣುತ್ತೇವೆ. ಯೇಸು ಹೇಳಿದ್ದು, ಸತ್ಯಭಾವದಿಂದ ದೇವಾರಾಧನೆ ಮಾಡುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ; ಅದು ಈಗಲೇ ಬಂದಿದೆ; ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ. ದೇವರು ಆತ್ಮಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು (ಯೋಹಾನ 4:23–24).

   ಆ. ದೇವರ ಗುಡಾರದಲ್ಲಿನ ಈ ಯಜ್ಞದ ವ್ಯವಸ್ಥೆಯ ಮೂಲಕ ಪಾಪಪರಿಹಾರವನ್ನು ಅನುಭವಿಸುವ ವಿಧಾನವನ್ನು ದೇವರು ಇಸ್ರಾಯೇಲರಿಗೆ ಅನುಗ್ರಹಿಸಿದನು. ಹೊಸ ಒಡಂಬಡಿಕೆಯ ಜನರಾದ ನಮಗೂ ಕೂಡಾ ದೇವರು ಪಾಪಪರಿಹಾರವನ್ನು ಹೊಂದುವ ವಿಧಾನವನ್ನು ನೀಡಿದ್ದಾನೆ. ಶಿಲುಬೆಯಲ್ಲಿ ಯೇಸುಕ್ರಿಸ್ತನ ಮರಣವೇ ಈ ವಿಧಾನವಾಗಿದೆ. ಅಂದು ಇಸ್ರಾಯೇಲರು ದೇವರು ನೀಡಿದ ಆ ವಿಧಾನವನ್ನು ಸ್ವೀಕರಿಸಿದಂತೆ ಇಂದು ನಾವು ಕೊಡಲ್ಪಟ್ಟ ದೇವರ ಮಾರ್ಗವನ್ನು (ವಿಧಾನ) ಸ್ವೀಕರಿಸಬೇಕು. ಯೇಸುವೇ ಮಾರ್ಗವಾಗಿದ್ದಾನೆ. ನಾವು ಆತನನ್ನು ನಮ್ಮ ಸ್ವಂತ ರಕ್ಷಕನನ್ನಾಗಿ ಸ್ವೀಕರಿಸಬೇಕು. ಪೌಲನು ಬರೆಯುತ್ತಾನೆ: ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು (ದೋಷಪರಿಹಾರಕ ಯಜ್ಞವಾಗಿ) ದೇವರು ಈತನನ್ನು ಮುಂದಿಟ್ಟನು (ರೋಮಾ. 3:25).

   ಇ. ಇಸ್ರಾಯೇಲರು ತಾವು ಕ್ಷಮಿಸಲ್ಪಡುವ ಮೊದಲು ತಮ್ಮ ಪಾಪಗಳನ್ನು (ಅಪರಾಧ) ಅರಿಕೆ ಮಾಡಬೇಕಿತ್ತು (5:5). ಇದೇ ನಿಯಮವು ಈ ಹೊತ್ತಿಗೂ ಅನ್ವಯಿಸುತ್ತದೆ: ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು (1ಯೋಹಾನ 1:9).

   ಈ. ದೇವರು ತಮಗೆ ದರ್ಶನ ನೀಡಬೇಕು ಎಂಬ ನೀರಿಕ್ಷೆಯಿಂದ ಇಸ್ರಾಯೇಲರು ತಮ್ಮ ಕಾಣಿಕೆ ಯಜ್ಞಗಳನ್ನು ಅರ್ಪಿಸಿದರು. ಹಾಗೆಯೇ ದೇವರು ದರ್ಶನ ನೀಡಿದನು: ಕರ್ತನ ಮಹಿಮೆಯು ಜನರೆಲ್ಲರಿಗೆ ಪ್ರತ್ಯಕ್ಷವಾಯಿತು (9:23). ದೇವಜನರಾದ ನಾವು ಕೂಡಾ ಇಂದು ನಿರೀಕ್ಷೆಯಿಂದಿರಬೇಕು. ಭಾನುವಾರದಂದು ಆತನನ್ನು ಸ್ತುತಿಸಿ, ಆತನು ಮಾಡಿದ ಉಪಕಾರಗಳನ್ನು ಮತ್ತು ರಕ್ಷಣೆಯನ್ನು ನೆನಸಿ ಆತನಿಗೆ ಕೃತಜ್ಞತೆಗಳನ್ನು ಸಲ್ಲಿಸಿ ಆತನಿಗೆ ಆರಾಧನೆಗೈಯಲು ಸಭೆಗೆ ಬರುವಾಗ ಇಂಥಹ ನಿರೀಕ್ಷೆಯಿಂದ ಬರುವದು ಅಗತ್ಯ. ನಾವು ತೊಂದರೆಗೆ ಒಳಗಾದಾಗ ದೇವರು ನಮ್ಮನ್ನು ಸಮಾಧಾನಪಡಿಸುತ್ತಾನೆ ಎಂದು ಎದುರು ನೋಡಬೇಕು. ದೇವರು ನಮ್ಮನ್ನು ಆಶೀರ್ವದಿಸಿ ನಮ್ಮ ಅಗತ್ಯತೆಗಳನ್ನು ಪೂರೈಸುತ್ತಾನೆಂದು ನಿರೀಕ್ಷಿಸಬೇಕು. ಕತ್ತಲೆಯಲ್ಲಿ ನಡೆಯುವ ಜನರಿಗೆ ಕ್ರಿಸ್ತನ ಬೆಳಕನ್ನು ತಲುಪಿಸುವ ಕಾರ್ಯದಲ್ಲಿ ದೇವರು ನಮ್ಮನ್ನು ಉಪಯೋಗಿಸಲಿ ಎಂದು ಬಯಸಬೇಕು.

**ಯಾಜಕಕಾಂಡ ಉತ್ತರಗಳು 2: ದೋಷಪರಿಹಾರಕ ಯಜ್ಞದ ಮಹಾದಿನ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಆರೋನನು ಹೊಗೆಗಾಗಿ ಧೂಪದ್ರವ್ಯವನ್ನು ಉಪಯೋಗಿಸಿದನು. ದೇವರ ಮಹಿಮಾ ಸನ್ನಿಧಿಯಿರುವ ಆಜ್ಞಾಶಾಸನಗಳ ಮೇಲಣ ಕೃಪಾಸನವನ್ನು ಹೊಗೆಯು ಮುಚ್ಚುವದರಿಂದ ಅವನು ಅದನ್ನು ನೋಡಲು ಆಗುವದಿಲ್ಲ (ವಚನ 16:13–14). ಒಂದು ವೇಳೆ ಅವನು ದೇವರ ಮಹಿಮೆಯನ್ನು ಕಂಡರೆ, ಅವನು ಸಾಯುವನು.

2. ವಚನ 3 ಮತ್ತು 5ರಲ್ಲಿ ತಿಳಿಸಲ್ಪಟ್ಟ ಐದು ಪಶುಗಳು ಪ್ರಾಯಶ್ಚಿತ್ತ (ದೋಷಪರಿಹಾರಕ) ಯಜ್ಞದ ದಿನದಲ್ಲಿ ಅವುಗಳ ಬಳಕೆಯ ಉದ್ದೇಶ ಏನೆಂದರೆ–

   ಅ. ಹೋರಿಯು (ವಚನ 3): ಆರೋನ ಮತ್ತು ಅವನ ಮನೆತನದವರಿಗೋಸ್ಕರ ದೋಷಪರಿಹಾರಕ ಯಜ್ಞವಾಗಿ ಉಪಯೋಗಿಸಲ್ಪಟ್ಟಿತು (ವಚನ 3, 6, 11, 14, 18, 27), ಹೋಲಿಸಿ 4:3.

   ಆ. ಮೊದಲನೆಯ ಟಗರು (ವಚನ 3): ಇದು ಆರೋನನಿಗೋಸ್ಕರ ಸರ್ವಾಂಗ ಹೋಮವಾಗಿ ಉಪಯೋಗಿಸಲ್ಪಟ್ಟಿತು (ವಚನ 3, 24), ಹೋಲಿಸಿ 1:10.

   ಇ. ಎರಡನೆಯ ಟಗರು (ವಚನ 5): ಇದು ಇಸ್ರಾಯೇಲ್ ಸಮೂಹಕ್ಕಾಗಿ ಸರ್ವಾಂಗಹೋಮವಾಗಿ ಅರ್ಪಿಸಲ್ಪಟ್ಟಿತ್ತು (ವಚನ 5, 24), ಹೋಲಿಸಿ 1:10.

   ಈ. ಹೋತುಗಳಲ್ಲಿ ಒಂದು (ವಚನ 5): ಇದು ಕರ್ತನ ಮುಂದೆ ಇಸ್ರಾಯೆಲ್ ಸಮೂಹಕ್ಕಾಗಿ ದೋಷಪರಿಹಾರಕ ಯಜ್ಞಕ್ಕಾಗಿ ಉಪಯೋಗಿಸಲ್ಪಟ್ಟಿತು (ವಚನ 5, 7, 9, 15, 18, 27), ಹೋಲಿಸಿ 4:13–14, 27–28.

   ಉ. ಹೋತುಗಳಲ್ಲಿ ಇನ್ನೊಂದು (ವಚನ 5): ಇದು ಇಸ್ರಾಯೇಲ್ ಸಮೂಹದ ದೋಷಪರಿಹಾರಕ ಕಾಡಿಗೆ ಕಳಿಸಲ್ಪಟ್ಟಿತು. ಅಂದರೆ ಹರಕೆಯ ಹೋತುವಾಗಿ ಉಪಯೋಗಿಸಲ್ಪಟ್ಟಿತು (ವಚನ 5, 7, 10, 20–22, 26).

3. ಮೊದಲನೆಯ ಹೋತು ಯಜ್ಞ ಹೋತುವಾಗಿದ್ದು ಇದು ಜನರ ಪಾಪಕ್ಕಾಗಿ ಯಜ್ಞವಾಯಿತು (ವಚನ, 5, 9). ಆಗ ನಡೆದ ಚಟುವಟಿಕೆಗಳು–

   ಅ. ಅದು ವಧಿಸಲ್ಪಟ್ಟಿತು (ವಚನ 15).

   ಆ. ಇದರ ರಕ್ತವನ್ನು ಮಂಜೂಷ ಪೆಟ್ಟಿಗೆಯ ಮುಂದೆ, ಮುಚ್ಚಳದ ಮೇಲೆ, ಹಾಗೂ ಮಹಾ ಪರಿಶುದ್ಧ ಸ್ಥಳದಲ್ಲಿ ಚಿಮುಕಿಸಲಾಯಿತು. ಇದಲ್ಲದೆ ಇದರ ರಕ್ತವನ್ನು ಸರ್ವಾಂಗಹೋಮದ ವೇದಿಯ ಕೊಂಬುಗಳಿಗೂ ಹಚ್ಚಲಾಯಿತು (ವಚನ 15, 18).

   ಇ. ಇದರ ದೇಹವನ್ನು ಸಮೂಹದ ಹೊರಗೆ ಸುಡಲಾಯಿತು (ವಚನ 27).

4. ಎರಡನೆಯದು ಹರಕೆಯ ಹೋತುವಿನ ವಿಚಾರದಲ್ಲಿ ನಡೆದ ಸಂಗತಿಗಳು–

   ಅ. ಇದನ್ನು ಕರ್ತನ ಎದುರು ನಿಲ್ಲಿಸಲಾಯಿತು (ವಚನ 10). ಇದು ಹೇಗೆ ನಡೆಯಿತು ಎಂಬುದರ ಕುರಿತು ವಿವರಣೆ ಇಲ್ಲ. ಆದರೆ ಇದನ್ನು ಜೀವಂತವಾಗಿ ಕಾಡಿಗೆ ಕಳುಹಿಸಲಾಯಿತು.

   ಆ. ಆರೋನನು ತನ್ನ ಕೈಗಳನ್ನು ಇದರ ತಲೆಯ ಮೇಲೆ ಇಟ್ಟು ಇಸ್ರಾಯೇಲರ ಎಲ್ಲಾ ಪಾಪಗಳನ್ನು ಅಪರಾಧಗಳನ್ನು ದ್ರೋಹಗಳನ್ನು ಅರಿಕೆ ಮಾಡಿ ಈ ಹೋತಿನ ತಲೆಯ ಮೇಲೆ ಹೊರಿಸಿದನು (ವಚನ 21),

   ಇ. ನಂತರ ಈ ಕೆಲಸಕ್ಕೆ ನೇಮಕವಾದವನ ಕೈಯಿಂದ ಅರಣ್ಯಕ್ಕೆ ಕಳುಹಿಸಲಾಯಿತು (ವಚನ 21).

   ಈ. ಈ ಮನುಷ್ಯನು ಇದನ್ನು ಅರಣ್ಯದ ದುರ್ಗಮವಾದ ಸ್ಥಳಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಬಿಟ್ಟುಬಂದನು. ಈ ಹೋತು ಸಾಂಕೇತಿಕವಾಗಿ ಇಸ್ರಾಯೇಲರ ಎಲ್ಲ ಪಾಪಗಳನ್ನು ಹೊತ್ತುಕೊಂಡಿತು (ವಚನ 22).

5. ದೋಷಪರಿಹಾರಕ ಯಜ್ಞದ ಮಹಾದಿನಕ್ಕೆ ಸಂಬಂಧಿಸಿದ ಸ್ಥಳ ಮತ್ತು ವ್ಯಕ್ತಿಗಳ ಪಟ್ಟಿ:

   ಅ. ಮಹಾಪವಿತ್ರ ಸ್ಥಳ (ವಚನ 16, 33)

   ಆ. ಪವಿತ್ರ ಸ್ಥಳ, ಈ ಅಧ್ಯಾಯದಲ್ಲಿ ಇದನ್ನು "ದರ್ಶನದ ಗುಡಾರ" ಎಂದು ಕರೆಯಲಾಗಿದೆ (ವಚನ 16, 33)

   ಇ. ಯಜ್ಞವೇದಿ (ಸರ್ವಾಂಗ ಹೋಮಗಳಿಗಾಗಿ) (ವಚನ 18–19, 33)

   ಈ. ಮಹಾಯಾಜಕರಾಗಿ ಆರೋನ ಮತ್ತು ಅವನ ಮನೆತನದವರು (ವಚನ 17)

ಉ. ಯಾಜಕರು (ವಚನ 33)

ಊ. ಇಡೀ ಇಸ್ರಾಯೇಲ್ ಸಮೂಹ (ವಚನ 19, 33–34)

6. ನಾನು ಗಮನಿಸಿದ ಈ ಅಧ್ಯಾಯದ ಸಾರಾಂಶದ ವಿಚಾರಗಳು ಹೀಗಿವೆ–

ಅ. ದೋಷಪರಿಹಾರಕ ಮಹಾದಿನಕ್ಕೆ ಸಂಬಂಧಿಸಿದ ವಿಧಿ ವಿಧಾನಗಳು ಶಾಶ್ವತವಾದ ಆಜ್ಞೆಗಳಾಗಿವೆ. ಆದರೆ ಯೇಸು ತನ್ನ ರಕ್ತದ ಮೂಲಕ ಹೊಸ ಒಡಂಬಡಿಕೆಯನ್ನು ತಂದಿರುವಲ್ಲಿ ಅವು ಹಳೆ ಒಡಂಬಡಿಕೆಯ ಕಾಲಕ್ಕೆ ಮಾತ್ರ ಶಾಶ್ವತವಾದವುಗಳು (ಲೂಕ 22:20).

ಆ. ದೋಷಪರಿಹಾರವು ವರ್ಷಂಪ್ರತಿ ನಡೆಯುತ್ತಿತ್ತು. ಇದು ಪ್ರತೀ ವರ್ಷವು ನಡೆಸಲ್ಪಡುತ್ತಿತ್ತು. ಅದ್ದರಿಂದ ಇದು ಶಾಶ್ವತವಾದ ಪರಿಹಾರವನ್ನು ಹೊಂದಿರಲಿಲ್ಲ. ಆದರೆ ಯೇಸು ಮಾಡಿದ ಯಜ್ಞವು "ಎಲ್ಲರಿಗೂ ಒಂದೇ ಸಾರಿ" ಮಾಡಿದ್ದಾಗಿದೆ (ರೋಮ 6:10; ಇಬ್ರಿಯ 7:27; 9:12, 26; 10:10; 1ಪೇತ್ರ 3:18).

ಇ. ದೋಷಪರಿಹಾರವು ಇಸ್ರಾಯೆಲರ ಎಲ್ಲ ಅಪರಾಧಗಳಿಗಾಗಿ ಮಾಡಲ್ಪಡುತ್ತಿತ್ತು. ಇದು ಹಳೆ ಒಡಂಬಡಿಕೆಯ ಜನರಿಗೆ ಅಂದರೆ ಇಸ್ರಾಯೇಲರಿಗೆ ಮಾತ್ರ ಸಿಮೀತವಾಗಿದೆ. ಅದರೆ ಕ್ರಿಸ್ತನು ಎಲ್ಲರಿಗಾಗಿ ತನ್ನನ್ನೇ ಕೊಟ್ಟಿದ್ದಾನೆ (1ತಿಮೋಥಿ 4:8; 2ಕೊರಿಂಥ 5:15).

ಈ. ಕರ್ತನು ತನಗೆ ಆಜ್ಞಾಪಿಸಿದ್ದೆಲ್ಲವನ್ನು ಮೋಶೆ ಮಾಡಿದನು. ಮೋಶೆಯು ಬಹಳ ಜಾಗೂರಕತೆಯಿಂದ ಹಳೆ ಒಡಂಬಡಿಕೆಯ ಅಡಿಯಲ್ಲಿ ದೇವರು ಕೊಟ್ಟ ಎಲ್ಲ ಸೂಚನೆಗಳನ್ನು ಆದೇಶಗಳನ್ನು ಪಾಲಿಸಿದನು. ಹೊಸ ಒಡಂಬಡಿಕೆಗೆ ಸಂಬಂಧಪಟ್ಟ ನಾವು ಕೂಡಾ ದೇವರ ಮಾತಿಗೆ ವಿಧೇಯರಾಗಬೇಕು. ಈ ನಿಟ್ಟಿನಲ್ಲಿ ಮೋಶೆ ನಮಗೆ ಆದರ್ಶವಾಗಿದ್ದಾನೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ದೋಷಪರಿಹಾರಕ ಮಹಾದಿನದ ವಿಧಿಯಾಚರಣೆಗಳ ಕುರಿತು ಕೆಳಗಿನ ಕ್ರಮ ಸರಿಯಾದ ಕಾಲಾನುಗತಿ ಎಂದು ತೋರುತ್ತದೆ (ಓಖಗಿ ಖಣಣಾಜಥಿ ಏಛಟಜ ಆಧಾರದ ಮೇಲೆ):

ಅ. ದೋಷಪರಿಹಾರದ ಮಹಾದಿನದಲ್ಲಿ ಮಹಾಯಾಜಕನು ಅಂಗಳದಲ್ಲಿದ್ದ ನೀರಿನ ಕೊಳಕ್ಕೆ ಬಂದು, ತನ್ನ ಸಾಮಾನ್ಯ ಬಟ್ಟೆಗಳನ್ನು ಕಳಚಿ, ಸ್ನಾನ ಮಾಡಿ ತದನಂತರ ಮಹಾಪರಿಶುದ್ಧ ಸ್ಥಳಕ್ಕೆ ಬಂದು ಅಲ್ಲಿ ವಿಶೇಷ ವಸ್ತ್ರವನ್ನು ಧರಿಸಿದನು (ವಚನ 4).

ಆ. ಅವನು ತನಗೋಸ್ಕರ ಮತ್ತು ಇತರ ಯಾಜಕರಿಗೋಸ್ಕರವಾಗಿ ದೋಷಪರಿಹಾರಕ್ಕಾಗಿ ಯೆಹೋವನ ಸನ್ನಿಧಿಯಲ್ಲಿನ ಯಜ್ಞವೇದಿಯ ಮೇಲೆ ಪಶುವನ್ನು ಯಜ್ಞವರ್ಪಿಸಲು ಹೋದನು (ವಚನ 11).

ಇ. ಆನಂತರ ಅವನು ಪಶುವಿನ ಸ್ವಲ್ಪ ರಕ್ತ, ಪರಿಮಳಧೂಪ ಮತ್ತು ಕರ್ತನ ಸನ್ನಧಿಯಲ್ಲಿನ ವೇದಿಯಿಂದ ತೆಗೆದ ಕೆಂಡಗಳೊಂದಿಗೆ ಮಹಾಪರಿಶುದ್ಧ ಸ್ಥಳವನ್ನು ಪ್ರವೇಶಿಸಿದನು (ವಚನ 12–13). ಪರಿಮಳ ಧೂಪವನ್ನು ಉರಿಯುವ ಕೆಂಡದ ಮೇಲೆ ಹಾಕಿದಾಗ ಅದರ ಹೊಗೆಯು ಕರ್ತನ ಕೃಪಾಸನವನ್ನು (ಮಂಜೂಷ ಪೆಟ್ಟಿಗೆಯನ್ನು) ಕಾಣದಂತೆ ಮುಚ್ಚಿತು.

ಈ. ಅಲ್ಲಿ ಅವನು ಪಶುವಿನ ರಕ್ತದಲ್ಲಿ ಸ್ವಲ್ಪವನ್ನು ತೆಗೆದುಕೊಂಡು ಒಡಂಬಡಿಕೆಯ ಮಂಜೂಷ ಪೆಟ್ಟಿಗೆಯ ಸುತ್ತಲೂ (ದೇವರ ಕೃಪಾಸನ) ಮತ್ತು ಆ ಸ್ಥಳದಲ್ಲಿ ಚಿಮುಕಿಸಿದನು (ವಚನ 14).

ಉ. ಆನಂತರ ಅವನು ದೇವದರ್ಶನ ಗುಡಾರದ ಬಾಗಲಿಗೆ ಬಂದು ಯಾವುದು ಯೆಹೋವನಿಗೋಸ್ಕರವಾಗಿರುವದು ಮತ್ತು ಯಾವುದು ಹಜಾಜೇಲನಿಗೋಸ್ಕರವಾಗಿರುವದು ಎಂದು ತಿಳಿಯಲು ಎರಡು ಹೋತುಗಳಿಗೆ ಚೀಟು ಹಾಕಿದನು (ವಚನ 7–8).

ಊ. ಇದಾದ ಮೇಲೆ ಮಹಾಯಾಜಕನು ಯೆಹೋವನ ಸನ್ನಿಧಿಯಲ್ಲಿನ ಯಜ್ಞವೇದಿಯ ಮೇಲೆ ಜನರ ದೋಷಪರಿಹರಕ್ಕಾಗಿ ಹೋತುವನ್ನು ಯಜ್ಞವರ್ಪಿಸಿದನು. ಮತ್ತು ಎರಡನೇ ಬಾರಿ ಮಹಾಪರಿಶುದ್ಧ ಸ್ಥಳವನ್ನು ಪ್ರವೇಶಿಸಿ ಅಲ್ಲಿ ಹೋತುವಿನ ರಕ್ತವನ್ನು ದೇವರ ಕೃಪಾಸನದ (ಪೆಟ್ಟಿಗೆಯ) ಸುತ್ತಲೂ ಚಿಮುಕಿಸಿದನು (ವಚನ 5, 9, 15–16ಚಿ).

ಋ. ಅವನು ಮಹಾಪರಿಶುದ್ಧ ಸ್ಥಳದಿಂದ ಹಿಂದೆ ಬಂದು (ಇಲ್ಲಿ ದೇವದರ್ಶನ ಗುಡಾರ ಎಂದು ಕರೆಯಲಾಗಿದೆ.) ಹೋತುವಿನ ರಕ್ತವನ್ನು ಚಿಮುಕಿಸಿದನು (ವಚನ 16ಛ).

ಎ. ಅವನು ಯೆಹೋವನ ಸನ್ನಿಧಿಯಲ್ಲಿನ ಯಜ್ಞವೇದಿಯಿಂದ ಹೊರಬಂದು (ವಚನ 18) ತನಗೋಸ್ಕರ ರಕ್ತವನ್ನೂ (ವಚನ 11) ಮತ್ತು ಜನರಿಗೋಸ್ಕರ ಹೋತುವಿನ ರಕ್ತವನ್ನೂ (ವಚನ 15) ಚಿಮುಕಿಸಿದನು.

ಏ. ನಂತರ ದೇವದರ್ಶನ ಗುಡಾರದ ಅಂಗಳದಲ್ಲಿ ಮಹಾಯಾಜಕನು ಎರಡನೆಯ ಹೋತುವಿನ ಮೇಲೆ ತನ್ನ ಕೈಗಳನ್ನಿಟ್ಟನು. ಇದು ಇಸ್ರಾಯೇಲರ ಪಾಪವು ಅದಕ್ಕೆ ವರ್ಗಾಯಿಸುವದನ್ನು ಸೂಚಿಸುತ್ತದೆ. ಆನಂತರ ಆ ಹರಕೆ ಹೋತುವನ್ನು ಕಾಡಿಗೆ ಕಳುಹಿಸಲಾಯಿತು (ವಚನ 20–22).

ಐ. ಕಾಡಿಗೆ ಹೋತುವನ್ನು ತೆಗೆದುಕೊಂಡು ಹೋದ ಮನುಷ್ಯನು ಅದನ್ನು ಅಲ್ಲಿ ಬಿಟ್ಟು ಹಿಂದೆ ಬಂದಾಗ ಜನಸಮೂಹದೊಳಗೆ ಸೇರುವ ಮೊದಲು ಅವನು ತನ್ನನ್ನು ತನ್ನ ಬಟ್ಟೆಗಳನ್ನು ಪಾಳೆಯದ ಹೊರಗೆ ತೊಳೆದುಕೊಂಡನು (ವಚನ 26).

ಒ. ಮಹಾಯಾಜಕನು ತನ್ನ ವಿಶೇಷ ವಸ್ತ್ರವನ್ನು ತೆಗೆಯಲು ಮಹಾಪರಿಶುದ್ಧ ಸ್ಥಳಕ್ಕೆ ಬಂದನು (ವಚನ 23).

ಓ. ಅವನು ಕೊಳದ ಹತ್ತಿರ ಹೋಗಿ ತನ್ನ ಸಮಾನ್ಯ ಯಾಜಕ ಬಟ್ಟೆಗಳನ್ನು ತೊಳೆದು ಅವುಗಳನ್ನು ಧರಿಸಿದನು (ವಚನ 24).

ಔ. ಅಂತಿಮವಾಗಿ ಯಜ್ಞಕ್ಕಾಗಿ ಅವನು ಯಜ್ಞವೇದಿಯ ಬಳಿಗೆ ಬಂದು (ವಚನ 3) ಸರ್ವಾಂಗಹೋಮವಾಗಿ ತನಗಾಗಿ ಒಂದು ಟಗರನ್ನು ಮತ್ತು ಜನರಿಗಾಗಿ ಇನ್ನೊಂದು ಟಗರನ್ನು (ವಚನ 5) ಯಜ್ಞವಾಗಿ ಅರ್ಪಿಸಿದನು (ವಚನ 24).

ಅಂ. ಕೊನೆಯಲ್ಲಿ ಇಡೀ ದಿನದಲ್ಲಿ ಅರ್ಪಿಸಿದ ಎಲ್ಲ ಯಜ್ಞಗಳಲ್ಲಿ ಉಪಯೋಗಿಸಲ್ಪಟ್ಟ ಪಶುಗಳ ಶರೀರಗಳನ್ನು ಪಾಳೆಯದ ಹೊರಗೆ ತೆಗೆದುಕೊಂಡು ಹೋಗಿ ಅಲ್ಲಿ ಸುಡಲಾಯಿತು. ಅದನ್ನು ಸುಟ್ಟವನು (ಈ ಸಂಸ್ಕಾರ ಮಾಡಿದವನು) ಜನಸಮೂಹವನ್ನು ಸೇರುವ ಮೊದಲು ತನ್ನನ್ನು ತನ್ನ ಬಟ್ಟೆಗಳನ್ನು ತೊಳೆದುಕೊಂಡನು (ವಚನ 27–28).

2. ಹಳೆ ಒಡಂಬಡಿಕೆಯ ಕೇವಲ ಒಂದು ಯಜ್ಞವು ಕ್ರಿಸ್ತನ ಯಜ್ಞಕ್ಕೆ ಸಮವಲ್ಲ ಅಥವಾ ಅವು ಪರಿಪೂರ್ಣವಾಗಿರಲಿಲ್ಲ. ಆದ್ದರಿಂದ ಎರಡು ಹೋತುಗಳು ಯೇಸುವನ್ನು ಸೂಚಿಸುತ್ತವೆ:

ಅ. ಯಜ್ಞವಾಗಿ ಅರ್ಪಿಸಲ್ಪಟ್ಟ ಹೋತು – ಇದರ ರಕ್ತವು ಮಹಾಪರಿಶುದ್ಧ ಸ್ಥಳದಲ್ಲಿ ಚಿಮುಕಿಸಲ್ಪಟ್ಟು ಇದರ ದೇಹವನ್ನು ದೇಹವನ್ನು ಪಾಳೆಯದ ಹೊರಗೆ ಸುಡಲಗಿದೆ (ವಚನ 15, 27) – ಆದ್ದರಿಂದ ಇದು ಪಾಪಕ್ಕಾಗಿ ಬೆಲೆಯನ್ನು ತೆತ್ತ ಕ್ರಿಸ್ತನ ಮರಣದೆಡೆಗೆ (ಕೃಪಾಧಾರದೆಡೆಗೆ) ಬೊಟ್ಟುಮಾಡುತ್ತದೆ.

- ರೋಮ 3:23–25: ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ, ಅವರು ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತ ಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವದು. ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು.

- ಇಬ್ರಿಯ 9:13–14, 21–22: ಹೋತ ಹೋರಿಗಳ ರಕ್ತವೂ ಹೊಲೆಯಾದವರ ಮೇಲೆ ಚೆಲ್ಲುವ ಕಡಸಿನ ಬೂದಿಯೂ ಶರೀರದ ಹೊಲೆಯನ್ನು ಹೋಗಲಾಡಿಸಿ ಪವಿತ್ರಮಾಡುವದಾದರೆ ನಿತ್ಯಾತ್ಮನಿಂದ ತನ್ನನ್ನು ತಾನೇ ನಿರ್ದೋಷಿಯನ್ನಾಗಿ ದೇವರಿಗೆ ಸಮರ್ಪಿಸಿಕೊಂಡ ಕ್ರಿಸ್ತನ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು ನಿರ್ಜೀವಕರ್ಮಗಳಿಂದ ಬಿಡಿಸಿ ನಾವು ಜೀವವುಳ್ಳ ದೇವರನ್ನು ಆರಾಧಿಸುವಂತೆ ನಮ್ಮ ಮನಸ್ಸನ್ನು ಶುದ್ಧೀಕರಿಸುವದಲ್ಲವೇ. ಇದಲ್ಲದೆ (ಮೋಶೆಯು) ಗುಡಾರದ ಮೇಲೆಯೂ ದೇವರ ಸೇವೆಗೆ ಬೇಕಾಗಿರುವ ಎಲ್ಲಾ ಉಪಕರಣಗಳ ಮೇಲೆಯೂ ಅದೇ ರೀತಿಯಾಗಿ ರಕ್ತವನ್ನು ಪ್ರೋಕ್ಷಿಸಿದನು. ಧರ್ಮಶಾಸ್ತ್ರದ ಪ್ರಕಾರ ಸ್ವಲ್ಪಕಡಿಮೆ ಎಲ್ಲಾ ವಸ್ತುಗಳು ರಕ್ತದಿಂದಲೇ ಶುದ್ಧೀಕರಿಸಲ್ಪಡುವವು; ರಕ್ತದಾರೆಯಿಲ್ಲದೆ ಪಾಪಪರಿಹಾರ ಉಂಟಾಗುವದಿಲ್ಲ.

- ಇಬ್ರಿಯ 13:11–13: ಮಹಾಯಾಜಕನು ದೋಷಪರಿಹಾರಕ ಯಜ್ಞದ ಪಶುಗಳ ರಕ್ತವನ್ನು ತೆಗೆದುಕೊಂಡು ಪವಿತ್ರ ಸ್ಥಾನದೊಳಗೆ ಹೋಗಲು ಆ ಪಶುಗಳ ದೇಹಗಳು ಪಾಳೆಯದ ಆಚೆ ಸುಡಲ್ಪಡುತ್ತವಲ್ಲಾ. ಅದರಂತೆ ಯೇಸು ಕೂಡ ಸ್ವಂತ ರಕ್ತದಿಂದ ತನ್ನ ಜನರನ್ನು ಪವಿತ್ರಪಡಿಸುವದಕ್ಕೋಸ್ಕರ ಪಟ್ಟಣದ ಹೊರಗೆ ಸತ್ತನು.

- 1ಯೋಹಾನ 2:2: ಆತನು ನಮ್ಮ ಪಪಗಳನ್ನು ನಿವಾರಣಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ, ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣಮಾಡುತ್ತಾನೆ.

ಆ. ಇನ್ನೊಂದು ಹೋತು – ಇಸ್ರಾಯೇಲರ ಎಲ್ಲಾ ಪಾಪಗಳನ್ನು ಇದರ ಮೇಲೆ ಹೊರಿಸಿ ಜೀವಂತವಾಗಿ ಕಾಡಿಗೆ ಕಳುಹಿಸಲ್ಪಟ್ಟ ಈ ಹೋತು (ವಚನ 21) ಶಿಲುಬೆಯಲ್ಲಿನ ಯೆಸು ಕ್ರಿಸ್ತನ ಮರಣದ ಮೂಲಕ ಪಾಪ ಮತ್ತು ಅದರ ಪ್ರಜ್ಞೆ (ಅಪರಾಧ) ತೆಗೆಯಲ್ಪಟ್ಟದ್ದರ ಕಡೆಗೆ ಬೊಟ್ಟು ಮಾಡುತ್ತದೆ.

- ಯೋಹಾನ 1:29: ಮರುದಿನ ಯೋಹಾನನು ತನ್ನ ಕಡೆಗೆ ಬರುವ ಯೇಸುವನ್ನು ನೋಡಿ–ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು.

- ಇಬ್ರಿಯ 9:27–28: ಒಂದೇ ಸಾರಿ ಸಾಯುವದು ಆ ಮೇಲೆ ನ್ಯಾಯತೀರ್ಪು ಮನುಷ್ಯರಿಗೆ ಹೇಗೆ ನೇಮಕವಾಗಿದೆಯೋ ಹಾಗೆಯೇ ಕ್ರಿಸ್ತನು ಸಹ ಬಹುಜನರ ಪಾಪಗಳನ್ನು ಹೊತ್ತುಕೊಳ್ಳುವದಕ್ಕೋಸ್ಕರ ಒಂದೇ ಸಾರಿ ಸಮರ್ಪಿತನಾದನು.

- 1ಯೋಹಾನ 3:4: ಪಾಪಮಾಡುವ ಪ್ರತಿಯೊಬ್ಬನು ಅಧರ್ಮವನ್ನು ಮಾಡುವವನಾಗಿದ್ದಾನೆ; ಪಾಪವು ಅಧರ್ಮವೇ. ಪಾಪಗಳನ್ನು ಹೋಗಲಾಡಿಸುವದಕ್ಕಾಗಿ ಕ್ರಿಸ್ತನು ಪ್ರತ್ಯಕ್ಷನಾದನೆಂಬದು ನಿಮಗೆ ಗೊತ್ತಾಗಿದೆ.

3. ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು "ಪಾಳೆಯದ ಹೊರಗೆ" (ಯಾಜಕಕಾಂಡ 16:27ರಿಂದ ತೆಗೆದದ್ದು) ಎಂಬ ಪದವಿನ್ಯಾಸವನ್ನು 13:11–13ರಲ್ಲಿ ಮೂರು ಬಾರಿ ಬಳಸಿದ್ದಾನೆ. ಈ ಮೂರು ನಿದರ್ಶನಗಳಲ್ಲಿ ಗ್ರಂಥಕರ್ತನು ಹೇಳುವಂತದ್ದು:

ಅ. ಮೊದಲ ನಿದರ್ಶನದಲ್ಲಿ ಹಳೆ ಒಡಂಬಡಿಕೆಯ ಯಜ್ಞ ವ್ಯವಸ್ಥೆಯ ಚೌಕಟ್ಟಿನಲ್ಲಿ ಜಾರಿಯಲ್ಲಿದ್ದ ದೋಷಪರಿಹಾರಕ ಮಹಾದಿನದಲ್ಲಿ ನಿಜವಾಗಿ ಆದದ್ದು ಏನು ಎಂದು ತಿಳಿಸುತ್ತಾನೆ, ವಚನ 11

ಆ. ಯೆರೂಸಲೇಮ್ ಪಟ್ಟಣದ ಹೊರಗೆ ಶಿಲೆಬೆಯಲ್ಲಿ ಯೇಸುವಿಗಾದ ಅವಮಾನಕರ ಮರಣದ ಕುರಿತು ಎರಡನೆಯ ನಿದರ್ಶನದಲ್ಲಿ ತಿಳಿಸಿದ್ದಾನೆ, ವಚನ 12

ಇ. ಇನ್ನು ಮೂರನೆಯ ನಿದರ್ಶನ ಕ್ರೈಸ್ತ ನಂಬಿಕೆ ಸಮುದಾಯಕ್ಕೆ ಸಂಬಂಧಿಸಿದ್ದು. ನಾವು "ಪಾಳೆಯದ ಹೊರಗೆ" ಯೇಸುವನ್ನು ಹಿಂಬಾಲಿಸಬೇಕು. ನಮಗಾಗಿ ಅವಮಾನವನ್ನು ತಾಳಿದ ಆತನನ್ನು ನಾವು ಪ್ರೀತಿಸಬೇಕು. ಆತನು ಅವಮಾನವನ್ನು ತಾಳಿದಂತೆ ಸುವಾರ್ತೆಗಾಗಿ ನಾವು ಅವಮಾನವನ್ನು ತಾಳಬೇಕು (ವಚನ 13).

**ಯಾಜಕಕಾಂಡ ಉತ್ತರಗಳು 3: ಯಜ್ಞ ಮತ್ತು ಒಡಂಬಡಿಕೆ**

**ಆ. ಪ್ರಶ್ನೆಗಳಿಗೆ ಉತ್ತರಗಳು**

1. ಈ ಕೆಳಗಿನವು ಯಜ್ಞದ ವಿಧಿವಿಧಾನದಲ್ಲಿರುವ 6 ಹಂತಗಳು

   ಅ. ಆರಾಧಕನು ತನ್ನ ಕಾಣಿಕೆಯನ್ನು ತರಬೇಕು (1:1; 2:1; 3:1; 4:3, 14, 23, 28; 5:14).

   ಆ. ಆರಾಧಕನು ತನ್ನ ಕೈಗಳನ್ನು ಬಲಿಪಶುವಿನ ತಲೆಯ ಮೇಲೆ ಇಡಬೇಕು. ಇದು ತನ್ನನ್ನು ಅದರೊಟ್ಟಿಗೆ ಗುರುತಿಸಿಕೊಳ್ಳುವ ಕಾರ್ಯವಾಗಿದೆ (1:4; 3:2; 4:4). ಇದು ಪಾಪವನ್ನು ವರ್ಗಾಯಿಸುವದಕ್ಕಲ್ಲ (ಕೆಲವರು ಆಲೋಚಿಸುವಂತೆ) ಬದಲು ಬಲಿಪಶುವಿನೊಂದಿಗೆ ತನ್ನನ್ನು ಗುರುತಿಸಿಕೊಳ್ಳವದಕ್ಕಾಗಿ ಮಾತ್ರ.

   ಇ. ಆರಾಧಕನು (ಇವನು ಯಾಜಕನಲ್ಲ) ಪಶುವನ್ನು ವಧಿಸಬೇಕು (1:5; 3:2; 4:4). ಯಾಜಕನು ಬಲಿಪಶುವನ್ನು ದೋಷಪರಿಹಾರಕದ ಮಹಾದಿನದಲ್ಲಿ ಮಾತ್ರ ವಧಿಸಬೇಕು. ಆ ದಿನ ಇದು ಎಲ್ಲ ಇಸ್ರಾಯೇಲರಿಗಾಗಿ ನಡೆಸಲ್ಪಡುತ್ತದೆ (ಯಾಜಕಕಾಂಡ 16).

   ಈ. ಯಾಜಕನು ಬಲಿಪಶುವಿನ ರಕ್ತವನ್ನು ಯಜ್ಞವೇದಿಯ ಮೇಲೆ ಚಿಮುಕಿಸಬೇಕು (1:5; 3:2; 4:5–7; 7:2). ಪಾಪ ಮತ್ತು ದೋಷಗಳ ಯಜ್ಞದ ಸಂದರ್ಭದಲ್ಲಿ ರಕ್ತವು ಜೀವ ಒಪ್ಪಿಸಲ್ಪಟ್ಟದ್ದಕ್ಕೆ ಗುರುತಾಗಿರುವದು.

   ಉ. ಬಲಿಪಶುವಿನ ಮಾಂಸವನ್ನು (ಯಜ್ಞದ ವಿಧಕ್ಕೆ ಆಧಾರವಾಗಿ ಒಂದು ಭಾಗ ಇಲ್ಲವೆ ಇಡೀಯಾಗಿ) ಯಜ್ಞವೇದಿಯ ಮೇಲೆ ಸುಡುವದು (1:8–9; 3:3–5; 4:8–10; 7:3–5).

   ಊ. ಹೆಚ್ಚಿನ ಸಂದರ್ಭಗಳಲ್ಲಿ ಮಾಂಸವು ಭುಜಿಸಲ್ಪಡುತ್ತಿತ್ತು (3:17). ಇದು ಯಾಜಕರು ಮತ್ತು ಕಾಣಿಕೆ ನೀಡುವವರ ಮಧ್ಯೆ ಹಂಚಿಕೆಯಾಗುತ್ತಿತ್ತು. ದೋಷಪರಿಹಾರಕ ಮತ್ತು ಪ್ರಾಯಶ್ಚಿತ್ತ ಯಜ್ಞಗಳ ಸಂದರ್ಭದಲ್ಲಿ ಯಾಜಕರು ಮಾತ್ರ ಯಜ್ಞದ ಮಾಂಸವನ್ನು ಭುಜಿಸಬೇಕಾಗಿತ್ತು.

2. ನಮ್ಮ ಬೈಬಲ್‌ಗಳಲ್ಲಿ ಭಾಷಾಂತರವಾದಂತೆ ದೋಷಪರಿಹಾರಕ ಯಜ್ಞದ ಮಹಾದಿನದ ವಿಧಿಯಾಚರಣೆಗಳು **"ನಾಶಪಡಿಸು"**, **"ಸ್ವಚ್ಛಗೊಳಿಸು"** ಎಂಬ ಪದಗಳು ಇಬ್ರಿಯ ಮೂಲ ಅರ್ಥಕ್ಕೆ ಪೂರಕವಾಗಿವೆ: ಯಾಜಕರು ಯಜ್ಞಗಳ ಮೂಲಕ ಪವಿತ್ರ ಸ್ಥಳವನ್ನು (ಗರ್ಭಗುಡಿ) ಶುದ್ಧೀಕರಿಸುತ್ತಿದ್ದರು. ಹೀಗಿರುವಲ್ಲಿ ಪಾಪದ ದೋಷದಿಂದ ಇದನ್ನು ಮುಕ್ತಿಗೊಳಿಸಿ ಶುದ್ಧೀಕರಿಸಲಾಗುತ್ತಿತ್ತು.

3. 9ನೇ ಅಧ್ಯಾಯದಲ್ಲಿ ಯಾಜಕರು ಮೊದಲ ಬಾರಿಗೆ ತಮ್ಮ ಸೇವೆಯನ್ನು ಆರಂಭಿಸಿ ಯಜ್ಞಗಳನ್ನು ಅರ್ಪಿಸಿದರು:

   ಅ. ಅವರು ಅರ್ಪಿಸಿದ ನಾಲ್ಕು ವಿಧದ ಕಾಣಿಕೆಗಳು: ದೋಷಪರಿಹಾರಕ ಯಜ್ಞ, ಸರ್ವಾಂಗಹೋಮ, ಧಾನ್ಯಸಮರ್ಪಣೆ ಮತ್ತು ಸಮಾಧಾನದ ಯಜ್ಞ.

   ಆ. ಧಾನ್ಯ ಸಮರ್ಪಣಾ ಯಜ್ಞವು ಸಾಮಾನ್ಯವಾಗಿ ಒಂದು ಪ್ರತ್ಯೇಕವಾದ ಯಜ್ಞವಾಗಿರಲಿಲ್ಲ ಇದು ಸರ್ವಾಂಗಹೋಮದೊಟ್ಟಿಗೆ ನಡೆಸಲ್ಪಡುತ್ತಿತ್ತು. ಆದ್ದರಿಂದ ಅಲ್ಲಿ ಮೂರು ಯಜ್ಞಗಳು ಮಾತ್ರ ಇದ್ದವು ಎಂದು ನಾವು ಹೇಳಬಹುದು. ಅವು: ದೋಷಪರಿಹಾರಕ ಯಜ್ಞ, ಸರ್ವಾಂಗಹೋಮ ಮತ್ತು ಸಮಾಧಾನದ ಯಜ್ಞ.

   ಇ. 9ನೇ ಅಧ್ಯಾಯದ ಈ ಮೂರು ಕಾಣಿಕೆಗಳ (ಅಥವಾ ನಾಲ್ಕು) ಕ್ರಮವನ್ನು 1:3–6:7 ಮತ್ತು 6:8–7:38ರ ಕ್ರಮದೊಂದಿಗೆ ಹೋಲಿಸಿದಾಗ ಪ್ರತಿಯೊಂದು ಭಾಗವು ಯಜ್ಞಗಳ ಭಿನ್ನವಾದ ಕ್ರಮವನ್ನು ನೀಡುತ್ತದೆ.

   **ಇದು ನಾನು ಕಂಡ ಸಾರಾಂಶ:** ಹೇಗೆ ಯಜ್ಞಗಳನ್ನು ಅರ್ಪಿಸಬೇಕು ಎಂಬುದರ ಕುರಿತು ವಿವರಣೆಯನ್ನು 9ನೇ ಅಧ್ಯಾಯದಲ್ಲಿ ಮಾತ್ರ ಕಂಡುಬರುವ ಈ ಮೂರು ಭಾಗಗಳಲ್ಲಿ ತಿಳಿಸಲಾಗಿದೆ. ಆದ್ದರಿಂದ ಹಳೆ ಒಡಂಬಡಿಕೆಯ ಯಜ್ಞವ್ಯವಸ್ಥೆಯಲ್ಲಿ ಈ ಮುಂದಿನ ಕ್ರಮದಂತೆ ಯಜ್ಞಗಳನ್ನು ಅರ್ಪಿಸುತ್ತಿದ್ದರು: ದೋಷಪರಿಹಾರಕ ಯಜ್ಞ, ಸರ್ವಾಂಗಹೋಮ (ಧಾನ್ಯ ಸಮರ್ಪಣೆಯೊಂದಿಗೆ) ಮತ್ತು ಸಮಾಧಾನದ ಯಜ್ಞ. ಆದ್ದರಿಂದ ಈ ಮೊದಲು ಕಂಡ ವಾಕ್ಯಭಾಗಗಳು ಯಜ್ಞಗಳನ್ನು ಬೇರೆ ದೃಷ್ಟಿಕೋನಗಳಿಂದ ವಿವರಿಸಿವೆಯೇ ಹೊರತು ಕಾಲಾನುಕ್ರಮದಲ್ಲಿ ಅಲ್ಲ.

**ಇ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಹಳೆ ಒಡಂಬಡಿಕೆಯ ಯಜ್ಞಗಳು ಯಾವ ವಿಧದಲ್ಲಿ (ಅರ್ಥದಲ್ಲಿ) ದೇವರು ಇಸ್ರಾಯೇಲರೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು ಸೂಚಿಸುತ್ತವೆ ಎಂದರೆ:

   ಅ. ಒಡಂಬಡಿಕೆಯು ಅಂದಿನವರೆಗೂ ಮಾನ್ಯವಾದದ್ದನ್ನು ಯಜ್ಞಗಳು ತೋರಿಸುತ್ತಿದ್ದವು.

   ಆ. ಯಜ್ಞಗಳು ಪಾಪದ ಭೀಕರತೆಯನ್ನು ತೋರಿಸುತ್ತಿದ್ದವು.

   ಇ. ಪಾಪದ ಪ್ರಾಯಶ್ಚಿತ್ತಕ್ಕಾಗಿ ಯಜ್ಞಗಳನ್ನು ತರಲಾಯಿತು.

ಈ. ಯಜ್ಞಗಳು ಬದಲಿ (ಪರ್ಯಾಯ) ವ್ಯವಸ್ಥೆಯ ಕಲ್ಪನೆಯನ್ನು ನೀಡಿದ್ದವು (ಉದಾ: ದೋಷಪರಿಹಾರಕ ಮಹಾದಿನದಲ್ಲಿ ಎರಡು ಹೋತುಗಳನ್ನು ಯಜ್ಞವರ್ಪಿಸಲಾಗುತ್ತಿತ್ತು).

2. ಪ್ರಶ್ನೆ 3 ಗೆ ಸಂಬಂಧಿಸಿ 9ನೇ ಅಧ್ಯಾಯದಲ್ಲಿ ಕಂಡುಬಂದ ಆರೋನ ಮತ್ತು ಆತನ ಮಕ್ಕಳು ಅರ್ಪಿಸಿದ ಯಜ್ಞಗಳ ಕ್ರಮವು ಈ ಹಿಂದಿನ ವಾಕ್ಯಭಾಗಗಳಲ್ಲಿ ಕಂಡಂದ್ದಕ್ಕಿಂತಲೂ ಹೆಚ್ಚು ಸರಿಯಾದದ್ದು. ಈ ಕ್ರಮವು: ದೋಷಪರಿಹಾರಕ ಯಜ್ಞ, ನಂತರ ಸರ್ವಾಂಗಹೋಮ. ಈ ಸರಿಯಾದ ಕ್ರಮದ ಯಜ್ಞಗಳ ವ್ಯವಸ್ಥೆಯ ಹಿಂದಿರುವ ದೈವಶಾಸ್ತ್ರ ಏನೆಂದರೆ:

ಅ. ಪಾಪವು ನಡೆದಾಗ ದೋಷಪರಿಹಾರಕ ಯಜ್ಞ, ದೈವಶಾಸ್ತ್ರೀಯ ಭಾಷೆಯಲ್ಲಿ ಇದನ್ನು 'ಸಮಾಧಾನಪಡಿಸು' ಎನ್ನಲಾಗಿದೆ. ಅದ್ದರಿಂದ ಮೊದಲು ಇಲ್ಲಿ ಯಜ್ಞವರ್ಪಿಸುವವನ ಪಾಪದೊಟ್ಟಿಗೆ ಇದು ವ್ಯವಹರಿಸುತ್ತದೆ.

ಆ. ಸರ್ವಾಂಗಹೋಮ, ಇಲ್ಲಿ ಯಜ್ಞವೇದಿಯಲ್ಲಿನ ಬೆಂಕಿಯು ಇಡೀ ಯಜ್ಞವನ್ನು ದಹಿಸಿದಾಗ ಕರ್ತನನ್ನು ಒಲಿಸುವ (ತಣಿಸುವ) ಪರಿಮಳವು ಉತ್ಪತ್ತಿಯಾಗುತ್ತದೆ. ಇದು ಆರಾಧಕನು (ಯಜ್ಞ ನೀಡುವವನು) ಸಂಪೂರ್ಣ ಹೃದಯದಿಂದ ದೇವರಿಗೆ ಭಕ್ತಿ ಸಲ್ಲಿಸಿದ್ದನ್ನು ಸೂಚಿಸುತ್ತದೆ.

ಇ. ಸಮಾಧಾನ ಯಜ್ಞ, ಇಲ್ಲಿ ದೇವರಿಗೆ ಸಮರ್ಪಿಸಿದ ಯಜ್ಞದಲ್ಲಿನ ಮಾಂಸದ ಒಂದು ಭಾಗ ಮತ್ತು ಧಾನ್ಯವು ಆರಾಧಕ ಮತ್ತು ಯಾಜಕರಿಗೆ ಹಂಚಲ್ಪಡುತ್ತದೆ. ಇದು ಆರಾಧಕ ಮತ್ತು ದೇವರ ಸಂಬಂಧವನ್ನು ಮರುಸ್ಥಾಪಿಸಿದ್ದನ್ನು ಸೂಚಿಸುತ್ತದೆ.

3. –

**ಯಾಜಕಕಾಂಡ ಉತ್ತರಗಳು 4: ಯಾಜಕತ್ವ (ಪುರೋಹಿತ್ಯ)**

**ಆ. ಪ್ರಶ್ನೆಗಳಿಗೆ ಉತ್ತರಗಳು**

1. ಯಾಜಕರು ಮತ್ತು ಯಜ್ಞಗಳ ಕುರಿತು ಬೈಬಲ್‌ನ ಕೆಲವು ಉಲ್ಲೇಖಗಳು

   ಅ. ಧರ್ಮೋಪದೇಶಕಾಂಡ 33:10 ಯಾಜಕತ್ವದ ಎರಡು ಕಾರ್ಯಗಳನ್ನು ತೋರಿಸುತ್ತದೆ:

   - ಯಾಜಕರು ಜನರಿಗೆ ಧರ್ಮಶಾಸ್ತ್ರವನ್ನು ಬೋಧಿಸಬೇಕಾದವರು, ವಚನ 10ಚಿ.
   - ಯಾಜಕರು ದೇವದರ್ಶನ ಗುಡಾರದಲ್ಲಿ ವಿಧಿಯಾಚರಣೆಗಳನ್ನು (ದೇವರ ಆಲಯ ಸೇವೆಗಳು) ನೆರವೇರಿಸಬೇಕಾದವರು: ಧೂಪವನ್ನು ಸುಡುವದು ಮತ್ತು ಯಜ್ಞಗಳನ್ನು ಅರ್ಪಿಸುವದು, ವಚನ 10ಛ.

   ಆ. ಯಾಜಕರು ನ್ಯಾಯಗಳನ್ನು ತೀರಿಸುವಲ್ಲಿ ನ್ಯಾಯಾಧಿಪತಿಗಳಿಗೆ ಸಹಾಯಕರಾಗಿಯೂ ಕೆಲಸ ಮಾಡಬೇಕಾಗಿತ್ತು. ಈ ಹೆಚ್ಚುವರಿ ಕಾರ್ಯವು ಧರ್ಮೋ. 21:1–5ರಲ್ಲಿ ಕಂಡುಬರುತ್ತದೆ.

   ಇ. ಕೆಳಗಿನ ಕೆಲವು ವಾಕ್ಯ ಭಾಗಗಳಲ್ಲಿ ಕಾಣುವ ಯಾಜಕರ ಕಾರ್ಯಗಳು ಹೀಗಿವೆ:

   - ಯಾಜ. 10:11–12: ಧರ್ಮಶಾಸ್ತ್ರವನ್ನು ಬೋಧಿಸುವ ಕಾರ್ಯ.
   - ಯಾಜ. 9:22: ದೇವದರ್ಶನ ಗುಡಾರದಲ್ಲಿ ವಿಧಿಯಾಚರಣೆಗಳನ್ನು/ಆಲಯದ ಸೇವೆಗಳನ್ನು ನಡೆಸುವದು (ಯಜ್ಞದ ಕಾಣಿಕೆಗಳು ಮತ್ತು ಇತರ ಧಾರ್ಮಿಕ ಆಚರಣೆಗಳು).
   - ಧರ್ಮೋ. 17:10: ನ್ಯಾಯತೀರಿಸುವ ಕಾರ್ಯ (ಜಟಿಲವಾದ ಸಂದರ್ಭಗಳಲ್ಲಿ ಧರ್ಮಶಾಸ್ತ್ರವನ್ನು ಅನ್ವಯಿಸುವದು).

   ಈ. ಒಪ್ರದಲ್ಲಿ ಗಿದ್ಯೋನನು ಒಂದು ಯಜ್ಞವೇದಿಯನ್ನು ಕಟ್ಟಿ ಅದಕ್ಕೆ ಸಮಾಧಾನದ ದೇವರು (ಯೆಹೋವ ಷಾಲೋಮ್) ಎಂದು ಹೆಸರಿಟ್ಟನು (ನ್ಯಾಯಾ. 6:24). ಇದು ಮನಸ್ಸೆ ಕುಲಕ್ಕೆ ಸೇರಿದ ಅವನ ಹಳ್ಳಿಯಾಗಿತ್ತು (ಅವನ ತಂದೆ ಅಬೀಯೆಜೆರ – ನೋಡಿ ನ್ಯಾಯಾ. 6:11).

   ಉ. ಕರ್ಮೆಲ್ ಬೆಟ್ಟದಲ್ಲಿ ಎಲಿಯನು ಹಾಳಾಗಿದ್ದ ಯಜ್ಞವೇದಿಯನ್ನು ದುರಸ್ಥಿಗೊಳಿಸಿದನು. ಈ ಯಜ್ಞವೇದಿಯು ಇಸ್ರಾಯೇಲರ ಹನ್ನೆರಡು ಕುಲಗಳ ಸಂಖ್ಯೆಗನುಗುಣವಾಗಿ ಹನ್ನೆರಡು ಕಲ್ಲುಗಳಿಂದ ಕಟ್ಟಲ್ಪಟ್ಟಿತು (1ಅರಸು 18:30–32).

   ಊ. ಇಸ್ರಾಯೇಲರಲ್ಲಿದ್ದ ಚೊಚ್ಚಲಾದವರಿಗೆ ಬದಲಾಗಿ ಲೇವಿಯರನ್ನು ತೆಗೆದುಕೋ ಎಂದು ದೇವರು ಮೋಶೆಗೆ ಹೇಳಿದನು ಎಂಬುದನ್ನು ಅರಣ್ಯಕಾಂಡ 3:45ರಲ್ಲಿ ತಿಳಿಸಲಾಗಿದೆ. ಚೊಚ್ಚಲಾದವರಂತೆ ಲೇವಿಯರು ವಿಶೇಷವಾಗಿ ದೇವರಿಗೆ ಮೀಸಲಾದವರು.

2. ಆರೋನ ಮತ್ತು ಆತನ ಮಕ್ಕಳು ಇಸ್ರಾಯೇಲರು ಸಿನಾಯ್ ಬೆಟ್ಟದಡಿಯಲ್ಲಿ ವಾಸವಾಗಿದ್ದ ವರ್ಷದಲ್ಲಿ ಯಾಜಕರಾಗಿ ದೀಕ್ಷೆ ಹೊಂದಿದರು. ಇದು ಅಲ್ಲಿ ಯಾಕೆ ನಡೆಯಿತು ಎಂಬುದಕ್ಕೆ ಎರಡು ಕಾರಣಗಳಿವೆ:

   ಅ. ಅವರಿಗೆ ದೀಕ್ಷೆ ನೀಡು ಎಂದು ದೇವರು ಮೋಶೆಗೆ ಹೇಳಿದನು (ವಿಮೋ. 28:1; 29:9; 30:30; 40:13–14). ಮೋಶೆಯು ದೇವರ ಆಜ್ಞೆಗಳಿಗೆ ವಿಧೇಯನಾಗುವವನಾಗಿದ್ದು ಆತನ ಎಲ್ಲ ಆಜ್ಞೆಗಳನ್ನು ನೆರವೇರಿಸಿದನು. ಯಾಜಕಕಾಂಡ 8ನೇ ಅಧ್ಯಾಯ ಆರೋನ ಮತ್ತು ಅವನ ಮಕ್ಕಳ ದೀಕ್ಷೆಯ ಕುರಿತು ವಿವರಣೆ ನೀಡುತ್ತದೆ.

   ಆ. ಇಸ್ರಾಯೇಲರು ಸಿನಾಯ್ ಪರ್ವತದ ಬಳಿಯಲ್ಲಿ ಬಸವನ ಬಂಗಾರದ ಮೂರ್ತಿಯನ್ನು ಮಾಡಿಕೊಂಡು ಅದನ್ನು ಆರಾಧಿಸಿ ಪಾಪಿಗಳಾದಾಗ, ದೇವರು ಇಸ್ರಾಯೇಲರಿಗೆ ದೇವದರ್ಶನ ಗುಡಾರದಲ್ಲಿನ ಯಜ್ಞದ ವ್ಯವಸ್ಥೆ ಎಂಬ ಈ ಹೊಸ ಮಾರ್ಗವನ್ನು ತೆರೆದನು. ಆದ್ದರಿಂದ ಈ ವ್ಯವಸ್ಥೆಗೆ ಯಾಜಕತ್ವದ ಅಗತ್ಯತೆ ಕಂಡುಬಂದಿತು.

**ಇ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಹಳೆ ಒಡಂಬಡಿಕೆಯ ಬರಹಗಳಲ್ಲಿರುವ ಇಸ್ರಾಯೇಲರ ಯಾಜಕತ್ವದ ಇತಿಹಾಸವು ತುಂಬಾ ಕ್ಲಿಷ್ಟವಾದದ್ದು (ಗೊಂದಲವುಳ್ಳದ್ದು) ಯಾಕೆಂದರೆ ಈ ಬರಹಗಳು ಎರಡು ವ್ಯತಿರಿಕ್ತವಾದ ಯಜ್ಞ ವ್ಯವಸ್ಥೆಯನ್ನು ನಮ್ಮ ಮುಂದಿಡುತ್ತವೆ:

   ಅ. ಅಧಿಕೃತವಾದ ಮತ್ತು ರಾಷ್ಟ್ರೀಯವಾದ ವ್ಯವಸ್ಥೆ: ಇದು ಸಿನಾಯ್ ಪರ್ವತದಡಿಯಲ್ಲಿ ಇಸ್ರಾಯೇಲರು ವಾಸವಾಗಿದ್ದಾಗ ಅವರಿಗೆ ಮೋಶೆಯ ಮುಖಾಂತರ ದೇವರು ನೀಡಿದ್ದು (ಸ್ಥಾಪಿಸಿದ್ದು). ಈ ವ್ಯವಸ್ಥೆಯಲ್ಲಿ ಆರೋನನ ವಂಶದಿಂದ ಬಂದವರು ಮಾತ್ರ ಯಾಜಕರಾಗಿ ಕಾರ್ಯನಿರ್ವಹಿಸಬೇಕಾದವರು. ಇದು ದೇವದರ್ಶನ ಗುಡಾರದ ಕೇಂದ್ರೀಕೃತವಾದ ವ್ಯವಸ್ಥೆ (ನಂತರ ಇದು ಯೆರೂಸಲೇಮ್ ದೇವಾಲಯ ಕೇಂದ್ರೀಕೃತವಾಗಿತ್ತು). ಈ ವ್ಯವಸ್ಥೆಯಲ್ಲಿ ಯಜ್ಞಗಳು ಇಡೀ ಇಸ್ರಾಯೇಲ್ ರಾಷ್ಟ್ರಕ್ಕಾಗಿ ಅರ್ಪಿಸಲ್ಪಡುತ್ತಿದ್ದವು.

ಆ. ವೈಯಕ್ತಿಕ ಮತ್ತು ವಿಕೇಂದ್ರಿಕೃತ ವ್ಯವಸ್ಥೆ: ಇದರ ಪ್ರಕಾರ ಯಾವುದೇ ಇಸ್ರಾಯೇಲನು ದೇಶದ ಯಾವುದೇ ಭಾಗದಲ್ಲಿಯೂ ದೇವರಿಗೆ ಯಜ್ಞವನ್ನು ಅರ್ಪಿಸಬಹುದು.

2. ಮೂರೂ ಯಾಜಕೀಯ ಕಾರ್ಯಗಳಿಗೆ ಬೇಕಾದ ಅರ್ಹತೆಗಳು ಅವಶ್ಯಕತೆಗಳು (ಅಧಿಕೃತ ಮತ್ತು ವೈಯಕ್ತಿಕ):

ಅ. ದೇವದರ್ಶನ ಗುಡಾರ/ಯೆರೂಸಲೇಮ್ ದೇವಾಲಯದಲ್ಲಿ ಯಜ್ಞ ಮತ್ತು ಕಾಣಿಕೆಯನ್ನು ಅರ್ಪಿಸುವಲ್ಲಿ ಯಾಜಕೀಯ ಕಾರ್ಯಗಳಿಗೆ ಸಂಬಂಧಿಸಿ:

ಅಧಿಕೃತ ಅರ್ಹತೆ: ಲೇವಿ ಕುಲದವನಾಗಿರಬೇಕು, ಆರೋನನ ಕುಟುಂಬದವನೂ ಮತ್ತು ಎಲ್ಲಾಜಾರನ ಉಪಕುಟುಂಬಕ್ಕೆ ಸೇರಿದವನೂ ಆಗಿರಬೇಕು. ದೋಷಪರಿಹಾರಕ ಮಹಾದಿನದಲ್ಲಿ ದೀಕ್ಷಿತ ಮಹಾಯಾಜಕನು ಮಾತ್ರ ಅಧಿಕೃತವಾಗಿ ಯಜ್ಞವರ್ಪಿಸಬೇಕು.

ವೈಯಕ್ತಿಕ ಅರ್ಹತೆ: ವಾಕ್ಯ ಭಾಗಗಳಲ್ಲಿ ತಿಳಿಸಲ್ಪಟ್ಟಿಲ್ಲ.

ಆ. ಜನರಿಗೆ ಧರ್ಮಶಾಸ್ತ್ರವನ್ನು ಬೋಧಿಸುವ ಯಾಜಕೀಯ ಕಾರ್ಯಕ್ಕೆ ಸಂಬಂಧಿಸಿ:

ಅಧಿಕೃತ ಅರ್ಹತೆಗಳು: ಲೇವಿ ಕುಲ ಮತ್ತು ಆರೋನನ ಕುಟುಂಬಕ್ಕೂ ಸೇರಿದವನಾಗಿರಬೇಕು.

ವೈಯಕ್ತಿಕ ಅರ್ಹತೆ: ಧರ್ಮಶಾಸ್ತ್ರವನ್ನು ಚೆನ್ನಾಗಿ ಬಲ್ಲವನಾಗಿರಬೇಕು ಮತ್ತು ಅದಕ್ಕೆ ಅನುಗುಣವಾಗಿ ನಡೆದುಕೊಳ್ಳುವವನಾಗಿರಬೇಕು.

ಇ. ಧರ್ಮಶಾಸ್ತ್ರಕ್ಕೆ ಸಂಬಂಧಿಸಿ ನ್ಯಾಯಸ್ಥಾಪಕರಿಗೆ ಸಹಾಯ ಮಾಡುವ ಯಾಜಕೀಯ ಕಾರ್ಯಕ್ಕೆ ಸಂಬಂಧಿಸಿ:

ಅಧಿಕೃತ ಅರ್ಹತೆ: ಲೇವಿ ಕುಲ ಮತ್ತು ಆರೋನನ ಕುಟುಂಬಕ್ಕೂ ಸೇರಿದವನಾಗಿರಬೇಕು.

ವೈಯಕ್ತಿಕ ಅರ್ಹತೆ: ಧರ್ಮಶಾಸ್ತ್ರವನ್ನು ಚೆನ್ನಾಗಿ ಬಲ್ಲವನಾಗಿರಬೇಕು.

3. –

**ಯಾಜಕಕಾಂಡ ಉತ್ತರಗಳು 5: ಬಾಣಂತಿಯರ ಶುದ್ಧೀಕರಣ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಮಗುವಿನ ಜನನ ಮತ್ತು ತಾಯಿಯು ದೇವರ ಗುಡಾರಕ್ಕೆ ಕಾಣಿಕೆಗಳನ್ನು ತರುವ ಸಮಯವನ್ನು ಎರಡು ಅವಧಿಗಳಾಗಿ ವಿಂಗಡಿಸಲಾಗಿದೆ:

   ಅ. ಮೊದಲು ಆಕೆ ಒಂದು ವಾರದವರೆಗೆ (ಒಂದು ವೇಳೆ ಆಕೆ ಗಂಡು ಮಗುವನ್ನು ಹೆತ್ತಿದ್ದರೆ) ಇಲ್ಲವೆ ಎರಡು ವಾರಗಳವರೆಗೆ (ಒಂದು ಹೆಣ್ಣು ಮಗುವನ್ನು ಹೆತ್ತಿದ್ದರೆ) ಧಾರ್ಮಿಕವಾಗಿ ಅಶುದ್ಧಳು.

   ಆ. ನಂತರ ಆಕೆ ತನ್ನ ಶುದ್ಧಾಚಾರದ ಅವಧಿಯನ್ನು ಪೂರೈಸಲು 33 ದಿವಸ (ಗಂಡು ಮಗುವಾಗಿದ್ದರೆ) ಇಲ್ಲವೆ 66 ದಿವಸ (ಹೆಣ್ಣು ಮಗುವಾಗಿದ್ದರೆ) ಕಾಯಬೇಕಿತ್ತು.

2. ಮಹಿಳೆಯ ಶುದ್ಧೀಕರಣದ ಅವಧಿಯು ಮುಗಿದ ನಂತರ ಆಕೆ ಎರಡು ಕಾಣಿಕೆಗಳನ್ನು ತರುವದು ಅಗತ್ಯವಾಗಿತ್ತು:

   ಅ. ಸರ್ವಾಂಗ ಹೋಮದ ಕಾಣಿಕೆ

   ಆ. ದೋಷಪರಿಹಾರಕ ಯಜ್ಞದ ಕಾಣಿಕೆ

3. ಸಾಮಾನ್ಯ ಮಹಿಳೆ ಮತ್ತು ಬಡ ಮಹಿಳೆ ಇವರಿಬ್ಬರೂ ಕಾಣಿಕೆಗಳನ್ನು ನೀಡಬೇಕಾಗಿರುವಲ್ಲಿ ಇರುವ ವ್ಯತ್ಯಾಸಗಳೆನೆಂದರೆ:

   ಅ. ಸಾಮಾನ್ಯ ಮಹಿಳೆ ಸರ್ವಾಂಗ ಹೋಮಕ್ಕಾಗಿ ಒಂದು ಕುರಿಯನ್ನು ಮತ್ತು ದೋಷಪರಿಹಾರಕ್ಕಾಗಿ ಒಂದು ಪಾರಿವಾಳವನ್ನು ತರಬೇಕಿತ್ತು.

   ಆ. ಬಡ ಮಹಿಳೆಯು ಸರ್ವಾಂಗಹೋಮ ಮತ್ತು ದೋಷಪರಿಹಾರಕ್ಕೆ ಒಂದೊಂದು ಎಂಬಂತೆ ಎರಡು ಪಾರಿವಾಳಗಳನ್ನು ತರಬೇಕಿತ್ತು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಒಬ್ಬ ಮಹಿಳೆ (ಸ್ತ್ರೀ) ಮಗುವಿಗೆ ಜನನ ನೀಡಿದಾಗ ಶುದ್ಧೀಕರಣಕ್ಕಾಗಿ ದೋಷಪರಿಹಾರಕ ಕಾಣಿಕೆಯನ್ನು (ಧಾನ್ಯ ಸಮರ್ಪಣೆ ಅಥವಾ ಸಮಾಧಾನ ಯಜ್ಞದ ಬದಲು) ನೀಡಬೇಕಾದ ಅಗತ್ಯತೆ ಅಲ್ಲಿ ಯಾಕೆ ಇತ್ತು ಎಂದರೆ:

   ಶಿಶು ಜನನದ ಸಂದರ್ಭದಲ್ಲಿ ರಕ್ತ ಸ್ರಾವದಿಂದಾಗಿ ಮಹಿಳೆಯು ಧಾರ್ಮಿಕವಾಗಿ ಅಶುದ್ಧಳಾಗುವಳು. ಈ ಮೂಲಕ ಆಕೆ ಪಾಪಿ ಎಂದು ಪರಿಗಣಿಸಲ್ಪಟ್ಟು ದೋಷಪರಿಹಾರದ ಅಗತ್ಯತೆ ಕಂಡು ಬಂತು. ಸಾಮಾನ್ಯವಾಗಿ ಇದನ್ನು ಸರ್ವಾಂಗ ಹೋಮದೊಟ್ಟಿಗೆ ನಡೆಸಲಾಗುತ್ತಿತ್ತು.

   ದೇವರು ತನಗೆ ಮಾಡಿದ ಒಳ್ಳೆತನ ಮತ್ತು ಅನುಕೂಲತೆಗಳನ್ನು ನೆನಸಿ ದೇವರಿಗೆ ಕೃತಜ್ಞತೆ ಮತ್ತು ಆರಾಧನೆಯನ್ನು ಸಲ್ಲಿಸುವದಕ್ಕಾಗಿ ಧಾನ್ಯ ಸಮರ್ಪಣಾ ಯಜ್ಞವನ್ನು ನೇಮಿಸಲಾಯಿತು. ಮತ್ತು ಸಮಾಧಾನ ಯಜ್ಞವನ್ನು ಕೂಡಾ ದೇವರಿಗೆ ಉಪಕಾರ ಸ್ತುತಿ ಮತ್ತು ಆರಾಧನೆಯನ್ನು ಸಲ್ಲಿಸುವದಕ್ಕಾಗಿ ನೇಮಿಸಲಾಗಿತ್ತು. ಇದು ಹುದುವಾದ (ಎಲ್ಲರೂ ಒಟ್ಟಿಗೆ ಸೇರಿ ಮಾಡುವ) ಊಟವನ್ನು ಒಳಗೊಂಡಿತ್ತು.

2. ಗಂಡು ಶಿಶು ಜನನದ ನಂತರದ ಶುದ್ಧೀಕರಣದ ಅವಧಿಗಿಂತ ಹೆಣ್ಣು ಶಿಶುವಿನ ಜನನದ ನಂತರದ ಶುದ್ಧೀಕರಣದ ಅವಧಿಯು ಯಾಕೆ ಎರಡು ಪಟ್ಟು ಹೆಚ್ಚಾಗಿದೆ ಎಂಬುದಕ್ಕೆ ಹಳೆ ಒಡಂಬಡಿಕೆ ವಿವರಣೆಯನ್ನು ನೀಡುವದಿಲ್ಲ. ಆದರೆ ತಾಯಿಯು ತನ್ನ ಹೆಣ್ಣು ಮಗುವಿನೊಟ್ಟಿಗೆ 5–6 ವಾರಗಳ ನಂತರ ತಡವಾಗಿ ದೇವಾಲಯಕ್ಕೆ ಹೋಗಬೇಕು ಎನ್ನುವದನ್ನು ದೇವರು ಇಸ್ರಾಯೇಲರಿಗೆ ಯಾಕೆ ಹೇಳಿದನು ಎಂಬುದಕ್ಕೆ ಕಾರಣಗಳಿವೆ. ಉದಾಹರಣೆಗೆ:

   ಅ. ಕೆಲವು ವೇದಪಂಡಿತರು ನೀಡುವ ಈ ಕಾರಣಗಳು ದೈವಶಾಸ್ತ್ರೀಯವಾಗಿ ಇಲ್ಲವೆ ಧಾರ್ಮಿಕವಾಗಿ (ವಿಧಿಯಾಚರಣೆ) ಇದ್ದಿರಬಹುದು ಎಂದು ಅಭಿಪ್ರಾಯಪಡುತ್ತಾರೆ.

   - ಈ ವ್ಯತ್ಯಾಸವು ಸೃಷ್ಟಿಕಥೆಯಲ್ಲೂ ಕಂಡುಬರುತ್ತದೆ: ಹವ್ವಳು ಆದಾಮನ ನಂತರ ಸೃಷ್ಟಿಸಲ್ಪಟ್ಟಳು.
   - ಈ ವ್ಯತ್ಯಾಸವು ಒಡಂಬಡಿಕೆಯ ಗುರುತಾದ ಸುನ್ನತಿಯಲ್ಲೂ ಕಂಡುಬರುತ್ತದೆ: ಗಂಡು ಮಕ್ಕಳಿಗೆ ಎಂಟನೆಯ ದಿನದಲ್ಲಿ ಸುನ್ನತಿಯಾದರೆ ಹೆಣ್ಣುಮಕ್ಕಳಿಗೆ ಸುನ್ನತಿಯೇ ಇರಲಿಲ್ಲ.
   - ಈ ವ್ಯತ್ಯಾಸವು "ಭವಿಷತ್ತಿನ ಅಶುದ್ದತೆಯ" ಕಲ್ಪನೆಯನ್ನು ಪ್ರತಿಫಲಿಸುತ್ತದೆ: ಹೆಣ್ಣು ಮಕ್ಕಳು ಬೆಳೆದು ಮುಟ್ಟಾಗುವ ಮಹಿಳೆಯರಾಗುವರು.

ಆ. ಇದಲ್ಲದೆ ಕೆಲವು ಸಾಂಸ್ಕೃತಿಕ ಕಾರಣಗಳೂ ಇವೆ. ಭಾರತದಲ್ಲೂ ಕೂಡಾ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಿಗಿಂತ ಕಡಿಮೆ ಮಹತ್ವ ನೀಡಿರುವದರಿಂದ ಅವರು ಕಡೆಗಣಿಸಲ್ಪಟ್ಟು ಹೆಚ್ಚಿನ ಅಪಾಯವನ್ನು ಎದುರಿಸುವವರಾಗಿದ್ದಾರೆ. ಮಗುವಿನ ತಂದೆಯಾದವನು ಗಂಡು ಮಗುವಿಗಿಂತಲೂ ಹೆಣ್ಣು ಮಗುವಿಗೆ ಕಡಿಮೆ ಕಾಳಜಿವಹಿಸುತ್ತಾನೆ. ಆದ್ದರಿಂದ ಹೆಣ್ಣು ಮಗುವಿನ ತಾಯಿಯಾದವಳು ಆ ಮಗುವಿಗೆ ಹೆಚ್ಚಿನ ರಕ್ಷಣೆಯನ್ನು ಒದಗಿಸಲು ಹೆಚ್ಚಿನ ಸಮಯವನ್ನು ಆ ಮಗುವಿನೊಟ್ಟಿಗೆ ಮನೆಯಲ್ಲಿ ಏಕಾಂತದಲ್ಲಿ ಕಳೆಯಲು ಒತ್ತಾಯಿಸಲಾಗಿದೆ.

ನಾವು ಇಲ್ಲಿ ಗಮನಿಸಬೇಕಾದ ಅಂಶ ಏನೆಂದರೆ ಈ ವ್ಯತ್ಯಾಸವು ಅಶುದ್ಧತೆಯ ಸಮಯಕ್ಕೆ (ಗಂಡು ಮಗುವಾದರೆ 1ವಾರ ಹೆಣ್ಣು ಮಗುವಾದರೆ 2ವಾರ) ಮತ್ತು ಶುದ್ದಾಚಾರದ ಸಮಯಕ್ಕೆ (33 ದಿವಸ ಗಂಡು ಮಗುವಾಗಿದ್ದರೆ ಇಲ್ಲವೆ 66 ದಿವಸ ಹೆಣ್ಣು ಮಗುವಾಗಿದ್ದರೆ) ಮಾತ್ರ ಸಂಬಂಧಿಸಿದೆ. ಆದರೆ ಜನನವಾದ ಗಂಡು ಮಗುವಿನ ಮತ್ತು ಹೆಣ್ಣು ಮಗುವಿನ ಪರವಾದ ಕಾಣಿಕೆಗಳಲ್ಲಿ ಮತ್ತು ಆಲಯದ ವಿಧಿಯಾಚರಣೆಗಳಲ್ಲಿ ಯಾವುದೇ ವ್ಯತ್ಯಾಸಗಳಿರುವದಿಲ್ಲ.

**ಯಾಜಕಕಾಂಡ ಉತ್ತರಗಳು 6: ಹಬ್ಬ ಹರಿದಿನಗಳು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಯಾಜಕಕಾಂಡ 23ನೇ ಅಧ್ಯಾಯದಲ್ಲಿ ತಿಳಿಸಲ್ಪಟ್ಟ ಹಬ್ಬಗಳು ಈ ಕೆಳಗಿನಂತಿವೆ.

   ಅ. ಸಬ್ಬತ್: ಇದು ಪ್ರತೀ ವಾರದ ಏಳನೆಯ ದಿನದಲ್ಲಿ ವಿಶ್ರಾಂತಿಯ ದಿನವಾಗಿ ಆಚರಿಸಲ್ಪಡುತ್ತಿತ್ತು. ಈ ದಿನದಲ್ಲಿ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ, ವಚನ 3.

   ಆ. ಪಸ್ಕ ಮತ್ತು ಹುಳಿಯಿಲ್ಲದ ರೊಟ್ಟಿಯ ಹಬ್ಬ: ಪಸ್ಕ ಹಬ್ಬವು ಮೊದಲನೇ ತಿಂಗಳಿನ 14ನೇ ದಿನದಲ್ಲಿ ಆಚರಿಸಲ್ಪಡುತ್ತಿತ್ತು (ಮಾರ್ಚ್–ಏಪ್ರಿಲ್). ಹುಳಿಯಿಲ್ಲದ ರೊಟ್ಟಿಯ ಹಬ್ಬವು ಇದೇ ತಿಂಗಳಿನ 15ನೆ ದಿನದಿಂದ 21ನೇ ದಿನದವರೆಗೆ ಆಚರಿಸಲ್ಪಡುತಿತ್ತು. ಅರಣ್ಯಕಾಂಡ 9:1–14 ಮತ್ತು ವಿಮೋಚನಾಕಾಂಡ 12:1–20ರಲ್ಲಿ ಯಾಕೆ ಮತ್ತು ಹೇಗೆ ಈ ಹಬ್ಬಗಳು ಆಚರಿಸಲ್ಪಡುತ್ತಿದ್ದವು ಎಂಬುದನ್ನು ಕಾಣುತ್ತೇವೆ: ಈ ಹಬ್ಬದಲ್ಲಿ ಕುರಿಯು ಕೊಯ್ಯಲ್ಪಟ್ಟು ಅದನ್ನು ಹುಳಿಯಿಲ್ಲದ ರೊಟ್ಟಿಗಳ ಮತ್ತು ಕೆಲವು ಕಹಿ ಸಸ್ಯಗಳೊಂದಿಗೆ ಎಲ್ಲರೂ ಸೇರಿ ಊಟ ಮಾಡುತ್ತಿದ್ದರು. ಇದು ಇಸ್ರಾಯೇಲರು ಐಗುಪ್ತದಿಂದ ಬಿಡುಗಡೆ ಹೊಂದಿ ಅವಸರದಿಂದ ಅಲ್ಲಿಂದ ಹೊರಟು ಬಂದಿದ್ದನ್ನು ನೆನಪಿಸುತ್ತದೆ. ಮೊದಲ ಮತ್ತು ಕೊನೆ ದಿನಗಳಲ್ಲಿ ಸರ್ವಾಂಗ ಹೋಮ, ಧಾನ್ಯ ನೈವೆದ್ಯ, ಮತ್ತು ದೋಷಪರಿಹಾರಕ ಯಜ್ಞಗಳೊಂದಿಗೆ ಪ್ರತಿ ದಿನವೂ ಅರ್ಪಿಸುವ ಎಲ್ಲ ಕಾಣಿಕೆಗಳನ್ನು ವಿಶೇಷವಾಗಿ ನಡೆಸಲಾಗುತ್ತಿತ್ತು. ದೈನಂದಿನ ಕಾರ್ಯಗಳು ಈ ದಿನಗಳಲ್ಲಿ ನಡೆಸಲ್ಪಡುತ್ತಿರಲಿಲ್ಲ.

   ಇ. ಪ್ರಥಮಫಲಗಳ ಹಬ್ಬ: ಇದು ಧಾನ್ಯಗಳ ಸುಗ್ಗಿಯ ಕಾಲದ ಆರಂಭದಲ್ಲಿ ಆಚರಿಸಲ್ಪಡುತ್ತಿತ್ತು (ಮಾರ್ಚ್–ಏಪ್ರಿಲ್). ಹೊರೆಗಳು (ಕಟ್ಟು ಅಥವಾ ಕಂತೆ) ಕರ್ತನ ಎದುರು ಇಡಲ್ಪಡುತ್ತಿದ್ದವು. ಸರ್ವಾಂಗಹೋಮ ಮತ್ತು ಧಾನ್ಯ ನೈವೇದ್ಯದ ಕಾಣಿಕೆಗಳನ್ನು (ಇವೆರಡೂ ಸೇರಿ ಪಾನ ನೈವೇದ್ಯ) ಕರ್ತನ ಮುಂದೆ ತರಲಾಗುತ್ತಿತ್ತು. ಇದು ದೇವರು ಅನುಗ್ರಹಿಸಿದ ಸುಗ್ಗಿಯ ಬಹುಮಾನವನ್ನು ನೆನಸಿ ಮಾಡುವಂತದ್ದಾಗಿತ್ತು.

   ಈ. ವಾರಗಳ ಹಬ್ಬ: ಇದನ್ನು ಪ್ರಥಮ ಫಲಗಳ ಬೆಳೆಗಳ ಹಬ್ಬದ ಸಬ್ಬತ್ತಿನ 15 ದಿನಗಳ ನಂತರ (ಮೇ–ಜೂನ್)ದಲ್ಲಿ ಆಚರಿಸಲ್ಪಡುತ್ತಿತ್ತು. ಸರ್ವಾಂಗಹೋಮ, ಧಾನ್ಯ ನೈವೇದ್ಯ (ಇದರ ಪಾನ ನೈವೇದ್ಯದೊಂದಿಗೆ) ಸಮಾಧಾನ ಯಜ್ಞಗಳು ಆಗ ಕರ್ತನಿಗೆ ಅರ್ಪಿಸಲ್ಪಡುತ್ತಿದ್ದವು.

   ಉ. ತುತೂರಿಗಳ ಹಬ್ಬ: ಇದನ್ನು ತುತೂರಿಯ ಧ್ವನಿಯೊಂದಿಗೆ ಏಳನೆ ತಿಂಗಳಿನ ಮೊದಲನೆಯ ದಿನದಲ್ಲಿ ಆಚರಿಸಲಾಗುತ್ತಿತ್ತು (ಸೆಪ್ಟಂಬರ್–ಅಕ್ಟೋಬರ್‌ನಲ್ಲಿ). ಈ ವಿಶ್ರಾಂತಿಯ ದಿನದಲ್ಲಿ ಕರ್ತನಿಗೆ ಯಜ್ಞವನ್ನು ಅರ್ಪಿಸಲಾಗುತ್ತಿತ್ತು.

   ಊ. ದೋಷಪರಿಹಾರಕ ಮಹಾದಿನ: ಉಪವಾಸ ಮತ್ತು ಯಜ್ಞಗಳೊಂದಿಗೆ ಇದನ್ನು ಏಳನೆ ತಿಂಗಳಿನ 10ನೇ ದಿನದಲ್ಲಿ (ಸೆಪ್ಟಂಬರ್–ಅಕ್ಟೋಬರನಲ್ಲಿ) ಆಚರಿಸಲಾಗುತ್ತಿತ್ತು. ಯಾಜಕರನ್ನೂ ಜನರನ್ನೂ ಅವರ ಪಾಪಗಳಿಂದ ತೊಳೆದು ಗುಡಾರವನ್ನು ಶುದ್ಧೀಕರಿಸುವ ಉದ್ಧೇಶ ಇದರಲ್ಲಿತ್ತು

   ಋ. ಗುಡಾರಗಳ ಹಬ್ಬ: ಇದು ಏಳನೆಯ ತಿಂಗಳಲ್ಲಿ 15ರಿಂದ 21ನೇ ದಿನದವರೆಗೆ (ಸೆಪ್ಟಂಬರ್–ಅಕ್ಟೋಬರ್) ಅಂದರೆ ಏಳು ದಿನಗಳ ಕಾಲ ನಡೆಯು ಸುಗ್ಗಿ ಹಬ್ಬವಾಗಿತ್ತು. ಈಜಿಪ್ತಿನಿಂದ ಕಾನಾನಿಗೆ ಹೊರಟ ಪ್ರಯಾಣದ ನೆನಪಿಗಾಗಿ ಜನರು ಈ ದಿನಗಳಲ್ಲಿ ಗುಡಾರಗಳಲ್ಲಿ ವಾಸಿಸುತ್ತಿದ್ದರು. ಇದರಲ್ಲಿ ಮೊದಲ ಮತ್ತು ಕೊನೆಯ ದಿನಗಳು ವಿಶ್ರಾಂತಿಯ ದಿನಗಳಾಗಿದ್ದವು.

2. ತಿಳಿಸಲ್ಪಟ್ಟ ಹಬ್ಬಗಳಲ್ಲಿ ಮೂರು ಹಬ್ಬಗಳು ವ್ಯವಸಾಯದ ವರ್ಷಕ್ಕೆ ಸಂಬಂಧಿಸಿವೆ:

   ಅ. ಸುಗ್ಗಿಯ ಆರಂಭದಲ್ಲಿ ಪ್ರಥಮಫಲಗಳ ಹಬ್ಬವನ್ನು ಆಚರಿಸಲಾಗುತ್ತಿತ್ತು (ಮಾರ್ಚ್–ಎಪ್ರಿಲ್).

   ಆ. ಏಳು ವಾರಗಳ ನಂತರ (ಮೇ–ಜೂನ್‌ನಲ್ಲಿ) ವಾರಗಳ ಹಬ್ಬವು ಆಚರಿಸಲ್ಪಡುತ್ತಿತ್ತು. ಇದು ಸುಗ್ಗಿ ಹಬ್ಬ. ಹೊಸ ಒಡಂಬಡಿಕೆಯಲ್ಲಿ ಇದನ್ನು ಪಂಚಾಶತ್ತಮ ದಿನ ಎನ್ನಲಾಗಿದೆ.

   ಇ. ಗುಡಾರಗಳ ಹಬ್ಬವನ್ನು ಸುಗ್ಗಿಯ ಕೊನೆಯಲ್ಲಿ (ಸೆಪ್ಟಂಬರ್–ಅಕ್ಟೋಬರ್‌ನಲ್ಲಿ) ಆಚರಿಸಲಾಗುತ್ತಿತ್ತು.

3. ಇಸ್ರಾಯೇಲರ ಕೃತಜ್ಞತಾ ಹಬ್ಬಗಳ ಆಚರಣೆಗಳಿಗೂ ಮತ್ತು ಅಂದಿನ ಕಾಲದ ಸುತ್ತಲಿನ ಅನ್ಯ ರಾಷ್ಟ್ರಗಳಲ್ಲಿದ್ದ ಸಂಪ್ರದಾಯಗಳಿಗೂ ಇರುವ ಹೋಲಿಕೆ ವ್ಯತ್ಯಾಸ:

   ಅ. ಹೋಲಿಕೆ: ಹೆಚ್ಚಿನ ಹಬ್ಬಗಳ ಆಚರಣೆ ಮತ್ತು ಅವುಗಳ ತೋರಿಕೆಗಳಲ್ಲಿ ಸಮಾನ ಹೋಲಿಕೆ ಕಾಣುತ್ತದೆ.

   ಆ. ವ್ಯತ್ಯಾಸ: ಇವುಗಳ ಅರ್ಥ ಬೇರೆ ಬೇರೆಯಾಗಿದೆ. ಇಸ್ರಾಯೆಲರು ತಮ್ಮ ಹಬ್ಬಗಳಲ್ಲಿ ವ್ಯಕ್ತಪಡಿಸುವ ಕೃತಜ್ಞತೆಯು ದೇವರ ಒಳ್ಳೆತನಕ್ಕೆ ಪ್ರತಿಯಾಗಿತ್ತು: ಉದಾಹರಣೆಗೆ ದೇವರು ಈಜಿಪ್ತಿನಿಂದ ಜನರನ್ನು ಬಿಡುಗಡೆಗೊಳಿಸಿ ವಾಗ್ದತ್ತ ದೇಶಕ್ಕೆ ನಡಿಸಿದನು. ಆದರೆ ಅನ್ಯಜನಗಳಲ್ಲಿದ್ದ ಹಬ್ಬಗಳು ತಮ್ಮ ಭೂಮಿಯನ್ನು ಹೆಚ್ಚು ಫಲತ್ವಗೊಳಿಸಲು ದೇವರನ್ನು ಒಲಿಸಿಕೊಳ್ಳುವ ಉದ್ಧೇಶ ಹೊಂದಿದ್ದವು.

4. ದೋಷಪರಿಹಾರಕ ಮಹಾದಿನವು ಇಡೀ ಇಸ್ರಾಯೇಲ್ ರಾಷ್ಟ್ರದ ದೋಷವನ್ನು ನಿವಾರಿಸುವದಕ್ಕೊಸ್ಕರ ಆಚರಿಸಲ್ಪಡುತ್ತಿತ್ತು.

5. ವಾರಗಳ ಹಬ್ಬವು ಬಡವರಿಗೆ ಮತ್ತು ಪರದೇಶಸ್ಥರಿಗೆ ವಿಶೇಷ ರಿಯಾಯಿತಿ (ಕಾಳಜಿ) ಯನ್ನು ಕಲಿಸಿಕೊಟ್ಟಿತ್ತು. ಇಸ್ರಾಯೇಲರು ಸುಗ್ಗಿಯಲ್ಲಿ ಕಟಾವು ಮಾಡುವಾಗ ಎಲ್ಲವನ್ನು ಮಾಡಬಾರದು ಎಂದು ತಿಳಿಸಲಾಗಿತ್ತು. ಅವರು ಹೊಲಗಳ ಬದಿಗಳಲ್ಲಿ ಇರುವ ಬೆಳೆಯನ್ನು ತೆಗೆಯಬಾರದು ಮತ್ತು ಎರಡನೆಯ ಬಾರಿಯ ಬೆಳೆಯನ್ನು ಕೊಯ್ಯಬಾರದು. ಆದ್ದರಿಂದ ಅಲ್ಲಿ ಬಡವರಿಗೂ ಮತ್ತು ಪರದೇಶಸ್ಥರಿಗೂ ಉಳಿದ ಕೆಲವು ಧಾನ್ಯಗಳು ದಕ್ಕುತ್ತಿದ್ದವು (ವಚನ 22).

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಹಳೆ ಒಡಂಬಡಿಕೆಯ ಕಾಲದಲ್ಲಿ ಇಸ್ರಾಯೇಲರಿಗೆ ಹಬ್ಬಗಳ ಆಚರಣೆ ಯಾಕೆ ತುಂಬಾ ಪ್ರಾಮುಖ್ಯವಾಗಿದ್ದವು ಎಂಬುದಕ್ಕೆ ಕನಿಷ್ಠ ಮೂರು ಕಾರಣಗಳನ್ನಾದರೂ ನೀಡಬಹುದು:

   ಅ. ಇತಿಹಾಸದಲ್ಲಿ ದೇವರು ತಮಗೆ ಏನು ಮಾಡಿದ್ದಾನೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಇಸ್ರಾಯೇಲರಿಗೆ ಅಗತ್ಯವಾಗಿತ್ತು. ಅವರು ಬಹುಕಾಲದವರೆಗೂ ಒಂದು ರಾಷ್ಟ್ರವನ್ನೂ ಮತ್ತು ಮಹತ್ತರ ಘಟನೆಗಳಿಂದ ಕೂಡಿದ ಇತಿಹಾಸವನ್ನು ಹೊಂದಿದ್ದರು. ಈ ಹಿಂದಿನ ವಿಚಾರಗಳು ಅವರಲ್ಲಿ ಆಸಕ್ತಿಯನ್ನು ಹುಟ್ಟಿಸಿದ್ದವು. ಆದ್ದರಿಂದ ನಡೆದುಹೋದ ಘಟನೆಗಳನ್ನು ನೆನಪಿಸುವದು ಹಬ್ಬಗಳ ಆಚರಣೆಗಳ ಒಂದು ಬಹು ಮುಖ್ಯ ಉದ್ದೇಶವಾಗಿತ್ತು.

   ಆ. ಇಸ್ರಾಯೆಲರು ದೇವರಾದುಕೊಂಡ ಜನಾಂಗ. ದೇವರು ಅವರೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದನು. ಅವರಿಗೆ ಆತನು ವಿಶೇಷವಾದ ಮಾರ್ಗಗಳನ್ನು ತೆರೆದಿದ್ದನು. ಈಜಿಪ್ಟಿನ ಬಂಧನದಿಂದ ಅವರನ್ನು ಬಿಡಿಸಿದ್ದನು. ಸಿನಾಯ್ ಪರ್ವತದಲ್ಲಿ ಅವರಿಗೆ ತನ್ನ ಧರ್ಮಶಾಸ್ತ್ರವನ್ನು ಅನುಗ್ರಹಿಸಿದ್ದನು. ತಾನು ಅಬ್ರಹಾಮನಿಗೆ ಮಾಡಿದ ವಾಗ್ದಾನದ ನಿಮಿತ್ಯ ಅವರನ್ನು ವಾಗ್ದತ್ತ ದೇಶಕ್ಕೆ ಕರೆತಂದಿದ್ದನು. ಅವರ ಭೂಮಿಯನ್ನು ಫಲವತ್ತತೆಗೊಳಿಸಿದ್ದನು. ಅದ್ದರಿಂದ ಇಸ್ರಾಯೇಲರು ಹಬ್ಬಗಳನ್ನು ಆಚರಣೆಗಳನ್ನು ಮಾಡುವಾಗ ದೇವರು ತಮಗೆ ಮಾಡಿದ ಈ ಎಲ್ಲವುಗಳನ್ನು ನೆನೆದು ಆತನಿಗೆ ಈ ಮೂಲಕ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದರು. ಮಾತ್ರವಲ್ಲ ಇವುಗಳನ್ನು ಆಚರಿಸುವಂತದ್ದು ಅವರಿಗೆ ಒಡಂಬಡಿಕೆಯನ್ನು ಕಾಪಾಡಿಕೊಳ್ಳುವದಾಗಿತ್ತು.

   ಇ. ಈ ಹೆಚ್ಚಿನ ಹಬ್ಬಗಳು ಹೊಸ ಒಡಂಬಡಿಕೆಯ ಕಡೆಗೆ ಮತ್ತು ಅಲ್ಲಿ ಮಾನವರ ರಕ್ಷಣೆಗಾಗಿ ದೇವರು ಕ್ರಿಸ್ತನ ಮೂಲಕ ಮಾಡಿರುವ ಯೋಜನೆಯ ಕಡೆಗೆ ಬೊಟ್ಟು ಮಾಡುತ್ತವೆ. ಯಾವಾಗ ದೇವರು ಇಸ್ರಾಯೆಲರಿಗೆ ಈ ಕರ್ತನ ಹಬ್ಬಗಳನ್ನು ನೇಮಿಸಿದನೋ ಆಗಲೇ ಆತನು ಮುಂಬರುವ ಕ್ರಿಸ್ತನಿಗೆ ಭೂಮಿಯನ್ನು ಸಿದ್ದಗೊಳಿಸಿದನು. ಪ್ರತೀ ವಾರವೂ ಆಚರಿಸಲ್ಪಡುತಿದ್ದ ಸಬ್ಬತ್ ಕೂಡಾ ದೇವರು ತನ್ನ ಜನರಿಗೆ ಮಾಡಿದ ಭವಿಷತ್ತಿನ ವಾಗ್ದಾನವಾದ "ಸಬ್ಬತ್ತಿನ ವಿಶ್ರಾಂತಿ" ಯನ್ನು ಸೂಚಿಸುತ್ತಿತ್ತು (ಯೆಶಾಯ 11:10; 60:19–20; ಇಬ್ರಿಯ 4:9; ಪ್ರಕಟಣೆ 7:14–17; 14:13).

2. ಈ ಕೆಳಗಿನದು ನಾಲ್ಕು ವಾರ್ಷಿಕ ಹಬ್ಬಗಳ ಒಂದು ಸರಳ ಕೊಷ್ಟಕ (ನಕಾಶೆ) (ಮೂರು ಕೃತಜ್ಞತಾ ಹಬ್ಬಗಳು ಮತ್ತು ಒಂದು ದೋಷಪರಿಹಾರಕ ದಿನ).

| **ಹೆಸರು** | **ಆಚರಣೆ** | **ವಿಧ** | **ಕಾಲಾಂತರದಲ್ಲಿ ಸಂಬಂಧ** |
|---|---|---|---|
| ಪಸ್ಕ ಹಬ್ಬ | ಬಿಡುಗಡೆಯನ್ನು ಸ್ಮರಿಸುವದು | ಕೃತಜ್ಞತೆ | --- |
| ಪ್ರಥಮಫಲ ಅಥವಾ (ವಾರಗಳ ಹಬ್ಬ) | ಸುಗ್ಗಿಯ ಆರಂಭ | ಕೃತಜ್ಞತೆ | ಸಿನಾಯ್ ಬಳಿಯಲ್ಲಿ ಧರ್ಮಶಾಸ್ತ್ರವನ್ನು ಕೊಟ್ಟದ್ದು |
| ಗುಡಾರಗಳ ಅಥವಾ (ಕೂಡಿಬರುವ) | ಕೃಷಿ ವರ್ಷದ ಅಂತ್ಯ | ಕೃತಜ್ಞತೆ | ಅರಣ್ಯದ ಅದ್ಭುತಗಳು |
| ದೋಷಪರಿಹಾರಕ ದಿನ | ಅಪರಾಧವನ್ನು ಕೂಡಿಸುವದು | ದೋಷಪರಿಹಾರ | --- |

3. –

## ಯಾಜಕಕಾಂಡ ಉತ್ತರಗಳು 7: ಸಬ್ಬತ್ ವರ್ಷ ಮತ್ತು ಜೂಬಿಲಿ ಸಂವತ್ಸರ

### ಈ. ಪ್ರಶ್ನೆಗಳಿಗೆ ಉತ್ತರಗಳು

1. "ಬೆಳೆಯನ್ನು ಕೊಯ್ಯುವದಕ್ಕೆ" ಅಥವಾ "ದ್ರಾಕ್ಷೆಯನ್ನು ಕೊಯ್ಯುವದಕ್ಕೆ" ಅವಕಾಶವಿಲ್ಲದ ಸಬ್ಬತ್ ವರ್ಷದಲ್ಲಿ ಇಸ್ರಾಯೇಲರು ತುಂಬಾ ಸಮಸ್ಯೆಗೆ ಒಳಗಾಗುತ್ತಿದ್ದರು (ಯಾಜಕ. 25:5), ಯಾಕೆಂದರೆ ಆ ವರ್ಷದಲ್ಲಿ ಭೂಮಿ ಏನನ್ನು ಬೆಳೆಯುತ್ತದೋ ಅದನ್ನು ಮಾತ್ರ ಅವರು ಊಟ ಮಾಡಲಿಕ್ಕೆ ಅವಕಾಶ ಹೊಂದಿದ್ದರು (ವ. 7).

2. ಜೂಬಿಲಿ ವರ್ಷದಲ್ಲಿ ಈ ಕೆಳಗಿನ ಅಂಶಗಳು ಮಹತ್ವವುಳ್ಳವುಗಳಾಗಿ ಕಂಡುಬರುತ್ತವೆ (ಯಾಜಕ. 25:8–55):

   ಅ. ಪ್ರತಿ ಇಸ್ರಾಯೇಲನು ತನ್ನ ಸ್ವಸ್ಥಳಕ್ಕೆ ಹಿಂದಿರುಗಬೇಕು (ವ. 11, 13).

   ಆ. ಭೂಮಿಗೆ ವಿಶ್ರಾಂತಿ ನೀಡಬೇಕು (ಸಬ್ಬತ್ ವರ್ಷದಲ್ಲಿ ಇದ್ದಂತೆ): ಆಗ ಬಿತ್ತುವದನ್ನು ಕೊಯ್ಯುವದನ್ನು ಮಾಡಬಾರದು (ವ. 11).

   ಇ. ಮಾರಲ್ಪಟ್ಟ ಭೂಮಿಯು ಮೂಲ ಮಾಲಿಕನಿಗೆ ತಿರುಗಿ ಮಾರಲ್ಪಡಬೇಕು (ವ. 14–17). ಯಾವುದೇ ಭೂಮಿಯನ್ನು ಶಾಶ್ವತವಾಗಿ ಮಾರಬಾರದು (ವ.23–24). ಒಂದು ವೇಳೆ ಮೂಲ ಮಾಲಿಕನು ಭೂಮಿಯನ್ನು ಹಿಂದಕ್ಕೆ ಕೊಂಡುಕೊಳ್ಳುವದಕ್ಕೆ ಸಾಕಷ್ಟು ಹಣವಿಲ್ಲದೆ ಹೋದರೂ ಆ ಭೂಮಿಯನ್ನು ಅವನಿಗೆ ಹಿಂದಿರುಗಿಸಬೇಕು (ವ. 18). ಈ ನಿಯಮಗಳು ಹಳ್ಳಿಯ ಆಸ್ತಿಗಳಿಗೆ ಮಾತ್ರ ಸಂಬಂಧಿಸಿವೆ ಹೊರತು ಪೌಳಿ ಗೋಡೆಯುಳ್ಳ ಪಟ್ಟಣಗಳಿಗೆ ಅಲ್ಲ (ವ. 29–31). ಆದರೆ ಲೇವಿಯರು (ಅವರು ಪಟ್ಟಣದಲ್ಲಿ ಮಾತ್ರ ವಾಸಿಸಬೇಕಾದವರು ಮತ್ತು ಯಾವುದೇ ಬೇಸಾಯದ ಭೂಮಿಯನ್ನು ಹೊಂದದವರು) ಆಸ್ತಿಯನ್ನು ತಿರುಗಿ ಹೊಂದಬೇಕು (ವ. 32–33). ಹೀಗಿದ್ದಾಗ್ಯೂ ಲೇವಿಯರು ಪಟ್ಟಣದ ಹತ್ತಿರವಿರುವ ತಮ್ಮ ಹುಲ್ಲುಗಾವಲು ಪ್ರದೇಶವನ್ನು ಮಾರಲು ಅವಕಾಶವಿರಲಿಲ್ಲ (ವ. 34).

   ಈ. ಬಡತನದಿಂದ ಒಬ್ಬನು ತನ್ನನ್ನು ಮಾರಿಕೊಂಡಿದ್ದರೆ ಮತ್ತು ದಾಸತ್ವದಲ್ಲಿ ಇದ್ದರೆ ಜೂಬಿಲಿಯ ಹಿಂದಿನ ವರ್ಷದಿಂದಲೇ ಅವನನ್ನು ಬಿಡುಗಡೆಗೊಳಿಸಬೇಕು (ವ. 39–43). ಒಂದು ವೇಳೆ ಅಲ್ಲಿ ವಾಸಿಸುತ್ತಿರುವ ಪರದೇಶದವರಿಗೆ ಬಡ ಇಸ್ರಾಯೇಲರು ತಮ್ಮನ್ನು ದಾಸರನ್ನಾಗಿ ಮಾರಿಕೊಂಡಿದ್ದರೂ ಜೂಬಿಲಿ ವರ್ಷದಲ್ಲಿ ಬಿಡುಗಡೆಗೊಳಿಸಬೇಕು (ವ. 47–55).

### ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು

1. ಸಬ್ಬತ್ ವರ್ಷದ ಪರಿಚ್ಛೇಧದಲ್ಲಿ (ಯಾಜಕ 25:1–7) ವಚನ 6, 7 ಮತ್ತು ವಚನ 5ರ ಮಧ್ಯೆ ಪರಸ್ಪರ ವಿರೋಧಬಾಸವಿದ್ದಂತೆ ಕಾಣುತ್ತದೆ:

   ಅ. ಇದು ಸಹಜವಾದ ಇಲ್ಲವೆ ಸ್ಪಷ್ಟವಾದ ವಿರೋಧಬಾಸ: ಜೂಬಿಲಿ ವರ್ಷದಲ್ಲಿ ಭೂಮಿ ಏನನ್ನು ಬೆಳೆಯುತ್ತದೋ ಅದನ್ನು ಮಾತ್ರ ಇಸ್ರಾಯೇಲರು ಊಟ ಮಾಡಲಿಕ್ಕೆ ಅವಕಾಶ ಹೊಂದಿದ್ದರು ಎಂದು ವಚನ 7 ನಮಗೆ ತಿಳಿಸುತ್ತದೆ. ಆದರೆ ಇದು ವಚನ 5ರಲ್ಲಿ ಕಾಣುವ ತನ್ನಷ್ಟಕ್ಕೆ ಬೆಳೆದದ್ದನ್ನು ಕೊಯ್ಯಬಾರದು ಅಥವಾ ಕಾರ್ಯದ ದ್ರಾಕ್ಷೆಯನ್ನು ಕೊಯ್ಯಬಾರದು ಎಂಬ ಆಜ್ಞೆಗೆ ವಿರುದ್ಧವಾಗಿ ಕಾಣುತ್ತದೆ.

   ಆ. ಈ ವಚನಗಳು ಈ ರೀತಿಯಲ್ಲಿ ಹೊಂದಾಣಿಕೆಯನ್ನು ಹೊಂದಿವೆ: ವಚನ 5ರಲ್ಲಿ ವರ್ಷಂಪ್ರತಿ ನಡೆಸುವ ಸುಗ್ಗಿಯನ್ನು ನಿಷೇಧಿಸಲಾಗಿದೆ. ಅಂದರೆ ಆ ವರ್ಷ ಸಾಮಾನ್ಯ ಸುಗ್ಗಿಯ ಕೆಲಸವು ಬೇಡ ಅಥವಾ ಆಳುಗಳು ದ್ರಾಕ್ಷೆಯನ್ನು ಕೂಡಿಸುವ ಮತ್ತು ಸಂಗ್ರಹಿಸುವ ಕಾಯಕದಲ್ಲಿ ತೊಡಗಬಾರದು. ಆದರೆ 6–7 ವಚನಗಳು ನೇರವಾಗಿ ಹೋಲಗಳಿಂದ ಕೂಡಿಸುವ ಮತ್ತು ಅದನ್ನು ತಿನ್ನುವ ಕುರಿತು ಮಾತನಾಡುತ್ತವೆ. ಇದು ಅನುಮತಿಯುಳ್ಳದ್ದು. ಇದು ಮುಂದಿನ ವಚನ 12ರಲ್ಲಿ ಸರಿಯಾಗಿ ತಿಳಿಸಲ್ಪಟ್ಟಿದೆ. ಅದು ಏನೆಂದರೆ– "ಹೊಲಗಳಿಂದ ನೇರವಾಗಿ ತೆಗೆದುಕೊಂಡದ್ದನ್ನು ಮಾತ್ರ ತಿನ್ನತಕ್ಕದ್ದು" ಎಂಬದೆ.

2. ಜೂಬಿಲಿ ವರ್ಷದ ಮುಖ್ಯ ಉದ್ಧೇಶ ಬಡವರಿಗೆ ಸಹಾಯ ಮಾಡುವದು ಮತ್ತು ಭೂಮಿಯನ್ನು ಸ್ಥಿರಗೊಳಿಸುವದು. ಈ ಉದ್ಧೇಶವು ಸಾಲವನ್ನು ಬಿಟ್ಟು ಬಿಡುವ, ಭೂಮಿಯನ್ನು ಮೂಲ ಮಾಲಿಕರಿಗೆ ಹಿಂದಿರುಗಿಸುವ ಮತ್ತು ಬಂಧನದಲ್ಲಿರುವ ಆಳುಗಳನ್ನು ಬಿಡುಗಡೆಗೊಳಿಸುವ ಮೂಲಕ ನೆರವೇರುತ್ತಿತ್ತು.

3. ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಇಂದು ಸಬ್ಬತ್ ವರ್ಷ ಮತ್ತು ಜೂಬಿಲಿ ಸಂವತ್ಸರದಿಂದ (ಯಾಜಕ. 25) ಕನಿಷ್ಟಪಕ್ಷ 6 ಅಂಶಗಳನ್ನಾದರೂ ಕಲಿಯಬಹುದು:

   ಅ. ಸಾಮಾನ್ಯವಾಗಿ ಸಬ್ಬತ್ ಎಂದರೆ ವಿಶ್ರಾಂತಿ (ಸಾಮಾನ್ಯವಾಗಿ ಸಬ್ಬತ್ ವಿಶ್ರಾಂತಿಯ ಮಹತ್ವವನ್ನು ತಿಳಿಸುತ್ತದೆ): ಸೃಷ್ಟಿಯ 7ನೇ ದಿನದಲ್ಲಿ ದೇವರು ಕೂಡಾ ವಿಶ್ರಾಂತಿ ತೆಗೆದುಕೊಂಡನು. ಹೆಚ್ಚು ಕೆಲಸ ಮಾಡುವಲ್ಲಿ ವಿಶ್ರಾಂತಿಯನ್ನು ಪಡೆಯಲು ಅತನು ಶ್ರೇಷ್ಠ ಉದಾಹರಣೆಯನ್ನು ನಮಗೆ ನೀಡಿದ್ದಾನೆ. ಸಬ್ಬತ್ ವರ್ಷ ಮತ್ತು ಜೂಬಿಲಿ ಸಂವತ್ಸರ ಈ ವಿಶ್ರಾಂತಿಯ ಮಹತ್ವವನ್ನು ಒತ್ತಿ ಹೇಳುತ್ತವೆ.

ಆ. ದೇವರ ಸೃಷ್ಟಿಯ ಬಗ್ಗೆ ಕಾಳಜಿ ವಹಿಸುವ ಮಹತ್ವ: ಸತತವಾಗಿ ಬಿತ್ತುವ ಮತ್ತು ಕೊಯ್ಯುವ ಮೂಲಕ ಇಸ್ರಾಯೇಲರು ಭೂಮಿಯನ್ನು ಶಕ್ತಿಹೀನವಾಗಿಸುತ್ತಾರೆ ಎಂಬುದನ್ನು ದೇವರು ತಿಳಿದಿದ್ದನು. ಮಣ್ಣಿನ ಫಲವತ್ತತೆಯನ್ನು ಕಪಾಡುವ ವಿಧಾನವಾದ ಸರದಿ ಮೇರೆಗೆ ವಿವಿಧ ಬೆಳೆಗಳನ್ನು ಬೆಳೆಯುವ ವಿಧಿ ವಿಧಾನಗಳನ್ನು ಆ ದಿನಗಳಲ್ಲಿ ಜನರು ತಿಳಿದಿರಲಿಲ್ಲ. ಆಧುನಿಕ ಗೊಬ್ಬರಗಳನ್ನು ಅವರು ಹೊಂದಿರಲಿಲ್ಲ. ಆದ್ದರಿಂದ ಸಬ್ಬತ್ ವರ್ಷವನ್ನು ಆಚರಿಸುವ ಮೂಲಕ ಇಸ್ರಾಯೇಲರು ಭೂಮಿಯ ಬಗ್ಗೆ ಕಾಳಜಿ ವಹಿಸಬೇಕೆಂದು ದೇವರು ಈ ಮೂಲಕ ಅವರನ್ನು ಒತ್ತಾಯಿಸಿದನು. ಇದು ದೇವರ ಸೃಷ್ಟಿಯಲ್ಲಿನ ನಂಬಿಗಸ್ಥ ಮನೆವಾರ್ತೆತನವನ್ನು ನಮಗೆ ಬೋಧಿಸುತ್ತದೆ. ನಮ್ಮ ಭೂಮಿ, ನಮ್ಮ ಅರಣ್ಯ, ನಮ್ಮ ನದಿಗಳು ಮತ್ತು ನಮ್ಮ ಪರಿಸರವನ್ನು ಇಂದು ನಾವು ಕಾಪಾಡಲೇಬೇಕು.

ಇ. ನಮ್ಮ ದೈನಂದಿನ ಅಗತ್ಯತೆಗಳಿಗಾಗಿ ನಾವು ದೇವರಿಗೆ ನಂಬಿಗಸ್ಥರಾಗಿರಬೇಕು: ಇಸ್ರಾಯೇಲರು ಇಡೀ ವರ್ಷ ಕೃಷಿಯ ಚಟುವಟಿಕೆಗಳನ್ನು ನಿಲ್ಲಿಸಿದಾಗ್ಯೂ ಅವರ ಅಗತ್ಯತೆಗಳನ್ನು ಪೂರೈಸುವನೆಂದು ದೇವರು ಅವರಿಗೆ ವಾಗ್ದಾನ ಮಾಡಿದ್ದನು: *"ನನ್ನ ಆಜ್ಞಾವಿಧಿಗಳನ್ನು ನೀವು ಅನುಸರಿಸಿ ನಡೆಯಬೇಕು. ಆಗ ನೀವು ಆ ದೇಶದಲ್ಲಿ ನಿರ್ಭಯವಾಗಿ ವಾಸವಾಗಿರುವಿರಿ; ನಿಮ್ಮ ಭೂಮಿಯು ಫಲವತ್ತಾಗುವದು, ನೀವು ಸಮೃದ್ಧಿಯಾಗಿ ಊಟಮಾಡುವಿರಿ, ಮತ್ತು ಆ ದೇಶದಲ್ಲಿ ನೀವು ನಿರ್ಭಯವಾಗಿ ವಾಸಮಾಡುವಿರಿ. ಏಳನೆಯ ವರುಷದಲ್ಲಿ ಬೀಜವನ್ನು ಬಿತ್ತುವದಕ್ಕಾಗಲಿ ಬೆಳೆದದ್ದನ್ನು ಕೂಡಿಸಿಟ್ಟುಕೊಳ್ಳುವದಕ್ಕಾಗಲಿ ಅಪ್ಪಣೆಯಿಲ್ಲವಲ್ಲಾ; ಆ ವರುಷದಲ್ಲಿ ಏನು ತಿನ್ನಬೇಕೆಂದು ವಿಚಾರಿಸುತ್ತೀರೋ? ಕೇಳಿರಿ, ಆರನೆಯ ವರುಷದ ಬೆಳೆ ನನ್ನ ಪೂರ್ಣಾನುಗ್ರಹದಿಂದ ಮೂರು ವರುಷಗಳ ಬೆಳೆಯಷ್ಟಾಗುವದು. ನೀವು ಎಂಟನೆಯ ವರುಷದಲ್ಲಿ ಬೀಜವನ್ನು ಬಿತ್ತಿ ಅದರ ಬೆಳೆ ದೊರೆಯುವ ತನಕ ಅಂದರೆ ಒಂಬತ್ತನೆಯ ವರುಷದ ವರೆಗೆ ಹಿಂದಿನ ಬೆಳೆಯಿಂದಲೇ ಜೀವನಮಾಡುವಿರಿ"* (ಯಾಜಕ. 25:18–22). ನಾವು ನಮ್ಮ ಜೀವನವನ್ನು ದೇವರಿಗೆ ಮತ್ತು ಆತನ ರಾಜ್ಯದ ನಿಯಮಗಳಿಗೆ ಒಪ್ಪಿಸಿಕೊಟ್ಟಂತೆ ಆತನು ನಮ್ಮ ದೈನಂದಿನ ಅಗತ್ಯತೆಗಳನ್ನು ಖಂಡಿತವಗಿಯೂ ಪೂರೈಸುವನು.

ಈ. ಸ್ಥಿರ ಮತ್ತು ಸಮಾನವಾದ ಸಮಾಜದ ಬಗ್ಗೆ ದೇವರು ಕಾಳಜಿಯುಳ್ಳವನಾಗಿದ್ದಾನೆ: ಜೂಬಿಲಿ ಸಂವತ್ಸರವು ಕಳೆದ 49 ವರ್ಷಗಳಲ್ಲಿ ಆದ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳನ್ನು ಸರಿದೂಗಿಸಲು ಇರುವ ದೇವರ ವಿಧಾನವಾಗಿದೆ. ಸಮಾನತೆಯುಳ್ಳ ಸಮಾಜವು ದೇಶದ ಜನರಿಗೆ ಆಶೀರ್ವಾದದಾಯಕವಾದದ್ದು ಎಂದು ದೇವರಿಗೆ ತಿಳಿದದೆ. ಯಾಜಕಕಾಂಡ 25ನೇ ಅಧ್ಯಾಯದಲ್ಲಿ ದೇವರು ಇಸ್ರಾಯೇಲರಿಗೆ ನೀಡಿದ ನಿರ್ದೇಶನಗಳು ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯುಳ್ಳ ಸಮಾಜದ ಮಹತ್ವವನ್ನು ನಮಗೆ ಕಲಿಸುತ್ತವೆ. ಆಧುನಿಕ ಕಾಲದ ವಿಶ್ವಾಸಿಗಳಾದ ನಾವು ಕೂಡಾ ಇದನ್ನು ಅರ್ಥಮಾಡಿಕೊಂಡು ನಮ್ಮ ದೇಶದಲ್ಲಿರುವ ಅಸಮಾನತೆಗಳ ನಿರ್ಮೂಲನೆಗಾಗಿ ಕಾರ್ಯೋನ್ಮುಖರಾಗುವದು ಅಗತ್ಯ.

ಉ. ಬಡವರ ಬಗ್ಗೆ ದೇವರ ಕಾಳಜಿ: ಹಳೆ ಒಡಂಬಡಿಕೆಯು ದೇವರು ಬಡವರ ಮತ್ತು ಶೋಷಿತರ ಬಗ್ಗೆ ಕಾಳಜಿಯುಳ್ಳವನಾಗಿದ್ದಾನೆ ಎಂಬುದಕ್ಕೆ ಸಾಕಷ್ಟು ಪರಿಚ್ಛೇಧಗಳನ್ನು (ವಾಕ್ಯಗಳನ್ನು) ಹೊಂದಿದೆ. ಆ ಪರಿಚ್ಛೇಧಗಳಲ್ಲಿ ಈ ಅಧ್ಯಾಯದಲ್ಲಿರುವ ಜೂಬಿಲಿ ಸಂವತ್ಸರವೂ ಒಂದಾಗಿದೆ. ದೇವರು ಶ್ರೀಮಂತರಿಗಿಂತಲೂ ಬಡವರ ಪರವಾಗಿದ್ದಾನೆಂದು ದೇವಜನರಾದ ನಾವು ಇಂದು ಅರ್ಥ ಮಾಡಿಕೊಳ್ಳಬೇಕಾಗಿದೆ. ದೇವರು ಯೇಸುವಿನ ಮುಖಾಂತರ ಗಲಿಲಾಯದ ಬಡಗಿಯ ಮಗನಾಗಿ ತಾನೇ ಬಡವನಾದನು.

ಊ. ದೇವಜನರು ಬಡವರ ಮತ್ತು ಶೋಷಣೆಗೆ ಒಳಗಾದವರ ಬಗ್ಗೆ ಕಾಳಜಿಯುಳ್ಳವರಾಗಿರಬೇಕು: ಇಂದು ದಕ್ಷಿಣ ಭಾರತದ ಸಭೆಗೆ (ವೈಯಕ್ತಿಕ ವಿಶ್ವಾಸಿಗಳೆಲ್ಲರಿಗೂ) ಬಡವರ, ಶೋಷಿತರ ಮತ್ತು ಅಗತ್ಯತೆಯುಳ್ಳವರ ಬಗ್ಗೆ ಕಾಳಜಿ ವಹಿಸಲು ಸಾಕಷ್ಟು ಅವಕಾಶಗಳಿವೆ.

**ಯಾಜಕಕಾಂಡ ಉತ್ತರಗಳು 8: ಯಜ್ಞದ ವ್ಯವಸ್ಥೆಯ ಪರಿಣಾಮ (ಪ್ರಭಾವ)**

**ಆ. ಪ್ರಶ್ನೆಗಳಿಗೆ ಉತ್ತರಗಳು**

1. ಯಾಜಕ. 4:27–35ರ ಮೇಲಿನ ಪ್ರಶ್ನೆಗಳಿಗೆ ಉತ್ತರಗಳು:

   ಅ. ಪಾಪದ ಪರಿಣಾಮವಾಗಿ (ತಿಳಿಯದೇ ಮಾಡಿದ್ದು ಕೂಡಾ) ಅಪರಾಧಿ ಭಾವನೆ ಮೂಡುತ್ತದೆ. "ಸಮುದಾಯದ ಪ್ರತಿ ವ್ಯಕ್ತಿ ಕೂಡಾ ಅಪರಾಧಿ ಭಾವನೆ ತಾಳುತ್ತಾನೆ".

   ಆ. ಸಮುದಾಯದ ಸದಸ್ಯ ತನ್ನ ಪಾಪದ ಬಗ್ಗೆ ತಿಳಿದವನಾದ್ದರಿಂದ ಯಾಜಕನ ಬಳಿಗೆ ಹೋತುವನ್ನು ತರಬೇಕು. ಮತ್ತು ಪ್ರಾಯಶ್ಚಿತ್ತವನ್ನು ನೀಡಿ ತನ್ನ ಪಾಪಕ್ಕೆ ಕ್ಷಮೆಯನ್ನು ಹೊಂದಬೇಕು.

   ಇ. ಪಾಪಿಗಾಗಿ ಪ್ರಾಯಶ್ಚಿತ್ತ ಯಜ್ಞವು ಯಾಜಕನಿಂದ ಸಮರ್ಪಿಸಲ್ಪಟ್ಟ ಪರಿಣಾಮವಾಗಿ ಅವನು ಕ್ಷಮಿಸಲ್ಪಡುವನು.

2. ಕೊಟಲ್ಪಟ್ಟ ಪ್ರತಿ ವಾಕ್ಯ ಭಾಗಗಳನ್ನು ನೋಡಿದಾಗ, ಪ್ರವಾದಿಗಳಾದ ಯೇಶಾಯ, ಯೆರೆಮಿಯ, ಆಮೋಸರ ಕಾಲದಲ್ಲಿ ಇಸ್ರಾಯೇಲರ ಕಾಣಿಕೆಗಳನ್ನು ಯಜ್ಞಗಳನ್ನು ದೇವರು ವಿಮರ್ಶಿಸಿದನು (ಪ್ರಶ್ನಿಸಿದನು) ಎಂಬುದನ್ನು ಕಾಣುತ್ತೇವೆ:

   ಅ. ಯೆಶಾಯ 1:10–11: ಇಲ್ಲಿ ಪ್ರವಾದಿಯು ಇಸ್ರಾಯೇಲರನ್ನು "ಸೊದೋಮಿನ ಅಧಿಪತಿಗಳೇ, ಗೊಮೋರದ ಪ್ರಜೆಗಳೇ" (ವಚನ 10) ಎಂದು ಕರೆಯುತ್ತಾನೆ. ಈ ಎರಡು ಪಟ್ಟಣಗಳು ಪಾಪದ ಜೀವನಕ್ಕೆ ಮತ್ತು ಪಶ್ಚಾತಾಪವಿಲ್ಲದಿರುವಿಕೆಗೆ ಸಂಖ್ಯೇತಗಳಾಗಿದ್ದವು. ಇದರ ಪರಿಣಾಮ ದೇವರ ನ್ಯಾಯತೀರ್ಪು ಅವರ ಮೇಲೆ ಬಂದು ಅವರು ನಾಶವಾಗಿ ಹೋದರು.

   - ದೇವರು ಇಸ್ರಾಯೇಲರ ಕಾಣಿಕೆಗಳನ್ನು 'ಅರ್ಥವಿಲ್ಲದ್ದು' (ವಚನ 13) ಎನ್ನುತ್ತಾನೆ. ಕಾರಣ ಕಾಣಿಕೆ ನೀಡುವವರ ತಪ್ಪಾದ ನಡಾವಳಿಕೆ: ಅವರು ತಮ್ಮ ಪಾಪದ ಸ್ಥಿತಿಯನ್ನು ಅರಿತಿಲ್ಲ. ತಾವು ಅಪರಾಧಿಗಳೆಂಬ ಭಾವನೆಯೂ ಅವರಿಗಿಲ್ಲ. ಅವರು ತಮ್ಮ ಯಜ್ಞಗಳನ್ನು ಸರಿಯಾದ ಉದ್ಧೇಶಗಳನ್ನಿಟ್ಟುಕೊಂಡು ತರುತ್ತಿಲ್ಲ.

   - ಈ ನಿಮಿತ್ಯ ದೇವರು ಪಶುಗಳ, ಕುರಿಗಳ ಮತ್ತು ಮೇಕೆಗಳ ರಕ್ತದಿಂದ ಏನೂ ಪ್ರಯೋಜನವಿಲ್ಲ ಎಂದು ತಿಳಿದನು (ವಚನ 11 ಛ). ಆದ್ದರಿಂದ ಅವರ ಅರ್ಥವಿಲ್ಲದ ಕಾಣಿಕೆಗಳನ್ನು ಮತ್ತು ಅಧರ್ಮದ ಸಂಘಗಳನ್ನು ನಿಲ್ಲಿಸಲು ಹೇಳುತ್ತಾನೆ (ವಚನ 13).

   - ಈ ವಾಕ್ಯಭಾಗದಲ್ಲಿ ನಾನು ತಿಳಿದಂತೆ ದೇವರು ಧರ್ಮಶಾಸ್ತ್ರದಲ್ಲಿ ಇರುವ ಕಾಣಿಕೆ ಮತ್ತು ಯಜ್ಞಗಳನ್ನು ರದ್ದುಗೊಳಿಸುತ್ತಿಲ್ಲ. ದೇವರು ಇಲ್ಲಿ ಯಜ್ಞ ವ್ಯವಸ್ಥೆಯನ್ನು ತಪ್ಪಾಗಿ ಬಳಸಿದ್ದನ್ನು ಟೀಕಿಸುತ್ತಿದ್ದಾನೆ.

   ಆ. ಯೆರೆಮಿಯ 6:20: ಇಲ್ಲಿ ಯರೆಮಿಯ 6:16–20 ವಚನಗಳು ಇಸ್ರಾಯೇಲ್ಯರು "ಪುರಾತನ ಮಾರ್ಗಗಳನ್ನು" ಬಿಟ್ಟಿದ್ದ ಸ್ಥಿತಿಯನ್ನು ತೋರಿಸುತ್ತವೆ (ವಚನ 16). ಸನ್ಮಾರ್ಗದಲ್ಲಿ ನಡೆಯುವದನ್ನು ತೊರೆದಿದ್ದರು (ವಚನ 16). ಅವರು ದೇವರ ಎಚ್ಚರಿಕೆಯ ತುತೂರಿಯ ಶಬ್ದವನ್ನೂ ದೇವರ ಮಾತನ್ನೂ ಕೇಳುತ್ತಿರಲಿಲ್ಲ (ವಚನ 17, 19). ಅವರು ದೇವರ ಒಡಂಬಡಿಕೆಯನ್ನು ಮತ್ತು ಆತನ ಧರ್ಮಶಾಸ್ತ್ರವನ್ನು ತಿರಸ್ಕರಿಸಿದ್ದರು (ವಚನ 19). ಆದ್ದರಿಂದ ದೇವರು ಅವರ ಧೂಪದ ಬಗ್ಗೆ ಆಸಕ್ತಿಯುಳ್ಳವನಾಗಿರಲಿಲ್ಲ. ಮತ್ತು ಅವರ ಹೋಮವನ್ನು ಮೆಚ್ಚಲಿಲ್ಲ (ವಚನ 20). ಹೋಮ ಅರ್ಪಿಸುವದು (ಬಲಿಪಶುವನ್ನು ಯಜ್ಞವೇದಿಯಲ್ಲಿ ಸಂಪೂರ್ಣವಾಗಿ ಸುಡಲ್ಪಡುವದು) ಅವರು ಸಂಪೂರ್ಣವಾಗಿ ತಮ್ಮನ್ನು ದೇವರಿಗೆ ಬದ್ಧರಾಗಿರುವದನ್ನು (ಅರ್ಪಿಸಿದ್ದನ್ನು) ನೆನಪಿಸುತ್ತದೆ.

   ನನ್ನ ತಿಳುವಳಿಕೆಯ ಪ್ರಕಾರ ಈ ಭಾಗವು ಯಜ್ಞ ವ್ಯವಸ್ಥೆಯ ವಿರುದ್ದ ಮಾತನಾಡುವದಿಲ್ಲ. ಆದರೆ ವ್ಯವಸ್ಥೆಯ ದುರುಪಯೋಗದ ವಿರುದ್ಧ ಮಾತನಾಡುತ್ತದೆ.

   ಇ. ಆಮೋಸ 5:22: (5:21–24) ಈ ಭಾಗದ ಆರಂಭವು ಹೇಳುವಂತೆ ಅಂದಿನ ಇಸ್ರಾಯೇಲ್ ಸಮಾಜದಲ್ಲಿ ಏನೋ ತುಂಬಾ ತಪ್ಪಾದ ಸ್ಥಿತಿ ಇತ್ತು ಎಂದು ತೋರುತ್ತದೆ. ಧಾರ್ಮಿಕ ಆಚರಣೆಗಳು ಸಾಮಾನ್ಯವಾಗಿ ಆಚರಿಸಲ್ಪಡುತ್ತಿದ್ದವು: ಇಸ್ರಾಯೇಲರು ತಮ್ಮ ಜಾತ್ರೆಗಳನ್ನು ನಡೆಸುತ್ತಿದ್ದರು (ವಚನ 21); ಕಾಣಿಕೆಗಳನ್ನು ಅರ್ಪಿಸುವದನ್ನು ಮುಂದುವರಿಸಿದ್ದರು (ವಚನ 22); ತಮ್ಮ ಸಂಗೀತ ಮತ್ತು ಆರಾಧನಾ ಗೀತೆಗಳನ್ನು ಮಾಡುತ್ತಲಿದ್ದರು (ವಚನ 23). ನ್ಯಾಯ ಮತ್ತು ನೀತಿಯ (ಧರ್ಮ) ಕೊರತೆ ಇತ್ತು (ವಚನ 24). ನ್ಯಾಯ ಮತ್ತು ನೀತಿಯನ್ನು ಮರೆಯುವ ಮೂಲಕ ಇಸ್ರಾಯೇಲ್ಯರು ಒಡಂಬಡಿಕೆಯನ್ನು ಮುರಿದಿದ್ದರು (ಹೋಲಿಸು ಧರ್ಮೋ. 16:19–20; 24:17; 27:19).

   ಈ ನಿಮಿತ್ಯ ದೇವರು ಅವರ ಜಾತ್ರೆಗಳನ್ನೂ ಉತ್ಸವಗಳನ್ನೂ ತಿರಸ್ಕರಿಸಿದನು; ಆತನು ಅವರ ಕಾಣಿಕೆಗಳನ್ನು ಸ್ವೀಕರಿಸನು; ಅವರ ಸಂಗೀತ ಮತ್ತು ಆರಾಧನಾ ಗೀತೆಗಳನ್ನು ಕೇಳಿಸಿಕೊಳ್ಳನು.

   ಈ ಭಾಗದಲ್ಲಿ ನನ್ನ ತಿಳುವಳಿಕೆ ಪ್ರಕಾರ ದೇವಜನರು ಒಡಂಬಡಿಕೆಯನ್ನು ಕಾಪಾಡಿಕೊಳ್ಳದೆ ಹೋದರೆ ಉಳಿದ ಅವರ ಎಲ್ಲ ಧಾರ್ಮಿಕ ಚಟುವಟಿಕೆಗಳು ಅರ್ಥವಿಲ್ಲದವುಗಳಾಗುತ್ತವೆ. ಧರ್ಮಕ್ಕಿಂತಲೂ ದೇವರ ನೀತಿ ನ್ಯಾಯ ಮುಖ್ಯವಾದದ್ದು. ಈ ಭಾಗವು ಧಾರ್ಮಿಕ ಚಟುವಟಿಕೆಗಳನ್ನು ಖಂಡಿಸುವದಿಲ್ಲ. ಆದರೆ ಅವುಗಳ ದುರುಪಯೋಗವನ್ನು ಖಂಡಿಸುತ್ತದೆ.

3. ಹಳೆ ಒಡಂಬಡಿಕೆಯ ಯಜ್ಞದ ವ್ಯವಸ್ಥೆಯಲ್ಲಿ ಸ್ವಯಂಪ್ರೇರಿತವಲ್ಲದ (ತಿಳಿಯದೆ ಮಾಡಿದ) ಹಾಗೂ ಸ್ವಯಂಪ್ರೇರಿತವಾದ (ತಿಳಿದು ಮಾಡಿದ) ಎಲ್ಲ ಪಾಪಗಳು ಕ್ಷಮಿಸಲ್ಪಡುತ್ತವೆ. ಆದ್ದರಿಂದ ಯಾವುದೇ ವಿಧದ ಪಾಪಗಳಿಗೆ ಸಂಬಂಧಿಸಿ ಅವುಗಳ ಕ್ಷಮಿಸುವಿಕೆಯಲ್ಲಿ ಮಿತಿಯಿಲ್ಲದಿರುವದನ್ನು ಈ ವ್ಯವಸ್ಥೆಯಲ್ಲಿ ಕಾಣುತ್ತೇವೆ. ಇದರ ಮಿತಿ ಇರುವದು ಎಲ್ಲಿ ಎಂಬುದನ್ನು ಮುಂದಿನ ಪ್ರಶ್ನೆಯಲ್ಲಿ ಕಾಣುತ್ತೇವೆ.

4. ಹಳೆ ಒಡಂಬಡಿಕೆಯ ಯಜ್ಞ ವ್ಯವಸ್ಥೆಯ ಮಿತಿ ಇರುವದು ಶಾಶ್ವತ ಕ್ಷಮಾಪಣೆ ಮತ್ತು ಶಾಂತಿಯನ್ನು ನೀಡುವಲ್ಲಿ. ಈ ದಿಶೆಯಲ್ಲಿ ಇದು ಅಸಮರ್ಥವಾದದ್ದು. ಪಾಪ ಮತ್ತು ಅಪರಾಧದ ಕಾಣಿಕೆಗಳು ತಿರುಗಿ ತಿರುಗಿ ಅರ್ಪಿಸಲ್ಪಡುತ್ತಿದ್ದವು. ಇಡೀ ಇಸ್ರಾಯೇಲ್ ಜನಾಂಗದ ಪಾಪಕ್ಕೆ ಸಂಬಂಧಿಸಿ ದೋಷಪರಿಹಾರಕ ಯಜ್ಞದ ಮಹಾ ದಿನವು ವರ್ಷಂಪ್ರತೀ ಆಚರಿಸಲ್ಪಡುತ್ತಿತ್ತು. ಆದರೆ ಯೇಸು ಕ್ರಿಸ್ತನ ಮರಣ ಮಾತ್ರ ಪಾಪಕ್ಕೆ ಸಂಬಂಧಿಸಿ "ಎಲ್ಲರಿಗಾಗಿ ಒಂದೇ ಸಾರಿ" ಆದದ್ದು:

*ಆತನು ಸತ್ತದ್ದು ಒಂದೇ ಸಾರಿ, ಅದು ಪಾಪದ ಪಾಲಿಗೆ ಎಲ್ಲರಿಗಾಗಿ (ರೋಮ 6:10).*

*ಒಂದೇ ಸಾರಿ ಯುಗಗಳ ಸಮಾಪ್ತಿಯಲ್ಲೇ ಆತನು ಪಾಪನಿವಾರಣೆ ಮಾಡಬೇಕೆಂಬ ಉದ್ದೇಶದಿಂದ ತನ್ನನ್ನು ಯಜ್ಞಮಾಡಿಕೊಳ್ಳುವವನಾಗಿ ಪ್ರತ್ಯಕ್ಷನಾದನು (ಇಬ್ರಿಯ 9:26).*

*ಕ್ರಿಸ್ತನು ಸಹ ನೀತಿವಂತನಾಗಿದ್ದು ಅನೀತಿವಂತರಿಗೋಸ್ಕರ ಪ್ರಾಣಕೊಟ್ಟು ನಮ್ಮನ್ನು ದೇವರ ಬಳಿಗೆ ಸೇರಿಸುವದಕ್ಕಾಗಿ ಒಂದೇ ಸಾರಿ ಪಾಪನಿವಾರಣೆಗೋಸ್ಕರ ಬಾಧೆಪಟ್ಟು ಸತ್ತನು (1ಪೇತ್ರ 3:18).*

5. ಇಸ್ರಾಯೇಲರೂ ತಿಳಿಯದ ಹಳೆ ಒಡಂಬಡಿಕೆಯ ಯಜ್ಞದ ವ್ಯವಸ್ಥೆಯ ಬಗ್ಗೆ ನಾವು 3 ಸಂಗತಿಗಳನ್ನು ತಿಳಿಯಬಹುದು:

ಅ. ಯಜ್ಞ ವ್ಯವಸ್ಥೆಯು ಸಮಯದ ಮಿತಿಯನ್ನು ಹೊಂದಿದೆ ಎಂಬುದನ್ನು ನಾವು ನೋಡಿದ್ದೇವೆ; ಯಜ್ಞಗಳು ಮತ್ತೆ ಮತ್ತೆ ನಡೆಸಲ್ಪಡುತ್ತಿದ್ದವು. ಇಸ್ರಾಯೇಲರಿಗೆ ಇದರ ಹೊರತು ಬೇರೆ ಮಾರ್ಗವಿರಲಿಲ್ಲ.

ಆ. ಯಜ್ಞಗಳ ವ್ಯವಸ್ಥೆಯು ದೇವರ ಚಿತ್ತದ ಮೇರೆಗೆ ಮಾನ್ಯತೆಯುಳ್ಳದ್ದಾಗಿತ್ತು. ಯಾಕೆಂದರೆ ಇತಿಹಾಸದ ಸಾವಿರಾರು ವರ್ಷಗಳವರೆಗೂ ಶಿಲುಬೆಯಲ್ಲಾದ ಯೇಸುವಿನ ಪ್ರಾಯಶ್ಚಿತ್ತ ಮರಣದ ವಿಚಾರವು ಆಗ ಇರಲೇ ಇಲ್ಲ ಎಂಬುದನ್ನು ನಾವು ತಿಳಿದಿದ್ದೇವೆ. ಪುರಾತನ ಇಸ್ರಾಯೆಲರು ಇದನ್ನು ತಿಳಿದಿರಲಿಲ್ಲ.

ಇ. ಹಳೆ ಒಡಂಬಡಿಕೆಯ ಯಜ್ಞ ವ್ಯವಸ್ಥೆಯು ಮುಂಬರುವ ಯೇಸು ಮತ್ತು ಆತನ ತ್ಯಾಗದ ಮರಣದ ನೆರಳಾಗಿತ್ತು (ಕೈ ತೋರಿಸಿತ್ತು) ಎಂಬುದನ್ನು ನಾವು ತಿಳಿದಿದ್ದೇವೆ. ಪುರಾತನ ಇಸ್ರಾಯೇಲರು ಇದನ್ನು ತಿಳಿಯುವ ಯಾವ ಮಾರ್ಗಗಳೂ ಇರಲಿಲ್ಲ. ಅವರಿಗೆ ಇದೇ ದೇವರು ತಮ್ಮ ಪಾಪಗಳನ್ನು ಕ್ಷಮಿಸುವ ಮಾರ್ಗವಾಗಿತ್ತು.

**ಇ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಈ ಅಧ್ಯಯನದ ಮೊದಲ ಭಾಗದಲ್ಲಿ ಹಳೆ ಒಡಂಬಡಿಕೆಯ ಯಜ್ಞ ವ್ಯವಸ್ಥೆಯ ಬಗ್ಗೆ 6 ಸಮಾನ್ಯ ತಪ್ಪಾಭಿಪ್ರಾಯಗಳನ್ನು ಚರ್ಚೆ ಮಾಡಿದ್ದೇವೆ:

ಅ. ಹಳೆ ಒಡಂಬಡಿಕೆಯ ಪ್ರವಾದಿಗಳು ಪಂಚಗ್ರಂಥದ (ಧರ್ಮಶಾಸ್ತ್ರ) ಯಜ್ಞ ವ್ಯವಸ್ಥೆಯನ್ನು ಒಪ್ಪಿಕೊಳ್ಳಲೇ (ಸ್ವೀಕರಿಸಲೇ)ಇಲ್ಲ ಎಂಬುದು ಒಂದು ತಪ್ಪಾಭಿಪ್ರಾಯವಾಗಿದೆ. ಇಲ್ಲಿ ಸತ್ಯವೇನೆಂದರೆ ಪ್ರವಾದಿಗಳು ವ್ಯವಸ್ಥೆಯನ್ನು ಖಂಡಿಸಲಿಲ್ಲ ಬದಲು ವ್ಯವಸ್ಥೆಯ ದುರುಪಯೋಗವನ್ನು ಖಂಡಿಸಿದರು.

ಆ. ಯಜ್ಞ ವ್ಯವಸ್ಥೆಯ ಬಗ್ಗೆ ಪ್ರವಾದಿಗಳು ಮಾಡಿದ ಖಂಡನೆಯ ಬಗ್ಗೆ ತಪ್ಪಾಭಿಪ್ರಾಯ ಬರಲು ಕಾರಣ, ಪಾಪವನ್ನು ತೊಲಗಿಸುವಲ್ಲಿ ಇರುವ ದೇವರ ಮಾರ್ಗವನ್ನು ಆಳವಾಗಿ ಅರ್ಥವಿವರಣೆ ನೀಡಿದ್ದೇ ಕಾರಣವಾಗಿತ್ತು. ಇಲ್ಲಿ ಸತ್ಯವೇನೆಂದರೆ – ಯಜ್ಞಗಳ ವ್ಯವಸ್ಥೆಯ ಹೊರತಾಗಿ ಜನರ ಪಾಪಗಳನ್ನು ನಿವಾರಿಸಲು ದೇವರಿಗೆ ಬೇರೆ ಮಾರ್ಗವಿರಲಿಲ್ಲ ಎಂಬುದನ್ನು ಪ್ರವಾದಿಗಳು ತಿಳಿದಿದ್ದರು. ಆದರೆ ಈ ಯಜ್ಞಗಳು ದೇವರ ಕ್ಷಮೆಯನ್ನು ತರುವದು ದೇವರು ಇಸ್ರಾಯೇಲರೊಟ್ಟಿಗೆ ಮಾಡಿಕೊಂಡ ಒಡಂಬಡಿಕೆಯ ಚೌಕಟ್ಟಿನ ಒಳಗೆ ಮಾತ್ರ ಎಂದು ತಿಳಿದಿದ್ದರು. ಅಂತಿಮವಾಗಿ ಕ್ಷಮೆಯು ದೇವರಿಂದ ಬರುವಂತದ್ದು.

ಇ. ಇರುವ ಇನ್ನೊಂದು ತಪ್ಪಾಭಿಪ್ರಾಯವೇನೆಂದರೆ ಯಜ್ಞ ವ್ಯವಸ್ಥೆಯ ನಿಜವಾದ ಉದ್ದೇಶ ಕ್ರಿಸ್ತನ ಮರಣವನ್ನು ಮೂನ್ಸೂಚಿಸುವಂತದ್ದಾಗಿರುವದರಿಂದ ಪುರಾತನ ಇಸ್ರಾಯೇಲರ ಪಾಪಗಳನ್ನು ಇದು ಕ್ಷಮಿಸಲಿಲ್ಲ ಎನ್ನುವಂತದ್ದು. ಇಲ್ಲಿ ಸತ್ಯವೇನೆಂದರೆ ಯಜ್ಞ ವ್ಯವಸ್ಥೆಯು ದೇವರು ಅವರ ಪಾಪಗಳನ್ನು ಕ್ಷಮಿಸುವ ಮಾರ್ಗವಾಗಿತ್ತು. ಮತ್ತು ನಿಜವಾಗಿಯೂ ಅವರ ಪಾಪಗಳು ಕ್ಷಮಿಸಲ್ಪಡುತ್ತಿದ್ದವು.

ಈ. ಹಳೆ ಒಡಂಬಡಿಕೆಯ ಯಜ್ಞಗಳು ಕೇವಲ ಧಾರ್ಮಿಕ ಆಚರಣೆಗಳು, ಅವು ವೈಯಕ್ತಿಕವಾಗಿ ಯಾವುದೇ ಪಾಪಗಳೊಟ್ಟಿಗೆ ವ್ಯವಹರಿಸಲಾರವು ಎಂಬುದು ಮತ್ತೊಂದು ತಪ್ಪಾಭಿಪ್ರಾಯವಾಗಿದೆ. ಇಲ್ಲಿರುವ ಸತ್ಯ ಹಳೆ ಒಡಂಬಡಿಕೆಯ ಈ ವ್ಯವಸ್ಥೆ ನಿಜವಾಗಿಯೂ ಪುರಾತನ ಇಸ್ರಾಯೇಲರ ಪಾಪಗಳೊಟ್ಟಿಗೆ ವ್ಯವಹರಿಸಿತ್ತು.

ಉ. ಹಳೆ ಒಡಂಬಡಿಕೆಯು ಸ್ವಯಂಪ್ರೇರಿತ ಮತ್ತು ಸ್ವಯಂಪ್ರೇರಿತವಲ್ಲ ಪಾಪಗಳು ಎಂದು ವ್ಯತಾಸ ತಿಳಿಸಿರುವಲ್ಲಿ ಸ್ವಯಂಪ್ರೇರಿತವಲ್ಲದ ಪಾಪಗಳಿಗೆ ಮಾತ್ರ ಪ್ರಾಯಶ್ಚಿತ್ತ ಯಜ್ಞ ಮತ್ತು ಕ್ಷಮಾಪಣೆ ಎಂಬುದು ಒಂದು ತಪ್ಪಾಭಿಪ್ರಾಯವಾಗಿದೆ. ಸತ್ಯವೇನೆಂದರೆ ಹಳೆ ಒಡಂಬಡಿಕೆಯ ಕಾಲದಲ್ಲಿ ಅರಿಕೆ ಮಾಡಲ್ಪಟ್ಟ (ಸ್ವಯಂಪ್ರೇರಿತ ಮತ್ತು ಸ್ವಯಂಪ್ರೇರಿತವಲ್ಲದ) ಎಲ್ಲ ಪಾಪಗಳು ಕ್ಷಮಿಸಲ್ಪಡುತ್ತಿದ್ದವು.

ಊ. ಯಜ್ಞಪಶುವಿನ ರಕ್ತವು ವ್ಯಕ್ತಿಯ ಪಾಪವನ್ನು ನಿವಾರಿಸುತ್ತದೆ ಎಂದು ಹಳೆ ಒಡಂಬಡಿಕೆ ಬೋಧಿಸುತ್ತದೆ ಎನ್ನುವದು ಒಂದು ತಪ್ಪು ತಿಳುವಳಿಕೆಯಾಗಿದೆ. ಇಲ್ಲಿರುವ ಸತ್ಯ ಒಡಂಬಡಿಕೆಯ ದೇವರು ಪಾಪಿಯನ್ನು ಕ್ಷಮಿಸುವನು ಮತ್ತು ಅವನ ಪಾಪಗಳನ್ನು ಅವನಿಂದ ತೆಗೆಯುವನು. ಯಜ್ಞದ ರಕ್ತ ಕೇವಲ ಸಾಧನ ಮಾತ್ರವಾಗಿತ್ತು.

2. –

3. ಪ್ರವಾದನಾ ಪುಸ್ತಕಗಳ ಕೆಲವು ಪರಿಚ್ಛೇಧಗಳು ಹಳೆ ಒಡಂಬಡಿಕೆಯ ಯಜ್ಞದ ವ್ಯವಸ್ಥೆಯ ದುರುಪಯೋಗದ ವಿರುದ್ಧ ಮಾತನಾಡುತ್ತವೆ. ವಾಸ್ತವವಾಗಿ ಹೊಸ ಒಡಂಬಡಿಕೆಗೆ ಸಂಬಂಧಿಸಿದ ನಾವು ಕೂಡಾ ಹೊಸ ಒಡಂಬಡಿಕೆಯ ಯಜ್ಞ ವ್ಯವಸ್ಥೆಯ ದುರುಪಯೋಗ ಮಾಡುವ ಸಾಧ್ಯತೆ ಇದ್ದು ಈ ಬಗ್ಗೆ ಇದು ಬೆಳಕು ಚೆಲ್ಲುತ್ತದೆ:

ಅ. ಯೇಸು ಕ್ರಿಸ್ತನ ಮೂಲಕ ದೇವರು ನೀಡಿದ ರಕ್ಷಣೆಯನ್ನು ತಿರಸ್ಕರಿಸಿದಾಗ: ಆತನ ಮಗನನ್ನು ನಂಬುವವನಿಗೆ ನಿತ್ಯಜೀವ ಉಂಟು; *ಮಗನಿಗೆ ಒಳಗಾಗದವನು ಜೀವವನ್ನು ಕಾಣುವದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವದು* (ಯೋಹಾನ 3:36).

ಆ. ಯೇಸುವನ್ನು ನಮ್ಮ ಸ್ವಂತ (ವೈಯಕ್ತಿಕ) ರಕ್ಷಕನನ್ನಾಗಿ ಸ್ವೀಕರಿಸಿದ್ದಾಗ್ಯೂ ನಾವು ಪಾಪದ ಜೀವನವನ್ನು ಮುಂದುವರೆಸಿದರೆ: *ಯಾಕೆಂದರೆ ಸತ್ಯದ ಪರಿಜ್ಞಾನವನ್ನು ನಾವು ಹೊಂದಿದ ಮೇಲೆ ಬೇಕೆಂದು ಪಾಪಮಾಡಿದರೆ ಪಾಪಪರಿಹಾರಕ್ಕಾಗಿ ಇನ್ನಾವ ಯಜ್ಞವೂ ಇರುವದಿಲ್ಲ; ಅತ್ಯಂತ ಭಯದಿಂದ ಎದುರುನೋಡತಕ್ಕ ನ್ಯಾಯತೀರ್ಪೂ ದೇವರ ವಿರೋಧಿಗಳನ್ನು ದಹಿಸುವ ತೀಕ್ಷ್ಣವಾದ ಅಗ್ನಿಯೂ ಇವೇ ನಮ್ಮ ಮುಂದೆ ಇರುವವು. ಮೋಶೆಯ ವಿಧಿಗಳನ್ನು ಅಸಡ್ಡೆಮಾಡಿದವನಿಗೆ ಇಬ್ಬರು ಇಲ್ಲವೆ ಮೂವರು ಸಾಕ್ಷಿಗಳ ಮಾತಿನ ಮೇಲೆ ಕನಿಕರವಿಲ್ಲದೆ ಮರಣದಂಡನೆ ಆಗುತ್ತದಷ್ಟೆ. ಯಾವನು ದೇವಕುಮಾರನನ್ನು ತುಳಿದು ಒಡಂಬಡಿಕೆಯನ್ನು ಸ್ಥಿರಪಡಿಸಿದಂಥ ತನ್ನನ್ನು ಪವಿತ್ರಮಾಡಿದಂಥ ರಕ್ತವನ್ನು ಅಶುದ್ಧವೆಂದೆಣಿಸಿ ದೇವರ ಕೃಪಾವರವಾಗಿರುವ ಆತ್ಮನನ್ನು ತಿರಸ್ಕಾರಮಾಡಿದ್ದಾನೋ ಅವನು ಇನ್ನೂ ಎಷ್ಟೋ ಕ್ರೂರವಾದ ದಂಡನೆಗೆ ಪಾತ್ರನಾಗಬೇಕೆಂಬುದನ್ನು ಯೋಚಿಸಿರಿ. ಮುಯ್ಯಿಗೆ ಮುಯ್ಯಿ ತೀರಿಸುವದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನೆಂದು ಹೇಳಿದಾತನನ್ನು ಬಲ್ಲೆವು; ಇದಲ್ಲದೆ ಕರ್ತನು ತನ್ನ ಜನರ ನ್ಯಾಯವನ್ನು ವಿಚಾರಿಸುವನೆಂತಲೂ ಹೇಳಿಯದೆ. ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿಬೀಳುವದು ಭಯಂಕರವಾದದ್ದು* (ಇಬ್ರಿಯ 10:26–31).

ಇಬ್ರಿಯ 6:4–6 ವಾಕ್ಯಭಾಗ ಹೇಳುವಂತೆ ಇಂದು ದಕ್ಷಿಣ ಭಾರತದ ಅನೇಕ ಯುವ ವಿಶ್ವಾಸಿಗಳು ಸಮಸ್ಯೆಯಲ್ಲಿದ್ದಾರೆ. ಇಲ್ಲಿ ಹೇಳಿರುವ ಸ್ಥಿತಿಯನ್ನೇ ಅವರಲ್ಲಿ ಭಿನ್ನವಾಗಿ ಕಾಣಬಹುದಾಗಿದೆ.

# ಅರಣ್ಯಕಾಂಡ ಅಧ್ಯಯನ

**ಅರಣ್ಯಕಾಂಡದ ಪರಿಚಯದ ಉತ್ತರಗಳು**

**ಪ್ರಶ್ನೆಗಳಿಗೆ ಉತ್ತರಗಳು**

1. ಅರಣ್ಯಕಾಂಡಕ್ಕೆ ಕೊಡಲಾಗಿರುವ ಇಂಗ್ಲಿಷ್ ಹೆಸರು ಸೆಪ್ಟುವಾಜಿಂಟ್‌ನಿಂದ ಆರಿಸಲಾಗಿದೆ. ಅದು ಎರಡು ಜನಗಣತಿಗಳನ್ನು ಉಲ್ಲೇಖಿಸುತ್ತದೆ, ಮೊದಲ ಜನಗಣತಿಯು ಪುಸ್ತಕದ ಪ್ರಾರಂಭದಲ್ಲಿ ಬರುತ್ತದೆ ಮತ್ತು ಎರಡನೆಯ ಜನಗಣತಿಯು ಪುಸ್ತಕದ ಅಂತ್ಯದಲ್ಲಿ ಬರುತ್ತದೆ.
2. ಅರಣ್ಯಕಾಂಡದಲ್ಲಿ ಇಸ್ರಾಯೇಲರು ವಾಗ್ದಾನ ದೇಶವನ್ನು ವಶಮಾಡಿಕೊಳ್ಳಲು ಮುನ್ನಡೆಯುತ್ತಿರುವ ದೇವರ ಸೈನ್ಯವಾಗಿ ಚಿತ್ರಿಸಲ್ಪಟ್ಟಿದ್ದಾರೆ. ಆದರೆ ಅವರು ಗೊಣಗುವ ಮತ್ತು ದಂಗೆಕೋರ ಸೇನೆಯಾಗಿ ದೇವರಿಗೆ ಕೋಪವನ್ನೆಬ್ಬಿಸಿದರು.
3. ಸಿನಾಯಿ ಪರ್ವತದಿಂದ ಪ್ರಾರಂಭಿಸಿ ಕಾದೇಶ್ ಬರ್ನೆಯದಲ್ಲಿ ಕೆಲಕಾಲ ತಂಗಿ ನಂತರ ಮೋವಾಬಿನ ಬಯಲಿನಲ್ಲಿ ಅಂತ್ಯಗೊಂಡ ಅರಣ್ಯದಲ್ಲಿನ ಪ್ರಯಾಣವೇ ಅರಣ್ಯಕಾಂಡದ ಹಿನ್ನೆಲೆಯಾಗಿದೆ.
4. –
5. ಅರಣ್ಯಕಾಂಡದಲ್ಲಿ ದಾಖಲಾಗಿರುವ ಘಟನೆಗಳು ಸುಮಾರು ಕ್ರಿ. ಪೂ. 1444 (ಸಿನಾಯಿ ಪರ್ವತದ ಬಳಿಯಲ್ಲಿ) ಮತ್ತು ಕ್ರಿ. ಪೂ. 1406 ರ (ವಾಗ್ದಾನ ದೇಶವನ್ನು ಪ್ರವೇಶಿಸಿದ್ದು) ನಡುವೆ ಸಂಭವಿಸಿದವು.
6. ಅರಣ್ಯಕಾಂಡದಲ್ಲಿ ಕಂಡುಬರುವ ಎರಡು ಅತ್ಯಂತ ಸಾಮಾನ್ಯವಾದ ಪಠ್ಯ ಪ್ರಕಾರಗಳು (ವಿವಿಧ ರೀತಿಯ) ಆಜ್ಞೆಗಳು ಮತ್ತು ಕಥನಗಳಾಗಿವೆ (ಅವುಗಳಲ್ಲಿ ಕೆಲವು ಸುಪ್ರಸಿದ್ಧವಾಗಿವೆ).
7. ಇಸ್ರಾಯೇಲರು ಕಾನಾನನ್ನು ಪ್ರವೇಶಿಸಲು ತಿರಸ್ಕರಿಸಿದಾಗ ಅದರ ಪರಿಣಾಮವಾಗಿ ಇಸ್ರಾಯೇಲರ ಆ ಇಡೀ ಸಂತತಿಯ ಮೇಲೆ ದೇವರ ದಂಡನೆಯು ಬಂದಿತು. ದೇವರು ಇಸ್ರಾಯೇಲರ ಹೊಸ ಸಂತತಿಯನ್ನು ಪೂರ್ವ ದಿಕ್ಕಿನಿಂದ (ಮೋವಾಬಿನಿಂದ) ವಾಗ್ದಾನ ದೇಶವನ್ನು ಪ್ರವೇಶಿಸಲು ಅನುಮತಿಸುವುದಕ್ಕಿಂತ ಮುಂಚೆ ಹಳೆಯ ಸಂತತಿಯವರು ಅರಣ್ಯದಲ್ಲಿ ಮರಣ ಹೊಂದಬೇಕಾಗಿತ್ತು.
8. ತನ್ನ ಜನರ ಕುರಿತು ಇರುವ ದೇವರ ನಂಬಿಗಸ್ತಿಕೆಯು ಬಿಳಾಮನ ಕುರಿತಾದ ಕಥೆಯಲ್ಲಿ ವ್ಯಕ್ತವಾಗಿದೆ. ಅರಸನಾದ ಬಾಲಾಕನು ಇಸ್ರಾಯೇಲರನ್ನು ಶಪಿಸಲು ಬಿಳಾಮನನ್ನು ಕರೆಸಿದನು. ಆದರೆ ಆತನು ಅವರ ವಿರುದ್ಧ ಯಾವ ಶಾಪವನ್ನೂ ನುಡಿಯಲಾಗಲಿಲ್ಲ. ಅದಕ್ಕೆ ಬದಲಾಗಿ ಅವರನ್ನು ಆಶೀರ್ವದಿಸಲು ಮಾತ್ರ ಆತನಿಗೆ ಸಾಧ್ಯವಾಯಿತು. ಹಾಗಾಗಿ ಇಸ್ರಾಯೇಲರ ಅಪನಂಬಿಗಸ್ತಿಕೆಯ ಹೊರತಾಗಿಯೂ ದೇವರು ಅವರಿಗೆ ನಂಬಿಗಸ್ತನಾಗಿ ಉಳಿದುಕೊಂಡನು.

**ಅರಣ್ಯಕಾಂಡ ಉತ್ತರಗಳು 1: ಮೊದಲನೆಯ ಜನಗಣತಿ; ಇಸ್ರಾಯೇಲರ ಪಾಳೆಯ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಇಸ್ರಾಯೇಲರ ಸೈನ್ಯದ ಗಾತ್ರವನ್ನು ಕಂಡುಹಿಡಿಯುವುದೇ ಜನಗಣತಿಯ ಉದ್ದೇಶವಾಗಿತ್ತು. ಯುದ್ಧ ಮಾಡಲು ಶಕ್ತರಾದ 20 ವರ್ಷ ಮೇಲ್ಪಟ್ಟ ಪುರುಷರ ಗಣತಿಯನ್ನು ಮಾತ್ರ ಮಾಡಲಾಗಿತ್ತು.

2. ಪ್ರತಿಯೊಂದು ಗೋತ್ರದಿಂದ ಒಬ್ಬ ವ್ಯಕ್ತಿಯು ಜನಗಣತಿಯನ್ನು ಮಾಡಲು ಸಹಾಯ ಮಾಡುವಂತೆ ಜನಗಣತಿಯು ಏರ್ಪಡಿಸಲಾಗಿತ್ತು. ಆ ವ್ಯಕ್ತಿಯು ತನ್ನ ಸ್ವಂತ ಕುಟುಂಬದ ಮುಖ್ಯಸ್ಥನಾಗಿರಬೇಕಾಗಿತ್ತು, ಹಾಗಾಗಿ ಆತನಿಗೆ ಸಾಂಪ್ರದಾಯಿಕವಾದ ಅಧಿಕಾರವಿತ್ತು. ಮೋಶೆ ಮತ್ತು ಆರೋನರು ಜನಗಣತಿಯ ಸಮಗ್ರ ಜವಾಬ್ದಾರಿಯನ್ನು ಹೊತ್ತಿದ್ದರು. ಆದಾಗ್ಯೂ ಪ್ರತಿಯೊಂದು ಗೋತ್ರದಿಂದ ಒಬ್ಬ ಪ್ರತಿನಿಧಿಯು ಅವರ ಸಹಾಯಕ್ಕಾಗಿ ನೇಮಿಸಲ್ಪಟ್ಟಿದ್ದರು.

3. ಲೇವಿಯರನ್ನು ಜನಗಣತಿಯಲ್ಲಿ ಸೇರಿಸಿರಲಿಲ್ಲ, ಯಾಕೆಂದರೆ ಲೇವಿಯರಲ್ಲಿ ಯಾರೂ ಸಹ ಸೈನ್ಯಕ್ಕೆ ಸೇರಿರಲಿಲ್ಲ. ಲೇವಿಯರು ದೇವದರ್ಶನ ಮತ್ತು ಅದರ ಸಾಮಾಗ್ರಿಗಳ ಜವಾಬ್ದಾರಿಯನ್ನು ಹೊತ್ತಿದ್ದರು.

4. ಲೇವಿಯರ ಪಾಳೆಯವು ದೇವದರ್ಶನದ ಸುತ್ತಲೂ ಇತ್ತು ಮತ್ತು ಇಸ್ರಾಯೇಲರು ದೇವದರ್ಶನ ಮತ್ತು ಅದರ ಸಾಮಾಗ್ರಿಗಳ ಸಮೀಪಕ್ಕೆ ಬಾರದಂತೆ ಅವರು ಹಾಗೆ ಪಾಳೆಯವನ್ನು ಹಾಕಿಕೊಂಡಿದ್ದರು. ಅವರು ಒಂದು ವೇಳೆ ಸಮೀಪಿಸಿದ್ದಲ್ಲಿ ದೇವರ ಕೋಪವು ತಪ್ಪಿತಸ್ಥನ ವಿರುದ್ಧ ಬರುವುದಾಗಿತ್ತು.

5. ಎರಡು ಬಾರಿ ಮೋಶೆಯ ಮೂಲಕ ದೇವರು ಕೊಟ್ಟ ಆಜ್ಞೆಗಳಿಗೆ ಇಸ್ರಾಯೇಲರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದರು ಎಂಬುದನ್ನು ನಮಗೆ ತಿಳಿಸಲಾಗಿದೆ. ಮೊದಲು ಜನಗಣತಿಯ ಕುರಿತು (*ಇಸ್ರಾಯೇಲರು ಯೆಹೋವನು ಮೋಶೆಗೆ ಆಜ್ಞಾಪಿಸಿದ ಪ್ರಕಾರವೇ ಎಲ್ಲವನ್ನು ಮಾಡಿದರು,* 1:54), ನಂತರ ಗುಡಾರಗಳನ್ನು ಹಾಕಿಕೊಳ್ಳುವುದರ ಕ್ರಮದ ಕುರಿತು (*ಇಸ್ರಾಯೇಲರು ಯೆಹೋವನು ಮೋಶೆಗೆ ಆಜ್ಞಾಪಿಸಿದ್ದೆಲ್ಲಾದರ ಪ್ರಕಾರವೇ ಮಾಡಿ,* 2:34).

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ ಭಾಗದ ಉತ್ತರಗಳು**

1. ಅರಣ್ಯಕಾಂಡದ ಮೊದಲ ಎರಡು ಅಧ್ಯಾಯಗಳಲ್ಲಿರುವ ಇಸ್ರಾಯೇಲರ ಸಂಘಟನೆಯ ಕುರಿತು ಓದುವಾಗ ಅದು ನಮ್ಮ ಮನಸ್ಸಿನ ಮೇಲೆ ಬೀರುವ ಪ್ರಭಾವವೇನೆಂದರೆ ಅವರು ಸುವ್ಯವಸ್ತಿತರಾಗಿದ್ದರು. ಮೊದಲನೆಯದಾಗಿ ಜನಗಣತಿಯು ಅತ್ಯಂತ ಸುವ್ಯವಸ್ತಿತವಾಗಿ, ಕ್ರಮಬದ್ಧವಾಗಿ ಮತ್ತು ಪ್ರತಿನಿಧಿತ್ವವುಳ್ಳದ್ದಾಗಿ ನಡೆಯಿತು. ಎರಡನೆಯದಾಗಿ ಪಾಳೆಯವು ಒಂದು ಪರಿಪೂರ್ಣವಾದ ಸಮರೂಪತೆಯನ್ನು ಹೊಂದಿತ್ತು. ಆದರೆ ಈ ಕ್ರಮಬದ್ಧವಾದ ಹಾಗೂ ವ್ಯವಸ್ಥೆಯುಳ್ಳ ಸಂಘಟನೆಯ ಹಿಂದೆ ದೇವರಿದ್ದನು ಎಂಬುದನ್ನು ಸಹ ನಾವು ಕಾಣುತ್ತೇವೆ.

   ದಕ್ಷಿಣ ಭಾರತದ ದೇವಜನರಾದ ನಾವುಗಳು ಇದರಿಂದ ದೇವರು 'ಅವ್ಯವಸ್ತೆಯ ದೇವರಲ್ಲ' ಎಂಬುದನ್ನು ಕಲಿಯಬಹುದು (1 ಕೊರಿ. 14:33). ಪೌಲನು ಇನ್ನೂ ಮುಂದೆ ಕೊರಿಂಥದವರಿಗೆ ಬರೆಯುತ್ತಾ ಅವರ ಆರಾಧನೆಗಳಲ್ಲಿ ಎಲ್ಲವನ್ನೂ 'ಮರ್ಯಾದೆಯಿಂದಲೂ ಕ್ರಮವಾಗಿಯೂ' ಮಾಡಬೇಕೆಂದು ಅವರಿಗೆ ಹೇಳುತ್ತಾನೆ. ದೇವರು ವಿಶ್ವವನ್ನು ಸೃಷ್ಟಿಸಿದಾಗ 'ಕ್ರಮವನ್ನು' ಬಳಸಿದನು ಎಂದೂ ಸಹ ಸತ್ಯವೇದವು ನಮಗೆ ಹೇಳುತ್ತದೆ. ಹಾಗಾಗಿ ನಮ್ಮ ಸಭೆಯಲ್ಲಿನ ಜೀವನದ ಮತ್ತು ವೈಯಕ್ತಿಕ ಜೀವನದ ಎಲ್ಲಾ ವಿಷಯಗಳಲ್ಲಿ:ನಮ್ಮ ಸಭೆಯ ಆರಾಧನೆಗಳಲ್ಲಿ, ನಮ್ಮ ನಾಯಕತ್ವದಲ್ಲಿ, ನಮ್ಮ ಸೇವೆಗಳಲ್ಲಿ, ಹಣಕಾಸಿನ ಮತ್ತು ಇತರೆ ಸಂಪನ್ಮೂಲಗಳ ನಿರ್ವಹಣೆಗಳಲ್ಲಿ, ನಮ್ಮ ಕೌಟುಂಬಿಕ ಜೀವನದಲ್ಲಿ, ನಮ್ಮ ವೈಯಕ್ತಿಕ ಆತ್ಮಿಕ ಜೀವನ ಮತ್ತು ಇತ್ಯಾದಿಗಳಲ್ಲಿ ಒಳ್ಳೆಯ 'ಕ್ರಮವನ್ನು' ಹೊಂದಿರಬೇಕೆಂದು ದೇವರು ಅಪೇಕ್ಷಿಸುತ್ತಾನೆ.

2. ದೇವರ, ಮೋಶೆ ಮತ್ತು ಆರೋನರ ಹಾಗೂ ಜನರ ನಡುವಿನ ಸಂಬಂಧದ ಕುರಿತು ಅರಣ್ಯಕಾಂಡದ ಮೊದಲ ಎರಡು ಅಧ್ಯಾಯಗಳಲ್ಲಿ ಓದುವಾಗ ಅದರಲ್ಲಿ ಸಾಮರಸ್ಯ ಮತ್ತು ಸಹಕಾರದ ಅಂಶವು ನಮ್ಮ ಮನಸ್ಸಿನ ಮೇಲೆ ಪ್ರಭಾವವನ್ನು ಬೀರುತ್ತದೆ. ಮೋಶೆ/ಆರೋನ ಜನಗಣತಿಯನ್ನು ತೆಗೆದುಕೊಳ್ಳುವಂತೆ ಮತ್ತು ಗುಡಾರಗಳ ಕ್ರಮವನ್ನು ನೇಮಿಸುವಂತೆ ದೇವರು ಆಜ್ಞಾಪಿಸಿದನು. ಅವರು ಆತನ ಆಜ್ಞೆಗಳನ್ನು ಪ್ರಶ್ನಿಸಲಿಲ್ಲ. ಇಸ್ರಾಯೇಲರು ಮೋಶೆ ಮತ್ತು ಆರೋನರ ನಾಯಕತ್ವಗಳನ್ನು ಪ್ರಶ್ನಿಸಲಿಲ್ಲ. ದೇವರು ಅವರ ಮೂಲಕ ತಮ್ಮೊಂದಿಗೆ ಮಾತನಾಡುತ್ತಿದ್ದಾನೆ ಎಂಬುದನ್ನು ಅವರು ತಿಳಿದಿದ್ದರು. ದೇವರು ಮೋಶೆ ಮತ್ತು ಆರೋನರನ್ನು ಮಧ್ಯವರ್ತಿಗಳಾಗಿ ಅಂದರೆ ಪ್ರವಾದಿಗಳಾಗಿ ಉಪಯೋಗಿಸಿದನು ಎಂದು ಅವರು ಅಂಗೀಕರಿಸಿದ್ದರು. ಹಾಗಾಗಿ ಅವರು 'ಯೆಹೋವನು ಮೋಶೆಗೆ ಆಜ್ಞಾಪಿಸಿದ ಪ್ರಕಾರವೇ ಎಲ್ಲವನ್ನು ಮಾಡಿದರು'.

ದಕ್ಷಿಣ ಭಾರತದ ದೇವಜನರಾದ ನಾವುಗಳು ಇದರಿಂದ ಸಭೆಯಲ್ಲಿರುವ ನಾಯಕತ್ವದ ಕುರಿತು ಕಲಿಯಬಹುದು. ದೇವರು ಕೆಲವು ಜನರನ್ನು ಸಭೆಯಲ್ಲಿ ನಾಯಕರುಗಳಾಗಿ ಉಪಯೋಗಿಸುತ್ತಾನೆ. ಈ ನಾಯಕರುಗಳು ತಮ್ಮ ಕರೆಗೆ ನಂಬಿಗಸ್ತರಾಗಿ ಹಾಗೂ ದೇವರಿಗೆ ವಿಧೇಯರಾಗಿ ತಮ್ಮ ಕೆಲಸವನ್ನು ನಿರ್ವಹಿಸಬೇಕು. ಅದಲ್ಲದೆ, ವಿಶ್ವಾಸಿಗಳು ಇವರಿಗೆ ದೇವರೇ ಸ್ವತಃ ನಾಯಕತ್ವ ಸ್ಥಾನವನ್ನು ಕೊಟ್ಟಿದ್ದಾನೆ ಎಂದು ಅಂಗೀಕರಿಸುವಷ್ಟು ಸ್ಪಷ್ಟವಾದ ರೀತಿಯಲ್ಲಿ ಅವರು ಆತ್ಮಿಕ ನಾಯಕರುಗಳಾಗಿರಬೇಕು. ಆಗ ಮಾತ್ರ ಸಭೆಯಲ್ಲಿ ಸಾಮರಸ್ಯ ಮತ್ತು ಸಹಕಾರ ಇರುತ್ತದೆ. ಆಗ ಮಾತ್ರ ಸಭೆಯು ದೇವರ ಯೋಜನೆಯ ಪ್ರಕಾರ ತನ್ನ ಕೆಲಸವನ್ನು ನಿರ್ವಹಿಸಲು ಸಾಧ್ಯ.


**ಅರಣ್ಯಕಾಂಡ ಉತ್ತರಗಳು 2: ಇಸ್ರಾಯೇಲರಿಗೆ ಆದರ್ಶ**

**ಇ. ಪ್ರಶ್ನೆಗಳಿಗೆ ಉತ್ತರಗಳು**

1. ಇಸ್ರಾಯೇಲರ ಪಾಳೆಯದ ಮಧ್ಯದಲ್ಲಿ ದೇವದರ್ಶನ ಗುಡಾರವಿತ್ತು (ಅಧ್ಯಾಯ 2:1). ದೇವರು ತನ್ನ ಜನರ ಮಧ್ಯದಲ್ಲಿದ್ದನು ಎಂಬುದೇ ಇದರ ಮಹತ್ವವಾಗಿತ್ತು.

2. ಇಸ್ರಾಯೇಲರ ಪಾಳೆಯವನ್ನು ಯಾವ ರೀತಿಯಲ್ಲಿ ನಿಯೋಜಿಸಲಾಗಿತ್ತು ಎಂಬುದಕ್ಕೆ ಒಂದು ಸರಳವಾದ ಚಿತ್ರಣವು ಹೀಗಿದೆ (ಅಧ್ಯಾಯ 2); ಇದನ್ನು ಇತರೆ ರೀತಿಗಳಲ್ಲಿಯೂ ಸಹ ಚಿತ್ರಿಸಬಹುದು. ಮಧ್ಯದಲ್ಲಿರುವ ಆಯತಾಕಾರವು ದೇವದರ್ಶನ ಗುಡಾರವಾಗಿದೆ. ಹೊರಗಿನ ದೊಡ್ಡ ಆಯತಾಕಾರವು ಸುರಕ್ಷಿತವಾದ ಅಂತರವನ್ನು ಸೂಚಿಸುತ್ತದೆ – ಇದು ಲೇವಿಯರಿಂದ

**ಇಸ್ರಾಯೇಲ್ಯರು ಪಾಳೆಯದಲ್ಲಿ ಗುಡಾರಗಳನ್ನು ಹಾಕಿಕೊಳ್ಳುವ ಕ್ರಮ**
**(ಅರಣ್ಯಕಾಂಡ 2)**




ಆವರಿಸಲ್ಪಟ್ಟಿತ್ತು ಮತ್ತು ಯಾಜಕ ವರ್ಗಕ್ಕೆ ಸೇರದ ಗೋತ್ರಗಳು ಈ ಗಡಿಯಿಂದ ಹೊರಗೆ ತಮ್ಮ ಡೇರೆಗಳನ್ನು ಹಾಕಿಕೊಳ್ಳಬೇಕಾಗಿತ್ತು.

3. ಅಧ್ಯಾಯ 5 ಮೂರು ವಾಕ್ಯಭಾಗಗಳನ್ನು ಒಳಗೊಂಡಿದೆ. ಅವುಗಳು ಈ ಕೆಳಗಿನ ಸಮಸ್ಯೆಗಳ ಕುರಿತು ಮಾತನಾಡುತ್ತವೆ:

   1) ಸಾಂಕ್ರಾಮಿಕ ರೋಗದಿಂದ ಬಳಲುತ್ತಿದ್ದ ಅಥವಾ ಸಾಂಪ್ರದಾಯಿಕವಾಗಿ ಅಶುದ್ಧರಾದ ಇಸ್ರಾಯೇಲರಿಗೆ ಪಾಳೆಯದಲ್ಲಿ ಇರಲು ಅನುಮತಿಯಿರಲಿಲ್ಲ (5:1–3).

   2) ಇತರರಿಗೆ ಮೋಸ ಮಾಡಿ ದೇವರಿಗೆ ಅಪನಂಬಿಗಸ್ತರಾಗಿದ್ದ ಇಸ್ರಾಯೇಲರು ಪ್ರಾಯಶ್ಚಿತ್ತವನ್ನು ಸಲ್ಲಿಸಬೇಕಾಗಿತ್ತು (5:5–10).

   3) ಕೊನೆಯ ವಾಕ್ಯಭಾಗವು (5:11–31) ತನ್ನ ಹೆಂಡತಿಯು ತನಗೆ ಅಪನಂಬಿಗಸ್ತಳಾಗಿದ್ದಾಳೆ ಎಂದು ಗಂಡನು ಶಂಕಿಸಿದಾಗ ಏನು ಮಾಡಬೇಕು ಎಂಬುದರ ಕುರಿತಾಗಿದೆ.

   ಮೂರೂ ವಾಕ್ಯಭಾಗಗಳಲ್ಲಿ ಇಸ್ರಾಯೇಲರಲ್ಲಿ ಯಾವ ಅಶುದ್ಧತೆಯಾಗಲಿ ಅಥವಾ ಪಾಪವಾಗಲಿ ಇರಬಾರದು ಎಂಬ ಅಂಶವು ಸಾಮಾನ್ಯವಾಗಿ ಕಂಡುಬರುತ್ತದೆ. ಅವರು ಒಂದು ಪವಿತ್ರ ರಾಷ್ಟ್ರವಾಗಿರಬೇಕಿತ್ತು.

4. ದೇವದರ್ಶನ ಗುಡಾರದ ಪ್ರತಿಷ್ಠೆಯೇ ಅಧ್ಯಾಯ 7 ರ ಸನ್ನಿವೇಶವಾಗಿತ್ತು. ದೇವದರ್ಶನ ಗುಡಾರ ಮತ್ತು ಅದರ ಎಲ್ಲಾ ಸಾಮಾಗ್ರಿಗಳು ಉಪಯೋಗಿಸಲ್ಪಡುವ ಮುನ್ನ ಪರಿಶುದ್ಧ ಮಾಡಲ್ಪಡಬೇಕಿದ್ದವು. ಹನ್ನೆರಡು ದಿನಗಳ ಕಾಲ ಪ್ರತಿಯೊಂದು ಗೋತ್ರವನ್ನು ಪ್ರತಿನಿಧಿಸುತ್ತಾ ಇಸ್ರಾಯೇಲಿನ ನಾಯಕರುಗಳು ಪ್ರತಿಷ್ಠೆಯ ಕಾರ್ಯಕ್ಕಾಗಿ ತಮ್ಮ ಕಾಣಿಕೆಗಳನ್ನು ತಂದರು.

5. ಲೇವಿಯರು ಹೀಗೆ ಸಾಂಪ್ರದಾಯಿಕವಾಗಿ ಶುದ್ಧೀಕರಿಸಲ್ಪಟ್ಟು ತಮ್ಮ ಸೇವೆಗಾಗಿ ಪ್ರತ್ಯೇಕಿಸಲ್ಪಟ್ಟರು (ಅಧ್ಯಾಯ 8):

   1) ಮೊದಲು ಅವರ ಮೇಲೆ ವಿಶೇಷವಾದ ನೀರನ್ನು ಚಿಮುಕಿಸಿದರು, ವ. 7

   2) ನಂತರ ಅವರು ಸರ್ವಾಂಗ ಕ್ಷೌರ ಮಾಡಿಸಿಕೊಂಡು ತಮ್ಮ ಬಟ್ಟೆಗಳನ್ನು ಒಗೆದುಕೊಂಡರು, ವ. 7. ಈಗ ಅವರು ಸಾಂಪ್ರದಾಯಿಕವಾಗಿ ಶುದ್ಧರಾಗಿದ್ದರು.

   3) ಮೂರನೆಯದಾಗಿ, ಅವರಿಗಾಗಿ ಎರಡು ಎಳೆಯ ಹೋರಿಗಳನ್ನು ಮತ್ತು ಧಾನ್ಯವನ್ನು ಒಳಗೊಂಡ ಒಂದು ಬಲಿಯನ್ನು ಸಿದ್ಧಪಡಿಸಲಾಯಿತು, ವ 8.

   4) ನಾಲ್ಕನೆಯದಾಗಿ, ಅವರನ್ನು ಸಭೆಯ ಗುಡಾರದ ಮುಂದೆಯೂ ಹಾಗೂ ಇಸ್ರಾಯೇಲ್ ಸಮುದಾಯದ ಮುಂದೆಯೂ ಕರೆತರಲಾಯಿತು. ಇಸ್ರಾಯೇಲರು (ಬಹುಶಃ ಅವರ ನಾಯಕರುಗಳು, 7:2 ನ್ನು ಹೋಲಿಸಿರಿ) ಅವರ ಮೇಲೆ ತಮ್ಮ ಕೈಗಳನ್ನು ಇರಿಸಿದರು, ವ. 9–10. ಆರೋನನು ಇಸ್ರಾಯೇಲರ ಪರವಾಗಿ ಲೇವಿಯರನ್ನು ಯೆಹೋವನಿಗೆ ಒಂದು ಕಾಣಿಕೆಯಾಗಿ ಅರ್ಪಿಸಿದನು ಎಂಬುದನ್ನು ಇದು ಸೂಚಿಸುತ್ತದೆ, ವ 11.

   5) ಅಂತಿಮವಾಗಿ, ತಮಗಾಗಿ ಪ್ರಾಯಶ್ಚಿತ್ತ ಬಲಿಯಾಗಿ (ದೋಷಪರಿಹಾರಕ ಬಲಿ ಮತ್ತು ದಹನ ಬಲಿ) ಅರ್ಪಿಸಲ್ಪಡಲಿದ್ದ ಹೋರಿಗಳ ಮೇಲೆ ಲೇವಿಯರು ತಮ್ಮ ಕೈಗಳನ್ನಿರಿಸಿದರು, ವ. 12. ಇಸ್ರಾಯೇಲರ ಸಮಸ್ತ ಜೇಷ್ಠ ಪುತ್ರರ ಪರವಾಗಿ ಲೇವಿಯರು ದೇವರ ಕೈಗೆ ಒಪ್ಪಿಸಲ್ಪಟ್ಟರು ಎಂಬುದನ್ನು ಇದು ಸೂಚಿಸುತ್ತದೆ (ವ. 14–18). ಅದರ ಅರ್ಥ ಲೇವಿಯರು ದೇವದರ್ಶನ ಗುಡಾರದ ಸೇವೆಯಲ್ಲಿ ಯಾಜಕರುಗಳಿಗೆ ಸಹಾಯಕರಾಗಿ ಯೆಹೋವನಿಗೆ ಮಾತ್ರ ಸಮರ್ಪಿತರು ಎಂಬುದೇ ಆಗಿದೆ.

6. ಅಧ್ಯಾಯ 9:6–10 ರಲ್ಲಿ ಬಗೆಹರಿಸಲಾಗಿರುವ ಸಮಸ್ಯೆಯು ಯಾವುದೆಂದರೆ, ತಮ್ಮ ಸಾಂಪ್ರದಾಯಿಕವಾದ ಅಶುದ್ಧತೆಯ ನಿಮಿತ್ತ ಪಸ್ಕಹಬ್ಬದ ಆಚರಣೆಯಲ್ಲಿ ಭಾಗವಹಿಸಲಾಗದ ಜನರು ಏನು ಮಾಡಬೇಕು ಎಂಬುದರ ಕುರಿತಾಗಿದೆ.


7. ನಾನು ಅಧ್ಯಾಯ 9:15–23 ರ ಸಂದೇಶವನ್ನು ಹೀಗೆ ಸಾರಾಂಶಗೊಳಿಸುವೆನು:

   1) ದೇವದರ್ಶನ ಗುಡಾರದ ಮೇಲಿದ್ದ ಮೇಘವು ದೇವರ ಪ್ರತ್ಯಕ್ಷವಾದ ಪ್ರಸನ್ನತೆಯ ಸಂಕೇತವಾಗಿದೆ. ದೇವದರ್ಶನ ಗುಡಾರದ ಮೇಲೆ ಮೇಘವು ನೆಲೆಸಿದಾಗ ದೇವರು ತನ್ನ ಜನರೊಂದಿಗಿದ್ದನು.

   2) ಮೇಘವು ಮೇಲೆ ಏಳುವ ಮತ್ತು ಚಲಿಸುವ ಸಂಗತಿಯು ಇಸ್ರಾಯೇಲರನ್ನು ಅರಣ್ಯದಲ್ಲಿನ ಅಲೆದಾಟದಲ್ಲೆಲ್ಲಾ ದೇವರು ನಡೆಸಿದ ರೀತಿಯನ್ನು ತೋರಿಸುತ್ತದೆ.

   3) ವಚನ 23 ತಮಗೆ ಮೋಶೆಯ ಮೂಲಕ ತಿಳಿಸಲಾದ ದೇವರ ಮಾರ್ಗದರ್ಶನಗಳಿಗೆ ಇಸ್ರಾಯೇಲರು ವಿಧೇಯರಾದರು ಎಂಬುದನ್ನು ಒತ್ತಿ ಹೇಳುತ್ತದೆ. ಇಸ್ರಾಯೇಲರು ದೇವರು ತಮಗಾಗಿ ಹೊಂದಿದ್ದ ಆದರ್ಶವನ್ನು ಪಾಲಿಸಿದರು!

8. ಇಸ್ರಾಯೇಲರು ನಡೆದು ಸಾಗಬೇಕಾದ ಕ್ರಮದ ಒಂದು ಸರಳವಾದ ಚಿತ್ರಣವು ಹೀಗಿದೆ (10:11–28); ಇದನ್ನು ಬೇರೆ




ರೀತಿಯಲ್ಲಿಯೂ ಸಹ ಚಿತ್ರಿಸಬಹುದು.

9. ಅರಣ್ಯ 1;45; 2:34; 4:49; 5:4; 8:4, 20; 9:5, 23, ಈ ವಚನಗಳು ನಮಗೆ ಹೇಳುವಂತೆ 'ಇಸ್ರಾಯೇಲರಿಗಾಗಿ ದೇವರ ಆದರ್ಶವು' ಏನಾಗಿತ್ತೆಂದರೆ:

   1) ಇಸ್ರಾಯೇಲ್ ಮೋಶೆಯ ಮೂಲಕ ಆಜ್ಞಾಪಿಸಲ್ಪಟ್ಟ ಯೆಹೋವನ ಕ್ರಮಕ್ಕೆ ವಿಧೇಯರಾಗಬೇಕು.

   2) ಯೆಹೋವನು ಮೋಶೆಗೆ ಆಜ್ಞಾಪಿಸಿದಂತೆಯೇ ಎಲ್ಲವನ್ನೂ ಇಸ್ರಾಯೇಲ್ ಮಾಡಬೇಕು.

   3) ಇಸ್ರಾಯೇಲ್ ಯೆಹೋವನ ಕ್ರಮವನ್ನು ನಿಖರವಾಗಿ ಪಾಲಿಸಬೇಕು.

   ಇಸ್ರಾಯೇಲರಿಗೆ ವಾಗ್ದಾನ ದೇಶವು ಒಂದು ವಾಸ್ತವಿಕತೆಯಾಗಬೇಕಾದರೆ ಯೆಹೋವನು ಇಸ್ರಾಯೇಲರಿಂದ ಶಿಸ್ತು, ಸ್ವ–ನಿಯಂತ್ರಣ ಮತ್ತು ವಿಧೇಯತೆಯನ್ನು ಅಪೇಕ್ಷಿಸಿದನು ಎಂದು ಈ ವಚನಗಳು ವ್ಯಕ್ತಪಡಿಸುತ್ತವೆ. ಅವುಗಳು 'ಇಸ್ರಾಯೇಲರಿಗಾಗಿ ದೇವರ ಆದರ್ಶವನ್ನು' ಸಾರಾಂಶಗೊಳಿಸುತ್ತವೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –

2. –

3. 'ತನ್ನ ಜನರಿಗಾಗಿ ದೇವರ ಆದರ್ಶ' ಎಂಬಂತಹ ಸಂಗತಿಯು ಇಂದಿಗೂ ಸಹ ಇದೆ ಎಂದು ನನಗೆ ಅನ್ನಿಸುತದೆ. ದೇವರು ಇಸ್ರಾಯೇಲರಿಗಾಗಿ ಹೊಂದಿದ್ದ ಆದರ್ಶವು 'ಜೀವ ಮತ್ತು ಮರಣದ' ಪ್ರಶ್ನೆಗಳ ಕುರಿತು ಮಾತನಾಡುತ್ತವೆ, ಉದಾ:

   1) ಯೆಹೋವನು ಯಾರು?

   2) ನಮ್ಮ ಸಮುದಾಯದಲ್ಲಿ ಮತ್ತು ವೈಯಕ್ತಿಕ ಜೀವಿತಗಳಲ್ಲಿ ದೇವರಿಗೆ ಯಾವ ಸ್ಥಾನವನ್ನು ಕೊಡಬೇಕು?

   3) ನಮ್ಮ ವಾಗ್ದಾನ ದೇಶವನ್ನು, ಅಂದರೆ ಅಂತಿಮ ಗುರಿಯನ್ನು ಹೇಗೆ ತಲುಪಬೇಕು?

   4) ಈ ಲೋಕದ ಅಶುದ್ಧವಾದ ಮತ್ತು ಪಾಪಮಯ ವಿಷಯಗಳ ಕುರಿತು ಹೇಗೆ ನಡೆದುಕೊಳ್ಳಬೇಕು?

5) ದೇವರು ಹೇಗೆ ತನ್ನನ್ನು ನಮಗೆ ಪ್ರಕಟಪಡಿಸಿಕೊಳ್ಳುತ್ತಾನೆ ಮತ್ತು ಮಾರ್ಗದರ್ಶಿಸುತ್ತಾನೆ?

ಅರಣ್ಯಕಾಂಡದ ಮೊದಲ ಹತ್ತು ಅಧ್ಯಾಯಗಳಿಂದ ನಮಗೆ ಸಿಗುವ 'ದೇವರ ಆದರ್ಶದ' ಚಿತ್ರಣವು ಪ್ರತಿಯೊಂದು ವಿಷಯಗಳಲ್ಲಿಯೂ ನಮಗೆ ಅನ್ವಯವಾಗದಿರಬಹುದು. ಆದರೆ ನಮಗೆ ಅನ್ವಯಿಸುವ ಅದರ ಮುಖ್ಯ ನಿಯಮಗಳು ಯಾವವೆಂದರೆ:

- ನಮ್ಮ ಒಡಂಬಡಿಕೆಯ ಕರ್ತನು ಯಾರು ಎಂಬುದನ್ನು ಅರ್ಥಮಾಡಿಕೊಳ್ಳಬೇಕು: ಯೇಸು ಕ್ರಿಸ್ತನಲ್ಲಿ ತನ್ನನ್ನು ಪ್ರಕಟಿಸಿಕೊಂಡವನು
- ನಮ್ಮ ಜೀವಿತಗಳಲ್ಲಿರುವ ದೇವರ ಕೇಂದ್ರತೆ
- ನಾವು ಈ ಭೂಮಿಯ ಮೇಲೆ ಪರದೇಶವಾಸಿಗಳು ಮತ್ತು ಪ್ರವಾಸಿಗಳು ಎಂಬುದನ್ನು ಮನಗಂಡು ನಮ್ಮ ಕಣ್ಣುಗಳನ್ನು ಪರಲೋಕದ ಗುರಿಯ ಮೇಲೆ ಲಕ್ಷ್ಯವಿಡುವುದರ ಅವಶ್ಯ (ಇಬ್ರಿಯ. 11:13) ಮತ್ತು ನಮ್ಮ ಪೌರತ್ವವು ಪರಲೋಕದಲ್ಲಿದೆ ಎಂದು ಅರಿತುಕೊಳ್ಳುವುದು (ಫಿಲಿಪ್ಪಿ 3:20).
- ಆತನು ಬೆಳಕಿನಲ್ಲಿರುವಂತೆ ನಾವೂ ಸಹ ಬೆಳಕಿನಲ್ಲಿ ನಡೆಯುವುದು (1 ಯೋಹಾನ 1:7).
- ಪವಿತ್ರಾತ್ಮನಿಂದ ನಡೆಸಲ್ಪಡುವುದು.

ಅದಲ್ಲದೆ, ಮೇಲಿನ ಐದು ಪ್ರಶ್ನೆಗಳಿಗೆ ಅರಣ್ಯಕಾಂಡದ ಮೊದಲ ಹತ್ತು ಅಧ್ಯಾಯಗಳಿಂದಲೇ ಉತ್ತರಿಸುವುದು ಸಾಧ್ಯವಾಗದಿರಬಹುದು. ಆದರೆ ಈ ಎಲ್ಲಾ ಐದು ಪ್ರಶ್ನೆಗಳಿಗೂ ಮತ್ತು ಅದೇ ರೀತಿಯ ಇತರೆ 'ಜೀವ ಮತ್ತು ಮರಣದ' ಪ್ರಶ್ನೆಗಳಿಗೂ ಹೊಸ ಒಡಂಬಡಿಕೆಯ ಬೋಧನೆಗಳಲ್ಲಿ ಉತ್ತರವಿದೆ.

4. ಮೇಲಿನ ಉತ್ತರವನ್ನು ಗಮನಿಸಿರಿ.

**ಅರಣ್ಯಕಾಂಡ ಉತ್ತರಗಳು 3: ಸಿನಾಯಿಯಿಂದ ಮುಂದೆ ಹೋದದ್ದು; ಯೆಹೋವನಿಂದ ಲಾವಕ್ಕಿಗಳು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಜನಗಣತಿಯ ಕುರಿತು ದೇವರು ಮೋಶೆಗೆ ಮಾಡಿದ ಆಜ್ಞೆಗೂ ಹಾಗೂ ಸಿನಾಯಿ ಪರ್ವತದಲ್ಲಿದ್ದ ತಮ್ಮ ಪಾಳೆಯದಿಂದ ಇಸ್ರಾಯೇಲರು ಹೊರಡುವುದರ ನಡುವೆ ಇಪ್ಪತ್ತು ದಿನಗಳು ಕಳೆದಿದ್ದವು. ಅಧ್ಯಾಯ 1:1 ನ್ನು (ಈಜಿಪ್ಟ್ ದೇಶದಿಂದ ಹೊರಟ ನಂತರದ ಎರಡನೆಯ ವರ್ಷದ ಎರಡನೆಯ ತಿಂಗಳಿನ ಮೊದಲ ದಿವಸದಲ್ಲಿ) 10:11 ರೊಂದಿಗೆ (ಅದೇ ತಿಂಗಳಿನ ಇಪ್ಪತ್ತನೆಯ ದಿವಸದಲ್ಲಿ) ಹೋಲಿಸುವಾಗ ಈ ಸಮಾರೋಪವನ್ನು ತಲುಪಬಹುದು. ಹಾಗಾಗಿ ಆ ಇಪ್ಪತ್ತು ದಿನಗಳಲ್ಲಿ ಜನಗಣತಿಯ ಕಾರ್ಯವು ಪೂರ್ಣಗೊಂಡಿತ್ತು ಮತ್ತು ದೇವರ ಆಜ್ಞೆಗನುಸಾರವಾಗಿ ಪಾಳೆಯವು ಕ್ರಮವಾಗಿ ಹಾಕಲಾಗಿತ್ತು.

2. ಇಸ್ರಾಯೇಲರು ಮೇಘವನ್ನು ಹಿಂಬಾಲಿಸಿದ್ದರಿಂದ ಸಿನಾಯಿ ಪರ್ವತದಲ್ಲಿದ್ದ ತಮ್ಮ ಪಾಳೆಯದಿಂದ ಹೊರಟರು. ಮೇಘವು ದೇವದರ್ಶನ ಗುಡಾರದ ಮೇಲೆ ನೆಲೆಸಿತ್ತು. ಈಗ ಅದು ಮೇಲೆದ್ದು ಸಿನಾಯಿ ಪರ್ವತದಲ್ಲಿದ್ದ ಇಸ್ರಾಯೇಲರ ಪಾಳೆಯದಿಂದ ಮುಂದೆ ಹೊರಟಿತು.

3. ಅಧ್ಯಾಯ 11 ರಲ್ಲಿ ಎರಡು ಸಂಗತಿಗಳು ದೇವರಿಗೆ ಕೋಪವನ್ನೆಬ್ಬಿಸಿದವು. ಅವುಗಳು ಯಾವವೆಂದರೆ:

   ಮೊದಲು, ಇಸ್ರಾಯೇಲರು ಪ್ರಯಾಣದ ಕಷ್ಟದ ಕುರಿತು ದೂರಿದರು. ಅವರು ಆಗಲಷ್ಟೇ ತಮ್ಮ ಪ್ರಯಾಣವನ್ನು ಪ್ರಾರಂಭಿಸಿದ್ದರು.

   ನಂತರ, *ಅವರೊಳಗಿದ್ದ ಮಿಶ್ರ ಜನರು* ದೇವರು ಅವರಿಗೆ ಒದಗಿಸಿದ ಆಹಾರದ ಕುರಿತು ದೂರಿದರು. ಅತಿ ಬೇಗನೆ ಇಸ್ರಾಯೇಲರು ಸಹ ಅವರೊಂದಿಗೆ ಗೊಣಗುವುದರಲ್ಲಿ ಸೇರಿಕೊಂಡರು. ಪ್ರತಿದಿನ ಮನ್ನವನ್ನು ತಿನ್ನುವುದು ಆಯಾಸಕರವೆಂದು ಅವರು ಆಲೋಚಿಸಿದರು. ಅವರಿಗೆ ಮನ್ನದೊಂದಿಗೆ ಮಾಂಸವೂ ಸಹ ಬೇಕಾಗಿತ್ತು.

4. ಜನರ ದೂರುಗಳು ದೇವರಿಗೆ ಕೋಪವನ್ನೆಬ್ಬಿಸಿದಾಗ ಮೋಶೆಯು ಕಳವಳಗೊಂಡನು. ಆತನು ತನ್ನ ಜೀವಿತದ ಮೇಲೆ ಇದ್ದ ದೇವರ ಕರೆಯನ್ನು ಪ್ರಶ್ನಿಸಿದನು. ಅದಲ್ಲದೆ ತಾನು ದೇವರಿಗೆ ಇಷ್ಟವಿಲ್ಲದ ಯಾವುದಾದರೂ ಸಂಗತಿಯನ್ನು ಮಾಡಿದನೆಂದು ಆಲೋಚಿಸಿದನು. ನಂತರ ಆತನು ಎಲ್ಲಾ ಇಸ್ರಾಯೇಲರಿಗಾಗಿ ತಾನು ಹೊತ್ತ ಭಾರವುಳ್ಳ ಜವಾಬ್ದಾರಿಯನ್ನು ದೇವರಿಗೆ ವಿವರಿಸಿದನು: ಅವರನ್ನು ನಡೆಸುವುದು ('ಎತ್ತಿಕೊಂಡು ನಡೆಸಬೇಕೆಂದು') ಮತ್ತು ಅವರನ್ನು ಪೋಷಿಸುವುದು. ಆತನು ತನ್ನ ದುಃಖದಲ್ಲಿ ಅವರನ್ನು ಮುನ್ನಡೆಸಿದ್ದು ಮತ್ತು ಮನ್ನದೊಂದಿಗೆ ಅವರನ್ನು ಪೋಷಿಸಿದ್ದು ವಾಸ್ತವಿಕವಾಗಿ ದೇವರಾಗಿದ್ದನು ಎಂಬುದನ್ನು ಮರೆತನು. ಆತನು ಅಂತಿಮವಾಗಿ ತನ್ನನ್ನು ಕೊಲ್ಲುವುದರ ಮೂಲಕ ತನ್ನ ದುಃಖಕ್ಕೆ ಅಂತ್ಯ ಹೇಳಬೇಕೆಂದು ದೇವರಲ್ಲಿ ಕೇಳಿಕೊಂಡನು.

5. ಅಧಿಕ ಹೊರೆಯನ್ನು ಹೊತ್ತಿದ್ದ ಮೋಶೆಗೆ ದೇವರ ಪರಿಹಾರವೇನಾಗಿತ್ತೆಂದರೆ, ಆತನು ತನ್ನ ಮೇಲಿನ ಒತ್ತಡಗಳನ್ನು ಕಡಿಮೆ ಮಾಡಿಕೊಳ್ಳಲು ಮತ್ತು ನಾಯಕತ್ವದ ಜವಾಬ್ದಾರಿಗಳಲ್ಲಿ ಸಹಾಯ ಮಾಡಲು ಎಪ್ಪತ್ತು ಹಿರಿಯರನ್ನು ನೇಮಿಸಬೇಕು ಎಂಬುದಾಗಿದೆ.

6. ಇಸ್ರಾಯೇಲರಿಗೆ ತಿನ್ನಲು ಸಾಕಷ್ಟು ಮಾಂಸವನ್ನು ಒದಗಿಸುವೆನು ಎಂದು ದೇವರು ವಾಗ್ದಾನ ಮಾಡಿದಾಗ ಮೋಶೆಯು ದೇವರನ್ನು ನಂಬಲಿಲ್ಲ. ಅರಣ್ಯದಲ್ಲಿ 6,00,000 ಕಾಲಾಳುಗಳಿಗೆ ಸಾಕಾಗುವಷ್ಟು ಮಾಂಸವನ್ನು – ಅಥವಾ ಮೀನನ್ನು – ಒದಗಿಸಲು ಹೇಗೆ ಸಾಧ್ಯ? ಆದರೆ ದೇವರು ಆತನಿಗೆ ತನ್ನ ಬಲದ ಕುರಿತು ಆಶ್ವಾಸನೆಯನ್ನು ಕೊಟ್ಟನು ಮತ್ತು ಮೋಶೆಯು ಜನರಿಗೆ ಈ ವಿಷಯವನ್ನು ತಿಳಿಸಲು ಹೊರಟನು.

7. ಎಲ್ಲಾ ದೇವಜನರೂ ಪ್ರವಾದಿಗಳಾಗಬೇಕು ಮತ್ತು ದೇವರ ಆತ್ಮನು ಅವರೊಳಗೆ ಇರಬೇಕು ಎಂಬುದೇ ಮೋಶೆಗಿದ್ದ ಬಯಕೆಯಾಗಿತ್ತು.

8. ದೇವರು ಇಸ್ರಾಯೇಲರಿಗಾಗಿ ಎಲ್ಲವನ್ನು ಒದಗಿಸಿದಾಗ್ಯೂ ಅವರು ಆತನ ವಿರುದ್ಧ ದಂಗೆ ಎದ್ದ ನಿಮಿತ್ತ ಅವರ ಮೇಲೆ ಒಂದು ಶಿಕ್ಷೆಯಾಗಿ ಒಂದು ವ್ಯಾಧಿಯನ್ನು ಕಳುಹಿಸಿದನು. ದೇವರು ಅವರ ಆರೈಕೆ ಮಾಡುತ್ತಿದ್ದನು ಮತ್ತು ಅದ್ಭುತಕರವಾಗಿ ಅವರನ್ನು ಮನ್ನದಿಂದ ಪೋಷಿಸಿದನು. ಆದರೆ ಅವರಿಗೆ ಅದರಿಂದ ತೃಪ್ತಿಯಾಗಿರಲಿಲ್ಲ. ಅವರು ತಿನ್ನುವುದಕ್ಕಾಗಿ ಇನ್ನೂ ಹೆಚ್ಚಿನ ಭಕ್ಷ್ಯಗಳನ್ನು ಆಶಿಸಿದರು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಅಧ್ಯಾಯ 11 ರಲ್ಲಿರುವ ದೇವರ, ಮೋಶೆಯ ಮತ್ತು ಜನರ ನಡುವಿನ ಸಂಬಂಧವನ್ನು ಅರಣ್ಯಕಾಂಡದ ಮೊದಲ ಹತ್ತು ಅಧ್ಯಾಯಗಳಲ್ಲಿರುವ ಸಂಬಂಧದೊಂದಿಗೆ ಸಂಪೂರ್ಣವಾಗಿ ವ್ಯತ್ಯಾಸವಾಗಿದೆ. ಸಕಾರಾತ್ಮಕವಾಗಿ ಮತ್ತು ಸಾಮರಸ್ಯವುಳ್ಳ ಸಂಬಂಧದಲ್ಲಿ

ಈಗ ಉದ್ವಿಗ್ನತೆ ಮತ್ತು ದೋಷಾರೋಪಣೆ ಪ್ರವೇಶಿಸಿದೆ. ಅಧ್ಯಾಯ 11 ರಲ್ಲಿ ಜನರು ದೇವರ ಬಗ್ಗೆ ದೂರಿದರು ಮತ್ತು ಮೋಶೆ ತನ್ನ ಜೀವನದ ಮೇಲಿದ್ದ ದೇವರ ಕರೆಯನ್ನು ಪ್ರಶ್ನಿಸಿದನು. ಈ ನಾಟಕೀಯ ಬದಲಾವಣೆಗೆ ಕಾರಣಗಳೇನು? ನಾನು ಮೂರು ಕಾರಣಗಳ ಕುರಿತು ಆಲೋಚಿಸಬಲ್ಲೆ:

1) ಮೊದಲನೆಯದಾಗಿ, ಅಷ್ಟೊಂದು ಜನರು ಅರಣ್ಯದುದ್ದಕ್ಕೂ ನಡೆಯುವುದು ಕಷ್ಟಕರವಾಗಿದ್ದಿರಬಹುದು. ಇವುಗಳು ವಾಸ್ತವಿಕವಾಗಿ ಕಷ್ಟಕರ ಸಂಗತಿಗಳಾಗಿದ್ದವು ಮತ್ತು ಇಸ್ರಾಯೇಲರು – ಬುದ್ಧಿಹೀನರಾಗಿ – ಈ ಕಷ್ಟಗಳು ತಮ್ಮ ಮನಸ್ಸುಗಳ ಮೇಲೆ ನಕಾರಾತ್ಮಕವಾದ ಪರಿಣಾಮವನ್ನು ಬೀರಲು ಅನುಮತಿಸಿದರು.

2) ಎರಡನೆಯದಾಗಿ, ಇಸ್ರಾಯೇಲರು ದೇವರನ್ನು ಅರಿಯದ ಮತ್ತು ಆತನ ಒಡಂಬಡಿಕೆಯ ಭಾಗವಾಗಿರದ 'ಮಿಶ್ರ ಜನಾಂಗದ' ಪ್ರಭಾವಕ್ಕೆ ಒಳಗಾದರು. ಈ ದೈವಭಯವಿಲ್ಲದ ಪ್ರಭಾವವು ಇಸ್ರಾಯೇಲರು ಇನ್ನೂ ಹೆಚ್ಚಾಗಿ ಗೊಣಗುವಂತೆ ಮಾಡಿತು.

3) ಮೂರನೆಯದಾಗಿ, ಮೋಶೆಯು ಅಧಿಕ ಕೆಲಸವನ್ನು ಮಾಡಿ ಒತ್ತಡಕ್ಕೆ ಒಳಗಾಗಿದ್ದನು. ಇದು ಆತನು ನಿರುತ್ಸಾಹಗೊಳ್ಳುವಂತೆ ಮಾಡಿತು ಮತ್ತು ಆತನು ಸಂಶಯಿಸಲು ಪ್ರಾರಂಭಿಸಿದನು. ಆತನು ತನ್ನ ಸ್ವಂತ ಕರೆಯನ್ನು ಸಂಶಯಿಸಿದನು. ಆತನು ದೇವರ ಬಲ ಮತ್ತು ಸಾಧ್ಯತೆಗಳ ಕುರಿತು ಸಂಶಯಪಟ್ಟನು.

ದಕ್ಷಿಣ ಭಾರತದಲ್ಲಿರುವ ಸಭೆಯು ಇದರಿಂದ ಅನೇಕ ಸಂಗತಿಗಳನ್ನು ಕಲಿತುಕೊಳ್ಳಬಹುದು:

1) ದೇವರೊಂದಿಗಿರುವ ನಮ್ಮ ಸಂಬಂಧವನ್ನು ಕಷ್ಟಗಳು ಪರೀಕ್ಷಿಸುತ್ತವೆ: ನಮಗೆ ಎಲ್ಲವೂ ಅನುಕೂಲಕರವಾಗಿರುವಾಗ ದೇವರು ದೊಡ್ಡವನು ಎಂದು ನಮಗೆ ಅನ್ನಿಸುತ್ತದೆ. ಕಷ್ಟ ಮತ್ತು ಶೋಧನೆಗಳು ಬರುವಾಗ ನಾವು ದೇವರನ್ನು ಅದಕ್ಕೆ ದೂಷಿಸಬೇಕು ಅನ್ನಿಸುತ್ತದೆ. ಅದರ ಬದಲಾಗಿ ನಾವು ಕಷ್ಟಾರ್ಜಿತದ ತನ್ನ ಸ್ವಂತ ಅನುಭವವನ್ನು ರೋಮ್ ಸಭೆಯೊಂದಿಗೆ ಹೀಗೆ ಹಂಚಿಕೊಂಡ ಪೌಲನಂತೆ ಇರಬೇಕು: ನಮ್ಮ ಸಂಕಟಗಳಲ್ಲಿಯೂ ಸಂತೋಷಪಡುವವರಾಗಿರುತ್ತೇವೆ. ಏಕೆಂದರೆ ಸಂತೋಷವು ತಾಳ್ಮೆಯನ್ನುಂಟುಮಾಡುತ್ತದೆಂದೂ ತಾಳ್ಮೆಯು ಸದ್ವರ್ತನೆಯನ್ನೂ ಸದ್ವರ್ತನೆಯು ನಿರೀಕ್ಷೆಯನ್ನೂ ಉಂಟುಮಾಡುತ್ತದೆಂದು ಬಲ್ಲೆವು. ಈ ನಿರೀಕ್ಷೆಯು ನಮ್ಮನ್ನು ಆಶಾಭಂಗಪಡಿಸುವುದಿಲ್ಲ. ಏಕೆಂದರೆ ದೇವರು ನಮಗೆ ಅನುಗ್ರಹಿಸಿರುವ ಪವಿತ್ರಾತ್ಮನ ಮೂಲಕ ನಮ್ಮ ಹೃದಯಗಳಲ್ಲಿ ತನ್ನ ಪ್ರೀತಿಯನ್ನು ಧಾರಾಳವಾಗಿ ಸುರಿಸಿದ್ದಾನೆ (ರೋಮಾ. 5:3–5).

2) ಕಷ್ಟಗಳು ನಮ್ಮ ನಾಯಕರುಗಳೊಂದಿಗಿರುವ ಸಂಬಂಧವನ್ನು ಸಹ ಪರೀಕ್ಷಿಸುತ್ತವೆ: ದೇವರು ಇಸ್ರಾಯೇಲರಿಗೆ ಒದಗಿಸಿದ ಆಹಾರದ ಕುರಿತು ಅವರು ಅಸಂತೋಷಗೊಂಡಾಗ ಮೋಶೆಗೆ ದೂರಿದರು (ವ. 13) ಮತ್ತು ಅವರಿಗೆ ಮಾಂಸವನ್ನು ಕೊಡುವಂತೆ ಕೇಳಿಕೊಂಡರು. ಇದು ಸಭೆಯ ಸನ್ನಿವೇಶದಲ್ಲಿಯೂ ಆಗಾಗ್ಗೆ ನಡೆಯುತ್ತದೆ: ಸಭಾಪಾಲಕರು ತಮ್ಮ ಶಕ್ತಿಮೀರಿ ನಮಗೆ ಸಹಾಯ ಮಾಡಿದಾಗ್ಯೂ ನಾವು ನಮ್ಮ ಸಮಸ್ಯೆಗಳಿಗಾಗಿ ಅವರನ್ನು ದೂಷಿಸುತ್ತೇವೆ.

3) ದೇವರನ್ನು ಸೇವಿಸುವ ನಮ್ಮ ಕರೆಯನ್ನು ಕಷ್ಟಗಳು ಪರೀಕ್ಷಿಸುತ್ತವೆ: ಮೋಶೆಯು ಕಷ್ಟಗಳನ್ನು ಎದುರಿಸಿದಾಗ ತನ್ನ ಜೀವಿತದ ಮೇಲಿದ್ದ ದೇವರ ಕರೆಯನ್ನು ಸಂಶಯಿಸಿದನು. ಅನೇಕ ದೇವಸೇವಕರು – ಸತ್ಯವೇದದಲ್ಲಿಯೂ ಹಾಗೂ ಸಭಾ ಇತಿಹಾಸದುದ್ದಕ್ಕೂ – ಮೋಶೆಯಂತೆಯೇ ಪ್ರತಿಕ್ರಿಯಿಸಿದ್ದಾರೆ. ಕಷ್ಟಾರ್ಜಿತವು ಬರುವಾಗ, ದೇವರನ್ನು ನನ್ನನ್ನು ಸೇವೆಗೆ ಕರೆದಿದ್ದಾನೆ ಎಂದು ನಾನು ತಪ್ಪಾಗಿ ತಿಳಿದುಕೊಂಡೆನಲ್ಲಾ ಎಂದು ನಾವು ಭಾವಿಸುತ್ತೇವೆ. ತನ್ನ ಎಲ್ಲಾ ಕಷ್ಟಾರ್ಜಿದ ಹೊರತಾಗಿಯೂ ಪೌಲನು ನಿರುತ್ಸಾಹ ಮತ್ತು ಸಂಶಯದ ಬಲೆಗೆ ಸಿಕ್ಕಿ ಬೀಳಲಿಲ್ಲ. ಅದಕ್ಕೆ ಬದಲಾಗಿ ಆತನು ಕೊರಿಂಥ ಸಭೆಗೆ ಹೀಗೆ ಬರೆದನು: *ಮಣ್ಣಿನ ಘಟಕಗಳಲ್ಲಿರುವ ಈ ನಿಕ್ಷೇಪವು ನಮ್ಮಲ್ಲಿರುವ ಅತ್ಯಧಿಕವಾದ ಬಲವು ನಮ್ಮಿಂದಲ್ಲದೇ ದೇವರಿಂದಲೇ ಬಂದದ್ದಾಗಿದೆ ಎಂಬುದನ್ನು ತೋರಿಸುತ್ತದೆ.ಸರ್ವವಿಧದಲ್ಲಿಯೂ ನಮಗೆ ಇಕ್ಕಟ್ಟು ಇದ್ದರೂ ನಾವು ಸಂಕಟ ಪಡುವವರಲ್ಲ, ಅಂದರೆ ಜಜ್ಜಲ್ಪಟ್ಟಿಲ್ಲ, ನಾವು ದಿಕ್ಕು ಕಾಣದವರಾಗಿದ್ದರೂ ನಿರಾಶೆ ಹೊಂದಲಿಲ್ಲ. ಹಿಂಸಿಸಲ್ಪಟ್ಟರೂ ಕೈಬಿಡಲ್ಪಟ್ಟವರಲ್ಲ, ದಬ್ಬಲ್ಪಟ್ಟವರಾದಾಗ್ಯೂ ನಮ್ಮ ಪ್ರಾಣ ನಷ್ಟವಾಗಲಿಲ್ಲ. ಯೇಸುವಿನ ಜೀವವು ನಮ್ಮಲ್ಲಿ ಪ್ರಕಟಿಸಲ್ಪಡುವ ಹಾಗೆ ಆತನ ಮರಣವನ್ನು ನಾವು ಯಾವಾಗಲೂ ನಮ್ಮ ದೇಹದಲ್ಲಿ ಅನುಭವಿಸುವವರಾಗಿರುತ್ತೇವೆ* (2 ಕೊರಿ. 4:7–10).

4) ಕಷ್ಟಗಳು ಒತ್ತಡ ಮತ್ತು ನಿರುತ್ಸಾಹವನ್ನು ಉಂಟು ಮಾಡಿ ನಾವು ಆತ್ಮಿಕ ವಿಷಯಗಳಲ್ಲಿನ ದೃಷ್ಟಿಕೋನವನ್ನು ಕಳೆದುಕೊಳ್ಳುವಂತೆ ಮಾಡಬಹುದು: ಮೋಶೆಯು ತನ್ನ ದೃಷ್ಟಿಕೋನವನ್ನು ಕಳೆದುಕೊಂಡು ಇಸ್ರಾಯೇಲರನ್ನು ಹೊರುತ್ತಾ, ನಡೆಸುತ್ತಾ ಪೋಷಿಸಿದವನು *ತಾನು* ಅಂದುಕೊಂಡನು. ವಾಸ್ತವಿಕವಾಗಿ ಹೇಳಬೇಕಾದರೆ ಈಜಿಪ್ಟಿನಿಂದ ನಿರ್ಗಮನವಾದಗಿನಿಂದ ಇವನ್ನೆಲ್ಲಾ ಮಾಡಿದ್ದು ದೇವರಾಗಿದ್ದನು. ಆದರೆ ಒತ್ತಡ ಮತ್ತು ನಿರುತ್ಸಾಹವು *ನಾವು* ದೇವರ ಕೆಲಸವನ್ನು ಮಾಡುತ್ತಿದ್ದೇವೆಂದು ನಾವು ಆಗಾಗ್ಗೆ ಭಾವಿಸುವಂತೆ – ಮತ್ತು ಆಲೋಚಿಸುವಂತೆ – ಮಾಡುತ್ತದೆ. ನಾವು ದೇವರನ್ನು ಮರೆತುಬಿಡುತ್ತೇವೆ ಮತ್ತು ನಮ್ಮಲ್ಲೇ ನಾವು ಸಂಪೂರ್ಣವಾಗಿ ಸಿಲುಕಿಕೊಳ್ಳುತ್ತೇವೆ. ಅದರ ಬದಲಾಗಿ ನಾವು ಪೇತ್ರನ ಬುದ್ಧಿಮಾತನ್ನು ಪಾಲಿಸಬೇಕು: *ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ. ಆತನು ನಿಮಗೋಸ್ಕರ ಚಿಂತಿಸುತ್ತಾನೆ* (1 ಪೇತ್ರ. 5:7).

5) ದೇವಭಯವಿಲ್ಲದ ಜನರು ಸಭೆಯ ವಿಷಯಗಳ ಕುರಿತು ಬೀರುವ ಪ್ರಭಾವದ ಕುರಿತು ಎಚ್ಚರ ವಹಿಸಬೇಕು: ಇಸ್ರಾಯೇಲರು 'ಮಿಶ್ರ ಜನಾಂಗದವರ' ಆಶೆಯನ್ನು ಗಮನಿಸಿದರು. ಹಾಗಾಗಿ ಅವರೂ ಸಹ ಮಾಂಸಕ್ಕಾಗಿ ಆಶೆಪಟ್ಟರು ಮತ್ತು ತಮ್ಮ ಮೇಲೆ ದೇವರ ಕೋಪವನ್ನು ತಂದುಕೊಂಡರು. ದೇವಜನರಾದ ನಾವು ಇಂದು ಹೊರಗಿನ ಪ್ರಭಾವಗಳ ಅಪಾಯದ ಕುರಿತು ಎಚ್ಚರವಾಗಿರಬೇಕು. ಯೋಹಾನನು ಹೀಗೆ ಬರೆಯುತ್ತಾನೆ: *ಪ್ರಿಯ ಸ್ನೇಹಿತನೆ, ನೀನು ಕೆಟ್ಟದ್ದನ್ನು ಅನುಸರಿಸದೆ ಒಳ್ಳೆಯದನ್ನು ಅನುಸರಿಸು* (3 ಯೋಹಾನ 11). ಪೌಲನು ರೋಮ್‌ನಲ್ಲಿದ್ದ ಸಭೆಗೆ ಕೊಟ್ಟ ಸಲಹೆಯನ್ನು ಸಹ ನಾವು ಪಾಲಿಸಬೇಕು: *ಈ ಕಾಲದ ಭಾವನೆಗೆ ಹೊಂದಿಕೊಳ್ಳದೇ ನಿಮ್ಮ ಮನಸ್ಸನ್ನು ಮಾರ್ಪಡಿಸಿಕೊಂಡು ನವೀಕರಿಸಿಕೊಳ್ಳಿರಿ. ಆಗ ನೀವು ಉತ್ತಮವಾದ, ಮೆಚ್ಚುಗೆಯಾಗಿರುವಂಥ ಮತ್ತು ಪರಿಪೂರ್ಣವಾದ ದೇವರ ಚಿತ್ತವು ಯಾವುದು ಎಂಬುದನ್ನು ತಿಳಿದುಕೊಳ್ಳುವಿರಿ* (ರೋಮಾ. 12:2).

2. ಅಧ್ಯಾಯ 11 ರಲ್ಲಿ ದೇವರು ಮೋಶೆಗೆ ಎಪ್ಪತ್ತು ನಾಯಕರುಗಳನ್ನು ಒದಗಿಸಿದನು ಎಂಬುದನ್ನು ಕಾಣುತ್ತೇವೆ.

ಅದನ್ನು ಹೀಗೆ ಮಾಡಲಾಯಿತು:

- ಮೋಶೆಯು ಅಧಿಕ ಭಾರವನ್ನು ಹೊತ್ತಿರುವುದನ್ನು ದೇವರು ಕಂಡನು ಮತ್ತು ಆತನಿಗೆ ಸಹಾಯ ಮಾಡಲು ಸೂಕ್ತ ವ್ಯಕ್ತಿಗಳನ್ನು ನೇಮಿಸುವುದೇ ಅದಕ್ಕಿದ್ದ ಏಕಮಾತ್ರ ಪರಿಹಾರವಾಗಿತ್ತು.
- ಮೋಶೆಯು ಎಪ್ಪತ್ತು ಹಿರಿಯರನ್ನು ಗುರುತಿಸಲು ಹೇಳಿ ಆತನಿಗೆ ಎರಡು ಷರತ್ತುಗಳನ್ನು ನೀಡಿದನು: ಮೊದಲನೆಯದು, ಅವರನ್ನು ಮೋಶೆಯು ಈ ಹಿಂದೆಯೂ ತಿಳಿದವನಾಗಿರಬೇಕು. ಎರಡನೆಯದು, ಅವರನ್ನು ಜನರು ಈಗಾಗಲೇ ನಾಯಕರುಗಳೆಂದು ಮತ್ತು ತಮ್ಮ ಮೇಲಿನ ಉದ್ಯೋಗಸ್ಥರೆಂದು ಗುರುತಿಸಿರಬೇಕು.
- ಮೋಶೆಯು ಎಪ್ಪತ್ತು ಹಿರಿಯರನ್ನು ಆರಿಸಿಕೊಂಡು ದೇವರ ಮುಂದೆ ಕರೆತಂದನು. ಇದು ಒಂದು ರೀತಿಯ 'ನೇಮಕಾತಿಯಾಗಿದೆ'.
- ದೇವರು ಅವರನ್ನು ಆಶೀರ್ವದಿಸುವುದರ ಮೂಲಕ ಮೋಶೆಯ ಆಯ್ಕೆಯನ್ನು ಧೃಢೀಕರಿಸಿದನು. ಆತನು ಮೋಶೆಯ ಮೇಲಿದ್ದ ಆತ್ಮನನ್ನು ತೆಗೆದು ಎಪ್ಪತ್ತು ಹಿರಿಯರ ಮೇಲೆ ಇಟ್ಟನು. ದೇವರು ಅವರನ್ನು 'ಮೋಶೆಯ ಆತ್ಮನನ್ನು' ಹೊಂದಿದ ನಾಯಕರುಗಳನ್ನಾಗಿ ಮಾಡಿದನು.

3. ಈ ಕಥೆಯಿಂದ ನಾವು ಏನನ್ನು ಕಲಿತುಕೊಳ್ಳಬಹುದು?

- ಸಭೆಯಲ್ಲಿ 'ಏಕಪಾತ್ರಾಭಿನಯ' ಮಾಡುವ ಯಾವ ಅವಶ್ಯವಿಲ್ಲ. ಸಭೆಯ ನಾಯಕರುಗಳಾದ ನಮಗೆ ಸೇವೆಯಲ್ಲಿ ಸಹಾಯ ಮಾಡಲು ನಮ್ಮೊಂದಿಗೆ ಇತರೆ ನಾಯಕರುಗಳಿರುವ ಅವಶ್ಯವಿದೆ ಎಂಬುದನ್ನು ದೇವರು ತಿಳಿದಿದ್ದಾನೆ.
- ನಾವು ಅಂತಹ ನಾಯಕರುಗಳನ್ನು ನೇಮಿಸುವಾಗ ಆ ವ್ಯಕ್ತಿ ಅಥವಾ ವ್ಯಕ್ತಿಗಳ ಕುರಿತು ಮುಂಚಿನಿಂದಲೂ ತಿಳಿದುಕೊಂಡವರಾಗಿರಬೇಕು.
- ಸಭೆಯ ವಿಶ್ವಾಸಿಗಳೂ ಸಹ ಅವರನ್ನು ತಿಳಿದಿರಬೇಕು ಮತ್ತು ಅವರ ಕುರಿತು ಸಮರ್ಥ ನಾಯಕರು ಎಂಬ ಭರವಸೆ ಇರಬೇಕು.
- ಅವರಿಗೆ ನಾಯಕತ್ವದ ಪೂರ್ವ ಅನುಭವವಿರಬೇಕು.
- ನಾವು ಹೊಸ ನಾಯಕರನ್ನು ಬಹಿರಂಗವಾಗಿ ಯಾವುದಾದರೂ ರೀತಿಯ 'ನೇಮಕದ' ಅಥವಾ 'ಪ್ರತಿಷ್ಠೆಯ' ಸಮಾರಂಭದಲ್ಲಿ ಅಂಗೀಕರಿಸಬೇಕು.
- ದೇವರು ಅವರನ್ನು ಆಶೀರ್ವದಿಸಿ, ಪವಿತ್ರಾತ್ಮನಿಂದ ತುಂಬಿಸಿ ಸಭೆಯ ಪ್ರಯೋಜನಕ್ಕಾಗಿ ಮತ್ತು ತನ್ನ ರಾಜ್ಯದ ಮಹಿಮೆಗಾಗಿ ಅವರನ್ನು ಉಪಯೋಗಿಸುವನು ಎಂದು ಪೂರ್ಣವಾಗಿ ಅಪೇಕ್ಷಿಸಬೇಕು.

**ಅರಣ್ಯಕಾಂಡ ಉತ್ತರಗಳು 4: ಮಿರ್ಯಾಮಳು ಮತ್ತು ಆರೋನನು ಮೋಶೆಯನ್ನು ವಿರೋಧಿಸಿದ್ದು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಮಿರ್ಯಾಮಳು ಮತ್ತು ಆರೋನನು ಮೋಶೆಯ ಕೂಷ್ ದೇಶದ ಹೆಂಡತಿಯ ನಿಮಿತ್ತವಾಗಿ ಆತನ ವಿರುದ್ಧ ಮಾತನಾಡಿದರು. ಆದರೆ ಅವರು ಮೋಶೆಗೆ ವಿರುದ್ಧವಾಗಿ ಮಾತನಾಡಿದ್ದರ ಹಿಂದಿನ ನಿಜವಾದ ಕಾರಣವು ಅಸೂಯೆಯಾಗಿರಬಹುದು. ಅವರು ಮೋಶೆಯ ಪ್ರವಾದನಾ ವರದ ನಿಮಿತ್ತ ಹಾಗೂ ಆತನಿಗೆ ದೇವರೊಂದಿಗಿದ್ದ ವಿಶೇಷವಾದ ಸಂಬಂಧದ ನಿಮಿತ್ತ ಆತನ ವಿರುದ್ಧ ಹೊಟ್ಟೆಕಿಚ್ಚುಪಟ್ಟಿರಬಹುದು.

2. ದೇವರು ಮೋಶೆಯೊಂದಿಗಿನ ತನ್ನ ಸಂಬಂಧವನ್ನು ಹೀಗೆ ವಿವರಿಸಿದನು:

   ಮೋಶೆಯು ದೇವರ ಸೇವಕನಾಗಿದ್ದು ಸಮಸ್ತ ಇಸ್ರಾಯೇಲರಲ್ಲಿ ದೇವರಿಗೆ ನಂಬಿಗಸ್ತನಾಗಿ ಸೇವೆ ಮಾಡಿದ್ದನು.

   ದೇವರು ಬೇರೆ ಯಾವ ಪ್ರವಾದಿಗಳಿಗೂ ಪ್ರಕಟಿಸದಷ್ಟು ನಿಕಟವಾಗಿ ತನ್ನನ್ನು ಮೋಶೆಗೆ ಪ್ರಕಟಿಸಿಕೊಂಡನು: ಆತನು ಮುಖಾಮುಖಿಯಾಗಿ ಆತನೊಂದಿಗೆ ಸ್ಪಷ್ಟವಾಗಿ ಮಾತನಾಡಿದನು ಮತ್ತು ಅತ್ಯಂತ ವೈಯಕ್ತಿಕವಾಗಿ ತನ್ನನ್ನು ಮೋಶೆಗೆ ತೋರಿಸಿಕೊಂಡನು.

3. ದೇವರು ಮಿರ್ಯಾಮಳಿಗೆ ಕುಷ್ಠವನ್ನು ಬರಮಾಡುವುದರ ಮೂಲಕ ಶಿಕ್ಷಿಸಿದನು. ದೇವರು ಆರೋನನನ್ನು ಶಿಕ್ಷಿಸದೆ ಯಾಕೆ ಆಕೆಯನ್ನು ಮಾತ್ರ ಶಿಕ್ಷಿಸಿದನು ಎಂಬುದರ ಕುರಿತು ಪಠ್ಯದಲ್ಲಿ ಸ್ಪಷ್ಟವಾಗಿಲ್ಲ. ಆದರೆ ಬಹುಶಃ ಆಕೆಯು ಮೋಶೆಯನ್ನು ವಿರೋಧಿಸುವವರ ನಾಯಕಿಯಾಗಿದ್ದರಬಹುದು ಎಂದು ತೋರುತ್ತದೆ (ವ. 1 ರಲ್ಲಿ ಆರೋನನ ಹೆಸರಿಗಿಂತಲೂ ಮೊದಲು ಆಕೆಯ ಹೆಸರನ್ನು ಉಲ್ಲೇಖಿಸಲಾಗಿದೆ). ಅದಲ್ಲದೆ ಆಕೆಯು ಇಬ್ಬರಿಗೂ ಹಿರಿಯ ಸಹೋದರಿಯಾದ್ದರಿಂದ ಬಹುಶಃ ದೇವರು ಆಕೆಯ ತಮ್ಮನಾದ ಆರೋನನಿಗಿಂತಲೂ ಆಕೆಯಿಂದ ಹೆಚ್ಚಿನ ನಿರೀಕ್ಷೆಯಿಟ್ಟಿದ್ದಿರಬಹುದು. ಆದರೆ ಖಂಡಿತವಾಗಲೂ ಆಕೆಯ ಸ್ತ್ರೀತನವು ಆ ಶಿಕ್ಷೆಗೆ ಕಾರಣವಾಗಿರಲಿಕ್ಕಿಲ್ಲ. ಸತ್ಯವೇದದಲ್ಲಿ ಎಲ್ಲಿಯೂ ಸಹ ದೇವರು ಪುರುಷರಿಗಿಂತ ಹೆಚ್ಚಾಗಿ ಸ್ತ್ರೀಯರನ್ನು ಶಿಕ್ಷಿಸಲು ಬಯಸುವುದನ್ನು ನಾವು ಕಾಣುವುದಿಲ್ಲ.

4. ದೇವರ ಶಿಕ್ಷೆಗೆ ಮೋಶೆ ತೋರಿದ ಪ್ರತಿಕ್ರಿಯೆಯು ಆಕೆಯ ಪರವಾಗಿ ಮಾಡಿದ ಪ್ರಾರ್ಥನೆಯಾಗಿದೆ. ದೇವರು ಆಕೆಯನ್ನು ಕುಷ್ಠರೋಗದಿಂದ ಗುಣಪಡಿಸುವಂತೆ ಗೋಳಿಟ್ಟನು.

5. ಮಿರ್ಯಾಮಳು ಎಲ್ಲರಿಂದ ಪ್ರತ್ಯೇಕವಾಗಿ ಪಾಳೆಯದ ಹೊರಗೆ ಏಳು ದಿನಗಳ ಕಾಲ ಕಳೆಯಬೇಕಾಯಿತು. ವಚನ 14 ರಲ್ಲಿ ಆಕೆಯ ಶಿಕ್ಷೆಯು ಆಕೆಗೆ ಅಗೌರವವನ್ನು ತಂದಿದೆ ಎಂದು ದೇವರು ಅರ್ಥೈಸುತ್ತಾನೆ. ಖಂಡಿತವಾಗಲೂ ದೇವರು ತಕ್ಷಣವಾಗಿ ಮೋಶೆಯ ಪ್ರಾರ್ಥನೆಗೆ ಉತ್ತರವನ್ನು ನೀಡಿ ಆಕೆಯನ್ನು ಗುಣಪಡಿಸಿದನು. ಆದರೆ ಒಬ್ಬ ವ್ಯಕ್ತಿಯು ಅಶುದ್ಧವಾದಾಗ ಇತರೆ ಜನರಿಂದ ಪ್ರತ್ಯೇಕವಾಗಿ ಏಳು ದಿನಗಳ ಕಾಲ ಜೀವಿಸಬೇಕೆಂದು ಧರ್ಮಶಾಸ್ತ್ರವು ಹೇಳಿತು. ಹಾಗಾಗಿ ಆಕೆಯ ಏಳು ದಿನಗಳ ಪ್ರತ್ಯೇಕತೆಯು ಒಂದು ಅಗೌರವದ ಸಂಕೇತವೂ ಹಾಗೂ ಶುದ್ಧೀಕರಣದ ಕುರಿತಾದ ಧರ್ಮಶಾಸ್ತ್ರದ ಆಜ್ಞೆಯ ಪಾಲನೆಯೂ ಸಹ ಆಗಿದೆ. ಮಿರ್ಯಾಮಳ ಪ್ರತ್ಯೇಕತೆಯು ಇಸ್ರಾಯೇಲರ ಪ್ರಯಾಣಕ್ಕೆ ತಡೆ ಒಡ್ಡಿತು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಇಡೀ ವಾಕ್ಯಭಾಗದ ಹಿನ್ನಲೆಯಲ್ಲಿ ವಚನ 12:3 ನ್ನು ಅರ್ಥಮಾಡಿಕೊಳ್ಳಲು ಎರಡು ಮಾರ್ಗಗಳುಂಟು (ನಾನು ವೈಯಕ್ತಿಕವಾಗಿ ಎರಡನೆಯ ಮಾರ್ಗವನ್ನು ಆರಿಸಿಕೊಳ್ಳುತ್ತೇನೆ):

   1) ಎಲ್ಲಾ ಅನುವಾದಕರು ಅದರ ಹಿಬ್ರೂ ಪದವನ್ನು 'ದೀನನು' ಎಂದು ಅರ್ಥಮಾಡಿಕೊಂಡಿರುವುದರಿಂದ (ಅದರ ಮೂಲ ಅರ್ಥವು 'ಬಲವಂತ ಮಾಡಲ್ಪಟ್ಟ' ಅಥವಾ 'ತಲೆ ಬಾಗಿದ' ಎಂಬುದಾಗಿದೆ) ಈ ಅನುವಾದವನ್ನು ಆರಿಸಿಕೊಳ್ಳಬೇಕು. 'ದೀನನಾದ' ಮೋಶೆಯು (ಸಂಪ್ರದಾಯದ ಪ್ರಕಾರ ಅರಣ್ಯಕಾಂಡದ ಲೇಖಕನು) ತನ್ನನ್ನು ಈ ರೀತಿಯಾಗಿ ಹೊಗಳಿಕೊಳ್ಳುವುದು ಆಶ್ಚರ್ಯವೆನಿಸಿದರೂ ಈ ಅನುವಾದವನ್ನು ಆರಿಸಿಕೊಳ್ಳಬೇಕು.

   2) ಈ ವಾಕ್ಯಭಾಗದ ಹಿನ್ನಲೆಯಲ್ಲಿ 'ದುಃಖಿತ' ಎಂಬ ಅನುವಾದವು ಹೆಚ್ಚು ಅರ್ಥವನ್ನು ಕೊಡುವುದರಿಂದ ಈ ಅನುವಾದವನ್ನು ಆರಿಸಿಕೊಳ್ಳಬೇಕು (ಈ ಅನುವಾದವನ್ನು ಯಾವ ಅನುವಾದಕರೂ ಸಹ ಬಳಸದಿದ್ದಾಗ್ಯೂ ಅದರ ಹಿಬ್ರೂ ಪದದ ಅನುವಾದವು ಇದೇ ಆಗಿರುವ ಸಾಧ್ಯತೆ ಹೆಚ್ಚು). ಅಧ್ಯಾಯ 11 ರಲ್ಲಿ ಇಸ್ರಾಯೇಲರು ಆತನ ಕುರಿತು ದೂರಿದರು. ಈಗ ಆತನ ಸ್ವಂತ

ಸಹೋದರ ಮತ್ತು ಸಹೋದರಿ ಆತನ ಕುರಿತು ಅಸೂಯೆಪಟ್ಟರು. ಮೋಶೆಯು 'ಅತ್ಯಂತ ದುಃಖಿತನಾದದ್ದು' ಆಶ್ಚರ್ಯವೇನಲ್ಲ! ಅದಲ್ಲದೆ, ನಾವು ಇತರೆ ಪಠ್ಯಗಳಿಂದ ಮೋಶೆಯು ನಿಜವಾಗಲೂ ಇತರರಿಗಿಂತ ದೀನನಾದ ಮನುಷ್ಯನಲ್ಲ ಎಂಬುದನ್ನು ಕಾಣಬಹುದು: ಆತನು ಆಗಾಗ್ಗೆ ಕೋಪಗೊಂಡನು. ಕೆಲವೊಮ್ಮೆ ಆತನು ಸ್ವ–ಕನಿಕರವನ್ನು ವ್ಯಕ್ತಪಡಿಸಿದನು. ಇನ್ನಿತರೆ ಸಮಯದಲ್ಲಿ ಆತನು ದೇವರನ್ನು ಪ್ರಶ್ನಿಸಿದನು ಅಥವಾ ದೇವರೊಂದಿಗೆ ವಾದಿಸಿದನು.

2. ಈ ವಾಕ್ಯಭಾಗವು ಹೊಟ್ಟೆಕಿಚ್ಚಿನ ಕುರಿತಾದ ಒಂದು ಕಥೆಯಾಗಿದೆ. ಮೋಶೆಯು ಇಸ್ರಾಯೇಲರ ಮೇಲೆ ಒಂದು ವಿಶೇಷವಾದ ನಾಯಕತ್ವ ಸ್ಥಾನವನ್ನು ಹೊಂದಿದ್ದನು ಎಂದು ಮಿರ್ಯಾಮಳು ಮತ್ತು ಆರೋನನು ಭಾವಿಸಿದರು ಮತ್ತು ಅದಕ್ಕಾಗಿ ಆತನ ಮೇಲೆ ಅಸೂಯೆಪಟ್ಟರು.

   ನಾನು ಆಲೋಚಿಸುವಂತೆ ಇಂದು ದಕ್ಷಿಣ ಭಾರತದಲ್ಲಿ ಜೀವಿಸುವ ನಾವು ಇತರರ ಕರೆಯನ್ನು ಪ್ರಶ್ನಿಸಬಾರದು (ಅಥವಾ ಹೊಟ್ಟೆಕಿಚ್ಚುಪಡಬಾರದು) ಎಂಬುದನ್ನು ಈ ಕಥೆಯಿಂದ ಕಲಿತುಕೊಳ್ಳಬಹುದು. ಅದರ ಬದಲಾಗಿ ನಾವು ಸ್ವತಃ ನಮಗೆ ಇಂತಹ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು: *ನಾವು ದೇವರ ಕರೆಗೆ ನಂಬಿಗಸ್ತರಾಗಿದ್ದೇವೋ? ನಾವು ನಮ್ಮ ಜೀವಿತಗಳಿಗಾಗಿ ದೇವರ ಯೋಜನೆಗಳನ್ನು ನೆರವೇರಿಸುತ್ತಿದ್ದೇವೋ? ನಾವು ಉನ್ನತ ಸ್ಥಾನವನ್ನು ಅಪೇಕ್ಷಿಸದೆ ನಮ್ಮ ಸ್ವಂತ ಸ್ಥಾನವನ್ನು ಅಂಗೀಕರಿಸಿಕೊಂಡು ಇತರೆ ಕ್ರೈಸ್ತ ನಾಯಕರುಗಳೊಂದಿಗೆ ಸಹಕರಿಸಲು ಮನಸ್ಸುಳ್ಳವರಾಗಿದ್ದೇವೋ? ನಾವು ದೇವರ ಜನರನ್ನು ಮೊದಲನೆಯ ಸ್ಥಾನದಲ್ಲಿಟ್ಟಿದ್ದೇವೋ ಅಥವಾ ನಮ್ಮನ್ನೇ ಮೊದಲನೆಯ ಸ್ಥಾನದಲ್ಲಿಟ್ಟಿಕೊಂಡಿದ್ದೇವೋ?*

3. ಈ ವಾಕ್ಯಭಾಗದಲ್ಲಿ ಮೋಶೆಯನ್ನು ಅತ್ಯಂತ ಸುಂದರವಾಗಿ ವರ್ಣಿಸಲಾಗಿದೆ:

   1) ಆತನು ದೇವರೊಂದಿಗೆ ಒಂದು ಅದ್ವಿತೀಯ ಸಂಬಂಧವನ್ನು ಹೊಂದಿದ್ದನು.

   2) ಮಿರ್ಯಾಮಳು ಆತನನ್ನು ವಿರೋಧಿಸಿದಾಗ್ಯೂ ದೇವರು ಆಕೆಯನ್ನು ಶಿಕ್ಷಿಸಿದಾಗ ಆತನು ಆಕೆಗೋಸ್ಕರ ಪ್ರಾರ್ಥಿಸಿದನು.

   ಮೋಶೆಯು ಇಂದು ದಕ್ಷಿಣ ಭಾರತದಲ್ಲಿರುವ ದೇವಸೇವಕರುಗಳಿಗೆ ಒಂದು ಒಳ್ಳೆಯ ಮಾದರಿಯಾಗಿದ್ದಾನೆ:

   1) ನಾವು ಪ್ರವಾದಿಗಳಾಗಿದ್ದರೂ ಅಥವಾ ಸಭೆಯ ಇತರೆ ನಾಯಕರುಗಳಾಗಿದ್ದರೂ ಯಾವಾಗಲೂ ದೇವರಿಗೆ ಸಮೀಪವಾಗಲು ಹೋರಾಡಬೇಕು.

   2) ನಾವು ಇತರರ ಸಂಕಟವನ್ನು ಕಂಡು ದೇವರು ಅವರಿಗೆ ತಕ್ಕ ಪಾಠ ಕಲಿಸಿದ್ದಾನೆ ಎಂದು ಹರ್ಷಿಸಬಾರದು!

   3) ಅದರ ಬದಲಾಗಿ ನಾವು ಇತರರ ಪರವಾಗಿ ಪ್ರಾರ್ಥಿಸಬೇಕು. ನಮಗೆ ಕೇಡು ಮಾಡಿದವರಿಗಾಗಿಯೂ ಸಹ ನಾವು ಬೇಡಿಕೊಳ್ಳಬೇಕು. ತನ್ನನ್ನು ಶಿಲುಬೆಗೆ ಹಾಕಿದ ಸೈನಿಕರ ಪರವಾಗಿ ಯೇಸು ಶಿಲುಬೆಯ ಮೇಲೆ ಆಡಿದ ಮಾತುಗಳನ್ನು ನೆನಪಿಸಿಕೊಳ್ಳಿರಿ: *ಅವರು 'ತಲೆಬುರುಡೆ' ಎಂದು ಕರೆಯಲ್ಪಡುವ ಸ್ಥಳಕ್ಕೆ ಬಂದಾಗ ಅಲ್ಲಿ ಆತನನ್ನು ಮತ್ತು ಆ ದುಷ್ಕರ್ಮಿಗಳಲ್ಲಿ ಒಬ್ಬನನ್ನು ಯೇಸುವಿನ ಬಲಗಡೆಯಲ್ಲಿ ಮತ್ತೊಬ್ಬನನ್ನು ಆತನ ಎಡಗಡೆಯಲ್ಲಿ ಶಿಲುಬೆಗೆ ಹಾಕಿದರು. ಆಗ ಯೇಸು, 'ತಂದೆಯೇ, ಅವರನ್ನು ಕ್ಷಮಿಸು; ಯಾಕಂದರೆ ತಾವು ಏನು ಮಾಡುತ್ತೇವೆಂದು ಅವರು ಅರಿಯರು' ಎಂದನು. ಸೈನಿಕರಾದರೋ ಯೆಸುವಿನ ಉಡುಪನ್ನು ಪಾಲು ಮಾಡಿ ಚೀಟು ಹಾಕಿ ಹಂಚಿಕೊಂಡರು* (ಲೂಕ 23:33–34).

**ಅರಣ್ಯಕಾಂಡ ಉತ್ತರಗಳು 5: ಕಾನಾನ್ ದೇಶದ ಪರೀಕ್ಷಣೆ; ಜನರ ದಂಗೆ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಕಾನಾನ್ ದೇಶವನ್ನು ಪರೀಕ್ಷಿಸಲು ಪ್ರತಿಯೊಂದು ಗೋತ್ರದಿಂದ ಒಬ್ಬೊಬ್ಬರನ್ನು ಕಳುಹಿಸಲಾಯಿತು. ಹಾಗಾಗಿ ಆ ಹನ್ನೆರಡು ಗೂಢಾಚಾರರು (ಅಥವಾ ಬೇಹುಗಾರರು) ಇಡೀ ರಾಷ್ಟ್ರವನ್ನು ಪ್ರತಿನಿಧಿಸಿದರು. ಅವರು ಈಗಾಗಲೇ ಸ್ಥಾಪಿತ ನಾಯಕರುಗಳಾಗಿದ್ದು ತಮ್ಮ ತಮ್ಮ ಗೋತ್ರಗಳ ಸದಸ್ಯರುಗಳ ಭರವಸೆಗೆ ಪಾತ್ರರಾಗಿದ್ದರು.

2. ಅವರು ತಮ್ಮ ವರದಿಯೊಂದಿಗೆ ಹಿಂತಿರುಗಿದಾಗ ತಾವು ಕಂಡ ದೇಶದ ಕುರಿತು ಸಮತೋಲನವಾದ ವರದಿಯನ್ನು ಸಲ್ಲಿಸಿದರು:

   1) ಆ ದೇಶವು ಸಮೃದ್ಧಿಯಾಗಿಯೂ ಫಲವತ್ತಾಗಿಯೂ ಇದೆ.

   2) ಆದರೆ ಆ ದೇಶವು ಭದ್ರವಾದ ಮತ್ತು ದೊಡ್ಡದಾದ ಪಟ್ಟಣಗಳಲ್ಲಿ ವಾಸವಾಗಿದ್ದ ಬಲಿಷ್ಠ ಜನರನ್ನು ಹೊಂದಿತ್ತು.

   ಅವರ ಸಲಹೆಗಳು:

   1) ಆ ದೇಶದಲ್ಲಿ ನೆಲೆಸಿದ್ದ ಜನರು ಇಸ್ರಾಯೇಲರಿಗಿಂತ ಬಲಿಷ್ಠರಾಗಿದ್ದರಿಂದ ಮತ್ತು ಅವರಲ್ಲಿ ಕೆಲವರು ದೈತ್ಯ ಶರೀರಿಗಳಾಗಿದ್ದರಿಂದ ಕಾನಾನ್ ದೇಶವನ್ನು ವಶಪಡಿಸಿಕೊಳ್ಳುವುದು ಅಸಾಧ್ಯವೆಂದು ಅವರಲ್ಲಿನ ಹತ್ತು ಗೂಢಾಚಾರರು ನೆನೆಸಿದರು.

   2) ಆದರೆ ಕಾಲೇಬನು ತನ್ನ ಹಾಗೂ ಯೆಹೋಶುವನ ಪರವಾಗಿ ಮಾತನಾಡಿದನು. ಇಸ್ರಾಯೇಲರು ಯುದ್ಧಕ್ಕೆ ಹೋಗಿ ಆ ದೇಶವನ್ನು ಸ್ವಾಧೀನಪಡಿಕೊಳ್ಳಬೇಕೆಂಬುದು ಅವರ ಸಲಹೆಯಾಗಿತ್ತು.

3. ಇಸ್ರಾಯೇಲರು ಈಜಿಪ್ಟಿಗೆ ಹಿಂತಿರುಗಬೇಕೆಂದು ಬಯಸಿದರು. ಅವರು ಗೂಢಾಚಾರರ ವರದಿಯನ್ನು ಕೇಳಿದ್ದರು. ಅವರು ವಾಗ್ದಾನ ದೇಶವನ್ನು ವಶಪಡಿಸಿಕೊಳ್ಳುವ ಪ್ರಯಾಸವು ನಿಷ್ಪ್ರಯೋಜಕವಾದದ್ದು ಎಂಬ 'ಬಹುಮತವನ್ನು' ನಂಬಿದರು. ಅವರು ಕಾನಾನ್ ದೇಶದ ನಿವಾಸಿಗಳ ವಿರುದ್ಧ ಯುದ್ಧದಲ್ಲಿ ಸಾಯುವುದರ ಬದಲು ಈಜಿಪ್ಟಿನಲ್ಲಾಗಲಿ ಅಥವಾ ಮರುಭೂಮಿಯಲ್ಲಾಗಲಿ ಸಾಯುವುದು ಉತ್ತಮ ಎಂದು ನೆನೆಸಿದರು. ಈಗ ಅವರನ್ನು ಹಿಂತಿರುಗಿ ಈಜಿಪ್ಟಿಗೆ ನಡೆಸಲು ಒಬ್ಬ ಹೊಸ ನಾಯಕನನ್ನು ಆರಿಸಿಕೊಳ್ಳಲು ಬಯಸಿದರು.

4. ತಮ್ಮನ್ನು ಈಜಿಪ್ಟಿಗೆ ಹಿಂದಿರುಗೆ ನಡೆಸಲು ಒಬ್ಬ ಹೊಸ ನಾಯಕನನ್ನು ಆರಿಸಿಕೊಳ್ಳಲು ಜನರು ಬಯಸಿದಾಗ ಇಸ್ರಾಯೇಲ್ ನಾಯಕರುಗಳು ಹೀಗೆ ಪ್ರತಿಕ್ರಿಯಿಸಿದರು:

   1) ಮೋಶೆ ಮತ್ತು ಆರೋನರು ಇಸ್ರಾಯೇಲರ ಮುಂದೆ ಅಡ್ಡಬಿದ್ದರು. ಜನರ ದಂಗೆಯನ್ನು ಕಂಡಾಗ ಬಹುಶಃ ಅವರು ಒಂದು ರೀತಿಯ ದಿಗ್ಭ್ರಮೆಗೊಳಗಾಗಿರಬಹುದು.

   2) ಆದರೆ ಹನ್ನೆರಡು ಗೂಢಾಚಾರರಲ್ಲಿ ಒಬ್ಬರಾದ ಹಾಗೂ ಆ ದೇಶವನ್ನೂ ಅದರ ನಿವಾಸಿಗಳನ್ನು ಕಂಡಂತಹ ಯೆಹೋಶುವ ಮತ್ತು ಕಾಲೇಬರು ಇಸ್ರಾಯೇಲರಿಗೆ ನಂಬಿಕೆಯ ಮಾತುಗಳನ್ನು ಆಡಿದರು. ದೇವರು ಅವರ ಸಂಗಡ ಇದ್ದಾನೆ ಮತ್ತು ವಾಗ್ದಾನ ದೇಶವನ್ನು ತಮಗೆ ಕೊಡಲು ಆತನು ಶಕ್ತನಾಗಿದ್ದಾನೆ ಎಂಬುದನ್ನು ಅವರಿಗೆ ನೆನಪಿಸಿದರು. ಹಾಗಾಗಿ ಇಸ್ರಾಯೇಲರು ಕಾನಾನ್ ದೇಶದ ನಿವಾಸಿಗಳ ಕುರಿತು ಭಯಪಡುವ ಯಾವ ಅವಶ್ಯವಿರಲಿಲ್ಲ. ಯೆಹೋವನ ವಿರುದ್ಧ ದಂಗೆ ಏಳದಿರುವುದೇ ಪ್ರಾಮುಖ್ಯವಾದ ಸಂಗತಿಯಾಗಿತ್ತು.

5. ಯೆಹೋಶುವ ಮತ್ತು ಕಾಲೇಬರು ತಿಳಿಸಿದ ಸಂದೇಶಕ್ಕೆ ಇಸ್ರಾಯೇಲರು ಉತ್ತಮವಾಗಿ ಪ್ರತಿಕ್ರಿಯಿಸಲಿಲ್ಲ. ಅದರ ಬದಲಾಗಿ ಅವರನ್ನು ಕಲ್ಲೆಸೆದು ಕೊಲ್ಲುವುದರ ಬಗ್ಗೆ ಮಾತನಾಡಿದರು.

6. ದಂಗೆಕೋರ ಇಸ್ರಾಯೇಲರ ಮೇಲೆ ವ್ಯಾಧಿಯನ್ನು ಬರಮಾಡಿ ಅವರನ್ನು ನಾಶಮಾಡಬೇಕೆಂದು ದೇವರು ಬಯಸಿದನು. ನಂತರ ಆತನು ಮೋಶೆಯ ಸಂತತಿಯನ್ನು ಒಳಗೊಂಡ ಒಂದು ಹೊಸ ರಾಷ್ಟ್ರವನ್ನು ಅವರ ಬದಲಾಗಿ ನಿರ್ಮಿಸಲಿದ್ದನು.

7. ಮೋಶೆಯು ಯೆಹೋವನೊಂದಿಗೆ ಬೇಡಿಕೊಂಡಾಗ ಆತನು ಎರಡು ವಿಷಯಗಳನ್ನು ತರ್ಕಿಸಿದನು:

1) ಯೆಹೋವನು ಇಸ್ರಾಯೇಲರನ್ನು ನಿರ್ಮೂಲ ಮಾಡಿದರೆ ಅದು ಆತನ ಕೀರ್ತಿಗೆ ಧಕ್ಕೆಯನ್ನುಂಟುಮಾಡುವುದು. ಯೆಹೋವನು ತನ್ನ ವಾಗ್ದಾನಗಳನ್ನು ಇಸ್ರಾಯೇಲರಿಗೆ ನೆರವೇರಿಸಲು ಅಶಕ್ತನಾಗಿದ್ದಾನೆ ಎಂದು ಈಜಿಪ್ಟಿನವರು ಮತ್ತು ಕಾನಾನಿನವರು ಘೋಷಿಸಿಕೊಳ್ಳುವರು.

2) ಅದರ ಬದಲಾಗಿ ಯೆಹೋವನು ತನ್ನ ನಿಜವಾದ ಗುಣವನ್ನು ಪ್ರಕಟಿಸಬೇಕು. ಯೆಹೋವನು ದೀರ್ಘಶಾಂತನೂ ಮಹಾಪ್ರೀತಿಯುಳ್ಳವನೂ ಪಾಪವನ್ನೂ ತಿರುಗಿ ಬೀಳುವುದನ್ನು ಮನ್ನಿಸುವಾತನೂ ಆಗಿದ್ದಾನೆ. ಹಾಗಾಗಿ ಆತನು ಮತ್ತೊಮ್ಮೆ ಇಸ್ರಾಯೇಲರ ಪಾಪವನ್ನು ಕ್ಷಮಿಸಬೇಕು.

8. ಯೆಹೋವನು ಮೋಶೆಯ ವಿಜ್ಞಾಪನೆಯನ್ನು ಕೇಳಿ ಮತ್ತೊಮ್ಮೆ ಇಸ್ರಾಯೇಲರನ್ನು ಕ್ಷಮಿಸಲು ತೀರ್ಮಾನಿಸಿದನು. ಆದರೆ ದಂಗೆಯೆದ್ದ ಇಸ್ರಾಯೇಲರ ಸಮಸ್ತ ವಯಸ್ಕ ಸಂತತಿಯು 40 ವರ್ಷಗಳ ಮರುಭೂಮಿಯಲ್ಲಿನ ಅಲೆದಾಟದಲ್ಲಿ ನಾಶವಾಗಿ ಹೋಗುವರು. ಆ ವಯಸ್ಕ ಸಂತತಿಯಲ್ಲಿ ಒಬ್ಬರಾದ ಯೆಹೋಶುವ ಮತ್ತು ಕಾಲೇಬರು ಮಾತ್ರ ವಾಗ್ದಾನ ದೇಶವನ್ನು ಪ್ರವೇಶಿಸುವರು. ಯಾಕೆಂದರೆ ಅವರಿಗೆ ಬೇರೆ ಆತ್ಮವಿತ್ತು ಮತ್ತು ಅವರು ದೇವರನ್ನು ಪೂರ್ಣ ಹೃದಯದಿಂದ ಹಿಂಬಾಲಿಸಿದ್ದರು.

9. ಇಸ್ರಾಯೇಲರು ತಮ್ಮ ಅವಿಧೇಯತೆಯ ಹಾಗೂ ತಪ್ಪಾದ ತೀರ್ಮಾನದ ನಿಮಿತ್ತ ಅಮಾಲೇಕ್ಯರ ಹಾಗೂ ಕಾನಾನ್ಯರ ವಿರುದ್ಧ ಸೋತರು. ದೇವರು ಅವರನ್ನು ಕ್ಷಮಿಸಲು ತೀರ್ಮಾನಿಸಿದ ಸಂಗತಿಯನ್ನು (ಅವರಲ್ಲಿ ಎಲ್ಲರೂ ವ್ಯಾಧಿಯಿಂದ ನಾಶವಾಗುವುದಿಲ್ಲ ಎಂಬುದನ್ನು) ಮತ್ತು ದೇವರ ಶಿಕ್ಷೆಯನ್ನು (ಆ ವಯಸ್ಕ ಸಂತತಿಯು ವಾಗ್ದಾನ ದೇಶವನ್ನು ಪ್ರವೇಶಿಸುವುದಿಲ್ಲ ಎಂಬುದನ್ನು) ಮೋಶೆಯು ಅವರಿಗೆ ತಿಳಿಸಿದ್ದನು. ಈಗ ಇಸ್ರಾಯೇಲರು ಒಂದು ಒಳ್ಳೆಯ ಸಂಗತಿಯನ್ನು ಮತ್ತು ಎರಡು ಕೆಟ್ಟ ಸಂಗತಿಗಳನ್ನು ಮಾಡಿದರು:

1) ಅವರು ತಮ್ಮ ಪಾಪದ ನಿಮಿತ್ತ ಬಹಳವಾಗಿ ದುಃಖಪಟ್ಟರು. ಇದೊಂದು ಒಳ್ಳೆಯ ಸಂಗತಿ.

2) ಅದರ ಮರುದಿವಸ ಅವರು ಅಮಾಲೇಕ್ಯರ ಹಾಗೂ ಕಾನಾನ್ಯರ ವಿರುದ್ಧ ದಾಳಿ ಮಾಡಲು ಬೆಟ್ಟದ ತುದಿಯ ಮೇಲೆ ಏರಿ ಹೋದರು. ಇದು ಅವಿಧೇಯತೆಯ ಒಂದು ಕ್ರಿಯೆಯಾಗಿತ್ತು, ಯಾಕೆಂದರೆ ಅವರು ವಾಗ್ದಾನ ದೇಶವನ್ನು ಪ್ರವೇಶಿಸುವುದಿಲ್ಲವೆಂದು ದೇವರು ಈಗಾಗಲೇ ಮೋಶೆಯ ಮೂಲಕ ತಿಳಿಸಿದ್ದನು. ಅದಲ್ಲದೆ, ಮೋಶೆಯೂ ಸಹ ಅವರು ಹೋಗಬಾರದೆಂದು ಎಚ್ಚರಿಸಿದ್ದನು. ಇದು ಮೊದಲು ಮಾಡಿದ ಕೆಟ್ಟ ಸಂಗತಿ.

3) ಅಂತಿಮವಾಗಿ ಅವರು ತಮ್ಮ ಯೋಜನೆಯನ್ನು ಸಾಧಿಸಲು ಮುಂದಾದರು – ಮೋಶೆಯು ಅವರನ್ನು ನಡೆಸದಿದ್ದಾಗ್ಯೂ ಹಾಗೂ ಒಡಂಬಡಿಕೆಯ ಮಂಜೂಷವು ಪಾಳೆಯದಿಂದ ಸರಿಯದಿದ್ದಾಗ್ಯೂ – ಅವರು ಅಮಾಲೇಕ್ಯರ ಹಾಗೂ ಕಾನಾನ್ಯರ ಮೇಲೆ ದಾಳಿ ನಡೆಸಿದರು. ಇದು ಒಂದು ಮೂರ್ಖತನದ ಕ್ರಿಯೆಯಾಗಿತ್ತು. ವೈರಿಗಳು ಅವರ ಮೇಲೆ ದಾಳಿ ನಡೆಸಿ, ಅವರನ್ನು ಸೋಲಿಸಿ ಹೊರ್ಮಾವಿನವರೆಗೂ ಬೆನ್ನಟ್ಟಿದರು. ಇದು ಎರಡನೆಯದಾಗಿ ಮಾಡಿದ ಕೆಟ್ಟ ಸಂಗತಿ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಇಂದು ದಕ್ಷಿಣ ಭಾರತದಲ್ಲಿರುವ ಕ್ರೈಸ್ತ ನಾಯಕರುಗಳಾದ ನಾವು ಯೆಹೋಶುವ ಮತ್ತು ಕಾಲೇಬರ ನಡತೆ ಮತ್ತು ಮನೋಭಾವನೆಯಿಂದ ಈ ಸಂಗತಿಗಳನ್ನು ಕಲಿತುಕೊಳ್ಳಬಹುದು:

1) ಮೋಶೆ ಹನ್ನೆರಡು ಗೂಢಾಚಾರರಿಗೆ ವಹಿಸಿದ ಕಾರ್ಯವನ್ನು ಅವರು ಪೂರೈಸಿದರು. ಅವರು ವಾಗ್ದಾನ ದೇಶವನ್ನು ದಕ್ಷಿಣದಿಂದ ಉತ್ತರದವರೆಗೆ ಪರೀಕ್ಷಿಸಿ ಮೋಶೆಗೆ ಮತ್ತು ಜನರಿಗೆ ತಮ್ಮ ವರದಿಯನ್ನು ತಂದರು. ಇಂದು ಕ್ರೈಸ್ತ ನಾಯಕರುಗಳಾದ ನಾವು ದೇವರು ನಮಗೆ ವಹಿಸಿರುವ ಕಾರ್ಯಗಳನ್ನು ನಂಬಿಗಸ್ತರಾಗಿ ಪೂರೈಸಬೇಕು.

2) ಅವರು ತಮ್ಮ ಶೋಧಕಾರ್ಯದಿಂದ ಒಂದು ಸಮತೋಲನವುಳ್ಳ ವರದಿಯನ್ನು ತಂದರು. ಅವರು ವಾಗ್ದಾನ ದೇಶದ ಒಳ್ಳೆಯ ಹಾಗೂ ಕೆಟ್ಟ ಸಂಗತಿಗಳನ್ನು ತಿಳಿಸಿದರು. ಇಂದು ಕ್ರೈಸ್ತ ನಾಯಕರುಗಳಾದ ನಾವು ಎದುರಿಸುವ ಸನ್ನಿವೇಶಗಳ ಕುರಿತು ವಿಶ್ಲೇಷಿಸುವಾಗ ಸಮತೋಲನವುಳ್ಳವರಾಗಿರಬೇಕು. ನಾವು ಒಳ್ಳೆಯ ಮತ್ತು ಕೆಟ್ಟ ಸಂಗತಿಗಳನ್ನು ಹಾಗೂ ಲಾಭ ಮತ್ತು ನಷ್ಟಗಳನ್ನೂ ಅರ್ಥಮಾಡಿಕೊಳ್ಳಬೇಕು.

3) ಅವರು ಆ ಸನ್ನಿವೇಶವನ್ನು ಒಂದು ಆತ್ಮಿಕ ದೃಷ್ಟಿಕೋನದಿಂದ ವಿಶ್ಲೇಷಿಸಿದರು. ಅವರ ವಿಶ್ಲೇಷಣೆಯು ಇಸ್ರಾಯೇಲ್ ಸೇನೆಯ ಅಥವಾ ಶತ್ರು ಸೇನೆಯ ಬಲ ಅಥವಾ ಬಲಹೀನತೆಗಳ ಮೇಲೆ ಆಧರಿತವಾಗಿರಲಿಲ್ಲ. ಅದು ದೇವರ ಬಲ ಮತ್ತು ವಾಗ್ದಾನಗಳ ಮೇಲೆ ಆಧರಿತವಾಗಿತ್ತು. ಇಂದು ಕ್ರೈಸ್ತ ನಾಯಕರುಗಳಾದ ನಾವು ನಮ್ಮ ಸಭೆ ಮತ್ತು ಸೇವೆಗಾಗಿ ಮುಂದಿನ ಹೆಜ್ಜೆಯನ್ನು

ಯೋಜಿಸುವಾಗ ನಮ್ಮ ಆತ್ಮಿಕ ಕಣ್ಣುಗಳನ್ನು ಉಪಯೋಗಿಸಬೇಕು. ನಾವು ನಮ್ಮ ಮೇಲೆಯೇ ಮತ್ತು ನಮ್ಮ ಮಿತಿಗಳ ಮೇಲೆ ದೃಷ್ಟಿಯಿಟ್ಟುಕೊಳ್ಳದೆ ದೇವರ ಹಾಗೂ ಆತನ ಸಾಧ್ಯತೆಗಳ, ವಾಗ್ದಾನಗಳ ಮೇಲೆ ದೃಷ್ಟಿಯಿಡಬೇಕು.

4) ಅವರು ಬಹುಮತವನ್ನು ಹಿಂಬಾಲಿಸಲಿಲ್ಲ. ಅದಕ್ಕೆ ಬದಲಾಗಿ ಅವರು ತಮ್ಮ ದೃಷ್ಟಿಕೋನವನ್ನು ಇಸ್ರಾಯೇಲರ ಮುಂದೆ ಮಂಡಿಸಲು ಧೈರ್ಯವುಳ್ಳವರಾಗಿದ್ದರು. ದಕ್ಷಿಣ ಭಾರತದಲ್ಲಿರುವ ಕ್ರೈಸ್ತ ನಾಯಕರುಗಳಾದ ನಾವು ಅನೇಕ ಬಾರಿ ಬಹುಮತದ ವಿರುದ್ಧ ಮಾತನಾಡಲು ಧೈರ್ಯವಿಲ್ಲದವರಾಗಿದ್ದೇವೆ. ಜನರು ಕೇಳಿಸಿಕೊಳ್ಳಲು ಬಯಸದ ಸತ್ಯವನ್ನು ಮಾತನಾಡುವುದಕ್ಕಿಂತ ಮೌನವಾಗಿರುವುದೇ ಉತ್ತಮವೆಂದು ಯೋಚಿಸುತ್ತೇವೆ. ನಾವು ಸತ್ಯವೇದದ ಸ್ವಷ್ಟವಾದ ಪರ್ಯಾಯ ಮಾರ್ಗವನ್ನು ತಿಳಿಸಿಕೊಡುವುದಕ್ಕಿಂತ ಬಹುಸಂಖ್ಯ ಜನರು ಬಯಸುವ ಸಂಗತಿಯನ್ನೇ – ಒಂದು ವೇಳೆ ಅದು ಸ್ಪಷ್ಟವಾಗಿ ದೇವರ ವಾಕ್ಯಕ್ಕೆ ಹಾಗೂ ಆತನ ವಾಗ್ದಾನಗಳಿಗೆ ವಿರುದ್ಧವಾಗಿದ್ದರೂ – ಮಾಡಲು ಅನುಮತಿಸುತ್ತೇವೆ.

5) ಅವರು ಇಸ್ರಾಯೇಲರ ದಂಗೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದರು. ಇಸ್ರಾಯೇಲರು ಈಜಿಪ್ಟಿಗೆ ಹಿಂದಿರುಗಲು ಒಬ್ಬ ಹೊಸ ನಾಯಕನನ್ನು ಆರಿಸಿಕೊಳ್ಳಬೇಕೆಂದಿದ್ದಾಗ ಕಾಲೇಬ್ ಮತ್ತು ಯೆಹೋಶುವರು ತಮ್ಮ ಬಟ್ಟೆಗಳನ್ನು ಹರಿದುಕೊಂಡು ದೇವರಿಗೆ ವಿರುದ್ಧವಾಗಿ ದಂಗೆ ಏಳದೆ ಸರಿಯಾದುದ್ದನ್ನು ಮಾಡಿರಿ ಎಂದು ಜನರ ಬಳಿಯಲ್ಲಿ ಬೇಡಿಕೊಂಡರು. ಇಂದು ಕ್ರೈಸ್ತ ನಾಯಕರುಗಳಾದ ನಾವು ಸಭೆಯಲ್ಲಿನ ಯಾವುದೇ ರೀತಿಯ ಆತ್ಮಿಕ ದಂಗೆಯನ್ನು ಗಂಭೀರವಾಗಿ ಪರಿಗಣಿಸಬೇಕು. ದೇವರ ವಿರುದ್ಧವಾಗಿ ದಂಗೆ ಏಳದೆ ಸರಿಯಾದುದ್ದನ್ನು ಮಾಡಿರಿ ಎಂದು ನಾವು ಮನಃಪೂರ್ವಕವಾಗಿ ವಿಶ್ವಾಸಿಗಳೊಂದಿಗೆ ಬೇಡಿಕೊಳ್ಳಬೇಕು.

2. ಇಂದು ದಕ್ಷಿಣ ಭಾರತದಲ್ಲಿರುವ ಕ್ರೈಸ್ತ ನಾಯಕರುಗಳಾದ ನಾವು ಮೋಶೆಯ ನಡತೆ ಮತ್ತು ಮನೋಭಾವನೆಯಿಂದ ಈ ವಿಷಯಗಳನ್ನು ಕಲಿತುಕೊಳ್ಳಬಹುದು:

1) ಮೋಶೆಯು ದೇವರ ಆಜ್ಞಾನುಸಾರವಾಗಿ ಗೂಢಾಚಾರರ ಆಯ್ಕೆಯನ್ನು ಬುದ್ಧಿವಂತಿಕೆಯಿಂದ ಮಾಡಿದನು. ಆತನು ಪ್ರತಿಯೊಂದು ಗೋತ್ರದಿಂದ ಒಬ್ಬೊಬ್ಬ ನಾಯಕರನ್ನು ಆರಿಸಿಕೊಂಡನು. ಇಂದು ಕ್ರೈಸ್ತ ನಾಯಕರುಗಳಾದ ನಾವು ನಂಬಿಗಸ್ತರಾಗಿ ದೇವರ ಜ್ಞಾನವುಳ್ಳ ಆಜ್ಞೆಗಳನ್ನು ಪಾಲಿಸಬೇಕು. ಕೆಲವೊಮ್ಮೆ ನಾವು ದೇವರ ಸ್ವರಕ್ಕೆ ಕಿವಿಗೊಡಲು ಮರೆತುಹೋಗುತ್ತೇವೆ. ಅದಕ್ಕೆ ಬದಲಾಗಿ ನಾವು ನಮ್ಮ ಸ್ವಂತ ಭಾವನೆಗಳಿಗೆ ಅನುಕೂಲವಾಗುವಂತೆ ಅಥವಾ ಇಷ್ಟ ಬಂದಂತೆ ಸಭೆಯಲ್ಲಿ ಎಲ್ಲವನ್ನು ರೂಪಿಸಲು ಮುಂದಾಗುತ್ತೇವೆ. ದೇವರು ನಮಗೆ ಅನುಗ್ರಹಿಸಿರುವ ಜ್ಞಾನವನ್ನು ನಾವು ಬಳಸಲು ಸೋತು ಹೋಗುತ್ತೇವೆ. ದೇವರು ತನ್ನ ವಾಕ್ಯದಲ್ಲಿ ನಮಗೆ ನೀಡಿರುವ ಆಜ್ಞೆಗಳನ್ನು ಪಾಲಿಸಲು ನಾವು ಸೋತುಹೋಗುತ್ತೇವೆ.

2) ಮೋಶೆಯು ಹನ್ನೆರಡು ಗೂಢಾಚಾರರಿಗೆ ಸ್ಪಷ್ಟವಾದ ಆಜ್ಞೆಗಳನ್ನು ಕೊಟ್ಟನು. ವಾಗ್ದಾನ ದೇಶವನ್ನು ಹೇಗೆ ಪರೀಕ್ಷಿಸಬೇಕೆಂದು ಆತನು ಅವರಿಗೆ ಹೇಳಿದನು: ಎಲ್ಲಿಗೆ ಹೋಗಬೇಕು, ಯಾವುದನ್ನು ಹುಡುಕಬೇಕು ಯಾವುದನ್ನು ನಮೂನೆಯಾಗಿ ಹಿಂತರಬೇಕು ಎಂಬ ಸಂಗತಿಗಳನ್ನು ಹೇಳಿದನು. ಇಂದು ಕ್ರೈಸ್ತ ನಾಯಕರುಗಳಾದ ನಾವು ನಮ್ಮ ಸಹುದ್ಯೋಗಿಗಳಿಗೆ ಸ್ಪಷ್ಟವಾದ ಮಾರ್ಗದರ್ಶನಗಳ ಅವಶ್ಯವಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ನಾವು ನಮ್ಮ ಸಭೆಯಲ್ಲಿ ಯಾರಿಗಾದರೂ ಒಂದು ಹೊಸ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಕೇಳಿಕೊಳ್ಳುವಾಗ ಅವರಿಗೆ ಏನು ಮಾಡಬೇಕು ಮತ್ತು ಹೇಗೆ ಮಾಡಬೇಕು ಎಂಬುದರ ಕುರಿತು ಸ್ಪಷ್ಟವಾದ ಮಾಹಿತಿಯನ್ನು ಅಥವಾ ಮಾರ್ಗದರ್ಶನವನ್ನು ಕೊಡಬೇಕು. ಅವರಿಗೆ ಮುನ್ನಡೆಯ ಹಾಗೂ ನಿಮ್ಮ ಸಲಹೆಯ ಅವಶ್ಯವಿರಬಹುದು. ಅದಲ್ಲದೆ ಹೇರಳವಾದ ಪ್ರೋತ್ಸಾಹವೂ ಸಹ ಬೇಕಾಗಬಹುದು!

3) ಮೋಶೆಯು ತನ್ನ ಜನರಿಗಾಗಿ ಮಧ್ಯವರ್ತಿ ಪ್ರಾರ್ಥನೆ ಮಾಡಿ ದೇವರು ಇಸ್ರಾಯೇಲರನ್ನು ನಾಶಮಾಡಬಾರದೆಂದು ಆತನಲ್ಲಿ ಬೇಡಿಕೊಂಡನು. ಮೋಶೆಯು ನಿಜವಾಗಲೂ ಪ್ರಾರ್ಥನೆಯಲ್ಲಿ ದೇವರೊಂದಿಗೆ ಹೋರಾಡಿದನು ಎಂಬುದನ್ನು ಅರಣ್ಯ. 14:10–19 ರಿಂದ ನಾವು ಅರ್ಥಮಾಡಿಕೊಳ್ಳುತ್ತೇವೆ. ಇಂದು ಕ್ರೈಸ್ತ ನಾಯಕರುಗಳಾದ ನಾವು ನಮ್ಮ ಸಭೆಯ ವಿಶ್ವಾಸಿಗಳಿಗಾಗಿ ಮಧ್ಯವರ್ತಿ ಪ್ರಾರ್ಥನೆ ಅಥವಾ ವಿಜ್ಞಾಪನೆಗಳನ್ನು ಮಾಡಲು ಯಾವಾಗಲೂ ಸಿದ್ಧರಿರಬೇಕು. ನಾವು ಅವರ ಅವಶ್ಯಕತೆಗಳನ್ನು ದೇವರ ಮುಂದೆ ತಂದು ದೇವರು ಅವರನ್ನು ಕರುಣಿಸುವಂತೆಯೂ ಅವರ ಪಾಪ ಮತ್ತು ಸೋಲುಗಳನ್ನು ಕ್ಷಮಿಸುವಂತೆಯೂ ದೇವರಲ್ಲಿ ಬೇಡಿಕೊಳ್ಳಬೇಕು.

4) ಮೋಶೆಯು ದೇವರ ಗುಣವನ್ನು ಅರ್ಥಮಾಡಿಕೊಂಡಿದ್ದನು. ಯೆಹೋವನು ಅತ್ಯಂತ ಪ್ರೀತಿಯುಳ್ಳ ದೇವರು, ಕ್ಷಮಿಸುವ ದೇವರು, ದೀರ್ಘಶಾಂತನು ಎಂದು ಆತನು ತಿಳಿದಿದ್ದನು. ಇಂದು ಕ್ರೈಸ್ತ ನಾಯಕರುಗಳಾದ ನಮಗೆ ದೇವರು ನಿಜವಾಗಲೂ ಯಾರಾಗಿದ್ದಾನೆ ಎಂಬುದರ ಒಂದು ಆಳವಾದ ತಿಳುವಳಿಕೆ ಮತ್ತು ಜ್ಞಾನದ ಅವಶ್ಯವಿದೆ. ಅದಲ್ಲದೆ ನಮಗೆ ಆತನ ಮಹಾ ಪ್ರೀತಿ

ಮತ್ತು ಕ್ಷಮಾಪಣೆಯ ಒಂದು ವೈಯಕ್ತಿಕವಾದ ಅನುಭವದ ಅವಶ್ಯವೂ ಕೂಡ ಇದೆ. ನಾವು ದೇವರ ಅಂತಹ ತಿಳುವಳಿಕೆ ಮತ್ತು ಅನುಭವವನ್ನು ಹೊಂದಿದಾಗ ಮಾತ್ರ ಆತನ ಸಭೆಯಲ್ಲಿ ಉಪಯುಕ್ತವಾದ ಸೇವಕರಾಗಿರಲು ಸಾಧ್ಯ.

**ಅರಣ್ಯಕಾಂಡ ಉತ್ತರಗಳು 6: ಬಂಡೆಯೊಳಗಿಂದ ನೀರು; ಆರೋನನ ಮರಣ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಕಾದೇಶ್ ಬರ್ನಿಯದಲ್ಲಿ ಜನರು ಆಹಾರ ಮತ್ತು ನೀರಿನ ಕೊರತೆಯ ಕುರಿತಾಗಿ ದೂರಿದರು. ಅವರನ್ನು ಈಜಿಪ್ಟಿನಿಂದ ಕರೆತಂದದ್ದಕ್ಕೆ ಅವರು ಮೋಶೆ ಮತ್ತು ಆರೋನರನ್ನೂ ಸಹ ದೂಷಿಸಿದರು.

2. ಮೋಶೆ ಮತ್ತು ಆರೋನರು ಸಾಕ್ಷಿಯ ಮಂಜೂಷದಿಂದ ಆರೋನನ ಕೋಲನ್ನು ತೆಗೆದುಕೊಂಡು ಇಸ್ರಾಯೇಲರ ಎದುರಿನಲ್ಲಿ ಆ ಬಂಡೆಯ ಸಂಗಡ ಮಾತನಾಡಬೇಕೆಂದು ದೇವರು ಹೇಳಿದನು. ಆಗ ದೇವರು ಜನರಿಗೂ ಅವರ ಜಾನುವಾರುಗಳಿಗೂ ನೀರನ್ನು ಒದಗಿಸುವನು. ಆದರೆ ಅದಕ್ಕೆ ಬದಲಾಗಿ ಮೋಶೆಯು ಕೋಲಿನಿಂದ ಬಂಡೆಗೆ ಎರಡು ಬಾರಿ ಹೊಡೆದನು.

3. ಮೋಶೆ ಮತ್ತು ಆರೋನರ ನಡವಳಿಕೆಯ ಕುರಿತು ದೇವರು ಅವರನ್ನು ಗದರಿಸಿದನು. ಅವರು ಆತನ ಆಜ್ಞೆಯನ್ನು ಪಾಲಿಸದಿರುವುದರ ಮೂಲಕ ಅವರು ಆತನ ಮೇಲೆ ಭರವಸೆಯಿಡಲಿಲ್ಲವೆಂದು ತೋರಿಸಿದರು. ಆತನ ಮೇಲೆ ಭರವಸೆಯಿಡದಿರುವುದರ ಮೂಲಕ ಇಸ್ರಾಯೇಲರ ದೃಷ್ಟಿಯಲ್ಲಿ ದೇವರ ಪರಿಶುದ್ಧತೆಯು ಉಲ್ಲಂಘಿಸಲ್ಪಟ್ಟಿತ್ತು. ಅವರು ಜನರನ್ನು ವಾಗ್ದಾನ ದೇಶದೊಳಗೆ ನಡೆಸಲು ಅನುಮತಿಸದಿರುವುದರ ಮೂಲಕ ದೇವರು ಅವರನ್ನು ಶಿಕ್ಷಿಸಿದನು.

4. ಆರೋನನ ಮರಣದ ಸಮಯದಲ್ಲಿನ ಸನ್ನಿವೇಶವು ಹೀಗಿತ್ತು:

   1) ಏದೋಮಿನ ಗಡಿಭಾಗದಲ್ಲಿದ್ದ ಹೋರ್ ಬೆಟ್ಟದಲ್ಲಿ ಆರೋನನು ಸತ್ತನು.

   2) ಆತನು ಸತ್ತಾಗ, ಆತನ ಮಗನಾದ ಎಲಿಯಾಜರನು ಮತ್ತು ಮೋಶೆಯು ಆತನ ಸಂಗಡ ಬೆಟ್ಟದ ಮೇಲೆ ಇದ್ದರು.

   3) ಆರೋನನು ಸಾಯುವುದಕ್ಕಿಂತ ಮುಂಚೆ ಆತನ ವಸ್ತ್ರಗಳನ್ನು ತೆಗೆದು ಅವುಗಳನ್ನು ಎಲಿಯಾಜರನಿಗೆ ತೊಡಿಸಬೇಕೆಂದು ದೇವರು ಅವರಿಗೆ ಆಜ್ಞಾಪಿಸಿದ್ದನು. ಅವರು ದೇವರ ಆಜ್ಞೆಯಂತೆಯೇ ಮಾಡಿದರು.

   4) ಇಸ್ರಾಯೇಲರು ಆರೋನನಿಗಾಗಿ ಮೂವತ್ತು ದಿನಗಳವರೆಗೆ ದುಃಖಿಸಿದರು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಮೋಶೆ ಮತ್ತು ಆರೋನರು ಮೆರೀಬಾದಲ್ಲಿ ದೇವರ ಆಜ್ಞೆಯನ್ನು ಪಾಲಿಸದಿದ್ದಕ್ಕೆ ಕನಿಷ್ಠ ಪಕ್ಷ ಐದು ಕಾರಣಗಳಿರಬಹುದು:

   1) ಅವರು ದೇವರ ಆಜ್ಞೆಗಳನ್ನು ಲಕ್ಷ್ಯವಿಟ್ಟು ಕೇಳಲಿಲ್ಲ. ಮೂವತ್ತೊಂಭತ್ತು ವರ್ಷಗಳ ಹಿಂದೆ ರೆಫಿದೀಮಿನಲ್ಲಿ ದೇವರು ಮಾಡಿದಂತೆಯೇ ಈಗಲೂ ಮಾಡಬಹುದೆಂದು ಅವರು ಊಹಿಸಿಕೊಂಡರು.

   2) ಅವರು ತಮ್ಮ ಸಂಪ್ರದಾಯವನ್ನು ಪಾಲಿಸಬೇಕೆಂದಿದ್ದರು. ಬಂಡೆಯಿಂದ ನೀರನ್ನು ಹೇಗೆ ಪಡೆಯಬೇಕೆಂದು ಅವರು ಈಗಾಗಲೇ 'ತಿಳಿದಿದ್ದರು': ಬಂಡೆಯನ್ನು ಕೋಲಿನಿಂದ ಹೊಡೆಯಬೇಕು. 'ಪ್ರತಿಯೊಂದು ಬಾರಿಯೂ ಹೀಗೆ ಅಲ್ಲವೇ ಮಾಡಿದ್ದು'. ಹಾಗಾಗಿ ಅವರು ಸುಮ್ಮನೇ ತಮ್ಮ ಸಂಪ್ರದಾಯವನ್ನು ಪಾಲಿಸಿದರು.

   3) ದೇವರು ಅವರಿಗೆ ಹೇಳಿದ್ದನ್ನು ಲಕ್ಷ್ಯವಿಡದಷ್ಟು ಅವರು ಜನರ ಕುರಿತು ಬೇಸತ್ತು ಹೋಗಿದ್ದರು. ಜನರು ವಿನಾಕಾರಣ ಮೋಶೆ ಮತ್ತು ಆರೋನರನ್ನು ವಿರೋಧಿಸಿದ್ದರು. ಹಾಗಾಗಿ ಅವರು ಜನರ ಕುರಿತು ಬೇಸತ್ತು ಹೋಗಿದ್ದು ಆಶ್ಚರ್ಯವೇನಲ್ಲ! ಅವರು ದೇವರ ಆಜ್ಞೆಗಳನ್ನು ಲೆಕ್ಕಿಸದಷ್ಟು ಬೇಸತ್ತಿದ್ದರು. ಅದರ ಪರಿಣಾಮವಾಗಿ ಅವರು *ಇಸ್ರಾಯೇಲರ ಕಣ್ಣುಗಳ ಮುಂದೆ* ಆತನನ್ನು *ಪರಿಶುದ್ಧನಾಗಿ ಗೌರವಿಸುವುದಕ್ಕೆ* ಆತನಲ್ಲಿ ವಿಶ್ವಾಸವಿಡಲು ಸೋತುಹೋದರು.

   4) ದೇವರ ಆಜ್ಞೆಗಳನ್ನು ಅತ್ಯಂತ ವಿವರವಾಗಿ ಪಾಲಿಸುವ ಅವಶ್ಯವಿಲ್ಲವೆಂದು ಯೋಚಿಸಿ ಉದಾಸೀನ ಮಾಡಿದರು.

   5) ಬಂಡೆಯ ಸಂಗಡ ಮಾತನಾಡಿದರೆ ಸಾಕು ಎಂಬುದನ್ನು ಅವರು ನಂಬಲಿಲ್ಲ. ಅವರು ಆ ಘಟನೆಯನ್ನು ಒಂದು ದೊಡ್ಡ 'ಪ್ರದರ್ಶನವಾಗಿ' ಮಾಡಲು ಬಯಸಿದರು. ಆದರೆ ಹಾಗೆ ಮಾಡುವುದರ ಮೂಲಕ ಅವರು ದೇವರ ಮೇಲೆ ವಿಶ್ವಾಸವಿಡಲಿಲ್ಲ ಹಾಗೂ ದೇವರಿಗೆ ತನ್ನ ನುಡಿದ ವಾಕ್ಯವು ಇಸ್ರಾಯೇಲರಿಗೆ ತನ್ನ ಶಕ್ತಿಯನ್ನು ಪ್ರಕಟಿಸಲು ಸಾಕಾಗಿತ್ತು ಎಂಬುದನ್ನು ಅವರು ನಂಬಲಿಲ್ಲ ಎಂದು ಅದು ತೋರಿಸುತ್ತದೆ. ಅದರ ಪರಿಣಾಮವಾಗಿ ದೇವರು ಗೌರವಿಸಲ್ಪಡಲಿಲ್ಲ. ಅದರ ಬದಲಾಗಿ ಜನರ ಕಣ್ಣುಗಳ ಮುಂದೆ ಆತನ ಪರಿಶುದ್ಧತೆಯು ಉಲ್ಲಂಘಿಸಲ್ಪಟ್ಟಿತು.

2. ಇಂದು ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಮೆರೀಬಾದ ಕಥೆಯಿಂದ ಅನೇಕ ಸಂಗತಿಗಳನ್ನು ಕಲಿತುಕೊಳ್ಳಬಹುದು:

1) ನಾವು ಹೊಸ ಒಡಂಬಡಿಕೆಯ ಬೋಧನೆಗಳಲ್ಲಿ ಕಾಣುವ ದೇವರ ಆಜ್ಞೆಗಳನ್ನು ಪಾಲಿಸಲು ಯಾವಾಗಲೂ ಜಾಗರೂಕರಾಗಿರಬೇಕು. ನಾವು ದೇವರಿಗಿಂತ ಉತ್ತಮವಾಗಿ ಎಲ್ಲವನ್ನು ಹೇಗೆ ಮಾಡಬೇಕೆಂದು ತಿಳಿದಿದ್ದೇವೆಂದು ಯೋಚಿಸುವ ಶೋಧನೆಗೆ ಬೀಳಬಾರದು.

2) ಸಂಪ್ರದಾಯದಲ್ಲಿ ಘೋರವಾದ ತಪ್ಪೇನಿಲ್ಲ. ಆದರೆ ದೇವರ ಸ್ಪಷ್ಟವಾದ ಆಜ್ಞೆಗಳಿಗಿಂತ ನಮ್ಮ ಸ್ವಂತ ಸಂಪ್ರದಾಯಗಳಿಗೆ ಹೆಚ್ಚಿನ ಆದ್ಯತೆಯನ್ನು ಎಂದಿಗೂ ಕೊಡಬಾರದು. ಅದಕ್ಕೆ ಬದಲಾಗಿ ನಮ್ಮ ಸಂಪ್ರದಾಯಗಳು ನಾವು ಹೊಸ ಒಡಂಬಡಿಕೆಯಲ್ಲಿ ಕಾಣುವ ದೇವರ ಬೋಧನೆಗಳಿಗೆ ಅನುಸಾರವಾಗಿರಬೇಕು.

3) ನಾವು ಕೋಪಗೊಳ್ಳುವಾಗ ಆಗಾಗ್ಗೆ ನಾವು ಆನಂತರ ವ್ಯಥೆಪಡುವಂತಹ ಮಾತುಗಳನ್ನು ಆಡಿಬಿಡುತ್ತೇವೆ ಅಥವಾ ಕೃತ್ಯಗಳನ್ನು ಮಾಡಿಬಿಡುತ್ತೇವೆ. ಕೋಪ ಮತ್ತು ಉದ್ರೇಕವು ಆಗಾಗ್ಗೆ ನಾವು ಬುದ್ಧಿಗೇಡಿತನದ, ಇತರರಿಗೆ (ಮತ್ತು ನಮಗೂ ಸಹ) ನೋವನ್ನುಂಟುಮಾಡುವ ಸಂಗತಿಗಳನ್ನು ಮತ್ತು ದೇವರಿಗೆ ವಿರುದ್ಧವಾಗಿ ಪಾಪವನ್ನೂ ಮಾಡುವಂತೆ ನಡೆಸುತ್ತದೆ. ಅದರ ಪರಿಣಾಮವಾಗಿ, ನಮ್ಮ ಕೋಪವು ನಮ್ಮನ್ನು ಪಾಪಕ್ಕೆ ನಡೆಸದಂತೆ ಅದನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ನಾವು ಕಲಿತುಕೊಳ್ಳುವುದು ಅತ್ಯಂತ ಪ್ರಾಮುಖ್ಯವಾದದ್ದು (ಕೀರ್ತನೆ 4:4; ಎಫೆಸ. 4:26). ಪೌಲನು ಎಫೆಸದವರಿಗೆ ಹೀಗೆ ಬರೆಯುತ್ತಾನೆ: ಎಲ್ಲಾ ಕಹಿತನ, ಕೋಪ, ಕ್ರೋಧ, ಕಲಹ, ದುರ್ಭಾಷೆ ಇವುಗಳನ್ನೂ ಎಲ್ಲಾ ದುಷ್ಟತನವನ್ನೂ ನಿಮ್ಮಿಂದ ದೂರಮಾಡಿರಿ (ಎಫೆಸ. 4:31; ಕೊಲೊಸ್ಸೆ. 3:8 ರೊಂದಿಗೆ ಹೋಲಿಸಿರಿ). ಪವಿತ್ರಾತ್ಮನು ನಮ್ಮ ಜೀವಿತಗಳನ್ನು ರೂಪಾಂತರಗೊಳಿಸಲು ನಾವು ಅನುಮತಿಸುವಾಗ ಮಾತ್ರ ಇದು ಸಾಧ್ಯ. ಅದರ ಪರಿಣಾಮವಾಗಿ ಬರುವುದೇ ಪವಿತ್ರಾತ್ಮನ ಫಲವಾಗಿದೆ: ಪ್ರೀತಿ, ಆನಂದ, ಸಮಾಧಾನ, ಸಹನೆ, ದಯೆ, ಸದ್ಗುಣ, ನಂಬಿಗಸ್ತಿಕೆ, ಸಾತ್ವಿಕತೆ, ಸಂಯಮ (ಗಲಾತ್ಯ. 5:22–23).

4) ಇಂದು ಅನೇಕ ಕ್ರೈಸ್ತರು ಹೊಸ ಒಡಂಬಡಿಕೆಯ ಬೋಧನೆಗಳಲ್ಲಿ ಕಾಣುವ ದೇವರ ಆಜ್ಞೆಗಳನ್ನು ಪಾಲಿಸಲು ಉದಾಸೀನ ಮಾಡುತ್ತಾರೆ. ಈಗ ಕಾಲ ಬದಲಾಗಿದೆ ಹಾಗಾಗಿ ಸತ್ಯವೇದದಲ್ಲಿ ದಾಖಲಾಗಿರುವ ದೇವರ ವಾಕ್ಯಕ್ಕೆ ವಿಧೇಯರಾಗುವ ಯಾವ ಅವಶ್ಯವಿಲ್ಲವೆಂದು ಕೆಲವರು ಹೇಳುತ್ತಾರೆ. ಆದರೆ ನಾವು ಎಂದಿಗೂ ಆ ಬಲೆಯಲ್ಲಿ ಸಿಕ್ಕಿಬೀಳಬಾರದು. ಕಾಲವು ಬದಲಾಗುತ್ತಿರುವುದು ಸತ್ಯ, *ಆದರೆ ಕರ್ತನ ಮಾತು ಸದಾಕಾಲವೂ ಇರುವುದು* (1 ಪೇತ್ರ. 1:25, ಯೆಶಾಯ. 40:8 ರ ಉಲ್ಲೇಖ).

5) ದೇವರ ಸೇವಕರುಗಳಾಗಿ ನಾವು ಕೆಲವೊಮ್ಮೆ 'ಮನೋರಂಜನಾ ಪ್ರದರ್ಶನ' ಮಾಡುವುದರ ಮೂಲಕ ಜನರನ್ನು ಮೆಚ್ಚಿಸಲು ಶೋಧಿಸಲ್ಪಡುತ್ತೇವೆ. ನಾವು ಸಂಗತಿಗಳನ್ನು ನಯನಮನೋಹರವಾಗಿ ಮಾಡಲು ಬಯಸುತ್ತೇವೆ. ಕೇವಲ ಒಂದು ಪ್ರಾರ್ಥನೆ (ಅಥವಾ ಮೌನವಾಗಿ ನುಡಿಯುವ ಒಂದು ಮಾತು) ಪರಿಣಾಮಕಾರಿಯಾಗುವುದಿಲ್ಲವೆಂದು ನಾವು ನೆನೆಸುತ್ತೇವೆ. ಅದಕ್ಕೆ ಬದಲಾಗಿ ನಾವು ಕಿರುಚುತ್ತೇವೆ ಮತ್ತು ಕೂಗುತ್ತೇವೆ – ಜನರನ್ನು ದೊಬ್ಬುತ್ತೇವೆ ಮತ್ತು ಅಲ್ಲಾಡಿಸುತ್ತೇವೆ – ಹಾಗೆ ಮಾಡುವುದರ ಮೂಲಕ ದೇವರು ಮತ್ತು ಪವಿತ್ರಾತ್ಮನು ಕಾರ್ಯಮಾಡುತ್ತಿದ್ದಾನೆ ಎಂದು ಎಲ್ಲರ ಕಣ್ಣಿಗೆ ಕಾಣಲೆಂದು ಬಯಸುತ್ತೇವೆ. ಹೀಗೆ ನಾವು ಮನೋರಂಜನಾ ಕಾರ್ಯಕ್ರಮವನ್ನು ಮಾಡುತ್ತೇವೆ. ನಮಗೆ ದೇವರ ಮೇಲೆ ಹೆಚ್ಚು ಭರವಸೆಯಿಲ್ಲ. ಆದರೆ ನಾವು ಈ ರೀತಿಯಾಗಿ ವರ್ತಿಸುವಾಗ ಮೋಶೆ ಮತ್ತು ಆರೋನರು ಮೆರೀಬಾದಲ್ಲಿ ಮಾಡಿದ ಪಾಪವನ್ನು ನಾವೂ ಸಹ ಮಾಡುವ ಅಪಾಯದಲ್ಲಿದ್ದೇವೆ: ನಾವು ಜನರ ಕಣ್ಣು ಮುಂದೆ ದೇವರನ್ನು ಪರಿಶುದ್ಧನೆಂದು ಗೌರವಿಸುವುದಿಲ್ಲ.

3. ನಾವು ಅರಣ್ಯ. 20:22–29 ರಲ್ಲಿರುವ ಆರೋನನ ಮರಣದ ಕಥೆಯಿಂದ ಮೂರು ಸಂಗತಿಗಳನ್ನು ಕಲಿತುಕೊಳ್ಳಬಹುದು ಎಂದು ನಾನು ಭಾವಿಸುತ್ತೇನೆ:

1) ಈ ಬಾರಿ ಮೋಶೆಯು ಜಾಗರೂಕನಾಗಿ ದೇವರ ಆಜ್ಞೆಗಳನ್ನು ಪಾಲಿಸಿದನು. ನಾವು ಯಾವಾಗಲೂ ದೇವರ ಆಜ್ಞೆಗಳನ್ನು ಪಾಲಿಸಲು ಜಾಗರೂಕರಾಗಿರಬೇಕು.

2) ಆರೋನನ ವಸ್ತ್ರಗಳನ್ನು ತೆಗೆದು ಅವುಗಳನ್ನು ಎಲಿಯಾಜರನಿಗೆ ತೊಡಿಸುವ ಒಂದು ಸಾಂಕೇತಿಕ ಕಾರ್ಯವನ್ನು ಮೋಶೆಯು ಮಾಡಬೇಕೆಂದು ದೇವರು ಆಜ್ಞಾಪಿಸಿದನು. ಮಹಾಯಾಜಕನ ಸ್ಥಾನವು ಆರೋನನಿಂದ ಈಗ ಎಲಿಯಾಜರನಿಗೆ ವರ್ಗಾವಣೆಯಾಯಿತು ಎಂಬುದನ್ನು ಈ ಕಾರ್ಯವು ಸೂಚಿಸುತ್ತದೆ. ಇದರಿಂದ ನಾವು ನಮ್ಮ ಸಭೆಗಳಲ್ಲಿ ಸಾಂಕೇತಿಕವಾದ ಕಾರ್ಯಗಳನ್ನು ಮಾಡಲು ಕಲಿತುಕೊಳ್ಳಬಹುದು, ಉದಾಹರಣೆಗೆ ನಮ್ಮ ಸಭೆಗೆ ನಾವು ಒಬ್ಬ ಹೊಸ ಸಭಾಪಾಲಕರನ್ನು

ಆಹ್ವಾನಿಸುವಾಗ; ನಾವು ಒಂದು ಹೊಸ ಕಟ್ಟಡವನ್ನು ಅಥವಾ ಹೊಸ ಸೇವೆಯನ್ನು ಉದ್ಘಾಟಿಸುವಾಗ; ನಮ್ಮ ಸಭೆಯಲ್ಲಿ ವಿವಿಧ ಸೇವೆಗಳಿಗಾಗಿ ವಿವಿಧ ಜನರನ್ನು 'ನೇಮಿಸುವಾಗ'; ನಮ್ಮ ಸಭೆಗೆ ಹೊಸ ಸದಸ್ಯರನ್ನು ಸ್ವಾಗತಿಸುವಾಗ; ಮಕ್ಕಳ ಪ್ರತಿಷ್ಠೆಯಲ್ಲಿ, ಮದುವೆಗಳಲ್ಲಿ, ಅಂತ್ಯಸಂಸ್ಕಾರಗಳಲ್ಲಿ, ಗೃಹ ಪ್ರವೇಶಗಳಲ್ಲಿ ಮತ್ತು ನಮ್ಮ ಸಭೆಯ ಇತರೆ 'ಸಮಾರಂಭಗಳಲ್ಲಿ' ಅದನ್ನು ಮಾಡಬಹುದು.

3) ಸಮಸ್ತ ಇಸ್ರಾಯೇಲರು ಆರೋನನಿಗಾಗಿ ಮೂವತ್ತು ದಿನಗಳ ಕಾಲ ದುಃಖಿಸಿದರು. ಅನೇಕ ವರ್ಷಗಳಿಂದ ತಮ್ಮ ನಾಯಕನಾಗಿದ್ದ ಆರೋನನಿಗೆ ತಮ್ಮ ಗೌರವವನ್ನು ವ್ಯಕ್ತಪಡಿಸುವುದಕ್ಕಾಗಿ ಈ ದುಃಖಿಸುವ ಕಾಲವನ್ನು ಆಚರಿಸಿದರೆಂದು ನಾನು ಯೋಚಿಸುತ್ತೇನೆ. ನಾವೂ ಸಹ ನಮ್ಮ ನಾಯಕರುಗಳಿಗೆ ಗೌರವವನ್ನು ವ್ಯಕ್ತಪಡಿಸಬೇಕು. ಅವರು ಸತ್ತಾಗ ಮಾತ್ರವಲ್ಲ, ಬದಲಾಗಿ ಜೀವಂತವಿರುವಾಗಲೇ ಅವರಿಗೆ ಗೌರವ ಸೂಚಿಸಬೇಕು.

ಆದರೆ ನಮ್ಮ ಸಭೆಗಳಲ್ಲಿನ ಸಭಾಪಾಲಕನ ಸ್ಥಾನವು ವಂಶಪಾರ್ಯಂಪರವಾಗಿ ಹಸ್ತಾಂತರವಾಗಬೇಕೆಂದು ಈ ಕಥೆಯಿಂದ ನಾವು ಕಲಿತುಕೊಳ್ಳುತ್ತೇವೆಂದು ನಾನು ಯೋಚಿಸುವುದಿಲ್ಲ. ಇಸ್ರಾಯೇಲಿನಲ್ಲಿ ಮಹಾಯಾಜಕನ ಸ್ಥಾನವು ಕೇವಲ ಲೇವಿಯರ ಗೋತ್ರಕ್ಕೆ ಹಾಗೂ ಆರೋನನ ಕುಟುಂಬಕ್ಕೆ ಮಾತ್ರ ಸೀಮಿತವಾಗಿತ್ತು ಎಂಬುದು ಸತ್ಯ. ಆದರೆ ಅದು ಪ್ರತಿಯೊಂದು ಬಾರಿಯೂ ತಂದೆಯಿಂದ ಮಗನಿಗೆ ಹಸ್ತಾಂತರಗೊಳ್ಳುತ್ತಿರಲಿಲ್ಲ. ದಕ್ಷಿಣ ರಾಜ್ಯವಾದ ಯೆಹೂದದ ರಾಜವಂಶವೂ ಕೂಡ ದಾವೀದನ ಕಾಲದಿಂದ ಆತನ ಮನೆತನಕ್ಕೆ ಮಾತ್ರ ಸೀಮಿತವಾಗಿತ್ತು, ಆದರೆ ಅದು ಪ್ರತಿಯೊಮ್ಮೆಯೂ ತಂದೆಯಿಂದ ಮಗನಿಗೆ ಹಸ್ತಾಂತರವಾಗಲಿಲ್ಲ. ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ ಸಹ ಸೇವೆಯ ಕುರಿತಾಗಿ ತಂದೆಯ ಸ್ಥಾನವನ್ನು ಮಗನಿಗೆ ಹಸ್ತಾಂತರ ಮಾಡಿದ್ದರ ಉದಾಹರಣೆಗಳಿಲ್ಲ. ಅದಲ್ಲದೆ, ತಂದೆಯ ಸ್ಥಾನವನ್ನು ಮಗನಿಗೆ ಹಸ್ತಾಂತರ ಮಾಡಿದ್ದರ ಕುರಿತು ಹಳೆ ಒಡಂಬಡಿಕೆಯಲ್ಲಿರುವ ಬಹುತೇಕ ಉದಾಹರಣೆಗಳಲ್ಲಿ ಅಂತ್ಯವು ದುರಂತವಾಗಿರುವುದು ಸಹಜ: ಎಲೀ ಮತ್ತು ಆತನ ಮಕ್ಕಳು; ಸಮುವೇಲ ಮತ್ತು ಆತನ ಮಕ್ಕಳು; ಯೆಹೂದದ ಅರಸರುಗಳಲ್ಲಿ ಅನೇಕ ಜನರು.

**ಅರಣ್ಯಕಾಂಡ ಉತ್ತರಗಳು 7: ಆರಾದಿನ ನಾಶನ; ಕಂಚಿನ ಸರ್ಪ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಇಸ್ರಾಯೇಲರು ಆರಾದ್ ಪಟ್ಟಣದ ಅರಸನನ್ನು ಸೋಲಿಸಿ ಅದರ ಎಲ್ಲಾ ಪಟ್ಟಣಗಳನ್ನು ನಾಶಮಾಡಿದಾಗ ಆರಾದನ್ನು ಹೊರ್ಮಾ ಎಂಬುದಾಗಿ ಹೆಸರಿಸಲಾಯಿತು. ಹೊರ್ಮಾ ಅಂದರೆ 'ನಾಶನಕ್ಕೆ ಸಮರ್ಪಿತವಾದದ್ದು' ಎಂದರ್ಥ.
2. ಇಸ್ರಾಯೇಲರ ಪಾಪದ ನಿಮಿತ್ತವಾಗಿ ಯೆಹೋವನು ಅವರ ನಡುವೆ ವಿಷಸರ್ಪಗಳನ್ನು ಕಳುಹಿಸಿದನು. ಅವರು ತಾಳ್ಮೆಯನ್ನು ಕಳೆದುಕೊಂಡು ದೇವರ ಹಾಗೂ ಮೋಶೆಯ ವಿರುದ್ಧ ಮಾತನಾಡಿದ್ದರು. ಅವರು ದೇವರ ಅದ್ಭುತಕರವಾದ ಒದಗಿಸುವಿಕೆಗಾಗಿ ಆತನಿಗೆ ಕೃತಜ್ಞತೆಯನ್ನು ಸಲ್ಲಿಸುವುದರ ಬದಲಾಗಿ ಆಹಾರ ಮತ್ತು ನೀರಿನ ಕೊರತೆಯ ಬಗ್ಗೆ ದೂರಿದರು.
3. ಇಸ್ರಾಯೇಲರಿಗೆ ಕಳುಹಿಸಲ್ಪಟ್ಟ ದೇವರ ಶಿಕ್ಷೆಯು ತಾವು ಪಾಪ ಮಾಡಿದ್ದೇವೆ ಎಂಬ ಮನವರಿಕೆಯನ್ನು ಅವರಿಗೆ ಮಾಡಿಸಿತು. ಹಾಗಾಗಿ ಅವರು ಮೋಶೆಯು ತಮಗಾಗಿ ಪ್ರಾರ್ಥನೆಯನ್ನು ಮಾಡಬೇಕೆಂದು ಕೇಳಿಕೊಂಡರು.
4. ಇಸ್ರಾಯೇಲರಿಗೆ ರೋಗಸೌಖ್ಯವನ್ನು ತರುವುದೇ ಕಂಚಿನ ಸರ್ಪದ ಉದ್ದೇಶವಾಗಿತ್ತು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಹೊರ್ಮಾ ಅರಣ್ಯಕಾಂಡದ ಎರಡು ಕಥೆಗಳಲ್ಲಿ ಕಂಡುಬರುತ್ತದೆ. ಅವುಗಳನ್ನು 14:40–45 ರಲ್ಲಿ ಮತ್ತು 21:1–3 ರಲ್ಲಿ ಕಾಣಬಹುದು. ಈ ಎರಡು ಕಥೆಗಳ ನಡುವೆ ಇರುವ ಹೋಲಿಕೆ ಹೀಗಿದೆ:

   1) ಸಮಾನತೆಗಳು:

      - ಎರಡೂ ಕಥೆಗಳು ಇಸ್ರಾಯೇಲರ ಹಾಗೂ ಕಾನಾನ್ಯರ ನಡುವಿನ ಯುದ್ಧಗಳ ಕುರಿತಾಗಿದೆ.
      - ಎರಡೂ ಕಥೆಗಳು ಒಂದೇ ಭೌಗೋಳಿಕ ಪ್ರಾಂತದಲ್ಲಿ, ಅಂದರೆ ಕಾನಾನಿನ ದಕ್ಷಿಣ ಗಡಿಯಲ್ಲಿ ಸಂಭವಿಸುತ್ತವೆ.
      - ಎರಡೂ ಕಥೆಗಳಲ್ಲಿ ಹೊರ್ಮಾ ಪ್ರಸ್ತಾಪಿಸಲ್ಪಟ್ಟಿದೆ.
      - ಎರಡೂ ಕಥೆಗಳಲ್ಲಿ 'ಧರ್ಮಯುದ್ಧದ' ಕುರಿತು ಇಸ್ರಾಯೇಲರಿಗೆ ಒಂದು ಪಾಠವನ್ನು ಹೊಂದಿದೆ (ಹೆಚ್ಚಿನ ವಿವರಕ್ಕಾಗಿ ಈ ಕೆಳಗಿರುವ ನೇ ಅಂಶವನ್ನು ಗಮನಿಸಿರಿ).

   2) ವ್ಯತ್ಯಾಸಗಳು:

      - ಈ ಎರಡು ಕಥೆಗಳು ಎರಡು ವ್ಯತ್ಯಾಸವಾದ ಸಂತತಿಯನ್ನು ಒಳಗೊಂಡಿವೆ. ಅರಣ್ಯದಲ್ಲಿನ ಅಲೆದಾಟದ ಪ್ರಾರಂಭದಲ್ಲಿ ಸಂಭವಿಸುವ ಮೊದಲ ಕಥೆಯು, ದೇವರ ವಿರುದ್ಧ ದಂಗೆ ಎದ್ದು ಅರಣ್ಯದಲ್ಲಿ ಸತ್ತು ಹೋದ ಇಸ್ರಾಯೇಲರ ಮೊದಲ ಸಂತತಿಯನ್ನು ಒಳಗೊಂಡಿದೆ. 39 ವರ್ಷಗಳ ನಂತರ ಸಂಭವಿಸುವ ಎರಡನೆಯ ಕಥೆಯು, ವಾಗ್ದಾನ ದೇಶವನ್ನು ಪ್ರವೇಶ ಮಾಡಲಿದ್ದ ಹೊಸ ಸಂತತಿಯನ್ನು ಒಳಗೊಂಡಿದೆ.
      - ಈ ಎರಡು ಕಥೆಗಳು ಎರಡು ವ್ಯತಿರಿಕ್ತವಾದ ದೈವಶಾಸ್ತ್ರೀಯ ದೃಷ್ಟಿಕೋನಗಳನ್ನು ವಿವರಿಸುತ್ತವೆ. ಮೊದಲ ಕಥೆಯಲ್ಲಿ ಇಸ್ರಾಯೇಲರು ಮೋಶೆಯ ಎಚ್ಚರಿಕೆಯನ್ನು ಧಿಕ್ಕರಿಸಿ ದೇವರ ಅಪ್ಪಣೆಯಿಲ್ಲದೆ ಸರಿಬೀಳದ ರೀತಿಯಲ್ಲಿ (ಮೋಶೆಯಾಗಲಿ ಅಥವಾ ಒಡಂಬಡಿಕೆಯ ಮಂಜೂಷವಾಗಲಿ ಅವರೊಂದಿಗೆ ಇಲ್ಲದಿದ್ದಾಗ್ಯೂ) ದಾಳಿ ಮಾಡಿದರು. ಎರಡನೆಯ ಕಥೆಯಲ್ಲಿ, ಅವರು ತಮ್ಮ ದಿಟ್ಟತನವನ್ನು ಯೆಹೋವನಿಗೆ ಒಪ್ಪಿಸಿದರು ಮತ್ತು ಅವರು ದೇವರ ಹಾಗೂ ಮೋಶೆಯ ಆಜ್ಞೆಗಳನ್ನು ಪಾಲಿಸಿದಂತೆ ತೋರುತ್ತದೆ.
      - ಎರಡೂ ಕಥೆಗಳು ವ್ಯತ್ಯಾಸವಾಗಿ ಕೊನೆಗೊಳ್ಳುತ್ತವೆ: ಮೊದಲ ಕಥೆಯು ಇಸ್ರಾಯೇಲರ ಸೋಲಿನೊಂದಿಗೆ ಅಂತ್ಯಗೊಳ್ಳುತ್ತದೆ ಮತ್ತು ಅವರಿಗೆ ದೋಷಾರೋಪಣೆ ಮಾಡಲು ತಮ್ಮನ್ನು ಹೊರತುಪಡಿಸಿ ಬೇರೆ ಯಾರೂ ಸಿಗಲಿಲ್ಲ. ಎರಡನೆಯ ಕಥೆಯು ಇಸ್ರಾಯೇಲರ ಜಯದೊಂದಿಗೆ ಮತ್ತು ವೈರಿಯ ಸರ್ವನಾಶದೊಂದಿಗೆ ಅಂತ್ಯಗೊಳ್ಳುತ್ತದೆ ಮತ್ತು ದೇವರಿಗೆ ಮಾತ್ರ ಅದರ ಕೀರ್ತಿಯನ್ನು ಸಲ್ಲಿಸಲು ಸಾಧ್ಯ.

- ಮೊದಲ ಕಥೆಯು 'ಧರ್ಮಯುದ್ಧದ' ಕುರಿತು ಒಂದು ನಕಾರಾತ್ಮಕವಾದ ಕಥೆಯನ್ನು ಹೇಳುತ್ತದೆ: ದೇವರಿಲ್ಲದೆ ಜಯವಿಲ್ಲ! ಎರಡನೆಯ ಕಥೆಯು 'ಧರ್ಮಯುದ್ಧದ' ಕುರಿತು ಒಂದು ಸಕಾರಾತ್ಮಕವಾದ ಕಥೆಯನ್ನು ಹೇಳುತ್ತದೆ: ಜಯವನ್ನು ಅನುಗ್ರಹಿಸುವವನು ದೇವರೇ!

2. ನಾನು 21:6 ನ್ನು (*ಆಗ ಯೆಹೋವನು ಜನರೊಳಗೆ ವಿಷಸರ್ಪಗಳನ್ನು ಕಳುಹಿಸಿದನು. ಅವು ಜನರನ್ನು ಕಚ್ಚಿದ್ದರಿಂದ ಇಸ್ರಾಯೇಲರಲ್ಲಿ ಬಹು ಜನರು ಸತ್ತುಹೋದರು*), ಮತ್ತು *ದೀರ್ಘಶಾಂತನೂ ಮಹಾಪ್ರೀತಿಯುಳ್ಳವನೂ ಪಾಪವನ್ನೂ ತಿರುಗಿ ಬೀಳುವುದನ್ನು ಮನ್ನಿಸುವಾತನೂ* ಆಗಿರುವ ದೇವರು ಹೇಗೆ ತನ್ನ ಹಾಗೂ ತಾನು ನೇಮಿಸಿದ ನಾಯಕರ ವಿರುದ್ಧ ಮಾತನಾಡುವವರ ಹಾಗೂ ತಮ್ಮ ಜೀವಿತಗಳಿಗೆ ದೇವರ ಒದಗಿಸುವಿಕೆಯ ಕುರಿತು ದೂರುವ ಜನರನ್ನು ಕೊಲ್ಲಲು ವಿಷಸರ್ಪಗಳನ್ನು ಕಳುಹಿಸಲು ಸಾಧ್ಯ ಎಂಬುದನ್ನು ಹೀಗೆ ಅರ್ಥಮಾಡಿಕೊಳ್ಳುತ್ತೇನೆ:

   1) ನಾನು *ಯೆಹೋವನು ಜನರೊಳಗೆ ವಿಷಸರ್ಪಗಳನ್ನು ಕಳುಹಿಸಿದನು* ಎಂಬ ಹೇಳಿಕೆಯನ್ನು ಹೀಗೆ ಅರ್ಥಮಾಡಿಕೊಳ್ಳುತ್ತೇನೆ; 'ಯೆಹೋವನು ಜನರೊಳಗೆ ವಿಷಸರ್ಪಗಳನ್ನು ಅನುಮತಿಸಿದನು' ಎಂಬುದಾಗಿ. ವಿಷಸರ್ಪಗಳು ಮರುಭೂಮಿಯಲ್ಲಿ ಯಾವಾಗಲೂ ಹರಿದಾಡುತ್ತಿದ್ದವು. ಆದರೆ ಅನೇಕಾವರ್ತಿ ದೇವರು ಈ ಅಪಾಯಕಾರಿ ಸರ್ಪಗಳಿಂದ ಇಸ್ರಾಯೇಲರನ್ನು ಸಂರಕ್ಷಿಸಿದನು. ಈ ಕಥೆಯಲ್ಲಿರುವ ದೇವರ ಶಿಕ್ಷೆಯು ಆತನು ತನ್ನ ಜನರ ಮೇಲಿದ್ದ ತನ್ನ ರಕ್ಷಣಾಹಸ್ತವನ್ನು ತೆಗೆದು ವಿಷಸರ್ಪಗಳು ಅವರಿಗೆ ಹಾನಿ ಮಾಡಲು ಅನುಮತಿಸಿದನು ಎಂಬುದಾಗಿದೆ.

   2) ನಾವು ಈ ಕಥೆಯಲ್ಲಿ ದೇವರ ಅಪಾರವಾದ ಪ್ರೀತಿಯನ್ನೂ ಸಹ ಕಾಣುತ್ತೇವೆಂದು ನಾನು ನೆನೆಸುತ್ತೇನೆ. ಸರ್ಪಗಳು ಜನರಿಗೆ ಹಾನಿ ಮಾಡುವಂತೆ ಅನುಮತಿಸಿದ್ದು ದೇವರು ಅವರನ್ನು ಪ್ರೀತಿಸಿದ್ದರಿಂದಲೇ. ಇಸ್ರಾಯೇಲರ ಹೊಸ ಸಂತತಿಯು ತಮ್ಮ ಪಾಪವನ್ನು ಮನಗಂಡು ಪಶ್ಚಾತ್ತಾಪಪಡುವುದಕ್ಕಿಂತ ಮುಂಚೆ ಇಂತಹ ಭಯಂಕರ ಸಂಗತಿಯು ನಡೆಯುವುದು ಅವಶ್ಯವಾಗಿತ್ತೆಂದು ದೇವರು ತಿಳಿದಿದ್ದನು.

   3) ಈ ಕಥೆಯು ಇಸ್ರಾಯೇಲರಿಗೆ ದೇವರ ಕ್ಷಮಾಪಣೆಯ ಪಾಠವನ್ನೂ ಕಲಿಸಿತೆಂದು ನಾನು ಆಲೋಚಿಸುತ್ತೇನೆ. ದೇವರ ದೃಷ್ಟಿಕೋನವು ಅವರ ದೃಷ್ಟಿಕೋನಕ್ಕಿಂತ ವ್ಯತ್ಯಾಸವಾಗಿತ್ತು. ಸರ್ಪಗಳು ಇಸ್ರಾಯೇಲರಿಗೆ ಹಾನಿ ಮಾಡುವಂತೆ ಅನುಮತಿಸುವ ಮುನ್ನವೇ ಆತನು ತನ್ನ ಕ್ಷಮಿಸುವ ಮತ್ತು ಪ್ರೀತಿಸುವ ಹೃದಯದಲ್ಲಿ ತನ್ನ ರಕ್ಷಣಾ ಯೋಜನೆಯನ್ನು ಸಿದ್ಧಪಡಿಸಿದನು – ಜನರಿಗೆ ಸೌಖ್ಯವನ್ನು ಮತ್ತು ಜೀವವನ್ನು ತರುವ ಕಂಚಿನ ಸರ್ಪ.

3. ಯೇಸು ನಿಕೋದೇಮನೊಂದಿಗೆ ಮಾತನಾಡುತ್ತಿರುವಾಗ ಕಂಚಿನ ಸರ್ಪದ ಕಥೆಯನ್ನು ಉಲ್ಲೇಖಿಸಿದನು (ಯೋಹಾನ 3:14–15). ಅರಣ್ಯ. 21:6–9 ಹಾಗೂ ಯೋಹಾನ 3:14–15 ರ ನಡುವಿನ ಸಂಬಂಧವನ್ನು ನಾನು ಹೀಗೆ ವಿವರಿಸುವೆನು:

   ಸಂಬಂಧ:

   1) ಕಂಚಿನ ಸರ್ಪವನ್ನು ಇಡುವುದರ ಸಂಗತಿಯನ್ನು ಕ್ರಿಸ್ತನ ಕ್ರೂಜೆಯ ಒಂದು 'ಮಾದರಿಯಾಗಿ' ನಾವು ಕಾಣಬಹುದು. ಹಳೆ ಒಡಂಬಡಿಕೆಯಲ್ಲಿ ಒಂದು 'ಮಾದರಿಯು' (ಒಬ್ಬ ವ್ಯಕ್ತಿ, ಒಂದು ವಸ್ತು ಅಥವಾ ಒಂದು ಘಟನೆ) ಕ್ರಿಸ್ತನ ಹಾಗೂ ಆತನ ಕ್ರಿಯೆಯ ಕಡೆಗೆ ಬೆರಳು ಮಾಡಿ ತೋರಿಸುವ (ಅಥವಾ ಮುಂಛಾಯೆಯಾಗಿ ಅಥವಾ ಪ್ರವಾದನಾತ್ಮಕವಾಗಿ ಚಿತ್ರಿಸುವ) ಸಂಗತಿಯಾಗಿದೆ. ಸ್ವತಃ ಹೊಸ ಒಡಂಬಡಿಕೆಯು ಕ್ರಿಸ್ತನೊಂದಿಗೆ ಸಂಬಂಧಿಸುವ ಹಳ ಒಡಂಬಡಿಕೆಯ ಯಾವುದೇ ಸಂಗತಿಯು ನಿಜವಾದ 'ಮಾದರಿಯಾಗಿದೆ'. ಇಲ್ಲವಾದರೆ ಊಹಾಪೋಹಗಳಿಗೆ ಹೆಚ್ಚಿನ ಅವಕಾಶ ಸಿಕ್ಕಂತಾಗುತ್ತದೆ. ಈ ಸನ್ನಿವೇಶದ ಕುರಿತು ಸ್ವತಃ ಯೇಸುವೇ ಮೋಶೆಯು ಕಂಬದ ಮೇಲೆ ಇಟ್ಟ ಸರ್ಪದ ಹಾಗೂ (ತನ್ನ ಕ್ರೂಜೆಯ ಮೇಲಿನ ಮರಣವನ್ನು ಉಲ್ಲೇಖಿಸುತ್ತಾ) ತನ್ನ ಸ್ವಂತ 'ಏರಿಸುವಿಕೆಯ' ನಡುವೆ ಒಂದು ಸಂಬಧವನ್ನು ಕಲ್ಪಿಸುತ್ತಾನೆ. ಹಾಗಾಗಿ ಇಲ್ಲಿ ಊಹಾಪೋಹಕ್ಕೆ ಯಾವ ಅವಕಾಶವಿರುವುದಿಲ್ಲ. ಒಂದು ಕಂಬದ ಮೇಲೆ ಕಂಚಿನ ಸರ್ಪವನ್ನು ಹಾಕಿದ್ದರ ಸಂಗತಿಯು ಯೇಸುವಿನ ಕ್ರೂಜೆಯ ಮೇಲಿನ ಮರಣದ ಕಡೆಗೆ ಬೆರಳು ಮಾಡಿ ತೋರಿಸುವ ಒಂದು 'ಮಾದರಿಯಾಗಿದೆ'.

   2) ಹಾಗಾದರೆ ನಾವು 'ಮಾದರಿಯನ್ನು' ಹೇಗೆ ಅರ್ಥವಿವರಿಸಬೇಕು? ಅಥವಾ ನಾವು ಈ ಎರಡು ವಾಕ್ಯಭಾಗಗಳ ನಡುವೆ ಯಾವ ದೈವಶಾಸ್ತ್ರೀಯ ಸಮಾನತೆಗಳನ್ನು ಕಲ್ಪಿಸಬಹುದು?

      - ಜನರ ಸ್ಥಿತಿ: ಇಸ್ರಾಯೇಲರು ಪಾಪ ಮಾಡಿದ್ದರು. ಯೇಸು ಪಾಪಿಗಳಿಗಾಗಿ ಸತ್ತನು.

- ಜನರ ಸ್ಥಿತಿಯ ಪರಿಣಾಮ: ಸರ್ಪಗಳ ಕಡಿತವು ಇಸ್ರಾಯೇಲರಿಗೆ ಮರಣವನ್ನು ತಂದಿತು. ಈ ಲೋಕದಲ್ಲಿರುವ ಜನರಿಗೆ 'ಪಾಪದ ಕಡಿತವು' ನಿತ್ಯಮರಣವನ್ನು ತರುತ್ತದೆ.

- ಪರಿಹಾರ: ಇಸ್ರಾಯೇಲರು ನಂಬಿಕೆಯ ಕಣ್ಣುಗಳಿಂದ ಕಂಚಿನ ಸರ್ಪವನ್ನು ನೋಡಿದಾಗ ಬದುಕುಳಿದರು. ಕ್ರೂಜೆಯ ಮೇಲಿನ ಯೇಸುವಿನ ಮರಣದಲ್ಲಿ ನಂಬಿಕೆಯಿಡುವವರೆಲ್ಲರೂ ನಿತ್ಯಜೀವವನ್ನು ಹೊಂದುವರು.

- ಪರಿಹಾರವನ್ನು ಒದಗಿಸಿದಾತನು: ಇಸ್ರಾಯೇಲರಿಗಾಗಿ ವಿಷದ ಪರಿಣಾಮಕ್ಕೆ ರೋಗಪರಿಹಾರವನ್ನು ಒದಗಿಸಿದವನು (ಕಂಚಿನ ಸರ್ಪವನ್ನು ತಯಾರಿಸಲು ಮೋಶೆಯನ್ನು ಉಪಯೋಗಿಸಿದಾಗ್ಯೂ) ದೇವರೇ ಆಗಿದ್ದಾನೆ. ಕ್ರೂಜೆಯ ಮೇಲಿನ ಯೇಸುವಿನ ಕಾರ್ಯದಲ್ಲಿ ನಂಬಿಕೆಯಿಡುವವರೆಲ್ಲರಿಗೂ ಪಾಪದ ವಿಷದ ಪರಿಣಾಮಕ್ಕೆ ರೋಗಪರಿಹಾರವನ್ನು ಒದಗಿಸುವವನು ದೇವರೇ ಆಗಿದ್ದಾನೆ.

- ಪರಿಹಾರದ ಸಾಫಲ್ಯತೆ: ಕಂಚಿನ ಸರ್ಪವನ್ನು 'ನೋಡಿದವರೆಲ್ಲರೂ' ಬದುಕುಳಿದರು. 'ನಂಬುವವರೆಲ್ಲರೂ' ನಿತ್ಯಜೀವವನ್ನು ಹೊಂದುವರು. ಹಾಗಾಗಿ ಎರಡೂ ಸನ್ನಿವೇಶಗಳಲ್ಲಿ ಪೂರ್ಣವಾದ ಸಾಫಲ್ಯತೆಯು ಕಂಡುಬರುತ್ತದೆ.

4. ಇಂದು ದಕ್ಷಿಣ ಭಾರತದ ಸಭೆಗೆ ನಾಯಕತ್ವದ ಕುರಿತು ಕಂಚಿನ ಸರ್ಪದ ಕಥೆಯು ಕನಿಷ್ಠಪಕ್ಷ ಮೂರು ಸಂಗತಿಗಳನ್ನು ಕಲಿಸುತ್ತದೆ:

   1) ಸಭೆಯ ವಿಶ್ವಾಸಿಗಳು ತಮ್ಮ ನಾಯಕರುಗಳ ಕುರಿತು ಮಾತನಾಡುವುದು ಹಗುರವಾದ ವಿಷಯವಲ್ಲ. ನ್ಯೂನತೆಯುಳ್ಳ ನಾಯಕತ್ವದೊಂದಿಗೆ ವ್ಯವಹರಿಸಲು ಸಭೆಗೆ ಸೂಕ್ತವಾದ ಮಾರ್ಗಗಳುಂಟು. ಆದರೆ ಸಭಾನಾಯಕರ ವಿರುದ್ಧ ಮೂರ್ಖತನವಾಗಿ ಮತ್ತು ವಿನಾಕಾರಣವಾಗಿ ಮಾತನಾಡುವುದು ಸೂಕ್ತವಲ್ಲ. ಮೋಶೆಯು ಯಾಕೆ ಇಸ್ರಾಯೇಲರನ್ನು ಈಜಿಪ್ಟಿನಿಂದ ಕರೆತಂದನೆಂಬುದು ಇಸ್ರಾಯೇಲರಿಗೆ ತಿಳಿದಿತ್ತು. ಅವರನ್ನು ಗುಲಾಮತನದಿಂದ ಬಿಡಿಸಿ ದೇವರು ಅವರಿಗೆ ವಾಗ್ದಾನಮಾಡಿದ ದೇಶಕ್ಕೆ ಅವರನ್ನು ನಡೆಸಲು ಮೋಶೆ ಬಯಸಿದ್ದನು. ಅವರಿಗೆ ಏದೋಮನ್ನು ಹಾದು ಹೋಗಲು ಅನುಮತಿ ಸಿಗಲಿಲ್ಲವೆಂಬುದೂ ಅವರಿಗೆ ತಿಳಿದಿತ್ತು. ಹಾಗಾಗಿ ಮೋಶೆಯು ಅವರನ್ನು ಮುಟ್ಟಬೇಕಾದ ಸ್ಥಳಕ್ಕೆ ತಲುಪಿಸಲು ಅನಿವಾರ್ಯವಾಗಿ ದಕ್ಷಿಣಕ್ಕೆ ಮಾರ್ಗ ಬದಲಿಸಬೇಕಾಯಿತು. ಹಾಗಾಗಿ ಮೋಶೆಯ ವಿರುದ್ಧ ಅವರು ಮಾತನಾಡಿದ್ದು ಸ್ವಲ್ಪವೂ ಸರಿಯಲ್ಲ. ಇಂದು ವಿಶ್ವಾಸಿಗಳು ಇಸ್ರಾಯೇಲರ ಈ ಕೆಟ್ಟ ಉದಾಹರಣೆಯನ್ನು ಪಾಲಿಸಬಾರದು.

   2) ಇಂದು ದಕ್ಷಿಣ ಭಾರತದ ಸಭಾನಾಯಕನಿಗೆ ಮೋಶೆಯು ಒಂದು ಶ್ರೇಷ್ಠ ಮಾದರಿಯಾಗಿದ್ದಾನೆ: ಇಸ್ರಾಯೇಲರು ಆತನ ವಿರುದ್ಧ ಮಾಡಿದ ಟೀಕೆಗಳು ಬುದ್ಧಿಹೀನವಾಗಿದ್ದವು ಮತ್ತು ಅನುಚಿತವಾಗಿದ್ದವು. ಇಂದು ನಾಯಕರಾಗಿರುವ ನಮ್ಮಲ್ಲಿ ಅನೇಕರು ಜನರೊಂದಿಗೆ ಕೋಪಗೊಂಡಿರಬಹುದು ಅಥವಾ ಬೇಸರಗೊಂಡಿರಬಹುದು. ಆದರೆ ಮೋಶೆಯು ಹಾಗೆ ಮಾಡಲಿಲ್ಲ. ಅವರು ತಮ್ಮ ಬಿಡುಗಡೆಗಾಗಿ ಪ್ರಾರ್ಥಿಸಬೇಕೆಂದು ಆತನಲ್ಲಿ ಕೇಳಿಕೊಂಡಾಗ, ಆತನು ಅವರ ನಕಾರಾತ್ಮಕ ಮನೋಭಾವನೆಗಾಗಿ ಅಥವಾ ಬುದ್ಧಿಹೀನತೆಗಾಗಿ ಅವರನ್ನು ದೂಷಿಸದೆ ಅಥವಾ ರಂಪಾಟ ಮಾಡದೆ ತಕ್ಷಣವಾಗಿ ಅದನ್ನು ಮಾಡಿದನು.

   3) ಒಬ್ಬ ಆತ್ಮಿಕ ನಾಯಕನು ದೇವರ ಹಸ್ತಗಳಲ್ಲಿ ಹೇಗೆ ಜನರಿಗೆ ರಕ್ಷಣೆಯನ್ನು ತರಲು ಸಾಧನವಾಗಬಲ್ಲನು ಎಂಬುದಕ್ಕೆ ಈ ಕಥೆಯಲ್ಲಿರುವ ಮೋಶೆಯು ಒಂದು ಉದಾಹರಣೆಯಾಗಿದ್ದಾನೆ. ವಿಷಸರ್ಪಗಳಿಂದ ಜನರನ್ನು ಬಿಡಿಸಿದ್ದು ದೇವರೇ ಆಗಿದ್ದನು, ಆದರೆ ಇದನ್ನು ಕಾರ್ಯಗತಗೊಳಿಸಲು ದೇವರು ಮೋಶೆಯನ್ನು ಉಪಯೋಗಿಸಿದನು. ಮೋಶೆಯು ದೇವರು ತನ್ನನ್ನು ಉಪಯೋಗಿಸಲು ಅನುಮತಿಸಿದನು. ಅದೇ ರೀತಿಯಾಗಿ, ಇಂದು ದಕ್ಷಿಣ ಭಾರತದಲ್ಲಿರುವ ಸಭಾನಾಯಕರು ಸಭೆಗಾಗಿ ದೇವರ ಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಹಾಗೂ ರಾಷ್ಟ್ರಗಳ ರಕ್ಷಣೆಗಾಗಿ ದೇವರ ಸಾಧನಗಳಾಗಬಹುದು.

**ಅರಣ್ಯಕಾಂಡ ಉತ್ತರಗಳು 8: ಬಿಳಾಮನು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಯೊರ್ದಾನ್ ನದಿಯ ಬಳಿಯಲ್ಲಿದ್ದ ಮೋವಾಬಿನ ಬಯಲುಗಳಲ್ಲಿ ಇಸ್ರಾಯೇಲರು ಪಾಳೆಯವನ್ನು ಹಾಕಿಕೊಂಡಿದ್ದಾಗ ಈ ಕಥೆಯು ಸಂಭವಿಸಿತು.

2. ಬಾಲಾಕನು ಮೋವಾಬಿನ ಅರಸನಾಗಿದ್ದನು ಮತ್ತು ಆತನಿಗಿದ್ದ ಚಿಂತೆಯು ಅಸಂಖ್ಯರಾಗಿದ್ದ ಇಸ್ರಾಯೇಲರು ತನ್ನ ದೇಶವನ್ನು ನಾಶಮಾಡುವರು ಎಂಬುದಾಗಿತ್ತು. ಅದಲ್ಲದೆ, ಅವರು ಬಲಿಷ್ಠರಾಗಿದ್ದರಿಂದ ಅವರನ್ನು ಸೋಲಿಸಲು ಆತನಿಗೆ ಸಾಧ್ಯವಿರಲಿಲ್ಲ.

3. ಬಿಳಾಮನು ಒಬ್ಬ ಅನ್ಯಜನಾಂಗದ ಭವಿಷ್ಯ ನುಡಿಯುವವನಾಗಿದ್ದು ತನ್ನ ಫಲಕಾರಿಯಾದ ಶಾಪ ಮತ್ತು ಆಶೀರ್ವಾದಗಳಿಗೆ ಪ್ರಸಿದ್ಧನಾಗಿದ್ದನು (22:6 ನ್ನು ನೋಡಿರಿ). ಆತನು ಯುಫ್ರೆಟಿಸ್ ನದಿಯ ಬಳಿಯಲ್ಲಿದ್ದ ವಾಯವ್ಯ ಮೆಸೊಪೊಟಾಮಿಯದ ಪೆತೋರ್ ಎಂಬ ಊರಿನವನಾಗಿದ್ದನು.

4. ಪ್ರಾರಂಭದಲ್ಲಿ ಬಿಳಾಮನು ಇಸ್ರಾಯೇಲರನ್ನು ಶಪಿಸಲು ಕರೆಯಲ್ಪಟ್ಟಾಗ ಹೋಗಲಿಲ್ಲ, ಯಾಕೆಂದರೆ ಅವರು ಆಶೀರ್ವದಿಸಲ್ಪಟ್ಟ ಜನರೆಂದು ದೇವರು ರಾತ್ರಿಯಲ್ಲಿ ಆತನಿಗೆ ತಿಳಿಸಿದ್ದನು. ನಂತರ ಅರಸನಾದ ಬಾಲಾಕನು ಇನ್ನೂ ಹೆಚ್ಚಿನ ಮತ್ತು ಶ್ರೇಷ್ಠ ಪ್ರತಿನಿಧಿಗಳನ್ನು ಆತನಲ್ಲಿ ಬೇಡಿಕೊಳ್ಳಲು ಕಳುಹಿಸಿಕೊಟ್ಟನು. ಈ ಬಾರಿ ಬಿಳಾಮನು ಹೋಗುವಂತೆ ದೇವರು ಹೇಳಿದನು, ಆದರೆ ದೇವರು ಕೊಡುವ ಮಾತುಗಳನ್ನು ಮಾತ್ರ ಆತನು ಹೇಳಬೇಕೆಂದು ಎಚ್ಚರಿಸಿದನು.

5. ತನ್ನನ್ನು ಮೋವಾಬಿಗೆ ಕೊಂಡೊಯ್ಯದಿದ್ದದ್ದಕ್ಕೆ ಬಿಳಾಮನು ಮೂರು ಬಾರಿ ಕತ್ತೆಯನ್ನು ಹೊಡೆದಾಗ ದೇವರು ಕತ್ತೆಯ ಬಾಯಿಯನ್ನು ತೆರೆದು ಅದು ಆತನ ಕ್ರೂರ ನಡತೆಯ ಕುರಿತು ಆತನನ್ನು ಗದರಿಸುವಂತೆ ಮಾಡಿದನು.

6. ಬಿಳಾಮನಿಗೆ ದೇವದೂತನು ಕೊಟ್ಟ ಸಂದೇಶವು ಮೂರು ಭಾಗಗಳನ್ನು ಹೊಂದಿದೆ:

   1) ಬಿಳಾಮನು ಕತ್ತೆಯನ್ನು ಹೊಡೆದದ್ದಕ್ಕೆ ದೇವದೂತನು ಆತನನ್ನು ಗದರಿಸಿದನು.

   2) ಆ ಕತ್ತೆಯು ಪ್ರಯಾಣವನ್ನು ಯಾಕೆ ಮುಂದುವರೆಸಲಿಲ್ಲವೆಂಬುದನ್ನು ಆತನಿಗೆ ವಿವರಿಸಿದನು: ಆ ಕತ್ತೆಯು ದೇವದೂತನು ಬಿಚ್ಚುಗತ್ತಿಯನ್ನು ಹಿಡಿದು ಮಾರ್ಗದಲ್ಲಿ ಎದುರಾಗಿ ನಿಂತಿದ್ದನ್ನು ಕಂಡಿತು.

   3) ಆ ಕತ್ತೆಯು ನಿಜವಾಗಲೂ ಆತನ ಪ್ರಾಣವನ್ನು ಉಳಿಸಿತೆಂದು ಬಿಳಾಮನಿಗೆ ತಿಳಿಸಿದನು. ಬಿಳಾಮನು ತನ್ನ ಪ್ರಯಾಣವನ್ನು ಮುಂದುವರೆಸಿದ್ದರೆ ದೇವದೂತನು ಕತ್ತೆಯನ್ನು ಉಳಿಸಿ ಆತನನ್ನು ಕೊಲ್ಲುತ್ತಿದ್ದನು.

7. ಬಾಲಾಕನಿಗೂ ಹಾಗೂ ಮೋವಾಬಿನ ಸಮಸ್ತ ರಾಜಕುಮಾರರಿಗೂ ಬಿಳಾಮನು ಕೊಟ್ಟ ಮೊದಲ ಸಂದೇಶವು ನಾಲ್ಕು ಮುಖ್ಯ ಅಂಶಗಳನ್ನು ಹೊಂದಿತ್ತು:

   1) ಬಿಳಾಮನು ಇಸ್ರಾಯೇಲರನ್ನು ಶಪಿಸಲಾಗಲಿಲ್ಲ, ಯಾಕೆಂದರೆ ದೇವರು ಅವರನ್ನು ಶಪಿಸಿರಲಿಲ್ಲ (23:8).

   2) ಇಸ್ರಾಯೇಲರು ಪ್ರತ್ಯೇಕವಾಗಿ ಮತ್ತು ಇತರೆ ರಾಷ್ಟ್ರಗಳಿಗಿಂತ ವಿಭಿನ್ನವಾಗಿ ದೇಶದಲ್ಲಿ ವಾಸಿಸುವರು ಎಂಬುದನ್ನು ಆತನು ಕಂಡನು (23:9).

   3) ಇಸ್ರಾಯೇಲರು ಅಸಂಖ್ಯರಾಗಿರುವರೆಂದು ಆತನು ಕಂಡನು (23:10).

   4) ಆತನು ಇಸ್ರಾಯೇಲರ ಭವಿಷ್ಯದಲ್ಲಿರುವ ನೀತಿವಂತಿಕೆಯನ್ನು ಮನಗಂಡನು (23:10).

8. ಬಿಳಾಮನ ಮೊದಲ ಹಾಗೂ ಎರಡನೆಯ ಸಂದೇಶದ ನಡುವೆ ಇರುವ ಮುಖ್ಯ ವ್ಯತ್ಯಾಸವೇನೆಂದರೆ:

   ಆತನು ತನ್ನ ಮೊದಲ ಸಂದೇಶದಲ್ಲಿ, ತಾನು ಇಸ್ರಾಯೇಲರನ್ನು ಶಪಿಸಲು ಆಗದೆಂದು ಆತನು ಹೇಳುತ್ತಾನೆ (23:8).

   ಆತನು ತನ್ನ ಎರಡನೆಯ ಸಂದೇಶದಲ್ಲಿ, ತಾನು ಇಸ್ರಾಯೇಲರನ್ನು ಆಶೀರ್ವದಿಸಬೇಕೆಂದು ದೇವರು ಆಜ್ಞಾಪಿಸಿದ್ದಾನೆ ಎಂದು ಆತನು ಹೇಳುತ್ತಾನೆ (23:20).

9. ಒಂದು ವೇಳೆ ಇಸ್ರಾಯೇಲರನ್ನು ಶಪಿಸಲು ಸಾಧ್ಯವಾಗದಿದ್ದರೂ ಅವರನ್ನು ಆಶೀರ್ವದಿಸಬಾರದೆಂದು ಹೇಳುವುದರ ಮೂಲಕ ಬಿಳಾಮನ ಎರಡನೆಯ ಸಂದೇಶಕ್ಕೆ ಬಾಲಾಕನು ಪ್ರತಿಕ್ರಿಯಿಸಿದನು (23:25). ಅದಕ್ಕೆ ಬಿಳಾಮನು ದೇವರು ಹೇಳಬೇಕೆಂದು ತನಗೆ ಹೇಳಿದ್ದನ್ನು ಮಾತ್ರ ತಾನು ಹೇಳಲು ಸಾಧ್ಯವೆಂದು ಈಗಾಗಲೇ ಬಾಲಾಕನಿಗೆ ತಿಳಿಸಿದ್ದೇನೆಂದು ಆತನಿಗೆ ಉತ್ತರವನ್ನು ನೀಡಿದನು.

10. ಬಿಳಾಮನು ತನ್ನ ಮೂರನೆಯ ನುಡಿಯನ್ನು ಹೇಳಲು ಸಿದ್ಧಗೊಂಡಾಗ ವ್ಯತ್ಯಾಸವಾದ ರೀತಿಯಲ್ಲಿ ವರ್ತಿಸಿದನು. ಈ ಬಾರಿ ಆತನು ಶಕುನವನ್ನು ಕಂಡುಕೊಳ್ಳಲು ಹೋಗಲಿಲ್ಲ (24:1). ಆದರೆ ಆತನು ಮರುಭೂಮಿಯಲ್ಲಿ ಇಸ್ರಾಯೇಲರ ಹನ್ನೆರಡು ಗೋತ್ರಗಳು ಪಾಳೆಯವನ್ನು ಹಾಕಿಕೊಂಡಿರುವುದನ್ನು ಕಂಡಾಗ ದೇವರ ಆತ್ಮನು ಆತನ ಮೇಲೆ ಇಳಿದು ಬಂದನು (24:2) ಮತ್ತು ಆತನು ಅವರನ್ನು ಆಶೀರ್ವದಿಸಿದನು.

11. ಬಾಲಾಕನು ಬಿಳಾಮನಿಗೆ ಶುಲ್ಕವನ್ನು ಕಟ್ಟಲು ನಿರಾಕರಿಸುವುದರ ಮೂಲಕ ಆತನ ವಿರುದ್ಧ ಕೋಪವನ್ನು ವ್ಯಕ್ತಪಡಿಸಿದನು.

12. ಬಿಳಾಮನು ತನ್ನ ನಾಲ್ಕನೆಯ ನುಡಿಯಲ್ಲಿ ಇಸ್ರಾಯೇಲಿನ ಶತ್ರುಗಳ ಮೇಲೆ ವಿಜಯ ಸಾಧಿಸುವ ಇಸ್ರಾಯೇಲಿನ ಒಬ್ಬ ಭವಿಷ್ಯದ ಅರಸನನ್ನು ಕಂಡನು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಬಿಳಾಮ ಮತ್ತು ಆತನ ಕತ್ತೆಯ ಕುರಿತ ಕಥೆಯಲ್ಲಿರುವ ಸ್ಪಷ್ಟವಾದ ವಿರೋಧಾಭಾಸವನ್ನು ನಾನು ಹೀಗೆ ಅರ್ಥಮಾಡಿಕೊಳ್ಳುತ್ತೇನೆ:

   1) ತನ್ನ ಆಜ್ಞೆಗಳನ್ನು ಜಾಗರೂಕನಾಗಿ ಪಾಲಿಸಬೇಕೆಂಬ ಷರತ್ತಿನೊಂದಿಗೆ ದೇವರು ಬಿಳಾಮನನ್ನು ಮೋವಾಬಿಗೆ ಹೋಗಲು ಅನುಮತಿಸಿದನು (22:20). ಇಸ್ರಾಯೇಲರನ್ನು ಆಶೀರ್ವದಿಸಲು ಬಿಳಾಮನನ್ನು ಉಪಯೋಗಿಸಬೇಕೆಂಬುದು ದೇವರ ಯೋಜನೆಯಾಗಿತ್ತು.

   2) ಆದರೆ ಬಿಳಾಮನು ಮೋವಾಬಿನ ಕಡೆಗೆ ತನ್ನ ಪ್ರಯಾಣವನ್ನು ಬೆಳೆಸಿದಾಗ ಆತನು ತನ್ನ ಮನಸ್ಸನ್ನು ಬದಲಾಯಿಸಿಕೊಂಡಿರಲಿಲ್ಲ ಎಂಬುದನ್ನು ದೇವರು ಕಂಡನು. ಇಸ್ರಾಯೇಲರನ್ನು ಶಪಿಸುವುದರ ಮೂಲಕ ಅರಸನಾದ ಬಾಲಾಕನನ್ನು ತೃಪ್ತಿಪಡಿಸಬೇಕೆಂಬ ಯೋಜನೆಯನ್ನು ಆತನು ಇನ್ನೂ ಕೈಬಿಟ್ಟಿರಲಿಲ್ಲ. ಹಾಗಾಗಿ ದೇವರು ಆತನೊಂದಿಗೆ ಕೋಪಗೊಂಡು ಆತನನ್ನು ತಡೆಯಲು ಒಬ್ಬ ದೇವದೂತನನ್ನು ಕತ್ತಿಯೊಂದಿಗೆ ಕಳುಹಿಸಿಕೊಟ್ಟನು (22:22).

   3) ಬಿಳಾಮನಿಗೆ ಪಾಠವನ್ನು ಕಲಿಸಲು ಒಂದು ಮೂರ್ಖ ಪ್ರಾಣಿಯೆಂದು ಪರಿಗಣಿಸಲಾಗಿದ್ದ ಕತ್ತೆಯನ್ನು ದೇವರು ಬಳಸಿದನು: ಆ ಮೂರ್ಖ ಕತ್ತೆಯು ಒಂದು ಆತ್ಮಿಕ ನೈಜತೆಯನ್ನು ಕಾಣಲು ಸಾಧ್ಯವಾಯಿತು (ಬಿಚ್ಚುಗತ್ತಿಯನ್ನು ಹಿಡಿದಿದ್ದ ದೇವದೂತನು, 22:23, 25, 27). ಆದರೆ ದೇವರು ಬಿಳಾಮನ ಕಣ್ಣುಗಳನ್ನು ತೆರೆಯುವವರೆಗೆ (22:31), ಲೋಕಪ್ರಸಿದ್ಧವಾದ ಈ ಭವಿಷ್ಯನುಡಿಯುವವನು ಆತ್ಮಿಕ ನೈಜತೆಗೆ ಕುರುಡನಾಗಿದ್ದನು (22:34).

   4) ಈಗ ಬಿಳಾಮನಿಗೆ ದೇವರು ಒಂದು ಪಾಠವನ್ನು ಕಲಿಸಿದ್ದನು. ಹಾಗಾಗಿ ದೇವರು ಈ ಸಂಗತಿಯನ್ನು ನೆನಪಿಸುತ್ತಾ ಆತನು ಮೋವಾಬಿಗೆ ಪ್ರಯಾಣವನ್ನು ಮುಂದುವರೆಸಲು ಅನುಮತಿಸಿದನು: 'ನಾನು ನಿನಗೆ ಹೇಳುವುದನ್ನೇ ಹೇಳಬೇಕು' (22:31).

2. ನಾನು ಬಿಳಾಮನ ನಾಲ್ಕನೆಯ ನುಡಿಯನ್ನು (24:15–19) ಹೀಗೆ ಅರ್ಥಮಾಡಿಕೊಳ್ಳುತ್ತೇನೆ:

   1) ಯಾಕೋಬನಿಂದ ಉದಯಿಸುವ ನಕ್ಷತ್ರವು ಮತ್ತು ಇಸ್ರಾಯೇಲಿನಿಂದ ರಾಜದಂಡವು ಭವಿಷ್ಯದ ಇಸ್ರಾಯೇಲಿನ ವಿಮೋಚಕನನ್ನು, ಅಂದರೆ ಒಬ್ಬ ಅರಸನನ್ನು ಉಲ್ಲೇಖಿಸುತ್ತದೆ.

   2) ಬಹುಶಃ ಈ ಪ್ರವಾದನೆಯು ಪ್ರಾರಂಭದಲ್ಲಿ ಅರಸನಾದ ದಾವೀದನಿಂದ ನೆರವೇರಿಸಲ್ಪಟ್ಟಿತು.

   3) ಆದರೆ ಅದು ನಿಸ್ಸಂದೇಹವಾಗಿ ಒಂದು ಮೆಸ್ಸೀಯನ ಕುರಿತಾದ ಪಠ್ಯವಾಗಿದೆ (2 ಪೇತ್ರ. 1:19; ಪ್ರಕಟನೆ 22:19 ಮತ್ತು ಆದಿ. 49:10 ನ್ನು ಹೋಲಿಸಿರಿ). ಹಾಗಾಗಿ ಈ ಪ್ರವಾದನೆಯು ಅಂತಿಮವಾಗಿ ಯೇಸುವಿನ ಕಡೆಗೆ ಬೆರಳು ಮಾಡಿ ತೋರಿಸುತ್ತದೆ.

3. ಇಂದು ದಕ್ಷಿಣ ಭಾರತದಲ್ಲಿರುವ ವಿಶ್ವಾಸಿಗಳಾದ ನಾವು ಈ ಅಧ್ಯಾಯಗಳಲ್ಲಿರುವ ಬಿಳಾಮನ ಕಥೆಯಿಂದ ಈ ಕೆಳಗಿನ ಪಾಠಗಳನ್ನು ಕಲಿತುಕೊಳ್ಳಬಹುದು:

   1) ಬಿಳಾಮನು ತನ್ನ ಆತ್ಮಿಕ ವರಗಳಿಗೆ ಅಂತರ್–ರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧನಾಗಿದ್ದನು ಆದರೆ ಸತ್ಯವೇದವು ಆತನನ್ನು ಅತ್ಯಂತ ನಕಾರಾತ್ಮಕವಾಗಿ ವರ್ಣಿಸುತ್ತದೆ (ಅರಣ್ಯ. 31:16; 2 ಪೇತ್ರ. 2:15; ಯೂದ. 11; ಪ್ರಕಟನೆ 2:14). ಇಂದಿಗೂ ಸಹ ಒಬ್ಬ

ವ್ಯಕ್ತಿಯು ತನ್ನ 'ಆತ್ಮಿಕತೆಗಾಗಿ' ಪ್ರಸಿದ್ಧನಾಗಿದ್ದರೂ ದೈವಭಯವಿಲ್ಲದ ಹಾಗೂ ಆತ್ಮಿಕತೆಯಿಲ್ಲದ ವ್ಯಕ್ತಿಯಾಗಿರಲು ಸಾಧ್ಯ. ಬಿಳಾಮನು ನಮಗೆ ಒಂದು ಎಚ್ಚರಿಕೆಯಾಗಿದ್ದಾನೆ.

2) ಬಿಳಾಮನು ಒಬ್ಬ 'ಆಧ್ಯಾತ್ಮಿಕ' ವ್ಯಕ್ತಿಯಾಗಿದ್ದನು, ಆದರೆ ಆತನು ದೇವರೊಂದಿಗೆ ಸರಿ ಇರಲಿಲ್ಲ. ಹಾಗಾಗಿ ಆತನು ದೇವದೂತನನ್ನು ನೋಡಲು 'ಆತ್ಮಿಕ ಕಣ್ಣುಗಳಿಲ್ಲದವನಾಗಿದ್ದನು'. ಆ ಕತ್ತೆಯೂ ಬಿಳಾಮನಿಗಿಂತ ಹೆಚ್ಚು ಆಧ್ಯಾತ್ಮಿಕವಾಗಿತ್ತು! ನಮ್ಮ ಆತ್ಮಿಕ ಕಣ್ಣುಗಳು ತೆರೆದಿರಬೇಕಾದರೆ ನಾವು ದೇವರೊಂದಿಗೆ ಸರಿ ಇರಬೇಕು. ಇದು ಮುಖ್ಯವಾಗಿ ದೇವರ ದೂತರನ್ನು ನೋಡುವುದಕ್ಕಾಗಿ ಆಗಿರದೆ ದೇವರ ಸತ್ಯಗಳನ್ನು ಮತ್ತು ದೇವರ ಹಸ್ತವು ಕಾರ್ಯಮಾಡುತ್ತಿರುವುದನ್ನು ನೋಡುವುದಕ್ಕಾಗಿ ಆಗಿರಬೇಕು.

3) ಬಿಳಾಮನು ಒಬ್ಬ ಭ್ರಷ್ಟ ವ್ಯಕ್ತಿಯಾಗಿದ್ದನು. ಹಾಗಾಗಿ ಆತನ ಉದ್ದೇಶವು ಅಶುದ್ಧವಾಗಿತ್ತು. ಇದು ಅರಣ್ಯಕಾಂಡದಲ್ಲಿ ಹೆಚ್ಚು ಸ್ಪಷ್ಟವಾಗಿ ಕಂಡುಬಾರದಿದ್ದಾಗ್ಯೂ ಹೊಸ ಒಡಂಬಡಿಕೆಯ ಎರಡು ವಾಕ್ಯಭಾಗಗಳಲ್ಲಿ ಈ ರೀತಿಯಾಗಿ ತಿಳಿಸಲ್ಪಟ್ಟಿದ್ದಾನೆ: 2 ಪೇತ್ರ. 2:15 ಆತನು 'ಅನೀತಿಯಿಂದ ದೊರಕುವ ಸಂಬಳವನ್ನು ಬಯಸಿದನು' ಎಂಬುದಾಗಿಯೂ ಹಾಗು ಯೂದ. 11 ರಲ್ಲಿ ಬಿಳಾಮನ ದೋಷವು 'ದುರಾಶೆಯಾಗಿತ್ತು' ಎಂಬುದಾಗಿಯೂ ಹೇಳುತ್ತದೆ. ಆದರೆ ಅರಣ್ಯಕಾಂಡದಲ್ಲಿರುವ ಬಿಳಾಮನ ಕುರಿತಾದ ಕಥೆಯು (ಆತನು ಮೋವಾಬನ್ನು ತಲುಪದಂತೆ ಅಡ್ಡಗಟ್ಟಿ ಬಿಚ್ಚುಗತ್ತಿ ಹಿಡಿದ ದೇವದೂತನು) ಆತನ ಉದ್ದೇಶವು ಅಶುದ್ಧವಾಗಿತ್ತು ಎಂಬುದನ್ನು ನಮಗೆ ತೋರಿಸುತ್ತದೆ. ಆತನು ಪದೇ ಪದೇ ತಾನು ದೇವರ ಆಜ್ಞೆಗಳನ್ನು ಪಾಲಿಸಬೇಕೆಂದು ಹೇಳಿದಾಗ್ಯೂ ಇಸ್ರಾಯೇಲರನ್ನು ಹೇಗಾದರೂ ಶಪಿಸಿ ಅರಸನಾದ ಬಾಲಾಕನಿಂದ ತನ್ನ ಶುಲ್ಕವನ್ನು ಸಂಪಾದಿಸಬೇಕೆಂದು ನಿರೀಕ್ಷಿಸಿದ್ದಿರಬಹುದು. ನಾವು ಬಿಳಾಮನಂತೆ ಇರಬಾರದು. ನಮ್ಮ ಮನಸ್ಸಿನಲ್ಲಿರುವ ಉದ್ದೇಶಗಳು ಯಾವಾಗಲೂ ಶುದ್ಧವಾಗಿರಬೇಕು. ನಾವು ಎಂದಿಗೂ ಭ್ರಷ್ಟತನಕ್ಕೆ ಮಣಿಯಬಾರದು – ಭೌತಿಕ ಲಾಭದ/ಅಧಿಕಾರದ/ಪ್ರಭಾವದ/ಸ್ಥಾನಮಾನದ/ಪ್ರತಿಷ್ಠೆಯ ಆಸೆಗೆ ಮಣಿಯಬಾರದು.

4) ದೇವರು ತನ್ನ ಉದ್ದೇಶಗಳನ್ನು ನೆರವೇರಿಸಲು ಅಪರಿಪೂರ್ಣವಾದ ಸಾಧನಗಳನ್ನೂ ಸಹ ಬಳಸಬಲ್ಲನು. ಬಿಳಾಮನಿಗೆ ಒಂದು ಮುಖ್ಯವಾದ ಪಾಠವನ್ನು ಕಲಿಸಲು ದೇವರು ಒಂದು ಕತ್ತೆಯನ್ನು ಬಳಸಿದನು. ಇಸ್ರಾಯೇಲರನ್ನು ಆಶೀರ್ವದಿಸಲು ಮತ್ತು ಬರಲಿದ್ದ ಮೆಸ್ಸೀಯನ ಕುರಿತಾಗಿ ಪ್ರವಾದಿಸಲು ಭ್ರಷ್ಟನಾದ ಬಿಳಾಮನನ್ನು ಬಳಸಿದನು. ನಮಗೆ ಇದರಲ್ಲಿರುವ ಪಾಠವೇನೆಂದರೆ, ದೇವರನ್ನು ನಾವು ಅತ್ಯುನ್ನತ ಸ್ಥಾನದಲ್ಲಿಡಬೇಕು. ನಾವು ಒಬ್ಬ ಬಡ ಅಥವಾ ಸರಳವಾದ ಅಥವಾ ಕೀಳು ಜಾತಿಯ ಅಥವಾ ಅನಕ್ಷರಸ್ಥ ('ಕತ್ತೆಯನ್ನು') ವ್ಯಕ್ತಿಯನ್ನು ಕೀಳಾಗಿ ಕಾಣಬಾರದು. ಅಂಥವರನ್ನು ದೇವರು ತನ್ನ ರಾಜ್ಯದ ಮಹಿಮೆಗಾಗಿ ಬಳಸುತ್ತಾನೆ. ಒಬ್ಬ ಬಲಹೀನವಾದ ಅಥವಾ ಅಪರಿಪೂರ್ಣವಾದ ಅಥವಾ ಅಯೋಗ್ಯನಾದ ಅಥವಾ 'ಅಪವಿತ್ರನಾದ' ವ್ಯಕ್ತಿಯು ಹೇಳಿದನು ಎಂದ ಮಾತ್ರಕ್ಕೆ ದೇವರು ತನ್ನ ಸಭೆಗೆ ನೀಡಲು ಬಯಸುವ ಸಂದೇಶವನ್ನು ತಿರಸ್ಕರಿಸಬಾರದು.

5) ಅರಸನಾದ ಬಾಲಾಕನು ತನ್ನ ಸಂಪರ್ಕಗಳನ್ನು (ಆತನ ದೇಶದ ಹಿರಿಯರು ಮತ್ತು ರಾಜಕುಮಾರರು ಮಾತ್ರವಲ್ಲದೆ, ತನ್ನ ಮೈತ್ರಿಕೂಟವಾದ ಮಿದ್ಯಾನ್ಯರ ಹಿರಿಯರನ್ನು ಒಳಗೊಂಡು) ಮತ್ತು ತನ್ನ ಆಸ್ತಿಯನ್ನು (ಬಿಳಾಮನಿಗೆ ಪ್ರಮಾಣ ಮಾಡಿದ ಶ್ರೇಷ್ಠ ಬಹುಮಾನ) ಬಳಸಿಕೊಂಡು ದೇವರ ಜನರ ವಿರುದ್ಧ ಶಾಪವನ್ನು ಹಾಕಲು ಪ್ರಯತ್ನಿಸಿದನು. ಆದರೆ ಆತನು ಸಂಪೂರ್ಣವಾಗಿ ಸೋತು ಹೋದನು. ದೇವರ ಚಿತ್ತವನ್ನು ವಿರೋಧಿಸುವುದು ನಿಷ್ಪ್ರಯೋಜಕವೆಂಬುದನ್ನು ನಾವು ಇದರಿಂದ ಕಲಿತುಕೊಳ್ಳಬಹುದು. ಅದಕ್ಕೆ ಬದಲಾಗಿ ನಾವು ದೇವರೊಂದಿಗೆ ಸೇರಿಕೊಂಡು ಆತನ ಪಕ್ಷದಲ್ಲಿ ನಿಂತಿದ್ದೇವೆಂಬುದನ್ನು ಖಚಿತಪಡಿಸಿಕೊಳ್ಳಬೇಕು. ದೇವರು ಯಾರ (ಅಥವಾ ಯಾವುದರ) ಪಕ್ಷದಲ್ಲಿದ್ದಾನೋ ಆ ವ್ಯಕ್ತಿಯನ್ನು (ಅಥವಾ ಆ ಸಂಗತಿಯನ್ನು) ಎದುರಿಸಲು ಯಾರಿಂದಾದೀತು? ದೇವರು ಆಶೀರ್ವದಿಸುವವರನ್ನು ನಾವು ಆಶೀರ್ವದಿಸುವಾಗ ನಮಗೂ ಆಶೀರ್ವಾದ ದೊರಕುತ್ತದೆ.

**ಅರಣ್ಯಕಾಂಡ ಉತ್ತರಗಳು 9: ಎರಡನೆಯ ಜನಗಣತಿ; ಯೆಹೋಶುವನು ನೇಮಿಸಲ್ಪಟ್ಟದ್ದು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಎರಡು ಜನಗಣತಿಗಳ ಹೋಲಿಕೆಯು (ಅರಣ್ಯ. 1:1–4, 44–47; 26:1–4, 63–65) ಇದನ್ನು ತೋರಿಸುತ್ತದೆ:

   1) ಮುಖ್ಯವಾದ ಸಮಾನತೆಗಳು:

      - ಅವುಗಳ ಉದ್ದೇಶ ಒಂದೇ ಆಗಿತ್ತು: ಕಾನಾನ್ ದೇಶವನ್ನು ವಶಮಾಡಿಕೊಳ್ಳುವುದಕ್ಕಾಗಿ ಯುದ್ಧ ಮಾಡಲು ಶಕ್ತರಾದ 20 ವರ್ಷ ವಯಸ್ಸಿಗಿಂತ ಮೇಲ್ಪಟ್ಟ ಪುರುಷರ ಸಂಖ್ಯೆಯನ್ನು ಗೊತ್ತುಮಾಡುವುದು

      - ಅವುಗಳ ಪರಿಣಾಮವು ಹೆಚ್ಚು ಕಡಿಮೆ ಒಂದೇ ಆಗಿತ್ತು: ಎರಡೂ ಜನಗಣತಿಗಳಲ್ಲಿ ಎಣಿಸಲ್ಪಟ್ಟ ಯುದ್ಧ ಮಾಡಲು ಶಕ್ತರಾದ ಸೈನಿಕರ ಸಂಖ್ಯೆಯು 6,00,000 ಕ್ಕಿಂತಲೂ ಹೆಚ್ಚು

      - ಅವುಗಳ ಮುಂದಾಳತ್ವ ಒಂದೇ ಆಗಿತ್ತು: ಎರಡೂ ಸನ್ನಿವೇಶಗಳಲ್ಲಿ ಯೆಹೋವನೇ ಮುಂದಾಳತ್ವವನ್ನು ವಹಿಸಿ ಜನಗಣತಿಯನ್ನು ಮಾಡಲು ಮೋಶೆಗೆ (ಮತ್ತು ಯಾಜಕರಿಗೆ) ಹೇಳಿದನು.

      - ಎರಡೂ ಜನಗಣತಿಗಳಲ್ಲಿ ಲೇವಿಯರನ್ನು ಸೈನಿಕರ ಸಂಖ್ಯೆಯಲ್ಲಿ ಸೇರಿಸಿರಲಿಲ್ಲ.

   2) ಮುಖ್ಯವಾದ ವ್ಯತ್ಯಾಸಗಳು:

      - ಸ್ಥಳವು ವ್ಯತ್ಯಾಸವಾಗಿತ್ತು: ಮೊದಲ ಜನಗಣತಿಯು ಅರಣ್ಯದಲ್ಲಿನ ಅಲೆದಾಟದ ಪ್ರಾರಂಭದಲ್ಲಿ ಸಿನಾಯಿ ಪರ್ವತದ ಬಳಿಯಲ್ಲಿ ನಡೆಯಿತು. ಎರಡನೆಯ ಜನಗಣತಿಯು ಅರಣ್ಯದಲ್ಲಿನ ಅಲೆದಾಟದ ಅಂತ್ಯದಲ್ಲಿ ಮೋವಾಬಿನ ಬಯಲುಸೀಮೆಗಳಲ್ಲಿ ನಡೆಯಿತು.

      - ಎಣಿಸಲ್ಪಟ್ಟ ಪುರುಷರು ವ್ಯತ್ಯಾಸವಾಗಿದ್ದರು: ಮೊದಲ ಜನಗಣತಿಯಲ್ಲಿ ಈಜಿಪ್ಟಿನಿಂದ ಹೊರಬಂದ ಪುರುಷರನ್ನು ಎಣಿಸಲಾಗಿತ್ತು. ಎರಡನೆಯ ಜನಗಣತಿಯಲ್ಲಿ ವಾಗ್ದಾನ ದೇಶವನ್ನು ವಶಮಾಡಿಕೊಳ್ಳಲು ಸಿದ್ಧರಾಗಿದ್ದ ಹೊಸ ಸಂತತಿಯ ಪುರುಷರನ್ನು ಎಣಿಸಲಾಗಿತ್ತು. ಕೇವಲ ಯೆಹೋಶುವ ಮತ್ತು ಕಾಲೇಬರು ಮಾತ್ರ ಮೊದಲ ಅಥವಾ ಹಳೆಯ ಸಂತತಿಯವರಾಗಿದ್ದರು.

      - ಎರಡು ಜನಗಣತಿಗಲ ನಡುವೆ ದೀರ್ಘ ಕಾಲ ಕಳೆದುಹೋಗಿತ್ತು (ಸುಮಾರು 39 ವರ್ಷಗಳು): ಮೋಶೆಯು ತನ್ನ ಜೀವಮಾನದ ಅಂತ್ಯಕ್ಕೆ ಬಂದಿದ್ದನು. ಆತನ ಅಣ್ಣನಾದ ಆರೋನನು ಈಗಾಗಲೇ ತೀರಿಹೋಗಿದ್ದು ಆತನ ಯಾಜಕಸ್ಥಾನಕ್ಕೆ ಆತನ ಮಗನಾದ ಎಲಿಯಾಜರನು ನೇಮಿಸಲ್ಪಟ್ಟಿದ್ದನು. ಅವರ ಸಹೋದರಿಯಾಗಿದ್ದ ಮಿರ್ಯಾಮಳು ಸಹ ತೀರಿಹೋಗಿದ್ದಳು.

      - ಜನಗಣತಿಯ ಕಾರ್ಯದಲ್ಲಿ ಹನ್ನೆರಡು ಪುರುಷರು ಸಹಾಯಕರಾಗಿ ಕೆಲಸ ನಿರ್ವಹಿಸಿದರೆಂದು ಮೊದಲ ಜನಗಣತಿಯ ದಾಖಲೆಯು ತಿಳಿಸುತ್ತದೆ.

2. ಇಸ್ರಾಯೇಲರ ಮೇಲೆ ಒಬ್ಬ ಹೊಸ ನಾಯಕನನ್ನು ನೇಮಿಸುವಂತೆ ಮೋಶೆಯು ದೇವರಲ್ಲಿ ಬೇಡಿಕೊಂಡದ್ದಕ್ಕೆ ಎರಡು ಕಾರಣಗಳಿದ್ದವು:

   1) ಮೋಶೆಯು ಮೆರೀಬಾ ಕಾದೇಶಿನಲ್ಲಿ ಮಾಡಿದ ಕಾರ್ಯದ ನಿಮಿತ್ತ ಆತನು ವಾಗ್ದಾನ ದೇಶದಲ್ಲಿ ಇಸ್ರಾಯೇಲರ ನಾಯಕನಾಗಿರಲು ಅನುಮತಿಯಿರಲಿಲ್ಲ (27:13–14).

   2) ಜನರು *ಕುರುಬನಿಲ್ಲದ ಕುರಿಗಳ ಹಾಗೆ* (27:17) ಇರದಂತೆ ಅವರಿಗೆ ಒಬ್ಬ ನಾಯಕನ ನಿಜವಾದ ಅವಶ್ಯವಿತ್ತು.

3. ಯೆಹೋಶುವನು ಮೋಶೆಯ ಉತ್ತರಾಧಿಕಾರಿಯಾಗಲು ನೇಮಿಸಲ್ಪಟ್ಟಾಗ ತೆಗೆದುಕೊಳ್ಳಲ್ಪಟ್ಟ ಹೆಜ್ಜೆಗಳ ಒಂದು ಕಾಲಾನುಕ್ರಮವಾದ ಪಟ್ಟಿಯು ಹೀಗಿದೆ:

1) ಮೋಶೆಯು ಒಬ್ಬ ಉತ್ತರಾಧಿಕಾರಿಯ ಅವಶ್ಯವನ್ನು ಕಂಡನು, ಹಾಗಾಗಿ ಆತನು ಒಬ್ಬ ಸರಿಯಾದ ವ್ಯಕ್ತಿಯನ್ನು ನೇಮಿಸುವಂತೆ ದೇವರಲ್ಲಿ ಕೇಳಿಕೊಂಡನು.

2) ದೇವರು ತನ್ನ ಆತ್ಮನನ್ನು ಹೊಂದಿದ ಯೆಹೋಶುವನನ್ನು ಆರಿಸಿದನು.

3) ಯೆಹೋಶುವನನ್ನು ನೇಮಿಸುವಂತೆ ದೇವರು ಮೋಶೆಗೆ ಹೇಳಿದನು ಮತ್ತು ಅದನ್ನು ಹೇಗೆ ಮಾಡಬೇಕೆಂದು ಹೇಳಿದನು: ಮೋಶೆಯು ಯಾಜಕನ ಮತ್ತು ಜನರ ಸಮ್ಮುಖದಲ್ಲಿ ತನ್ನ ಹಸ್ತವನ್ನು ಯೆಹೋಶುವನ ಮೇಲೆ ಇಡಬೇಕಾಗಿತ್ತು.

4) ಜನರು ಯೆಹೋಶುವನನ್ನು ಗೌರವಿಸಿ ಆತನ ಮಾತಿಗೆ ವಿಧೇಯರಾಗುವಂತೆ ಮೋಶೆಯು ತನ್ನ ಕೆಲವು ಅಧಿಕಾರಗಳನ್ನು ಆತನೊಂದಿಗೆ ಹಂಚಿಕೊಳ್ಳಬೇಕೆಂದು ಹೇಳಿದನು (ಇದು ಕನ್ನಡ ಅನುವಾದಗಳಲ್ಲಿ ಸ್ಪಷ್ಟವಾಗಿಲ್ಲ).

5) ಇದರ ಅರ್ಥ ಮೋಶೆಯು ಈಗಲೂ ಪ್ರಧಾನ ನಾಯಕನಾಗಿ ಕೆಲಸ ನಿರ್ವಹಿಸುತ್ತಿದ್ದು ನಾಯಕತ್ವ ಸ್ಥಾನಕ್ಕೆ ಯೆಹೋಶುವನನ್ನು ಸಾರ್ವಜನಿಕವಾಗಿ ಮಾರ್ಗದರ್ಶಿಸುತ್ತಿದ್ದನು.

6) ಯೆಹೋಶುವನ ಅಧಿಕಾರದ ಮಟ್ಟವನ್ನು ದೇವರು ಮೋಶೆಗೆ ಸ್ಪಷ್ಟಪಡಿಸಿದನು: ದೇವರ ತೀರ್ಮಾನಗಳನ್ನು ಯೆಹೋಶುವನಿಗೆ ತಿಳಿಸುವ ಜವಾಬ್ದಾರಿಯು ಯಾಜಕನಾದ ಎಲಿಯಾಜರನಿಗೆ ಕೊಡಲ್ಪಟ್ಟಿತ್ತು.

7) ಮೋಶೆಯು ಯೆಹೋಶುವನಿಗೆ ಅಧಿಕಾರವನ್ನು ವಹಿಸುವುದರ ಮೂಲಕ ದೇವರ ಆಜ್ಞೆಯನ್ನು ಪಾಲಿಸಿದನು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. 'ರಾಜಕೀಯ ಮತ್ತು ಆಡಳಿತ' ನಾಯಕನ ಕುರಿತು ಯೆಹೋಶುವನ ನೇಮಕದ ಕಥೆಯಿಂದ ನಾವು ಕಲಿತುಕೊಳ್ಳುವ ಸಂಗತಿಯೇನೆಂದರೆ, ಹಳೆ ಒಡಂಬಡಿಕೆಯ ಕಾಲದಲ್ಲಿ ಆ ನಾಯಕನು ಆತ್ಮಿಕ ಮಾರ್ಗದರ್ಶನಕ್ಕಾಗಿ ಯಾಜಕನ ಮೇಲೆ ಆತುಕೊಂಡಿದ್ದನು. ಒಂದು ತೀರ್ಮಾನವನ್ನು ಮಾಡಬೇಕಾದಾಗ ಯಾಜಕನೇ ಊರೀಮಿನ ಮೂಲಕ ದೇವರ ಚಿತ್ತವನ್ನು ತಿಳಿದುಕೊಳ್ಳಲು ಸಾಧ್ಯವಿತ್ತು. ಹಳೆ ಒಡಂಬಡಿಕೆಯಲ್ಲಿ ಅನೇಕ ಬಾರಿ ದೇವರು ನಾಯಕರೊಂದಿಗೆ ಮಾತನಾಡುವುದನ್ನು ಮತ್ತು ಮಾಡಬೇಕಾದ ಸಂಗತಿಯನ್ನು ಅವರಿಗೆ ತಿಳಿಸುವುದನ್ನು ನಾವು ಕಾಣುತ್ತೇವೆ. ಆದರೆ ನಾಯಕರಿಗೆ ದೇವರ ಮಾರ್ಗದರ್ಶನ ಬೇಕಾದಾಗ ಅವರು ಯಾಜಕರ ಬಳಿಗೆ ಹೋಗುತ್ತಿದ್ದರು.

   ಹಾಗಾದರೆ ಇಂದು ದಕ್ಷಿಣ ಭಾರತದಲ್ಲಿರುವ ನಾಯಕರುಗಳಾದ ನಾವು ಇದರ ಕುರಿತು ಏನು ಹೇಳುತ್ತೇವೆ? ನಾವು ಈಗ ಹಳೆ ಒಡಂಬಡಿಕೆಯಲ್ಲಿ ಜೀವಿಸುತ್ತಿಲ್ಲ ಹೊಸ ಒಡಂಬಡಿಕೆಯಲ್ಲಿ ಜೀವಿಸುತ್ತಿದ್ದೇವೆ ಹಾಗಾಗಿ ಯೆಹೋಶುವ ಮತ್ತು ಎಲಿಯಾಜರನ ಕುರಿತಾದ 20 ನೇ ವಚನವನ್ನು ನಮಗೆ ಅನ್ವಯಿಸಲಾಗುವುದಿಲ್ಲ. ಪಂಚಾಶತ್ತಮ ದಿನದಲ್ಲಿ ಪವಿತ್ರಾತ್ಮನು ಎಲ್ಲಾ ವಿಶ್ವಾಸಿಗಳ ಮೇಲೆ ಸುರಿಸಲ್ಪಟ್ಟನು. ಹಾಗಾಗಿ ಪವಿತ್ರಾತ್ಮನು ಇಂದು ತನ್ನ ಜನರಲ್ಲಿ (ಸಭೆಯ ನಾಯಕರುಗಳಲ್ಲಿಯೂ ಮತ್ತು ಜನಸಾಮಾನ್ಯರಲ್ಲಿಯೂ) ವಾಸಿಸುತ್ತಾನೆ. ನಾವು ಆತನಿಗೆ ಅನುಮತಿಸುವಾಗ ಆತನು ನಮ್ಮನ್ನು ನಡೆಸುವನು. ಹಾಗಾಗಿ ನಾವು ಏನು ಮಾಡಬೇಕೆಂದು ದೇವರು ಬಯಸುತ್ತಾನೆ ಎಂದು ಒಬ್ಬ 'ಯಾಜಕನ' (ಅಥವಾ ಸಭಾಪಾಲಕನ) ಸಲಹೆಯನ್ನು ಕೇಳುವ ಅವಶ್ಯವಿಲ್ಲ. ಇನ್ನೊಂದು ಕಡೆಯಲ್ಲಿ, ಅನುಭವವಿಲ್ಲದ ಯೌವ್ವನಸ್ಥರು ಆತ್ಮಿಕ 'ತಂದೆ ತಾಯಂದಿರಿಂದ' ಸಲಹೆಯನ್ನು ಪಡೆದುಕೊಳ್ಳುವುದು ಯಾವಾಗಲೂ ಒಳ್ಳೆಯದು.

2. ಇಂದು ದಕ್ಷಿಣ ಭಾರತದಲ್ಲಿರುವ ವಿಶ್ವಾಸಿಗಳಾದ ನಾವು ಮೋಶೆಯ ಉತ್ತರಾಧಿಕಾರಿಯಾಗಿ ಯೆಹೋಶುವನು ನೇಮಿಸಲ್ಪಟ್ಟದ್ದರ ಕಥೆಯಿಂದ ಐದು ಸಂಗತಿಗಳನ್ನು ಕಲಿತುಕೊಳ್ಳಬಹುದು:

   1) ಯೆಹೋಶುವನನ್ನು ಅಂತಿಮವಾಗಿ ಆರಿಸಿದ್ದು ದೇವರೇ ಆಗಿದ್ದಾನೆ. ಇಂದು ಅಂತಿಮವಾಗಿ ನಾಯಕರನ್ನು ಸೇವೆಗೆ ಕರೆಯುವವನು ದೇವರೇ ಆಗಿದ್ದಾನೆ.

   2) ಜನರು ಮಾರ್ಗತಪ್ಪದಂತೆ ಒಬ್ಬ ದೇವರಾದುಕೊಂಡ ನಾಯಕನು ಮೋಶೆಯ ಉತ್ತರಾಧಿಕಾರಿಯಾಗುವುದು ಅವಶ್ಯವಾಗಿತ್ತು. ಮೋಶೆಯು ಈ ಅಗತ್ಯತೆಯನ್ನು ಕಂಡು ಅದನ್ನು ದೇವರ ಮುಂದೆ ತಂದನು. ದೇವಜನರನ್ನು ಮುನ್ನಡೆಸಲು ನಮ್ಮ ಸಭೆಗಳಿಗೆ ದೇವರಾದುಕೊಂಡ ನಾಯಕರ ಅವಶ್ಯವಿದೆ. ಹಿರಿಯ ನಾಯಕರು ಈ ಉತ್ತರಾಧಿಕಾರಿಗಳ – ಮತ್ತು ಇತರೆ ಹೊಸ ನಾಯಕರ – ಅಗತ್ಯತೆಯನ್ನು ದೇವರ ಮುಂದೆ ತರುವ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು.

   3) ಜನರು ಯೆಹೋಶುವನನ್ನು ಅಂಗೀಕರಿಸುವಂತೆ ಮತ್ತು ಹಿಂಬಾಲಿಸುವಂತೆ ಮೋಶೆಯು ಆತನನ್ನು ಮಾರ್ಗದರ್ಶಿಸಿದನು (21:20 ರಲ್ಲಿ ಅನ್ವಯಿಸಲಾಗಿದೆ). ನಮ್ಮ ಉತ್ತರಾಧಿಕಾರಿಗಳು ಮತ್ತು ಇತರೆ ಹೊಸ ನಾಯಕರು ಬೆಳೆಯುತ್ತಾ ಪರಿಪಕ್ವತೆ

ಹೊಂದಿ ವಿಶ್ವಾಸಿಗಳಿಂದ ಮನ್ನಣೆ ಪಡೆಯುವಂತೆ ಅವರನ್ನು ಹಿರಿಯ ಮತ್ತು ಅನುಭವಸ್ಥ ಸಭಾನಾಯಕರುಗಳಾದ ನಾವು ಮಾರ್ಗದರ್ಶಿಸಬೇಕು. ನಾವು 'ನಮ್ಮ ಕೆಲವು ಅಧಿಕಾರಗಳನ್ನು' ಅವರಿಗೆ ಹಸ್ತಾಂತರಿಸಬೇಕು.

4) ಯೆಹೋಶುವನನ್ನು ನೇಮಿಸುವ ಕಾರ್ಯದಲ್ಲಿ ಮೋಶೆಯು ದೇವರ ಆಜ್ಞೆಗಳನ್ನು ಚಾಚು ತಪ್ಪದೆ ಮಾಡಿದನು. ನಾವು ಸಹ ನಮ್ಮ ಸಭೆಗಾಗಿ ಹೊಸ ನಾಯಕರನ್ನು ಗುರುತಿಸುವಾಗ ಮತ್ತು ತರಬೇತುಗೊಳಿಸುವಾಗ ದೇವರ ವಾಕ್ಯಕ್ಕೆ ವಿಧೇಯರಾಗಬೇಕು.

5) ಇಸ್ರಾಯೇಲರು ಯೆಹೋಶುವನನ್ನು ಮೋಶೆಯ ಉತ್ತರಾಧಿಕಾರಿಯಾಗಿ ಸ್ವೀಕರಿಸಿದರು. ನಮ್ಮ ಸಭೆಗಳ ವಿಶ್ವಾಸಿಗಳು ಅವರಿಗಾಗಿ ದೇವರು ನೇಮಿಸಿರುವ ನಾಯಕರುಗಳನ್ನು ಒಪ್ಪಿಕೊಳ್ಳಬೇಕು. ಕುರಿಗಳಿಗೆ ಕುರುಬನ ಅವಶ್ಯವಿದ್ದಂತೆ, ಸಭೆಗಳಿಗೆ ಆತ್ಮಭರಿತ ಮತ್ತು ದೇವರಾದುಕೊಂಡ ನಾಯಕರುಗಳ ಅವಶ್ಯವಿದೆ.

**ಅರಣ್ಯಕಾಂಡ ಉತ್ತರಗಳು 10: ಅರಣ್ಯದಲ್ಲಿ ದೇವರ ಕೃಪೆ**

**ಇ. ಪ್ರಶ್ನೆಗಳಿಗೆ ಉತ್ತರಗಳು**

1. ಇಸ್ರಾಯೇಲರು ಸಿನಾಯಿ ಪರ್ವತದಿಂದ ಹೊರಡುವುದಕ್ಕಿಂತ ಮುಂಚೆ ಮೋಶೆಯು ಎರಡು ಬೆಳ್ಳಿಯ ತುತ್ತೂರಿಗಳನ್ನು ಮಾಡಿಸಬೇಕೆಂದು ದೇವರು ಆಜ್ಞಾಪಿಸಿದನು (ಅರಣ್ಯ. 10:1–10). ಈ ಬೆಳ್ಳಿ ತುತ್ತೂರಿಗಳು ಈ ರೀತಿಯಲ್ಲಿ ಅವರ ಅರಣ್ಯದಲ್ಲಿನ ಅಲೆದಾಟಗಳಿಗೆ ದೇವರ ಒದಗಿಸುವಿಕೆಯಾಗಿತ್ತು:

   1) ತುತ್ತೂರಿಗಳ ಶಬ್ಧವು ಅಸಂಖ್ಯರಾಗಿದ್ದ ಇಸ್ರಾಯೇಲ್ ಸಮುದಾಯವನ್ನು ಒಟ್ಟಾಗಿ ಇಟ್ಟಿತ್ತು. ಅದು ಇಲ್ಲದೆ ಹೋಗಿದ್ದರೆ ಸಂಪೂರ್ಣವಾಗಿ ಗೊಂದಲಮಯ ವಾತಾವರಣವಿರುತ್ತಿತ್ತು.

   2) ದೇವದರ್ಶನದ ಗುಡಾರದ ಮುಂದೆ ಯಾರು ಕೂಡಿ ಬರಬೇಕೆಂದು ತುತ್ತೂರಿಗಳ ಶಬ್ಧವು ಸಂದೇಶವನ್ನು ಕೊಟ್ಟಿತು. ಈ ??? ಗೊಂದಲವನ್ನು ನಿವಾರಿಸಿತು.

   3) ತುತ್ತೂರಿಗಳ ಆರ್ಭಟವು ಗೋತ್ರಗಳು ಯಾವ ಕ್ರಮದಲ್ಲಿ ಹೊರಡಬೇಕೆಂಬುದನ್ನು ಸೂಚಿಸಿತು. ಹೀಗೆ ಗೊಂದಲವನ್ನು ತಪ್ಪಿಸಬಹುದಾಗಿತ್ತು.

   4) ತುತ್ತೂರಿಯ ಶಬ್ಧವು ಸದಾಕಾಲವೂ ಇಸ್ರಾಯೇಲರಿಗೆ ಯೆಹೋವನನ್ನು ಮತ್ತು ಆತನ ಬಲ ಹಾಗೂ ಒಡಂಬಡಿಕೆಯನ್ನು ನೆನಪಿಸಿತು. ಅದಲ್ಲದೆ ಅವರು ಭವಿಷ್ಯದಲ್ಲಿ ವಾಗ್ದಾನ ದೇಶವನ್ನು ವಶಮಾಡಿಕೊಂಡಾಗಲೂ ಅದು ಅವರಿಗೆ ನೆನಪಿಸಿತು.

2. ದೇವರ ಮಾರ್ಗದರ್ಶನ (ಅರಣ್ಯ. 9:15–23; 10:33–36):

   3) ಇಸ್ರಾಯೇಲರು ಸಿನಾಯಿ ಪರ್ವತದಿಂದ ಹೊರಡುವಾಗ ದೇವರು ಅವರನ್ನು ನಡೆಸಿದ ಎರಡು ಮಾರ್ಗಗಳನ್ನು ವಿವರಣೆ ಹೀಗಿದೆ:

      - ದೇವದರ್ಶನ ಗುಡಾರದ ಮೇಲಿನಿಂದ ಎದ್ದ ಮೇಘವು ಒಂದು ಹೊಸ ಸ್ಥಳಕ್ಕೆ ಸಾಗಿತು.
      - ಇಸ್ರಾಯೇಲರ ಮುಂದೆ ಯಾಜಕರು ಒಡಂಬಡಿಕೆಯ ಮಂಜೂಷವನ್ನು ಹೊತ್ತುಕೊಂಡು ಹೋದರು.

   4) ಇಸ್ರಾಯೇಲರು ಸಿನಾಯಿ ಪರ್ವತದಿಂದ ಹೊರಟಾಗ ಯಾಜಕರು ಒಡಂಬಡಿಕೆಯ ಮಂಜೂಷವನ್ನು ಜನರ ಮುಂದೆ ಹೊತ್ತುಕೊಂಡು ಹೋದರು. ಈ ಮಾದರಿಯು ಎರಡು ರೀತಿಯಲ್ಲಿ ಇಸ್ರಾಯೇಲರಿಗಾಗಿ ದೇವರ ಒದಗಿಸುವಿಕೆಯನ್ನು ವ್ಯಕ್ತಪಡಿಸುತ್ತದೆ:

      - ಇಸ್ರಾಯೇಲರಿಗೆ ಅರಣ್ಯದಲ್ಲಿ ಮಾರ್ಗವನ್ನು ತೋರಿಸುತ್ತಾ ದೇವರು ಅವರ 'ಮಾರ್ಗದರ್ಶಕನಾಗಿದ್ದನು' ಎಂಬುದನ್ನು ಇದು ಸೂಚಿಸುತ್ತದೆ.
      - ಇಸ್ರಾಯೇಲರನ್ನು ತಮ್ಮ ವೈರಿಗಳ ವಿರುದ್ಧ ಮುನ್ನಡೆಸುತ್ತಾ ದೇವರು ಅವರ 'ಸೇನಾಧಿಪತಿಯಾಗಿದ್ದನು' ಎಂಬುದನ್ನು ಇದು ಸೂಚಿಸುತ್ತದೆ.

3. ಮೋಶೆಯು ಕೆಲಸದ ಒತ್ತಡದಿಂದ ಬಳಲಿದಾಗ ಮತ್ತು ನಿರಾಶನಾದಾಗ ದೇವರು ಆತನ ಸಮಸ್ಯೆಗೆ ಒಂದು ಪರಿಹಾರವನ್ನು ಕಲ್ಪಿಸಿದನು (ಅರಣ್ಯ. 11:16–17, 24–25):

   1) ಮೋಶೆಯ ಭಾರವನ್ನು ಹಂಚಿಕೊಳ್ಳಲು ದೇವರು ಮೋಶೆಗೂ ಹಾಗೂ ಇಸ್ರಾಯೇಲರಿಗೂ ಎಪ್ಪತ್ತು ಸಹಾಯಕ ನಾಯಕರುಗಳನ್ನು ಒದಗಿಸುವುದೇ ಆ ಪರಿಹಾರವಾಗಿತ್ತು.

   2) ಈ ಪರಿಹಾರವು (ತನ್ನ ನಾಯಕತ್ವ ಜವಾಬ್ದಾರಿಗಳಿಂದ ಸ್ವಲ್ಪ ಉಪಶಮನವನ್ನು ಪಡೆಯುವದರೊಂದಿಗೆ ಉತ್ತೇಜನವನ್ನೂ ಸಹ ಹೊಂದಿದ) ಮೋಶೆಗೂ ಹಾಗೂ (ತಮಗೆ ಬುದ್ಧಿವಾದ ಹೇಳಲು, ಮಾರ್ಗದರ್ಶಿಸಲು ಮತ್ತು ಉತ್ತೇಜಿಸಲು ಹೆಚ್ಚಿನ ನಾಯಕರುಗಳನ್ನು ಪಡೆದ) ಇಸ್ರಾಯೇಲರಿಗೂ ಈ ಪರಿಹಾರವು ದೇವರ ಕೃಪೆಯನ್ನು ವ್ಯಕ್ತಪಡಿಸಿತು.

4. ಮೋಶೆಯು ಇಸ್ರಾಯೇಲರ ನಾಯಕನಾಗಿದ್ದನು. ಆದರೆ ಖಂಡಿತವಾಗಲೂ ಅಷ್ಟೊಂದು ಜನರಿಗೆ ಅರಣ್ಯದಲ್ಲಿ ಆಹಾರವನ್ನು ಒದಗಿಸುವುದು ಆತನಿಗೆ ಅಸಾಧ್ಯವಾಗಿತ್ತು.

1) ಈ ಸಮಸ್ಯೆಗೆ ದೇವರು ಒದಗಿಸಿದ ಪರಿಹಾರವು ಅವರಿಗೆ ಮನ್ನವನ್ನು (ಅಂದರೆ ಅವರಿಗೆ ಬದುಕುಳಿಯಲು ಅತ್ಯವಶ್ಯವಾಗಿದ್ದ 'ಅನುದಿನದ ಆಹಾರವನ್ನು') ಮತ್ತು ಲಾವಕ್ಕಿಗಳನ್ನು (ಅದು ಅವರಿಗೆ ಅವಶ್ಯವಿಲ್ಲದಿದ್ದಾಗ್ಯೂ ಅವರು ಮಾಂಸಹಾರಿಗಳಾಗಿದ್ದರಿಂದ ತಾವು ಈಜಿಪ್ಟಿನಲ್ಲಿ ತಿನ್ನುತ್ತಿದ್ದ ಮಾಂಸಹಾರಿ ಊಟವನ್ನು ನೆನಪಿಸಿಕೊಂಡು ಅದಕ್ಕಾಗಿ ಹಂಬಲಿಸಿದರು) ಒದಗಿಸುವುದೇ ಆಗಿತ್ತು (ಅರಣ್ಯ. 11:6–9, 18–20, 31–34).

2) ಮನ್ನದೊಂದಿಗೆ ಲಾವಕ್ಕಿಗಳ ಒದಗಿಸುವಿಕೆಯು ನಿಜವಾಗಲೂ ದೇವರ ಕೃಪೆಯನ್ನು ವ್ಯಕ್ತಪಡಿಸುತ್ತದೆ: ಆತನು ತನ್ನ 'ಪರಾಕ್ರಮ ಹಸ್ತದಿಂದ' ಇಸ್ರಾಯೇಲರನ್ನು ಈಜಿಪ್ಟಿನಿಂದ ಹೊರ ತಂದಿದ್ದನು. ಈಗ ಅವರು ಅರಣ್ಯದಲ್ಲಿ ಮೃಷ್ಟಾನ್ನ ಭೋಜನ ಸಿಗಲಿಲ್ಲವೆಂದು ದೂರುತ್ತಿದ್ದಾರೆ. ಯೆಹೋವನಿಗೆ ಬಹಳ ಕೋಪ ಬಂದದ್ದರಲ್ಲಿ ಯಾವ ಆಶ್ಚರ್ಯವಿಲ್ಲ (11:10). ಆದರೆ ಅವರನ್ನು ಶಿಕ್ಷಿಸುವುದರ ಬದಲಾಗಿ ಆತನು ಅವರಿಗೆ ತಿಂದು ಬೇಸರವಾಗುವವರೆಗೆ ಲಾವಕ್ಕಿಗಳನ್ನು ಒದಗಿಸುವುದರ ಮೂಲಕ ತನ್ನ ಕೃಪೆಯನ್ನು ತೋರಿಸಿದನು.

5. ಮರುಭೂಮಿಯಲ್ಲಿ ಜೀವಿಸುವ ಜನರಿಗೆ ಮುಖ್ಯವಾಗಿ ಆಗುವ ಕಷ್ಟವು ನೀರನ್ನು ಕಂಡುಕೊಳ್ಳುವುದಾಗಿದೆ. ಇನ್ನೊಂದು ಸಮಸ್ಯೆಯು ತಮಗಾಗಿ ಪಾದರಕ್ಷೆಗಳನ್ನು ಮತ್ತು ಉಡುಪುಗಳನ್ನು ಎಲ್ಲಿಂದ ಖರೀದಿಸಬೇಕು (ಅಥವಾ ಹೇಗೆ ತಯಾರಿಸಬೇಕು) ಎಂಬುದಾಗಿದೆ:

4) ಅರಣ್ಯಕಾಂಡದಲ್ಲಿ ದೇವರು ಇಸ್ರಾಯೇಲರಿಗಾಗಿ ನೀರನ್ನು ಒದಗಿಸಿದ್ದರ ಕುರಿತು ಎರಡು ಕಥೆಗಳಿವೆ (ಅರಣ್ಯ. 20:1–11; 21:16–18). ಈ ಎರಡೂ ಕಥೆಗಳು ದೇವರು ತನ್ನ ಜನರಿಗೆ ತನ್ನ ಕೃಪೆಯಿಂದ ನೀಡಿದ ಒದಗಿಸುವಿಕೆಗಳನ್ನು ವ್ಯಕ್ತಪಡಿಸುತ್ತವೆ. ಆದರೆ ಈ ಕಥೆಗಳಲ್ಲಿ ಜನರ ಭಾವನೆಯು ಒಂದಕ್ಕೊಂದು ಅತ್ಯಂತ ವ್ಯತ್ಯಾಸವಾಗಿವೆ:

- ಮೊದಲ ಕಥೆಯಲ್ಲಿ ಇಸ್ರಾಯೇಲರು ಗೊಣಗಿದರು ಮತ್ತು ನೀರಿನ ಕೊರತೆಯ ಕುರಿತು ದೂರಿದರು.
- ಎರಡನೆಯ ಕಥೆಯಲ್ಲಿ ಇಸ್ರಾಯೇಲರು ಹಾಡಿ ಹರ್ಷಿಸಿದರು.

5) ದೇವರು ಅದ್ಭುತಕರವಾಗಿ ಇಸ್ರಾಯೇಲರಿಗೆ ನೀರನ್ನು ಒದಗಿಸಿದ ಇನ್ನೊಂದು ಸನ್ನಿವೇಶವನ್ನು (ಅರಣ್ಯಕಾಂಡವಲ್ಲ, ಬದಲಾಗಿ) ವಿಮೋಚನಕಾಂಡವು ದಾಖಲಿಸುತ್ತದೆ (ವಿಮೋ. 17:1–7). ಇಸ್ರಾಯೇಲರ ಗೊಣಗುವಿಕೆಯ ಹೊರತಾಗಿಯೂ ದೇವರು ಅವರಿಗೆ ನೀರನ್ನು ಒದಗಿಸುವುದರ ಮೂಲಕ ಮತ್ತೊಮ್ಮೆ ತನ್ನ ಕೃಪೆಯನ್ನು ವ್ಯಕ್ತಪಡಿಸಿದನು ಎಂಬುದನ್ನು ಇದು ತೋರಿಸುತ್ತದೆ.

6) ಇಸ್ರಾಯೇಲರ ಅರಣ್ಯದಲ್ಲಿನ ಅಲೆದಾಟಗಳ ಸಮಯದಲ್ಲಿ ದೇವರು ಅವರಿಗೆ ನೀಡಿದ ಇತರೆ 'ಅದ್ಭುತಕರವಾದ ಒದಗಿಸುವಿಕೆಗಳ' ಕುರಿತು ನಮಗೆ ಕುತೂಹಲಕರವಾದ ಮಾಹಿತಿಗಳನ್ನು ಧರ್ಮೋ. 29:5 ತಿಳಿಸುತ್ತದೆ:

- ಈಜಿಪ್ಟಿನ ಹಾಗೂ ಮೋವಾಬಿನ ಬಯಲು ಸೀಮೆಗಳ ನಡುವಿನ 40 ವರ್ಷಗಳ ಅವಧಿಯಲ್ಲಿ ಅವರ ಬಟ್ಟೆಗಳು ಹರಿಯಲಿಲ್ಲ.
- ಅವರು ಕಲ್ಲು ಮುಳ್ಳಿನ ಪ್ರದೇಶಗಳನ್ನು ಹಾದು ನೂರಾರು ಕಿಲೋಮೀಟರ್‌ಗಳವರೆಗೆ ನಡೆದಾಗಲೂ ಅವರ ಚಪ್ಪಲಿಗಳು ಸವೆಯಲಿಲ್ಲ.

6. ನಾನು ಅರಣ್ಯ. 21:4–9 ರಲ್ಲಿರುವ ಕಂಚಿನ ಸರ್ಪದ ಕುರಿತಾದ ಕಥೆಯನ್ನು ದೇವರ ಕೃಪೆಯ ಚಿತ್ರಣವಾಗಿ ಅರ್ಥವಿವರಿಸುತ್ತೇನೆ. ದೇವರು ತನ್ನ ರಕ್ಷಣಾ ಹಸ್ತವನ್ನು ಇಸ್ರಾಯೇಲರ ಮೇಲಿನಿಂದ ತೆಗೆದದ್ದರ ಪರಿಣಾಮವಾಗಿ ಸರ್ಪಗಳು ಪಾಳೆಯದಲ್ಲಿ ಪ್ರವೇಶಿಸಿದವು. ದೇವರು ಅವರನ್ನು ಈಜಿಪ್ಟಿನಿಂದ ರಕ್ಷಿಸಿ ಅವರನ್ನು ಅರಣ್ಯದಲ್ಲಿ ಪರಾಂಬರಿಸಿದನು ಎಂದು ಅವರು ಅರಿಕೆ ಮಾಡಲು ತಿರಸ್ಕರಿಸಿದ್ದರಿಂದ ಪಾಪ ಮಾಡಿದರು. ಇಸ್ರಾಯೇಲರು ಸರ್ಪಗಳ ವಿಷದಿಂದ ರಕ್ಷಿಸಲ್ಪಡಲು ಯೋಗ್ಯರಾಗಿರಲಿಲ್ಲ. ಅವರ ಪ್ರಾಣಗಳನ್ನು ರಕ್ಷಿಸಿದ್ದು ದೇವರ ಕೃಪೆಯೇ ಆಗಿತ್ತು.

7. ಆರಾದಿನ ಅರಸನ (ಅರಣ್ಯ. 21:1–3), ಅರಸನಾದ ಸಿಹೋನನ (ಅರಣ್ಯ. 21:23–25. ಹೋಲಿಸಿರಿ. ಧರ್ಮೋ. 2:24) ಮತ್ತು ಅರಸನಾದ ಓಗನ (ಅರಣ್ಯ. 21:33–35) ಕುರಿತಾದ ಮೂರು ಕಥೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಸಂಗತಿಯೇನೆಂದರೆ ದೇವರು ಇಸ್ರಾಯೇಲರಿಗೆ ಅವರ ಶತ್ರುಗಳ ಮೇಲೆ ಜಯವನ್ನು ನೀಡಿದನು ಎಂಬುದಾಗಿದೆ. ಅರಣ್ಯಕಾಂಡದಲ್ಲಿರುವ ಪಠ್ಯವು ಅಮ್ಮೋರಿಯರ ಅರಸನಾದ ಸಿಹೋನನ ವಿರುದ್ಧ ಸಿಕ್ಕ ಜಯವನ್ನು ಉಲ್ಲೇಖಿಸದಿದ್ದಾಗ್ಯೂ ಧರ್ಮೋಪದೇಶಕಾಂಡದಲ್ಲಿರುವ ಸಮಾನಾಂತರ ಪಠ್ಯದಿಂದ ಅದು ಸ್ಪಷ್ಟವಾಗಿ ಕಾಣುತ್ತದೆ. ಈ ವಿಜಯಗಳು ಇಸ್ರಾಯೇಲರು ವಾಗ್ದಾನ ದೇಶದೊಳಗೆ ಪ್ರವೇಶಿಸಿ ಅಲ್ಲಿ ಶಾಶ್ವತವಾಗಿ ನೆಲೆಸಲು ಸಮೀಪಿಸಿದಾಗ ಸಿಕ್ಕ ಮೊದಲ ಮೂರು ವಿಜಯಗಳಾಗಿವೆ.

8. ಅರಣ್ಯಕಾಂಡ ಪುಸ್ತಕವು 36:13 ರೊಂದಿಗೆ ಕೊನೆಗೊಳ್ಳುತ್ತದೆ. ಈ ವಚನವು ಇಸ್ರಾಯೇಲರಿಗಾಗಿ ದೇವರು ನೀಡಿದ ಎರಡು ಒದಗಿಸುವಿಕೆಗಳನ್ನು ಪ್ರತಿಬಿಂಬಿಸುತ್ತದೆ:

   1) ದೇವರು ಅಂತಿಮವಾಗಿ ಅವರನ್ನು ವಾಗ್ದಾನ ದೇಶದ ಗಡಿ ಭಾಗಕ್ಕೆ ಕರೆತಂದನು ಎಂಬುದನ್ನು ಈ ವಚನವು ತೋರಿಸುತ್ತದೆ. ಅವರ ಅರಣ್ಯದಲ್ಲಿನ ಅಲೆದಾಟಗಳ ಸುದೀರ್ಘ ವರ್ಷಗಳ ಅವಧಿಯಲ್ಲಿ ಆತನು ಅವರನ್ನು ಮಾರ್ಗದರ್ಶಿಸಿದನು, ಸಂರಕ್ಷಿಸಿದನು ಮತ್ತು ಅವರ ಅಗತ್ಯತೆಗಳನ್ನು ಒದಗಿಸಿದನು.

   2) 'ಆಜ್ಞೆಗಳು ಮತ್ತು ನಿಬಂಧನೆಗಳು' ದೇವರು ಜನರಿಗೆ ನೀಡಿದ ವರಗಳಾಗಿದ್ದವು ಎಂಬುದನ್ನು ಈ ವಚನವು ಸೂಚಿಸುತ್ತದೆ. ದೇವರ ಧರ್ಮಶಾಸ್ತ್ರವು ತನ್ನ ಜನರಿಗಾಗಿ ಆತನು ತೋರಿದ ಕೃಪೆ ಮತ್ತು ಒದಗಿಸುವಿಕೆಯ ಒಂದು ವ್ಯಕ್ತಪಡಿಸುವಿಕೆಯಾಗಿದೆ. ಅದು ಜನರನ್ನು ಸಾಂಪ್ರದಾಯಿಕವಾಗಿ ಶುದ್ಧವಾಗಿಟ್ಟಿತು ಮತ್ತು ಅವರು ಪಾಪದ ಸಮಸ್ಯೆಯೊಂದಿಗೆ ವ್ಯವಹರಿಸಲು ಅವಕಾಶ ಮಾಡಿಕೊಟ್ಟಿತು. ಅವರು ತಮ್ಮ ಒಡಂಬಡಿಕೆಯ ಪರಿಶುದ್ಧ ಕರ್ತನೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲು ಅದು ಸಹಾಯಮಾಡಿತು. ಅದು ಇಸ್ರಾಯೇಲ್ ರಾಷ್ಟ್ರಕ್ಕೆ ಒಂದು ವಿಭಿನ್ನವಾದ ಗುರುತನ್ನು ಕೊಟ್ಟಿತು. ಅದು ಅವರನ್ನು ಅರಣ್ಯದಲ್ಲಿನ ಅಲೆದಾಟಗಳಲ್ಲಿ ಸುರಕ್ಷಿತವಾಗಿಟ್ಟಿತು ಮತ್ತು ವಾಗ್ದಾನ ದೇಶದಲ್ಲಿನ ನವಜೀವನಕ್ಕೆ ಅವರನ್ನು ಸಿದ್ಧಪಡಿಸಿತು.

9. ದೇವರ ಆಶೀರ್ವಾದವು ಆತನ ಕೃಪೆಯ ಒಂದು ವ್ಯಕ್ತಪಡಿಸುವಿಕೆಯಾಗಿದೆ:

   3) 'ಯಾಜಕರ ಆಶೀರ್ವಚನವನ್ನು' (ಅರಣ್ಯ. 6:22–27) ಈ ವಾಕ್ಯಗಳಲ್ಲಿ ಮರು–ರಚಿಸಬಹುದು:

      - ತನ್ನ ಜನರನ್ನು ಆಶೀರ್ವದಿಸುವುದಕ್ಕಾಗಿ ದೇವರು ಯಾಜಕರಿಗೆ ಒಂದು ಪೂರ್ವಸಿದ್ಧತೆಯನ್ನು ಮಾಡಲು ಬಯಸಿದನು. ಹಾಗಾಗಿ ಅದನ್ನು ಹೇಗೆ ಮಾಡಬೇಕೆಂಬುದರ ಕುರಿತು ತಿಳಿಸಲು ಆರೋನನನ್ನು ಮತ್ತು ಆತನ ಗಂಡು ಮಕ್ಕಳನ್ನು ನಿರ್ದೇಶಿಸಲು ದೇವರು ಮುಂದಾಳತ್ವವನ್ನು ವಹಿಸಿದನು. ಆತನು ಅವರಿಗೆ 'ಆಶೀರ್ವಚನವನ್ನು' ಕೊಟ್ಟನು (ವ. 22–23).

      - ಪ್ರತಿಯೊಬ್ಬ ವ್ಯಕ್ತಿಯ ಮೇಲೆಯೂ ದೇವರು ತನ್ನ ಸಂರಕ್ಷಣೆಯನ್ನು ಇರಿಸಿ ಆತನನ್ನು ಆಶೀರ್ವದಿಸಲಿ (ವ. 24).

      - ದೇವರು ನಿಮ್ಮನ್ನು ಅಂಗೀಕರಿಸಲಿ ಮತ್ತು ತನ್ನ ಅಂಗೀಕಾರ ಹಾಗೂ ಕೃಪೆಯೊಂದಿಗೆ ಆತನು ನಿಮಗೆ ತನ್ನನ್ನು ಪ್ರಕಟಿಸಿಕೊಳ್ಳಲಿ (ವ. 25).

      - ದೇವರು ನಿಮ್ಮನ್ನು ನೋಡಿ ಹರ್ಷಿಸಲಿ ಮತ್ತು ನಿಮಗೆ ನೆಮ್ಮದಿ, ವಿಶ್ರಾಂತಿ, ಸಂರಕ್ಷಣೆ, ಆರೋಗ್ಯ, ಸಂಪೂರ್ಣತೆ ಮತ್ತು ಸಂತೃಪ್ತಿಯನ್ನು ಅನುಗ್ರಹಿಸಲಿ ('ಶಾಂತಿ'ಯ ಈ ಎಲ್ಲಾ ಅಂಶಗಳನ್ನು ಹಿಬ್ರೂ ಪದವಾದ *ಶಾಲೋಮ್* ಒಳಗೊಂಡಿದೆ).

      - ಯಾಜಕರು ಈ ಮೂರುಪಟ್ಟು ಆಶೀರ್ವಾದವನ್ನು ಜನರ ಮೇಲೆ ಉಚ್ಚರಿಸಿದಾಗ ('ದೇವರ ಹೆಸರನ್ನು ಇಸ್ರಾಯೇಲರ ಮೇಲೆ ಉಚ್ಚರಿಸಿದಾಗ') ತನ್ನ ಜನರನ್ನು ತಾನು ಆಶೀರ್ವದಿಸುವೆನೆಂದು ದೇವರು ಪ್ರಮಾಣ ಮಾಡಿದನು (ವ. 27).

   4) ನಾವು ಅರಣ್ಯ. 22–24 ರಲ್ಲಿ ಅನ್ಯಮತೀಯನೂ ಕಣಿ ಹೇಳುವವನೂ ಆದ ಬಿಳಾಮನ ಕುರಿತು ಒಂದು ಉದ್ದವಾದ ಕಥೆಯನ್ನು ಈಗಾಗಲೇ ಅಭ್ಯಸಿಸಿದ್ದೇವೆ. ಆ ಕಥೆಯು ಅರಣ್ಯ. 24:10 ರಲ್ಲಿ ಸಾರಾಂಶಗೊಳಿಸಲ್ಪಟ್ಟಿದೆ. ಇಸ್ರಾಯೇಲರನ್ನು ಶಪಿಸಬೇಕೆಂಬ ಅರಸನಾದ ಬಾಲಾಕನ ಮನವಿಯನ್ನು ಬಿಳಾಮನು ನೆರವೇರಿಸಲಾಗಲಿಲ್ಲ ಯಾಕೆಂದರೆ ಅದು ದೇವರ ಚಿತ್ತಕ್ಕೆ ವಿರುದ್ಧವಾಗಿತ್ತು. ದೇವರು ಈಗಾಗಲೇ ಅವರನ್ನು ಅಶೀರ್ವದಿಸಿದ್ದನು ಮತ್ತು ಮುಂದೆಯೂ ನಿರಂತರವಾಗಿ ಆಶೀರ್ವದಿಸಲಿದ್ದನು. ಹಾಗಾಗಿ ದೇವರ ಆಶೀರ್ವಾದವು ಇಸ್ರಾಯೇಲರ ವಿರುದ್ಧ ಶಾಪ ಹಾಕಬೇಕೆಂಬ ಒಬ್ಬ ದುಷ್ಟ ಅರಸನ ಹಾಗೂ ಆತನು ದುಡ್ಡು ಕೊಟ್ಟು ಕರೆಸಿದ ಕಣಿ ಹೇಳುವವನ ಆಸೆಯನ್ನು ರದ್ದುಮಾಡಿತು. ಬಿಳಾಮನ ಸೋಲು ದೇವರು ತನ್ನ ಜನರಿಗೆ ತೋರಿದ ಕೃಪೆ ಮತ್ತು ಸಂರಕ್ಷಣೆಯ ಒಂದು ಫಲವಾಗಿದೆ ಎಂದು ನಾವು ಹೇಳಬಹುದು.

**ಅರಣ್ಯಕಾಂಡ ಉತ್ತರಗಳು 11: ಆದರ್ಶದ ತಿರಸ್ಕಾರ**

**ಇ. ಪ್ರಶ್ನೆಗಳಿಗೆ ಉತ್ತರಗಳು**

1. ಇಸ್ರಾಯೇಲರು ಮೋಶೆಯ ನಾಯಕತ್ವವನ್ನು ತಿರಸ್ಕರಿಸಿದ ವಿವಿಧ ಮಾರ್ಗಗಳು ಹೀಗಿವೆ:

    1) ಯೆಹೋವನ ಮುಂದಿದ್ದ ಮೋಶೆಯ ವಿಶೇಷ ಕರೆಯನ್ನು (ಅರಣ್ಯ. 12:5–8 ನ್ನು ಹೋಲಿಸಿರಿ) ಆತನ ಸಹೋದರಿಯಾದ ಮಿರ್ಯಾಮಳು ಮತ್ತು ಸಹೋದರನಾದ ಆರೋನನು ತಿರಸ್ಕರಿಸಿದರು (ಅರಣ್ಯ. 12:1–2). ಅವರು ತಮ್ಮನ್ನು ಮೋಶೆಗೆ ಸಮಾನರೆಂದು ಪರಿಗಣಿಸಿದ್ದರು.

    2) ಮೋಶೆಯ ಸಮಗ್ರ ನಾಯಕತ್ವವನ್ನು ಇಸ್ರಾಯೇಲರೆಲ್ಲರೂ ತಿರಸ್ಕರಿಸಿದರು (ಅರಣ್ಯ. 14:1–4). ಅವರನ್ನು ಈಜಿಪ್ಟಿನ ಒಳ್ಳೆಯ ಜೀವಿತದಿಂದ ಕರೆತಂದು ಅರಣ್ಯದಲ್ಲಿನ ಕಷ್ಟಪಾಡುಗಳಿಗೆ ನಡೆಸಿದ್ದಕ್ಕಾಗಿ ಮೋಶೆಯನ್ನು ದೂರಿದರು. ಹಾಗಾಗಿ ಅವರು ತಮ್ಮನ್ನು ಪುನಃ ಈಜಿಪ್ಟಿಗೆ ನಡೆಸುವುದಕ್ಕಾಗಿ ಒಬ್ಬ ಹೊಸ ನಾಯಕನನ್ನು ಆರಿಸಿಕೊಳ್ಳಲು ಯೋಜಿಸಿದರು. ಅವರಲ್ಲಿ ಕೆಲವರು ಮೋಶೆಯು ವಾಗ್ದಾನ ದೇಶಕ್ಕೆ ನಡೆಸುವೆನೆಂದ ಪ್ರಮಾಣವನ್ನು ಮುರಿದಿದ್ದಾನೆ ಎಂದೂ ದೂಷಿಸಿದರು (ಅರಣ್ಯ. 16:12–14).

    3) ಇಸ್ರಾಯೇಲರು ಪದೇ ಪದೇ ಮೋಶೆಯನ್ನು (ಹಾಗೂ ದೇವರನ್ನು) ಅರಣ್ಯದಲ್ಲಿನ ಕಷ್ಟಕರ ಜೀವಿತದ ನಿಮಿತ್ತ ದೂಷಿಸಿದರು (ಅರಣ್ಯ. 20:2–5; 21:4–5).

    4) ಮೋಶೆಯ ನಾಯಕತ್ವವನ್ನು ಲೇವಿಯನಾದ ಕೊರಹನು ಮತ್ತು ರೂಬೇನ್ಯರಾದ ದಾತಾನ್ ಅಬಿರಾಮರು ತಿರಸ್ಕರಿಸಿದರು (ಅರಣ್ಯ. 16:1–3). ಅವರು ಇಡೀ ಇಸ್ರಾಯೇಲ್ ಸಮುದಾಯವು ಪರಿಶುದ್ಧವಾಗಿದ್ದರೂ ಮೋಶೆ ಮತ್ತು ಆರೋನರು 'ಅತಿ ಪವಿತ್ರರಾಗಿ' ಕಾಣಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದು ಆಪಾದಿಸಿದರು. ಈ ಆಪಾದನೆಗಾಗಿ ದೇವರು ಅವರನ್ನು ಕಠಿಣವಾಗಿ ಶಿಕ್ಷಿಸಿದನು.

    5) ಪ್ರವಾದಿಸುವ ಹಾಗೂ ಜನರ ಪರವಾಗಿ ಪ್ರಾರ್ಥಿಸುವ ಮೋಶೆಯ ನಾಯಕತ್ವ ಪಾತ್ರವನ್ನು 'ಇಸ್ರಾಯೇಲರ ಸಮೂಹವೆಲ್ಲಾ' ತಿರಸ್ಕರಿಸಿದರು (ಅರಣ್ಯ. 16:41). ಆತ್ಮಿಕ ದಂಗೆಕೋರರಾದ ಕೊರಹ, ದಾತಾನ್ ಮತ್ತು ಅಬಿರಾಮರ ವಿರುದ್ಧ ದೇವರು ತೀರಿಸಿದ ನ್ಯಾಯವುಳ್ಳ ದಂಡನೆಗಾಗಿ ಅವರು ಮೋಶೆಯನ್ನು ದೂಷಿಸಿದರು.

2. ಇಸ್ರಾಯೇಲರು ದೇವರ ಒದಗಿಸುವಿಕೆಗಳನ್ನು ಹೀಗೆ ತಿರಸ್ಕರಿಸಿದರು:

    1) ದೇವರು ಅವರಿಗೆ ಅರಣ್ಯದಲ್ಲಿ ಒದಗಿಸಿದ 'ಭಕ್ಷ್ಯಗಳ' ಕುರಿತು ಅವರು ದೂರಿದರು (ಅರಣ್ಯ. 11:4–6). ಅವರು ಈಜಿಪ್ಟಿನಲ್ಲಿ ಸವಿದ ಭಕ್ಷ್ಯಗಳಿಗಾಗಿ ಹಂಬಲಿಸಿದರು ಮತ್ತು ತಾವು ಅಲ್ಲಿ ಗುಲಾಮರಾಗಿದ್ದನ್ನು ಹಾಗೂ ಫರೋಹನ ದಬ್ಬಾಳಿಕೆಯ ಅಡಿಯಲ್ಲಿ ಹಿಂಸೆ ಅನುಭವಿಸಿದ್ದನ್ನು ಸಂಪೂರ್ಣವಾಗಿ ಮರೆತುಬಿಟ್ಟರು. ಅವರು ದೇವರ ವಿಮೋಚನೆಗಾಗಿ ಆತನಿಗೆ ಕೃತಜ್ಞತೆಯನ್ನು ಸಲ್ಲಿಸುವುದರ ಬದಲಾಗಿ ಆಹಾರದ ವಿಷಯವಾಗಿ ದೂರಿದರು (ಅರಣ್ಯ. 21:5 ನ್ನು ಹೋಲಿಸಿರಿ).

    2) ಅವರು ಅರಣ್ಯದಲ್ಲಿ ನೀರಿನ ಕೊರತೆಯ ಕುರಿತಾಗಿ ದೂರಿದರು (ಅರಣ್ಯ. 20:5). ದೇವರು ಸುಮಾರು 40 ವರ್ಷಗಳ ಕಾಲ ಸಿನಾಯಿ ಪರ್ಯಾಯ ದ್ವೀಪದ ಅತ್ಯಂತ ಬರುಡು ಪ್ರಾಂತದಲ್ಲಿ ಅವರಿಗೆ ಸಾಕಷ್ಟು ನೀರನ್ನು ಒದಗಿಸಿದ್ದನು. ಅವರು ಈ ಅದ್ಭುತಕರವಾದ ಒದಗಿಸುವಿಕೆಗಾಗಿ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುವುದರ ಬದಲಾಗಿ ತಮ್ಮ ಪ್ರಸ್ತುತ ಸನ್ನಿವೇಶವನ್ನು ಕಂಡು ಆತನ ಸೇವಕರಾದ ಮೋಶೆ ಮತ್ತು ಆರೋನರನ್ನು ದೂಷಿಸಿದರು (ಅರಣ್ಯ. 21:5 ನ್ನು ಹೋಲಿಸಿರಿ).

3. ಇಸ್ರಾಯೇಲರು ಹೀಗೆ ದೇವರನ್ನು ತಿರಸ್ಕರಿಸಿದರು:

    1) ಅವರು ಅರಣ್ಯದಲ್ಲಿನ ತಮ್ಮ ಕಷ್ಟಾರ್ಜಿತಗಳ ಹಾಗೂ ಸರಳ ಜೀವಿತದ ನಿಮಿತ್ತವಾಗಿ ದೇವರನ್ನು ದೂಷಿಸಿದಾಗ ವಾಸ್ತವಿಕವಾಗಿ ಆತನನ್ನು ತಮ್ಮ ಕರ್ತನನ್ನಾಗಿಯೂ ಹಾಗೂ ಒದಗಿಸುವವನನ್ನಾಗಿಯೂ ತಿರಸ್ಕರಿಸಿದರು (ಅರಣ್ಯ. 11:1, 4–6)

    2) ಅವರು ಈಜಿಪ್ಟಿನಲ್ಲಿದ್ದ ತಮ್ಮ ಹಳೆ ಜೀವನಕ್ಕೆ ಹಿಂದಿರುಗಬೇಕೆಂದು ಹಂಬಲಿಸಿದಾಗ ವಾಸ್ತವಿಕವಾಗಿ ಆತನನ್ನು ತಮ್ಮ ಕರ್ತನನ್ನಾಗಿಯೂ ಹಾಗೂ ವಿಮೋಚಕನನ್ನಾಗಿಯೂ ತಿರಸ್ಕರಿಸಿದರು (ಅರಣ್ಯ. 14:1–4). ಅವರು ದೇವರನ್ನು ಹಗೆಮಾಡಿದರು (ಅರಣ್ಯ. 14:11, 23) ಮತ್ತು ಆತನ ವಿರುದ್ಧ ದಂಗೆ ಎದ್ದರು (ಅರಣ್ಯ. 14:35).

    3) ಅವರು ಅನೈತಿಕತೆಯ ಹಾಗೂ ಮೋವಾಬಿನ ಬಯಲುಗಳಲ್ಲಿ ಅನ್ಯದೇವರುಗಳನ್ನು ಆರಾಧಿಸುವುದರ ಕಡೆಗೆ ತಿರುಗಿದಾಗ ಅವರು ದೇವರನ್ನು ವಾಸ್ತವಿಕವಾಗಿ ತಮ್ಮ ಒಡಂಬಡಿಕೆಯ ಪವಿತ್ರ ಕರ್ತನನ್ನಾಗಿ ತಿರಸ್ಕರಿಸಿದರು (ಅರಣ್ಯ. 25:1–3).

4. ಇಸ್ರಾಯೇಲರು ದೇವರು ನೀಡಿದ ವಾಗ್ದಾನ ದೇಶದ ವರವನ್ನು ತಿರಸ್ಕರಿಸಿದ್ದಕ್ಕೆ ನಾಲ್ಕು ಕಾರಣಗಳು ಹೀಗಿವೆ (ಅರಣ್ಯ. 13:26–14:3):

   1) ಅವರು ದೇವರ ಪರಮಶ್ರೇಷ್ಠ ಶಕ್ತಿಯನ್ನು ಮರೆತು ಕೇವಲ ಶಕ್ತಿಶಾಲಿಯಾದ ನಿವಾಸಿಗಳನ್ನು ಮಾತ್ರ ಕಂಡರು.

   2) ಅವರು ದೇವರ ಅಪರಿಮಿತ ಸಂಪನ್ಮೂಲಗಳನ್ನು ಮರೆತು ಕೇವಲ ತಮ್ಮ ಸ್ವಂತ ಮಿತಿಗಳನ್ನು ಮಾತ್ರ ಕಂಡರು.

   3) ಅವರು ಅಲ್ಪನಂಬಿಕೆಯುಳ್ಳ ಹತ್ತು ಗೂಢಾಚಾರರ ನಕಾರಾತ್ಮಕ ವರದಿಯನ್ನು ಮಾತ್ರ ಕೇಳಿ ಹೆಚ್ಚು ನಂಬಿಕೆಯುಳ್ಳ ಎರಡು ಗೂಢಾಚಾರರ (ಯೆಹೋಶುವ ಮತ್ತು ಕಾಲೇಬರ) ಸಕಾರಾತ್ಮಕ ವರದಿಯನ್ನು ಅಲಕ್ಷಿಸಿದರು.

   4) ಅವರು ದೇವರ ಮೇಲೆ ಸಂಶಯಪಟ್ಟರು ಮತ್ತು ಆತನು ತಮ್ಮ ಮೂಲಪಿತೃವಾದ ಅಬ್ರಹಾಮನಿಗೆ ಮತ್ತು ತಮಗೆ ಮಾಡಿದ ತನ್ನ ವಾಗ್ದಾನವನ್ನು ನೆರವೇರಿಸುವನು ಎಂದು ಅವರು ನಂಬಲಿಲ್ಲ.

5. ಅರಣ್ಯ. 10:13, 33–36 ನ್ನು ಅರಣ್ಯ. 14:39–45 ರೊಂದಿಗೆ ಹೋಲಿಸುವಾಗ ನಾವು ಈ 'ದೇವರ ಸುವ್ಯವಸ್ಥಿತ ಪದ್ಧತಿಯ' ಕುರಿತು ಈ ಸಂಗತಿಗಳನ್ನು ಕಲಿಯುತ್ತೇವೆ:

   1) ದೇವರ ಆಜ್ಞೆಗಳಿಗೆ ವಿಧೇಯರಾಗುವುದನ್ನು ಅವರು ಕೈಬಿಟ್ಟಿದ್ದರು.

   2) ದೇವರು ಅವರ ಸಂಗಡ ಇರಲಿಲ್ಲ.

   3) ದೇವರ ನಿಯಮಗಳನ್ನು ಅವರು ಕೈಬಿಟ್ಟಿದ್ದರು ಮತ್ತು ಶಿಸ್ತು ಪಾಲಿಸುವುದನ್ನು ಅವರು ಕೈಬಿಟ್ಟಿದ್ದರು.

   4) ದೇವರ ನಾಯಕನಿಗೆ ಕಿವಿಗೊಡುವುದನ್ನು ಅವರು ಕೈಬಿಟ್ಟಿದ್ದರು.

   5) ದೇವರ ನಾಯಕನಿಗೆ ವಿಧೇಯರಾಗುವುದನ್ನು ಅವರು ಕೈಬಿಟ್ಟಿದ್ದರು.

'ಅವರಿಗಾಗಿ ದೇವರು ಹೊಂದಿದ್ದ ಆದರ್ಶಗಳ' ತಿರಸ್ಕಾರದ ಇತರೆ ಅಂಶಗಳನ್ನು ಮೇಲಿನ 1–3 ರಲ್ಲಿರುವ ಅಂಶಗಳಲ್ಲಿ ಕಾಣಬಹುದು.

**ಈ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –

2. –

3. ಅರಣ್ಯದಲ್ಲಿನ ಅಲೆದಾಟಗಳಲ್ಲಿ ದೇವರು ಹೊಂದಿದ್ದ ಆದರ್ಶಗಳನ್ನು ಇಸ್ರಾಯೇಲರು ತಿರಸ್ಕರಿಸಿದ ಈ ಅಧ್ಯಯನದಿಂದ ದಕ್ಷಿಣ ಭಾರತದಲ್ಲಿರುವ ಸಭೆಯು ಕಲಿತುಕೊಳ್ಳಬಹುದಾದ ಕೆಲವು ಸಂಗತಿಗಳು ಹೀಗಿವೆ:

   1) ದೇವರು ನಮಗೆ ನೀಡಿರುವ ನಾಯಕರನ್ನು ನಾವು ತಿರಸ್ಕರಿಸಬಾರದು. ಅದರ ಬದಲಾಗಿ ನಾವು ದೇವರು ಅವರಿಗೆ ಕೊಟ್ಟಿರುವ ಕರೆಯನ್ನು ಅಂಗೀಕರಿಸಬೇಕು. ನಾವು ಅವರನ್ನು ಪ್ರೀತಿಸಬೇಕು, ಅವರನ್ನು ಗೌರವಿಸಬೇಕು, ಅವರನ್ನು ಸನ್ಮಾನಿಸಬೇಕು, ಅವರಿಗೆ ಕಿವಿಗೊಡಬೇಕು ಮತ್ತು ಅವರನ್ನು ಹಿಂಬಾಲಿಸಬೇಕು.

   2) ದೇವರು ನಮಗೆ ಒದಗಿಸಿರುವ ಸಂಗತಿಗಳನ್ನು ನಾವು ತಿರಸ್ಕರಿಸಬಾರದು. ಅದಕ್ಕೆ ಬದಲಾಗಿ ದೇವರು ನಮ್ಮನ್ನು ರಕ್ಷಿಸಿದ್ದಕ್ಕಾಗಿ, ನಮ್ಮನ್ನು ಎತ್ತಿಹಿಡಿದದಕ್ಕಾಗಿ, ನಮ್ಮನ್ನು ಉಪಯೋಗಿಸಿದ್ದಕಾಗಿ ಮತ್ತು ದಿನನಿತ್ಯ ಆತನು ನಮಗೆ ಒದಗಿಸುವ ಎಲ್ಲಾ ಒಳ್ಳೆಯ ಸಂಗತಿಗಳಿಗಾಗಿ ನಾವು ಆತನಿಗೆ ಕೃತಜ್ಞತೆಯನ್ನು ಸಲ್ಲಿಸಬೇಕು.

   3) ನಾವು ನಮ್ಮ ಹೃದಯಗಳಲ್ಲಿ ದೇವರನ್ನು ನಮ್ಮ ಕರ್ತನಾಗಿ, ನಮ್ಮ ರಕ್ಷಕನಾಗಿ ಮತ್ತು ವಿಮೋಚಕನಾಗಿ ಇಲ್ಲವೆಂದು ತಿರಸ್ಕರಿಸುವುದರ ಸೂಚನೆಯಾಗಿ ಯಾವ ಸಂಗತಿಗಳನ್ನು ಮಾಡಬಾರದು ಅಥವಾ ಹೇಳಬಾರದು.

      - ಉದಾಹರಣೆಗೆ, ನಾವು ನಮ್ಮ 'ಹಳೆಯ ಜೀವಿತವನ್ನು' ಹಂಬಲಿಸುತ್ತೇವೆ ಎಂದು ಹೇಳುವುದಾದರೆ (ಅಥವಾ ಆಲೋಚಿಸುವುದಾದರೆ, ಅಥವಾ ಭಾವಿಸುವುದಾದರೆ) ವಾಸ್ತವಿಕವಾಗಿ ದೇವರನ್ನು ನಮ್ಮ ರಕ್ಷಕನ ಹಾಗೂ ವಿಮೋಚಕನ ಸ್ಥಾನದಿಂದ ತಿರಸ್ಕರಿಸಿದಂತಾಗುತ್ತದೆ.

- ಅಥವಾ, ನಮ್ಮ ಇಂದಿನ ಸರಳ ಜೀವನದ ಕುರಿತಾಗಿ ದೂರಿದರೆ (ಅಥವಾ ನಮ್ಮ ಪರಿಸ್ಥಿತಿಯನ್ನು ಒಬ್ಬ ಶ್ರೀಮಂತ ಹಾಗೂ ಅಧಿಕಾರವುಳ್ಳ ವ್ಯಕ್ತಿಯ ಪರಿಸ್ಥಿತಿಯೊಂದಿಗೆ ಅಸಂತುಷ್ಟಿಯಿಂದ ಹೋಲಿಸಿಕೊಂಡರೆ) ನಾವು ದೇವರು ನಮ್ಮ ಒದಗಿಸುವವನು ಎಂಬುದನ್ನು ತಿರಸ್ಕರಿಸುತ್ತೇವೆ.

- ಅಥವಾ, ನಾವು ವಿಗ್ರಹಾರಾಧಕರ ಆಚಾರಗಳಲ್ಲಿ ಅಥವಾ ವಿಗ್ರಹಾರಾಧಾಕರ ರೀತಿಯಲ್ಲಿ ಆರಾಧನೆ ಮಾಡುವುದರ ಮೂಲಕ ನಮ್ಮ ನಂಬಿಕೆಯಲ್ಲಿ ರಾಜಿಮಾಡಿಕೊಂಡರೆ ದೇವರು ನಮ್ಮ ಕರ್ತನೆಂಬುದನ್ನು ನಾವು ತಿರಸ್ಕರಿಸುತ್ತೇವೆ.

4) ನಾವು ದೇವರ ವಾಗ್ದಾನಗಳನ್ನು ತಿರಸ್ಕರಿಸಬಾರದು.

   - ಆತನು ನಮ್ಮ ಹೋರಾಟಗಳ ಹಾಗೂ ಶೋಧನೆಗಳ ಮಧ್ಯದಲ್ಲಿಯೂ ನಮ್ಮ ಸಂಗಡ ಇರುತ್ತೇನೆಂದು ವಾಗ್ದಾನಮಾಡಿದ್ದಾನೆ. ಹಾಗಾಗಿ ನಾವು ಸಮಸ್ಯೆಗಳನ್ನು ಹಾಗೂ ಕಷ್ಟಗಳನ್ನು ಎದುರಿಸುವಾಗ ದೇವರನ್ನು ಅಲ್ಲಗಳೆಯಬಾರದು (ಅಥವಾ ಆತನ ಕುರಿತಾಗಿ ಕೆಟ್ಟದಾಗಿ ಮಾತನಾಡಬಾರದು).

   - ನಾವು ನಮ್ಮನ್ನು ದೇವರ ಸೇವೆಯಲ್ಲಿ ತೊಡಗಿಸಿಕೊಳ್ಳುವಾಗ ಪವಿತ್ರಾತ್ಮನ ಬಲವನ್ನು ನಮಗೆ ನೀಡುತ್ತೇನೆಂದು ಆತನು ವಾಗ್ದಾನಮಾಡಿದ್ದಾನೆ. ಹಾಗಾಗಿ ನಮ್ಮ ಜೀವಿತಗಳಲ್ಲಿ ಪವಿತ್ರಾತ್ಮನ ಬಲವಾದ ಪ್ರಸನ್ನತೆಯನ್ನು ನಾವು ದಿಕ್ಕರಿಸಬಾರದು.

   - ನಾವು ಪರಲೋಕದಲ್ಲಿ ಆತನೊಂದಿಗೆ ನಿತ್ಯವಾಗಿ ವಾಸಿಸುವೆಂದು ಆತನು ವಾಗ್ದಾನಮಾಡಿದ್ದಾನೆ. ಹಾಗಾಗಿ ನಾವು ಪರಲೋಕದಲ್ಲಿರುವ ನಮ್ಮ ಪೌರತ್ವವನ್ನು ಮರೆತುಬಿಡುವಷ್ಟು ಇಹಲೋಕದೊಂದಿಗೆ ಸ್ನೇಹ ಇಟ್ಟುಕೊಳ್ಳಬಾರದು.

5) ನಾವು ಹೊಸ ಒಡಂಬಡಿಕೆಯಲ್ಲಿ ವರ್ಣಿಸಲಾಗಿರುವ ನಮ್ಮ ಜೀವನಕ್ಕಾಗಿ ದೇವರು ಹೊಂದಿರುವ ಆದರ್ಶದ ಮಾದರಿಯನ್ನು ತಿರಸ್ಕರಿಸಬಾರದು. ಇಹಲೋಕದ ದುಷ್ಟ ಮಾದರಿಗಳನ್ನು ಅನುಸರಿಸುತ್ತಾ 'ಕತ್ತಲಲ್ಲಿ ನಡೆಯುವುದು' ಎಂದರೆ ದೇವರ ಮಾದರಿಗಳನ್ನು ತಿರಸ್ಕರಿಸುವುದಾಗಿದೆ. ಅದಕ್ಕೆ ಬದಲಾಗಿ ನಾವು 'ಆತ್ಮನಲ್ಲಿ ನಡೆಯುತ್ತಾ' ಆತ್ಮನ ಫಲಗಳನ್ನು ಕೊಡುವವರಾಗಬೇಕು: *ಪ್ರೀತಿ, ಆನಂದ, ಸಮಾಧಾನ, ಸಹನೆ, ದಯೆ, ಸದ್ಗುಣ, ನಂಬಿಗಸ್ತಿಕೆ, ಸಾತ್ವಿಕತೆ ಮತ್ತು ಸ್ವ–ನಿಯಂತ್ರಣ* (ಗಲಾತ್ಯ. 5:22–23).

**ಅರಣ್ಯಕಾಂಡ ಉತ್ತರಗಳು 12: ಹೊಸ ಸಂತತಿ**

**ಆ. ಪ್ರಶ್ನೆಗಳಿಗೆ ಉತ್ತರಗಳು**

1. ಮೊದಲ ಸಂತತಿಯನ್ನು ಹೀಗೆ ವರ್ಣಿಸಬಹುದು (ಅರಣ್ಯ. 11:1–3, 4–6; 14:1–4):

   1) ಅವರು ತಮ್ಮ ಜೀವಿತದ ಸ್ಥಿತಿಯನ್ನು ಇಷ್ಟಪಡಲಿಲ್ಲವಾದ್ದರಿಂದ ದೇವರ ಹಾಗೂ ತಮ್ಮ ನಾಯಕರುಗಳ ಕುರಿತು ದೂರಿದರು.

   2) ಅವರ ದೂರುಗಳು ದೇವರಿಗೆ ಕೋಪವನ್ನೆಬ್ಬಿಸುವಷ್ಟು ಕೆಟ್ಟದ್ದಾಗಿದ್ದವು.

   3) ದೇವರು ಅವರನ್ನು ಶಿಕ್ಷಿಸಿದಾಗ ಅವರು ಪಶ್ಚಾತ್ತಾಪಪಟ್ಟು ದೇವರ ಕಡೆಗೆ ಹಿಂತಿರುಗಿದರು.

2. ಮೊದಲ ಸಂತತಿಯ ವಿರುದ್ಧ ದೇವರ ನ್ಯಾಯತೀರ್ಪು (ಅರಣ್ಯ. 14:5–38):

   1) ಅವರು ವಾಗ್ದಾನದೇಶವನ್ನು ಪ್ರವೇಶಿಸಲು ತಿರಸ್ಕರಿಸಿದ್ದರಿಂದ ನ್ಯಾಯತೀರ್ಪಿಗೆ ಒಳಗಾದರು.

   2) ಅವರು ಅರಣ್ಯದಲ್ಲಿ ನಾಶವಾಗಬೇಕೆಂದು ನ್ಯಾಯತೀರಿಸಲ್ಪಟ್ಟರು, ಆದರೆ ಕೆಟ್ಟ ವರದಿಯನ್ನು ಸಲ್ಲಿಸಿದ ಗೂಢಾಚಾರರು ಅವರು ನಿಂತಿದ್ದ ಸ್ಥಳದಲ್ಲಿಯೇ ವ್ಯಾಧಿಯಿಂದ ಸತ್ತರು.

3. ಮೊದಲ ಸಂತತಿಯನ್ನು ಹೀಗೆ ವರ್ಣಿಸಬಹುದು (ಅರಣ್ಯ. 20:2–5; 21:4–5; 25:1–3):

   1) ಅವರೂ ಸಹ ಅರಣ್ಯದಲ್ಲಿದ್ದ ತಮ್ಮ ಜೀವಿತದ ಸ್ಥಿತಿಯ ಕುರಿತು ಮತ್ತು ದೇವರ ಹಾಗೂ ತಮ್ಮ ನಾಯಕರುಗಳ ಕುರಿತು ದೂರಿದರು.

   2) ಅವರಲ್ಲಿ ಕೆಲವರು ಮೋವಾಬ್ಯರ ಶೋಧನೆಗೆ ಒಳಗಾಗಿ ವಿಗ್ರಹಾರಾಧನೆಯಲ್ಲಿಯೂ ಹಾಗೂ ಅನೈತಿಕ ಸಂಬಂಧಗಳಲ್ಲಿಯೂ ಬಿದ್ದುಹೋದರು.

4. ಹೊಸ ಸಂತತಿಯೊಂದಿಗೆ ದೇವರು ಹೀಗೆ ವ್ಯವಹರಿಸಿದನು (ಅರಣ್ಯ. 21:6–9; 25:4–5; 34:1):

   1) ಆತನು ವಿಷಸರ್ಪಗಳಿಂದ ಅವರನ್ನು ಶಿಕ್ಷಿಸಿದಾಗ ಅದು ಅನೇಕರ ಪ್ರಾಣಗಳನ್ನು ತೆಗೆದುಕೊಂಡಿತು. ಆದರೆ ಅವರು ಪಶ್ಚಾತ್ತಾಪಪಟ್ಟಾಗ ಆತನು ಅವರಿಗೆ ಒಂದು ರೋಗಪರಿಹಾರವನ್ನು ಒದಗಿಸಿದನು, ಅದೇನೆಂದರೆ ಕಂಚಿನ ಸರ್ಪ.

   2) ವಿಗ್ರಹಾರಾಧನೆ ಮತ್ತು ಅನೈತಿಕತೆಗೆ ಶರಣರಾದ ನಾಯಕರುಗಳನ್ನು ಕೊಲ್ಲಬೇಕೆಂದು ಆತನು ಮೋಶೆಗೆ ಹೇಳಿದನು.

   3) ಆದರೂ ಅವರು ವಾಗ್ದಾನದೇಶವನ್ನು ವಶಮಾಡಿಕೊಳ್ಳಲು ಅನುಮತಿಸಿದನು.

5. ಇಸ್ರಾಯೇಲರ ನಂತರದ ಸಂತತಿಗಳನ್ನು ಹೀಗೆ ವಿವರಿಸಬಹುದು (ನ್ಯಾಯಸ್ಥಾಪಕರು. 2:6–3:6):

   1) ಯೆಹೋಶುವನ ತಲೆಮಾರಿನ ಇಸ್ರಾಯೇಲರು ದೇವರಿಗೂ ಹಾಗೂ ತಮ್ಮ ನಾಯಕರುಗಳಿಗೂ ವಿಧೇಯರಾಗಿದ್ದರು.

   2) ದೇವರ ಪರಾಕ್ರಮ ಕಾರ್ಯದ ವೈಯಕ್ತಿಕ ಅನುಭವವನ್ನು ಹೊಂದಿದ್ದವರು ಆತನಿಗೆ ನಂಬಿಗಸ್ತರಾಗಿದ್ದರು.

   3) ಆದರೆ ನಂತರ ಬಂದ (ದೇವರನ್ನರಿಯದ) ತಲೆಮಾರು ವಿಗ್ರಹಾರಾಧನೆಯ ಕಡೆಗೆ ತಿರುಗಿತು.

   4) ಅವರ ದುಷ್ಟ ಮಾರ್ಗಗಳು ದೇವರಿಗೆ ಕೋಪವನ್ನೆಬ್ಬಿಸಿದವು, ಹಾಗಾಗಿ ವೈರಿಗಳು ಅವರನ್ನು ಬಾದಿಸಿ, ಅವರನ್ನು ಯುದ್ಧದಲ್ಲಿ ಸೋಲಿಸಿ, ಅವರ ದೇಶವನ್ನು ವಶಮಾಡಿಕೊಳ್ಳುವಂತೆ ಆತನು ಅನುಮತಿಸಿದನು.

   5) ಆದರೆ ದೇವರು ಅವರನ್ನು ಕನಿಕರಿಸಿ ವಿಮೋಚಕರನ್ನು ಕಳುಹಿಸಿಕೊಟ್ಟನು.

**ಈ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –

2. –

3. ಪ್ರತಿಯೊಂದು ಹೊಸ ಸಂತತಿಯು ಕರ್ತನೊಂದಿಗೆ ನಡೆಯಲು ಮತ್ತು ಆತನನ್ನು ನಂಬಿಗಸ್ತರಾಗಿ ಸೇವಿಸಲು ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಹೇಗೆ ಸಹಾಯಮಾಡಬಹುದು ಎಂಬುದಕ್ಕೆ ಇಲ್ಲಿ ಕೆಲವು ಅಂಶಗಳು ಕೊಡಲ್ಪಟ್ಟಿವೆ:

1) ನಾವು ನಮ್ಮ ಸಭೆಗಳಲ್ಲಿರುವ ಮಕ್ಕಳನ್ನು ಹಾಗೂ ಯೌವ್ವನಸ್ಥರನ್ನು ಗಂಭೀರವಾಗಿ ಪರಿಗಣಿಸಬೇಕು: *ಕೆಲವರು ಚಿಕ್ಕ ಮಕ್ಕಳನ್ನು ಯೇಸು ಮುಟ್ಟಬೇಕೆಂದು ಆತನ ಬಳಿಗೆ ತಂದರು; ಆದರೆ ಆತನ ಶಿಷ್ಯರು ಜನರನ್ನು ಗದರಿಸಿದರು. ಯೇಸು ಅದನ್ನು ನೋಡಿದಾಗ ಕೋಪಗೊಂಡು ಅವರಿಗೆ, 'ಚಿಕ್ಕಮಕ್ಕಳನ್ನು ನನ್ನ ಹತ್ತಿರಕ್ಕೆ ಬರಲು ಬಿಡಿರಿ. ಅವುಗಳಿಗೆ ಅಡ್ಡಿಮಾಡಬೇಡಿರಿ. ಯಾಕಂದರೆ ದೇವರ ರಾಜ್ಯವು ಇಂಥವರದೇ. ಯಾವನಾದರೂ ಚಿಕ್ಕ ಮಗುವಿನಂತೆ ದೇವರ ರಾಜ್ಯವನ್ನು ಅಂಗೀಕರಿಸದಿದ್ದರೆ ಅವನು ಅದರೊಳಗೆ ಪ್ರವೇಶಿಸುವದಿಲ್ಲ ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ'. ಇದಲ್ಲದೆ ಆತನು ಆ ಮಕ್ಕಳನ್ನು ಎತ್ತಿಕೊಂಡು ತನ್ನ ಕೈಗಳನ್ನು ಅವುಗಳ ಮೇಲೆ ಇಟ್ಟು ಆಶೀರ್ವದಿಸಿದನು* (ಮಾರ್ಕ 10:13–16).

2) ನಾವು ನಮ್ಮ ಸಭೆಗಳಲ್ಲಿರುವ ಮಕ್ಕಳಿಗೆ ಹಾಗೂ ಯೌವ್ವನಸ್ಥರಿಗೆ ಬೋಧಿಸಿ ಅವರನ್ನು ತರಬೇತುಗೊಳಿಸಬೇಕು: *ನಡೆಯಬೇಕಾದ ಮಾರ್ಗದಲ್ಲಿರುವಂತೆ ಮಗುವಿಗೆ ಶಿಕ್ಷಣ ಕೊಡು; ಆಗ ಮುಪ್ಪಿನಲ್ಲಿಯೂ ಅವನು ಅದರಿಂದ ದೂರ ಹೋಗುವುದಿಲ್ಲ* (ಜ್ಞಾನೋಕ್ತಿ 22:6). ಅದರ ಅರ್ಥ ನಾವು ನಮ್ಮ ಸಭೆಗಳಲ್ಲಿರುವ ಮಕ್ಕಳಿಗೆ ಹಾಗೂ ಯೌವ್ವನಸ್ಥರಿಗೆ ಆಕರ್ಷಣೀಯವಾದ ಹಾಗೂ ಸೂಕ್ತವಾದ ಚಟುವಟಿಕೆಗಳನ್ನು ಮಾಡಿಸಬೇಕು.

3) ನಮ್ಮ ಸಭೆಗಳಲ್ಲಿರುವ ಮಕ್ಕಳು ಹಾಗೂ ಯೌವ್ವನಸ್ಥರು ದೇವರೊಂದಿಗೆ ವೈಯಕ್ತಿಕ ಅನುಭವವನ್ನು ಹೊಂದುವಂತೆ ಅವಕಾಶಗಳನ್ನು ಒದಗಿಸಬೇಕು: ರಕ್ಷಣೆಯ ಅನುಭವ, ತಮ್ಮ ದಿನನಿತ್ಯದ ಜೀವಿತಗಳಲ್ಲಿ ದೇವರ ಒದಗಿಸುವಿಕೆಯ ಅನುಭವ, ರೋಗ ಸೌಖ್ಯದ ಅನುಭವ, ಪವಿತ್ರಾತ್ಮನ ತುಂಬಿಸುವಿಕೆಯ ಅನುಭವ, ಫಲಭರಿತ ಪ್ರಾರ್ಥನಾ ಜೀವಿತದ ಅನುಭವ ಮತ್ತು ವಿವಿಧ ರೀತಿಯ ಸೇವೆಯ ಅನುಭವ.

4) ನಾವು ನಮ್ಮ ಸಭೆಗಳಲ್ಲಿರುವ ಮಕ್ಕಳನ್ನು ಹಾಗೂ ಯೌವ್ವನಸ್ಥರನ್ನು ಒಳ್ಳೆಯ ನಾಯಕರಾಗುವಂತೆ ಮಾಡುವುದು: ಅಂತಹ ನಾಯಕರನ್ನು ಗುರುತಿಸುವುದು, ಅಂತಹ ನಾಯಕರನ್ನು ನೇಮಿಸುವುದು, ಅಂತಹ ನಾಯಕರನ್ನು ತರಬೇತುಗೊಳಿಸುವುದು ಮತ್ತು ಅಂತಹ ನಾಯಕರನ್ನು ಪ್ರೋತ್ಸಾಹಿಸುವುದು.

5) ನಮ್ಮ ಸಭೆಗಳ ಸತ್ಯವೇದ ಬೋಧನೆಯು ಪ್ರತಿಯೊಂದು ಹೊಸ ಸಂತತಿಗೆ ಸಮಂಜಸವಾಗಿರತಕ್ಕದ್ದು. ಕಾಲಗಳು ಬದಲಾಗುತ್ತವೆ, ಪರಿಸ್ಥಿತಿಗಳು ಬದಲಾಗುತ್ತವೆ, ಸಾಂಸ್ಕೃತಿಕ ವಿಷಯಗಳು ಬದಲಾಗುತ್ತವೆ ಮತ್ತು ಒಬ್ಬ ವ್ಯಕ್ತಿಯ ಪ್ರಾಧ್ಯಾನತೆಗಳ ಪಟ್ಟಿಯು ಬದಲಾಗಬಹುದು. ಆದರೆ ಯೇಸು ಕ್ರಿಸ್ತನ ಮೂಲಕ ರಕ್ಷಣೆ ಎಂಬ ಸತ್ಯವೇದದ ಸಂದೇಶವು ಎಂದಿಗೂ ಬದಲಾಗದು ಮತ್ತು ನಮ್ಮ ಜೀವಿತಕ್ಕೆ ಇರುವ ಸತ್ಯವೇದದ ನಿಯಮಗಳು ಎಂದಿಗೂ ಬದಲಾಗದು. ಈ ನಿಯಮಗಳು ಇತಿಹಾಸದ ಎಲ್ಲಾ ಕಾಲಕ್ಕೂ, ಎಲ್ಲಾ ಸಂಸ್ಕೃತಿಗೂ ಮತ್ತು ಪ್ರತಿಯೊಬ್ಬನ ಜೀವನದ ಸ್ಥಿತಿಗೂ ಅನ್ವಯಿಸುತ್ತದೆ. ಆದರೆ ಪ್ರತಿಯೊಂದು ಹೊಸ ತಲೆಮಾರುಗಳು ಅವುಗಳನ್ನು ಅರ್ಥಮಾಡಿಕೊಳ್ಳುವಂತೆ ನಾವು ಅವುಗಳನ್ನು ಪ್ರಸ್ತುತಪಡಿಸಬೇಕು. ಆಗ ಮಾತ್ರ ಸಭೆಯ ಆರಾಧನೆಗೆ ಹೋಗುವ ಒಂದು ಹೊಸ ಸಂತತಿಯು ದೇವರೊಂದಿಗೆ ಒಂದು ಜೀವಿತವನ್ನೇ ಬದಲಾಯಿಸುವ ವೈಯಕ್ತಿಕ ಅನುಭವವನ್ನು ಹೊಂದಬಹುದು ಮತ್ತು ಹಳೆಯ ಸಂತತಿಯ ಸಭಾನಾಯಕರುಗಳಿಂದ ಕೇಳಿಸಿಕೊಳ್ಳುವುದಲ್ಲದೆ ಅವರನ್ನು ಹಿಂಬಾಲಿಸಬಹುದು ಎಂದು ನಾವು ನಿರೀಕ್ಷಿಸಬಹುದು.

# ಧರ್ಮೋಪದೇಶಕಾಂಡ ಉತ್ತರಗಳು

**ಧರ್ಮೋಪದೇಶಕಾಂಡದ ಪೀಠಿಕೆಯ ಉತ್ತರಗಳು**

**ಪ್ರಶ್ನೆಗಳಿಗೆ ಉತ್ತರಗಳು**

1. ಯೊರ್ದನ್ ಹೊಳೆಯ ಪೂರ್ವದಿಕ್ಕಿನಲ್ಲಿರುವ ಮೋವಾಬ್ ಪ್ರದೇಶದಲ್ಲಿ ಪುಸ್ತಕವು ಪ್ರಾರಂಭಗೊಂಡಿದೆ. ಅವರ ಮರುಭೂಮಿಯಲ್ಲಿನ ಅಲೆದಾಟ ಕೊನೆಗೊಂಡಿದೆ, ಮತ್ತು ಇಸ್ರಾಯೇಲ್ಯರು ನದಿಯನ್ನು ದಾಟಿ ವಾಗ್ದಾನ ಮಾಡಲ್ಪಟ್ಟ ದೇಶವನ್ನು ವಶಪಡಿಸಿಕೊಳ್ಳಲು ಸಿದ್ಧವಾಗುತ್ತಿದ್ದರು.

2. ಪುಸ್ತಕದಲ್ಲಿನ ಘಟನಾವಳಿಗಳು ಸುಮಾರು ಕ್ರಿ.ಪೂ. 1406 ರಲ್ಲಿ ಜರುಗಿವೆ.

3. ಇವುಗಳು ಪುಸ್ತಕದ ಪ್ರಮುಖ ಅಂಶಗಳಾಗಿವೆ:

   ಅ. ಪೀಠಿಕೆ, 1:1-5

   ಆ. ಮೋಶೆಯ ಮೊದಲ ಉಪನ್ಯಾಸ, 1:6-4:40

   ಇ. ಮೋಶೆಯ ಎರಡನೇಯ ಉಪನ್ಯಾಸ, 4:44-28

   ಈ. ಮೋಶೆಯ ಮೂರನೇಯ ಉಪನ್ಯಾಸ, 29:1-30:20

   ಉ. ಮುಕ್ತಾಯ, 31:1-34:12

4. ವಾಗ್ದಾನ ಮಾಡಲ್ಪಟ್ಟ ದೇಶದಲ್ಲಿ ತಮ್ಮ ಹೊಸ ಜೀವಿತವನ್ನು ನಡೆಸುವುದಕ್ಕಾಗಿ ಇಸ್ರಾಯೇಲ್ಯರ ಹೊಸ ಪೀಳಿಗೆಯನ್ನು ಸಿದ್ಧಮಾಡುವ ದೃಷ್ಟಿಯಲ್ಲಿ ಧರ್ಮಶಾಸ್ತ್ರವನ್ನು (ಅದನ್ನು ಪುನರುಚ್ಚರಿಸುವುದು ಮತ್ತು ಅದನ್ನು ವಿವರಿಸುವುದು) ವಿವರಿಸುವುದೇ ಧರ್ಮೋಪದೇಶಕಾಂಡ ಪುಸ್ತಕದ ಉದ್ದೇಶವಾಗಿತ್ತು.

5. ಧರ್ಮೋಪದೇಶಕಾಂಡ ನಿಬಂಧನೆಗಳು "ಅನ್ವಹಿಸಲ್ಪಡುವ ನಿಬಂಧನೆಗಳಾಗಿವೆ" ಹೊರತು ಅವುಗಳು ಹೊಸ ನಿಬಂಧನೆಗಳಾಗಿ ತರ್ಜುಮೆಗೊಂಡಿಲ್ಲ. ಅಂದರೆ ವಾಗ್ದಾನ ಮಾಡಲ್ಪಟ್ಟ ದೇಶದಲ್ಲಿನ ತಮ್ಮ ಹೊಸ ಪರಿಸ್ಥಿತಿಗೆ ಇಸ್ರಾಯೇಲ್ಯರು ಸಿನಾಯ್ ಪರ್ವತದಲ್ಲಿ 39 ವರ್ಷಗಳ ಮುಂಚೆ ಸ್ವೀಕರಿಸಿದ ನಿಬಂಧನೆಗಳನ್ನು ಮೋಶೆಯು ಅನ್ವಯಿಸಿಕೊಳ್ಳುತ್ತಿದ್ದಾನೆ.

6. ಮೋಶೆಯು ತನ್ನ ಮೊದಲ ಉಪನ್ಯಾಸವನ್ನು ಸಿನಾಯ್ ಪರ್ವತದಲ್ಲಿನ ಘಟನಾವಳಿಗಳೊಂದಿಗಿನ ಇಸ್ರಾಯೇಲ್ಯರ ಇತಿಹಾಸದ ಮಾಹಿತಿಗಳ ಮೂಲಕ ಪ್ರಾರಂಭಿಸುತ್ತಿದ್ದಾನೆ. ಮೋಶೆಯು ಇಸ್ರಾಯೇಲ್ಯರ ಹೊಸ ಪೀಳಿಗೆಯೊಂದಿಗೆ ಮಾತನಾಡುತ್ತಿರುವುದರಿಂದ, ಇದಕ್ಕೆ ಒಂದು ಒಳ್ಳೆಯ ಕಾರಣವುಂಟು. ಅವರು ಹಿಂದೆ ನಡೆದ ಘಟನೆಗಳಿಂದ ಪಾಠಗಳನ್ನು ಕಲಿಯಬೇಕೆಂಬುದು ಆತನ ಉದ್ದೇಶವಾಗಿತ್ತು. ಹೊಸ ಪೀಳಿಗೆಯ ಜನರು ಮುಂಚಿನ, ಹಾಗೂ ವಿಮೋಚನೆಯ ಸಂತತಿಯವರಂತೆ ದೇವರ ನ್ಯಾಯತೀರ್ಪು ಮತ್ತು ಕರುಣೆಗಳನ್ನು ಸ್ವತಃ ಅನುಭವಿಸಿದ್ದಿಲ್ಲ. ಈ ಕಾರಣದಿಂದ ಅವರಿಗೆ ಮೋಶೆಯು ಅರ್ಪಿಸುತ್ತಿರುವ ದೇವರ ವಿಧಿ ಮತ್ತು ಕಟ್ಟಳೆಗಳ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವ ನಿಟ್ಟಿನಲ್ಲಿ ಈ ಐತಿಹಾಸಿಕ ಘಟನಾವಳಿಗಳ ಅರಿವು ಉಂಟಾಗುವುದು ಅವಶ್ಯಕವಾಗಿತ್ತು.

7. ಧರ್ಮೋಪದೇಶಕಾಂಡ ಪುಸ್ತಕದಲ್ಲಿ ಮೋಶೆಯ ಪ್ರಮುಖ ಪಾತ್ರವೇನೆಂದರೆ ತಮ್ಮ ಹೊಸ ಸ್ಥಳಗಳಲ್ಲಿರುವ ಇಸ್ರಾಯೇಲ್ ಜನರಿಗೆ ಸಿನಾಯ್ ಪರ್ವತದಲ್ಲಿನ ಒಡಂಬಡಿಕೆಯನ್ನು ಪುನಃ ಪರಿಚಯಿಸುವುದಾಗಿದೆ. ಆತನು ಜನರಿಗಾಗಿರುವ ದೇವರ ಚಿಕ್ಕ ಮಧ್ಯಸ್ಥಿಕೆಗಾರನಾಗಿದ್ದಾನೆ. ಅವರಿಗೆ ಧರ್ಮಶಾಸ್ತ್ರವನ್ನು ತರ್ಜುಮೆ ಮಾಡುವುದಕ್ಕಾಗಿ ದೇವರು ಆತನನ್ನು ನೇಮಿಸಿದ್ದಾನೆ.

**ಧರ್ಮೋಪದೇಶಕಾಂಡ ಉತ್ತರಗಳು 1: ಸಿನಾಯಿನಿಂದ ಕಾದೇಶಿಗೆ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಧರ್ಮೋಪದೇಶಕಾಂಡ ವಿವರಣೆಯು ಸಿನಾಯ್ ಪರ್ವತದಿಂದ ಪ್ರಾರಂಭವಾದ ಇಸ್ರಾಯೇಲ್ಯರ ಮರುಭೂಮಿಯ ಅಲೆದಾಟವು ಕೊನೆಗೊಂಡು ಈಗ ಮೋವಾಬ್ ಬಯಲು ಪ್ರದೇಶವನ್ನು ತಲುಪಿರುವದರಿಂದ ಪ್ರಾರಂಭಗೊಳ್ಳುತ್ತದೆ.

2. ಮೋಶೆಯು ಇಸ್ರಾಯೇಲ್ಯರಿಗೆ ಸಂಬೋಧಿಸಿದಾಗ ಉಲ್ಲೇಖಿಸಿದ ಮೊದಲ ಸಂಗತಿ ಏನೆಂದರೆ ಜನರು ಸಿನಾಯ್ ಪರ್ವತವನ್ನು ಬಿಟ್ಟು ಪಿತೃಗಳಾದ ಅಬ್ರಹಾಮ, ಇಸಾಕ ಮತ್ತು ಯಾಕೋಬ ಹಾಗೂ ಅವರ ಸಂತತಿಗೆ ದೇವರು ಕೊಡುವೆನೆಂದು ವಾಗ್ದಾನ ಮಾಡಿದ ದೇಶವನ್ನು ವಶಪಡಿಸಿಕೊಳ್ಳುವಂತೆ ಜನರಿಗೆ ದೇವರ ಆಜ್ಞೆಯನ್ನು ತಿಳಿಸುತ್ತಿದ್ದಾನೆ.

3. ಮೋಶೆಯು ನಾಯಕರನ್ನು ನೇಮಿಸುವ ಆಲೋಚನೆಯಿಂದ ಬರಲಿಕ್ಕೆ ಎರಡು ಕಾರಣಗಳುಂಟು:

   ಅ. ಇಸ್ರಾಯೇಲ್ಯರ ಸಂಖ್ಯೆಯು ಭಯಂಕರವಾಗಿ ಹೆಚ್ಚಾಗುತ್ತಿತ್ತು.

   ಆ. ತಾನೊಬ್ಬನೇ ಜನರೆಲ್ಲರ ಜಗಳ ಮತ್ತು ಸಮಸ್ಯೆಗಳನ್ನು ಬಗೆಹರಿಸಲು ಆಗುತ್ತಿದ್ದಿಲ್ಲ.

4. ನಾಯಕರುಗಳಿಗಾಗಿ ನೇಮಕಗೊಂಡವರಿಗೆ ಮೋಶೆಯು ಪರಿಗಣಿಸಿದ ಅರ್ಹತೆಗಳಾವುವೆಂದರೆ:

   ಅ. ಅವರು ಜ್ಞಾನ ಮತ್ತು ವಿವೇಚನಾಶಕ್ತಿಯನ್ನು ಹೊಂದಿದವರಾಗಿದ್ದು, ತಾರತಮ್ಯವನ್ನು ತೋರಿಸುವಂತವರಾಗಿರಬಾರದು.

   ಆ. ಅವರು ಯಾರಿಗೂ ಭಯಪಡುವಂತವರಾಗಿರದೆ ಜನರ ಮೇಲೆ ಅಧಿಕಾರವನ್ನು ಹೊಂದಿದವರಾಗಿರಬೇಕಾದರೆ ಅವರು ಗೌರವವುಳ್ಳವರಾಗಿರಲೇಬೇಕು.

5. ಕಾನಾನ್ ದೇಶವನ್ನು ಅನ್ವೇಷಿಸಿದ ನಂತರ ಹೋದಂತಹ ಸಂದೇಶಕಾರರು ಹಿಂತಿರುಗಿ ಬಂದು ದೇವರು ತಮಗೆ ಕೊಡಲು ಬಯಸುತ್ತಿರುವ ದೇಶವು ಒಳ್ಳೆಯ ದೇಶವಾಗಿದೆ ಎಂದು ವರದಿಸಲ್ಲಿಸಿದರು.

6. ಇಸ್ರಾಯೇಲ್ಯರಿಗಿಂತ ಎತ್ತರ ಮತ್ತು ಬಲಿಷ್ಠವಾದ ಅಮೋರಿಯರ ಕೈಯಲ್ಲಿ ದೇವರು ತಮ್ಮನ್ನು ಕೊಡುತ್ತಿದ್ದಾನೆ ಎಂದು ತಿಳಿದು ಇಸ್ರಾಯೇಲ್ಯರು ಕಾನಾನ್ ದೇಶವನ್ನು ಪ್ರವೇಶಿಸಲು ಇಷ್ಟಪಡಲಿಲ್ಲ. ಹಾಗೂ ಅವರು ಭದ್ರವಾದ ಪಟ್ಟಣದಲ್ಲಿ ವಾಸಿಸುತ್ತಿದ್ದರು.

7. ಅವರು ಇಷ್ಟಪಡದೆ ಇರುವುದನ್ನು ಯಾವಾಗ ಮೋಶೆ ನೋಡಿದನೋ, ಆಗ ಆತನು ನಿಮ್ಮ ಪರವಾಗಿ ದೇವರು ಯುದ್ಧಮಾಡುವಾತನಾಗಿದ್ದಾನೆಂದು ಜ್ಞಾಪಿಸುತ್ತ ಅವರನ್ನು ಉತ್ತೇಜಿಸಲು ಪ್ರಯತ್ನಿಸಿದನು.

8. ಯಾವಾಗ ಅವರ ಇಷ್ಟವಿಲ್ಲದಿರುವಿಕೆಯ ಕುರಿತು ದೇವರು ಕೇಳಿಸಿಕೊಂಡನೋ, ಆಗ ಆತನು ಅವರ ವಿರುದ್ಧ ಕೋಪಗೊಂಡು ವಾಗ್ದಾನ ಮಾಡಲ್ಪಟ್ಟ ದೇಶಕ್ಕೆ ದಂಗೆ ಎದ್ದ ಇಸ್ರಾಯೇಲ್ ಜನಾಂಗವು ಪ್ರವೇಶಿಸಬಾರದೆಂದು ಶಪಥಮಾಡಿದನು.

9. ಇಸ್ರಾಯೇಲ್ಯರು ದೇವರ ವಿರುದ್ಧ ದಂಗೆ ಎದ್ದ ನಿಮಿತ್ತ ಅವರು ಬೆಟ್ಟಗಳ ನಾಡದ ಕಾನಾನ್ ಕಡೆಯಲ್ಲಿ ತಮ್ಮ ಪ್ರಯಾಣವನ್ನು ಬೆಳೆಸಿದಾಗ ಅವರು ಜಯವನ್ನು ಹೊಂದಲಿಲ್ಲ. ಈ ಕಾರಣದಿಂದ ಅಮೋರಿಯರ ವಿರುದ್ಧದ ಅವರ ಯುದ್ಧದಲ್ಲಿ ದೇವರು ಅವರೊಂದಿಗೆ ಇರಲಿಲ್ಲ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –

2. –

3. ಕಾನಾನನ್ನು ಅನ್ವೇಷಣೆ ಮಾಡಿದ ನಂತರ ಸಂದೇಶಕಾರರು ಕೊಟ್ಟ ಮಾಹಿತಿ ಮತ್ತು ಈ ವಿಷಯವಾಗಿ ಎದ್ದ ದಂಗೆಯ ಕುರಿತು ಮೋಶೆಯು ನೀಡಿದ ಮಾಹಿತಿಗಳಿಂದ ನಾವು ಈ ಅಂಶಗಳನ್ನು ಕಲಿಯಬಹುದು:

ಅ. ಸನ್ನಿವೇಶವನ್ನು ಕನಿಷ್ಠಪಕ್ಷ ಅಲ್ಲಿ ಎರಡು ದೃಷ್ಟಿಕೋನದಲ್ಲಿ ನೋಡಲಾಯಿತು:

- ಕಾಲೇಬ್ ಮತ್ತು ಯೆಹೋಶುವರು ಆ ಸನ್ನಿವೇಸವನ್ನು ಸಕಾರಾತ್ಮಕವಾದ ದೃಷ್ಟಿಯಲ್ಲಿ ನೋಡಿದರು. ಅವರು ಆ ದೇಶವು ಒಳ್ಳೆಯದಾಗಿರುವುದನ್ನು ನೋಡಿದರು ಮತ್ತು ಈ ಒಳ್ಳೆಯ ದೇಶವನ್ನು ತಮಗೆ ಕೊಡುತ್ತೇನೆಂದು ದೇವರು ವಾಗ್ದಾನ ಮಾಡಿದ್ದನು. ಹಾಗಾಗಿ ದೇವರು ಅವರೊಂದಿಗೆ ಇದ್ದನು ಮತ್ತು ಆದಾಗ್ಯೂ ಅವರು ದೇಶವನ್ನು ಗೆದ್ದುಕೊಂಡು ಅದರಲ್ಲಿ ಪ್ರವೇಶಿಸುವವರೆಗೂ ಆತನು ಅವರೊಂದಿಗೆ ಇದ್ದು ಹೋರಾಡುವವನಾಗಿದ್ದನು.

- ಉಳಿದ ಇಸ್ರಾಯೇಲ್ಯರು ಆ ಸನ್ನಿವೇಶವನ್ನು ನಕಾರಾತ್ಮಕ ದೃಷ್ಟಿಕೋನದಿಂದ ನೋಡಿದರು. ಅವರು ಅಸಾಧಾರಣ ಶಕ್ತಿಯ ಮನುಷ್ಯರೆಂದು ಅವರನ್ನು ಪರಿಗಣಿಸಿದರು ಮತ್ತು ವೈರಿಯು ಬಲಿಷ್ಠರಾಗಿದ್ದಾರೆಂದು ತಿಳಿದುಕೊಂಡರು. ಹಾಗೇಯೇ ಅವರು ಭದ್ರವಾದ ಪಟ್ಟಣಗಳನ್ನು ನೋಡಿದರು. ಅವರು ಆ ದೇಶವನ್ನು ಗೆದ್ದುಕೊಳ್ಳಬಹುದೆಂದು ನಂಬಲಿಲ್ಲ. ಹಾಗಾಗಿ ಅವರು ಇಂತಹ ನಿರೀಕ್ಷೆಯಿಲ್ಲದ ಸನ್ನಿವೇಶದಲ್ಲಿ ತಮ್ಮನ್ನು ಕರೆತಂದದ್ದಕ್ಕಾಗಿ ದೇವರನ್ನು ದೂಷಿಸಿದರು.

  ನಾವು ಎದುರಿಸುವ ಯಾವುದೇ ಸನ್ನಿವೇಶಗಳಲ್ಲಿ ನಮಗೆ ಆತನ ದೃಷ್ಟಿಕೋನ ಇರಬೇಕೆಂದು ನಮ್ಮಿಂದ ದೇವರು ಎದುರು ನೋಡುವವನಾಗಿದ್ದಾನೆ. ನಾವು ನಮಗುಂಟಾಗುವ ಸನ್ನಿವೇಶಗಳನ್ನು ಸಕಾರಾತ್ಮಕವಾದ ದೃಷ್ಟಿಯಲ್ಲಿ ನೋಡತಕ್ಕದ್ದು. ದೇವರು ನಮ್ಮೊಂದಿಗೆ ಇರುವಾತನಾಗಿದ್ದಾನೆ, ಮತ್ತು ನಮ್ಮ ವೈರಿಗಳಿಗಿಂತಲೂ ಎಷ್ಟೋ ಎಚ್ಚಾಗಿ ಆತನು ಬಲಿಷ್ಠನಾಗಿದ್ದಾನೆ. ಹಾಗೆಯೇ ಆತನು ತನ್ನ ವಾಗ್ದಾನಗಳಲ್ಲಿ ನಂಬಿಗಸ್ಥನಾದ ದೇವರಾಗಿದ್ದಾನೆ ಮತ್ತು ತನ್ನ ಜನರಿಗೆ ನಂಬಿಗಸ್ಥನಾಗಿ ಉಳಿಯುವ ದೇವರಾಗಿದ್ದಾನೆ.

ಆ. ದೈವಿಕ ನಾಯಕತ್ವಕ್ಕೆ ಮೋಶೆಯು ಒಳ್ಳೆಯ ಮಾದರಿಯಾಗಿದ್ದಾನೆ: ದೇವರು ಯಾರಾಗಿದ್ದಾನೆ ಮತ್ತು ತನ್ನ ಜನರಿಗಾಗಿ ಆತನು ಹೋರಾಡಲು ವಾಗ್ದಾನ ಮಾಡಿದ್ದಾನೆಂದು ಆತನು ಜನರಿಗೆ ನೆನಪಿಸಿದನು.

ಇ. ನಾವು ಗೌರವಿಸುವ ಮತ್ತು ಭಯಪಡುವಂತಹ ದೇವರು ಭಯಾನಕ ದೇವರಾಗಿದ್ದಾನೆ: ಒಂದು ಪಕ್ಷ ನಾವು ಆತನನ್ನು ಮತ್ತು ಆತನ ವಾಗ್ದಾನಗಳನ್ನು ನಿರಾಕರಿಸುವುದಾದರೆ, ನಮ್ಮ ಶತೃಗಳೊಂದಿಗೆ ನಡೆಯುವ ಯುದ್ಧದಲ್ಲಿ ಆತನು ನಮ್ಮ ಪರವಾಗಿ ಹೋರಾಡುವಂತೆ ನಾವು ನಿರೀಕ್ಷಿಸಲಾಗುವುದಿಲ್ಲ.

ಈ. ನಮ್ಮ ನಡವಳಿಕೆಗಳು ಪರಿಣಾಮವನ್ನುಂಟುಮಾಡುತ್ತವೆ:

- ತಪ್ಪು ಮತ್ತು ದೈವಿಕತ್ವವಿಲ್ಲದ ನಮ್ಮ ಆಯ್ಕೆಯು ನಮಗೆ ನಕಾರಾತ್ಮಕ ಪರಿಣಾಮವನ್ನುಂಟುಮಾಡುತ್ತದೆ. ಆದರೆ ಸರಿಯಾದ ಮತ್ತು ದೈವಿಕತ್ವದ ನಮ್ಮ ಆಯ್ಕೆಯು ನಮಗೆ ಸಕಾರಾತ್ಮಕ ಪರಿಣಾಮವನ್ನುಂಟುಮಾಡುತ್ತದೆ. ಇಸ್ರಾಯೇಲ್ಯರು ತಾವು ಮಾಡಿದ ತಪ್ಪು ಆಯ್ಕೆಯ ನಿಮಿತ್ತದಿಂದ ಅಮೋರಿಯರ ವಿರುದ್ಧದ ಯುದ್ಧದಲ್ಲಿ ಅಪಜಯವನ್ನು ಹೊಂದಿದರು. ಅವರು ದೇವರ ವಿರುದ್ಧ ದಂಗೆ ಎದ್ದರು.

- ಆದರೆ ಕಾಲೇಬನು ಮತ್ತು ಯೆಹೋಶುವನು ಮನಃಪೂರ್ವಕವಾಗಿ ದೇವರನ್ನು ಹಿಂಬಾಲಿಸಿದ (ವ.36) ನಿಮಿತ್ತ ಗೌರವಕ್ಕೆ ಪಾತ್ರರಾದರು. ಅವರ ಸಂತತಿಗಳಲ್ಲಿ ಅವರು ಮಾತ್ರ ವಾಗ್ದಾನದ ದೇಶವನ್ನು ಪ್ರವೇಶಿಸಿದರು.

**ಧರ್ಮೋಪದೇಶಕಾಂಡ ಉತ್ತರಗಳು 2: ಕಾದೇಶ್ ಬರ್ನೇಯದಿಂದ ಮೋವಾಬಿಗೆ**

**ಈ. ಪ್ರಶ್ನೆಗಳಿಗೆ ಉತ್ತರಿಸಿರಿ**

1. ಇಸ್ರಾಯೇಲ್ಯರು ಜೆರೆದ್ ಹಳ್ಳವನ್ನು ದಾಟಲು ದೇವರ ಅಪ್ಪಣೆಯನ್ನು ಕೊಡುವವರೆಗೆ ಅವರು ಕಾದೇಶ್ ಬರ್ನೇಯದಲ್ಲಿ 38 ವರ್ಷಗಳನ್ನು ಅಡವಿಯಲ್ಲಿ ಕಳೆದರು. ಮೋವಾಬ್ ಪ್ರದೇಶವು ಮೃತಸಮುದ್ರದ ಪೂರ್ವಭಾಗದಲ್ಲಿನ ದಕ್ಷಿಣಪ್ರಾಂತ್ಯದ ಪೂರ್ವದಲ್ಲಿ ನೆಲೆಗೊಂಡಿದೆ.

2. ಇದು ಅಷ್ಟು ಸಮಯವನ್ನು ತೆಗೆದುಕೊಳ್ಳಲಿಕ್ಕೆ ಕಾರಣವೇನೆಂದರೆ, ಇಸ್ರಾಯೇಲ್ಯ ಜನಸಮೂಹವು ಅರಣ್ಯ ಪ್ರಯಾಣದ ಪ್ರಾರಂಭದಲ್ಲಿ ದೇವರ ವಿರುದ್ಧ ದಂಗೆ ಎದ್ದಿದ್ದ ಜನರೆಲ್ಲರು ವಾಗ್ದಾನ ಮಾಡಲ್ಪಟ್ಟ ದೇಶದಲ್ಲಿ ಪ್ರವೇಶಿಸಬಾರದೆಂದು ದೇವರು ವಾಗ್ದಾನ ಮಾಡಿದ್ದ ಪ್ರತಿಜ್ಞೆಯ ನಿಮಿತ್ತ.

3. ಮೋಶೆಯು ತಿಳಿಸಿದ ಕಟ್ಟಳೆ ಮತ್ತು ಆಜ್ಞೆಗಳೊಂದಿಗೆ ಇಸ್ರಾಯೇಲ್ಯರು ನಡೆದುಕೊಳ್ಳತಕ್ಕ ರೀತಿ:

   ಅ. ಅವುಗಳನ್ನು ಅವರು ಹಿಂಬಾಲಿಸಲೇಬೇಕು; ವಾಗ್ದಾನ ಮಾಡಲ್ಪಟ್ಟ ದೇಶವನ್ನು ಸ್ವಾಧೀನ ಮಾಡಿಕೊಂಡು ಜೀವಿಸಲು ಇದು ಕಡ್ಡಾಯವಾಗಿತ್ತು.

   ಆ. ಅವರು ದೇವರ ಆಜ್ಞೆಗಳಿಂದ ಯಾವುದನ್ನು ತೆಗೆಯಬಾರದು ಮತ್ತು ಯಾವುದನ್ನು ಸೇರಿಸಬಾರದು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. 2:15 ರಲ್ಲಿರುವ "ಯೆಹೋವನ ಹಸ್ತವು ಅವರಿಗೆ ವಿರೋಧವಾದದರಿಂದ" (ಯೆಹೋವನ ಹಸ್ತವು ಅವರಿಗೆ ವಿರೋಧವಾದದರಿಂದ ಪಾಳಯದಲ್ಲಿ ಒಬ್ಬನೂ ಉಳಿಯದಂತೆ ನಾಶವಾದರು) ಎಂಬ ವಾಕ್ಯಭಾಗವನ್ನು ನಾನು ಅರ್ಥಮಾಡಿಕೊಳ್ಳುವುದೇನೆಂದರೆ; ದಂಗೆ ಎದ್ದ ಪೀಳಿಗೆಯು ಸಾಯುವವರೆಗೆ ದೇವರು ಇಸ್ರಾಯೇಲ್ಯರು ವಾಗ್ದಾನ ದೇಶವನ್ನು ಪ್ರವೇಶಿಸದಂತೆ ಅವರು ಅಡವಿಯಲ್ಲಿಯೇ ಇರುವಂತೆ ಮಾಡಿದನು. ಇದರರ್ಥ ಆತನು ಅವರ ಸಂಗಡವಿರಲಿಲ್ಲವೆಂದರ್ಥವಲ್ಲ. ಯಾಕೆಂದರೆ ಆತನು ಅವರನ್ನು 39 ವರ್ಷಗಲ ಕಾಲ ಊಟವನ್ನೂ ಮತ್ತು ನೀರನ್ನೂ ಒದಗಿಸಿ ಹಾಗೂ ಅವರು ಹಾಕಿಕೊಂಡ ಬಟ್ಟೆಯು ಮತ್ತು ಕೆರಗಳು ಸವಿಯದಂತೆ ಅವರನ್ನು ಸಂರಕ್ಷಿಸಿ ಪೋಷಿಸಿ ನಡೆಸಿದನು.

2. ಇಂದು ದಕ್ಷಿಣಭಾರತದಲ್ಲಿರುವ ದೇವಜನರ ಜೀವಿತಕ್ಕೆ 4:1 ವಚನವು ಹೀಗೆ ಅನ್ವಯಿಸಲ್ಪಡುತ್ತದೆ:

   ಅ. "ಈಗ ಕೇಳಿರಿ": ದೇವರು ಹಳೇ ಒಡಂಬಡಿಕೆಯ ದಿನಗಳಲ್ಲಿ ತನ್ನ ಜನರಾದ ಇಸ್ರಾಯೇಲ್ಯರೊಂದಿಗೆ ಮಾತನಾಡಿದಂತೆ ಇಂದು ಸಹ ತನ್ನ ಜನರ ಸಂಗಡ ಮಾತನಾಡಲು ಶಕ್ತನಾಗಿದ್ದಾನೆ. ದೇವರು ತನ್ನ ಜನರೊಂದಿಗೆ ಎರಡು ಪ್ರಾಮುಖ್ಯವಾದ ಮಾರ್ಗಗಳಲ್ಲಿ ಮಾತನಾಡುತ್ತಾನೆ. ಮೊದಲನೇಯದಾಗಿ ತನ್ನ ವಾಕ್ಯಗಳಿಂದ ಆತನು ಮಾತನಾಡುತ್ತಾನೆ. ಎರಡನೇಯದಾಗಿ ತನ್ನ ಜನರಿಗೆ ತನ್ನ ವಾಕ್ಯವನ್ನು ವಿವರಿಸುವ ಸೇವಕರ ಮೂಲಕ ಮಾತನಾಡುತ್ತಾನೆ. ಧರ್ಮೋ. 4:1 ರಲ್ಲಿ ಮೋಶೆಯ ಮೂಲಕ ಇಸ್ರಾಯೇಲ್ಯರನ್ನು ದೇವರು ಬೋಧಿಸುತ್ತಿರುವುದನ್ನು ನೋಡಬಹುದು. ನಂತರದಲ್ಲಿ ಮೋಶೆಯು ಧರ್ಮೋಪದೇಶಕಾಂಡದಲ್ಲಿ ತನ್ನ ಬೋಧನೆಗಳನ್ನು ಬರೆದಿಡುವುದನ್ನು ನಾವು ಕಾಣಬಹುದು, ಯಾಕೆಂದರೆ ಭವಿಷ್ಯದಲ್ಲಿ ಇವುಗಳು ಯೆಹೋಶುವನಿಂದಲೋ ಮತ್ತು ಇತರೆ ಇಸ್ರಾಯೇಲ್ಯರ ನಾಯಕರುಗಳಿಂದ ಉಪಯೋಗಿಸಲ್ಪಡಲಿ ಎಂಬುದಾಗಿ.

   ಆ. "ಆಜ್ಞಾವಿಧಿಗಳನ್ನು": ಧರ್ಮೋಪದೇಶಕಾಂಡದಲ್ಲಿ ಮೋಶೆಯು ಇಸ್ರಾಯೇಲ್ಯರಿಗೆ ಬೋಧಿಸಿದ ದೇವರ ಆಜ್ಞೆಗಳು ಪಂಚಕಾಂಡದಲ್ಲಿ ದಾಖಲಾಗಿವೆ. ಈ ಆಜ್ಞಾವಿಧಿಗಳು ಇಸ್ರಾಯೇಲ್ಯರಿಗೋಸ್ಕರವಾಗಿಯೇ ಉಂಟಾದದ್ದು ಯಾಕೆಂದರೆ ಅವರು

ಕಾನಾನ್ ದೇಶವನ್ನು ವಶಪಡಿಸಿಕೊಂಡು ಅಲ್ಲಿ ಜೀವಿಸುವವರಾಗಿದ್ದದ್ದರಿಂದ. ಆದರೆ ಇದರಲ್ಲಿರುವ ಕೆಲವು ಆಜ್ಞಾವಿಧಿಗಳು ಆ ದಿವಸಗಳಲ್ಲಿಯೇ ಸೀಮಿತವಾಗಿದ್ದವು (ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ) ಮತ್ತು ಅವುಗಳು ಇಂದಿನ ದೇವಜನರಿಗೆ ಸ್ವಯಂಚಾಲಿತವಾಗಿ ಅನ್ವಯಿಸುವುದಿಲ್ಲ. ಇತರೆ ಆಜ್ಞಾವಿಧಿಗಳು (ದಶಾಜ್ಞೆಗಳು ಮತ್ತು ಮಹಾ ಆಜ್ಞೆಗಳಂತವುಗಳು) ಸಾರ್ವತ್ರಿಕವಾಗಿ ಅನ್ವಯಿಸುತ್ತವೆ. ಆದ್ದರಿಂದ ದೇವಜನರು ಇಂದು ಹಳೇ ಒಡಂಬಡಿಕೆಯ ಆಜ್ಞಾವಿಧಿಗಳನ್ನು ಹೊಸ ಒಡಂಬಡಿಕೆಯಲ್ಲಿರುವ ಯೇಸುಕ್ರಿಸ್ತನ ಮತ್ತು ಅಪೊಸ್ತಲರ ಬೋಧನೆಗಳ ಬೆಳಕಿನಲ್ಲಿ ವ್ಯಾಖ್ಯಾನಿಸಿ ಅರ್ಥಮಾಡಿಕೊಳ್ಳತಕ್ಕದ್ದು.

ಇ. "ನೀವು ಬದುಕಿಕೊಂಡು ... ನಿಮಗೆ ಕೊಡುವ ದೇಶವನ್ನು ಸೇರಿ ಸ್ವಾಧೀನ ಮಾಡಿಕೊಳ್ಳುವಂತೆ": ಧರ್ಮೋಪದೇಶಕಾಂಡದಲ್ಲಿ ಮೋಶೆಯು ಇಸ್ರಾಯೇಲ್ಯರಿಗೆ ಬೋಧಿಸಿದ ಆಜ್ಞಾವಿಧಿಗಳು ಬಹಳ ಸ್ಪಷ್ಟಉದ್ದೇಶಗಳನ್ನು ಒಳಗೊಂಡಿವೆ. ಅವುಗಳು ಇಸ್ರಾಯೇಲ್ಯರು ದೇವರ ಚಿತ್ತಾನುಸಾರವಾಗಿ ವಾಗ್ದಾನ ಮಾಡಲ್ಪಟ್ಟ ದೇಶವನ್ನು ಸ್ವಾಧೀನ ಮಾಡಿಕೊಂಡು ಅಲ್ಲಿ ಅವರು ಜೀವಿಸುವುದಕ್ಕೆ ಸಾಧ್ಯತೆಯನ್ನುಂಟು ಮಾಡುವಂತವುಗಳಾಗಿವೆ.

ಅದೇ ರೀತಿಯಾಗಿ ಇಂದು ದಕ್ಷಿಣಭಾರತದಲ್ಲಿರುವ ದೇವಜನರಾದ ನಮಗೆ ಸತ್ಯವೇದದ ಬೋಧನೆಯು (ಹೊಸ ಒಡಂಬಡಿಕೆಯಲ್ಲಿ ದಾಖಲಾಗಿರುವ ಅಂಶಗಳು) ಒಂದು ಉದ್ದೇಶವನ್ನು ಹೊಂದಿದೆ. ನಾವು ಸಂಧಿಸುವ ಜನರಿಗೆ ಸುವಾರ್ತೆಯನ್ನು ಸಾರುತ್ತಾ ದೇವರ ರಾಜ್ಯವನ್ನು ವಿಸ್ತರಿಸುತ್ತಾ ಇರುವ ಈ ಕಾರ್ಯವೂ "ನಿಮಗೆ ಕೊಡುವ ದೇಶವನ್ನು ಸ್ವಾಧೀನ ಮಾಡಿಕೊಳ್ಳುವಂತೆ" ಎಂಬ ವಾಕ್ಯವು ನಮಗೆ ಅನ್ವಯಿಸುವಂತೆ ತೋರುತ್ತದೆ. ಮತ್ತು ಇವುಗಳು ವಿಶ್ವಾಸಿಗಳು ದೇವರ ಆತ್ಮನ ಫಲಗಳಾದ ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ (ಗಲಾತ್ಯ 5:22-23) ಗಳಿಂದ ಕೂಡಿದ ಜೀವಿತದಲ್ಲಿ ಜೀವಿಸುತ್ತಾ ದೇವರನ್ನು ಮೆಚ್ಚಿಸುವ ಜೀವಿತದಲ್ಲಿ ಜೀವಿಸಲು ನಮಗೆ ಸಹಾಯ ಮಾಡುತ್ತವೆ.

ಈ. "ಈಗ ಬೋಧಿಸುವ": ಹಳೇ ಒಡಂಬಡಿಕೆಯ ಸಮಯದಲ್ಲಿ ಬೋಧಿಸುವಂತಹದದು ಬಹಳ ಪ್ರಾಮುಖ್ಯವಾಗಿತ್ತು. ಪ್ರವಾದಿಗಳು ಬೋಧಕರಾಗಿದ್ದರು. ಅವರು ಜನರಿಗೆ ದೇವರ ಚಿತ್ತವನ್ನು ವಿವರಿಸಿದರು. ವಿಗ್ರಹಾರಾಧಕರು ಮತ್ತು ಅಪವಿತ್ರರ ನಡುವೆ ಜೀವಿಸುವ ದೇವಜನರು ದೇವರು ಮೆಚ್ಚುವ ಜೀವಿತದಲ್ಲಿ ಜೀವಿಸಬೇಕೆಂದು ಅವರು ಎಚ್ಚರಿಸುತ್ತಿದ್ದರು. ದೇವಜನರು ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗದೆ ಹೋದರೆ ನ್ಯಾಯತೀರ್ಪು ಸಮೀಪಿಸುತ್ತಿದೆ ಎಂದು ಅವರು ಎಚ್ಚರಿಸುತ್ತಿದ್ದರು. ಅವರು ದೇವರು ತನ್ನ ಜನರ ಕುರಿತಾಗಿ ಇಟ್ಟಿರುವ ದೊಡ್ಡ ಯೋಜನೆಯನ್ನು ಪ್ರವಾದಿಸಿದರು.

ಹಳೇ ಒಡಂಬಡಿಕೆಯ ಸಮಯಗಳಲ್ಲಿ ಇದ್ದದಕ್ಕಿಂತ ಬೋಧನೆಯ ಸೇವೆಯು ಇಂದು ದಕ್ಷಿಣಭಾರತದಲ್ಲಿರುವ ನಮಗೆ ಬಹಳ ಪ್ರಾಮುಖ್ಯವಾದುದ್ದಾಗಿದೆ.

- ಮೊದಲನೇಯದಾಗಿ, ಪ್ರಮುಖವಾಗಿ ಅನೇಕ ಸಾಮಾನ್ಯ ವಿಶ್ವಾಸಿಗಳು ಓದುವುದು ಮತ್ತು ಅರ್ಥಮಾಡಿಕೊಳ್ಳುವ ಕೌಶಲ್ಯಗಳನ್ನು ಹೊಂದಿಲ್ಲ.
- ಎರಡನೇಯದಾಗಿ, ಅತ್ಯಂತ ಆಧುನಿಕವಾದ ಈ ಜಗತ್ತು ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಬೀರುವ ಪ್ರಭಾವವು ಅನೇಕ ವಿಶ್ವಾಸಿಗಳು ಗೊಂದಲಕ್ಕೆ ಈಡಾಗುವಂತೆ ಮಾಡುತ್ತದೆ.
- ಮೂರನೇಯದಾಗಿ, ಟಿ.ವಿ ಮಾಧ್ಯಮಗಳಿಂದ ಮತ್ತು ಭೇಟಿನೀಡುವ ಸುವಾರ್ತಿಕರಿಂದಲೂ ಹಾಗೂ ಸಾಹಿತ್ಯಗಳಿಂದ ಸಾರಲ್ಪಡುತ್ತಿರುವ ವಿಚಿತ್ರವಾದ ಸಿದ್ಧಾಂತಗಳಿಂದ ಅನೇಕ ಸಭಾಪಾಲಕರು ಮತ್ತು ಸಭೆಯ ನಾಯಕರುಗಳು ಗೊಂದಲಕ್ಕೀಡಾಗುತ್ತಿದ್ದಾರೆ.

- ನಾಲ್ಕನೇಯದಾಗಿ, ಇಂದು ದಕ್ಷಿಣಭಾರತದಲ್ಲಿರುವ ಶಿಕ್ಷಣ ವ್ಯವಸ್ಥೆಯು ಜನರು ತಾವು ಓದಿದ್ದನ್ನು ತಮ್ಮ ದಿನನಿತ್ಯದ ಜೀವಿತಗಳಲ್ಲಿ ಅಳವಡಿಸಿಕೊಳ್ಳುವಂತೆ ತರಬೇತಿಗೊಳಿಸುವುದಿಲ್ಲ. ಇದರ ಪರಿಣಾಮವಾಗಿ ಅನೇಕ ಸಮಾನ್ಯ ವಿಶ್ವಾಸಿಗಳು ಮತ್ತು ಸಭಾಪಾಲಕರುಗಳು ಸಹ ತಮ್ಮ ದಿನನಿತ್ಯದ ಜೀವಿತದಲ್ಲಿ ಸತ್ಯವೇದದ ಸತ್ಯಾಂಶಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಪ್ರಯಾಸಪಡುತ್ತಿರುತ್ತಾರೆ.

3. 4:2 ರಲ್ಲಿರುವ ಮೋಶೆಯ ಮಾತುಗಳು (ನಿಮ್ಮ ದೇವರಾದ ಯೆಹೋವನು ಕೊಟ್ಟ ಆಜ್ಞೆಗಳನ್ನೇ ನಾನು ನಿಮಗೆ ತಿಳಿಸುತ್ತಾ ಇದ್ದೇನೆ. ಈ ಮಾತುಗಳನ್ನು ನೀವು ಕೈಕೊಳ್ಳಬೇಕೇ ಹೊರತು ಅವುಗಳಿಗೆ ಏನೂ ಕೂಡಿಸಬಾರದು, ಅವುಗಳಿಂದ ಏನೂ ತೆಗೆದುಬಿಡಬಾರದು) ಅರ್ಥವೇನೆಂದರೆ ಇಸ್ರಾಯೇಲ್ಯರು ಯಾವುದೇ ಕಾರಣಕ್ಕೂ ದೇವರ ಆಜ್ಞೆಗಳನ್ನು ಬದಲಾಯಿಸಲೇಬಾರದೆಂದರ್ಥ. ಧರ್ಮೋಪದೇಶಕಾಂಡದಲ್ಲಿ ದಾಖಲಾದ ಆಜ್ಞಾವಿಧಿಗಳನ್ನು ನಾವು ಅಭ್ಯಾಸಿಸುವಾಗ, ಅದರಲ್ಲಿರುವ ಅನೇಕ ಆಜ್ಞಾವಿಧಿಗಳು ಇಸ್ರಾಯೇಲ್ಯರು ವಾಗ್ದಾನ ದೇಶವಾದ ಕಾನಾನನ್ನು ವಶಪಡಿಸಿಕೊಂಡು ಅದರಲ್ಲಿ ವಾಸಿಸುವಾಗ ಅವರು ಎದುರಿಸುವ ನಿರ್ಧಿಷ್ಠ ಪರಿಸ್ಥಿತಿಗಳಿಗೆ ಅನ್ವಯಿಸಲ್ಪಡುತ್ತವೆ.

ಇಂದು ದಕ್ಷಿಣ ಭಾರತದಲ್ಲಿರುವ ಸಭಾಜೀವಿತಕ್ಕೆ ಈ ವಾಕ್ಯಗಳನ್ನು ಹೇಗೆ ಅಳವಡಿಸಿಕೊಳ್ಳಬೇಕೆಂಬುದಕ್ಕೆ ನಾನು ಈ ಕೆಳಗಿನ ಸಲಹೆಗಳನ್ನು ನೀಡುತ್ತೇನೆ:

ಅ. ಸತ್ಯವೇದದಲ್ಲಿ ದಾಖಲಾಗಿರುವ ದೇವರ ವಾಕ್ಯಗಳನ್ನು ಬದಲಾಯಿಸುವ ಅಧಿಕಾರವು ನಮಗೆ ಇರುವುದಿಲ್ಲ.

ಆ. ಆದರೆ ಸತ್ಯವೇದದಲ್ಲಿ ದಾಖಲಾಗಿರುವ ದೇವರ ವಾಕ್ಯಗಳನ್ನು ನಾವು ಎದುರಿಸುವ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳ ಆಧಾರದ ಮೇಲೆ ಅವುಗಳನ್ನು ಅಳವಡಿಸಿಕೊಳ್ಳಬಹುದು. ಪಂಚಕಾಂಡದಲ್ಲಿ ದಾಖಲಾಗಿರುವ ದೇವರ ಆಜ್ಞಾವಿಧಿಗಳನ್ನು ನಾವು ದೈವ ನಿಯಮಗಳ ಅಡಿಯಲ್ಲಿ ಅರ್ಥೈಸಿಕೊಂಡಿದ್ದೇ ಆದರೆ, ನಾವು ಇವುಗಳನ್ನೂ ಸರಿಯಾದ ರೀತಿಯಲ್ಲಿ ಅಳವಡಿಸಿಕೊಳ್ಳತಕ್ಕದ್ದು.

ಇ. ಹಳೇ ಒಡಂಬಡಿಕೆಯ ಪಠ್ಯಗಳನ್ನು ಆಧಾರ ಮಾಡಿಕೊಳ್ಳುವುದಕ್ಕಿಂತ ಹೊಸ ಒಡಂಬಡಿಕೆಯ ಪಠ್ಯಗಳನ್ನು ನಮ್ಮ ಕ್ರೈಸ್ತೀಯ ನಂಬಿಕೆ ಮತ್ತು ನೈತಿಕತೆಯ ಬೋಧನೆಗಳಿಗೆ ಆಧಾರವಾಗಿಟ್ಟುಕೊಳ್ಳುವುದು ವಿವೇಕವುಳ್ಳದ್ದು. ಕಾರಣವೇನೆಂದರೆ ಹಳೇ ಒಡಂಬಡಿಕೆಯು ಸೀನಾಯ್ ಪರ್ವತದಲ್ಲಿ ದೇವರು ತನ್ನ ಜನರೊಂದಿಗೆ ಮಾಡಿಕೊಂಡ ಹಳೇ ಒಡಂಬಡಿಕೆಯ ದೃಷ್ಠಿಕೋನದಲ್ಲಿ ಬರೆಯಲ್ಪಟ್ಟಿದೆ, ಆದರೆ ಹೊಸ ಒಡಂಬಡಿಕೆಯು ದೇವರು ಕ್ರಿಸ್ತನಲ್ಲಿ ತನ್ನ ಜನರೊಂದಿಗೆ ಮಾಡಿಕೊಂಡ ಹೊಸ ಒಡಂಬಡಿಕೆಯ ದೃಷ್ಠಿಕೋನದಲ್ಲಿ ಬರೆಯಲ್ಪಟ್ಟಿದೆ.

ಈ. ಹೊಸ ಒಡಂಬಡಿಕೆಯ ಬೋಧನೆಗಳಿಗೆ ನಾವು ಯಾವುದೇ ಸಿದ್ಧಾಂತಗಳನ್ನು ಸೇರಿಸಲೇಬಾರದೆಂಬು ಬಹಳ ಪ್ರಾಮುಖ್ಯವಾದದ್ದು. ಇಂತಹ ಯಾವುದೇ ಹೆಚ್ಚಾದ ಸಿದ್ಧಾಂತಗಳು ಸುಳ್ಳು ಸಿದ್ಧಾಂತಗಳಾಗಿವೆ.

ಉ. ಹೊ ಒಡಂಬಡಿಕೆಯ ಬೋಧನೆಯಿಂದ ಯಾವುದೇ ಸಿದ್ಧಾಂತವನ್ನು ತಗೆಯಲೇಬಾರದು. ಇದು ಸಹ ಬಹಳ ಪ್ರಾಮುಖ್ಯವಾದದ್ದು. ಇಂತಹ ಯಾವುದೇ ರೀತಿಯ ಕಳೆಯುವಿಕೆಯು ಕ್ರೈಸ್ತೀಯ ನಂಬಿಕೆ ಮತ್ತು ನೈತಿಕತೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಂತೆ (ಮತ್ತು ದುರ್ಬೋಧನೆಗೆ) ಪರಿಣಾಮ ಬೀರುತ್ತದೆ.

**ಧರ್ಮೋಪದೇಶಕಾಂಡ ಉತ್ತರಗಳು 3: ಶುಭವು ಮತ್ತು ಅಶುಭವು**

**ಈ. ಪ್ರಶ್ನೆಗಳಿಗೆ ಉತ್ತರಿಸಿರಿ**

1. ಇಸ್ರಾಯೇಲ್ಯರು ದೇವರಿಂದ ಈ ಎಲ್ಲಾ ಆಶೀರ್ವಾದಗಳನ್ನು ಸ್ವೀಕರಿಸಬೇಕಾದರೆ ಅವರು ದೇವರಿಗೆ ವಿಧೇಯರಾಗಿ ಮತ್ತು ಶ್ರದ್ಧೆಯಿಂದ ಆತನ ಮಾತನ್ನು ಕೇಳಿ (ವ.1), ಅವುಗಳನ್ನು ಅನುಸಿರಿಸಿ (ವ.9), ಆ ಮಾತುಗಳಿಗೆ ಗಮನಕೊಟ್ಟು (ವ.13), ಆತನ ಎಲ್ಲಾ ಆಜ್ಞೆಗಳನ್ನು ಕೈಗೊಂಡು (ವ.9) ಜೀವಿಸುವಂತಹ ಷರತ್ತು ಅವರಿಗೆ ಇತ್ತು. ಅವರು ದೇವರ ಮಾತುಗಳನ್ನು ಬಿಟ್ಟು ಬೇರೆ ದೇವರುಗಳನ್ನು ಸೇವಿಸಲೇಬಾರದು (ವ.14).

2. ಈ ವಾಕ್ಯಭಾಗದಲ್ಲಿ ಕಂಡುಬರುವ ಆಶೀರ್ವಾದಗಳು ವಾಗ್ದಾನ ದೇಶದಲ್ಲಿ ವಾಸಿಸುವ ಇಸ್ರಾಯೇಲ್ಯರ ಜೀವಿತದ ಎಲ್ಲಾ ಕ್ಷೇತ್ರಗಳನ್ನು ವ್ಯಾಪಿಸುತ್ತವೆ:

   ಅ. ಊರುಗಳಲ್ಲಿಯೂ ಅಡವಿಗಳಲ್ಲಿಯೂ: ಪಟ್ಟಣ ಮತ್ತು ಅಡವಿ (ವ.2).

   ಆ. ಜನರ ಸಂತಾನ: ಮಕ್ಕಳು (ವ.4, 11), ವ್ಯವಸಾಯ (ವ.4, 8, 11) ಮತ್ತು ಪಶುಪಕ್ಷಿಗಳು (ವ.4, 11).

   ಇ. ಅವರ ದಿನನಿತ್ಯದ ಆಹಾರ (ವ.5).

   ಈ. ಅವರ ಕೆಲಸ ("ಕೆಲಸಕ್ಕೆ ಹೋಗುವಾಗಲೂ ಬರುವಾಗಲೂ", "ನಿಮ್ಮ ಪ್ರಯತ್ನಗಳೆಲ್ಲಾ ಸಫಲವಾಗುವಂತೆಯೂ", "ನಿಮ್ಮ ಎಲ್ಲಾ ವ್ಯವಸಾಯಗಳನ್ನು ಸಫಲಮಾಡುವನು" (ವ.6, 8, 12).

   ಉ. ಅವರ ಶತ್ರುಗಳ ಮೇಲೆ ಜಯ (ವ.7).

   ಊ. ಅವರು ದೇವರ ವಿಶೇಷವಾದ ಜನರು ಮತ್ತು ರಾಷ್ಟ್ರಗಳಿಗೆ ಸಾಕ್ಷಿಯಾಗಿ ಮುಂದುವರಿಯುವಿಕೆ (ವ.9-10).

   ಋ. ದೇಶದ ಮೇಲೆ ಮಳೆ (ವ.12).

   ಉ. ಅವರು ಗುಲಾಮರಾಗುವುದಕ್ಕಿಂತ ರಾಷ್ಟ್ರಗಳ ನಾಯಕರುಗಳಾಗಿ ಇರುವರು ("ಬಾಲವಾಗಿರದೆ ಶಿರಸ್ಸಾಗಿರುವರು", ಮೇಲಾಗುವರೇ ಹೊರತು ಕೆಳಗಣವರಾಗಿರುವುದಿಲ್ಲ" (ವ.13).

3. ಒಂದು ವೇಳೆ ಇಸ್ರಾಯೇಲ್ಯರು ದೇವರ ಆಜ್ಞಾವಿಧಿಗಳನ್ನು ಪಾಲಿಸದೆ ಹೋದರೆ ಅವರ ಮೇಲೆ ಆಶೀರ್ವಾದದ ಬದಲಾಗಿ ಶಾಪವು ಬರುವುದು (ವ. 15, 45, 58).

4. ಈ ಅಧ್ಯಾಯದಲ್ಲಿ ಕಂಡುಬರುವ ಶಾಪಗಳು:

   ಅ. ನಾವು ಮೊದಲ ನಾಲ್ಕು ವಾಕ್ಯಗಳಲ್ಲಿ (ವ.16-19) ಪದ್ಯವನ್ನು ಕಾಣಬಹುದು. ಅವುಗಳು ಆಶೀರ್ವಾದಕ್ಕೆ ವ.3-6 ಭಿನ್ನವಾಗಿರುತ್ತವೆ. ಅವುಗಳು ರಾಷ್ಟ್ರದಾದ್ಯಂತ ಅವರ ದಿನನಿತ್ಯದ ಆಹಾರವನ್ನು ಮತ್ತು ಜನರ ಸಂತಾನವನ್ನು ಹಾಗೂ ಅವರ ಕೆಲಸಗಳನ್ನೆಲ್ಲಾ ವ್ಯಾಪಿಸುತ್ತವೆ.

   ಆ. ನಂತರದಲ್ಲಿ ಇಸ್ರಾಯೇಲ್ಯರು ದೇವರಿಗೆ ಅವಿಧೇಯರಾಧರೆ ಅವರಿಗೆ ಏನು ಸಂಭವಿಸುತ್ತದೆ ಎಂಬುದರ ಸಾರಾಂಶವನ್ನು ನಾವು ಕಾಣಬಹುದು. ಅವರಿಗೆ ವಿಪತ್ತು, ಕಳವಳ ಮತ್ತು ಶಾಪಗಳು ಉಂಟಾಗುತ್ತವೆ (ವ.20).

   ಇ. ನಂತರದಲ್ಲಿ ವಿಪತ್ತುಗಳನ್ನು ವಿವರಿಸುವ ಉದ್ದನೆಯ ಪಟ್ಟಿಯನ್ನು (ವ.21-68) ನಾವು ಕಾಣಬಹುದು: ವ್ಯಾದಿ, ಬರಗಾಲ, ವೈರಿಗಳಿಂದ ಸೋಲು, ಐಗುಪ್ತ್ಯರಿಗೆ ಉಂಟಾದ ವ್ಯಾದಿಗಳು, ಭ್ರಾಂತಿಯುಂಟಾಗುವುದು, ಕಳವಳ ಮತ್ತು ಕುರುಡುತನ, ವೈವಾಹಿಕ

ಜೀವಿತದಲ್ಲಿ ಸೋಲು, ವ್ಯವಸಾಯದಲ್ಲಿ ವಿಫಲತೆ, ಪ್ರಾಣಹಾನಿ, ಸೆರೆವಾಸ, ವಿದೇಶಿಗರಿಂದ ಆಕ್ರಮಣ, ಸಾಮಾಜಿಕ ಅಪಮಾನ, ನಾಶನ, ಯುದ್ಧಗಳು, ದೇಶದಲ್ಲಿ ವಿದೇಶಿಗರಿಂದ ವೃತ್ತಿ, ಜನರ ಕಠಿಣವಾದ ಹೃದಯ, ನರಭಕ್ಷತೆ, ಹೆಚ್ಚು ಸೆರೆವಾಸ ಮತ್ತು ಜನರ ಚದುರುವಿಕೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –

2. ಈ ಅಧ್ಯಾಯದಿಂದ ಇಂದು ದಕ್ಷಿಣಭಾರತದಲ್ಲಿರುವ ವಿಶ್ವಾಸಿಗಳಾದ ನಾವು ಆಶೀರ್ವಾದ ಮತ್ತು ಶಾಪಗಳ ಕುರಿತು ಈ ಕೆಳಗಿನ ಸಂಗತಿಗಳನ್ನು ಕಲಿಯಬಹುದೆಂದು ನಾನು ಆಲೋಚಿಸುತ್ತೇನೆ:

ಅ. ದೇವರೊಂದಿಗೆ ಮತ್ತು ಆತನ ಆಜ್ಞೆಯೊಂದಿಗೆ ನಮಗೆ ಇರುವ ಸಂಬಂಧದ ಆಯ್ಕೆಯು ಪರಿಣಾಮವನ್ನುಂಟು ಮಾಡುತ್ತದೆ.

- ಇಸ್ರಾಯೇಲ್ಯರು ದೇವರ ಆಜ್ಞೆಗಳಿಗೆ ಅವಿಧೆಯರಾಗುವ ಆಯ್ಕೆಯನ್ನು ಮಾಡಿದ್ದರ ಪರಿಣಾಮವಾಗಿ ಅವರು ಯುದ್ಧಗಳನ್ನು, ವಿದೇಶಿಗರಿಂದ ಆಕ್ರಮಣವನ್ನು ಮತ್ತು ದೇಶದ ಜನರೆಲ್ಲ ಚದುರಿ ಹೋಗುವುದನ್ನು ಅನುಭವಿಸಬೇಕಾಯಿತು.
- ಇಂದು ನಾವು ಯೇಸು ಕ್ರಿಸ್ತನ ಮೂಲಕ ಸಿಗುವ ರಕ್ಷಣೆಯ ಸ್ವೀಕಾರ ಅಥವಾ ತಿರಸ್ಕಾರದ ಆಯ್ಕೆಯು ನಮ್ಮ ನಿತ್ಯತ್ವದ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ: ನಾವು ನಿತ್ಯತ್ವದಲ್ಲಿ ದೇವರೊಂದಿಗೆ ಕಳೆಯುತ್ತೇವೆ, ಅಥವಾ ದೇವರಿಂದ ದೂರವಾಗಿ ನಿತ್ಯತ್ವವನ್ನು ಕಳೆಯಬಹುದು.

ಆ. ಇಂದು ವಿಶ್ವಾಸಿಗಳಾದ ನಾವು ಧರ್ಮೋಪದೇಶಕಾಂಡ 28 ರಲ್ಲಿರುವ ಆಶೀರ್ವಾದ ಮತ್ತು ಶಾಪದ ಪಟ್ಟಿಯನ್ನು ಯಾಂತ್ರಿಕವಾಗಿ ನಮ್ಮ ಪರಿಸ್ಥಿತಿಗೆ ಅನ್ವಯಿಸಿಕೊಳ್ಳಬಾರದು. ಯಾಕೆ ಆಗಲ್ಲ?

- ನಮ್ಮ ವೈಯಕ್ತಿಕ ಆಯ್ಕೆಗಳಾದ "ಸರಿಯಾದ ಆಯ್ಕೆಯು" ಯಾವಾಗಲೂ ಆಶೀರ್ವಾದಗಳನ್ನು ತರುವುದಿಲ್ಲ ಮತ್ತು "ತಪ್ಪಾದ ಆಯ್ಕೆಗಳು" ಶಾಪವನ್ನು ತರುವುದಿಲ್ಲ ಎಂಬುದು ನಮ್ಮ ಅನುಭವದಿಂದ ತಿಳಿದಿದ್ದೇವೆ. ಒಳ್ಳೆಯ ವಿಶ್ವಾಸಿಗಳು ರೋಗದಿಂದ ಬಳಲುವುದನ್ನು, ಅಪಘಾತಕ್ಕೆ ಒಲಗಾಗುವುದನ್ನು, ಕಳ್ಳತನಕ್ಕೆ ಒಳಗಾಗುವುದನ್ನು, ವೈರಿಗಳಿಂದ ಆಕ್ರಮಣಕ್ಕೆ ಒಳಗಾಗುವುದನ್ನು ಇನ್ನೂ ಮುಂತಾದವುಗಳು ಸಂಭವಿಸುವುದನ್ನು ನೋಡಿದ್ದೇವೆ. ಇನ್ನೊಂದು ಕಡೆಯಲ್ಲಿ ನಮ್ಮ ದೇಶದಲ್ಲಿರುವ ಜನರು ವಿಗ್ರಹಾರಧಕರು ಮತ್ತು ದುಷ್ಟರಾದರು ಅವರು ಒಳ್ಳೆಯ ಶ್ರೀಮಂತಿಕೆಯನ್ನು, ಯಶಸ್ವಿಯನ್ನು, ಗೌರವವನ್ನು, ಅನೇಕ ಸ್ನೇಯಿತರನ್ನು ಹೊಂದಿದ್ದು, ಒಳ್ಳೆಯ ಆರೋಗ್ಯದಿಂದ ಜೀವಿಸುತ್ತಿರುವುದನ್ನು ಕಂಡಿದ್ದೇವೆ.
- ನೀತಿವಂತರು ಕಷ್ಟಗಳನ್ನು ಮತ್ತು ಶ್ರಮೆಗಳನ್ನು ಅನುಭವಿಸುತ್ತಾ ಅನೀತಿವಂತರು ಆಶೀರ್ವಾದಗಳನ್ನು ಅನುಭವಿಸುತ್ತಾ ಜೀವಿಸುವ ಜೀವಿತದ ಕುರಿತು ಹಳೇ ಒಡಂಬಡಿಕೆಯು ಅನೇಕ ಉದಾಹರಣೆಗಳನ್ನು ನಮಗೆ ನೀಡುತ್ತದೆ. ಕೀರ್ತನೆಗಾರನು ತನ್ನ 73 ನೇ ಕೀರ್ತನೆಯಲ್ಲಿ ಈ ರೀತಿಯಾಗಿ ತಿಳಿಸುತ್ತಾನೆ: "ಆದರೆ ನಾನು ದುಷ್ಟರ ಸೌಭಾಗ್ಯವನ್ನು ಕಂಡು ಸೊಕ್ಕಿನವರ ಮೇಲೆ ಉರಿಗೊಂಡೆನು. ನನ್ನ ಕಾಲುಗಳು ಜಾರಿದವುಗಳೇ; ನನ್ನ ಹೆಜ್ಜೆಗಳು ತಪ್ಪಿದವುಗಳೇ. ಅವರ ಮರಣವು ನಿರ್ಬಾಧಕವಾಗಿದೆ; ಅವರ ಕಾಯವು ಕೊಬ್ಬುಳ್ಳದ್ದಾಗಿದೆ. ಮನುಷ್ಯರ ಕಷ್ಟದಲ್ಲಿ ಅವರು ಭಾಗಿಗಳಾಗುವುದಿಲ್ಲ; ಇತರರಿಗೆ ತಗಲುವಂತೆ ಅವರಿಗೆ ಅಂಟುರೋಗವು ತಗುಲುವುದಿಲ್ಲ" (ವ.2-5) ಮತ್ತು "ನನ್ನ

ಮನಸ್ಸನ್ನು ನಿರ್ಮಲ ಮಾಡಿಕೊಂಡದ್ದು ಶುದ್ಧತ್ವದಲ್ಲಿ ಕೈತೊಳಕೊಂಡದ್ದೂ ವ್ಯರ್ಥವೇ ಸರಿ. ನಾನು ಯಾವಾಗಲೂ ವ್ಯಾದಿಪೀಡಿತನಾಗಿದ್ದು ಪ್ರತಿದಿನವೂ ದಂಡಿಸಲ್ಪಡುತ್ತಾ ಇದ್ದೇನಲ್ಲಾ" (ವ.13-14).

- ಯೇಸು ಕ್ರಿಸ್ತನನ್ನು ನಂಬಿ ಆತನಲ್ಲಿ ಜೀವಿಸುವವರು ಸ್ವಯಂಚಾಲಿರಾಗಿ ಈ ಲೋಕದ ಸುಖದ ಜೀವಿತದಲ್ಲಿ ಜೀವಿಸುತ್ತಾರೆಂಬ ಬೋಧನೆಯನ್ನು ಹೊಸ ಒಡಂಬಡಿಕೆಯು ಬೋಧಿಸುವುದಿಲ್ಲ. ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಹೀಗೆ ಹೇಳಿದನು, "ಅವರು ನನ್ನನ್ನು ಹಿಂಸೆಪಡಿಸಿದರೆ ನಿಮ್ಮನ್ನು ಸಹ ಹಿಂಸೆಪಡಿಸುವರು (ಯೋಹಾನ 15:20). ಯೆರೂಸಲೇಮಿನಲ್ಲಿನ ಆದಿಸಭೆಯ ಅನೇಕ ವಿಶ್ವಾಸಿಗಳು ಬಡವರಾಗಿದ್ದರು ಮತ್ತು ಅವರ ಹಸಿವನ್ನು ನೀಗಿಸಲು ಅನ್ಯಸಭೆಯ ವಿಶ್ವಾಸಿಗಳು ಹಣವನ್ನು ಕಳುಹಿಸಿಕೊಟ್ಟರು (ಅಪೊ.11:29). ಪವಿತ್ರಾತ್ಮಭರಿತನೂ ನಂಬಿಕೆಯಿಂದ ತುಂಬಿದವನೂ ಆದ ಸ್ತೇಫನನು (ಅಪೊ.6:5) ತನ್ನ ನಂಬಿಕೆಗಾಗಿ ಕೊಲ್ಲಲ್ಪಟ್ಟನು. ಅಪೊಸ್ತಲನಾದ ಪೌಲನು ನಂಬಿಗಸ್ತನಾಗಿ ದೇವರನ್ನು ಸೇವಿಸುತ್ತಾ ಆತನ ಸೇವೆಯನ್ನು ಮಾಡುತ್ತಿರುವಾಗ ಅನೇಕ ಕಠಿಣವಾದ ಪರಿಸ್ಥಿತಿಗಳನ್ನು ಮತ್ತು ಹಿಂಸೆಗಳನ್ನು ಹಾದುಹೋದನು (ರೋಮ 8:18; 2ಕೊರಿ 1:8): ಆತನು ಸೆರೆಮನೆ ವಾಸದಲ್ಲಿದ್ದನು, ಮಿತಿಮೀರಿ ಪೆಟ್ಟುಗಳನ್ನು ತಿಂದನು, ಆತನ ಜೀವಿತಕ್ಕೆ ಬೆದರಿಕೆಗಳು, ಹಡಗು ಒಡೆದುಹೋಯಿತು, ವೈರಿಗಳಿಂದ, ಸುಳ್ಳುವಿಶ್ವಾಸಿಗಳಿಂದ ಮತ್ತು ಡಕಾಯಿತರಿಂದ ಜೀವ ಬೆದರಿಸುವಿಕೆ (2 ಕೊರಿ 11:23-27).

ಇ. ಕ್ರೈಸ್ತ ಸಭೆಯ ಇತಿಹಾಸವು ಸಂಕಟ ಮತ್ತು ಶ್ರಮೆಯ ದೊಡ್ಡ ಇತಿಹಾಸವಾಗಿದೆ. ಅನೇಕ ನಂಬಿಗಸ್ಥ ದೇವಸೇವಕರು ಸುವಾರ್ತೆಯನ್ನು ಸ್ಥಳೀಯವಾಗಿಯೂ ಮತ್ತು ದೂರದ ಸ್ಥಳಗಳಲ್ಲಿಯೂ ಸಾರುವಾಗ ಅನೇಕ ಭಯಂಕರವಾದ ಕಷ್ಟ ಮತ್ತು ಸಂಕಟಗಳ ಪರಿಸ್ಥಿತಿಗಳನ್ನು ಹಾದು ಹೋಗಿದ್ದಾರೆ.

ಈ. ಆದರೆ ನಮಗೆ ಇದು ತಿಳಿದಿರಬೇಕು:

- ನಾವು ದೇವರ ರಾಜ್ಯಕ್ಕಾಗಿ ಸಂಕಷ್ಟಗಳನ್ನು ಹಾದುಹೋಗುವಾಗ ದೇವರು ತನ್ನ ಪವಿತ್ರಾತ್ಮನ ಮೂಲಕ ನಮಗೆ ಬಲ ಮತ್ತು ಪ್ರೋತ್ಸಾಹವನ್ನು ನೀಡುತ್ತಾನೆ.
- ದೇವರ ನಮ್ಮ ಶಕ್ತಿಯನ್ನು ಮೀರಿ ಶೋಧನೆಯನ್ನು ನೀಡುವುದಿಲ್ಲ ಮತ್ತು ಶೋಧನೆಯುಂಟಾಗುತ್ತಲೇ ಅದರಿಂದ ತಪ್ಪಿಸಿಕೊಳ್ಳುವ ಮಾರ್ಗಗಳನ್ನು ಸಿದ್ಧಮಾಡಿರುತ್ತಾನೆ (1 ಕೊರಿ. 10:13).
- ಉಪದ್ರವದಿಂದ ತಾಳ್ಮೆಯುಂಟಾಗುತ್ತದೆ (ರೋಮ 5:3) ಮತ್ತು ನಮ್ಮನ್ನು ಯೇಸು ಕ್ರಿಸ್ತನ ಸ್ವರೂಪದಲ್ಲಿ ಬದಲಾಯಿಸುತ್ತದೆ (ಫಿಲಿ. 3:10).
- ಒಂದು ದಿನ ಬರುತ್ತದೆ ಮುಂದೆ ಯಾವುದೇ ಉಪದ್ರವಗಳು ಇರುವುದಿಲ್ಲ; ಯೇಸು ಕ್ರಿಸ್ತನು ನಮ್ಮನ್ನು ವಿಶ್ರಾಂತಿಕರವಾದ ನೀರುಗಳ ಬಳಿಯಲ್ಲಿ ಬರಮಾಡುತ್ತಾನೆ ಮತ್ತು ನಮ್ಮ ಕಣ್ಣೀರನ್ನೆಲ್ಲಾ ಒರೆಸಿಬಿಡುವನು (ಪ್ರಕಟಣೆ 7:17).

**ಧರ್ಮೋಪದೇಶಕಾಂಡ ಉತ್ತರಗಳು 4: ಜ್ಞಾಪಕ ಮಾಡಿಕೊಳ್ಳುವುದು**

**ಇ. ಪ್ರಶ್ನೆಗಳಿಗೆ ಉತ್ತರಿಸಿರಿ**

1. ಧರ್ಮೋ. 4:10

ಅ. ಇಸ್ರಾಯೇಲ್ಯರು ಸಿನಾಯ್ ಪರ್ವತದ ಘಟನೆಯನ್ನು (ಹೊರೇಬ್) ಜ್ಞಾಪಕದಲ್ಲಿರಸಬೇಕೆಂದು ("ಜ್ಞಾಕ" ಎಂಬ ಪದವು ಮುಂಚಿನ ವಾಕ್ಯದ ಹಿನ್ನಲೆಯಲ್ಲಿ ಅರ್ಥೈಸಿಕೊಳ್ಳತಕ್ಕದ್ದು) ತಿಳಿಸಲಾಗಿತ್ತು.

ಆ. ಅವರು ಜ್ಞಾಪಕದಲ್ಲಿರಿಸಲು ಕಾರಣ: ಒಡಂಬಡಿಕೆಯನ್ನು ಮತ್ತು ದಶಾಜ್ಞೆಗಳನ್ನು ಅವರು ನೆನಪಿನಲ್ಲಿಡುವ ಪ್ರಮುಖ ಉದ್ದೇಶವೇನೆಂದರೆ ಅವರ ಮಕ್ಕಳಿಗೆ ಅವುಗಳನ್ನು ಅವರು ಕಲಿಸಲೇಬೇಕಾಗಿತ್ತು.

2. ಧರ್ಮೋ. 5:15

ಅ. ಇಸ್ರಾಯೇಲ್ಯರು ಐಗುಪ್ತದಲ್ಲಿ ದಾಸತ್ವದಲ್ಲಿದ್ದಾಗ ಅವರನ್ನು ದೇವರು ತನ್ನ ಭುಜಬಲದಿಂದ ಬಿಡುಗಡೆ ಮಾಡಿದ್ದನ್ನು ಅವರು ಜ್ಞಾಪಕಮಾಡಿಕೊಳ್ಳಬೇಕು.

ಆ. ಅವರು ಜ್ಞಾಪಕಮಾಡಿಕೊಳ್ಳಲು ಕಾರಣ: ಅವರು ತಮ್ಮ ಕಠಿಣವಾದ ಕೆಲಸಗಳಿಂದ ವಿಶ್ರಾಂತಿಯನ್ನು ಪಡೆಯುವುದಕ್ಕಾಗಿ ಸಬ್ಬತ್ ದಿನವನ್ನು ಆಚರಿಸುವುದು ಅವಶ್ಯವಾಗಿತ್ತು. ಆದರೆ ಅವರು ಐಗುಪ್ತದಲ್ಲಿ ದಾಸತ್ವದಲ್ಲಿದ್ದಾಗ ಮಾಡಿದ ಬಿಟ್ಟಿಕೆಲಸವನ್ನು ನೆನಪುಮಾಡಿಕೊಂಡು ಅದರಿಂದ ಅವರನ್ನು ದೇವರು ಹೇಗೆ ಬಿಡಿಸಿದನೆಂಬುದನ್ನು ಅವರು ಜ್ಞಾಪಕಮಾಡಿಕೊಳ್ಳುವಾಗ ಅವರು ಸಬ್ಬತ್ ದಿನವನ್ನು ಇನ್ನೂ ಅರ್ಥಗರ್ಭಿತವಾಗಿ ಆಚರಿಸಲು ಸಾಧ್ಯವಾಗುತ್ತಿತ್ತು.

3. ಧರ್ಮೋ. 7:18-19

ಅ. ದೇವರು ಫರೋಹ ಮತ್ತು ಐಗುಪ್ತ್ಯರಿಗೆ ಮಾಡಿದ್ದನ್ನು ಇಸ್ರಾಯೇಲ್ಯರು ಜ್ಞಾಪಕಮಾಡಿಕೊಳ್ಳತಕ್ಕದ್ದು.

ಆ. ಅವರು ಜ್ಞಾಪಕಮಾಡಿಕೊಳ್ಳಲು ಕಾರಣ: ವಾಗ್ದಾನದ ದೇಶದಲ್ಲಿರುವ ಇತರೆ ಜನಾಂಗಗಳನ್ನು ಸಹ ಹೊಡೆದೋಡಿಸುವ ಬಲವು ದೇವರಿಗೆ ಇದೆ ಎಂಬುದನ್ನು ಅವರು ಅರ್ಥಮಾಡಿಕೊಳ್ಳತಕ್ಕದ್ದು.

4. ಧರ್ಮೋ. 8:2

ಅ. ಅರಣ್ಯದ ಪ್ರಯಾಣದಲ್ಲಿ ಇಸ್ರಾಯೇಲ್ಯರನ್ನು ದೇವರು ಹೇಗೆ ಅವರನ್ನು ತಗ್ಗಿಸಿ, ಪರೀಕ್ಷಿಸಿ ಮತ್ತು ಅವರ ಅಗತ್ಯತೆಯನ್ನು ಪೂರೈಸಿದ್ದನ್ನು ಅವರು ಜ್ಞಾಪಕಮಾಡಿಕೊಳ್ಳತಕ್ಕದ್ದು.

ಆ. ಅವರು ಜ್ಞಾಪಕಮಾಡಿಕೊಳ್ಳಲು ಕಾರಣ: ದೇವರ ಎಲ್ಲಾ ಆಜ್ಞೆಗಳನ್ನು ಅವರು ಗಮನವಿಟ್ಟು ಹಿಂಬಾಲಿಸಲೇಬೇಕು. ಆಗಮಾತ್ರ ಅವರು ವಾಗ್ದಾನದ ದೇಶವನ್ನು ವಶಪಡಿಸಿಕೊಂಡು ಅಲ್ಲಿ ಅಭಿವೃದ್ಧಿಯಾಗುವರು.

5. ಧರ್ಮೋ. 9:7

ಅ. ವಾಗ್ದಾನದ ದೇಶದಲ್ಲಿರುವ ಜನರನ್ನು ದೇವರು ಹೊಡೆದೋಡಿಸುವುದನ್ನು ಇಸ್ರಾಯೇಲ್ಯರು ಜ್ಞಾಪಕಮಾಡಿಕೊಳ್ಳಬೇಕು, ಯಾಕೆಂದರೆ ಇಸ್ರಾಯೇಲ್ಯರ ನೀತಿವಂತಿಕೆಯಿಂದ ಇದನ್ನು ಮಾಡದೆ ಆ ದೇಶದಲ್ಲಿದ್ದ ಜನರ ದುಷ್ಟತನದಿಂದಲೂ ಮತ್ತು ದೇವರು ಪಿತೃಗಳಿಗೆ ಮಾಡಿದ ವಾಗ್ದಾನದಿಂದಲೇ.

ಆ. ಅವರು ಜ್ಞಾಪಕ ಮಾಡಿಕೊಳ್ಳಲು ಕಾರಣ: ಅವರು ದೇವರ ವಿರುದ್ಧ ದಂಗೆ ಏಳುತ್ತಾ ದೇವರಿಗೆ ಕೋಪವನ್ನುಂಟುಮಾಡುವ ಕಾರ್ಯವನ್ನು ಮುಂದುವರಿಸಬಾರದು.

6. ಧರ್ಮೋ. 11:6

ಅ. ಹಿಂದೆ ನಡೆದ ದೇವರ ಮಹತ್ತಾದ ಕಾರ್ಯಗಳನ್ನು ಇಸ್ರಾಯೇಲ್ಯರ ಮಕ್ಕಳು ನೋಡದೆ ಇದ್ದನಿಮಿತ್ತ ಅವರು ಜ್ಞಾಪಕದಲ್ಲಿರಿಸಿಕೊಂಡು, ತಮ್ಮ ಮಕ್ಕಳಿಗೆ ಬೋಧಿಸತಕ್ಕದ್ದು.

ಆ. ಅವರು ಜ್ಞಾಪಮಾಡಿಕೊಳ್ಳಲು ಕಾರಣ: ಅವರು ತಮ್ಮ ದೇವರಾದ ಕರ್ತನನ್ನು ಪ್ರೀತಿಸಿ ಆತನ ಆಜ್ಞೆಗಳನ್ನು ಕೈಗೊಂಡು ಜೀವಿಸಬೇಕು.

7. ಧರ್ಮೋ. 15:15

ಅ. ಐಗುಪ್ತದಲ್ಲಿ ಇಸ್ರಾಯೇಲ್ಯರು ತಾವೇ ಗುಲಾಮರಾಗಿದ್ದನ್ನು ಅವರು ಜ್ಞಾಪಕಮಾಡಿಕೊಳ್ಳತಕ್ಕದ್ದು.

ಆ. ಅವರು ಜ್ಞಾಪಕಮಾಡಿಕೊಳ್ಳಲು ಕಾರಣ: ಅವರು ತಮ್ಮ ಗುಲಾಮತನದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳತಕ್ಕದ್ದು. ಈಗ ದೇವರು (ವಾಗ್ದಾನದ ದೇಶದಲ್ಲಿನ ತಮ್ಮ ನೂತನ ಜೀವಿತಕ್ಕಾಗಿ ಸಿದ್ಧತೆಮಾಡುತ್ತಿರುವುದು) ಆರು ವರ್ಷಗಳ ತಮ್ಮ ಸೇವೆಯ ನಂತರ ಅವರ ಗುಲಾಮಗಿರಿಯಿಂದ ಅವರನ್ನು ಬಿಡುಗಡೆಗೊಳಿಸುತ್ತಿದ್ದಾನೆ. ಈಗ ಇಸ್ರಾಯೇಲ್ಯರು ದೇವರ ಆಜ್ಞೆಗಳನ್ನು ಗಮನದಲ್ಲಿರಿಸಿಕೊಂಡು, ಐಗುಪ್ತದಲ್ಲಿ ಅವರು ಗುಲಾಮರಾಗಿದ್ದಾಗ ದೇವರು ಅವರನ್ನು ಗುಲಾಮತನದಿಂದ ಬಿಡುಗಡೆ ಮಾಡಿದ್ದನ್ನು ಅವರು ಜ್ಞಾಪಕಮಾಡಿಕೊಳ್ಳಬೇಕು.

8. ಧರ್ಮೋ. 16:12

ಅ. ಐಗುಪ್ತದಲ್ಲಿ ಇಸ್ರಾಯೇಲ್ಯರು ತಾವೇ ಗುಲಾಮರಾಗಿದ್ದನ್ನು ಅವರು ಜ್ಞಾಪಕಮಾಡಿಕೊಳ್ಳತಕ್ಕದ್ದು.

ಆ. ಅವರು ಜ್ಞಾಪಕಮಾಡಿಕೊಳ್ಳಲು ಕಾರಣ: ಅವರು ದೇವರ ಸಲಹೆಯ ಪ್ರಕಾರ ವಾರಗಳ ಹಬ್ಬವನ್ನು ಆಚರಿಸತಕ್ಕದ್ದು.

9. ಧರ್ಮೋ. 24:9

ಅ. ಮಿರ್ಯಾಮಳಿಗೆ ಕುಷ್ಠತನದಿಂದ ದೇವರು ಶಿಕ್ಷಿಸಿದ್ದನ್ನು ಇಸ್ರಾಯೇಲ್ಯರು ಜ್ಞಾಪಕಮಾಡಿಕೊಳ್ಳತಕ್ಕದ್ದು.

ಆ. ಅವರು ಜ್ಞಾಪಕಮಾಡಿಕೊಳ್ಳಲು ಕಾರಣ: ಅವರು ದೇವರ ಆಜ್ಞೆಗಳನ್ನು ಜಾಗರೂಕತೆಯಿಂದ ಪಾಲಿಸುವುದು ಮತ್ತು ಯಾಜಕರ ಸಲಹೆಗಳಿಗೆ ವಿಧೇಯರಾಗುವುದು.

10. ಧರ್ಮೋ. 25:17

ಅ. ಅಮಾಲೇಕ್ಯರು ಇಸ್ರಾಯೇಲ್ಯರನ್ನು ಎಷ್ಟುಕೀಳಾಗಿ ನೋಡಿಕೊಂಡರೆಂಬುದನ್ನು ಅವರು ಜ್ಞಾಪಕಮಾಡಿಕೊಳ್ಳಬೇಕು.

ಆ. ಅವರು ಜ್ಞಾಪಕಮಾಡಿಕೊಳ್ಳಲು ಕಾರಣ: ಅವರು ಇತರೆ ಜನರನ್ನು ಕೀಳಾಗಿ ನೋಡಬಾರದು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –

2. ಧರ್ಮೋ. 24:17-22 ರಲ್ಲಿ ಪರದೇಶಿಗಳನ್ನು, ತಾಯಿತಂದೆಯಿಲ್ಲದವರನ್ನು ಮತ್ತು ವಿಧವೆಯರಿಗೆ ಸಂಬಂಧಪಟ್ಟಂತೆ ಇಸ್ರಾಯೇಲ್ಯರಿಗೆ ನಾಲ್ಕು ಆಜ್ಞೆಗಳನ್ನು ಕೊಡಲಾಗಿತ್ತು. ಇವರು ಹಳೇ ಒಡಂಬಡಿಕೆಯ ಸಮಯದಲ್ಲಿ ಬಹಳ ವಂಚಿತರು ಮತ್ತು ಖಂಡನೆಗಳಿಗೆ ಅವಕಾಶವಾದ ಜನರಾಗಿದ್ದರು. ಇಸ್ರಾಯೇಲ್ಯರು ಈ ನಾಲ್ಕು ಆಜ್ಞೆಗಳನ್ನು ಪಾಲಿಸುವಾಗ, ಅವರು ಐಗುಪ್ತದಲ್ಲಿ ತಾವೇ ಗುಲಾಮರಾಗಿ, ಆ ದೇಶದಲ್ಲಿ ವಂಚಿತರಾಗಿ ಮತ್ತು ಖಂಡಿಸಲ್ಪಟ್ಟವರಾಗಿ ಜೀವಿಸಿದ ದಿನಗಳನ್ನು ಅವರು ಜ್ಞಾಪಕಮಾಡಿಕೊಳ್ಳುವಂತವರಾಗಿದ್ದರು. ಅವರನ್ನು ಗುಲಾಮಗಿರಿಯಿಂದ ಬಿಡಿಸಿ 40 ವರ್ಷಗಳ ಕಾಲ ಅಡವಿಯಲ್ಲಿ ಅವರ ದೈನಂದಿನ ಅಗತ್ಯತೆಗಳನ್ನು ಪೂರೈಸಿ, ಅವರು ಸಮೃದ್ಧಿಯಿಂದಲೂ ಮತ್ತು ಹೆಚ್ಚಾದ ಜನರಾಗಿ ಜೀವಿಸುವಂತೆ ವಾಗ್ದಾನದ ದೇಶವನ್ನು ಅವರಿಗೆ ಅನುಗ್ರಹಿಸಿದ ಕರ್ತನ ಒಡಂಬಡಿಕೆಯನ್ನು ಅವರು ಜ್ಞಾಪಕಮಾಡಿಕೊಳ್ಳುತ್ತಿದ್ದರು. ಹಾಗಾಗಿ ಈ ನಾಲ್ಕು ಆಜ್ಞೆಗಳನ್ನು ಅವರು ಪಾಲಿಸುವುದರಿಂದ ದೇವರ ಒಡಂಬಡಿಕೆಯನ್ನು ಅವರು ಜ್ಞಾಪಕಮಾಡಿಕೊಳ್ಳಲು ಸಹಾಕಾರಿಯಾಗುವುದು.

3. ಯೇಸು ಕ್ರಿಸ್ತನು ತನ್ನ ಕಡೆಯ ಭೋಜನದಲ್ಲಿ ತನ್ನ ಶಿಷ್ಯರಿಗೆ "ಇದನ್ನು ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಹೀಗೆ ಮಾಡಿರಿ" ಎಂಬ ಸಲಹೆಯನ್ನು ನೀಡಿದನು. ಆತನು ಕರ್ತನಮೇಜನ್ನು "ಜ್ಞಾಪಕಮಾಡಿಕೊಳ್ಳುವ" ಕಾರ್ಯವಾಗಿ ಆಚರಿಸಿರಿ ಎಂಬುದಾಗಿ ತಿಳಿಸಿದನು. ಶಿಷ್ಯರು ಧರ್ಮೋಪದೇಶಕಾಂಡದ ದೈವಶಾಸ್ತ್ರವನ್ನು ಚೆನ್ನಾಗಿ ಅರ್ಥಮಾಡಿಕೊಂಡಿರಬೇಕು. ಅದಕ್ಕಾಗಿ ಯೇಸುವಿನ ಮಾತುಗಳನ್ನು ಅವರು ಹೀಗೆ ಅರ್ಥಮಾಡಿಕೊಂಡಿರಬೇಕು (ಪ್ರಾಯಶಃ ಆತನ ಮರಣ ಮತ್ತು ಪುನರುತ್ಥಾನದ ನಂತರದಲ್ಲಿ):

ಅ. ನಾವು ಕರ್ತನ ಭೋಜನವನ್ನು ಆಚರಿಸಬೇಕೆಂದು ಯೇಸು ನಮಗೆ ಹೇಳಿದ್ದಾನೆ. ಹಾಗಾಗಿ ನಾವು ಆತನ ಆದೇಶಗಳಿಗೆ ವಿಧೇಯರಾಗಬೇಕು.

ಆ. ನಾವು ಆತನ ಆದೇಶಗಳಿಗೆ ವಿಧೇಯರಾಗಬೇಕೆಂದು ಆತನು ಬಯಸುತ್ತಾನೆ ಯಾಕೆಂದರೆ ಆತನು ಕ್ರೂಜೆಯಲ್ಲಿ ನಮಗಾಗಿ ಶ್ರಮೆಯನ್ನು ಅನುಭವಿಸಿ ತನ್ನ ಪ್ರಾಣವನ್ನು ನೀಡಿದ್ದರಿಂದ ನಾವು ಆಚರಿಸುವ ಕರ್ತನ ಭೋಜನವು ನಮ್ಮನ್ನು ಕ್ರೂಜೆಯಲ್ಲಿ ಯೇಸು ಮಾಡಿದ ಕಾರ್ಯದೊಂದಿಗೆ ಸಂಪರ್ಕವನ್ನು ಕಲ್ಪಿಸುತ್ತದೆ. ಇತಿಹಾಸದ ಆ ಸಮಯದಲ್ಲಿ ಆತನು ನಮಗಾಗಿ ಏನು ಮಾಡಿದ್ದಾನೋ, ಇಂದು ನಮ್ಮ ಜೀವಿತದಲ್ಲಿ ಅದು ಪರಿಣಾಮವನ್ನುಂಟುಮಾಡುತ್ತದೆ: ಆತನು ಸತ್ತದ್ದರಿಂದ ನಾವು ಜೀವಿಸುತ್ತಿದ್ದೇವೆ; ಯಾಕೆಂದರೆ ಆತನು ನಮ್ಮ ಶಿಕ್ಷೆಯನ್ನು ತನ್ನ ಮೇಲೆ ಹಾಕಿಕೊಂಡನು.

ಇ. ನಾವು ಯಾವಾಗ ಕರ್ತನ ಭೋಜನವನ್ನು ಆಚರಿಸುತ್ತೇವೋ, ಆಗ ನಾವು ಆತನ ಪ್ರೀತಿಯನ್ನು ಮತ್ತು ನಮಗಾಗಿ ಆತನು ತನ್ನ ಜೀವಿತವನ್ನು ಸ್ವಇಚ್ಛೆಯಿಂದ ನೀಡಿದ್ದನ್ನು ನಾವು ಜ್ಞಾಪಕಮಾಡಿಕೊಳ್ಳಬೇಕು. ಹಾಗೆ ಜ್ಞಾಪಕಮಾಡಿಕೊಳ್ಳುವುದು ಇಂದು ನಮ್ಮನ್ನು ಉತ್ತೇಜಿಸುತ್ತದೆ. ಇಂದು ಸಹ ಆತನು ನಮ್ಮ ಕುರಿತು ಅದೇ ಪ್ರೀತಿಯನ್ನು ಹೊಂದಿದ್ದಾನೆ. ಆತನು ನಿನ್ನೆ, ಇಂದು, ನಾಳೆ ಒಂದೇ ರೀತಿಯಾಗಿರುತ್ತಾನೆ.

ಈ. ಆದರೆ, ನಾವು ಆತನ ಆದೇಶಗಳಿಗೆಲ್ಲಾ ವಿಧೇಯರಾಗಿರುವ ಪ್ರತಿಸಮಯ ಆತನು ನಮಗಾಗಿ ಮಾಡಿರುವ ಕಾರ್ಯಗಳನ್ನು ನೆನಪಿಸಿಕೊಳ್ಳುತ್ತೇವೆ (ಜ್ಞಾಪಮಾಡಿಕೊಳ್ಳುತ್ತೇವೆ). ನಾವು ಪಾಪಕ್ಕೆ ದಾಸರಾಗಿ ಇದ್ದ ನಮ್ಮ ಹಳೇಯ ಪಾಪಸ್ವಭಾವದ ಜೀವಿತವನ್ನು ಜ್ಞಾಪಕಮಾಡಿಕೊಳ್ಳುತ್ತೇವೆ. ಕ್ರೂಜೆಯಲ್ಲಿ ಯೇಸು ಕ್ರಿಸ್ತನು ಮರಣವನ್ನು ಹೊಂದುವುದರ ಮೂಲಕ ದೇವರು ಮಾಡಿದ್ದ ಬಿಡುಗಡೆಯನ್ನು ನಾವು ಜ್ಞಾಪಕಮಾಡಿಕೊಳ್ಳುತ್ತೇವೆ. ಈ ಜ್ಞಾಪಕಮಾಡಿಕೊಳ್ಳುವ ಕಾರ್ಯವು ನಮ್ಮ ಹೃದಯಗಳಲ್ಲಿ ಕೃತಜ್ಞತೆಯನ್ನು ಹುಟ್ಟಿಸುತ್ತದೆ. ಇದು ಇನ್ನೂ ನಾವು ಪ್ರಾಮಾಣಿಕರಾಗಿ ಯೇಸುವಿನ ಮಾದರಿಯನ್ನು ಹಿಂಬಾಲಿಸಬೇಕೆಂದು ನಮ್ಮನ್ನು ಪ್ರೋತ್ಸಾಹಿಸುತ್ತದೆ. ನಮಗಿರುವುದನ್ನೆಲ್ಲಾ ಆತನಿಗೆ ಒಪ್ಪಿಸಿಕೊಡುವಂತೆ ಇದು ನಮ್ಮನ್ನು ಪ್ರೇರೇಪಿಸುತ್ತದೆ. ನಮ್ಮ ನೆರೆಯವರನ್ನು ನಮ್ಮಂತೆ ಪ್ರೀತಿಸುವಂತೆ ಇದು ನಮಗೆ ಸಹಾಯಮಾಡುತ್ತದೆ ಮತ್ತು ಯೇಸು ಕ್ರಿಸ್ತನ ಮೂಲಕ ಜನರು ದೇವರ ರಕ್ಷಣೆಯನ್ನು ಅನುಭವಿಸುವಂತೆ ಮಾಡಲು ನಮ್ಮ ಜೀವಿತವನ್ನೇ ತ್ಯಾಗವಾಗಿ ಅರ್ಪಿಸಲು ನಮಗೆ ಸಹಾಯಮಾಡುತ್ತದೆ.

**ಧರ್ಮೋಪದೇಶಕಾಂಡ ಉತ್ತರಗಳು 5: ಧರ್ಮಶಾಸ್ತ್ರ**

**ಇ. ಪ್ರಶ್ನೆಗಳಿಗೆ ಉತ್ತರಗಳು**

1. ಧರ್ಮೋ. 4:1-14 ಮತ್ತು 7:6-16 ರಿಂದ ನಾವು "ಧರ್ಮಶಾಸ್ತ್ರ"(ಥೋರಾ)ದ ಅರ್ಥದ ಕುರಿತು ಇದನ್ನು ಕಲಿಯುತ್ತೇವೆ:

    ಅ. ಧರ್ಮಶಾಸ್ತ್ರವನ್ನು ಕೈಗೊಂಡು ಜೀವಿಸುವ ಕಾರ್ಯವು ಇಸ್ರಾಯೇಲ್ಯರ ಭವಿಷ್ಯದ ಜೀವಿತದ ಮೇಲೆ ಸಕರಾತ್ಮಕವಾದ ಪ್ರಯೋಗಿಕ ಪರಿಣಾಮವನ್ನುಂಟುಮಾಡುತ್ತದೆ: ಅವರು ವಾಗ್ದಾನ ದೇಶವನ್ನು ವಶಪಡಿಸಿಕೊಂಡು ಅಲ್ಲಿ ಜೀವಿಸುವರು (4:1). ಅವರು ಆ ದೇಶದಲ್ಲಿ ಆಶೀರ್ವದಿಸಲ್ಪಟ್ಟು ಸಮೃದ್ಧಿಯಿಂದ ಇರುವರು (7:12-16)

    ಆ. ಧರ್ಮಶಾಸ್ತ್ರವು ಪ್ರಾಯೋಗಿಕವಾಗಿ ತೊಡಕಿಸುವಂತದ್ದು. ಹೊಸದೇಶದಲ್ಲಿ ತಮ್ಮ ಜೀವಿತವನ್ನು ನಡೆಸಲು ಇಸ್ರಾಯೇಲ್ಯರು ಇದನ್ನು ಪ್ರತಿದಿನ ಅನುಸರಿಸುವಂತವರಾಗಿದ್ದರು (4:5, 9, 14)

    ಇ. ಇದನ್ನು ಇಸ್ರಾಯೇಲ್ಯರು ತಮ್ಮ ಜೀವಿತದಲ್ಲಿ ಅನುಸರಿಸುವುದರಲ್ಲಿ ವಿಫಲರಾದರೆ ಪ್ರಾಯೋಗಿಕವಾಗಿ ಅಶುಭಕಾರ್ಯಗಳ ಪರಿಣಾಮವನ್ನು ಎದುರಿಸಬೇಕಾಗಿತ್ತು (7:10).

    ಈ. ಇಸ್ರಾಯೇಲ್ಯರಿಗೆ ಧರ್ಮಶಾಸ್ತ್ರವನ್ನು ಪಾಲಿಸುವಂತಹದ್ದು "ಪರಿಶುದ್ಧತೆಯ" ಸಂಕೇತವಾಗಿತ್ತು. ಅವರು ಬೇರೆ ಅನ್ಯದೇಶಗಳಿಗಿಂತ ವ್ಯತ್ಯಾಸವುಳ್ಳವರಾಗಿದ್ದರು. ಅವರು ಬೇರೆ ಅನ್ಯದೇಶಿಗರು ಪಾಲಿಸುವ ಜೀವಿತದ ಕ್ರಮಗಳನ್ನು ಎಂದಿಗೂ ಪಾಲಿಸುವ ಹಾಗಿದ್ದಿಲ್ಲ (7:6, 16).

    ಉ. ಇಸ್ರಾಯೇಲ್ಯರು ಧರ್ಮಶಾಸ್ತ್ರವನ್ನು ಪಾಲಿಸುವ ಕಾರ್ಯವು ಅವರಿಗೆ ಜ್ಞಾನ ಮತ್ತು ತಿಳುವಳಿಕೆ ಇದೆ ಎಂಬುದನ್ನು ತೋರಿಸುತ್ತದೆ (4:6).

    ಊ. ಇಸ್ರಾಯೇಲ್ಯರು ಧರ್ಮಶಾಸ್ತ್ರವನ್ನು ಪಾಲಿಸುವಂತಹದ್ದು ರಾಷ್ಟ್ರಗಳಿಗೆ ಸಕರಾತ್ಮಕವಾದ ಸಾಕ್ಷಿಯನ್ನುಂಟು ಮಾಡುತ್ತದೆ (4:6-7).

2. ಧರ್ಮೋ. 4:1-14 ರಿಂದ ನಾವು ಇಸ್ರಾಯೇಲ್ಯರು ಮತ್ತು ಕರ್ತನ ಮಧ್ಯದಲ್ಲಿರುವ ಸಂಬಂಧಕ್ಕೆ ಧರ್ಮಶಾಸ್ತ್ರವು ಸಕಾರಾತ್ಮಕವಾದ ಪಾತ್ರವನ್ನು ನಿರ್ವಹಿಸುತ್ತದೆ ಎಂಬುದನ್ನು ಕಲಿಯುತ್ತೇವೆ:

    ಅ. ದೇವರು ತನ್ನ ಜನರಿಗೆ ಸಮೀಪವಾಗಿಯೇ ಇದ್ದಾನೆಂಬುದನ್ನು ಧರ್ಮಶಾಸ್ತ್ರವು ತೋರಿಸುತ್ತದೆ (4:7).

    ಆ. ದೇವರು ತನ್ನ ಜನರ ಮೊರೆಯನ್ನು ಲಾಲಿಸುತ್ತಾನೆಂದು ಧರ್ಮಶಾಸ್ತ್ರವು ತೋರಿಸುತ್ತದೆ (4:7)

    ಇ. ಇಸ್ರಾಯೇಲ್ಯರು ಧರ್ಮಶಾಸ್ತ್ರವನ್ನು ಪಾಲಿಸುವಂತಹದ್ದು ದೇವರ ನೀತಿವಂತಿಕೆಯನ್ನು ಸಾಕ್ಷಿಕರಿಸುತ್ತದೆ (4:2).

    ಈ. ಇಸ್ರಾಯೇಲ್ಯರು ಧರ್ಮಶಾಸ್ತ್ರವನ್ನು ಪಾಲಿಸುವಂತಹದ್ದು ತನ್ನ ಜನರ ಕುರಿತು ದೇವರು ಇಟ್ಟಿರುವ ನಂಬಿಗಸ್ಥಿಕೆಯ ಪ್ರೀತಿಯನ್ನು ಸಾಕ್ಷಿಕರಿಸುತ್ತದೆ.

    ಉ. ಇಸ್ರಾಯೇಲ್ಯರು ಧರ್ಮಶಾಸ್ತ್ರವನ್ನು ಪಾಲಿಸುವಂತಹದ್ದು ದೇವರ ಬಿಡುಗಡೆಯ ಬಲವನ್ನು ಸಾಕ್ಷಿಕರಿಸುತ್ತದೆ (4:9).

    ಊ. ಧರ್ಮಶಾಸ್ತ್ರವು ತಲತಲಾಂತರದಿಂದಲೂ ದೇವರು ಮತ್ತು ತನ್ನ ಜನರ ಮಧ್ಯದಲ್ಲಿರುವ ಒಡಂಬಡಿಕೆಯ ನಿರಂತರತೆಯನ್ನು ಸಾಕ್ಷಿಕರಿಸುತ್ತದೆ (4:10, 7:9).

ಋ. ಇಸ್ರಾಯೇಲ್ಯರು ಧರ್ಮಶಾಸ್ತ್ರವನ್ನು ಪಾಲಿಸುವಂತಹದ್ದು ಅವರು ಒಡಂಬಡಿಕೆಯನ್ನು ತಮ್ಮ ಜವಾಬ್ದಾರಿಯ ನೆರವೇರಿಕೆಯನ್ನು ತೋರಿಸುವಂತಹದ್ದಾಗಿದೆ (7:11).

3. ಧರ್ಮಶಾಸ್ತ್ರವು ಇಸ್ರಾಯೇಲ್ಯರ ಸಮುದಾಯದ ರಾಷ್ಟ್ರಕ್ಕೆ ಮಾತ್ರ ಅನ್ವಯಿಸುವುದಿಲ್ಲ. ಇದು ವೈಯಕ್ತಿಕವಾಗಿಯೂ ಸಹ ಅನ್ವಯಿಸುತ್ತದೆ. ಧರ್ಮೋ. 6:20-25 ರಲ್ಲಿ ಇದನ್ನು ನಾವು ನೋಡಬಹುದು: ಧರ್ಮಶಾಸ್ತ್ರದ ಮಹತ್ವದ ಕುರಿತು ತನ್ನ ಮಕ್ಕಳು ಕೇಳುವ ಪ್ರಶ್ನೆಗಳಿಗೆ ಪ್ರತಿಕುಟುಂಬದಲ್ಲಿ ತಂದೆಗಳು ಉತ್ತರವನ್ನು ಕೊಡಲೇಬೇಕು (ಕನ್ನಡ ತುರ್ಜುಮೆಯಾದ ಕೆ.ಜೆ.ವಿ ಸತ್ಯವೇದದಲ್ಲಿ ಮಗ ಅನ್ನುವ ಬದಲಾಗಿ ಮಕ್ಕಳು ಎಂದು ಉಪಯೋಗಿಸಲ್ಪಟ್ಟಿದೆ). ತಲತಲಾಂತರದಲ್ಲಿ ಮತ್ತು ಪ್ರಸ್ತುತದಲ್ಲಿ ಪ್ರತಿ ಇಸ್ರಾಯೇಲ್ಯರ ವೈಯಕ್ತಿಕ ಜೀವಿತಕ್ಕೆ ಸಂಬಂಧಪಟ್ಟಂತೆ ಸೀನಾಯ್ ಪರ್ವತದಲ್ಲಿ ಇಸ್ರಾಯೇಲ್ಯರಿಗೆ ಐತಿಹಾಸಿಕವಾಗಿಯೂ ಮತ್ತು ಸಮುದಾಯಿಕವಾಗಿಯೂ ಏನು ಸಂಭವಿಸಿತು ಎಂಬುದನ್ನು ಧರ್ಮೋಪದೇಶಕಾಂಡವು ತಿಳಿಸುತ್ತದೆ.

4. ಧರ್ಮೋ. 6:20-25 ವು ಪ್ರಸ್ತುತ ಮತ್ತು ಭೂತಕಾಲದ ಮಧ್ಯದಲ್ಲಿ ಸಂಬಂಧವನ್ನು ಕಲ್ಪಿಸುತ್ತದೆ: ಐಗುಪ್ತದ ಗುಲಾಮಗಿರಿಯಿಂದ ಇಸ್ರಾಯೇಲ್ಯರನ್ನು ಬಿಡಿಸುವ ದೇವರ ಕಾರ್ಯವು ಧರ್ಮಶಾಸ್ತ್ರದ ಮಹತ್ವದ ಕೊಂಡಿಯಾಗಿದೆ. ಅಂದರೆ ದೇವರು ಇಸ್ರಾಯೇಲ್ಯರೊಂದಿಗೆ ಮಾಡಿಕೊಂಡ ಒಡಂಬಡಿಕೆಯು ದೇವರ ಪ್ರೀತಿ ಮತ್ತು ಕೃಪೆಯನ್ನು ತೋರಿಸುತ್ತದೆ. ಧರ್ಮಶಾಸ್ತ್ರವು ಕೃಪೆಯ ಹಿನ್ನಲೆಯಲ್ಲಿ ಕಾರ್ಯವನ್ನು ನಿರ್ವಹಿಸುತ್ತದೆ. ಮೊದಲ ಬಿಡುಗಡೆಯು ಅನುಭವಿಸಲ್ಪಟ್ಟಿದೆ. ನಂತರದಲ್ಲಿ ಮಾತ್ರ ಧರ್ಮಶಾಸ್ತ್ರದ ಷರತ್ತು ಹೊರಗಡೆ ನಡೆಸುವುದು. ಪಂಚಕಾಂಡದಲ್ಲಿ ವ್ಯಕ್ತಪಡಿಸಿದ 'ಥೋರಾ'ದ ನಿಜ ಸ್ವರೂಪ ಇದಾಗಿದೆ. ಇದು ನಂತರದ ಸಂಕುಚಿತ ಮನೋಭಾವವುಳ್ಳ ಯೆಹೂದ್ಯ ನಿಮದಲ್ಲಿರುವ ಸದ್ಗುಣಭ್ರಷ್ಟರ ವಿಧಿಗಳಿಗಿಂತ ಬಹಳ ವ್ಯತ್ಯಾಸವುಳ್ಳದ್ದು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –

2. –

3. ಹೊಸ ಒಡಂಬಡಿಕೆಯ "ಕೃಪೆ" ಮತ್ತು "ಧರ್ಮಶಾಸ್ತ್ರ"ದ ಸ್ಥಾನದ ಹತ್ತಿರದಲ್ಲೇ "ಥೋರಾ"(ಧರ್ಮಶಾಸ್ತ್ರ)ದ ನಿಜವಾದ ಅರ್ಥವು ಈ ರೀತಿಯಾಗಿದೆ. ಇಸ್ರಾಯೇಲ್ಯರಿಗೆ ಧರ್ಮಶಾಸ್ತ್ರವು ಕೃಪೆಯ ಚೌಕಟ್ಟಿನಲ್ಲಿಯೇ ಕಾರ್ಯನಿರ್ವಹಿಸಬೇಕೆಂಬುದು. ಐಗುಪ್ತದಲ್ಲಿದ್ದ ಗುಲಾಮಗಿರಿಯಿಂದ ದೇವರ ಕೃಪೆಯೇ ಅವರನ್ನು ಬಿಡುಗಡೆಗೊಳಿಸಿದ್ದು. ದೇವರ ಒಡಂಬಡಿಕೆಯು ಅವರನ್ನು ಸಿನಾಯ್ ಬೆಟ್ಟದಲ್ಲಿನ ಒಡಂಬಡಿಕೆಗೆ ನಡೆಸಿತು. ಇಸ್ರಾಯೇಲ್ಯರು ಒಡಂಬಡಿಕೆಗೆ ತಮ್ಮ ಪಾತ್ರವನ್ನು ಹೇಗೆ ನೆರವೇರಿಸುತ್ತಿದ್ದರೋ ಹಾಗೆ ಧರ್ಮಶಾಸ್ತ್ರದ ಕರಾರುಗಳು ಮುಂದುವರೆಯುತ್ತಿದ್ದವು. ಅದರಂತೆ ಅವರು ದೇವರ ಬಿಡುಗಡೆಯುಳ್ಳ ಕಾರ್ಯದಿಂದ ಪ್ರತ್ಯೇಕವಾದರೆ ಧರ್ಮಶಾಸ್ತ್ರದ ಕರಾರುಗಳ ಮುಂದುವರಿಯುವಿಕೆಯು ಯಾವುದೇ ಉದ್ದೇಶಗಳನ್ನು ನೆರವೇರಿಸುವುದಿಲ್ಲ. ಇದೇ ರೀತಿಯಾಗಿ ಹೊಸ ಒಡಂಬಡಿಕೆಯ ದೈವಶಾಸ್ತ್ರವು ಸುವಾರ್ತೆಯನ್ನು (ದೇವರ ರಕ್ಷಣೆಯ, ದೇವರ ಬಿಡುಗಡೆಯ, ದೇವರ ಕೃಪೆಯ ಕುರಿತ ಶುಭಸಂದೇಶ) ಮತ್ತು ಧರ್ಮಶಾಸ್ತ್ರ (ಯೇಸು ಕ್ರಿಸ್ತನು ಕಲ್ವಾರಿ ಕ್ರೂಜೆಯಲ್ಲಿ ಸಾಯುವುದರ ಮೂಲಕ ನೆರವೇರಿತು ಎಂದು ಹೊಸ ಒಡಂಬಡಿಕೆಯು ಬೋಧಿಸುತ್ತದೆ) ಗಳೆರಡನ್ನ ಒಳಗೊಂಡಿವೆ.

4. ಕ್ರೈಸ್ತವಿಶ್ವಾಸಿಗಳ 'ಪರಿಶುದ್ಧ ಜೀವಿತ' ಎಂಬ ಹೇಳಿಕೆಯು ಕೃಪೆಯ ಹಿನ್ನಲೆಯಲ್ಲಿ ಮಾತ್ರ ಸ್ಥಾನವನ್ನು ಪಡೆಯುತ್ತದೆ, ಅದನ್ನು ಈ ರೀತಿಯಾಗಿ ವಿವರಿಸಬಹುದು:

ಅ. ದೇವರು ಕ್ರೂಜೆಯಲ್ಲಿ ಯೇಸು ಕ್ರಿಸ್ತನ ಮರಣದ ಮೂಲಕ ಏನು ಮಾಡಿದ್ದಾನೋ ಅದು ದೈವಿಕ ಕೃಪೆಯ ಕಾರ್ಯವಾಗಿದೆ: "ಆದರೆ ನಾನು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ" (ರೋಮ 5:8).

ಆ. ಕ್ರೈಸ್ತೀಯ ಪರಿಶುದ್ಧ ಜೀವಿತದ ಸಂಪನ್ಮೂಲವು ಕ್ರೂಜೆಯಲ್ಲಿ ಮರಣ ಹೊಂದಿದ ಯೇಸುವಾಗಿದ್ದಾನೆ: "ಆತನು ಅದನ್ನು ಪ್ರತಿಷ್ಠೆಪಡಿಸುವುದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು (ಎಫೆಸ 5:26-27). ಕ್ರೂಜೆಯಲ್ಲಿ ಯೇಸು ಮರಣವನ್ನು ಹೊಂದುವುದರ ಮೂಲಕ ಮುಗಿಸಿದ ಕಾರ್ಯವನ್ನು ಹೊರತುಪಡಿಸಿ ಬೇರೆ ಎಲ್ಲಿಯೂ ನಿಜವಾದ ಪರಿಶುದ್ಧತೆ ಸಿಗುವುದಿಲ್ಲ.

ಇ. ನಾವು ಪವಿತ್ರರಾಗಿ ಜೀವಿಸಬೇಕೆಂದು ಯೇಸು ಕ್ರಿಸ್ತನಲ್ಲಿ ನಮ್ಮನ್ನು ಕರೆದಿರುವುದು ದೇವರ ಕೃಪೆ ಮತ್ತು ಉದ್ದೇಶವಾಗಿದೆ (2 ತಿಮೊ 1:8-9).

ಈ. ನಾವು ದೇವರ ಕೃಪೆಯ ರಕ್ಷಣೆಯಲ್ಲಿ ಜೀವಿಸುವಾಗ ಪವಿತ್ರಾತ್ಮನು ನಮ್ಮಲ್ಲಿ ಕಾರ್ಯವನ್ನು ನಿರ್ವಹಿಸುತ್ತಾನೆ ಮತ್ತು ನಮ್ಮನ್ನು ಮಾರ್ಪಡಿಸುತ್ತಾನೆ. "ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸ್ವಾರೂಪ್ಯವುಳ್ಳವರೇ ಆಗುತ್ತವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ" (2 ಕೊರಿ. 3:18). ನಮ್ಮ ಜೀವಿತದಲ್ಲಿ ಕಾರ್ಯ ಮಾಡುತ್ತಿರುವ ದೇವರ ಕೃಪೆಯ ಫಲಿತಾಂಶವೇ ಈ ಪರಿವರ್ತನೆಯಾಗಿದೆ (ಫಿಲಿ 2:3).

ಉ. ಉಪಸಂಹಾರ: ಯೇಸು ಕ್ರಿಸ್ತನಲ್ಲಿರುವ ದೇವರ ಕೃಪೆಯನ್ನು ನಾವು ಎಷ್ಟು ಆಳವಾಗಿ ಅರ್ಥೈಸಿಕೊಳ್ಳುತ್ತೇವೋ ಅಷ್ಟು ಬಲವಾಗಿ ನಾವು ಪರಿಶುದ್ಧ ಜೀವಿತದಲ್ಲಿ ಜೀವಿಸಲು ಉತ್ತೇಜನವನ್ನು ಹೊಂದುತ್ತೇವೆ. ನಮ್ಮ ಜೀವಿತವನ್ನು ನಿಯಂತ್ರಿಸಲು ಪವಿತ್ರಾತ್ಮನ ಕೃಪೆಗೆ ಹೆಚ್ಚು ಅವಕಾಶಕೊಟ್ಟಂತೆ (ಇಬ್ರಿಯ 10:29). ನಾವು ಯೇಸುವಿನ ಬರೋಣದ ದಿನದಲ್ಲಿ ಆತನಂತೆ ಮಾರ್ಪಟನ್ನು ಹೊಂದುತ್ತೇವೆ. ಕ್ರೈಸ್ತೀಯ ಪವಿತ್ರಜೀವಿತವು ಕೃಪೆಯ ಹಿನ್ನಲೆಯಲ್ಲಿ ಮಾತ್ರ ಕಾರ್ಯವನ್ನು ನಿರ್ವಹಿಸುವಂತಹದ್ದು.

## ಧರ್ಮೋಪದೇಶಕಾಂಡ ಉತ್ತರಗಳು 6: ಪ್ರೀತಿ

### ಇ. ಪ್ರಶ್ನೆಗಳಿಗೆ ಉತ್ತರಗಳು

1. ಧರ್ಮೋ. 4:35-41 ಮತ್ತು 7:7-9 ರಿಂದ ಇಸ್ರಾಯೇಲ್ಯರ ಬಗ್ಗೆ ದೇವರಿಗಿದ್ದ ಪ್ರೀತಿಯ ಕುರಿತು ಇವುಗಳನ್ನು ನಾವು ಕಲಿಯಬಹುದು:

   ಅ. ದೇವರು ಇಸ್ರಾಯೇಲ್ಯರ ಪಿತೃಗಳ ಮೇಲೆ ಇಟ್ಟ ಪ್ರೀತಿಯ ಕಾರಣದಿಂದಲೇ ಐಗುಪ್ತದ ಬಂಧನದಲ್ಲಿದ್ದ ಇಸ್ರಾಯೇಲ್ಯರನ್ನು ಬಿಡಿಸುವಾಗ ತನ್ನ ಬಲವನ್ನು ಮತ್ತು ಪ್ರಸನ್ನತೆಯನ್ನು ಇದರ ನಿಮಿತ್ತದಿಂದಲೇ ಪ್ರಕಟಿಸಿಕೊಂಡನು (4:37; 7:8). ಆತನು ಇಸ್ರಾಯೇಲ್ಯರಿಗೆ ತಮ್ಮ ಸ್ವಾಸ್ಥ್ಯವಾದ ವಾಗ್ದಾನದೇಶವನ್ನು ಕೊಡಲಿಕ್ಕೆ ಅವರನ್ನು ನಡೆಸುತ್ತಿರುವಾಗ ಅವರ ಮುಂದೆ ಬಂದ ಬಲಿಷ್ಠ ಮತ್ತು ದೊಡ್ಡ ರಾಷ್ಟ್ರಗಳನ್ನೆಲ್ಲಾ ಅವರ ಮುಂದುಗಡೆಯಿಂದ ತೊಲಗಿಸಿಬಿಟ್ಟನು (4:38).

   ಆ. ಇಸ್ರಾಯೇಲ್ಯರು ದೇವರ ಪ್ರೀತಿಗೆ ಅರ್ಹರಾಗಿದ್ದಿಲ್ಲ (7:7), ಅಥವಾ ಇದನ್ನು ಬೇರೆ ರೀತಿಯಾಗಿ ಹೇಳಬಹುದು: ದೇವರ ಪ್ರೀತಿಯು ಅವರ ಕೃಪೆಯ ಶೈಲಿಯಾಗಿದೆ.

   ಇ. ದೇವರ ಒಡಂಬಡಿಕೆಯು ಪ್ರೀತಿಯ ಒಡಂಬಡಿಕೆಯಾಗಿದೆ (7:9).

   ಈ. ದೇವರ ಒಡಂಬಡಿಕೆಯ ಪ್ರೀತಿಯು ಎಲ್ಲಾ ಸಂತತಿಗೆ ನಂಬಿಗಸ್ಥವಾಗಿ ವಿಸ್ತರಿಸಲ್ಪಡುವಂತಹದ್ದು (7:9).

2. ಆ-2 ರಲ್ಲಿ ಕಂಡುಬರುವ ವಾಕ್ಯಭಾಗಗಳಿಂದ ದೇವರ ಬಗ್ಗೆ ಇಸ್ರಾಯೇಲ್ಯರಿಗೆ ಇದ್ದ ಪ್ರೀತಿಯ ಕುರಿತು ನಾವು ಈ ಅಂಶಗಳನ್ನು ಕಲಿಯಬಹುದು:

   ಅ. ತನ್ನ ನಂಬಿಗಸ್ಥ ಪ್ರೀತಿಗೆ ಪ್ರತಿಕ್ರಯಿಸುವ ರೀತಿಯಾಗಿ ಇಸ್ರಾಯೇಲ್ಯರು ಆತನ ಆಜ್ಞೆಗಳನ್ನು ಕೈಗೊಂಡು ಆತನನ್ನು ಪ್ರೀತಿಸುತ್ತಾ ಜೀವಿಸಬೇಕೆಂಬುದಾಗಿ ದೇವರು ನಿರೀಕ್ಷಿಸುತ್ತಾನೆ (6:4-9).

   ಆ. ದೇವರ ಮೇಲೆ ಇಸ್ರಾಯೇಲ್ಯರಿಗಿರುವ ಪ್ರೀತಿಯು ಯಾವಾಗಲೂ ಆತನ ಆಜ್ಞಾವಿಧಿಗಳನ್ನು ಮತ್ತು ಆಜ್ಞೆಗಳನ್ನು ಕೈಗೊಂಡು ನಡೆಯುವದರೊಂದಿಗೆ ಸಂಬಂಧವನ್ನು ಹೊಂದಿದೆ (11:1).

   ಇ. "ನಿಮ್ಮ ಕರ್ತನಾದ ದೇವರನ್ನು ಪ್ರೀತಿಸುವಂತಹದ್ದು" "ನಿಮ್ಮ ಪೂರ್ಣಹೃದಯದಿಂದಲೂ ಮತ್ತು ನಿಮ್ಮ ಪೂರ್ಣಪ್ರಾಣದಿಂದಲೂ ಆತನನ್ನು ಸೇವಿಸುವುದರೊಂದಿಗೆ" ಸಂಬಂಧವನ್ನು ಹೊಂದಿದೆ. 'ಆತನನ್ನು ಪ್ರೀತಿಸಿ ಸೇವಿಸುವಂತಹದ್ದು' "ನಂಬಿಗಸ್ಥರಾಗಿ ದೇವರ ಆಜ್ಞೆಗಳಿಗೆ ವಿಧೇಯರಾಗುವುದರ" ಸಮಾನಾರ್ಥಕವಾಗಿದೆ (11:13).

   ಈ. "ದೇವರನ್ನು ಪ್ರೀತಿಸುವಂತಹದ್ದು" ಆತನೊಬ್ಬನನ್ನೇ ಹೊಂದಿಕೊಂಡು ಆತನ ಮಾರ್ಗದಲ್ಲಿ ಜೀವಿಸುವುದರೊಂದಿಗೆ ಸಂಬಂಧವನ್ನು ಹೊಂದಿದೆ ಮತ್ತು ಈ ಮೂರು ಪದವಿನ್ಯಾಸಗಳು "ದೇವರ ಎಲ್ಲಾ ಆಜ್ಞೆಗಳನ್ನು ಪಾಲಿಸುವುದರ ಸಮಾನಾರ್ಥಕವಾಗಿದೆ" (11:22).

   ಉ. "ಪೂರ್ಣಹೃದಯದಿಂದಲೂ ಮತ್ತು ಪೂರ್ಣಪ್ರಾಣದಿಂದಲೂ ದೇವರನ್ನು ಪ್ರೀತಿಸುವುದೆಂದರೆ" ಬೇರೆ ದೇವರುಗಳನ್ನು ಸೇವಿಸದೆ ಆತನಿಗೆ ಭಯಭಕ್ತಿಯಿಂದ ಸೇವಿಸುತ್ತಾ ಆತನನೊಬ್ಬನನ್ನೇ ಹಿಂಬಾಲಿಸುವುದೆಂದರ್ಥ. ದೇವರನ್ನು ಪ್ರೀತಿಸುತ್ತಾ ಆತನನ್ನು ಭಯಭಕ್ತಿಯಿಂದ ಸೇವಿಸುವಂತಹದ್ದು "ಆತನನ್ನು ಮಾತ್ರ ಸೇವಿಸುತ್ತಾ, ಆತನಿಗೆ ವಿಧೇಯರಾಗುತ್ತಾ, ಆತನ ಎಲ್ಲಾ ಆಜ್ಞೆಗಳನ್ನು ಪಾಲಿಸುವುದರೊಂದಿಗೆ ಸಂಬಂಧವನ್ನು ಹೊಂದಿದೆ (13:2-4).

ಊ. “ನಿನ್ನ ದೇವರಾದ ಕರ್ತನನ್ನು ಪ್ರೀತಿಸುತ್ತಾ ಆತನ ಮಾರ್ಗದಲ್ಲಿ ಯಾವಾಗಲೂ ನಡೆಯುವಂತಹದ್ದು ದೇವರ ಆಜ್ಞೆಗಳನ್ನು ಗಮನವಾಗಿಟ್ಟುಕೊಂಡು ಹಿಂಬಾಲಿಸುವುದರೊಂದಿಗಿನ ಸಮಾನಾರ್ಥಕವಾಗಿದೆ (19:9).

ಋ. “ನಿನ್ನ ದೇವರಾದ ಕರ್ತನನ್ನು ಪ್ರೀತಿಸುತ್ತಾ ಇರುವುದು “ಆತನ ಆಜ್ಞಾವಿಧಿಗಳನ್ನು ಮತ್ತು ಆಜ್ಞೆಗಳನ್ನು ಪಾಲಿಸುತ್ತಾ ಆತನ ಮಾರ್ಗದಲ್ಲಿ ನಡೆಯುವುದರೊಂದಿಗೆ ಸಂಯೋಜನೆಗೊಂಡಿದೆ (30:16).

ಎ. ನಿನ್ನ ದೇವರಾದ ಕರ್ತನನ್ನು ಪ್ರೀತಿಸುವುದು “ಆತನನ್ನು ಹೊಂದಿಕೊಂಡು ಆತನ ಸ್ವರಕ್ಕೆ ವಿಧೇಯರಾಗುವುದರೊಂದಿಗೆ ಸಂಯೋಜನಗೊಂಡಿದೆ (30:20).

3. ಧರ್ಮೋ. 10:12-13 ರಲ್ಲಿ “ಪ್ರೀತಿ” ಮತ್ತು “ಭಯ” ಗಳ ಮಧ್ಯದಲ್ಲಿ ಈ ರೀತಿಯಾದ ಸಂಬಂಧಗಳನ್ನು ಹೊಂದಿವೆ: ತನ್ನ ಜನರು ತನ್ನಲ್ಲಿ ಭಯಭಕ್ತಿಯುಳ್ಳವರಾಗಿರಬೇಕೆಂದು ದೇವರು ಹೇಳಿದನು ಮತ್ತು ಅವರು ಆತನನ್ನು ಪ್ರೀತಿಸುತ್ತಾ ಆತನ ಆಜ್ಞಾವಿಧಿಗಳನ್ನು ಪಾಲಿಸುತ್ತಾ, ಪೂರ್ಣಹೃದಯದಿಂದಲೂ ಮತ್ತು ಪೂರ್ಣಪ್ರಾಣದಿಂದಲೂ ಆತನನ್ನು ಸೇವಿಸುತ್ತಾ ಆತನ ಮಾರ್ಗಗಳಲ್ಲಿ ನಡೆಯಬೇಕೆಂದು ಬಯಸುತ್ತಾನೆ. ಈ ವಾಕ್ಯಭಾಗದಲ್ಲಿರುವ “ಭಯ” ಮತ್ತು “ಪ್ರೀತಿಯು” ಬಹುಮಟ್ಟಿಗೆ ಒಂದೇ ಸಮಾನಾರ್ಥಕವಾಗವೆ ಎಂದು ಕಾಣುತ್ತದೆ. ಅವುಗಳು ಒಂದಕ್ಕೊಂದು ಹೇಗೆ ಸಂಬಂಧವನ್ನು ಹೊಂದಿವೆ ಎಂಬುದನ್ನು ನಾವು ರೀತಿಯಾಗಿ ಅರ್ಥಮಾಡಿಕೊಳ್ಳತಕ್ಕದ್ದು:

ಅ. “ಭಯ” ಅನ್ನುವುದು ಸರಿಯಾದ ರೀತಿಯಲ್ಲಿ “ದೇವರಿಗೆ” ತೋರುವ ಮನೋವೃತ್ತಿಯಾಗಿದೆ. ಸಿನಾಯ್ ಪರ್ವತದಲ್ಲಿ ದೇವರು ತನ್ನ ಪವಿತ್ರತೆಯನ್ನು ಬಹೀರಂಗಪಡಿಸಿದನು ಮತ್ತು ಇಸ್ರಾಯೇಲ್ಯರು ಆತನ ಪರಿಶುದ್ಧತೆಗೆ ಭಯಭಕ್ತಿಯಿಂದಲೂ ಮತ್ತು ಗೌರವದಿಂದಲೂ ಪ್ರತಿಕ್ರಿಯಿಸಿದರು. ಪಾಪದಿಂದ ತುಂಬಲ್ಪಟ್ಟ ಮನುಷ್ಯನು ದೇವರಿಗೆ ಭಯಪಡುವವನಾಗಿರುತ್ತಾನೆ. ಯಾಕೆಂದರೆ ಆತನು ಪರಿಶುದ್ಧನಾಗಿದ್ದಾನೆ.

ಆ. ದೇವರು ತಾನು ಏನು ಮಾಡಿದ್ದಾನೋ ಅದಕ್ಕೆ ಪ್ರೀತಿಯು ಸರಿಯಾದ ಪ್ರತಿಕ್ರಿಯೆಯಾಗಿದೆ. ಐಗುಪ್ತದ ಬಂಧನದಲ್ಲಿದ್ದ ಇಸ್ರಾಯೇಲ್ಯರನ್ನು ದೇವರು ತನ್ನ ದಯೆಯುಳ್ಳ ಕರುಣೆಯಿಂದ ಅವರನ್ನು ಬಿಡಿಸಿದನು. ಮತ್ತು ಸಿನಾಯ್ ಪರ್ವತದಲ್ಲಿ ಅವರೊಂದಿಗೆ ದೇವರು ಒಡಂಬಡಿಕೆಯನ್ನು ಮಾಡಿಕೊಂಡಾಗ ತನ್ನ ದಯೆಯುಳ್ಳ ಕರುಣೆಯನ್ನು ತೋರಿಸಿದನು. ದೇವರು ತನ್ನ ಜನರಿಗಾಗಿ ಏನನ್ನು ಮಾಡಿದ್ದಾನೋ ಮತ್ತು ಅವರೊಂದಿಗೆ ಆತನು ಇರುವುದರಿಂದ ಅವರು ಆತನನ್ನು ಪ್ರೀತಿಸಬೇಕೆಂದು ಬಯಸುತ್ತಾನೆ.

ಇ. ದೇವರನ್ನು ಪ್ರೀತಿಸುವುದರ ಫವಿತಾಂಶವು ಒಳ್ಳೆಯ ಕಾರ್ಯದಲ್ಲಿ ಇರುವಂತೆ, ದೇವರಲ್ಲಿ ನಂಬಿಕೆ ಇಡುವುದರ ಫಲಿತಾಂಶವು ದೇವರಿಗೆ ಭಯಪಡುವುದರಲ್ಲಿದೆ ಎಂಬುದಾಗಿ ಅರ್ಥೈಸಿಕೊಳ್ಳತಕ್ಕದ್ದು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –
2. –
3. –

**ಧರ್ಮೋಪದೇಶಕಾಂಡ ಉತ್ತರಗಳು 7: ಯುದ್ಧ**

**ಇ. ಪ್ರಶ್ನೆಗಳಿಗೆ ಉತ್ತರಗಳು**

1. ಧರ್ಮೋ. 1:26-31 ರಲ್ಲಿ ಯುದ್ಧದ ಕುರಿತು ನಾವು ಇವುಗಳನ್ನು ಕಲಿಯುತ್ತೇವೆ (ಧರ್ಮೋ. 20:1-4ನ್ನು ಸಹ ನೋಡಿರಿ).

   ಅ. ಯುದ್ಧದ ಮಾದರಿಯು ವಿಮೋಚನಕಾಂಡ ಘಟನೆಯಿಂದ ತೆಗೆದುಕೊಂಡಿದೆ. ದೇವರು ತನ್ನ ಜನರಿಗಾಗಿ ಮಾಡಿದಂತಹ ಯುದ್ಧವು ಇದಾಗಿದೆ.

   ಆ. ಯುದ್ಧವು ದೇವರು ತನ್ನ ಜನರಿಗೆ ತೋರುವ ಪ್ರೀತಿ ಮತ್ತು ಕಾಳಜಿಯನ್ನು ತೋರಿಸುವ ಒಂದು ಪದವಿನ್ಯಾಸವಾಗಿದೆ.

2. ಧರ್ಮೋ. 1:41-46 ರಲ್ಲಿ ಯುದ್ಧದ ಕುರಿತು ನಾವು ಇವುಗಳನ್ನು ಕಲಿಯುತ್ತೇವೆ (ಧರ್ಮೋ. 20:1-4ನ್ನು ಸಹ ನೋಡಿರಿ).

   ಅ. ಯುದ್ಧವು ದೇವರ ಚಿತ್ತ ಮತ್ತು ಯೋಜನೆಯನುಸಾರ ಇರಬೇಕಾಗಿದೆ. ತನ್ನ ಜನರು ಅವರ ವೈರಿಗಳ ವಿರುದ್ಧ ಮಾಡುವ ಯುದ್ಧದಲ್ಲಿ ಅವರೊಂದಿಗೆ ದೇವರು ಇರುತ್ತಾನೆ, ಆತನು ಮಾತ್ರ ಎಲ್ಲದರ ಮೇಲೆ ನಿಯಂತ್ರಣದಲ್ಲಿರುತ್ತಾನೆ.

   ಆ. ಆದುದ್ದರಿಂದ ಯುದ್ಧವು ವಿಧೇಯತೆಯನ್ನು ಅಪೇಕ್ಷಿಸುತ್ತದೆ, ಹೊರತು ಮೊಂಡರಾಗಿ ದಂಗೆ ಏಳುವುದನ್ನಲ್ಲ. ದೇವ ಜನರು ದೇವರ ಪ್ರಸನ್ನತೆಯಲ್ಲಿ ನಮ್ರತೆಯಿಂದ ಒಪ್ಪಿಕೊಳ್ಳತಕ್ಕದ್ದು, ಗರ್ವದಿಂದ ಅವರ ಸ್ವಂತ ಬಲ ಮತ್ತು ಕೌಶಲ್ಯವನ್ನು ಆಶ್ರಯಿಸಿಕೊಳ್ಳುವುದಲ್ಲ.

3. ಧರ್ಮೋ. 3:21-22 ರಲ್ಲಿ ಯುದ್ಧದ ಕುರಿತು ನಾವು ಇವುಗಳನ್ನೂ ಕಲಿಯುತ್ತೇವೆ (ಧರ್ಮೋ. 20:1-4ನ್ನು ಸಹ ನೋಡಿರಿ).

   ಅ. ಯುದ್ಧದಲ್ಲಿನ ಜಯವು ಸೈನ್ಯದ ಗಾತ್ರದ ಮೇಲೆ ಅಥವಾ ವೈರಿಯ ಬಲಹೀನತೆಯ ಮೇಲೆ ಆಧಾರವಾಗಿಲ್ಲ.

   ಆ. ದೇವರು ಯುದ್ಧದಲ್ಲಿ ಭಾಗಿಯಾಗಿರುವುದರಿಂದ ಜಯವು ಉಂಟಾಗಿದೆ.

   ಇ. ಇದನ್ನು ಅರ್ಥಮಾಡಿಕೊಳ್ಳುವುದರಿಂದ ವೈರಿಯ ಅಪರಿಮಿತವಾದ ಶಕ್ತಿಯನ್ನು ನೋಡಿದ್ದರಿಂದ ದೇವಜನರ ಮನಸ್ಸಿನಲ್ಲಿ ಬೇರೊಂದು ಭಯವು ತೆಗೆಯಲ್ಪಡುತ್ತದೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –

2. ಹೊಸ ಒಡಂಬಡಿಕೆಯ ಯುದ್ಧ (ಎಫೆಸ. 6:10-18 ಮತ್ತು ಕೊಲೊಸ್ಸೆ. 2:15).

   ಅ. ಹೊಸ ಒಡಂಬಡಿಕೆಯ ಯುದ್ಧವು ಹಳೇ ಒಡಂಬಡಿಕೆಯ ಯುದ್ಧಕ್ಕಿಂತ ವ್ಯತ್ಯಾಸವಾದುದ್ದಾಗಿದೆ. ಇದು ಒಂದು ಆತ್ಮೀಕ ಯುದ್ಧವಾಗಿದೆಯೇ ಹೊರತು ಶಾರೀರಿಕ ಯುದ್ಧವಲ್ಲ. ನಾವು ಹೋರಾಡುವುದು ಮನುಷ್ಯ ಮಾತ್ರದವರ ಸಂಗಡವಲ್ಲ; ರಾಜತ್ವಗಳ ಮೇಲೆಯೂ ಅಧಿಕಾರಿಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶ ಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ (ಎಫೆಸ 6:12).ಹಳೇ ಒಡಂಬಡಿಕೆಯ ಯುದ್ಧಗಳು ಇಸ್ರಾಯೇಲ್ಯರನ್ನು ವಿರೋಧಿಸಿದ್ದ ಭಕ್ತಿಹೀನ ರಾಷ್ಟ್ರಗಳ ವಿರುದ್ಧವಾಗಿತ್ತು.ಹೊಸ ಒಡಂಬಡಿಕೆಯ ಯುದ್ಧವು ಸಭೆ ಮತ್ತು ಸುವಾರ್ತಾ ಸಂದೇಶಕ್ಕೆ ಅಡ್ಡಿಪಡಿಸುವ ದುರಾತ್ಮಸೇನೆಗಳ ವಿರುದ್ಧವಾದುದ್ದಾಗಿದೆ.

ಅ. ಯುದ್ಧದಲ್ಲಿ ಹೋರಾಡುವ ವ್ಯಕ್ತಿಗೆ ಅವಶ್ಯವಾಗಿ ಬೇಕಾಗಿರುವ ಅರ್ಹತೆಗಳು ಎರಡು ಒಡಂಬಡಿಕೆಯಲ್ಲಿ ಒಂದೇಯಾಗಿರುತ್ತದೆ; ಅದೇನೆಂದರೆ ದೇವರ ಮೇಲಿನ ನಂಬಿಕೆ ಮತ್ತು ಆತನನ್ನು ಆತುಕೊಳ್ಳುವಿಕೆ.

ಇ. ಕೊಲೊ. 2:15 ನಮ್ಮನ್ನು ಬೊಧಿಸುವುದೇನೆಂದರೆ, ಹೊಸ ಒಡಂಬಡಿಕೆಯ ಯುದ್ಧದ ನಿರ್ಣಾಯಕ ಜಯವು ಶಿಲುಬೆಯಲ್ಲಿ ಕ್ರಿಸ್ತನು ಈಗಾಗಲೇ ಜಯವನ್ನು ಹೊಂದಿರುವುದರೊಂದಿಗೆ ಇದೆ.

**ಧರ್ಮೋಪದೇಶಕಾಂಡ ಉತ್ತರಗಳು 8: ಮನುಷ್ಯನ ಆಲೋಚನೆಗಳು**

**ಇ. ಪ್ರಶ್ನೆಗಳಿಗೆ ಉತ್ತರಗಳು**

1. ಧರ್ಮೋ. 20:5-9 ರಿಂದ ನಾವು ಮನುಷ್ಯನ ಆಲೋಚನೆಗಳು ಮತ್ತು ಯುದ್ಧದ ಕುರಿತಾಗಿ ಇವುಗಳನ್ನು ಕಲಿಯುತ್ತೇವೆ:

   ಅ. ಮನುಷ್ಯನ ಆಲೋಚನೆಗಳು ಒಂದು ದೊಡ್ಡ ಸೈನ್ಯಕ್ಕಿಂತ ಬಹಳ ಪ್ರಾಮುಖ್ಯವಾದವುಗಳಾಗಿದ್ದವು.

   ಆ. ಮೂರು ವರ್ಗದ ಜನರು ಸೈನ್ಯ ಸೇವೆಯಿಂದ ಬಿಡುಗಡೆ ಹೊಂದಿದ್ದಾರೆ:

   - ಹೊಸ ಮನೆಯನ್ನು ಕಟ್ಟಿ ಇನ್ನು ಗೃಹ ಪ್ರವೇಶ ಮಾಡದ ಪುರುಷನು.
   - ದ್ರಾಕ್ಷೇ ತೋಟವನ್ನು ಮಾಡಿ ಅದರ ಫಲಗಳನನ್ನು ಇನ್ನು ಅನುಭೋಗಿಸದ ಪುರುಷನು.
   - ಮದುವೆ ಮಾಡಿಕೊಳ್ಳಲು ಯೋಜನೆ ಮಾಡಿಕೊಳ್ಳುತ್ತಿರುವವನು (ಮದುವೆ ಮಾಡಿಕೊಂಡು ಹೆಣ್ಣನ್ನು ಇನ್ನೂ ಸೇರಿಸಿಕೊಳ್ಳದ ಪುರುಷನು). ಯುದ್ಧಕ್ಕೆ ಹೋಗುವುದರ ಬದಲಾಗಿ, ಅವರು ಮನೆಯಲ್ಲಿದ್ದುಕೊಂಡು ದೇವರ ಆಶೀರ್ವಾದಗಳನ್ನು ಅನುಭೋಗಿಸಬೇಕು: ಅವರು ಹೊಸ ಮನೆ, ಅವರ ಹೊಸ ದ್ರಾಕ್ಷೇತೋಟ ಮತ್ತು ಮದುವೆ ಮಾಡಿಕೊಳ್ಳುವ ಸ್ತ್ರೀಯನ್ನು.

   ಇ. ಭಯ ಪಡುವವರು ಅಥವಾ ಧೈರ್ಯ ಕಡಿಮೆಯಾದವರು ಸೈನ್ಯ ಸೇವೆಗೆ ಸರಿಹೊಂದಲ್ಪಡುವುದಿಲ್ಲ. ಯಾಕೆಂದರೆ ಇದು ಧೈರ್ಯದ ಕೊರತೆಯ ನಿಮಿತ್ತದಿಂದಲ್ಲ, ಜಯವನ್ನು ಕೊಡುವ ದೇವರಲ್ಲಿ ಅವರು ಭರವಸೆ ಮತ್ತು ನಂಬಿಕೆಯನ್ನು ಇಡುವುದರಲ್ಲಿ ಕೊರತೆಯುಳ್ಳವರಾಗಿದದ್ದರಿಂದ. ಹಾಗಾಗಿ ಯುದ್ಧದಲ್ಲಿ ಸೈನ್ಯದ ಬಲಕ್ಕಿಂತ ಸೈನ್ಯದ ಆತ್ಮೀಕ ಗುಣಮಟ್ಟ ಮುಖ್ಯವಾದದ್ದು.

2. ಈ ಪತ್ಯದಿಂದ ಇತರ ಮನುಷ್ಯರ ಆಲೋಚನೆಗಳ ಕುರಿತು ನಾವು ಇವುಗಳನ್ನು ಕಲಿಯುತ್ತೇವೆ:

   ಅ. ಧರ್ಮೋ. 10:16-19: ದೇವರ ಮಕ್ಕಳು "ಅವರ ಹೃದಯಗಳನ್ನು ಸುನ್ನತಿ ಮಾಡಿಸಿಕೊಳ್ಳತಕ್ಕದ್ದು". ಇದರ ಅರ್ಥವೇನೆಂದರೆ ಅವರ ಮನಸ್ಸು ಮತ್ತು ಸ್ವಭಾವಗಳನ್ನು ಬದಲಾಯಿಸಿಕೊಳ್ಳತಕ್ಕದ್ದು, ಹಾಗಾದರೆ ಅವರು ದೇವರ ಸಾಮಾಜಿಕ ಕಾಳಜಿಯನ್ನು ಉತ್ತಮ ರೀತಿಯಲ್ಲಿ ಚಿಂತನೆಮಾಡುವರು. ದೇವರು ಪಕ್ಷಪಾತ ತೋರಿಸುವವನಲ್ಲ ಮತ್ತು ಲಂಚ ತೆಗೆದುಕೊಳ್ಳುವುದಿಲ್ಲ. ದೇವರು ತಂದೆತಾಯಿಯಿಲ್ಲದವರನ್ನು ಮತ್ತು ವಿಧವೆಯರನ್ನು ಸಂರಕ್ಷಿಸುತ್ತಾನೆ. ಆತನು ಪರದೇಶಿಯನ್ನು ಪ್ರೀತಿಸಿ ಅವನಿಗೆ ಅನ್ನ ವಸ್ತ್ರಗಳನ್ನು ಒದಗಿಸುತ್ತಾನೆ. ಇಸ್ರಾಯೇಲ್ಯರು ಐಗುಪ್ತದಲ್ಲಿ ಪರದೇಶಿಗಳಾಗಿ ಜೀವಿಸಿದ್ದ ತಮ್ಮ ಜೀವಿತವನ್ನು ನೆನಪಿಸಿಕೊಂಡು ಆತನಿಗೆ ಭಯಪಟ್ಟು, ಆತನನ್ನೇ ಸೇವಿಸಬೇಕು.

   ಆ. ಧರ್ಮೋ. 14:28-29: ಪ್ರತಿ ಮೂರನೇಯ ವರ್ಷದ ಬೆಳೆಯ ದಶಮ ಭಾಗವನ್ನು ಲೇವಿಯರಿಗೆ (ಕಾನಾನಿನಲ್ಲಿ ಸ್ವಾಸ್ತ್ಯವನ್ನು ಹೊಂದದೆ ಹೋದವರು), ಪರದೇಶಿಯರಿಗೆ, ತಂದೆತಾಯಿಯಿಲ್ಲದವರಿಗೆ ಮತ್ತು ವಿಧವೆಯರಿಗೆ (ಅವರಿಗೆ ಆಹಾರವನ್ನು ಒದಗಿಸಲು ಸ್ವಂತ ಸ್ವಾಸ್ಥ್ಯ ಇಲ್ಲದವರು, ಧರ್ಮೋ. 26:12-15ನ್ನು ಸಹ ನೋಡಿರಿ) ಪೋಷಿಸುವುದಕ್ಕಾಗಿ ಉಪಯೋಗಿಸಲ್ಪಡುತ್ತಿತ್ತು.

   ಇ. ಧರ್ಮೋ. 16:9-16: ಎರಡು ದೇಶಿಯ ಸುಗ್ಗಿಗಳ ಹಬ್ಬಗಳ ಸಮಯದಲ್ಲಿ "ವಾರಗಳ ಹಬ್ಬ" (ಮೇ ಮತ್ತು ಜೂನ್ ಮಾಸಗಳಲ್ಲಿ) ಮತ್ತು "ದೇವರ ದರ್ಶನ ಗುಡಾರ ಹಬ್ಬ"/"ಪರ್ಣಶಾಲೆಗಳ ಹಬ್ಬ" (ಸೆಪ್ಟಂಬರ್ ಮತ್ತು ಅಕ್ಟೋಬರ್ ಮಾಸಗಳಲ್ಲಿ ಈ ಆಚರಣೆಗಳು ಇಸ್ರಾಯೇಲ್ಯರ ರೈತರಿಗೂ ಮತ್ತು ಅವರ ಕುಟುಂಬಗಳಿಗೂ ಮಾತ್ರ ಸೀಮಿತವಾಗಿದ್ದಿಲ್ಲ

(ನೀನು, ನಿನ್ನ ಗಂಡು ಹೆಣ್ಣು ಮಕ್ಕಳು). ಆದರೆ ಸೇವಕರು ಮತ್ತು ಸಮಾಜದಲ್ಲಿರುವ ಬಲಹೀನವಾದ ಮೂರು ವರ್ಗದ ಜನರು (ಪರದೇಶಿಯರು, ತಂದೆತಾಯಿಯಿಲ್ಲದವರು ಮತ್ತು ವಿಧವೆಯರು) ವ್ಯವಸಾಯದಿಂದ ಯಾವುದೇ ಆದಾಯವನ್ನು ಹೊಂದದೆ ಇರುವಂತಹ ಲೇವಿಯರು ಸಹ ಈ ಹಬ್ಬಗಳಲ್ಲಿ ಸೇರಿಕೊಳ್ಳತಕ್ಕದ್ದು.

ಈ. ಧರ್ಮೋ. 24:17-18: ಇಸ್ರಾಯೇಲ್ಯರ ಸಮಾಜದಲ್ಲಿ ಕಡುಬಡವರಿಗೂ ಸಹ ನ್ಯಾಯವನ್ನು ಕೊಡತಕ್ಕದ್ದು: ಪರದೇಶಿ, ತಂದೆತಾಯಿಯಿಲ್ಲದವರು ಮತ್ತು ವಿಧವೆಯರು. ವಿಧವೆಯಿಂದ ಅವಳು ಉಡುವ ಬಟ್ಟೆಯನ್ನು ಒತ್ತೆಯಿಡಿಸಿಕೊಂಡಾಗ, ಅವಳನ್ನು ಸ್ವಪ್ರಯೋಜನಕ್ಕಾಗಿ ಉಪಯೋಗಿಸಿ ದುಡಿಸಿಕೊಳ್ಳಬಾರದು.

ಉ. ಧರ್ಮೋ. 24:19-22: ಸುಗ್ಗಿಯ ಕಾಲದಲ್ಲಿ (ತೆನೆ, ಎಣ್ಣೆಯ ಮರಗಳು, ದ್ರಾಕ್ಷೇ ಹಣ್ಣು) ರೈತರು ಎರಡನೇ ಬಾರಿ ಎಣ್ಣೆಯ ಮರಗಳ ಕಾಯಿಗಳನ್ನು ಮತ್ತು ದ್ರಾಕ್ಷೇಯ ತೋಟದಲ್ಲಿ ಹಕ್ಕಲಾಯುವುದಕ್ಕೆ ಹೋಗಲೇಬಾರದು. ಬದಲಾಗಿ ಕೆಲವು ಬೆಳೆಗಳನ್ನು ಈ ಮೂರು ರೀತಿಯ ವರ್ಗದ ಜನರಿಗೆ ಬಿಟ್ಟುಬಿಡಬೇಕು (ಪರದೇಶಿ, ತಂದೆತಾಯಿಯಿಲ್ಲದವರು, ವಿಧವೆಯರು).

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –
2. –
3. –

**ಧರ್ಮೋಪದೇಶಕಾಂಡ ಉತ್ತರಗಳು 9: ವಾಗ್ದಾನದ ದೇಶ**

**ಆ. ಪ್ರಶ್ನೆಗಳಿಗೆ ಉತ್ತರಗಳು**

1. ಧರ್ಮೋ. 1:8; 7:13; 8:10; 10:11; 11:8-9; 30:20; 31:7; 34:4 ರಲ್ಲಿನ ಸಾಮಾನ್ಯವಾದ ವಿಷಯಗಳು: ಅವರೆಲ್ಲರೂ ದೇವರ ಒಡಂಬಡಿಕೆಯ ವಾಗ್ದಾನ ನೆರವೇರುವುದನ್ನು ಕಾಣುತ್ತಾ ಇದ್ದಾರೆ. ದೇವರು ಅಬ್ರಹಾಮ್, ಇಸಾಕ್ ಮತ್ತು ಯಾಕೋಬರ ಸಂತತಿಗಳಿಗೆ ಕಾನಾನ್ ದೇಶವನ್ನು ಕೊಡುತ್ತೇನೆಂದು ವಾಗ್ದಾನ ಮಾಡಿದ್ದಾನೆ. ಈಗ ಇಸ್ರಾಯೇಲ್ಯರಿಗೆ ಕಾನಾನ್ ದೇಶವನ್ನು ಹೊಂದಿಕೊಳ್ಳುವಂತಹ ಸಮಯ ಮತ್ತು ಈ ವಾಗ್ದಾನವು ನೆರವೇರುವುದನ್ನು ನೋಡುವಂತಹ ಅವಕಾಶ ಬಂದಿದೆ.

2. ಧರ್ಮೋ. 1:21, 39; 2:29; 4:1, 21, 38, 40; 5:16, 31, 33; 6:1; 15:4; 16:20; 26:1 ಗಳಲ್ಲಿರುವ ಸಾಮಾನ್ಯವಾದ ವಿಷಯಗಳು: ವಾಗ್ದಾನದ ದೇಶವು ದೇವರು ಇಸ್ರಾಯೇಲ್ಯರಿಗೆ ಕೊಟ್ಟ ಕೊಡುಗೆ ಎಂಬುದನ್ನು ಅವರೆಲ್ಲರು ಹೇಳುತ್ತಿದ್ದರು. ದೇಶವನ್ನು ಅವರು ವಶಪಡಿಸಿಕೊಳ್ಳುವುದರಲ್ಲಿದ್ದರು. ದೇಶವು ಅವರ ಪಿತ್ರಾರ್ಜಿತ ಬಾಧ್ಯತೆಯಾಗಿತ್ತು.

3. ಧರ್ಮೋ. 6:3; 8:7-9; 9:6; 11:9; 12:9-10; 26:9, 15 ರಲ್ಲಿನ ಸಾಮಾನ್ಯವಾದ ವಿಷಯಗಳು: ಅವರೆಲ್ಲರು ವಾಗ್ದಾನ ದೇಶವು ಒಳ್ಳೆಯ ಭೂಮಿ ಎಂದು ಹೇಳಿಕೊಳ್ಳುತ್ತಿದ್ದರು. ಅದು "ಹಾಲು, ಜೇನು ಹರಿಯುವಂತಹ ದೇಶವಾಗಿದೆ". ಈ ದೇಶವು ನಮಗೆ (ಮತ್ತು ಇಸ್ರಾಯೇಲ್ಯರಿಗೆ) ಏದೆನಿನಲ್ಲಿದ್ದ ತೋಟವನ್ನು ನೆನಪಿನಲ್ಲಿ ತರುತ್ತದೆ.

4. ಧರ್ಮೋ. 3:20; 12:9-10; 25:19 ರಲ್ಲಿನ ಸಾಮಾನ್ಯವಾದ ವಿಷಯಗಳು: ದೇವರು ತನ್ನ ಜನರಿಗೆ ಕೊಡುವುದಕ್ಕಾಗಿ ಇದ್ದ ವಾಗ್ದಾನದ ದೇಶದಲ್ಲಿನ ವಿಶ್ರಾಂತಿಯಲ್ಲಿ ಅವರೆಲ್ಲರೂ ಸಂಬಂಧವುಳ್ಳವರಾಗಿದ್ದರು.

5. ಧರ್ಮೋ. 4:38; 7:1, 17-22; 9:1-5; 11:23; 33:27 ರಲ್ಲಿನ ಸಾಮಾನ್ಯವಾದ ವಿಷಯಗಳು: ಅವರೆಲ್ಲರು ಪವಿತ್ರಯುದ್ಧದಲ್ಲಿದ್ದಾರೆ. ದೇವರು ಇಸ್ರಾಯೇಲ್ಯರ ಮುಂದಿರುವ ರಾಷ್ಟ್ರಗಳನ್ನು ಹೊರ ಓಡಿಸುತ್ತಾನೆ, ಹೀಗೆ ಅವರಿಗೆ ದೇವರು ಕೊಡಲಿಕ್ಕಿರುವ ಅವರ ಪಿತ್ರಾರ್ಜಿತ ಬಾಧ್ಯತೆಯನ್ನು ಸ್ವಾಧೀನದಲ್ಲಿ ತೆಗೆದುಕೊಳ್ಳಲು ಸಾಧ್ಯವಾಗುವುದು.

6. ಧರ್ಮೋ. 13:1-5; 12-18; 18:9-13; 20:18; 21:23; 24:4; 25;13-16 ರಲ್ಲಿನ ಸಾಮಾನ್ಯವಾದ ವಿಷಯಗಳು: ಅವರೆಲ್ಲರು ವಾಗ್ದಾನ ದೇಶದ ಪರಿಶುದ್ಧತೆಯೊಂದಿಗೆ ವ್ಯವಹರಿಸುತ್ತಾರೆ. ಈ ದೇಶವು ಸ್ವಚ್ಛವಾಗಿ ಇಡಲ್ಪಡಬೇಕು. ಕಾನಾನ್ಯರ ಪ್ರತಿಯೊಂದು ಆರಾಧನೆಯ ಜಾಡುಗಳು ತೆಗೆದುಹಾಕಲ್ಪಡಬೇಕಾಗಿದೆ. ಇಸ್ರಾಯೇಲ್ಯರು ಅವರ ಪೂರ್ವಾಧಿಕಾರಿಗಳ ದುಷ್ಟ ಪದ್ಧತಿಗಳನ್ನು ಹಿಂಬಾಲಿಸಲೇಬಾರದು. ಅವರು ಒಡಂಬಡಿಕೆಯ ಆಜ್ಞೆಗಳನ್ನು ಇಟ್ಟುಕೊಳ್ಳಲೇಬೇಕು, ಅಥವಾ ಇಲ್ಲವಾದರೆ ಆ ದೇಶವು ಅಪವಿತ್ರಗೊಳ್ಳಲ್ಪಡುವುದು (ಅಪರಿಶುದ್ಧವಾಗುವುದು).

**ಇ. ಉಪಸಂಹಾರದ ಉತ್ತರಗಳು**

ಮೇಲಿನ ಪ್ರಶ್ನೆಗಳ ಉತ್ತರಗಳಿಂದ ಈ ಉಪಸಂಹಾರವನ್ನು ಈ ರೀತಿಯಾಗಿ ಚಿತ್ರಿಸಬಹುದು:

1. ಸಿನಾಯ್ ಪರ್ವತದಲ್ಲಿ ಇಸ್ರಾಯೇಲ್ಯರಿಗೂ ಮತ್ತು ಪಿತೃಗಳಿಗೂ ದೇವರು ಮಾಡಿದ ವಾಗ್ದಾನದ ನೆರವೇರುವಿಕೆಯು ಅವರ ಪಿತ್ರಾರ್ಜಿತ ಸ್ವಾಸ್ಥ್ಯವಾಗಿ ವಾಗ್ದಾನದ ದೇಶವನ್ನು ಇಸ್ರಾಯೇಲ್ಯರಿಗೆ ದೇವರು ಕೊಡುಗೆಯಾಗಿ ಕೊಡುವುದರೊಂದಿಗೆ ನೆರವೇರಿತು.

2. ಆದರೆ ಮೊದಲು ದೇಶವನ್ನು ಗೆದ್ದುಕೊಂಡು ಅಲ್ಲಿರುವ ಹಳೇಯ ನಿವಾಸಿಗಳನ್ನು ಹೊರಗಡೆ ಹಾಕಬೇಕು. ಇದನ್ನು ದೇವರೇ ನೆರವೇರಿಸುತ್ತಾನೆ.

3. ಸಿನಾಯ್ ಪರ್ವತದಲ್ಲಿ ದೇವರು ಅವರೊಂದಿಗೆ ಮಾಡಿದ್ದ ಒಡಂಬಡಿಕೆಯನ್ನು ಇಸ್ರಾಯೇಲ್ಯರು ಎಲ್ಲಿಯವರೆಗೆ ಹಿಂಬಾಲಿಸುತ್ತಾರೋ ಅಲ್ಲಿಯವರೆಗೂ ಈ ಭೂಮಿಯು ಒಳ್ಳೆಯದ್ದಾಗಿರುತ್ತದೆ ಮತ್ತು ಸಮೃದ್ಧಿಯಾಗಿ ಬೆಳೆಯುತ್ತದೆ. ಅವರು ಅಲ್ಲಿ ವಿಶ್ರಾಂತಿಯನ್ನು ಕಂಡುಕೊಳ್ಳುವರು.

4. ಇಸ್ರಾಯೇಲ್ಯರು ದೇಶವನ್ನು ಪರಿಶುದ್ಧವಾಗಿ ಇಟ್ಟುಕೊಳ್ಳಲೇಬೇಕು. ಅವರು ವಿಗ್ರಾಹರಾಧನೆಯಿಂದ, ದುಷ್ಟ ಪದ್ಧತಿಗಳಿಂದ ನಿರ್ಗತಿಕರನ್ನು ಮತ್ತು ಬಲಹೀನರಿಗೆ ಅಸಡ್ಡೆ ಮಾಡುವುದರಿಂದ, ಅಥವಾ ಅಗೌರವದಿಂದ ದೇಶವನ್ನು ಅಪವಿತ್ರಗೊಳಿಸಬಾರದು.

**ಈ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –

2. ದಕ್ಷಿಣ ಭಾರತದಲ್ಲಿನ ಸಭೆಗಳ ಪ್ರಸ್ತುತ ಪರಿಸ್ಥಿತಿಗೆ ಅಳವಡಿಸಿಕೊಳ್ಳಬಹುದಾಗಿದೆ. ವಾಗ್ದಾನ ದೇಶದ ಕುರಿತಾದ ಧರ್ಮೋಪದೇಶಕಾಂಡದಲ್ಲಿನ ಕೆಲವು ಬೋಧನೆಗಳು ಇಲ್ಲಿವೆ:

ಅ. ಸುವಾರ್ತೆ ಹರಡುವಿಕೆ ಮತ್ತು ದೇವರ ರಾಜ್ಯದ ವಿಸ್ತರಣೆ: ಇಸ್ರಾಯೇಲ್ಯರು ಅವರ ಪರಿಶುದ್ಧ ಯುದ್ಧವನ್ನು ಮುಗಿಸಿದ್ದರು. ದೇವರು ಅವರ ಪರವಾಗಿ ಯುದ್ಧ ಮಾಡುತ್ತಿದ್ದನು. ದೇವರು ಅವರ ಮುಂದೆ ದೇಶಗಳನ್ನು ಹೊರಗೆಡಿಸುತ್ತಿದ್ದನು. ಜಯವು ದೇವರದಾಗಿತ್ತು. ವಾಗ್ದಾನ ದೇಶವು ಅವರಿಗೆ ದೇವರ ಕೊಡುಗೆಯಾಗಿತ್ತು.

ದಕ್ಷಿಣ ಭಾರತದಲ್ಲಿನ ಸಭೆಗಳು ಈ ದಿನದಲ್ಲಿ ಅದರ ಪರಿಶುದ್ಧ ಯುದ್ಧವನ್ನು ಹೊಂದಿವೆ. ಈ ಯುದ್ಧವು ಆಧುನಿಕ ಜಗತ್ತಿನ ಅಂಧಕಾರದ ದುಷ್ಟಶಕ್ತಿಗಳ ವಿರುದ್ಧವಾದುದ್ದಾಗಿದೆ. ಆದರೆ ದೇವರು ನಮ್ಮ ಪರವಾಗಿ ಯುದ್ಧ ಮಾಡುತ್ತಿದ್ದಾನೆ. ನಮ್ಮ ಮುಂದಿರುವ ವೈರಿಗಳನ್ನು ದೇವರು ಹೊರಹಾಕುತ್ತಿದ್ದಾನೆ, ಜಯವು ದೇವರದ್ದಾಗಿದೆ ಮತ್ತು ನಿರ್ಣಾಯಿಕ ಯುದ್ಧವು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮರಣವನ್ನು ಹೊಂದಿದಾಗ ಈಗಾಗಲೇ ಜಯವುಂಟಾಗಿದೆ. ಈಗಾಗಲೇ ನಾವು ನಮ್ಮ ವಾಗ್ದಾನದ ದೇಶವನ್ನು (ದೇವರ ರಾಜ್ಯ) ಪ್ರವೇಶಿಸಿದ್ದೇವೆ ಮತ್ತು ಸಂಚಕಾರವಾಗಿ ನಾವು ಪವಿತ್ರಾತ್ಮನನ್ನು ಹೊಂದಿದ್ದೇವೆ, ಏನು ಬರಲಿಕ್ಕಿದೆಯೋ ಅದರ ಕುರಿತು ಖಚಿತತೆಯುಳ್ಳವರಾಗಿದ್ದೇವೆ (2 ಕೊರಿ. 5:5), ನಮ್ಮ ಬಾಧ್ಯತೆಯಾಗಿ ಪವಿತ್ರಾತ್ಮನನ್ನು ಹೊಂದಿದ್ದೇವೆ (ಎಫೆಸ. 1:14). ನಾವು ಇದನ್ನು ಎಂದಿಗೂ ಮರೆಯಬಾರದು. ನಾವು ವೈರಿಯ ಶಕ್ತಿಯಿಂದ ಕುಗ್ಗಿಹೋಗಬಾರದು ಅಥವಾ ಭಯದಿಂದ ಇರಬಾರದು. ನಾವು ಈ ಒಂದು ಯುದ್ಧದಲ್ಲಿ ಒಬ್ಬಂಟಿಗರಾಗಿ ಬಿಡಲ್ಪಟ್ಟಿದ್ದೇವೆ ಎಂದು ಯೋಚನೆ ಮಾಡುವುದಕ್ಕೆ ಎಂದಿಗೂ ಶೋಧನೆಗೆ ಒಳಗಾಗಬಾರದು. ದೇವರು ಪರಿಶುದ್ಧಾತ್ಮನ ಶಕ್ತಿಯ ಮೂಲಕ ನಮ್ಮೊಂದಿಗಿದ್ದಾನೆ. ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು? (ರೋಮಾ. 8:31).

ಆ. ನಂಬಿಕೆ, ಜೀವನ ಶೈಲಿ ಮತ್ತು ನೈತಿಕ ಜೀವನಗಳಲ್ಲಿ ಯಾವುದೇ ರಾಜಿ ಇರಬಾರದು: ವಾಗ್ದಾನ ದೇಶವನ್ನು ಪವಿತ್ರವಾಗಿ ಇಟ್ಟುಕೊಳ್ಳಬೇಕೆಂದು ದೇವರು ಇಸ್ರಾಯೇಲ್ಯರಿಂದ ಅಪೇಕ್ಷಿಸಿದನು. ಅವರು ಅದನ್ನು ವಿಗ್ರಹ ಆರಾಧನೆಯಿಂದ ದುಷ್ಟಪದ್ಧತಿಗಳಿಂದ ಮತ್ತು ಬಡವರನ್ನು ಬಲಹೀನರನ್ನು ಅಸಡ್ಡೆ ಅಥವಾ ಅಗೌರವದಿಂದ ನೋಡುವುದರಿಂದ ಪವಿತ್ರಗೊಳಿಸಲೇಬಾರದು. ಈ ದೇಶವನ್ನು ಪವಿತ್ರವಾಗಿ ಇಟ್ಟುಕೊಳ್ಳುವುದೇ ದೇವರು ಅವರೊಂದಿಗೆ ಮಾಡಿಕೊಂಡ ಒಡಂಬಡಿಕೆಯ ಕರ್ತವ್ಯವಾಗಿದೆ. ಹಾಗಾದರೆ ಈ ದಿನಗಳಲ್ಲಿ ಅತನ ಜನರಾಗಿ, ದೇವರು ನಮ್ಮೊಂದಿಗೆ ಮಾಡಿಕೊಂಡ ಒಡಂಬಡಿಕೆಯಲ್ಲಿ ನಮ್ಮ ಪಾತ್ರ ಏನಾಗಿದೆ? ನಾವು ಆತನನ್ನು ಮೆಚ್ಚಿಸುವ ಜೀವಿತದಲ್ಲಿ ಜೀವಿಸಬೇಕು ಮತ್ತು ದೇವರ

ರಾಜ್ಯದ ಬೆಳವಣಿಗೆಗೆ ಸಹಕರಿಸುವ ಕಾರ್ಯಗಳನ್ನು ಮಾಡಬೇಕು. ನಾವು ಅನ್ಯ ದೇಶಗಳೊಂದಿಗೆ ನಂಬಿಕೆ, ಜೀವನ ಶೈಲಿ ಮತ್ತು ನೈತಿಕತೆಗಳ ಕ್ಷೇತ್ರಗಳಲ್ಲಿ ರಾಜೀ ಮಾಡಿಕೊಳ್ಳಲೇಬಾರದು. ನಾವು ನಂಬುವಂತಹದ್ದು ಮತ್ತು ಆಚರಿಸುವಂತದ್ದು ದೇವರ ವಾಕ್ಯಾನುಸಾರವಾಗಿರಬೇಕು. ನಮ್ಮ ಜೀವಿತಗಳು ರೂಪಾಂತರಗೊಳಿಸುವ ಬಲವುಳ್ಳ ಸುವಾರ್ತೆಗೆ ಸಾಕ್ಷಿಗಳಾಗಿರಬೇಕು. ನಾವು ಜನರಿಗೆ ನಡೆಸಿಕೊಳ್ಳುವ (ವಿಶೇಷವಾಗಿ ಬಡವರಿಗೆ ಮತ್ತು ಬಲಹೀನರಿಗೆ ಹಾಗೂ ನಿರ್ಗತಿಕರಿಗೆ) ವಿಧಾನವು ದೇವರ ರಾಜ್ಯದ ಮೌಲ್ಯಗಳನ್ನು ಪ್ರತಿಬಿಂಬಿಸುವಂತವುಗಳಾಗಿರಬೇಕು.

ಇ. "ವಾಗ್ದಾನದ ದೇಶ": ಇಸ್ರಾಯೇಲ್ಯರು ಒಂದು ಭೌಗೋಳಿಕವಾಗಿ ವಾಗ್ದಾನ ದೇಶವನ್ನು ಗೆದ್ದುಕೊಳ್ಳಲು, ಸ್ವಾಸ್ಥ್ಯವಾಗಿ ಮತ್ತು ಮಾಲೀಕರಾಗಿ, ಹಾಗೂ ಪವಿತ್ರವಾಗಿ ಇಟ್ಟುಕೊಳ್ಳಲು ಅದನ್ನು ಹೊಂದಲು ಎದುರು ನೋಡುತ್ತಿದ್ದರು. ಕ್ರೈಸ್ತ ವಿಶ್ವಾಸಿಗಳಾಗಿ ನಾವು ಅದನ್ನು ಹೊಂದಿಕೊಂಡಿಲ್ಲ. ಬದಲಾಗಿ ನಾವು ಆತ್ಮೀಕ ವಾಗ್ದಾನ ದೇಶವನ್ನು ಹೊಂದಿದ್ದೇವೆ, ಅದನ್ನು ಹೊಸ ಒಡಂಬಡಿಕೆಯು ದೇವರ ರಾಜ್ಯ ಎಂದು ಕರೆಯುತ್ತದೆ. ಈ ಒಂದು ರಾಜ್ಯವು ಯಾವುದೇ ಭೌಗೋಳಿಕ ಮೇರೆಗಳನ್ನು ಹೊಂದಿಲ್ಲ, ಮತ್ತು ಇದು ಈ ಪ್ರಪಂಚಕ್ಕೆ ಸಂಬಂಧಪಟ್ಟದ್ದಲ್ಲ (ಯೇಸು ಪಿಲಾತನಿಗೆ ಹೇಳುವುದನ್ನು ಯೋಹಾನ 18:36 ರಲ್ಲಿ ನೋಡಿ). ಆದರೆ ಭವಿಷ್ಯದ ಒಂದು ದಿನದಲ್ಲಿ ಯೇಸು ಪುನಃ ಬರುವಾಗ ಈ ಪ್ರಸ್ತುತ ಜಗತ್ತಿನ ಜೀವಿತಾವಧಿಯು ಈಡೇರಿಸಲ್ಪಡುವುದು. ನಂತರ ದೇವರ ರಾಜ್ಯವನ್ನು ಆತ್ಮೀಕವಾಗಿ ಮತ್ತು ಭೌಗೋಳಿಕವಾಗಿ ದೇವರು ಹೊಸದಾಗಿ ಎಲ್ಲವನ್ನು ಮಾಡುವನು, ಹೊಸ ಭೂಮಿ ಮತ್ತು ಹೊಸ ಪರಲೋಕ ಒಳಗೊಂಡಿರುತ್ತದೆ (ಪ್ರಕಟಣೆ 21:1-5). ನಂತರ ದೇವರ ವಾಸಸ್ಥಳ ಮನುಷ್ಯರೊಂದಿಗೆ ಇರುತ್ತದೆ ಮತ್ತು ಆತನು ನಮ್ಮೊಂದಿಗೆ ಸದಾಕಾಲವು ವಾಸಿಸುತ್ತಾನೆ. ಅಲ್ಲಿ ಅನ್ಯಾಯಕ್ಕೆ ಮತ್ತು ಅಪರಿಶುದ್ಧತೆಗೆ ಸ್ಥಳ ಇರುವುದಿಲ್ಲ (ಪ್ರಕಟಣೆ 21:27). ಅದು ನಿಜವಾಗಿಯೂ ಹಾಲು, ಜೇನು ಹರಿಯುವ ದೇಶವಾಗಿರುತ್ತದೆ (ಪ್ರಕಟಣೆ 22:2-3). ದೇವರು ಇದನ್ನು ತನ್ನ ಜನರಿಗೆ ತನ್ನ ವಾಕ್ಯದ ಮೂಲಕ ವಾಗ್ದಾನ ಮಾಡಿದ್ದಾನೆ.

ಹಾಗಾದರೆ ನಾವು ಈ ವಾಗ್ದಾನ ದೇಶದೊಳಗೆ ಹೇಗೆ ಪ್ರವೇಶ ಮಾಡುತ್ತೇವೆ? ನಾವು ಯೇಸು ಕ್ರಿಸ್ತನ ಮುಖಾಂತರ ಆತನ ರಕ್ಷಣೆಯನ್ನು ಹೊಂದುವುದರಿಂದ ದೇವ ಜನರಾಗುತ್ತೇವೆ. ದೇವರ ರಾಜ್ಯವು ಸಂಪೂರ್ಣವಾದ ಬಲದಲ್ಲಿಯು ಮತ್ತು ಮಹಿಮೆಯಲ್ಲಿಯೂ ಸ್ಥಾಪಿಸಲ್ಪಡುವ ಆ ದಿನದ ವರೆಗೂ – ಆತನು ಮೆಚ್ಚುವ ಜೀವಿತದಲ್ಲಿ ಜೀವಿಸುತ್ತಾ ಮತ್ತು ಆತನ ಕಾರ್ಯಗಳನ್ನು ಮಾಡುತ್ತಾ – ನಾವು ಆತನಿಗೆ ನಂಬಿಗಸ್ತರಾಗಿರಬೇಕು.

**ಧರ್ಮೋಪದೇಶಕಾಂಡ ಉತ್ತರಗಳು 10: ದೈವಿಕ ಸಿದ್ಧಾಂತ**

**ಆ. ಪ್ರಶ್ನೆಗಳಿಗೆ ಉತ್ತರಗಳು**

1. ಈ ವಾಕ್ಯಗಳಿಂದ ನಾವು ದೇವರ ಕುರಿತು ಈ ಸಂಗತಿಗಳನ್ನು ಕಲಿಯುತ್ತೇವೆ:

   ಅ. ಧರ್ಮೋ. 33:27: ದೇವರು ಎಂದೆಂದಿಗೂ ಇರುವಾತನಾಗಿದ್ದಾನೆ.

   ಆ. ಧರ್ಮೋ. 32:8: ದೇವರು ಮಹಾ ಉನ್ನತನಾಗಿದ್ದಾನೆ. ಇದರರ್ಥ ಆತನು ಸರ್ವಶಕ್ತನಾಗಿದ್ದಾನೆ.

   ಇ. ಧರ್ಮೋ. 3:24; 9:26: ದೇವರು ಪರಮಾಧಿಕಾರವುಳ್ಳ ಕರ್ತನಾಗಿದ್ದಾನೆ.

   ಈ. ಧರ್ಮೋ. 32:51: ದೇವರು ಪರಿಶುದ್ಧನಾಗಿದ್ದಾನೆ.

   ಉ. ಧರ್ಮೋ. 4:8; 32:4: ದೇವರು ನೀತಿವಂತನು ಮತ್ತು ನ್ಯಾಯವುಳ್ಳವನು ಆಗಿದ್ದಾನೆ.

   ಊ. ಧರ್ಮೋ. 4:37; 7:9, 13; 23:5; 33:3: ದೇವರು ಪ್ರೀತಿಯುಳ್ಳವನಾಗಿದ್ದಾನೆ.

   ಋ. ಧರ್ಮೋ. 7:9; 32:4: ದೇವರು ನಂಬಿಗಸ್ತನಾಗಿದ್ದಾನೆ.

   ಎ. ಧರ್ಮೋ. 1:21, 31; 3:22; 5:6, 24; 6:5; 8:7; 10:12; 12:12; 14:26: ದೇವರು ನಿಮ್ಮ ಮತ್ತು ನಮ್ಮ ದೇವರಾಗಿದ್ದಾನೆ. ಆತನು ಆತ್ಮೀಯ ದೇವರು.

2. –

3. ಧರ್ಮೋಪದೇಶಕಾಂಡ 12:1-7 ನೇ ವಚನದಿಂದ ಇಸ್ರಾಯೇಲ್ಯರು ದೇವರನ್ನು ಹೇಗೆ ಆರಾಧಿಸಬೇಕಾಗಿದೆ ಎಂಬುದರ ಕುರಿತು ನಾವು ಕಲಿಯುವ ಸಂಗತಿಗಳು:

   ಅ. ಅವರು ಹಳೆಯ ಆರಾಧನ ಸ್ಥಳಗಳನ್ನು ಉಪಯೋಗಿಸಲೇಬಾರದು. ಇವುಗಳನ್ನು ಸಂಪೂರ್ಣವಾಗಿ ನಾಶ ಮಾಡಬೇಕು. ಈ ಸ್ಥಳಗಳ ಹೆಸರುಗಳನ್ನು ಸಹ ತೆಗೆದುಹಾಕಬೇಕು.

   ಆ. ಕಾನಾನ್ಯರು ಅವರ ದೇವರುಗಳನ್ನು ಆರಾಧಿಸಿದ ಹಾಗೆ ಅವರು (ಇಸ್ರಾಯೇಲ್ಯರು) ದೇವರನ್ನು ಆರಾಧಿಸಲೇಬಾರದು.

   ಇ. ಅವರು ವಾಗ್ದಾನ ದೇಶದಲ್ಲಿ ಹೊಸ ಸ್ಥಳವನ್ನು ಗುರುತಿಸಿ ಅಲ್ಲಿ "ಆತನ ನಿವಾಸ ಎಂದು ದೇವರ ಹೆಸರನ್ನು" ಸೂಚಿಸಬೇಕು (ಅಂದರೆ ಅದು ದೇವರಿಗೆ ಸಂಬಂಧಪಟ್ಟಿದ್ದೆಂದರ್ಥ). ಬಹುಶಃ 12:5 ರ ಅರ್ಥವೇನೆಂದರೆ ಇಸ್ರಾಯೇಲ್ಯರು ಮುಖ್ಯವಾದ ಆರಾಧನಾ ಸ್ಥಳವನ್ನು ಹೊಂದುವವರಾಗಿದ್ದರು ಮತ್ತು "ಕೇಂದ್ರ ಆರಾಧನಾ ಸ್ಥಳವಾಗಿ" ಕಾರ್ಯಮಾಡಲು ಕೆಲವು ಸಂದರ್ಭಗಳಲ್ಲಿ ಇವುಗಳಲ್ಲಿ ಒಂದನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಪ್ರಾಯಶಃ ಮಂಜೂಷಪೆಟ್ಟಿಗೆ ಜಾಗವು ನಿಶ್ಚಯಾತ್ಮಕ ಅಂಶವಾಗಿತ್ತು. ಖಚಿತವಾಗಿ ದೇವರ ಸಾಮಾರ್ಥ್ಯವು ದೇಶದ್ಯಂತ ಚಲಿಸಲ್ಪಟ್ಟಿದ್ದನ್ನು 2 ಸಮು. 7:6 ರಲ್ಲಿ ತಿಳಿಸಲಾಗಿದೆ, ಇಲ್ಲಿ ಹಳೇ ಒಡಂಬಡಿಕೆಯಲ್ಲಿ ಮೊಟ್ಟ ಮೊದಲನೇಯ ಬಾರಿಗೆ ಸ್ಥಿರ ದೇವಾಲಯದ ಕುರಿತ ಪ್ರಶ್ನೆ ಉದ್ಭವಿಸಿದ್ದು. ಮಂಜೂಷದ ಪೆಟ್ಟಿಗೆಯು ಸ್ಥಳದಿಂದ ಸ್ಥಳಕ್ಕೆ ಚಲನೆಯಾಗಿದ್ದನ್ನು ನೋಡುವುದಾದರೆ ಪೂರ್ಣ ವಾಗ್ದಾನದ ದೇಶವು ದೇವರ ಆರಾಧನಾ ಸ್ಥಳವೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಈ. ಇಸ್ರಾಯೇಲ್ಯರು ಈ ಆರಾಧನೆಯ ಕೇಂದ್ರಸ್ಥಳದಲ್ಲಿ ದಶಮಭಾಗವನ್ನು ಮತ್ತು ವಿಶೇಷ ಕಾಣಿಕೆಗಳನ್ನು, ಸರ್ವಾಂಗಹೋಮದ ಕಾಣಿಕೆಗಳನ್ನು ಹಾಗೂ ಯಜ್ಞದ ಕಾಣಿಕೆಗಳನ್ನು ತರುತ್ತಿದ್ದರು. ಅವರು ದೇವರ ಪ್ರಸನ್ನತೆಯಲ್ಲಿ ತಿಂದು ಸಂತೋಷಿಸುತ್ತಿದ್ದರು, ಮತ್ತು ಆತನ ಆಶೀರ್ವಾದಗಳಿಗಾಗಿ ದೇವರಿಗೆ ಸ್ತೋತ್ರ ಸಲ್ಲಿಸುತ್ತಿದ್ದರು

**ಇ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –

2. ನಮ್ಮ ಈ ದಿನದ ಸನ್ನಿವೇಶಕ್ಕೆ ಧರ್ಮೋಪದೇಶಕಾಂಡ 12:1-7 ರಲ್ಲಿ ಕೆಲವು ಅನ್ವಯಿಸುವಿಕೆಗಳಿವೆ. ನೀವು ಬೇರೆ ಅನ್ವಯಿಸುವಿಕೆ ಅಂಶಗಳ ಆಲೋಚನೆಯಲ್ಲಿರಬಹುದು:

ಅ. ಅನ್ಯರ ದೇವರುಗಳನ್ನು ಮತ್ತು ಅದರ ಪೂಜಾಸ್ಥಳಗಳನ್ನು ಸಂಪೂರ್ಣವಾಗಿ ನಾಶಮಾಡುವುದು: ಇಸ್ರಾಯೇಲ್ಯರು ಆರಾಧನೆಯ ಸ್ಥಳಗಳನ್ನು, ಎಲ್ಲಾ ವಿಗ್ರಹಗಳನ್ನು ಮತ್ತು ಆರಾಧನೆಯೊಂದಿಗೆ ಸೇರಿಕೊಂಡಿರುವಂತ ಬೇರೆ ಎಲ್ಲಾ ಸಂಗತಿಗಳನ್ನು ಸಂಪೂರ್ಣವಾಗಿ ಧ್ವಂಸ ಮಾಡುವುದಕ್ಕೆ ಹೇಳಲ್ಪಟ್ಟಿದ್ದರು. ಅವರು ಹೇಳಿದ ಹಾಗೆ ಮಾಡುವುದಕ್ಕೆ ಸೋತು ಹೋದರೆಂಬುದಾಗಿ ಹಳೇ ಒಡಂಬಡಿಕೆಯ ಇತಿಹಾಸ ತೋರಿಸುತ್ತದೆ.

ಈ ಫಲಿತಾಂಶದ ನಿಮಿತ್ತ ಅವರು (ಇಸ್ರಾಯೇಲ್ಯರು) ಕಾನಾನ್ಯರ ಧಾರ್ಮಿಕ ಮಾರ್ಗಗಳಿಂದ ಪುನಃ ಪುನಃ ಹಾದಿ ತಪ್ಪಿದವರಾಗಿದ್ದರು, ಕೊನೆಯಲ್ಲಿ ದೇವರು ಅವರ ಪಾಪಗಳಿಗಾಗಿ ಅವರನ್ನು ಶಿಕ್ಷಿಸಿ ವಿದೇಶಿ ಭೂಮಿಗೆ ಸೆರೆಯಾಳಾಗಿ ಕಳುಹಿಸಿದನು.

ದಕ್ಷಿಣ ಭಾರತದ ಜನರು ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವಾಗ, ಅವರು ತಮ್ಮ ಹಳೆಯ ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳನ್ನು ಸಂಪೂರ್ಣವಾಗಿ ಬಿಟ್ಟುಬಿಡುವುದು ಬಹಳ ಪ್ರಾಮುಖ್ಯವಾದದ್ದಾಗಿದೆ. ಇಲ್ಲವಾದರೆ ಅವರು ತಮ್ಮ ಹಳೆಯ ದೇವರುಗಳನ್ನು ಆರಾಧಿಸುವುದಕ್ಕೆ ಮತ್ತು ದೈವಿಕತ್ವವಲ್ಲದ ಧಾರ್ಮಿಕ ಆಚಾರಗಳೊಂದಿಗೆ ಸಂಧಾನಮಾಡಿಕೊಳ್ಳುವುದಕ್ಕೆ ಶೋಧನೆಗೆ ಒಳಪಡಬಹುದು.

ಆ. ವಿಗ್ರಹರಾಧಕರ ಆರಾಧನೆಯ ಮಾರ್ಗಗಳನ್ನು ಸಂಪೂರ್ಣವಾಗಿ ನಾಶಮಾಡುವುದು: ಕಾನಾನ್ಯರು ಅವರ ದೇವರುಗಳನ್ನು ಆರಾಧಿಸುವ ನಿಯಮಗಳಂತೆ ಇಸ್ರಾಯೇಲ್ಯರು ಕೂಡ ತಮ್ಮ ದೇವರನ್ನು ಆ ಮಾರ್ಗದಲ್ಲಿ ಆರಾಧಿಸಕೂಡದೆಂದು ತಿಳಿಸಲ್ಪಟ್ಟರು. ಇದಕ್ಕೆ ಮುಖ್ಯವಾದ ಕಾರಣವೆನೆಂದರೆ ಕಾನಾನ್ಯರ ಆರಾಧನೆಯು ಅನೀತಿ ಮತ್ತು ಅಸಹ್ಯ ಆಚರಣೆಗಳಿಂದ ಕೂಡಿತ್ತು. ಅವುಗಳು ಆರಾಧನೆಯ ತಟಸ್ಥ ಸಾಂಸ್ಕೃತಿಕ ಶೈಲಿಗಳು ಮಾತ್ರ ಆಗಿಲ್ಲ. ಆದರೆ ನಿಜವಾಗಿ ಅವುಗಳು ದೈವಿಕವಲ್ಲದ ಆರಾಧನಾ ಮಾರ್ಗಗಳಾಗಿದ್ದವು.

ಹಿಂದಿನ ಕೆಲವು ಕ್ರೈಸ್ತ ಪಂಗಡಗಳು (ಉದಾಹರಣೆಗಾಗಿ ರೋಮನ್ ಕ್ಯಾಥೋಲಿಕ್ ಸಭೆ) ಹಿಂದು ಧಾರ್ಮಿಕ ಆಚರಣೆಗಳನ್ನ "ಕ್ರೈಸ್ತಿಯವುಗಳನ್ನಾಗಿ ಮಾಡುವುದಕ್ಕೆ ಪ್ರಯತ್ನಿಸಿದ್ದವು. ಹೀಗೆ ಮಾಡುವುದು ಅತ್ಯಂತ ಅಪಾಯಕಾರಿಯಾಗಿದ್ದು ಈ ಆಚಾರಗಳಲ್ಲಿ ಕೆಲವು ವಿಗ್ರಹರಾಧನೆಯ ವಿಧಾನಗಳಿಗೆ ಸೇರುತ್ತವೆ. ಇದು ಸಂಪೂರ್ಣವಾಗಿ ಸತ್ಯವೇದಕ್ಕೆ ವಿರುದ್ಧವಾದದ್ದು. ಬೇರೆಯವರ ಮೂಲ ವಸ್ತುವನ್ನು ಸೇರಿಸುವಂತಹದ್ದು ಹೊಸ ವಿಶ್ವಾಸಿಯನ್ನು ಅವನ ಮೊದಲಿನ ಅವಿಶ್ವಾಸಿಯ ಜೀವಿತದ ಮಾರ್ಗದ ಕಡೆಗೆ ಸೆಳೆಯಬಹುದು.

ಇ. ಆರಾಧನೆಗೆ ಹೊಸ ಸ್ಥಳದ ಅವಶ್ಯಕತೆ: ಇಸ್ರಾಯೇಲ್ಯರು ವಾಗ್ದಾನ ಮಾಡಿದ ಪ್ರದೇಶದಲ್ಲಿ ನೆಲೆಗೊಂಡಾಗ ಅವರು ತಮ್ಮೊಂದಿಗೆ ಅರಣ್ಯಪ್ರದೇಶದ ಅಲೆದಾಟದ ಸಮಯದಲ್ಲಿ ಹೊತ್ತುಕೊಂಡು ತಿರುಗಾಡಿದ ಒಡಂಬಡಿಕೆಯ ಪೆಟ್ಟಿಗೆಯನ್ನು

ಮತ್ತು ದೇವಗುಡಾರವನ್ನು ತಂದರು. ಈಗ ಅವರು ಒಂದು ಸ್ಥಳವನ್ನು ಗುರುತಿಸುವುದು ಅವಶ್ಯಕವಾಗಿತ್ತು (ಅಥವಾ ಪ್ರತಿಯೊಂದು ಕುಲಗಳಲ್ಲಿನ ಒಂದು ಪ್ರದೇಶವಾದರು ಆಗಿರಬಹುದು). ಅವರೊಂದಿಗಿರುವ ದೇವರ ಪ್ರಸನ್ನತೆಯು ಕಾಣುವ ಈ ಗುರುತುಗಳನ್ನು ಅವರು ಇಡಲು ಅವಶ್ಯವಾದ ಸ್ಥಳ (ಕರ್ತನ ನಾಮವನ್ನು ಸ್ಥಾಪಿಸುವ ಆತನ ನಿವಾಸ ಸ್ಥಳದಲ್ಲಿ). ಅಲ್ಲಿ ಅವರು ತಮ್ಮ ಕಾಣಿಕೆಗಳನ್ನು, ಯಜ್ಞಗಳನ್ನು ಮತ್ತು ದಶಮಾಂಶವನ್ನು ತಂದು, ಅವರ ಕುಟುಂಬಗಳೊಂದಿಗೆ ಒಟ್ಟುಗೂಡಿ ಕರ್ತನನ್ನು ಆರಾಧಿಸುತ್ತಿದ್ದರು. ಇದೇ ರೀತಿಯಲ್ಲಿ ದಕ್ಷಿಣ ಭಾರತದ ಸ್ಥಳೀಯ ವಿಶ್ವಾಸಿಗಳು ಅವರಿಗೆ ಎಲ್ಲಿ ದೇವರ ಪ್ರಸನ್ನತೆಯಲ್ಲಿ ಸಭೆ ಸೇರಿಬರಲು ಮತ್ತು ಆತನು ಮೆಚ್ಚುವಂತ ರೀತಿಯಲ್ಲಿ ಕರ್ತನನ್ನು ಆರಾಧಿಸಲು ಸಾಧ್ಯವಾಗುತ್ತದೋ ಅಂತಹ ಸ್ಥಳವನ್ನು ಹೊಂದಿಕೊಳ್ಳುವುದು ಬಹಳ ಮುಖ್ಯವಾಗಿದೆ: ಹಾಡು, ಪ್ರಾರ್ಥನೆ, ದೇವರ ವಾಕ್ಯವನ್ನು ಕೇಳುವುದು, ಅವರ ದಶಮಾಂಶ ಮತ್ತು ಕಾಣಿಕೆಗಳನ್ನು ಕೊಡುವುದು ಮತ್ತು ಸಂತೋಷವುಳ್ಳ ಅನ್ಯೋನ್ಯತೆಯನ್ನು ಹೊಂದಿಕೊಳ್ಳುವುದು.

ಈ. ಕರ್ತನ ಆಶೀರ್ವಾದಗಳಲ್ಲಿ ಸಂತೋಷಪಡುವುದು: ಈ ಆರಾಧನೆಯ ಹೊಸ ಸ್ಥಳದಲ್ಲಿ, ಇಸ್ರಾಯೇಲ್ಯರು ತಿನ್ನುವುದಕ್ಕೆ ಹೇಳಲ್ಪಟ್ಟರು (ಆಹಾರವು ಕಾಣಿಕೆಗಳಿಂದ ಬಂದ ಮಾಂಸವಾಗಿತ್ತು) ಮತ್ತು ದೇವರ ಆಶೀರ್ವಾದಗಳಲ್ಲಿ ಸಂತೋಷಪಡುವುದು.

ದಕ್ಷಿಣ ಭಾರತದ ವಿಶ್ವಾಸಿಗಳಾಗಿ ನಾವು ಇದರಿಂದ ಕೆಲವು ಸಂಗತಿಗಳನ್ನು ಕಲಿಯುತ್ತೇವೆ. ಒಟ್ಟಿಗೆ ಕೂಡಿ ಸಂತೋಷಪಡಲು ಮತ್ತು ಊಟ ಮಾಡಲು ನಮಗೆ ಅನ್ಯೋನ್ಯತೆಯ ಸಂದರ್ಭಗಳು ಹೆಚ್ಚಿರಬೇಕು. ಅನೇಕ ಸಾರಿ ನಮ್ಮ ಅನ್ಯೋನ್ಯತೆಯು ಭಾನುವಾರದ ಆರಾಧನೆಯ ಕ್ರಮವನ್ನೇ ಹಿಂಬಾಲಿಸುವಂತಹದ್ದಾಗಿದೆ. ನಮ್ಮ ಅನ್ಯೋನ್ಯತೆಯು ವಿವಿಧ ಬಗೆಯ ನಮ್ಮ ಜೀವಿತದಲ್ಲಿರುವ ದೇವರ ಅನೇಕ ಆಶೀರ್ವಾದಗಳನ್ನು ನೆನಸಿ ಒಟ್ಟಿಗೆ ಸಂತೋಷಪಡುವುದು.

**ಧರ್ಮೋಪದೇಶಕಾಂಡ ಉತ್ತರಗಳು 11: ಜೀವ ಮತ್ತು ಮರಣ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಇವುಗಳು ಇಸ್ರಾಯೇಲ್ಯರ ಭವಿಷ್ಯದ ಕುರಿತು ಮೋಶೆಯು ಪ್ರವಾದಿಸಿದ ಮುಖ್ಯಾಂಶಗಳು (ವ.1-10):

   ಅ. ಇಸ್ರಾಯೇಲ್ಯರು ಚದುರಿಸಲ್ಪಡುವರು (ವ.1).

   ಆ. ಅವರು ಪುನಃ ದೇವರ ಕಡೆಗೆ ತಿರುಗಿಕೊಂಡು ಆತನಿಗೆ ವಿಧೇಯರಾಗುವುದಕ್ಕೆ ಪ್ರಾರಂಭಿಸಿದರು (ವ.2).

   ಇ. ಅವರು ಚದುರಿಸಲ್ಪಟ್ಟ ದೂರ ಮತ್ತು ಸಮೀಪ ದೇಶಗಳಿಂದ ಪುನಃ ಹಿಂದಕ್ಕೆ ಕರೆಯಲ್ಪಡುವರು (ವ.2-4).

   ಈ. ದೇವರು ಅವರಿಗೆ ತಿರುಗಿ ಭೂಮಿಯನ್ನು ಕೊಡುವನು (ವ.5).

   ಉ. ಅವರ ಸಂಖ್ಯೆಯು ಹೆಚ್ಚಲ್ಪಡುವುದು ಮತ್ತು ಅವರ ಸ್ವತ್ತು ಮೊದಲಿಗಿಂತ ಹೆಚ್ಚಾಗುವುದು (ವ.5).

   ಊ. ದೇವರು ಅವರ ಹೃದಯಗಳಿಗೆ ಸುನ್ನತಿ ಮಾಡುವನು (ವ.6), ಮತ್ತು ಅವರು ಪುನಃ ದೇವರ ಆಜ್ಞೆಗಳಿಗೆ ವಿಧೇಯರಾಗುವರು (ವ.8).

   ಋ. ದೇವರು ಅವರ ವೈರಿಗಳ ಮೇಲೆ ಎಲ್ಲಾ ಶಾಪಗಳನ್ನು ಹಾಕುವನು (ವ.7).

   ಎ. ದೇವರು ಅವರ ಕೆಲಸಗಳನ್ನು ಮತ್ತು ಅವರ ಜೀವಿತಗಳನ್ನು ಆಶೀರ್ವದಿಸುವನು (ವ.8).

   ಏ. ಆದರೆ ಈ ಆಶೀರ್ವಾದಗಳಿಗೆ ಒಂದು ಷರತ್ತು ಉಂಟು: ಅವರು ಪೂರ್ಣಹೃದಯದಿಂದ ದೇವರ ಕಡೆಗೆ ತಿರುಗಿಕೊಳ್ಳಬೇಕು ಮತ್ತು ಪೂರ್ಣಹೃದಯದಿಂದಲೂ ಮತ್ತು ಪೂರ್ಣಮನಸ್ಸಿನಿಂದಲೂ ದೇವರಿಗೆ ವಿಧೇಯರಾಗಬೇಕು (ವ.2, 10).

2. ಸುನ್ನತಿ ಮತ್ತು ಅದರ ಫಲಿತಾಂಶದ ಕುರಿತು ಈ ವಾಕ್ಯಭಾಗವು ಈ ರೀತಿ ಹೇಳುತ್ತದೆ:

   ಅ. ಇದು ಇಸ್ರಾಯೇಲ್ಯರು ತಮ್ಮಷ್ಟಕ್ಕೆ ತಾವೇ ಮಾಡಿಕೊಳ್ಳುವಂತಹದ್ದಲ್ಲ. ಇದು ದೇವರು ಅವರೊಂದಿಗೆ ಯಾವುದಾದರೊಂದನ್ನು ಮಾಡುವಂತವನಾಗಿದ್ದಾನೆ.

   ಆ. ಇದು ಒಂದು ಶಾರೀರಿಕ ಸುನ್ನತಿಯಲ್ಲ; ಒಬ್ಬ ವ್ಯಕ್ತಿಯ ಮನೋವೃತ್ತಿಯನ್ನು ಬದಲಾಹಿಸುವಂತಹ ಆತ್ಮೀಕ ಸುನ್ನತಿಯಾಗಿದೆ.

   ಇ. ಫಲಿತಾಂಶವೇನೆಂದರೆ ಅವರು ತಮ್ಮ ಪೂರ್ಣಹೃದಯದಿಮದಲೂ , ಪೂರ್ಣಆತ್ಮದಿಂದಲೂ, ಕರ್ತನನ್ನು ಪ್ರೀತಿಸುತ್ತಾರೆ ಮತ್ತು ಈ ಪ್ರೀತಿಯ ಫಲಿತಾಂಶವು ಜೀವವಾಗಿದೆ.

   ಈ. ಈ ಒಂದು ಸುನ್ನತಿ ಭವಿಷ್ಯದ ಸಂತತಿಗಳಿಗೂ ಸಹ ದೊರಕುವಂತಹದ್ದಾಗಿರುತ್ತದೆ.

3. ಇಸ್ರಾಯೇಲ್ಯರು ಪಾಲಿಸಬೇಕಾಗಿದ್ದ ಆಜ್ಞೆಗಳು ಕಠಿಣವಾದದ್ದಲ್ಲವೆಂದು ತಿಳಿಸಲು ಮೋಶೆಯು ವಿವರಿಸಿದ ವಿವರಣೆ ಇದಾಗಿದೆ (ವ.11-12):

   ಅ. ಇದು ಮಾಡುವುದಕ್ಕೆ ಬಹಳ ಕಠಿಣವೇನು ಆಗಿರಲಿಲ್ಲ ಹಾಗಾಗಿ ಅವರು ಅದನ್ನು ಮಾಡುವ ಸಾಮಾರ್ಥ್ಯವನ್ನು ಹೊಂದಿದರು (ವ.11). ಆತನು "ಹೊಂದುವುದಕ್ಕೆ ಅಸಾಧ್ಯವಾದದ್ದೂ ಅಲ್ಲ" ಎಂಬ ರೂಪಾಲಂಕಾರವನ್ನು ಉಪಯೋಗಿಸುತ್ತಿದ್ದಾನೆ.

ಆ. ಇದು ಅವರು ಬಹಳ ದೂರದಲ್ಲಿ ನೋಡುವಂತಹದ್ದು ಅಥವಾ ಹುಡುಕಾಡಿ ಪಡೆಯುವಂತಹದ್ದಲ್ಲ (ಆತನು ತನ್ನ ಅಂಶವನ್ನು ತಿಳಿಸುವುದಕ್ಕಾಗಿ "ಮೇಲಣ ಲೋಕದಲ್ಲಿರುವ ಮಾತಲ್ಲ" ಮತ್ತು "ಸಮುದ್ರದ ಆಚೆ ಇರುವ ಮಾತಲ್ಲ" ಎಂಬ ರೂಪಾಲಂಕಾರಗಳನ್ನು ಉಪಯೋಗಿಸುತ್ತಿದ್ದಾನೆ). ಖಂಡಿತ ಅಲ್ಲ, ಈ "ವಾಕ್ಯವು" (ಅವರು ದೇವರಿಗೆ ವಿಧೇಯರಾಗಿ ಆತನ ಆಜ್ಞೆಗಳನ್ನು ಹಿಂಬಾಲಿಸಬೇಕೆಂಬ ಮೋಶೆಯ ಕೋರಿಕೆಗೆ "ಹೌದು" ಎಂದು ಹೇಳುವ, ಸಮರ್ಪಣೀಯ ಮಾತನ್ನು ಉಲ್ಲೇಖಿಸುತ್ತದೆ) "ಅವರ ಬಾಯಲ್ಲಿಯೂ" (ಅದನ್ನು ಅವರು ಸುಲಭವಾಗಿ ಪುನರುಚ್ಚರಿಸುವಂತೆ) ಮತ್ತು "ಅವರ ಹೃದಯದಲ್ಲೂ" ಇದೆ (ಅವರು ಸುಲಭವಾಗಿ ಅದನ್ನು ಅರ್ಥಮಾಡಿಕೊಂಡು ಮತ್ತು ಅದಕ್ಕೆ ಪ್ರತಿಕ್ರಿಯಿಸುವಂತೆ).

4. ಮೋಶೆಯು ಇಸ್ರಾಯೇಲ್ಯರ ಮುಂದೆ ಎರಡು ಆಯ್ಕೆಗಳನ್ನು ಇಡುತ್ತಿದ್ದಾನೆ (ವ.11-20):

   ಅ. ದೇವರನ್ನು ಪ್ರೀತಿಸುವುದಕ್ಕೆ ಆಯ್ಕೆ ಮಾಡುವುದು, ಅಂದರೆ ಅವರು ಆತನು ಮೆಚ್ಚುವ ಜೀವಿತದಲ್ಲಿ ಜೀವಿಸುವುದು ಮತ್ತು ಆತನ ಆಜ್ಞೆಗಳನ್ನು ಹಿಂಬಾಲಿಸುವುದು ಎಂದರ್ಥ. ಆಗ ಅವರು ದೇವರ ಆಶೀರ್ವಾದಗಳನ್ನು, ಸಮೃದ್ಧಿಯನ್ನು ಮತ್ತು ಜೀವವನ್ನು ಅನುಭವಿಸುವರು.

   ಆ. ದೇವರಿಂದ ದೂರವಾಗುವುದಕ್ಕೆ ಆಯ್ಕೆ ಮಾಡುವುದು, ಅಂದರೆ ಆತನ ಆಜ್ಞೆಗಳಿಗೆ ಅವಿಧೇಯರಾಗುವುದು ಮತ್ತು ಇತರ ದೇವರುಗಳನ್ನು ಆರಾಧಿಸುವುದಾಗಿದೆ. ಇದರಿಂದ ಅವರು ಮರಣ, ನಾಶನ ಮತ್ತು ವಾಗ್ದಾನ ಮಾಡಿದ ದೇಶದಲ್ಲಿ ಅವರ ಜೀವಿತಾವಧಿಯು ಕಡಿಮೆಯಾಗಿರುವುದು.

5. ಮೋಶೆಯು ಇಸ್ರಾಯೇಲ್ಯರಿಗೆ ಆಯ್ಕೆ ಮಾಡಬೇಕೆಂದು ಹೇಳಿದ ಸಂಗತಿಗಳಿಗೆ ಭೂಮ್ಯಾಕಾಶಗಳು ಸಾಕ್ಷಿಗಳಾಗಿವೆ.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಮೋಶೆಯ ಪ್ರವಾದನೆಯು (ವ.1-10) ಮಾತುಗಳಲ್ಲಿ ಬಂದು 3400 ವರ್ಷಗಳು ಗತಿಸಿದ್ದು ಆ ದೃಷ್ಟಿಕೋನದಲ್ಲಿ ಅದನ್ನು ಹೀಗೆ ಅರ್ಥೈಸಿಕೊಳ್ಳಬಹುದು:

   ಅ. ಇತಿಹಾಸವು ನಮ್ಮನ್ನು ಕೆಲವು ಅಡ್ಡಿಗಳೊಂದಿಗೆ ತೋರಿಸುತ್ತದೆ, ಇಸ್ರಾಯೇಲ್ಯರು ಮೋಶೆಯು ಅವರು ಮಾಡಬಹುದೆಂದು ಮುಂಚಿತವಾಗಿ ಹೇಳಿದಂತೆ, ಅವರು ತಪ್ಪಾದ ಆಯ್ಕೆಯನ್ನು ಮಾಡಿದರು. ಪರಿಣಾಮವಾಗಿ ಅವರು ದೇಶಗಳಲ್ಲಿ ಚದುರಿಸಲ್ಪಟ್ಟರು. ಇದು ಮೂರು ಪ್ರಮುಖ ಸನ್ನಿವೇಶಗಳಲ್ಲಿ ಉಂಟಾಯಿತು:

   - ಮೊದಲನೇಯದಾಗಿ ಕ್ರಿ.ಪೂ. 722 ರಲ್ಲಿ ಅಶ್ಶೂರದ ಸಾಮ್ರಾಜ್ಯವು ಉತ್ತರ ರಾಜ್ಯವನ್ನು ಅಧೀನ ಮಾಡಿಕೊಂಡಾಗ ಉತ್ತರ ರಾಜ್ಯದ 10 ಕುಲಗಳು ಚದುರಿಸಲ್ಪಟ್ಟವು.
   - ನಂತರ ಕ್ರಿ.ಪೂ. 586 ರಲ್ಲಿ ಬಾಬೆಲ್ ಸಾಮ್ರಾಜ್ಯವು ದಕ್ಷಿಣ ಸಾಮ್ರಾಜ್ಯವನ್ನು ಅಧೀನಮಾಡಿಕೊಂಡಾಗ ದೇಶದ ನಾಯಕರುಗಳನ್ನು ಬಾಬೆಲಿಗೆ ಸೆರೆಯಾಳಾಗಿ ಕೊಂಡೊಯ್ದರು.
   - ಕೊನೇಯದಾಗಿ ಕ್ರಿ.ಶ. 70 ರಲ್ಲಿ ರೋಮ್ ಸಾಮ್ರಾಜ್ಯವು ಯೆರೂಸಲೇಮನ್ನು ನಾಶಮಾಡಿದಾಗ ಉಳಿದ ಯೆಹೂದ್ಯ ರಾಷ್ಟ್ರಕ್ಕೆ ಒಂದು ಮುಕ್ತಾಯವನ್ನು ನೀಡಿತು.

   ಆ. ಚದುರಿಸಲ್ಪಡುವಿಕೆ ಅವಧಿಯ ನಂತರ ವಾಗ್ದಾನ ದೇಶಕ್ಕೆ ಇಸ್ರಾಯೇಲ್ಯರನ್ನು ಪುನಃ ಹಿಂದಕ್ಕೆ ಕರೆತಂದಂತಹ ಎರಡು ಪ್ರಮುಖ ಸಂದರ್ಭಗಳನ್ನು ಇತಿಹಾಸ ನಮಗೆ ತೋರಿಸುತ್ತದೆ.

- ಮೊದಲನೇಯದಾಗಿ ಕ್ರಿ.ಪೂ. 539 ರಲ್ಲಿ ಪಾರಸಿಯ ಸಾಮ್ರಾಜ್ಯವು ಬಾಬೆಲ್ ಸಾಮ್ರಾಜ್ಯವನ್ನು ಸೋಲಿಸಿದಾಗ, ಯೆಹೂದ್ಯರು ಯೂದಾಯಕ್ಕೆ ಹಿಂತಿರುಗಲು ಅನುಮತಿ ನೀಡಿತು. ಕೆಲವರು ಹಿಂದಿರುಗಿದರು, ಅನೇಕರು ಅಲ್ಲೇ ವಾಸಿಸಿದರು.
- 1948 ರಲ್ಲಿ ಆಧುನಿಕ ಇಸ್ರಾಯೇಲ್ ಸಾಮ್ರಾಜ್ಯವು ಸಿಕ್ಕಾಗ, ಅಲ್ಲಿಂದ ನಂತರದಲ್ಲಿ ಪ್ರಪಂಚಾದ್ಯಂತ ಇದ್ದ ಲಕ್ಷಗಟ್ಟಲೆ ಯೆಹೂದ್ಯರು ಇಸ್ರಾಯೇಲಿನಲ್ಲಿ ನೆಲೆಸಿದರು.

ಇ. ಈ ಪ್ರವಾದನೆಯ ಕೆಲವೊಂದು ಭಾಗಗಳು ನೆರವೇರಲ್ಪಟ್ಟಿವೆ ಎಂಬುದನ್ನು ನಮ್ಮ ಹೊಸ ಒಡಂಬಡಿಕೆಯ ದೃಷ್ಠಿಕೋನದಲ್ಲಿ ಅರ್ಥೈಸಿಕೊಳ್ಳಬಹುದಾಗಿದೆ ಮತ್ತು ಯೇಸು ಕ್ರಿಸ್ತನಲ್ಲಿನ ಹೊಸ ಒಡಂಬಡಿಕೆಯ ಮುಖಾಂತರ ಇನ್ನೂ ಕೆಲವು ನೆರವೇರಬೇಕಿದೆ:

- ನಾವು ಯೇಸು ಕ್ರಿಸ್ತನನ್ನು ನಮ್ಮ ಸ್ವಂತ ರಕ್ಷಕನನ್ನಾಗಿ ಸ್ವೀಕರಿಸಿಕೊಳ್ಳುವಾಗ ನಮ್ಮ ಹೃದಯದ ಸುನ್ನತಿಯು ನೆರವೇರಲ್ಪಡುವುದು. ಇದು ಧರ್ಮಶಾಸ್ತ್ರದ ಎಲ್ಲಾ ವಿವರಗಳನ್ನು ಅನುಸರಿಸುವ ನಮ್ಮ ಸ್ವ ಪ್ರಯತ್ನದಿಂದ ಇದನ್ನು ನಾವು ನೆರವೇರಿಸುವುದಕ್ಕೆ ಸಾಧ್ಯವಿಲ್ಲ. ಇದು ಕ್ರೂಜೆಯಲ್ಲಿ ಮರಣವನ್ನು ಹೊಂದಿದ ಯೇಸು ಕ್ರಿಸ್ತನ ತ್ಯಾಗದ ಕಾರ್ಯದಲ್ಲಿ ದೇವರು ತೋರಿದ ಕೃಪೆಯ ಮುಖಾಂತರ ಮಾತ್ರ ಸಂಭವಿಸುತ್ತದೆ.
- ಧರ್ಮಶಾಸ್ತ್ರದ ಅವಶ್ಯಕತೆಯನ್ನು ಯೇಸು ಕ್ರಿಸ್ತನು ನೆರವೇರಿಸಿದನು (ರೋಮ. 8:1-4, ಕೊಲೊಸ್ಸೆ. 2:13-15). ನಂಬುವವರೆಲ್ಲರಿಗೆ ನೀತಿಯನ್ನು ದೊರಕಿಸಿರುವ ಕ್ರಿಸ್ತನಿಂದಲೇ ಕರ್ಮಮಾರ್ಗಕ್ಕೆ ಅಂತ್ಯವಾಯಿತು (ರೋಮ. 10:4).
- ಯೆಹೂದ್ಯರು ಇಸ್ರಾಯೇಲಿಗೆ ಹಿಂತಿರುಗುವುದಕ್ಕಿಂತಲೂ ಜನರನ್ನು ಒಟ್ಟುಗೂಡಿಸುವ ಮತ್ತು ಪುನಃ ಸ್ಥಾಪಿಸುವ ಇನ್ನೊಂದು ದೊಡ್ಡ ಕಾರ್ಯವುಂಟಾಗಲಿಕ್ಕಿದೆ. "ಪೂರ್ವ ಪಶ್ಚಿಮ ಉತ್ತರ ದಕ್ಷಿಣ ದಿಕ್ಕುಗಳಿಂದಲೂ ಜನರು ಬಂದು ದೇವರ ರಾಜ್ಯದಲ್ಲಿ ಊಟಕ್ಕೆ ಕೂಡ್ರುವರು (ಲೂಕ 13:29), ಯಾವಾಗ ಜನರು ಎಲ್ಲಾ ದಿಕ್ಕುಗಳಿಂದ ಬರುವರೋ ಇದು ದೇವರ ರಾಜ್ಯದಲ್ಲಿನ ಹಬ್ಬವಾಗಿದೆ ಮತ್ತು ಯೋಹಾನನು ದರ್ಶನದಲ್ಲಿ ಕಂಡಂತಹ ಜನರು ಇವರೇ ಆಗಿದ್ದಾರೆ: "ಇವುಗಳಾದ ಮೇಲೆ ಇಗೋ, ಯಾರಿಂದಲೂ ಎಣಿಸಲಾಗದಂಥ ಮಹಾಸಮೂಹವು ಸಿಂಹಾಸನದ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ನಿಂತಿರುವುದನ್ನು ಕಂಡೆನು. ಅವರು ಸಕಲ ಜನಾಂಗಕುಲ ಪ್ರಜೆಗಳವರೂ ಸಕಲ ಭಾಷೆಗಳನ್ನಾಡುವವರೂ ಆಗಿದ್ದರು. ಅವರು ಬಿಳೀ ನಿಲುವಂಗಿಗಳನ್ನು ತೊಟ್ಟುಕೊಂಡು ತಮ್ಮ ಕೈಗಳಲ್ಲಿ ಖರ್ಜೂರದ ಗರಿಗಳನ್ನು ಹಿಡಿದುಕೊಂಡಿದ್ದರು (ಪ್ರಕಟಣೆ 7:9). ಯೇಸುವಿನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬರು ಆ ಅದ್ಭುತವಾದ ಸಂದರ್ಭಕ್ಕಾಗಿ ಭರವಸೆಯಿಂದ ಎದುರುನೋಡಬಹುದಾಗಿದೆ.

2. 3400 ವರ್ಷಗಳ ಮುಂಚೆ ಇಸ್ರಾಯೇಲ್ಯರಿಗೆ ಮೋಶೆಯು "ಜೀವ ಅಥವಾ ಮರಣದ ಪ್ರಸ್ತಾಪವನ್ನು" ಮಾಡಿದ್ದ ಈ ಸಂಗತಿಯನ್ನು ಇಂದು ದಕ್ಷಿಣ ಭಾರತದ ಸಭೆಗಳ ಸೇವೆಯಲ್ಲಿ ಅನ್ವಯಿಸಿಕೊಳ್ಳಬಹುದಾಗಿದೆ:

ಅ. ಇಂದು ಸಹ ಇಲ್ಲಿ ಇನ್ನೂ ಜನರು ಜೀವ ಮತ್ತು ಮರಣವನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.

ಆ. ಪ್ರತಿಯೊಬ್ಬರು ವೈಯಕ್ತಿಕವಾಗಿ ಈ ಆಯ್ಕೆಯನ್ನು ಮಾಡಿಕೊಳ್ಳುವಂತೆ ನೀಡುವುದೇ ಸಭೆಯ ಪ್ರಮುಖ ಸೇವೆಯಾಗಿದೆ, ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ … ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ (ಮತ್ತಾಯ 28:18-20).

ಇ. ಯೇಸುವಿನೊಂದಿಗೆ ಈ ಆಯ್ಕೆಯನ್ನು ಮಾಡಿಕೊಳ್ಳಬೇಕು. ಯೇಸುವಿಗೆ "ಹೌದು" ಎಂದು ಹೇಳುವುದು ನಿತ್ಯತ್ವಕ್ಕೆ ನಡೆಸುತ್ತದೆ (ಯೋಹಾನ 10:10, 20:31). ಯೇಸುವಿಗೆ "ಇಲ್ಲ" ಎಂದು ಹೇಳುವುದು ಮರಣಕ್ಕೆ, ನಿತ್ಯ ಮರಣಕ್ಕೆ ನಡೆಸುತ್ತದೆ.

ಈ. "ಒಳ್ಳೆಯ ಜನರಾಗುವುದಕ್ಕಾಗಿ ಪ್ರಯತ್ನಿಸುವುದು" ಅಥವಾ "ಕೆಟ್ಟ ಜನರಾಗುವುದಕ್ಕಾಗಿ ನಿರ್ಧರಿಸುವು"ದರ ಕುರಿತು ಆಯ್ಕೆ ಅಲ್ಲ. ಇದು "ದೇಶದ ಕಾನೂನನ್ನು ಪಾಲಿಸುವುದು" ಅಥವಾ "ದೇಶದ ಕಾನೂನನ್ನು ಮುರಿಯುವುದರ" ಕುರಿತು ಅಲ್ಲ. ಇದು "ಒಳ್ಳೆಯ ನೈತಿಕ ಗುಣಮಟ್ಟದ ಪ್ರಕಾರ ಜೀವಿಸುವುದು" ಅಥವಾ "ದುಷ್ಟ ಕಾರ್ಯಗಳನ್ನು ಮಾಡುತ್ತಾ, ಕುಡಿಯುತ್ತಾ ಮತ್ತು ಜೂಜಾಡುತ್ತಾ ಕೆಟ್ಟ ಜೀವಿತದಲ್ಲಿ ಜೀವಿಸುವುದರ" ಕುರಿತು ಅಲ್ಲ. ಇದು "ಅಗತ್ಯತೆಯಲ್ಲಿರುವವರಿಗೂ ಮತ್ತು ಬಡವರಿಗೂ ತ್ಯಾಗವಾಗಿ ಹಣವನ್ನು ಸಹಾಯಮಾಡುವುದು" ಅಥವಾ "ನಿಮ್ಮ ಎಲ್ಲಾ ಹಣವನ್ನು ನಿಮ್ಮ ಸ್ವಂತ ಭೋಗಕ್ಕಾಗಿ ಸ್ವಾರ್ಥಕ್ಕಾಗಿ" ವೆಚ್ಚ ಮಾಡುವುದರ ಕುರಿತು ಅಲ್ಲ. ಅಲ್ಲವೇ ಅಲ್ಲ, ಆಯ್ಕೆಯು ಯೇಸುವಿಗೆ "ಹೌದು" ಅಥವಾ "ಇಲ್ಲ" ಎಂದು ಹೇಳುವುದಾಗಿದೆ, ಯಾಕೆಂದರೆ ಆತನೇ ನಂಬುವವರೆಲ್ಲರಿಗೆ ನೀತಿಯನ್ನು ದೊರಕಿಸಿರುವ ಕ್ರಿಸ್ತನಿಂದಲೇ ಕರ್ಮಮಾರ್ಗಕ್ಕೆ ಅಂತ್ಯವಾಯಿತು (ರೋಮ. 10:4).

**ಧರ್ಮೋಪದೇಶಕಾಂಡ ಉತ್ತರಗಳು 12: ಮೋಶೆಯ ಉತ್ತರಾಧಿಕಾರಿಯಾದ ಯೆಹೋಶುವನು**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ಮೋಶೆಯು ಈಗ 120 ವರ್ಷದವನಾಗಿದ್ದನು. ಆದರೆ ಇಸ್ರಾಯೇಲ್ಯರ ನಾಯಕನಾಗಿ ಮುಂದುವರೆಯಲು ಆತನಿಗೆ ಅಸಾಧ್ಯವಾಗಿ ಮಾಡಿದ್ದು ಆತನ ವಯಸ್ಸು ಅಲ್ಲ. ಆತನು ಯೊರ್ದನ್ ನದಿಯನ್ನು ದಾಟದಂತೆಯು ಮತ್ತು ವಾಗ್ದಾನದ ದೇಶವನ್ನು ಪ್ರವೇಶಿಸಲಿಕ್ಕೆ ಆಗದಂತೆ ಮಾಡಿದ್ದು ಏನೆಂದರೆ ಆತನು ಪ್ರವೇಶಿಸಲಿಕ್ಕೆ ಅವಕಾಶ ಕೊಡದ ದೇವರ ನಿರ್ಧಾರವೇ ಆಗಿತ್ತು. ಆ ರೀತಿ ಮಾಡಲು ಅನುಮತಿಸಲಿಲ್ಲ /ಅಪ್ಪಣೆ ನೀಡಲಿಲ್ಲ.

2. ಇಸ್ರಾಯೇಲ್ಯರು ಯೊರ್ದನ್ ಹೊಳೆಯ ಬೇರೊಂದು ಭಾಗದಿಂದ ಕಾನಾನ್ಯರ ವಿರುದ್ಧ ಹೋದಾಗ ಅವರು ಬಲವುಳ್ಳವರಾಗಿ ಧೈರ್ಯದಿಂದ (ಮತ್ತು ಹೆದರಿಕೊಳ್ಳಬಾರದು) ಇರಬೇಕೆಂದು ಮೋಶೆ ಹೇಳಿದ್ದನು, ಯಾಕೆಂದರೆ

   ಅ. ದೇವರು ಅವರ ಮುಂದೆ ಯೊರ್ದನ್ ನದಿಯನ್ನು ದಾಟುವವನಾಗಿದ್ದನು (ವ.3).

   ಆ. ಆತನು ಅವರ ಮುಂದೆ ಕಾನಾನ್ಯರನ್ನು ಸಂಹರಿಸುವವನಾಗಿದ್ದನು (ವ.3).

   ಇ. ದೇವರು ಅವರೊಂದಿಗೆ ಹೋಗುವವನಾಗಿದ್ದಾನೆ ಮತ್ತು ಅವರನ್ನೆಂದಿಗೂ ಕೈಬಿಡುವುದಿಲ್ಲ, ತೊರೆಯುವುದಿಲ್ಲ (ವ.6).

   ಈ. ಇದರ ಜೊತೆಯಲ್ಲಿ, ಅವರ ಹೊಸ ನಾಯಕನಾದ ಯೆಹೋಶುವನು ಸಹ ಅವರ ಮುಂದೆ ಯೊರ್ದನ್ ನದಿಯನ್ನು ದಾಟುವವನಾಗಿದ್ದನು (ವ.3).

3. ಯೆಹೋಶುವನಿಗೆ ಮೋಶೆಯು ನೀಡಿದ ಸಲಹೆಗಳು:

   ಅ. ದೇವರು ಆತನ ಮೇಲೆ ಭರವಸವಿಟ್ಟು ಕೊಟ್ಟ ಎರಡು ಕಾರ್ಯಗಳನ್ನು ಆತನು ನೆರವೇರಿಸಲು ಶೂರನಾಗಿ ಧೈರ್ಯದಿಂದ ಇರುವಂತೆ ಮೋಶೆಯು ಯೆಹೋಶುವನಿಗೆ ಹೇಳಿದನು (ವ.7):

   - ಇಸ್ರಾಯೇಲ್ಯರನ್ನು ವಾಗ್ದಾನ ಮಾಡಿದ ದೇಶಕ್ಕೆ ಕರೆದುಕೊಂಡು ಹೋಗುವುದು
   - ಕುಲಗಳ ಮಧ್ಯದಲ್ಲಿ ದೇಶವನ್ನು ಹಂಚುವುದು

   ಆ. ಮೋಶೆ ಯೆಹೋಶುವನಿಗೆ ಕರ್ತನು ತಾನೇ ನಿನ್ನ ಮುಂದೆ ಹೋಗಲಿಕ್ಕಿದ್ದು ನಿನ್ನೊಂದಿಗೆ ಸದಾ ಇರುವವನಾಗಿದ್ದಾನೆಂದು ಹೇಳಿ ಉತ್ತೇಜಿಸಿದನು (ವ.8).

4. ಮೋಶೆ ಧರ್ಮಶಾಸ್ತ್ರದೊಂದಿಗೆ ಈ ಕಾರ್ಯಗಳನ್ನು ಮಾಡಿದನು:

   ಅ. ಅವನು ಅದನ್ನು ಬರೆದನು

   ಆ. ಅವನು ಅದನ್ನು ಯಾಜಕರಿಗೆ ಕೊಟ್ಟನು. ಒಂದು ಧರ್ಮಶಾಸ್ತ್ರದ ಪ್ರತಿಯನ್ನು ಮಹಾ ಪರಿಶುದ್ಧಸ್ಥಳದ ಮಂಜೂಷದ ಬಳಿಯಲ್ಲಿ ಇಡಲ್ಪಟ್ಟಿತು (31:24-26). ಎರಡು ಕಲ್ಲಿನ ಹಲಿಗೆಗಳು ಮಂಜೂಷದಲ್ಲಿ ಇಡಲ್ಪಟ್ಟವು (10:5).

   ಇ. ಅವನು ಯಾಜಕರು ಇದರೊಂದಿಗೆ ಏನು ಮಾಡಬೇಕೆಂದು ಹೇಳಿದನು: ಪ್ರತಿ 7 ನೇ ವರ್ಷದ ಪರ್ಣಶಾಲೆ ಹಬ್ಬದ ಸಮಯದಲ್ಲಿ ಅದನ್ನು ಅವರು ಇಸ್ರಾಯೇಲ್ಯರಿಗೆ ಓದಿ ತಿಳಿಸಬೇಕೆಂದು ಹೇಳಿದನು.

   ಈ. ಜನರು ಧರ್ಮಶಾಸ್ತ್ರಕ್ಕೆ ಕಿವಿಗೊಡಬೇಕು ಮತ್ತು ಕರ್ತನಿಗೆ ಭಯಪಡುವುದನ್ನು ಮತ್ತು ಧರ್ಮಶಾಸ್ತ್ರದ ಎಲ್ಲಾ ಆಜ್ಞೆಗಳನ್ನು ಅನುಸರಿಸುವುದನ್ನು ಕಲಿಯಬೇಕು.

ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು

1. ದೇವರು ಮೋಶೆಗೆ ಆತನು ವಾಗ್ದಾನ ಮಾಡಿದ ದೇಶದೊಳಕ್ಕೆ ಇಸ್ರಾಯೇಲ್ಯರನ್ನು ನಡೆಸಲು ಅನುಮತಿಸಲಿಲ್ಲ. ಯಾಕೆಂದರೆ ಅವನು ಮರುಭೂಮಿಯಲ್ಲಿ ಅಲೆದಾಡುವ ಸಮಯದಲ್ಲಿ ದೇವರ ಆಜ್ಞೆಗಳಿಗೆ ಅವಿಧೇಯನಾಗಿದ್ದರ ನಿಮಿತ್ತದಿಂದಲೇ (ಧರ್ಮೋ. 1:37; 3:23-27; 4:21-22; ಅರಣ್ಯಕಾಂಡ 20:2-3 ನೋಡಿರಿ).

ಹಾಗಾದರೆ ಇಂದಿನ ನಮ್ಮ ದಕ್ಷಿಣ ಭಾರತದ ಸಭೆ ಸನ್ನಿವೇಶಕ್ಕೆ ಮೋಶೆಯ ಉದಾಹರಣೆಯಿಂದ ನಾವು ಏನನ್ನು ಕಲಿಯಲು ಸಾಧ್ಯ?

ಅ. ನಾವು ನಮ್ಮ ಸ್ವಂತ ಸನ್ನಿವೇಶಕ್ಕೆ ತಕ್ಕಂತೆ ದೇವರ "ನಿಷೇಧಾಜ್ಞೆಯನ್ನು" ಸ್ವಯಂ ಪ್ರಜ್ಞೆಯಿಲ್ಲದೆ ಅಳವಡಿಸಿಕೊಳ್ಳಬಾರದು ಯಾಕೆ ಇಲ್ಲ? ಇಸ್ರಾಯೇಲ್ಯರಿಗಾಗಿ ದೇವರು ಇಟ್ಟ ಯೋಜನೆಗಳಲ್ಲಿ ಮೋಶೆಯು ಸರಿಸಾಟಿಯಿಲ್ಲದಂತಹ ಸ್ಥಾನವನ್ನು ಹೊಂದಿದ್ದನು. ಹಾಗಾಗಿ ಅವನ ಎಲ್ಲಾ ಜವಾಬ್ದಾರಿಯುತ ಕಾರ್ಯಗಳೊಂದಿಗೆ ನಾವು ನಮ್ಮನ್ನು ಹೋಲಿಸಿಕೊಳ್ಳುವುದಾದರೆ ಇದು ಸಂಶಯಾಸ್ಪದವಾದುದ್ದಾಗಿದೆ.

ಆ. ಧರ್ಮೋಪದೇಶಕಾಂಡದ ಮೂರು ಉಲ್ಲೇಖಗಳಲ್ಲಿ ದೇವರು ಮೋಶೆಯೊಂದಿಗೆ ಕೋಪಗೊಂಡಿದ್ದರಿಂದ ಅವನು ಇಸ್ರಾಯೇಲ್ಯರನ್ನು ದೂಷಿಸು ಆದೇ ಅರಣ್ಯಕಾಂಡದಲ್ಲಿನ ಕಥೆಯು ವಾಸ್ತವಿಕವಾಗಿ ಮೋಶೆಯು ನಕರಾತ್ಮಕ ಬೆಳಕಿನಲ್ಲಿದ್ದಾನೆ ಎಂಬುದನ್ನು ತೋರಿಸುತ್ತದೆ. ಇಸ್ರಾಯೇಲ್ಯರು ಮೋಶೆಯೊಂದಿಗೆ ಜಗಳವಾಡುವುದರ ಮೂಲಕ ಅವನ ತಾಳ್ಮೆಯನ್ನು ಪರೀಕ್ಷಿಸಿದ್ದು ಸತ್ಯವಾದುದ್ದಾಗಿದೆ. ಆದರೆ ಮೋಶೆ ತನ್ನ ಕೋಪವನ್ನು ನಿಯಂತ್ರಿಸಿಕೊಳ್ಳಬೇಕಾಗಿತ್ತು ಮತ್ತು ದೇವರ ಸ್ಪಷ್ಟವಾದ ಸಲಹೆಗೆ ಅವಿಧೇಯನಾಗಬಾರದಿತ್ತು: ದೇವರು ಮೋಶೆಗೆ ಆ ಕಲ್ಲಿನೊಂದಿಗೆ ಮಾತನಾಡಲು ಹೇಳಿದರು; ಅದರ ಬದಲಾಗಿ ಅವನು ತನ್ನ ಕೋಲಿನಿಂದ ಎರಡು ಸಾರಿ ಅದಕ್ಕೆ ಹೊಡೆದನು. ನಾವು ಇಲ್ಲಿ ನಮಗಾಗಿ ಮೂರು ಪಾಠಗಳನ್ನು ಕಂಡುಕೊಳ್ಳಬಹುದು:

- ನಾವು ದೇವಜನರಿಗೆ ಒಳ್ಳೆಯ ನಾಯಕನಾಗಿರಬೇಕೆಂದು ಬಯಸಿದರೆ, ನಾವು ನಮ್ಮ ವೈಯಕ್ತಿಕ ತಪ್ಪುಗಳಿಗಾಗಿ ವಿಶ್ವಾಸಿಗಳನ್ನು ದೂಷಿಸಬಾರದು.
- ದೇವರು ನಮಗೆ ಏನನ್ನಾದರೂ ಮಾಡಲು ಸೂಚಿಸುವಾಗ ನಾವು ಎಚ್ಚರಿಕೆಯಿಂದ ವಿಧೇಯರಾಗಲೇಬೇಕು. ದೇವರು ಯಾವಾಗಲೂ ಒಳ್ಳೆಯದನ್ನೇ ಬಯಸುವಾತನಾಗಿದ್ದಾನೆ, ದೇವರ ಆಜ್ಞೆಗಳಿಗೆ ಅವಿಧೇಯರಾಗಲು ನಾವು ಯಾರು?
- ಒಬ್ಬ ಸಭಾನಾಯಕನು ತನ್ನ ಕೋಪವನ್ನು ನಿಯಂತ್ರಿಸಿಕೊಳ್ಳಬೇಕು. ಅವನು ಸ್ವನಿಯಂತ್ರಣ ಹೊಂದಿರಬೇಕು, ಹಿಂಸಾತ್ಮಕನಾಗಿರಬಾರದು, ಆದರೆ ಸಾತ್ವಿಕನಾಗಿರಬೇಕು, ಜಗಳವಾಡುವವನಾಗಿರಬಾರದು (1 ತಿಮೊಥೆ 3:2-3).

ಇ. ಅರಣ್ಯಕಾಂಡ 20:12 ರಲ್ಲಿ ದೇವರು ಮೋಶೆಗೆ, ನೀವು ನನ್ನನ್ನು ನಂಬದವರಾಗಿ ಇಸ್ರಾಯೇಲ್ಯರ ಎದುರಿನಲ್ಲಿ ನನ್ನ ಗೌರವವನ್ನು ಕಾಪಾಡದೇ ಹೋದರಿಂದ ಈ ಸಮೂಹದವರನ್ನು ನಾನು ಅವರಿಗೆ ವಾಗ್ದಾನ ಮಾಡಿದ ದೇಶದೊಳಕ್ಕೆ ನೀವು ಕರಕೊಂಡು ಹೋಗಕೂಡದು ಎಂದು ಹೇಳಿದನು. ಒಬ್ಬ ಸಭಾ ನಾಯಕನು ವಿಶ್ವಾಸಿಗಳ ಮುಂದೆ ದೇವರನ್ನು ಗೌರವಿಸುವುದು ಒಂದು ಪ್ರಾಮುಖ್ಯವಾದ ಸಂಗತಿ ಎಂಬುದನ್ನು ನಾವು ಇದರಿಂದ ಕಲಿಯುತ್ತೇವೆ.

- ದೇವರ ಪ್ರೀತಿ ಮತ್ತು ದೇವರ ಪರಿಶುದ್ಧತೆ ಎರಡನ್ನು ಜನರು ಅರ್ಥೈಸಿಕೊಳ್ಳುವ ರೀತಿಯಲ್ಲಿ ಒಬ್ಬ ನಾಯಕನು ದೇವರ ಕುರಿತು ಮಾತನಾಡಬೇಕು (ದೇವರ ಕುರಿತು ಬೋಧಿಸಬೇಕು ಮತ್ತು ಪ್ರಸಂಗಿಸಬೇಕು).
- ಒಬ್ಬ ನಾಯಕನು ದೇವರಿಗೂ ತನ್ನ ಜನರಿಗೂ ಗೌರವವನ್ನು ಉಂಟುಮಾಡುವ ರೀತಿಯಲ್ಲಿ ನಡೆದುಕೊಳ್ಳತಕ್ಕದ್ದು.

ಈ. ದೇವರಿಗೆ ಅವಿಧೇಯನಾದ ಒಂದು ಸನ್ನಿವೇಶ ಅಥವಾ ಒಂದು ಕೋಪದ ಸನ್ನಿವೇಶದ ಕುರಿತಾದ ಮೋಶೆಯ ಕಥೆಯು (40 ವರ್ಷಗಳ ಕಾಲ ನಂಬಿಗಸ್ತನಾಗಿ ಮೋಶೆಯು ಇಸ್ರಾಯೇಲ್ಯರನ್ನು ನಡೆಸಿದ್ದನ್ನು ನೆನಪಿಸಿಕೊಳ್ಳಿರಿ) ದೇವಜನರನ್ನು ಹೊಸ ಪ್ರಾಂತ್ಯಕ್ಕೆ ನಡೆಸುವ ಸಭಾನಾಯಕನನ್ನು ಯಾವಾಗಲೂ ಅನರ್ಹನನ್ನಾಗಿ ಮಾಡುತ್ತದೆಂದು ನಮ್ಮನ್ನು ಕಲಿಸುತ್ತದೋ?

ಅದರಂತೆ ಆಗುತ್ತದೆಂದು ನಾನೂ ಆಲೋಚಿಸುವುದಿಲ್ಲ:

- ಅರಸನಾದ ದಾವೀದನು ತನ್ನ ಭಯಂಕರ ಪಾಪಗಳಾದ ಬತ್ಶೆಬಳೊಂದಿಗೆ ವ್ಯಭಿಚಾರ ಮಾಡಿದ್ದು ಮತ್ತು ಅವಳ ಗಂಡನಾದ ಊರಿಯನನ್ನು ಕೊಲೆಮಾಡಿದ್ದಕ್ಕೆ ಕ್ಷಮಾಪಣೆಯನ್ನು ಹೊಂದಿಕೊಂಡನು. ಆ ಮೇಲೆ ದಾವೀದನು ಅನೇಕ ವರ್ಷಗಳ ಕಾಲ "ದೇವರ ಹೃದಯಕ್ಕೆ ಹತ್ತಿರದಲ್ಲಿರುವ" ರಾಜನಾಗಿ ಮುಂದುವರೆದನು.

- ಪೇತ್ರನು ಗೆತ್ಸೇಮನೆ ತೋಟದಲ್ಲಿ ಯೇಸುವನ್ನು ಬಿಟ್ಟು ಓಡಿ ಹೋದಾಗ್ಯೂ ಮತ್ತು ಮಹಾಯಾಜಕನ ಮಠದ ಅಂಗಳದಲ್ಲಿ ಅವನನ್ನು ಮೂರು ಸಾರಿ ಅಲ್ಲಗಳೆದರೂ ಸಹ ನಂತರದಲ್ಲಿ ಯೇಸು ಕ್ರಿಸ್ತನು ಅವನನ್ನು ಪುನಃ ಸ್ಥಾಪಿಸಿದನು. ಈ ಸೋಲಿನ ನಂತರವೂ ಪೇತ್ರನು ಸಭೆಯ ದೊಡ್ಡ ನಾಯಕನಾಗಿ ದೇವರಿಂದ ಉಪಯೋಗಿಸಲ್ಪಟ್ಟನು.

- ಉಪಸಂಹಾರ: ಒಂದು ಸತ್ಯವೇದದ ಕಥೆಯ ಆಧಾರದ ಮೇಲೆ ತಪ್ಪಾದ ಉಪಸಂಹಾರಕ್ಕೆ ನಾವು ಹೋಗದಂತೆ ಎಚ್ಚರಿಕೆಯುಳ್ಳವರಾಗಿರಬೇಕು. ವಾಗ್ದಾನದ ದೇಶಕ್ಕೆ ಇಸ್ರಾಯೇಲ್ಯರನ್ನು ನಡೆಸುವುದರಿಂದ ಅನರ್ಹನನ್ನಾಗಿ ಮೋಶೆಯನ್ನು ಆತನ ಪಾಪವು ಮಾಡಿದ್ದು ಸತ್ಯವಾದದ್ದು. ಆದರೆ ದಾವೀದ ಮತ್ತು ಪೇತ್ರರ ಪಾಪಗಳು ಅವರು ಭವಿಷ್ಯದ ನಾಯಕರುಗಳಾಗಿರಲು ಅನರ್ಹನನ್ನಾಗಿ ಮಾಡಲಿಲ್ಲ ಎಂಬುದು ಸಹ ಸತ್ಯವಾದದ್ದು.

2. ತನ್ನ ಉತ್ತರಾಧಿಕಾರಿಯಾದ ಯೆಹೋಶುವನನ್ನು ಮೋಶೆಯು ಆದೇಶಿಸಿದ್ದರ ಕುರಿತು:

ಅ. ಅವನು ಇದನ್ನು ಎಲ್ಲಾ ಇಸ್ರಾಯೇಲ್ಯರ ಸಮ್ಮುಖದಲ್ಲಿ ಮಾಡಿದನು (ವ.7).

ಆ. ಅವನು ಯೆಹೋಶುವನನ್ನು ಪ್ರೋತ್ಸಾಹಿಸಿದನು (ವ.7).

ಇ. ದೇವರು ತನಗೆ ಮಾಡಲು ಕೊಟ್ಟಂತಹ ಎರಡು ಕಾರ್ಯಗಳನ್ನು ಇಸ್ರಾಯೇಲ್ಯರ ಮತ್ತು ಯೆಹೋಶುವನ ಇಬ್ಬರ ಮುಂದೆ ಆತನು ಇದನ್ನು ಅಧಿಕಾರಕ್ಕೆ ತಂದನು: ಆ ಭೂಮಿಯನ್ನು ಗೆದ್ದುಕೊಳ್ಳುವುದಕ್ಕೆ ಮತ್ತು ಇಸ್ರಾಯೇಲ್ಯರ ಕುಲಗಳ ಮಧ್ಯದಲ್ಲಿ ಆ ಭೂಮಿಯನ್ನು ಹಂಚುವುದಕ್ಕೆ.

ಈ. ದೇವರ ಅಧಿಕಾರ ಆ ವಿಧಿಗಳಲ್ಲಿ ನೆರವೇರುವುದನ್ನು ಅವನು ಯೆಹೋಶುವನಿಗೂ ಮತ್ತುಇಸ್ರಾಯೇಲ್ಯರಿಗೂ ವಿವರಿಸಿದನು:

- ದೇವರು ಅವನ ಮುಂದೆ ಹೋಗುವವನಾಗಿದ್ದಾನೆ. ಅಂದರೆ ಅವರಿಗಾಗಿ ದೇವರು ಒಂದು ಮಾರ್ಗವನ್ನು ಸಿದ್ಧಮಾಡುವವನಾಗಿದ್ದಾನೆಂದರ್ಥ ಮತ್ತು ಅವರು ದೇವರ ಯೋಜನೆಗಳನ್ನು ಅನುಸರಿಸುವವರಾಗಿರುವರು.

- ದೇವರು ಯಾವಾಗಲೂ ಅವರ ಸಂಗಡ ಇರುವವನಾಗಿದ್ದನು. ಅಂದರೆ ಅವರು ತಮ್ಮ ವೈರಿಗಳ ಕರುಣೆಯಿಂದ ರಕ್ಷಿಸಲ್ಪಡುತ್ತಾರೆಂದರ್ಥವಲ್ಲ. ಅದಕ್ಕೆ ಬದಲಾಗಿ ಅವರು ತಮ್ಮ ವೈರಿಗಳ ಮೇಲೆ ಜಯವನ್ನು ಹೊಂದುವುದಕ್ಕಾಗಿ ಮತ್ತು ತಮ್ಮನ್ನು ಸಂರಕ್ಷಿಸಿಕೊಳ್ಳುವುದಕ್ಕಾಗಿ ದೇವರ ಮೇಲೆ ಭರವಸೆ ಇಡಬೇಕಾಗಿತ್ತು. ಯೆಹೋಶುವನು ಕುಲಗಳ ಮಧ್ಯದಲ್ಲಿ ಭೂಮಿಯನ್ನು ಹಂಚುವಾಗ ದೇವರು ಆತನಿಗೆ ಜ್ಞಾನ ತಿಳುವಳಿಕೆಯನ್ನೂ ಸಹ ಕೊಡುವವನಾಗಿದ್ದನು.

ಯೆಹೋಶುವನಿಗೆ ಅಧಿಕಾರ ಕೊಡುವುದರ ಕುರಿತು ಮೋಶೆಯ ಮಾರ್ಗದರ್ಶನದಿಂದ ನಾವು ಅನೇಕ ಸಂಗತಿಗಳನ್ನು ಕಲಿಯಬಹುದಾಗಿದೆ. ನಾವು ಸಭೆಯ ವಿಧಿಕಾರ್ಯಗಳಿಗಾಗಿ ನಾಯಕರುಗಳನ್ನು ನೇಮಕಮಾಡುವಾಗ:

- ನಾವು ಇದನ್ನು ಬಹಿರಂಗವಾಗಿ ಮತ್ತು ಅಧಿಕಾರದೊಂದಿಗೆ ಮಾಡಬೇಕು. ವಿಶ್ವಾಸಿಗಳು ಸಾಮಾನ್ಯವಾಗಿ ಇದರ ಕುರಿತು ತಿಳಿದುಕೊಳ್ಳಬೇಕು ಮತ್ತು ನೇಮಕಗೊಂಡ ವ್ಯಕ್ತಿಯು ತನ್ನ ನೇಮಕವು ಅಧಿಕಾರದಿಂದ ದೊರೆತಿದೆ ಎಂಬುದನ್ನು ಮನಗಾಣುವಾಗ ತನ್ನಲ್ಲಿ ಭರವಸೆಯನ್ನು ಹೆಚ್ಚಿಸಿಕೊಳ್ಳುವನು.
- ಕೆಲಸದ ಕುರಿತು ನಾವು ಸ್ಪಷ್ಟ ಮತ್ತು ಅಧಿಕಾರವುಳ್ಳವರಾಗಿರಬೇಕು. ನೇಮಕಗೊಂಡ ವ್ಯಕ್ತಿಯ ಕಾರ್ಯವೇನೆಂಬುದನ್ನು ನೇಮಕಗೊಂಡ ವ್ಯಕ್ತಿ ಮತ್ತು ವಿಶ್ವಾಸಿಗಳಿಬ್ಬರೂ ತಿಳಿದಿರಲೇಬೇಕು.
- ಆ ವ್ಯಕ್ತಿಯ ನೇಮಕವು ದೇವರ ಯೋಜನೆಗೆ ಅನುಸಾರವಾಗಿ ಆತನಿಗೂ ಮತ್ತು ಸಭೆಗೂ ಇದೆ ಎಂಬುದನ್ನು ನಾವು ಮನದಟ್ಟು ಮಾಡಿಕೊಳ್ಳಬೇಕು. ಈ ಮನವರಿಕೆಯನ್ನು ಸಹ ನಾವು ಭಹಿರಂಗವಾಗಿ ತಿಳಿಯಪಡಿಸಲೇಬೇಕು. ಇದು ವಿಶ್ವಾಸಿಗಳಿಗೂ ಮತ್ತು ನೇಮಕವಾದ ವ್ಯಕ್ತಿಗಳಿಬ್ಬರಿಗೂ ಸಭೆಯ ಹೊಸನಾಯಕನ ನೇಮಕವು ದೇವರ ಚಿತ್ತಕ್ಕನುಸಾರವಾಗಿದ್ದು ನಮ್ಮ ಸಭೆಯು ಅದನ್ನು ಬಯಸುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.
- ನಾವು ವಿಶ್ವಾಸಿಗಳಿಗೂ ಮತ್ತು ನೇಮಕಗೊಂಡಂತಹ ವ್ಯಕ್ತಿಗೂ ನಂಬಿಕೆ ಮತ್ತು ಪ್ರೋತ್ಸಾಹದ ಮಾತುಗಳಿಂದ ಪ್ರೋತ್ಸಾಹಿಸಬೇಕು.

3. ಮೋಶೆ ಮತ್ತು ಧರ್ಮಶಾಸ್ತ್ರದ ಕುರಿತಾದ ಕಥೆಯಿಂದ ನಾವು ಅನೇಕ ಸಂಗತಿಗಳನ್ನು ಕಲಿಯಬಹುದಾಗಿದೆ:

ಅ. ಬರೆಯಲ್ಪಟ್ಟ ದೇವರ ವಾಕ್ಯವನ್ನು ಹೊಂದುವುದರ ಪ್ರಾಮುಖ್ಯತೆ: ಧರ್ಮಶಾಸ್ತ್ರವನ್ನು (ಪ್ರಾಯಶಃ ಧರ್ಮೋಪದೇಶಕಾಂಡದ ಪ್ರಮುಖ ಭಾಗದ ಉಲ್ಲೇಖ) ಸ್ವತಃ ಮೋಶೆಯೇ ಬರೆದನು. ನಮ್ಮ ಸತ್ಯವೇದದಲ್ಲಿ ಬರೆಯಲ್ಪಟ್ಟ ದೇವರ ವಾಕ್ಯಗಳನ್ನು ನಾವು ಹೊಂದಿದ್ದೇವೆ.

ಆ. ದೇವರ ವಾಕ್ಯವನ್ನು ಸಾರುವ ಜನರನ್ನು ಹೊಂದಿರುವುದರ ಪ್ರಾಮುಖ್ಯತೆ: ಏಳು ವರ್ಷಕ್ಕೊಮ್ಮೆ ಯಾಜಕರು ಇಸ್ರಾಯೇಲ್ಯರಿಗೆ ಗಟ್ಟಿಯಾದ ಧ್ವನಿಯಲ್ಲಿ ಧರ್ಮಶಾಸ್ತ್ರವನ್ನು ಓದಬೇಕೆಂದು ಮೋಶೆಯು ಸೂಚಿಸಿದನು. ನಾವು ಪ್ರತಿವಾರ ನಮ್ಮ ಸಭೆಗಳಲ್ಲಿ ಸತ್ಯವೇದ ಅಧ್ಯಯನ ಮತ್ತು ಆರಾಧನೆಗಳನ್ನು ಹೊಂದಿದ್ದೇವೆ. ಈ ಕೂಟಗಳಲ್ಲಿ ದೇವರ ವಾಕ್ಯಗಳನ್ನು ಓದಿ ವಿವರಿಸುವುದಕ್ಕೆ ಹೆಚ್ಚು ಒತ್ತನ್ನು ನೀಡುವುದು ಪ್ರಾಮುಖ್ಯವಾದುದ್ದಾಗಿದೆ. ದೇವರ ವಾಕ್ಯವನ್ನು (ಪಾಸ್ಟರ್ ಮತ್ತು ಸಭಾಹಿರಿಯರಿಬ್ಬರು) ಸಾರುವ ಮತ್ತು ಉಪದೇಶಿಸುವ ವ್ಯಕ್ತಿಯು ಸ್ವತಃ ತಾನೇ ಮೊದಲು ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಬಹಳ ಪ್ರಾಮುಖ್ಯವಾದದ್ದು, ಹಾಗಾದರೆ ಸತ್ಯವಾಕ್ಯವನ್ನು ಸರಿಯಾಗಿ ತಿಳಿಸಲು ಸಾಧ್ಯವಾಗುತ್ತದೆ (2.ತಿಮೊಥೆ 2:15).

ಇ. ದೇವರ ವಾಕ್ಯವನ್ನು ಅರ್ಥೈಸಿಕೊಂಡ ಜನರನ್ನು ಹೊಂದಿರುವುದರ ಪ್ರಾಮುಖ್ಯತೆ: ಯಾಜಕನು ಧರ್ಮಶಾಸ್ತ್ರವನ್ನು ಓದುವಾಗ ಅದನ್ನುಕೇಳಿಸಿಕೊಳ್ಳುವ ಇಸ್ರಾಯೇಲ್ಯರು ಅದನ್ನು ಕಲಿತುಕೊಳ್ಳಬೇಕೆಂದು ಮೋಶೆಯು ಬಯಸಿದನು; ಕಲಿಯುವುದರ ಕುರಿತು ಷರತ್ತು ಇತ್ತು, ಯಾಕೆಂದರೆ ಏನನ್ನು ಓದಲಾಯಿತೆಂದು ಅವರು ಅರ್ಥೈಸಿಕೊಳ್ಳಬೇಕಾಗಿತ್ತು. ನಾವು ದೇವರ ವಾಕ್ಯವನ್ನು ಓದುವಾಗ (ಅಥವಾ ಸಾರಿದ್ದನ್ನು ಅಥವಾ ಬೋಧಿಸಿದ್ದನ್ನು ಕೇಳಿಸಿಕೊಂಡಾಗ) ಅದನ್ನು ನಾವು ಅರ್ಥೈಸಿಕೊಳ್ಳಬೇಕೆಂದು ನಿರೀಕ್ಷಿಸಲಾಗಿದೆ. ಅಂದರೆ ನಾವು ಅರ್ಥೈಸಿಕೊಳ್ಳಬಹುದಾದ ಭಾಷೆಯಲ್ಲಿ ಸತ್ಯವೇದವು

ಲಭ್ಯವಾಗುವುದು ಬಹಳ ಅವಶ್ಯ ಎಂದರ್ಥ. ಇದರೊಂದಿಗೆ ಪ್ರಸಂಗಿ ಅಥವಾ ಬೋಧಕನು ಕೇಳುವವರು ಇದು ನಮಗೆ ದೇವರು ನೀಡಿದ ಸಂದೇಶವೆಂದು ಅರ್ಥೈಸಿಕೊಳ್ಳುವ ರೀತಿಯಲ್ಲಿ ಸತ್ಯವೇದ ವಚನವನ್ನು ವಿವರಿಸುವುದು ಅವಶ್ಯವಾದದ್ದು ಎಂದರ್ಥ.

ಈ. ದೇವರ ವಾಕ್ಯವನ್ನು ಜಾಗರೂಕರಾಗಿ ಪಾಲಿಸುವುದರ ಪ್ರಾಮುಖ್ಯತೆ: ಮೋಶೆಯು ತಾನು ಬರೆದ ಧರ್ಮಶಾಸ್ತ್ರದ ಎಲ್ಲಾ ಕಟ್ಟಳೆಗಳನ್ನು ಇಸ್ರಾಯೇಲ್ಯರು ಜಾಗರೂಕರಾಗಿ ಪಾಲಿಸಬೇಕೆಂದು ಬಯಸಿದನು. ನಾವು ನಮ್ಮ ಸತ್ಯವೇದದಲ್ಲಿ ದಾಖಲಾದ ದೇವರ ವಾಕ್ಯಕ್ಕೆ ವಿಧೇಯರಾಗಿರಲೇಬೇಕು. ನಮ್ಮ ದಿನನಿತ್ಯದ ಜೀವಿತದಲ್ಲಿ ಸತ್ಯವೇದದ ಸತ್ಯಾಂಶಗಳು ನಮ್ಮ ಮೇಲೆ ಪರಿಣಾಮವನ್ನುಂಟುಮಾಡುವಾಗ ನಿಧಾನವಾಗಿ ನಾವು ಕ್ರಿಸ್ತನ ಸ್ವಾರೂಪ್ಯದಲ್ಲಿ ಬದಲಾಗುತ್ತೇವೆ. ಯೇಸು ಕ್ರಿಸ್ತನು ಸಭೆಗೆ ಸಭಾಪಾಲಕರನ್ನು ಮತ್ತು ಬೋಧಕರನ್ನು ಕೊಟ್ಟಿದ್ದಾನೆ ಹಾಗಾಗಿ ನಾವೆಲ್ಲರು ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ (ಎಫೆ. 4:11-13).

**ಧರ್ಮೋಪದೇಶಕಾಂಡ ಉತ್ತರಗಳು 13: ಮೋಶೆಯ ಮರಣ**

**ಈ. ಪ್ರಶ್ನೆಗಳಿಗೆ ಉತ್ತರಗಳು**

1. ದೇವರು ಮೋಶೆಯು ಇಸ್ರಾಯೇಲ್ ಜನರನ್ನು ಕಾನಾನ್ ದೇಶದೊಳಗೆ ನಡೆಸಲ್ಪಡದೆ ಇರುವುದಕ್ಕೆ ಅವನಿಗೆ (ಮತ್ತು ಆರೋನನಿಗೂ) 2 ಕಾರಣಗಳನ್ನು ಕೊಟ್ಟನು:

   ಅ. ಮೆರೀಬಾ ಕಾದೇಶದಲ್ಲಿ ಆತನು ದೇವರೊಂದಿಗಿದ್ದ ನಂಬಿಕೆಯನ್ನು ಮುರಿದಿದ್ದನು (ದೇವರು ಇಸ್ರಾಯೇಲ್ ಜನರಿಗೆ ಬಂಡೆಯೊಳಗಿಂದ ನೀರನ್ನು ಕೊಟ್ಟಂತಹ ಸ್ಥಳದಲ್ಲಿ). ದೇವರು ಆತನಿಗೆ ಆ ಕಲ್ಲಿನೊಂದಿಗೆ ಮಾತನಾಡು ಎಂದು ಹೇಳಿದಾಗ ಅದರ ಬದಲಾಗಿ ಅವನು ತನ್ನ ಕೋಲಿನಿಂದ ಆ ಬಂಡೆಗೆ ಎರಡು ಸಾರಿ ಹೊಡೆದಿದ್ದನು, ಇದರ ಅರ್ಥ ಅವನು ದೇವರಿಗೆ ವಿಧೇಯನಾಗಲಿಲ್ಲ.

   ಆ. "ಆತನು ಇಸ್ರಾಯೇಲ್ಯರ ಮಧ್ಯದಲ್ಲಿ ದೇವರ ಪರಿಶುದ್ಧತೆಯನ್ನು ಎತ್ತಿ ಹಿಡಿಯಲಿಲ್ಲ" ಅಂದರೆ ಮೆರೀಬಾ ಕಾದೇಶಿನಲ್ಲಿ ಅವನು ಇಸ್ರಾಯೇಲ್ಯರ ಮುಂದೆ ದೇವರಿಗೆ ಅಗೌರವವನ್ನುಂಟು ಮಾಡಿದ್ದನು.

2. ದೇವರು ಮೋಶೆಗೆ ಪಿಸ್ಗಾದ ಮೇಲಿಂದ ಇಡೀ ಕಾನಾನ್ ದೇಶವನ್ನು ತೋರಿಸಿದನು; ಈ ದೇಶವು ಮೂಲ ಪಿತೃವಾದ ಅಬ್ರಹಾಮ್, ಇಸಾಕ್, ಯಾಕೋಬ್ಯರ ಸಂತತಿಗಳಿಗೆ ಕೊಡುವೆನೆಂದು ವಾಗ್ದಾನ ಮಾಡಿದ ಪ್ರದೇಶವಾಗಿತ್ತು.

3. ಮೋವಾಬಿನಲ್ಲಿ ದೇವರು ತಾನೇ ಮೋಶೆಯನ್ನು ಸಮಾಧಿ ಮಾಡಿದನು ಮತ್ತು ಅವನ ಸಮಾಧಿ ಎಲ್ಲಿದೆ ಎಂಬುದು ಯಾರಿಗೂ ತಿಳಿದಿಲ್ಲ.

4. ಯೆಹೋಶುವನ ಬಗ್ಗೆ ಈ ವಾಕ್ಯಭಾಗವು ಈ ರೀತಿಯಾಗಿ ವರ್ಣಿಸುತ್ತದೆ:

   ಅ. ಮೋಶೆಯ ಆಶೀರ್ವಾದದ ಫಲಿತಾಂಶದ ಮೂಲಕ ಆತನು ಜ್ಞಾನಾತ್ಮದಿಂದ ತುಂಬಲ್ಪಟ್ಟಿದ್ದನು.

   ಆ. ಅವರು ಮಾಡುವೆವು ಎಂದು ಮೋಶೆಗೆ ಮಾಡಿದ ವಾಗ್ದಾನದಂತೆ ಇಸ್ರಾಯೇಲ್ಯರು ಆತನಿಗೆ ವಿಧೇಯರಾಗಿದ್ದರು.

5. ಧರ್ಮೋಪದೇಶಕಾಂಡವು ಮೋಶೆಯ ಬಗ್ಗೆ ಈ ರೀತಿಯಾಗಿ ಮೌಲ್ಯಮಾಪನ ಮಾಡಿದೆ:

   ಅ. ಆ ಸಮಯದವರೆಗೂ ಇವನೊಬ್ಬ ಶ್ರೇಷ್ಠ ಪ್ರವಾದಿಯಾಗಿದ್ದನು.

   ಆ. ಅವನು ದೇವರೊಂದಿಗೆ ಬಹಳ ನಿಕಟವಾದ ಸಂಬಂಧವನ್ನು ಇಟ್ಟುಕೊಂಡವನಾಗಿದ್ದನು (ದೇವರು ಅವನನ್ನು ಮುಖಾಮುಖಿಯಾಗಿ ತಿಳಿದಿದ್ದನು).

   ಇ. ಅವನು ದೇವರ ಬಲದಿಂದ ಸೂಚಕ ಕಾರ್ಯಗಳನ್ನು, ಅದ್ಭುತ ಕಾರ್ಯಗಳನ್ನು ಮಾಡಿದ್ದನು.

   ಈ. ಅವನ ಬಲ ಮತ್ತು ಅವನು ಮಾಡಿದ ಸಂಗತಿಗಳು, ಇಸ್ರಾಯೇಲ್ಯರ ಕಣ್ಣಿನಲ್ಲಿ ಸರಿಸಾಟಿ ಇಲ್ಲದ ರೀತಿಯಲ್ಲಿ ಕಾಣಲ್ಪಟ್ಟವು.

**ಉ. ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ನೆಬೋ ಬೆಟ್ಟದ ಮೇಲೆ ಮೋಶೆಯ ಕುರಿತು ಇರುವಂತಹ ಈ ಕಥೆಯಿಂದ ದೇವರು ನಿಜವಾಗಿಯೂ ನಂಬಿಗಸ್ತನಾಗಿದ್ದಾನೆ ಎಂಬುದನ್ನು ನಾವು ಕಲಿಯಲು ಸಾಧ್ಯ. ನೂರಾರು ವರ್ಷಗಳ ಮುಂಚೆ ಆತನು ಅಬ್ರಹಾಮನಿಗೆ ವಾಗ್ದಾನ ಮಾಡಿದ್ದನು (ಮತ್ತು ನಂತರ ಇದೇ ವಾಗ್ದಾನವನ್ನು ಇಸಾಕ ಮತ್ತು ಯಾಕೋಬನಿಗೂ ಮಾಡಿದನು) ಅದೇನೆಂದರೆ ಅವನು ಅನೇಕ ಸಂತತಿಯನ್ನು

ಹೊಂದುವನು ಮತ್ತು ಇಡೀ ಕಾನಾನ್ ದೇಶವು ಅವರ ಸ್ವದೇಶವಾಗುವುದೆಂದು. ಈಗ ಮೋಶೆ ಮೊದಲನೇ ವಾಗ್ದಾನ ನೆರವೇರುವುದನ್ನು ಮತ್ತು ಎರಡನೇ ವಾಗ್ದಾನ ನೆರವೇರಲಿಕ್ಕಿರುವುದನ್ನು ನೋಡಿದನು: ಅಬ್ರಹಾಮನ ಸಂತತಿಗಳು, ಇಸ್ರಾಯೇಲ್ಯರು, ಮೋವಾಬ್ಯ ಪ್ರಾಂತ್ಯದಲ್ಲಿ ಇಳಕೊಂಡದ್ದು, ಇನ್ನೂ ಅನೇಕ ಸಂಗತಿಗಳು, ವಾಗ್ದಾನ ಮಾಡಿದ ಪ್ರದೇಶಕ್ಕೆ ಹೋಗಲು ಯೊರ್ದನ್ ನದಿಯನ್ನು ದಾಟುವುದಕ್ಕೆ ಸಿದ್ಧವಾಗಿದ್ದು.

2. –

ಅ. –

ಆ. ಮೋಶೆ ಎಲ್ಲಾ ಜವಾಬ್ದಾರಿಕೆಗಳಲ್ಲಿ ಪರಿಪೂರ್ಣತೆಯನ್ನು ಹೊಂದಿಲ್ಲ ಎಂಬುದನ್ನು ನೀವು ನೆನಪಿಸಿಕೊಂಡಿರೆಂದು ನಾನು ನಿರೀಕ್ಷಿಸುತ್ತೇನೆ: ಅವನು ಕೆಟ್ಟ ಕೋಪವನ್ನು ಹೊಂದಿದ್ದನು (ದೇಶದಿಂದ ಓಡಿ ಹೋಗಿ ತಲೆ ತಪ್ಪಿಸಿಕೊಳ್ಳುವುದಕ್ಕಿಂತ ಮುಂಚೆ ಅವನು ಐಗುಪ್ತದವನೊಬ್ಬನನ್ನು ಕೊಂದಿದ್ದನ್ನು ನೆನಪಿಸಿಕೊಳ್ಳಿ; ಕಾದೇಶಿನ ಮೆರಿಬಾದಲ್ಲಿನ ಆತನ ವರ್ತನೆಯನ್ನು ನೆನಪಿಸಿಕೊಳ್ಳಿ). ಇಸ್ರಾಯೇಲ್ಯರನ್ನು ಐಗುಪ್ತದಿಂದ ಹೊರಗೆ ನಡೆಸಲು ದೇವರು ಕರೆದಾಗ ಅವನು ಮೊದಲು ಇಷ್ಟವಿಲ್ಲದವನಾಗಿ ದೇವರ ಕರೆಯುವಿಕೆಗೆ ಅವಿಧೇಯನಾಗಿದ್ದನು. ಅವನು ಸದಾ ಯಾವಾಗಲೂ ತನ್ನ ಸ್ವಂತ ಜನರಿಂದ ಗೌರವಿಸಲ್ಪಡುತ್ತಿರಲಿಲ್ಲ, ಅವನ ಸಹೋದರಿ ಮಿರ್ಯಾಮಳು ಮತ್ತು ಅವನ ಸಹೋದರ ಆರೋನನು ಸಹ ಅವನನ್ನು ನಿಂದಿಸಿದರು. ಆದರೆ ಇವೆಲ್ಲವುಗಳ ಮಧ್ಯದಲ್ಲಿ ಆತನು ಹಳೇ ಒಡಂಬಡಿಕೆಯ ಅವಧಿಯಲ್ಲಿ ದೇವಜನರಿಗೆ ಒಳ್ಳೆಯ ನಾಯಕನಾಗಿದ್ದನು ಮತ್ತು ಧರ್ಮೋಪದೇಶಕಾಂಡವು ಸಕಾರಾತ್ಮಕವಾದ ಮೌಲ್ಯಗಳ ಅತೀರೇಕಕ್ಕೆ ಆತನು ಅರ್ಹನಾಗಿದ್ದಾನೆಂದು ತಿಳಿಸುವುದರೊಂದಿಗೆ ಮುಕ್ತಾಯಗೊಳ್ಳುತ್ತದೆ.

3. –

# ಅಂತಿಮ ಅಧ್ಯಯನ ಭಾಗದ ಉತ್ತರಗಳು

**ಹಳೆ ಒಡಬಂಡಿಕೆಯ ಧರ್ಮಶಾಸ್ತ್ರವನ್ನು ಹೇಗೆ ಅರ್ಥ ಮಾಡಿಕೊಳ್ಳುವುದು ಭಾಗದ ಉತ್ತರಗಳು**

1. ದೇವರ ಪವಿತ್ರಜನರಾಗಿಇಸ್ರಾಯೇಲರುತಮ್ಮಒಡಂಬಡಿಕೆಯದೇವರೊಂದಿಗೆಎಂತಹ ಸಂಬಂಧವನ್ನು ಹೊಂದಿದ್ದಾರೆಎಂಬುದನ್ನುಅವರಿಗೆತೋರಿಸುವುದೇಇತಿಹಾಸದಲ್ಲಿಧರ್ಮಶಾಸ್ತ್ರವು ವಹಿಸಿದ ಪಾತ್ರವಾಗಿತ್ತು. ದೇವರನ್ನು ಮೆಚ್ಚಿಸುವರೀತಿಯಲ್ಲಿಅವರು ಹೇಗೆ ಜೀವಿಸಬೇಕೆಂದುಅದುಅವರಿಗೆ ತೋರಿಸಿತು. ದೇವರ ಪ್ರೀತಿ ಮತ್ತುಕರುಣೆಯನ್ನು ವ್ಯಕ್ತಪಡಿಸುವಂತೆಅವರುಒಬ್ಬರ ಸಂಗಡಇನ್ನೊಬ್ಬರು ಹೇಗೆ ನಡೆದುಕೊಳ್ಳಬೇಕೆಂದು ಅದುಅವರಿಗೆ ತೋರಿಸಿತು.ಅವರ ಸುತ್ತಲೂಇದ್ದಅನ್ಯದೇವರಾಧಕ ದೇಶಗಳ ದುಷ್ಟ ಆಚರಣೆಗಳಿಂದ ಅವರನ್ನು ಸಂರಕ್ಷಿಸಿತು.
2. ಈ ಎರಡು ಪದಗಳು ಒಂದಕ್ಕೊಂದುಹೀಗೆ ಸಂಬಂಧಿಸಿವೆ: 'ಆಜ್ಞೆಗಳು' ಮತ್ತು'ಧರ್ಮಶಾಸ್ತ್ರ' ಎಂದರೆ ಪಂಚಕಾಂಡ, ಅದರಲ್ಲಿ ಹಳೆ ಒಡಂಬಡಿಕೆಯ ಬಹುತೇಕ ಆಜ್ಞೆಗಳು (600 ಕ್ಕೂ ಹೆಚ್ಚು ಆಜ್ಞೆಗಳು) ಕಂಡುಬರುತ್ತದೆ. ಅದನ್ನು ಕೆಲವೊಮ್ಮೆ'ಮೋಶೆಯಧರ್ಮಶಾಸ್ತ್ರವೆಂದೂ'ಉಲ್ಲೇಖಿಸಲಾಗುತ್ತದೆ.
3. –
4. ಧರ್ಮಶಾಸ್ತ್ರವುಒಡಂಬಡಿಕೆಆಧರಿತವಾಗಿದೆಎಂದು ನಾವು ತಿಳಿದುಕೊಳ್ಳಬೇಕು ಎಂದು ಹೇಳುವಾಗ ಅದುಹಳೆಯ ಒಡಂಬಡಿಕೆಗೆ ಸಂಬಂಧಪಟ್ಟಿದೆ ಎಂಬ ಅನ್ವಯವನ್ನುಇಂದು ನಮ್ಮ ಮೇಲೆ ತರುತ್ತದೆ. ಆದರೆ ನಾವು ಯೇಸುವಿನ ರಕ್ತದಡಿಯಲ್ಲಿ ಹೊಸ ಒಡಂಬಡಿಕೆಗೆ ಸೇರಿದವರಾಗಿದ್ದೇವೆ (ಲೂಕ 22:20). ಹಾಗಾಗಿ ಹಳೆ ಒಡಂಬಡಿಕೆಯ ಆಜ್ಞೆಗಳು ನಮಗೆ ನೇರವಾಗಿಅನ್ವಯಿಸುವುದಿಲ್ಲ.
5. ಪ್ರಾಚೀನಇಸ್ರಾಯೇಲಿನ ಸಾಮಾಜಿಕದೇವಜನರಿಗೆಅನ್ವಯಿಸುವುದಿಲ್ಲ ಯಾಕೆಂದರೆ ಅವುಗಳು ಆ ದಿನಗಳಲ್ಲಿ ಜೀವಿಸುತ್ತಿದ್ದಇಸ್ರಾಯೇಲರಿಗೆ ಮಾತ್ರಅನ್ವಯಿಸಲ್ಪಟ್ಟಿತ್ತು. ಹಳೆ ಒಡಂಬಡಿಕೆಯಸಾಂಪ್ರದಾಯಿಕ ಆಜ್ಞೆಗಳುದೇವಜನರಿಗೆಅನ್ವಯಿಸುವುದಿಲ್ಲ ಯಾಕೆಂದರೆಯೇಸುಕ್ರೂಜೆಯ ಮೇಲೆ ಸತ್ತಾಗಎಲ್ಲಾ ಸಾಂಪ್ರದಾಯಿಕ ಆಚಾರಗಳನ್ನು ನೆರವೇರಿಸಿದನು. ಪೌಲನು ಈ ಸತ್ಯವನ್ನು ಹೀಗೆ ವ್ಯಕ್ತಪಡಿಸುತ್ತಾನೆ: *ನಿಮ್ಮ ಪಾಪಗಳಿಂದಲೂ ನಿಮ್ಮ ಸುನ್ನತಿಯಿಲ್ಲದ ಮಾಂಸ ಸ್ವಭಾವದಿಂದಲೂ ಸತ್ತ ಸ್ಥಿತಿಯಲ್ಲಿದ್ದ ನಿಮ್ಮನ್ನುದೇವರುಕ್ರಿಸ್ತನೊಂದಿಗೆಜೀವಿತರನ್ನಾಗಿ ಮಾಡಿ ನಮ್ಮಎಲ್ಲಾ ಪಾಪಗಳನ್ನು ಕ್ಷಮಿಸಿದನು. ನಮಗೆ ವಿರೋಧವಾಗಿಯೂ ಪ್ರತಿಕೂಲವಾಗಿಯೂಇದ್ದಕೈಬರಹದ ಶಾಸನಗಳನ್ನು ಆತನು ಅಳಿಸಿಹಾಕಿ ಅದನ್ನು ಶಿಲುಬೆಗೆ ಜಡಿದನು* (ಕೊಲೊಸ್ಸೆ 2:13–14).
6. ಧರ್ಮೋ. 22:8 ಈಗಲೂ ಸಹ ನಮಗೆ (ದೇವರುನೀಡಿರುವಆಜ್ಞೆಯಾಗಿರದಿದ್ದಾಗ್ಯೂ) ದೇವರ ವಾಕ್ಯವಾಗಿದೆ. ಈ ಆಜ್ಞೆಯು ಪ್ರಾಚೀನಇಸ್ರಾಯೇಲಿನಲ್ಲಿದ್ದ ಮನೆ ಕಟ್ಟುವವರಿಗೆ ಮಾತ್ರಕೊಡಲಾಗಿತ್ತು. ಆದರೆಒಂದು ಮನೆಯುಕಟ್ಟಲ್ಪಡುವಾಗಅದರಲ್ಲಿ ವಾಸಿಸುವ ಜನರಿಗೆಅದು ಸುರಕ್ಷಿತವಾಗಿರುವಂತೆಕಟ್ಟಬೇಕೆಂಬ ನಿಯಮವು ಪ್ರತಿಯೊಂದುದೇಶದ ಪ್ರತಿಯೊಂದು ಸಂತತಿಯ ಪ್ರತಿಯೊಬ್ಬ ಮೇಸ್ತ್ರಿಗೆ ಸಮಂಜಸವಾಗಿದೆ. ಹಾಗಾಗಿ ಪ್ರತಿಯೊಂದುಆಜ್ಞೆಯ ಹಿಂದಿರುವ ನಿಯಮವು ಸದಾಕಾಲ ಮಾನ್ಯತೆಯುಳ್ಳದ್ದಾಗಿದೆ. ಅದರ ಪರಿಣಾಮವಾಗಿ, ಅದು ನಮಗೆ ದೇವರಆಜ್ಞೆಯಾಗಿರದಿದ್ದಾಗ್ಯೂದೇವರ ವಾಕ್ಯವಾಗಿದೆ.
7. ಇಂದಿನ ಕ್ರೈಸ್ತ ವಿಶ್ವಾಸಿಗಳಿಗೂ ಸಹ ದಶಾಜ್ಞೆಗಳು ಮತ್ತು ಹಳೆಯ ಒಡಂಬಡಿಕೆಎರಡುದೊಡ್ಡ ಆಜ್ಞೆಗಳು ದೇವರ ಆಜ್ಞೆಗಳಾಗಿವೆಯಾಕೆಂದರೆ ಅವುಗಳು ಹೊಸ ಒಡಂಬಡಿಕೆಯಲ್ಲಿ ನವೀಕರಿಸಲ್ಪಟ್ಟಿವೆ.
8. ಹಳೆಯ ಒಡಂಬಡಿಕೆಯಧರ್ಮಶಾಸ್ತ್ರವು ಇಂದಿನ ಕ್ರೈಸ್ತ ವಿಶ್ವಾಸಿಗಳಾದ ನಮಗೆ ಈಎರಡುರೀತಿಯಲ್ಲಿ ಮೌಲ್ಯತೆಯುಳ್ಳದ್ದಾಗಿದೆ:

   ಅ. ಅದು ನಮ್ಮನ್ನುಕ್ರಿಸ್ತನಕಡೆಗೆ ನಡೆಸುತ್ತದೆ.

   ಆ. ಇಸ್ರಾಯೇಲರುದೇವರ ಸ್ವಕೀಯಜನರಾಗಿರುವುದರಅರ್ಥವೇನೆಂದು ನಾವು ಅರ್ಥಮಾಡಿಕೊಳ್ಳಲು ಅದು ನಮಗೆ ಸಹಾಯಮಾಡುತ್ತದೆ.
9. ಇಸ್ರಾಯೇಲರಿಗೆ ಹಳೆಯ ಒಡಂಬಡಿಕೆಯಧರ್ಮಶಾಸ್ತ್ರದಉದ್ದೇಶವೇನಾಗಿತ್ತೆಂದರೆ, ದೇವರೊಂದಿಗೆಅವರಿಗಿದ್ದಒಡಂಬಡಿಕೆಯಅವರ ಪಾತ್ರವನ್ನುಅವರು ಹೇಗೆ ನೆರವೇರಿಸಬೇಕೆಂದುಅವರಿಗೆತೋರಿಸುವುದಾಗಿತ್ತು. ಅದುಅವರಿಗೆರಕ್ಷಣೆಯ ಮಾರ್ಗವನ್ನುಒದಗಿಸುವುದಾಗಿರಲಿಲ್ಲ.
10. ಧರ್ಮಶಾಸ್ತ್ರದಕುರಿತು ಪ್ರಾಚೀನಇಸ್ರಾಯೇಲರಿಗಿದ್ದದೊಡ್ಡ ಸಮಸ್ಯೆಯುಅವರಿಗಿದ್ದಅವಿಧೇಯತೆಯಾಗಿತ್ತು.
11. ಹೊಸದಾದಒಡಂಬಡಿಕೆಯ ಮತ್ತು ಹಳೆಯ ಒಡಂಬಡಿಕೆಯ ನಡುವೆಇರುವ ಮುಖ್ಯ ವ್ಯತ್ಯಾಸವುತನ್ನಜನರ ಜೀವಿತಗಳಲ್ಲಿ ಪವಿತ್ರಾತ್ಮನು ಮಾಡುವಕ್ರಿಯೆಯಾಗಿದೆಎಂದುದೇವರು ಹೇಳಿದನು.

12. ಹಳೆಯ ಒಡಂಬಡಿಕೆಯಲ್ಲಿ ಸುಮಾರು 600 ಕ್ಕೂ ಹೆಚ್ಚು ಆಜ್ಞೆಗಳಿವೆ. ಭಾರತದೇಶದಲ್ಲಿ ಸಾವಿರಾರು ಕಾನೂನುಗಳಿವೆ (ಆಜ್ಞೆಗಳಿವೆ). ಯಾವುದೇಆಧುನಿಕ ಸಮಾಜವುಎಲ್ಲಾ ಸನ್ನಿವೇಶಗಳಿಗೆ ಅನ್ವಯಿಸುವ ಸೂಕ್ತ ಆಜ್ಞೆಗಳನ್ನುಅಥವಾ ಕಾನೂನುಗಳನ್ನು ರೂಪಿಸಿರುವುದು ಈ ವ್ಯತ್ಯಾಸದಹಿಂದಿರುವಕಾರಣವಾಗಿದೆ. ಹಳೆಯ ಒಡಂಬಡಿಕೆಯಧರ್ಮಶಾಸ್ತ್ರವುಅದನ್ನು ಹೊಂದಿರಲಿಲ್ಲ. ಬದಲಾಗಿ, ದೇವರುಇಸ್ರಾಯೇಲರೊಂದಿಗೆ ಮಾಡಿಕೊಂಡಒಡಂಬಡಿಕೆಗೆಇಸ್ರಾಯೇಲರು ನಂಬಿಗಸ್ತರಾಗಿರುವುದರ ಫಲವೇನೆಂಬುದಕ್ಕೆಹಳೆಯ ಒಡಂಬಡಿಕೆಯಆಜ್ಞೆಗಳು ಉದಾಹರಣೆಗಳಾಗಿದ್ದವು.

13. ಹಳೆಯ ಒಡಂಬಡಿಕೆಯ ಆಜ್ಞೆಗಳು ಸದಾಕಾಲವೂ ಅನ್ವಯವುಳ್ಳದ್ದಾಗಿದೆ.ಅವುಗಳು ಇದನ್ನು ಮಾಡಬೇಕುಅಥವಾಇದನ್ನು ಮಾಡಬಾರದು ಎಂಬ ನೇರವಾದ ಆಜ್ಞೆಗಳಾಗಿವೆ. ??? ಗಳು ಸನ್ನಿವೇಶಾಧರಿತ ಆಜ್ಞೆಗಳಾಗಿವೆ. ಅವುಗಳು ಎಲ್ಲಾ ಸನ್ನಿವೇಶಗಳಲ್ಲಿ ಎಲ್ಲಾಜನರಿಗೂಅನ್ವಯಿಸುವಂತದ್ದಲ್ಲ. ಅವುಗಳು ಹೀಗೆ ಮಾಡಿದ್ದಲ್ಲಿಅಥವಾಆದಲ್ಲಿ ಎಂಬ ಷರತ್ತನ್ನು ಒಳಗೊಂಡಿದೆ.

14. ಮನಸ್ಸಾಕ್ಷಿಆಧರಿತವಾದಆಜ್ಞೆಯ ವಿಶಾಲತೆಯು ಹೀಗಿದೆ: ಅದುಎಲ್ಲಾ ಸನ್ನಿವೇಶಗಳಲ್ಲಿ ಎಲ್ಲಾಜನರಿಗೂಎಲ್ಲೆಡೆಯಲ್ಲಿಯೂಅನ್ವಯಿಸುವಂತದ್ದಾಗಿದೆ. ಹಾಗಾಗಿ ಅದು ಸಾರ್ವತ್ರಿಕವಾದಅನ್ವಯವನ್ನು ಹೊಂದಿದೆ. ಆದರೆಅದೇ ಸಮಯದಲ್ಲಿಅದು ಪ್ರತಿಯೊಂದು ನೈತಿಕ ಸಮಸ್ಯೆಗೆ ಪರಿಹಾರವನ್ನು ಒಳಗೊಂಡಿಲ್ಲ. ಬದಲಾಗಿ ನಾವು ದೇವರ ನೈತಿಕ ಮಾನದಂಡಗಳನ್ನು ಅರ್ಥಮಾಡಿಕೊಳ್ಳುವಂತೆ ಅವುಗಳು ಒಂದು ಮಾದರಿಯನ್ನು ನಮಗೆ ಕೊಡುತ್ತವೆ.

15. ಧರ್ಮೋ. 15:12–17 ತಮ್ಮದೇ ಸಮುದಾಯದಜನರನ್ನು (ಅಂದರೆಇಸ್ರಾಯೇಲ್ ಪುರುಷರನ್ನುಅಥವಾ ಸ್ತ್ರೀಯರನ್ನು) ಜೀತದಾಳುಗಳಾಗಿ ಕೊಂಡುಕೊಂಡಇಸ್ರಾಯೇಲರಿಗೆಅನ್ವಯಿಸುತ್ತದೆ.ಸಬ್ಬತ್ ವರ್ಷದಂದುಅವರುಅಂತಹ ಜೀತದಾಳುಗಳನ್ನು ಬಿಡುಗಡೆ ಮಾಡಬೇಕಾಗಿತ್ತು. ಆದರೆಅವರುತಾವು ಜೀತದಾಳುಗಳಾಗಿಯೇ ಉಳಿದುಕೊಳ್ಳಲು ಬಯಸಿದರೆ ಅವರಿಗೆ ಹಾಗೆ ಮಾಡುವಅವಕಾಶವಿತ್ತು. ನಾವು ಪ್ರಾಚೀನಇಸ್ರಾಯೇಲಿನಲ್ಲಿಜೀವಿಸುತ್ತಿರುವಜನರಲ್ಲವಾದ್ದರಿಂದಇಂದಿನ ಕ್ರೈಸ್ತ ವಿಶ್ವಾಸಿಗಳಾದ ನಮಗೆ ಈ ವಾಕ್ಯಗಳು ಅನ್ವಯಿಸುವುದಿಲ್ಲ.

16. ಧರ್ಮೋ. 15:12–17 ನಂತಹಒಂದುಕಾನೂನಾತ್ಮಕವಾದ ವಾಕ್ಯಭಾಗದಿಂದ ನಾವು ಈ ಸಂಗತಿಗಳನ್ನು ಕಲಿತುಕೊಳ್ಳಬಹುದು:

ಅ. ನಾವು ದೇವರಕುರಿತು ಕಲಿತುಕೊಳ್ಳಬಹುದು: ಆತನಿಗೆಎಲ್ಲರ ಮೇಲೆ, ಅಂದರೆ ಜೀತದಾಳುಗಳ ಮೇಲೆಯೂ ಸಹ ಪ್ರೀತಿಯಿದೆ. ಆತನು ನ್ಯಾಯವಂತನು. ಆತನುತನ್ನಒಡಂಬಡಿಕೆಯಜನರೊಂದಿಗೆ ಹೇಗೆ ನಡಕೊಳ್ಳುತ್ತಾನೆ.

ಆ. ನಾವು 'ವಿಮೋಚನೆ' ಎಂಬ ಪದದ ಆಳವಾದ ಅರ್ಥವನ್ನು ಪಡೆದುಕೊಳ್ಳುತ್ತೇವೆ. ಅದು ಹೊಸ ಒಡಂಬಡಿಕೆಯದೈವಶಾಸ್ತ್ರದಕೇಂದ್ರವಾಗಿದೆ.

17. ಹಳೆ ಒಡಂಬಡಿಕೆಯ ಆಜ್ಞೆಗಳಲ್ಲಿ ಕೆಲವು ನಮಗೆ ವಿಚಿತ್ರವಾಗಿಕಂಡುಬರುತ್ತದೆ. ಯಾಕೆಂದರೆಅದು ಇಂದಿನ ಕ್ರೈಸ್ತರಿಗೆಯಾವುದೇಅರ್ಥವನ್ನುಕೊಡುವುದಿಲ್ಲ. ಆದರೆಪ್ರಾಚೀನಇಸ್ರಾಯೇಲರಿಗೆ ಪ್ರಯೋಜನವಾಗಲೆಂದುಅಂತಹ ಆಜ್ಞೆಗಳನ್ನು ನೀಡಲಾಯಿತುಹೇಗೆಂದರೆ ಅವುಗಳು ದೇವರುತನ್ನಜನರಕುರಿತು ಹೊಂದಿದ್ದಕರುಣೆ ಮತ್ತುಕೃಪೆಯನ್ನು ವ್ಯಕ್ತಪಡಿಸಿದವು:

ಅ. ಇಸ್ರಾಯೇಲರುಆರೋಗ್ಯವಾಗಿರುವಂತೆ ಅವುಗಳು ಸಹಾಯಕವಾದವು.

ಆ. ಇಸ್ರಾಯೇಲರುಆರ್ಥಿಕವಾಗಿ ಸುಸ್ಥಿತಿಯಲ್ಲಿರುವಂತೆ ಅವುಗಳು ಸಹಾಯಕವಾದವು.

ಇ. ಇಸ್ರಾಯೇಲರುಅನ್ಯದೇಶದಧಾರ್ಮಿಕ ಆಚಾರಗಳಿಂದ ಅವರನ್ನು ಸಂರಕ್ಷಿಸಿದವು.